ಮೈಸೂರ ಗೆಜೆಟ್.

ನಂ. 27 ಸರ್ಕಾರದಿಂದ ಪ್ರಾಯಿಸ್ತ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಜುಲೈ ತಾ|| 8, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	103—107
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್‌ಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು. ..	319—333
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	

1ನೇ ಭಾಗ.

ಮೈಸೂರು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 98. ತಾರೀಖು 16ನೇ ಜೂನ್ 1876.

1870ನೇ ಇಸವಿಯ 10ನೇ ನಂಬರ್ ವುಳ್ಳ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಇದರಿಂದ ತಿಳಿಸುವದೇನಂದರೆ, ಇದರಡಿ ವಿವರಿಸಿ ಇರುವ ಮತ್ತು ಬೆಂಗಳೂರು ಹಲಸೂರಲ್ಲಿರುವ ಎರಡು ತುಂಡು ಜಮೀನುಗಳು ಪಬ್ಲಿಕ್ ಕೆಲಸಗಳಿಗಾಗಿ, ಅಂದರೆ, ಸ್ಥಳದ ಅಭಿವೃದ್ಧಿ ಕೆಲಸಗಳಿಗಾಗಿ ಕಂಟೋನ್ಮೆಂಟ್ ಮ್ಯುನಿಸಿಪಲ್ ಕಮ್ಮಿಷನರ್‌ಗಳಿಗೆ ಬೇಕಾಗಿರುತ್ತವೆ. ದಾಮೋದರ ಮೊದಲಿಯಾರ್‌ರದೆಂಬ ಸದರೀ ಜಮೀನುಗಳ ಸ್ಕೆಚ್ ಪ್ಲಾನನ್ನು, ಬೆಂಗಳೂರು ಡಿಸ್ಟ್ರಿಕ್ಟ್ ಡೆ|| ಕಮ್ಮಿಷನರ ಆಫೀಸ್‌ನಲ್ಲಿ 3ನೇ ಅಸಿಸ್ಟೆಂಟ್ ಕಮ್ಮಿಷನರ ಆಫೀಸ್‌ನೊಳಗೆ ಕೇಳಿನೋಡಿಕೊಳ್ಳಬಹುದು.

(1) ವೊಂದು ತುಂಡು ಭೂಮಿಯ ಚತುರ್ಗಡಿ.—

ಉತ್ತರಕ್ಕೆ ಮ್ಯುನಿಸಿಪಲ್ ಭೂಮಿ. ದಕ್ಷಿಣಕ್ಕೆ ಹೊಸ ರಸ್ತೆ.

ಪೂರ್ವಕ್ಕೆ ಲಕ್ಷ್ಮಯ್ಯನಾಯಕರ ಜಮೀನು. ಪಶ್ಚಿಮಕ್ಕೆ ಮುನಿಸಾಮಿ ಮೇಸ್ತ್ರಿಯ ಭೂಮಿ.

ಇದರ ಅಳತೆ ಷುಮಾರ 126 ಸಲಗಜಗಳು, ಮತ್ತು $3\frac{1}{2}$ ಸಲಅಡಿಗಳು.

(2) ಮೇಲೆ ಕಂಡ ಭೂಮಿಗೆ ಸೇರಿದೆ ಹಾಗೆ ಇರುವ ಒಂದು ಭೂಮಿಯ ಚತುರ್ಗಡಿ.

ಉತ್ತರಕ್ಕೆ—ದಾಮೋದರ ಮೊದಲಿಯಾರ್ರು ಮನೆ ಮತ್ತು ಭೂಮಿ.

ಪೂರ್ವಕ್ಕೆ—D ನಂಬರ್ 5ನೇ ರಸ್ತೆ.

ದಕ್ಷಿಣಕ್ಕೆ—ಗೋಪಾಲಮೊದಲಿಯಾರು ನಾರಾಯಣಸಾಮಿ ಮತ್ತು ಮಾಯಿಯುಡು ಇವರುಗಳ ಬಾಬತು ಭೂಮಿಗಳು.

ಪಶ್ಚಿಮಕ್ಕೆ—ಮ್ಯುನಿಸಿಪಲ್ ಜಮೀನು ಅಳತೆ ಷುಮಾರ 93 ಸಲಗಜಗಳು ಮತು 3 ಸಲ ಅಡಿಗಳು.

ನಂ. 110. ತಾರೀಖು 29ನೇ ಜೂನ 1876.

ಹಾಲೀ ಜಾರೀಯಿರುವ 27, 28, 29 ಈ ನಂಬರುಗಳ ಬಾಬತು ಬೈಲಾ ನಿಬಂಧನೆಗಳಿಗೆ ಬದಲಾಗಿ 27 $\frac{2}{27}$ 28 $\frac{2}{28}$ 29 $\frac{2}{29}$ ಈ ನಂಬರುಗಳುಳ್ಳ ಬೈಲಾ ನಿಬಂಧನೆಗಳು ಬೆಂಗಳೂರು ಕಂಟೋನ್ಮೆಂಟನಲ್ಲಿ ಜಾರೀಗೆ ತರಲ್ಪಡತಕ್ಕದ್ದನ್ನು ಚೀಫ್ ಕಮಿಷನರವರು ಮಂಜೂರ್ ಮಾಡಿರುವದ್ದರಿಂದ ಅವುಗಳು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಬೈಲಾ 27.—ಮ್ಯುನಿಸಿಪಲ್ ಸರಹದ್ದಿನೊಳಗೆ ಯಿರುವ ಯಾವ ದಫನ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಶಾರ್ಫಿಯೆಂಬ ಚಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದಫನ ಮಾಡಕೂಡದು, ಯಾ ದಫನ ಮಾಡಿಸ ಕೂಡದು ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದಫನ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಕಡಮೆ ಯಿಲ್ಲದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದಫನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ, ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪಲ್ ಸರಹದ್ದಿನಲ್ಲಿರುವ ಯಾವ ಜಲನ ಭೂಮಿಯೊಳಗಾಗಲಿ, ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲನ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚಿಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29—ಮ್ಯುನಿಸಿಪಲ್ ಸರಹದ್ದಿನಲ್ಲಿರುವ ಯಾವ ಜಲನ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕ್ಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕ್ಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲನ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲನ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮೇಜಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದರ್ಖ ಯಾ ಜರ್ಲ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜರ್ಲ ಯಾ ದರ್ಖ ಭೂಮಿಗಳ ಇರ್ಚಾರ್ಜ ಟ್ರಸ್ಟೀಗಳಾಗಲಿ ಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಖ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿದಿನಕ್ಕೂ ಯರಡು ರೂಪಾಯಿಗಳಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 111.　　ತಾರೀಖು 30ನೇ ಜೂನ್ 1876.

ಅನಂತಪುರ ಸಬ್ ಡಿವಿಜನ್ ಮುನಸೀಫ್ ಮೆಸ್ಟರ್ ಲವರಿಯವರಿಗೆ 1876ನೇ ಯಿಸವಿ ಏಪ್ರೈಲ್ 19ರ ಲಗಾಯತು 23ನೇ ಮೇ ವರಿಗೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತು.

ಸನ್ 1876ನೇ ಇಸವಿ ಫಿಬ್ರುವರೀ 8ನೇ ಮಕ್ಕುಂ 361ನೇ ನಂಬರ್ ಇಸ್ತಿಹಾರಿನಲ್ಲಿ ಮೆಸ್ಟರ್ ಲವರಿಯವರಿಗೆ ಕೊಡಲ್ಪಟ್ಟಿದ್ದ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ನಂ. 113.　　ತಾರೀಖು 1ನೇ ಜುಲೈ 1876.

ಮೈಸೂರು ಶೀಮೆಗಾಗಿ ಹುಟ್ಟಿದ ಪರಿಷ್ಕರಿಸಲ್ಪಟ್ಟ ಫಾರೆಸ್ಟು ರೊಲ್ಸಿಗೆ ವಿರುದ್ಧವಾಗಿ ಮಾಡಲ್ಪಟ್ಟ ಮತ್ತು ತಮ್ಮ ಅಧಿಕಾರಕ್ಕೆ ಒಳಪಡುವಂತಾ ತಕಸೀರಗಳನ್ನು ವಿಚಾರಣೆ ಮಾಡಲಿಕ್ಕೆ ಈ ಕೆಳಗೆ ಕಂಡ ಆಫಿಸರಗಳು ಸದರೀ ರೂಲ್ಸಿನ 37ನೇ ಸೆಕ್‌ಷನ್ ಅನುಸರಿಸಿ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಮೆ|| ಅಬ್ದುಲ್ ಖಾದರ್, 1ನೇ ಅ|| ಕ|| ಚಿಕ್ಕಬಳ್ಳಾಪುರ ಸಬ್ ಡಿವಿಜನ್; ಬಿ. ವೆಂಕಯ್ಯ ಅಮಲ್‌ದಾರ್ ಚಿಕ್ಕಬಳ್ಳಾಪುರ ತಾಲ್ಲೂಕು; ಮತ್ತು ಅಲ್ಲಿ ನಕ್ಕೀಖಾನ್ 　ಅಮಲ್‌ದಾರ್ ಮಾಲೂರು ತಾಲ್ಲೂಕು.

ನಂ. 114.　　ತಾರೀಖು 1ನೇ ಜುಲೈ 1876.

ಮೇಜರ್ ಪರ್ಸ್ ಸಾಹೆಬರು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸ್ ವ ಟ್ರೆಜರೀ ಚಾರ್ಜನ್ನು ಮೆ|| ಪೋರಟಿಯಸ್ ಯವರಿಂದ 1876ನೇ ಜೂನ್ 19ನೇ ಮಕ್ಕುಂ ಪೂರ್ವಾಹ್ನದಲ್ಲಿ ವಹಿಸಿದರು.

ನಂ. 115.　　ತಾರೀಖು 1ನೇ ಜುಲೈ 1876.

ಕಡಬದ ತಾಲ್ಲೂಕು ಅಮಲ್‌ದಾರ್ ಭೀಮರಾಯರಿಗೆ, ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯತ್ತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮಾಲೂರು ತಾಲ್ಲೂಕು ಆಕ್ಟಿಂಗ್ ಅಮಲ್‌ದಾರ್ ಅಲ್ಲಿನಕ್ಕೀಖಾನರು ಭೀಮರಾಯರವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಕಡಬದ ತಾಲ್ಲೂಕು ಅಮಲ್‌ದಾರೀ ವ 3ನೇ ಕ್ಲಾಸ್ ಮಾಜಿಸ್ಟ್ರೇಟ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್.

ಗುಡಿಬಂಡೇ ತಾಲ್ಲೂಕು 2ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ ಖಾಜಾ ಮೊಹದೀನರು ಮತ್ತೊಂದು ಹುಕ್ಕುಂಕೊಡುವ ಪರ್ಯಂತ ಹಂಗಾಮಿ ತರೀಕ್ ಮಾಲೂರು ತಾಲ್ಲೂಕಿಗೆ ಮೊಕರರ್ ಮಾಡಲ್ಪಟ್ಟರು.

ನಂ. 116. ತಾರೀಖು 3ನೇ ಜುಲೈ 1876.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಚೀಫ್ ಕಮ್ಮಿಷನ್ನರವರ ಮತ್ತು ಹರಮೋಜಿಸ್ಟೀ ಯವರ ಟ್ರೇಜರಿಗಳು, ಸರಕಾರ ಕೆಲಸದ ಸ್ಥಿತಿಯಿಂದ ಸಾಧ್ಯವಾದ ಪಕ್ಷಕ್ಕೆ ಪ್ರತಿ ತಿಂಗಳ ಕಡೇ ಶನಿವಾರ ಮುಚ್ಚಲ್ಪಡುವವು.

ನಂ. 117. ತಾರೀಖು 3ನೇ ಜುಲೈ 1876.

ಇಂಡ್ಯ ಗವರ್ನಮೆಂಟನವರ ಕ್ರಮವಾದ ಸಾಂಕ್‌ಷನಿಗೆ ವೊಳಪಡಿಸಿ ಜುಡಿಷಿಯಲ್ ಕಮ್ಮಿಷನರ್ ಆಫೀಸ್ ಹೆಡ್ ಶಿರಸ್ತೇದಾರ್ ಮೆಸ್ಟರ್ ಶೇಷಾದ್ರಿಐಯ್ಯರ್ ಯವರು B. ರೋಲ್ 4ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ,

ಮೆಸ್ಟರ್ ಶೇಷಾದ್ರಿಐಯರ್ ಯವರು ಕೂಡ್ಲೇ ಹೊರಟು ಮೈಸೂರು ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟ್ಟು ಚಾರ್ಜನ್ನು ವಹಿಸತಕ್ಕದ್ದು.

ನಂ. 118. ತಾರೀಖು 5ನೇ ಜುಲೈ 1876.

ಮೇಸ್ಟರ್ ಲೇಸೀಯವರು ಮೈಸೂರು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟಿನ ಚಾರ್ಜನ್ನು ಅದೇಕೊರ್ಟಿನ ಆಕ್ಟಿಂಗ್ ಸಿರಸ್ತೇದಾರ್ರಿಗೆ 1876ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಕೊಟ್ಟರು.

ನಂ. 119. ತಾರೀಖು 6ನೇ ಜುಲೈ 1876.

1876ನೇ ಏಪ್ರೈಲ್ 5ನೇ ಮುರ್ಕ್ಕಂ $\frac{149}{48}$ನೇ ನಂಬರ್ ಉಳ್ಳ ಚೀಫ್ ಕಮ್ಮಿಷನರವರ ಹುಕ್ಕುಂನಲ್ಲಿ ಫಾಯಿಷ್ ಮಾಡಲ್ಪಟ್ಟ ರೂಲ್ಸಿನ 4ನೇ ಕಲಂ ಅನುಸರಿಸಿ ಚೀಫ್ ಕಮ್ಮಿಷನರವರು ಅಪ್ಪಣೆ ಕೊಡುವ ದೇನಂದರೆ ಮೈಸೂರು ಮೆಡಿಕೆಲ್ ಸಬಾರ್ಡಿನೇಟ್ ಇಲಾಖಾದಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟ್ ಬಿ. ವೆಂಕಟಸಾಮಿನಾಯುಡರು 2ನೇ ಕ್ಲಾಸಿನಿಂದ 3ನೇ ಕ್ಲಾಸಿಗೆ ಕಂಪರಾಕ್ಕೆ ಹಾಕಲ್ಪಟ್ಟಿರುತ್ತಾರೆ.

ನಂ. 120. ತಾರೀಖು 6ನೇ ಜುಲೈ 1876.

ಸರ್ 1873ನೇ ಇಸವಿ ಇಂಡ್ಯನ್ ಓತ್ಸ್ ಆಕ್ಟ್ಯಯಾನೆ ಇಂಡ್ಯ ದೇಶದ ಪ್ರಮಾಣವನ್ನು ಕುರಿತ ಆಕ್ಟ್ಟು ನಿಬಂಧನೆಗಳನ್ನು ಮೈಸೂರು ಶೀಮೆಗೆ ಜಾರೀಮಾಡಿ ಹುಟ್ಟಿರ. 1876ನೇ ಜೂನ್ 19ನೇ ಮುರ್ಕ್ಕಂ 67ನೇ ನಂಬರುಳ್ಳ ಇಂಡ್ಯ ಗವರ್ನಮೆಂಟ್ ಫಾರೀನ್ ಇಲಾಖೆಯವರಿಂದ ಕೊಡಲ್ಪಟ್ಟ ಇದರಡಿ ಬರುವ ಇಸ್ತಿಹಾರ್ ಸಕಲರಿಗೂ ತಿಳಿಯತಕ್ಕ ಬಗ್ಗೆ ಪುನಃ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಫಾರೇನ್ ಇಲಾಖಾ, ಇಸ್ತಿಹಾರ್‌ನಾಮಾ, ಜುಡಿಷಿಯಲ್, ತಾರೀಖು 19ನೇ ಜೂನ್ 1876, ಮೊಕ್ಕಾಂ ಸಿಂಲಾ.

ನಂ. 67. J.—ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್ ಸಾಹೆಬರವರು ಪ್ರಸಿದ್ಧವಾಗಿ ತಿಳಿಸುವದೇನಂದರೆ, ಸರ್ 1873ನೇ ಇಸವಿ ಇಂಡ್ಯನ್ ಓತ್ಸ್ ಆಕ್ಟ್ಟು ಯಂಬ ಇಂಡ್ಯ ದೇಶದ ಪ್ರಮಾಣದ ಆಕ್ಟ್ಟು ಈ ಕೆಳಗೆ ನಮೂದಿಸಲ್ಪಡುವ ತಿದ್ದುಪಾಡಿಗೆ ವೊಳಪಟ್ಟು ಮೈಸೂರು ಶೀಮೆಗೆ ಲಗಾವಾಗಿರುತ್ತೆ. ಸದರೀ ತಿದ್ದುಪಾಡು ಯೇನಂದರೆ. 7ನೇ ಸೆಕ್‌ಷನ್ನಲ್ಲಿ "ಹೈ ಕೋರ್ಟ್" ಯಂಬ ಮಾತುಗಳನ್ನು "ಮೈಸೂರು ಜುಡಿಷಿಯಲ್ ಕಮ್ಮಿಷನರ್" ಯಂಬ ಮಾತುಗಳಾಗಿ ಬದಲಾಯಿಸತಕ್ಕದ್ದು.

ನಂ. 121. ತಾರೀಖು 6ನೇ ಜುಲೈ 1876.

ದೊಡ್ಡೇರಿ ತಾಲ್ಲೂಕು ಅಮಲ್‌ದಾರ್ ಖಾದರ್ ಮೊಹದೀನ್ಯವರು 1875 ಅಕ್ಟೋಬರ್ 15ನೇ ಮುರ್ಕ್ಕಂ 255ನೇ ನಂ. ಇಸ್ತಿಹಾರ್‌ನಾಮೆಯಲ್ಲಿಕೊಡಲ್ಪಟ್ಟಿದ್ದ ಸ್ವಂತ ಕೆಲಸದ ಮೇಲಣ 6 ತಿಂಗಳ ರಜಾಕ್ಕಿಂತ ಜಾಸ್ತೀಯಾಗಿ 3 ತಿಂಗಳ ರಜಾ ಕೊಡಲ್ಪಟ್ಟುಈ ವಿಶಿಷ್ಟರಜವೂ ಸಿವಿಲ್‌ಲೀವ್ ಕೋಡಿನ F ಸಪ್ಲಿಮೆಂಟಿನ 7ನೇ ಸೆಕ್‌ಷನ್ ಅನುಸರಿಸಿ ಫರ್‌ಲೋ ರಜಾಕ್ಕೆ ಬದಲಾಯಿಸಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರಕ್ಸ್.

ನಂ. 17. ತಾರೀಖು 5ನೇ ಜುಲೈ 1876.

ಹಾಸನ ಕಡೂರು ಡಿವಿಜನ ಸೂಪರ ವೈಜರ ಮೆಸ್ಟರ್ ಸ್ಟಾಲ್ಡ್ವೆಲ್ ಯವರಿಗೆ ಬರುವ ಸೆಪ್ಟಂಬರ ಗುರ್ರೇಲಾಗಾಯಿತು 3ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

C. BOWEN, *Captain*, R. E.,
Offg. Under-Secy. R. & B. Branch.

ನಂ. 18. ತಾರೀಖು 5ನೇ ಜುಲೈ 1876.

ಫಷ್ಟು ಗ್ರೇಡ್ ಓವರಸಿಯರ್ ಬಾಬು ಬಾಲ ಸುಂದ್ರಂನಾಯಕರು. 1876ನೇ ಇಸವಿ ಮೇ 12ನೇ ಮಕ್ಕುಂ ಮದ್ಯಾನ್ಹಾತ್ಪರ ಈ ಇಲಾಖೆಯಲ್ಲಿ ಅವರ ಕೆಲಸದಿಂದ ನಿವರ್ತಿಸಲ್ಪಟ್ಟರು.

"ಬಮೋಜೀಬ್ ಹುಕ್ಕುಂ,"

W. CHRYSTIE, *Major*, R. E.,
Offg. Under-Secy., Irrigation Branch.

ಇಂಡ್ಯಗವರ್ನಮೆಂಟಿನರವರಿಂದ ಕೊಡಿಸಲ್ಪಟ್ಟಾದ ಇಸ್ತಿಹಾರ್ನಾಮೆಗಳು.

ಜನರಲ್.

ಇಸ್ತಿಹಾರ್.

ಫಾರಿನ್ ಇಲಾಖಾ.

ತಾರೀಖು 23ನೇ ಜೂನ 1876.

ನಂ. 1327. G.—ಬಹಲ್—ಮೈಸೂರು ಸೀಮೆಯ ನಗರ ಡಿವಿಜನ ಸಿವಿಲ್ ಸರ್ಜನರಾದ ಸರ್ಜನ ಮೆಗ್ಗಾನ ಯವರು ಸರ್ಜನ ಮೇಜರ ಹೆಂಡರಸನ ಯವರಿಗೆ ಬದಲಾಗಿ ಚಾರ್ಜ ವಹಿಸಿದ ತಾರೀಖು ಲಗಾಯತು ಬೆಂಗಳೂರು ಸೆಂಟ್ರಲ್ ಜೆಯಿಲ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ಮದ್ರಾಸ್ ಮೆಡಿಕಲ್ ಇಲಾಖಾ ಸರ್ಜನ ಬೆಸನ ಯವರು ಸರ್ಜನ ಮೆಗ್ಗಾನ ಯವರಿಗೆ ಬದಲಾಗಿ ಮೈಸೂರು ಸೀಮೆಯ ನಗರ ಡಿವಿಜನ ಸಿವಿಲ್ ಸರ್ಜನರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ನಂ. 1332. G.—ಬಹಲ್—ಕೇಪ್ಟನ ವಿಲ್ಸನ ಯವರು ಘನವನ್ನು ಹೊಂದಿದ ಮೈಸೂರು ಮಹಾರಾಜರವ ಟರಾಗಿ ಮೊಕರರ್ರ್ಮಾಡಲ್ಪಟ್ಟು ಸದರೀ ಉದ್ಯೋಗದಲ್ಲಿ ಇರುವ ಪರಿಯಂತ 2ನೇ ಕ್ಲಾಸಿನ ಪೊಬ್ಬು ಜಾಸ್ತೀ ಪೊಲಿಟಿಕ ಹೋದೆಯುಳ್ಳವರಾಗಿ ಪರಿಗಣಿಸಲ್ಪಟ್ಟಿರುತ್ತಾರೆ.

T. H. T
Offg. Secy. to the

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂಲೈ ತಾ॥ 8, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 7ನೇ ಜೂಲೈ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಪೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರಹೆಸರು	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೩೫	ವೀರಪ್ಪಾ ..	ಚನ್ನಬಸಪ್ಪಾ ..	೧೧ನೇ ಜೂಲೈ
	ಅರ್ಜೀಗಳು		
..	ವೆಂಕಟಪತ್ಯೆಯ ..	.. ..	ಡಿಟೋ
..	ದ್ಯಾವೇಗೌಡ ..	.. ..	ಡಿಟೋ
ಕೊ. ಅ. ೨	ಕಾಶೀಬಾಯಿ, ವಗೈರೆ ..	ಅಬ್ದುಲ್ ಖಾದರ್‌ಸಾಬ್ ..	೧೩ನೇ ಡಿಟೋ
ಸ್ಪಿ. ಅ. ೩೬	ಕರಿಬಸಪ್ಪಾ ..	ಮುನಿರಾಮೈಯ ..	೨೦ನೇ ಡಿಟೋ
ಪೂಟ್ ಸ್ಪಿ. ಅ. ೩	ರಾಮೈಯ ..	ನಂಜಮ್ಮ ವಗೈರೆ ..	ಡಿಟೋ
ಸ್ಪಿ. ಅ. ೪೦	ವೆಂಕಟನರಸಿಂಹಾಚಾರಿ ..	ಶ್ರೀನಿವಾಸ ನರಸಿಂಹ ಕೃಷ್ಣ ಜೋಇಸ ವಗೈರೆ	ಡಿಟೋ
..ಕ್ರಿ. ಅ. ೧೬-೧೩	ಖೈದೀ ಬೆಳ್ಳಪ್ಪಾ ಕಣ್ಣಪ್ಪಾ ..	... ..	ಡಿಟೋ
ಸ್ಪಿ. ಅ. ೨೬	ಹುಸೇನ್ ಸಾಬ್ ಫಾತೀ, ತಮ್ಮ ಶೇಖಅಲ್ಲಿ	ಪುಸವರ್ಖಾ ವಗೈರೆ ..	೨೫ನೇ ಡಿಟೋ
ಸ್ಪಿ. ಅ. ೩೯	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	ಡಿಟೋ
ಸ್ಪಿ. ಅ. ೩೩	ಆದೆಣ್ಣಾ ವಗೈರೆ ..	ವೆಂಕಟರಮಣರಡ್ಡಿ ..	ಡಿಟೋ
ಸ್ಪಿ. ಅ. ೩೮	ವೀರಬಸಪ್ಪಾ ..	ಸುಬ್ಬಣ್ಣಾ ..	೨೩ನೇ ಡಿಟೋ
ಸ್ಪಿ. ಅ. ೪೧	ಸುಬ್ರಹ್ಮಣ್ಯ ಗೋಪಾಲಶೆಟ್ಟಿ ..	ದೊಡ್ಡ ಸುಬ್ಬಮ್ಮ ..	೨೩ನೇ ಡಿಟೋ
ಸ್ಪಿ. ಅ. ೪೩	ಅನಂತಮೂರ್ತಿರಾವ್ ..	ರಾಮಸ್ವಾಮೈಯ್ಯಂಗಾರ್ ..	೧ನೇ ಆಗಸ್ಟು
೩೫ನೇ ಅ. ೪ ರಿ. ೧೩	ಚನ್ನಮಲ್ಲೈಯ ..	ಮಲ್ಲಮ್ಮ ವಗೆರೆ ..	೧ನೇ ಡಿಟೋ
ಸ್ಪಿ. ಅ. ೪೪	ಮೆಸ್ಟರ್ ಹೆಚ್ ..	ಗಂಗಾಧರಶೆಟ್ಟಿ ..	೩ನೇ ಡಿಟೋ
ಸ್ಪಿ. ಅ. ೪೨	ಚನ್ನಗಿರಿ ರಂಗಣ್ಣಾ ..	ಬಾಲಕೃಷ್ಣರಾವ್ ವಗೈರೆ ..	೧೨ನೇ ಡಿಟೋ
ಸ್ಪಿ. ಅ. ೫೨ ರಿ. ೧೮	ಶೀತಾರಾಮಶಾಸ್ತ್ರಿ ..	ಧರಣೈಯಾ ..	ಡಿಟೋ

ತಾರೀಖು 4ನೇ ಜುಲೈ 1876.

ನಗರ ಡಿವಿಜನ್ ಮುನಸಫರ ಸರ್ಕ್ಯುಟ್ ಕೋರ್ಟುಗಳನ್ನು ಕುರಿತು ಸರ್ 1875ನೇ ಇಸವಿ ಜೂನ್ 26ನೇ ಮರ್ಕುಂ ಮೈಸೂರು ಗೆಜೆಟ 2ನೇ ಭಾಗದ 305ನೇ ಪುಟದಲ್ಲಿ ಫಾಯಿಷ್ ಮಾಡಲ್ಪಟ್ಟ ಆದೇ ಸಾಲ್ ಮಾಹೆ 11ನೇ ಮರ್ಕುಂ ಇಸ್ತಿಹಾರನ್ನು ಕುರಿತು ಸಕಲ ಜನಗಳ ಮತ್ತು ಇದಕ್ಕೆ ಸಂಬಂಧಪಟ್ಟ ಕೋರ್ಟುಗಳ ತಿಳುವಳಿಕೇ ಬಗ್ಗ್ಯೆ, ನಡವಳಿಕೆ ಬಗ್ಗ್ಯೆ, ಯಿದರ ದೆಸೇಯಿಂದ ನೋಟಿಸ್ ಕೊಡಲ್ಪಡುವದೇನಂದರೆ.

1ನೇ—ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ಮುನಸಫರಿಂದ ಬಾಳೆ ಹೊನ್ನೂರಲ್ಲಿ ಮೇ ಮತ್ತು ನವೆಂಬರ ತಿಂಗಳೊಳಗೆ ಮಾಡಲ್ಪಡುವ ಸರ್ಕ್ಯುಟ್ ಕೋರ್ಟು ಯಿದರ ದೆಸೇಯಿಂದ ಮೌಕೂಫ್ ಮಾಡಲ್ಪಟ್ಟಿರುತ್ತೆ.

2ನೇ—ಕಡೂರು ಮುನಸಫರ ಸರ್ಕ್ಯುಟ್ ಕೋರ್ಟು ಲಕ್ಕುವಳ್ಳಿಗೆ ಬದಲಾಗಿ ತರೀಕೆರೆಯಲ್ಲಿ ಮೇ ಮತ್ತು ನವೆಂಬರ ತಿಂಗಳೊಳಗೆ ಐಯಿಂದಾ ಮಾಡಲ್ಪಡುವದು.

ನಂ. ತಾರೀಖು 3ನೇ ಜುಲೈ 1876.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟಿನ ವ್ಯವಹಾರ ವ ನಡವಳಿತ ಈ ವುಗಳನ್ನು ಕ್ರಮಪಡಿಸಲಿಕ್ಕೋಸ್ಕರ ಉಂಟಾದ ರೂಲ್ಸಿನ 39ನೇ ನಿಬಂಧನೆ ಮೈಸೂರು ಶೀಮೆಯ ಜುಡಿಷಲ್ ಕಮ್ಮಿಷನರವರಿಂದ ತಿದ್ದುಪಡಿ ಮಾಡಲ್ಪಟ್ಟಿರುವ ಸಬಬ್ ಸದರೀ ನಿಬಂಧನೆಯನ್ನು ಈ ಕೆಳಗೆ ಕಾಣಿಸಲ್ಪಡುವ ಮೇರೆ ಓದಿಕೊಳ್ಳತಕ್ಕದ್ದು.

39ನೇ ರೂಲ್—ಕಕ್ಷಿಗಾರರಿಗೆ ಪರಸ್ಪರ ಕೋರ್ಟು ಖರ್ಚನ್ನು ನಿರ್ಣಯಿಸುವಲ್ಲಿ ಮೊಕದ್ದಮೆಯು ಕ್ರಮವಾಗಿ ನಿಯಮಿಸಲ್ಪಟ್ಟ ಪ್ಲೀಡರನ್ನು ಮೊಕರರ್ ಮಾಡಿಕೊಳ್ಳಲಿಕ್ಕೆ ತಕ್ಕದ್ದೆಂದು ವಿಚಾರಣೇ ಕಾಲದೊಳಗೆ ಜಡ್ಜಿಯು ಸರಟಿಫೈ ಮಾಡಿದ ಹೊರತು ಯಾವ ರುಸುಂ ಬಗ್ಗ್ಯೆ ಹುಕ್ಕುಂ ಆಗಲಾರದು. ಹಾಗೆ ಹುಕ್ಕುಂ ಮಾಡಲ್ಪಟ್ಟಲ್ಲಿ ಈ ಕೆಳಗೆ ಕಂಡ ಸ್ಕೇಲ್ ಪ್ರಕಾರ ಫೈಸಲ್ ಮಾಡಲ್ಪಡುವದು.

50 ರೂಪಾಯಿಗಳಿಗೆ ಮೀರದ ದಾವೆಗಳಲ್ಲಿ ರೂಪಾಯಿ					..	..	5	0	0
50	„	ಮೀರಿ	150 ರೂಪಾಯಿಗಳಿಗೆ ಮೀರದ	ದಾವೆಗಳಲ್ಲಿ	ರೂಪಾಯಿ.		7	8	0
150	„	„	300	„	„	„ „	15	0	0
300	„	„	500	„	„	„ „	20	0	0
500	„	„	1000	„	„	„ „	25	0	0

ವಿಶೇಷ ಸಂದರ್ಭಗಳ ದೆಸೆಯಿಂದ ರುಸುಂ ಕಮ್ಮೀ ಮಾಡಬೇಕಾದ ಆವಶ್ಯಕ ತೋರುವ ಯಾವ ದಾವೆಯಲ್ಲಾಗಲಿ ಹಾಂಗೆ ರುಸುಂ ಕಮ್ಮೀ ಮಾಡುವದು ಜಡ್ಜಿಯವರ ಯಖ್ತ್ಯಾರೀಯಲ್ಲಿರತಕ್ಕದ್ದು.

J. D. GORDON, *Judl. Commr.*

ಪೋಲೀಸ್ ಇಲಾಖಾ.

ತಾರೀಖು 5ನೇ ಜುಲೈ 1876.

ಬೆಂಗಳೂರು ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರ್ ಮುಹಂತೈಯ್ಯನವರಿಗೆ 1876ನೇ ಯಿಸವಿ ಜೂನ್ 10ರ ಲಗಾಯಿತು 21ರ ವರಿಗೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತು.

"ಬಮೋಜೀಬ್ ಹುಕ್ಕುಂ,"
E. D. GOMPERTZ,
Dy. Inspr. Genl. of Police.

ಪಬ್ಲಿಕ್ ವರ್ಕ್ಸ್ ಇಲಾಖಾ.

ತಾರೀಖು 5ನೇ ಜುಲೈ 1876.

ಹೇಮಾವತಿ ಡಿವಿಜನ್ ಚಾನೆಲ್ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಇಂಜಿನಿಯರ್ ಆಫೀಸ್ ಕಾಲ್ಕ್ಯುಲೇಟರ್ ವೆಂಕಟನಾರಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಕ್ ಲಗಾಯಿತು ವೊಂದುವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

W. CHRYSTIE, *Major*, R. E.,
Offg. Supg. Engr. for Irrigation.

ತಾರೀಖು 5ನೇ ಜುಲೈ 1876.

3ನೇ ಗ್ರೇಡ್ ಓವರ್‌ಸೀರ್ ಮೆಸ್ಟರ್ ಸ್ಟ್ರಾ‌ರ್ಕ್‌ಲೆರ್ನ ಯವರು ಕೊಪ್ಪದಿಂದ ತುಮಕೂರು ಡಿವಿಜನ್‌ಗೆ ವರ್ಗಮಾಡಲ್ಪಟ್ಟಿರುತ್ತಾರೆ. ಈ ವರ್ಗವು ಸರಕಾರದ ಪ್ರಯೋಜನಾರ್ಥ ಮಾಡಲ್ಪಟ್ಟಿತು.

C. Bowen, *Capt.*, R. E.,
Offg. Supt. Engineer, R. & B. Branch.

ತಾರೀಖು 3ನೇ ಜುಲೈ 1876,

ಕೋಲಾರ ರೇಂಜ್ 2ನೇ ನಂಬರ್ ಸಬ್ ಡಿವಿಜನ್ ರೈಟರ್ ರಾಘವೇಂದ್ರರಾಯರಿಗೆ 1876ನೇ ಇಸವಿ ಜೂನ್ 27ರ ಲಗಾಯಿತು 7 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

A. T. Fraser, *Capt.*, R. E.,
Exec. Engr., Bangalore-Kolar Division.

ತಾರೀಖು 3ನೇ ಜುಲೈ 1876.

ಅಸಿಸ್ಟೆಂಟ್ ಇಂಜಿನಿಯರ್ ಆಫಿಸ್ ರೈಟರ್ ವೆಂಕಟ್ರಾಮನಾಯಕರಿಗೆ 1876ನೇ ಯಿಸವಿ ಏಪ್ರಲ್ 24ನೇ ತಾರೀಕ ಲಗಾಯಿತು 3 ತಿಂಗಳ ಕಾಯಿಲೇ ರಜಾ ಕೊಡಲ್ಪಟ್ಟಿರುತ್ತೆ.

G. W. White,
Asstt. Engineer, Túmkúr Division.

ಫಾರೆಸ್ಟ್ ಇಲಾಖಾ.

ತಾರೀಖು 30ನೇ ಮೇ 1876.

ಇದರಿಂದ ತಿಳಿಯಪಡಿಸುವದೇನಂದರೆ,—ಧಾರವಾಡ್ ಜಿಲ್ಲಾ ಕೋಡಿ ತಾಲ್ಲೂಕು ಫಕೀರಪ್ಪಯೆಂಬ ಹೆಸರುಳ್ಳ ವೊಬ್ಬ ಮನುಷ್ಯನು ಸರ್ನ 1874ನೇ ಇಸವಿ ಏಪ್ರೈಲ್ ತಿಂಗಳಲ್ಲಿ ಕೊಂಡುಕೊಂಡ ಚೌಬಿನೇ ಪೈಕಿ ಉಳಿಸಿಕೊಳ್ಳಲ್ಪಡದ ವೊಂದು ಮರದ ದಿಮ್ಮಿಯು ಕೇಳಲ್ಪಡದೆ ಅದ್ಯಾಪಿ ನಗರ ಡಿವಿಜನ್ ಶಿವಮೊಗ್ಗಾ ಡಿಸ್ಟ್ರಿಕ್ಟು ಅನಂತಪುರ ಡಿಪೊಯಲ್ಲಿ ಬಿದ್ದಿರುತ್ತೆ. ಸದರೀ ಫಕೀರಪ್ಪನೆಂಬುವನು ಶಿವಮೊಗ್ಗೆಯಲ್ಲಿರುವ ಡಿಪ್ಯುಟಿ ಕಂಸರ್ವೇಟರ್ ಯವರಲ್ಲಿ ಹಾಜರಾಗಿ 1876ನೇ ಇಸವಿ ಜುಲೈ 31ನೇ ಮುರ್ಕು ಎಮಿಗೆ ಮುಂಚಿತವಾಗಿ ಸದರೀ ದಿಮ್ಮಿಯನ್ನು ಸಾಗಿಸಿಕೊಂಡು ಹೋಗತಕ್ಕದ್ದು. ಯಿದಕ್ಕೆ ತಪ್ಪಿದರೆ ಸದರೀ ದಿಮ್ಮಿಯು ಬೇವಾರ್ಸಿ ಮರದೋಪಾದಿಯಲ್ಲಿ ಮೈಸೂರು ಗವರ್ನಮೆಂಟ್ ತರ್ಫು ವಿಕ್ರಯಿಸಲ್ಪಟ್ಟು ಅದರ ಹುಟ್ಟುವಳಿಯು ಫಾರೆಸ್ಟ್ ರೂಲ್ಸ 30 ವ 31ರ ನಿಬಂಧನೇಗಳನುಸಾರವಾಗಿ ಮೈಸೂರು ಫಾರೆಸ್ಟು ಇಲಾಖೆಗೆ ಜಮೆ ಕಟ್ಟಲ್ಪಡುವದು.

ನಂ. 9.

ತಾರೀಖು 17ನೇ ಜೂನ 1876.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಶೀಮೆಯ ನಗರ್ ಡಿವಿಜನ್ [illegible] ಕೆಳಗೆ ಕಂಡ ದೂ[illegible]ಗಳು ಇದರಡಿ ಕಾಣಿಸಲ್ಪಟ್ಟ ಸ್ಥಳಗಳಲ್ಲಿಯೂ ತಾರೀಖಿನಲ್ಲಿಯೂ ಬಹಿರಂಗವಾ[illegible]ಲ್ಪಡುವದು.

ಸ್ಥಳ ಮತ್ತು ತಾರೀಖು.	ತೇಗ.	ಬೀಟೆ.	ಕಾಡುಜಾತಿ.	ತೇಗದ ತೊಲೆ[illegible]ಗಳು.	ಕಾಡುಜಾತಿ ಜಂತಿಗಳು.	ಗಳಗಳು.	ಜುಮ್ಲೆ.
ಲಕ್ಕುವಳ್ಳಿ.							
1876ನೇ ಇಸವಿ ಜುಲೈ ತಾ॥ 13ರಲ್ಲಿ.	3	0	446	0	2	446	897
ಶಿವಮೊಗ್ಗ.							
ಡಿಟೋ 24ನೇ ತಾರೀಖಿನಲ್ಲಿ. ..	189	52	563	524	282	3,451	5,061

ಹರಾಜ್ ನಿಬಂಧನೆ—ಸರ್ 1873ನೇ ಇಸವಿ ಜೂನ್ 12ನೇ ತಾರೀಖಿನಲ್ಲಿ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಪ್ರಕಾರ ಮಾಮೂಲ್ ಮೇರೆ ಯಿರುತ್ತೆ. ಸರ್ಕಿಲರ್ ಹರಾಜ್ ತಾರೀಖಿನಲ್ಲಿಯೂ ಆಯಾ ಸ್ಥಳದಲ್ಲಿಯೂ ಪ್ರೋದಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

ನಗರ ಡಿವಿಜನ್.

ನಂ. 10. ತಾರೀಖು 26ನೇ ಜೂನ್ 1876.

ಷಿಕಾರಿಪುರ ತಾಲ್ಲೂಕು ಆಕ್ಟಿಂಗ್ ಮರಹಮ್ಮತ್ ಮುತ್ಸದ್ದಿ ಕೇಶವೈಯ್ಯನವರಿಗೆ ಬಗರ್‌ಲೋನ್ಸ 4 ದಿನಗಳ ಜಾಸ್ತೀ ರಜಾ ಕೊಡಲ್ಪಟ್ಟಿರುತ್ತೆ.

ನಂ. 11. ತಾರೀಖು 29ನೇ ಜೂನ್ 1876.

ಇದರಡೀ ಬರುವ ಬಹಲಿಗಳು ಮಂಜೂರಾಗಿವೆ.

ಷಿಕಾರಿಪುರ ತಾಲ್ಲೂಕು ಮರಹಮ್ಮತ್ ಮುತ್ಸದ್ದೀ ಕೃಷ್ಣೈಯ್ಯಂಗಾರು ಬಡತೀ ಹೊಂದಿದ ಅನಂತರಾಮಸ್ವಾಮಯ್ಯಂಗಾರ್ರಿಗೆ ಬದಲಾಗಿ ಲೋಕಲ್‌ಫಂಡ್ ಇಂಜಿನಿಯರ್ ಆಫಿಸ್ ಮುತ್ಸದ್ದೀ ಕೆಲಸದಲ್ಲಿ ಕಾಯಂ ಮಾಡಲ್ಪಡತಕ್ಕದ್ದು. ಕೇಶವೈಯ್ಯನವರು ಕೃಷ್ಣೈಯ್ಯಂಗಾರ್ರಿಗೆ ಬದಲಾಗಿ ಷಿಕಾರಿಪುರತಾಲ್ಲೂಕು ಮರಹಮ್ಮತ್ ಮುತ್ಸದ್ದೀ ಕೆಲಸದಲ್ಲಿ ಕಾಯಂಮಾಡಲ್ಪಡತಕ್ಕದ್ದು,

MAHOMED HUSEN BINTURI,
For Commr.

ASHTAGRAM DIVISION.

Notice regarding an application of Rahamat Bayi for a certificate under Act XXVII of 1860.

ಅಷ್ಟಗ್ರಾಮದ ಡಿ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರಲ್ಲಿ ಇರುವ ಹಾಜೀ ಜಾಫರ್‌ಶೇಟನ ಹೆಂಡತಿ ರಹಮತು ಬಾಯಿ ಯೆಂಬುವಳು ಫೌತೀಪಟ್ಟಿರುವ ತನ್ನ ಗಂಡನಿಗೆ ಹೊರಗಿನಿಂದ ಬರತಕ್ಕ ಸಾಲವನ್ನು ವಸೂಲ್ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಬೇಕೆಂತ ಕೊಟ್ಟ ಅರ್ಜೀ ಫೈಸಲ್ ಬಗ್ಯೆ 1876ನೇ ಇಸವಿ ಜುಲೈ 28ನೇ ದಿವಸ ನಿಷ್ಕರ್ಷೆ ಮಾಡಿರುವದರಿಂದ ತಕರಾರು ಇರತಕ್ಕವರೆಲ್ಲಾ ಮೇಲ್ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹಿರುಮಾಡಿಕೊಳ್ಳತಕ್ಕದ್ದಿಧೆ.

ತಾರೀಖು 23 ಜೂನ್ 1876ನೇ ಇಸವಿ.

A. C. HAY,
Commr.

KOLAR DISTRICT.

Notice regarding the sale of the Jodi Kannabale village on the 28th instant in satisfaction of Government dues.

ಕೋಲಾರ ಡಿಸ್ಟ್ರಿಕ್ಟ್ ಡಿ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದ ಅಪ್ಪಣಾಚಾರ್ರು ವಗೈರೆಯಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀ ವಡಿಬಾಕ್ಸೋಸ್ಕರ ಜಪ್ತು ಮಾಡೋಣಾಗಿರುವ ಈ ಕೆಳಗೆ ಕಂಡ ಜಮೀನ್‌ಗಳ ಮೇಲೆ ಹಾಲೀ ರಿಜಿಸ್ಟರ್‌ದಾರನಾದ ಸದರೀಯವನಿಗೆ ಯಿರುವ ದರೋಬಸ್ತು ಹಕ್ಕುದಾರಿಗಳೂ, ಕೋಲಾರ ಡಿಸ್ಟ್ರಿಕ್ಟು ಬೇತಮಂಗಲ ತಾಲ್ಲೂಕು ಜೋಡೀ ಕಣಂಬಲೆ ಗ್ರಾಮದಲ್ಲಿ 1876ನೇ ಇಸವಿ ಜುಲೈ ತಾರೀಖು 28ರಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು, ಹರಾಜು ಸದರೀ ಗ್ರಾಮದಲ್ಲಿ ದಿವಿ 12 ಘಂಟೆಗೆ ಆರಂಭಿಸುವದು, ಸದರೀ ಜಮೀನುಗಳು ವಿಶಿಷ್ಟ ಬಾಧ್ಯತೆಗಳೊಡನೆ ಜಡ ದರಖಾಸ್ತುದಾರಗೆ ಕೊಟ್ಟು ಬಿಡುವದು.

2. ಜಮೀನುಗಳ ಮೇಲೆ 1876ನೇ ಇಸವಿ ಬಾಬತು ಕಂದಾಯ ಅಥವಾ ಉಳಿದ ಸಂದರ್ಭಾನುಸಾರ ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಸೀಲ್‌ವಾರ ತೋರಿಸಲ್ಪಟ್ಟ ಪ್ರಕಾರ 100—1—5 ರೂಪಾಯಿಗಳು ಕ್ರಯದಾರನಿಂದ ಸಲ್ಲಬೇಕಾಗಿರುತ್ತೆ.

3. ಕ್ರಯದಾರರು ಹರಾಜ್ ಕಾಲದಲ್ಲಿಯೇ ಕ್ರಯದ ಮೊಬಲಗಿಗೆ ಸೇಕಡಾ 25 ರೂಪಾಯಿಗಳ ಪ್ರಕಾರ ಡಿಪಾಜಿಟ್ ಯಿಡತಕ್ಕದ್ದು. ಹರಾಜ್ ತಾರೀಖು ಲಗಾಯತು 15 ದಿನಗಳೊಳಗಾಗಿ ಬಾಕಿಯಾದ ಕ್ರಯದ ಮೊಬಲಗು ಪಾವತೀ ಮಾಡದಿದ್ದರೆ ಹಾಗೆ ಡಿಪಾಜಿಟ್ ಇಟ್ಟ ಮೊಬಲಗ್ ದಂಡವಾಗಿ ತೆಗದುಕೊಳ್ಳಲ್ಪಡುವದಕ್ಕೆ ಗುರಿಯಾದೀತು.

4. ಅಂತಾ ಡಿಪಾಜಿಟ್ ಇಡದೇ ಯಿದ್ದರೆ ಅಥವಾ ಬಾಕೀ ಮೊಬಲಗ್ ಕೊಡದೇ ಯಿದ್ದರೆ ಮೊದಲು ಕ್ರಯದಾರನ ಖರ್ಚಿನಿಂದಲೂ, ಅವನಿಗೆ ನಷ್ಟಕರವಾಗಿಯೂ, ಜಮೀನುಗಳು ಪುನಃ ವಿಕ್ರಯಿಸಲ್ಪಡುವದು.

5. ಹರಾಜಿನಲ್ಲಿ ದರಖಾಸ್ತು ಮಾಡುವ ಜನಗಳು ತಮ್ಮ ಸ್ವಂತಕ್ಕೋಸ್ಕರ ದರಖಾಸ್ತು ಮಾಡಿದರೆ ಅಥವಾ, ಮುತಾಲೀಕರ ತರೀಕ್ ದರಖಾಸ್ತು ಮಾಡಿದರೆ ಆ ಸಂಗತಿಯನ್ನು ನಮೂದಿಸುವಂತೆ ಕೇಳಲ್ಪಡಬಹುದು, ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಯಜಮಾನರ ಕಡೆಯಿಂದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡತಕ್ಕದ್ದು, ಹಾಗಿಲ್ಲದೆ ಇದ್ದರೆ ಅವರ ದರಖಾಸ್ತುಗಳು ಮಂಜೂರಾಗಲಿಕ್ಕಿಲ್ಲವು.

6. ಕಂದಾಯ ಕೊಡಲಿಕ್ಕೆ ತಪ್ಪಿದ ಮನುಷ್ಯನು ಅಥವಾ ಅವನಿಗಾಗಿ ಕೆಲಸ ನೋಡುವ ಅಥವಾ ಜಮೀನಿನಲ್ಲಿ ತನಗೆ ಸಂಬಂಧ ವುಂಟೆಂತ ಹೇಳುವ ಯಾವ ಮನುಷ್ಯನಾಗಲಿ ಕಂದಾಯ ಬಾಕಿಯ ಪೂರಾ ಮೊಬಲಗನ್ನೂ ಬಡ್ಡೀ ವ ಇತರ ಖರ್ಚುಗಳನ್ನೂ ಹಾಜರ್ ಮಾಡಿದರೆ ಸದರೀ ಹರಾಜ್ ನಿಲ್ಲಿಸಲ್ಪಡುವದು, ಪರಂತು ಹರಾಜು ಬಗ್ಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದಲ್ಲಿ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಮೇರೆ ಮೊಬಲಗ್ ಹಾಜರ್ ಮಾಡತಕ್ಕದ್ದು.

7. ಕಮ್ಮಿಷನರವರಿಂದ ಕಾಯಂ ಆಗುವ ಪರ್ಯಂತ ಹರಾಜು ಆಖೈರಾದ್ದಾಗಿರತಕ್ಕದ್ದಲ್ಲವು.

8. ಕ್ರಯದಾರರು ಕ್ರಯ ಮೊಬಲಗನ್ನು ಪೂರ್ಣವಾಗಿ ಪಾವತೀ ಮಾಡಿ ಡೆಪ್ಯುಟಿ ಕಮ್ಮಿಷನರವರಿಂದ ವಿಕ್ರಯ ಕಾಯಂ ಆದ ಕೂಡ್ಲೇ ಸ್ವತ್ತು ಸದರೀ ಕ್ರಯದಾರನ ವಶಕ್ಕೆ ಕೊಟ್ಟು ಬಿಡತಕ್ಕದ್ದಲ್ಲದೇ ಜಮೀನುಗಳು ಕ್ರಯದಾರನ ಹೆಸರಿಗೆ ರಿಜಿಸ್ಟರ್ ಆಗಿ ಡೆಪ್ಯುಟಿ ಕಮ್ಮಿಷನರಿಂದ ಸೈನ್ ಮೊಹರಾದ ವೊಂದು ಸರಟಿಫಿಕೇಟ್ ಸಹ ಅವನಿಗೆ ಕೊಡಲ್ಪಡುವದು. ಜಮೀನ್ ತಪಸೀಲ್ ವಿಷಯದಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಉಂಟಾಗುವ ಗಲ್ತಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಹರಾಜು ದೆಸೆಯಿಂದ ನುಕ್ಸಾನ್ ಪಟ್ಟವರಾಗಿ ಯೆಣಿಸುವ ಜನಗಳು ಹರಾಜು ತಾರೀಖು ಲಗಾಯತು ಮೂವತ್ತು ದಿನಗಳೊಳಗಾಗಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಾಗಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಕೊಡಲ್ಪಡುವ ಆಖೈರ್ ಹುಕ್ಕುಮಿನ ಷರತ್ತು ಬಂದಿಗೆ ಸದರೀ ಕ್ರಯವು ವೊಳಪಟ್ಟು ನಡೆಯತಕ್ಕದ್ದು.

ತಾಲ್ಲೂಕು.	ಗ್ರಾಮ.	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು.	ಜಮೀನು ತರೀಯೋ, ಖುಷ್ಕಿಯೋ, ಯಾ ಬಾಗಾಯಿತೇ, ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ|| ಕಟ್ಟಡಗಳು ಯಾವದಾದರೂ ಯಿರುತ್ತವೆಯೇ.	ಜಮೀನ್.		ಅಂದಾಜು ಬೀಜವರೀ.			ಕಂದಾಯ.			ಸಾಲ್ ಮಜಕೂರಿಗೆ ಕ್ರಯದಾರನಿಂದ ಸಲ್ಲತಕ್ಕ	ಗುಜಸ್ತಾ ಮಿನಹ (ಬಾಕೀ ಶಿವಾಯಿ) ಮೊಬಲಗು.
				ನಂಬರ್.	ಹೆಸರು	ಖಂ.	ಕೂ.	ಪ.	ರೂ.	ಆ.	ಪೈ.		
ಬೇತಮಂಗಲ.	ಜೋಡೀ ಕಣಿಂಬಲೆ.	ಅಪ್ಪಣಾಚಾರು ವಗೈರೆ.	ಪೂರಾ ಗ್ರಾಮ. ಖುಷ್ಕೀ. ತರೀ.	.. ..	.. ..	22 12 34	0 0 0	0 0 0	ಕ್ವಿಂಟೆ 175	ರಂ 11	ಟ 0	100	15

ಸ್ಥಳ ಬೌರಿಂಗ ಪೇಟೆ. ಅಂದಾಜು ರೂಪಾಯಿ 100.

ತಾರೀಖು 27ನೇ ಮಾಹೇ ಜೂನ್ 1876ನೇ ಇಸವೀ.

J. RAMAIYA,
For Dy. Commr.

TUMKUR DISTRICT.

Notice regarding an application of Ramsetti for a certificate under Act XXVII of 1860.

ತುಮಕೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವ ದೇನಂದರೆ—ಮದ್ದಗಿರಿ ತಾಲ್ಲೂಕು ಕಸಬಾ ಮದಗಿರಿ ಗ್ರಾಮದ ವಾಸಸ್ತನಾಗಿ ಇದ್ದ ಫವತಿಯಾದ ಪೆದ್ದಶೆಟ್ಟಿ ಯಂಬುವನಿಗೆ ಇತರರ ಇಂದಾ ಬರಬೇಕಾಗಿ ಯಿರುವ 1000 ರೂಪಾಯಿಗಳು, ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಇವನ ಮಗ ರಾಮಶೆಟ್ಟಿ ಯಂಬುವನು ದಾಖಲ್ ಮಾಡಿ ಇರುವ ಅರ್ಜಿಯನ್ನು 1876ನೇ ಇಸವಿ ಜುಲೈ ತಿಂಗಳು 25ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದಾ, ಇದಕ್ಕೆ ತಕರಾರ್ ಮಾಡುವರ್‍ಯಾರಾದರು ಇದ್ದರೆ, ಈ ಕೋರಟು ರೂಬರು ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿ ಇರುತ್ತೆ.

ತಾರೀಖು 26ನೇ ಮಾಹೆ ಜೂನ್ 1876ನೇ ಇಸವಿ ಮೊಕ್ಕಾಂ ತುಮಕೂರ್.

Notice regarding an application of Bore Gauda for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರಹಳ್ಳಿ ಗ್ರಾಮದ ವಾಸಸ್ತನಾಗಿ ಯಿದ್ದ ಫೌತಿಯಾದ ಸಿದ್ದೇಗೌಡ ಯಂಬುವನಿಗೆ ಇತರರ ಯಿಂದ ಬರಬೇಕಾಗಿ ಯಿರುವ 950 ರೂಪಾ ಯಿಗಳು, ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ ಯಿವನ ಮಗ ಬೋರೇಗೌಡ ಯಂಬುವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವೀ ಆಗಿಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರು ಮಾಡುವರ್‍ಯಾರಾದರೂ ಯಿದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘುಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 28ನೇ ಮಾಹೇ ಜೂನ್ 1876ನೇ ಇಸವೀ, ಮೊಕ್ಕಾಂ ತುಮಕೂರ್.

Notice regarding an application of Ramadasaiengar for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ;—ಹೊನ್ನವಳ್ಳೀ ತಾಲ್ಲೂಕು ನೊಣವಿನಕೆರೆ ಗ್ರಾಮದ ವಾಸಸ್ಥನಾಗಿ ಯಿದ್ದ ಫೌತೀಯಾದ ಹೊಸಮನೆ ಅಪ್ಪಂಣ್ಣೈಯಂಗಾರು ಯಂಬವನಿಗೆ ಇತರರಯಿಂದ ಬರಬೇಕಾಗಿರುವ 1000 ರೂಪಾಯಿಗಳು, ವಸೂಲುಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಈತನ ಮೊಂಮಗ ರಾಮದಾಸಯ್ಯಂಗಾರು ಯಂಬುವನು ದಾಖಲ್ ಮಾಡಿ ಇರುವ ಅರ್ಜೀಯನ್ನು 1876ನೇ ಇಸವಿ ಆಗಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಇದಕ್ಕೆ ತಕರಾರ್ ಮಾಡುವರ್‍ಯಾರಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಇರುತ್ತೆ.

Notice regarding an application of Gangamma for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಅರೆಹಳ್ಳಿ ಗ್ರಾಮದ ವಾಸಸ್ಥನಾಗಿಯಿದ್ದ ಫೌತೀಯಾದ ಕಾಮಶೆಟ್ಟಿ ಬಶೆಟ್ಟಿ ಯಂಬುವನಿಗೆ ಇತರರ ಇಂದಾ ಬರಬೇಕಾಗಿರುವ 800—0—0—ರೂಪಾಯಿಗಳು, ವಸೂಲುಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಇವನ ಹೆಂಡತಿ ಗಂಗಮ್ಮ ಯಂಬುವಳು ದಾಖಲ್ಮಾಡಿ ಇರುವ ಅರ್ಜಿಯನ್ನು 1876ನೇ ಇಸವಿ ಆಗಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರ್ ಮಾಡುವರ್‍ಯಾದಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖುದಿವಿ 12 ಘಂಟೆಗೆ ಹಾಜರಾಗಬೇಕಾಗಿರುತ್ತೆ.

ತಾರೀಖು 30ನೇ ಮಾಹೆ ಜೂನ್ 1876ನೇ ಇಸವಿ, ಮೊಕ್ಕಾಂ ತುಮಕೂರು.

E. S. Ludlow,
Offg. Dy. Commr.

MYSORE DISTRICT.

ತಾರೀಖು 4ನೇ ಜುಲೈ 1876.

ಈ ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕು ಧಾತು ಸಂವತ್ಸರದ ಬಾಬತು ಅಳಲೆಕಾಯಿ ತಾರೇಕಾಯಿ ಯಿಜಾರೇ ಪೋಟಾ ಪೋಟಿಯು ಬರುವ ಅಕ್ಟೋಬರ 5ರ ಲಗಾಯಿತು 7ರ ವರಿಗೆ ನಡಿಸಲ್ಪಡುವದೆಂದು ಮೈಸೂರು ಗೆಜೆಟ್ಟಿನಲ್ಲಿ ಮೊದಲೆ ಪ್ರಾಯಿಷ್ ಮಾಡಿರುತ್ತಷ್ಟೆ ಆದರೇ ಸದರೀ ತಾರೀಖಿಗೆ ಬದಲಾಗಿ ಚಾಲತೀ ಮಾಹೆ 17ನೇ ತಾರೀಖು ಲಗಾಯಿತು 21ನೇ ತಾರೀಖು ವರಿಗೆ ಐಜರ್ ತಾಲ್ಲೂಕು ಅಳಲೆಕಾಯಿ ತಾರೇಕಾಯಿ ಯಿಜಾರೆ ಪೋಟಾ ಪೋಟಿಯು ನಡಿಸಲ್ಪಡುವದು.

C. J. PEARSE,
Dy. Commr.

HASSAN DISTRICT.

Notice regarding an application of Mahomed Imam Saib for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನರಿಗೂ, ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಮೇಲುಪಾಲ್ ಹೋಬಳಿ ಅಂಗಜನಹಳ್ಳಿ ಗ್ರಾಮದ ಶಿಕನೇಗೌಡನ ಶಿದ್ದಪ್ಪನೆಂಬವನು ತನ್ನ ಹೆಸರಿಗೆ ಬಂದು ಯಿದ್ದ ಈ ಕೆಳಗೆ ನಮೂದಾಗಲ್ಪಡುವ ಕಾಫಿ ವೃಷ್ಟಿ ಪಟ್ಟೆಯು ಮನೇಯಲ್ಲಿ ಸೂರಿಗೆ ಶಿಕ್ಕಿ ಯಿದ್ದದ್ದು ಯಲ್ಲೋ ಗೈರ್ವ್ರಿಲೇ ಆಗಿ ಹೋಯಿತು ಡ್ಯೂಪ್ಲಿಕೇಟ ಕೊಡಿಸಬೇಕೆಂದು ಕೇಳಿಕೊಂಡು ಯಿದ್ದಾನೆ ಅವನ ಕೋರಿಕೆ ಪ್ರಕಾರ ನಡೆಸಿಕೊಡುವದನ್ನ ಷಾಂಗಿರ್ಸ ಮಾಡಿ ಯಿರುತ್ತೆ.

ಆದರೆ ಯಿದರ ಮೇಲೆ ಯಾರಾದರೂ ಆಕ್ಷೇಪಣೆ ಮಾಡತಕ್ಕವರು ಯಿದ್ದರೆ ಈ ನೋಟೀಸ್ ತಾರೀಖು ಲಗಾಯತು $1\frac{1}{2}$ ತಿಂಗಳು ವಳಗಾಗಿ ಅಂಥಾವರು ತಮ್ಮ ಆಕ್ಷೇಪಣೆ ಸಂಗತಿಯನ್ನ ಕುರಿತು ಕ್ರಮ ಪ್ರಕಾರ ಡಿಸ್ಟ್ರಿಕ್ಟು ಮಜಕೂರ ಫಸ್ಟ್ ಅಸಿಸ್ಟೆಂಟ ಕಮ್ಮಿಷನರವರ ಮುಂದೆ ಅರ್ಜಿ ದಾಖಲ್ ಮಾಡಬಹುದು, ಯಿದಕ್ಕೆ ತಪ್ಪಿ ವಾಯಿದೆ ಕಳದನಂತರ ಫಿರಿಯಾದು ತಂದದ್ದಾದರೆ ಅದು ಮಂಜೂರ್ ಆಗಲರಿಯದು. ನಂಬರ 4ನೇ ಕಡಪೆಲಕೆ ವೃಷ್ಟಿ.

ಅದರ ಚಕ್ಕುಬಂದಿ.

ಪೂರ್ವಕ್ಕೆ—ಶಿದ್ದೇಗೌಡನ ಹಸುರುವಾಣಿ ಹಿತ್ತಲ್ ವತ್ತು. ದಕ್ಷಿಣಕ್ಕೆ—ಹುಣಶೇಪುರ,
ಪಶ ಮಕ್ಕೆ—ಕರಡಿವಾದ ಪುರ. ವುತ್ತರಕ್ಕೆ—ಕರಕಲಪುರ.
ಈ ಪಟ್ಟೆ ಡಿಸ್ಟ್ರಿಕ್ಟು ನಂಬರ್ 4, ಯಕರೆ 1 ರೋಡ 0 ಪೋಲ್ 5, ಗಜ $8\frac{3}{4}$.
ಬತಾರೀಖು 3ನೇ ಮಾಹೆ ಜುಲೈ 1876ನೇ ಇಸವಿ, ಮೊಕ್ಕಾಂ ಹಾಸನ.

H. E. MOTTET,
Dy. Commr.

SHIMOGA DISTRICT.

ತಾರೀಖು 17ನೇ ಜೂನ 1876.

ಶಿವಮೊಗ್ಗೇಯಿಂದ ಬಾಣಾವಾರಕ್ಕೆ ಹೋಗುವ ರಸ್ತೇಯಲ್ಲಿ 1876ನೇ ಮೇ 27ನೇ ಮರ್ಕ್ಕುಮಿನ ರಾತ್ರಿ ಅಂಚೇ ಊಳಿಗದವರ ಮೇಲೆ ಬಿದ್ದು ನಡಿಸಿದ ಡಕಾಯಿತೀ ಮೊಕದ್ದಮೆಯೊಳಗೆ ಸಂಬಂಧಪಟ್ಟ ತಕಸೀರ ವಂದನ್ನು ದಸ್ತಗಿರೀ ವ ಆಪಾದನೇ ಮಾಡುವ ಬಗ್ಗೆ ಸಾಧಕವಾದ ಖಬರ ತಿಳಿಸುವಂತಾ ಯಾವನಿಗಾಗಲಿ 100 ರೂಪಾಯಿಗಳ ಇನಾಂ ಕೊಡಲ್ಪಡುತ್ತೆ.

ಸದರೀ ಡಕಾಯುತೀಯಲ್ಲಿ ಷಾಮೀಲಾದ ಆರ್ಯ ತಕಸೀರ ವಂದನಲ್ಲಿದ ಯಾವ ಮನುಷ್ಯನಾಗಲಿ ಈ ಸಂಗತಿಯಲ್ಲಿ ತನಗೆ ತಿಳಿದ ಅಂಶಗಳನ್ನೆಲ್ಲ ಸಂಪೂರ್ಣವಾಗಿಯೂ ನಿಜವಾಗಿಯೂ ಬಹಿರಂಗ ಪಡಿಸುವ ಷರತ್ತಿನ ಮೇಲೆ ಅವನಿಗೆ ಮನ್ನನೆ ಕೊಡಲ್ಪಡುವದೆಂತ ಇದರಿಂದ ತಿಳಿಸಲ್ಪಡುತ್ತೆ.

VIJAYARAGHAVALU,
For Offg. Dy. Commr.

KADUR DISTRICT.

Notice of a burglary committed in the house of Nadiga Shamanna at Tarikere, on the night of the 0th June 1876, when property valued at rupees 2,089 is said to have been stolen.

ಕಡೂರು ಡಿಸ್ಟ್ರಿಕ್ಟು ಡೆ॥ ಕ॥ ಕೋರ್ಟನಿಂದ.

ಯಾದಾಸ್ತು ತರೀಕೆರೆ ಕಸಬಾದಲ್ಲಿರುವ ನಾಡಿಗ ಶ್ಯಾಮಣ್ಣನ ಮನೆ ಗೋಡೆಗೆ ಕನ್ನ ಹಾಕಿ ಮಾಹೇ ಮಜಕೂರ ತಾರೀಖು 0ನೇ ರಾತ್ರೆ ಕಳ್ಳರು ಡಿಟೋ ಕನ್ನದ ದ್ವಾರಾ ಮಾಲ್ ಕಳವು ಮಾಡಿಕೊಂಡು ಹೋಗಿರುವದಾಗಿ ಫಿರಿಯಾದಿಯು ಬರೆಸಿದ ಜಂದಗಿಟ್ಟೀ, ತಾಲ್ಲೂಕು ತರೀಕೆರೆ ಸನ 1876ನೇ ಇಸವಿ ಜೂನ ತಾರೀಖು 21ರಲ್ಲು

13

ನಡಮನೇ ಗೋಡೇ ಗೂಡಿನಲ್ಲಿ ಯಿದ್ದ ಮಾಲಿನ ಕಿಮ್ಮತು.

ಚಿನ್ನದ ನಗಗಳು.

	ರೂ.	ಆ.
ಚೊಕ್ಕ ಚಿನ್ನದ ವಂಕೀ ಜೊತೆ 1ಕ್ಕೆ 80 ವರಹಾ ತೂಕ ..	500	0
ಚೊಕ್ಕ ಚಿನ್ನದ ವಂಕೀ ಜೊತೆ 2ಕ್ಕೆ ಹುಡುಗರ ಬಾಬತು ದರ ಜೊತೆ 1ಕ್ಕೆ ಸುಮಾರು 10 ವರಹಾ ತೂಕ ಪ್ರಕಾರ 20 ವರಹಾ ತೂಕ ..	100	0
ಚೊಕ್ಕ ಚಿನ್ನದ ಅಸಲೀ 1ಕ್ಕೆ 20 ವರಹಾ ತೂ||	100	0
ಚೊಕ್ಕ ಚಿನ್ನದ ಅಸಲೀ 1ಕ್ಕೆ 15 ವರಹಾ ತೂ||	75	0
ಗೆಜ್ಜೆ ಅಡ್ಡಿಕೆ ಸರ 1ಕ್ಕೆ 15 ವರಹಾ ತೂಕ ಗೆಜ್ಜೇ 54 ಅಡ್ಡಿಕೆ 27 ಹತ್ತು ಬಂಣದ್ದು ಗಿರ್ವೀ ಬಾಬತು.	71	4
ಜೋಮಾಲೇ ಸರ 1ಕ್ಕೆ ಯಳೆ 3 ಗುಂಡು 166 ಕುಪ್ಪಿಗೆ 1 ಹರಡೀ ಗುಂಡು 1 ಸಹಾ 27 ವರಹಾ ತೂಕ 9 ಬಂಣದ ಬಾಬತು	111	8
ಪುತ್ರಾಜಿವಾಲೆ ಜೊತೆ 1ಕ್ಕೆ 6 ವರಹಾ ತೂಕ ವರಹಾ ಬಂಣ ಗಿರ್ವೀ ಬಾಬತು. ..	27	0
ಹರಡೀಗುಂಡು ಜೊತೆ 1ಕ್ಕೆ ಗುಂಡು 10 ಹವಳ 12 ಬೆಳ್ಳೀ ಸರಿಗೆಯಲ್ಲಿ ಸುತ್ತಿದ್ದು 15 ವರಹಾ ತೂಕ ಚೊಕ್ಕ ಭಂಗಾರ.	80	0
ಶಿಹ್ಮ ಲಲಾಟದ ಜೊತೆ 1ಕ್ಕೆ 30 ವರಹಾ ತೂಕ ಚೊಕ್ಕ ಭಂಗಾರ.	150	0
ಹಿಂಬಳ್ಳೇ ಫರ್ದು 1ಕ್ಕೆ 11 ವರಹಾ ತೂ|| ಚೊಕ್ಕ ಭಂಗಾರ. ..	55	0
ಬಳ್ಳೇ ವಾಲೇಜೊತೆ 1ಕ್ಕೆ ಇದಕ್ಕೆ 2 ಚಳತುಂಬು ಹಾಕಿ ಯಿದೆ ಯಿದಕ್ಕೆ ಮುತ್ತು ಸುತ್ತಿರುವ ತಂತಿ ಸಹಾ 13½ ವರಹಾ ತೂಕ ಚೊಕ್ಕ ಭಂಗಾರ 20 ರೂಪಾಯಿಯಿನ ಮುತ್ತು ಸುತ್ತಿತ್ತು. ..	87	0
ಸೂರತಿ ಬಳೀ ಜೊತೆ 1ಕ್ಕೆ 5 ವರಹಾ ತೂಕ ಚೊಕ ಭಂಗಾರ ಯಿದಕ್ಕೆ ಬೆಳ್ಳೀ ತಗಡು 8 ರೂಪಾಯಿದು ಯಿರುತ್ತದೆ. ..	29	0
ಯೇಳು ಯಸಳು ಕ್ಯಾದಿಗೆ 1ಕ್ಕೆ 6 ವರಹಾ ತೂಕ ವಳಗೆ ಬೆಳ್ಳೀ ತಗಡು ಹಾಕಿರುತ್ತದೆ. ..	32	0
ಕಮಲದ ಹುವ್ವು 1ಕ್ಕೆ ಚೊಕ್ಕ ಭಂಗಾರ 5½ ವರಹಾ ತೂಕ ಬೆಳ್ಳೀ ಬಿಲ್ಲೇ ಹಾಕಿ ಸುತ್ತಿನ ವುಂಗ್ರ ಹಾಕಿತು	28	0
ಜಡೇಹುವ್ವು 7ಕ್ಕೆ ಸುಮಾರು 10 ವರಹಾ ತೂಕ ಚೊಕ್ಕ ಭಂಗಾರ ವಳಗೆ ಬೆಳ್ಳೀ ತಗಡು ಹಾಕಿದ ಬಾಬತು ಮನೆಕೆಲಸ ಮಾಡಿದ್ದು. ..	52	0
ಗೊಂಡೆ 2ಕ್ಕೆ 2½ ವರಹಾ ತೂಕ ವರಹಾ ಬಂಣ ವಳಗೆ ಬೆಳ್ಳೀ ತಗಡು ಯಿತ್ತು. ..	11	4
ರಾಗಟೆ 1ಕ್ಕೆ 6 ವರಹಾ ತೂಕ ಚೊಕ್ಕ ಬೆನ್ನಿನ ಬೆಳ್ಳೀ ತಗಡು ಕೆಂಪು ಹರಳು ಸಹಾ ಹಾಕಿತು ನಾಗ ರಹೆಡೆ ಯಿದ್ದ ಬಾಬತು.	36	0
ರಾಗಟೆ 1ಕ್ಕೆ 5 ವರಹಾ ತೂಕ ವರಹಾ ಬಂಣ ಬೆಳ್ಳೀ ತಗಡು ಕೆಂಪು ಹರಳು ಸಹಾ. ಹಾಕಿತ್ತು.	24	0
ಚೌರೀಕೊಟ್ಟು 1ಕ್ಕೆ ಚೊಕ್ಕ ಭಂಗಾರ 3 ವರಹಾ ತೂಕ ಬೆಳ್ಳೀ ತಗಡು ಹಾಕಿತ್ತು. ...	16	0
ಬುಗಡೀ ಜೊತೆ 1ಕ್ಕೆ 7 ಕಳಶದ ಬಾಬತು 3½ ವರಹಾ ತೂಕ ಚೊಕ್ಕ ಭಂಗಾರ ಮುತ್ತು ಸುತ್ತಿರುತ್ತದೆ ಒಟ್ಟು ಖರೀದಿ.	100	0
ಬುಗಡೀ ಸರಪಣೀ ಜೊತೆ 2ಕ್ಕೆ ಫರದು 1 ಜುಮ್ಕಾ ಅದದು 5ಕ್ಕೆ ಮುತ್ತು ಸುತ್ತಿದ ಬಾ|| ಜೋಡಿಳೇ ಬಾಬತು ಚಿನ್ನದ ತೂಕ ಗೊತ್ತಿಲ್ಲ. ..	100	0
ವೃದ್ಧಿನ ಕಾಳು ದಪ್ಪದ ಮುತ್ತಿನ ಸರಾ 2ಕ್ಕೆ ದರ ಸರ 1ಕ್ಕೆ 52 ಮುತ್ತು ಯಿರುವ ಬಾಬತು. ..	80	0
ಜೋಡು ಗೊಂಡೇ ಬಾಬತು ಹಳೇ ಯಿಕ್ಕೇರೀ ವರಹಾ 5 ತ್ರಿಜಾಯಿ 1 ಜಂಕೇರೀ ಹೊನ್ನು 2ಕ್ಕೆ ಸಹಾ	37	0
ಚೊಕ್ಕ ಭಂಗಾರದ ಚಳತುಂಬಿನ ಜೊತೆ 1ಕ್ಕೆ 3 ವರಹಾ ತೂಕ ಮುತ್ತು ಸುತ್ತಿದ ಬಾಬತು ..	20	0
ಚೊಕ್ಕ ಭಂಗಾರದ ಮುಖರ 1ಕ್ಕೆ ಮುತ್ತು ಸುತ್ತಿದ ಬಾಬತು.	25	0
ವರಹಾ ಬಂಣದ ಬಾ|| ಭಂಗಾರದ ಘಟ್ಟಿ 1ಕ್ಕೆ 3 ವರಹಾ ತೂಕದ ಬಾಬತು.	13	8
ವರಹಾ ಬಂಣದ ಬಾ|| 1¼ ವರಹಾ ತೂಕದ ಸರಿಗೆ ಮುತ್ತು ಸುತ್ತುವ ಬಗ್ಯೆ ಮಾಡಿಸಿದ್ದು. ..	6	12
ಕಡಗಪಾತ್ರೇ ಬಳೆ ಜೊತೆ 1ಕ್ಕೆ 2 ವರಹಾ ತೂಕ ಚೊಕ್ಕ ಭಂಗಾರ ವಳ್ಳೀ ತಾಂಬ್ರದ ತಗಡು ಇರುತ್ತದೆ.	10	0
ಚೊಕ್ಕ ಭಂಗಾರದ ಬಾ|| ವಂಕಿ 1ಕ್ಕೆ 2 ವರಹಾ ತೂಕ. ..	10	0
ಕರೀಮಣೀ ಅಡ್ಡಿಕೆ ಚೊಕ್ಕ ಭಂಗಾರದ ಬಾ|| ಸರ 1ಕ್ಕೆ 4 ವರಹಾ ತೂಕ ಮಾಣಿಕ್ಯಮಣಿ ಹಾಕಿ ಪೋಣಿಸಿದ್ದು.	20	0
ಸಂಣ ಹವಳ ಸುಮಾರು 100ಕ್ಕೆ ವಡಕು 8ಕ್ಕೆ ಸಹಾ.	4	0

ಬೆಳ್ಳೀ ನಗಗಳು.

ಬೆಳ್ಳೀ ಜೋಡಿಳೆ ವುಡಧಾರ 1ಕ್ಕೆ ಸುಮಾರು 24 ರೂಪಾಯಿ ತೂಕದ ಬಾಬತು ರೂಪಾಯಿ ವರೆ.	20	0
ರಾಜಾ ರೂಪಾಯಿ ಮುರದ ಬಾಬತು ಘಟ್ಟಿ 1ಕ್ಕೆ 3 ರೂಪಾಯಿ.	3	0
ಕಾಲಸರದ ಜೊತೆ 1ಕ್ಕೆ ಗೆಜ್ಜೆ ಹಾಕಿರುತ್ತದೆ 40 ರೂಪಾಯಿ ತೂಕ ರೂಪಾಯಿ ವರೆ ಗಿರ್ವಿ ಬಾ||	40	
ಬೆಳ್ಳೀ ಸಂಣ ಪಂಚಪಾತ್ರೆ ಸುಮಾರು 16 ರೂಪಾಯಿ ತೂಕ ರೂಪಾಯಿ ವರೆ.	16	

ಬೆಳ್ಳೀ ಗುಂಡು ಬಟ್ಟು 1ಕ್ಕೆ ಮೇಲಗಡೆ ಅಂಚಿನಲ್ಲಿ ಸುತ್ತಲು ಗೆರೆ ಮಾಡಿತ್ತು ಸುಮಾರು 13 ರೂಪಾಯಿ ತೂಕ ರೂಪಾಯಿ ವರೆ. ..	13	0
ಕಾಲು ವುಂಗ್ರ ಘರದು 2ಕ್ಕೆ ರೂಪಾಯಿ ವರೆ.	8	0
ಪಿಲ್ಲಿ ಜೊತೆ 2ಕ್ಕೆ ಅದದು 4 ರೂಪಾಯಿ ವರೆ 13 ರೂಪಾಯಿ ತೂಕ.	13	0
ಕಾಲ ಸರದ ಜೊತೆ 1ಕ್ಕೆ ಸುಮಾರು 40 ರೂಪಾಯಿ ತೂಕ ಗೆಜ್ಜೇ ಹಾಕಿಯಿಲ್ಲ ರೂಪಾಯಿ ವರೆ	40	0
ಕೆಂಪು ಹರಳು 2ಕ್ಕೆ ವುಂಗ್ರಕ್ಕೆ ಹಾಕುವ ಬಾ॥	16	0
ಹಿರದು ಹೊಸಕುಪ್ಪಸ ಖಣ 8ಕ್ಕೆ ಸುಮಾರು ಗೇಣು ರೇಷ್ಮೆ ಅಂಚು ಯಿದ್ದ ಬಾಬತು ಕರೀ ಖಣಗಳು ಯಿಂತ್ತಿಂಥಾ ತರಹೇಯೆಂಬುವದು ಗೊತ್ತಿಲ್ಲ.	8	0
ಮೇಲೆ ನಮೂದಾಗುವ ನಗಗಳು ಹಾಕಿದ ಬಾಬತು ತಾಂಬ್ರದ ಭರಣಿ 1, ಹಿತ್ತಾಳಿ ಭರಣಿ 2ಕ್ಕೆ ಸಹಾ.	4	0
ಜುಮ್ಲಾ	2089	0

ಈ ಮೇರಿಗೆ ಮಾಲ್ ಹೋಗಿರುವದು ಹೊರ್ತು ಖಬ್ಬಿಣದ ದೊಡ್ಡ ಭರಣಿ 1, ಅದರಲ್ಲಿರುವ ಮೆಣಸು, ಯಾಲಕ್ಕಿ ಕಾಯಿ ಸಹಾ, ಭಂಗಾರದ ಬಾಬತು ಕೆಂಪು ಹರಳಿನ ವುಂಗ್ರ 1 ಹೋಗಿ ಯಿದದ್ದನ್ನು ಫಿರ್ಯಾದಿ ಕೊಟ್ಟಿಗೆ ಹಿಂದಗಡೆ ರೋಡಿನ ವತ್ತಿನಲ್ಲಿ ಹಾಕಿ ಹೋಗಿದದು ತನ್ನದಾಗಿರುತ್ತದೆ, ಯಿದು ಶಿಕ್ಕಿರುವದ್ದರಿಂದ ಪಟ್ಟೀ ಪ್ರಕಾರ ಮಾಲ್ ಹೊದ್ದು ಶಿವಾಯಿ ಯಿನ್ನೇನೂ ಹೋಗಲಿಲ್ಲವೆಂತ ಹೇಳಿದ್ದರಿಂದ ಫಿರಿಯಾದಿ ಪಂಚಾಯಿತರ ರುಜು ತೆಗಿಯಲಾಇತು ಸಿಕ್ಕಿದ ಸದರೀ ಭರಣೀ ಮೆಣಸು, ಯಾಲಕ್ಕಿ ವುಂಗ್ರ ಸಹಾ ಫಿರ್ಯಾದಿದೆ ಹೌದೆಂದು ಕಾಳಿಂಗಪ್ಪ ವಗೈರೇರು ಬಯಾನಿಸಿದ್ದರಿಂದ ಫಿರಿಯಾದಿ ವಶಕ್ಕೆ ಕೊಟ್ಟು ರುಜು ತೆಗಿಯಲ್ಪಟ್ಟಿದೆ.

Notice regarding an application of Bhujang Rao for a certificate under Act XXVII of 1860.

ಇದರಿದ ಸಮಸ್ತ ಜನರಿಗೂ ಪ್ರಸಿದ್ಧಪಡಿಸುವದೇನಂದರೆ,—ಕಡೂರು ಕಸಬಾದಲ್ಲಿ ಇರುವ ಸೇತೂರಾಯನಹೆಂಡತಿ ಜೇಊಬಾಯಿ ಮೈನರ್ ಇವಳ ಪೋಷಣೇಕರ್ತನಾಗಿಯೂ ಖಾಸಾ ಅಣನಾದ ಜೇಲೂರು ಭುಜಂಗರಾಯನು ಸದರೀ ಜೇಊಬಾಯಿ ಗಂಡನಾದ ಘವತೀಪಟ್ಟಿರುವ ಕೊಪ್ಪತಾಲ್ಲೂಕು ರೆವಿನ್ಯೂ ಗುಮಾಸ್ತೆಯಲ್ಲಿಯಿದ್ದ ಸೇತೂರಾಯಗೆ ಹೊರಗಿನಿಂದ ಬರತಕ್ಕ ಜಿಂದಿಗೀ ಹಣ ಸಹ (500) ಐನೂರು ರೂಪಾಯಿವರಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ಮೈನರ್ ಜೇಊಬಾಯಿಗೋಸ್ಕರ ತನ್ನ ಹೆಸರಿಗೆ 1860ನೇ ಇಸವೀ 27ನೇ ಆಕ್ಟುಮೇರಿಗೆ ಸರಟಫಿಕೇಟ ಕೊಡಿಸಬೇಕೆಂತ ಕೊಟ್ಟಿರುವ ಅರ್ಜೀ ಫೈಸಲಬಗ್ಯೆ ಬರುವ ಸನ್ ಮಜ್ಕೂರ್ ಜುಲೈ ತಾರೀಖು 29ನೇ ದಿವಸ ಚಿಕ್ಕಮುಗಳೂರು ಮೊಕ್ಕಾಂನಲ್ಲಿ ಹಿಯರಿಂಗ್ ಇಟ್ಟಿರುವದರಿಂದ ತಕರಾರುಳ್ಳವರು ಸದರೀ ತಾರೀಖು ಹಗಲು 11 ಘಂಟೆಗೆ ಈ ಕೊರ್ಟುಮುಂದೆ ಹಾಜರಾಗಿ ಜಾಹಿರುಮಾಡಿ ಕೊಳ್ಳಬೇಕಾಗಿಧೆ.

ತಾರೀಖು 26 ಜೂನ್ ಸನ್ 1876 ಮೊಕ್ಕಾಂ ಚಿಕ್ಕಮುಗುಳೂರು.

P. Krishna Rao,
Dy. Commr.

Notice regarding the destruction of certain papers whose description is given below, pursuant to the Circular of the Inspector General of Registration.

ಕಡೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರವರ ಆಫಿಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಮತ್ತು ಕೊಡಗು ಶೀಮೆಗಳ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಸನ್ 1875ನೇ ಇಸವೀ ಆಗಸ್ಟು 5ನೇ ಮರಕುಂ ನಂಬರು 5ನೇ ಸರ್ಕಿಲರ್ ಅನುಸರಿಸಿ ಸನ್ 1866ನೇ ಇಸವೀ ಲಾಗಾಯಿತು ಸನ್ 1872ನೇ ಇಸವೀ ಮಾರ್ಚಿ ಆಖೈರ ವರಿಗಿನ ಕರೆಸಪಾಂಡೆನ್ಸ್ ಅಂದರೆ ಸಬ್ ರಿಜಿಸ್ಟ್ರಾರು ಮತ್ತು ಕಕ್ಷಿಗಾರರು ಬರಕೊಂಡ ಅರ್ಜಿಗಳು, ಮತ್ತು ಇತರ ಆಫೀಸುಗಳಿಂದ ಬಂದ ಕನ್ನಡ ಯಾದಾಸ್ತುಗಳು, ಇತ್ತಿಲ್ಲೆಗಳು, ಅರ್ಜಿಗಳು, ಮತ್ತು ಕೆಲವು ಲೆಖ್ಖಗಳು, ಸಹಾ ನಾಶಪಡಿಸಬೇಕಾಗಿರುವದರಿಂದ ಗೆಜೆಟ ಮೂಲಕ ಯಲ್ಲಾಜನಗಳಿಗೆ ಪ್ರಸಿದ್ಧಪದಿಸಿ ಇಧೆ.

ಹಾಲೀ ಮೇಲ್ಕಂಡ ಮೇರೆ ಜಲಾಯಿಸಲ್ಪಡುವ ರಿಕಾರ್ಡಿನಲ್ಲಿ ದಸ್ತೈವಜುಗಳು, ಸರಟಫಿಕೇಟಗಳು, ಅಥವಾ ಇತರ ಸಾಧನಗಳು, ವಗೈರೆ ಈ ಆಫೀಸಿಗಾಗ್ಲಿ ಸಬ್ ರಿಜಿಸ್ಟ್ರಾರಗಳ ಆಫೀಸಿಗಾಗ್ಲಿ ಹಾಜರ್ ಮಾಡಿದ್ದು ಇದ್ದರೆ ಈ ನೋಟಿಸ್ ಗೆಜೆಟನಲ್ಲಿ ಘಾಯಿಷ್ ಆದಲಾಗಾಯಿತು 2 ತಿಂಗಳವಳಗೆ ಈ ಆಫೀಸಿಗೆ ಖುದ್ದಾಗಿಯಾಗ್ಲಿ ಅರ್ಜೀಮೂಲಕ ಜಾಹಿರುಮಾಡಿಕೊಂಡಾಗಲಿ, ತಮ್ಮ ಸಾಧನಗಳನ್ನು ವಾಪಸ ಪಡಕೊಳ್ಳಬೇಕು ಆಮೇರೆ ಪಡಕೊಳ್ಳದಿದ್ದರೆ, ಸದರೀ 2 ತಿಂಗಳವಾಯಿದೆ ಗುಜಾರಾದಕೂಡ್ಲೆ ಡಿಟೋ ಸರ್ಕಿಲರ

ಮೇರೆಗೆ ಸದರೀ ರಿಕಾರ್ಡುಗಳನ್ನು ನಾಶಪಡಿಸಲಾಧೀತು. ಅನಂತರ ಬರುವ ಫಿರ್ಯಾದುಗಳನ್ನು ಕೇಳಲಾರದ್ದಾಗಿ ಯಲ್ಲಾ ಜನರಿಗೂ ಎಚ್ಚರಿಸಿಇಧೆ.

ಚಿಕ್ಕಮಗಳೂರ್, ತಾರೀಖು 29ನೇ ಜೂನ್ ಸೆ 1876ನೇ ಇಸವೀ.

P. KRISHNA RAO,
Registrar.

CHITALDROOG DISTRICT.
ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 26ನೇ ಜೂನ್ 1876.

ಸೆ 1876ನೇ ಇಸವಿ ಮೇ 17ನೇ ಮರ್ತುಂ ಲಗಾಯತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟ ಲೋಕಲ್ ಫಂಡ್ ಅಸಿಸ್ಟೆಂಟ್ ಇಂಜಿನಿಯರ್ ಆಫೀಸ್ ಮುತ್ಸದ್ದಿ ಶ್ರೀನಿವಾಸರಾಯರು ಜೂನ್ 15ನೇ ಮರ್ತುಂನಲ್ಲಿ ಕೆಲಸದ ಮೇಲೆ ವಾಪಸ್ ಬಂದದ್ದರಿಂದ ಅವರ ರಜಾದ ಪೈಕೀ ಉಳಿದ ಭಾಗವು ಅಂದರೆ ಯರಡು ದಿನಗಳು ರದ್ದು ಮಾಡಲ್ಪಟ್ಟಿರುತ್ತೆ.

Notice regarding an application of Basetti for a certificate under Act XXVII of 1860.

ಇದರಿಂದ ಸಮಸ್ತ ಜನರಿಗೂ ಪ್ರಸಿದ್ಧ ಪಡಿಸುವದೇನಂದರೆ,—ಹೊಸದುರ್ಗ ತಾಲ್ಲೂಕ್ ಬಾಗೂರ ವಾಸಸ್ಥನಾಗಿಯಿದ್ದ ಫವುತಿ ಆದ ಗಾಣಿಗರ ಲಿಂಗಪ್ಪನಿಗೆ ಬರತಕ್ಕ ತಮಸೂಕುಗಳ್ಗ ಬಾಬತು 500 ಐದುನೂರು ರೂಪಾಯಿ ಸಾಲಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ದೊಡ್ಡೈಯನ ಮಗ ಬಸೆಟ್ಟಿ ಯಂಬುವನು ಈ ಕೋರ್ಟಿನಲ್ಲಿ ಅರ್ಜೀ ದಾಖಲ್ ಮಾಡಿರುತ್ತಾನೆ. ಇದನ್ನು ಹಿಯರಿಂಗ್ ಮಾಡಲೂ ಬರುವ ಆಗಿಷ್ಟು 3ನೇ ತಾರೀಖನ್ನು ನಿಷ್ಕರ್ಷೆ ಮಾಡಿಧೆ. ಈ ವಿಷಯದಲ್ಲಿ ತಕರಾರು ಮಾಡುವ ಜನಗಳು ಸದರೀ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ನಮ್ಮ ಕೋರ್ಟು ರೂಬರೂ ಹಾಜರಾಗಬೇಕು.

ತಾ॥ 29ನೇ ಮಾಹೇ ಜೂನ್ 1876ನೇ ಇಸವಿ ಚಿತ್ರದುರ್ಗ.

Notice is hereby given that the undermentioned property is reported to have been stolen by dacoity, in the house of one Danappana Mallanna of the Kodihalli village, Hiriyur Taluk, on the night of the 12th instant.

ಚಿತ್ರದುರ್ಗ ಡಿಸ್ಟ್ರಿಕ್ಟು ಡಿ॥ ಕ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಿರಿಯೂರು ತಾಲ್ಲೂಕು ಕೋಡೀಹಳ್ಳಿ ಗ್ರಾಮದಲ್ಲಿ ದಾನಪ್ಪನ ಮಲ್ಲಣ್ಣನೆಂಬುವನ ಮನೆಯಲ್ಲಿ ಮಾಹೇ ಮಜಕೂರ 12ನೇ ತಾರೀಖಿನ ರಾತ್ರಿ ದರೋಡೇ ಮೂಲಕ ಕಳವಾಗಿ ಯಿರುವ ಮಾಲ್ ತಪಸೀಲ್ ಪಟ್ಟಿ.

	ರೂ.	ಆ.
ಭಂಗಾರದ ವಾಲೇಜೊತೆ 1ಕ್ಕೆ ಮುತ್ತು ಹಚ್ಚಿಯಿದ್ದ ಬಾಬತು 3 ಜಳತುಂಬು ಹಚ್ಚಿ ಯಿತ್ತು ತೂಕ ಗೊತ್ತು ಯಿಲ್ಲ.	50	0
ಭಂಗಾರದ ವಾಲೇಜೊತೆ 1ಕ್ಕೆ ಮೂರು ಜಳತುಂಬು ಹಚ್ಚಿಯಿತ್ತು ಸುಮಾರು ಮುತ್ತು ..	30	0
ಬುಗಡೀ ಜೊತೆ 1ಕ್ಕೆ ತೂಕ 4½ ವರಹಾ ಮುತ್ತು ಹಚ್ಚಿ ಯಿತ್ತು.	27	0
ಕೊಪ್ಪು ಭಂಗಾರದ ಬಾ॥ ಜೊತೆ 1ಕ್ಕೆ ತೂಕ ಗೊತ್ತು ಯಿಲ್ಲ.	14	0
ಭಂಗಾರದ ಚಿಂತಾಕು 1ಕ್ಕೆ 5 ವರಹಾ ತೂಕ.	21	0
ಭಂಗಾರದ ಗೆಜ್ಜೇ ಅಡ್ಡಿಕೆ 1ಕ್ಕೆ ತೂ॥ 15ವರಹಾ	65	0
ದ್ರಿಷ್ಟೀಸರಭಂಗಾರದ ಗುಂಡು ಹರಳು ದೇಖೀಲ್ ಧಾರದಲ್ಲಿ ಪೋಣಿಸಿತ್ತು.	10	0
ಭಂಗಾರದ ಅಂಟು ಗುಂಡು ಹವಳ ದೇಖೀಲ್ ..	18	0
ಕಾಸೀತಾಳೀ ಭಂಗಾರದ ಹವಳ ದೇಖೀಲ್. ..	16	0
ಬಣ್ಣದ ಸರ 2ಕ್ಕೆ.	7	0
ಭಂಗಾರದ ದಂಡೇ ಬೆಳ್ಳೀ ಮಣೀ ಸಹಾ. ..	50	0
ಡಿಟೋ ದಂಡೆ.	40	0
ಡಿಟೋ ದಂಡೆ.	10	0
ಹೈದರ್ ತಾಳೀ ಸರ ಭಂಗಾರದ ಬಾಬತು ಹರಳು ದೇಖೀಲ್.	14	0
ಬೆಳ್ಳೀ ಕರಡಿಗೆ 1ಕ್ಕೆ ಹಳೇದು	16	8
ಡಿಟೋ ಕರಡಿಗೆ 1ಕ್ಕೆ	10	0
ಡಿಟೋ ಕರಡಿಗೆ 1ಕ್ಕೆ	11	0
ಡಿಟೋ ಕರಡಿಗೆ 1ಕ್ಕೆ	4	0
ಬೆಳ್ಳೀ ಹೆಂಗಸರ ಕಡಗ 7ಕ್ಕೆ ..	16	0
ಡಿಟೋ ಕಡಗ 4ಕ್ಕೆ	4	0
ಪೈಯಿಠಣೀ ಶೀರೆ 1ಕ್ಕೆ	16	0
ಹಳೇ ಪೈಯಿಠಣೀ ಶೀರೆ 1ಕ್ಕೆ	6	0
ಹಳೇ ಕರಶೀ ಹುಪ್ಪಿನೀರೆ 1ಕ್ಕೆ ..	6	0

	ರೂ.	ಆ.
ನಡುವಾಳೀ ಧೋತ್ರದ ಪಟಿಕೀ 1ಕ್ಕೆ ಬುಗಡೀ ಅಂಚಿನ ಬಾಬತು	4	0
ನಡುವಾಶೀ ಧೋತ್ರ ಬಟ್ಟು ಅಂಚಿನ ಬಾಬತು.	2	0
ಮಧರೇ ಜರತಾರೀ ಹಳೇ ರುಮಾಲ್ 1ಕ್ಕೆ ..	5	0
ಹೊಸ ಕರೇ ಶೀರೆ 2ಕ್ಕೆ	6	0
ಕರೇ ಶೀರೆ 1ಕ್ಕೆ	3	8
ಹಳೇ ಕರೇ ಶೀರೆ 1ಕ್ಕೆ	1	0
ಕುಪ್ಪಸದ ಖಣ 6ಕ್ಕೆ ಕೆಂಪು ಗೀರಿನ ಬಾಬತು 3 ದುಂಡು ಯಿರತಕ್ಕದ್ದು ಹೊಸದು ..	1	11
ಕರೇ ಕಾಗಿನ ಕುಪ್ಪಸದ ಖಣ 1ಕ್ಕೆ ಹೊಸದು	0	12
ಹೊಸ ಫೈಠಣೀ ಕುಪ್ಪಸದ ಖಣ 1ಕ್ಕೆ ..	0	14
ಪೈಯಿಠಣೀ ಖಣ 1ಕ್ಕೆ ಹೊಸದು ..	1	6
ಹೊಸ ಖಾದೀ ಹಜ್ಜಡ 25 ಮಳದ ಬಾಬತು.	2	0
ಹೊಸ ಹಜ್ಜಡ 2ಕ್ಕೆ ವಂದು ಸಲ ಗಂಜೀ ಮಾಡಿದ್ದು	3	0
ಕೋಡೇಬಟ್ಟೆ, ಲ್ಯಾಕೀ ಅಂಚಿನ ಪಂಚೆ 4ಕ್ಕೆ.	3	0
ಖಾದೀಬಟ್ಟೇ ತುಕಡೆ 3ಕ್ಕೆ	2	0
ನಡುವಾಶೀ ಬಿಳೇ ರುಮಾಲ್ 4ಕ್ಕೆ ..	4	0
ನಗದು ರಾಜಾ ರೂಪಾಯಿ	63	0
ಗಾಡೀ ರೂಪಾಯಿ	26	0
ರೊಖ್ಖ	3	0
ಯಂಟುಕೊಳಗ ಭತ್ತಕ್ಕೆ	26	0
ರಾಗಿ ಯಿಕ್ಕಳಕ್ಕೆ	8	0
ನವಣೆ ವಂದು ಕೊಳಗಕ್ಕೆ	3	8
ಹಳರ್ಜ ವಕ್ಕಳ ವಂದಕ್ಕೆ	5	0
ಕುಕಡೀ ಮಣ 1½ಕ್ಕೆ	12	0
ಭರಮಸಾರಿ ಕಬ್ಬಿಣದಬಿಲ್ಲೆ 27ಕ್ಕೆ ..	5	8
ಕಬ್ಬಿಣದ ಗುಳ 3ಕ್ಕೆ	1	2
ಕೈಬಾಚಿ 1ಕ್ಕೆ	0	4
ಹಾರೆ 1ಕ್ಕೆ	0	12
ಸನಿಕೆ 1ಕ್ಕೆ	0	6
ಬೆಲ್ಲಾ ಮಣ 1ಕ್ಕೆ	1	8
ಅಡಿಕೆ ಮಣ ¼ಕ್ಕೆ	1	12
ಹೈದರ ತಾಳೀಸರ ಭಂಗಾರದ ಬಾಬತು .	10	0
2ನೇ ದಫಾ ಹೇಳಿದ್ದು ತಾರೀಖು 14ರಲ್ಲು.		
ಹಂಜೀ ಮಣ 1½ಕ್ಕೆ	9	0
ಕಬ್ಬಿಣದ ಕೊಡ್ಲಿ 1ಕ್ಕೆ	1	0
ಡಿಟೋ ಸಣ್ಣ ಕೊಡ್ಲಿ 1ಕ್ಕೆ	0	8
ಕಬ್ಬಿಣದ ಗುಡಾರದ ಮಳೆ 3ಕ್ಕೆ ..	0	12
ಕಬ್ಬಿಣದ ದೊಡ್ಡ ಮೇಖು 1ಕ್ಕೆ. ..	0	8
ಡಿಟೋ ಬಾಬತು ಶಾವಿಗೆ ಪೊರಳು ..	0	12
ಜೇನು ಮೇಣ ಸೇರು 2ಕ್ಕೆ	0	12
ಪೆಠಾರಿಯಲ್ಲಿ ಯಿದ್ದ ಬೆಳ್ಳೀ ಐದಗಡಗ 1ಕ್ಕೆ ..	1	0
ರೊಖ್ಖಾ ಹಾಕತಕ್ಕ ಹಣಿವೆಪಟ್ಟಿ ಹೊಟ್ಟೆ ಚೀಲ	0	4
ಯಿದರಲ್ಲಿ ಯಿದ್ದ ಕಾಸುಗಳು	0	8
ಜುಮ್ಲಾ	684—3	

ಯಿದು ಶಿವಾಯಿ ಯಿನ್ನೇನೂ ಹೋಗಿಲ್ಲ.

E. ARMSTRONG,
Dy. Commr.

ತಾರೀಖು 28ನೇ ಜೂನ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವ ದೇನಂದರೆ:—ಡಿ|| ಮಜಕೂರು ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ಗ್ರಾಮದ ದಾನಪ್ಪನ ಮಲ್ಲಪ್ಪ ನೆಂಬುವನ ಮನೆಯಲ್ಲಿ ಮಾಹೇ ಮಜಕೂರು 12ನೇ ತಾರೀಖಿನ ರಾತ್ರಿ ಡಕಾಯಿತಿ ಮೂಲಕ ಕಳ ದ ಮಾಲ್ ಪಟ್ಟಿ ಮೇಲೆ ಪಾಯಿಷ್ ಮಾಡಿರುತ್ತಪ್ಪೆ ಈ ಕೃತ್ಯ ನಡಿಸಿದವರನ್ನ ದಸ್ತಗಿರೀ ಮಾಡಲು ಪತ್ತೇಯಿಂದ ಶಿಕ್ಷೆ ಡಲು ಸಹ ವರ್ತಮಾನ ಕೊಡುವವರಿಗೆ ಜುಡಿಷಯಲ್ ಕಮ್ಮಿಷನರ ಸಾಹೇಬರವರ ಅಪ್ಪಣೆ ಮ್ಯಾರಿಗೆ 300 ರೂಪಾಯಿ ಇನಾಂ ಕೊಡಲ್ಪಡುತ್ತೆ.

ABDUL RAHIMAN,
For Dy. Commr.

COORG.

Notice regarding an application of K. Krishnaiya for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟ್ ಕೋರ್ಟಿನಿಂದ.

ಇದರಿಂದ ಸರ್ವೇ ಜನರಿಗೂ ತಿಳಿಯಪಡಿಸುವದೇನಂದರೆ,—ವೀರರಾಜೇಂದ್ರ ಪೇಟೇಲಿರುವ ಕೊಂಕಣಸ್ಥರ ಕೃಷ್ಣಯ್ಯನೆಂಬವನು ಘಾತೀ ತನ್ನ ಚಿಕ್ಕತಂದೆ ರಾಮಪ್ಪಗೆ ಹೊರಗಿನಿಂದ ಬರತಕ್ಕ ಸಾಲ 20,000 ರೂಪಾಯಿ ವಸೂಲ್ ಮಾಡುವದಕ್ಕೆ

ಸನ್ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರ್ಟಿಫಿಕೇಟ ಕೊಡಿಸಬೇಕಾಗಿ ದರಖಾಸ್ತು ಮಾಡಿರುವದರಿಂದ ಈ ಮೊಕದ್ದಮೆ ಸನ್ 1876ನೇ ಇಸವಿ ಆಗಸ್ಟು ತಾರೀಖು 1ನೇ ದಿನ ಹಿಯರಿಂಗ್ ಆಗುವದ್ದರಿಂದ ಯಿದಕ್ಕೆ ಯಾರಾದರೂ ಬಾಧ್ಯಪಟ್ಟವರು ಯಾ ಆಕ್ಷೇಪಣೆ ಮಾಡತಕ್ಕವರು ಯಿದ್ದರೆ ಸದರೀ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಮಿನಲ್ಲಿ ಹಾಜರಾಗಿ ವ್ಯವಹರಿಸಬಹುದು.

ತಾರೀಖು 27ನೇ ಮಾಹೇ ಜೂನ್ ಸನ್ 1876ನೇ ಇಸವಿ.

E. Shaw,
Offg. Supt.

ಸನ್ 1876ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪೋರ್ಟು.

ಹಾಸನ ಡಿಸ್ಟ್ರಿಕ್ಟು.

ಹವಾ—ಹವಾ ಮೇಘಾವೃತವಾಗಿಯೂ, ಆಗಾಗ್ಯೆ ಗುಡುಗು ಮಿಂಚು ಮಳೆ ವುಂಟಾಗುತ್ತಲೂ ಇತ್ತು. ಸದರೀ ತಿಂಗಳ 14ನೇ ತಾರೀಖಿನಲ್ಲಿ ಬಿರುಘಾಳೀ ಸಹಿತವಾದ ಮಳೆ ಆಯಿತು. ಇದು ತುಫಾನ್ ಸ್ಥಿತಿಗೆ ಸಮಿಾಪಿಸಿ ಇತ್ತು. ಇದರ ದೆಸೆಯಿಂದ ಹಾಸನದಲ್ಲಿನ ಮನೆಗಳು, ವೃಕ್ಷಗಳು, ಇವುಗಳಿಗೆ ಕೆಲವು ಮಟ್ಟಿಗೆ ಹಾನಿ ಸಂಭವಿಸಿತು. ಚನ್ನರಾಯಪಟ್ಟಣದ ಕಸಬೆಯಲ್ಲಿ ಮಾತ್ರ ಮಳೆಯೇನೂ ಆಗಲಿಲ್ಲವು ಮಿಕ್ಕ ದರೋಬಸ್ತು ಹೆಡ್ ಕ್ವಾರ್ಟರಗಳೊಳಗೆ ಮತ್ತು ಹಾಸನ ಕಸಬೆಯಲ್ಲಿ ಸಹ ಕಳೆದ ತಿಂಗಳೊಳಗೂ ಹಿಂದಿನ ಯೆರಡು ವರ್ಷಗಳ ಇದೇ ತಿಂಗಳಲ್ಲಿಯೂ ಆದ ಮಳೆಯ ತಪ್ಸೀಲ್.

		1876ನೇ ಮೇ.		1875ನೇ ಮೇ.			1874ನೇ ಮೇ.	
		ಅಂ.	ಸೆಂ.		ಅಂ.	ಸೆಂ.	ಅಂ.	ಸೆಂ.
ಹಾಸನ	ಎಗ್ಸಿಕ್ಯೂಟಿವ ಇಂಜಿನಿಯರ ಕಚ್ಚೇರಿಯಲ್ಲಿ.	3	44		5	81½	6	86½
	ಪಾಗಿರ್ಸ ಸ್ಗೇಜ್	3	46		..		6	85½
	ಅಬ್‌ಸರವೇಟರಿ	2	58		5	50	12	18
	ತಾಲ್ಲೂಕು ಕಚ್ಚೇರಿ ..	3	24		5	69	ಕರಾರವಾಕಾ ಕಾಣಬಾರದ ಸಬಬ್ ರಿಕಾರ್ಡ ಮಾಡಲಿಲ್ಲ.	
ಮಂಜರಾಬಾದ್ (ಸಕಲೇಶಪುರ)		2	36	”	2	31	” 7	85
ಅರಕಲಗೂಡ	..	2	15	”	2	7½	” 8	22
ಅತ್ತಿಗುಪ್ಪಾ	..	2	7	”	2	10	” 4	
ಬೇಲೂರು	..	2	15	”	2	20	” 4	
ಚನ್ನರಾಯಪಟ್ಟಣ	..	”	”	”	2	10	” 5	
ನಾಗಮಂಗಲ	..	4	46	”	”	80	” 7	
ಹಾರನಹಳ್ಳಿ	..	1	6	”	3	6	” 2	
ನರಸೀಪುರ	..	”	65	”	4	66	” 7	

ಕೆರೆಗಳು—ಡಿಸ್ಟ್ರಿಕ್ಟು ಪೈಕೀ ಕೆಲವು ದೊಡ್ಡ ಕೆರೆಗಳೊಳಗೆ ಹದಿನೈದು ದಿನಗಳ ನೀರು, ಮಿಕ್ಕವುಗಳಲ್ಲಿ ವೊಂದು ತಿಂ ನೀರೂ, ಸಣ್ಣ ಕೆರೆಗಳೊಳಗೆ 8—15 ದಿನಗಳಿಗೂ, ಒಂದು ತಿಂಗಳಿಗೂ ಆಗತಕ್ಕಷ್ಟು ನೀರೂ ಇತ್ತು ಸಣ್ಣದಾಗಲಿ ದೊಡ್ಡದಾಗಲಿ ಯಾವ ಕೆರೆಯೂ ಶುದ್ಧಾಂಗ ಬಣಗಿ ಹೋದಂತೆ ತಿಳಿಯಬರಲಿಲ್ಲ ಕೆರೆಗಳ ತಪ್ಸೀಲ್ ಈ ಕೆಳಗೆ ತಿಳಿಸಲ್ಪಡುತ್ತೆ ಹ್ಯಾಗಂದರೆ.

ತಾಲ್ಲೂಕು.		ದೊಡ್ಡ ಕೆರೆ.	ನೀರು.	ಸಣ್ಣಕೆರೆ.	ನೀರು.
ಹಾಸನ	..	84	1 ತಿಂಗಳು	904½	1 ತಿಂಗಳು
ಮಂಜರಾಬಾದ್	..	3	1 ”	352	15 ದಿನಗಳು
ಅರಕಲಗೂಡ	..	61	1 ”	620	1 ತಿಂಗಳು
ಅತ್ತಿಗುಪ್ಪಾ	..	50	15 ದಿನಗಳು	63	15 ದಿನಗಳು
ಬೇಲೂರು	..	26	15 ”	461	8 ದಿನಗಳು

ತಾಲ್ಲೂಕು.	ದೊಡ್ಡ ಕೆರೆ.	ನೀರು.	ಸಣ್ಣಕೆರೆ.	ನೀರು.
ಚನ್ನರಾಯಪಟ್ಣ ..	40	15 ,,	185	15 ದಿನಗಳು
ನಾಗಮಂಗಲ ..	22	15 ,,	53	8 ದಿನಗಳು
ಹಾರನಹಳ್ಳಿ ..	15½	1 ತಿಂಗಳು	73	15 ದಿನಗಳು
ನರಸೀಪುರ ..	5	15 ದಿನಗಳು	93½	8 ದಿನಗಳು

ಜಮೀನುಗಳು—ಅರಕಲಗೂಡು ಅತ್ತಿಗುಪ್ಪೆ ಈ ತಾಲ್ಲೂಕುಗಳು ವಿನಾ ಮಿಕ್ಕ ದರೋಬಸ್ತು ತಾಲ್ಲೂಕುಗಳಲ್ಲಿಯೂ ಸಾಗುವಳೀ ಬಗ್ಯೆ ಜಮೀನುಗಳು ತೆಗದುಕೊಳ್ಳಲ್ಪಟ್ಟಿತು ಇದರ ವೊಟ್ಟು ಕಂದಾಯ ರೂ. 599–6–8 ಹಾಸನದ ತಾಲ್ಲೂಕು ಒಂದರಲ್ಲಿಯೇ ರೂ. 290—6—8 ಕಂದಾಯದ ಜಮೀನು ತೆಗದುಕೊಳ್ಳಲ್ಪಟ್ಟಿತು. ರೂ. 131—10—9 ಕಂದಾಯವುಳ್ಳ ಜಮೀನಿಗೆ ರಾಜೀನಾಮೆ ಕೊಡಲ್ಪಟ್ಟಿತು.

ಫಸಲ್—ಹಾಸನ, ಮಂಜರಾಬಾದ್. ಅರಕಲಗೂಡು ಅತ್ತಿಗುಪ್ಪೆ ಈ ತಾಲ್ಲೂಕುಗಳೊಳಗೆ ಭತ್ತದ ಫಸಲ್, ರಾಗಿ, ತೊಗರಿ, ಜೋಳ, ಮತ್ತು ತೈಲ ಧಾನ್ಯಗಳು ಇವುಗಳೆಲ್ಲ ಸದರೀ ತಿಂಗಳಲ್ಲಿ ಒಣಗುತ್ತಿರುವಂತೆ ತಿಳಿಯಬರುತ್ತೆ. ಅತಿಗುಪ್ಪೇ ತಾಲ್ಲೂಕಿನಲ್ಲಿ ಗನ್ನ ಫಸಲ್ ಮಧ್ಯಮ ಸ್ಥಿತಿಯಲ್ಲಿರುವಂತೆ ತಿಳಿಯಬರುತ್ತೆ.

ಧಾರಣೆವಾಸಿ—ಅಕ್ಕೀಧಾರಣೆ ಕೊಂಚ ಚಡಾವಾಗುತ್ತಿದೆ ರಾಗಿ, ಹುರಳಿ, ಧಾರಣೆ ತತ್ರಾಪಿ ಹುರಳಿ ಧಾರಣೆ ವಿಶೇಷ ಇಳಿಯುತ್ತಿದೆ ಕಳೆದ ಇಸವೀ ಅದೇ ತಿಂಗಳಲ್ಲಿ ಆಹಾರ ಧಾನ್ಯಗಳು ಬಹಳ ಅಗ್ಗವಾಗಿ ಮಾರಿತು ಇದರ ತಪ್ಶೀಲ್ ಹ್ಯಾಗಂದರೆ.

ಜಿನಿಸೀ.	1876ನೇ ಮೇ.	1876ನೇ ಏಪ್ರೆಲ್.	1875ನೇ ಮೇ.
ಅವ್ವಲ್ ತರದ ಅಕ್ಕಿ ರೂ. 1ಕ್ಕೆ	10	11	14 ಸೇರು
ದುಯ್ಯಂ ತರಹ ಡಿಟೋ ,,	11½	12	18 ,,

ಜಿನಿಸೀ.	1876ನೇ ಮೇ.	1876ನೇ ಏಪ್ರೆಲ್.	1875ನೇ ಮೇ.
ರಾಗಿ ರೂಪಾಯಿ 1ಕ್ಕೆ	20	18	31 ಸೇರು
ಹುರಳಿ ಡಿಟೋ ,,	16½	11	23 ,,

ಆರೋಗ್ಯ—ಸದರೀ ತಿಂಗಳು ಬಹಳ ಅನಾರೋಗ್ಯವಾಗಿತ್ತು ಡಿಸ್ಟ್ರಿಕ್ಟಿನಲ್ಲಿ ಮುಖ್ಯವಾಗಿ ಹಾಸನ, ಬೇಲೂರು, ಚನ್ನರಾಯಪಟ್ಣ ಈ ತಾಲ್ಲೂಕುಗಳೊಳಗೆ ಉಖಾಲ್ ಜುಲಾಬ್ ವ್ಯಾಪಿಸಿ ಇತ್ತು ಹಾಸನ ಆಸ್ಪಿಟಲ್ ಅಸಿಸ್ಟೆಂಟರು ಚನ್ನರಾಯಪಟ್ಣದಲ್ಲಿ ಮುಖ್ಯವಾಗಿ ಉಖಾಲ್ ಜುಲಾಬ್ ಚಿಕಿತ್ಸೆಯ ಬಗ್ಯೆ ಸದರೀ ತಿಂಗಳು ಆಖೈರ್ ಭಾಗದಲ್ಲಿ ನಿಯಮಿಸಲ್ಪಟ್ಟಿದ್ದರು. ಅತ್ತಿಗುಪ್ಪೆಯಲ್ಲಿ ಬದಸ್ತೂರ್ ಈಚಿಗೆ ರೋಗ ಬಹಳ ಪ್ರಬಲಿಸಿ ಇದ್ದದರಿಂದ ಆ ಬಗೆಯಣ ಕೆಲಸಕ್ಕೆ ಮತ್ತೊಬ್ಬ ಆಸ್ಪಿಟಲ್ ಅಸಿಸ್ಟೆಂಟ್ ಬೇಕೆಂತ ಖಾಯಿಷ್ ಮಾಡಲ್ಪಟ್ಟಿತು. ಸದರೀ ಅಸಿಸ್ಟೆಂಟ್ ಈ ತಿಂಗಳು ಷುರುವಿನಲ್ಲಿ ಕೆಲಸಕ್ಕೆ ಬಂದನು ಇದರಿಂದಲೂ ಇತರ ಕಾರಣದಿಂದಲೂ 1169 ಮಂದಿ ಹೋಗಿರುತ್ತಾರೆ ಹಿಂದಿನ ತಿಂಗಳಲ್ಲಿ ಹೋದವರ ಸಂಖ್ಯೆ 582, 1875ನೇ ಮೇ ಮಾಹೇಯಲ್ಲಿ ಹೋದವರ ಸಂಖ್ಯೆ 582 ಇದರ ತಪ್ಶೀಲ್.

ರೋಗಗಳು	1876ನೇ ಮೇ.	1876ನೇ ಏಪ್ರೆಲ್.	1875ನೇ ಮೇ.
ಉಖಾಲ್ ಜುಲಾಬಿನಿಂದ	829	288	2
ಸಿಡುಬಿನಿಂದ	9	3	9
ಜ್ವರದಿಂದ	188	185	255
ಹೊಟ್ಟೇಸುಗ್ಗಿನಿಂದ	44	43	47

ರೋಗಗಳು	1876ನೇ ಮೇ.		1876ನೇ ಏಪ್ರೆಲ್.		1875ನೇ ಮೇ.	
ಘಾಯ ಆಕಸ್ಮಿಕ	13	17	5	6	2	4
ಹಾವು ಕಚ್ಚಿದ್ದು	4		1		2	
ಇತರ ದರೋ॥ ಕಾರಣಗಳಿಂದ	82		57		99	
ಜುಮ್ಲಾ	1169		582		416	

ಉಖಾಲ್ ಜುಲಾಬ್ ತಗಲಿದ್ದರ ತಪ್ಶೀಲ್—ಒಟ್ಟು

ಹಾಸನ ಕಸಬಾ ..	9	268
,, ತಾಲ್ಲೂಕಿನಲ್ಲಿ ..	259	
ಮಂಜರಾಬಾದ್ ತಾಲ್ಲೂಕಿನಲ್ಲಿ	60	60
ಅರಕಲಗೂಡು ಕಸಬಾ	1	4
,, ತಾಲ್ಲೂಕಿನಲ್ಲಿ	3	
ಅತ್ತಿಗುಪ್ಪೆ ಷಹರ್ ..	4	74
,, ತಾಲ್ಲೂಕಿನಲ್ಲಿ ..	70	
ಬೇಲೂರು ಷಹರ್ ..	3	144
,, ತಾಲ್ಲೂಕಿನಲ್ಲಿ ..	141	

ಉಖಾಲ್ ಜುಲಾಬ್ ತಗಲಿದ್ದರ ತಪ್ಶೀಲ್—ಒಟ್ಟು

ಚನ್ನರಾಯಪಟ್ಣ ಕಸಬಾ	64	214
,, ತಾಲ್ಲೂಕಿನಲ್ಲಿ ..	150	
ನಾಗಮಂಗಲ ಕಸಬಾ ..	10	20
,, ತಾಲ್ಲೂಕಿನಲ್ಲಿ ..	10	
ಹಾರನಹಳ್ಳಿ ಕಸಬಾ ..	9	28
,, ತಾಲ್ಲೂಕಿನಲ್ಲಿ ..	19	
ನರಸೀಪುರ ,, ..	17	17
ಕುಲ್	829	

ಜನನಗಳು—ಈ ತಿಂಗಳಲ್ಲಿ 186 ಜನನಗಳು ಆದಂತೆ ರಿಜಿಷ್ಟರಾಗಿದೆ ಹಿಂದಿನ ತಿಂಗಳಲ್ಲಿ 138 ಜನನಗಳಾದವು.

ಜಾನವರ್—ಮರಿನ ವಗೈರೆ ರೋಗಗಳಿಂದ ದನಸಾವು ಬಹಳವಾಗಿತ್ತು ಕುಲ್ 3435 ಕಾಲ್ನಡೆಗಳು ಸತ್ತವು ಕಳದ ತಿಂಗ

ಳಲ್ಲಿ 2158 ಕಾಲ್ನಡೆಗಳು ಸತ್ತವು 1875ನೇ ಇಸವಿ ಮೇ ತಿಂಗಳಲ್ಲಿ 1991 ಸತ್ತವು ಈ ಕೆಳಗೆ ಬರುವ ತಖ್ತೆಯು ಪ್ರತಿ ತಾಲ್ಲೂಕಿನಲ್ಲಿ ಈ ತಿಂಗಳೊಳಗೆ ಯೆಷ್ಟೆಷ್ಟು ಸತ್ತವೋ ಆ ತಪ್ಸೀಲ್ ತಿಳಿಸುತ್ತದೆ.

	1876ನೇ ಮೇ.	1876ನೇ ಏಪ್ರೈಲ್.	ಮೇ. 1875		1876ನೇ ಮೇ.	1876ನೇ ಏಪ್ರೈಲ್.	1875ನೇಮೇ
ಹಾಸನ	247	125	341	ಚೆನ್ನರಾಯಪಟ್ಣ	820	240	210
ಮಂಜರಾಬಾದ್	179	136	115	ನಾಗಮಂಗಲ	149	454	336
ಅರಕಲಗೂಡು	448	290	178	ಹಾರನಹಳ್ಳಿ	575	252	264
ಅತ್ತಿಕುಪ್ಪೆ	325	195	365	ನರಸೀಪುರ	174	237	154
ಬೇಲ್ಲೂರು	517	229	48	ಜುಮ್ಲಾ	3435	2158	1991

A. Srinivasaiengar,
For Dy. Commr.

ಕಡೂರು ಡಿಸ್ಟ್ರಿಕ್ಟು.

ಮಳೆ,—ಡಿಸ್ಟ್ರಿಕ್ಟಿನಲ್ಲಿ ಸರಾಸರಿ ಪೊಟ್ಟು 1 ಇಂಚ್, 50½ ಸೆಂಟಿಸ್‌ಗಳ ಮಳೆ ಬಿದ್ದಹಾಗೆ ಅಳೆಯಲ್ಪಟ್ಟಿರುತ್ತೆ. ತರೀಕೆರೆಯಲ್ಲಿ ವಿನಾ ಕಡಿಮೆ ಯೆಲ್ಲಾ ತಾಲ್ಲೂಕುಗಳಲ್ಲಿಯೂ ಮಳೆ ಬಿತ್ತು, ಆದರೂ ವರುಷಂ ಪ್ರತಿಯಲ್ಲು ಈ ಕಾಲದಲ್ಲಿ ಸಾಧಾರಣವಾಗಿ ಬೀಳುತಿದ್ದ ಬಲವಾದ ಮಳೆಬೀಳಲಿಲ್ಲ, ಕೊಂಚ ಕೊಂಚವಾಗಿ ತುಂಪರುಮಳೆ ಮಾತ್ರ ಬಿತ್ತು, ಆದ್ದರಿಂದ ಕೆರೆಗಳಿಗೆ ಸಾಕಾದಷ್ಟು ನೀರು ಬಂದಿರುವದಿಲ್ಲ, ಇನ್ನು ಬಹಳ ಮಳೆ ಬೇಕಾಗಿಧೆ,

ಈ ತಿಂಗಳಲ್ಲಿಯೂ, ಹಿಂದಿನ ತಿಂಗಳಲ್ಲಿಯೂ ಮತ್ತು ಕಳದ ಇಸವೀ ಇದೇತಿಂಗಳಲ್ಲಿಯೂ ಈ ಕೆಳಗೆ ವಿವರಿಸಿರುವ ಮೇರೆ ಮಳೆ ಬಿದ್ದಿರುತ್ತೆ;—

				ಇಂಚ್,	ಸೆಂಟ್ಸ್,
ಸರ್ 1876ನೇ ಇಸವೀ ಮೇ ತಿಂಗಳಲ್ಲಿ		..	..	2	90
ಡಿಟೋ	.. ಯೇಪ್ರೈಲ್‌ನಲ್ಲಿ	..	..	2	96¼
1875	.. ಮೇ ತಿಂಗಳಲ್ಲಿ	..	..	5	35

ಫಸಲು;—ತರೀಕೆರೆ ತಾಲ್ಲೂಕಿನಲ್ಲಿ ಮಳೆಯಿಲ್ಲದೆ ಯಾವ ಬೀಜವೂ ಪೇರಾವಾಗಿರುವದಿಲ್ಲ, ಬಾಣಾವಾರ ಮತ್ತು ಚಿಕ್ಕಮಗಳೂರಲ್ಲಿ ಗನ್ನದ ಫಸಲು ಚನ್ನಾಗಿರುತ್ತೆ, ಈ ಡಿಸ್ಟ್ರಿಕ್ಟಿನ ಮಲ್‌ನಾಡ್ ತಾಲ್ಲೂಕುಗಳಲೆಲ್ಲ ಭತ್ತದ ಯೆಳೇ ಪೈರಿಗೂ ಮತ್ತು ಇತರ ಫಸಲುಗಳಿಗೂ ಇನ್ನೂ ಬಹಳ ಮಳೆ ಬೇಕಾಗಿರುತ್ತದೆ,

ಆರೋಗ್ಯ;—ಮೈದಾರ್ ತಾಲ್ಲೂಕುಗಳಲ್ಲಿ ಖೈಜುಲಾರ್ ಇನ್ನೂ ವ್ಯಾಪಿಸಿರುತ್ತೆ, ತರೀಕೆರೆ ಮತ್ತು ಲಕ್ಕುವಳ್ಳಿ ತಾಲ್ಲೂಕುಗಳಲ್ಲಿ ಸಿಡುಬು ಕಾಣಿಸಿಕೊಂಡಿತ್ತು, ಯೆಲ್ಲಾ ಕಾರಣಗಳಿಂದಲೂ 437 ಮಂದಿ ಸತ್ತರು, ಇದರ ವಿಲೇವಾರಿ ಈ ಕೆಳಗೆ ಕೊಡಲ್ಪಟ್ಟಿರುತ್ತೆ;

ಖೈಜುಲಾರ್‌ನಿಂದ 197, ಸಿಡುಬಿನಿಂದ 5, ಜ್ವರದಿಂದ 119. ಹೊಟ್ಟೇಸುಗ್ಗಿನಿಂದ 62, ಇತರ ಯೆಲ್ಲಾ ಕಾರಣಗಳಿಂದ 54 ಜುಮ್ಲಾ 437 ಇದು ಕಳೆದ ತಿಂಗಳಲ್ಲಿ ಸತ್ತ ಸಂಖ್ಯೆಗಿಂತಲೂ 119 ಮಂದಿ ಕಮ್ಮಿ ಮತ್ತು ಸರ್1875ನೇ ಇಸವೀ ಮೇ ತಿಂಗಗಿಂತಲೂ 150 ಮಂದಿ ಜಾಸ್ತಿ;—

ಜಾನವರ್;—ಗೋಮಾರೀ ರೋಗವೇನೂ ಕಾಣುವದಿಲ್ಲ. ಆದರೆ ಈ ತಿಂಗಳಲ್ಲಿ ಸಾವು ಬಹಳ ಹೆಚ್ಚು. 2120 ಕಾಲ್ನತ್ತಿರುತ್ತವೆ. ಈ ಪೈಕೀ ತರೀಕೆರೆ ಮತ್ತು ಬಾಣಾವಾರ ತಾಲ್ಲೂಕುಗಳಲ್ಲಿ 1731, ಹುಲ್ಲು ಇಲ್ಲದ್ದರಿಂದಲೂ ಮುದಿತನದಿಂದಲೂ ಮ ಇತರ ಕಾರಣಗಳಿಂದಲೂ ಮೃತಪಟ್ಟಿರುತ್ತವೆ. ಈ ಸಂಖ್ಯೆಯು ಕಳೆದ ತಿಂಗಳ ಸಂಖ್ಯೆಗಿಂತಲೂ 654 ಹೆಚ್ಚು ಮತ್ತು ಸರ್187 ಇಸವೀ ಮೇ ತಿಂಗಳಲ್ಲಿ ರಿಪೋರ್ಟಾದ್ದಕ್ಕಿಂತಲೂ 924 ಹೆಚ್ಚು.

Mahomed Saliha,
For Dy. Commr.

ಕರೆನ್ಸೀ ನೋಟಗಳು.

ಇದರಡಿ ನಮೂದಿಸಲ್ಪಡುವ ಕರೆನ್ಸಿ ನೋಟುಗಳ ತುಕಡಿಗಳು ಶಿವಮೊಗ್ಗೆಯಿಂದ ಬೆಂಗಳೂರಿಗೆ ಹೋಗುವಲ್ಲಿ ಹೋಗಿರುತ್ತವೆ.

ನಂಬರು		ಮೊಬಲಗು			ಹಕ್ಕುದಾರ
B/36	42247 ಬಲಭಾಗ	5	0	0	ಅನಂತಪುರದಲ್ಲಿರುವ ಸಾಹುಕಾರ ವೆಂಕಪ್ಪ.
B/30	75637 ಎಡಭಾಗ	20	0	0	
B/38	99516 ಎಡಭಾಗ	100	0	0	

ಮದರಾಸ್ ರೆಯಿಲ್‌ವೇ.

ತಾರೀಖು 23ನೇ ಮೇ 1876.

ಕೆರೋಸಿಯನ್ ಯಣ್ಣೆ.

ಜೂನ್ ಗುರ್ರೇ ತಾರೀಖು ಆರಾಯಿತು ವ ಆ ತರುವಾಯ ಕೆರೋಸಿಯನ್ ಯಣ್ಣೆ 6 ಟನಗಳಿಗೆ ಕಮ್ಮೀ ಯಿಲ್ಲದೆ 300 ಮೈಲಿಗಳಿಗೆ ಕಮ್ಮೀ ಯಿಲ್ಲದ ಫಾಸಲೆಗೆ. ಕಳುಹಿಸತಕ್ಕ ಬಗ್ಗೆ ಟನ 1ಕ್ಕೆ ದರ ಮೈಲ್ 10 ಕಾಸುಗಳ ಮೇರೆ ಕಮ್ಮೀ ಚಾರ್ಜು ಹಾಕಲ್ಪಡುವದು.

H. E. Church,
Traffic Manager.

Mysore Government Press, Bangalore—1876.

ಮೈಸೂರ ಗೆಜೆಟ.

ನಂ. 28 ಸರ್ಕಾರದಿಂದ ಛಾಯಿಸಿ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಜುಲೈ ತಾ|| 15, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯಾ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	109—114
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡ್ಸು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. ..	335—350
3ನೇ ಭಾಗ—ಇಂಡ್ಯಾ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	85—87

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ, 110. ತಾರೀಖು 29ನೇ ಜೂನ್ 1876.

ಹಾಲೀ ಜಾರೀಯಿರುವ 27, 28, 29 ಈ ನಂಬರ್‌ಗಳ ಬಾಬತು ಬೈಲಾ ನಿಬಂಧನೆಗಳಿಗೆ ಬದಲಾಗಿ 27 $\frac{2}{27}$ 28 29 $\frac{2}{2?}$ ಈ ನಂಬರುಗಳುಳ್ಳ ಬೈಲಾ ನಿಬಂಧನೆಗಳು ಬೆಂಗಳೂರು ಕಂಟೋನ್ಮೆಂಟಿನಲ್ಲಿ ಜಾರಿಗೆ ತರಲ್ಪಡತಕ್ಕದ್ದನ್ನು ... ಮ್ಮಿಷ ...ರವರು ಮಂಜೂರ್ ಮಾಡಿರುವದ್ದರಿಂದ ಅವುಗಳು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತ...

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದರ್ಫನ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾರ್ಫಿನ್ಯಖಾನೆ ಜಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದರ್ಫನ ಮಾಡಕೂಡದು, ಯಾ ದರ್ಫನ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದರ್ಫನ ಮಾಡಲೂ ಕೂಡದು ಮಾಡಿಸ್ಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಜಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಕಡಮೆ ಯಿಲ್ಲದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದರ್ಫನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ, ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಜಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಜಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲ್ಲ ಭೂಮಿಯೊಳಗಾಗಲಿ, ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲ್ಲ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚೆಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಜಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲ್ಲ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲ್ಲ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲ್ಲ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಜಬ್ಬ ಮಾಜಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದರ್ಫನ ಯಾ ಜಲ್ಲ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜಲ್ಲ ಯಾ ದರ್ಫನ ಭೂಮಿಗಳ ಇಂಚಾರ್ಜ್ ಟ್ರಸ್ಟೀಗಳಾಗಲಿ ಇತರ ಮನುಷ್ಯರಾಗಲಿ ಜಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜಲ್ಲ ಭೂಮಿಗಳಿಗಾಗಲಿ ದರ್ಫನ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿದಿನಕ್ಕೂ ಯೆರಡು ರೂಪಾಯಿಗಳಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

---

122. ತಾರೀಖು 10ನೇ ಜುಲೈ 1876.

ಸನ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಇದರಿಂದ ತಿಳಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಡುವ ಜಮೀನು ಒಂದು ಪಾಯಿಖಾನೆ ಕಟ್ಟತಕ್ಕ ಬಗ್ಯೆ ಶಿವಮೊಗ್ಗೇ ಪಟ್ಟಣ ಸರ್ಕಾರದವರಿಗೆ ಬೇಕಾಗಿರುತ್ತೆ.

ನಂಬರು 1.

ಸೋಮಶೇಕರ ಮಠ. ಜಮೀನು ತಪ್ಸೀಲ್—ಬಂಜರು.
ಹೆಸರು—ನಂಜುಂಡ್ಯೆಯ್ಯ. ಎಲ್ಲಿರುತ್ತೆ—ಸೋಮಸೇಕರ ಮಠದ ಆವರಣದಲ್ಲಿ.
ಬೀಜವರಿ—ಲಾಂಬಿ 35 ಅಡಿ–ರುಂದಿ 30 ಅಡಿ ಆಕಾರ ಇಲ್ಲ.

ಚೌತಪುರ.

ಪೂರ್ವಕ್ಕೆ—ಬ್ರಾಹ್ಮರ ಬೀದಿಯಿಂದ ನದೀಗೆ ಹೋಗುವ ಸಂದಿ. ಉತ್ತರಕ್ಕೆ—ಗಂಗಾಧರಗಿರಿ ಮಠ.
ಪಶ್ಚಿಮಕ್ಕೆ—ತೆಡಕಿ ಮಠದಿಂದ ಬರುವ ಸಂದಿ. ದಕ್ಷಿಣಕ್ಕೆ—ತುಂಗಾನದಿಯ ತೀರ.

ನಂ. 123. ತಾರೀಖು 7ನೇ ಜೂಲೈ 1876.

ಇದರಡಿ ನಮ್ಮೂದಿಸಲ್ಪಡುವ ಜನಗಳು, ಆಸ್ಪಿಟಲ್ ಅಸಿಸ್ಟೆಂಟ ಗ್ರೇಡಿಗೆ ಮದ್ರಾಸ ಮೆಡಿಕಲ್ ಕಾಲೀಜ್ ನಿಂದ "ಸರ್ಟಿಫಿಕೇಟ್ಸ ಆಫ್ ಕ್ವಾಲಿಫಿಕೇಷನ" ಯಾನೆ ಯೋಗ್ಯತಾ ಪತ್ರಿಕೆಗಳನ್ನು ಪಡೆದ ಸಬಬ 1876ನೇ ಇಸವಿ ಜೂನ 30ನೇ ಮುಕ್ಕಾಂ ಲಗಾಯಿತು ಪ್ಯಾಸ್ಡ ಮೆಡಿಕಲ್ ಪ್ಯೂಪಿಲ್ಸಗಳಾಗಿ ದಾಖಲ್ಮಾಡಿಕ್ಕೊಳ್ಳಲ್ಪಟ್ಟಿರುತ್ತಾರೆ.

ಫಸ್ಟ ಕ್ಲಾಸ ಸ್ಟೂಡೆಂಟ್ಸ ಜೂನಿಯರ್ ಡಿಪಾರ್ಟ್ಮೆಂಟ.

ವೆಂಕಟಾಚೆಲಂ ನಾಯಿಡು ನಂ. 10		
ಕದುರುವೇಲು ಮೊದಲಿ „ 11	}	ಪ್ಯಾಸ್ಡ ಮೆಡಿಕಲ್ ಪ್ಯೂಪಿಲಗಳಾಗಿರತಕ್ಕದ್ದು.
ವೇಲಾಯುದಂ ಮೊದಲಿ „ 12		

2. ಮೈಸೂರು ಸಬಾರ್ಡಿನೇಟ ಮೆಡಿಕಲ್ ಇಲಾಖೆಯಲ್ಲಿ ಇದರಡಿ ಬರುವ ಬಡತಿಗಳು ಮಾಡಲ್ಪಟ್ಟವೆ.

ಪ್ಯಾಸ್ಡ ಮೆಡಿಕಲ್ ಪ್ಯೂಪಿಲ್ಸ.

ವೆಂಕಟಾಚಲಂ ನಾಯಿಡು ನಂ. 10		
ಕದುರುವೇಲು ಮೊದಲಿ „ 11	}	ಸನ 1876ನೇ ಇಸವಿ ಜೂನ 30ನೇ ಮುಕ್ಕಾಂ ಲಗಾಯಿತು 3ನೇ ಕ್ಲಾಸ ಆಸ್ಪಿಟಲ್ ಅಸಿಸ್ಟೆಂಟರಾಗಿರತಕ್ಕದ್ದು.
ವೇಲಾಯುದಂ ಮೊದಲಿ „ 12		

ನಂ. 124. ತಾರೀಖು 10ನೇ ಜೂಲೈ 1876.

ಹಾಸನ ಸಬ ಡಿವಿಜನ ಮುನಸೀಪ ಮೇಸ್ಟರ್ ಕ್ರೆಸಿಯವರಿಗೆ 1876ನೇ ಇಸವೀ ಜೂಲೈ ಗುರ್ರೇ ತಾರೀಕ ಲಗಾಇತು ಅಥವಾ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಇತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 125. ತಾರೀಖು 11ನೇ ಜೂಲೈ 1876.

ಹಾರನಹಳ್ಳಿ ತಾಲ್ಲೂಕು ಅಮಲ್ದಾರ್ ವೆಂಕಟಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯಿತು $2\frac{1}{2}$ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಣಸೂರು ಸಬ ಡಿವಿಜನ ಶಿರಸ್ತೇದಾರ್ ರಾಘವೇಂದ್ರ ರಾಯರು ಜಿಜನ ವೆಂಕಟಾಚಾರ್ಯರವರ ಗೈರ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಹಾರನಹಳ್ಳಿ ತಾಲ್ಲೂಕು 5ನೇ ಗ್ರೇಡ ಅಮಲ್ದಾರ್ ವ 3ನೇ ಕ್ಲಾಸ ಮಾಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ.

ನಂ. 126. ತಾರೀಖು 12ನೇ ಜೂಲೈ 1876.

ನಂದೀದುರ್ಗಡಿವಿಜನ ತಾಲ್ಲೂಕು ಅಮಲ್ದಾರ್ಗಳ ಇದರಡಿಬರುವ ವರ್ಗಾವರ್ಗಿಗಳು ಮಂಜೂರ್ಮಾಡಲ್ಪಟ್ಟವೆ.

ಅಂಕ್ಕೈಯ್ಯ ಕೊರ್ಟಿಗೆರೆಯಿಂದ ಚಿಕ್ಕ ಬಳ್ಳಾಪುರಕ್ಕೆ, ಭಗವಂತರಾವ್............ದೇವನಹ

ಗುಂಡಪ್ಪ .... ಕೊರಟಿಗೆರೆಗೆ; ಮಹಮ್ಮದ್ಮೈನುದ್ದೀನ್ ದೇವನಹಳ್ಳಿಯಿಂದ ಕ್ಲೊಸ್‌ಪೇಟೆಗೆ.

ವೆಂಕಟ್ರಂಗೈಯ್ಯಂಗಾರ್ರು ಕ್ಲೋಸ್‌ಪೇಟೆಯಿಂದ ಆನೆಕಲ್ಲಿಗೆ ವೀರಾಸಾಮಿಮೊದಲ್ಯಾರ್ ಆನೆಕಲ್‌ನಿಂದ (ಕೆಲಸದಿಂದ ತೆಗೆದು ಹಾಕಲ್ಪಟ್ಟ ಗಂಗೈಯ್ಯನವರಿಗೆ ಬದಲಾಗಿ) ನೆಲಮಂಗಲಕ್ಕೆ.

ಅಲ್ಲಿ ನಕ್ಕೀಖಾನ್ .... ಮಾಲೂರಿಗೆ,

ನಂ. 127. ತಾರೀಖು 13ನೇ ಜುಲೈ 1876.

ಅಸಿಸ್ಟೆಂಟ್ ಕಮ್ಮಿಷನರ್ ವ ಜಸ್ಟಿಸ್ ಆಫ್‌ಪೀಸರಾದ ಕೆಪ್ಟನ್‌ಮಕ್ಕಂಜಿಯವರು ಕರ್ನಲ್ ಬೇರ್ಸನ್‌ಯವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತರ ಬೆಂಗಳೂರು ಟವನ್ ವ ಕನ್‌ಟೋನ್‌ಮೆಂಟ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುವದಲ್ಲದೆ 1872ನೇ ಇಸವಿ 10ನೇ ನಂಬರ್ ಆಕ್ಟಾದ ಕ್ರಿಮಿನಲ್ ಪ್ರೊಸೀಡ್ಯೂರ್‌ಕೋಡ್ 20ನೇ ಸೆಕ್ಷನ್ ಅನುಸರಿಸಿ ಫಸ್ಟ್‌ಕ್ಲಾಸ್ ಮೇಜಸ್ಟ್ರೇಟರ ಅಧಿಕಾರಗಳು ಮತ್ತು ಐರ್ನ ಆಕ್ಟಿನ 27ನೇ ಸೆಕ್ಷನ್ (a) ನಲ್ಲಿ ವಿವರಿಸಲ್ಪಟ್ಟ ಜಾಸ್ತಿ ಅಧಿಕಾರಗಳು ಸಹಾ ಇದರ ದೆಶೆಯಿಂದ ಕೊಡಲ್ಪಟ್ಟಿರುತ್ತಾರೆ. ಈ ಅಧಿಕಾರಗಳು ಬೆಂಗಳೂರು ಟವನ್ ವ ಕಂಟೋನ್ಮೆಂಟ್ ಸರಹದ್ದುಗಳೊಳಗೆ ಚಲಾಯಿಸಲ್ಪಡತಕ್ಕದ್ದು.

ನಂ. 128. ತಾರೀಖು 13ನೇ ಜುಲೈ 1876.

ಸ್ಪೆಷಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಪೋರ್ಬ್ಸಿಯಸ್‌ಯವರು ಬೆಂಗಳೂರು ಡಿಸ್ಟ್ರಿಕ್ಟ್ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನ ಚಾರ್ಜನ್ನು ಮೆಸ್ಟರ್ ಕೃಷ್ಣಸ್ವಾಮೈಯ್ಯಂಗಾರವರಿಂದ 1876ನೇ ಇಸವಿ ಜುಲೈ 4ನೇ ಮುರ್ಕುಂ ಮಧ್ಯಾನ್ಹಕ್ಕೆ ಪೂರ್ವನ್ ತೆಗೆದುಕೊಂಡರು

ಡಿಸ್ಟ್ರಿಕ್ಟ್ ಫಂಡ್ಸ್.

ನಂ. 129. ತಾರೀಖು 8ನೇ ಜುಲೈ 1876.

ಸೊರಬ ತಾಲ್ಲೂಕು ಹಂಗಾಮಿ ಮುತ್ಸದ್ದಿ ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಕು ಲಗಾಯಿತು 35 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 130. ತಾರೀಖು 8ನೇ ಜುಲೈ 1876.

ಹೊನ್ನಾಳೀ ತಾಲ್ಲೂಕು ಹಂಗಾಮಿ ಮೇಸ್ತ್ರಿ ಮೈಲಾರಯ್ಯನವರಿಗೆ ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 131. ತಾರೀಖು 12ನೇ ಜುಲೈ 1876,

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಹಂಗಾಮಿ ಮೇಸ್ತ್ರಿ ಮಲ್ಲೇಶಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯಿತು $1\frac{1}{2}$ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ,

---

ನಂ. 132. ತಾರೀಖು 12ನೇ ಜುಲೈ 1876.

ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕು ಹಂಗಾಮಿ ಮುತ್ಸದ್ದಿ ವೆಂಕಟರಾಮೈಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯಿತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ನಂ. 19.   ತಾರೀಖು 11ನೇ ಜೂಲೈ 1876.

ಮೇ ... ಗ್ರೇಡ್ ಸೂಪರ್ರಿಂಟೆಂಡಿಂಗ್ ಇಂಜನಿಯರ್ ಕೆಲಸಕ್ಕೆ ಬಡ್ತೀ ಮಾಡಲ್ಪಟ್ಟ ಸಬಬ್ ಈ ಕೆಳಗೆ ಬರುವ ಕಾಂ ... ನೇ ಅಕ್ಟೋಬರ್ 29ನೇ ಮುರ್ಕುಂ ಲಗಾಯತು ಜಾರೀಯಾಗ ತಕ್ಕದ್ದಾಗಿ ಮಂಜೂರಾಗಿರುತ್ತವೆ—187 ... ಗ್ನು ಮಿನ ಇಂಡ್ಯ ಗವರ್ನಮೆಂಟಿ ಗೆಜೆಟಿನಲ್ಲಿ ಛಾಯಿಷಾದ 1875ನೇ ಡಿಶೆಂಬರ್ 4ನೇ ಮುರ್ಕುಂ 497ನ ... ನೋಡತಕ್ಕದ್ದು.

ಕೆಪ್ಟನ್ ಬೋ ... ಎಗ್ಸಿಕ್ಯೂಟಿವ್ ಇಂಜನಿಯರಾಗಿ ಮೊಕರರ್.

ಕೆಪ್ಟನ್ ಫ್ರೇ ... ಎಗ್ಸಿಕ್ಯೂಟಿವ್ ಇಂಜನಿಯರಾಗಿ ಮೊಕರರ್.

ಮೆಸ್ಟರ್ ಕಿ ವೆ ... ಕ್ಯೂಟಿವ್ ಇಂಜನಿಯರಾಗಿ ಮೊಕರರ್.

ಮೆಸ್ಟರ್ ಬೇಲಿ ... ಕ್ಯೂಟಿವ್ ಇಂಜನಿಯರಾಗಿ ಮೊಕರರ್.

ನಂ. 20.   ತಾರೀಖು 11ನೇ ಜೂಲೈ 1876.

ಕೇಪ್ಟನ್ ಪೋಲ್‌ಯವರ ಫೌತೀ ಸಬಬ್ ಈ ಕೆಳಗೆ ಬರುವ ಕಾಯಂ ಬಡ್ತೀಗಳು 1876ನೇ ಫೆಬ್ರುವರೀ 22ನೇ ಮುರ್ಕುಂ ಲಗಾಯತು ಜಾರೀಯಾಗತಕ್ಕದ್ದಾಗಿ ಮಂಜೂರಾಗಿರುತ್ತವೆ.

ಮೆಸ್ಟರ್ ರಿಗ್‌ಯವರು, 2ನೇ ಗ್ರೇ ... ಕ್ಸಿಕ್ಯೂಟಿವ್ ಇಂಜನಿಯರಾಗಿ ಮೊಕರರ್.

ಮೆಸ್ಟರ್ ಟಾರ್‌ಜೆಟ್‌ಯವರು, 3ನೆ ... ಡ್ ಎಗ್ಸಿಕ್ಯೂಟಿವ್ ಇಂಜನಿಯರಾಗಿ ಮೊಕರರ್.

ಮೆಸ್ಟರ್ ಗ್ರೋವ್ಸ್‌ಯವರು, 4ನೆ ಗ್ರೇಡ್ ಎಗ್ಸಿಕ್ಯೂಟಿವ್ ಇಂಜನಿಯರಾಗಿ ಮೊಕರರ್.

ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಉಡ್ ಕಾಕ್ ಯವರು 1876ನೇ ಮಾರ್ಚಿ 30ನೇ ಮರ್ಕ್ಕುಂ ಮೊದಲು ಏಪ್ರೈಲ್ 3ರ ವರಿಗೆ ತುಮಕೂರು ಡಿಸ್ಟ್ರಿಕ್ಟಿನ ಡಿಪ್ಯುಟಿ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್ ತರೀಕೆ ನೋಡಿದ್ದರು. ಇದರಿಂದ 1876ನೇ ಮೇ॥ 11ನೇ ಮರ್ಕ್ಕುಂ 43ನೇ ನಂಬರು ಯಿಸ್ತಿಹಾರ್ ನಾಮೆ ರದ್ದಾಗಿರುತ್ತೆ.

ನಂ. 139. ತಾರೀಖು 15ನೇ ಜೂಲೈ 1876.

ಸನ್ 1876ನೇ ಇಸವಿ ಜುಲೈ 6ನೇ ಮರ್ಕುಂ 121ನೇ ನಂಬರ್ ಇಸ್ತಿಹಾರ್‌ನಲ್ಲಿ ದೊಡ್ಡೇರಿ ತಾಲ್ಲೂಕು ಅಮಲ್ದಾ ಮೊಹದೀನಾಯವರಿಗೆ ಕೊಡಲ್ಪಟ್ಟ ಫರಲೋ ರಜಾ 1876ನೇ ಇಸವಿ ಜುಲೈ 31ನೇ ತಾರೀಖಿನವರಿಗೂ ವಿಸ್ತರಿ...

ನಂ. 140. ತಾರೀಖು 15ನೇ ಜೂಲೈ 1876.

ಕೋಲಾರ ಡಿ॥ ಡೆಪ್ಯುಟಿ ಕಮಿಷನರ್ ಕಚ್ಚೇರಿ ಹೆಡ್ ಕ್ಲರ್ಕ್ ಮಿ॥ ಡ್ಯಾನಿಯಲ್ ಸಾಲೊಮನ್ಯವರು ಒಂದು ಸಂವತ್ಸರದ ವುಟ್ಟಿಗೆ ಅಜಮಾಯಿಷೀ ತರೀಕ್ 3ನೇ ಕ್ಲಾಸ್ ಮುನಸೀಫರಾಗಿ ನೋಕರರ್ ಮಾಡಲ್ಪಟ್ಟು, ಮಿಸ್ಟರ್ ಮಾಧವರಾಯರಿಗೆ ಬದಲಾಗಿ ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ಡಿವಿಜನ್ನಿಗೆ ನೇಮಿಸಲ್ಪಟ್ಟಿರುತ್ತಾರೆ.

ನಂ. 141. ತಾರೀಖು 15ನೇ ಜೂಲೈ 1876.

ಅಮಲ್ದಾರ್ ಗುಂಡಪ್ಪನವರಿಗೆ 1876ನೇ ಜೂನ್ 28ನೇ ಮರ್ಕುಂ 108ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟದ್ದ ರಜಾಕ್ಕೆ ಜಾಸ್ತೀಯಾಗಿ 5 ದಿನಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ನಂ. 142. ತಾರೀಖು 15ನೇ ಜೂಲೈ 1876.

ಈ ಕೆಳಗೆ ಕಂಡ ಮೆಡಿಕಲ್ ಸಬಾರ್ಡಿನೇಟ್‌ಗಳ ವರ್ಗಾ ವರ್ಗಿಗಳು ಮಂಜೂರಾಗಿವೆ:—

ನಂಬರ್.	ದರಜಾ	ಹೆಸರು	ಇಂದ	ಗೆ
10	3ನೇ ಕ್ಲಾಸ್ ಆಸ್ಪಿಟಲ್ ಅ॥	ವೆಂಕಟಾಚಲಂ ನಾಯುಡ್	ಈಚಿಗೆ ಬಡ್ತಿ	ಬೌರಿಂಗ್ ಸಿವಿಲ್ ಆಸ್ಪಿಟಲ್,
11	ಡಿಟ್ಟೋ	ಕದುರವೇಲು ಮೊದಲಿಯಾರ್	ಡಿಟ್ಟೋ	ಅಲ್ಲಿ ಕೆಲಸ ನೋಡತಕ್ಕದ್ದು.
12	ಡಿಟ್ಟೋ	ವೇಲಾಯುಧ ಮೊದಲಿಯಾರ್	ಡಿಟ್ಟೋ	ಡಿಟ್ಟೋ

ನಂ. 143. ತಾರೀಖು 17ನೇ ಜೂಲೈ 1876.

ಡಾಕ್ಟರ್ ಬೆರ್ನಸ್ಯವರು ನಗರಡಿವಿಜನ್ ಮೆಡಿಕಲ್‌ಚಾರ್ಜನ್ನು ಮಾಹೇ ಮಜಕೂರು 3ನೇ ಮರ್ಕುಂ ಮಧ್ಯಾಹ್ನಾತ್ಪರವೂ ಶಿವಮೊಗ್ಗೆ ಜೆಯಿಲ್ ಚಾರ್ಜನ್ನು 4ನೇ ಮರ್ಕುಂ ಮಧ್ಯಾಹ್ನಕ್ಕೆ ಪೂರ್ವವೂ ಪುನಃ ವಹಿಸಿದರು.

ನಂ. 144. 18ನೇ ಜೂಲೈ 1876.

ಮಿಸ್ಟರ್ ಶ್ರೀನಿವಾಸೈಯಂಗಾರ್ಯ... ...ಕ್ಟು ಟ್ರೆಜೆರೀ, ಜೆಯಿಲ್ ವ ಮುಜರಾಯಿ ಇಲಾಖೆಗಳ ಚಾರ್ಜನ್ನು 1876ನೇ ಜೂನ್ 1ನೇ ತಾರೀಖು ಪೂರ್ವಾ... ...ಮಹಮ್ಮದ್ ಸಾಲಿಹಾಯವರಿಂದ ತೆಗದುಕೊಂಡರು.

ನಂ. 145. ...ಖು 19ನೇ ಜೂಲೈ 1876.

2ನೇ ಕ್ಲಾಸ್ ಪೊಲಿಟಿಕಲ್ ಯೇಜಂಟರಾದ ಮತ್ತು ಮಹಾ ಘನವನ್ನು ಹೊಂದಿದ ಮೈಸೂರು ಮಹಾರಾಜರವರ ಟ್ಯೂಟರ್ ಕೆಪ್ಟನ್ ವಿಲ್ಸನ್ಯವರು 1876ನೇ ಇಸವಿ ಜೂಲೈ ತಾರೀಖು 16ರಲ್ಲು ಬೆಂಗಳೂರಿಗೆ ಶೇರಿದ್ದಾಗಿ ರಿಪೋರ್ಟು ಮಾಡಿದರು.

ನಂ. 146. ತಾರೀಖು 19ನೇ ಜೂಲೈ 1876.

ಮಿ॥ ಕಲ್ಯಾಣಸುಂದರಂಶೆಟ್ಟಿಯವರು, ಇಂಡ್ಯಗವರ್ನಮೆಂಟ್ ಸಾಂಗಿಷನ್ನಿಗೆ ಒಳಪಟ್ಟು, B, ರೇಲ್ 6ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ಆರುತಿಂಗಳವರಿಗೆ ಅಜಮಾಯಿಷೀಮೇಲೆ ಆಫಿಷಿಯೇಟಿಂಗ್ ತರೀಕ್ ಕೆಲಸನೋಡುವಂತೆ ನೋಕರರ್.

---

147. ತಾರೀಖು 19ನೇ ಜುಲೈ 1876.

ಮೆ|| ಕಲ್ಯಾಣಸುಂದರಂಶೆಟ್ಟಿಯವರು 1876ನೇ ಜುಲೈ 18ನೇ ಮಧ್ಯಾಹ್ನ ಬೆಂಗಳೂರು ತಲಪಿದಂತೆ ರಿಪೋರ್ಟು ಮಾಡಿದರು. ಮತ್ತು ಚೀಪ್‌ಕಮ್ಮಿಷನರವರ ಕಚ್ಚೇರಿಯಲ್ಲಿ ಕೆಲಸ ನೋಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕಸ್ ಇಲಾ[illegible].

ನಂ. 22. ತಾರೀಖು 17ನೇ ಜು[illegible] [illegible]76.

ಅಸಿಸ್ಟೆಂಟ್ ಇಂಜಿನಿಯರ್ ವ 4ನೇ ಗ್ರೇಡ್ ಹಂಗಾಮಿ ಯಗ್ಜಿ[illegible] ಇಂಜಿನಿಯರ್ ಮತ್ತು ಬೆಂಗಳೂರು ಇಂಜಿನಿಯರಿಂಗ್ ವ ನ್ಯಾಚುರಲ್ ಸೈನ್ಸ್ ಸ್ಕೂಲಿನ ಪ್ರಿನ್ಸಿಪಲ್ ಮೆಸ್ಟರ್ ಗ್ರ[illegible] [illegible]ರು, 1875ನೇ ಇಸವಿ ಮಾರ್ಚಿ 16ನೇ ಮಧ್ಯಾಹ್ನ 438ನೇ ನಂಬರ ಬಾಬತು ಇಂಡ್ಯಗವರ್ನಮೆಂಟಿನವರ ಲೆಟರಿನ [illegible] [illegible]ಟ್ಟ ಹುಕ್ಕುಂ ಅನುಸಾರವಾಗಿ, ಮೇಜರ ಕ್ರಿಸ್ಟಿಯವರು ಸೂಪರಿಂಟೆಂಡಿಂಗ ಇಂಜನಿಯರ್ ಕೆಲಸಕ್ಕೆ ಬಡತೀಹೊಂದಿದ [illegible] [illegible]ಂದರೆ, 1875ನೇ ಇಸವಿ ಅಕ್ಟೋಬರ 29ನೇ ಮಧ್ಯಾಹ್ನ ಲಾಗಾಯಿತು 4ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜನಿಯರ್ ಗೆ [illegible] [illegible]ಮ ಆಗಿ ಬಡತೀಮಾಡಲ್ಪಟ್ಟಿರುತ್ತಾರೆ.

"ಬಮೋಜೀಬ್ ಹುಕ್ಕುಂ,"

W. R. JOHNSON, *Lieut.-Col.,*
Offg. Secy., P. W. D.

ಕೊಡಗು ಚೀಪ್ ಕಮ್ಮಿ[illegible]ಂದ ಕ[illegible]ರೀಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 3. ತಾರೀಖು 7ನೇ ಜುಲೈ 1876.

ವೀರರಾಜೇಂದ್ರಪೇಟೆ ಮ್ಯುನಿಸಿಪ್ಯಾಲಿಟಿಗೋಸ್ಕರ ಇದರಡಿ ಬರುವ ಬೈಲಾ ನಿಬಂಧನೆಗಳು ಚೀಪ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟವೆಯಾಗಿ ಸಕಲರಿಗೂ ತಿಳಿಯತಕ್ಕ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ.

1. ವೀರರಾಜೇಂದ್ರಪೇಟೆ ಷಹರಿಗೆ ಸುಂಕದ ಬಾಬತು ಯಾವ ಪದಾರ್ಥಗಳನ್ನಾಗಲಿ ಪ್ಯಾಸ್ ಚೀಟಿ ಯಿಲ್ಲದೆ ಅಥವಾ ಅಂತಾ ಪದಾರ್ಥಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಪಾವತೀ ಮಾಡದೇ ಯಾವನು ಆಮದ್ ಮಾಡುತ್ತಾನೋ ಯಾ ಆಮ್ದ್ ಮಾಡಲಿಕ್ಕೆ ಯತ್ನಿಸುತ್ತಾನೋ ಯಾ ತರುತ್ತಾನೋ ಅಂತಾ ಮನುಷ್ಯನು ಪೊಲೀಸ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ಅಂತಾ ಪದಾರ್ಥಗಳ ಕಿಮ್ಮತಿ ನ್ನೆರಡಷ್ಟಕ್ಕೆ ಮೀರದ, ಮತ್ತಿನ್ಯಾವ ಸಂಗತಿಯಲ್ಲಿಯೂ 500 ರೂಪಾಯಿಗೆ ಮೀರದ ಪೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಸದರೀ ಪದಾರ್ಥಗಳು ಜಪ್ತಿ ಆಗಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

2. ಸದರೀ ಮ್ಯುನಿಸಿ ಪಾಲಿಟಿಯೊಳಗೆ ಛೇದಿಸುವದಕ್ಕೋಸ್ಕರ ತರಲ್ಪಡುವ ಪ್ರತಿ ಕುರಿ ಯಾ ಮೇಕೆಗೆ 3 ಕಾಸುಗಳ ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಇಂಡ್ಯಗವರ್ನಮೆಂಟಿನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ರೆವಿನ್ಯೂ ಆಗ್ರಿಕಲ್ಚರ್ ವ ಕಾಮರ್ಸ್ ಇಲಾಖಾ

ಇಸ್ತಿಹಾರ.

ನಂ. 590. ತಾರೀಖು ...ನೇ ಜುಲೈ 1876, ಮೊಕ್ಕಾಂ ಸಿಂಲಾ.

ಮದ್ರಾಸ್ ಸ್ಟಾಫ್‌ಕೋರ್ ವ ಮೈಸೂರು ...ನ್ಯೂ ಸರ್ವೆ ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ್ ಕೇಪ್ಟನ್ ಮಕ್ಕಾಳಿಯವರು 1876ನೇ ಇಸವಿ ಮೇ ಗುರ್ಕೇಲಾಗಾಯಿತು 4ನೇ ...ಡೆಸಿದ 3ನೇ ಗ್ರೇಡಿಗೆ ಬಡತೀಮಾಡಲ್ಪಟ್ಟಿರುತ್ತಾರೆ.

A. O. HUME,
Secretary to the Govt. of India.

...ಇಲಾಖಾ.

...ರ.

ನಂ. 1447. G. ತಾರೀಖು ... 1876.

ಮೈಸೂರು ಕಮ್ಮಿಷನಲ್ಲಿ 6ನೇ ಕ್ಲಾಸ್ ಅಸಿಸ್ಟೆಂಟ್ ... ಡಿನಲ್ಲಿ ಹಾಲಿ ಆಕ್ಟಿಂಗಾಗಿ ಕೆಲಸ ನೋಡುತ್ತಿರುವ ಇದರಡಿ ನಮೂದಿಸಲ್ಪಡುವ ದೊಡ್ಡ ಮನುಷ್ಯರು ಅದೇಗ್ರೇ... ...ಸ್ತಾರೆ.

ಆನಂದರಾವ್, ವೆಂಕಟವರದೈಯಂಗಾರ್, ಅಬ್ದುಲ್‌ರಹಿ...

ನಂ. 1451. G. ಬಡತಿಗಳು:—ಮೈಸೂರು ಕಮ್ಮಿಷನ್ನಲ್ಲಿ ಇದರಡಿ ಬರುವ ಬಡತಿಗಳು ಮಾಡಲ್ಪಟ್ಟಿವೆ.

4ನೇ ಕ್ಲಾಸ್ ... ಕಮ್ಮಿಷನರ್ ... ಮಹಮ್ಮದಲ್ಲಿ...ಯವರು ತಂಬುಚೆಟ್ಟಿಯವರಿಗೆ ಬದಲಾಗಿ 3ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರಾಗಿರತಕ್ಕದ್ದು. ಜುಡಿಷಿಯಲ್ ... ಕಮ್ಮಿಷನರ್ ...ಫೀಸ್ ಹೆಡ್‌ಸೆರಸ್ತೇದಾರ್ ಶೇಷಾದ್ರಿಐಯ್ಯರ್‌ಯವರು ಮಹಮದಅಲ್ಲಿಖಯವರಿಗೆ ಬದಲಾಗಿ 4ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ...ಕ್ಕದ್ದು.

T. H. THORNTON,
Offg. Secy. to the Govt. of India.

ಫಿನಾನ್ಷಿಯಲ್ ಇಲಾಖಾ.

ಸೆಪರೇಟ್‌ರಿವಿನ್ಯೂ ಸ್ಟಾಂಪುಗಳ ವಿಷಯ.

ನಂ. 1483. ತಾರೀಖು 7ನೇ ಜುಲೈ 1876,

ಸರ್ 1869ನೇ ಇಸವಿ 18ನೇ ನಂಬರ್ ಆಕ್ಟಿನ 16ನೇ ಸೆಕ್ಷನ್ ದೆಶೆಯಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮತ್ತು ಇಂಡ್ಯಗವರ್ನಮೆಂಟ್ ಫಿನಾನ್ಷಿಯಲ್ ಇಲಾಖೆಯವರಿಂದ ಕೊಡಲ್ಪಟ್ಟ 1875ನೇ ಇಸವಿ ಜುಲೈ 23ನೇ ಮುರ್ಕಂ 2280ನೇ ನಂಬರ್ ಇಸ್ತಿಹಾರ್ ರದ್ದಿಯಾತಿಯಿಂದ ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್‌ಯವರು, ಐರ್ಜ್ ಆಕ್ಟು ಅನುಸರಿಸಿ ಗವರ್ನಮೆಂಟಿನಲ್ಲಿ ಯಾವದಾದರೂ ಒಂದು ತಲಬುಳ್ಳ ಉದ್ಯೋಗವನ್ನು ವಹಿಸಿರುವವನಿಂದಲಾಗಲಿ ಆತನ ಜಾಮೀನ್ದಾರನಿಂದಲಾಗಲಿ ಅಂತಾ ಉದ್ಯೋಗದ ಕೆಲಸಗಳನ್ನು ಕ್ರಮವಾಗಿ ನೆರವೇರಿಸಲಿಕ್ಕೋಸ್ಕರ ಬರದು ಕೊಡಲ್ಪಡತಕ್ಕ ದರೋಬಸ್ತು ದಸ್ತಾವೇಜುಗಳ ಮೇಲೆ ಕಟ್ಟಲ್ಪಡತಕ್ಕ ತೀರ್ವೆಗಳನ್ನು ಬ್ರಿಟಿಷ್ ಇಂಡ್ಯ ಸರ್ವತ್ರ ಇದರದೆಶೇಯಿಂದ ಮಾಫ್ ಮಾಡಿರುತ್ತಾರೆ.

R. B. CHAPMAN,
Secy. to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜುಲೈ ತಾ|| 22, ಸರ್ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 21ನೇ ಜುಲೈ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೨೯	ಶೇಖಅಲ್ಲಿ ..	ಪುಸವರ್ಖಾ ವಗೈರೆ ..	೨೫ನೇ ಜುಲೈ
ಸ್ಪಿ. ಅ. ೩೨	ಆದೆಣ್ಣ ವಗೈರೆ ..	ವೆಂಕಟರಮಣರಡ್ಡಿ ..	ಡಿಟೋ
ಸ್ಪಿ. ಅ. ೩೭	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	ಡಿಟೋ
ಸ್ಪಿ. ಅ. ೩೨-೩೩-೩೪	ಖೈದೀ ಪುಸುವರ್ಸಾಬ್ ವಗೈರೆ ..	.. ..	ಡಿಟೋ
ಸ್ಪಿ. ಅ. ೩೮	ವೀರಬಸಪ್ಪಾ ..	ಸುಬ್ಬಂಣಾ ..	೨೬ನೇ ಡಿಟೋ
ಸ್ಪಿ. ಅ. ೪೦	ಸುಬ್ರಹ್ಮಣ್ಯಯ್ಯ ಗೋಪಾಲಶೆಟ್ಟಿ ..	ದೊಡ್ಡ ಸುಬ್ಬಮ್ಮ ..	ಡಿಟೋ
ಕೊ. ಅ. ೨	ಕಾಶೀಬಾಯಿ, ವಗೈರೆ ..	ಅಬ್ದುಲ್ ಖಾದರ್‌ಸಾಬ್ ..	ಡಿಟೋ
ಅಪ್ಪೀಲ್ ೧ ರಿ. ನಂ. ೨೦	ಸುಬ್ಬಯ್ಯ ..	ಲಕ್ಷ್ಮಣ್ಣಯ ..	೨೭ನೇ ಡಿಟೋ
ಸ್ಪಿ. ಅ. ೪೩	ಅನಂತಮೂರ್ತಿರಾವ್ ..	ರಾಮಸ್ವಾಮಯ್ಯಂಗಾರ್ ..	೧ನೇ ಆಗಸ್ಟ್
ಅಪ್ಪೀಲ್೪ ರಿ. ನಂ. ೧೨	ಚನ್ನಮಲ್ಲಯ್ಯ ..	ಮಲ್ಲಮ್ಮ ವಗೈರೆ ..	ಡಿಟೋ
ಸ್ಪಿ. ಅ. ೪೪	ಮೆಸ್ಟರ್ ಹೆಚ್ ..	ಗಂಗಾಧರಶೆಟ್ಟಿ ..	೩ನೇ ಡಿಟೋ
ಮಿ. ಸ್ಪಿ. ಅ. ೮	ದ್ಯಾವೇಗೌಡ ..	ದೇವೀರಮ್ಮ ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಸಾಹೆಬರು ..	ನರಶಿಹ್ಮಮೇಸ್ತ್ರಿ ..	೮ನೇ ಡಿಟೋ
ಸ್ಪಿ. ಅ. ೪೨	ವೆಂಕಟಾಚಾರಿ ..	ವೋಬಳಾಚಾರಿ ಕನಕಮ್ಮ ..	ಡಿಟೋ
ಸ್ಪಿ. ಅ. ೪೨	ಚನ್ನಗಿರೀ ರಂಗಣ್ಣ ..	ಬಾಲಕೃಷ್ಣರಾವ್ ವಗೈರೆ ..	೧೨ನೇ ಡಿಟೋ
ಸ್ಪಿ. ಅ. ೫೨ ರಿ. ೧೮	ಶೀತಾರಾಮಶಾಸ್ತ್ರಿ ..	ಧರಣ್ಣಯ ..	ಡಿಟೋ
ಸ್ಪಿ. ಅ. ೪೫	ಗಂಗಮ್ಮಾ ..	ದೊಡ್ಡಬಚ್ಚಮ್ಮ ವಗೈರೆ ..	೧೫ನೇ ಡಿಟೋ
ಕೊ. ಸ್ಪಿ. ಅ. ೯	ಹಜಾಮರ ಹುಚ್ಚಾ ..	ಕಾಳೇಗೌಡ ..	೧೫ನೇ ಡಿಟೋ
ಸ್ಪಿ. ಅ. ೪೬	ಏಕಾಂಬರ ಮೊದಲ್ಯಾರ್ ..	ವೆಂಕಟರಮಣ್ಣಯ ..	೧೭ನೇ ಡಿಟೋ
ಫೂಟ್ ಸ್ಪಿ. ಅ. ೭	ಪುಟ್ಟರಸಮ್ಮ ..	ಬೆಟ್ಟಯ್ಯ ..	ಡಿಟೋ
ಕೊ. ಅ. ನಂ. ೩	ರಾಮಶೆಟ್ಟಿ ಚಿಕ್ಕಪ್ಪಯ ..	ಮಲ್ಲುಶೆಟ್ಟಿ ..	೨೯ನೇ ಡಿಟೋ

ತಾರೀಖು 4ನೇ ಜುಲೈ 1876.

ನಗರ ಡಿವಿಜನ್ ಮುನಸಫರ ಸರ್ಕ್ಯೂಟ ಕೋರ್ಟುಗಳನ್ನು ಕುರಿತು ಸನ್ 1875ನೇ ಇಸವಿ ಜೂನ್ 26ನೇ ಮುಕ್ಕಾಂ ಮೈಸೂರು ಗೆಜೆಟ 2ನೇ ಭಾಗದ 305ನೇ ಪುಟದಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮಾಹೆ 11ನೇ ಮುಕ್ಕಾಂ ಇಸ್ತಿಹಾರನ್ನು ಕುರಿತು ಸಕಲ ಜನಗಳ ಮತ್ತು ಇದಕ್ಕೆ ಸಂಬಂಧಪಟ್ಟ ಕೋರ್ಟುಗಳ ತಿಳುವಳಿಕೇ ಬಗ್ಯೂ, ನಡವಳಿಕೆ ಬಗ್ಯೂ, ಯಿದರ ದೆಸೇಯಿಂದ ನೋಟಿಸ್ ಕೊಡಲ್ಪಡುವದೇನಂದರೆ.

1ನೇ—ಕಡೂರು ಡಿಸ್ಟ್ರಿಕ್ಟ ಚಿಕ್ಕಮಗಳೂರು ಮುನಸಫರಿಂದ ಬಾಳೆ ಹೊನ್ನೂರಲ್ಲಿ ಮೇ ಮತ್ತು ನವೆಂಬರ ತಿಂಗಳೊಳಗೆ ಮಾಡಲ್ಪಡುವ ಸರ್ಕ್ಯೂಟ ಕೋರ್ಟು ಯಿದರ ದೆಸೇಯಿಂದ ಮೌಕೂಫ ಮಾಡಲ್ಪಟ್ಟಿರುತ್ತೆ.

2ನೇ—ಕಡೂರು ಮುನಸಫರ ಸರ್ಕ್ಯೂಟ ಕೋರ್ಟು ಲಕ್ಕುವಳ್ಳಿಗೆ ಬದಲಾಗಿ ತರೀಕೆರೆಯಲ್ಲಿ ಮೇ ಮತ್ತು ನವಂಬರ ತಿಂಗಳೊಳಗೆ ಐಯಿಂದಾ ಮಾಡಲ್ಪಡುವದು.

ತಾರೀಖು 3ನೇ ಜುಲೈ 1876.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟಿನ ವ್ಯವಹಾರ ವ ನಡವಳಿತ ಈ ವುಗಳನ್ನು ಕ್ರಮಪಡಿಸಲಿಕ್ಕೋಸ್ಕರ ಉಂಟಾದ ರೂಲ್ಸಿನ 39ನೇ ನಿಬಂಧನೆ ಮೈಸೂರು ಶೀಮೆಯ ಜುಡಿಷಲ್ ಕಮ್ಮಿಷನರವರಿಂದ ತಿದ್ದುಪಡಿ ಮಾಡಲ್ಪಟ್ಟಿರುವ ಸಬಬ್ ಸದರೀ ನಿಬಂಧನೆಯನ್ನು ಈ ಕೆಳಗೆ ಕಾಣಿಸಲ್ಪಡುವ ಮೇರೆ ಓದಿಕ್ಕೊಳ್ಳತಕ್ಕದ್ದು.

39ನೇ ರೂಲ್—ಕಕ್ಷಿಗಾರರಿಗೆ ಪರಸ್ಪರ ಕೋರ್ಟು ಖರ್ಚನ್ನು ನಿರ್ಣಯಿಸುವಲ್ಲಿ ಮೊಕದ್ದಮೆಯು ಕ್ರಮವಾಗಿ ನಿಯಮಿಸಲ್ಪಟ್ಟ ಪ್ಲೀಡರನ್ನು ಮೊಕರರ್ ಮಾಡಿಕ್ಕೊಳ್ಳಲಿಕ್ಕೆ ತಕ್ಕದ್ದೆಂದು ವಿಚಾರಣೇ ಕಾಲದೊಳಗೆ ಜಡ್ಜಿಯು ಸರ್ಟಿಫೈ ಮಾಡಿದ ಹೊರತು ಯಾವ ರುಸುಂ ಬಗ್ಯೂ ಹುಕ್ಕುಂ ಆಗಲಾರದು. ಹಾಗೆ ಹುಕ್ಕುಂ ಮಾಡಲ್ಪಟ್ಟಲ್ಲಿ ಈ ಕೆಳಗೆ ಕಂಡ ಸ್ಕೇಲ್ ಪ್ರಕಾರ ಫೈಸಲ್ ಮಾಡಲ್ಪಡುವದು.

50 ರೂಪಾಯಿಗಳಿಗೆ ಮೀರದ ದಾವೆಗಳಲ್ಲಿ ರೂಪಾಯಿ			5	0	0
50 ,,	ಮೀರಿ	150 ರೂಪಾಯಿಗಳಿಗೆ ಮೀರದ ದಾವೆಗಳಲ್ಲಿ ರೂಪಾಯಿ	7	8	0
150 ,,	,,	300 ,, ,, ,, ,,	15	0	0
300 ,,	,,	500 ,, ,, ,, ,,	20	0	0
500 ,,	,,	1000 ,, ,, ,, ,,	25	0	0

ವಿಶೇಷ ಸಂದರ್ಭಗಳ ದೆಸೆಯಿಂದ ರುಸುಂ ಕಮ್ಮೀ ಮಾಡಬೇಕಾದ ಆವಶ್ಯಕ ತೋರುವ ಯಾವ ದಾವೆಯಲ್ಲಾಗಲಿ ಹಾಂಗೆ ರುಸುಂ ಕಮ್ಮೀ ಮಾಡುವದು ಜಡ್ಜಿಯವರ ಯಖ್ತ್ಯಾರೀಯಲ್ಲಿರತಕ್ಕದ್ದು.

J. D. GORDON, *Judl. Commr.*

ಪೊಲೀಸ್ ಇಲಾಖಾ.

ತಾರೀಖು 17ನೇ ಜುಲೈ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗ ಬೆಂಕಿಪುರ ರಸ್ತೆಯಲ್ಲಿ ಸನ್ 1876ನೇ ಇಸವಿ ಮೇ 27ನೇ ಮುಕ್ಕಾಂ ರಾತ್ರಿ ಅಂಚೆ ಆಳುಗಳ ಮೇಲೆ ನಡಿಸಿದ ಡಕಾಯಿತಿ ಮೊಕದ್ದಮೆಯಲ್ಲಿ ಸಂಬಂಧಪಟ್ಟ ತಕಸೀರ್ ಮಂದರಪತ್ತೇಬಗ್ಯೂ ವ ತಕಸೀರ್ ಸ್ಥಾಪನೆಬಗ್ಯೂ ಅನುಕೂಲಿಸುವಂತಾ ಬಾತ್ಮಿಕೊಡುವ ಯಾವ ಮನುಷ್ಯನಿಗಾಗಲಿ 300ರೂಪಾಯಿಗಳ ಇನಾಂಕೊಡಲ್ಪಡುವದು.

"ಬಮೋಜೀಬ್ ಹುಕುಂ,"

E. D. GOMPERTZ,
Dy. Inspr. Genl. of Police.

ಇನಾಂ ಇಲಾಖಾ.

ತಾರೀಖು 10ನೇ ಜುಲೈ 1876.

ಸನ್ 1876ನೇ ಇಸವೀ ಜೂನ್ 30ಕ್ಕೆ ಆಖೈರಾಗುವ ಶೀ ಮಾಹೇಯಲ್ಲಿ ರದ್ದಾದ ಟೈಟಲ್ ಡೀಡ್‌ಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ. ಎ.	ಬೀಜವರಿ. ಖ. ಕೊ. ಪ.	ಜೇರೀಜು. ರೂ. ಆ. ಪೈ.	ಜೋಡಿ. ರೂ. ಆ. ಪೈ.	ಜೋಡಿ ಸೇರಿ ಕ್ವಿಟ್‌ರೆಂಟ್. ರೂ. ಆ. ಪೈ.	ಮುಜರಾಇ ಮೊಬಲಗ್. ರೂ.ಆ.ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಬಾಣಾವಾರ	ಜಾವಗಲ್	ಜಾವಗಲ್ಲು ವಿಘ್ನೇಶ್ವರ ದೇವರ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು.	ದೇವಾದಾಯ	0·70	0 0 0	3 10 2	0	1 12 0	0 0 0	82	1872—73 ಮತ್ತು 1873-74 ಈ ಇಸವಿಗಳಿಗೆ ಕ್ವಿಟ್‌ರೆಂಟ್ ಕೊಡದ ಸಬಬ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಿರುತ್ತೆ.	ಕಡೂರು ಡಿ|| ಕಮಿಷನರಿಗೆ ಕಳುಹಿಸಿದ 1876ನೇ ಮೇ 17ನೇ ಮ|| 89ನೇ ನಂ.
ಡಿಟೋ	ಡಿಟೋ	ಜಾವಗಲ್‌ನಲ್ಲಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು.	ಡಿಟೋ	0.60	0 0 0	3 0 11	0	1 8 0	0	83	ಡಿಟೋ	ಡಿಟೋ
ಶ್ರೀನಿವಾಸಪುರ	ಮುಜರಾಯಿ	ಕೋಲಾರದಲ್ಲಿ ಕಟ್ಟೇ ಸುಬ್ಬಣ್ಣಾ ಚಾರಿ.	ಬ್ರಹ್ಮಾದಾಯ	..	0 0 0	0 0 0	0	0 0 0	3 4 0	30760	ಯಾವ ಜೀವಸಲ್ಲತಕ್ಕದ್ದಾದ್ದರಿಂದ ಇನಾಂದಾರ ಮೃತಪಟ್ಟ ಸಬಬ್.	1876ನೇ ಮೇ 6ನೇ ಮರ್ಕೂಂ 79ನೇ ನಂಬರ್.
ಡಿಟೋ	ಡಿಟೋ	ಬುರಡಗುಂಟೇ ರಾಮಾಭಟ್ಟ.	ಡಿಟೋ	..	0 0 0	0 0 0	0	0 0 0	0 14 0	35048-21	ಡಿಟೋ	ಡಿಟೋ
ಡಿಟೋ	ಸೆಟ್ಟಿಹಳ್ಳಿ	ಕೊನವಾರಪಲ್ಲಿ ಅಣ್ಣಮ್ಮ.	ಡಿಟೋ	..	0 1 7	0 11 8	0	0 6 0	0	30448	ಇನಾಂದಾರಗೆ ನಿಸ್ಸಂತತಿಯಾದ್ದರಿಂದ ಇನಾಂ ಸರಕಾರಕ್ಕೆ ಸೇರಿ ಹೋಯಿತು.	1875ನೇ ಅಕ್ಟೋಬರ್ 26ನೇ ಮರ್ಕೂಂ 727ನೇ ನಂಬರ್.
ಡಿಟೋ	ಅಗ್ರಹಾರ	ಡಿಟೋ	ಡಿಟೋ	..	0 1 13	3 10 2	0	1 12 0	0	30452	ಡಿಟೋ	ಡಿಟೋ
ಡಿಟೋ	ಹೊಸಕೋಟೆ	ಡಿಟೋ	ಡಿಟೋ	..	0 1 1½	1 12 6	0	0 4 0	0	30458	ಡಿಟೋ	ಡಿಟೋ
ಡಿಟೋ	ಅರವಾಕಲಪಲ್ಲಿ	ಡಿಟೋ	ಡಿಟೋ	..	0 8 2	12 0 0	0	6 0 0	0	30477	ಡಿಟೋ	1876ನೇ ಜೂನ್ 2ನೇ ಮರ್ಕೂಂ ನಂ|| 127.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ ಎ.	ಖ. ಕೂ. ಪ.	ಜೇರೀಜು. ರೂ. ಆ. ಪೈ.	ಜೋಡೀ. ರೂ. ಆ. ಪೈ.	ಜೋಡಿ ಶೇರಿ ಕ್ವಿಟೆರೆಂಟ್. ರೂ. ಆ. ಪೈ.	ಮುಜರಾ ಇ ಮೊಬಲಗ್. ರೂ.ಆ.ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಆದ ಆರ್ಡರ್ ತಾರೀಖು.
ಶ್ರೀನಿವಾಸಪುರ	ಅಗ್ರಹಾರ	ಕೊಸವಾರಿಪಲ್ಲಿ ಅಕ್ಷ್ಮಮ್ಮ.	ಬ್ರಹ್ಮಾದಾಯ	0·60	0 1 2½	1 2 7	0	0 2 0	0	32182	ಇನಾಂದಾರಗೆ ನಿಸ್ಸಂತತಿ ಯಾದ್ದರಿಂದ ಇನಾಂ ಸರ್ಕಾರಕೆ ಸೇರಿಹೋಯಿತು	1876ನೇ ಜೂನ್ 2ನೇ ಮರ್ಕುಂ 127ನೇ ನಂ.
ಡಿಟ್ಟೋ	ಯಲವಕುಂಟೆ	ಡಿಟ್ಟೋ	ಡಿಟ್ಟೋ	..	0 4 12	4 3 6	0	0 8 0	0	ಡಿಟ್ಟೋ	ಡಿಟ್ಟೋ	ಡಿಟ್ಟೋ.
ಸಿಡ್ಲಘಟ್ಟ	ದೇವಪಲ್ಲಿ	ಸಿಡ್ಲಘಟ್ಟದ ಸೂರಪ್ಪ ಜೇರೆ 7 ಮಂದಿ	ಡಿಟ್ಟೋ	0·41	0	1 10 3	0	0 14 0	0	1246	ರಾಜೀನಾಮೆ ಕೊಟ್ಟದ್ದು	1876ನೇ ಮೇ 20ನೇ ಮರ್ಕುಂ 102ನೇ ನಂ.
ಕೊಪ್ಪ	ಹೆಡಸೆ ಯಾಹೆಚ್ಚಿ	ಹೆಡಸೆ ಸುಬ್ಬಯ್ಯ ಪುರಪ್ ವೆಂಕಟಸುಬ್ಬಯ್ಯ.	ಡಿಟ್ಟೋ	.	0	0	0	0	75 3 0 ನಗದು ಇನಾಂ	36972	ನಗದು ಇನಾಂ ಜಮೀನ್ ಇನಾಮಿಗೆ ಬದಲಾಯಿಸಲ್ಪಟ್ಟಿತು.	1876ನೇ ಮೇ 29ನೇ ಮರ್ಕುಂ 120ನೇ ನಂ.
ಗೋರೀಬಿದನೂರು	ಹಳಕೂರು	ನಂದಿಗಾನಹಳ್ಳಿ ಚಂದ್ರಶೇಖರಭಟ್ಟ. 2ನೇ ಸೂರಪ್ಪ.	ಡಿಟ್ಟೋ	1·32	0	1 2 8	0	0 10 0	0	307	ರಾಜೀನಾಮೆ ಕೊಟ್ಟದ್ದು	1876ನೇ ಮೇ 29ನೇ ಮರ್ಕುಂ 118ನೇನಂಬರು.
ಪಾವಗಡ	ರಂಗಸಮುದ್ರ ಆದರ ದಾಖಲೆ ರಾಮಪುರ	ರಂಗಸಮುದ್ರ ವೆಂಕಟರಾಮಶಾಸ್ತ್ರಿ	ಡಿಟ್ಟೋ	..	170 2 15	2160 0 0	0	270 0 0	0	391	ಕ್ವಿಟರೆಂಟ್ ಮಾಫ್ ಆಗಿ ಹೊಸ ಟೈಟಲ್ ಡೀಡ್ ಕೊಡಲ್ಪಟ್ಟ ಸಬಬ್	ಡಿಟ್ಟೋ 19ನೇ ನಂ.
ಬೇತಮಂಗಲ	ನಾಗಲಪಲ್ಲಿ	ಜಕ್ಕರಸಕೊಪ್ಪ ವೆಂಕಮ್ಮ.	ಡಿಟ್ಟೋ	0·08	0	0 6 7	0	0 2 0	0	655	ರಾಜೀನಾಮೆ ಕೊಟ್ಟದ್ದು	1876ನೇ ಜೂನ್ 9ನೇ ಮ|| 142ನೇ ನಂಬರು
ಡಿಟ್ಟೋ	ಡಿಟ್ಟೋ	ಜಕ್ಕರಸಕೊಪ್ಪ ಶಿವಶಾಸ್ತ್ರಿ.	ಡಿಟ್ಟೋ	0·02	0	0 2 0	0	0 2 0	0	656	ಡಿಟ್ಟೋ	ಡಿಟ್ಟೋ
ಡಿಟ್ಟೋ	ಡಿಟ್ಟೋ	ಹಂಗಳ ರಮಣಪ್ಪ 2ನೇ ವೆಂಕಟಾಚಲಪೈಯ್ಯ	ಡಿಟ್ಟೋ	0·02	0	0 2 0	0	0 2 0	0	657	ಡಿಟ್ಟೋ	ಡಿಟ್ಟೋ
ಹೊನ್ನಾಳಿ	ಬಿಜೊಗಟ್ಟೆ	ಶಿವದೀಕ್ಷಿತ	ಡಿಟ್ಟೋ	9·05	0	22 11 0	11 5 6	13 0 0	0	191	ಡಿಟ್ಟೋ	ಡಿಟ್ಟೋ 16ನೇ ಮರ್ಕುಂ 166-167ನೇ ನಂಬರ್
ಡಿಟ್ಟೋ	ಕುರವ	ಹೊನ್ನಾಳ್ಳಿ ಸೊಲ್ಲದ ಕೃಷ್ಣಾಚಾರಿ 2ನೇ ರಾಮಾಚಾರಿ.	ಡಿಟ್ಟೋ	4·16	0	7 9 0	3 12 6	4 4 0	0	450	ಡಿಟ್ಟೋ	ಡಿಟ್ಟೋ

R. A. Cole, *Supt. of Inam Settlement.*

ಫೈನಾನ್ಷಿಯಲ್ ಇಲಾಖಾ.

ಮರಮ್ಮತ್ ವ ಫಾರೆಸ್ಟು ಇಲಾಖೆಗಳಿಗಾಗಿ ನಿಷ್ಕರ್ಷೆಯಾದ ಮೊಬಲಗ್‌ಗಳ ಬಾಬತು ಅಮಲ್‌ದಾರರ ಚೆಕ್ಕು ರಿಜಿಸ್ಟರ್.

ಸರ್ಕ್ಯುಲರ್ ನಂ. 1286—ತಾರೀಖು 13ನೇ ಜುಲೈ 1876.

ತಾಲ್ಲೂಕು ಟ್ರೆಜರೀಗಳ ಇನ್‌ಚಾರ್ಜ್ ಅಮಲ್‌ದಾರರಿಗೆ.

ಒಂದೇ ರೀತಿಯಾಗಿಯೂ, ಕರಾರ್ ವಾಕಾ ಆಗಿಯೂ ಕೆಲಸ ನಡೆಯಬೇಕೆಂಬ ಉದ್ದೇಶದಿಂದ ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು ಕೋರುವದೇನಂದರೆ—ತಾಲ್ಲೂಕು ಖಜಾನೇಗಳ ಇನ್‌ಚಾರ್ಜ್ ಅಮಲ್‌ದಾರ್ರುಗಳು ಇದರಡಿ ಕಂಡ ನಮೂನೇಮೇರೆ ಒಂದು ಚೆಕ್ಕು ರಿಜಿಸ್ಟರ್ ಇಡತಕ್ಕದ್ದು. ಆ ರಿಜಿಸ್ಟರ್‌ನಲ್ಲಿ ಡಿಸ್ಟ್ರಿಕ್ಟು ಟ್ರೆಜರೀ ಆಫೀಸರ್‌ಗಳಿಂದ ಬಂದ ಜಾಹೀರಾತೀ ಅನುಸರಿಸಿ ಮರಮ್ಮತ್ತ ವ ಫಾರೆಸ್ಟು ಇಲಾಖಾ ಆಫೀಸರ್ ಹೆಸರಿನಿಂದ ಜಮೆ ಕಟ್ಟಲ್ಪಟ್ಟ ಮೊಬಲಗ್‌ಗಳನ್ನು, ಆ ಮೊಬಲಗ್‌ಗಳ ಪಕ್ಕದಲ್ಲಿ ಚೆಕ್ಕುಗಳಮೇಲೆ ಸಂದಾಯವಾದ ಮೊಬಲಗ್ಗಳನ್ನು ನಮೂದಿಸತಕ್ಕದ್ದು.

2. ಸದರೀ ರಿಜಿಸ್ಟರನ್ನು ತಿಂಗಳು ತಿಂಗಳಿಗೆ ತೇರೀಜ್ ಮಾಡತಕ್ಕದ್ದಲ್ಲದೆ ಮಾಹೇ ಆಖೈರ್‌ನಲ್ಲಿ ಬಾಕೀ ಉಳಿದ ಮೊಬಲಗನ್ನು ತರುವಾಯ ಯೆರಡು ದಿನಗಳೊಳಗಾಗಿ ಅದಕ್ಕೆ ಸಂಬಂಧಪಟ್ಟ ಮರಮ್ಮತ್ ಯಾ ಫಾರೆಸ್ಟು ಆಫೀಸರಿಗೆ ಮತ್ತು ಡಿಸ್ಟ್ರಿಕ್ಟು ಟ್ರೆಜರೀಗೆ ಸಹ ತಿಳಿಸತಕ್ಕದ್ದು. ಸಿಲ್ಕು ಬಾಕೀ ಮೊಬಲಗನ್ನು ಮಾರನೇ ತಿಂಗಳ ಜಮೆಗೆ ತಂದುಕೊಳ್ಳತಕ್ಕದ್ದು.

3. ಚೆಕ್ಕು ಬರಿಯುವ ಆಫೀಸರರಿಂದ ತಿಳಿಸಲ್ಪಟ್ಟ ಮೇರೆ, ಉಪಯೋಗದಲ್ಲಿರುವ ಚೆಕ್ಕು ಬುಕ್ಕಿನ ನಂಬರನ್ನು ರಿಜಿಸ್ಟರ್‌ನಲ್ಲಿ ದಾಖಲ್ ಮಾಡುವ ಅಂಶಗಳಲ್ಲಿ ಸಹ ಅಮಲ್‌ದಾರರು ಎಚ್ಚರ ವಹಿಸಬೇಕು.

187 ನೇ ಇಸವಿ ಬಗ್ಯೆ ರ ಹೆಸರಿಗೆ ಜಮೆ ಕಟ್ಟಲ್ಪಟ್ಟ ಮೊಬಲಗ್‌ಗಳ ಬಾಬತು ಚೆಕ್ಕು ರಿಜಿಸ್ಟರ್.

ಜಮೆ ಕಟ್ಟಿದ ಮಾಹೆ	ಡಿಸ್ಟ್ರಿಕ್ಟು ಟ್ರೆಜರೀ ಆಫೀಸರ ಹುಕ್ಕುಂ ನಂ. ವ ತಾರೀಖು	ಜಮೇಬಂದ ಮೊಬಲಗ್	ಮೊಬಲಗ್ ಸಂದ ಚೆಕ್ಕಿನ ನಂ.	ಚೆಕ್ಕು ತಾರೀಖು	ಸಂದ ಮೊಬಲಗ್

H. Hudson,
Dy. Acclt. Genl. in Mysore.

ಫಾರೆಸ್ಟು ಇಲಾಖಾ.

ತಾರೀಖು 30ನೇ ಮೇ 1876.

ಇದರಿಂದ ತಿಳಿಯಪಡಿಸುವದೇನಂದರೆ,—ದಾರವಾಡ್ ಜಿಲ್ಲಾ ಕೋಡಿ ತಾಲ್ಲೂಕು ಫಕೀರಪ್ಪಯೆಂಬ ಹೆಸರುಳ್ಳ ವೊಬ್ಬ ಮನುಷ್ಯನು ಸರ್ 1874ನೇ ಇಸವಿ ಏಪ್ರೈಲ್ ತಿಂಗಳಲ್ಲಿ ಕೊಂಡುಕ್ಕೊಂಡ ಚೌಬಿನೇ ಪೈಕಿ ಉಳಿಸಿಕೊಳ್ಳಲ್ಪಡವ ವೊಂದು ಮರದ ದಿಮ್ಮಿಯು ಕೇಳಲ್ಪಡದೆ ಅದ್ಯಾಪಿ ನಗರ ಡಿವಿಜನ್ ಶಿವಮೊಗ್ಗಾ ಡಿಸ್ಟ್ರಿಕ್ಟು ಅನಂತಪುರ ಡಿಪೊಯಲ್ಲಿ ಬಿದ್ದಿರುತ್ತೆ. ಸದರೀ ಫಕೀರಪ್ಪನೆಂಬುವನು ಶಿವಮೊಗ್ಗೆಯಲ್ಲಿರುವ ಡಿಪ್ಯುಟಿ ಕಂಸರ್ವೇಟರ್ ಯವರಲ್ಲಿ ಹಾಜರಾಗಿ 1876ನೇ ಇಸವಿ ಜುಲೈ 31ನೇ ಮುಕ್ಕಾಂಮಿಗೆ ಮುಂಚಿತವಾಗಿ ಸದರೀ ದಿಮ್ಮಿಯನ್ನು ಸಾಗಿಸಿಕೊಂಡು ಹೋಗತಕ್ಕದ್ದು. ಯಿದಕ್ಕೆ ತಪ್ಪಿದರೆ ಸದರೀ ದಿಮ್ಮಿಯು ಬೇವಾರ್ಸ್ ಮರದೋ ಪಾದಿಯಲ್ಲಿ ಮೈಸೂರು ಗವರ್ನಮೆಂಟ್ ತರ್ಫಿನ ವಿಕ್ರಯಿಸಲ್ಪಟ್ಟು ಅದರ ಹುಟ್ಟುವಳಿಯು ಫಾರೆಸ್ಟು ರೂಲ್ಸ್ 30 ವ 31ರ ನಿಬಂಧನೇಗಳನುಸಾರವಾಗಿ ಮೈಸೂರು ಫಾರೆಸ್ಟು ಇಲಾಖೆಗೆ ಜಮೆ ಕಟ್ಟಲ್ಪಡುವದು.

G. J. van Someren, *Captain,*
Conservator of Forests, Mysore & Coorg.

KOLAR DISTRICT.

Notice regarding an application of Ramanna for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ್ ಡಿ|| ಕೆ|| ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವ ದೇನಂದರೆ,—ಕೋಲಾರದಲ್ಲಿರುವ ಅರಳೇ ರಾಮಣ್ಣ ನೆಂಬವನು ಫಾವತೀ ಪಟ್ಟ ತಂನ ಚಿಕ್ಕತಂದೆ ಕೃಷ್ಣಪ್ಪ ನೆಂಬವನ ಲೇವಾದೇವೀ ಬಾಬತು 2000 ರೂಪಾಯಿಗಳು ವಸೂಲ್ಮಾಡಿ ಕೊಳ್ಳತಕ್ಕ ಬಗ್ಯೆ ಸನ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಫಿಕೇಟ್ ಕೊಡಿಸ ಬೇಕೆಂದು ಗುಜರಾಯಿಸಿದ ಅರ್ಜಿಯು ಸನ್ ಮಜಕೂರ್ ಆಗಸ್ಟು 4ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾದ್ದರಿಂದ ಯಿದರಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಅಂತಾವರೆಲ್ಲ ಆ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರು ಹಾಜರಾಗಿ ಸ್ಥಿರಪಡಿಸಿ ಕೊಳ್ಳತಕ್ಕದ್ದಾಗಿ ಯಿರುತ್ತೆ.

Notice regarding an application of Timmaiya for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವ ದೇನಂದರೆ,—ಬೇತಮಂಗಲ ತಾಲ್ಲೂಕು ಜೋಡೀ ಬೋಡೆಪಲ್ಲೀಲಿರುವ ದಾಗಲೂರು ತಿಂಮೈಯ ನೆಂಬವನು ಫಾವತೀಪಟ್ಟ ತನ್ನ ಚಿಕ್ಕಮ್ಮ ರಾಮಕ್ಕನ ಬಾಬತು 400 ರೂಪಾಯಿಗಳು ವಸೂಲ್ ಮಾಡಿ ಕೊಳ್ಳತಕ್ಕ ಬಗ್ಯೆ ಸನ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಫಿಕೇಟ್ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜಿಯು ಸನ್ ಮಜಕೂರು ಆಗಸ್ಟು 23ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾದ್ದರಿಂದ ಯಿದರಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಅಂತಾವರೆಲ್ಲ ಆ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಸ್ಥಿರಪಡಿಸಿ ಕೊಳ್ಳತಕ್ಕದ್ದಾಗಿ ಯಿರುತ್ತೆ.

ಬತಾರೀಖು 8ನೇ ಮಾಹೆ ಜೂಲೈ 1876ನೇ ಇಸವಿ ಮೊ|| ಕೋಲಾರ.

Notice of sale of the undermentioned Jodi village on the 11th of August 1876 in satisfaction of Government dues.

1. ಇದರಿಂದ ತಿಳಿಯಪಡಿಸುವದೇನಂದರೆ, ಸರಕಾರ ಹಣ ಕೊಡಲಿಕ್ಕೆ ತಪ್ಪಿದ ಜೋಡೀದಾರ ನಾರಣಪ್ಪನಿಂದ ಸಲ್ಲತಕ್ಕ ಜಮೀನು ಕಂದಾಯದ ಬಾಕೀ ಪಡಿಚಾಕ್ಕೋಸ್ಕರ ಜಪ್ತಮಾಡೋಣವಾಗಿರುವ ಈ ಕೆಳಗೆ ಕಂಡ ಜಮೀನುಗಳ ಮ್ಯಾಲೆ ಹಾಲೀ ರಿಜಸ್ಟರ್ ದಾರನಾದ ಸದರೀಯವನಿಗೆ ಇರುವ ದರೋಬಸ್ತು ಹಕ್ಕುದಾರೀಗಳೂ ಕೋಲಾರ ಡಿಸ್ಟ್ರಿಕ್ಟ್ ಬೇತಮಂಗಲ ತಾಲ್ಲೂಕು ಜೋಡೀ ಮಾದಮುತ್ತನಹಳ್ಳಿ ಗ್ರಾಮದಲ್ಲಿ ಸನ್ 1876ನೇ ಇಸವಿ ಆಗಸ್ಟು ತಿಂಗಳ 11ನೇ ತಾರೀಖಿನಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಹರಾಜು ಗ್ರಾಮದಬಳಿಯಲ್ಲಿ ದಿವಿ 12 ಘಂಟೆಗೆ ಆರಂಭಿಸುವದು ಸದರೀ ಜಮೀನು, ವಿಶಿಷ್ಟಬಾಧ್ಯತೆಗಳೊಡನೆ ಜಡದರಖಾಸ್ತುದಾರಗೆ ಕೊಟ್ಟು ಬಿಡಲ್ಪಡುವದು.

2. ಜಮೀನುಗಳ ಮೇಲೆ ಸನ್ 1876ನೇ ಇಸವೀ ಬಾಬತು ಕಂದಾಯ ಅಥವಾ ಉಳಿದ ಸಂದರ್ಭಾನುಸಾರ ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಶೀಲ್‌ವಾರ್ ತೋರಿಸಲ್ಪಟ್ಟ ಪ್ರಕಾರ 166—15—11 ರೂಪಾಯಿಗಳು ಕ್ರಯದಾರನಿಂದ ಸಲ್ಲಬೇಕಾಗಿ ಯಿರುತ್ತೆ.

3. ಕ್ರಯದಾರರು ಹರಾಜು ಕಾಲದಲ್ಲಿಯೇ ಕ್ರಯದ ಮೊಬಲಗಿಗೆ ಶೇಕಡಾ 25 ರೂಪಾಯಿಗಳ ಪ್ರಕಾರ ಡಿಪಾಜಿಟ್ ಯಿಡತಕ್ಕದ್ದು. ಹರಾಜು ತಾರೀಖು ಲಗಾಯಿತು 15 ದಿವಸದೊಳಗಾಗಿ ಬಾಕೀಯಾದ ಕ್ರಯದ ಮೊಬಲಗು ಪಾವತೀ ಮಾಡದಿದ್ದರೆ ಹಾಗೆ ಡಿಪಾಜಿಟ್ ಯಿಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದಕ್ಕೆ ಗುರಿಯಾದೀತು.

4. ಅಂತಾ ಡಿಪಾಜಿಟ್ ಇಡದೇಯಿದ್ದರೆ ಅಥವಾ ಬಾಕೀ ಮೊಬಲಗು ಕೊಡದೇಇದ್ದರೆ ಮೊದಲಿನ ಕ್ರಯದಾರನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಜಮೀನುಗಳು ಪುನಃ ವಿಕ್ರಯಿಸಲ್ಪಡುವದು.

5. ಹರಾಜಿನಲ್ಲಿ ದರಖಾಸ್ತು ಮಾಡುವ ಜನಗಳು ತಮ್ಮ ಸ್ವಂತಕ್ಕೋಸ್ಕರ ದರಖಾಸ್ತು ಮಾಡಿದರೆ ಅಥವಾ ಮುತಾಲೀಕರ ತರೀಕ್ ದರಖಾಸ್ತು ಮಾಡಿದರೆ ಆ ಸಂಗತಿಯನ್ನು ನಮೂದಿಸುವಂತೆ ಕೇಳಲ್ಪಡಬಹುದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಯಜಮಾನರ ಕಡೇಯಿಂದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದೆ ಯಿದ್ದರೆ ಅವರ ದರಖಾಸ್ತುಗಳು ಮಂಜೂರಾಗಲಿಕ್ಕಿಲ್ಲವು.

6. ಕಂದಾಯ ಕೊಡಲಿಕ್ಕೆ ತಪ್ಪಿದ ಮನುಷ್ಯನು ಅಥವಾ ಅವನಿಗಾಗಿ ಕೆಲಸ ನೋಡುವ ಅಥವಾ ಜಮೀನುನಲ್ಲಿ ತನಿಗೆ ಸಂಬಂಧವುಂಟೆಂತ ಹೇಳುವ ಯಾವ ಮನುಷ್ಯನಾಗಲಿ ಕಂದಾಯದ ಬಾಕಿಯ ಪೂರಾ ಮೊಬಲಗನ್ನು ಬಡ್ಡೀ ವ ಯಿತರ ಖರ್ಚು ಗಳನ್ನು ಹಾಜರು ಮಾಡಿದರೆ ಸದರೀ ಹರಾಜು ನಿಲ್ಲಿಸಲ್ಪಡುವದು ಪರಂತು ಹರಾಜುಬಗ್ಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದಲ್ಲಿ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಮ್ಯಾರ ಮೊಬಲಗು ಹಾಜರ್ಮಾಡತಕ್ಕದ್ದು.

7. ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಆಗುವ ಪರಿಯಂತ ಹರಾಜು ಆಖೈರಾದ್ದಾಗಿರತಕ್ಕದ್ದಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ಣವಾಗಿ ಪಾವತೀಮಾಡಿ ಡೆಪ್ಯುಟಿ ಕಮ್ಮಿಷನರವರಿಂದ ವಿಕ್ರಯ ಕಾಯಂ ಆದ ಕೂಡ್ಲೆ ಸ್ವತ್ತು ಸದರೀ ಕ್ರಯದಾರನ ವಶಕ್ಕೆ ಕೊಟ್ಟು ಬಿಡತಕ್ಕದ್ದಲ್ಲದೆ ಜಮೀನುಗಳು ಕ್ರಯದಾರನ ಹೆಸರಿಗೆ ರಿಜಿಸ್ಟರ ಆಗಿ ಡೆಪ್ಯುಟಿ ಕಮ್ಮಿಷನರವರಿಂದ ಸರ್ಟಿ ಮೊಹರಾದ ವಂದು ಸರ್ಟಫಿಕೇಟ್ ಸಹಾ ಅವನಿಗೆ ಕೊಡಲ್ಪಡುವದು ಜಮೀನು ತಪ್ಶೀಲು ವಿಷಯದಲ್ಲಾಗಲಿ ಅಂದಾಜ್ ಬೀಜವರಿ ವಿಷಯದಲ್ಲಾಗಲಿ ವುಂಟಾಗುವ ಗಲ್ತಿತ್ತಿಗೆ ಗವರ್ರಮೆಂಟನವರು ಜವಾಬ್ದಾರರು ಅಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಹರಾಜಿನ ದೆಸೆಯಿಂದ ನುಕ್ಸಾನಪಟ್ಟವರಾಗಿ ಯೆಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕ್ಕೊಳ್ಳಲಿಕ್ಕೆ ಸ್ವತಂತ್ರರಾಗಿ ಯಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಕೊಡಲ್ಪಡುವ ಆಖೈರ ಹುಕುಮಿನ ಷರತ್ತು ಬಂದೀಗೆ ಸದರೀ ಕ್ರಯುವು ವಳಪಟ್ಟು ನಡಿಯತಕ್ಕದ್ದು.

ತಾಲ್ಲೂಕು.	ಗ್ರಾಮ.	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು	ಜಮೀನು ತರಿಯೋ ಖುಷ್ಕಿಯೋ ಯಾ ಬಾಗಾಯಿತೋ ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ॥ ಕಟ್ಟಣಗಳು ಯಾವದಾದರೂ ಯಿರುತವೆಯೆ.	ಜಮೀನ್		ಅಂದಾಜಾ ಬೀಜವರೀ.			ಕಂದಾಯ			ಸಾಲ್ ಮಜಕೂರಿಗೆ ಕ್ರಯದಾರನಿಂದ ಸಲ್ಲತಕ್ಕ ಕ್ರಯದ ಮೊ॥ ಗುದಸ್ತಾ ಮಿ॥ (ಬಾಕೀ ಸಿವಾಯಿ)			
				ನಂಬರ್.	ಹೆಸರು.	ಖಂಡಿ	ಕೂ	ಪ.	ರೂ.	ಆ.	ಪೈ.				
ಜೇತಮಂಗಲ.	ಜೋಡಿ ವಾಡಮುತ್ತನಹಳ್ಳಿ	ಜೋಡಿದಾರ ನಾರಣಪ್ಪ	ಖುಷ್ಕಿ ತರೀ	ಪೂರಾ ಗ್ರಾಮ 0 0	0 0	38 32 71	13 14 7	12 2 14	ಜೋಡೀಕ್ವಿಟ್ರೆಂಟ ಸಹ 253	4	8	166	15	11	ಅಂದಾಜ ರೂಪಾಯಿ 150

ತಾರೀಖು 12ನೇ ಜುಲೈ ಸರ್ 1876ನೇ ಇಸವಿ ಸ್ಥಳ ಬವರಿಂಗ್‌ಪ್ಯಾಟೆ.

P. N. PURNAIYA,
For Dy. Commr.

TUMKUR DISTRICT.

Notice regarding an application of Bore Gauda for a certificate under Act XXVII of 1860.

ತುಮಕೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಚಿಕ್ಕನಾಯಕನಹಳ್ಳಿ ತಾಲ್ಲೂಕು ಜುಂಗನಹಳ್ಳಿ ಗ್ರಾಮದ ವಾಸಸ್ತನಾಗಿ ಯಿದ್ದ ಫೌತಿಯಾದ ಶಿದ್ದೇಗೌಡ ಯಂಬುವನಿಗೆ ಇತರರ ಯಿಂದ ಬರಬೇಕಾಗಿ ಯಿರುವ 950 ರೂಪಾ ಯಿಗಳು, ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಅಪೇಕ್ಷಿಸಿ ಯಿವನ ಮಗ ಬೋರೇಗೌಡ ಯಂಬುವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವೀ ಆಗಿಷ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರು ಮಾಡುವರ್ಯಾರಾದರೂ ಯಿದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 28ನೇ ಮಾಹೇ ಜೂನ್ 1876ನೇ ಇಸವೀ, ಮೊಕ್ಕಾಂ ತುಮಕೂರ್.

Notice regarding an application of Ramadasaiengar for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ;—ಹೊನ್ನವಳ್ಳೀ ತಾಲ್ಲೂಕು ನೊಣವಿನಕೆರೆ ಗ್ರಾಮದ ವಾಸಸ್ಥನಾಗಿ ಯಿದ್ದ ಘಾತೀಯಾದ ಹೊಸಮನೆ ಅಪ್ಪಂಣ್ಣೈಯಂಗಾರ್ರು ಯಂಬವನಿಗೆ ಇತರರಯಿಂದ ಬರಬೇಕಾಗಿರುವ 1000 ರೂಪಾಯಿಗಳು, ವಸೂಲುಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಈತನ ಮೊಂಮಗ ರಾಮದಾಸಯ್ಯಂಗಾರ್ರು ಯಂಬುವನು ದಾಖಲ್ ಮಾಡಿ ಇರುವ ಅರ್ಜೀಯನ್ನು 1876ನೇ ಇಸವಿ ಆಗಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಇದಕ್ಕೆ ತಕರಾರ್ ಮಾಡುವರ್‍ಯಾರಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಇರುತ್ತೆ.

Notice regarding an application of Gangamma for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಅರೆಹಳ್ಳಿ ಗ್ರಾಮದ ವಾಸಸ್ಥನಾಗಿಯಿದ್ದ ಘಾತೀಯಾದ ಕಾಮಶೆಟ್ಟಿ ಬಶೆಟ್ಟಿ ಯಂಬುವನಿಗೆ ಇತರರ ಇಂದಾ ಬರಬೇಕಾಗಿರುವ 800—0—0—ರೂಪಾಯಿಗಳು, ವಸೂಲುಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಇವನ ಹೆಂಡತಿ ಗಂಗಮ್ಮ ಯಂಬುವಳು ದಾಖಲ್ಮಾಡಿ ಇರುವ ಅರ್ಜಿಯನ್ನು 1876ನೇ ಇಸವಿ ಆಗಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರ್ ಮಾಡುವರ್‍ಯಾದಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖುದಿವಿ 12 ಘಂಟೆಗೆ ಹಾಜರಾಗಬೇಕಾಗಿರುತ್ತೆ.

ತಾರೀಖು 30ನೇ ಮಾಹೆ ಜೂನ್ 1876ನೇ ಇಸವಿ, ಮೊಕ್ಕಾಂ ತುಮಕೂರು.

Notice regarding an application of Timmasetti for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ, ಕಡಬ ತಾಲ್ಲೂಕು ತುರುವೇಕೆರೆ ಗ್ರಾಮದ ವಾಸಸ್ಥನಾಗಿ ಯಿದ್ದ ಘಾತೀಯಾದ ವೈಶ್ಯರ ವೆಂಕಟೇಶಶೆಟ್ಟಿ ಯಂಬುವನಿಗೆ ಇತರರಿಂದ ಬರಬೇಕಾಗಿ ಇರುವ 5000 ರೂಪಾಯಿಗಳು, ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಇವನ ಮಗ ತಿಮ್ಮಶೆಟ್ಟಿ ಯಂಬುವನು ದಾಖಲ್ ಮಾಡಿ ಇರುವ ಅರ್ಜಿಯನ್ನು 1876ನೇ ಇಸವಿ ಆಗಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರು ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಇರುತ್ತೆ.

ತಾರೀಖು 1ನೇ ಮಾಹೇ ಜುಲೈ 1876ನೇ ಇಸವೀ, ಮೊಕ್ಕಾಂ ತುಮಕೂರು.

ತಾರೀಖು 12ನೇ ಜುಲೈ 1876.

ಇದರಿಂದ ಸಕಲಜನಗಳಿಗೂ ತಿಳಿಸಲ್ಪಡುವದೇನಂದರೆ, ಈ ಕೆಳಗೆ ನಮೂದಿಸುವ ಜೋಡಿ ಗ್ರಾಮಗಳ ಬಾಬತು ಸರ್ಕಾರ್ ಹಣ ತಹಲ್ ವಸೂಲಾಗದ ಸಬಬ್ ಸದರೀ ಗ್ರಾಮಕ್ಕೆ ನಮೂದಾದ ಕಂದಾಯದ ಬಾಕೀ ಸಮಾಧಾನಕೋಸ್ಕರ ಜರ್ಜ ಗ್ರಾಮವು ಕುಣಿಗಲ್‌ನಲ್ಲಿ 1876ನೇ ಆಗಸ್ಟು 10ನೇ ಮುಕ್ಕಾಂನಲ್ಲಿ ಅಮಲ್‌ದಾರರ ಕಚೇರಿಯೊಳಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಂಬರ್	ಕಂದಾಯ ಕೊಡಬೇಕಾದವರ ಹೆಸರು.	ಗ್ರಾಮ, ಹಂಗಾಮಿ ಕಸಬೆ ತಾಲ್ಲೂಕು ಹೆಸರು.	1875-76ನೇ ಸಾಲಿನ ಬಾಕಿ.			ಪೂರ್ವದ ಬಾಕಿಗಳು.			ಇತರೆ ಬಾಕಿಗಳು.			ಒಟ್ಟು.			ಷರಾ.
[illegible]	ಸೂರಶಾಸ್ತ್ರಿ ಮತ್ತು 20 ಯಿಸಂಗಳು	ಕೆಂಪಸಾಗರ್ ಕೊತ್ತಗೆರೆ ಕುಣಿಗಲ್.	175	5	0	1	0	0	119	3	3	295	8	3	ಕಾಲ್ ಜೋಡಿ 417 9 0 ರೂಪಾಯಿಗಳು. ಈ ಪೈಕಿ 241 4 0 ರೂಪಾಯಿಗಳು ವಸೂಲಾಗಿರುತ್ತೆ.

Notice regarding an application of Jalamma for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ, ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ತಾಲ್ಲೂಕು ಬಿದರೆ ಗ್ರಾಮದ ವಾಸಸ್ತನಾಗಿ ಯಿದ್ದ ಘಾತೀಯಾದ ಬ್ರಂಹ್ಮಯ್ಯ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 500 ರೂಪಾಯಿಗಳು ವಸೂಲ್ ಮಾಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ ಯಿವನ ಮಗ ಮುಗುಟಪ್ಪಾ ಮೈನರ್ ಯಿವನ ತಾಯಿ ಜಾಲಮ್ಮ ಯಂಬುವಳು ದಾಖಲ್ ಮಾಡಿರುವ ಅರ್ಜಿಯನ್ನು 1876ನೇ ಇಸವಿ ಆಗಸ್ಟು ತಿಂಗಳು 9ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 12ನೇ ಮಾಹೆ ಜುಲೈ 1876ನೇ ಇಸವಿ, ಮೊಕ್ಕಾಂ. ತುಮಕೂರು.

E. S. LUDLOW,
Offg. Dy. Commr.

HASSAN DISTRICT.

Notice regarding an application of Surnarnappa for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟು ಡೆ॥ ಕ॥ ಕೋರ್ಟಿನಿಂದ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಮಂಜಿರಾಬಾದು ತಾಲ್ಲೂಕು ಮುತ್ತಿಗೇಹೋಬಳಿ ಹರಿಹಳ್ಳಿ ಗ್ರಾಮದಲ್ಲಿರುವ ಸೂರನಾರಣಪ್ಪನೆಂಬವನು ಘಾತೀ ಆದ ತನ್ನ ತಂದೆ ನಾರಣಪ್ಪ ಚಿಕ್ಕಪ್ಪ ನರಸೈಯ ಇವರುಗಳ ಸಾಲಾ ವಂದುಸಾವಿರ ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟುಮೇರೆ ಸರಟಿಫಿಕೇಟಿ ಕೊಡಿಸಬೇಕೆಂತಾ ಕೊಟ್ಟ ಅರ್ಜಿ ಫೈಸಲ್‌ಬಗ್ಯೆ ಸರ್ ಮಜಕೂರು ಅಗಸ್ಟು 7ನೇ ತಾರೀಖನ್ನ ನಿಷ್ಕರ್ಷೆ ಮಾಡಿರುವದ್ದರಿಂದ ತಕರಾರುಇರತಕ್ಕವರೆಲ್ಲ ಮೇಲೆಕಂಡ ತಾರೀಖು ಹಗಲು 10 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಜಾಹಿರು ಮಾಡಿಕೊಳ್ಳಬೇಕು.

ತಾ॥ 4—7—76.

Notice regarding an application of Dyavamma for a certificate under Act XXVII of 1860.

ಇದರಿಂದ ತಿಳಿಯಪಡಿಸುವದೇನಂದರೆ,—ಹಾಸನ ತಾಲ್ಲೂಕು ಸಾವಂತನಹಳ್ಳಿ ಗ್ರಾಮದಲ್ಲಿರುವ ಲಿಂಗೇಗವುಡನ ಹೆಂಡತಿ ದ್ಯಾವಂಮನೆಂಬವಳು ಘಾತೀಆದ ತನ್ನ ಗಂಡ ಲ್ಲಿಂಗೇಗವುಡನ ಸಾಲಾ 50 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟು ಮೇರೆ ಸರಟಿಫಿಕೇಟ್ ಕೊಡಿಸಬೇಕೆಂತಾ ಕೊಟ್ಟ ಅರ್ಜಿ ಫೈಸಲ್‌ಬಗ್ಯೆ ಸರ್ ಮಜಕೂರು ಅಗಸ್ಟು 7ನೇ ತಾರೀಖು ನಿಷ್ಕರ್ಷೆ ಮಾಡಿ ಇರುವದ್ದರಿಂದ ತಕರಾರು ಇರತಕ್ಕವರೆಲ್ಲಾ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟ್ ಇದ್ದ ಮೊಕ್ಕಾಂಗೆ ಹಾಜರಾಗಿ ಜಾಹಿರುಮಾಡಿಕೊಳ್ಳಬೇಕು.

ತಾರೀಖು 10ನೇ ಜುಲೈ ಸರ್ 1886

Notice of destruction of Criminal records of the Maharajandurga Taluk on the 20th September next.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದು ಯೇನಂದರೆ, ಲೇಟ್‌ಮಹಾರಾಜನ ದುರ್ಗದ ತಾಲ್ಲೂಕಿನ ಸರ್ 1862 ನೇ ಇಸವಿಯ ಲಾಗಾಯ್ತಿತು 1870ನೇ ಇಸವಿ ಡಿಶಂಬರ ಆಖ್ಯೆರು ವರಿಗಿನ ಕ್ರಿಮಿನಲ್ ಬಾಬಿನಲ್ಲಿರುವ ರಿಕಾರ್ಡನ್ನು 1867ನೇ ಇಸವಿ ಅಗಸ್ಟು 31ನೇ ಮರಕುಂ ಮೈಸೂರು ಗೆಜ಼ೆಟಿನ 460ನೇ ಪಾರ್ ನಲ್ಲಿ ಪ್ರಶಿದ್ಧ ಪಡಿಸಿರುವ ಜುಡಿಷಿಯಲ್ ಕಮ್ಮಿಷನರ ಸಾಹೆಬರವರಿಂದಾ ಯೇರ್ಪಡಿಸಲ್ಪಟ್ಟ ಜುಡಿಷಲ್ ರಿಕಾರ್ಡಿನ ನಾಶನ ಸಂಬಂಧವಾದ ರೂಲ್ಸಿನಮೇರೆ 1876ನೇ ಇಸವಿ ಸೆಪಟೆಂಬರ್ 20ನೇ ತಾರೀಖಿನಲ್ಲಿ ಹಾಸ್ಸ ಮೊಕ್ಕಾಂನಲ್ಲಿ ನಾಶನ ಪಡಿಸುವದರಲ್ಲಿ ಬರುತ್ತೆ ಯಾಗಿ ಆ ಕಾಗದಗಳಲ್ಲಿ ಶೇರಿ ಯಿರತಕ್ಕ ದಸ್ತೈವಜುಗಳಲ್ಲಿ ಯಾವ ಯಾವ ದಂನ್ನು ಯಾವ ಯಾವ ಕಕ್ಷಿಗಾರ ಹಾಜರ್ಮಾಡಿ ಯಿಧಾನೊ ಆಯಾಯ ಕಕ್ಷಿಗಾರ ಆಯಾಯು ದಸ್ತೈವಜನ್ನು ವಾಪಸು ಪಡಿಯ ಬೇಕೆಂಬ ಯಿಚ್ಛೆ ವುಳ್ಳವನಾಗಿದ್ದ ಪಕ್ಷದಲ್ಲಿ ಆ ಬಗ್ಯೆ ಅವನು ಮೇಲ್ಕಂಡ ತಾರೀಖಿನೊಳಗೆ ಯಿಲ್ಲಿಗೆ ಹಾಜರಾಗಿ ತೆಗದು ಕೊಳ್ಳತಕ್ಕದಿರುತ್ತೆ.—ತಾ॥ 13—7—76

Notice of sale of a coffee land in the Manjarabad Taluk on the 31st instant.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದು ಯೇನಂದರೆ,—ಮಂಜರಾಬಾದ್ ತಾಲ್ಲೂಕ್ ಮೂಡಗರೆ ಹೋಬಳಿ ಕೋಳೂರು ಫಿರಖಾ ಬಂಕೇನಹಳ್ಳಿ ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗುವ ಕಾಫೀ ಇತ್ತಲ್ ಜಮೀನನ್ನು ಅದೇಸ್ಥಳದಲ್ಲಿ ಮೇ ತಾರೀಖು 25ನೇ ಹಗಲು 11 ಘಂಟೆಲಾಗಾಯಿತು 2ಘಂಟೆವರಿಗೂ ಹರಾಜುಹಾಕಿಲ್ಪಡುತ್ತೆಂದು ಯೆಪ್ರೆಲ್ 8ರಲ್ಲು ಕೊಡಲ್ಪಟ್ಟ

ನೋಟೀಸು 76ನೇ ಇಸವಿ ಯೇಪ್ರೆಲ್ 22ನೇ ಮುಕ್ಕಾಂ 18ನೇ ನಂಬರು ಮೈಸೂರು ಗೆಜೆಟಿನ 2ನೇ ಭಾಗದ 183ನೇ ಪೇಜಿನಲ್ಲಿ ಪ್ರಕಟಿಸಿ ಇತ್ತಷ್ಟೆ ಆಪ್ರಕಾರ ಕ್ರಮವಾಗಿ ಹರಾಜು ಅಮಲ್‌ನಡಿಯಲಿಲ್ಲವಾದ್ದರಿಂದ ಸದರೀ ಬಾಬತು ಪ್ರದೇಶವನ್ನು ಇದೇ ಇಸವಿ ಜುಲೈ ತಾರೀಖು 31ನೇ ಹಗಲು 11 ಘಂಟೆ ಲಾಗಾಯಿತು 2 ಘಂಟೆವರಿಗೂ ಅದೇಸ್ಥಳದಲ್ಲಿ ಹರಾಜುಹಾಕಿಸಲ್ಪಡುವದನ್ನ ನಿಶ್ಚೈಸಿದೆ. ಆ ಕಾಲದಲ್ಲಿ ಹಾಜರಾಗಿ ಛಡದರಖಾಸ್ತು ಮಾಡಿದವರಿಗೆ ಸದರೀ ಜಮೀನು ಕೊಡಲ್ಪಡುತ್ತೆ. ಹರಾಜಿನಷರತ್ತುಗಳನ್ನು ಹರಾಜುಕೂಗಿಸುವ ಆಫೀಸರರು ಆ ಕಾಲದಲ್ಲಿ ಸಂಭಂಧಪಟ್ಟ ಜನರಿಗೆ ರೂಬರೂ ತಿಳಿಸ್ಯಾರು.

ಸನ್ 1876ನೇ ಇಸವಿ ಜುಲೈ ತಾರೀಖು 25ರ ವರಿಗೂ ಸದರೀ ಜಮೀನನ್ನ ತೆಗದುಕೊಳ್ಳುವದಕ್ಕೆ ಖಾಯಿಷ್ ಇರತಕ್ಕವರು ನಮ್ಮ ಆಫೀಸಿನಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು. ದರಖಾಸ್ತು ಬರದುಕೊಂಡಂಥಾವರು ಹರಾಜು ಕಾಲದಲ್ಲಿ ಆ ಸ್ಥಳದಲ್ಲಿ ಹಾಜರು ಇರಬೇಕು. ತಪ್ಪಿದರೆ ಅಂಥಾವರ ದರಖಾಸ್ತನ್ನ ಮಂಜೂರ್ಮಾಡತಕ್ಕ ಅಥವಾ ತಿರಸ್ಕರಿಸತಕ್ಕ ಅಧಿಕಾರವನ್ನು ಡಿಪಟಿ ಕಮ್ಮಿಷನರವರೇ ಇಟ್ಟುಕೊಂಡು ಇದ್ದಾರೆ.

ನಂಬರು 115ನೇ ಹಿತ್ತಲ್.

ಚೆಕ್ಕುಬಂದಿ.

ಪೂರ್ವಕ್ಕೆ—ದಾರಿ
ದಕ್ಷಿಣಕ್ಕೆ—ದಾರಿ
ಪಶ್ಚಿಮಕ್ಕೆ ಮುಂಜೆಗೌಡನ ಹಿತ್ತಲ್
ಉತ್ತರಕ್ಕೆ ಸದರೀಯವನ ಮನೆ

ಪೂರ್ವಪಶ್ಚಿಮ ಗಜ 12 ದಕ್ಷಿಣೋತ್ತರ 24 ಸಲಿಗಜ 288ಕ್ಕೆ ಯಕರೆ 0 ರೋಡ್ 0 ಪೋಲ್ 9 ಗಜ $15\frac{3}{4}$

ಬತಾರೀಖು 8ನೇ ಮಾಹೆ ಜುಲೈ ಸನ್1876ನೇ ಇಸವಿ, ಮೊಕ್ಕಾಂ ಹಾಸನ.

ಅತ್ತಿಗುಪ್ಪಾ ತಾಲ್ಲೂಕು ಕಚ್ಚೇರಿಯಿಂದ.

Notice of destruction of old Judicial records of the Attikuppa Taluk on the 1st September next.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವ ದೇನಂದರೆ ಜುಡಿಷಿಯಲ್ ಕಮ್ಮಿಷನರ್ ಸಾಹೇಬರವರ ಸರಕ್ಯುಲರ್ ಹುಕ್ಕುಂ ಪ್ರಕಾರ ತಾಲ್ಲೂಕು ಮಜಕೂರಿನಲ್ಲಿ ಯಿಟ್ಟು ಕೊಳ್ಳತಕ್ಕ ಶಿವಿಲ್ ಬಾಬು ಕಾಗದಗಳು ಅಂದರೆ ವರುಷ 5ಕ್ಕೆ ಮೇಲ್ಪಟ್ಟ 1870ನೇ ಇಸವಿ ಬಾಬತು ದಾವಾ ಅರ್ಜಿ, ಜಡ್ಜ್ ಮೆಂಟು ಡಿಕ್ರಿ ಈ ಕಾಗದಗಳು ಶಿವಾಯಿ ಬಾಕೀ ಯಾವತ್ತು ಅಂದರೆ ತಾಲ್ಲೂಕು ಮಜಕೂರು ಮತ್ತು ದಿಗರ್ ತಾಲ್ಲೂಕು ಯಾದಿಗಳು ಪೂಟು ಹುಕುಂಗಳು ರಿಪೋರ್ಟುಗಳು ವಿಶಿಷ್ಟ ಡೆರೀಗಳು ಮಾಹೇವಾರೀ ಸಾಲ ಝಾಡೆ ವಗೈರೇ ಲೆಕ್ಕಗಳು ಚಿಲ್ಲರೆ ನಡವಡಿಕೆಗಳು ದಸ್ತೈವಜುಗಳು ಇವಗಳು ಇದೇ ಇಸವಿ ಶಪಟಂಬರು ತಾರೀಖು 1ರಲ್ಲು ನಾಶಪಡಿಸುವದ್ಧರಿಂದ ಆ ಪೇಕ್ಷೆ ವುಳ್ಳ ಕಕ್ಷಿಗಾರು ಮೇಲ್ಕಂಡ ತಾರೀಖು ವಳಗಾಗಿ ಕೋರ್ಟಿಗೆ ಹಾಜರಾಗಿ ಅವರ್ರವರಿಗೆ ಬೇಕಾದ ದಾಖಲೆಗಳನ್ನ ಧಾರಾಳವಾಗಿ ತೆಗದು ಕೊಳ್ಳಬಹದು. ಅನಂತ್ರ ಆಪೇಕ್ಷಿಶಿದಲ್ಲಿ ದೊರೆಯ ಲಾರದು.

H. E. MOTTET,
Dy. Commr.

KADUR DISTRICT.

Notice regarding the destruction of certain papers whose description is given below, pursuant to the Circular of the Inspector General of Registration.

ಕಡೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರವರ ಆಫಿಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ,—ಮೈಸೂರು ಮತ್ತು ಕೊಡಗು ಶೀಮೆಗಳ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ಸನ್1875ನೇ ಇಸವೀ ಅಗಸ್ಟು 5ನೇ ಮುಕಾಂ ನಂಬರು 5ನೇ ಸರ್ಕಿಲರ್ ಅನುಸರಿಸಿ ಸನ್1866ನೇ ಇಸವೀ ಲಾಗಾಯಿತು ಸನ್ 1872ನೇ ಇಸವೀ ಮಾರ್ಚಿ ಆಖೈರ್ ವರಿಗಿನ ಕರೆಸ್ಪಾಂಡೆನ್ಸ್ ಅಂದರೆ ಸಬ್ ರಿಜಿಸ್ಟ್ರಾರು ಮತ್ತು ಕಕ್ಷಿಗಾರರು ಬರಕೊಂಡ ಅರ್ಜೀಗಳು, ಮತ್ತು ಇತರ ಆಫೀಸುಗಳಿಂದ ಬಂದ ಕನ್ನಡ ಯಾದಾಸ್ತುಗಳು, ಇತ್ತಿಲ್ಲಗಳು, ಅರ್ಜಿಗಳು, ಮತ್ತು ಕೆಲವು ಲೆಖ್ಖಗಳು, ಸಹಾ ನಾಶಪಡಿಸಬೇಕಾಗಿರುವದರಿಂದ ಗೆಜೆಟ ಮೂಲಕ ಯಲ್ಲಾಜನಗಳಿಗೆ ಪ್ರಸಿದ್ಧಪಡಿಸಿ ಇದೆ.

ಹಾಲೀ ಮೇಲ್ಕಂಡ ಮೇರೆ ಜಲಾಯಿಸಲ್ಪಡುವ ರಿಕಾರ್ಡಿನಲ್ಲಿ ದಸ್ತೈವಜುಗಳು, ಸರಟಿಫಿಕೇಟಗಳು, ಅಥವಾ ಇತರ ಸಾಧನಗಳು, ವಗೈರೆ ಈ ಆಫೀಸಿಗಾಗ್ಲಿ ಸಬ್ ರಿಜಿಸ್ಟ್ರಾರ್‌ಗಳ ಆಫೀಸಿಗಾಗ್ಲಿ ಹಾಜರ್ ಮಾಡಿದ್ದು ಇದ್ದರೆ ಈ ನೋಟಿಸ್ ಗೆಜೆಟನಲ್ಲಿ ಘಾಯಿಷ್

ಆದಲಾಗಾಯಿತು 2 ತಿಂಗಳವಳಗೆ ಈ ಆಫೀಸಿಗೆ ಖುದ್ದಾಗಿಯಾಗ್ಲಿ ಅರ್ಜೀಮೂಲಕ ಜಾಹಿರುಮಾಡಿಕೊಂಡಾಗಲಿ, ತಮ್ಮ ಸಾಧನಗಳನ್ನು ವಾಪಸ್ ಪಡಕೊಳ್ಳಬೇಕು. ಆಮೇರೆ ಪಡಕೊಳ್ಳದಿದ್ದರೆ, ಸದರೀ 2 ತಿಂಗಳವಾಯಿದೆ ಗುಜಾರಾದಕೂಡ್ಲೆ ಡಿಟೋ ಸರ್ಕಲರ್ ಮೇರೆಗೆ ಸದರೀ ರಿಕಾರ್ಡುಗಳನ್ನು ನಾಶಪಡಿಸಲಾಧೀತು. ಅನಂತರ ಬರುವ ಫಿರ್ಯಾದುಗಳನ್ನು ಕೇಳಲಾರದ್ದಾಗಿ ಯಲ್ಲಾ ಜನರಿಗೂ ಎಚ್ಚರಿಸಿಇಧೆ.

ಚಿಕ್ಕಮಗಳೂರ್, ತಾರೀಖು 29ನೇ ಜೂನ್ ಸನ್ 1876ನೇ ಇಸವೀ.

Notice calling upon one Nirvanamma to present herself before the Chikamagalur Sub-Registrar and take back the document presented by her for registration.

ಚಿಕ್ಕಮುಗಳೂರು ತಾಲ್ಲೂಕು ಬಿಂಡಗದ ಮಾಗಣಿ ನಿರ್ವಾಣ ದೇವರ ಮಠದ ಪುಟ್ಟಸಿದ್ಧಪ್ಪನ ಹೆಂಡತಿ ನಿರ್ವಾಣಮ್ಮನು ಚಿಕ್ಕಮುಗಳೂರು ತಾಲ್ಲೂಕು ಕರಿಕೆಪ್ಯಾಟೆಯಲ್ಲು ಇರುವ ಚನ್ನಮಲ್ಲಪ್ಪನ ಮಗ ಮರುಳಪ್ಪನಲ್ಲಿ ಲೇವಾದೇವಿ ನಡೆಸಿದ ಬಾಬತು ಬಾಕಿ ಆದ 600 ರೂಪಾಯಿಗೆ ಸದರೀ ಮರುಳಪ್ಪನಿಗೆ ಬರಕೊಟ್ಟ 600 ರೂಪಾಯಿನ ಭೋಗ್ಯ ದಸ್ತೈವಜು ರಿಜಿಸ್ಟ್ರೇಷನಗಾಗಿ ಸನ್ 1874ನೇ ಇಸವೀ ಏಪ್ರಲ್ ತಾರೀಖು 29ರಲ್ಲು ಸದರೀ ನಿರ್ವಾಣಮ್ಮನ ಮೊಖ್ತ್ಯಾರ್ ಸಿವಪ್ಪನಿಂದ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ಮುಂದೆ ಹಾಜರ್ಮಾಡಲ್ಪಟ್ಟದ್ದು ಸರಿಯಾದ ವಾಯಿದೆ ವೊಳಗೆ ಫೀಜು ಹಾಜರು ಮಾಡದೇ ತಪ್ಪಿದ ಸಬಬ್ ರಿಜಿಸ್ಟ್ರೇಷನ್ ತಿರಸ್ಕಾರ ಮಾಡಲ್ಪಟ್ಟು ಇದೆ. ಸದರೀ ದಸ್ತೈವಜು ವಾಪಸು ಪಡೆಯತಕ್ಕ ಬಗ್ಗೆ ಸದರೀ ನಿರ್ವಾಣಮ್ಮಗೆ ವಾಯಿದೇನಿಶೀ ನೋಟಿಸ್ ಜಾರಿಯಾಗಿ ಆ ವಾಯಿದೇ ಗುಜಾರಾಗಿ ಬಹಳ ದಿವಸವಾದಾಗ್ಯೂ ಅದ್ಯಾಪೀ ಹಾಜರಾಗದೇ 2 ವರುಷದ ಕಾಲ ಕಳದು ಇರುವಂತೆ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ್ ಮಾಹೇ ಮಜಕೂರ್ 3ನೇ ಮುಕ್ಕಾಂ ನಂಬರು 61ನೇ ಇತ್ತಿಲ್ಲೇ ತಲ್ಪಿರುವದರಿಂದ ಸದರೀ ತಮಸೂಕಿನಲ್ಲಿ ಕಂಡ ನಿರ್ವಾಣಮ್ಮನೇ ಆಗಲೀ ಅಥವಾ ಇವಳ ಕಡೆಯಿಂದ ಹಾಜರು ಮಾಡಿದ ಶಿವಪ್ಪನೇ ಆಗಲಿ ಇಲ್ಲದೇ ಕ್ರಮವಾಗಿ ಅಧಿಕಾರ ಹೊಂದಿದ ಬೇರೇ ಮುತಾಲೀಕನೇ ಆಗಲಿ ಈ ತಾರೀಖು ಲಾಗಾಯಿತು 2 ತಿಂಗಳ ವೊಳಗಾಗಿ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ್ ಮುಂದೆ ಷುರು ಕೊಡಲ್ಪಟ್ಟ ರಸೀದೀಸಹಿತ ಹಾಜರಾಗಿ ಐನ್ ದಸ್ತೈವಜು ವಾಪಸು ಪಡೆಯಬೇಕು. ಆ ಮೇರೇ ತೆಗದುಕೊಳ್ಳದಿದ್ದರೇ ರಿಜಿಸ್ಟ್ರೇಷನ್ ಆಕ್ಟು 83ನೇ ಸೆಕ್ಷನ್ ಅನುಸರಿಸಿ ಸದರೀ ತಮಸೂಕನ್ನು ನಾಶಪಡಿಸಲಾಧೀತು ವಾಯಿದೇ ಕಳದ ಅನಂತರ ಬರುವ ಫಿರ್ಯಾದುಗಳನ್ನು ಅಂಗೀಕರಿಸೋಣಾಗಲಿಕ್ಕೆ ಇಲ್ಲ,

ತಾರೀಖು 5ನೇ ಜುಲೈ 1876ನೇ ಇಸವೀ.

P. KRISHNA RAO,
Registrar.

Notice regarding the sale of occupied lands in the undermentioned taluks in satisfaction of Government dues.

ಕಡೂರು ಡಿಸ್ಟ್ರಿಕ್ಟ್ ಡೆ|| ಕಮಿಶ್ನರವರ ಕೋರ್ಟಿನಿಂದ.

1. ಇದರಿಂದ ತಿಳಿಸಲ್ಪಡುವದೇನಂದರೆ, ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಫ್ತಾದ್ದರಲ್ಲಿ ವಿಂಗಡಿಸಲ್ಪಟ್ಟ ಈ ಕೆಳಗೆ ಕಂಡ ಜಮೀನುಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ್ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ್ ಕೆಳಗೆ ನಮೂದಿರುವ ತಾಲ್ಲೂಕು ಆಯಾ ಗ್ರಾಮದಲ್ಲಿ ಚಾಲ್ತಿ ಇಸವೀ ಆಗಸ್ಟ್ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು, ಹರಾಜು ಆಯಾ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಷ್ಯಾಂಶಗಳೊಡನೆ ಜಮೀನುಗಳು ಜಡದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದ ಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಸೀಲ್‌ವಾರ್ ತೋರಿಸಲ್ಪಟ ಪ್ರಕಾರ 76—5—2 ರೂಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತ್ತೆ. ಜಮೀನ್ ತಪಶಿಲ್ ಬಗ್ಗೆ ಜುಲೈ 15ನೇ ತಾರೀಖಿನ ಗೆಜಟ 342ನೇ ಪುಟವನ್ನು ನೊಡತಕ್ಕದ್ದು.

Notice regarding the sale of occupied lands in the Lakvalli and Banavar Taluks in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಫ್ತಾದ ಈ ಕೆಳಗೆ ಕಂಡ ಜಮೀನುಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ್ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ್ ತರೀಕೆರೆ ವಗೈರೇ ತಾಲ್ಲೂಕು. ಕೆಳಗೆ ಕಾಣುವ ಗ್ರಾ

ಮೆದಲ್ಲಿ ಚಾಲ್ತೀ ಇಸವೀ ಆಗಸ್ಟ್ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು, ಹರಾಜು ಆಯಾ ಗ್ರಾಮದಲ್ಲಿ ಹಿಡುವಳೀ ಸಮಿಾಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಚಡದರಖಾಸ್ತುದಾರಗೆ, ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಸೀಲವಾರ್ ತೋರಿಸಲ್ಪಟ್ಟ ಪ್ರಕಾರ 58—15—3 ರೂಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುವದು. ಜಮೀನ ತಪಸೀಲ್ ಬಗ್ಯೆ 15ನೇ ಮಾರ್ಚಿ ಗೆಜಟ್ 343ನೇ ಪುಟವನ್ನು ನೋಡತಕ್ಕದ್ದು.

ತಾರೀಖು 12ನೇ ಜುಲೈ 1876.

ಇದರಿಂದ ಸಮಸ್ತರಿಗೂ ತಿಳಿಸಲ್ಪಡುವದೇನಂದರೆ, ರಾಮನೆಂಬ ವಬ್ಬ ಮನುಷ್ಯನಿಂದ ಬಗರ್ ಹುಕುಂ ಕಾಫೀಸಾಗುವಳೀ ಮಾಡಲ್ಪಟ್ಟಿತ್ತೆಂಬ ಇದರಡಿ ನಮೂದಿಸುವ ಒಂದು ಜಮೀನ 1876ನೇ ಆಗಸ್ಟು 1ನೇ ಮಾರ್ಚಿ ಬೆಳಿಗ್ಯೆ 11 ಘಂಟೆಗೆ ಚಿಕ್ಕ ಮುಗಳೂರಲ್ಲಿ ಕಡೂರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಕಚ್ಚೇರಿಯಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ತಾಲ್ಲೂಕ	ಮಾಗಣಿ	ಗ್ರಾಮ	ಕರ್ಾಹೆಸರು	ಚತುರ್ಗಡಿ.	ಬೀಜವರಿ.		
					ಎಕರೆ	ಗುಂಟೆ.	ಗಜ.
ಚಿಕ್ಕಮುಗಳೂರು.	ಕಡಗಲಿ ನಾಡು	ಬೆಟ್ಟದ ಮಳಲಿ.	ತೋಟದ ಗಡ್ಡೆ ವಾರೆ.	ಉತ್ತರಕ್ಕೆ ದನಗಳು ಹೋಗುವದಾರಿ ಬಾಂದ್ ಗುರುತು. ದಕ್ಷಿಣಕ್ಕೆ ಗುಂಡುಕಲ್ಲುಗಳಿಂದ ಕಟ್ಟಿದ ವಂದು ಗೋಡೆ ಮತ್ತು ಬಾಂದು. ಪೂರ್ವಕ್ಕೆ ಹೊಲದ ಅರಿಗಿನಲ್ಲಿ ಕಲ್ಲಿನಿಂದ ಕಟ್ಟಿದ ವಂದು ಗುರುತು, ಮತ್ತು ಬಾಂದು. ಪಶ್ಚಿಮಕ್ಕೆ ವಂದು ಜಮಿಾನಿನಅರುಗು ಮತ್ತು ಬಾಂದು.	10	7	49

ಸದರೀ ಜಮಿಾನು ಚಡದರಖಾಸ್ತುದಾರ್ರಿಗೆ ಬಿಡಲ್ಪಡುವದು. ಅಂತಾ ಚಡದರಖಾಸ್ತುದಾರು) ಹರಾಜು ಪೂರೈಸಿದಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ಸೇಕಡಾ ಇಪ್ಪತ್ತೈದು ಠೇವಣಿಯಿಟ್ಟು ಬಾಕೀ ಮೊಬಲಗನ್ನು ಆತಾರೀಖುಲಾಗಾಯಿತು 15 ದಿನಗಳೊಳಗಾಗಿ ಕೊಡತಕ್ಕದ್ದು. ಹಾಗೆ ಕೊಡದೇ ಇದ್ದರೆ, ಪ್ರಸಕ್ತವಾದ ಜಮೀನ ಪುನಹ ವಿಕ್ರಯಿಸಲ್ಪಟ್ಟು ಅದರಲ್ಲಿ ಬರುವ ಲುಕ್ಸಾನಿಗೆ ಮೊದಲು ದರಖಾಸ್ತುದಾರನೇ ಗುರಿಯಾಗತಕ್ಕದ್ದಾಗಿರುವದಲ್ಲದೆ ಸದರೀ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನು ಕಳಕೊಳ್ಳುವನು, ಮತ್ತು ಯೆರಡನೇ ಹರಾಜಿನಲ್ಲಿ ಜಾಸ್ತೀ ಯೇನಾದರೂ ಕಂಡು ಬಂದರೆ ಅದಕ್ಕೆ ಅವನಿಗೇನು ಬಾಧ್ಯತೆ ಇರಲಾರದು.

Notice regarding an application of Adivemma for a certificate under Act XXVII of 1860.

ಇದರಿಂದ ಸಮಸ್ತ ಜನರಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕ ಮುಗಳೂರ ತಾಲ್ಲೂಕು ಶುಕ್ರವಾರದಪ್ಯಾಟೆ ಶಾಂತ ಶೆಟ್ಟಿ ಹೆಂಡತಿ ಅಡಿವೆಂಮನು ಪಾತೀಪಟ್ಟ ತಂನ ಮೈದನ ಬಚೆಟ್ಟಿ ಮತ್ತು ಅವನ ಹೆಂಡತಿ ರುದ್ರಂಮ ಯಿವರ ಹೆಸರಿನಲ್ಲಿ ಯಿರತಕ್ಕ ಹೊರಗಿನ ಉದ್ರಿಗಳ ಭಾಬತು ಸುಮಾರು 1000 ರೂಪಾಯಿಗಳಂನ ವಸೂಲು ಮಾಡಿಕೊಳ್ಳುವ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ಸರಟಿಫಿಕೇಟ್ ಕೊಡಿಸಬೇಕಾಗಿ ಕೊಟ್ಟಿರುವ ಅರ್ಜೀ ಫೈಸಲ್ ಬಗ್ಯೆ ಬರುವ ಸರ್ ಮಜಕೂರು ಅಗಸ್ಟು ಮಾಹೆ ತಾರೀಖು 17ನೇ ದಿವಸ ನಿಶ್ಚೈಸಿ ಯಿರುವದ್ದರಿಂದ ತಕರಾರ್ ಉಳ್ಳವರು ಸದರೀ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದಿದೆ.

ಬತಾರೀಖು 10ನೇ ಜುಲೈ ಸರ್ 1876ನೇ ಇಸವಿ ಮೊಕ್ಕಾಂ ಚಿಕ್ಕ ಮುಗಳೂರು

P. KRISHNA RAO,
Dy. Commr.

COORG.

ಕೊಡಗು ಸುಪರಿಂಟೆಂಡೆಂಟ್ ಕಚ್ಚೇರಿಯಿಂದ.

ತಾರೀಖು 16ನೇ ಜೂನ 1876.

ಈ ಕೆಳಗೆ ನಮೂದಿಸಿರುವ ಹೆಸರುಗಳುಳ್ಳ ಮಲೆಗಳಲ್ಲಿ ಸನ 1876—77 ಮತ್ತು 77—78ನೇ ವರುಷಗಳಲ್ಲಿ ಆದ ಯಿಲಾಚೀ ಫಸಲನ್ನು ತೆಗದುಕೊಳ್ಳುವ ಹಕ್ಕನ್ನು ಕೆಳಗೆ ವಿವರಿಸಿರುವ ತಾರೀಖು ಮತ್ತು ಸ್ಥಳಗಳಲ್ಲಿ ಜಡದರಖಾಸ್ತುದಾರಗೆ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಪಡಕೊಂಡವನು ಸರಕಾರಕ್ಕೆ ಕೊಡತಕ್ಕ ಮೊಬಲಗನ್ನು ಪ್ರತಿ ವರುಷದ ಮಾರ್ಚಿ 31ನೇ ತಾರೀಖು ವಳಗೆ ಪಾವತೀ ಮಾಡಬೇಕಾಗಿರುತ್ತೆ.

3. ಹರಾಜಿನಲ್ಲಿ ಪಡಕೊಂಡಂಥಾವನು ಮರಗಳನ್ನ ಕಡಿಯತಕ್ಕ ವಿಷಯದಲ್ಲಿಯೂ ಮತ್ತು ಫಾರೆಸ್ಟಿಗೆ ಸಂಬಂಧಪಟ್ಟ ಯಿತರ ವಿಷಯದಲ್ಲಿಯೂ ಫಾರೆಸ್ಟ್ ಇಲಾಖೇ ವುದ್ಯೋಗಸ್ತರ ಹುಕ್ಕುಂ ಪ್ರಕಾರ ನಡೆದುಕೊಳ್ಳುವ ಬಗ್ಗೆ ಬದ್ಧನಾಗಿರತಕ್ಕದ್ದು.

ನಂಬರು	ನಂಬರು	ತಾಲ್ಲೂಕು.	ನಾಡು.	ಮಲೇ ಹೆಸರು.	ತುಂಡಿನ ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
1	1	ಮಡಿಕೇರಿ	ಮಡಿಕೇರಿ ಹಾಲೇರಿ ನಾಡು	ಪಾಂಡಿ ಮಲೆ	7ನೇ ಜಡಿಯಾಲದ ಮಲೇ ತುಂಡು	1876ನೇ ಆಗಿಸ್ಟು ತಾ॥ 15	ಮಡಿಕೇರೆ ತಾ॥ ಕಚ್ಚೇರಿಯಲ್ಲಿ
2	1	ಪಾಡಿನಾಕನಾಡು	ಪಾಡಿನಾಕನಾಡು	ಕೊಡವಂಜೇರಿ ಮಲೇ	9ನೇ ಬಂಜ್ಯತ್ತುಮಲೆ ಕೈಂಬುದೆರೆ ತುಂಡು	ಡಿಟೋ ತಾರೀಖು 16ರಲ್ಲು	ನಾಲು ನಾಡ ಮಹಲಿನಲ್ಲಿ
3	2	ಡಿಟೋ	ಡಿಟೋ	ಕೆಟ್ಟೊಳಿ ಭೀಮಣ್ಣನ ತಂಕರೆಯಾನೆ ಮೊಟ್ಟೆ ತೋಟಕ್ಕೆ ಸೇರಿಶಿಕೊಂಡಿದ್ದ 60 ಬಟ್ಟೆ ತುಂಡು.		ಡಿಟೋ	ಡಿಟೋ
4	3	ಡಿಟೋ	ಡಿಟೋ	ಆನೆಪಾರ್ರಿತುಂಡಿಗೆ ಸೇರಿಸಿಕೊಂಡಿದ್ದ ತುಂಡು.		ಡಿಟೋ	ಡಿಟೋ
5	4	ಡಿಟೋ	ಡಿಟೋ	ಜೋಯ ಮಾಡನ ಬ್ಯೇಸಣ್ಣ ಬಳಂಚಿ ತೋಟದ ತುಂಡಿಗೆ ಸೇರಿಸಿಕೊಂಡಿದ್ದ ತುಂಡು.		ಡಿಟೋ	ಡಿಟೋ
6	5	ಡಿಟೋ	ಡಿಟೋ	ಬ್ಳೆರಿ ಮಲೆ	ಮೊರಂಬುಮಲೆತುಂಡು	ಡಿಟೋ	ಡಿಟೋ
7	6	ಡಿಟೋ	ಡಿಟೋ	ಬೆಂಗೆಪಾರೆ ಮಲೇ	3ನೇ ಚೆರ್ಯಕೊಲ್ಲಿ ತುಂಡು	ಡಿಟೋ	ಡಿಟೋ
8	7	ಡಿಟೋ	ಡಿಟೋ	ತೊಲತ್ತುಮಲೇ	8ನೇ ಮಾಪಿಳ್ಳೆ ಕರಿಮಲೆ ನಡುವಂದೆರೆ ತುಂಡು	ಡಿಟೋ	ಡಿಟೋ
9	8	ಡಿಟೋ	ಡಿಟೋ	ಬೆಳ್ಳರಿ ಮಲೆಯಲ್ಲಿ ಸೋಮು ಅನುಭವದಲ್ಲಿರುವ ತುಂಡು ಯಿದರ ಕೆಳಗಣ ತುಂಡು ಸಹ ವಂದಾಗಿ ವಿಂಗಡಿಸಿದ್ದು.		ಡಿಟೋ	ಡಿಟೋ
10	9	ಡಿಟೋ	ಡಿಟೋ	ಪಾಡಿಯ ಮಲೆ	2ನೇ ತೋರಮಕು ಮಲೆ ತುಂಡು	ಡಿಟೋ	ಡಿಟೋ
11	10	ಡಿಟೋ	ಡಿಟೋ	ಬಳ್ಳರಿ ಮಲೆ	4ನೇ ಮುರುಕು ಮೊಟ್ಟೆದೆರೆ ತುಂಡು	ಡಿಟೋ	ಡಿಟೋ
12	11	ಡಿಟೋ	ಡಿಟೋ	ಬೆಂಗೆಪಾರೆ ಮಲೆ	6ನೇ ಕಾರೊಳತ್ತಮಲೆ ತುಂಡು	ಡಿಟೋ	ಡಿಟೋ
13	12	ಡಿಟೋ	ಡಿಟೋ	ತೊತ್ಯನ ಸೋಮು ಅನುಭವದಲ್ಲಿದ್ದ ಅರುವಳತ್ತು ಮಲೇ ತುಂಡು.		ಡಿಟೋ	ಡಿಟೋ
14	13	ಡಿಟೋ	ಡಿಟೋ	ಕೆಟ್ಟುಳಿ ಚಟ್ಟಿ ಚಣ್ಣನ ಮೋಯರ ಪೊಳೆ ತುಂಡಿಗೆ ಸೇರಿಸಿಕೊಂಡಿದ್ದ ತುಂಡು.		ಡಿಟೋ	ಡಿಟೋ
15	14	ಡಿಟೋ	ಡಿಟೋ	ಮೆರ್ಯಂಡ ಪೊನ್ನಪ್ಪನ ಬರ ತೋಟಕ್ಕೆ ಸೇರಿಸಿಕೊಂಡಿದ್ದ ತುಂಡು ನಿಡುಮಾನೆ ಸೋಮುನ ತುಂಡು ಪಾರೆಗೆ ಸೇರಿಸಿಕೊಂಡಿದ್ದ ತುಂಡು ಸಹಾ.		ಡಿಟೋ	ಡಿಟೋ
16		ಡಿಟೋ	ಡಿಟೋ	ಪಟ್ಟಡ ಮಲೆಯಲ್ಲಿ ಮೆರ್ಯಂಡ ಪೊನ್ನಪ್ಪನ ಅಂಗರೆಕುಪ್ಪ ತುಂಡಿಗೆ ಸೇರಿಸಿಕೊಂಡಿದ್ದ ತುಂಡು ಬಲ್ಯ ತೋಟದ ತುಂಡಿಗೆ ಸೇರಿಸಿಕೊಂಡಿದ್ದ ತುಂಡು ಸಹಾ.		ಡಿಟೋ	ಡಿಟೋ
17		ಡಿಟೋ	ಡಿಟೋ	ಮೆರ್ಯಂಡ ಪೊನ್ನಪ್ಪನು ತಕ್ಕಡೆ ತೋಟಕ್ಕೆ ಸೇರಿಸಿಕೊಂಡಿದ್ದ ತುಂಡು ಅಂಣಡಿಯನ ತಿಮ್ಮಯ್ಯನು ತಕ್ಕಡೆ ತೋಟಕ್ಕೆ ಸೇರಿಸಿಕೊಂಡಿದ್ದ ತುಂಡು ಸಹಾ.		ಡಿಟೋ	ಡಿಟೋ
18	15	ಡಿಟೋ	ಕಡಿಯತ್ತುನಾಡು.	ಪಳಿಯ ಮಲೆ	3ನೇ ಕೊಂಡ ಮಲೇ ತುಂಡು.	ಡಿಟೋ	ಡಿಟೋ

ಅನುಕ್ರಮ ನಂ.	ನಂಬರು.	ತಾಲ್ಲೂಕು.	ನಾಡು.	ಮಲೇ ಹೆಸರು.	ತುಂಡಿನ ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
19	16	ಡಿಟೋ	ಡಿಟೋ	ಆಯಿರ ಮಲೆ	2ನೇ ತಾಳತ್ತು ಮಲೆ ತುಂಡು	ಡಿಟೋ	ನಾತನಾಡಿನ
20	17	ಡಿಟೋ	ಡಿಟೋ	ಪರಿಯಮಲೆ	2ನೇ ಐಱಪರಿಯ ಮಲೆ ತುಂಡು	ಡಿಟೋ	ಹಾಲಿನಲ್ಲಿ
21	18	ಡಿಟೋ	ಕುಯಂಗೇರಿ ನಾಡು	ಪಟ್ಟತ್ತು ಮಲೆ	2ನೇ ತಳಮೆತೋಟದ ತುಂಡು	29ನೇ ಡಿಟೋ	ಡಿಟೋ
22	19	ಡಿಟೋ	ಡಿಟೋ	ಕುಯಿನಾಲದ ಮಲೆ	3ನೇ ಮುಗ್ಗಣಿ ತುಂಡಿನಲ್ಲಿ ಕುಟ್ಟೆಟ್ಟಿ ಐಯ್ಯಪ್ಪನವರಿಗೆ ವಿಂಗಡಿಸಿರುವ ಜಾಗ ಏನಹ	ಡಿಟೋ	ಬೆಂಗುನಾಡು ಕಚ್ಚೇರಿಯಲ್ಲಿ ಡಿಟೋ
23	20	ಡಿಟೋ	ಬೆಂಗುನಾಡು	ಕೊಪ್ಪಟ್ಟಿ ಮಲೆ	ಪಿಲ್ಲುಮೊಟ್ಟೆ ದೆರೆ ತುಂಡು	ಡಿಟೋ	ಡಿಟೋ
24	21	ಡಿಟೋ	ಡಿಟೋ	ಜಟ್ಟ ಮಲೆ	16ನೇ ಭೀಮಾಗಡ ದೆರೆ ತುಂಡು	ಡಿಟೋ	ಡಿಟೋ
25	22	ಡಿಟೋ	ಡಿಟೋ	ಕೊಪ್ಪಟೆ ಮಲೆ	15ನೇ ಪುಳಿ ತೋಟದಲು ಅಡಿಕೇ ತೋಟದ ತುಂಡು ವಂದು ಹದಿನಾರನೆ ಅಮ್ಮತ್ವನ ತೋಟದ ತುಂಡುಸಹ	ಡಿಟೋ	ಡಿಟೋ
26		ಡಿಟೋ	ಡಿಟೋ	ಡಿಟೋ	13ನೇ ಕುರಿಬೀಡು ಅಡಿಕೇ ತೋಟ 1, 14ನೇ ಪುಳಿ ತೋಟದ ತುಂಡು 1, ವಿಷ್ಣು ಮೂರ್ತಿ ದೇವಾರ ಕಾಡಿನಲ್ಲು 15 ಬುಡಲೊ ಲ ಸಹ	ಡಿಟೋ	ಡಿಟೋ
27	23	ಡಿಟೋ	ತಾವುನಾಡು	ಮಡತ್ತ ಮಲೆ	2ನೇ ಐನು ಮಡತ್ತಮಲೆ ತುಂಡು	25ನೇ ಡಿಟೋ	ತಾವುನಾಡು ಕಚ್ಚೇರಿ
28	24	ಡಿಟೋ	ಡಿಟೋ	ಜಂಗಿರಕಾನದ ಮಲೆ	2ನೇ ತೊಟ್ಟಂಜೇರಿ ತುಂಡು	ಡಿಟೋ	
29	25	ಡಿಟೋ	ಡಿಟೋ	ಮಡತಾನದ ಮಲೆ	2ನೇ ಬಾಚರಡಿ ತುಂಡು	ಡಿಟೋ	ಡಿಟೋ
30	26	ಡಿಟೋ	ಡಿಟೋ	ಯಲ್ಲುರಿ ಮಲೆ	2ನೇ ಕರಿಂಜಗಟ್ಟು ಮಲೆತುಂಡು	ಡಿಟೋ	ಡಿಟೋ
31	27	ಡಿಟೋ	ಡಿಟೋ	ಡಿಟೋ	1ನೇ ಪೊಂಗಾಲದ ತುಂಡು	ಡಿಟೋ	ಡಿಟೋ
32	28	ಡಿಟೋ	ಡಿಟೋ	ಡಿಟೋ	4ನೇ ಐಳತ ಮಲೆ ತುಂಡು	ಡಿಟೋ	ಡಿಟೋ
33	29	ಡಿಟೋ	ಡಿಟೋ	ಜಟ್ಟ ಮಲೆ	3ನೇ ಜಟ್ಟೆಮಲೆ ಐಱ ತುಂಡು	ಡಿಟೋ	ಡಿಟೋ
34	30	ಡಿಟೋ	ಡಿಟೋ	ಮಾಡಂಗುಂದ ಮಲೆ	1ನೇ ತಕ್ಕು ಮಲೆ ತುಂಡು	ಡಿಟೋ	ಡಿಟೋ
35	31	ಡಿಟೋ	ಡಿಟೋ	ತುರವೆತಾಟ್ಟು ಮಲೆ	1ನೇ ಅಡಿಕ್ಕು ದೆರೆ ತುಂಡು	ಡಿಟೋ	ಡಿಟೋ
36	1	ಯಡೆನಾಲ್ಕುನಾಡು	ಯಡೆನಾಲುಕ್ಕನಾಡು	ಹೆಗ್ಗಳದ ಮಲೆ	9ನೇ ತೋಟದ ಕಾಡು ತುಂಡು	18ನೇ ಡಿಟೋ	ಎಡೆನಾಲ್ಕುನಾಡು ತಾಲ್ಲೂಕು
37	2	ಡಿಟೋ	ಬೆಪ್ಪುನಾಡು	ಕಟ್ಟಯತ್ರ ಮಲೆ	2ನೇ ಐಱ ಕಟಿಗುತ್ತು ಮಲೆ ತುಂಡು	ಡಿಟೋ	ಡಿಟೋ
38	3	ಡಿಟೋ	ಡಿಟೋ	ಡಿಟೋ	ತೂವಲೆ ಕೊಲ್ಲಿ ತುಂಡು	ಡಿಟೋ	ಡಿಟೋ
39	4	ಡಿಟೋ	ಡಿಟೋ	ಡಿಟೋ	6ನೇ ಪಚಕಟ್ಟಿಮಲೆತುಂಡು	ಡಿಟೋ	ಡಿಟೋ
40	1	ಕಿಗ್ಗಟ್ಟುನಾಡು	ಪಟ್ಟತ್ತುನಾಡು	ಪೊಳೆಯಾಟೆಮಲೆ	ಐಱಪೊಳೆಯಾಟೆ ಕಾಪುತುಂಡು	28ನೇ ಡಿಟೋ	ಕಿಗ್ಗಟ್ಟುನಾಡು ತಾಲ್ಲೂಕಿನಲ್ಲಿ
41	2	ಡಿಟೋ	ಅಂಜಿಗೆರಿನಾಡು	ಆಳ್ಯಲುಮಲೆ	1ನೇ ಪೊನಂಬಾರೆ		
42	3	ಡಿಟೋ	ಡಿಟೋ	ಡಿಟೋ	2ನೇ ಸಂಗೆಮಾನಿ	ಡಿಟೋ	ಡಿಟೋ
43	4	ಡಿಟೋ	ಡಿಟೋ	ಡಿಟೋ	3ನೇ ದೊಡ್ಡ ಕಾಂಬಾಡಿ	ಡಿಟೋ	ಡಿಟೋ
44	5	ಡಿಟೋ	ಡಿಟೋ	ಡಿಟೋ	4ನೇ ವಲ್ಲಿಕಟ್ಟ ಮಲೆ	ಡಿಟೋ	ಡಿಟೋ
45	6	ಡಿಟೋ	ಡಿಟೋ	ಡಿಟೋ	5ನೇ ಗಜ್ಜೆಮುಂಡೆ ತುಂಡು	ಡಿಟೋ	ಡಿಟೋ
46	7	ಡಿಟೋ	ಡಿಟೋ	ಡಿಟೋ	6ನೇ ಆಳ್ಯಲು	ಡಿಟೋ	ಡಿಟೋ
47	8	ಡಿಟೋ	ಡಿಟೋ	ಡಿಟೋ	7ನೇ ಕಟ್ಟ ಕಟ್ಟ	ಡಿಟೋ	ಡಿಟೋ
48	9	ಡಿಟೋ	ಡಿಟೋ	ಡಿಟೋ	8ನೇ ಸಣ್ಣ ಕಾಂಬಾಡಿ	ಡಿಟೋ	ಡಿಟೋ
49	1	ನಂಜರಾಯ ಪಟ್ಟಣ	ಗಡಿನಾಡು ಮುತ್ತನಾಡು	ಹಮಿಯಾಲದ ಮಲೆ	ಭೆಂಗಮೊಟ್ಟೆಮಲೆ ತುಂಡು	17ನೇ ಡಿಟೋ	ಗಡಿನಾಡು ಕಚ್ಚೇರಿಯಲ್ಲಿ
50	2	ಡಿಟೋ	ಡಿಟೋ	ತಲೆನೀರು ಮಲೆ	ದೇವರ ಸುಟ್ಟ್ಯಾತಮಲೆತುಂಡು	ಡಿಟೋ	ಡಿಟೋ
51	3	ಡಿಟೋ	ಡಿಟೋ	ಹಮಿಯಾಲದ ಮಲೆ	ಅಪ್ಪೂಗಳದಮಲೆ ತುಂಡು	ಡಿಟೋ	ಡಿಟೋ

ಜಂಮಂದಭೂಮಿ ಸ..ನಮಾಡಿದ್ದನ್ನು ಸರಕಾರ ಹುಕುಂಮೇರೆ ವಾಯಿದೆಯಲ್ಲಿ ಬಿಡಿಸಿಕೊಳ್ಳದೆ ಹೋದ್ದರಿಂದ ಜಂಮ ಜಪ್ತು ಮಾಡಿದಕಾರಣ ಈ ಬಗ್ಯೆ ಚೀಪಕಮ್ಮಿಷನರ ಸಾಹೇಬರವರಿಂದ ಕೊಡಲ್ಪಟ್ಟಿದ್ದ ಜಂಮ ಸನ್ನದುಗಳು ಹಾಜರಾಗದೆ ಹೋದ್ದರಿಂದ ಈ ಕೆಳಗೆ ಬರೆದ ಕುಳಗಳ ಜಮೀನಿನಸನ್ನದುಗಳು ರದ್ದು ಮಾಡಲ್ಪಟ್ಟಿವೆ.

ನಂಬರು	ಚೀಪ ಕಮ್ಮಿಷನರವರಿಂದ ಕೊಡಲ್ಪಟ್ಟ ಸನದು ನಂಬರು ತಾರೀಖು.	ನಾಡು	ಗ್ರಾಮ ರೈತಯಾನೆ ಸನ್ನದುದಾರನ ಹೆಸರು.	ವರ್ಗದಹೆಸ್ಸರು.	ವರ್ಗದಖುಲ್ ಜಮೀನು	ಕೆ. ತಪಶೀಲ್. ದರ 5ರ ಜಮ್ಮ	ದರ 3ರಲುಂಬಳಿ
	ಮಡಿಕೇರಿತಾಲೂಕು.						
1	ಈಶ್ವರಸಂ|| ನಿಜಶ್ರಾವಣ ತಾ| 17ರ ಮಂಜಿರಾ ಜರ ನಿರೂಪ	ಹೊರೂರ ನಾ ರೊಕ್ಲುನಾಡು	ಕೆರಕಲು ನೆಗದಾಳೇ ಗ್ರಾ|| ಜಂ| ಬರ್ಗೀ ಜನ್ನ	ಗಂಡಿಗದ್ದೆ ವರ್ಗ	175	175	0
2	847ನೇ ಅಗಟಂಬರ ತಾ|| 30 ನಂಬರ 80ರ ನಿರೂಪ	ಕಗ್ಗೊಡ್ಲುನಾಡು	ಬಿಳಿಗೇರಿ ಗ್ರಾ|| ಜಂ|| ಕೊಯಿವಾರ ಕೋಟಯ್ಯಗೆ	ಕೊಕ್ಕ ಬಲ್ಯತ್ತಿವರ ವರ್ಗ	$328\frac{3}{4}$	$328\frac{3}{4}$	0
	ಪಾಡಿನಾಲುನಾಡತಾಲೂಕು.						
1	1844ನೇ ಏಪ್ರೆಲ ತಾ||30 ನಂ 78ರ ನಿರೂಪ	ಪಾಡಿನಾಲ್ಕು ನಾಡು	ಕುಂಜ ಗ್ರಾಮದ ಜಂ|| ಕುತ್ತ್ಯೂಟಪಳ್ಳಿ	ಕುತ್ತ್ಯೂಂಟಂಡ ವೆಕೆಯನಾ ಕತೆವರವರ್ಗ	110	110	0
2	1839ನೇ ಅಗಟಂಬರ ತಾ| 30 ನಂ|| 71ರ ನಿರೂಪ	ಡಿಟೋ	ಕೊಳಕೆರೆ ಜಮ್ಮಕುಪ್ಪೊಟ್ಟುಆಲಿ ಮತ್ತು ನಿನ್ನತಮ್ಮವುಮ್ಮರನೆ	ಕುಪ್ಪೊಡಂಡ ವರ್ಗ	$206\frac{1}{4}$	$106\frac{1}{4}$	100
3	1847ನೇ ಅಗಟಂಬರ ತಾ|| 30 ನಂ|| 130ರ ನಿರೂಪ	ಕಡ್ಯತ್ತುನಾಡು	ಪಾಲಂಗಾಲದ ಜಂ|| ಪುಲಿಯಂಡವುತ್ತಯ್ಯ	ಜಲ್ಲಿಕುಂಡ ತೆವರವರ್ಗ	130	130	0
4	1839ನೇ ಶಪಟಂಬರ ತಾ|| 21 ನಂ| 21ರ ನಿರೂಪ	ಕುಯ್ಯಂಗೇರಿ ನಾಡು	ಬಟ್ಟಗೆರೆ ಜಂ|| ಹ|| ಕಾಟೂರು ತಿಮ್ಮ	ಚಂಡಾದೀರ ಆಕತೆವರವರ್ಗ	145	45	100
5	1852ನೇ ಡಿಶಂಬರ ತಾ|| 31 ನಂ|| 253ರ ನಿರೂಪ	ತಾವುನಾಡು	ಕಂಣಿಮಾನ ಗ್ರಾ|| ಜಂ|| ಜೋಗಿನಿಂಗ	ಅರಮನೆತರದ ಮಲ್ಲಟಕ್ಯೆಲ್‌ಕುಡಿ ತೆವರ ವರ್ಗ	$132\frac{1}{2}$	$152\frac{1}{2}$	0
6	1865ನೇ ಏಪ್ರೆಲ ತಾ|| 2 ನಂ|| 102ರ ನಿರೂಪ	ಡಿಟೋ	ಕಂಣಿಮಾನ ಗ್ರಾ|| ಜಂ|| ಮಾಪಿಳೆ ಅಲ್ಲಿಗೆ	ಕೊಂಗಮಾನಿತೆವರವರ್ಗ	130	130	0

ಜುಮ್ಲಾ ಸನ್ನದು 8ಕ್ಕೆ ರೂಪಾಯಿ 16—0—0 ಕಳುಹಿಸಿಇದೆ.

ತಾರೀಖು 12ನೇ ಮೇ ಸರ್ 1876ನೇ ಇಸವೀ.

E. Shaw,
Offg. Supt.

ಸರ್ 1876ನೇ ಇಸವಿ ಜೂನ ತಿಂಗಳ ಕಾಲಸ್ಥಿತಿ ರಿಪೋರ್ಟು.

ಕೋಲಾರ ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳಲ್ಲಿ ಸರಾಸರಿ 2 ಇಂಚ್ಸ $65\frac{1}{2}$ ಸೆಂಟನ್ಸಗಳ ಮಳೆ ಬಿದ್ದಿರುತ್ತೆ ತಿಂಗಳ ಕಡೇಭಾಗದಲ್ಲಿ ಬಿರುಘಾಳಿಯೊಡನೆ ಮೋಡವಾಗಿ ಯಿತ್ತು ಈ ತಿಂಗಳಲ್ಲಿ 2327—10—9 ಕಂದಾಯವುಳ್ಳ ಜಮೀನ ಸಾಗುವಳಿ ಬಗ್ಯೆ ತೆಗದುಕೊಳ್ಳಲ್ಪಟ್ಟಿತು ಜಮೀನ ರಾಜೀನಾಮೆಗಳು ಬರಲಿಲ್ಲವು.

ಈ ತಿಂಗಳಲ್ಲಿ ರಾಗಿ, ಅವರೆ, ತೊಗರಿ, ಭತ್ತ ಯಿವು ಪೇರಾವಾದವು ಯಾವ ಫಸಲೂ ಕಟಾವಾಗಲಿಲ್ಲ.

ಬೆಳೆ.—ಬೆಳೆಯಲ್ಲಿರುವ ಪೈರುಗಳು ಚನ್ನಾಗಿರುವದಾಗಿ ರಿಪೋರ್ಟು ಬಂದಿರುತ್ತೆ.

ಆರೋಗ್ಯ.—ಜ್ವರಉಪದ್ರವ ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚನ್ನಾಗಿತ್ತು ಉಖಾಲ ಜುಲಾಬ ಉಪದ್ರವವು ಕ್ಷೀಣವನ್ನು ಹೊಂದುತ್ತಲಿಧೆ ಯಿದರಿಂದ 60 ಮಂದಿ ಸತ್ತರೆಂದು ರಿಪೋರ್ಟು ಆಗಿರತ್ತೆ ಹಿಂದಿನ ತಿಂಗಳಲ್ಲಿ 302 ಮಂದಿ ಸತ್ತರು ದರೋಬಸ್ತು ಕಾರಣಗಳಿಂದ ಮೃತಪಟ್ಟವರ ತಪಸೀಲ ಯಿನರಡಿ ನಮೂದಿಸಿರುತ್ತೆ.

	1876ನೇ ಮೇ ತಿಂಗಳಲ್ಲಿ	1876ನೇ ಜೂನ್ ತಿಂಗಳಲ್ಲಿ		1876ನೇ ಮೇ ತಿಂಗಳಲ್ಲಿ	1876ನೇ ಜೂನ್ ತಿಂಗಳಲ್ಲಿ
ಉಖಾಲ್ ಜುಲಾಬಿನಿಂದ	302	60	ಹೊಟ್ಟೇನೋವಿನಿಂದ	37	30
ಜ್ವರದಿಂದ	338	289	ಅಕಸ್ಮಾತ್ನಿಂದ	14	20
ಶಿಡುಬಿನಿಂದ	12	7	ಇತರ ರೋಗಗಳಿಂದ	173	140

ಈ ತಿಂಗಳಲ್ಲಿ 398 ಜನನಗಳಾದವು ಕಳದ ತಿಂಗಳಲ್ಲಿ 267 ಜನನಗಳು.

ಜಾನವರ್,—ಜಾನವರಗಳ ಪೈಕೀ 2483 ಕಾಲ್ನಡಿಗಳು ಸತ್ತವೆಂಬದಾಗಿ ರಿಪೋರ್ಟಾಗಿರುತ್ತೆ. ಕಳದ ತಿಂಗಳಲ್ಲಿ 3294 ಸತ್ತವು ತಪಸೀಲ್ ಈ ಕೆಳಗೆ ನಮೂದಿಸಲ್ಪಡುತ್ತೆ.

	1876ನೇ ಮೇ ತಿಂಗಳಲ್ಲಿ	1876ನೇ ಜೂನ್ ತಿಂಗಳಲ್ಲಿ		1876ನೇ ಮೇ ತಿಂಗಳಲ್ಲಿ	1876ನೇ ಜೂನ್ ತಿಂಗಳಲ್ಲಿ
ಹಸುಗಳು ಮತ್ತು ಹೋರಿಗಳು	1266	773	ಕುದರೆಗಳು	28	15
ಯಮ್ಮೆ ಕೋಣಗಳು	411	219	ಕತ್ತೆಗಳು	34	24
ಮೇಕೆ ಮತ್ತು ಕುರಿಗಳು	1555	1452	ಜುಮ್ಲಾ	3294	2483

ನಿರಖು.—ಮುಖ್ಯವಾದ ಆಹಾರ ಜಿನಿಸಿಗಳ ನಿರಖು ಯಾಥಾ ಪ್ರಕಾರವಾಗಿರುತ್ತೆ.

B. KRISHNAIENGAR,
Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ,—ಕವಲೇದುರ್ಗ ಮತ್ತು ನಗರತಾಲ್ಲೂಕುಗಳಲ್ಲಿ ಬಹಳ ಮಳೆ ಬಿತ್ತು ಆದರೆ ಇತರ ತಾಲ್ಲೂಕುಗಳಲ್ಲಿ ಮಳೆ ಬಹಳ ಕೊಂಚ.

ಫಸಲು,—ಮಲನಾಡಿನಲ್ಲಿ ಗನ್ನ ಮತ್ತು ಭತ್ತ ಚನ್ನಾಗಿರುವಹಾಗೆ ರಿಪೋರ್ಟಾಗಿರುತ್ತೆ. ಮೈದಾನುತಾಲ್ಲೂಕುಗಳಲ್ಲಿ ಭೂಮಿ ವುತ್ತು ರಾಗಿ ಮತ್ತು ಜೋಳ ಬಿತ್ತಿರುತ್ತಾರೆ.

ಆರೋಗ್ಯ,—ಸಾಗರ್ ಮತ್ತು ಕವಲೇದುರ್ಗ ತಾಲ್ಲೂಕುಗಳು ವಿನಾ ಕಡಿಮೆ ಯಲ್ಲ ತಾಲ್ಲೂಕುಗಳಲ್ಲಿಯೂ ಖೈಜುಲಾಬ್ ವ್ಯಾಪಿಸಿತ್ತು.

ಈ ತಿಂಗಳಲ್ಲಿ ಯೇಕೋನು 1144 ಮಂದಿ ಸತ್ತರು. ಈ ಪೈಕೀ ಖೈಜುಲಾಬಿನಿಂದ ಸತ್ತವರು 788 ಮಂದಿ. ಇದು ಕಳೆದ ತಿಂಗಳಿಗಿಂತಲು 255 ಹೆಚ್ಚಾಗಿರುತ್ತದೆ. ಈ ತಿಂಗಳಲ್ಲಿ ಯೇಕೋನು 401 ಜನನಗಳಾದಂತೆ ರಿಜಿಸ್ಟರಾಗಿರುತ್ತೆ.

ಕಾಲ್ನಡೆ,—ಜಾನವರ್ ಪೈಕೀ 6892 ಸತ್ತವು. ಈ ಪೈಕೀ ಹೆಚ್ಚು ಸಂಖ್ಯೆಯು ಆಹಾರವಿಲ್ಲದೆ ಸತ್ತಿರುತ್ತೇಹೊರ್ತು ರೋಗದಿಂದಲ್ಲ.

ನಿರಖು,—ಯಥಾಪ್ರಕಾರವಿರುತ್ತೆ.

W. J. CUNINGHAM,
Offg. Dy. Commr.

ಚಿತ್ರದುರ್ಗ ಡಿಸ್ಟ್ರಿಕ್ಟು.

ಮಳೆ.—ದೊಡ್ಡೇರಿ ತಾಲ್ಲೂಕು ವಿನಾ ಡಿಸ್ಟ್ರಿಕ್ಟಿನ ಕಡಿಮೆ ಯೆಲ್ಲ ತಾಲ್ಲೂಕುಗಳಲ್ಲಿಯೂ ಮಳೆ ಬಿದ್ದಿರುತ್ತೆ ಪ್ರತಿ ತಾಲ್ಲೂಕು ಹೆಡ್ಕ್ವಾರಟರ್ನಲ್ಲಿಯೂ ಈ ಕೆಳಗೆ ವಿವರಿಸಿರುವ ಪ್ರಕಾರ ಮಳೆ ಬಿದ್ದಹಾಗೆ ಅಳೆಯಲ್ಪಟ್ಟಿರುತ್ತೆ.

	ಇಂಚ್ಸ್.	ಸೆಂಟ್ಸ್.		ಇಂಚ್ಸ್.	ಸೆಂಟ್ಸ್.
ಚಿತ್ರದುರ್ಗ. ..	1	90	ಬೂದಿಹಾಳ್. ..	0	20
ದಾವಣಗೆರೆ ..	1	60	ಹೊಸದುರ್ಗ. ..	0	95
ಕಣಕುಪ್ಪಾ. ..	1	87½	ಪಾವಗಡ. ..	3	10
ಹಿರಿಯೂರು. ..	1	76			

ಹಗಲು ಮೋಡವಾಗಿತ್ತು ಬಿರುಘಾಳಿ ವ್ಯಾಪಿಸಿತ್ತು.

ಫಸಲು.—ಈ ತಿಂಗಳಲ್ಲಿ ಜವರೆ, ಎಳ್ಳು, ಸಜ್ಜೆ, ವುದ್ದು, ಹೆಸರು, ಪೇರಾವಾದವು ಕೆಲವು ಕಡೆಗಳಲ್ಲಿ ಯೆಳೆಪೈರು ಚನ್ನಾಗಿರುವದಾಗಿಯೂ, ಯಿತರ ಕೆಲವುಕಡೆಗಳಲ್ಲಿ ಮಳೆ ಸಾಲದರಿಂದ ವಣಗುವದಾಗೂ ರಿಪೋರ್ಟಾಗಿರುತ್ತೆ.

2158-8—0 ರೂಪಾಯಿಗಳ ಕಂದಾಯ ಬಾಳುವ ಜಮೀನು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟಿರುತ್ತೆ.

ಆರೋಗ್ಯ.—ಜನಾರೋಗ್ಯ ಚನ್ನಾಗಿರಲಿಲ್ಲ ಈ ತಿಂಗಳಲ್ಲಿ 592 ಮಂದಿ ಸತ್ತರು ಕಳೆದತಿಂಗಳಲ್ಲಿ 694 ಮಂದಿ ಸತ್ತಹಾಗೆ ರಿಪೋರ್ಟಾಗಿರುತ್ತೆ.

ಕಾಲ್ನಡೆ.—ಜಾನವರಿನ ಸ್ಥಿತಿ ಬಹಳ ಕೆಟ್ಟದ್ದಾಗಿತ್ತು ಗೋಮಾರಿ ರೋಗದಿಂದಲೂ ಮತ್ತುಮೇವಿಲ್ಲದೆಯೂ 10316 ಕಾಲ್ನಡೆ ಸತ್ತವು.

ನಿರಖು.—ಜಿನಸಿಗಳ ಧಾರಣೆವಾಸಿ ಚಡಾವಾಗಿರುತ್ತೆ ಚಾಲ್ತೀ ತಿಂಗಳಲ್ಲಿ ಮಳೆ ಬೀಳದೇಯಿದ್ದರೆ ಧಾರಣೆವಾಸಿ ಯಿನ್ನೂ ಚಡಾವಾಗಬಹುದೆಂದು ಭಯ ವುಂಟಾಗಿರುತ್ತೆ.

E. ARMSTRONG,
Dy. Commr.

ಕೊಡಗು ಡಿಸ್ಟ್ರಿಕ್ಟು.

ತರೀಜಮೀನ್.—ವೈಶಾಖೀಫಸಲ್ ರೇಖೇಮಾಡುವ ಕೆಲಸ ಪೂರೈಸಿತು. ಕಾರ್ತೀಕ ಬಿತ್ತನೆ ಷುರುವಾಯಿತು. ಜಮೀನ್ಗಳಲ್ಲ ಎರಡುಸಾಲ್ ಉಳುಮೆ ಆಗಿಯಿಧೆ.

ಖುಷ್ಕೀ ಜಮೀನ್.—ಇಲಾಚೀಫಸಲ್ ಚನ್ನಾಗಿ ಯಿಧೆ. ರಾಗೀಫಸಲ್ ಸಹಾ ಚನ್ನಾಗಿ ಕಾಣುತ್ತಿದೆ.

ಕಾಫಿ.—ಗುಣೀತೆಗದು ಗಿಡಗಳು ಹಾಕುವ ಕೆಲಸ ಷುರುವಾಯಿತು. ವಳ್ಳೇಫಲವಾಗುವಂತೆ ಕಾಣುತ್ತೆ.

ಜನಮರಣ.—ಈ ಸೀಮೆಯ ಪೈಕೀ ಕುಲ್ 542 ಮಂದಿ ಮೃತಪಟ್ಟರು. ಕಳೆದ ಇಸವೀ ಇದೇತಿಂಗಳಲ್ಲಿ 533 ಮಂದಿ ಹೋದರು. ಹ್ಯಾಗಂದರೆ;—

ಉಬಾಲ್‌ಜುಲಾಬಿನಿಂದ	.. ..	109
ಆಮಶಂಕೆಇಂದ	.. ..	62
ಸಿಡುಬಿನಿಂದೆ	.. ..	5
ಜ್ವರದಿಂದ	.. ..	335
ಇತರ ರೋಗಗಳಿಂದ	.. ..	27
ಆಕಸ್ಮಿಕ	.. ..	3
ಆತ್ಮಹತ್ಯ	.. ..	1
	ಕುಲ್	542

ಮಡಿಕೆರೆ ತಾಲ್ಲೂಕು	..	55
ಪಡಿನಾಲ್ಕು ನಾಡು	.. ..	69
ಯೆಡೆನಾಲ್ಕು ನಾಡು	.. ..	75
ಕಿಗ್ಗಟ್ಟುನಾಡು	.. ..	94
ನಂಜರಾಜಪಟ್ಣ	.. ..	77
ಏಳುಸಾವಿರ ಸೀಮೆ	.. ..	136
ಷಹರಗಳು		
ಮಹದೇವಪೇಟೆ	.. ..	23
ವೀರರಾಜಪೇಟೆ	.. ..	13
	ಕುಲ್	542

ಸದರೀ ಸಂಖ್ಯೇ ಪೈಕೀ 226, ಗಂಡುಸರು 183, ಹೆಂಗಸರು 133, ಮಕ್ಕಳು, ಹೋಗಿರುತ್ತಾರೆ, ಇವರಲ್ಲಿ ಕ್ರೀಸ್ತಿಯರು 14 ಕೊಡಗರು 72, ಹಿಂದೂಗಳು 417, ಮಹಮ್ಮದೀಯರು 22, ಯಿತರ ಜಾತಿಯವರು 17, ಕುಲ್ 542, ಮಂದಿ ಹೋದರು.

ದನಗಳು.—453, ಕಾಲ್ನಡೆ ಹೋದವು, ಕಳೆದ ಇಸವೀ ಯಿದೇತಿಂಗಳಲ್ಲಿ 918, ಕಾಲ್ನಡೆ ಹೋದವು, ಯಿದರ ತಪಸೀಲ್.

ಯೆತ್ತುಗಳು, 149, ಆಕಳು 100, ಕರುಗಳು 87, ಕೋಣಗಳು 43, ಎಮ್ಮೆಗಳು 52, ಎಮ್ಮೇಕರುಗಳು 22.

ಧಾರಣೆ.—ಒಂದೇ ರೀತಿಯಾಗಿಧೆ.

ಮಳೆ.—ಜೂನ್ ತಿಂಗಳಲ್ಲಿ 12, ಅಂಗುಲ 77, ಸೆಂಟ್ಸ್ ಕುಲ್ ಆದ ಮಳೆ. 17, ಅಂಗಲ 84, ಸೆಂಟ್ಸ್ ಆಗಿರುತ್ತೆ.

E. SHAW,
Offg. Supt.

MYSORE GOVERNMENT PRESS, BANGALORE—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು ಶನಿವಾರ ಜುಲೈ ತಾ॥ 22 ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ

ಫಾರಿನ್ ಇಲಾಖಾ.

ಇಸ್ತಿಹಾರ್‌ನಾಮಾ.

ಜುಡಿಷಿಯಲ್.

ತಾರೀಖು 19ನೇ ಜೂನ್ 1876. ಮೊಕ್ಕಾಂ ಸಿಂಲಾ.

ನಂ. 67—ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್ ಸಾಹೇಬರವರು ಪ್ರಸಿದ್ಧವಾಗಿ ತಿಳಿಸುವದೇನಂದರೆ—ಸರ್ 1873ನೇ ಇಸವಿ, ಇಂಡ್ಯನ್ ಓತ್‌ಸ್ ಆಕ್ಟು ಯೆಂಬ ಇಂಡ್ಯ ದೇಶದ ಪ್ರಮಾಣಗಳ ಆಕ್ಟು ಈ ಕೆಳಗೆ ನಮೂದಿಸಲ್ಪಡುವ ತಿದ್ದುಪಾಡಿಗೆ ವೊಳಪಟ್ಟು, ಮೈಸೂರು ಸೀಮೆಗೆ ಲಗಾವಾಗಿರುತ್ತೆ, ಸದರೀ ತಿದ್ದುಪಾಡು ಯೇನಂದರೆ, 7ನೇ ಸೆಕ್ಷನ್ನಲ್ಲಿ "ಹೈಕೋರ್ಟು" ಯೆಂಬ ಮಾತುಗಳನ್ನು "ಮೈಸೂರು ಜುಡಿಷ್ಯಲ್ ಕಮ್ಮಿಷನ್ನರ್" ಯೆಂಬ ಮಾತುಗಳಾಗಿ ಬದಲಾಯಿಸತಕ್ಕದ್ದು.

T. H. Thornton,
Offg. Secy. to the Govt. of India.

ಆಲೋಚನೆ ಸಭೆಯೊಳಗಣ ಗವರ್ನರ್ ಜನರಲ್ಲವರ ಈ ಕೆಳಗಣ ಆಕ್ಟು 1873ನೇ ಇಸವೀ ಏಪ್ರೆಲ್ 8ರಲ್ಲು ಶ್ರೀ ಬಹುಮಾನಪಟ್ಟ ಗವರ್ನರ್ ಜನರಲ್ಲವರ ಅನುಮತಿಯನ್ನು ಪಡೆದದ್ದಾಗಿ ಯೆಲ್ಲರಿಗೂ ತಿಳಿಯತಕ್ಕಬಗ್ಗೆ ಇದರಿಂದ ಪ್ರಕಟಪಡಿಸಲ್ಪಟ್ಟಿಥೆ.

ACT No. X of 1873.

1873ನೇ ಇಸವಿಯ 10ನೇ ನಂಬರು.

THE INDIAN OATHS ACT, 1873.

1873ನೇ ಇಸವಿಯ ಇಂಡ್ಯದೇಶದ ಪ್ರಮಾಣಗಳ ಆಕ್ಟು.

ವಿಷಯಸೂಚಿಕೆ.

ಪೀಠಿಕೆ.

ಪ್ರಕರಣಗಳು.

1. ಚಿಕ್ಕ ಹೆಸರು,
ಸ್ಥಳಿಕವ್ಯಾಪ್ತಿ.

ಅಮಲ್‌ಷುರು.

2. ಚಟ್ಟಗಳ ರದ್ದಿಯಾತಿ.

3. ಕೆಲವು ಪ್ರಮಾಣಗಳ ವ ಸತ್ಯಗಳ ಸುರಕ್ಷಿತ.

4. ಪ್ರಮಾಣಗಳನ್ನು ವ ಸತ್ಯಗಳನ್ನು ಮಾಡಿಸುವ ಅಧಿಕಾರ.

5. ಸಾಕ್ಷಿಗಾರರು—
ಇಂಟರ್‌ಪ್ರಿಟರ್‌ಗಳು—
ಜೂರರ್‌ಗಳು—
ಮಾಡಬೇಕಾದ ಪ್ರಮಾಣಗಳು ಯಾ ಸತ್ಯಗಳು.
6. ದೇಶಸ್ಥರೂ, ಪ್ರಮಾಣ ಮಾಡಲಿಕ್ಕೆ ಆಕ್ಷೇಪಿಸುವವರೂ, ಸತ್ಯ ಮಾಡುವಿಕೆ.
7. ಪ್ರಮಾಣಗಳ ವ ಸತ್ಯಗಳ ನಮೂನೆಗಳು.
8. ಕೆಲವು ಪ್ರಮಾಣಗಳನ್ನು ಮಾಡಿಸುವದಕ್ಕೆ ಕೋರ್ಟಿನವರಿಗಿರುವ ಅಧಿಕಾರ.
ಪ್ರಕರಣಗಳು.
9. ಎದುರುಕಕ್ಷಿಗಾರನು ಹೇಳುವಂತಾಪ್ರಮಾಣವನ್ನು ಮಾಡುವಿಯಾ ಯೆಂದು ಕೋರ್ಟಿನವರು ಕಕ್ಷಿಗಾರನನ್ನಾಗಲೀ ಸಾಕ್ಷಿಗಾರನನ್ನಾಗಲೀ ಕೇಳಬಹುದು.
10. ಒಪ್ಪಿಕೊಂಡರೆ ಪ್ರಮಾಣ ಮಾಡಿಸುವಿಕೆ.
11. ಬದ್ಧಿತವಾಗಲಿಕ್ಕೆ ಸಮ್ಮತಿಸಿ ಬಂದವನ ಅವಗುಣಕ್ಕಾಗಿ ಪರಿಷ್ಕಾರವಾದ ಸಾಕ್ಷ್ಯ.
12. ಪ್ರಮಾಣ ಮಾಡುವದಿಲ್ಲವೆಂದು ನಿರಾಕರಿಸಿದಾಗ ನಡಿಸಬೇಕಾದ ಕ್ರಮ.
13. ಪ್ರಮಾಣದ ಲೋಪದಿಂದ ಯಾ ಅಕ್ರಮದಿಂದ ನಡವಳಿತಗಳೂ ಸಾಕ್ಷ್ಯವೂ ಅಸಿದ್ಧವಾಗುವದಿಲ್ಲ.
14. ಸಾಕ್ಷ್ಯ ಕೊಡುವವರು ನಿಶ್ಚಯ ಹೇಳಲಿಕ್ಕೆ ಬದ್ಧರಾಗಿರುತ್ತಾರೆ.
15. ಪೆನಲ್‌ಕೋಡ್ಡಿನ 178ನೇ ವ 181ನೇ ಪ್ರಕರಣಗಳ ದುರಸ್ತು.
16. ಉದ್ಯೋಗ ವಿಷಯವಾದ ಪ್ರಮಾಣಗಳ ರದ್ದಿಯಾತಿ ರದ್ದಾದ ಚಟ್ಟಗಳ ಷೆಡ್ಯೂಲ್ ಪಟ್ಟಿ.

AN ACT TO CONSOLIDATE THE LAW RELATING TO JUDICIAL OATHS, AND FOR OTHER PURPOSES.

ಜುಡಿಷ್ಯಲ್ ಪ್ರಮಾಣಗಳಿಗೆ ಸಂಬಂಧಪಡುವ ಕಾನೂನನ್ನು ಒಟ್ಟು ಪಡಿಸುವದಕ್ಕೂ ಮತ್ತು ಇತರ ಕಾರ್ಯಗಳ ಬಗ್ಯೂ ಹುಟ್ಟಿದ ಆಕ್ಟು.

ಪೀಠಿಕೆ.

ಜುಡಿಷ್ಯಲ್ ಪ್ರಮಾಣಗಳಿಗೆ ಸತ್ಯಗಳಿಗೆ ವ ರೂಢವಾಕ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟು ಪಡಿಸುವದು ಮತ್ತು ಉದ್ಯೋಗ ವಿಷಯವಾದ ಪ್ರಮಾಣಗಳಿಗೂ ಸತ್ಯಗಳಿಗೂ ರೂಢವಾಕ್ಯಗಳಿಗೂ ಸಂಬಂಧಪಟ್ಟ ಕಾನೂನನ್ನು ರದ್ದು ಮಾಡುವದು ಯುಕ್ತವಾಗಿರುವದರಿಂದ ಇದರಿಂದ ನಿರ್ಣಯಿಸುವದೇನಂದರೆ:—

I.—Preliminary.

I. ಅವತರಣಿಕೆ.

ಚಿಕ್ಕ ಹೆಸರು.

1. ಈ ಆಕ್ಟನ್ನು "1873ನೇ ಇಸಿವಿಯ ಇಂಡ್ಯದ ಪ್ರಮಾಣಗಳ ಆಕ್ಟು" ಯೆಂಬದಾಗಿ ಕರೆಯಬಹುದು.

ಸ್ಥಳಿಕವ್ಯಾಪ್ತಿ.

ಇದು ಬ್ರಿಟಿಷ್ ಇಂಡ್ಯ ದೇಶದೊಳಗೆಲ್ಲ ವ್ಯಾಪಿಸುತ್ತದೆ, ಮತ್ತು ಶ್ರೀ ಮಹಾ ರಾಣಿಯವರ ಪ್ರಜೆಗಳ ವಿಷಯದ ಮಟ್ಟಿಗೆ ಶ್ರೀ ಮಹಾರಾಣೀಯವರ ಸಂಗಡ ಮಿತ್ರತ್ವದಲ್ಲಿರುವ ಹಿಂದೂ ಅರಸರುಗಳ ರಾಜ್ಯಗಳಿಗೂ ವ ಸಂಸ್ಥಾನಗಳಿಗೂ ವ್ಯಾಪಿಸುತ್ತದೆ.

ಅಮಲ್‌ಶುರು.

ಇದು, 1873ನೇ ಇಸವಿಯ ಮೇ ತಿಂಗಳು ಮೊದಲನೇ ತಾರೀಖಿನಲ್ಲಿ ಜಾರೀಲಿ ಬರತಕ್ಕದ್ದು.

ಚಟ್ಟಗಳ ರದ್ದಿಯಾತಿ.

2. ಇದರೊಂದಿಗೆ ಶೇರಿಸಿರುವ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ಚಟ್ಟಗಳು ಸದರೀ ಪಟ್ಟಿಯ ಮೂರನೇ ಮದ್‌ನಲ್ಲಿ ಕಾಣಿಸಿರುವಷ್ಟು ರದ್ದಾಗಿವೆ.

3. ಕೋರ್ಟ್ ಮಾರ್ಷಲ್‌ಗಳ ಮುಂದೆ ಜರುಗುವ ಪ್ರೊಸೀಡಿಂಗ್ಸ್‌ಗಳಾಗಲಿ 1861ನೇ ಇಸವಿಯ ಇಂಡಿಯನ್ ಕೌನ್ಸಿಲ್‌ಗಳ ಆಕ್ಟಿನ ನಿಬಂಧನೆಗಳಿಗನುಗುಣವಾಗಿ ಆಲೋಚನೆ ಸಭೆಯೊಳಗಣ ಗವರ್ನರ್ ಜನರಲ್ಲವರು ರದ್ದು ಮಾಡಲಿಕ್ಕೆ ಅಧಿಕಾರವಿಲ್ಲದಂತಾ ಕಾನೂನ್ನಲ್ಲಿ ನಿರ್ದೇಶಿಸಿರೋಣಾದ ಪ್ರಮಾಣಗಳಿಗಾಗಲಿ ಸತ್ಯಗಳಿಗಾಗಲಿ ರೂಢವಾಕ್ಯಗಳಿಗಾಗಲಿ ಇದರಲ್ಲಿ ಅಡಗಿರುವಂಥಾದ್ದು ಯಾವದೂ ಲಗಾವಾಗುವದಿಲ್ಲ.

ಕೆಲವು ಪ್ರಮಾಣಗಳ ವ ಸತ್ಯಗಳ ಸುರಕ್ಷಿತ.

II.—Authority to administer Oaths and Affirmations.

II. ಪ್ರಮಾಣಗಳನ್ನೂ ಸತ್ಯಗಳನ್ನೂ ಮಾಡಿಸಲಿಕ್ಕೆ ಅಧಿಕಾರ.

ಈ ಕೆಳಗೆ ನಮೂದಿಸಿರುವ ಕೋರ್ಟುಗಳು ಮತ್ತು ಮನುಷ್ಯರು ತಾವೇ ಆಗಲಿ ಪ್ರಮಾಣ ಮಾಡಿಸುವ ಬಗ್ಯೆ ಅವರು ನೊಕರರ್ಮಾಡಿದ ಆಫಿಸರಿಂದಾಗಲಿ ಕಾನೂನ್ನಿಂದ ತಮು ತಮಗೆ ವಿಧಿಸುವ ಕೆಲಸಗಳನ್ನು ನಿರ್ವಹಿಸುವದರಲ್ಲಿ ಅಥವಾ ಕೊಟ್ಟಿರುವ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಪ್ರಮಾಣಗಳನ್ನೂ ಸತ್ಯಗಳನ್ನೂ ಮಾಡಿಸಲಿಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ.—

ಪ್ರಮಾಣಗಳನ್ನೂ ವ ಸತ್ಯಗಳನ್ನೂ ಮಾಡಿಸುವ ಅಧಿಕಾರ.

(a) ಸಾಕ್ಷ್ಯತೆಗೆಯಲಿಕ್ಕೆ ಕಾನೂನ್ನಿಂದ ಅಥವಾ ಕಕ್ಷಿಗಾರರ ಸಮ್ಮತಿಯಿಂದ ಅಧಿಕಾರವುಳ್ಳವರಾಗಿರುವ ಸಮಸ್ತ ಕೋರ್ಟುಗಳೂ ಮನುಷ್ಯರೂ,

(b) ಶ್ರೀ ಮಹಾರಾಣಿಯವರ ನೌಕರೀಲಿರುವಂತಾ ತುರುಪುಗಳು ಮೊಕ್ಕಾಂ ಮಾಡಿರುವ ಮಿಲಿಟರಿ ಸ್ಟೇಷನಿನ ಕಮಾಂಡಿಂಗ್ ಆಫಿಸರು: ಪರಂತು,

(1.) ಪ್ರಮಾಣವನ್ನು ಯಾ ಸತ್ಯವನ್ನು ಸದರೀ ಸ್ಟೇಷನಿನ ಸರಹದ್ದುಗಳೊಳಗೇನೇ ಮಾಡಿಸಬೇಕು, ಮತ್ತು.

(2.) ಪ್ರಮಾಣ ಯಾ ಸತ್ಯವು ಬ್ರಿಟಿಷ್ ಇಂಡಿಯದೇಶದಲ್ಲಿ ಜಸ್ಟಿಸ್ ಆವ್ ದಿ ಪೀಸ್ ಉದ್ಯೋಗಸ್ಥನು ಮಾಡಿಸುವದಕ್ಕೆ ಅರ್ಹನಾಗಿರುವಂಥಾದ್ದಾಗಿರಬೇಕು.

III.—Persons by whom Oaths or Affirmations must be made.

III. ಪ್ರಮಾಣಗಳನ್ನು ಯಾ ಸತ್ಯಗಳನ್ನು ಮಾಡಬೇಕಾದವರು.

5. ಈ ಕೆಳಗೆ ನಮೂದಿಸಿರುವಂಥಾವರು ಪ್ರಮಾಣಗಳನ್ನು ಅಥವಾ ಸತ್ಯಗಳನ್ನು ಮಾಡಬೇಕು:—

ಪ್ರಮಾಣ ಯಾ ಸತ್ಯಮಾಡಬೇಕಾದ—

(a.) ಸಮಸ್ತ ಸಾಕ್ಷಿಗಾರರು, ಅಂದರೆ, ವಿಚಾರಣೆಮಾಡಲಿಕ್ಕೆ ಯಾ ಸಾಕ್ಷ್ಯ ತೆಗೆಯಲಿಕ್ಕೆ ಕಾನೂನಿನಿಂದಾಗಲಿ ಕಕ್ಷಿಗಾರರ ಸಮ್ಮತಿಯಿಂದಾಗಲಿ ಅಧಿಕಾರ ಉಂಟಾಗಿರುವ ಯಾವ ಕೋರ್ಟಿನವರಿಂದಾಗಲಿ ಮನುಷ್ಯನಿಂದಾಗಲೀ ಅಥವಾ ಅಂಥಾ ಕೋರ್ಟಿನ ಯಾ ಮನುಷ್ಯನ ಮುಂದಾಗಲಿ ಕಾನೂಸು ಪ್ರಕಾರ ವಿಚಾರಣೆ ಯಾಗಬಹುದಾದ ಸಮಸ್ತ ಮನುಷ್ಯರೂ; ಅಂಥಾ ಕೋರ್ಟಿನವರ ಯಾ ಮನುಷ್ಯನ ಮುಂದೆ ಸಾಕ್ಷ್ಯಾ ಕೊಡಬಹುದಾದ ಸಮಸ್ತ ಮನುಷ್ಯರೂ; ಸಾಕ್ಷ್ಯಾ ಕೊಡಹೇಳಿ ಅಂಥಾ ಕೋರ್ಟಿನವರಿಂದಾದರೂ ಮನುಷ್ಯನಿಂದಾದರೂ ಅಪೇಕ್ಷಿಸಲ್ಪಡುವ ಸಮಸ್ತ ಮನುಷ್ಯರೂ;

ಸಾಕ್ಷಿಗಾರರು.

(b.) ಸಾಕ್ಷಿಗಾರರಿಗೆ ಹಾಕೋಣಾಗುವ ಸವಾಲುಗಳನ್ನು ವ ಸಾಕ್ಷಿಗಾರರು ಕೊಡುವ ಸಾಕ್ಷ್ಯಾ ಭಾಷಾಂತರ ಮಾಡಿ ಹೇಳುವ ಇಂಟರ್ ಪ್ರಿಟರ್‌ಗಳು; ಮತ್ತು;

ಇಂಟರ್ ಪ್ರಿಟರ್‌ಗಳು.

ಜೂರರುಗಳು. (c.) ಜೂರರುಗಳು.

ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಒಬ್ಬ ಆಪಾದನೇ ಪಟ್ಟವನಿಂದ ಪ್ರಮಾಣವನ್ನು ಯಾ ಸತ್ಯವನ್ನು ಮಾಡಿಸುವಂಥಾದ್ದು ನ್ಯಾಯ್ಯವೆಂತಾಗಲಿ ಒಂದು ಕೋರ್ಟಿನ ಸರ್ಕಾರ ಇಂಟರ್ ಪ್ರಿಟರು ತನ್ನ ಉದ್ಯೋಗವನ್ನು ವಹಿಸಿಕೊಂಡು ಕೆಲಸ ನಡಿಸಲಿಕ್ಕೆ ಪ್ರವರ್ತಿಸಿದ ತರುವಾಯ ತನ್ನ ಉದ್ಯೋಗವ ಕೆಲಸಗಳನ್ನು ನಿಷ್ಪ್ರಹತ್ವವಾಗಿ ನೆರವೇರಿಸುವೆನೆಂದು ಅವನಿಂದ ಪ್ರಮಾಣ ಯಾ ಸತ್ಯ ಮಾಡಿಸುವಂಥಾದ್ದು ಆವಶ್ಯಕವೆಂತಾಗಲಿ ಇದರಲ್ಲಿ ಅಡಗಿರುವ ಯಾವದರಿಂದಲೂ ಅರ್ಥವಾಗುವದಿಲ್ಲ.

6. ಸಾಕ್ಷಿಗಾರನು ಯಾ ಇಂಟರ್ ಪ್ರಿಟರು ಯಾ ಜೂರರು ಒಬ್ಬ ಹಿಂದು ಮತಸ್ಥನಾಗಿ ಅಥವಾ ಮಹದೇಶಸ್ಥರು ಪ್ರಮಾಣ ಮಾಡಲಿಕ್ಕೆ ಆಕ್ಷೇ ಮ್ಮದೀಯನಾಗಿ ಇದ್ದರೆ.
ಪಿಸುವವರೂ ಸತ್ಯಮಾಡುವಿಕೆ.

ಅಥವಾ ಪ್ರಮಾಣ ಮಾಡಲಿಕ್ಕೆ ಆಕ್ಷೇಪಣೆ ವುಳ್ಳವನಾಗಿದ್ದರೆ ಅವನು ಪ್ರಮಾಣ ಮಾಡುವದಕ್ಕೆ ಬದಲಾಗಿ ಸತ್ಯಮಾಡತಕ್ಕದ್ದು.

ಇತರ ಸಂಗತಿಗಳಲ್ಲೆಲ್ಲ ಸಾಕ್ಷಿಗಾರನಾಗಲಿ ಇಂಟರ್ ಪ್ರಿಟರಾಗಲಿ ಜೂರರಾಗಲಿ ಪ್ರಮಾಣ ಮಾಡಬೇಕು.

IV.—Forms of Oaths and Affirmations.
VI. ಪ್ರಮಾಣಗಳ ವ ಸತ್ಯಗಳ ನಮೂನೆಗಳು

ಪ್ರಮಾಣಗಳ ವ ಸತ್ಯಗಳ ನಮೂನೆಗಳು.

7. ಐದನೇ ಪ್ರಕರಣಕ್ಕನುಗುಣವಾಗಿ ಮಾಡಲ್ಪಡುವ ಸಮಸ್ತ ಪ್ರಮಾಣಗಳನ್ನೂ ಸತ್ಯಗಳನ್ನೂ ಹೈಕೋರ್ಟಿನವರು ಆಗಿಂದಾಗ್ಯೆ ನಿರ್ದೇಶಿಸಬಹುದಾದ ನಮೂನೆಗಳ ಮೇರಿಗೆ ಮಾಡಿಸತಕ್ಕದ್ದು.

ಹೈಕೋರ್ಟಿನವರು ಅಂಥಾ ಯಾವ ನಮೂನೆಗಳನ್ನಾಗಲಿ ನಿರ್ದೇಶಿಸುವ ವರಿವಿಗೂ ತಾತ್ಕಾಲದಲ್ಲಿ ರೂಢಿಯಲ್ಲಿರುವ ನಮೂನೆಗಳ ಮೇರೆಗೆ ಅಂಥಾ ಪ್ರಮಾಣಗಳನ್ನೂ ಸತ್ಯಗಳನ್ನೂ ಮಾಡಿಸತಕ್ಕದ್ದು.

ಟಿಪ್ಪಣಿ.—ರಂಗೂನ್ ರಿಕಾರ್ಡರ್ ಕೋರ್ಟಿನಲ್ಲಿ ಮಾಡಿಸುವಂಥಾ ಪ್ರಮಾಣಗಳ ವ ಸತ್ಯಗಳ ವಿಷಯದಲ್ಲಿ ಈ ಪ್ರಕರಣದ ಅರ್ಥದ ಮೇರಿಗೆ ರಂಗೂನ್ ರಿಕಾರ್ಡರನ್ನೇ ಹೈ ಕೋರ್ಟೆಂಬದಾಗಿ ಗ್ರಹಿಸತಕ್ಕದ್ದು.

ಕೆಲವು ಪ್ರಮಾಣಗಳನ್ನು ಮಾಡಿಸುವದಕ್ಕೆ ಕೋರ್ಟಿನವರಿಗಿರುವ ಅಧಿಕಾರ.

8. ಯಾವ ಜುಡಿಷ್ಯಲ್ ಪ್ರೊಸಿಡಿಂಗಿನ ಕಕ್ಷಿಗಾರನಾಗಲಿ ಅದಕ್ಕೆ ಸೇರಿದ ಸಾಕ್ಷಿಗಾರನಾಗಲಿ ತಾನು ಸೇರಿರುವ ಜಾತಿಯವರಲ್ಲಿ ಯಾ ಮತಸ್ಥರಲ್ಲಿ ಸಾಧಾರಣವಾಗಿ ರೂಢಿಯಲ್ಲಿರುವಂಥಾ ಯಾ ಬಂಧಿಸುವದೆಂದು ನಂಬಿರುವಂಥಾ ವಿಧವಾಗಿ ಪ್ರಮಾಣಮಾಡಿ ಯಾ ಯಥಾವಿಧಿಯಾದ ಸತ್ಯಮಾಡಿ ಸಾಕ್ಷ್ಯಾಕೊಡುವೆನೆಂದು ಹೇಳಿದಾಗ ಮತ್ತು ಇದು ನ್ಯಾಯಕ್ಕಾಗಲಿ ಮಾನಕ್ಕಾಗಲಿ ವಿರೋಧವಾಗದೆಯೂ ಮೂರನೆ ಯವನಿಗೆ ಸಂಬಂಧಿಸದೆಯೂ ಯಿದ್ದ ಪಕ್ಷದಲ್ಲಿ, ಕೋರ್ಟಿನವರು ತಮಗೆ ಯುಕ್ತವಾಗಿ ತೋರಿದರೆ ಇದರಲ್ಲಿ ಮೇಲೆ ಏನು ಬರೆದಿದ್ದಾಗ್ಯೂ ಲಕ್ಷ್ಯವಿಡದೆ ಆತನಿಂದ ಹಾಗೆ ಪ್ರಮಾಣ ಯಾ ಸತ್ಯ ಮಾಡಿಸಬಹುದು.

ಯೆದುರು ಕಕ್ಷಿಗಾರನು ಹೇಳುವಂಥಾ ಪ್ರಮಾಣವನ್ನು ಮಾಡುವಿಯಾ ಯೆಂದು ಕೋರ್ಟಿನವರು ಕಕ್ಷಿಗಾರನನ್ನಾಗಲಿ ಸಾಕ್ಷಿಗಾರನನ್ನಾಲಿ ಕೇಳಬಹುದು.

9. ಒಂದು ಜುಡಿಷ್ಯಲ್ ಪ್ರೊಸೀಡಿಂಗಿನ ಯಾವ ಕಕ್ಷಿಗಾರನಾದರೂ, ಅಂಥಾ ಪ್ರೊಸೀಡಿಂಗಿನ ಇತರ ಕಕ್ಷಿಗಾರನು ಯಾ ಸಾಕ್ಷಿಗಾರನು 8ನೇ ಪ್ರಕರಣದಲ್ಲಿ ನಮೂದಿಸಿರುವ ಮೇರಿಗೆ ಯಾವ ಪ್ರಮಾಣವನ್ನಾದರೂ ಯಥಾವಿಧಿಯಾದ ಸತ್ಯವನ್ನಾದರೂ ಮಾಡಿದರೆ ಸದರೀ ಪ್ರಮಾಣಕ್ಕೆ ಯಾ ಸತ್ಯಕ್ಕೆ ತಾನು ಬದ್ಧನಾಗುತ್ತಾನೆಂತ, ಹೇಳಿದಪಕ್ಷದಲ್ಲಿ ಕೋರ್ಟಿನವರು, ತಮಗೆ ಯುಕ್ತವಾಗಿ ತೋರಿದರೆ ಅಂ

ಥಾ ಕಕ್ಷಿಗಾರನು ಯಾ ಸಾಕ್ಷಿಗಾರನು ಅಂಥಾ ಪ್ರಮಾಣವನ್ನು ಯಾ ಸತ್ಯವನ್ನು ಮಾಡುತ್ತಾನೋ ಮಾಡುವದಿಲ್ಲವೋ ಯೆಂಬದನ್ನು ಕೇಳಬಹುದು ಯಾ ಅವನನ್ನು ಕೇಳಲಿಸಬಹುದು.

ಪರಂತು, ಅಂಥಾ ಸವಾಲಿಗೆ ಜವಾಬುಕೊಡುವದಕ್ಕೆ ಮಾತ್ರವೇ ಯಾವ ಕಕ್ಷಿಗಾರನನ್ನಾಗಲಿ ಸಾಕ್ಷಿಗಾರನನ್ನಾಗಲಿ ಕೋರ್ಟಿಗೆ ಹಾಜರಾಗುವಂತೆ ಬಲಾತ್ಕರಿಸಕೂಡದು

ಒಪ್ಪಿಕೊಂಡರೆ ಪ್ರಮಾಣಮಾಡಿಸುವಿಕೆ.

10. ಅಂಥಾ ಕಕ್ಷಿಗಾರನಾಗಲಿ ಸಾಕ್ಷಿಗಾರನಾಗಲಿ ಸದರೀ ಪ್ರಮಾಣವನ್ನು ಅಥವಾ ಸತ್ಯವನ್ನು ಮಾಡುವದಕ್ಕೆ ಒಪ್ಪಿದರೆ ಅದನ್ನು ಕೋರ್ಟಿನವರು ಮಾಡಿಸಬಹುದು-ಅಥವಾ ಕೋರ್ಟಿನ ಹೊರಗೆ ಬಹಳ ಅನಾಯಾಸವಾಗಿ ಮಾಡಿಸಬಹುದಾದ ಸ್ವಭಾವವುಳ್ಳದ್ದಾಗಿ ಯಿದ್ದರೆ ಅದನ್ನು ಮಾಡಿಸಲಿಕ್ಕೆ ಯಾರಿಗಾದರೂ ಕೋರ್ಟಿನವರು ಒಂದು ಕಮಿಶ್ಯನ್ ಕೊಡಬಹುದು, ಮತ್ತು ಪ್ರಮಾಣಮಾಡುವಂಥಾ ಯಾ ಸತ್ಯಮಾಡುವಂಥಾವನ ಸಾಕ್ಷ್ಯವನ್ನು ತೆಗದು ಸದರೀ ಕೋರ್ಟಿಗೆ ಕಳುಹಿಸುವದಕ್ಕೆ ಅವನಿಗೆ ಅಧಿಕಾರ ಕೊಡಬಹದು.

ಬದ್ಧಿತವಾಗಲಿಕ್ಕೆ ಸಮ್ಮತಿಸಿ ಬಂದವನ ಅವಗುಣಕ್ಕಾಗಿ ಪರಿಷ್ಕಾರವಾದ ಸಾಕ್ಷ್ಯ.

11. ಹಾಗೆ ಕೊಟ್ಟಂಥಾ ಸಾಕ್ಷ್ಯವು, ಮೇಲೆ ನಮೂದಿಸಿರುವ ಹಾಗೆ ಬದ್ಧಕವಾಗಲಿಕ್ಕೆ ಸಮ್ಮತಿಸಿ ಬಂದಂಥಾವನ ಅವಗುಣಕ್ಕಾಗಿ ಅದರಲ್ಲಿ ನಮೂದಿಸಿದ ವಿಷಯವನ್ನು ಕುರಿತು ಪರಿಷ್ಕಾರವಾದ ರುಜುವಾತಾಗಿರತಕ್ಕದ್ದು.

ಪ್ರಮಾಣಮಾಡುವದಿಲ್ಲವೆಂದು ನಿರಾಕರಿಸಿದಾಗ ನಡಿಸಬೇಕಾದ ಕ್ರಮ.

12. ಕಕ್ಷಿಗಾರನಾಗಲೀ ಸಾಕ್ಷಿಗಾರನಾಗಲೀ ೮ನೇ ಪ್ರಕರಣದಲ್ಲಿ ನಮೂದಿಸಿರುವಂಥಾ ಪ್ರಮಾಣವನ್ನು ಯಾ ಯಥಾವಿಧಿಯಾದ ಸತ್ಯವನ್ನು ಮಾಡಲಿಕ್ಕೆ ನಿರಾಕರಿಸಿದರೆ ಮಾಡಬೇಕೆಂಬದಾಗಿ ಅವನನ್ನ ಬಲಾತ್ಕಾರಿಸಕೂಡದು. ಆದರೆ, ಈ ವಿಷಯವು ನಡವಳಿತದ ಒಂದು ಭಾಗವಾಗಿರುವಂತೆ, ಕೋರ್ಟಿನವರು ಮಾಡ ಹೇಳಿದ ಪ್ರಮಾಣದ ಯಾ ಸತ್ಯದ ಸ್ವಭಾವವನ್ನೂ ಅದನ್ನ ಮಾಡುತ್ತೀಯಾ ಯೆಂಬದಾಗಿ ಅವನ್ನ ಕೇಳಿರುವದನ್ನೂ, ಅದನ್ನ ಅವನು ನಿರಾಕರಿಸಿದ್ದಕ್ಕಾಗಿ ಅವನು ಕೊಡಬಹುದಾದ ಕಾರಣವನ್ನೂ, ಅವರು ರಿಕಾರ್ಡು ಮಾಡತಕ್ಕದ್ದು.

V.—Miscellaneous.

V. ವಿವಿಧ ವಿಷಯಗಳು.

ಪ್ರಮಾಣದ ಲೋಪದಿಂದ ಯಾ ಅಕ್ರಮದಿಂದ ನಡವಳಿತಗಳೂ ಸಾಕ್ಷ್ಯವೂ ಅಸಿದ್ಧವಾಗುವದಿಲ್ಲ.

13. ಯಾವ ಪ್ರೊಸೀಡಿಂಗಿನಲ್ಲಾದರೂ ಯಾವ ಸಾಕ್ಷ್ಯದಲ್ಲಾದರೂ ಪ್ರಮಾಣ ಯಾ ಸತ್ಯ ಮಾಡೋಣಾಗದೆ ಲೋಪವಾದರೆ ಅಥವಾ ಒಂದಕ್ಕೆ ಬದಲಾಗಿ ಮತ್ತೊಂದನ್ನು ಮಾಡಿಸೋಣಾದರೆ ಅಥವಾ ಆ ಪೈಕೀ ಯಾವದನ್ನಾದರೂ ಮಾಡಿಸುವ ವಿಧಾನದಲ್ಲಿ ಕ್ರಮ ತಪ್ಪಿದರೆ ಹೀಗೆ ಯಾವ ಪ್ರೊಸೀಡಿಂಗಿನಲ್ಲಿ ಯಾ ಪ್ರೊಸೀಡಿಂಗಿನ ವಿಷಯವಾಗಿ ಜರಗುತ್ತದೋ ಅದನ್ನು ಅಂಥಾಲೋಪ ಯಾ ಬದಲಾವಣಿ ಯಾ ಅಕ್ರಮ ಅಸಿದ್ಧಮಾಡುವದಿಲ್ಲ. ಮತ್ತು ಹೀಗೆಯೇ ಯಾವ ಸಾಕ್ಷ್ಯದಲ್ಲಿ ಯಾ ಸಾಕ್ಷ್ಯದ ವಿಷಯವಾಗಿ ಜರಗುತ್ತದೋ ಅದನ್ನು ಸದರೀ ಲೋಪ ಯಾ ಬದಲಾವಣಿ ಯಾ ಅಕ್ರಮ ಅನಂಗೀಕಾರಪಡಿಸುವದಿಲ್ಲ. ಅಥವಾ ಸಾಕ್ಷಿಗಾರನ ನಿಶ್ಚಯ ಹೇಳಬೇಕಾದ ಹಂಗನ್ನು ಬಾಧಿಸುವದಿಲ್ಲ.

ಸಾಕ್ಷ್ಯ ಕೊಡುವವರು ನಿಶ್ಚಯ ಹೇಳಲಿಕ್ಕೆ ಬದ್ಧರಾಗಿರುತ್ತಾರೆ.

14. ಪ್ರಮಾಣಗಳನ್ನೂ ಸತ್ಯಗಳನ್ನೂ ಮಾಡಿಸಲಿಕ್ಕೆ ಇದರಿಂದ ಅಧಿಕಾರ ಪಡೆದ ಯಾವ ಕೋರ್ಟಿನ ಯಾ ಮನುಷ್ಯನ ಮುಂದಾಗಲೀ ಯಾವ ವಿಷಯವನ್ನು ಕುರಿತಾದರೂ ಸಾಕ್ಷ್ಯ ಕೊಡುವ ಪ್ರತಿ ಮನುಷ್ಯನೂ ಆ ವಿಷಯವನ್ನು ಕುರಿತು ನಿಶ್ಚಯವನ್ನು ಹೇಳಲಿಕ್ಕೆ ಬದ್ಧನಾಗಿರುತ್ತಾನೆ.

ಪೆನಲ್‌ಕೋಡ್ಡಿನ 178ನೇ ವ 181ನೇ ಪ್ರಕರಣಗಳ ದುರಸ್ತು.

15. ಇಂಡ್ಯನ್ ಪೆನಲ್ ಕೋಡ್ಡಿನ 178ನೇ ವ 181ನೇ ಪ್ರಕರಣದಲ್ಲಿರುವ "ಪ್ರಮಾಣ" ಯೆಂಬ ಪದದನಂತರ "ಯಾ ಸತ್ಯ" ಯೆಂಬ ಪದಗಳನ್ನು ಬರೆದಿರುವ ಹಾಗೆ ಓದತಕ್ಕದ್ದು.

ಉದ್ಯೋಗ ವಿಷಯವಾದ ಪ್ರಮಾಣಗಳ ರದ್ದೀಯಾತಿ.

16. ಮೂರನೇ ಐದನೇ ಪ್ರಕರಣಗಳಿಗೊಳಪಟ್ಟು, ಯಾವ ಉದ್ಯೋಗಕ್ಕಾದರೂ ನೌಕರರಾದ ಯಾವ ಮನುಷ್ಯನೂ ತನ್ನ ಉದ್ಯೋಗದ ಕೆಲಸಗಳನ್ನು ನೆರವೇರಿಸಲಿಕ್ಕೆ ಪ್ರವೇಶಿಸುವದಕ್ಕೆ ಮುಂಚೆ ಪ್ರಮಾಣ ಮಾಡುವಂತೆ ಅಥವಾ ಯಾವ ಸತ್ಯವನ್ನಾಗಲೀ ಮಾಡುವಂತೆ ಅಥವಾ ಯಾವ ರೂಢ ವಾಕ್ಯದ ಕೆಳಗೆ ಸಹೀ ದಸ್ಕತು ಮಾಡುವಂತೆ, ಅಪೇಕ್ಷಿಸಲ್ಪಡಕೂಡದು.

SCHEDULE.

ಷೆಡ್ಯೂಲ್ ಪಟ್ಟಿ.

(*See Section* 2.)

2ನೇ ಪ್ರಕರಣವನ್ನು ನೋಡು.

PART I.—STATUTES.

1ನೇ ಭಾಗ.—ಸ್ಟಾಟ್ಯೂಟುಗಳು.

ಸಂವತ್ಸರ ವ ಅಧ್ಯಾಯ.	ಹೆಸರು.	ರದ್ದೀಯಾತಿಯ ಪರಿಮಾಣ.
9-ನಾಲನೇ ಜಾರ್ಜ್ ಅಧ್ಯಾಯ 74.	ಈಸ್ಟಿಂಡೀಸುನಲ್ಲಿ ಕ್ರಿಮಿನಲ್ ನ್ಯಾಯದ ಪರಿಪಾಲನೆಯನ್ನು ಅಭಿವೃದ್ಧಿ ಮಾಡುವದಕ್ಕೋಸ್ಕರ ಹುಟ್ಟಿದ ಆಕ್ಟು.	ಪ್ರಕರಣಗಳು 36 ವ 37.
3, 4-ನಾಲ್ಕನೇ ವುಲ್ಲಿಯಂ ಅಧ್ಯಾಯ 49.	ಪ್ರಮಾಣವನ್ನು ಮಾಡಬೇಕಾದ ಯಾ ಮಾಡತಕ್ಕದ್ದಾದ ಸಂಗತಿಗಳಲ್ಲೆಲ್ಲ ಕ್ವೇಕರರನ್ನೂ ಮೊರೇವಿಯನರನ್ನೂ ಸತ್ಯ ಮಾಡ ಹೇಳುವ ಆಕ್ಟು.	ಬ್ರಿಟಿಷ್ ಇಂಡ್ಯಾದೇಶಕ್ಕೆ ಲಗಾವಾಗುವ ಮಟ್ಟಿಗೆ ಪೂರಾ ಆಕ್ಟು.
3, 4-ನಾಲ್ಕನೇ ವುಲ್ಲಿಯಂ ಅಧ್ಯಾಯ 82.	ಪ್ರಮಾಣಕ್ಕೆ ಬದಲಾಗಿ ಸೆಪರೇಟಿಸ್ಟು ಯೆಂಬವರನ್ನು, ಯಥಾವಿಧಿಯಾದ ಸತ್ಯವನ್ನು ವ ರೂಢವಾಕ್ಯವನ್ನು ಮಾಡ ಹೇಳುವ ಆಕ್ಟು.	ಬ್ರಿಟಿಷ್ ಇಂಡ್ಯಾದೇಶಕ್ಕೆ ಲಗಾವಾಗುವ ಮಟ್ಟಿಗೆ ಪೂರಾ ಆಕ್ಟು.
5, 6-ನಾಲ್ಕನೇ ವುಲ್ಲಿಯಂ ಅಧ್ಯಾಯ 62.	"ಸಂಸ್ಥಾನದ ಆಯಾ ಡಿಪಾರ್ಟುಮೆಂಟುಗಳಲ್ಲಿ ಮಾಡೋಣಾದ ಪ್ರಮಾಣಗಳನ್ನೂ ಸತ್ಯಗಳನ್ನೂ ಕೈ ಕೊಡುವ ಮಟ್ಟಿಗೆ ರದ್ದು ಮಾಡಿ ಇದಕ್ಕೆ ಬದಲಾಗಿ ರೂಢವಾಕ್ಯಗಳನ್ನು ಪಯೋಗಿಸುವದಕ್ಕೂ; ಸ್ವೇಚ್ಛೆಯಾಗಿ ಕೊಡೋಣಾಗಿಯೂ ಯೆಕ್‌ಸ್ಟ್ರಾ ಜುಡಿಷ್ಯಲಾಗಿಯೂ ಇರುವ ಪ್ರಮಾಣ ಗಳನ್ನೂ ಅಫಿದಾವಿತ್‌ಗಳನ್ನೂ ಇನ್ನೂ ಚೆನ್ನಾಗಿ ಪೂರ್ತಿಯಾಗಿ ನಿಲ್ಲಿಸಿ ಬಿಡುವದಕ್ಕೂ ಹುಟ್ಟಿದ ಆಕ್ಟು" ಯೆಂಬದಾಗಿ ಕರೆಯಲ್ಪಡುವ ಪಾರ್ಲಿಮೆಂಟಿನ ತತ್ಕಾಲದ ಸೆಷ್ಷನಿನ ಆಕ್ಟನ್ನು ರದ್ದು ಮಾಡುವದಕ್ಕೂ ಅನಾವಶ್ಯಕವಾದ ಪ್ರಮಾಣಗಳನ್ನು ಮೊಕೂಫು ಮಾಡುವದಕ್ಕೋಸ್ಕರ ಇತರ ನಿಬಂಧನೆಗಳನ್ನು ಮಾಡುವದಕ್ಕೂ ಹುಟ್ಟಿದ ಆಕ್ಟು.	ಬ್ರಿಟಿಷ್ ಇಂಡ್ಯಾದೇಶಕ್ಕೆ ಲಗಾವಾಗುವ ಮಟ್ಟಿಗೆ ಪೂರಾ ಆಕ್ಟು.
1, 2-ವಿಕ್ಟೋರಿಯಾ ಅಧ್ಯಾಯ 77.	ಕೆಲವು ಸಂಗತಿಗಳಲ್ಲಿ ಪ್ರಮಾಣಕ್ಕೆ ಬದಲಾಗಿ ಸತ್ಯ ಮಾಡಬಹುದೆಂದು ಹುಟ್ಟಿದ ಆಕ್ಟು.	ಬ್ರಿಟಿಷ್ ಇಂಡ್ಯಾದೇಶಕ್ಕೆ ಲಗಾವಾಗುವ ಮಟ್ಟಿಗೆ ಪೂರಾ ಆಕ್ಟು.

PART—II. ACTS.

೨ನೇ ಭಾಗ.—ಅಕ್ಟುಗಳು.

ನಂಬರು ವ ಸಂವತ್ಸರ.	ಹೆಸರು.	ರದ್ದೀಯಾತಿಯ ಪರಿಮಾಣ
1836ನೇ ಇಸವಿಯ 9ನೇ ನಂಬರು.	ಪ್ರಮಾಣಗಳನ್ನು ಮಾಡಿಸಲಿಕ್ಕೆ ಕಮಾಂಡಿಂಗ ಆಫಿಸರಿಗೆ ಇರುವ ಅಧಿಕಾರ.	ಪೂರಾ.
1837ನೇ ಇಸವಿಯ 21ನೇ ನಂಬರು.	ಉದ್ಯೋಗ ವಿಷಯವಾದ ಪ್ರಮಾಣಗಳೂ ರೂಢವಾಕ್ಯಗಳೂ.	ರದ್ದಾಗದೆ ಇರುವಷ್ಟು.
1840ನೇ ಇಸವಿಯ 5ನೇ ನಂಬರು.	ಹಿಂದೂ ಮತಸ್ಥರ ವ ಮಹಮ್ಮದೀಯ ಮತಸ್ಥರ ಪ್ರಮಾಣಗಳಿಗೂ ರೂಢವಾಕ್ಯಗಳಿಗೂ ಸಂಬಂಧಪಡುವ ಆಕ್ಟು.	ರದ್ದಾಗದೆ ಇರುವಷ್ಟು.
1843ನೇ ಇಸವಿಯ 15ನೇ ನಂಬರು.	ಜುಡಿಷ್ಯಲ್ ಡಿಪಾರ್ಟಮೆಂಟನಲ್ಲಿ ಅನ್‌ಕವಿನಾಂಟೆಡ್ ಉದ್ಯೋಗಸ್ಥರನ್ನು ಯಿನ್ನೂ ಬಹಳವಾಗಿ ನೌಕರೀಲಿಟ್ಟುಕೊಳ್ಳಲಿಕ್ಕೆ ಹುಟ್ಟಿದ ಆಕ್ಟು.	ಪ್ರಕರಣ 2.
1852ನೇ ಇಸವಿಯ 15ನೇ ನಂಬರು.	ಸಾಕ್ಷ್ಯ ಕಾನೂನನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟು.	ಪ್ರ - 12.
1856ನೇ ಇಸವಿಯ 12ನೇ ನಂಬರು.	ಫೋರ್ಟು ವಿಲ್ಲಿಯಮಿನ ರಾಜಧಾನಿ ಇಲಾಖೆಯಲ್ಲಿ ಸಿವಿಲ್ ಕೋರ್ಟುಗಳವರು ಅಮೀನುಗಳನ್ನು ನೌಕರೀಲಿಟ್ಟುಕೊಳ್ಳುವ ವಿಷಯವಾಗಿರುವ ಕಾನೂನನ್ನು ದುರಸ್ತು ಮಾಡುವದಕ್ಕೆ ಹುಟ್ಟಿದ ಆಕ್ಟು.	ಪ್ರ - 4.
1857ನೇ ಇಸವಿಯ 7ನೇ ನಂಬರು.	ಫೋರ್ಟು ಸೆಯಿಂಟ್ ಜಾರ್ಜ ರಾಜಧಾನಿ ಇಲಾಖೆಯಲ್ಲಿರುವ ರೆವಿನ್ಯೂ ವ ಜುಡಿಷ್ಯಲ್ ಡಿಪಾರ್ಟುಮೆಂಟುಗಳೊಳಗೆ ಅನ್‌ಕವಿನಾಂಟೆಡ್ ಉದ್ಯೋಗಸ್ಥರನ್ನು ನೌಕರೀಲಿ ಇನ್ನೂ ಬಹಳವಾಗಿ ಇಟ್ಟುಕೊಳ್ಳುವದಕ್ಕೋಸ್ಕರ ಹುಟ್ಟಿದ ಆಕ್ಟು.	ಪ್ರ - 2.
1859ನೇ ಇಸವಿಯ 12ನೇ ನಂಬರು.	ಬಂಗಾಳದಲ್ಲಿರುವ ಫೋರ್ಟುವಿಲ್ಲಿಯಮಿನ ರಾಜಧಾನಿ ಇಲಾಖೆಯಲ್ಲಿ ಕೆಲಸವನ್ನು ಮಾಡದೇ ಬಿಟ್ಟದ್ದಕ್ಕೋಸ್ಕರ ಜಹಜು ನಡಿಸುವವರನ್ನು ದರ್ಯಾಫ್ತಿ ಮಾಡುವದಕ್ಕೋಸ್ಕರ ಇನ್ನೂ ಚನ್ನಾಗಿ ನಿಬಂಧನೆಯನ್ನು ಮಾಡುವದಕ್ಕೋಸ್ಕರಹುಟ್ಟಿದ ಆಕ್ಟು.	ಪ್ರಕರಣಗಳು - 12 ವ 15.
1863ನೇ ಇಸವಿಯ 18ನೇ ನಂಬರು.	ಬಂಗಾಳದಲ್ಲಿರುವ ಫೋರ್ಟುವಿಲ್ಲಿಯಮಿನ ಜುಡಿಕೇಚರ್ ಹೈಕೋರ್ಟಿನ ಮಾಸ್ಟರು ಆಫಿಸಿನಲ್ಲಿ ಈಗ ವಿಚಾರಣೆಯಲ್ಲಿ ಯಾಗತಕ್ಕ ಬಗ್ಯೆ ಇರುವ ಕೆಲಸವನ್ನು ತ್ವರೆಯಾಗಿಯೂ ಕ್ರಮವಾಗಿಯೂ ವಿಲೇ ಮಾಡುವದಕ್ಕೋಸ್ಕರ ನಿಬಂಧನೆ ಮಾಡುವದಕ್ಕೂ ಸದರೀ ಕೋರ್ಟಿನಲ್ಲಿ ಹಿಂದೂ ಮತಸ್ಥರಿಗೂ ಮಹಮ್ಮದೀಯರಿಗೂ ಈಗ ಮಾಡಿಸುವ ಪ್ರಮಾಣಗಳನ್ನು ಮೋಕೂಫು ಮಾಡುವದಕ್ಕೋಸ್ಕರ ನಿಬಂಧಿಸಲಿಕ್ಕೂ ಮತ್ತು ಸದರೀ ಕೋರ್ಟು ಅದರ ಮೂಲ ಸಿವಿಲ್ ಅಧಿಕಾರವನ್ನು ಚಲಾಯಿಸುವದರಲ್ಲಿ ಕೊಟ್ಟ ಸುಮ್ಮನ್ಸ ವಗೈರೆ ವಿಷಯವಾಗಿ ಸಿವಿಲ್ ಪ್ರೊಸಿಡ್ಯೂರ್ ಕೋಡ್ಡನ್ನು ದುರಸ್ತು ಮಾಡುವದಕ್ಕೂ ಹುಟ್ಟಿದ ಆಕ್ಟು.	ಪ್ರ - 9.

2ನೇ ಭಾಗ.—ಆಕ್ಟುಗಳ ಕುರಿತು.

ನಂಬರು ವ ಸಂವತ್ಸರ.	ಹೆಸರು.	ರದ್ದಿಯಾತಿಯ ಪರಿಮಾಣ.
1866ನೇ ಇಸವಿಯ 4ನೇ ನಬರು.	ಪಂಜಾಬ್ ಮತ್ತು ಅದರ ಅಧಿಕಾರ ಕೆಳಗಣ ಸೀಮೆಗಳ ಜುಡಿಷ್ಯಲ್ ಚೀಫ್ ಕೋರ್ಟಿನ ಏರ್ಪಾಟನ್ನು ದುರಸ್ತು ಮಾಡ ಲಿಕ್ಕೆ ಹುಟ್ಟಿದ ಆಕ್ಟು.	ಪ್ರ - 5.
1869ನೇ ಇಸವಿಯ 2ನೇ ನಂಬರು.	ಜಸ್ಟಿಸ್ ಆಫ್ ದಿ ಪೀಸ್ ಉದ್ಯೋಗಸ್ಥರನ್ನು ನೇಮಕರಮಾ ಡುವದಕ್ಕೆ ಹುಟ್ಟಿದ ಆಕ್ಟು.	ಪ್ರಕರಣಗಳು - 7 ವ 8.
1871ನೇ ಇಸವಿಯ 4ನೇ ನಂಬರು.	ಕರೋನರ್ಸೆಂಬ ಧುರ್ಮರಣ ವಿಚಾರಣಾಕರ್ತರಿಗೆ ಸಂಬಂ ಧಪಡುವ ಕಾನೂನುಗಳನ್ನು ಒಟ್ಟುಪಡಿಸಿ ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟು.	ಪ್ರಕರಣ 7, ಮತ್ತು 38ನೇ ಪ್ರಕರಣದಲ್ಲಿ "ಮತ್ತು ಆ ಡೆ ಪ್ಯುಟಿಯು ಹೈ ಕೋರ್ಟು ಜಡ್ಜಿಗಳ ಪೈಕೀ ಒಬ್ಬರ ಸಮ ಕ್ಷಮದಲ್ಲಿ ತನ್ನ ಉದ್ಯೋಗ ದ ಕೆಲಸಗಳನ್ನು ನಿಸ್ಪೃಹ ತ್ವವಾಗಿ ನೆರವೇರಿಸುವೆ ಯೆಂ ದು ಪ್ರಮಾಣ ಮಾಡತಕ್ಕ ದ್ದು ಮತ್ತು ಅದಕ್ಕೆ ದಸ್ತು ಹಾಕತಕ್ಕದ್ದು" ಯೆಂಬ ಮಾತುಗಳು.
1871ನೇ ಇಸವಿಯ 6ನೇ ನಂಬರು.	ಬಂಗಾಳಾ ಡಿಸ್ಟ್ರಿಕ್ಟು ತಾಜೇದಾರೀ ಸಿವಿಲ್ ಕೋರ್ಟುಗಳಿಗೆ ಸಂಬಂಧಪಡುವ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡುವ ದಕ್ಕೋಸ್ಕರ ಹುಟ್ಟಿದ ಆಕ್ಟು.	ಪ್ರ - 13.
1872ನೇ ಇಸವಿಯ 6ನೇ ನಂಬರು.	ಪ್ರಮಾಣಗಳಿಗೂ ಸತ್ಯಗಳಿಗೂ ಸಂಬಂಧಪಡುವ ಕಾನೂ ನನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟು.	ಪೂರಾ.
1872ನೇ ಇಸವಿಯ 18ನೇ ನಂಬರು.	1872, ಇಂಡ್ಯದ ಸಾಕ್ಷ್ಯದ ಆಕ್ಟನ್ನು ದುರಸ್ತು ಮಾ ಡಲಿಕ್ಕೆ ಹುಟ್ಟಿದ ಆಕ್ಟು.	ಪ್ರ - 12.
1866ನೇ ಇಸವಿಯ 6ನೇ ನಂಬರು ಬೊಂಬಾಯಿ ಆಕ್ಟು.	ಬೊಂಬಾಯಿ ರಾಜಧಾನಿ ಇಲಾಖೆಯಲ್ಲಿ ಉದ್ಯೋಗ ವಿಷ ಯವಾದ ಕೆಲವು ರೂಢಿ ವಾಕ್ಯಗಳಿಗೆ ಸಂಬಂಧಪಡುವ ಕಾನೂ ನನ್ನು ದುರಸ್ತುಮಾಡಲಿಕ್ಕೆ ಹುಟ್ಟಿದ ಆಕ್ಟು.	ಪೂರಾ.

PART III.—REGULATIONS.

ಮೂರನೇ ಭಾಗ.—ರೆಗ್ಯುಲೇಷರ್.

1793ನೇ ಇಸವಿಯ 4ನೇ ಬಂಗಾಳಾ ರೆಗ್ಯುಲೇಷರ್.	ಆಯಾ ಜಿಲ್ಲಾ ಕೋರ್ಟುಗಳಲ್ಲಿಯೂ ಪಾಟ್ನಾ, ಡಾಕ್ಕಾ, ಮೂರ್ಷದಬಾದ್ ಪಟ್ಟಣಗಳಲ್ಲಿಯೂ ಸ್ಥಾಪಿಸಲ್ಪಟ್ಟಾದ ದಿವಾನೀ ಅ ದಾಲತ್ತು ಕೋರ್ಟುಗಳಲ್ಲಿ ವಿಚಾರಣೆ ಆಗಬಹುದೆಂದು ತೀರಿಸಿರೋ ಣಾದ ವ್ಯಾಜ್ಯಗಳನ್ನಾಗಲೀ ಫಿರ್ಯಾದುಗಳನ್ನಾಗಲೀ ಹಿಡಿಯಲಿ ಕ್ಕೂ ತನಿಖೀಮಾಡಲಿಕ್ಕೂ ಫೈಸಲ್ ಕೊಡಲಿಕ್ಕೂ ಹುಟ್ಟಿದ ರೆ ಗ್ಯುಲೇಷರ್.	6ನೇ ಪ್ರಕರಣದಲ್ಲಿ ರದ್ದಾ ಗದೇ ಇರುವಷ್ಟು.

3ನೇ ಭಾಗ—ರೆಗ್ಯೂಲೇಷನ್‌ಗಳು ವಿಷಯ.

ನಂಬರು ವ ಸಂವತ್ಸರ.	ಹೆಸರು.	ರದ್ದಿಯಾತಿಯ ಪರಿಮಾಣ
1803ನೇ ಇಸವಿಯ 3ನೇ ಬಂಗಾಳಾ ರೆಗ್ಯೂಲೇಷನ್.	ಶ್ರೀಬಹುಮಾನ್ಯರಾದ ಇಂಗ್ಲೀಷು ಈಸ್ಟಿಂಡಿಯಾ ಕಂಪೆನಿಯವರಿಗೆ ನವಾಬ್ ವಜೀರು ಕೊಟ್ಟ ಶೀಮೆಗಳಲ್ಲಿರುವ ಆಯಾ ಜಿಲ್ಲಾಗಳಲ್ಲಿ ಸ್ಥಾಪಿಸಿರೋಣವಾದ ಅದಾಲತ್ತು ಕೋರ್ಟುಗಳಲ್ಲಿ ವಿಚಾರಣೆಯಾಗಬಹುದೆಂದು ತಿಳಿಸಿರೋಣವಾದ ವ್ಯಾಜ್ಯಗಳನ್ನಾಗಲಿ ಫಿರ್ಯಾದುಗಳನ್ನಾಗಲಿ ಹಿಡಿಯಲಿಕ್ಕೂ ತನಿಖೀಮಾಡಲಿಕ್ಕೂ ಫೈಸಲ್ ಕೊಡಲಿಕ್ಕೂ ಹುಟ್ಟಿದ ರೆಗ್ಯೂಲೇಷನ್.	7ನೇ ಪ್ರಕರಣದಲ್ಲಿ ರದ್ದಾಗದೇ ಇರುವಷ್ಟು ಮತ್ತು ಪ್ರಕರಣ - 8.
1833ನೇ ಇಸವಿಯ 9ನೇ ಬಂಗಾಳಾ ರೆಗ್ಯೂಲೇಷನ್.	1822ನೇ ಇಸವಿಯ 7ನೇ ರೆಗ್ಯೂಲೇಷನಿನ ಕೆಲವು ಅಂಶಗಳನ್ನೂ 1828ನೇ ಇಸವಿಯ 4ನೇ ರೆಗ್ಯೂಲೇಷನನ್ನೂ ತಿದ್ದುವದಕ್ಕೂ; ಮೇಲೆ ನಮೂದಿಸಿರೋಣವಾದ ರೆಗ್ಯೂಲೇಷನ್‌ಗಳಿಗನುಗುಣವಾಗಿ ಸೆಟಲ್ಮೆಂಟುಗಳನ್ನು ಮಾಡುವದರಲ್ಲಿ ಚಾಕರಿಯಾಗಿರುವ ರೆವಿನ್ಯೂ ಆಫಿಸರುಗಳು ವಿಚಾರಣೆ ಮಾಡಬಹುದಾದ ಜುಡಿಷ್ಯಲ್ ವಿಷಯಗಳನ್ನು ಇನ್ನೂ ತ್ವರೆಯಾಗಿಯೂ ತೃಪ್ತಿಕರವಾಗಿಯೂ ಫೈಸಲು ಕೊಡುವದಕ್ಕೋಸ್ಕರ - ಗ್ರಾಮ ಲೆಕ್ಕಗಳನ್ನು ಹಾಜರ್ಮಾಡಿಸಿಕೊಳ್ಳುವದಕ್ಕೋಸ್ಕರ ರೆವಿನ್ಯೂ ಡಿಪಾರ್ಟುಮೆಂಟಿನಲ್ಲಿ ದೇಶೀಯ ಉದ್ಯೋಗಸ್ತರನ್ನು ಇನ್ನೂ ಜಾಸ್ತೀಯಾಗಿ ನೌಕರೀಲಿಟ್ಟುಕೊಳ್ಳುವದಕ್ಕೋಸ್ಕರ ನಿಬಂಧಿಸಲಿಕ್ಕೂ, ಮಾಲೀಕನ ಹಕ್ಕುಗಳ ವಿಷಯವಾಗಿ 1822ನೇ ಇಸವಿಯ 7ನೇ ರೆಗ್ಯೂಲೇಷನ್ 5ನೇ ಪ್ರಕರಣದ ಸಂಕಲ್ಪವನ್ನು ತಿಳಿಸುವದಕ್ಕೂ - ಹುಟ್ಟಿದ ರೆಗ್ಯೂಲೇಷನ್.	ಪ್ರ - 19.
1803ನೇ ಇಸವಿಯ 1ನೇ ಮದ್ರಾಸು ರೆಗ್ಯೂಲೇಷನ್.	ರೆವಿನ್ಯೂ ಬೋರ್ಡಿನವರ ಕೆಲಸಗಳನ್ನು ವಿವರಿಸುವದಕ್ಕೋಸ್ಕರ ಮತ್ತು ರೆವಿನ್ಯೂ ಬೋರ್ಡಿನವರಿಗೆ ಕೊಟ್ಟಿರುವ ಅಧಿಕಾರಗಳ ವ್ಯಾಪ್ತಿಯನ್ನು ಗೊತ್ತು ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯೂಲೇಷನ್.	ಪ್ರಕರಣಗಳು—2 ವ 3.
1803ನೇ ಇಸವಿಯ 2ನೇ ಮದ್ರಾಸು ರೆಗ್ಯೂಲೇಷನ್.	ಕೆಲವು ಸಂಗತಿಗಳಲ್ಲಿ ಕಲೆಕ್ಟರು ಅನುಸರಿಸಬೇಕಾದ ಕ್ರಮವನ್ನು ವಿವರಿಸಿ ಗೊತ್ತುಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯೂಲೇಷನ್.	ಪ್ರಕರಣಗಳು—3 ವ 4.
1816ನೇ ಇಸವಿಯ 14ನೇ ನಂಬರ್ರು ಮದ್ರಾಸು ರೆಗ್ಯೂಲೇಷನ್.	ಸಿವಿಲ್ ಜುಡಿಕೇಚರ್ ಕೋರ್ಟುಗಳಲ್ಲಿ ವಕೀಲ್ ಯಾನೇಟಿವ್ ಪ್ಲೀಡರ್ ವಿಷಯವಾಗಿ ಹುಟ್ಟಿರುವ ರೂಲ್ಸನ್ನು ದುರಸ್ತು ಮಾಡಿ ತಿದ್ದುವದಕ್ಕೋಸ್ಕರ ಹುಟ್ಟಿದ ರೆಗ್ಯೂಲೇಷನ್.	ಪ್ರ—5
*1799ನೇ ಇಸವಿಯ 6ನೇ ನಂಬರು ಬೊಂಬಾಯಿ ರೆಗ್ಯೂಲೇಷನ್.	ಬೊಂಬಾಯಿ ಸುಂಕಗಳನ್ನು ವಸೂಲ್ಮಾಡುವ ಬಗ್ಯೆ ಹಾಲೀ ಇರುವ ರೂಲ್ಸನ್ನು ಚಟ್ಟ ಮಾಡಲಿಕ್ಕೆ ಹುಟ್ಟಿದ ರೆಗ್ಯೂಲೇಷನ್	ಪ್ರ—2, ಕಲಂ 2. " ಪ್ರಾಕ್ಸು " ಎಂಬವದ ಮೊದಲ್ಗೊಂಡು ಆ ಕಲಮಿನ ಕಡೇ ವರಿವಿಗೆ.

* 1851ನೇ ಇಸವಿಯಲ್ಲಿ, ಲಂಡನ್ ಪಟ್ಟಣದಲ್ಲಿ ಕ್ಲಾರ್ಕು ಯೆಂಬಾತನು ಛಾಪೆ ಮಾಡಿಸಿದ ಬೊಂಬಾಯಿ ರೆಗ್ಯೂಲೇಷನ್‌ಗಳ ಪುಸ್ತಕದ 246ನೇ ಪುಟದಲ್ಲಿ ಮುದ್ರಿಸಿಧೆ.

3ನೇ ಭಾಗ.—ರೆಗ್ಯೂಲೇಷನ್‍ಗಳ ವಿಷಯ.

ನಂಬರು ವ ಸಂವತ್ಸರ.	ಹೆಸರು.	ರದ್ದೀಯಾತಿಯ ಪರಿಮಾಣ.
1827ನೇ ಇಸವಿಯ 2ನೇ ಬೊಂಬಾಯಿ ರೆಗ್ಯೂಲೇಷನ್.	ಸಿವಿಲ್ ಕೋರ್ಟುಗಳ ಏರ್ಪಾಟನ್ನೂ ಸದರೀ ಕೋರ್ಟುಗಳಿಗೆ ಸೇರಿದ ಜಡ್ಜೀರ ವ ಆಫೀಸರರ ಅಧಿಕಾರಗಳನ್ನೂ ಕೆಲಸಗಳನ್ನೂ ವಿವರಿಸುವದಕ್ಕೋಸ್ಕರ ಹುಟ್ಟಿದ ಆಕ್ಟು.	ಪ್ರಕರಣಗಳು—4 ವ 15. 'ಪ್ರ—11, ಕಲಂ 1ರಲ್ಲಿ ತಮ್ಮ ಉದ್ಯೋಗಗಳಿಗೆ ಒಂದು ಕೆಲಸ ನೋಡುವದಕ್ಕೆ ಮುಂಚೆ B ಅಪ್ಪೆಂಡಿಕ್ಸಿನಲ್ಲಿರುವ ಪ್ರಮಾಣವನ್ನು ಕೋರ್ಟಿನಲ್ಲಿ ಬಹಿರಂಗವಾಗಿ ಮಾಡಿ ಅದರಡೀಲಿ ದಸ್ತು ಮಾಡತಕ್ಕಂಥಾ" ಯೆಂಬ ಮಾತುಗಳು B ಅಪ್ಪೆಂಡಿಕ್ಸು.
1827ನೇ ಇಸವಿಯ 12ನೇ ಬೊಂಬಾಯಿ ರೆಗ್ಯೂಲೇಷನ್.	ಬೊಂಬಾಯಿಗೊಳಪಟ್ಟ ಜಿಲ್ಲಾಗಳೊಳಗೆಲ್ಲಾ ಪೋಲೀಸನ್ನು ಯೇರ್ಪಾಟು ಮಾಡಲಿಕ್ಕೂ ಅದರ ಆಡಳಿತೆ ಬಗ್ಯೆ ರೂಲ್ಸನ್ನು ಮಾಡಲಿಕ್ಕೂ ಸಮಸ್ತ ಪೋಲೀಸು ಅಧಿಕಾರಸ್ಥರ ವ ನೌಕರರ ಕೆಲಸಗಳನ್ನೂ ಅಧಿಕಾರಗಳನ್ನೂ ವಿವರಿಸಲಿಕ್ಕೂ ಹುಟ್ಟಿದ ಆಕ್ಟು.	3ನೇ ಪ್ರಕರಣ 5ನೇ ಕಲಮಿನಲ್ಲಿ ರದ್ದಾಗದೆ ಇರುವಷ್ಟು.
1827ನೇ ಇಸವಿಯ 13ನೇ ನಂಬರು ಮುಂಬಾಯಿ ರೆಗ್ಯೂಲೇಷನ್.	ಕ್ರಿಮಿನಲ್ ಕೋರ್ಟುಗಳ ಏರ್ಪಾಟನ್ನೂ ಸದರೀ ಕೋರ್ಟುಗಳ ಕೆಲಸಗಳನ್ನೂ ನಡವಳಿತೆಗಳನ್ನೂ ವಿವರಿಸುವದಕ್ಕೋಸ್ಕರ ಹುಟ್ಟಿದ ರೆಗ್ಯೂಲೇಷನ್.	36ನೇ ಪ್ರಕರಣದ 2ನೇ ಕಲಮಿನಲ್ಲಿ ರದ್ದಾಗದೆ ಇರುವಷ್ಟು.
1827ನೇ ಇಸವಿಯ 16ನೇ ನಂಬರು ಮುಂಬಾಯಿ ರೆಗ್ಯೂಲೇಷನ್.	ಬೊಂಬಯಿಗೊಳಪಟ್ಟ ಶೀಮೆಗಳೊಳಗೆ ಇರುವ, ಕಲೆಕ್ಟರುಗಳ ಕೆಲಸಗಳನ್ನೂ, ತಾಪೇದಾರೀ ರವಿನ್ಯೂ ಉದ್ಯೋಗಸ್ಥರ ಮೇಲೆ ಅವರಿಗಿರುವ ಅಧಿಕಾರಗಳನ್ನೂ ವಿವರಿಸುವದಕ್ಕೋಸ್ಕರವೂ, ಜಾಮೀನ್ ರವಿನ್ಯೂ ಉದ್ಯೋಗಸ್ಥರ ನಡವಳಿತೆಯ ಬಗ್ಯೆ ರೂಲುಗಳನ್ನು ಮಾಡುವದಕ್ಕೋಸ್ಕರವೂ, ಹುಟ್ಟಿದ ರೆಗ್ಯೂಲೇಷನ್.	ಪ್ರ 3 ಮತ್ತು 5ನೇ ಪ್ರಕರಣದಲ್ಲಿ ಪ್ರಮಾಣಗಳನ್ನು ಮಾಡಿಸುವ ವಿಷಯವಾಗಿ ಸಂಬಂಧಿಸಿರುವಷ್ಟು.
1827ನೇ ಇಸವಿಯ 19ನೇ ಮುಂಬಾಯಿ ರೆಗ್ಯೂಲೇಷನ್.	ಜಮೀನ್ ಶಿಸ್ತನ್ನು ಮೊಕರರ್ಮಾಡಿ ವಸೂಲ್ಮಾಡುವದಕ್ಕೂ ಅಂಗಡಿಗಳ ಮೇಲೂ, ಕಟ್ಟೆಗಳ ಮೇಲೂ, ತಪಟೇ ಹೊಡಿಯೋಣ ಯಾ ಕೂಗಿ ಹೇಳಿ ಪ್ರಕಟನೇ ಮಾಡೋಣಾದ ಮೇಲೂ, ಸ್ವದೇಶ ವಾಹಗದ ಮೇಲೂ, ಮದುವೆ ಚಪ್ಪರಗಳು ಮತ್ತು ಜನವಿನೋದಸ್ಥಳಗಳ ಮೇಲೂ, ಮನೆಗಳ ಮೇಲೂ, ಕುದುರೆಗಳ ಮೇಲೂ, ತೆರಿಗೆಗಳನ್ನು ವಸೂಲ್ಮಾಡುವದಕ್ಕೂ ಕ್ವಿಟರೆಂಟ್ ಕಂದಾಯ ಯಾ ಜಮೀನು ಕಂದಾಯಕ್ಕೆ ಗುರಿಯಾದ ಮನೆಗಳನ್ನು ಯಾ ಗೃಹಗಳನ್ನು ಮಾರ ಬಹುದಾದಂಥಾವರು ಯಾ ವರ್ಗ ಮಾಡಬಹುದಾದಂಥಾವರು ಹಾಗೆ ಮಾಡುವಂಥಾದ್ದನ್ನು ಕಲೆಕ್ಟರಿಗೆ ತಿಳಿಸುವ ಹಾಗೆ ಮಾಡುವದಕ್ಕೂ, ಪೆಟ್ಟಿಸೆಷನ್ ಕೋರ್ಟಿನಲ್ಲಿ ವ ಪೋಲೀಸು ಆಫೀಸು	1ನೇ ಪ್ರಕರಣದ 2ನೇ ಕಲಂ ಮತ್ತು 6ನೇ ಪ್ರಕರಣದಲ್ಲಿ "ಮತ್ತು" ಯೆಂಬ ಪದ ಮೊದಲ್ಗೊಂಡು "ತಕ್ಕದ್ದು" ಯೆಂಬ ಪದದವರಿವಿಗೆ. ಅಪ್ಪೆಂಡಿಕ್ಸು A.

3ನೇ ಭಾಗ.—ರೆಗ್ಯೂಲೇಷನ್‌ಗಳ ವಿಷಯ.

ನಂಬರು ವ ಸಂವತ್ಸರ.	ಹೆಸರು.	ರದ್ದಿಯಾತಿಯ ಪರಿಮಾಣ.
	ಗಳಲ್ಲಿ ರುಸುಮುಗಳನ್ನು ವಸುಲ್ಮಾಡುವದಕ್ಕೂ ರೂಲ್ಸನ್ನು ನಿರ್ದೇಶಿಸಿ, ಪ್ರೆಸಿಡೆನ್ಸಿಗಾಗಿ ಹುಟ್ಟಿದ ರೆಗ್ಯೂಲೇಷನ್.	
	ಪೂನ ಜಿಲ್ಲೆಯೊಳಗೆ ಒಬ್ಬ ಜಾಯಿಂಟ್ ಜಡ್ಜಿಯನ್ನು ಮೊಕರರ್ಮಾಡುವ ವಿಷಯವಾಗಿ ಹುಟ್ಟಿದ ರೆಗ್ಯೂಲೇಷನ್.	

(ದಸ್ತಕತು) ವಿಟ್ಲೆ ಸ್ಟೋಕ್ಸ

ಇಂಡ್ಯ ಗವರ್ನಮೆಂಟ್ ಸೆಕ್ರಟೇರಿ.

ಆಲೋಚನಾ ಸಭೆಯೊಳಗಣ ಶ್ರೀಬಹುಮಾನ ಪಟ್ಟ ಗವರ್ನರವರ ಹುಕುಮಿನ ಮೇರಿಗೆ ಪುನಹ ಪ್ರಕಟಿಸೋಣಾಯಿ

ದಸ್ತಕತು) ಡಬ್ಲಿಯೂ ಹಡ್ಲಿಸ್ಟನ್,
ಚೀಫ್ ಸೆಕ್ರಿಟೇರಿ

(A True Translation.)

J. STURROCK,

Ag. Canarese Translator to Government.

M. V.

Mysore Government Press, Bangalore—1876.

ಮೈಸೂರ ಗೆಜೆಟ್.

ನಂ. 30 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಜೂಲೈ ತಾ॥ 29, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟನವರ ಇಸ್ತಿಹಾರ್ ನಾಮೆಗಳು.	123—127
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ಸೆಟಲ್ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಪೇ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡುಗ ಪ್ರಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. ..	369—380
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— ..	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	89—98

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 110. ತಾರೀಖು 29ನೇ ಜೂನ್ 1876.

ಹಾಲೀ ಜಾರೀಯಿರುವ 27, 28, 29 ಈ ನಂಬರಗಳ ಬಾಬತು ಬೈಲಾ ನಿಬಂಧನೆಗಳಿಗೆ ಬದಲಾಗಿ 27 $\frac{2}{27}$ 28 $\frac{2}{28}$ 29 $\frac{2}{29}$ ಈ ನಂಬರುಗಳುಳ್ಳ ಬೈಲಾ ನಿಬಂಧನೆಗಳು ಬೆಂಗಳೂರು ಕಂಟೋನ್‌ಮೆಂಟಿನಲ್ಲಿ ಜಾರೀಗೆ ತರಲ್ಪಡತಕ್ಕದ್ದನ್ನು ಚೀಫ್ ಕಮ್ಮಿಷನರವರು ಮಂಜೂರ್ ಮಾಡಿರುವದ್ದರಿಂದ ಅವುಗಳು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾರ್ಫಿಯಾನೆ ಚಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದರ್ಫ ಮಾಡಕೂಡದು, ಯಾ ದರ್ಫ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದರ್ಫ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಕಡಮೆ ಯಿಲ್ಲದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದರ್ಫ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ, ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜರ್ಲ ಭೂಮಿಯೊಳಗಾಗಲಿ, ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜರ್ಲ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದಿಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದಿಯಾಗುವ ಪರ್ಯಂತ ಆಚೆಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜರ್ಲ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜರ್ಲ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜರ್ಲ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದರ್ಫ ಯಾ ಜರ್ಲ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜರ್ಲ ಯಾ ದರ್ಫ ಭೂಮಿಗಳ ಇಂಚಾರ್ಜ್ ಟ್ರಸ್ಟೀಗಳಾಗಲಿ ಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಫ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿದಿನಕ್ಕೂ ಯೆರಡು ರೂಪಾಯಿಗಳಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 122. ತಾರೀಖು 10ನೇ ಜೂಲೈ 1876.

ಸನ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಆಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಡುವ ಜಮೀನು ಒಂದು ಪಾಯಿಖಾನೆ ಕಟ್ಟತಕ್ಕ ಬಗ್ಯೆ ಶಿವಮೊಗ್ಗೇ ಷಹರ ಮ್ಯುನಿಸಿಪಾಲಿಟಿ ಯವರಿಗೆ ಬೇಕಾಗಿರುತ್ತೆ.

ನಂಬರು 1.

ಮೊಹಲ್ಲಾ—ಸೋಮಶೇಕರ ಮಠ.
ಮಾಲೀಕನ ಹೆಸರು—ನಂಜುಂಡೈಯ್ಯ.

ಜಮೀನು ತಪ್ಸೀಲ್—ಬಂಜರು.
ಎಲ್ಲಿರುತ್ತೆ—ಸೋಮಶೇಕರ ಮಠದ ಆವರಣದಲ್ಲಿ.
ಬೀಜವರಿ—ಲಾಂಬಿ 35 ಅಡಿ—ರುಂದಿ 30 ಅಡಿ ಆಕಾರ ಇಲ್ಲ.

ಚೌ ತ ಫ್ರು ರ.

ಪೂರ್ವಕ್ಕೆ—ಬ್ರಾಹ್ಮರ ಬೀದಿಯಿಂದ ನದೀಗೆ ಹೋಗುವ ಸಂದಿ. ಉತ್ತರಕ್ಕೆ—ಗಂಗಾಧರಗಿರಿ ಮಠ.
ಪಶ್ಚಿಮಕ್ಕೆ—ತೆಡಕಿ ವ್ರತದಿಂದ ಬರುವ ಸಂದಿ. ದಕ್ಷಿಣಕ್ಕೆ—ತುಂಗಾನದಿಯು ತೀರ.

ನಂ. 149. ತಾರೀಖು 22ನೇ ಜುಲೈ 1876.

ತುಮಕೂರು ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಕೇಪ್ಟನ್ ಲಡ್ಲೋಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

5ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವುಡ್‌ಕಾಕ್‌ಯವರು, ಕೇಪ್ಟನ್ ಲಡ್ಲೋಯವರ ಗೈರ್ ಹಾಜರಿಯಲ್ಲಿ ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ವ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 150. ತಾರೀಖು 24ನೇ ಜುಲೈ 1876

ಮೇಸ್ಟರ್ ಪ್ಲೋರ್ಡಿಯನ್ ಯವರು ಪೋಲೀಸ್ ಡೆಪ್ಯುಟೀ ಇನ್ಸ್‌ಪೆಕ್ಟರ್ ಆಫಿಸ್ ಚಾರ್ಜನ್ನು ಮೇಜರ್ ಗಾಂಪರ್ಟ್ಜ್ ಯವರಿಂದ ಮಾಹೇ ಮಜಕೂರು 17ನೇ ತಾರೀಖಿನಲ್ಲಿ ವಹಿಸಿದರು. ಸದರೀ ತಾರೀಖಿನ ಲಗಾಯತು ಮೇಜರ್ ಗಾಂಪರ್ಟ್ಜ್ ಯವರು 1876ನೇ ಇಸವೀ ಜೂನ್ 19ನೇ ಮರ್ಕುಂ 99ನೇ ನಂಬರ್ ಇಸ್ತಿಹಾರಿನಲ್ಲಿ ತಮಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾವನ್ನು ಉಪಯೋಗಿಸಿಕೊಂಡಿರುತ್ತಾರೆ.

ನಂ. 151. ತಾರೀಖು 24ನೇ ಜುಲೈ 1876.

ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಟರ್ ಆನಂದರಾಯರು ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರೀ ಮತ್ತು 3ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರ್ ಕೋರ್ಟು ಚಾರ್ಜನ್ನು 1876ನೇ ಇಸವಿ ಜುಲೈ 13ನೇ ಮರ್ಕುಂ ಮಧ್ಯಾನ್ಹಕ್ಕೆ ಪೂರ್ವ ಪುನಃ ವಹಿಸಿದರು.

ನಂ. 152. ತಾರೀಖು 24ನೇ ಜುಲೈ 1876.

ಮೇಸ್ಟರ್ ಶೇಷಾದ್ರಿ ಐಯರ್‌ಯವರು ಮೈಸೂರಲ್ಲಿ ಜುಡಿಷಲ್ ಅಸಿಸ್ಟೆಂಟ್ ಕೋರ್ಟು ಚಾರ್ಜನ್ನು 1876ನೇ ಇಸವಿ ಜುಲೈ 7ನೇ ತಾರೀಖು ಮಧ್ಯಾನ್ಹಕ್ಕೆ ಪೂರ್ವ ತೆಗದುಕೊಂಡರು.

ನಂ. 153. ತಾರೀಖು 24ನೇ ಜುಲೈ 1876

ಬೆಂಗಳೂರು ತಾಲ್ಲೂಕು ಶಿರಸ್ತೇದಾರ್ ಬಿ. ವೆಂಕಯ್ಯನವರು ರಜಾದ ಮೇಲೆ ಯಿರುವ ಭೀಮರಾಯರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ವರಿಯಂತ ಕ್ಲೋಸ್‌ಪೇಟೇ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಹಂಗಾಮೀ ತರೀಕ್ ಆಕ್ಟಿಂಗ್ ಕೆಲಸ ನೋಡುವಂತೆ ಮೊಕರರ್.

ನಂ. 154. ತಾರೀಖು 24ನೇ ಜುಲೈ 1876.

ಶಿವಮೊಗ್ಗಾ ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೇಸ್ಟರ್ ವಿಜಯರಾಘವಲು ನಾಯಕರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಗಾಯತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 155. ತಾರೀಖು 25ನೇ ಜುಲೈ 1876.

ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಅಪ್ಪೂರಾಯರಿಗೆ 1876ನೇ ಇಸವಿ ಆಗಿಸ್ಟು ಗುರ್ರೇ ಲಗಾಯತು ಅಥವಾ ಅವರು ಯಾವ ಲಗಾಯತು ಉಪಯೋಗಿಸಿಕೊಳ್ಳುತ್ತಾರೋ ಆ ತಾರೀಖಿನಿಂದ $2\frac{1}{2}$ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 156. ತಾರೀಖು 25ನೇ ಜುಲೈ 1876.

ಕಡೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೇಸ್ಟರ್ K. ಮಹಮ್ಮದ್ ಅಲ್ಲಿ ಯವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 157. ತಾರೀಖು 26ನೇ ಜುಲೈ 1876.

ಮೇಸ್ಟರ್ ಷಣ್ಮುಗವೇಲು ಪಿಳ್ಳೆಯವರು ಮೈಸೂರು ಡಿಸ್ಟ್ರಿಕ್ಟು ಟ್ರೇಜರೀ ಚಾರ್ಜನ್ನು 1876ನೇ ಇಸವಿ ಜುಲೈ 10ನೇ ಮರ್ಕ್ಹಂ ಮಧ್ಯಾನ್ಹಾತ್ಪರ ಪುನಃ ವಹಿಸಿದರು.

ಮೇಸ್ಟರ್ ಷಣ್ಮುಗವೇಲುಪಿಳ್ಳೆಯವರಿಗೆ 1876ನೇ ಇಸವಿ ಮೇ 22ನೇ ಮರ್ಕ್ಹಂ 64ನೇ ನಂಬರ್ ಇಸ್ತಿಹಾರ್‌ನಲ್ಲಿ ಕೊಡಲ್ಪಟ್ಟ ಪ್ರಿವಿಲೀಜ್ ರಜಾ 1876ನೇ ಜುಲೈ 10ರ ವರಿಗೂ ವಿಸ್ತರಿಸಲ್ಪಟ್ಟಿರುತ್ತೆ.

ನಂ. 158. ತಾರೀಖು 27ನೇ ಜುಲೈ 1876.

ಮೇಸ್ಟರ್ ಕೃಷ್ಣಸ್ವಾಮೈಯಂಗಾರ್ರವರು ಬೆಂಗಳೂರು ಡಿಸ್ಟ್ರಿಕ್ಟು ಫಸ್ಟ್ ಅಸಿಸ್ಟೆಂಟ್ ಕಮ್ಮಿಷನ್ನರ್ ಕೋರ್ಟು ಚಾರ್ಜನ್ನು ಮೇಸ್ಟರ್ ಪೋರ್ಬ್ಸಿಯಸ್‌ಯವರಿಂದ 1876ನೇ ಇಸವಿ ಜುಲೈ 17ನೇ ತಾರೀಖಿನಲ್ಲಿ ತೆಗದುಕೊಂಡರು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್ ಇಲಾಖಾ.

ನಂ. 24. ತಾರೀಖು 22ನೇ ಜುಲೈ 1876

ಕೊಡಗು ಸಬ್ ಓವರ್‌ಸೀಯರ್ ಮೇಸ್ಟರ್ ವೀಲರ್ ಯವರಿಗೆ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

C. BOWEN, *Captain*, R. E.,
Offg. Under-Secy. R. & B. Branch.

ನಂ. 25. ತಾರೀಖು 24ನೇ ಜುಲೈ 1876.

2ನೇ ನಂಬರ್ ಟ್ಯಾಂಕ್ ಡಿವೀಜನ್ನಿಗೆ ಸೇರಿದ ಓವರ್‌ಸೀಯರ್ ಕೃಷ್ಣಐಯರ್ ಯವರಿಗೆ 1876ನೇ ಇಸವಿ ಮೇ ಗುರ್‍ರೆ ಲಗಾಯತು 31ನೇ ಆಗಸ್ಟು ವರಿಗೆ ಮೆಡಿಕಲ್ ಸರ್ಟಿಫಿಕೇಟ ಮೇಲೆ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

W. CHRYSTIE, *Major*, R. E.,
Offg. Under-Secy., Irrigation Branch.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 3. ತಾರೀಖು 7ನೇ ಜುಲೈ 1876.

ವೀರರಾಜೇಂದ್ರಪೇಟೆ ಮ್ಯುನಿಸಿಪ್ಯಾಲಿಟಿಗೋಸ್ಕರ ಇದರಡಿ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟಿವೆಯಾಗಿ ಸಕಲರಿಗೂ ತಿಳಿಯತಕ್ಕ ಬಗ್ಗೆ ಘೋಯಿಷ ಮಾಡಲ್ಪಟ್ಟಿರುತ್ತೆ.

1. ವೀರರಾಜೇಂದ್ರಪೇಟೆ ಷಹರಿಗೆ ಸುಂಕದ ಬಾಬತು ಯಾವ ಪದಾರ್ಥಗಳನ್ನಾಗಲಿ ಪ್ಯಾಸ ಚೀಟಿ ಯಿಲ್ಲದೆ ಅಥವಾ ಅಂತಾ ಪದಾರ್ಥಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಪಾವತೀ ಮಾಡದೇ ಯಾವನು ಆಮದ ಮಾಡುತ್ತಾನೋ ಯಾ ಆಮದ ಮಾಡಲಿಕ್ಕೆ ಯತ್ನಿಸುತ್ತಾನೋ ಯಾ ತರುತ್ತಾನೋ ಅಂತಾ ಮನುಷ್ಯನು ಪೊಬ್ಬ ಮಾಜಿಸ್ಟ್ರೇಟರವಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ಅಂತಾ ಪದಾರ್ಥಗಳ ಕಿಮ್ಮತಿನ್ನೆರಡಷ್ಟಕ್ಕೆ ಮಿರದ, ಮತ್ತಿನ್ಯಾವ ಸಂಗತಿಯಲ್ಲಿಯೂ 500 ರೂಪಾಯಿಗೆ ಮಿರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಸದರೀ ಪದಾರ್ಥಗಳು ಜಪ್ತಿ ಆಗಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

2. ಸದರೀ ಮ್ಯುನಿಸಿ ಪಾಲಿಟಿಯೊಳಗೆ ಛೇದಿಸುವದಕ್ಕೊಸ್ಕರ ತರಲ್ಪಡುವ ಪ್ರತಿ ಕುರಿ ಯಾ ಮೇಕೆಗೆ 3 ಕಾಸುಗಳ ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

"ಬಮೋಜೀಬ ಹುಕ್ಕುಂ,"

T. Clarke,
Offg. Secretary.

ಇಂಡ್ಯಗವರ್ನಮೆಂಟನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ರೆವಿನ್ಯೂ ಅಗ್ರಿಕಲ್ಚರ ವ ಕಾಮರ್ಸ್ ಇಲಾಖಾ.

ಇಸ್ತಿಹಾರ.

ನಂ. 603. ತಾರೀಖು 14ನೇ ಜುಲೈ 1876ನೇ ಇಸವಿ ಮೊಕ್ಕಾಂ ಸಿಂಲಾ.

ಮೈಸೂರು ರೆವಿನ್ಯು ಸರ್ವೇ ಅಸಿಸ್ಟಂಟ ಸೂಪರಿಂಟೆಂಡೆಂಟ ಮೇಸ್ಟರ ಬೆತಂಯವರು 1876ನೇ ಮೇ 27ರ ಲಗಾಯತ್ತು 4ನೇ ಗ್ರೇಡಿನಿಂದ 3ನೇ ಗ್ರೇಡಿಗೆ ಬಡತೀ ಮಾಡಲ್ಪಟ್ಟಿರುತ್ತಾರೆ.

A. O. Hume,
Secretary to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂಲೈ ತಾ॥ 29, ಸರ್ಕ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 28ನೇ ಜೂಲೈ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ಲೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರ ಹೆಸರು	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಅಪ್ಪೀಲ್ ೧ರಿ. ನಂ. ೨೦	ಸುಬ್ಬಯ್ಯ ..	ಲಕ್ಷ್ಮಣ್ಣಯ್ಯ ..	೨೯ನೇ ಜೂಲೈ
ಅಪ್ಪೀಲ್ ೪ರಿ. ನಂ. ೧೩	ಚನ್ನಮಲ್ಲಯ್ಯ ..	ಮಲ್ಲಮ್ಮ ವಗೈರೆ ..	೧ನೇ ಆಗಸ್ಟು
ಸ್ಪೆ. ಅ. ೪೩	ಅನಂತಮೂರ್ತಿರಾವ್ ..	ರಾಮಸ್ವಾಮಯ್ಯಂಗಾರ್ ..	ಡಿಟೋ
ಸ್ಪೆ. ಅ. ೪೪	ಮಿಸ್ಟರ್ ಹೆಚ್ ..	ಗಂಗಾಧರಶೆಟ್ಟಿ ..	೩ನೇ ಡಿಟೋ
ಫ್ಲೂಟ್ ಸ್ಪೆ. ಅ. ೮	ದ್ಯಾವೇಗೌಡ ..	ದೇವೀರಮ್ಮ ..	ಡಿಟೋ
ಸ್ಪೆ. ಅ. ೩೮	ವೀರಬಸಪ್ಪ ..	ಸುಬ್ಬಣ್ಣ ..	ಡಿಟೋ
ಕೊ. ಅ. ೨	ಕಾಶೀಬಾಯಿ, ..	ಅಬ್ದುಲ್ ಖಾದರ್‌ಸಾಬ್ ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಸಾಹೆಬರು ..	ನರಶಿಹ್ಮಮೇಸ್ತ್ರಿ ವಗೈರೆ ..	೮ನೇ ಡಿಟೋ
ಸ್ಪೆ. ಅ. ೪೩	ವೆಂಕಟಾಚಾರಿ ..	ಪ್ರೋಬಳ್ಳಾಚಾರಿ ಗಾರ್ಡಿಯನ್ ಕನಕಮ್ಮ ..	ಡಿಟೋ
ಸ್ಪೆ. ಅ. ೪೨	ಚನ್ನಗಿರೀ ರಂಗಣ್ಣ ..	ಕೃಷ್ಣರಾವ್ ವಗೈರೆ ..	೧೨ನೇ ಡಿಟೋ
ಸ್ಪೆ. ಅ. ೫೨ ರಿ. ೧೮	ಶೀತಾರಾಮಶಾಸ್ತ್ರಿ ..	ಧರಣ್ಣಯ್ಯ ..	ಡಿಟೋ
ಸ್ಪೆ. ಅ. ೪೫	ಗಂಗಮ್ಮ ..	ದೊಡ್ಡ ಬಚ್ಚಮ್ಮ ವಗೈರೆ ..	೧೫ನೇ ಡಿಟೋ
ಕೊ. ಸ್ಪೆ. ಅ. ೬	ಹಜಾಮರ ಹುಚ್ಚ ..	ಕಾಳೇಗೌಡ ..	ಡಿಟೋ
ಸ್ಪೆ. ಅ. ೩೯	ಚರಂತೆಪ್ಪ ..	ಚನ್ನವೀರಪ್ಪ ವಗೈರೆ ..	೧೯ನೇ ಡಿಟೋ
ಸ್ಪೆ. ಅ. ೪೭	ಏಕಾಂಬರ ಮೊದಲ್ಯಾರ್ ..	ವೆಂಕಟರಮಣ್ಣಯ್ಯ ..	ಡಿಟೋ
ಫ್ಲೂಟ್ ಸ್ಪೆ. ಅ. ೯	ಪುಟ್ಟರಸಮ್ಮ ..	ಬೆಟ್ಟಯ್ಯ ..	ಡಿಟೋ
ಸ್ಪೆ. ಅ. ೪೮	ವೆಂಕಟಕೃಷ್ಣಭಟ್ಟ ..	ಶ್ರೀನಿವಾಸ ಐಯಂಗಾರ್ ..	೨೬ನೇ ಡಿಟೋ
ಕೊ. ಅ. ನಂ. ೩	ರಾಮಶೆಟ್ಟಿ ಚಿಕ್ಕಪ್ಪಯ್ಯ ..	ಮಲ್ಲುಶೆಟ್ಟಿ ..	ಡಿಟೋ
ಕೊ. ಸ್ಪೆ. ಅ. ೩	ನಾರಣ್ಣಯ್ಯ ..	ನಾಗೈಯ ..	ಡಿಟೋ
ಕೊ. ಸ್ಪೆ. ಅ. ೮	ಪುಟ್ಟಮ್ಮ ..	ಬಿಂದಿ ಉರಫ್ ಗೌರಿ ..	ಡಿಟೋ

J. D. GORDON, *Judl. Commr.*

87

ಇನಾಂ ಇಲಾಖಾ.

ತಾರೀಖು 10ನೇ ಜುಲೈ 1876.

ಸನೆ 1876ನೆಇಸವೀ ಜೂನ್ 30ಕ್ಕೆ ಆಖೈರಾಗುವ ಶೀ ಮಾಹೇಯಲ್ಲಿ ರದ್ದಾದ ಟೈಟಲ್ ಡೀಡ್‌ಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ.		ಜೇರೀಜು.	ಜೋಡಿ.	ಜೋಡಿ ಕೇರ ಕ್ವಿಟರೆಂಟ್.	ಮುಜರಾಇ ಮೊಬಲಗ್.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರವಿನ್ಯೂ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
				ಎ.	ಖ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ.ಆ.ಪೈ.			
ಬಾಣಾವಾರ	ಜಾವಗಲ್	ಜಾವಗಲ್ಲು ವಿಘ್ನೇಶ್ವರ ದೇವರ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು.	ದೇವಾದಾಯ	0·70	0 0 0	3 10 2	0	1 12 0	0 0 0	82	1872—73 ಮತ್ತು 1873-74 ಈ ಇಸವಿಗಳಿಗೆ ಕ್ವಿಟರೆಂಟ್ ಕೊಡದ ಸಬಬ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಿರುತ್ತೆ.	ಕಡೂರು ಡೆ|| ಕಮಿಷ್ನರಿಗೆ ಕಳುಹಿಸಿದ 1876ನೇ ಮೇ 17ನೇ ವಾ|| 89ನೇ ನಂ.
ಡಿಟ್ಟೋ	ಡಿಟ್ಟೋ	ಜಾವಗಲ್‌ನಲ್ಲಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು.	ಡಿಟ್ಟೋ	0.60	0 0 0	3 0 11	0	1 8 0	0	83	ಡಿಟ್ಟೋ	ಡಿಟ್ಟೋ
ಶ್ರೀನಿವಾಸಪುರ	ಮುಜರಾಯಿ	ಕೋಲಾರದಲ್ಲಿ ಕಟ್ಟೇ ಸುಬ್ಬಣ್ಣಾಚಾರಿ.	ಬ್ರಹ್ಮಾದಾಯ	..	0 0 0	0 0 0	0	0 0 0	3 4 0	30760	ಯಾವ ಜೀವಸಲ್ಲತಕ್ಕದ್ದಾದ್ದರಿಂದ ಇನಾಂದಾರ ಮೃತಪಟ್ಟ ಸಬಬ್.	1876ನೇ ಮೇ 6ನೇ ಮರ್ಕುಂ 79ನೇ ನಂಬರ್.
ಡಿಟ್ಟೋ	ಡಿಟ್ಟೋ	ಬುರಡಗುಂಟೇ ರಾಮಾಭಟ್ಟ.	ಡಿಟ್ಟೋ	..	0 0 0	0 0 0	0	0 0 0	0 14 0	35048—21	ಡಿಟ್ಟೋ	ಡಿಟ್ಟೋ
ಡಿಟ್ಟೋ	ಸೆಟ್ಟಿಹಳ್ಳಿ	ಕೊಸವಾರಪಲ್ಲಿ ಅಣ್ಣೆಮ್ಮ.	ಡಿಟ್ಟೋ	..	0 1 7	0 11 8	0	0 6 0	0	30448	ಇನಾಂದಾರಗೆ ನಿಸ್ಸಂತತಿಯಾದ್ದರಿಂದ ಇನಾಂ ಸರಕಾರಕ್ಕೆ ಸೇರಿ ಹೋಯಿತು.	1875ನೇ ಅಕ್ಟೋಬರ್ 26ನೇ ಮರ್ಕುಂ 727ನೇ ನಂಬರ್.
ಡಿಟ್ಟೋ	ಅಗ್ರಹಾರ	ಡಿಟ್ಟೋ	ಡಿಟ್ಟೋ	..	0 1 13	3 10 2	0	1 12 0	0	30452	ಡಿಟ್ಟೋ	ಡಿಟ್ಟೋ
ಡಿಟ್ಟೋ	ಹೊಸಕೋಟೆ	ಡಿಟ್ಟೋ	ಡಿಟ್ಟೋ	..	0 1 1½	1 12 6	0	0 4 0	0	30458	ಡಿಟ್ಟೋ	ಡಿಟ್ಟೋ
ಡಿಟ್ಟೋ	ಆರಮಾಕಲಪಲ್ಲಿ	ಡಿಟ್ಟೋ	ಡಿಟ್ಟೋ	..	0 8 2	12 0 0	0	6 0 0	0	30477	ಡಿಟ್ಟೋ	1876ನೇ ಜೂನ್ 2ನೇ ಮರ್ಕುಂ ನಂ|| 127.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ ಎ.	ಬೀಜವರಿ ಖ. ಕೂ. ಪ.	ಜೇರೀಜು. ರೂ. ಆ. ಪೈ.	ಜೋಡೀ. ರೂ. ಆ. ಪೈ.	ಜೋಡಿ ಶೇರಿ ಕ್ವಿಟ್‌ರೆಂಟ್. ರೂ. ಆ. ಪೈ.	ಮುಜರಾ ಇ ಮೊಬಲಗ್. ರೂ. ಆ. ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಆದ ಆರ್ಡರ್ ತಾರೀಖು.
ಶ್ರೀನಿವಾಸಪುರ	ಅಗ್ರಹಾರ	ಕೊಸವಾರಿಪಲ್ಲಿ ಅಣ್ಣಮ್ಮ.	ಬ್ರಹ್ಮಾದಾಯ	0·60	0 1 2½	1 2 7	0	0 2 0	0	32182	ಇನಾಂದಾರಗೆನಿಸ್ಸಂತತಿ ಯಾದ್ದರಿಂದ ಇನಾಂ ಸರ್ಕಾರಕೆ ಸೇರಿಹೋಯಿತು	1876ನೇ ಜೂನ್ 2ನೇ ಮರ್ಕುಂ 127ನೇ ನಂ.
ಡಿಟೋ	ಯಲವಕುಂಟೆ	ಡಿಟೋ	ಡಿಟೋ	..	0 4 12	4 3 6	0	0 8 0	0	ಡಿಟೋ	ಡಿಟೋ	ಡಿಟೋ
ಸಿಡ್ಲಘಟ್ಟ	ದೇವಪಲ್ಲಿ	ಸಿಡ್ಲಘಟ್ಟದ ಸೂರಪ್ಪ ಜೇರೆ 7 ಮಂದಿ	ಡಿಟೋ	0·41	0	1 10 3	0	0 14 0	0	1246	ರಾಜೀನಾಮೆ ಕೊಟ್ಟದ್ದು	1876ನೇ ಮೇ 20ನೇ ಮರ್ಕುಂ 102ನೇ ನಂ.
ಕೊಪ್ಪ	ಹೆಡಸೆ ಯಾಹೆಜ್ಜೆ	ಹೆಡಸೆ ಸುಬ್ರಯ್ಯ ಪುರವ್ ವೆಂಕಟಸುಬ್ಬಯ್ಯ.	ಡಿಟೋ	.	0	0	0	0	75 3 0 ನಗದು ಇನಾಂ	36972	ನಗದು ಇನಾಂ ಜಮೀನ್ ಇನಾಮಿಗೆ ಬದಲಾಯಿಸಲ್ಪಟ್ಟಿತು.	1876ನೇ ಮೇ 29ನೇ ಮರ್ಕುಂ 120ನೇ ನಂ.
ಗೋರೀಬಿದನೂರು	ಹಳಕೂರು	ನಂದಿಗಾನಹಳ್ಳಿ ಚಂದ್ರಶೇಖರಭಟ್ಟ. 2ನೇ ಸೂರಪ್ಪ.	ಡಿಟೋ	1·32	0	1 2 8	0	0 10 0	0	307	ರಾಜೀನಾಮೆ ಕೊಟ್ಟದ್ದು	1876ನೇ ಮೇ 29ನೇ ಮರ್ಕುಂ 118ನೇನಂಬರು.
ಪಾವಗಡ	ರಂಗಸಮುದ್ರ ಆದರ ದಾಖಲೆ ರಾಮಪುರ	ರಂಗಸಮುದ್ರ ವೆಂಕಟರಾಮಶಾಸ್ತ್ರಿ	ಡಿಟೋ	..	170 2 15	2160 0 0	0	270 0 0	0	391	ಕ್ವಿಟ್‌ರೆಂಟ್ ಮಾಫ್ ಆಗಿ ಹೊಸ ಟೈಟಲ್ ಡೀಡ್ ಕೊಡಲ್ಪಟ್ಟ ಸಬಬ್	ಡಿಟೋ 19ನೇ ನಂ.
ಬೇತಮಂಗಲ	ನಾಗಲಪಲ್ಲಿ	ಜಕ್ಕರಸಕೊಪ್ಪವೆಂಕಮ್ಮ.	ಡಿಟೋ	0·08	0	0·6 7	0	0 2 0	0	655	ರಾಜೀನಾಮೆ ಕೊಟ್ಟದ್ದು	1876ನೇ ಜೂನ್ 9ನೇ ಮ॥ 142ನೇ ನಂಬರು
ಡಿಟೋ	ಡಿಟೋ	ಜಕ್ಕರಸಕೊಪ್ಪ ಶಿವಶಾಸ್ತ್ರಿ.	ಡಿಟೋ	0·02	0	0 2 0	0	0 2 0	0	656	ಡಿಟೋ	ಡಿಟೋ
ಡಿಟೋ	ಡಿಟೋ	ಹಂಗಳ ರಮಣಪ್ಪ 2ನೇ ವೆಂಕಟಾಚಲಮೈಯ್ಯ	ಡಿಟೋ	0·02	0	0 2 0	0	0 2 0	0	657	ಡಿಟೋ	ಡಿಟೋ
ಹೊನ್ನಾಳಿ	ಬಿಜೊಗಟ್ಟೆ	ಶಿವದೀಕ್ಷಿತ	ಡಿಟೋ	9·05	0	22 11 0	11 5 6	13 0 0	0	191	ಡಿಟೋ	ಡಿಟೋ 16ನೇ ಮರುಂ 166-167ನೇ ನಂಬರ್
ಡಿಟೋ	ಕುರವ	ಹೊನ್ನಾಳ್ಳಿ ಸೊಲ್ಲದ ಕೃಷ್ಣಾಚಾರಿ 2ನೇ ರಾಮಾಚಾರಿ.	ಡಿಟೋ	4·16	0	7 9 0	3 12 6	4 4 0	0	450	ಡಿಟೋ	ಡಿಟೋ

R. A. COLE, *Supt. of Inam Settlements.*

ಪೊಲೀಸ್ ಇಲಾಖಾ.

ತಾರೀಖು 17ನೇ ಜ್ಯುಲೈ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗೆ ಬೆಂಕಿಪುರ ರಸ್ತೆಯಲ್ಲಿ ಸ೯ 1876ನೇ ಇಸವಿ ಮೇ 27ನೇ ಮರ್‍ಸ್ಕಂ ರಾತ್ರಿ ಅಂಚೆ ಆಳುಗಳ ಮೇಲೆ ನಡಿಸಿದ ಡಕಾಯಿತಿ ಮೊಕದ್ದಮೆಯಲ್ಲಿ ಸಂಬಂಧಪಟ್ಟ ತಕಸೀರ್ ಮಂದರಪತ್ತೇಬಗ್ಯೂ ವ ತಕಸೀರ್ ಸ್ಥಾಪನೆಬಗ್ಯೂ ಅನುಕೂಲಿಸುವಂತಾ ಖಾತ್ ಮಿಾಕೊಡುವ ಯಾವ ಮನುಷ್ಯನಿಗಾಗಲಿ 300ರೂಪಾಯಿಗಳ ಇನಾಂಕೊಡಲ್ಪಡುವದು.

"ಬಮೋಜೀಬ್ ಹುಕುಂ,"

J. D. GORDON,
Inspr. Genl. of Police.

ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 22ನೇ ಜ್ಯುಲೈ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಕೆಪ್ಟನ್ ಕಾಸ್ ಮೇಕರಿಯವರು 1876ನೇ ಮಾರ್ಚಿ 4ನೇ ಮರ್‍ಸ್ಕಂ ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮಾಹೇ 3ನೇ ಮರ್‍ಸ್ಕಂ 382ನೇ ನಂಬರ್ ಚೀಫ್ ಕಮ್ಮಿಷನರವರ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾದಿಂದ 1876ನೇ ಇಸವೀ ಜೂನ್ 2ನೇ ಮರ್‍ಸ್ಕಂ ಮಧ್ಯಾನ್ಹಕ್ಕೆ ಪೂರ್ವ ಕೆಲಸಕ್ಕೆ ವಾಪಸ್ ಬಂದರು.

J. P. GRANT,
Offg. S. S. Commr., Mysore.

ಪಬ್ಲಿಕ್ ವರಕ್ಸ್ ಇಲಾಖಾ.

ತಾರೀಖು 24ನೇ ಜ್ಯುಲೈ 1876.

ಚೀಫ್ ಇಂಜಿನಿಯರ್ ಆಫಿಸ್ ಮ್ಯಾನೇಜರ್ ಮಿಸ್ಟರ್ ರೇನಾಲ್ಡ್ಸ್ ಯವರಿಗೆ 1876ನೇ ಜೂನ್ 22ನೇ ಮರ್‍ಸ್ಕಂ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ ಪ್ರಿವ್ಯಾರಟೋರೀ ರಜಾ ಮಾಹೇ ಮಜ್ಕೂರ್ 29ರ ವರಿಗೂ ವಿಸ್ತರಿಸಲ್ಪಟ್ಟಿರುತ್ತೆ.

W. R. JOHNSON, *Lieut.-Col.,*
Temporary Chief Engr. of Mysore.

ತಾರೀಖು 19ನೇ ಜ್ಯುಲೈ 1876.

1ನೇ ನಂಬರ್ ಟ್ಯಾಂಕ್ ಡಿವೀಜನ್ ಯಗ್ಜಿಕ್ಯೂಟಿವ್ ಇಂಜಿನಿಯರ್ ಆಫಿಸ್ ಡ್ರಾಫ್ಟ್ಸ್‌ಮ್ಯಾನ್ ಮುರಗೇಶ ಮೊದಲ್ಯಾರು ಮಾಹೇ ಮಜ್ಕೂರ್ 17ರಲ್ಲು ಕೆಲಸಕ್ಕೆ ವಾಪಸ್ ಬಂದದ್ದರಿಂದ ಜೂನ್ 24ನೇ ಮರ್‍ಸ್ಕಂ 2ನೇ ನಂಬರ್ ಇಸ್ತಿಹಾರಿನಲ್ಲಿ ಅವರಿಗೆ ಕೊಡಲ್ಪಟ್ಟ ಮತ್ತು ಜ್ಯುಲೈ 3ನೇ ತಾರೀಖಿನ ಲಗಾಯತು ಉಪಯೋಗಿಸಿಕೊಂಡ ರಜಾ ಪೈಕೀ ಉಳಿದ ರಜಾ ರದ್ದು ಮಾಡಲ್ಪಟ್ಟಿದೆ.

C. B. TARGET,
Exe. Engr., No. I Tank Division.

ಫಾರೆಸ್ಟ್ ಇಲಾಖಾ.

ತಾರೀಖು 30ನೇ ಮೇ 1876.

ಇದರಿಂದ ತಿಳಿಯಪಡಿಸುವದೇನಂದರೆ,—ದಾರವಾಡ್ ಜಿಲ್ಲಾ ಕೋಡಿ ತಾಲ್ಲೂಕು ಫಕೀರಪ್ಪಯೆಂಬ ಹೆಸರುಳ್ಳ ವೊಬ್ಬ ಮನುಷ್ಯನು ಸನ್ 1874ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಕೊಂಡುಕೊಂಡ ಚೌಬಿನೇ ಪೈಕಿ ಉಳಿಸಿಕೊಳ್ಳಲ್ಪಡದ ವೊಂದು ಮರದ ದಿಮ್ಮಿಯು ಕೇಳಲ್ಪಡದೆ ಅದ್ಯಾಪಿ ನಗರ ಡಿವಿಜನ್ ಶಿವಮೊಗ್ಗಾ ಡಿಸ್ಟ್ರಿಕ್ಟ್ ಅನಂತಪುರ ಡಿಪೊಯಲ್ಲಿ ಬಿದ್ದಿರುತ್ತೆ. ಸದರೀ ಫಕೀರಪ್ಪನೆಂಬುವನು ಶಿವಮೊಗ್ಗೆಯಲ್ಲಿರುವ ಡಿಪ್ಯುಟಿ ಕಂಸರ್ವೇಟರ್ ಯವರಲ್ಲಿ ಹಾಜರಾಗಿ 1876ನೇ ಇಸವಿ ಜುಲೈ 31ನೇ ಮರ್ಸು ಮಿಗೆ ಮುಂಚಿತವಾಗಿ ಸದರೀ ದಿಮ್ಮಿಯನ್ನು ಸಾಗಿಸಿಕೊಂಡು ಹೋಗತಕ್ಕದ್ದು. ಯಿದಕ್ಕೆ ತಪ್ಪಿದರೆ ಸದರೀ ದಿಮ್ಮಿಯು ಬೇವಾರ್ಸಿ ಮರದೋಪಾದಿಯಲ್ಲಿ ಮೈಸೂರು ಗವರ್ನಮೆಂಟಿ ತರ್ಫಿನ್ ವಿಕ್ರಯಿಸಲ್ಪಟ್ಟು ಅದರ ಹುಟ್ಟುವಳಿಯು ಫಾರೆಸ್ಟು ರೂಲ್ಸ್ 30 ವ 31ರ ನಿಬಂಧನೇಗಳನುಸಾರವಾಗಿ ಮೈಸೂರು ಫಾರೆಸ್ಟು ಇಲಾಖೆಗೆ ಜಮೆ ಕಟ್ಟಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

ನಂದೀದುರ್ಗ ಡಿವಿಜನ್.

ತಾರೀಖು 22ನೇ ಜುಲೈ 1876.

ಕಡಬ ತಾಲ್ಲೂಕು ಮೇಸ್ತ್ರಿ ಶೇಷಣ್ಣನವರಿಗೆ ಹನುಮಂತ ಮೇಸ್ತ್ರೀ ಯಂಬವನ ಬದ್ಲೀಮೇಲೆ 2 ತಿಂಗಳ ಕಾಯಿಲೇ ರಜಾ ಕೊಡಲ್ಪಟ್ಟಿರುತ್ತೆ.

J. L. PEARSE,
Commr.

ನಗರ ಡಿವಿಜನ್.

ತಾರೀಖು 12ನೇ ಜುಲೈ 1876.

ನಗರ ಡಿವಿಜನ್ ಕಮ್ಮಿಷನರ್ ಆಫಿಸ್ ಮ್ಯಾನೇಜರ್ ಮೇಸ್ಟರ್ ಲಿಂಕನ್ ಯವರಿಗೆ 1876ನೇ ಜುಲೈ 16ರ ಲಗಾಯತ್ 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಜುಲೈ 1876.

ಕಮ್ಮಿಷನರ್ ಆಫಿಸ್ ಹೆಡ್ ಕ್ಲರಕ್ ಮೆಸ್ಟರ್ ಡಿಸೋಜಾಯವರು ಮೇಸ್ಟರ್ ಲಿಂಕನ್ ಯವರ ಗೈರ್ ಹಾಜರೀಯಲ್ಲಿ ಮ್ಯಾನೇಜರ್ ಕೆಲಸವನ್ನು ಆಕ್ಟಿಂಗ್ ತರೀಕ ನೋಡುವಂತೆ ಮೊಕರರ್—ಯಾವ ತಾರೀಖಿನಿಂದ ಮೇಸ್ಟರ್ ಲಿಂಕನ್ ಯವರು ರಜಾ ಉಪಯೋಗಿಸಿಕೊಂಡರೋ ಆ ತಾರೀಖು ಲಗಾಯತು ಜಾರೀ ಉಳ್ಳದ್ದಾಗಿರತಕ್ಕದ್ದು.

J. A. CAMPBELL,
Commissioner.

BANGALORE DISTRICT.

Notice of an application by Narasa Raju and two others for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟೀ ಕಮ್ಮಿಷನರವರ ಕೋರ್ಟಿನಿಂದ.

ಸನ್ 1876ನೇ ಯಿಸವಿ ಶಿವಿಲ್ ಮಿಸಲೇನಿಯಸ್ ನಂಬರ್ 51.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಮಾಗಡೀ ಕಸಬೇಯಲ್ಲಿ ಯಿರುವ ನರಸರಾಜು, ವೆಂಕಟಸಾಮಿ, ರಂಗ ಸಹಾ ತಮ್ಮ ತಂದೆ ನರಸರಾಜು ಯಂಬುವನ ಲೇಣಿ 700 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಗೆ ಸನ್ 1860ನೇ ಇಸ

ವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಆಗಿಸ್ಟ್ 7ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

Notice of an application by Tirumalachari for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂ. 52.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಲೋಸ್‌ಪೇಟೇ ತಾಲ್ಲೂಕು ದೊಡ್ಡ ಮಳೂರು ಗ್ರಾಮದಲ್ಲಿ ಯಿರುವ ತಿರುಮಲಾಚಾರಿ ಯಂಬುವನು ತನ್ನ ಅಣ್ಣ ತಾತಾಚಾರಿಯ ಲೇಣೆ 800 ರೂಪಾಯಿ ಬರವಮಾಡಿಕ್ಕೊಳ್ಳತಕ್ಕ ಬಗ್ಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಆಗಿಸ್ಟ್ 9ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ಬತಾರೀಖು 8ನೇ ಮಾಹೇ ಜುಲೈ 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

L. RICKETTS,
Offg. Dy. Commr.

KOLAR DISTRICT.

Notice of an application by Muniyappasetti for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ ಡೆ|| ಕಮ್ಮಿಷನರವರ ಕೋರ್ಟಿನಿಂದ.

ನಂಬರು 49.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಾಲೂರು ತಾಲ್ಲೂಕು ಮಾಸ್ತಿಯಲ್ಲಿ ಇರುವ ಭೂಪಾಳಂ ಸೂರಪ್ಪಶೆಟ್ಟೀ ಮಗ ಮುನಿಯಪ್ಪಶೆಟ್ಟಿಯಂಬುವನು ಘಾತೀಪಟ್ಟಿ ತನ್ನ ತಂದೆ ಸೂರಪ್ಪಶೆಟ್ಟಿ ಹೆಸರಿನ ವಾದೇವೀ ಬಾಬತು 950 ರೂಪಾಯಿಗಳವರಿಗೂ ವಸೂಲ್ಮಾಡಿ ಕೊಳ್ಳತಕ್ಕಬಗ್ಗೆ 60ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಿ ಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಸರ್ ಮಜಕೂರ್ ಶಪಟಂಬರ್ ಗುರ್ರೇತಾರೀಖಿನಲ್ಲಿ ವಿಚಾರಣೆ ಮಾಡಲ್ಪಡುತ್ತೆಯಾಗಿ, ಇದರ ಮೇಲೆ ಯಾರಿಗೆ ಯಾವವಿಧವಾದ ಬಾಧ್ಯತೆಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ದಿವಿ 11 ಘಂಟೆಗೆ ಕೋರ್ಟು ರೂಬರೂಬ್ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ಬತಾರೀಖು 21ನೇ ಮಾಹೆ ಜುಲೈ ಸರ್ 1876ನೇ ಇಸವಿ ಮೊಕ್ಕಾಂ ಕೋಲಾರ್.

P. N. PURNAIYA,
For Dy. Commr.

TUMKUR DISTRICT.

Notice regarding an application of Timmasetti for a certificate under Act XXVII of 1860.

ತುಮಕೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಇದ್ದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ, ಕಸಬ ತಾಲ್ಲೂಕು ತುರುವೇಕೆರೆ ಗ್ರಾಮದ ವಾಸಸ್ಥನಾಗಿ ಯಿದ್ದ ಮೃತ್ತೀಯಾದ ವೈಶ್ಯರ ವೆಂಕಟೇಶಶೆಟ್ಟಿ ಯೆಂಬುವನಿಗೆ ಇತರರಿಂದ ಬರಬೇಕಾಗಿ ಇರುವ 5000 ರೂಪಾಯಿಗಳು, ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಇವನ ಮಗ ತಿಮ್ಮಶೆಟ್ಟಿ ಯೆಂಬುವನು ದಾಖಲ್ ಮಾಡಿ ಇರುವ ಅರ್ಜಿಯನ್ನು 1876ನೇ ಇಸವಿ ಆಗಸ್ಟು ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರು ಮಾಡುವರ್‍ಯ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಇರುತ್ತೆ.

ತಾರೀಖು 1ನೇ ಮಾಹೇ ಜುಲೈ 1876ನೇ ಇಸವೀ, ಮೊಕ್ಕಾಂ ತುಮಕೂರು.

ತಾರೀಖು 12ನೇ ಜುಲೈ 1876.

ಇದರಿಂದ ಸಕಲಜನಗಳಿಗೂ ತಿಳಿಸಲ್ಪಡುವದೇನಂದರೆ, ಈ ಕೆಳಗೆ ನಮೂದಿಸುವ ಜೋಡಿ ಗ್ರಾಮಗಳ ಬಾಬತು ಸರ್ಕಾರ್ ಹಣ ತಹಲ್ ವಸೂಲಾಗದ ಸಬಬ್ ಸದರೀ ಗ್ರಾಮಕ್ಕೆ ನಮೂದಾದ ಕಂದಾಯದ ಬಾಕೀ ಸಮಾಧಾನಕೊಳ್ಳಸ್ಕರ ಐರ್ಜ ಗ್ರಾಮವು ಕುಣಿಗಲ್‌ನಲ್ಲಿ 1876ನೇ ಆಗಸ್ಟು 10ನೇ ಮುಕ್ಕಾಂನಲ್ಲಿ ಅಮಲ್ದಾರರ ಕಚೇರಿಯೊಳಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಂಬರ್	ಕಂದಾಯ ಕೊಡದೆ ತಪ್ಪಿದವನ ಹೆಸರು.	ಗ್ರಾಮ, ಸಂಮತ್ತು ಮತ್ತು ತಾಲ್ಲೂಕು ಹೆಸರು.	1875-76ಕ್ಕೆ ಕೊಡಬೇಕಾದ ಜೋಡಿ.			ಪ್ರೊಸೆಸ್ ಛಾರ್ಜಿಗಳು.			ಸರ್ವೇ ಛಾರ್ಜಿಗಳು.			ಜುಮ್ಲಾ.			ಷರಾ.
	ಸೂರಶಾಸ್ತ್ರಿ ಮತ್ತು 20 ಯಿ ಸಂಗಳು	ಕೆಂಪಸಾಗರ್ ಕೊತ್ತಗೆರೆ ಕುಣಿಗಲ್.	175	5	0	1	0	0	119	3	3	295	8	3	ಕುಲ್ ಜೋಡಿ 417 9 0 ರೂಪಾಯಿಗಳು. ಈ ಪೈಕಿ 241 4 0 ರೂಪಾಯಿಗಳು ವಸೂಲಾಗಿರುತ್ತೆ.

Notice regarding an application of Jalamma for a certificate under Act XXVII of 1860.

ಇದರಿಂದ ಸಮಸ್ತಜನಗಳಿಗೂ, ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ತಾಲ್ಲೂಕು ಬಿದರೆ ಗ್ರಾಮದ ವಾಸಸ್ತನಾಗಿಯಿದ್ದ ಫೌತೀಯಾದ ಬ್ರಂಹ್ಮೈಯ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 500 ರೂಪಾಯಿಗಳು ವಸೂಲ್ ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಅಪೇಕ್ಷಿಶಿ ಯಿವನ ಮಗ ಮಗುಟಪ್ಪಾ ಮೈನರ್ ಯಿವನ ತಾಯಿ ಜಾಲಮ್ಮ ಯಂಬುವಳು ದಾಖಲ್ ಮಾಡಿರುವ ಅರ್ಜಿಯನ್ನು 1876ನೇ ಇಸವಿ ಆಗಸ್ಟು ತಿಂಗಳು 9ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟಿಗೆ ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 12ನೇ ಮಾಹೆ ಜುಲೈ 1876ನೇ ಇಸವಿ, ಮೊಕ್ಕಾಂ ತುಮಕೂರು.

ನೋಟಿಸ್.

ತಾರೀಖು 15ನೇ ಜುಲೈ 1876.

ಬಾಜುವಲ್ಲಿ ನಮೂದಾಗಿರುವ ಆಸಾಮಿಗೆ 1860ನೇ ಇಸವಿ 27ನೇ ನಂಬರ್ ಆಕ್ಟಿನ ಆಧಾರದ ಮೇಲೆ ಕೊಟ್ಟಿರುವ ಸರಟಫಿಕೇಟನ್ನ ಸದರೀಯಾವನು ವಾಯಿದೆಗೆ ಸರಿಯಾಗಿ ಸರಟಫಿಕೇಟನ ಆಧಾರದ ಮೇಲೆ ವಸೂಲಾಗಿರುವ ಮೊಬಲಗುಗಳಿಗೆ ಲೆಖ್ಖಗಳನ್ನ ಹಾಜರ್ಮಾಡದ ಸಬಬ್ ಇದರಿಂದ ರದ್ದು ಮಾಡಿರುತ್ತೆ.

1875ನೇ ಇಸವಿ ಜೂನ್ ತಾರೀಖು 28ರಲ್ಲು ಸದರೀ ಇಸವಿ ಶಿವಿಲ್ ಮಿ|| 10ನೇ ನಂಬರ್ ಮುಡಕ ಶಿರಾ ತಾಲ್ಲೂಕು ಮುತ್ತುಕೂರು ಸಾಲಂಕ್ಯೆಯನಿಗೆ.

E. S. Ludlow, *Offg. Dy. Commr.*

MYSORE DISTRICT.

Notice of an application by Srinivasachari for a certificate under Act XXVII of 1860.

ಮೈಸೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಸ್ನ 1876ನೇ ಇಸವಿ ಶಿವಿಲ್ ಫೂಟಿ ಮಿಸಲೇನಿಯಸ್ ನಂ. 57.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ;—ಫೌತೀಯಾದ ತನ್ನ ತಂದೆ ವೆಂಕಟರಾಯಾಚಾರ್ರಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂ

ದು ನಂಜನಗೂಡು ಕಸಬಾದಲ್ಲಿ ಯಿರುವ ಶ್ರೀನಿವಾಸಾಚಾರ್ರ್ಯ ಬರದುಕೊಂಡ ಅರ್ಜಿಯನ್ನು ಆಗಸ್ಟ ತಿಂಗಳು 4ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂಪ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 17ನೇ ಜುಲೈ 1876ನೇ ಇಸವಿ, ಮೊಕ್ಕಾಂ ಮೈಸೂರು.

C. J. Pearse,
Dy. Commr.

SHIMOGA DISTRICT.

Notice of an application by Manjanna for a certificate under Act XXVII of 1860.

ಶಿವಮೊಗ್ಗಾ ಡಿ|| ಡೆ|| ಕ|| ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತನ್ನ ತಂದೆ ರಾಮಣ್ಣ ಫೌತೀ ಆಗಿ ಯಿರುವದ್ದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 500 ರೂಪಾಯಿ ತಾನು ವಸೂಲ್ಮಾಡಿ ಕೊಳ್ಳುವದಕ್ಕೆ ಸರಟಿಫಿಕೇಟ್ ಕೊಡಿಸಬೇಕಾಗಿ ಶಾಲೇದುರ್ಗ ತಾಲ್ಲೂಕು ಕೆಂಡವಳಿಗೆ ಮಂಜಣ್ಣನೆಂಬುವನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಆಗಿಸ್ಟು 22ನೇ ದಿನ ಹಿಯರಿಂಗ್ ನಿಷ್ಕರ್ಷೆ ಮಾಡಿ ಯಿದೆ, ತಕರಾರು ವುಳ್ಳವರು ಆದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ತಾರೀಖು 12ನೇ ಜುಲೈ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

C. Soob Rao,
For Offg. Dy. Commr.

KADUR DISTRICT.

Notice of sale of lands in satisfaction of Government dues.

ಕಡೂರು ಡಿಸ್ಟ್ರಿಕ್ಟ್ ಡೆ|| ಕಮ್ಮಿಷನರವರ ಕೋರ್ಟಿನಿಂದ.

1. ಇದರಿಂದ ತಿಳಿಸಲ್ಪಡುವದೇನಂದರೆ, ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಫ್ತಾದ್ದರಲ್ಲಿ ವಿಂಗಡಿಸಲ್ಪಟ್ಟ ಈ ಕೆಳಗೆ ಕಂಡ ಜಮೀನುಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ ಕೆಳಗೆ ನಮೂದಿರುವ ತಾಲ್ಲೂಕು ಆಯಾ ಗ್ರಾಮದಲ್ಲಿ ಚಾಲ್ತಿ ಇಸವೀ ಆಗಸ್ಟ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು, ಹರಾಜು ಆಯಾ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶೇಷ್ಯಾಂಕಗಳೊಡನೆ ಜಮೀನುಗಳು ಜಾಡದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದ ಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮುಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಶೀಲ್‌ವಾರ್ ತೋರಿಸಲ್ಪಟ ಪ್ರಕಾರ 76—5—2 ರೂಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತ್ತೆ. ಜಮೀನ ತಪಶೀಲ್ ಬಗ್ಯೆ ಜುಲೈ 15ನೇ ತಾರೀಖಿನ ಗೆಜಟ 342ನೇ ಪುಟವನ್ನು ನೋಡತಕ್ಕದ್ದು.

Notice regarding the sale of occupied lands in the Lakvalli and Banavar Taluks in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಫ್ತಾದ ಈ ಕೆಳಗೆ ಕಂಡ ಜಮೀನುಗಳಲ್ಲಿ ಹಾಲೀ ರಿಜಿಸ್ಟರಾದ ಜ

ವಿರ್ಣಿ ಹಿಡುವಳೀದಾರನ ದರೋಬಸ್ತು ಹಕ್ಕು ದಾರಿಗಳೂ, ಕಡೂರು ಡಿಸ್ಟ್ರಿಕ್ಟು ತರೀಕೆರೆ ವಗೈರೇ ತಾಲ್ಲೂಕು. ಕೆಳಗೆ ಕಾಣುವ ಗ್ರಾಮದಲ್ಲಿ ಚಾಲ್ತೀ ಇಸವೀ ಆಗಸ್ಟ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು, ಹರಾಜು ಆಯಾ ಗ್ರಾಮದಲ್ಲಿ ಹಿಡುವಳೀ ಸಮಿಪಸ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜವಿರ್ಣಗಳು ಚಡದರಖಾಸ್ತುದಾರಗೆ, ವಿಕ್ರಯಿಸಲ್ಪಡುವದು.

2. ಕ್ರಯದಾರನು ಜವಿರ್ಣಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಶೀಲ್‌ವಾರ್ ತೋರಿಸಲ್ಪಟ್ಟ ಪ್ರಕಾರ 58—15—3 ರೂಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುವದು. ಜವಿರ್ಣ ತಪಶೀಲ್ ಬಗ್ಯೆ 15ನೇ ಮರ್ಕುಂ ಗೆಜಟ 343ನೇ ಪುಟವನ್ನು ನೋಡತಕ್ಕದ್ದು.

ತಾರೀಖು 12ನೇ ಜುಲೈ 1876.

ಇದರಿಂದ ಸಮಸ್ತರಿಗೂ ತಿಳಿಸಲ್ಪಡುವದೇನಂದರೆ, ರಾಮನೆಂಬ ವಬ್ಬ ಮನುಷ್ಯನಿಂದ ಬಗರ್ ಹುಕುಂ ಕಾಫೀಸಾಗುವಳೀ ಮಾಡಲ್ಪಟ್ಟಿತ್ತೆಂಬ ಇದರಡಿ ನಮೂದಿಸುವ ಒಂದು ಜವಿರ್ಣ 1876ನೇ ಆಗಸ್ಟು 1ನೇ ಮರ್ಕುಂ ಬೆಳಿಗ್ಯೆ 11 ಘಂಟೆಗೆ ಚಿಕ್ಕಮುಗಳೂರಲ್ಲಿ ಕಡೂರ್ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ ಕಮ್ಮಿಷನರ್ ಕಚ್ಚೇರಿಯಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ತಾಲ್ಲೂಕ	ಮಾಗಣಿ	ಗ್ರಾಮ	ಕಾರ್ಣಹೆಸರು	ಚತುರ್ಗಡಿ.	ಬೀಜವರಿ.		
					ಎಕರೆ	ಗುಂಟೆ.	ಗಜ.
ಚಿಕ್ಕಮುಗಳೂರು.	ಕಡಗಲಿ ನಾಡು	ಬೆಟ್ಟದ ಮಳಲಿ.	ತೋಟದ ಗಡ್ಡೆವಾರೆ.	ಉತ್ತರಕ್ಕೆ ದನಗಳು ಹೋಗುವದಾರಿ ಬಾಂದ್ ಗುರುತು. ದಕ್ಷಿಣಕ್ಕೆ ಗುಂಡುಕಲ್ಲುಗಳಿಂದ ಕಟ್ಟಿದ ವಂದು ಗೋಡೆ ಮತ್ತು ಬಾಂದು. ಪೂರ್ವಕ್ಕೆ ಹೊಲದ ಅರಿಗಿನಲ್ಲಿ ಕಲ್ಲಿನಿಂದ ಕಟ್ಟಿದ ವಂದು ಗುರುತು, ಮತ್ತು ಬಾಂದು. ಪಶ್ಚಮಕ್ಕೆ ವಂದು ಜವಿಮಾನಿನಅರುಗು ಮತ್ತು ಬಾಂದು.	10	7	49

ಸದರೀ ಜವಿಮಾನು ಚಡದರಖಾಸ್ತುದಾರ್ರಿಗೆ ಬಿಡಲ್ಪಡುವದು. ಅಂತಾ ಚಡದರಖಾಸ್ತುದಾರು ಹರಾಜು ಪೂರೈಸಿದಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ಸೇಕಡಾ ಇಪ್ಪತ್ತೈದು ಠೇವಣಿಯಿಟ್ಟು ಬಾಕೀ ಮೊಬಲಗನ್ನು ಆತಾರೀಖುಲಾಗಾಯಿತು 15 ದಿನಗಳೊಳಗಾಗಿ ಕೊಡತಕ್ಕದ್ದು. ಹಾಗೆ ಕೊಡದೇ ಇದ್ದರೆ, ಪ್ರಸಕ್ತವಾದ ಜವಿರ್ಣ ಪುನಃ ವಿಕ್ರಯಿಸಲ್ಪಟ್ಟು ಅದರಲ್ಲಿ ಬರುವ ಲುಕ್ಸಾನಿಗೆ ಮೊದಲು ದರಖಾಸ್ತುದಾರನೇ ಗುರಿಯಾಗತಕ್ಕದ್ದಾಗಿರುವದಲ್ಲದೆ ಸದರೀ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನು ಕಳಕೊಳ್ಳುವನು, ಮತ್ತು ಯೆರಡನೇ ಹರಾಜಿನಲ್ಲಿ ಜಾಸ್ತೀ ಯೇನಾದರೂ ಕಂಡು ಬಂದರೆ ಆದಕ್ಕೆ ಆವನಿಗೇನು ಬಾಧ್ಯತೆ ಇರಲಾರದು

Notice regarding an application of Adivemma for a certificate under Act XXVII of 1860.

ಇದರಿಂದ ಸಮಸ್ತ ಜನರಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕಮುಗಳೂರ ತಾಲ್ಲೂಕು ಶುಕ್ರವಾರದಪ್ಯಾಟೆ ಶಾಂತಶೆಟ್ಟಿ ಹೆಂಡತಿ ಅಡಿವೆಂಮನು ಪಾತೀಪಟ್ಟಿ ತಂನ ಮೈದನ ಬಶೆಟ್ಟಿ ಮತ್ತು ಅವನ ಹೆಂಡತಿ ರುದ್ರಂಮ ಯಿವರ ಹೆಸರಿನಲ್ಲಿ ಯಿರತಕ್ಕ ಹೊರಗಿನ ಉದ್ರಿಗಳ ಬಾಬತು ಸುಮಾರು 1000 ರೂಪಾಯಿಗಳಂನ ವಸೂಲು ಮಾಡಿಕೊಳ್ಳುವ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ಸರಟಫಿಕೇಟ ಕೊಡಿಸಬೇಕಾಗಿ ಕೊಟ್ಟಿರುವ ಅರ್ಜೀ ಪೈಸಲ್ ಬಗ್ಯೆ ಬರುವ ಸರ್ ಮಜಕೂರು ಅಗಸ್ಟು ಮಾಹೆ ತಾರೀಖು 17ನೇ ದಿವಸ ನಿಶ್ಚೈಸಿ ಯಿರುವದ್ದರಿಂದ ತಕರಾರ್ ಉಳ್ಳವರು ಸದರೀ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದಿಥೆ.

ಬತಾರೀಖು 10ನೇ ಜುಲೈ ಸರ್ 1876ನೇ ಇಸವಿ ಮೊಕ್ಕಾಂ ಚಿಕ್ಕಮುಗಳೂರು

Notice of sale of lands in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ ಈ ಕೆಳಗೆ ಕಂಡ ಜಮೀನಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನು ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟು ತರೀಕೆರೆ ವಗೈರೇ ತಾಲ್ಲೂಕು ಆಯಾಯ ಗ್ರಾಮದಲ್ಲಿ ಚಾಲ್ತೀ ಇಸವಿ ಆಗಸ್ಟು ಮಾಹೆಯಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಆಯಾಯ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಜಡ ದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವಿ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಶೀಲ್‌ವಾರ್ ತೋರಿಸಲ್ಪಟ್ಟ ಪ್ರಕಾರ ರೂ॥ 344 ಆ॥ 13 ಪೈ॥ 2 ಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತ್ತವೆ.

ತಾಲೂಕು.	ಗ್ರಾಮ.	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು.	ಜಮೀನು ತರೀಯೋ, ಖುಷ್ಕಿಯೋ, ಬಾಗಾಯಿತೇ, ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ। ಕಟ್ಟೋಗಳು ಯಾವದಾದರೂ ಯಿರುತವೆಯೋ.	ಜಮೀನ.		ಅಂದಾಜಾ ಬೀಜವರೀ.			ಕಂದಾಯ.			ಸಾರಿ ಮುಜಕೂರಿಗೆ ಕ್ರಯದಾರ ನಿಂದ ಸಲ್ಲತಕ್ಕ (ಖಾತೆ ದಾರರಿ) ನಿಮೂಲಗು.		
				ಸಂಬರ್.	ಹೆಸರು	ಖಂ.	ಕೂ	ಪ.	ರೂ.	ಆ.	ಪೈ.			
			1875–76ನೇ ಇಸವಿ ಬಾಕೀ ಗೋಸ್ಕರ.											
ತರೀಕೆರೆ.	ಸಪ್ಪೇನಹಳ್ಳಿ	ನಾರಣಪುರದ ಬಸವಿ	ಬಾಗಾಯತು ಜಮೀನ	52	ತೋಟ	0	0	0	3	8	3	0	8	0
	ಅಜ್ಜಂಪುರ	ಪತ್ತಿ ಈರಪ್ಪಾ	ತರೀ ಜಮೀನ.	159	ಗದ್ದೇ	0	0	0	105	8	5	0	1	0
	ಸವತಿನಹಳ್ಳಿ	ಮಲ್ಲಪ್ಪಯ	ಖುಷ್ಕೀ ಜಮೀನ	53	ಹೊಲ	0	0	0	22	11	0			
			ಡಿಟೋ	55	ಡಿಟೋ	0	0	0	11	5	6			
			ಡಿಟೋ	56	ಡಿಟೋ	0	0	0	22	11	0	1	0	0
			ಡಿಟೋ	57	ಡಿಟೋ	0	0	0	22	11	0			
			ಡಿಟೋ	58	ಡಿಟೋ	0	0	0	11	5	6			
	ಸೊಲ್ಲಾಪುರ	ಕೊರ್ಟಿಕೆರೆ ರಂಗಾ	ಡಿಟೋ	61	ಡಿಟೋ	0	0	0	34	0	6	1	0	0
(ಲಕ್ಕವಳ್ಳಿ.	ಮೇಲ್ ನರಶೀಪುರ	ಭರಮಣ್ಣನ ಮಗ ರಾಮಣ್ಣ	ತರೀ ಜಮೀನ.	1	ಗದ್ದೇ	1	0	0	3	6	10			
			ಬಾಗಾಯತು ಜಮೀನ	2	ತೋಟ	ದಾಯ (500)		0	21	6	2			
			ತರೀ ಜಮೀನ.	4	ಗದ್ದೇ	3	4	0	12	1	7			
			ಡಿಟೋ	5	ಡಿಟೋ	2	0	0	6	13	8			
			ಡಿಟೋ	6	ಡಿಟೋ	1	0	0	3	6	10			
			ಡಿಟೋ	7	ಡಿಟೋ	1	0	0	3	6	6			
			ಡಿಟೋ	8	ಡಿಟೋ	1	0	0	3	6	10			
			ಡಿಟೋ	9	ಡಿಟೋ	2	0	0	6	13	8			
			ಡಿಟೋ	10	ಡಿಟೋ	1	0	0	3	6	10			
			ಡಿಟೋ	11	ಡಿಟೋ	1	0	0	3	6	10	1	8	0
			ಡಿಟೋ	14	ಡಿಟೋ	1	0	0	3	6	10			
			ಡಿಟೋ	15	ಡಿಟೋ	1	0	0	3	6	10			
			ಡಿಟೋ	16	ಡಿಟೋ	1	0	0	3	6	6			
			ಡಿಟೋ	17	ಡಿಟೋ	1	0	0	3	6	11			
			ಡಿಟೋ	21	ಡಿಟೋ	1	10	0	6	6	6			
			ಡಿಟೋ	18	ಡಿಟೋ	2	0	0	6	13	8			

ತಾಲ್ಲೂಕು.	ಗ್ರಾಮ	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು	ಜಮೀನು ತರಿಯೇ ಖುಷ್ಕಿಯೇ ಯಾ ಬಾಗಾಯಿತೇ ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ॥ ಕಟ್ಟಣಗಳು ಯಾವದಾದರೂ ಯಿರುತವೆಯೆ.	ಜಮೀನ್		ಅಂದಾಜಾ ಬೀಜವರೀ.			ಕಂದಾಯ			ಸಾಲ್ ಮಜಕೂರಿಗೆ ಕ್ರಯದಾರನಿಂದ ಸಲ್ಲತಕ್ಕ (ಬಾಕೀ ಶಿವಾಯಿ) ಮೊಬಲಗು.		
				ನಂಬರ್.	ಹೆಸರು.	ಖಂಡಿ.	ಕೊ.	ಪ.	ರೂ.	ಆ.	ಪೈ.			
ಲಕ್ಕವಳ್ಳಿ.	ಮೇಲ್ ನರಶೀಪುರ	ಭರಮಣ್ಣನ ಮಗ ರಾಮಣ್ಣ	ಬಾಗಾಯತು	10	ತೋಟ	ದಾಯ (18)		0	0	8	5			
			ಡಿಟೋ	13	ಡಿಟೋ	(100)		0	4	14	4			
			ಡಿಟೋ	21	ಡಿಟೋ	(47)		0	2	4	2			
			ತರೀ ಜಮೀನು	25	ಗದ್ದೆ	1	0	0	4	4	6			
			ಡಿಟೋ	26	ಡಿಟೋ	1	10	0	6	6	6			
			ಡಿಟೋ	27	ಡಿಟೋ	1	0	0	3	12	7			
	ಅಬ್ಬೆಕೊಪ್ಪ	ಡಿಟೋ	ತರೀ ಜಮೀನು	2	ಗದ್ದೆ	1	0	0	5	2	5			
			ಡಿಟೋ	3	ಡಿಟೋ	1	0	0	5	2	5			
			ಡಿಟೋ	4	ಡಿಟೋ	1	0	0	5	2	5			
			ಡಿಟೋ	5	ಡಿಟೋ	1	0	0	5	2	5			
	ತಟ್ಟೇಬೈಲು	ಡಿಟೋ	ಡಿಟೋ	7	ಡಿಟೋ	1	0	0	2	9	3			
ಕೊಪ್ಪ.	ಬೈಲನಕೊಪ್ಪ	ತಿಮ್ಮ ಅಗಸಾಲೆ	ತರೀ ಜಮೀನು	23	ಗದ್ದೆ	3	0	0	5	11	6	0	8	0
			ಬಾಗಾಯಿತು	28	ತೋಟ	ದಾಯ (1102)		0	11	15	3			
	ಕಳಕ್ಕಿ	ಸೂರ	ತರೀ ಜಮೀನು	18	ಗದ್ದೆ	0	16	0	1	10	5	0	8	0
	ಅತ್ತಿಕುಳಿ	ವೆಂಕಟಣ್ಣ	ಡಿಟೋ	2	ಡಿಟೋ	2	0	0	3	1	11			
			ಬಾಗಾಯಿತು	2	ತೋಟ	ದಾಯ (500)		0	23	6	5			
			ತರೀ ಜಮೀನು	2	ಗದ್ದೆ	22	11	0	60	0	7	1	0	0
			ಬಾಗಾಯಿತು	2	ತೋಟ	ದಾಯ (642)		0	23	6	5			
			ಡಿಟೋ	2	ಡಿಟೋ	(227)		0	10	1	11			
			ಡಿಟೋ	2	ಡಿಟೋ	(226)		0	8	3	7			
			ಡಿಟೋ	2	ಡಿಟೋ	(156)		0	5	11	2			
			ಮಾಫೀ ಚಿಲ್ಲರೆ	0	0	0	0	0	4	9	11			
			ಕಾನು ಕಿಸ್ತು	0	0	0	0	0	0	3	9			

ಹರಾಜು ತಾರೀಖುಗಳು

ಸಪ್ಪೇನಹಳ್ಳಿ ಬಾಕೀದಾರನ ಹಿಡುವಳಿ ಹರಾಜ್	19 8 76	ಮೇಲ್ ನರಶೀಪುರ ಬಾ॥ ಹಿಡುವಳೀ ಹರಾಜ್	19 8 76
ಅಜ್ಜಂಪುರ ಬಾಕೀದಾರನ ಹಿಡುವಳೀ ಹರಾಜ್	21 8 76	ಅಬ್ಬೆಕೊಪ್ಪ ಬಾ॥ ಹಿಡುವಳೀ ಹರಾಜ್	19 8 76
ಸಾವತ್ತನಹಳ್ಳಿ ಬಾ॥ ಹಿಡುವಳೀ ಹರಾಜ್	21 8 76	ಕಳಕ್ಕಿ ಬಾಕೀದಾರನ ಹಿಡುವಳೀ ಹರಾಜ್	21 8 76
ಸೊಲ್ಲಾಪುರ ಬಾಕೀದಾರನ ಹಿಡುವಳೀ ಹರಾಜ್	21 8 76	ಅತ್ತಿಕುಳಿ ಬಾಕೀದಾರನ ಹಿಡುವಳೀ ಹರಾಜ್	24 8 76

P. KRISHNA RAO,
Dy. Commr.

COORG.

Notice of an application by Kuppamma for a certificate under Act XXVII of 1860.

ಕೊಡಗು ಸೂಪರ್ರಿಟೆಂಡೆಂಟ್ ಕೋರ್ಟಿನಿಂದ.

ಸರ್ 1876ನೇ ಇಸವಿ ಬಾಬತು ಶಿವಿಲ್ ನಾ॥ ನಂಬರ್ 10.

ಸರ್ವ ಜನರಿಗೂ ತಿಳಿಯಪಡಿಸುವದೇನಂಪರೆ,—ಕುಯಂಗೇರಿನಾಡು ಕೊದ್ದೂರು ಗ್ರಾಮದಲ್ಲಿ ಯಿರುವ ತೆಲುಗ ಬಣಜಿಗರ ಕುಪ್ಪಮ್ಮನು ಘಾತೀ ತನ್ನ ಗಂಡ ನಾಗ್ಯೆಯಗೆ ಹೊರಗಿನಿಂದ ಬರತಕ್ಕ ಸಾಲ 800 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರಟಫಿಕೇಟಿ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮಾ ಸರ್ 1876ನೇ ಇಸವಿ ಆಗಿಸ್ಟು ತಾರೀಖು 10ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಂನಲ್ಲಿ ಹಿಯರಿಂಗ ಆಗುವದ್ದರಿಂದ ಇದಕ್ಕೆ ಯಾರಾದರೂ ಹಕ್ಕುದಾರರು ಇದ್ದರೆ ಸದರೀ ತಾರೀಖಿನ ಏನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸ ಬಹುದು.

ತಾರೀಖು 10ನೇ ಜುಲೈ 1876ನೇ ಇಸವಿ

E. SHAW,
Offg. Supt.

ಸರ್ 1876ನೇ ಇಸವಿ ಜೂನ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಕಡೂರು ಡಿಸ್ಟ್ರಿಕ್ಟು.

ಮಳೆ,—ಕೊಪ್ಪ ತಾಲ್ಲೂಕಿನಲ್ಲಿ ಬಹಳ ಮಳೆ ಬಿತ್ತು, ಇತರ ತಾಲ್ಲೂಕುಗಳಲ್ಲಿ ಬಹಳ ಕೊಂಚ ಮಳೆ ಬಿತ್ತು, ಹಾಲೀ ಯಿರುವ ನೀರು ಹುಲ್ಲಿನ ದುರ್ಭಿಕ್ಷವು ನಿವರ್ತಿ ಆಗಬೇಕಾದರೆ ಯಿನ್ನೂ ಮಳೆ ಬೇಕಾಗಿರುತ್ತೆ.

1876ನೇ ಜೂನ್ ತಿಂಗಳಲ್ಲಿ	1 ಇಂಚ್ಸ್	16½ ಸೆಂಟ್ಸ್.
,, ಮೇ ,,	2 ,,	90 ,,
1875ನೇ ಜೂನ್ ,,	3 ,,	34¾ ,,

ಬೀಜಪೇರಾವ್,—ತರೀಕೆರೆಯಲ್ಲಿ ಭತ್ತ, ರಾಗಿ, ಜೋಳ ಯಿವು ಪೇರಾವಾದವು. ಲಕ್ಕುವಳ್ಳಿ, ಕೊಪ್ಪ, ಚಿಕ್ಕಮುಗಳೂರು ಈ ತಾಲ್ಲೂಕುಗಳ ಕೆಲವು ಕಡೆಗಳಲ್ಲಿ ಭತ್ತ ಪೇರಾವಾಗಿದೆ. ಚಿಕ್ಕಮುಗಳೂರು ತಾಲ್ಲೂಕಿನಲ್ಲಿ ಬೆಳ್ಳುಳ್ಳಿ ಸಹಾ ಪೇರಾವಾಗಿದೆ. ಬಾಣಾವಾರದಲ್ಲಿ ಉದ್ದು, ಹೆಸರು, ಜೋಳ, ಹರಳು ಪೇರಾವಾದ ಪೈಕೀ ಮುಖ್ಯವಾದವುಗಳು.

ಬೆಳೆ ಸ್ಥಿತಿ,—ತರೀಕೆರೆ, ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಯಳೆ ಪೈರಿಗೆ ಮಳೆ ಯಿಲ್ಲದೆ ಹೋದ್ದರಿಂದ ಕಂದಿ ಹೋಗುತ್ತಲಿದೆ, ಕೊಪ್ಪ, ಬಾಣಾವಾರದಲ್ಲಿ ಬೆಳೆಗಳು ಚನ್ನಾಗಿರುವದಾಗಿ ತಿಳಿಯಬರುತ್ತೆ.

ಆರೋಗ್ಯ,—ಡಿಸ್ಟ್ರಿಕ್ಟಿನ ಆರೋಗ್ಯತೆಯು ಸಾಧಾರಣವಾಗಿತ್ತು. ಕೊಪ್ಪ, ಬಾಣಾವಾರ ತಾಲ್ಲೂಕುಗಳಲ್ಲಿ ಛಳಿಜ್ವರವು ವ್ಯಾಪಿಸಿತ್ತು. ಲಕ್ಕುವಳ್ಳಿ ಶಿವಾಯಿ ಮಿಕ್ಕ ದರೋಬಸ್ತು ತಾಲ್ಲೂಕುಗಳಲ್ಲಿಯೂ ಉಖಾಲ್ ಜುಲಾಬ್ ಉಪದ್ರವವು ವ್ಯಾಪಿಸಿತ್ತು. ದರೋಬಸ್ತು ಕಾರಣಗಳಿಂದಲೂ 356 ಮಂದಿ ಸತ್ತರು, ಕಳೆದ ತಿಂಗಳಲ್ಲಿ 437 ಮಂದಿ 1875ನೇ ಜೂನ್ ತಿಂಗಳಲ್ಲಿ 266 ಮಂದಿ ಈ ಮೇರೆ ಸತ್ತರು.

ಜಾನುವರ್,—ಚಿಕ್ಕಮಗಳೂರು, ಬಾಣಾವಾರ ತಾಲ್ಲೂಕುಗಳಲ್ಲಿ ದನಗಳಿಗೆ ದೊಡ್ಡರೋಗವು ಕಾಲುಬಾಯಿ ಜ್ವರ ಉಪದ್ರವಗಳು ವ್ಯಾಪಿಸಿದ್ದವು. ದರೋಬಸ್ತು ಕಾರಣಗಳಿಂದಲೂ 2,539 ಕಾಲ್ನಡೆಗಳು ಸತ್ತವು. ಕಳೆದ ತಿಂಗಳಲ್ಲಿ 2,120 ಕಾಲ್ನಡೆಗಳೂ 1875ನೇ ಜೂನ್ ತಿಂಗಳಲ್ಲಿ 1142 ಕಾಲ್ನಡೆಗಳೂ ಸತ್ತವು.

P. KRISHNA RAO,
Dy. Commr.

ಕರೆನ್ಸೀ ನೋಟುಗಳು.

ಇದರಡಿ ನಮೂದಿಸಲ್ಪಡುವ ಕರೆನ್ಸಿ ನೋಟಿನ ಅರ್ಧಭಾಗವು ಶಿವಮೊಗ್ಗಾ ಬೆಂಗಳೂರು ರೋಡಿನಲ್ಲಿ ಟಪ್ಪಾಲ್ ಚೋರೀ ಆದ ಕಾಲದೊಳಗೆ ಹೋಗಿರುತ್ತೆ.

ನಂ.	ಸರ್ಕಲ್	ಮೊಬಲಗ	ಹಕ್ಕುದಾರ ಶಿವಮೊಗ್ಗಾ ಶಿವಿಲ್ ಹಾಸಪತ್ರೆ ಅಪಾತಿಕೇರಿ ಮೇಸ್ಟರ್ ಬೊವಿ.
B/49 07176	ಮದ್ರಾಸ್	10	

Mysore Government Press, Bangalore—1876.

ಭಾರೀ ತಕಸೀರ್‌ಗಳಿಗೋಸ್ಕರ ಖೈದ್ ಮಾಡಲ್ಪಟ್ಟು ಸಜಾ ಮಾಯಿದೆ ಪೂರೈಸಿದ ಬಳಿಕ ಖುಲಾಸೇ ಮಾಡಲ್ಪಟ್ಟ ಜನಗಳ ಚಹರೇ ಪಟ್ಟೀ.

ಯಾವ ಜೈಲಿನಿಂದ ಖುಲಾಸೇಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ ಅದನ್ನು, ವಿಧಿಸಿದ ತಾರೀಖು ಮತ್ತು ಯಾವತ ಕಸೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟು ದಫೆ ಜೈಲ್‌ನಲ್ಲಿ ದ್ದದ್ದು.	ಷರಾ.	ಜೈಲ್‌ಸೂಪರ್ರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಬೆಂಗಳೂರು.	8811	ಮಿಗೇಲ್, ಕ್ರಿಸ್ತಿಯರ್, ಕೂಲಿ, ಬೆಂಗಳೂರು.	ಶಾಮಲವರ್ಣ, ಯರಡು ತೋಳುಗಳ ಮೇಲೂ ಹಚ್ಚೇಗುರುತು, ಎತ್ತರ 5—7.	ಆರೋಕಿಂ, ಬೆಂಗಳೂರು.	ಆರುತಿಂಗಳು ಕಠಿಣ ಸಜಾ, 21ನೇ ಡಿಸೆಂಬರ್ 1875 ಕಳವು, ಬೆಂಗಳೂರು ಕಂಟೋನ್‌ಮೆಂಟ್ ಸಬ್ ಮಾಜಿಸ್ಟ್ರೇಟ್.	21ನೇ ಜೂನ್ 1876.	ಒಂದಾವರ್ತಿ.		
	3740	ವೆಂಕಟ, ವಡ್ಡರ್, ಜಿರಾಯಿತ್, ಕಾನಖಾನಹಳ್ಳಿ.	ಮುಖದ ಮೇಲೆ ಸಿಡುಬಿನ ಕಲೆ, ಬಲಗಣ್ಣು ಹುಬ್ಬಿನ ಮೇಲೆ ಅಕ್ರಮವಾದ ಒಂದು ಘಾಯದ ಕಲೆ. ಕುತ್ತಿಗೆಯ ಬಲಗಡೇ ಪಕ್ಕದಲ್ಲಿ ದಿಂಡಿನ ಮೇಲೆ ಒಂದು ಮಚ್ಚೆ, ಬಲಮೊಲೇ ಕೊನೆಯ ಕೆಳಗೆ ಸುಮಾರು ಎರೆಡು ಅಂಗುಲಗಳಲ್ಲಿ ಒಂದು ಸಣ್ಣ ಘಾಯದ ಕಲೆ. ಹೊಟ್ಟೆಯ ಯಡಪಕ್ಕೇಯಲ್ಲಿ ಪ್ರಕಾಶವಾಗಿರುವ ಅಂಡಾಕಾರವಾದ ಒಂದು ದೊಡ್ಡ ಘಾಯದ ಕಲೆ, ಯಡಮೊಣಕೈ ಮುಂದೆ ಒಂದು ಅಡ್ಡವಾದ ಘಾಯದ ಕಲೆ, ಯಡತೊಡೇಮುಂದೆ ಒಂದರ ಮೇಲೆ ಒಂದು ಯರಡು ಘಾಯದ ಕಲೆಗಳು, ಮತ್ತು ಅದೇ ತೊಡೇಹಿಂದೆ ಯರಡು, ಹಿಂದುಗಡೆ ಕೆಳಪಾರ್ಶ್ವ ಬೆತ್ತದ ದೆಬ್ಬೇಗುರುತು ಇರುತ್ತೆ, ಎತ್ತರ 5—4½.	ಈರ, ಕಾನಖಾನಹಳ್ಳಿ.	ಒಂಭತ್ತು ವರುಷ ಕಠಿಣ ಸಜಾ, ಮತ್ತು 50 ರೂಪಾಯಿ ಜುರ್ಮಾನೆ 25ನೇ ಜೂನ್ 1867. ಡಕಾಯಿತಿ, ಮೊಕದ್ದಮಾ ನಂಬರ್ 7 ಮತ್ತು 8, ನಂದೀದುರ್ಗದ ಡಿವೀಜನ್ ಸೆಷನ್ಸ್ ಕೋರ್ಟ್.	24ನೇ ಜೂನ್ 1876.		25ನೇ ಭಾನುವಾರ ಪ್ರಯುಕ್ತ.	

ಯಾವಜೇಲ್‌ನಿಂದ ಖುಲಾಸೇ ಮಾಡಲ್ಪಟ್ಟದ್ದು	ಜೈಲ ರಿಜಿಸ್ಟರ್‌ನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್
1	2	3	4	5	6	7	8	9	10
ಬೆಂಗಳೂರು.	3742	ರಾಮ, ತಿಗಳ, ಜಿರಾಯಿತ್ ಕಾನಖಾನಹಳ್ಳಿ.	ಬಲಗಿವೀ ಮೇಲ್ಭಾಗ ಕೊಯಿದು ಇದೆ, ಕೆನ್ನೆಗಳು ಉಬ್ಬಾಗಿವೆ, ಕೆಳಗಡೆ ಹಲ್ಲುಗಳು ಸವದು ಹೋಗಿವೆ, ಯಡಸೊಂಟದ ಕೀಲಿಬಳೀ ಒಂದು ದೊಡ್ಡ ಘಾಯದ ಕಲೆ, ಮತ್ತೊಂದು ಅದಕ್ಕೆ ಸುಮಾರು ನಾಲ್ಕು ಅಂಗುಲಗಳ ಕೆಳಗೆ ಇರುತ್ತೆ, ಎತ್ತರ 5—4.	ಮುನಿಯ, ಕಾನಖಾನಹಳ್ಳಿ.	ಒಂಭತ್ತು ವರುಷ ಕಠಿಣ ಸಜಾ, ಮತ್ತು 50 ರೂಪಾಯಿ ಜುರ್ಮಾನೆ, 25ನೇ ಜೂನ್ 1867, ಡಕಾಇತಿ, ಮೊಕದ್ದಮಾ ನಂಬರ್ 7 ಮತ್ತು 8 ನಂದೀದುರ್ಗ ಡಿವೀಜನ್ ಸೆಷನ್ಸ್ ಕೋರ್ಟು.	24ನೇ ಜೂನ್ 1876.	ಇಲ್ಲ.	25ನೇ ಭಾನುವಾರ ಪ್ರಯುಕ್ತ.	
	3748	ಜೋಡಿಗ ವಡ್ಡರ್, ಜಿರಾಯಿತ್, ಕಾನಖಾನಹಳ್ಳಿ.	ಕೆಳಗಡೇ ಮುಂದಿನ ಹಲ್ಲುಗಳು ಅಕ್ರಮವಾಗಿವೆ, ಯಡಭುಜದ ಮುಂದುಗಡೆ ಒಂದು ಚಿಕ್ಕಮಚ್ಚೆ, ಕುತ್ತಿಗೆಯ ಹಿಂದುಗಡೆ ಕೀಲಿನಬಳೀ ಒಂದು ಚಿಕ್ಕ ಮಾಸಲಾದ ಘಾಯದ ಕಲೆ, ಹಿಂದುಗಡೆ ಕೆಳಪಾರ್ಶ್ವ ಬೆತ್ತದ ದೆಬ್ಬೇ ಗುರುತುಗಳು, ಬಲತೊಡೇ ಹಿಂದೆ ಮೊಣಕಾಲು ಮೇಲೆ ಯರಡು ಅಂಗುಲಗಳಲ್ಲಿ ಒಂದು ಕಪ್ಪುಘಾಯದ ಕಲೆ, ಎತ್ತರ 5—5.	ಗುರುವಾ ಭೋಯಿ, ಕಾನಖಾನಹಳ್ಳಿ.	ಡಿಟೋ.	ಡಿಟೋ.	ಇಲ್ಲ.	ಡಿಟೋ.	
	8813	ರಂಗಸಾಮಿ, ಹೊಲೆಯ, ಮೇಟಿ, ಹಲಸೂರು.	ಶಾಮಲವರ್ಣ, ದಪ್ಪಮೂಗು, ಯರಡು ತೋಳುಗಳ ಮೇಲೂ ಹಚ್ಚೇ ಗುರುತು, ಯಡತೋಳಿನ ಮೇಲೆ ಅರವ ಅಕ್ಷರಗಳು, ಬಲತೋಳಿನ ಮೇಲೆ ಹುವ್ವು, ಎತ್ತರ 5—2.	ವೆಂಕಟಸಾಮಿ, ಹಲಸೂರು.	ಸರಕಾರದನೌಕರ ನಾಗಿದ್ದು ಕಳವುಮಾಡಿದ್ದು, ಆರು ತಿಂಗಳು ಕಠಿಣ ಸಜಾ 24ನೇ ಡಿಸೆಂಬರ್ 1875, ಮೊಕದ್ದಮಾ ನಂಬರ್ 795, ಷಹರ್ ಮತ್ತು ಲಷ್ಕರ್ ಮಾಜಿಸ್ಟ್ರೇಟ್.	ಡಿಟೋ.	ಇಲ್ಲ.		

99

	9047	ಮುನಿಸಾಮಿ,	ಯಣಿಗೆಂಪು, ಬಲತೋಳು ಮತ್ತು ಕಾಲು ಪಾರ್ಶ್ವವಾಯು ಯಿಂದ ಬಾಧಕವಾಗಿರುತ್ತೆ. ಬಾಯಿಯಲ್ಲಿ ಮೇಲ್ಭಾಗಕ್ಕೆ ಒಂದು ಕೀವು ಸುರಿಯುವ ರಂಧ್ರ, ಬಲಗಣ್ಣಿನ ಹುಬ್ಬಿನ ಮೇಲೆ ಒಂದು ಗ್ರಂಥಿ.		ಯರಡುತಿಂಗಳು ಕಠಿಣ ಸಜಾ, 29ನೇ ಏಪ್ರೆಲ್ 1876 ಕಳವು, ಮೊಕದ್ದಮಾ ನಂಬರ್ 277, ಲಷ್ಕರ್ ಸಬ್ ಮಾಜಿಸ್ಟ್ರೇಟ್.	29ನೇ ಜೂನ್ 1876.	ಇಲ್ಲ.		
	8574	ಹುಸೇನ್‌ಖಾನ್, ಮುಸಲ್ಮಾನ್, ಬಂಡೀಯವ, ಲಷ್ಕರ್.	ಸುಮಾರು ಕೆಂಪಗಿದ್ದಾನೆ, ಮುಖ ಸೊಟ್ಟಗಿದೆ, ಯಡಮೇಲೀ ಕೊನೆ ಸಮೀಪ ಗ್ರಂಥಿ, ಬಲಗಾಲಿನ ಮೇಲೆ ಹಳೇ ಹುಣ್ಣಾಯಿರುತ್ತೆ, ಎತ್ತರ 5—2.	ಲಾಲ್‌ಖಾನ್, ಲಷ್ಕರ್.	ಒಂದುವರುಷ ಡಿಟೋ 30ನೇ ಜೂನ್ 1875 ಕಳವು, ಮೊಕದ್ದಮಾ ನಂಬರ್ 358, ಷಹರ್ ಮತ್ತು ಲಷ್ಕರ್ ಮಾಜಿಸ್ಟ್ರೇಟ್.	30ನೇಡಿಟೋ	ಎರಡಾವರ್ತಿ.		
ಬೆಂಗಳೂರು.	692	ಗಂಗ, ಕೊರವರ್, ಊರೂರು ತಿರುಗುವವ, ಕೂಲಿ.	ಮುಖದ ಮೇಲೆ ಸಿಡುಬಿನ ಕಲೆ, ಮತ್ತು ಸುಕ್ಕು ಬಿದ್ದಿರುತ್ತೆ, ಯಡಗಡೇ ಕೆಳಭಾಗದ ಮುಂದುಗಡೇ ಹಲ್ಲುಗಳು ಅಕ್ರಮವಾಗಿಯೂ ಮತ್ತು ಹುಳುಕಾಗಿಯೂ ಇವೆ, ಯಡಗಣ್ಣಿನ ಹುಬ್ಬಿನ ಮೇಲೆ ಕತ್ತಿಯಿಂದ ಕಡಿದ ಘಾಯದ ಗುರುತು, ಮತ್ತು ಯಡತೋಳಿನ ಮೇಲೆ ಅಗಲವಾದ ಕಡಿದ ಘಾಯದ ಗುರುತು, ಯಡಪೆರಳು ಮಧ್ಯದಲ್ಲಿ ಒಂದು ಅಕ್ರಮವಾದ ಕಡಿದ ಗುರುತು, ಎತ್ತರ 5—3.	ಮುತ್ತಾ, ಊರೂರು ತಿರುಗುವವ.	ಹದಿನಾಲ್ಕು ವರುಷ ಡಿಟೋ ರಹಜನಿ, 2ನೇ ಜೂಲೈ 1862, ಜುಡಿಷಲ್ ಕಮ್ಮಿಷನರ್ ಕೋರ್ಟು.	1ನೇ ಜೂಲೈ 1876.	ಇಲ್ಲ.	2ನೇ ಭಾನುವಾರ ಪ್ರಯುಕ್ತ.	T. J. McGANN, *Offg. Supt.*
ಕೋಲಾರ.	1461	ಕಾಮುನಿ ವೆಂಕಟಗ, ಪದ್ಮಸಾಲೆ ನೆಯಿಗೇ ಕೆಲಸ, ಕೋಲಾರ ಕಸಬಾ.	ಅಡಿ 5 ಅಂಗುಲ 3 ಶಾಮಲವರ್ಣ ಗುಂಡುಮುಖ, ಹಣೇಮೇಲೆ ಬರೇಗುರ್ತು ಯಿಧೆ.	ವೆಂಕನ್ನ, ಕೋಲಾರ ಕಸಬಾ.	ಕೋಲಾರ ತಾಲ್ಲೂಕು ಕೋರ್ಟು 76ನೇ ಇಸವೀ ಮೇ ತಾರೀಖು 18ರಲ್ಲು 379ನೇ ಸೆಕ್ಷನ್ ಪ್ರಕಾರ ಕಳವು, ತಕರೀರಿಗಾಗಿ 14 ದಿವಸ ರಿಗರ್ಸ್.	1ನೇ ಜೂನ್ 1876ನೇ ಇಸವೀ.	ಇಲ್ಲ.		
	1470	ಹೆಂಗಸು ಕಾಡಿಮುನಿ, ಯಡಗೈ, ಕೂಲಿ	4—11 ಕಪ್ಪುಬಣ್ಣ ಗುಂಡು ಮುಖ, ಬಲಗಡೆ ಕಂಕಳಬಳೀ ಘಾಯದ ಗುರ್ತು ಇಧೆ.	ಮುನಿಗಾ, ಕಲ್ಲಹಳ್ಳಿ ತಾಲ್ಲೂಕು ಕೋಲಾರ.	ಡಿಟೋ ಕೋರ್ಟು 76ನೇ ಇಸವೀ ಮೇ ತಾರೀಖು 31ರಲ್ಲು 58ನೇ	3ನೇ ಜೂನ್ 1876ನೇ ಇ॥	ಡಿಟೋ.		

ಯಾವಜೈಲ್‌ನಿಂದಖುಲಾಸೇವಾಡಲ್ಪಟ್ಟದ್ದು.	ಜೈಯಿಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖುಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್ತು
1	2	3	4	5	6	7	8	9	10
		ಕಲ್ಲುಹಳ್ಳಿ ತಾಲ್ಲೂಕು ಕೋಲಾರ.			ನಂಬರು ಮೊಕದ್ದಮೆಯಲ್ಲಿ 380ನೇ ಸೆಕ್ಷರ್ ಪ್ರಕಾರ 4 ದಿವಸ ಕಳವು, ತಕಶೀರಿಗಾಗಿ ಸಿಂಪಿಲ್.				P. N. PURNAIYA, *Officer in charge of Jail.*
ಕೋಲಾರ.	1447	ವೆಂಕಟಿಗಾ,ಸಾದರವಕೂಲಿ, ವುಪ್ಪಾರಹಳ್ಳೀ ತಾಲ್ಲೂಕು ಗೋರೀಬಿದನೂರು.	5—6 ಕಪ್ಪುಬಣ್ಣ ವುದ್ದ ಮುಖ, ಮುಖದ ಮೇಲೆ ದೇವೀಕಲೆಯಿಧೆ. ಹೊಟ್ಟೇಮೇಲೆ ಕಾಲುಅಣೇಅಗಲ ಹುಣ್ಣಿನ ಮಚ್ಚೆಯಿಧೆ.	ದಾಸಪ್ಪ,ವುಪ್ಪಾರಹಳ್ಳೀ, ತಾಲ್ಲೂಕು ಗೋರೀಬಿದನೂರು.	ಗೋರೀಬಿದನೂರು ತಾಲ್ಲೂಕು ಕೋರ್ಟಿನ 76ನೇ ಇಸವೀ ಮೇ ತಾರೀಖು 6ರಲ್ಲು 23ನೇ ನಂಬರ್ ಮೊ॥ 379ನೇ ಸೆಕ್ಷರ್ ಪ್ರಕಾರ ಕಳವಿಗಾಗಿ 30 ದಿವಸ ರಿಗರ್ಸ್.	5ನೇ ಜೂನ್ 1876.	ಡಿಟೋ.		
	1313	ಬಾಲಾರಾಂ ರಜಪೂತ್, ಮಿಠಾಯಿ ಮಾಡುವದು, ಕೋಲಾರ ಕಸಬಾ.	5—6 ಕಪ್ಪುಬಣ್ಣ ಗುಂಡುಮುಖ, ದೇವೀಕಲೆಮ ಮುಖದಮೇಲೆ ಯಿಧೆ.	ರಾಮಸಿಂಗ್, ಕೋಲಾರ ಕಸಬಾ.	ಕೋಲಾರ ಡಿಸ್ಟ್ರಿಕ್ಟು ಸೆಕೆಂಡ್‌ಅಸಿಸ್ಟೆಂಟ್ ಕಮಿಷನರ್ ಕೋರ್ಟಿನ 76ನೇ ಇಸವಿ ಜನವರಿ ತಾರೀಖು 6ರಲ್ಲು 3ನೇ ನಂಬರು ಮೊಕದ್ದಮೆಯಲ್ಲಿ 380ನೇ ಸೆಕ್ಷರ್ ಪ್ರಕಾರ 4 ತಿಂಗಳು ರಿಗರ್ಸ್ 30 ರೂಪಾಯಿ ಜುರ್ಮಾನೆಗೆ ಸದರೀ ಮೇರಿಗೆ ಜಾಸ್ತೀ 1 ತಿಂಗಳು.	6ನೇ ಜೂನ್ 1876,	ಡಿಟೋ.		
ತುಮಕೂರು.	981	ದೊಡ್ಡೀರ, ಬ್ಯಾಡರು, ಕೊರಟಗೆರೇ ತಾಲ್ಲೂಕು ಕೋಳಾಲ,ಜಿರಾಯಿತ್.	ಕಪ್ಪುವರ್ಣ, ವುದ್ದ 5—5 ಮಾಫಕ್ ಆಳು, ಬಲದ ಮೊಣಕಾಲು ಕೆಳಭಾಗದಲ್ಲಿ ಒಂದು ಕಾಶಿನ ಅಗಲ ಹುಣ್ಣಿನ ಕಲೆಮೇಯಿಧೆ.	ವೆಂಕಟರಮಣ, ಕೊರಟಗೆರೇ ತಾಲ್ಲೂಕು ಕೋಳಾಲ.	379—325ನೇ ಸೆಕ್ಷರ್ ಮೋರೆ ರ್ಸ 1875ನೇ ಇಸವೀ ಜುಲೈ ತಾರೀಖು 29ರ ಲಾಗಾಯಿತು 11 ತಿಂಗಳು ಕಠಿಣ ಸಜಾ,	ರ್ಸ 1876ನೇ ಇ॥ ಜುಲೈ ತಾ॥ 29ರಲ್ಲು ಖುಲಾಸೇ ಆಗಿರುತ್ತಾನೆ.	ಇಲ್ಲ.		

ತುಮಕೂರು.	943	ವೆಂಕಟರಾಜು, ಕ್ಷತ್ರಿಯರು, ಬೆಂಗಳೂರು, ಕೂಲಿ.	ಶಾಮಲವರ್ಣ, 5—6 ಯರಡು ಕಾಲು ಅಂದರೆ ಮೊಳಕಾಲು ಚಿಪ್ಪು ಕೆಳಗೆ ವೊಂದೊಂದು ಗಜ್ಜುಗದ ಘಾತ್ರ ಮತ್ತು ಅವರೇಕಾಳು ಘಾತ್ರ ಗಂಟುಗಳು ಆಗಿವೆ.	ತಿಮ್ಮರಾಜು, ಬೆಂಗಳೂರು.	457—75 ಈ ಹರದೋ ಸೆಕ್ಷ ಪ್ರಕಾರ ಸರ್ 1873ನೇ ಇಸವಿ ಡಿಶಂಬರ್ ತಾರೀಖು 17ರ ಲಾಗಾಯತು $2\frac{1}{2}$ ವರುಷ ಕಠಿಣ ಸಜಾ ಮೊಕರರ್.	ಸರ್ 1876ನೇ ಇಸವಿ ಜೂನ್ ತಾ॥ 17	4 ದಫಾ ಜೈಲಿನಲ್ಲಿ ಸಜಾ, ಅನುಭವಿಸಿದ್ದಾನೆ.
	1055	ಕುರಿಹಳ್ಳಿ ರಂಗದಾಸಿ, ಬ್ಯಾಡರು, ಶಿರಾ ತಾಲ್ಲೂಕು ಬುಕ್ಕಾಪಟ್ಣ ಜಿರಾಯತ.	ಕಪ್ಪುವರ್ಣ, ಮಟ್ಟದಆಳು, 5—5 ಯದೇ ಗುಂಡೀಲಿ ಒಂದು ಕಾಸಿನ ಅಗಲ ಸುಟ್ಟ ಘಾಯದ ಕಲೆ ಯಿಥೆ.	ದಾಸನಾಯಕ, ಶಿರಾ ತಾಲ್ಲೂಕು ಬುಕ್ಕಾಪಟ್ಣ.	379ನೇ ಸೆಕ್ಷಪ್ರಕಾರ ಸರ್ 1876ನೇ ಇಸವೀ ಮೇ ತಾರೀಖು 22ರ ಲಾಗಾಯತು 15 ದಿವಸ ಕಠಿಣ ಸಜಾ.	ಸರ್ 1876ನೇ ಜೂನ್ ತಾ॥ 6.	ಇಲ್ಲ.
	1056	ಜವರ, ಒಕ್ಕಲಿಗರು, ಶಿರಾ ತಾಲ್ಲೂಕು ಬುಕ್ಕಾಪಟ್ಣ ಜಿರಾಯತ.	ಯೆಣೆಗೆಂಪು, ವೃದ್ದ ಆಳು 5—6 ಹೊಕ್ಕಳ ಮೇಲೆ 2 ಕಾಸಿನ ಬಿಲ್ಲೇ ಅಗಲ ಹುಣ್ಣಿನ ಘಾಯದ ಕಲೆ ಯಿಥೆ.	ಮೂದೈಯ, ಶಿರಾ ತಾಲ್ಲೂಕು ಬುಕ್ಕಾಪಟ್ಣ.	379ನೇ ಸೆಕ್ಷಪ್ರಕಾರ ಸರ್ 1876ನೇ ಇಸವೀ ಮೇ ತಾರೀಖು 22ರ ಲಾಗಾಯತು 15 ದಿವಸ ಕಠಿಣ ಸಜಾ.	ಸರ್ 1876ನೇ ಇಸವಿ ಜೂನ್ ತಾ॥ 6ರಲ್ಲು.	ಇಲ್ಲ.
	1050	ನರಸ, ಒಕ್ಕಲಿಗರು, ಶಿರಾ ತಾಲ್ಲೂಕು ಸೊಡಗಾರನಹಳ್ಳಿ, ಕೂಲಿ.	ಯೆಣೆಗೆಂಪು, ಮಟ್ಟದ ಆಳು, 5—2 ಯದೆ ಗೂಡಿಗೆ ಯಡಗಡೆ ಕೆಳಭಾಗದಲ್ಲಿ 2 ಕಾಶಿನ ಬಿಲ್ಲೇಅಗಲ ಶಿಡುಬಿನ ಕಲೆ ಯಿಥೆ.	ಪುಟ್ಟಂಣ ಶಿರಾ ತಾಲ್ಲೂಕು ಸೊಡಗಾರನಹಳ್ಳಿ.	379ನೇ ಸೆಕ್ಷಪ್ರಕಾರ ಸರ್ 1876ನೇ ಇಸವೀ ಮೇ ತಾರೀಖು 9ರ ಲಾಗಾಯತು 1 ತಿಂಗಳು ಕಠಿಣ ಸಜಾ, ಮೊಕರರ್.	ಸರ್ 1876ನೇ ಇಸವಿ ಜೂನ್ ತಾರೀಖು 9.	ಮೊದಲು ವಂದುದಫಾ ಬಂದಿದ್ದವನು.
ಶಿವಮೊಗ್ಗ.	4083	ಚನ್ನಗಿರಿ ತಾಲ್ಲೂಕು ರಾಜಿಹೊಂಡನಹಳ್ಳಿ ವಾಸಸ್ಥ ಕುರುಬರ ಬ್ಯಾಸಾಯ ಕಸಬಿನ ರಂಗಾ.	ಎಣೆಗೆಂಪುಕಣ್ಣು, ಬೆಕ್ಕಿನ ಕಣ್ಣಿನಹಾಗೆ ಯಿಥೆ. ಕೆನ್ನೆಗಳ ಮೇಲೆ ಬಹಳ ಕೂದಲು ಯಿಥೆ. ಯರಡು ಕಪಾಳದ ಮೇಲೂ 2 ತಗ್ಗಾದ ಕಲೆಗಳು ಯಿವೆ, ಯಡಭುಜ ಬೆನ್ನಿನ ಹುರಿ ಈ ಮಧ್ಯೆ ವಂಧು ಮಚ್ಚೆ, ಯಿಥೆ. ಈ ಪ್ರಕಾರ ಚಹರೆ, ವಯಸ್ಸು 34 ಅಡಿ $5\frac{1}{2}$.	ರಾಜಿ, ಹೊಂಡನಹಳ್ಳಿ ರಂಗಾ.	ಕಳವು, ತಕಶೀರಿಗಾಗಿ ಶಿವಮೊಗ್ಗಾ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರು ಅವರ ಕೋರ್ಟು ಚಾಲ್ತಿ ಇಸವೀ ಕ್ರಿಮಿನಲ್ ಕೇಸ್ ನಂಬರ್ 11ನೇ ಮೊಕದ್ದಮೆಯಲ್ಲಿ ಯಿದೇ ಇಸವಿ ಮೇ ತಿಂಗಳು ತಾರೀಖು 20ರಲ್ಲು 30 ದಿವಸ ಕಠಿಣ ಖೈದು ಸಜಾ, 50 ರೂಪಾಯಿ ಜುರ್ಮಾನೆ ಕೊಡದೇಯಿದ್ದರೆ ಬದಸ್ತೂರ್ 7 ದಿವಸ ಸಜಾ, ಅನುಭವಿಸ ಬೇಕೆಂತ ತೀರ್ಪು ವಿಧಿಸಿದ್ದಾರೆ.	26ನೇ ಜೂನ್ 1876.	

V. KRISHNASAMI,
Officer in charge of Jail.

ಯಾವ ಜೈಲಿನಿಂದ ಖುಲಾಸೆ ಮಾಡಲ್ಪಟ್ಟದ್ದು.	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಶೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ಇಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಶಿವಮೊಗ್ಗಾ.	4087	ಶಿವಮೊಗ್ಗಾ ತಾಲ್ಲೂಕು ಹೊಳಲೂರಲ್ಲಿ ಯಿರುವ ಲಂಬಾಣಿಜಾತಿ, ಕೂಲಿ ಕಸಬಿನ ಲಚುಮ.	ಯಣೆಗೆಂಪು, ವೃದ್ಧ ಮನಷ್ಯ ಕಣ್ಣು ಕಪಿಲ ಕುತ್ತಿಗೆ ಯಡಭಾಗದಲ್ಲಿ ಬಿಂದು ಸೊಟ್ಟವಾದ ಹೊಳೆಯುವ ಬಂದುಕಲೆ, ಮತ್ತು ಬಂದು ಮಚ್ಚೆ ಕರೇದು ಯಿದೆ. ಯಡಮೊಳಕೈ ಮೇಲೆ ಬಂದರಮೇಲೆ ವಂದುಕಲೆ, ಈ ಪ್ರಕಾರ ಚಹರೇ ಯಿರುತ್ತದೆ. ವಯಸ್ಸು 30 ಅಡಿ 5 ಅಂಗುಲ 7.	ಹೊಳಲೂರು ಧನೂಜ್ಯಾ	ಕಳವು ತಕಶೀರಿಗಾಗಿ ಶಿವಮೊಗ್ಗಾ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರು ಅವರಕೋರ್ಟ್ಟು ಚಾಲ್ತೀ ಇಸವೀ ಕ್ರಿಮಿನಲ್ ಕೇಸ್ ನಂಬರ್ 110ನೇ ಮೊಕದ್ದಮೆ ಖೈದೀ ಮೇಲೆ ರುಜು ಸಬಬ್ ಈ ಖೈದೀಗೆ ಯಿದ್ದೇ ಇಸವೀ ಜೂನ್ ತಾರೀಖು 1 ರಲ್ಲು 20 ದಿವಸ ಕಠಿಣ ಸಜಾ, 4 ರೂಪಾಯಿ ಜುರ್ಮಾನೆ ಕೊಡದೇ ಯಿದ್ದರೆ ಪುನಃ ಬದಸ್ತೂರ್ 7 ದಿವಸ ಸಜಾ, ಅನುಭವಿಸಬೇಕೆಂತ ತೀರ್ಪು ವಿಧಿಸಿದ್ದಾರೆ.	28ನೇ ಜೂನ್ 1876.			P. H. Benson, M. B., *Offg. Supt. of Jail.*
ಚಿತ್ರದುರ್ಗ.	129	ಕಾಟ, ಬ್ಯಾಡರು, ಕಣಕುಪ್ಪಾ ತಾಲ್ಲೂಕು ಚಿಕ್ಕ ಅರಶಿನಕೆರೆ, ಜಿರಾಯತ್.	ಯಣೆಗೆಂಪು, ಗುಂಡ ಮುಖ, ಯಡಕಣ್ಣು ಹುಬ್ಬಿನಮೇಲೆ ಸೂಜೀಯಿಂದ ಸುಟ್ಟಕಲೆ, ಬಂದು ಯಿದೆ. ನಡು ಬೆನ್ನಿನಲ್ಲಿ ಕಾಸಿನ ಅಗಲ 3 ಕಡೆ ಸುಟ್ಟ ಕಲೆಗಳು ಯಿದೆ. ವೃದ್ಧ 5—3.	ಜಂಪೈಯ, ಕಣಕುಪ್ಪಾ ತಾಲ್ಲೂಕು ಚಿಕ್ಕ ಅರಶಿನಕೆರೆ.	1876ನೇ ಇಸವೀ ಮೇ 22 ರ ಲಾಗಾಯತ್ 1 ತಿಂಗಳು ಕಠಿಣ ಸಜಾ, 10 ರೂಪಾಯಿ ಜುರ್ಮಾನೆ ಕೊಡದೇ ತಪ್ಪಿದರೆ, ಬದಸ್ತೂರ್ 7 ದಿವಸ ಜಾಸ್ತೀ ಸಜಾ, ಅನುಭವಿಸಬೇಕೆಂತಾ ಕಣಕುಪ್ಪಾ ತಾಲ್ಲೂಕು ಕೋರ್ಟ್ಟು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟ್ಟು ಸನ್ 1876ನೇ ಇಸವೀ ಕ್ರಿಮಿನಲ್ ನಂಬರ್ 7ನೇ ಮೊಕದ್ದಮಾದಲ್ಲಿ ಈ ಕೋರ್ಟ್ಟು 379ನೇ ಸೆಕ್ಷನ್ ಪ್ರಕಾರ.	ಜೂನ್ ತಾರೀಖು 29.	ಡಿಟೋ.	ಜುರ್ಮಾನೆ 10 ರೂಪಾಯಿ ವಸೂಲ್ ಬಾರದೇ ಹೋದ್ದರಿಂದ ಜುರ್ಮಾನೇ ಸಜಾ, ದೇಖೀಲ್ ಸಜಾ, ಹಾಯಿದೆ ಪೂರೈಶಿ ಜೂನ್ ತಾರೀಖು 29ರಲ್ಲು ಖುಲಾಸೇ ಆಗಿದ್ದಾನೆ.	

136	ನಾಗ, ಮಣ್ಣುವಡ್ಡರು, ಹಿರಿಯೂರು ತಾಲ್ಲೂಕು ಮತ್ತೋಡು ಕೂಲಿ.	ಯಣೆಗೆಂಪು, ಗುಂಡುಮುಖ, ಹೊಕ್ಕಳು ಮೇಲೆ ಗುಂಡಗೆ ಸುಟ್ಟಕಲೆ ಯಿಧೆ. ವೃದ್ದ 5—8.	ತಿಮ್ಮ, ಹಿರಿಯೂರು ತಾಲ್ಲೂಕು ಮತ್ತೋಡು.	1876ನೇ ಇಸವೀ ಮೇ ತಾರೀಖು 31ರ ಲಾಗಾಯತು 1 ತಿಂಗಳು ಕಠಿಣ ಸಜಾ, ಅನುಭವಿಸಬೇಕೆಂತಾ ಹಿರಿಯೂರು ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ್‌ಕೋರ್ಟು 1876ನೇ ಇಸವೀ ಕ್ರಿ॥ ನಂ. 45ನೇ ಮೊಕದ್ದಮೆಯಲ್ಲಿ ಈ ಕೋರ್ಟು 379ನೇ ಸೆಕ್ಷನ್ ಪ್ರಕಾರ.	ಜೂನ್ 30.	..	..
155	ಚನ್ನರಾಯ, ಸಾತಾನೀ, ಪಾವಗಡ ತಾಲ್ಲೂಕು ಹೊಸಕೋಟೇ ದೇವರಪೂಜೆ.	ಕೆಂಪುವರ್ಣ, ವೃದ್ದಮುಖ, ಯಡಮೊಲೇ ಕೆಳಗೆ ಕಾಸಿನ ಅಗಲ ಒಂದು ಮಚ್ಚೀ, ಯಿಧೆ. 2 ಕಣ್ಣುಗಳ ಸೋಗೇಯಲ್ಲಿ ಕಾಸಿನ ಅಗಲ ಸುಟ್ಟಕಲೆ ಯಿಧೆ. ಮೂಗಿನ ಬಲಪಾರ್ಶ್ವ ರಾಗೀಕಾಳು ಧಪ್ಪ ಒಂದು ನರಹುಲಿ ಯಿಧೆ. ವೃದ್ದ 5—8.	ಹನುಮಂತರಾಯ, ಪಾವಗಡ ತಾಲ್ಲೂಕು ಹೊಸಕೋಟೆ.	1876ನೇ ಇಸವೀ ಜೂನ್ ತಾರೀಖು 3 ರ ಲಾಗಾಯತ್ 30 ದಿವಸ ಕಠಿಣ ಸಜಾ, 2 ರೂಪಾಯಿ ಜುರ್ಮಾನೆ ಕೊಡದಿದ್ದರೆ, ಜಾಸ್ತೀ 5 ದಿವಸ ಬದಸ್ತೂರ್ ಕಠಿಣ ಸಜಾ, ಅನುಭವಿಸಬೇಕೆಂತಾ ಪಾವಗಡ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟು ಸರ್ 1876ನೇ ಇಸವೀ ಕ್ರಿಮಿನಲ್ ನಂಬರ್ 44ನೇ ಮೊಕದ್ದಮೇಯಲ್ಲಿ ಈ ಕೋರ್ಟು 380ನೇ ಸೆಕ್ಷನ್ ಪ್ರಕಾರ.	ಜುಲೈ 3.	..	ಜುರ್ಮಾನೇ 2 ರೂಪಾಯಿ ವಸೂಲ್ ಬಂದ ಕಾರಣ ಜಾಸ್ತೀ ಸಜಾ ವಜಾ ಆಗಿ ಖೈದ್ ಸಜಾ ವಾಯಿದೇ ಪೂರೈಕೆ ಜುಲೈ ತಾರೀಖು 3ರಲ್ಲ ಖುಲಾಸೇ ಆಗಿದ್ದಾನೆ.
190	ಅಂಜನಿಗ, ಪಾವಗಡ ತಾಲ್ಲೂಕು ಶೈಲಾಪುರ, ಮರಾಟಿ, ಕೂಲಿ.	ಶಾಮವರ್ಣ, ವೃದ್ದಮುಖ, ಯಡದ ಮುಂಗೈ ಮೇಲ್‌ಭಾಗದಲ್ಲಿ ಯರಡು ಪಟ್ಟು ವೃದ್ದ ಅರ್ಧ ಆಣೇ ಅಗಲ ಸುಟ್ಟಕಲೆ ಒಂದು ಯಿಧೆ.	ತೊರವಪ್ಪ, ಡಿಟೋ ಶೈಲಾಪುರ.	ಇಕೋ॥ 454, ಡೆಪ್ಯೂಟೀ ಕಮ್ಮಿಷನರ್ ಕೋರ್ಟು ಸರ್ 1875ನೇ ಇಸವೀ ಕ್ರಿ. ನಂ. 49. 1875ನೇ ಡಿಶೆಂಬರ್ 3.	ಸರ್ 1876ನೇ ಇಸವೀ ಜೂನ್ ತಾರೀಖು 3.	..	
181	ದೊಡ್ಡೋಬ, ಪಾವಗಡ ತಾಲ್ಲೂಕು ಬ್ಯಾಡನೂರು, ಮಾದಿಗರು, ಮಾದಿಗ ಕಸಬ್.	ಕೆಂಪುವರ್ಣ, ವೃದ್ದಮುಖ, ಬಲಭುಜದ ಮೇಲೆ ಕಾಸಿನಅಗಲ ಒಂದು ಹುಣ್ಣಿನಕಲೆ ಯಿಧೆ. 2 ಹುಬ್ಬಿನ ನಡುವೆ ತೊಗರೀಬೇಳೆ ಅಗಲ ವಂದು ಸುಟ್ಟಕಲೆ ಯಿಧೆ ವೃದ್ದ 5—6.	ಓಬ, ಪಾವಗಡ ತಾಲ್ಲೂಕು ಬ್ಯಾಡನೂರು.	1875ನೇ ಇಸವಿ ನವಂಬರ್ ತಾರೀಖು 9ರ ಲಾಗಾಯತು 6 ತಿಂಗಳು ಕಠಿಣ ಸಜಾ, ಮತ್ತು 20 ರೂಪಾಯಿ ಜುರ್ಮಾನೆ ಅದು ಕೊಡದೇ ತಪ್ಪಿದರೆ, ಜಾಸ್ತೀ ಬದಸ್ತೂರ್ 1 ತಿಂಗ	17-6-76.	..	20 ರೂಪಾಯಿ ಜುರ್ಮಾನೆ ಪೈಕೀ 1-2-4 ವಸೂಲ್ ಬಂದಕಾರಣ ವಂದು ದಿವಸ ಜಾಸ್ತೀ ಸಜಾ, ವಜಾ,

ಯಾವಜೈಲ್‌ನಿಂದ ಖುಲಾಸೇಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ಇಂಟೆಂಡೆಂಟರವರದಸ್ತಖತ್.
1	2	3	4	5	6	7	8	9	10
					ಳು ಕಠಿಣ ಸಜಾ, ಅನುಭವಿಸ ಬೇಕೆಂದು ಚಿತ್ರದುರ್ಗ ಡಿಸ್ಟ್ರಿಕ್ಟು 2ನೇ ಕ್ಲಾಸ್ ಮಾಜಿಸ್ಟ್ರೇಟ ರವರ ಕೋರ್ಟು ಸರ್ 1875ನೇ ಇಸವಿ ಕ್ರಿಮಿನಲ್ ನಂಬರ್ 86ನೇ ಮೊಕದ್ದಮೇಲಿ ಇ॥ ಕೋ॥ 379ನೇ ಸೆಕ್ ಷರ್ ಪ್ರಕಾರ.			ಜಾತಾ ಮಾಹೇ ಮಜಕೂರ್ ತಾ॥ 18ಕ್ಕೆ ಖುಲಾಸೇ ಆಗಬೇಕಸ್ತೆ. ಆದಿವಸ ಭಾನುವಾರ ಅದ್ದರಿಂದ ತಾ॥ 17ನೇ ಶನಿವಾರ ಸಾಯಂಕಾಲಕ್ಕೆ ಖುಲಾಸೇ ಆಗಿದ್ದಾನೆ.	
ಚಿತ್ರದುರ್ಗ.	187	ಚಿಕ್ಕೋಬ, ಪಾವಗಡ ತಾಲ್ಲೂಕು ಬ್ಯಾಡನಾಡು, ಮಾದಿಗರು, ಮಾದಿಗಕಸಬ್.	ಯಣಗೆಂಪು, ಗುಂಡುಮುಖ, 2 ಮೊಳಕಾಲು ಮೇಲೆ ಕಾಶಿನ ಅಗಲ ಒಂದು ಹುಣ್ಣಿನ ಕಲೆ, ಯಿಥೆ. ವೃದ್ದ 5—0.	ಪೋಬಳಿಗ, ಡಿಟೋ ಬ್ಯಾಡನಾಡು.	ಡಿಟೋ	ಡಿಟೋ	ಡಿಟೋ	ಡಿಟೋ	
	132	ಕೆಂಚ ಮಾರ, ಹಿರಿಯೂರು ತಾಲ್ಲೂಕು ತಾರೇಕೆರೆ ಮಾದಿಗರು ತೋಟಿಗ ಕಸಬ್.	ಕರೀವರ್ಣವೃದ್ದಮುಖ ಯಡಮೊಳಕಾಲು ಮೇಲೆ ಕಾಸಿನಅಗಲ ಒಂದು ಹುಂಣಿನಕಲೆ ಇಧೆ, ವೃದ್ದ 5—2	ಕೆಂಚ, ಹಿರಿಯೂರು ತಾಲ್ಲೂಕು ತಾರೇಕೆರೆ.	ಸರ್ 1876ನೇ ಇಸವಿ ಮೇ 25ರ ಲಗಾಯತು 1ವಂದು ತಿಂಗಳು ಕಠಿಣಸಜಾ ಅನುಭವಿಸಬೇಕೆಂದು ಹಿರಿಯೂರು ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ ಕೋರ್ಟು ಸರ್ 1876ನೇ ಇಸವಿ ಕ್ರಿಮಿನಲ್ ನಂಬರ್ 32ನೇ ಮೊಕದ್ದಮೆಯಲ್ಲಿ ಇ॥ ಕೊ॥ 379ನೇ ಸೆಕ್‌ಷರ್ ಪ್ರಕಾರ.	24—6—76	ಡಿಟೋ.	ಈ ಮಾಹೇ ತಾರೀಖು 25ಕ್ಕೆ ಖುಲಾಸೆ ಆಗಬೇಕು ಆ ದಿವಸ ಭಾನುವಾರ ಅದ್ದರಿಂದ ತಾರೀಖು 24ನೇ ಸಾಯಂಕಾಲಕ್ಕೆ ಖುಲಾಸೇ ಆಗಿದ್ದಾನೆ.	

105

133	ರಂಗ, ಹಿರಿಯೂರು ತಾಲ್ಲೂಕು ಮತ್ತೋಡು, ಮಾದಿಗರು, ತೋಟಿಗ ಕಸಬು.	ಕರೀವರ್ಣ ವೃದ್ಧ ಮುಖ ಬೆನ್ನಿನಮೇಲೆ ಕಾಸಿನಅಗಲ ಬಂದು ಹುಂಣಿನಕಲೆ ಇಥೆ ಯಡಮೊಳಕಾಲು ಗೆಂಣಿನ ಹಿಂದಗಡೆಗೋಲೀದಪ್ಪ ಬಂದು ಗಂಟು ಇಥೆ. ವೃದ್ಧ 5–6	ಕೆಂಚ ಹಿರಿಯೂರು ತಾಲ್ಲೂಕು ಮತ್ತೋಡು	ಡಿಟೋ	ಡಿಟೋ	ಡಿಟೋ	ಡಿಟೋ
119	ಮಲ್ಲಾ, ಚಿತ್ರದುರ್ಗ ತಾಲ್ಲೂಕು ಹಳೆಯೂರು ಸಾದರ, ಲ್ಲಿಂಗಾತ ಜಿರಾಯತು.	ಯೆಣೆಕೆಂಪು ವೃದ್ಧ ಮುಖ ಯಡಪಾರ್ಶ್ವ ಎದೇಮೇಲೆ ತೊಗರಿಬ್ಯಾಳೆ ಅಗಲ ಬಂದು ನರಹುಲಿಇಥೆ, ಯರಡುತೊಡೆಗಳಮೇಲೆ ದುಡ್ಡಿನಅಗಲ ಬಂದೊಂದು ಹುಂಣಿನಕಲೆಗಳು ಇಥೆ, ವೃದ್ಧ 5–6	ಹುಚ್ಚಪ್ಪ, ಚಿತ್ರದುರ್ಗ ತಾಲ್ಲೂಕು ಹಳೆಯೂರು,	ಸರ್ 1876ನೇ ಇಸವಿ ಮೇ 26ರಲಗಾಯತು 30 ದಿವಸ ಕಠಿಣ ಸಜಾ ಮತ್ತು 10 ರೂಪಾಯಿ ಜುಲುಮಾನೆ ಕೊಡದೆ ತಪ್ಪಿದರೆ ಜಾಸ್ತಿ ಬದಸ್ತೂರ 14 ದಿವಸ ಕಠಿಣಸಜಾ ಅನುಭವಿಸಬೇಕೆಂತ ಚಿತ್ರದುರ್ಗತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟಿ ಕೋರ್ಟು ಸರ್ 1876ನೇ ಇಸವಿ ಕ್ರಿಮಿನಲ್ ನಂ॥ 77ನೇ ಮೊಕದ್ದಮೆಯಲ್ಲಿ ಇ॥ ಕೋ॥ 379ನೇ ಸೆಕ್ಷನ್ ಪ್ರಕಾರ.	24–6–76	ಡಿಟೋ	ಈ ಮಾಹೆ ತಾರೀಖು 23ರಲ್ಲಿ ಜುಲುಮಾನೆ 10 ರೂಪಾಯಿ ವಸೂಲ್‌ಬಂದಕಾರಣ ಜಾಸ್ತೀ ಸಜಾ ಮಜಾ ಮಾಡಿ ಈ ಮಾಹೆ ತಾರೀಖು 25ಕ್ಕೆ ಖುಲಾಸೆಆಗಬೇಕು ಆ ದಿವಸ ಭಾನುವಾರವಾದ್ದರಿಂದ 24ನೇ ಸಾಯಂಕಾಲಕ್ಕೆ ಖುಲಾಸೆ ಆಗಿದ್ದಾನೆ.
121	ಶಾಂತ, ಚಿತ್ರದುರ್ಗ ತಾಲ್ಲೂಕು ಹಳೆಯೂರು, ಲ್ಲಿಂಗಾಯತ ಜಿರಾಯತು.	ಯೆಣೆಕೆಂಪು, ವೃದ್ಧ ಮುಖ, ಬಲಭುಜದಮೇಲೆ ತೊಗರೀಬ್ಯಾಳೇ ಅಗಲ ಬಂದು ಹುಂಣಿನಕಲೆ ಇಥೆ, ವೃದ್ಧ 5–4	ನಂಜಪ್ಪ, ಚಿತ್ರದುರ್ಗ ತಾಲ್ಲೂಕು ಹಳೆಯೂರು.	ಡಿಟೋ	ಡಿಟೋ	ಡಿಟೋ	ಡಿಟೋ
123	ಬಸವಲಿಂಗ, ಚಿತ್ರದುರ್ಗ ತಾಲ್ಲೂಕು ಹಳೆಯೂರು, ಜಿರಾಯತು ಲಿಂಗಾಯತ.	ಯೆಣೆಕೆಂಪು ವೃದ್ಧ ಮುಖ, ಬಲಟ್ಟೆಮೇಲೆ ಕಾಸಿನಅಗಲ ಬಂದು ಹುಂಣಿನಕಲೆ ಇಥೆ ಬಲಮಳತೊಡೇಮೇಲೆ ದುಡ್ಡಿನಅಗಲ 2 ಹುಂಣಿನ ಕಲೆಇಥೆ, ವೃದ್ಧ 5 3	ಗುಡ್ಡದ ಮಲ್ಲಪ್ಪ ಚಿತ್ರದುರ್ಗ ತಾಲ್ಲೂಕು ಹಳೆಯೂರು.	1876ನೇ ಇಸವಿ ಮೇ 26ರಲ್ಲು 30 ದಿವಸ ಕಠಿಣ ಸಜಾ ಮತ್ತು 10ರೂಪಾಯಿ ಜುಲುಮಾನೆ ಕೊಡದೇ ತಪ್ಪಿದರೆ ಜಾಸ್ತಿ ಬದಸ್ತೂರು 14 ದಿವಸ ಕಠಿಣ ಸಜಾ ಅನುಭವಿಸಬೇಕೆಂದು ಚಿತ್ರದುರ್ಗತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟಿ ಕೋರ್ಟು ಸರ್ 1876ನೇ ಇಸವಿ ಕ್ರಿಮಿನಲ್ ನಂಬರ 77ನೇ ಮೊಕದ್ದಮೆಯಲ್ಲಿ ಇ॥ ಕೋ॥ 379ನೇ ಸೆಕ್ಷನ್ ಪ್ರಕಾರ.	24–6–76	ಬಂದಾವರ್ತಿ ಸಜಾ.	ಜುಲುಮಾನೆ 10 ರೂಪಾಯಿ ವಸೂಲು ಬಂದಕಾರಣ ಜಾಸ್ತೀ ಸಜಾ ಮಜಾಮಾಡಿ ಈ ಮಾಹೆ ತಾರೀಖು 25ಕ್ಕೆ ಖುಲಾಸೆ ಆಗಬೇಕು. ಆ ದಿವಸ ಭಾನುವಾರವಾದ್ದರಿಂದ 24ನೇ ತಾರೀಖಿಗೆ ಸಾಯಂಕಾಲಕ್ಕೆ ಖುಲಾಸೆಆಗಿರುತ್ತಾನೆ.

ಯಾವಜೈಲ್‌ನಿಂದ ಖುಲಾಸೇಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರ್‌ನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿ ದ್ದದ್ದು.	ಷರಾ.	ಜೈಲ್ ಸೂಪರ್‌ಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಚಿತ್ರದುರ್ಗ.	154	ಕೇಶವರಾಯ, ಪಾವಗಡದ ತಾಲ್ಲೂಕು ಹೊಸಕೋಟೆ ಸಾತಾನಿ, ದೇವರ ಪೂಜಾರಿ.	ಕೆಂಪುವರ್ಣ ವೃದ್ಧ ಮುಖ ಬೆನ್ನು ಮೇಲೆ ದುಗ್ಗಾಣಿಅಗಲ ಒಂದು ಹುಣ್ಣಿನಕಲೆ ಇಧೆ ಬಲಭುಜದಮೇಲೆ ಕಾಸಿನಅಗಲ ಒಂದು ಹುಣ್ಣಿನಕಲೆ ಇಧೆ ಯಡಹುಬ್ಬಿನ ಮೇಲೆ ಸೂಜಿ ಇಂದ ಒಂದು ಸುಟ್ಟಕಲೆ ಇಧೆ, ವುದ್ದ 5—7.	ಹನುಮಂತರಾಯ, ಪಾವಗಡ ತಾಲ್ಲೂಕು ಹೊಸಕೋಟೆ.	1876ನೇಇಸವೀ ಜೂನ್ 3ರಲ್ಲಾ॥ 20 ದಿವಸ ಕಠಿಣಸಜಾ 2 ರೂಪಾಯಿ ಜುಲುಮಾನೆ ಕೊಡದೇ ತಪ್ಪಿದರೆ ಜಾಸ್ತೀ ಬದಸ್ತೂರು 5 ದಿವಸ ಕಠಿಣ ಸಜಾ ಅನುಭವಿಸಬೇಕೆಂತಾ ಪಾವಗಡತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟು ಸನ್ 1876ನೇ ಇಸವೀ ಕ್ರಿಮಿನಲ್ ನಂ॥ ನೇ ಮೊಕದ್ದಮೆಯಲ್ಲಿ ಇ॥ ಕೋ॥ 380ನೇ ಸೆಕ್ಷನ್ ಪ್ರಕಾರ.	23–6–76	ಡಿಟೋ	ಜುಲುಮಾನೆ 2 ರೂಪಾಯಿ ವಸೂಲು ಬಂದಕಾರಣ ಜಾಸ್ತೀ ಸಜಾ ವಜಾಮಾಡಿ ತಾ॥ 23ನೇ ಬೆಳಿಗ್ಗೆ ಖುಲಾಸೇಆಗಿರುತ್ತಾನೆ.	S. VENKAT VARDAIENGAR, *Officer in charge of Jail.*

107

MYSORE GOVERNMENT PRESS, BANGALORE—1876.

ಮೈಸೂರ ಗೆಜೆಟ್.

ನಂ. 31 ಸರ್ಕಾರದಿಂದ ಫ್ರಾಯಿಷ್ಠ ಆದ್ದು. ಸರ್ 1876.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 5, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	129—136
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. ..	381—392
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 110. ತಾರೀಖು 29ನೇ ಜೂನ್ 1876.

ಹಾಲೀ ಜಾರೀಯಿರುವ 27, 28, 29 ಈ ನಂಬರ್‌ಗಳ ಬಾಬತು ಬೈಲಾ ನಿಬಂಧನೆಗಳಿಗೆ ಬದಲಾಗಿ $27\frac{2}{27}$ $28\frac{2}{28}$ $29\frac{2}{29}$ ಈ ನಂಬರುಗಳುಳ್ಳ ಬೈಲಾ ನಿಬಂಧನೆಗಳು ಬೆಂಗಳೂರು ಕಂಟೋನ್ಮೆಂಟಿನಲ್ಲಿ ಜಾರೀಗೆ ತರಲ್ಪಡತಕ್ಕದ್ದನ್ನು ಚೀಫ್ ಕಮ್ಮಿಷನರವರು ಮಂಜೂರ್ ಮಾಡಿರುವದ್ದರಿಂದ ಅವುಗಳು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಬೈಲಾ 27.—ಮ್ಯುನಿಸಿಪಲ್ ಸರಹದ್ದಿನೊಳಗೆ ಯಿರುವ ಯಾವ ದರ್ಖ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾಫಿನ್ ಯಾನೆ ಚಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ

ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದಫ್ನ ಮಾಡಕೂಡದು, ಯಾ ದಫ್ನ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದಫ್ನ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಕಡಮೆ ಯಿಲ್ಲದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದಫ್ನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ, ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲ್ನ ಭೂಮಿಯೊಳಗಾಗಲಿ, ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲ್ನ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚೆಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲ್ನ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕ್ಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕ್ಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲ್ನ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲ್ನ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದಫ್ನ ಯಾ ಜಲ್ನ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜಲ್ನ ಯಾ ದಫ್ನ ಭೂಮಿಗಳ ಇಛಾರ್ಜ್ ಟ್ರಸ್ಟೀಗಳಾಗಲಿ ಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜಲ್ನ ಭೂಮಿಗಳಿಗಾಗಲಿ ದಫ್ನ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿದಿನಕ್ಕೂ ಯರಡು ರೂಪಾಯಿಗಳಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 148. ತಾರೀಖು 25ನೇ ಜುಲೈ 1876.

ಬೆಂಗಳೂರು ಷಹರ್ ವ ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸಲ್ಪಡುವ ಷರತ್ತುಗಳಿಗೆ ವೊಳಪಟ್ಟು 1876ನೇ ಇಸವಿ ಅಕ್ಟೋಬರ್ ಗುರ್ರೇ ಲಗಾಯತು 1878ನೇ ಇಸವಿ ಸೆಪ್ಟಂಬರ್ 30ನೇ ತಾರೀಖು ವರಿಗೂ ಆರೆಕ್ ಸಾರಾಯಿಯನ್ನು ತಯಾರ್ಮಾಡಲಿಕ್ಕೂ, ಬಿಕರೀ ಮಾಡಲಿಕ್ಕೂ, ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪಡೆದುಕ್ಕೊಳ್ಳತಕ್ಕ ಬಗ್ಗೆ ದರಖಾಸ್ತುಗಳನ್ನು ಕೋರೋಣಾಗುತ್ತವೆ. ಬೆಂಗಳೂರು ಷಹರ್ ವ ಲಷ್ಕರ್‌ನೊಳಗೆ ಆರೆಕ್ ಸಾರಾಯಿಯು ಚಿಲ್ಲರೆ ಬಿಕರೀ ಮಾಡುವದನ್ನಾಗಲಿ, ಶೇಂದಿ, ಯೂರೋಪಿಯರ್ನ ವೈನ್ ಮತ್ತು ಸ್ಪಿರಿಟಸ ಸಾರಾಯಿಗಳು ಅಥವಾ ಬೀರ್ ಯಿವುಗಳನ್ನ ಬಿಕರೀ ಮಾಡುವದನ್ನಾಗಲಿ, ಬೀರ್ ತಯಾರ ಮಾಡುವದನ್ನಾಗಲಿ, ಸದರೀ ಸ್ವಾತಂತ್ರ್ಯವು ಅಡಗಿಸಿಕ್ಕೊಂಡಿರುವದಿಲ್ಲ.

II. ದರಖಾಸ್ತುದಾರ್ರುಗಳು ತಮಿಗೆ ಮೇಲೆ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯ ಕೊಡಲ್ಪಟ್ಟಲ್ಲಿ ಅವರು ಸರಕಾರಕ್ಕೆ ಗ್ಯಾರೆಂಟಿ ಯಾ ಭರವಾಸೆ ಕೊಡುವ ಮಿನಿಮಂ ಯಾನೆ ಕಮ್ಮಿ ಹುಟ್ಟುವಳಿಯನ್ನು ದರಖಾಸ್ತಿನಲ್ಲಿ ತಿಳಿಯ ಪಡಿಸತಕ್ಕದ್ದಲ್ಲದೆ ತಮ್ಮ ವೊಡಂಬಡಿಕೆಯನ್ನು ನೆರವೇರಿಸತಕ್ಕ ಬಗ್ಯೆ ತಾವು ಕೊಡಲು ಶಿದ್ಧವಾಗಿರುವ ಖಾತರ್ ಸಹಾ ತಿಳಿಸತಕ್ಕದ್ದು.

III. ಪ್ರತಿ ದರಖಾಸ್ತಿನ ಸಂಗಡ 1000 ರೂಪಾಯಿ ನಗದಾಗಲಿ ಗವರ್ನಮೆಂಟ ಸಿಕ್ಯೂರಿಟಿಗಳ ಮೂಲಕವಾಗಲಿ ಠೇವಣಿ ಕಳುಹಿಸಬೇಕಲ್ಲದೆ ಸದರೀ ದರಖಾಸ್ತನ್ನು ವೊಂದು ಲಿಫಾಫೇಯಲ್ಲಿ ಇಂದು ಮಾಡಿ ಅದರ ಮೇಲೆ "ಆರೆಕ್ ಸಾರಾಯಿಯನ್ನು ಮಾಡುವ ಬಗ್ಯೆ ಬಿಕರೀ ಮಾಡುವ ಬಗ್ಯೆ ಸಂಪೂರ್ಣವಾದ ಸ್ವಾತಂತ್ರ್ಯಕ್ಕೋಸ್ಕರ ಮಾಡಲ್ಪಟ್ಟ ದರಖಾಸ್ತು" ಯಂಬದಾಗಿ ಬರದು ಅದನ್ನು ನಂದೀದುರ್ಗ ಡಿವಿಜನ್ ಕಮ್ಮಿಷನ್ನರ್ ಯವರಿಗೆ 1876ನೇ ಇಸವಿ ಆಗಸ್ಟು 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖು ತರುವಾಯ ಬರುವ ಯಾವ ದರಖಾಸ್ತಾಗಲಿ ಅಂಗೀಕರಿಸಲ್ಪಡುವದಿಲ್ಲ. ದರಖಾಸ್ತುಗಳನ್ನು ಕಮ್ಮಿಷನರವರು ತಮ್ಮ ಆಫಿಸಿನಲ್ಲಿ 1876ನೇ ಆಗಸ್ಟು 15ನೇ ತಾರೀಖಿನ ದಿವಿ 12 ಘಂಟೆಗೆ ಆಕಾಲದಲ್ಲಿ ಹಾಜರಿರುವದಕ್ಕೆ ಅಪೇಕ್ಷಿಸುವರ ರುಬರೂ ಖುಲ್ಲಾ ಮಾಡುವರು. ದರಖಾಸ್ತುಗಳ ಅಖೈರು ವ್ಯವಸ್ಥೆ ಚೀಫ್ ಕಮ್ಮಿಷನರವರನ್ನು ಹೊಂದಿದ್ದಾಗಿರುತ್ತದ್ದರಿಂದ ಅವರು ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲಿಕ್ಕೂ ಅಥವಾ ಸರಿಯಾದ ಮೊಬಲಗಿಗೆ ಸವಾಲ್‌ಗಳು ಮಾಡಲ್ಪಡದ ಪಕ್ಷದಲ್ಲಿ ದರೋಬಸ್ತು ದರಖಾಸ್ತುಗಳನ್ನೂ ತಿರಸ್ಕರಿಸಲಿಕ್ಕೂ ಪೂರಾ ಅಧಿಕಾರವನ್ನು ವುಳಿಸಿಕೊಂಡಿರುತ್ತಾರೆ. ಚೀಫ್ ಕಮ್ಮಿಷನರವರು ಮಾಡುವ ಯಿತ್ಯರ್ಥವು 1876ನೇ ಇಸವಿ ಸೆಪ್ಟಂಬರ್ ಗುರ್ರೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪ್ರಸಿದ್ಧ ಪಡಿಸಲ್ಪಡುವದಲ್ಲದೆ ಸದರೀ ತಾರೀಖಿನಲ್ಲಿ ಕಮ್ಮಿಷನರವರ ಮೂಲಕ ತಿಳಿಸಲ್ಪಡುವದು, ಬಳಿಕ ಮಂಜೂರಾಗದ ದರಖಾಸ್ತುದಾರ್ರುಗಳಿಗೆ ಅವರ ಅರ್ಜಿಗಳ ಮೇಲೆ ಠೇವಣಿಗಳು ವಾಪಸ್ ಮಾಡಲ್ಪಡುವವು.

IV. ಯಾರ ದರಖಾಸ್ತು ಅಂಗೀಕರಿಸಲ್ಪಡುತ್ತೋ ಆ ಮನುಷ್ಯನು ತನಿಗೆ ಚೀಫ್ ಕಮ್ಮಿಷನ್ನರವರ ನಿಷ್ಕರ್ಷೆಯನ್ನು ತಿಳಿಯಪಡಿಸಿದ ಹತ್ತುದಿನಗಳೊಳಗಾಗಿ ಮಂಜೂರಾದ ದರಖಾಸ್ತು ಮೊಬಲಗ್ ಪೈಕೀ ನಾಲ್ಕರಲ್ಲಿ ವೊಂದು ಭಾಗಕ್ಕೆ ದರಖಾಸ್ತು ಕಾಲದಲ್ಲಿಟ್ಟ 1000 ರೂಪಾಯಿ ಠೇವಣೀ ದೇಖಿಲ್ ಸರಿಯಾದ ಮೊಬಲಗನ್ನು ನಗದಾಗಲಿ, ಡಿಪ್ಯುಟಿ ಕಮ್ಮಿಷನರವರಿಗೆ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ ಸಿಕ್ಯೂರಿಟಿಗಳ ಮೂಲಕವಾಗಲಿ ಬೆಂಗಳೂರು ಡಿಸ್ಟ್ರಿಕ್ಟ ಡಿಪ್ಯುಟಿ ಕಮ್ಮಿಷನ್ನರಲ್ಲಿ ಠೇವಣೀ ಯಿಡತಕ್ಕದ್ದು. ಆತನು ಹಾಂಗೆ ಮಾಡಲಿಕ್ಕೆ ತಪ್ಪಿದರೆ ಪೂರ್ವದಲ್ಲಿ ಯಿಡಲ್ಪಟ್ಟ ಠೇವಣೀಯನ್ನು ದಂಡದೋಪಾದಿಯಲ್ಲಿ ಕಳಕೊಳ್ಳುವನು ಮತ್ತು ಆತನ ದರಖಾಸ್ತನ್ನು ಅಂಗೀಕರಿಸಿ ಚೀಫ್ ಕಮ್ಮಿಷನರವರು ಮಾಡಿದ ನಿಷ್ಕರ್ಷೆಯು ರದ್ದು ಮಾಡಲ್ಪಡುವದು.

V. ಮೇಲೆ ವಿವರಿಸೋಣಾದ ಪ್ರಕಾರ ಠೇವಣೀ ಯಿಟ್ಟಲ್ಲಿ ಯಾರ ದರಖಾಸ್ತು ಮತ್ತು ಕಡೇ ಠೇವಣೀ ಅಂಗೀಕರಿಸಲ್ಪಟ್ಟಿರುತ್ತೋ ಆ ಮನುಷ್ಯನು ಈ ಕೆಳಗೆ ನಮೂದಿಸಲ್ಪಟ್ಟ ಷರತ್ತುಗಳಿಗೆ ಸರಿಯಾಗಿ ನಡೆಯಲಿಕ್ಕೆ ಬದ್ಧನಾಗಿ ವೊಂದು ವೊಡಂಬಡಿಕೆಯನ್ನು ಸರಿಯಾದ ಛಾಪಾ ಕಾಗದದಲ್ಲಿ ಬರದುಕೊಡತಕ್ಕದ್ದು. ಮತ್ತು ಆತನು ಸದರೀ ವೊಡಂಬಡಿಕೆಗೆ ರುಜು ಮಾಡತಕ್ಕದ್ದೆಂದು ತಿಳಿಸಲ್ಪಟ್ಟ 5 ದಿನಗಳೊಳಗಾಗಿ ರುಜು ಮಾಡಲಿಕ್ಕೆ ತಪ್ಪಿದರೂ ಅಥವಾ ನಿರಾಕರಿಸಿದರೂ ಮೊದಲು ಯಿಟ್ಟ ದರೋಬಸ್ತು ಠೇವಣೀಗಳನ್ನೂ ದಂಡದೋಪಾದಿಯಲ್ಲಿ ಕಳಕೊಳ್ಳುವನು, ಮತ್ತು ಸಂಪೂರ್ಣವಾದ ಸ್ವಾತಂತ್ರ್ಯವು ಚೀಫ್ ಕಮ್ಮಿಷನರವರು ಯಾವ ಮೇರಿಗೆ ನಿಶ್ಚಯಿಸುವರೋ ಆ ಮೇರೆ ಅನ್ಯಥಾ ಪರಭಾರೆ ಮಾಡಲ್ಪಡುವದು.

VI. ವೊಡಂಬಡಿಕೆ ಬರದುಕೊಡಲ್ಪಡುತ್ತಾಲೆ ಕಮ್ಮಿಷನರವರು ಯಾರ ದರಖಾಸ್ತು ಅಂಗೀಕರಿಸಲ್ಪಟ್ಟಿರುತ್ತೋ ವ್ಮತ್ತು ಯಾವನು ಠೇವಣೀಗಳನ್ನು ಕೊಟ್ಟು ವೊಡಂಬಡಿಕೆ ಬರದುಕೊಟ್ಟಿರುತ್ತಾನೋ ಆ ಮನುಷ್ಯನಿಗೆ ಈ ಇಸ್ತಿಹಾರಿನ ಮೊದಲನೇ ಕ್ಲಾಜ್‌ನಲ್ಲಿ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಈ ಕೆಳಗೆ ಕಂಡ ಷರತ್ತುಗಳಿಗೆ ವೊಳಪಡಿಸಿ ಕೊಟ್ಟು ವೊಂದು ಲೈಸೆನ್ಸ್ ಕೊಡತಕ್ಕದ್ದು.

ಷರತ್ತುಗಳು.

(1.) ಬೆಂಗಳೂರು ಷಹರ್ ವ ಲಷ್ಕರ್ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಕರಗುಪಡಿ ಬಗ್ಯೆ ಕೊಡಲ್ಪಡುವ ಸಾರಾಯಿಯ ಮೇಲೆ ಅಲ್ಲೀಜ್ ಯಾನೆ ಕಮ್ಮಿಬದ್ದ ಬಗ್ಗೆ ಲೀಕೇಜ್ ಯಾನೆ ಸೋರಿ ಹೋಗುವ ಬಗ್ಗೆ ಶೇಕಡಾ 3ರ ಪ್ರಕಾರ ವಜಾ ಆಗಿ ಲೈಸೆನ್ಸ್‌ದಾರನಿಂದ ಕೊಡಲ್ಪಟ್ಟ ಸ್ಪಿರಿಟ್‌ಗಳ ಪ್ರತಿ ಇಂಪೀರಿಯಲ್ ಗ್ಯಾಲನ್ ಮೇಲೆ, ವಿಧಿಸಲ್ಪಟ್ಟ ಲೋಕಲ್‌ಫಂಡ್ ಸೆಸ್ ನೊಡನೆ, ಯಿದರಡಿ ನಮೂದಿಸಲ್ಪಡುವ ತೀರ್ವೆಯು ಕೊಡಲ್ಪಡತಕ್ಕದ್ದು.

	ಗ್ಯಾಲನ್ 1ಕ್ಕೆ ಪ್ರೂಫ್.			20ಡಿಗ್ರೀ ಅಂಡರ್‌ಪ್ರೂಫ್ ಬಾಬತು ಗ್ಯಾಲನ್ 1ಕ್ಕೆ		
ಬೆಂಗಳೂರು ಷಹರ್ ವ ಲಷ್ಕರ್	* 5	12	0	* 3	0	0
ಬೆಂಗಳೂರು ಡಿಸ್ಟ್ರಿಕ್ಟ	5	0	0	2	0	0

* ರೂಪಾಯಿ 1ಕ್ಕೆ ವೊಂದಾಣೆ ಪ್ರಕಾರ ಲೋಕಲ್ ಸೆಸ್ ಶಿವಾಯಿ.

(2.) ಈ ತೀರ್ವೆಯು ಯಾವ ತಿಂಗಳಲ್ಲಿ ಸಾರಾಯಿ ಕೊಡಲ್ಪಡುತ್ತೋ ಆ ಮಾರನೇ ತಿಂಗಳಿನ 5ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಖಜಾನೇಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಮತ್ತು ಆ ತಾರೀಖಿನಲ್ಲಿ ಬಾಕೀ ನಿಲ್ಲಿಸಿಕೊಂಡ ದರೋಬಸ್ತು ಮೊಬಲಗ್ ಮೇಲೆ ಸಾಲ್ 1ಕ್ಕೆ ಶೇಕಡಾ 9ರೂಪಾಯಿ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂತಾ ಬಾಕೀ ಮೊಬಲಗು, ಅದು ಯಾವ ತಿಂಗಳಲ್ಲಿ ಸಲ್ಲಬೇಕಾಗಿರುತ್ತೋ ಆ ತಿಂಗಳು ಕಳೆದನಂತರ ಸಲ್ಲದೇ ನಿಂತರೆ, ಲ್ಯಾಂಡ್ ರೆವಿನ್ಯೂ ಬಾಕೀ ವಸೂಲೀ ಬಗ್ಯೆ ಹಾಲೀ ಜಾರೀಯಲ್ಲಿರುವ ರೂಲ್ಸಿನಿಂದ ನಿಬಂಧಿಸಲ್ಪಟ್ಟಿರುವ ಮೇರೆ ಲೈಸೆನ್ಸ್‌ದಾರನ ಜಿಂದಗಿ ಜಪ್ತೀ ಹರಾಜಿನಿಂದ ವಸೂಲಾಗತಕ್ಕದ್ದಾಗಿರುತ್ತೆ. ಲೈಸೆನ್ಸ್‌ದಾರ ಭರವಸೆ ಕೊಟ್ಟಿರುವ ಸಾಲೀಯಾನಾ ಹುಟ್ಟುವಳಿ ಮೊಬಲಗಿನ ಪೈಕಿ ನಾಲ್ಕರಲ್ಲಿವೊಂದು ಭಾಗದ ಮೊಬಲಗ್ 3 ತಿಂಗಳಿಗೆ ವೊಂದಾವರ್ತಿ ಅಂದರೆ ಜನವರಿ, ಏಪ್ರೈಲ್, ಜುಲೈ, ಅಕ್ಟೋಬರು ಈ ಮಾಹೆಗಳ 5ನೇ ತಾರೀಖಿನಲ್ಲಿ ಅಥವಾ ಅದರ ವೊಳಗಾಗಿ ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಮತ್ತು ಮೇಲೆ ನಮೂದಿಸಲ್ಪಟ್ಟ ಆ ಮಾಹೇಗಳ ಪೈಕಿ ಯಾವ ಆ ಮಾಹೇಯಲ್ಲಾಗಲಿ ಪಾವತೀ ಮಾಡಲ್ಪಡುವ ತೀರ್ವೆಮೊಬಲಗ್ಗಳು ಮೇಲೆನಮೂದಿಸಲ್ಪಟ್ಟ ದಾಮಾಷಾಯಿಗಿಂತಲೂ ಕಮ್ಮಿಬಿದ್ದಲ್ಲಿ ಕಮ್ಮಿಬಿದ್ದ ಮೊಬಲಗ್‌ಕೂಡಲೆ ಭರ್ತೀಮಾಡಲ್ಪಡತಕ್ಕದ್ದು. ಮತ್ತು ಕೊಡಬೇಕಾದ ಅಂತಾ ಮೊಬಲಗ್ ಬಾಕೀಆದಾಗ ಆ ಮೊಬಲಗನ್ನು ಪಾವತಿ ಮಾಡಲಿಕ್ಕೆ ತಪ್ಪಿದ ಪಕ್ಷದಲ್ಲಿ ಹಾಂಗೆ ಆಗುವ ಬಾಕಿ ಮೊಬಲಗಿಗೆ ಸಾಲ್ 1ಕೆ ಶೇಕಡಾ 9ರೂಪಾಯಿಪ್ರಕಾರ ಬಡ್ಡಿ ಕಟ್ಟಲ್ಪಡತಕ್ಕದ್ದು. ಮೊಬಲಗ್ ಪಾವತಿ ಮಾಡಲಿಕ್ಕೆ ಮತ್ತು ತಪ್ಪುವ ಪಕ್ಷದಲ್ಲಿ ಡಿಸ್ಟಿಲ್‌ದಾರನ ಲೈಸೆನ್ಸ್ ರದ್ದಾಗಿರುತ್ತೆಂದು ಪ್ರಸಿದ್ಧವಾಗಿ ತಿಳಿಸಲಿಕ್ಕೂ, ಮತ್ತು ನಿಂತಿರುವ ವಿಶಿಷ್ಟಬಾಕಿಯನ್ನೂ, ಡಿಪಾಜಿಟ್ ಇಟ್ಟಿರತಕ್ಕ ಮೊಬಲಗಗಳನ್ನು ಸರಕಾರಕ್ಕೆ ಸೇರಿಸಿ ಕೊಳ್ಳುವ ಮೂಲಕ ಮತ್ತು ಆವಶ್ಯಕವಿದ್ದಲ್ಲಿ ಲ್ಯಾಂಡ್ ರೆವಿನ್ಯೂವಸೂಲೀ ಬಗ್ಯೆ ಹಾಲೀ ಜಾರೀಲಿರುವ ರೂಲ್ಸ್ ಪ್ರಕಾರ ಸರಕಾರದ ಹಣ ಕೊಡದೆ ತಪ್ಪಿದವನ ಜಿಂದಗಿಜಪ್ತಿ ಹರಾಜುಮೂಲಕ ವಸೂಲ್ಮಾಡಿಕೊಳ್ಳತಕ್ಕ ಬಗ್ಯೆ ಕ್ರಮವನ್ನು ವಹಿಸಲಿಕ್ಕೂ, ಚೀಫ್ ಕಮ್ಮಿಷನರವರ ಅಪ್ಪಣೆ ನಿ॥, ಕಮ್ಮಿಷನರವರ ಯುಕ್ತ್ಯಾರಿಯಲ್ಲಿರತಕ್ಕದ್ದು.

(3.) ಡಿಸ್ಟಿಲ್‌ದಾರನು ಬೆಂಗಳೂರು ಸಮೀಪದಲ್ಲಿರುವ ಸದರ್ ಡಿಸ್ಟಿಲೇರಿಯ ಆವರಣದೊಳಗಾಗಲಿ, ಡಿಪ್ಯುಟಿ ಕಮ್ಮಿಷನ್ನರವರಿಂದ ಮಂಜೂರ್ಮಾಡಲ್ಪಡುವ ಮತ್ತ್ಯಾವ ಇತರಸ್ಥಳದಲ್ಲಾಗಲಿ ಆರೆಕ್‌ಸಾರಾಯಿಯನ್ನು ತಯಾರ್ಮಾಡುವಂತೆ ಮತ್ತು ಡಿಪ್ಯುಟಿಕಮ್ಮಿಷನರವರಿಂದ ಗೊತ್ತು ಮಾಡಲ್ಪಡುವ ಸ್ಥಳಗಳಲ್ಲಿ ಬಟ್ಟಿ ಬಿಕರೀ ಡಿಪೋಗಳನ್ನು ಏರ್ಪಡಿಸುವಂತೆ ಅಪ್ಪಣೆ ಕೊಡಲ್ಪಡತಕ್ಕದ್ದು. ಡಿಸ್ಟಿಲೆರಿಯು ಮತ್ತು ಡಿಪೋಗಳು ಸಹಾ ಕಮ್ಮಿಷನ್ನರವರಾಗಲಿ, ಡಿಪ್ಯುಟಿಕಮ್ಮಿಷನ್ನರಾಗಲಿ ಆ ಬಗ್ಯೆ ಡಿಪ್ಯುಟಿ ಕಮ್ಮಿಷನ್ನರಿಂದ ಕಳುಹಿಸಲ್ಪಡತಕ್ಕ ಯಾವ ತಹಶೀಲ್ದಾರಿ ಉದ್ಯೋಗಸ್ಥನಾಗಲಿ ಹೋಗಿ ನೋಡಲಿಕ್ಕೆ ಯಲ್ಲ ಕಾಲಗಳಲ್ಲಿಯೂ, ಖುಲ್ಲಾ ಇರತಕ್ಕದ್ದು. ಚೀಫ್‌ಕಮ್ಮಿಷನರವರು ಆವಶ್ಯಕವೆಂದೆಣಿಸುವ ಪೋಲೀಸ್ ಪಹರೆಗಳು ಮತ್ತು ಆಳತಿಬ್ಬಂದಿ ಇವುಗಳಿಗಾಗಿ ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು, ಮಾಹೇಯಾನಾ ಪ್ರತಿ ತಿಂಗಳ ಗುರ್ರೇತಾರೀಖಿನಲ್ಲಿ 250 ರೂಪಾಯಿಗಳನ್ನು ಖಜಾನೇಯಲ್ಲಿ ಪಾವತಿಮಾಡತಕ್ಕದ್ದು. ಯಾವ ಆರೆಕ್‌ಸಾರಾಯಿಆಗಲಿ ಅಳಿಯುವಬಗ್ಯೂ ಪರಿಕ್ಷಿಸುವಬಗ್ಯೂ ಮೊಕರರ್ಮಾಡಲ್ಪಟ್ಟಿರುವ ಉದ್ಯೋಗಸ್ಥನಿಂದ ಅಳಿಯಲ್ಪಟ್ಟು ಪರಿಕ್ಷಿಸಲ್ಪಟ್ಟಹೊರ್ತು ಡಿಸ್ಟಿಲೇರಿಯ ಆಚೆ ತೆಗದುಕೊಂಡು ಹೋಗಲ್ಪಡಕೂಡದು.

(4.) ಸ್ಪಿರಿಟ್‌ಗಳನ್ನು ಕೊಡುವ ವಿಷಯದಲ್ಲಿ, ಇದರಡಿ ಬರುವ ನಿಬಂಧನೆಗಳು ಆಚರಿಸಲ್ಪಡತಕ್ಕದ್ದು.

(*a.*) ಯಾವ ಸ್ಪಿರಿಟ್ಟಾಗಲಿ, 20 ಡಿಗ್ರಿ ಅಂಡರ್‌ಪ್ರೂಫಿಗೆ ಹೆಚ್ಚಾದ ಬಲವುಳ್ಳದ್ದಾಗಿ ಸಾಧಾರಣವಾಗಿ ಕೊಡಲ್ಪಡಕೂಡದು. ಆದರೆ ಮೇಲೆ ನಮೂದಿಸಲ್ಪಟ್ಟ ಬಲಕಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಕೊಡಲು ಡಿಸ್ಟಿಲ್‌ದಾರನು ಆಪೇಕ್ಷಿಸಿದರೆ ಹಾಂಗೆ ಕೊಡಲ್ಪಟ್ಟ ಸ್ಪಿರಿಟ್, ಪ್ರೂಫ್‌ಗಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಇರಕೂಡದು.

(*b.*) 20 ಡಿಗ್ರಿ ಅಂ॥ ಪ್ರೂಫಿಗೆ ಮೇಲ್ಪಟ್ಟ ಬಲವುಳ್ಳದ್ದಾಗಿ ಕೊಡಲ್ಪಡುವ ದರೋಬಸ್ತು ಸಾರಾಯಿಗೂ ಪ್ರೂಫ್‌ಮೇಲೆ ವಿಧಿಸಲ್ಪಟ್ಟಿರುವ ತೀರ್ವೆ ಕಟ್ಟಲ್ಪಡತಕ್ಕದ್ದು.

(*c.*) 20 ಡಿಗ್ರಿ ಅಂ॥ ಪ್ರೂಫಿಗೆ ಕಡಮೆಯಾಗಿ ಇರುವ ಯಾವ ಸ್ಪಿರಿಟ್ಟಾಗಲಿ, ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು. ಆದರೆ 20 ಅಂಡರ್ ಪ್ರೂಫ್‌ಗಿಂತಲೂ ಕಮ್ಮಿ ಬಲವುಳ್ಳ ಸಾರಾಯಿಗೆ ಗಿರಾಕಿಯಿದ್ದರೆ ಡಿಸ್ಟಿಲ್‌ದಾರನು ತನ್ನ ಬಟ್ಟಿ ಬಿಕರೀ ಅಂಗಡಿಗಳಲ್ಲಿ 30 ಡಿಗ್ರಿ ಅಂ॥ ಪ್ರೂಫ್ ಪ್ರಕಾರ ಸಾರಾಯಿಯನ್ನು ದಾಮಾಷಾಯಿ ಮೇರೆ ಕಮ್ಮಿ ಆಗುವ ರಿವಾಜಮೇಲೆ ಚಿಲ್ಲರೆ ಬಿಕರೀದಾರರುಗಳಿಗೆ ಮಾರಿ ಕೊಳ್ಳಬಹುದು.

(5.) ಬಟ್ಟೀ ಯಿಳಿಸುವಲ್ಲಿ ಉಪಯೋಗಿಸಲ್ಪಡುವ ಪದಾರ್ಥಗಳು ಕಮ್ಮಿಷನರವರಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮತ್ತು ಅವು ಅತ್ಯುತ್ತಮವಾಗಿರತಕ್ಕದ್ದು. ಬಟ್ಟೀ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಜಿನಿಸೀಗಳೂ ಉಪಯೋಗಿಸಲ್ಪಡಕೂಡದು, ಅಥವಾ ಸಾರಾಯಿ ತಯಾರಾದ ಬಳಿಕಲೂ ಅದರಲ್ಲಿ ಹಾಕಲ್ಪಡಕೂಡದು.

(6.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ತನ್ನ ಜಮಾಖರ್ಚುಗಳಿಗೂ, ತಯಾರ್ಮಾಡಲ್ಪಟ್ಟ, ಕೊಡಲ್ಪಟ್ಟ, ಮತ್ತು ಪ್ರತಿ ಡಿಸ್ಟಿಲೇರಿ ವ ಡಿಪೋಯಲ್ಲಿ ತೆಗದುಕೊಳ್ಳಲ್ಪಟ್ಟ ಸ್ಪಿರಿಟ್‌ಗಳ ತೇದಾದ್ ವ ಬಲ ಯಿವುಗಳಿಗೂ, ಕರಾರ್ ವಾಕಾ ಲೆಖ್ಖಗಳನ್ನು ಯಿಡತ

ಕ್ಕದ್ದಲ್ಲದೆ ಕಮ್ಮಿಷನರಾಗಲಿ, ಡೆಪ್ಯುಟಿ ಕಮ್ಮಿಷನರಾಗಲಿ, ಇವರುಗಳು ತನಿಖೀಬಗ್ಯೆ ಕಳುಹಿಸುವ ಯಾವ ತಾಬೇದಾರರಾಗಲಿ, ಆ ಲೆಖ್ಖಗಳನ್ನು ತನಖೀ ಮಾಡುವ ಬಗ್ಯೆ ಹಾಜರ್ ಮಾಡಬೇಕೆಂದು ತಿಳಿಸಿದಾಗೆಲ್ಲ ಹಾಜರ್ಮಾಡತಕ್ಕದ್ದು.

(7.) ಡಿಸ್ಟಿಲ್‌ದಾರನು ವೊಂದು ತಿಂಗಳಿಗೆ ಬೇಕಾದ ಸಾರಾಯಿಯನ್ನು ಯಾವಾಗಲೂ ಹಾಜರು ಯಿಟ್ಟುಕೊಂಡಿರುವ ಬಗ್ಯೆ ಬದ್ಧನಾಗಿರತಕ್ಕದ್ದು. ಈ ಪ್ರಕಾರ 1876ನೇ ಇಸವಿ ಅಕ್ಟೋಬರ್ ಗುರ್ರೇ ತಾರೀಖಿನಲ್ಲಿ ಯಿಟ್ಟುಕೊಂಡಿರತಕ್ಕ ಬಗ್ಯೆ ಆ ತಾ ರೀಖಿಗೆ ಮೊದಲೇ ಬಟ್ಟೀ ಯಿಳಿಸಲು ಷುರೂ ಮಾಡತಕ್ಕ ಬಗ್ಗೆ ಆತನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಪರಂತು ಹಾಂಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ 1876ನೇ ಇಸವೀ ಅಕ್ಟೋಬರ್ ಗುರ್ರೇ ತಾರೀಖಿಗೆ ಪೂರ್ವ ಮಾರಲ್ಪಡಕೂಡದು. ಅಥವಾ ಲೈಸೆನ್ಸ್‌ದಾರನ ವ ಆತನ ನಾಕರರ ಸ್ವಾಧೀದದಿಂದ ಆಚೆ ಹೋಗಕೂಡದು.

(8.) ಡಿಸ್ಟಿಲ್‌ದಾರನು ತಿಂಗಳು 1ಕ್ಕೆ ವೊಂದು ಅಂಗಡಿಗೆ 2 ರೂಪಾಯಿ ಪ್ರಕಾರ ವಿಧಿಸಲ್ಪಟ್ಟ ಲೈಸೆನ್ಸ್ ರುಸುಮನ್ನು ಕೊಟ್ಟುಕೊಂಡು ದರೋಬಸ್ತು ಕಸಬೆಗಳಲ್ಲಿಯೂ, ಮತ್ತು ದೊಡ್ಡ ದೊಡ್ಡ ಷಹರ್‌ಗಳಲ್ಲಿಯೂ, ವೊಟ್ಟು ಬಿಕರೀ ಅಂಗಡಿಗಳನ್ನು ಯಿಟ್ಟುಕೊಳ್ಳತಕ್ಕ ಬಗ್ಗೆ ಆತನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. (ಸದರೀ ಕಸಬಾ, ಷಹರ್‌ಗಳ ವೊಂದು ಪಟ್ಟಿಯು, ಅರ್ಜೀ ಬರ ದುಕೊಂಡರೆ ಕೊಡಲ್ಪಡುತ್ತೆ)

(9.) ಬೆಂಗಳೂರು ಷಹರ್ ವ ಲಷ್ಕರಿನಲ್ಲಿ ಸ್ಪಿರಿಟ್‌ಗಳ ಚಿಲ್ಲರೇ ಬಿಕರಿಯು ಹಾಲೀ ಯಿರುವ ಕ್ರಮಪ್ರಕಾರವೇ ಯಿರತ ಕ್ಕದ್ದು. ಮತ್ತು ಹಾಲೀ ಯಿರುವ ಅಂಗಡಿಗಳನೆಲ್ಲಾ ಯಿರಗೊಳಿಸತಕ್ಕದ್ದು. ಸದರೀ ಅಂಗಡಿಗಳ ಪಟ್ಟಿಯನ್ನು ಡೆಪ್ಯುಟಿ ಕಮ್ಮಿಷ ನರವರ ಕಚ್ಚೇರಿಯಲ್ಲಿ ಯೂ, ಮ್ಯುನಿಸಿಪೆಲ್ ಬೋರ್ಡ್ ಪ್ರೆಸೀಡೆಂಟರ ಕಚ್ಚೇರಿಯಲ್ಲಿ, ನೋಡಬಹುದು.

(10.) ದರೋಬಸ್ತು ಚಿಲ್ಲರೇ ಬಿಕರೀದಾರ್ರುಗಳೂ ಸ್ಪಿರಿಟ್‌ಗಳನ್ನು ಕ್ಲುಪ್ತಪಡಿಸಲ್ಪಟ್ಟ ಕ್ರಯಕ್ಕೆ ಮತ್ತು ಈ ಕೆಳಗೆ 16ನೇ ಕ್ಲಾಜ್‌ನಲ್ಲಿ ನಮೂದಿಸಲ್ಪಟ್ಟ ಬಲಗಳುಳ್ಳದ್ದಾಗಿ ಮಾರುತ್ತಿರಲಿಕ್ಕೂ ಮತ್ತು ಯಾವ ವೊಟ್ಟು ಬಿಕರಿ ಅಂಗಡೀಯಿಂದ ಅವರು ತಮ್ಮ ಸಾರಾಯಿಯನ್ನು ಪಡೆಯತಕ್ಕದ್ದೆಂದು ಅವರಿಗೆ ಡಿಸ್ಟಿಲ್‌ದಾರನಿಂದ ತಿಳಿಸಲ್ಪಟ್ಟಿರುತ್ತೋ ಅಂತಾ ವೊಟ್ಟು ಬಿಕರೀ ಅಂಗಡಿ ಯಿಂದ ಪಡೆಯುತ್ತಾ ಬರಲಿಕ್ಕೂ ಕರಾರ್ ಬರೆದುಕೊಡತಕ್ಕದ್ದೆಂತಲೂ ಅವರ ಅಂಗಡಿಗಳಲ್ಲಿ ಯಾವ ಅಕ್ರಮಗಳೂ ನಡೆಯದೆ ಯಿರತಕ್ಕದ್ದನ್ನು ನೋಡತಕ್ಕ ಬಗ್ಯೆ ಡಿಸ್ಟಿಲ್‌ದಾರನಿಗಾಗಲಿ, ಆತನ ಮುತಾಲೀಕನಿಗಾಗಲಿ, ಅವರಅಂಗಡಿಗಳಿಗೆ ಧಾರಾಳವಾಗಿ ಹೋಗುವದಕ್ಕೆ ಆಸ್ಪದ ಕೊಡತಕ್ಕದ್ದೆಂತಲೂ ಸಹಾ ತಾಕೀದ್ ಮಾಡಲ್ಪಡತಕ್ಕದ್ದು. ಮತ್ತು ಸದರೀ ಚಿಲ್ಲರೇ ಬಿಕರೀದಾರ್ರುಗಳ ತಮ್ಮಿಂದ ದಿನವಹಿ ತರಲ್ಪಟ್ಟ ಸಾರಾಯಿ ಯ ತೇದಾದ್ ವ ಬಲ ಯಿವುಗಳಿಗೂ, ಮತ್ತು ಅದಕ್ಕೆ ಕಟ್ಟಲ್ಪಟ್ಟ ಖರೀದಿಗೂ ಲೆಖ್ಖ ಗಳನ್ನು ಯಿಡತಕ್ಕದ್ದಲ್ಲದೆ ಡಿಸ್ಟಿಲ್‌ದಾರನಾಗಲಿ, ಆತನ ಮುತಾಲೀಕರಾಗಲಿ, ಸದರೀ ಲೆಖ್ಖಗಳನ್ನು ತನಖೀ ಮಾಡಲಿಕ್ಕೆ ಅಧಿಕಾರ ಹೊಂದಿರುವ ಯಾವ ಗವರ್ನಮೆಂಟ್ ಉದ್ಯೋಗಸ್ಥನಾಗಲಿ, ಅಪೇಕ್ಷಿಸಿದಾಗ ಅವರ ಲೆಖ್ಖಗಳನ್ನು ಅವರು ಗಳು ನೋಡಲಿಕ್ಕೆ ಹಾಜರ್ಮಾಡತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಚಿಲ್ಲರೇ ಬಿಕರೀ ಅಂಗಡಿಗಳು ಅಂದರೆ, ಷಹರ್ ವ ಲಷ್ಕರ್ ಮ್ಯುನಿಸಿಪೆಲ್ ಸರಹದ್ದುಗಳಾ ಚೆ ಯಿರುವ ಚಿಲ್ಲರೇ ಅಂಗಡಿಗಳು (ಯಿವುಗಳ ಪಟ್ಟಿಯು ಡೆಪ್ಯುಟಿ ಕಮ್ಮಿಷನರ್ ಆಫಿಸ್‌ನಲ್ಲಿ ನೋಡಬಹುದು.) ಡಿಸ್ಟಿಲ್‌ದಾರನ ವಿ ಚಾರಣೆಯಲ್ಲಿರತಕ್ಕದ್ದು. ಹೊಸ ಚಿಲ್ಲರೇ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಡುವ ಸ್ಥಳಗಳಲ್ಲಿ ವಿನಾ ಮತ್ತಾವ ಸ್ಥಳಗಳಲ್ಲಿಯೂ, ಯಿಡಲ್ಪಡತಕ್ಕದ್ದಲ್ಲ.

(11.) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ನೆಲಗೊಂಡಿರುವ ಚಿಲ್ಲರೆ ಬಿಕರೀ ಅಂಗಡಿಗಳಿಗೆ, ಮಾಮೂಲ್ ಮೇರೆ ಲೈಸೆನ್ಸುಗಳು; ವಿಧಿಸಲ್ಪಟ್ಟ ರುಸಂ ಪಾವತೀ ಆದಮೇಲೆ, ಡೆಪ್ಯುಟಿ ಕಮ್ಮಿಷನರವರಿಂದಲೂ. ಬೆಂಗಳೂರು ಷಹರ್ ವ ಲಷ್ಕರಿನಲ್ಲಿರುವ ಅಂಗಡಿಗಳಿ ಗೆ ಮ್ಯುನಿಸಿಪೆಲ್ ಬೋರ್ಡ್ ಪ್ರೆಸಿಡೆಂಟರಿಂದಲೂ ಕೊಡಲ್ಪಡುವವು.

(12.) ಷಹರ್ ವ ಲಷ್ಕರಿನಲ್ಲಿರುವ ಚಿಲ್ಲರೇ ಬಿಕರೀದಾರ್ರುಗಳು, ಮೇಲೆ ನಮೂದಿಸಲ್ಪಟ್ಟ ಲೈಸೆನ್ಸ್ ರುಸುಂ ಅಲ್ಲದೆ, ವೊಂದು ತಿಂಗಳಿಗೆ 60 ಗ್ಯಾಲನ್‌ಗಳಿಗಿಂತಲೂ, ಜಾಸ್ತೀಯಾಗಿ ತಮಿಗೆ ಕೊಡಲ್ಪಡುವ ಸಾರಾಯಿಯ ಪ್ರತಿ ಇಂಪೀರಿಯಲ್ ಗ್ಯಾ ಲನ್‌ಮೇಲೂ 4 ಆಣೆ ಜಾಸ್ತೀ ತೀರ್ವೆ ಸಹಾ ಯಿದುವರಿಗಿನಂತೆ ಮುಂದಕ್ಕೂ ಕೊಡತಕ್ಕದ್ದೆಂದು ತಾಕೀದ್ ಮಾಡಲ್ಪಡತಕ್ಕದ್ದು.

(13.) ಸಾರಾಯಿಗೆ ಸಾಟಿಯಾಗಿ ಯಾ ಬತ್ತೆಯಾಗಿ ಧಾನ್ಯವಾಗಲಿ, ವಸ್ತುಗಳಾಗಲಿ, ಆಭರಣಗಳಾಗಲಿ, ವುಡುವ ಬಟ್ಟೆ ಗಳಾಗಲಿ, ಯಿತರ ಮಾಲ್ ಆಗಲಿ, ತೆಗದುಕೊಳ್ಳಕೂಡದು. ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ಡಿಸ್ಟಿಲೇರಿಯಲ್ಲಾಗಲಿ, ವೊಟ್ಟು ಬಿಕರೀ ಅಂಗಡಿಗಳಲ್ಲಾಗಲಿ, ಸಾರಾಯಿಯನ್ನು ಚಿಲ್ಲರೆಯಾಗಿ ಮಾರಕೂಡದು.

(14.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ಡಿಸ್ಟಿಲೇರಿಗಳನ್ನು ಯಾ ವೊಟ್ಟು ಬಿಕರೀ ಅಂಗಡಿಗಳನ್ನು ಯಾ ಡಿಪೋಗಳ ನ್ನು ಮೇಲ್‌ವಿಚಾರಣೆ ಮಾಡತಕ್ಕ ಬಗ್ಯೆ ತಾನು ನವಕರಿಗೆ ಯಿಟ್ಟುಕೊಳ್ಳತಕ್ಕ ಪ್ರತಿ ಮನುಷ್ಯನೂ, ಹಾಂಗೆ ನಾಕರಿ ಪಡೆಯುವದ

ಕ್ಕೆ ಮುಂದೆ, ಮೇಲೆ ನಮೂದಿಸಲ್ಪಟ್ಟ ಷರತ್ತುಗಳಿಗೆ ಅನುಗುಣವಾಗಿರುವ ಕರಾರು ಬರದುಕೊಡುವಂತೆ ಮಾಡಿಸತಕ್ಕದ್ದು, ಮತ್ತು ಅಂತಾ ಕರಾರುಗಳನ್ನು 1876ನೇ ಇಸವಿ ಅಕ್ಟೋಬರು ಗುರ್ರೇ ಲಾಗಾಯಿತು ವೊಂದು ತಿಂಗಳೊಳಗಾಗಿ ಡೆಪ್ಯುಟಿ ಕಮಿಷನರವರಲ್ಲಿ ಇಡತಕ್ಕದ್ದು. ಯಿದಲ್ಲದೆ ಲೈಸೆನ್ಸದಾರನು, ಅರಕಸಾರಾಯಿ ತಯಾರ್ಮಾಡುವ ಬಗ್ಗ್ಯೆ, ತೆಗದುಕೊಂಡು ಹೋಗುವ ಬಗ್ಗ್ಯೆ, ಬಿಕರೀ ಮಾಡುವಬಗ್ಗ್ಯೆ, ತನ್ನಿಂದ ಇಡಲ್ಪಟ್ಟ ದರೋಬಸ್ತು ಜನಗಳ ತಾವು ತಾವು ಬರದುಕೊಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳ ಪ್ರಕಾರ ಖಂಡಿತವಾಗಿ ನಡಿಯತಕ್ಕ ಬಗ್ಗ್ಯೆ ಸರ್ವಪ್ರಯತ್ನವೂ ಮಾಡತಕ್ಕದ್ದು ಆ ನಿಬಂಧನೆಗಳನ್ನು ಉಲ್ಲಂಘನೆ ಮಾಡಿದ್ದಾಗಿ ತನ್ನ ತಿಳುವಳಿಕೆಗೆ ಬಂದರೆ, ಆ ತಕಸೀರಿಗೆ ವಿಧಿಸಲ್ಪಟ್ಟಿರುವ ದಂಡನೆಯನ್ನು ಕೊಡತಕ್ಕ ಬಗ್ಗ್ಯೆ ಆಸಂಗತಿಯನ್ನು ಡೆಪ್ಯುಟಿ ಕಮಿಷನರವರ ಜಾಹೀರಾತಿಗೆ ತರತಕ್ಕದ್ದು, ಮತ್ತು ಆತಕಸೀರವಂದವನನ್ನು ನೌಕರಿಯಿಂದ ಬರತರ್ಫ ಸಹಾ ಮಾಡತಕ್ಕದ್ದು.

(15.) "ಡಿಸ್ಟಿಲ್‌ದಾರನು ಚೀಫ್ ಕಮಿಷ"ನ್ನರವರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಯಾವಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯತಕ್ಕದ್ದೆಂದು ತಾಕೀದ್ ಮಾಡಲ್ಪಡತಕ್ಕದ್ದು, ಮತ್ತು ಸಾರಾಯಿ ತಯಾರ್ಮಾಡುವ ಬಗ್ಗ್ಯೆ ತೆಗದುಕೊಂಡು ಹೋಗುವ ಬಗ್ಗ್ಯೆ ಯಾ ಬಿಕರೀ ಮಾಡುವ ಬಗ್ಗ್ಯೆ ತಾನು ನವಕರೀ ಯಿಟ್ಟುಕೊಂಡಿರುವ ಮನುಷ್ಯರು ಸಹಾ ಸದರೀ ನಿಬಂಧನೆಗಳಿಗೆ ಅನುಗುಣವಾಗಿ ನಡಿಯುವಂತೆ ಮಾಡಿಸತಕ್ಕದ್ದು.

(16.) ಪೊಟ್ಟು ಬಿಕರೀ ವ ಚಿಲ್ಲರೆ ಅಂಗಡಿಗಳಲ್ಲಿ (ಮಿಶ್ರಮಾಡದೆ ವ ತೆಳುವು ಮಾಡದೆ) ಬಿಕರಿಮಾಡಲ್ಪಡತಕ್ಕ ಸಾರಾಯಿಯ ನಿರ್ಖುಗಳು ಈ ಕೆಳಗೆ ಬರುವ ಪಟ್ಟೀ ಪ್ರಕಾರ ಯಿರತಕ್ಕದ್ದು.

ಸ್ಥಳ.		ಪ್ರೂಫ್.						20 ಡಿಗ್ರಿ ಅಂಡರ್ ಪ್ರೂಫ್.						30 ಡಿಗ್ರಿ ಅಂಡರ್ ಪ್ರೂಫ್.					
		D ಗ್ಯಾಲನ್.			D ಡ್ರಾಂ.			D ಗ್ಯಾಲನ್.			D ಡ್ರಾಂ.			D ಗ್ಯಾಲನ್.			D ಡ್ರಾಂ.		
ಬೆಂಗಳೂರು ಷಹರ್ ವ ಕಂಟೋನ್ಮೆಂಟ್.	ಒಟ್ಟುಬಿಕ್ರಿ	6	0	0				4	6	0	0	0	0	2	14	0	0	0	0
	ಚಿಲ್ಲರೆ ಬಿಕ್ರಿ	0	0	0				4	8	0	0	1	6	3	0	0	0	1	0
ಬೆಂಗಳೂರು ಡಿಸ್ಟ್ರಿಕ್ಟ್.	ಪೊಟ್ಟು ಬಿಕ್ರಿ	6	0	0				3	6	0	0	0	0	2	4	0	0	0	0
	ಚಿಲ್ಲರೆ ಬಿಕ್ರಿ	0	0	0				3	12	0	0	1	4	2	8	0	0	0	10

(17.) ಲೈಸೆನ್ಸು ಹೊಂದಿದ ಡಿಸ್ಟಿಲೇರಿ ದಾರನಿಂದ ಅಥವಾ ಅವನ ಮುದ್ದತ್ತಿನ ಮೇಲೆ ಅಂತರಂಗವಾದ ಅವನ ಸಂಬಂಧದ ವೇಳೆಯಿಂದ ಷರಾಬ್ ತಯಾರಿ ಯಾ ಸಾಗಿಸೋಣ ಯಾ ಫರೋಖ್ತು ಇಂತಾದ್ದರಲ್ಲಿ ಆತನಿಂದ ನೌಕರರ್ ಮಾಡಲ್ಪಟ್ಟಯಾವ ಮನುಷ್ಯರಿಂದಲಾಗಲಿ ಈ ಷರತ್ತು ಬಂದಿಗಳಿಗೆ ಮನಃಪೂರ್ವಕವಾದ ವುಲ್ಲಂಘನವೇನಾದರೂ ನಡಿಸಲ್ಪಟ್ಟ ಪಕ್ಷಕ್ಕೆ ಕಮಿಷನ್ನರವರು ಚೀಫ್ ಕಮಿಷನ್ನರವರ ಮಂಜೂರಾತಿನಿ ಡಿಪಾಜಿಟ್ಮೊಬಲಗು ಸರಕಾರಕ್ಕೆ ಶೇರಿಹೋಗಿರುತ್ತೆಂದು ತೀರ್ಸಲಿಕ್ಕೂ ಲೈಸೆನ್ಸ್ ರದ್ದು ಮಾಡಲಿಕ್ಕೂ ಮತ್ತು ರದ್ದಾದ ಲೈಸೆನ್ಸ್ ಹಿಡುವಳೀದಾರನಿಗೆ ಲುಕ್ಸಾನುಕರವಾಗಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪುನಃ ಹರಾಜುಹಾಕುವದಕ್ಕಾಗಲಿ ಸರಕಾರದ ವಿಚಾರಣೆಕೆಳಗೆ ತೆಗದುಕೊಳುವದಕ್ಕಾಗಲಿ ಅಧಿಕಾರಪಡೆದಿರುತ್ತಾರೆ. ಮತ್ತು ಯಾವಸಂಗತಿವಳಗೂ ಜಮೀನು ಕಂದಾಯದ ಬಾಕಿ ವಸೂಲೀ ಬಗ್ಗೆ ಜಾರೀಇರುವ ರೂಲ್ಸ್ ಅನುಸರಿಸಿ ಬಾಕೀ ವಸೂಲು ಮಾಡಲ್ಪಡತಕ್ಕದ್ದು.

VII. ಬೆಂಗಳೂರು ಡಿಸ್ಟಿಲೇರಿಯಿಂದ ಸರಾಸರಿ ಸಾಲೀಯಾನಾ ತಯಾರಾಗಿ ಕೊಡಲ್ಪಡುವ ಸಾರಾಯಿಯ ತಪ್ಸೀಲು ಹ್ಯಾಗಂದರೆ,—

	ಐದುಸಂವತ್ಸರಗಳಿಗೆ ಗ್ಯಾಲನ್‌ಪರಿಮಾಣಪ್ರಕಾರ ಸರಾಸರಿ ಖರ್ಚು.
ಬೆಂಗಳೂರು ಷಹರು ವ ಕಂಟೋನ್ಮೆಂಟ್.	85,062
ಬೆಂಗಳೂರು ಡಿಸ್ಟ್ರಿಕ್ಟ್.	38,782

ತಾರೀಖು 31ನೇ ಜುಲೈ 1876.

ನಂ 160.

ಮೈಸೂರು ಡಿಸ್ಟ್ರಿಕ್ಟ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಮಹಮ್ಮದ್ ಅಲ್ಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖುಲಾಗಾಯಿತು 3 ತಿಂಗಳ ಪ್ರಿವಿಲೀಜ್ ರಜಾಕೊಡಲ್ಪಟ್ಟಿರುತ್ತೆ.

ತಾರೀಖು 31ನೇ ಜುಲೈ 1876.

ನಂ. 161.

ಇಂಡ್ಯಗವರ್ರ್ಮೆಂಟನವರಿಂದ ಕೊಡಲ್ಪಟ್ಟ ಒಟ್ಟು ಅಧಿಕಾರವನ್ನು ಅನುಸರಿಸಿ ಚೀಫ್ ಕಮ್ಮಿಷನರವರು ಫಸ್ಟ್‌ಕ್ಲಾಸ್ ಮುನಸೀಫ್ ಚಿದಂಬರಂ ಐಯ್ಯರ್‌ಯವರನ್ನು ಮೈಸೂರು ಡಿಸ್ಟ್ರಿಕ್ಟ ಪೊಲೀಸ ಅಸಿಸ್ಟೆಂಟ ಕಮ್ಮಿಷನರಾಗಿ ಆಕ್ಟಿಂಗ ತರೀಕ್ ಕೆಲಸ ನೋಡುವಂತೆ ಮೊಕರರ್ಮಾಡಿರುತ್ತಾರೆ.

ತಾರೀಖು 1ನೇ ಆಗಸ್ಟ 1876.

ನಂ. 162.

ಮೇಜರ್ ಬ್ಲೆರ್‌ಯವರು ಶಿವಮೊಗ್ಗಾ ಡಿಸ್ಟ್ರಿಕ್ಟು ವ ಟ್ರಿಜರೀ ಚಾರ್ಜನ್ನು ಮೆಸ್ಟರ್ ಕನಿಂಗಹ್ಯಾಂ ಯವರಿಂದ 1876ನೇ ಇಸವಿ ಜುಲೈ 19ನೇ ತಾರೀಖು ಮಧ್ಯಾನ್ಹಕ್ಕೆ ಪೂರ್ವ ಪುನಹ ತೆಗದುಕೊಂಡರು.

ತಾರೀಖು 2ನೇ ಆಗಸ್ಟ 1876.

ನಂ. 163.

ಇಂಡ್ಯಗವರ್ರ್ಮೆಂಟನವರ ಸಾಂಕ್ಷನ್ ಬರುವವರಿಗೂ ಇದರಡಿ ನಮೂದಿಸಲ್ಪಡುವ ಹಂಗಾಮಿ ಮೊಕರರಗಳು ಮಾಡಲ್ಪಟ್ಟವೆ. ಬಡತೀಕೆಲಸದಮೇಲೆ ತಮ್ಮ ಕೆಲಸವನ್ನು ಖಾಲೀಮಾಡುವ ಸರ್ಜ್ಜನ್‌ಮೇಜರ್ ಆಜ್‌ವಾಲ್‌ಯವರಿಗೆ ಬದಲಾಗಿ ಸರ್ಜ್ಜನ್‌ಮೇಜರ್ ಹಾಸ್ಟರ್‌ಯವರು ಮೈಸೂರು ಕಮ್ಮಿಷನ್ ಸರ್ಜ್ಜನ್‌ರಾಗಿ ಆಕ್ಟಿಂಗತರೀಕ್ ಕೆಲಸ ನೋಡತಕ್ಕದ್ದು.

ಸೆಂಟ್ರಲ್‌ಜೈಲ್ ಆಫಿಸಿ ಯೇಟಿಂಗ ಸೂಪ್ರಿಂಟೆಂಡೆಂಟ್ ಸರ್ಜ್ಜನ್ ಮೆಗ್ಗ್ರಾರ್‌ಯವರು ಅಷ್ಟಗ್ರಾಮಡಿವಿಜನ್ ಫಸ್ಟ್‌ಕ್ಲಾಸ್ ಸಿವಿಲ್ ಸರ್ಜ್ಜನ್‌ರಾಗಿ ಆಕ್ಟಿಂಗ ತರೀಕ್ ಕೆಲಸ ನೋಡತಕ್ಕದ್ದು.

ತಾರೀಖು 3ನೇ ಆಗಸ್ಟ 1876.

ನಂ. 164.

ಮೆಸ್ಟರ್ ಕನ್ನಿಂಗಹಾಂಯವರು ಸಾಗರ ಸಬ್‌ಡಿವಿಜನ್ ಅಸಿಸ್ಟೆಂಟ ಕಮ್ಮಿಷನರ್ ಕೋರ್ಟಿನ್ ಚಾರ್ಜನ್ನು ಮೆ|| ಸುಬ್ಬರಾಯರಿಂದ 1876ನೇ ಜುಲೈ 19ನೇ ಮಾರ್ಕುಂ ಪೂರ್ವಾನ್ಹದಲ್ಲಿ ಪುನಹ ತೆಗದುಕೊಂಡರು.

ತಾರೀಖು 3ನೇ ಆಗಸ್ಟ 1876.

ನಂ. 165.

ಕವಲೇದುರ್ಗದ ತಾಲ್ಲೂಕು ಅಮಲ್‌ದಾರು ತಿರುಮಲಾಚಾರ್ರು ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಕೆಲಸದಿಂದ ಅನಾಮತ್ ಮಾಡಲ್ಪಟ್ಟಿದ್ದಾರೆ.

ನಗರ ತಾಲ್ಲೂಕು ಪೇಷ್ಕಾರ್ರು ಅಪ್ಪಾರಾವ ತಿರುಮಲಾಚಾರ್ರ ಸಸ್ಪೆನ್ಷನ್ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಕವಲೇದುರ್ಗದ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರಿ ವ 3ನೇ ಕ್ಲಾಸ ಮಾಜಿಸ್ಟ್ರೇಟ್ ಕೆಲಸವನ್ನು ಆಕ್ಟಿಂಗ ತರೀಕ್ ನೋಡುವಂತೆ ಮೊಕರರ್.

ಡಿಸ್ಟ್ರಿಕ್ಟು ಫಂಡಸ್.

ತಾರೀಖು 31ನೇ ಜುಲೈ 1876.

ನಂ 166.

ತುಮುಕೂರು ಡಿಸ್ಟ್ರಿಕ್ಟ ಸರ್ವೆಯರ್ ಮೆಸ್ಟರ್ ವೆಲ್ಷ್‌ಯವರಿಗೆ 1876ನೇ ಇಸವಿ ಜೂನ್ 5ನೇ ಮಾರ್ಕುಂ ಲಾಗಾಯಿತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 167.

ತಾರೀಖು 3ನೇ ಆಗಸ್ಟ್ 1876.

ಸನ್ 1876ನೇ ಇಸವೀ ಜುಲೈ 8ನೇ ಮಸ್ಕೂರು 129ನೇ ನಂಬರ್ ಇಸ್ತಿಹಾರಿನಲ್ಲಿ, ಸೊರಬ ತಾಲ್ಲೂಕು ಹಂಗಾಮಿ ಮುತ್ಸ
ದ್ದಿ ಸುಬ್ಬರಾಯರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಅವರ ಅಪೇಕ್ಷೇ ಪ್ರಕಾರ ರದ್ದುಮಾಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 3.

ತಾರೀಖು 7ನೇ ಜುಲೈ 1876.

ವೀರರಾಜೇಂದ್ರಪೇಟೆ ಮ್ಯುನಿಸಿಪ್ಯಾಲಿಟಿಗೋಸ್ಕರ ಇದರಡಿ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂ
ಜೂರ್ಮಾಡಲ್ಪಟ್ಟಿವೆಯಾಗಿ ಸಕಲರಿಗೂ ತಿಳಿಯತಕ್ಕ ಬಗ್ಗೆ ಪ್ರಸಿದ್ಧ ಮಾಡಲ್ಪಟ್ಟಿರುತ್ತೆ.

1. ವೀರರಾಜೇಂದ್ರಪೇಟೆ ಷಹರಿಗೆ ಸುಂಕದ ಬಾಬತು ಯಾವ ಪದಾರ್ಥಗಳನ್ನಾಗಲಿ ಪ್ಯಾಸ್ ಚೀಟಿ ಯಿಲ್ಲದೆ ಅಥವಾ ಅಂ
ತಾ ಪದಾರ್ಥಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಪಾವತೀ ಮಾಡದೇ ಯಾವನು ಆಮದ್ ಮಾಡುತ್ತಾನೋ ಯಾ ಆಮ
ದ್ ಮಾಡಲಿಕ್ಕೆ ಯತ್ನಿಸುತ್ತಾನೋ ಯಾ ತರುತ್ತಾನೋ ಅಂತಾ ಮನುಷ್ಯನು ಪೊಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸ
ಲ್ಪಟ್ಟಮೇಲೆ ಅಂತಾ ಪದಾರ್ಥಗಳ ಕಿಮ್ಮತ್ತಿನ್ನೆರಡಷ್ಟಕ್ಕೆ ಮೀರದ, ಮತ್ತಿನ್ಯಾವ ಸಂಗತಿಯಲ್ಲಿಯೂ 500 ರೂಪಾಯಿಗೆ ಮೀರದ
ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಸದರೀ ಪದಾರ್ಥಗಳು ಜಪ್ತಿ ಆಗಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

2. ಸದರೀ ಮ್ಯುನಿಸಿ ಪಾಲಿಟಿಯೊಳಗೆ ಛೇದಿಸುವದಕ್ಕೋಸ್ಕರ ತರಲ್ಪಡುವ ಪ್ರತಿ ಕುರಿ ಯಾ ಮೇಕೆಗೆ 3 ಕಾಸುಗಳ
ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 5, ಸ೯ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 4ನೇ ಆಗಸ್ಟ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಅಪ್ಪೀಲ್ ೧	ಆರ್. ಕಿ. ಡಾಬಸ್ ಸಾಹೆಬರು ..	ನರಶಿಮ್ಮಮೇಸ್ತ್ರಿ ವಗೈರೆ ..	೮ನೇ ಆಗಸ್ಟ್
ಸ್ಪೆ. ಅ. ೪೨	ವೆಂಕಟಾಚಾರ್ರು ..	ವೋಬಳಾಚಾರಿ ಗಾರ್ಡಿಯನ್ ಕನಕಮ್ಮ ..	ಡಿಟೋ
ಸ್ಪೆ. ಅ. ೩೮	ವೀರಬಸಪ್ಪಾ ..	ಸುಬ್ಬಣ್ಣಾ ..	ಡಿಟೋ
ಸ್ಪೆ. ಅ. ೪೧	ಚನ್ನಗಿರೀ ರಂಗಣ್ಣಾ ..	ಬಟ್ಟಣಿ ಕ್ರಿಷ್ಣರಾವ್ ವಗೈರೆ ..	೧೧ನೇ ಡಿಟೋ
ಸ್ಪೆ. ಅ. ೪೫	ಗಂಗವ್ಮಾ ..	ದೊಡ್ಡಬಚ್ಚಮ್ಮ ವಗೈರೆ ..	ಡಿಟೋ.
ಸ್ಪೆ. ಅ. ೫೧ ರಿ. ೧೮	ಶೀತಾರಾಮಶಾಸ್ತ್ರಿ ..	ಧರಣ್ಣೈಯ ..	ಡಿಟೋ
ಸ್ಪೆ. ಅ. ೩೯	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	೧೪ನೇ ಡಿಟೋ
ಸ್ಪೆ. ಅ. ೪೬	ಏಕಾಂಬರ ಮೊದಲ್ಯಾರ್ ..	ವೆಂಕಟರಮಣ್ಣೈಯ ..	ಡಿಟೋ
ಫ್ರೂಟ್ ಸ್ಪೆ. ಅ. ೯	ಪುಟ್ಟರಸಮ್ಮ ..	ಬೆಟ್ಟೈಯ ..	ಡಿಟೋ
ಕೊ. ಸ್ಪೆ. ಅ. ೬	ಹಜಾಮರ ಹುಚ್ಚಾ ..	ಕಾಳೇಗೌಡ ..	ಡಿಟೋ
ಸ್ಪೆ. ಅ. ೪೮	ವೆಂಕಟಕೃಷ್ಣಾಂಭಟ್ಟ ..	ಶ್ರೀನಿವಾಸ ಐಯಂಗಾರ್ ವಗೈರೆ ..	೧೬ನೇ ಡಿಟೋ
ಕೊ. ಅ. ನಂ. ೩	ರಾಮಶೆಟ್ಟಿ ಚಿಕ್ಕಪ್ಪೈಯ ..	ಮಲ್ಲುಶೆಟ್ಟಿ ..	ಡಿಟೋ
ಕೊ. ಸ್ಪೆ. ಅ. ೨	ನಾರಣ್ಣೈಯ ..	ನಾಗೈಯ ..	ಡಿಟೋ
ಸ್ಪೆ. ಅ. ೪೯	ಕೃಷ್ಣರಾವ್ ..	ಮಹದೇವರಾವ್ ..	೩೦ನೇ ಡಿಟೋ
ಅಪ್ಪೀಲ್ ೪ ರಿ. ನಂ. ೧೨	ಚನ್ನಮಲ್ಲೈಯ ..	ಮಲ್ಲಮ್ಮ ವಗೈರೆ ..	ಡಿಟೋ
ಕೊ. ಸ್ಪೆ. ಅ. ೮	ಪುಟ್ಟಮ್ಮ ..	ಬಿಂದಿ ಉರಫ್ ಗೌರಿ ..	ಡಿಟೋ

J. D. GORDON, *Judl. Commr.*

ಇನಾಂ ಇಲಾಖಾ.

ತಾರೀಖು 10ನೇ ಜುಲೈ 1876.

ಸರ್ನ 1876ನೇಇಸವೀ ಜೂನ್ 30ಕ್ಕೆ ಆಖೈರಾಗುವ ಶೀ ಮಾಸೇಯಲ್ಲಿ ರದ್ದಾದ ಟೈಟಲ್ ಡೀಡ್‌ಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ. ಎ.	ಬೀಜವರಿ. ಖ. ಕೊ. ಪ.	ಜೇರೀಜು. ರೂ. ಆ. ಪೈ.	ಜೋಡಿ. ರೂ. ಆ. ಪೈ.	ಜೋಡಿ ಸೇರಿ ಕ್ವಿಟರೆಂಟ್. ರೂ. ಆ. ಪೈ.	ಮುಜರಾಇ ಮೊಬಲಗ. ರೂ. ಆ. ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಬಾಣಾವಾರ	ಜಾವಗಲ್	ಜಾವಗಲ್ಲು ವಿಘ್ನೇಶ್ವರ ದೇವರ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು.	ದೇವಾದಾಯ	0·70	0 0 0	3 10 2	0	1 12 0	0 0 0	82	1872—73 ಮತ್ತು 1873-74 ಈ ಇಸವಿಗಳಿಗೆ ಕ್ವಿಟರೆಂಟ್ ಕೊಡದ ಸಬಬ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಿರುತ್ತೆ.	ಕಡೂರು ಡಿ|| ಕಮಿಷನರಿಗೆ ಕಳುಹಿಸಿದ 1876ನೇ ಮೇ 17ನೇ ಮ|| 89ನೇ ನಂ.
ಡಿಟ್ಟೋ	ಡಿಟ್ಟೋ	ಜಾವಗಲ್‌ನಲ್ಲಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು.	ಡಿಟ್ಟೋ	0.60	0 0 0	3 0 11	0	1 8 0	0	83	ಡಿಟ್ಟೋ	ಡಿಟ್ಟೋ
ಶ್ರೀನಿವಾಸಪುರ	ಮುಜರಾಯಿ	ಕೋಲಾರದಲ್ಲಿ ಕಟ್ಟೇ ಸುಬ್ಬಣ್ಣಾ ಚಾರಿ.	ಬ್ರಹ್ಮಾದಾಯ	..	0 0 0	0 0 0	0	0 0 0	3 4 0	30760	ಯಾವ ಜ್ಜೀವಸಲ್ಲತಕ್ಕದ್ದಾದ್ದರಿಂದ ಇನಾಂದಾರ ಮೃತಪಟ್ಟ ಸಬಬ್.	1876ನೇ ಮೇ 6ನೇ ಮರ್ಕುಂ 79ನೇ ನಂಬರ್.
ಡಿಟ್ಟೋ	ಡಿಟ್ಟೋ	ಬುರಡಗುಂಟೇ ರಾಮಾಭಟ್ಟ.	ಡಿಟ್ಟೋ	..	0 0 0	0 0 0	0	0 0 0	0 14 0	35048—21	ಡಿಟ್ಟೋ	ಡಿಟ್ಟೋ
ಡಿಟ್ಟೋ	ಸೆಟ್ಟಿಹಳ್ಳಿ	ಕೊಸವಾರಪಲ್ಲಿ ಅಣ್ಣಮ್ಮ.	ಡಿಟ್ಟೋ	..	0 1 7	0 11 8	0	0 6 0	0	30448	ಇನಾಂದಾರಗೆ ನಿಸ್ಸಂತತಿಯಾದ್ದರಿಂದ ಇನಾಂ ಸರಕಾರಕ್ಕೆ ಸೇರಿ ಹೋಯಿತು.	1875ನೇ ಅಕ್ಟೋಬರ್ 26ನೇ ಮರ್ಕುಂ 727ನೇ ನಂಬರ್.
ಡಿಟ್ಟೋ	ಅಗ್ರಹಾರ	ಡಿಟ್ಟೋ	ಡಿಟ್ಟೋ	..	0 1 13	3 10 2	0	1 12 0	0	30452	ಡಿಟ್ಟೋ	ಡಿಟ್ಟೋ
ಡಿಟ್ಟೋ	ಹೊಸಕೋಟೆ	ಡಿಟ್ಟೋ	ಡಿಟ್ಟೋ	..	0 1 1½	1 12 6	0	0 4 0	0	30458	ಡಿಟ್ಟೋ	ಡಿಟ್ಟೋ
ಡಿಟ್ಟೋ	ಆರವಾಕಲಪಲ್ಲಿ	ಡಿಟ್ಟೋ	ಡಿಟ್ಟೋ	..	0 8 2	12 0 0	0	6 0 0	0	30477	ಡಿಟ್ಟೋ	1876ನೇ ಜೂನ್ 2ನೇ ಮರ್ಕುಂ ನಂ||. 127.

118

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ ಎ.	ಬೀಜವರಿ ಖ. ಕೂ. ಪ.	ಜೇರೀಜು. ರೂ. ಆ. ಪೈ.	ಜೋಡೀ. ರೂ. ಆ. ಪೈ.	ಜೋಡಿ ಶೇರಿ ಕ್ವಿಟರೆಂಟ್. ರೂ. ಆ. ಪೈ.	ಮುಜರಾ ಇ ಮೊಬಲಗ್. ರೂ.ಆ.ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಆದ ಆರ್ಡರ್ ತಾರೀಖು.
ಶ್ರೀನಿವಾಸಪುರ	ಅಗ್ರಹಾರ	ಕೊಸವಾರಿಪಲ್ಲಿ ಅಣ್ಣೊಮ್ಮ.	ಬ್ರಾಹ್ಮದಾಯ	0·60	0 1 2½	1 2 7	0	0 2 0	0	32182	ಇನಾಂದಾರಗೆ ನಿಸ್ಸಂತತಿ ಯಾದ್ದರಿಂದ ಇನಾಂ ಸರ್ಕಾರಕೆ ಸೇರಿಹೋಯಿತು	1876ನೇ ಜೂನ್ 2ನೇ ಮುರ್ಕಾಂ 127ನೇ ನಂ.
ಡಿಟೋ	ಯಲವಕುಂಟೆ	ಡಿಟೋ	ಡಿಟೋ	..	0 4 12	4 3 6	0	0 8 0	0	ಡಿಟೋ	ಡಿಟೋ	ಡಿಟೋ
ಸಿಡ್ಲಘಟ್ಟ	ದೇವಪಲ್ಲಿ	ಸಿಡ್ಲಘಟ್ಟದ ಸೂರಪ್ಪ ಜೇರಿ 7 ಮಂದಿ	ಡಿಟೋ	0·41	0	1 10 3	0	0 14 0	0	1246	ರಾಜೀನಾಮೆ ಕೊಟ್ಟದ್ದು	1876ನೇ ಮೇ 20ನೇ ಮುರ್ಕಾಂ 102ನೇ ನಂ.
ಕೊಪ್ಪ	ಹೆಡಸೆ ಯಾ ಹೆಜ್ಜೆ	ಹೆಡಸೆ ಸುಬ್ಬಯ್ಯ ಪುರವ್ ವೆಂಕಟಸುಬ್ಬಯ.	ಡಿಟೋ	.	0	0	0	0	75 3 0 ನಗದು ಇನಾಂ	36972	ನಗದು ಇನಾಂ ಜಮೀನ್ ಇನಾಮಿಗೆ ಬದಲಾಯಿಸಲ್ಪಟ್ಟಿತು.	1876ನೇ ಮೇ 29ನೇ ಮುರ್ಕಾಂ 120ನೇ ನಂ.
ಗೋರೀಬಿದನೂರು	ಹಳಕೂರು	ನಂದಿಗಾನಹಳ್ಳಿ ಚಂದ್ರಶೇಖರಭಟ್ಟ, 2ನೇ ಸೂರಪ್ಪ.	ಡಿಟೋ	1·32	0	1 2 8	0	0 10 0	0	307	ರಾಜೀನಾಮೆ ಕೊಟ್ಟದ್ದು	1876ನೇ ಮೇ 29ನೇ ಮುರ್ಕಾಂ 118ನೇನಂಬರು.
ಪಾವಗಡ	ರಂಗಸಮುದ್ರ ಅದರ ದಾಖಲೇ ರಾಮಪುರ	ರಂಗಸಮುದ್ರ ವೆಂಕಟರಾಮಶಾಸ್ತ್ರಿ	ಡಿಟೋ	..	170 2 15	2160 0 0	0	270 0 0	0	391	ಕ್ವಿಟರೆಂಟ್ ಮಾಪ್ ಆಗಿ ಹೊಸ ಟೈಟಲ್ ಡೀಡ್ ಕೊಡಲ್ಪಟ್ಟಿ ಸಬಬ್	ಡಿಟೋ 19ನೇ ನಂ.
ಬೇತಮಂಗಲ	ನಾಗಲಪಲ್ಲಿ	ಜಕ್ಕರಸಕೊಪ್ಪವೆಂಕಮ್ಮ.	ಡಿಟೋ	0·08	0	0 6 7	0	0 2 0	0	655	ರಾಜೀನಾಮೆ ಕೊಟ್ಟದ್ದು	1876ನೇ ಜೂನ್ 9ನೇ ಮು|| 142ನೇ ನಂಬರು
ಡಿಟೋ	ಡಿಟೋ	ಜಕ್ಕರಸಕೊಪ್ಪ ಶಿವಶಾಸ್ತ್ರಿ.	ಡಿಟೋ	0·02	0	0 2 0	0	0 2 0	0	656	ಡಿಟೋ	ಡಿಟೋ
ಡಿಟೋ	ಡಿಟೋ	ಹಂಗಳ ರಮಣಪ್ಪ 2ನೇ ವೆಂಕಟಾಚಲಮೈಯ್ಯ	ಡಿಟೋ	0·02	0	0 2 0	0	0 2 0	0	657	ಡಿಟೋ	ಡಿಟೋ
ಹೊನ್ನಾಳಿ	ಬಿಜೊಗಟ್ಟೆ	ಶಿವದೀಕ್ಷಿತ	ಡಿಟೋ	9·05	0	22 11 0	11 5 6	13 0 0	0	191	ಡಿಟೋ	ಡಿಟೋ 16ನೇ ಮುರ್ಕಾಂ 166-167ನೇ ನಂಬರ
ಡಿಟೋ	ಕುರವ	ಹೊನ್ನಾಳ್ಳಿ ಸೊಲ್ಲದ ಕೃಷ್ಣಾಚಾರಿ 2ನೇ ರಾಮಾಚಾರಿ.	ಡಿಟೋ	4·16	0	7 9 0	3 12 6	4 4 0	0	450	ಡಿಟೋ	ಡಿಟೋ

ನಂ. 5. ತಾರೀಖು 21ನೇ ಜುಲೈ 1876.

ಇದರಿಂದ ಇನಾಂದಾರ್ರುಗಳಿಗೆ ತಿಳಿಯಪಡಿಸುವದೇನಂದರೆ,—ಈ ಮೊರ್ಜಿನ್ನಲ್ಲಿ ನಮೂದುಮಾಡಲ್ಪಟ್ಟ ತಾಲ್ಲೂಕುಗಳಲ್ಲಿರುವ ಇನಾಂತಿಗಳಿಗೆ ಅಡ್ಯರ್ಟರಿಂ ಯಂಬ ಮಧ್ಯಕಾಲದ ಸರಟಫಿಕೇಟಗಳು 745, ಕೋಲಾರ ವ ಬೆಂಗಳೂರು ಡಿಸ್ಟ್ರಿಕ್ಟಗಳ ಡಿಪ್ಯುಟಿ ಕಮ್ಮಿಷನರಗಳಿಗೆ ಬಟವಾಡೆ ಬಗ್ಯೆ 1876ನೇ ಇಸವಿ ಜುಲೈ 10 ವ 19 ಈ ತಾರೀಖುಗಳಲ್ಲಿ ಕಳುಹಿಸಲ್ಪಟ್ಟಿವೆ.

ಮುಳಬಾಗಲು, ಬೆಂಗಳೂರು, ದೇವನಹಳ್ಳಿ, ವ ನೆಲಮಂಗಲ.

2. ಇನಾಂದಾರ್ರುಗಳು ಖರ್ಜ ತಾಲ್ಲೂಕುಗಳ ಅಮಲ್‌ದಾರ್ರುಗಳಿಂದ ಇಸಂವಾರ್ ನೋಟೀಸ್ ಬಂದ ಬಳಿಕ ಹಾಜರಾಗಿ ಸದರೀ ಸರಟಫಿಕೇಟಗಳನ್ನು ತೆಗದು ಕೊಳ್ಳತಕ್ಕದ್ದು. ಅಂಥಾ ನೋಟೀಸಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ಅಮಲ್‌ದಾರ್ರುಗಳು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

R. A. Cole,
Supt. of Inam Settlements.

ಪೊಲೀಸ್ ಇಲಾಖಾ.

ತಾರೀಖು 17ನೇ ಜುಲೈ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗೆ ಬೆಂಕಿಪುರ ರಸ್ತೆಯಲ್ಲಿ ಸರ್ 1876ನೇ ಇಸವಿ ಮೇ 27ನೇ ಮರ್‍ಸ್ಥಂ ರಾತ್ರಿ ಅಂಚೇ ಆಳುಗಳ ಮೇಲೆ ನಡಿಸಿದ ಡಕಾಯಿತಿ ಮೊಕದ್ದಮೆಯಲ್ಲಿ ಸಂಬಂಧಪಟ್ಟ ತಕಸೀರ್‌ವಂದರಪತ್ತೇಬಗ್ಯೂ ವ ತಕಸೀರ್ ಸ್ಥಾಪನೆಬಗ್ಯೂ ಅನುಕೂಲಿಸುವಂಥಾ ಖಾತರಿ ಕೊಡುವ ಯಾವ ಮನುಷ್ಯನಿಗಾಗಲಿ 300ರೂಪಾಯಿಗಳ ಇನಾಂಕೊಡಲ್ಪಡುವದು.

J. D. Gordon,
Inspr. Genl. of Police.

ತಾರೀಖು 28ನೇ ಜುಲೈ 1876.

ಚಿತ್ರದುರ್ಗ ಡಿಸ್ಟ್ರಿಕ್ಟ ಫಸ್ಟ್‌ಕ್ಲಾಸ್ ಇನ್‌ಸ್ಪೆಕ್ಟರ ಸುಂದರೈಯನವರಿಗೆ 1876ನೇ ಜುಲೈ 5ನೇ ತಾರೀಖು ಲಾಗಾಯಿತು ಕಾಹಿಲೆ ಸರಟಫಿಕೇಟ ಮೇಲೆ ಯರಡು ತಿಂಗಳ ರಜಾಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕುಂ,"
W. Porteous,
Offg. Dy. Inspector General of Police.

ಬೆಂಗಳೂರು ಮ್ಯುನಿಸಿಪಾಲಿಟಿ.

ತಾರೀಖು 5ನೇ ಅಗಸ್ಟು 1876.

ಸರ್ 1871ನೇ ಇಸವಿ ಬೆಂಗಳೂರು ಮ್ಯುನಿಸಿಪಲ್ ರಿಗ್ಯುಲೇಷನ್‌ಗಳ 72ನೇ ಸೆಕ್ಷನ್‌ಕುರಿತು ಇದರಿಂದ ತಿಳಿಯಪಡಿಸುವದೇನಂದರೆ, ಬೆಂಗಳೂರು ಲಷ್ಕರ ಮ್ಯುನಿಸಿಪಲ್ ಸರಹದ್ದುಗಳೊಳಗೆ ಇರತಕ್ಕ ದರೋಬಸ್ತು ಮನೆಗಳು ಕಟ್ಟಗಳು ವ ಜಮೀನುಗಳು ಇವುಗಳ ಮೇಲ 1876—77ನೇ ಸಾಲಿಗೆ ಕಟ್ಟಲ್ಪಟ್ಟ ಸಾಲೀಯಾನಾ ಹುಟ್ಟುವಳಿ ಮತ್ತು ಅದರಮೇಲೆ ವಿಧಿಸಲ್ಪಟ್ಟ ರಿವಾಜು ಇವುಗಳನ್ನ ಅಡಗಿಸಿಕೊಂಡಿರುವ ರಿಜಿಸ್ಟರ ಬುಕ್ಕುಗಳನ್ನು ರೆಸಿಡೆನ್ಸಿ ರೋಡ್ 12ನೇ ನಂಬರ್ ಉಳ್ಳ ಮ್ಯುನಿಸಿಪಲ್ ಟ್ಯಾಕ್ಸಸ್ ಅಸೆಸ್ಸರ ವ ಕಲೆಕ್ಟರಯವರ ಆಫೀಸಿನಲ್ಲಿ ದಿನವಹಿ 11 ಘಂಟೆ ಲಾಗಾಯಿತು 4 ಘಂಟೆ ವರಿಗೂ ಮಾಲೀಕರಾಗಲಿ ಅವರಿಂದ ಅಧಿಕಾರ ಹೊಂದಿದ ಮುತಾಲೀಕರಾಗಲಿ ನೋಡಿಕೊಳ್ಳಬಹುದು.

ಅಂತಾ ಹುಟ್ಟುವಳಿ ವ ರಿವಾಜುಗಳ ಮೇಲೆ ಮಾಡಲ್ಪಡುವ ದರೋಬಸ್ತು ಅಪ್ಪೀಲ್‌ಗಳೂ ಈ ತಾರೀಖು ಲಗಾಯಿತು ಒಂದು ತಿಂಗಳೊಳಗಾಗಿ ಮಾಡಲ್ಪಡತಕ್ಕದ್ದು, ಆ ತರುವಾಯ ಅಂತಾವುಗಳಿಗೆ ನಿಗೆ ಕೊಡಲ್ಪಡುವದಿಲ್ಲ.

J. H. Orr, M. D.,
President, Ml. Commission,
Bangalore Cantonment.

ಅಷ್ಟಗ್ರಾಮದ ಡಿವಿಜನ್.

ತಾರೀಖು 2ನೇ ಆಗಸ್ಟು 1876.

ಇದರಿಂದ ತಿಳಿಯಪಡಿಸುವದೇನಂದರೆ,—ಚೀಫ್ ಕಮಿಷನರ್ ಸಾಹೇಬರವರ 1876ನೇ ಇಸವಿ ಫೆಬ್ರವರಿ 9ನೇ ಮರಕ್ಕುಂ 365ನೇ ನಂಬರ್ ಹುಕ್ಕುಂ ಪ್ರಕಾರ ಸರ್ ಮಜಕೂರು ಫೆಬ್ರವರಿ 12ನೇ ಮರಕುಮಿನ ಮೈಸೂರು ಗೆಜೆಟ್ 23ನೇ ಪುಟದಲ್ಲಿ ತಾಲಿಂಖಾನೆಗಳನ್ನ ಕ್ರಮಪಡಿಸುವ ಬಗ್ಗೆ ಛಾಪಿಸಿರುವ ತಿದ್ದುಪಾಟು ಮಾಡಿದಂತಾ ರೂಲ್ಸಗಳು ಸರ್ 1876ನೇ ಇಸವೀ ಆಗಸ್ಟು 1ರ ಲಗಾಯತು ಈ ಡಿವಿಜನ್ನಿಗೆ ಸಂಬಂಧಪಟ್ಟ ಈ ಕೆಳಗೆ ವಿವರಿಸುವ ಷಹರಗಳಿಗೆ ಲಗಾವ್ ಆಗುತ್ತೆಂದು ಇದರಿಂದ ಪ್ರಚುರ ಪಡಿಸಿರುತ್ತೆ.

ಮೈಸೂರು ಡಿಸ್ಟ್ರಿಕ್ಟು.

1. ಮೈಸೂರು	5. ಚಾಮರಾಜನಗರ	9. ಪಿರ್‍ಯಾಪಟ್ಣ	13. ಬನ್ನೂರು
2. ಶ್ರೀರಂಗಪಟ್ಣ	6. ಗುಂಡಲ್‌ಪೇಟೆ	10. ಸಾಲಿಗ್ರಾಮ	14. ಕಿರಗಾವಲ್
3. ಗಂಜಾಮು	7. ನಂಜನಗೂಡು	11. ಕಳಲೆ	
4. ಮಳವಳ್ಳಿ	8. ಹುಣಸೂರು	12. ಕನ್ನೇಗವಡನಕೊಪ್ಪಲ್.	

ಹಾಸನ ಡಿಸ್ಟ್ರಿಕ್ಟು.

15. ಹಾಸನ	19. ಕೋಣನೂರು	23. ಚನ್ನರಾಯಪಟ್ಣ	27. ಬೆಳ್ಳೂರು.
16. ಸಕಲೇಶಪುರ	20. ನರಸೀಪುರ	24. ಶ್ರವಣಬೆಳಗೊಳ	
17. ಮೂಡಗೆರೆ	21. ಮೇಲ್‌ಕೋಟೆ	25. ಬೇಲೂರು	
18. ಅರಕಲಗೂಡ್	22. ಕನ್ನಂಬಾಡಿ	26. ನಾಗಮಂಗಲ	

A. C. HAY,
Commr.

BANGALORE DISTRICT.

Notice of an application by Krishnambhatta for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟೀ ಕಮಿಷನರವರ ಕೋರ್ಟಿನಿಂದ.

ಸರ್ 1876ನೇ ಯಿಸವಿ ಶಿವಿಲ್ ಮಿಸಲೇನಿಯಸ್ ನಂಬರ್ 53.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ದೇವನಹಳ್ಳಿ ಕಸಬೇಯಲ್ಲಿ ಯಿರುವ ಕೃಷ್ಣಂಭಟ್ಟ ನೆಂಬುವನು ತನ್ನ ಸೋದರ ಮಾವ ಅಣ್ಣಂಭಟ್ಟನ ಲೇಣೆ 120 ರೂಪಾಯಿ ಬರಮಾಡಿಕ್ಕೊಳ್ಳತಕ್ಕ ಬಗ್ಗೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಆಗಸ್ಟು 18ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೇಯಾಗಿ ಆ ಮೊಬಲಗ್ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

Notice of an application by Mallappa for appointment as a guardian to the sons of one Mahanta Nanjundaiya deceased.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂ. 54.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ತಾಲ್ಲೂಕು ಬಾಣಾವಾರದಲ್ಲಿ ಇರುವ ಆಮೂರು ಮಲ್ಲಪ್ಪನೆಂಬವನು ಸದರೀ ಗ್ರಾಮದಲ್ಲಿದ್ದು ಮೃತಿಪಟ್ಟ ಮಹಂತ ನಂಜುಂಡೈಯನ ಮೈನರ್ ಗಂಡುಮಕ್ಕಳನ್ನು ಮತ್ತು ಅವನ ಬಗೆ 200 ರೂಪಾಯಿ ಕಿಮ್ಮತು ಸ್ಥಿರ ಚರ ಆಸ್ತಿ ಕಾಪಾಡುವ ಬಗ್ಗೆ ಸಹಾ ತನ್ನನ್ನ ಮೈನರಗಳ ವಿಷಯವಾಗಿ ಜಾರೀಲಿ ಯಿರುವ ರೂಲ್ಸ್ ಪ್ರಕಾರ ಗಾರ್ಡಿಯನ್ನಾಗಿ ಯಿರ್ಪಡಿಸಬೇಕೆಂತಾ ಕೊಟ್ಟಿರುವ ಅಪ್ಲಿಕೇಷನ್ ಆಗಸ್ಟು 18ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶಿಸಲ್ಪಡುತ್ತೆ ಆ ವಿಷಯವಾಗಿ ಆಕ್ಷೇಪಣೆ ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನ ತಿಳಿಯಪಡಿಸ ಬಹುದಾಗಿರುತ್ತೆ.

Notice of an application by Krishnaiya for a certificate under Act XXVII of 1860.

ಸನ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂ. 55.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಲೋಸ್‌ಪೇಟೆ ತಾಲ್ಲೂಕು ಹೊಂಗನೂರು ಗ್ರಾಮದಲ್ಲಿ ಯಿರುವ ಹಾರೋಹಳ್ಳಿ ಕೃಷ್ಣೈಯ್ಯ ನೆಂಬುವನು ತನ್ನ ಅಂಣ ನಾರಣಪ್ಪನ ಲೇಣಿ 500 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ, ಸನ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಆಗಸ್ಟು 21ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಚಾರಣೆ ಆಗಲ್ಪಡುತ್ತೇಯಾಗಿ ಆ ಮೊಬಲಗ್ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

Notice of an application by Sitamma for a certificate under Act XXVII of 1860.

ಸನ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 56.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಲೋಸ್‌ಪೇಟೆ ತಾಲ್ಲೂಕು ಹೊಂಗನೂರು ಗ್ರಾಮದಲ್ಲಿ ಯಿರುವ ಹಾರೋಹಳ್ಳಿ ಶೀತಮ್ಮನು ತನ್ನ ಗಂಡ ಸುಬ್ಬೈಯನ ಲೇಣಿ 500 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ ಸನ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಆಗಸ್ಟು 25ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಚಾರಣೆ ಆಗಲ್ಪಡುತ್ತೇಯಾಗಿ ಆ ಮೊಬಲಗ್ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

ಬತಾರೀಖು 21ನೇ ಮಾಹೆ ಜುಲೈ ಸನ್ 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

L. RICKETTS,
Offg. Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ತಾರಿಖು 31ನೇ ಜುಲೈ 1876.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸಲ್ಪಡುವ ಜೋಡೀ ಗ್ರಾಮಗಳಿಂದ ಸರಕಾರ್ಕೆ ಬರತಕ್ಕ ಬಾಕೀ ಅದ್ಯಾಪಿ ಪಾವತೀ ಆಗಲಿಲ್ಲವಾದ ಸಬಬು ಅವುಗಳಿಂದ ಬರತಕ್ಕ ಬಾಕೀ ಮೊಬಲಗುಗಳನ್ನು ವಸೂಲ್ಮಾಡಿಕೊಳ್ಳಲಿಕ್ಕೋಸ್ಕರ ಸದರೀ ಜೋಡೀ ಗ್ರಾಮಗಳು ಕುಣಿಗಲ್‌ನಲ್ಲಿರುವ ಅಮಲ್‌ದಾರ್ರವರ ಕಚೇರೀಯಲ್ಲಿ 1876ನೇ ಇಸವಿ ಆಗಸ್ಟು 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹಣಕೊಡಬೇಕ್ಕಾತಪ್ಪಿದವರ ಹೆಸರು.	ಗ್ರಾಮದ ಹೆಸರು ಸಮ್ಮತು ವ ತಾಲ್ಲೂಕು.	1875–76 ಕ್ಕೆ ಬರಬೇಕಾದ ಜೋಡೀ.			ಪ್ರೋಸೆಸ್ಖರ್ಚುಗಳು.			ಜುಮ್ಲಾ ಬರತಕ್ಕ ಬಾಕಿ.			ಷರಾಗಳು.
1	ವೆಂಕಟಪ್ಪವಗೈರೇರು.	ಜುರಗಲ್‌ವಾಡಿ, ಕೊಪ್ಪ, ಕುಣಿಗಲ್.	117	4	4	7	0	0	124	4	0	ಖುಲ್ಲಾ ಜೋಡೀ 197 6 4 ಈ ಪೈಕಿ 80 ರೂಪಾಯಿ ವಸೂಲಾಗಿಧೆ.
2	ಅರುಣಾಚಲಭಟ್ಟವಗೈರೇರು.	ಕೃಷ್ಣಸಾಗರ ಅಗ್ರಹಾರ ಕುಣಿಗಲ್ ಕುಣಿಗಲ್.	102	6	0	1	0	0	103	6	0	ಖುಲ್ಲುಜೋಡಿ 328 ಈ ಪೈಕಿ 225—10 ವಸೂಲಾಗಿಧೆ.

T. E. WOODCOCK,
Offg. Dy. Commr.

MYSORE DISTRICT.

Notice of an application by Srinivasachari for a certificate under Act XXVII of 1860.

ಮೈಸೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಶಿವಿಲ್ ಫೂಟ ಮಿಸಲೇನಿಯಸ್ ನಂ. 57.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ;—ಫಾತೀಯಾದ ತನ್ನ ತಂದೆ ವೆಂಕಟರಾಯಾಚಾರ್ರಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಆಗಬೇಕೆಂದು ನಂಜನಗೂಡು ಕಸಬಾದಲ್ಲಿ ಯಿರುವ ಶ್ರೀನಿವಾಸಾಚಾರ್ರು ಬರದುಕೊಂಡ ಅರ್ಜಿಯನ್ನು ಆಗಸ್ಟು ತಿಂಗಳು 4ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿಧೆ.

ತಾರೀಖು 17ನೇ ಜುಲೈ 1876ನೇ ಇಸವಿ, ಮೊಕ್ಕಾಂ ಮೈಸೂರು.

Notice of an application by Rukminiyamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಫ್ರೂ. ಮಿ. ನಂಬರ್ 59.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ; ಪಾತೀಯಾದ ತನ್ನ ತಂದೆ ಮಹಾಭಾಷ್ಯ ಶ್ರೀನಿವಾಸ ಮೂರ್ತ್ಯಾಚಾರ್ರಿಗೆ ಬರಬೇಕಾದ 800 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ತಲಕಾಡು ತಾಲ್ಲೂಕು ಅಶ್ವತ್ಥಪುರದ ಅಗ್ರಹಾರದಲ್ಲಿರುವ ರುಕ್ಮಿಣಿಯಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನು ಆಗಸ್ಟು ತಿಂಗಳು 26ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದಿಧೆ ತಿಳಿಯುವದು.

ತಾರೀಖು 18ನೇ ಮಾಹೆ ಜುಲೈ 1876ನೇ ಇಸವಿ ಮೊಕ್ಕಾಂ ಮೈಸೂರು.

C. J. PEARSE,
Dy. Commr.

HASSAN DISTRICT.

Notice of an application by Alamelamma for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟು ಡೆ॥ ಕ॥ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕು ಕರಡಿಹಳ್ಳಿಲಿ ಯಿರುವ ಶ್ಯಾನುಭೋಗ ಶ್ರೀನಿವಾಸಾಚಾರಿ ಹೆಂಡತಿ ಅಲಮೇಲಂಮ ನೆಂಬುವಳು ಪಾತೀಆದ ತಂನ ಗಂಡನಸಾಲ 950 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟು ಮೇರೆ ಸರಟಿಫಿಕೇಟ ಕೊಡಿಸಬೇಕೆಂತಾ ಕೊಟ್ಟ ಅರ್ಜಿ ಫೈಸಲ್ ಬಗ್ಯೆ ಸರ್ ಮಜಕೂರು ಆಗಸ್ಟು 16ನೇ ತಾರೀಖನ್ನ ನಿಷ್ಕರ್ಷೆಮಾಡಿ ಇರುವದರಿಂದ ತಕರಾರು ಯಿರತಕ್ಕವರೆಲ್ಲ ಮೇಲೆಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಯಿದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರು ಮಾಡಿಕೊಳ್ಳಬೇಕು.

ತಾರೀಖು 14—7—76.

Notice of an application by Nanjegauda for a certificate under Act XXVII of 1860.

ಇದರಿಂದ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಆಂದೆಳೆ ಹೋಬಳಿ ಹಾಡ್ಲಿಗೆರೆ ಗ್ರಾಮದಲ್ಲಿರುವ ಪಾತೀಯಾದ ಗಂಗೇಗವಡನಮಗ ನಂಜೇಗವಡ ನೆಂಬವನು ಪಾತೀಆದ ತನ್ನತಂದೆ ಸಾಲಾ 1000 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 60ನೇ ಇಸವೀ 27ನೇ ಆಕ್ಟು ಮೇರೆ ಸರಟಿಫಿಕೇಟ ಕೊಡಿಸಬೇಕೆಂತ ಕೊಟ್ಟ ಅರ್ಜಿ ಫೈಸಲ್ ಬಗ್ಯೆ ಸರ್ ಮಜಕೂರು ಆಗಿಸ್ಟು 19ನೇ ತಾರೀಖನ್ನ ನಿಷ್ಕರ್ಷೇ ಮಾಡಿ ಇರುವದರಿಂದ ತಕರಾರು ಯಿರತಕ್ಕವರೆಲ್ಲ ಮೇಲೆಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಯಿದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರು ಮಾಡಿಕೊಳ್ಳಬೇಕು.

ತಾರೀಖು 17ನೇ ಮಾಹೇ ಜುಲೈ ಸರ್ 1876ನೇ ಇಸವೀ.

H. E. MOTTET,
Dy. Commr.

SHIMOGA DISTRICT.

Notice of an application by Manjanna for a certificate under Act XXVII of 1860.

ಶಿವಮೊಗ್ಗಾ ಡಿ॥ ಡೆ॥ ಕ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತನ್ನ ತಂದೆ ರಾಮಂಣ ಪಾತೀ ಆಗಿ ಯಿರುವದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 500 ರೂಪಾಯಿ ತಾನು ವಸೂಲ್ಮಾಡಿ ಕೊಳ್ಳುವದಕ್ಕೆ ಸರಟಫಿಕೇಟ್ ಕೊಡಿಸಬೇಕಾಗಿ ಕೌಲೇದುರ್ಗ ತಾಲ್ಲೂಕು ಕೆಂಡಮಲ್ಲಿಗೆ ಮಂಜಂಣನೆಂಬುವನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ, ಬರುವ ಆಗಿಸ್ಟು 22ನೇ ದಿನ ಹಿಯರಿಂಗ್ ನಿಷ್ಕರ್ಷೇ ಮಾಡಿ ಯಿದೆ. ತಕರಾರು ವುಳ್ಳವರು ಆದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ತಾರೀಖು 12ನೇ ಜುಲೈ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

Notice of an application by Ramachandrachar for a certificate under Act. XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಂನತಂದೆ ನರಸಿಹ್ಮಾಚಾರೀಯು ಪಾತೀಆಗಿ ಯಿರುವದರಿಂದ ಅವರಿಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 900 ರೂಪಾಯಿ ವಸೂಲ್ಮಾಡಿ ಕೊಳ್ಳುವದಕ್ಕೆ ತಂನ ಹೆಸರಿಗೆ ಸರಟಫಿಕೇಟ್ ಕೊಡಿಸಬೇಕಾಗಿ ನಗರದ ಕಸಬಾದಲ್ಲಿಯಿರುವ ಹೊಸಪೇಟೆ ರಾಮಚಂದ್ರಾಚಾರ್ಯನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಆಗಸ್ಟು 29ನೇ ದಿನ ಹಿಯರಿಂಗ್ ನಿಷ್ಕರ್ಷೇ ಮಾಡಿಯಿದೆ ತಕರಾರು ವುಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ಬತಾರೀಖು 15ನೇ ಜುಲೈ 1876ನೇ ಇಸವೀ ಮೊಕ್ಕಾಂ ಶಿವಮೊಗ್ಗಾ.

C. S. Blair,
Offg. Dy. Commr.

KADUR DISTRICT.

Notice of sale of lands in satisfaction of Government dues.

ಕಡೂರು ಡಿಸ್ಟ್ರಿಕ್ಟು ಡೆ॥ ಕಮ್ಮಿಷನರವರ ಕೋರ್ಟಿನಿಂದ.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ ಈ ಕೆಳಗೆ ಕಂಡ ಜಮೀನುಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನು ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟು ತರೀಕೆರೆ ವಗೈರೇ ತಾಲ್ಲೂಕು ಆಯಾಯ ಗ್ರಾಮದಲ್ಲಿ ಚಾಲ್ತೀ ಇಸವಿ ಆಗಸ್ಟು ಮಾಹೆಯಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಆಯಾಯ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಚಡ ದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವಿ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭ ಬಿದ್ದಂತೆ ಮುಚಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಶೀಲ್‌ವಾರ್ ತೋರಿಸಲ್ಪಟ್ಟ ಪ್ರಕಾರ ರೂ॥ 344 ಆ॥ 13 ಪೈ॥ 2 ಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತ್ತವೆ. ಜಮೀನ ತಪಶೀಲ್‌ಬಗ್ಯೆ ಜುಲೈ 29ನೇ ಮುರ್ಕ್ಕಾಂ ಮೈಸೂರು ಗೆಜಟ್ 378 79ನೇ ಪುಟಗಳನ್ನು ನೋಡತಕ್ಕದ್ದು.

Notice offering a reward of Rs. 500 for the discovery of property stolen from the house of one Venkatgiriyappa at Shringeri on the night of the 16th July 1876.

ಕೊಪ್ಪ ತಾಲ್ಲೂಕು ಶ್ರಿಂಗೇರಿಯಲ್ಲಿರುವ ನಗರದ ಮಂಜೈಯನ ಮಗ ವೆಂಕಟಗಿರಿಯಪ್ಪನ ಬಾಬತು ಮನಿಗೆ ಜುಲೈ ತಾರೀಖು 16ನೇ ರಾತ್ರಿ ಕಳ್ಳರು ಕನ್ನ ಹಾಕಿ ಕಳವು ಮಾಡಿಕೊಂಡು ಹೋದ ಮಾಲ್ ಪಟ್ಟಿ, ಫಿರ್ಯಾದಿ ವೆಂಕಟಗಿರಿಯಪ್ಪನು ಈ ಮಾಲ್ ಪತ್ತೇಮಾಡಿ ಕೊಟ್ಟವರಿಗೆ 500 ರೂಪಾಯಿ ಇನಾಂ ಕೊಡುವದಾಗಿ ತಿಳಿಸಿರುತ್ತಾನೆ.

ಕಳವಾದ ಮಾಲಿನ ತಪಸೀಲ್.

ಅಚ್ಚಗುಂಡಿನ ಸರ 2 ಹವಳ ಗುಂಡಿನ ಸರ 2 ಸಹಾ 4ಕ್ಕೆ ಗುಂಡು 214 ಯಿದಕ್ಕೆ ಹವಳ ಯಿರುತ್ತದೆ. ಅಂದಾಜು ಕ್ರಯ. 250

ನೆಲ್ಲಿಕಾಯಿ ಸರ ಜೋಮಾಲೆ ಸರ ಸಹಾ 6ಕ್ಕೆ ಭಂಗಾರ ತೂಕ ಅಂದಾಜು ಸೇರು 3ಕ್ಕೆ ಅಂದಾಜು ಕ್ರಯ. 1200

ಕಠಾಣಿ ಸರ 3 ಇದಕ್ಕೆ ಕೆತ್ತಿಗೆ ತಾಳಿಗಳು ಸಹಾ ಯಿದೆ ಅಂದಾಜು ಕ್ರಯ. 1200

ಕೆತ್ತಿಗೆ ಅಡ್ಡಿಕೆಸರ 1ಕ್ಕೆ ಅಂದಾಜು .. 400

ಪಟ್ಟಿ ಮತ್ತು ಅಡ್ಡಿಕೆ ಕೆತ್ತಿಗೆ ಬಾಬತು ಅಂದಾಜು 300

ಮಗ್ಗಿಸರ 1ಕ್ಕೆ ವಜ್ರದ ತಾಳಿ ಸಹಾ ಅಂದಾಜು. 300

ಮುತ್ತಿನ ಬಟ್ಟು ಕೆತ್ತಿಗೆ ಬಾಬತು ಅಂದಾಜು. .. 300

ವುಂಗ್ರದ ಸರ 1ಕ್ಕೆ ಅದದು 31ಕ್ಕೆ.

ವಜ್ರದ ಶ್ಯಾವಂತಿಗೆ ಹೂವಿನ ಬಾಬತು 1, ಕೆಂಪಿನ ಶ್ಯಾವಂತಿಗೆ ಹೂವ್ವಿನ ವುಂಗ್ರ 3, ಪಂಚ ರತ್ನದ ವುಂಗ್ರ 1, ಸ್ರವಡರ ವುಂಗ್ರ 3, ಕೆಂಪಿನ ಬಾಬತು ವುಂಗ್ರ 9, ಪಚ್ಚೆ ವುಂಗ್ರ 5, ನೀಲದ ವುಂಗ್ರ 3, ತರಪಿನ ವುಂಗ್ರ 6, ಅಂತು 31ಕ್ಕೆ ಅಂದಾಜು ಕ್ರಯ .. 1000

ಛಾಪಿನ ವುಂಗ್ರ 14ಕ್ಕೆ.

ಸಾಲಗ್ರಾಮದ ಕುಳಪಿನ ಬಾಬತು 4, ಛಾಪಿನ ಬಾಬತು 1, ಪವಿತ್ರದ ವುಂಗ್ರ 1, ರಾಮನಾಮದ ಮುದ್ರೆ ವುಂಗ್ರ 1, ಸಂಣ ಹುಡಗರು ಯಿಡುವ ಶ್ಯಾವಂತಿಗೆ ಹುವ್ವಿನ ವುಂಗ್ರ 3, ಚಿನ್ನದ ಹುವ್ವಿನ ಬಾಬತು ಹುಡುಗರು ಯಿಡುವ ಸಂಣ ವುಂಗ್ರ 1, ಚಿನ್ನದ ತಂತಿ ಸುತ್ತಿದ ಗೋಲಿ ವುಂಗ್ರ 2, ಸಾದಾ ಛಾಪಿನ ವುಂಗ್ರ 1, ಅಂತು 14ಕ್ಕೆ ಅಂದಾಜು ಕ್ರಯ 250

ಈ ವುಂಗ್ರಗಳೆಲ್ಲ ಚಿನ್ನದ ಸರಿಗೆಯಲ್ಲಿ ಸರಾ ಮಾಡಿಯಿರುತ್ತದೆ.

ಆತ್ರಿಹೂ ಕೆತ್ತಿಗೆ ತಾಳಿ ಬಾಬತು 1ಕ್ಕೆ. .. 100

ಕಂಠೀಸರ 2ಕ್ಕೆ ಅಂದಾಜ್ ಸೇರು 1ಕ್ಕೆ ಕೆಂಪು ಹಾಕಿದ ಪದಕ 1ಕ್ಕೆ ವಜ್ರದ ಪದಕ 1ಕ್ಕೆ ಸಹಾ ಅಂದಾಜು ಕ್ರಯ 600

ಕೆತ್ತಿಗೆ ಅಡ್ಡಿಕೆ ಸರ 1ಕ್ಕೆ ಅಂದಾಜು ಕ್ರಯ .. 300

ಸಂಣ ವಂಕಿ ಹಿಂಬಳೆ ಜೊತೆ 1ಕ್ಕೆ ಅಂದಾಜು ಸುಮಾರು ತೂಕ ಸೇರು $\frac{1}{8}$ ಗೆ 50

ಸಂಣ ಗೀರುಬಳೆ ಜೊತೆ 1ಕ್ಕೆ ತೂಕ ಸೇರು $\frac{1}{8}$ ಗೆ ಅಂದಾಜು 50

ಕೆತ್ತಿಗೆ ತಾಳಿಗಳು ಅದದು 10ಕ್ಕೆ ಅಂದಾಜ್. .. 200

ಕೆತ್ತಿಗೆ ಹತ್ತಿಗಟ್ಟಿನ ಅಡ್ಡಿಕೆ 5, ಮೂಲೆ ಅಡ್ಡಿಕೆ 1 ಸಹಾ ಅದದು 6ಕ್ಕೆ ಅಂದಾಜು 100

ಕೆತ್ತಿಗೆ ಜಟ್ಟಿಮುರು 8ಕ್ಕೆ ಅಂದಾಜು. .. 100

ಕೆತ್ತಿಗೆ ಕಾಸಿತಾಳಿ ಗುಂಡು 2ಕ್ಕೆ ಅಂದಾಜ್. .. 40

ಕೆಂಪಿನ ಒಂಟಿ ಜೊತೆ 1ಕ್ಕೆ ಯಾಗಡದ್ದು ಅಂದಾಜ್ 100

ಪಚ್ಚೆ ಒಂಟಿ ಜೊತೆ ಯಾಗಡದ್ದು 2ಕ್ಕೆ ಅಂದಾಜ್. 50

ತರ್ಪಿನ ಒಂಟಿ ಜೊತೆ 1ಕ್ಕೆ. .. 4

ಕೆತ್ತಿಗೆ ಬುಲಾಕು 1 ಮೂರು ಹರಳು. .. 10

ಮೂಗಬಟ್ಟು 2ಕ್ಕೆ ಕೆಂಪಿನ ಬಾಬತು .. 10

ಚಿನ್ನದ ಸಾದಾ ಜಂಗವಳಿ ತಾತಿ 2ಕ್ಕೆ .. 10

ಚಿನ್ನದ ಸಾದಾ ಕಾಶೀತಾಳಿ ವಂದಕ್ಕೆ .. 16

ಕಠಾಣಿ ಅಡ್ಡಿಕೆ 5 ಮೂಲೆ ಬಾಬತು. .. 30

ಚಿನ್ನದ ಸಾದಾ ಹೊನ್ನುಹುವ್ವಿನ ಜೊತೆ 1ಕ್ಕೆ. .. 8

ಕೆಂಪುವಜ್ರ ಕೆತ್ತಿಗೆ ತಿರಪಿನ ಹುವ್ವ 1ಕ್ಕೆ. .. 150

ಕೆತ್ತಿಗೆ ಬಾಬತು ಸರಿಗೆ ತಾಳಿ 3ಕ್ಕೆ ಅಂದಾಜ್ .. 1000

ಕೆತ್ತಿಗೆ ಬಾ|| ದೊಡ್ಡಹರಳು 1 ಸಂಣ ಹರಳು 1ಕ್ಕೆ ಸಹಾ ಅಂದಾಜು. 100

ಜಂಗಬಳಿಗ ಕೆತ್ತಿಗೆ ಮುರಕು ತಾಳಿ 1ಕ್ಕೆ .. 50

ಕೆತ್ತಿಗೆ ಚಳತುಂಬು ಜೊತೆ 1ಕ್ಕೆ. .. 20

ಕೆತ್ತಿಗೆ ಅರಳುಯಲೆ 4ಕ್ಕೆ ಅಂದಾಜು. .. 150

ಜಂಗಬಳಿಗ ಕೆತ್ತಿಗೆ ಗುಂಡು ತಾಳಿ 1ಕ್ಕೆ. .. 50

ದೇವರ ಕೆತ್ತಿಗೆ ಕಿರೀಟ 2ಕ್ಕೆ ಅಂದಾಜು. .. 50

ಕೆತ್ತಿಗೆ ಹೊನ್ನಹುವ್ವಿನ ಜೊತೆ 10$\frac{1}{2}$ಗೆ. .. 500

ಕೆತ್ತಿಗೆ ಕಾಶೀತಾಳಿ 1ಕ್ಕೆ. 100

ಕೆತ್ತಿಗೆ ತಾಳಿಗಳು ಸುಮಾರು 7ಕ್ಕೆ ಅಂದಾಜು .. 100

ಅರಳೆಲೆ ಬಾಬತು ತಾಳಿ 1ಕ್ಕೆ. .. 50

ಬಾವಲಿ ಜೊತೆ 12ಕ್ಕೆ.

ಮುತ್ತಿನ ಮಣಿಸುತ್ತಿದ ಬಾಬತು 9, ಕಲ್ಲುಮಣಿ ಸುತ್ತಿದ ಬಾಬತು 1, ಹವಳದ ಬಾವಲೀ ಜೊತೆ 2, ಅಂತು 12ಕ್ಕೆ ಕ್ರಯ 250

ಘಾಲಿ ವಂಟ ಜೊತೆ 6ಕ್ಕೆ 6$\frac{1}{2}$

ಕೆಂಪಿನ ಬಾಬತು ಜೊತೆ 1, ಮುತ್ತಿನ ಬಾಬತು 1 ಪಚ್ಚೆ ಬಾಬತು 1, ಮುತ್ತಿನ ಬಾಬತು 1, ನೀಲದಬಾಬತು 1, ಸಂಣ ಮುತ್ತಿನ ಬಾಬತು 1, ಕರಡು ಮುತ್ತಿನ ಬಾಬತು $\frac{1}{2}$ ಅಂತು 6$\frac{1}{2}$ಗೆ ಅಂದಾಜು .. 300

ಮುತ್ತಿನ ಕಠಾಣಿ ಸರ 1ಕ್ಕೆ ಯಳೆ 9 ಕೆತ್ತಿಗೆ ತಾಳಿಗಳು ಯಿರುತ್ತದೆ ಅಂದಾಜು ಕ್ರಯ ಕಡೇ ಅಡ್ಡಿಕೆ ಕೆತ್ತಿಗೆ ಬಾಬತು. 1000

ಮುತ್ತುಸುತ್ತಿದ ಬುಗಡಿ ಜೊತೆ 1ಕ್ಕೆ. .. 50

ಮೂಗತಿ 10ಕ್ಕೆ ಅಂದಾಜು ಕೆತ್ತಿಗೆ ಬಾಬತು ಮುತ್ತಿನ ಮಣಿ ಯಿದದ್ದು 100

ಪುಡಿ ಕೆಂಪಿನ ಭರಣಿ 2ಕ್ಕೆ ಅಂದಾಜ್ .. 500

ಮುಖರಾಗಳು 8ಕ್ಕೆ ಅಂದಾಜು. .. 500

ಚಳತುಂಬು ಜೊತೆ 5ಕ್ಕೆ 60

ಮುತ್ತು ಯಿಲ್ಲದ ಯಲೆ ಬಾವಲಿ ಜೊತೆ 1ಕ್ಕೆ ಅಂದಾಜು. 12

ಮುತ್ತು ವಜ್ರ ಕೆಂಪು ವಗೈರೇ ಬಾಬತು ವಾಲಿ ಜೊತೆ 7ಕ್ಕೆ ಅಂದಾಜು ಕ್ರಯ	1500
ಗಂಟಿ ಜೊತೆ 3ಕ್ಕೆ ವಿವರ.	
ವಂದು ಮುತ್ತು ಸುತ್ತಿದ ಜೊತೆ 1, ಮುತ್ತು ಸುತ್ತದೆ ಯಿದ್ದ ಬಾಬತು ಅದದು 4ಕ್ಕೆ ಅಂದಾಜು 2 ಅಂತು 3ಕ್ಕೆ ಅಂದಾಜು.	150
ಕೆಂಪಿನ ಬಾಬತು ಕೆತ್ತಿಗೆ ಬಟ್ಟು ತಾತಿಗಳು 4ಕ್ಕೆ	50
ಸಾದಾ ವಾಲೆ ಜೊತೆ 2ಕ್ಕೆ ಅಂದಾಜು. ..	50
ಹತ್ತಿಗಟ್ಟು 1ಕ್ಕೆ ಮುತ್ತು ಕೆತ್ತಿಗೆ ಅಡಿಕ್ಕೆ ಸಹಾ ಯಿರುತ್ತದೆ.	200
ಜುಂಜ್ರಿ ಸರಪಣಿ ಜೊತೆ ಮುತ್ತಿನ ಬಾಬತು ಜೊತೆ 2ಕ್ಕೆ ಅಂದಾಜು.	150
ಮುತ್ತಿನ ಕಂಠಿ 2 ಯಳೆ ಬಾಬತು ವಜ್ರದ ಪದಕ ಯಿರುತ್ತದೆ.	250
ತಾಯಿತಿ ಮುತ್ತಿನ ಸರ 1ಕ್ಕೆ. ..	50
ಬಾಜೀಬಂದು ಸರಾ ಜೊತೆ 1ಕ್ಕೆ ..	100
ಚವರೀತುಂಬು 5ಕ್ಕೆ	125
ನಾಗರ ಕಂಕಣ ಜೊತೆ 1ಕ್ಕೆ	100
ಚಿನ್ನದಲ್ಲಿ ಸುತ್ತಿದ ಲಕ್ಷ್ಮಿ ಸರ 1ಕ್ಕೆ ..	50
ವಂಕಿ ಹಿಂಬಳೆ ಜೊತೆ 1ಕ್ಕೆ	150
ಬೆಳ್ಳೀ ಭರಣಿ ವಂದರಲ್ಲು.	
ಪಂಜರದ ಗೂಡು 8, ಗಿಣಿ 4, ಹನುಮಂತನ ತಾಳಿ 1, ಚಿನ್ನದ ಸಾದಾಗೊಂಬೆ ಬಾಬತು 4, ಜಾಹಲರಿ ಜೊತೆ 1, ಮಂಗಲಸೂತ್ರ 2, ಪಟ್ಟಾಭಿರಾಮನ ಕುಣಸೇನ ತಗಡು 3, ಅನಂತೇಶ್ವರನ ತಗಡು 1, ನೀಲದ ಹರಳಿನ ಬಾವಲಿ ಜೊತೆ ಯಿಜ್ಜೋಡಾಗಿಥೆ 25ಕ್ಕೆ ಅಂದಾಜು	100
ಸಂಣಗೊಂಬೆ ಟಿಕ್ಕೀಸರ ವಂದು	10
ಜನಿವಾರಕ್ಕೆ ಹಾಕುವ ತಾತಿ ಯರಡಕ್ಕೆ ..	8
ಮಕರ ಕಂಠೀಸರ 1ಕ್ಕೆ ಸುಮಾರು 20 ವರಹಾ ತೂಕ	100
ಬೆಳ್ಳಿ ತಾತಿ ವಂದು ಸದರೀ ಮಕರ ಕಂಠೀ ಹಾಕಿದ ಬಾಬತು	10
ಜೋಮಾಲೆ ಸರಕ್ಕೆ ಹಾಕುವ ಬಿಡಿ ಗೊಂಡ್ಯ 14	120
ನೆತ್ತಿಗೆ ಬಟ್ಟೆ ಮಲಕು 17ಕ್ಕೆ ..	40
ಬುಗಡಿ ಜೊತೆ 3½ಗೆ	60
ಕೈಗುಂಡಿನ ಜೊತೆ 2½ಗೆ ..	30
ಬೆಳ್ಳಿ ಭರಣೀಲಿ ಯಿದದ್ದು.	
ದೊಡ್ಡ ಯಾಗಡದ ಪಚ್ಚೆ 2, ಸಂಣ ಯಾಗಡದ ಪಚ್ಚೆ 2, ನೀಲದಮಣಿ 10 ಅಂದಾಜು 14ಕ್ಕೆ ..	100
ಜಡೆಹುವ್ವ 18ಕ್ಕೆ ಅಂದಾಜು	100

ತಿರುಪಿನ ಹುವ್ವ 2ಕ್ಕೆ	25
ಮುಳ್ಳು ಕಂಕಣದ ಜೊತೆ 2ಕ್ಕೆ ಅಂದಾಜು ತೂಕ 100 ವರಹಾ ತೂಕ	500
ಕೇದಿಗೆ 2 ಯೇಳು ಯಸಳು ಬಾಬತು ..	60
ಅಡ್ಡ ಕ್ಯಾದಿಗೆ 1ಕ್ಕೆ	12
ರ್ಯಾಗಟೆ 6ಕ್ಕೆ	150
ಗೊಂಡ್ಯ 3ಕ್ಕೆ	14
ಸೊಂಟದ ಬಾಬತು ಬಂಗಾರದ ಗೆಜ್ಜೆ ಸರ 1ಕ್ಕೆ.	100
ದ್ವಾರ್ಯದ ಜೊತೆ 2ಕ್ಕೆ ಸುಮಾರು ಶೇರು ½ಕ್ಕೆ ..	600
ನಾಟ್ಯ ಚಾಕದ ಗುಂಡಿನ ಟೀಕಿ ಸರ 1ಕ್ಕೆ ..	25
ವುದ್ದ ಕೇದಿಗೆ 1ಕ್ಕೆ	12
ಬೆಳ್ಳಿ ಭರಣಿ ವಂದರಲ್ಲಿ ಚಿನ್ನದ ಚೂರು ವಗೈರೆ ಯಿದ್ದ ಬಾಬತು	25
ಹೊನ್ನುಲು 8ಕ್ಕೆ	100
ಯಕ್ಕೆ ಯೇಣಿನ ಕಂಕಣ ಜೊತೆ 2ಕ್ಕೆ ..	160
ಮೂರು ಯೇಣಿನ ಕಂಕಣ ಜೊತೆ 1ಕ್ಕೆ ..	150
ಸಂಣ ಮುಳ್ಳು ಕಡಗದ ಜೊತೆ 1ಕ್ಕೆ ..	100
ಮುಗ್ಯೆ ಸರ 2ಕ್ಕೆ ಈ ಪೈಕಿ ವಂದಕ್ಕೆ ಕೆತ್ತಿಗೆ ತಾಳಿ ಯಿಥೆ	700
ಜೋಡು 2 ಚೂಡ್ಯಾ	200
ಸೂರಿಗೆಬಳೆ ಜೊತೆ 1ಕ್ಕೆ	12
ಕೆತ್ತಿಗೆ ಮುತ್ತಿನ ಬಟ್ಟು 1ಕ್ಕೆ	100
ಕೆತ್ತಿಗೆ ಜಂಟ ಮುರು 2ಕ್ಕೆ	10
ವಂಕಿ ಕೆಂಪಿನ ಬಾವಲಿ ಜೊತೆ 1ಕ್ಕೆ ಹುಡಗರ ಬಾಬತು	20
ಜಂಗವಳೀ ಸರ 1ಕ್ಕೆ ಕೆತ್ತಿಗೆ ತಾಳಿ ಯಿಥೆ ..	100
ವಂಟಿ ದುಂಡಿನ ಜೊತೆ 1ಕ್ಕೆ	100
ಹೆಸಲು 7ಕ್ಕೆ	30
ಗೊಂಡ್ಯೆ 3ಕ್ಕೆ	12
ಚವುರಿ 3ಕ್ಕೆ	25
ಯೇಳು ಯಸಲು ಕೇದಿಗೆ 1ಕ್ಕೆ	30
ಗುಂಡಿನ ಸರ 1ಕ್ಕೆ ಸುಮಾರು ತೂಕ 40 ವರಹಾಕ್ಕೆ	200
ಜೋಮಾಲೆ ಸರ 1ಕ್ಕೆ	100
ಕಠಾಣಿ ಸರ 2ಕ್ಕೆ ಯಳೆ 7—8	200
ಹರಡಿ ಜೊತೆ 1ಕ್ಕೆ	50
ವಾಲೇ ಜೊತೆ 1ಕ್ಕೆ ಮುತ್ತು ಸುತ್ತಿಯಿಥೆ .	150
ಹೊನ್ನ ಹುವ್ವಿನ ಜೊತೆ 1 ಕೆತ್ತಿಗೆ ಬಾಬತು ..	50
ಮುಕ್ಕರ 1ಕ್ಕೆ	50
ಮುತ್ತಿನ ಜಿಂಜಿರಿ ಸರಪಣಿ ಜೊತೆ 1ಕ್ಕೆ ..	50
ಬಾವಲೀ ಜೊತೆ 8ಕ್ಕೆ ಮುತ್ತು ಸುತ್ತಿದ್ದು	150
ರಾಗಟೆ 1ಕ್ಕೆ	30
ನಾಗರ 1ಕ್ಕೆ	30

ಚಿನ್ನದ ಪುಡದಾರ ಮುಖ ಬಾಯಿ 1ಕ್ಕೆ	..	100
ನಾಗರ 1 ಕೆತ್ತಿದ ಹೊನಹುವ್ವ 1ಕ್ಕೆ ಸಹ	..	40
ಭಂಗಾರದ ಸಾದಾ ಅಡ್ಡಿಕೆ ಸರ 1ಕ್ಕೆ	..	12
ಬೆಳ್ಳಿ ತಂಬಿಗೆ 1ಕ್ಕೆ ಶೇರು $3\frac{1}{2}$ಗೆ ಅಂದಾಜು	..	100
ಬೆಳ್ಳಿ ಸಂದೂಕ 1ಕ್ಕೆ ಅಂದಾಜು ಶೇರು 8ಕ್ಕೆ	..	200
ಚಿಕ್ಕ ತಬಕು 1ಕ್ಕೆ	..	30
ಯಂಟು ಯಳೆ ಬಂಗಾರದ ಅಂಟಗುಂಡಿನ ಕಠಾಣಿ ಸರ 1ಕ್ಕೆ ಕೆತ್ತಿಗೆ ತಾಳೆ ಸಹಾ ಇರುತ್ತದೆ	..	400
ಜುಮ್ಲಾ		21,027

ಸದರೀ ನಗಗಳು ತೂಕ ಕ್ರಯ ಸಹಾ ಕರಾರ್ ವಾಕಾ ಬರಿಯುವದಕ್ಕೆ ಪಿತರಾರ್ಜಿತವಾಗಿ ಇದ್ದದ್ದರಿಂದ ಅಂದಾಜು ಕ್ರಯ ತೂಕ ಸಹಾ ಬರದ್ದಾಗಿ ಯಿದೆ.

MAHOMED SALIHA,
For Dy. Commr.

ಸನ್ 1876ನೇ ಇಸವಿ ಜೂನ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಹಾಸನ ಡಿಸ್ಟ್ರಿಕ್ಟ್.

ಹವಾ,—ಚನ್ನರಾಯಪಟ್ಣ ಮತ್ತು ಅತ್ತಿಕುಪ್ಪ ವಿನಾ ಡಿಸ್ಟ್ರಿಕ್ಟಿ ಮುಳೆಯಲ್ಲ ತಾಲ್ಲೂಕುಗಳಲ್ಲಿಯೂ ಆಗಾಗ್ಯೆ ಷುಮಾರಾಗಿ ಮಳೆಬೀಳುತ್ತಾಇತ್ತು ಮತ್ತು ಮೋಡಹಾಕಿಇತ್ತು. ಹಾಸನದಲ್ಲಿಯೂ ಮತ್ತು ಇತರ ತಾಲ್ಲೂಕು ಹೆಡ್ಡ ಕ್ವಾರ್ಟರಿಗಳಲ್ಲಿಯೂ ಬಿದ್ದ ಹಾಗೆ ಅಳೆಯಲ್ಪಟ್ಟ ಮಳೆಯೂ, ಮತ್ತು ಕಳೆದ ಯರಡು ಇಸವೀಗಳ ಇದೇ ತಿಂಗಳಲ್ಲಿ ಬಿದ್ದ ಮಳೆಯೂ ಈ ಕೆಳಗೆ ವಿವರಿಸಲ್ಪಟ್ಟಿರುತ್ತೆ:—

ಸ್ಥಳ	ಜೂನ್ 1876. ಇಂ.	ಜೂನ್ 1876. ಸೆಂ.	ಜೂನ್ 1875. ಇಂ.	ಜೂನ್ 1875. ಸೆಂ.	ಜೂನ್ 1874. ಇಂ.	ಜೂನ್ 1874. ಸೆಂ.
ಹಾಸನ: ಎಗ್ಜಿಕ್ಯೂಟಿವ್ ಇಂಜಿನಿಯರ್ ಆಫೀಸಿನಲ್ಲಿ.	1	47	2	90	5	48
ಹಾಸನ: ಪಾರ್ಗರ್ಸನ್ ಗಾಜನಲ್ಲಿ	1	45	2	$91\frac{1}{2}$	5	43
ಹಾಸನ: ಅಬ್‌ಸರ್ವೇಟರೀಯಲ್ಲಿ.	1	78	3	0	8	23
ಹಾಸನ: ತಾಲ್ಲೂಕು ಕಚ್ಚೇರಿಯಲ್ಲಿ..	1	52	3	$24\frac{1}{2}$	0	0
ಮಂಜಿರಾಬಾದ್ (ಸಕಲೇಶಪುರ)	8	19	17	0	25	80
ಅರಕಲಗೂಡ್ ..	2	19	2	$98\frac{3}{4}$	7	31
ಬೇಲೂರು ..	2	10	5	7	8	44
ನಾಗಮಂಗಲ ..	1	45	6	96	1	85
ಹಾರನಹಳ್ಳಿ ..	2	70	4	84	1	55
ನರಸೀಪುರ ..	1	42	6	$58\frac{1}{2}$	4	19

ಡಿಸ್ಟ್ರಿಕ್ಟಿನಲ್ಲಿ ಯೆಲ್ಲಕೆರೆಗಳಿಗೂ 8 ದಿವಸಗಳಲಾಗಾಯಿತು 15 ದಿವಸ ಮತ್ತು 1 ತಿಂಗಳ ನೀರು ಮಾತ್ರ ಬಂದಿರುತ್ತೆ.

ಹಾಸನ, ಮಂಜಿರಾಬಾದ್, ಬೇಲೂರು, ಚನ್ನರಾಯಪಟ್ಣ, ಮತ್ತು ನರಸೀಪುರ ಈ ತಾಲ್ಲೂಕುಗಳಲ್ಲಿ 626-9-10 ರೂಪಾಯಿಗಳ ಕಂದಾಯ ಬಾಳುವಷ್ಟು ಜಮೀನು ಸಾಗುವಳಿಗೆ ತೆಗದು ಕೊಳ್ಳಲ್ಪಟ್ಟಿರುತ್ತೆ. ಮಂಜಿರಾಬಾದ್ ತಾಲ್ಲೂಕಿನಲ್ಲಿ ವಿಶೇಷ ಅಂದರೆ 287-4-2 ರೂಪಾಯಿಗಳ ಕಂದಾಯಕ್ಕೆ ಬಾಳುವಷ್ಟು ಜಮೀನುಗಳಿಗೆ ದರಖಾಸ್ತುಗಳು ಬಂದಿರುತವೆ.

ಫಸಲು,—ಹಾಸನ, ಅತ್ತಿಕುಪ್ಪ, ಚನ್ನರಾಯಪಟ್ಣ, ಹಾರನಹಳ್ಳಿ ಈ ತಾಲ್ಲೂಕುಗಳಲ್ಲಿಯೂ ಮತ್ತು ನರಸೀಪುರದ ಒಂದು ಭಾಗದಲ್ಲಿಯೂ ಮಳೆ ಇಲ್ಲದೆ ತರೀ ಮತ್ತು ಖುಷ್ಕೀ ಫಸಲು ಒಣಗುತ್ತಾಇವೆ. ಮಂಜಿರಾಬಾದ್, ಬೇಲೂರು, ಅರಕಲಗೂಡು, ನಾಗಮಂಗಲ ಈ ತಾಲ್ಲೂಕುಗಳಲ್ಲಿ ಸದರೀ ಫಸಲುಗಳು ಚನ್ನಾಗಿರುತವೆ.

ನಿರಖು,—ರಾಗಿ, ಅಕ್ಕೀ ಮುಂತಾದವುಗಳ ಧಾರಣೆವಾಸಿಯು ಯಥಾಪ್ರಕಾರವಿತ್ತು. ಆದರೆ ಹುರಳೀದಾರಣೆ ಚಡಾವಾಗಿ ರೂಪಾಯಿ 1ಕ್ಕೆ 13 ಶೇರು ಮೇರೆ ಮಾರಿತು.

ಹಿಂದಿನ ತಿಂಗಳಿನಹಾಗೆ ಈ ತಿಂಗಳು ಕೂಡಾ ಬಹಳ ಅಸಾಖ್ಯವಾದ್ದಾಗಿತ್ತು. ಡಿಸ್ಟ್ರಿಕ್ಟಿನ ಯೆಲ್ಲತಾಲ್ಲೂಕುಗಳಲ್ಲಿಯೂ ಖೈಜಾಲಾಬ್ ವ್ಯಾಪಿಸಿತ್ತು. ಇದರಿಂದಲೂ ಮತ್ತು ಇತರ ಯೆಲ್ಲಾ ಕಾರಣಗಳಿಂದಲೂ ಈ ಕಳಗೆ ವಿವರಿಸಿರುವ ಪ್ರಕಾರ 1,051 ಮಂದಿ ಸತ್ತರು. ಹಿಂದಿನತಿಂಗಳಲ್ಲಿ 1,169 ಮಂದಿ ಸತ್ತರು. ಸ್ 1875ನೇ ಜೂನ್‌ನಲ್ಲಿ 399 ಮಂದಿ ಸತ್ತರು. ಸ್ 1874ನೇ ಜೂನ್‌ನಲ್ಲಿ 566 ಮಂದಿ ಸತ್ತರು.

ಖೈಜಾಲಾಬಿನಿಂದ 722, ಸಿಡುಬಿನಿಂದ 4, ಜ್ವರದಿಂದ 184, ಹೊಟ್ಟೆಸುಗ್ಗಿನಿಂದ 57, ಇತರ ಯೆಲ್ಲಕಾರಣಗಳಿಂದ 84, ಯೇಕೋನು 1,051.

ಖೈಜಾಲಾಬಿನಿಂದ ಮರಣಹೊಂದಿದ್ದಕ್ಕೆ ತಪಸೀಲು,—ಕಸಬ ಹಾಸನದಲ್ಲಿ 11, ಹಾಸನತಾಲ್ಲೂಕಿನಲ್ಲಿ 18, ಕಸಬ ಸಕಲೇಶಪುರದಲ್ಲಿ 5, ಮಂಜಿರಾಬಾದ್ ತಾಲ್ಲೂಕಿನಲ್ಲಿ 88, ಅರಕಲಗೂಡ ತಾಲ್ಲೂಕಿನಲ್ಲಿ 34, ಕಸಬಾ ಅತ್ತಿಕುಪ್ಪದಲ್ಲಿ 56, ಅತ್ತಿಕುಪ್ಪ ತಾಲ್ಲೂಕಿನಲ್ಲಿ 110, ಬೇಲೂರು ತಾಲ್ಲೂಕಿನಲ್ಲಿ 8, ಕಸಬ ಚನ್ನರಾಯಪಟ್ಣದಲ್ಲಿ 36, ಚನ್ನರಾಯಪಟ್ಣ ತಾಲ್ಲೂಕಿನಲ್ಲಿ 218 ಕಸಬಾ ನಾಗಮಂಗಲದಲ್ಲಿ 12, ನಾಗಮಂಗಲ ತಾಲ್ಲೂಕಿನಲ್ಲಿ 27, ಹಾರನಹಳ್ಳಿ ತಾಲ್ಲೂಕಿನಲ್ಲಿ 18, ಕಸಬಾ ನರಸೀಪುರದಲ್ಲಿ 1, ನರಸೀಪುರ ತಾಲ್ಲೂಕಿನಲ್ಲಿ 80, ಯೇಕೋನು 722.

ಜನನ,—ಈ ತಿಂಗಳಲ್ಲಿ 251 ಜನನಗಳಾದಹಾಗೆ ರಿಜಿಸ್ಟ್ರನಲ್ಲಿ ನಮೂದಿರುತ್ತೆ. ಹಿಂದಿನ ತಿಂಗಳಲ್ಲಿ 186 ಜನನಗಳಾಗಿರುತ್ತವೆ, ಸದರೀ ಪೈಕೀ 134 ಗಂಡು, 117 ಹೆಂಣು.

ಕಾಲ್ನಡೆ,—ಕಾಲುಜ್ವರ ಬಾಯಿಜ್ವರ ಮತ್ತು ಗೋಮಾರಿರೋಗ ಜಾನವರಗಳಿಗೆ ವ್ಯಾಪಿಸಿತ್ತು. ಈ ರೋಗಗಳಿಂದ ಬಹಳ ನಷ್ಟವಾಯಿತು ಅಂದರೆ 3,493 ಸತ್ತವು. ಹಿಂದಿನತಿಂಗಳಲ್ಲಿ 3,435 ಸತ್ತವು. ಸ್ 1875ನೇ ಜೂನ್‌ನಲ್ಲಿ 2,891 ಸತ್ತವು. ಸ್ 1874ನೇ ಜೂನ್‌ನಲ್ಲಿ 2,042 ಸತ್ತವು.

H. E. Mottet,
Dy. Commr.

MYSORE DISTRICT.

Notice of an application by Applachar for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ್ ಡಿ॥ ಕೊ॥ ಕೋರ್ಟಿನಿಂದ.

1876ನೇ ಇಸವಿ ಸಿವಲ್ ಮಿಸಲೇನಿಯಸ್ ಮೊಕದ್ದಮಾ ನಂಬರ್ 60.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ;—ಫಾತೀಯಾದ ತನ್ನ ತಂದೆ ಗರ್ಗೇಶ್ವರಿ ವೆಂಕಟಾಚಾರ್ರಿಗೆ ಬರಬೇಕಾದ 50 ರೂಪಾಯಿ ಯಿದರ ಬಡ್ತಿ ಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಯಳಂದೂರು ತಾಲ್ಲೂಕು ಮದ್ದೂರಲ್ಲಿರುವ ಅಪ್ಲಾಚಾರ್ರು ಕೊಟ್ಟಿರತಕ್ಕ ಅರ್ಜಿಯನ್ನು ಆಗಸ್ಟು ತಿಂಗಳು 18ನೇ ತಾರೀಖಿನಲ್ಲಿ ಯಿಯರಿಂಗ್ ಮಾಡುವವರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ. 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬಿ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 17ನೇ ಮಾಹೆ ಜುಲೈ 1876ನೇ ಇಸವಿ ಮೊಕ್ಕಾಂ ಮೈಸೂರು

C. J. Pearse,
Dy. Commr.

ಕರ್ರೆನ್ಸೀ ನೋಟುಗಳು.

ಇದರಡಿ ನಮೂದಿಸಲ್ಪಡುವ ಕರ್ರೆನ್ಸಿ ನೋಟುಗಳ ತುಕಡೆಗಳು ಟಪಾಲ್ ದ್ವಾರಾ ಶಿವಮೊಗ್ಗೆ ಇಂದ ಚನ್ನಗಿರಿಗೆ ರವಾನೆ ಆಗುತ್ತಿರುವಲ್ಲಿ ಹೋಗಿರುತ್ತವೆ.

ನಂಬರು		ಮೊಬಲಗು	ಹಕ್ಕುದಾರ
B/34	29994—ಬಲಭಾಗ	10	ಚನ್ನಗಿರಿ ತಾಲ್ಲೂಕು ಸೂಳೆಕೆರೆ ಪಟೇಲ್ ಕೃಷ್ಣಯ್ಯಂಗಾರ್.
B/49	07254—ಎಡಭಾಗಗಳು	10	
B/35	93915 „	20	
B/35	93914 „	20	

ಮೈಸೂರ ಗೆಜೆಟ್.

ನಂ. 32 ಸರ್ಕಾರದಿಂದ ಛಾಯಿಸಿ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಅಗಸ್ಟ್ ತಾ|| 12, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ ನಾಮೆಗಳು.	137—157
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ ಕಂಟ್ರೋಲರು, ಪಬ್ಲಿಕ ವರಕ್ಸ್ ಆಫಿಸರಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್‌ಸರವೇಟರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು. ..	393—401
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	13—18
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ ನಾಮೆಗಳು.

ನಂ. 159. ತಾರೀಖು 1ನೇ ಆಗಸ್ಟು 1876.

ತಪ್ಪು ತಿದ್ದುಪಾಟು.—ಸನ್ 1876ನೇ ಇಸವಿ ಜೂಲೈ 25ನೇ ಮೊಕ್ಕಾಂ 148ನೇ ನಂಬರ ಇಸ್ತಿಹಾರ ನಾಮೆಯ 6ನೇ ಕಲಮಿನ 16ನೇ ಕ್ಲಾಜ್, ಬೆಂಗಳೂರು ಷಹರ ವ ಕಂಟೋನ್‌ಮೆಂಟ್ ಐಟ್ಟು ಬಿಕರಿಯ ದರವನ್ನು ಗ್ಯಾಲನ್ ಒಂದಕ್ಕೆ 20 ಡಿಗ್ರಿ ಅಂಡರ ಪ್ರೂಫ್ ಪ್ರಕಾರ ರೂಪಾಯಿ 4—6 ಮತ್ತು 30 ಡಿಗ್ರಿ ಅಂಡರ ಪ್ರೂಫ್ ಪ್ರಕಾರ ರೂ. 2—14 ಎಂಬವುಗಳಿಗೆ ಬದಲಾಗಿ ಗ್ಯಾಲನ್ 1ಕ್ಕೆ ರೂ. 4—2 ಯೆಂತಲೂ, 2—12 ಯೆಂತಲೂ, ಓದಿಕ್ಕೊಳ್ಳತಕ್ಕದ್ದು.

ನಂ· 168. ತಾರೀಖು 5ನೇ ಆಗಸ್ಟು 1876.

ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವೂಡ್‌ಕಾಕ್ ಯವರು ತುಂಕೂರು ಡಿಸ್ಟ್ರಿಕ್ಟು ಟ್ರೇಜರಿ, ಡೆಪ್ಯುಟಿ ಕಮ್ಮಿಷನರ್ ವ ಸಬ್ ಡಿವಿಜನ್ ಆಫಿಸಗಳ ಚಾರ್ಜನ್ನು ಕೆಪ್ಟನ್ ಲಡ್ಲೋಯವರಿಂದ 1876ನೇ ಇಸವೀ ಜೂಲೈ 26ನೇ ಮರ್ಸ್ಕಂ ಮಧ್ಯಾನ್ಹಾತ್ಪರ ತೆಗದುಕೊಂಡರು.

ನಂ. 169. ತಾರೀಖು 5ನೇ ಆಗಸ್ಟು 1876.

ತುಂಕೂರು ಡಿಸ್ಟ್ರಿಕ್ಟು ಆಫಿಸಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಕೆಪ್ಟನ್ ಲಡ್ಲೋಯವರಿಗೆ 1876ನೇ ಇಸವಿ ಜೂಲೈ 21ನೇ ಮರ್ಸ್ಕಂ 149ನೇ ನಂಬರ್ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ ರಜಾ ಶಿವಾಯಿ 4 ದಿನಗಳ ಪ್ರಿವಿಲೀಜ್ ರಜಾ ಜಾಸ್ತೀಯಾಗಿ ಕೊಡಲ್ಪಟ್ಟಿರುತ್ತೆ.

ನಂ. 170. ತಾರೀಖು 7ನೇ ಆಗಸ್ಟು 1876.

ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕು ಶಿರಸ್ತೇದಾರ್ ಅಪ್ಪಯ್ಯೆಯಂಗಾರ್ರು 3ನೇ ಕ್ಲಾಸ್ ಮಾಜಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟು ಯಿರುವದಲ್ಲದೆ 1872ನೇ ಇಸವಿ 10ನೇ ನಂಬರ್ ಆಕ್ಟಿನ 22ನೇ ಸೆಕ್ಷನ್ ದೆಸೇಯಿಂದ ಕೊಡಲ್ಪಟ್ಟ ಅಧಿಕಾರಗಳು ಮತು ಐರ್ಜ ಆಕ್ಟಿನ 23 (a) ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಲ್ಪಡುವ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತಾರೆ.

1. ಲಾಷ್ ದರಿಯಾಪ್ತೀ ಮಾಡತಕ್ಕ ಅಧಿಕಾರ (ಸೆಕ್ಷನ್ 135.)
2. ವಿಚಾರಣೆ ಮಾಡಲಿಕ್ಕೆ ಅವರಿಗೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕಸೀರ್‌ಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ ಮಾಡಿಕೊಳ್ಳತಕ್ಕ ಅಧಿಕಾರ.

ನಂ· 171. ತಾರೀಖು 7ನೇ ಆಗಸ್ಟ್ 1876

ಕೃಷ್ಣಸ್ವಾಮಿ ಐಯಂಗಾರ್ರವರು 3ನೇ ಕ್ಲಾಸ್ ಮುನಸಿಫ್‌ರಾಗಿ ಅಜಮಾಯಿಷೀ ತರೀಕ್ ಮೊಕರರ್ ಮಾಡಲ್ಪಟ್ಟು ತುಮಕೂರು ಡಿಸ್ಟ್ರಿಕ್ಟು ತುರ್ವೇಕೆರೇ ಸರ್ಕಲಿಗೆ ಹಂಗಾಮೀಯಾಗಿ ಹಾಕಲ್ಪಟ್ಟಿರುತ್ತಾರೆ.

ನಂ. 172· ತಾರೀಖು 7ನೇ ಆಗಸ್ಟ್ 1876.

ಶಿವಮೊಗ್ಗಾ ಡಿಸ್ಟ್ರಿಕ್ಟು ಹೊನ್ನಾಳಿ ತಾಲ್ಲೂಕು ಶಿರಸ್ತೇದಾರ್ ಶ್ರೀನಿವಾಸರಾಯರು 3ನೇ ಕ್ಲಾಸ್ ಮಾಜಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುವದಲ್ಲದೆ, 1872ನೇ ಇಸವಿ 10ನೇ ನಂಬರ್ ಆಕ್ಟಿನ 22ನೇ ಸೆಕ್ಷನ್ ದೆಸೇಯಿಂದ ಕೊಡಲ್ಪಟ್ಟ ಅಧಿಕಾರಗಳು ಐರ್ಜ ಆಕ್ಟಿನ 23 (a) ಸೆಕ್ಷನ್ ಅನುಸರಿಸಿ ಯಿದರಡಿನಮೂದಿಸಲ್ಪಡುವ ಅಧಿಕಾರವೂ ಕೊಡಲ್ಪಟ್ಟಿರುತ್ತಾರೆ.

1. ವಿಚಾರಣೆ ಮಾಡಲಿಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕಶೀರ್‌ಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳತಕ್ಕ ಅಧಿಕಾರ (ಸೆಕ್ಷನ್ 141.)

ನಂ. 173. ತಾರೀಖು 7ನೇ ಆಗಸ್ಟ್ 1876.

ಮಾಲೂರು ತಾಲ್ಲೂಕು ಆಮಲ್‌ದಾರ್ ಖಾಜಾಮೊಹದ್ದೀನ್‌ಯವರು 1854ನೇ ಇಸವಿ 18ನೇನಂಬರ್ ಆಕ್ಟಿನ 33ನೇ ಸೆಕ್ಷನ್ ಅನುಸರಿಸಿ, 1871ನೇ ಇಸವೀ 25ನೇ ನಂಬರ್ ಆಕ್ಟು ಪ್ರಕಾರ ಮಾಡಲ್ಪಡುವ ಮತ್ತು ತಮ್ಮ ಅಧಿಕಾರಕ್ಕೆ ಒಳಪಟ್ಟು ಜುರ್ಮಾನೇ ಮೂಲಕಮಾತ್ರ ದಂಡಿಸಲ್ಪಡತಕ್ಕ ತಕ್ಸೀರ್‌ಗಳನ್ನು ದರಿಯಾಪ್ತಿ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 174. ತಾರೀಖು 8ನೇ ಆಗಸ್ಟು 1876.

ಪಾವಗಡ ತಾಲ್ಲೂಕು ಅಮಲ್‌ದಾರ್ ಶಾಮೈಯಂಗಾರ್ರವರು ಮೇ 16ನೇ ತಾರೀಖಿನಲ್ಲಿ ಪ್ರಿವಿಲೀಜ್ ರಜಾದ ಮೇಲೆ ಹೊರಟುಹೋಗಿ 1875ನೇ ಆಗಸ್ಟು 16ನೇ ಮರ್ಕುಂ ಮಧ್ಯಾಹ್ನಕ್ಕೆ ಪೂರ್ವ ನೌಕರಿಗೆ ವಾಪಸ್ ಬಂದರು.

ನಂ. 175. ತಾರೀಖು 8ನೇ ಆಗಸ್ಟು 1876.

ಸನ್ 1876ನೇ ಇಸವಿ ಜುಲೈ 15ನೇ ಮರ್ಕುಂ 139ನೇ ನಂಬರ್ ಇಸ್ತಿಹಾರಿನಲ್ಲಿ ದೊಡ್ಡೇರಿ ತಾಲ್ಲೂಕು ಆಮಲ್‌ದಾರ್ ಖಾದರ್ ಮೊಹದ್ದೀನ್‌ಯವರಿಗೆ ಕೊಡಲ್ಪಟ್ಟ ಫರಲೋ ರಜಾ 1876ನೇ ಇಸವಿ ಆಕ್ಟೋಬರ್ 12ನೇ ಮರ್ಕುಂ ವರಿಗೂ ವಿಸ್ತರಿಸಲ್ಪಟ್ಟಿರುತ್ತೆ.

ನಂ. 176. ತಾರೀಖು 8ನೇ ಆಗಸ್ಟು 1876.

ಸನ್ 1872ನೇ ಇಸವಿ 10ನೇ ನಂಬರ್ ಆಕ್ಟಾದ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 58ನೇ ಸೆಕ್ಷನ್ ನಿಬಂಧನೆಗಳ ಪ್ರಕಾರ, ಈ ಶೀಮೆಯ ಸೆಷನ್ ಜಡ್ಜಿಗಳ ಕೋರ್ಟುಗಳಿಗೆ ಸೇರಿದ ಪಬ್ಲಿಕ್ ಪ್ರಾಸೀಕ್ಯೂಟರ್‌ಗಳ ಕೆಲಸಗಳು ಸೆಷನ್ ಕೋರ್ಟುಗಳಲ್ಲಿ ವಿಚಾರಣೆ ಬಗ್ಯೆ ಕಮಿಟ್ ಮಾಡಲ್ಪಡುವ ಮೊಕದ್ದಮೆಗಳಿಗೇ ಯಂಬ ನಿಯಮ ವಿಲ್ಲದೆ ಅವರುಗಳಿಗೆ ಸೆಷನ್ ಜಡ್ಜಿಗಳಿಂದ ರಿಫರ್ ಮಾಡಲ್ಪಡುವ ದರೋಬಸ್ತು ಮೊಕದ್ದಮೇಗಳಿಗೂ, ಸಂಬಂಧಿಸುತವೆಂದು ನಿರ್ಣಯಿಸಲ್ಪಡತಕ್ಕದ್ದಾಗಿ ಚೀಫ್ ಕಮ್ಮಿಷನರವರು ಅಪ್ಪಣೇ ಕೊಡಿಸುತ್ತಾರೆ.

ಡಿಸ್ಟ್ರಿಕ್ಟು ಫಂಡಸ್.

ನಂ. 177. ತಾರೀಖು 8ನೇ ಆಗಸ್ಟು 1876.

ಹಾಸನ ಡಿಸ್ಟ್ರಿಕ್ಟು ಅತ್ತಿಗುಪ್ಪೆ ತಾಲ್ಲೂಕು ಹಂಗಾಮೀ ಮೇಸ್ತ್ರಿ ವಿಶ್ವನಾಥಯ್ಯನಿಗೆ 1876ನೇ ಇಸವಿ ಜೂನ್ 24ನೇ ಮರ್ಕುಂ ಲಗಾಯತು 15 ದಿನಗಳ ವರಿಗೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತು.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಪಬ್ಲಿಕ್ ವರ್ಕ್ಸ್.

ನಂ. 26. ತಾರೀಖು 28ನೇ ಜುಲೈ 1876.

ಕಡೂರು ಡಿವಿಜನ್ 4ನೇ ಗ್ರೇಡ್ ಅಕ್ಕೌಂಟೆಂಟ್ ಬಾಲೈಯ್ಯ ನಾಯಿಡು ಮೈಸೂರು ಗೆಜೆಟ್ Iನೇ ಭಾಗ, 35ನೇ ಪುಟದಲ್ಲಿ ಫಾಯಿಷ್ ಆದ 1876ನೇ ಇಸವಿ ಫಿಬ್ರುವರಿ 14ನೇ ಮರ್ಕುಂ 120ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟ ಸಿಕ್ ರಜಾದಿಂದ ಮಾಹೇ ಮಜಕೂರು 24ನೇ ಮರ್ಕುಂ ಪೂರ್ವಾಹ್ನದಲ್ಲಿ ವಾಪಸು ಬಂದರು.

ನಂ. 27. ತಾರೀಖು 2ನೇ ಆಗಸ್ಟ 1876.

ಮೈಸೂರು ಪಬ್ಲಿಕ ವರಕ್ಸ ಇಲಾಖಾ ರೋಡ್ ವ ಬಿಲ್ ಡಿಂಗಸ್ ಬ್ರಾಂಚಿಗೆ ಶೇರಿದ 2ನೇ ಗ್ರೇಡ್ ರೋಡು ವೋವರಸಿಯರ ಮೆ|| ವಾರ್ಟರ್ಯವರು ಸರ್ 1876ನೇ ಇಸವೀ ಯೇಪ್ರಿಲ್ ಗುರ್ರ ಲಾಗಾಯಿತು 2ನೇ ಗ್ರೇಡ ವೋವರಸಿಯರಾಗಿ ಬಡ್ತೀ ಮಾಡಲ್ಪಟ್ಟರು.

ನಂ. 28. ತಾರೀಖು 2ನೇ ಆಗಸ್ಟ 1876.

ಅಕೌಂಟೆಂಟ್ ಮೆ|| ಗ್ರಾಂಟ್ಯವರು ಸರ್ 1876ನೇ ಇಸವಿ ಜೂನ್ 6ನೇ ಮರ್ಕುಂ 8ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ದೆಶೆಯಿಂದ ಮಾಹೆ ಮಜಕೂರು ಗುರ್ರೇ ತಾರೀಖಿನಲ್ಲಿ ಕೆಲಸದ ಮೇಲೆ ವಾಪಸು ಬಂದ ಸಬಬ್ ಸದರೀ ಇಸ್ತಿಹಾರ್ ನಾಮೆಯಿಂದ ಕೊಲ್ಪಟ್ಟ ರಜಾ ಪೈಕಿ ವುಪಯೋಗಿಸಿಕೊಳ್ಳದೆ ಭಾಗವು ಅವರ ಖಾಯಿಷ್ ಮೇರೆ ರದ್ದುಮಾಡಲ್ಪಟ್ಟಿರುತ್ತದೆ.

ನಂ. 29. ತಾರೀಖು 2ನೇ ಆಗಸ್ಟ 1876.

ಮೈಸೂರು ಪಬ್ಲಿಕ ವರಕ್ಸ ಇಲಾಖಾ ಇರಿಗೇಷನ್ ಬ್ರಾಂಚಿಗೆ ಶೇರಿದ 2ನೇ ಗ್ರೇಡ ವೋವರಶಿಯರ ಮೆ|| ಎಂಗಲ್ಡೊಯವರು ರಾಜೀನಾಮೆ ಕೊಟ್ಟ ಬಾಲಸುಂದರಂ ನಾಯಕರಿಗೆ ಬದಲಾಗಿ ಸರ್ 1876ನೇ ಮೇ 13ನೇ ಮೇ.ಲಾಗಾಯತು 1ನೇ ಗ್ರೇಡಿಗೆ ಬಡ್ತಿ.

"ಬಮೋಜೀಬ ಹುಕ್ಕುಂ,"

W. R. JOHNSON, *Lieut.-Col.*,
Offg. Secy., P. W. D.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 3. ತಾರೀಖು 7ನೇ ಜುಲೈ 1876.

ವೀರರಾಜೇಂದ್ರಪೇಟೆ ಮ್ಯುನಿಸಿಪ್ಯಾಲಿಟಿಗೋಸ್ಕರ ಇದರಡಿ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟವೆಯಾಗಿ ಸಕಲರಿಗೂ ತಿಳಿಯತಕ್ಕ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

1. ವೀರರಾಜೇಂದ್ರಪೇಟೆ ಷಹರಿಗೆ ಸುಂಕದ ಬಾಬತು ಯಾವ ಪದಾರ್ಥಗಳನ್ನಾಗಲಿ ಪ್ಯಾಸ್ ಚೀಟಿ ಯಿಲ್ಲದೆ ಅಥವಾ ಅಂತಾ ಪದಾರ್ಥಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಪಾವತೀ ಮಾಡದೇ ಯಾವನು ಆಮದ್ ಮಾಡುತ್ತಾನೋ ಯಾ ಆಮದ್ ಮಾಡಲಿಕ್ಕೆ ಯತ್ನಿಸುತ್ತಾನೋ ಯಾ ತರುತ್ತಾನೋ ಅಂತಾ ಮನುಷ್ಯನು ವೊಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ಅಂತಾ ಪದಾರ್ಥಗಳ ಕಿಮ್ಮತಿನ ಎರಡಷ್ಟಕ್ಕೆ ಮೀರದ, ಮತ್ತಿನ್ಯಾವ ಸಂಗತಿಯಲ್ಲಿಯೂ 500 ರೂಪಾಯಿಗೆ ಮೀರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಸದರೀ ಪದಾರ್ಥಗಳು ಜಫ್ತೀ ಆಗಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

2. ಸದರೀ ಮ್ಯುನಿಸಿ ಪಾಲಿಟಿಯೊಳಗೆ ಛೇದಿಸುವದಕ್ಕೋಸ್ಕರ ತರಲ್ಪಡುವ ಪ್ರತಿ ಕುರಿ ಯಾ ಮೇಕೆಗೆ 3 ಕಾಸುಗಳ ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

ನಂ. 6. ತಾರೀಖು 10ನೇ ಜು್ಲೈ 1876.

ಮಡಿಕೆರೆ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸೋಣಾದ ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ ಮಾಡಲ್ಪಟ್ಟು ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಸಲ್ಪಟ್ಟಿರುತವೆ.

"ಬಮೋಜೀಬ್ ಹುಕ್ಕುಂ."

T. CLARKE,
Offg. Secretary.

ಮಡಿಕೆರೆ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸಲ್ಪಟ್ಟ ಬೈಲಾ ನಿಬಂಧನೆಗಳು.

1ನೇ ಅಧ್ಯಾಯು.

1. ಆಯಾ ತಿಂಗಳ ಮೊದಲನೇ ಸೋಮವಾರದ ದಿನ, ಮ್ಯುನಿಸಿಪೆಲ್ ಬೋರ್ಡಿನವರ ಸಾಮಾನ್ಯಸಮಾಜಗಳು ತಿಂಗಳು ತಿಂಗಳಿಗೂ ನಡೆಯುವದು.

2. ಜರೂರಾದಾಗಲೆಲ್ಲ ಮೇಲೆ ಕಂಡ ಸಾಮಾನ್ಯ ಸಮಾಜಗಳೊಡನೆ ವಿಶೇಷ ಸಮಾಜಗಳು ನಡೆಯುವವು.

3. ಕೊಡಗು ಸೂಪರ್ರಿಟೆಂಡೆಂಟರವರು ಬೋರ್ಡಿನ ಪ್ರೆಸೀಡೆಂಟರಾಗಿರುತ್ತಾರೆ. ಅವರ ಗೈರಹಾಜರಿಯಲ್ಲಿ 1ನೇ ಅಸಿಸ್ಟೆಂಟ ಸೂಪರ್ರಿಟೆಂಡೆಂಟರು ಪ್ರೆಸೀಡೆಂಟರಾಗಿರತಕ್ಕದ್ದು, ಇವರಿಬ್ಬರೂ ಗೈರ ಹಾಜರಾದಲ್ಲಿ ಕಮಾಂಡಿಂಗ್ ಆಫಿಸರವರು ಪ್ರೆಸೀಡೆಂಟ ಕೆಲಸವನ್ನು ನೋಡತಕ್ಕದ್ದು. ಈ ಮೂವರೂ ಇಲ್ಲದಿದ್ದರೆ, ಸೇರಿದ ಸಮಾಜದವರು ತತ್ಕಾಲಕ್ಕೆ ತಮಗೆ ಯುಕ್ತವಾದವರನ್ನು ಪ್ರೆಸೀಡೆಂಟರಾಗಿ ಯೇರ್ಪಡಿಸಿಕೊಳ್ಳತಕ್ಕದ್ದು.

ಒಂದು ಸಮಾಜದಲ್ಲಿ ಚರ್ಚಿಸಲ್ಪಡತಕ್ಕ ದರೋಬಸ್ತು ಅಂಶಗಳೂ ಸಮಾಜ ಸೇರುವದಕ್ಕೆ ಅಥವಾ ಪಕ್ಷ ಯೇಳು ದಿನಗಳಿಗೆ ಮುಂದಾಗಿ ಕೊಡೋಣಾದ ಒಂದು ಸರ್ಕ್ಯುಲರ ಮೂಲಕ ಮೆಂಬರಗಳ ತಿಳುವಳಿಕೆಗೆ ತರಲ್ಪಡತಕ್ಕವು.

4. ಹಾಜರಿರುವ ಯಾವ ಮೆಂಬರಾಗಲಿ, ಹುಕ್ಕುಮಾಗತಕ್ಕ ಯಾವ ಅಂಶವನ್ನಾದರೂ, ಪ್ರೆಸೀಡೆಂಟರಿಗೆ ಕಳುಹಿಸಬಹುದು.

5. ಯಾವ ವಿಷಯವನ್ನಾದರೂ ಸೂಚಿಸುವಲ್ಲಿ ಯಾ ಚರ್ಚಿಸುವಲ್ಲಿ ಪ್ರತಿಮೆಂಬರೂ, ತನ್ನ ಜಾಗಾದಲ್ಲಿದ್ದುಕೊಂಡು ಯಾವಾಗಲೂ ಪ್ರೆಸೀಡೆಂಟರನ್ನುದ್ದೇಶಿಸಿ ಮಾತನಾಡತಕ್ಕದ್ದು.

6. ಜವಾಬಾಗಿ ಸೂಚಿಸತಕ್ಕವನು ವಿನಾ, ಯಾವ ಮೆಂಬರೂ, ಯಾವ ಸೂಚನೆ ಯಾ ತಿದ್ದುಪಾಟಿನ ವಿಷಯದಲ್ಲಿಯೂ, ಯೆರಡಾವರ್ತಿ ಮಾತನಾಡಕೂಡದು.

7. ಯಾವ ಅಂಶವನ್ನಾಗಲಿ ಸೂಚಿಸಿದವನು ಅಂಗೀಕಾರಪಟ್ಟವರ ಪಟ್ಟೀ ಬೇಕೆಂದು ಕೇಳಿದರೆ ಕೈಗಳೆತ್ತಿ ತೋರಿಸುವದರ ಮೂಲಕ ಅಂಗೀಕಾರಗಳನ್ನು ತೆಗದು ಕೊಳ್ಳತಕ್ಕದ್ದು.

8. ಪ್ರತಿ ಸೂಚನೆ ಅಥವಾ ತಿದ್ದುಪಾಡು ಬರವಣಿಗೆಯಲ್ಲಿರತಕ್ಕದ್ದು; ಆದರೆ ಪ್ರೆಸೀಡೆಂಟರಿಂದ ಅಪೇಕ್ಷಿಸಲ್ಪಟ್ಟ ಹೊರತು ಸೂಚನೆ ಯಾ ತಿದ್ದುಪಾಡು ಅನುಮೋದಿಸಲ್ಪಡ ಬೇಕಾದ ಅವಶ್ಯಕವಿಲ್ಲವು.

9. ಒಬ್ಬ ಮೆಂಬರಿಂದ ಮತ್ತೊಬ್ಬ ಮೆಂಬರಿಗೆ ಹಾಕಲ್ಪಡುವ, ಸಮಾಜದ ಕೆಲಸಕ್ಕೆ ಸಂಬಂಧಪಟ್ಟ ದರೋಬಸ್ತು ಪ್ರಶ್ನೆಗಳೂ ಪ್ರೆಸೀಡೆಂಟರ ಮೂಲಕವೇ ಹಾಕಲ್ಪಡತಕ್ಕವು.

10. ಮ್ಯುನಿಸಿಪೆಲ್ ಬೋರ್ಡಿನವರ ಸಮಾಜಗಳಲ್ಲಿ ಸಾಮಾನ್ಯವಾಗಿ ಜನಗಳು ಬರಬಹುದು, ಆದರೆ ಜರೂರಿದ್ದಲ್ಲಿ ಹೊರಗಿನವರನ್ನು ಹೊರಗೆ ಹೋಗುವಂತೆ ಹೇಳಬಹುದು.

11. ದರೋಬಸ್ತು ಸಮಾಜಗಳಲ್ಲಿಯೂ, ರೈತರು ಹಾಜರಿದ್ದು ಕೇಳಿದ ಯಾವ ಲೆಕ್ಕವನ್ನಾಗಲಿ ಹಾಜರ ಮಾಡತಕ್ಕದ್ದು.

12. ಕಟ್ಟಡದ ಬಗ್ಗೆ, ಯಾ ಇತರ ಕೆಲಸಗಳಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, ಸಾಗುವಳೀಯಲ್ಲಿರುವ ಯಾ ಇತರ ವಿಧವಾಗಿರುವ ಜಮೀನನ್ನು ಕ್ರಯಕ್ಕಾಗಲಿ ಗೇಣೀಗಾಗಲೀ ಪಡೆಯಲಿಕ್ಕೆ ಅಪೇಕ್ಷೆಯುಳ್ಳ ಯಾವ ಮನುಷ್ಯನಾಗಲಿ ಖಾಯಿಷ್ ಮಾಡಿದ ಜಮೀನ್ ಇರುವ ಪ್ರದೇಶವನ್ನೂ, ಅದರ ವಿಸ್ತಾರವನ್ನೂ, ವಿವರಿಸುವಂತಾ ನಕ್ಷೇಗಳ ಯೆರಡು ಪ್ರತಿಗಳು ನಿಜೀ, ಬರವಣಿಗೇ ಮೂಲಕವಾದ ದರಖಾಸ್ತನ್ನು ಪ್ರೆಸೀಡೆಂಟರಿಗೆ ಪರಭಾರೆ ಕೊಡತಕ್ಕದ್ದು.

ಪ್ರೆಸೀಡೆಂಟರ ಮಂಜೂರಾತೀಯನ್ನು ಮೊದಲೇ ಪಡೆದ ಹೊರತು ಯಾವ ಮನುಷ್ಯನೂ, ತಾನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಖರೀದಿಗೆ ಪಡೆದುಕೊಂಡ ಜಮೀನಿನಲ್ಲಿ ಕಟ್ಟಡ ಕಟ್ಟಿಸಲಿಕ್ಕೆ ಪ್ರಾರಂಭಿಸಲು ಅಧಿಕಾರವಿಲ್ಲವು.

ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಒಂದೇ ಜಮೀನಿಗಾಗಿ ಒಂದು ತಿಂಗಳೊಳಗೆ ಯೆರಡು ಅಥವಾ ಹೆಚ್ಚು ದರಖಾಸ್ತುಗಳು ಬಂದರೆ ಅವ್ವಲ್ ಖರೀದೀ ತರಾವ್‌ನಿಂದ ಮೂರುವಾರಗಳ ವರಿಗೆ ಬಹಿರಂಗಗಳಾದ ಸ್ಥಳಗಳಲ್ಲಿ ನೋಟಿಸ್‌ಗಳನ್ನು ಹಚ್ಚುವದರ ಮೂಲಕ ಘಾಯಿಷ್ ಮಾಡಿದ ಮೇಲೆ ಪ್ರಕಟವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

13. ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಜಮೀನನ್ನು ಗೇಣೀಗಾಗಲಿ, ಖರೀದೀಗಾಗಲಿ ಪಡೆದುಕೊಳ್ಳುವ ಬಗ್ಗೆ ಬರುವ ಯಾವ ದರಖಾಸ್ತನ್ನಾಗಲಿ, ಪ್ರೆಸೀಡೆಂಟರು ದರಖಾಸ್ತುದಾರಗೆ ತಕ್ಕ ಸಬಬ್‌ಗಳು ತಿಳಿಸಿ ನಿರಾಕರಿಸಬಹುದು. ಅಥವಾ ಷರತ್ತುಗಳ ಪೈಕೀ ಕಟ್ಟಡಗಳು, ಹೊರಗಿನ ಕಟ್ಟಡಗಳು, ಸುತ್ತು ಗೋಡೆಗಳು, ಯಾ ಆವರಣಗಳು, ಫಲಾನೇ ವಿಧವಾಗಿ ಯಾ ಫಲಾನೇ ಖರೀದೀ ಉಳ್ಳದ್ದಾಗಿರಬೇಕೆಂತಲೂ, ಹರಾಜ್ ಯಾ ಗೇಣೀಕಾಲದಲ್ಲಿ ನಿಷ್ಕರ್ಷೆಯಾಗತಕ್ಕಂತಾ ಕಾಲದೊಳಗಾಗಿ ಕಟ್ಟಲ್ಪಡತಕ್ಕದ್ದೆಂತಲೂ, ಇದಕ್ಕೆ ತಪ್ಪಿದರೆ ಯೆರಡು ವರುಷಗಳೊಳಗಾಗಿ ಸರ್ಕಾರಕ್ಕೆ ವಾಪಸ್ ಸೇರಿಸಿಕೊಳ್ಳಲ್ಪಡುವದೆಂತಲೂ, ಒಂದು ಷರತ್ ಮಾಡಬಹುದು.

14. ಹಾಲೀ ಇರುವ ಕಟ್ಟಣದ ಜಮೀನ್‌ಗಳು, ಯಾ ನಿವೇಶನಗಳು, ಯಾ ಅಂಗಡಿಗಳು ಪ್ರೆಸೀಡೆಂಟರ ಮಂಜೂರಾತೀ ಇಲ್ಲದೆ ವಿಭಾಗವಾಗತಕ್ಕದ್ದಲ್ಲವು.

15. ಬೀದಿಗಳಲ್ಲಿ ಅಥವಾ ಸಂದಿಗಳಲ್ಲಿ ಐದು ವರುಷಗಳ ಕಾಲ ವಾಸಸ್ಥರಿಲ್ಲದೆ ಬಿಡಲ್ಪಟ್ಟ ಯಾವ ನಿವೇಶನಗಳಾಗಲಿ ಮನೆಗಳು ಮುಂತಾದವುಗಳಾಗಲಿ, ಆರು ತಿಂಗಳವರಿಗೆ ಇಸ್ತಿಹಾರ್ ಘಾಯಿಷ್ ಆದಮೇಲೆ ಪ್ರೆಸೀಡೆಂಟರ ಅಧಿಕಾರಕ್ಕೆ ಒಳಗಾಗಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡಲಿಕ್ಕೆ ಗುರಿಯಾಗಿರತ್ತವೆ. ಅಂತಾ ಹರಾಜ್‌ನಲ್ಲಿ ಹುಟ್ಟುವಹೀಯಾದ ಮೊಬಲಗಿಗೆ ಯಾರೂ ಬಾಧ್ಯತೆ ತಾರದೆ ಇದ್ದರೆ ಅದು, ಬೇವಾರಸ್ ಸ್ವತ್ತಿನ ನಿಬಂಧನೆಗಳ ಪ್ರಕಾರ ಮ್ಯುನಿಸಿಪೆಲ್ ಇಲಾಖೆಯ ಜಮೀನಿಗೆ ದಾಖಲ್ ಮಾಡಿಕೊಳ್ಳಲ್ಪಡುವದು.

16. ಸ್ಕ್ವಾಟರ್‌ಗಳು ಅಂದರೆ ದೃಢವಾದ ಬಾಧ್ಯತೆ ಯಿಲ್ಲದೆ ಪಬ್ಲಿಕ್ ಜಮೀನ್‌ನಲ್ಲಿ ನೆಲೆಗೊಳ್ಳುವ ಜನಗಳು, ಇದುವರಿಗೆ ವಾಸಮಾಡುತಿದ್ದ ಮನೆ ಮುಂತಾದವುಗಳನ್ನು ಒಳಗೊಂಡಿದ್ದ ಹಾಳು ಗೋಡೆಗಳು, ಸದರೀ ಮನೆ ಮುಂತಾದವುಗಳು ಖಾಲೀ ಮಾಡಲ್ಪಟ್ಟ ತರುವಾಯ ಕೆಡಹಿಸಿ ನೆಲ ಸಮಮಾಡಲ್ಪಡತಕ್ಕವು. ಅಂತಾ ಸಂಗತಿಗಳಲ್ಲಿ ಹಾಗೆ ಖಾಲೀ ಮಾಡಲ್ಪಟ್ಟ ಜಮೀನು ಮ್ಯುನಿಸಿಪೆಲ್ ಯಿಲಾಖೆಯವರ ಅಧೀನದಲ್ಲಿರತಕ್ಕದ್ದು.

II. ಪೂರ್ವ ಅನುಭವಿಸುತಿದ್ದ ಬಾಧ್ಯತೆಯ ಮೇಲೆ ಸ್ಕ್ವಾಟರ್‌ಗಳಿಂದ ಯಾ ಇತರ ಜನಗಳಿಂದ ತ್ಯಜಿಸಲ್ಪಟ್ಟ ನಿವೇಶನಗಳ, ಹಾಳು ಭೂಮಿಯ, ಯಾ ವಾಸಯೋಗ್ಯವಲ್ಲದೆ ಶಿಥಿಲವಾಗಿರುವ ಮನೆ ಮುಂತಾದವುಗಳ ಯಾವ ಬಿಕರೀಯೂ, ಪಟ್ಟೇ ಇಂದ ಯಾ ಗ್ರಾಂಟ್ ನಿಂದ ಯಾ ಸ್ 1864ನೇ ಇಸವೀ ಜರ್ನ್ ಗುರ್ರೀ ಮೊದಲು ಹುಟ್ಟಿದ ಕ್ರಯ ಶಾಸನದಿಂದ ಮತ್ತು ಸದರೀ ಜಮೀನಿನ ವಿವರಣದಿಂದ ಅಂತಾ ಬಾಧ್ಯತೆಯು ಬಲಪಡಿಸಲ್ಪಟ್ಟ ಹೊರ್ತು ದೃಢಪಡತಕ್ಕದ್ದಲ್ಲ.

III. ಇದು, ಒಂದು ತಿಂಗಳೊಳಗೆ ತಮ್ಮ ಮನೆಗಳನ್ನ ದುರಸ್ತು ಮಾಡುವ ಯಾ ಅವುಗಳನ್ನ ಖಾಲೀ ಮಾಡುವ ಜನಗಳಿಗೆ ಅಥವಾ ವಾಸಗೃಹ ಮುಂತಾದವುಗಳನ್ನು ಮಾರುವ ಜನಗಳಿಗೆ ಲಗಾವಾಗುವದಿಲ್ಲ.

17. ದರೋಬಸ್ತು ಬಂಡಿಗಳೂ, ಸವಾರಿಗಳೂ ತಮ್ಮ ಯೆದುರಿಗೆ ಬರತಕ್ಕ ಬಂಡಿಗಳು, ಸಂಧಿಸಿ ಬಲಗಡೆಗೆ ಹೋಗುವದಕ್ಕೆ ಅನುಕೂಲಿಸುವಂತೆ ರಸ್ತೆಯಲ್ಲಿ ತಮ್ಮ ಯಡಪಾರ್ಶ್ವಕ್ಕೇನೇ ಹೋಗುವಂತೆ ಬಲಾತ್ಕರಿಸಲ್ಪಡತಕ್ಕವು.

18. ಸಾಮಾನುಗಳು ತೆಗೆದುಕೊಂಡು ಹೋಗುವ ಬಗ್ಗೆ ಯೆತ್ತುಗಳು ಕಟ್ಟಿದ ಬಂಡೀ ಅಲ್ಲದ ಇತರ ಯಾವ ವಿಧವಾದ ಯಾವ ಸಾಧನವನ್ನಾಗಲಿ ಸೂರ್ಯಾಸ್ತಮಯದನಂತರ ಮುಕ್ಕಾಲು ಗಂಟೆಗೂ ಸೂರ್ಯೋದಯಕ್ಕೆ ಪೂರ್ವ ಒಂದು ಗಂಟೆಗೂ ಮಧ್ಯ ಕಾಲದಲ್ಲಿ ಯಾವಾಗಲಾದರೂ ಅಂತಾ ಗಾಡಿಯ ಉಭಯ ಪಾರ್ಶ್ವಕ್ಕೂ ಹಚ್ಚಿದ ದೀಪಗಳು ಇಡದೇ ಯಾವನು ನಡಿಸುತ್ತಾ

ನೋ ಅಂತಾವನು ದೀಪಗಳು ಅನಾವಶ್ಯಕವಾಗಲಿಕ್ಕೆ ಸಾಕಾದಷ್ಟು ಬೆಳದಿಂಗಳು ಇರಬಹುದಾಗಿ ಮ್ಯಾಜಿಸ್ಟ್ರೇಟರಿಗೆ ತೋರಿದಾಗ ಹೊರ್ತು ಇತರ ಕಾಲದಲ್ಲಿ 5ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

II. ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಾವ ರಸ್ತೆಯಲ್ಲಿಯಾದರೂ ರಾತ್ರಿ 7 ಗಂಟೆಗೂ ಬೆಳಿಗ್ಯೆ 4 ಗಂಟೆಗೂ ಮಧ್ಯೆ ಯೆತ್ತುಗಳು ಕಟ್ಟಿದ ಬಂಡಿಯನ್ನಾಗಲಿ, ಯಾವ ವಿಧವುಳ್ಳ ಸವಾರೀ ಗಾಡಿಯನ್ನಾಗಲಿ ಅಂತಾ ಗಾಡಿಯ ಉಭಯಪಾರ್ಶ್ವಕ್ಕೂ ಲಗತೆ ಮಾಡಲ್ಪಟ್ಟ ಹಚ್ಚಿದ ಲಾಂದರುಗಳು ಕಟ್ಟದೇ ನಡಿಸುವಂತಾವನು 5ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು. ಪರಂತು ಕಾಲು ನಡೆಗೆ ಸರಿಯಾಗಿ ಹೋಗುವ ಭರ್ತೀ ಬಂಡಿಗಳಿಗೆ ಮಧ್ಯದಲ್ಲಿ ತಗಲಹಾಕಲ್ಪಟ್ಟ ಒಂದು ಹಚ್ಚಿದ ಲಾಂದ್ರ ಯಿರಬಹುದು.

III. ಮ್ಯುನಿಸಿಪೆಲ್ ಸರಹದ್ದಿನಲ್ಲಿ ಯೆತ್ತುಗಳು ಕಟ್ಟಿದ ಯಾವ ಸಾಮಾನು ಬಂಡಿಯನ್ನಾಗಲಿ ನಡಿಸುವಂತವನು ಕಾಲು ನಡೆಗೆ ಸರಿಯಾಗಿ ನಡಿಸತಕ್ಕದ್ದು ಮತ್ತು ರಸ್ತೆಯೊಳಗೆ ಯೆಡಗಡೆಯಲ್ಲಿಯೇ ಹೋಗತಕ್ಕದ್ದು, ಮತ್ತು ಯೆತ್ತುಗಳನ್ನು ನಡಿಸತಕ್ಕವನು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟೀಯಲ್ಲಿಟ್ಟುಕೊಳ್ಳುವ ಬಗ್ಯೆ ಸಾಕಾದಷ್ಟು ಬಲವಾದ ಹಗ್ಗದಿಂದ ಆ ಯೆತ್ತುಗಳಿಗೆ ಮೂಗುದಾರ ಹಾಕಿರತಕ್ಕದ್ದು. ಈ ಹುಕ್ಕುಂಗಳಿಗೆ ಖಿಲಾಫ್ ನಡೆಯುವ ತಪ್ಪಿತಸ್ಥನು 5 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

2ನೇ ಅಧ್ಯಾಯ.

ಸ್ಥಳಿಕ ತೊಂದರೆಗಳು.

19. ಪಬ್ಲಿಕ ಬೀದಿಗಳಲ್ಲಿ ದನಗಳನ್ನು ಕಟ್ಟುವಿಕೆ, ಪೆಟ್ಟಿಗೆಗಳನ್ನು ಖಾಲೀ ಬಂಡಿಗಳನ್ನು, ಯಾ ಸವಾರೀಗಾಡಿಗಳನ್ನು ಅಥವಾ ಯಾವವಿಧದ ನಿರೋಧಗಳನ್ನು ಮನೆಗಳ ಯಾ ಅಂಗಡಿಗಳ ಮುಂದೆ ಬಿಡುವಿಕೆ, ಮತ್ತು ಯಾವ ಅಂಗಡಿಯ ಯಾ ಮನೆಯ ಮುಂದುಗಡೆಯಾಗಲಿ ಯೆರಡು ಗಂಟೆಗಳ ಹೊತ್ತಿಗಿಂತ ಹೆಚ್ಚಾಗಿ ಬಂಡಿಗಳು ಯಾ ಸವಾರೀಗಾಡಿಗಳು ಭರ್ತೀ ಮಾಡುವಾಗ್ಯೆ ಯಾ ಯಿಳಿಸುವಾಗ್ಯೆ ಗುಂಪುಕೂಡುವದಕ್ಕೆ ಆಸ್ಪದ ಕೊಡುವಿಕೆ, ಇಂತಾದ್ದು 5 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

20. ಮ್ಯುನಿಸಿಪೆಲ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾ ಅವರ ಹುಕ್ಕುಮಿಗೆ ವಿರುದ್ಧವಾಗಿ ಬಂಡೆಯಲ್ಲಿ ಗ್ರೇವಲ್ ಮತ್ತು ಕಲ್ಲು ತೆಗೆಯುವಿಕೆ, ಇಟ್ಟಿಗೆ ಮತ್ತು ಹೆಂಚುಗಳಿಗೋಸ್ಕರ ಮಣ್ಣು ಅಗಿಯುವಿಕೆ ಇಟ್ಟಿಗೆ ವ ಹೆಂಚುಗಳನ್ನು ಮಾಡುವ ಬಗ್ಯೆ ಲೈಸೆನ್ಸಗಳನ್ನು ಮ್ಯುನಿಸಿಪೆಲ್ ಆಫಿಸ್‌ನಲ್ಲಿ ದರಖಾಸ್ತು ಮಾಡಿ ಪಡೆದುಕೊಳ್ಳಬಹುದು. ಈ ಸ್ಥಳವೊಳಗೆ ತರಲ್ಪಡುವ ಇಟ್ಟಿಗೆಗಳಿಗೆ 1000ಕ್ಕೆ 4 ಆಣೆ, ಹೆಂಚುಗಳು 1000ಕ್ಕೆ 4 ಆಣೆ, ಈ ಮೇರೆ ವಸೂಲ್ ಮಾಡಲ್ಪಡತಕ್ಕದ್ದಲ್ಲದೆ, ಒಂದು ಬಂಡಿ ಕಲ್ಲಿಗೆ 6 ಕಾಸು ಅಥವಾ ಚದರ ಗಜ ಒಂದಕ್ಕೆ 2 ಆಣೆಗಳ ಮೇರೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

21. ನೋಟಿಸ ತಲಪಿದ 8 ದಿನಗಳೊಳಗಾಗಿ ಯಾವ ಮನೆಗಾಗಲಿ ಕಟ್ಟಡಕ್ಕಾಗಲಿ, ಹೊರಗೆ ಯಾ ಒಳಗೆ ಸುಂಣ ಬಳಿಯಲಿಕ್ಕೆ ಅಥವಾ ಆರೋಗ್ಯ ನಿಮಿತ್ತದಿಂದ ಅವುಗಳನ್ನು ಪಾಕ ಮಾಡಲಿಕ್ಕೆ, ಅಥವಾ ಪಾಯಖಾನೆಗಳನ್ನು ಯಾ ಬಚ್ಚಲು ಗುಣಿಗಳನ್ನು ಕಂಪು ಯಿಲ್ಲದೆ ಮಾಡಲಿಕ್ಕೆ ಮೆಡಿಕೆಲ್ ಆಫಿಸರರ ಸಲಹೇ ಮೇಲೆ ಅಮಲ್ ನಡಿಸುವ ಪ್ರೆಸಿಡೆಂಟರ ಯಾವ ಹುಕ್ಕುಮಿಗಾಗಲಿ ಅವಿಧೇಯವಾಗಿ ನಡೆಯುವಿಕೆ—ಜುರ್ಮಾನೆ 10 ರೂಪಾಯಿ.

22. ಗ್ಲಾಂಡರ್ಸ್ ಯೆಂಬ ರೋಗವಾಗಲಿ, ಅಥವಾ ಅಪಾಯಕರವಾದ ಯಾ ಅಂಟುವ ಸ್ವಭಾವವುಳ್ಳ ಸಾಂಕ್ರಾಮಿಕವಾದ ಯಾ ಅನ್ಯಥಾ ಯಿರುವ ಯಾವ ರೋಗವಾಗಲಿ, ತಗಲಿದ, ಯಾವದಾದರೂ, ಕುದುರೆ ಯಾ ಯಿತರ ಜಾನವರ್‌ಗಳುಳ್ಳ, ಮತ್ತು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಹಂಗಾಮಿಯಾಗಿ ಆಗಲಿ, ಅನ್ಯಥಾ ಆಗಲಿ, ವಾಸ ಮಾಡುವ ದರೋಬಸ್ತು ಜನಗಳೂ ಆ ಸಂಗತಿಯನ್ನು ಕುರಿತು ಕೂಡ್ಲೆ ಪ್ರೆಸಿಡೆಂಟರಿಗೆ ಜಾಹಿರ್ ಮಾಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು. ಸದರೀ ಪ್ರೆಸಿಡೆಂಟರು ಮೇಲೆ ಕಂಡ ಪ್ರಕಾರ ತಮಗೆ ನೋಟಿಸ ಬಂದ ಮೇಲೆ ಸಾಧ್ಯವಾದಷ್ಟು ತ್ವರೆಯಾಗಿ ಲಾಯಖಾದ ಒಬ್ಬ ಸಾಲಂತ್ರೀ ಮೂಲಕ ಜಾನವರನ್ನು ಯಾ ಜಾನವರ್‌ಗಳನ್ನು ಅಜಮಾಯಿಷೀಮಾಡಿಸಿ, ಸದರೀ ಜಾನವರ್ ಯಾ ಜಾನವರ್‌ಗಳನ್ನು ತೊಲಗಿಸುವದು ಆವಶ್ಯಕವೆಂದು ತೃಪ್ತಿಕರವಾಗಿ ತಿಳಿಯಬಂದರೆ, ಸ್ವಂತಗಾರನು ಅಂತಾ ಜಾನವರನ್ನು ಕೂಡ್ಲೆ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಸಾಗಿಸಿ ಬಿಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು

ಗ್ಲಾಂಡರ್ಸ್ ಎಂಬ ರೋಗವಾಗಲಿ, ಯಿತರ ಯಾವ ಸಾಂಕ್ರಾಮಿಕ ರೋಗವಾಗಲಿ, ತಗಲಿಯಿರುವ ಜಾನವರ್‌ಗಳು ಉಳ್ಳ ಯಾವ ಮನುಷ್ಯನಾಗಲಿ, ಈ ಬೈಲಾ ನಿಬಂಧನೇ ಪ್ರಕಾರ ನಡೆಯದಿದ್ದರೆ, ಅಂತಾವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪಿತಸ್ಥ

ಪಿಸಲ್ಪಟ್ಟು ಅವ್ವಲ್‌ದಫಾ ತಪ್ಪಿತಕ್ಕೆ 100 ರೂಪಾಯಿಗಳ, ಆ ತರುವಾಯ ಯರಡನೇ ಮತ್ತು ಪ್ರತಿಸಲದ ತಪ್ಪಿತಕ್ಕೂ, 200 ರೂಪಾಯಿಗಳ ಜುರ್ಮಾನೆಗೆ ಗುರಿಯಾಗತಕ್ಕದ್ದು.

23. ಸ್ವಂತಗಾರರ ಯಾ ಹಿಡುವಳೀದಾರರ ಮನೆ ಮುಂತಾದವುಗಳಲ್ಲಿ, ಮೃತಪಡುವ ಯಾವ ಜಂತುವಿನ ಶವವನ್ನಾಗಲಿ, ಯುಕ್ತವಾದ ಕಾಲದೊಳಗೆ, ರಬ್ಬಿಷ್ ಡಿಪೋಯೆಂಬ ಕಶ್ಮಲ ಹಾಕುವ ಜಾಗಾಕ್ಕೆ ಸತ್ತ ಅಥವಾ, ಜಂತುಗಳ ಶರೀರಗಳನ್ನು ದರ್ಫ ಮಾಡುವ ಬಗ್ಯೆ ಪ್ರತ್ಯೇಕವಾಗಿ ಯೇರ್ಪಡಿಸಲ್ಪಟ್ಟ ಸ್ಥಳಕ್ಕೆ ತೆಗಸಿ ಹಾಕುವದಕ್ಕೆ ಉಪೇಕ್ಷಿಸುವಿಕೆ,—ಜುರ್ಮಾನೆ 5 ರೂಪಾಯಿಗಳು.

24. ಪಬ್ಲಿಕ್ ತೋಟಗಳಲ್ಲಿ ಯಾ ರಸ್ತೆಗಳ ಬಾಜೂಗಳಲ್ಲಿ ಮರಗಳನ್ನು ನಾಶ ಪಡಿಸುವಿಕೆ ಹಣ್ಣುಗಳನ್ನು ಯಾ ಹುವ್ವುಗಳನ್ನು ಕೊಯ್ಯುವಿಕೆ, ಯಾ ಹುಲ್ಲನ್ನು ಕೊಯ್ಯುವಿಕೆ, ಯಾ ಬೇರುಸಹಿತ ಕೀಳುವಿಕೆ, ಅಥವಾ ಯಾವ ವಿಧದಿಂದಲಾಗಲಿ, ರಸ್ತೆಗಳ ಬಾಜೂಗಳನ್ನು ಮತ್ತು ಬದುವುಗಳನ್ನು ನಾಶ ಪಡಿಸುವಿಕೆ, ಅಥವಾ ಕವಾಯತ್ ಜಾಗಾಗಳಲ್ಲಿ, ಯಾ ವಿಹಾರಾಪೇಕ್ಷೆಯುಳ್ಳವರಿಗಾಗಿ ಮಾತ್ರ ಉದ್ದೇಶಿಸಲ್ಪಟ್ಟ ಪಬ್ಲಿಕ್ ತೋಟಗಳಲ್ಲಿ ತಿರುಗಾಡಿ ರಾಪ್ತಿ ಮಾಡುವಿಕೆ,—ಜುರ್ಮಾನೆ 10 ರೂಪಾಯಿಗಳು.

25. ಮ್ಯುನಿಸಿಪಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಯಿಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಟ್ಟ ಯಾವ ಗೋರೀಯಲ್ಲಾಗಲಿ, ಶವದ ಪೆಟ್ಟಿಗೆಯನ್ನೂ ಯಾ ಶವವನ್ನೂ, ಭೂಮಿಯ ಮಟ್ಟದಕೆಳಗೆ ಮೂರು ಅಡಿಗಿಂತ ಕಡಮೆಯಾದ ಆಳದಲ್ಲಿರುವ ಹಾಗೆ ದರ್ಫ ಮಾಡುವಿಕೆ,—ಜುರ್ಮಾನೆ 5 ರೂಪಾಯಿ.

26. ಮ್ಯುನಿಸಿಪಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಇಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಡದೇ ಯಿರುವ ಯಾವ ಗೋರೀಯಲ್ಲಾಗಲಿ, ಯಾವ ಶವದ ಪೆಟ್ಟಿಗೆಯನ್ನಾಗಲಿ, ಶವವನ್ನಾಗಲಿ, ಭೂಮಟ್ಟದ ಕೆಳಗೆ 5 ಅಡಿಗಳಿಗೆ ಕಡಮೆಯಾದ ಆಳದಲ್ಲಿರುವಂತೆ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

27. ಮ್ಯುನಿಸಿಪಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಜಾಗಾದಲ್ಲಾಗಲಿ, ಎರಡು ಅಡಿಗೆ ಕಡಮೆಯಾದ ದೂರದಲ್ಲಿ ಮತ್ತು ಮ್ಯುನಿಸಿಪಲ್ ಬೋರ್ಡಿನವರಿಂದ ವಿಧಿಸಲ್ಪಡದ ಜಾಬಿನಲ್ಲಿ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

28. ದರ್ಫ ಜಾಗಾಗಳ ಯಾ ದಹನ ಸ್ಥಳಗಳ ಸ್ವಂತಗಾರರು ಯಾ ಜಿಮ್ಮೆಉಳ್ಳವರು ದರ್ಫ ಯಾ ದಹನವಾದ 24 ಘಂಟೆ ಹೊತ್ತಿನ ಒಳಗಾಗಿ, ಮೃತಪಟ್ಟ ಮನುಷ್ಯನ ಹೆಸರುಗಳು, ಸ್ತ್ರೀ ಅಥವಾ ಪುರುಷನೆಂಬದು, ವಯಸ್ಸು, ಮತ್ತು ವಾಸಸ್ಥಾನ, ಮರಣಕಾರಣ, ಯಿಂತಾದ್ದನ್ನು ಕುರಿತು ಆ ಜನಗಳಿಗೆ ಸಾಧ್ಯವಾದ ದರೋಬಸ್ತು ಸಂಗತಿಯನ್ನೂ ಬೋರ್ಡಿನವರಿಗೆ ತಿಳಿಸಲಿಕ್ಕೆ ಉಪೇಕ್ಷಿಸುವಣ,—ಜುರ್ಮಾನೆ ರೂಪಾಯಿ 5.

29. ಕೊಬ್ಬನ್ನು ಕರಗಿಸುವದಕ್ಕೋಸ್ಕರ ಯಾ ಮಾಂಸ ಸಂಬಂಧವಾದ ಕಶ್ಮಲವನ್ನು, ಯಾ ರಕ್ತವನ್ನು ಕಾಯಿಸುವದಕ್ಕೋಸ್ಕರ ಉಪಯೋಗಿಸಲ್ಪಡುವ ಸ್ಥಳಗಳ, ಸಬ್ಬಿನಮನೆಯ, ಎಣ್ಣೇ ಕಾಯಿಸುವ ಮನೆಯ, ಬಣ್ಣಾ ಹಾಕುವ ಮನೆಯ, ತೊಗಲು ಹದಾಮಾಡುವ ಸ್ಥಳದ, ಇಟ್ಟಿಗೆ, ಕುಂಬಾರಸಾಲುಗಳು ಯಾ ಸುಣ್ಣದ ಗೂಡಿನ, ಸೇಗೋ ಯಾ ಸಕ್ಕರೇ ಕಾರ್ಖಾನೆಯ, ಅಥವಾ ಅಸಹ್ಯವಾದ ಯಾ ಅನಾರೋಗ್ಯವಾದ ವಾಸನೆ ಯುಂಟುಮಾಡುವ ಇತರ ಕಾರ್ಖಾನೆಯ ಯಾ ಕೆಲಸ ನಡೆಯುವ ಸ್ಥಳಗಳ, ಯಾ ಬಾಡಿಗೇ ಕುದುರೇಲಾಯಗಳು ಯಾ ಯಿತರ ಲಾಯಗಳು, ದನದ ಕೊಟ್ಟಿಗೆಗಳು, ಹಂದೀ ಗೂಡುಗಳು, ಇಂತಾವುಗಳ, ಸ್ವಂತಗಾರರು, ಯಾ ಹಿಡುವಳೀದಾರರು, ಯಿವುಗಳನ್ನು ಪ್ರತಿಸಲವೂ ತೆಗಸಿ ಹಾಕಬೇಕಾದ ಕಾಲದಲ್ಲಿ ಅಂತಾ ಯಾವ ಸ್ಥಳದೊಳಗೆ ಯಾ ಅದರ ಸುತ್ತಮುತ್ತಲೂ, ಯಿರುವ ವಿಶಿಷ್ಟ ಕಶ್ಮಲವನ್ನೂ, ರೋತೆಯನ್ನೂ, ವ ಕಸವನ್ನೂ, ಅಧಮಪಕ್ಷ 24 ಘಂಟೆಗೊಂದಾವರ್ತಿ ತೆಗದು ಹಾಕದೆ ಯಾ ತೆಗೆಯಿಸಿ ಹಾಕದೇ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿಗಳು.

30. ಮನೆ ಸ್ವಂತಗಾರರು ಬಿದ್ದುಹೋದ ಗೋಡೆಗಳನ್ನು, ಯಾ ತಲೆಬಾಗಿಲ ನಿಲುವುಗಳನ್ನು ದುರಸ್ತು ಮಾಡಲಿಕ್ಕೆ, ಯಾ ತಮ್ಮ ಆವರಣಗಳ ಯಾ ಅಂಗಳಗಳ ಗೋಡೆಗಳಿಗೆ ಬಂಣ ಬಳಿಯುವದಕ್ಕೆ ಅಥವಾ ಯಿಟ್ಟಿಗೆಗಳಿಂದ ಯಾ ಹೆಂಚುಗಳಿಂದ ಅಂಚು ಕಟ್ಟಲಿಕ್ಕೆ ನೋಟಿಸ್ ಜಾರೀ ಮಾಡಲ್ಪಟ್ಟ ತರುವಾಯ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿ.

31. ಪಬ್ಲಿಕ್ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ ಸಾದೇ ಒಡೆಯುವಿಕೆ—ಜುರ್ಮಾನೆ 5 ರೂಪಾಯಿ.

32. ಸಂಗಡ ಯಿರತಕ್ಕಬಗ್ಗೆ ಸಾಕಾದಷ್ಟು ಮಂದಿ ಯಿಲ್ಲದೆ ರಸ್ತೆಯಲ್ಲಿ ಹೊಡಕೊಂಡು ಬರುವ ದನಗಳ ಯಾ ಹಂದಿಗಳ ಜಿಮ್ಮೆಯುಳ್ಳವರಾಗಿರುವಿಕೆ. ಅವುಗಳನ್ನು ಪಬ್ಲಿಕ್ ರಸ್ತೆಯಲ್ಲಿ ಮೇಯಲಿಕ್ಕೆ ಬಿಡುವಿಕೆ, ಯಾ ಹಂದಿಗಳನ್ನು ಸ್ವೇಚ್ಛೆಯಾಗಿ ತಿರುಗುವದಕ್ಕೆ ಬಿಡುವಿಕೆ.

II. ಮ್ಯುನಿಸಿಪಲ್ ಸರಹದ್ದುಗಳೊಳಗೆ ಬೆಳಿಗ್ಯೆ 4 ಘಂಟೆ ಲಾಗಾಯತ್ ರಾತ್ರಿ 8 ಘಂಟೆ ವರಿಗೆ ಕಾಯುವವನಿಲ್ಲದೆ ಯಾವ ಮನುಷ್ಯನೂ ದನಗಳನ್ನು ಮೇಯಿಸಕೂಡದು, ಮತ್ತು ಕಾಯುವವನಿಲ್ಲದೆ ಮೇಯುತಿದ್ದು ಶಿಕ್ಕುವ ದನಗಳು ತೊಂಡುವಾಡೆಗೆ ಒಯ್ಯಲ್ಪಡಲಿಕ್ಕೂ, ಅವುಗಳ ಸ್ವಂತಗಾರರು ಇದರಡಿ 3ನೇ ಕಲಂನಲ್ಲಿ ವಿವರಿಸಲ್ಪಟ್ಟ ಜುರ್ಮಾನೆಗಳನ್ನು ತೆರಲಿಕ್ಕೂ ಗುರಿಯಾಗತಕ್ಕದ್ದು.

III. ಮ್ಯುನಿಸಿಪಲ್ ಸರಹದ್ದುಗಳೊಳಗೆ ರಾತ್ರಿ 8 ಘಂಟೆಗೂ, ಬೆಳಿಗ್ಯೆ 4 ಘಂಟೆಗೂ, ಮಧ್ಯೆ ದನಗಳನ್ನು ಮೇಯುವದಕ್ಕೆ ಯಾವ ಮನುಷ್ಯನೂ ಬಿಡಕೂಡದು. ಸದರೀ ಹೊತ್ತಿನ ಮಧ್ಯೆ ಮೇಯುತಿದ್ದು ಹಿಡಿಯಲ್ಪಟ್ಟ ದನಗಳು ತೊಂಡುವಾಡೆಗೆ ಹೊಡಿಯಲ್ಪಟ್ಟು, ಈ ಕೆಳಗೆ ನಮೂದಿಸುವ ಪ್ರಕಾರ ಜುರ್ಮಾನೆ ತೆತ್ತಹೊರ್ತು ಖುಲಾಸೇ ಮಾಡಲ್ಪಡಲಾರದು.

ಯೆಮ್ಮೇ ಕೋಣಗಳು ..	1—0—0	ಕರು ವ ಕತ್ತೆ ..	0—4—0
ಯೆತ್ತುಗಳು ಯಾ ಆಕಳು ..	0—8—0	ಕುದುರೆ ಯಾ ಟಾಕಣ ..	0—8—0
ಕುರಿ ಮ್ಯಾಕೆ ..	0—2—0		

33. ಒಂದು ಪಬ್ಲಿಕ ರಸ್ತೆಯಲ್ಲಿ ಯಾ ಒಂದು ಪಬ್ಲಿಕ ರಸ್ತೆಗೆ ಸಮೀಪವಾದ ಆಸ್‌ಪಾಸ್ ಪ್ರದೇಶದಲ್ಲಿ ದೇಹಭಾಧೆಗೆ ಹೋಗುವ ಅಥವಾ ಜನಗಳಿಗೆ ಹೇಸಿಕೆಯಾಗಿರುವ ಸ್ಥಳದಲ್ಲಿ ಯಾವ ಕಶ್ಮಲವನ್ನಾದರೂ, ಜಮಾಯಿಸಿ ಯಿಡುವ ಯಾವ ಮನುಷ್ಯನಾಗಲಿ, ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ಆವ್ವಲ್‌ದಫಾ ಅರ್ಧ ರೂಪಾಯಿ, ಎರಡನೇ ದಫಾ ಒಂದು ರೂಪಾಯಿ ಆತರುವಾಯ ನಡಿಸಲ್ಪಡುವ ಪ್ರತಿದಫಾಕ್ಕೂ, ಯೆರಡು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

34. ಅಲಿಯುವ ಯಾವ ತಿರಪಗಾರನೂ, (ಸ್ಟೇಷನ) (ಷಹರ)ನ ಬೀದಿಗಳಲ್ಲಿ, ರಸ್ತೆಗಳಲ್ಲಿ ಯಾ ಸಂದಿಗಳಲ್ಲಿ ತಿರುಪಕ್ಕಾಗಿ ಬಾಧಿಸಕೂಡದು, ಯಾ ಜನಗಳನ್ನು ತಿರಪಬೇಡಕೂಡದು, ಮತ್ತು ರಸ್ತೆಗಳಲ್ಲಿ, ಬೀದಿಗಳಲ್ಲಿ ಯಾ ಗಲ್ಲಿಗಳಲ್ಲಿ ಯಾ ಬಂಡಿಗಳೊಳಗೆ ಯಾ ಮನೆಗಳೊಳಗೆ ತಿರಪಕ್ಕೋಸ್ಕರ ಬಾಧಿಸುವದಾಗಿ ಯಾ ಜನಗಳನ್ನು ತಿರುಪಬೇಡುವದಾಗಿ ತಮಗೆ ಶಿಕ್ಕಿದ ಯಾ ತಮ್ಮಲ್ಲಿ ಫಿರ್ಯಾದ್ ಮಾಡಲ್ಪಟ್ಟ, ಅಲಿಯುವ ಯಾವ ತಿರಪಗಾರರನ್ನಾಗಲಿ ಮ್ಯುನಿಸಿಪಲ್ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡೆದದಕ್ಕೋಸ್ಕರ ಖೈದನಲ್ಲಿ ತೆಗದುಕೊಳ್ಳಲಿಕ್ಕೆ ಪೊಲೀಸನವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಈ ಉಪನಿಬಂಧನೆಯು, ಆ ಯಾ ಜಾತಿಯ ನೇಟಿವಗಳಿಂದ ಆದರಿಸಲ್ಪಟ್ಟು, ಪ್ರತಿದಿನವೂ ಆಹಾರಕ್ಕಾಗಿ ತಮ್ಮ ಮನೆಗಳಿಗೆ ಬರುವಂತೆ ಪ್ರೋತ್ಸಾಹ ಪಡಿಸಲ್ಪಟ್ಟ ಯಾವ ವಿಧದೊಳಗೂ ತೊಂದರೆ ಕೊಡದಂತಾ ಮತಸಂಬಂಧಿಗಳಾದ ಯಾಚಕರ ವಿಷಯದಲ್ಲಿ ಬಾಧಕ ವಾಗುವದಿಲ್ಲವು.

ಮೇಲೆ ಕಂಡ ಉಪನಿಬಂಧನೆಗೆ ಬರಖಿಲಾಫ ನಡೆಯುವದರಿಂದ ಹಾಗೆ ಅಪರಾಧಮಾಡುವ ಮನುಷ್ಯನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ನಾಲ್ಕು ದಿನಗಳ ಸಾಧಾರಣ ಖೈದಿಗೆ ಗುರಿಯಾಗತಕ್ಕದ್ದು.

II. ಅಸಹ್ಯವಾದ, ಅಥವಾ ಅಂಟುವಂತಾ ರೋಗ ತಗಲಿಯಿರುವ ಜನಗಳು, ಮ್ಯುನಿಸಿಪಾಲಿಟಿಯ (ಷಹರಿನ) ಮಾರ್ಕೆಟಗಳಲ್ಲಾಗಲಿ ಅಂಗಡಿಗಳಲ್ಲಾಗಲಿ ಯಾವ ಆಹಾರಪದಾರ್ಥವನ್ನಾಗಲಿ ಮಾರಕೂಡದೆಂತ ಅಥವಾ ಮಾರಾಟದ ಬಗ್ಯೆ ಹೊರಗೆ ಯಿಡಕೂಡದೆಂತ ನಿಷೇಧಿಸಲ್ಪಟ್ಟಿರುತ್ತಾರೆ. ಅಂತಾತಕಸೀರವಂತರು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟು ಮೊದಲು ದಫಾಕ್ಕೂ, ತರುವಾಯ ಪ್ರತಿದಫಾಕ್ಕೂ, ಒಂದು ರೂಪಾಯಿಗೆ ಜಾಸ್ತೀ ಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

35. ಮ್ಯುನಿಸಿಪಲ್ ಸರಹದ್ದುಗಳಲ್ಲಿ ಇಡಲ್ಪಟ್ಟ ಕುದುರೆಗಳು ಯಾ ಟಾಕಣಗಳು, ಯೆತ್ತುಗಳು, ಬಂಡಿಗಳು, ಮತ್ತು ನಾಯಿಗಳು, ಇವುಗಳ ಸ್ವಂತಗಾರರು ಈ ಕೆಳಗೆ ಕಂಡ ಪ್ರಕಾರ ತೆರಿಗೆಗಳನ್ನು ಕೊಡತಕ್ಕದ್ದು.

ಯೆರಡು ಚಕ್ರಗಳ ಬಂಡಿಗಳು	ಚಷ್ ಮಾಹೆ 1ಕ್ಕೆ	ರೂ	2—0—0
ನಾಲ್ಕು ಚಕ್ರಗಳ ಬಂಡಿಗಳು	,,	,,	3—0—0
ಈ ಶೀಮೆ ತಟ್ಟುವಿಗೆ	,,	,,	1—0—0
ಪ್ರತಿ ಟಾಕಣಿಗೆ	,,	,,	2—0—0
ಜೊತೆ ಬಂಡೀ ಯಾ ಗಾಡಿ ಯೆತ್ತುಗಳಿಗೆ	,,	,,	2—0—0
ನಾಯಿಗೆ	,,	,,	1—0—0
ಪ್ರತಿ ಕುದುರೆಗೂ	,,	,,	4—8—0

ತೆರಿಗೆ ಕೊಡೋಣಾದ ಮತ್ತು ಲೈಸೆನ್ಸ್ ತೆಗೆದುಕ್ಕೊಳ್ಳೋಣಾದ ನಾಯಿಗಳಿಗೆ ಕತ್ತಿಗೆ ಪಟ್ಟೀ ಹಾಕತಕ್ಕದ್ದು.

ಇಲ್ಲದಿದ್ದರೆ ತೊಂಡು ನಾಯಿಯೆಂತ ಯಾ ಬೇವಾರಸ್ ನಾಯಿಯೆಂತ ಕೊಂದು ಹಾಕಲ್ಪಡುವದಕ್ಕೆ ಗುರಿಯಾಗತಕ್ಕದ್ದು.

36. ಧೂಳು, ಕಸ, ಬೂದಿ, ವ ಕಚರಾ ಇಂತಾವುಗಳನ್ನು, ಆಚೆಗೆ ಸಾಗಿಸಿಕ್ಕೊಂಡುಹೋಗುವ ಪರಿಯಂತ ಹಂಗಾಮೀಯಾಗಿ ಹಾಕಿ ಇಡಬಹುದಾದ, ಕದಲಿಸತಕ್ಕಂತಾ ಅಥವಾ ನೆಲೆಯಾಗಿರುವಂತಾ ಯಷ್ಟು ಕಚರೆ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ, ಪ್ರೆಸೀಡೆಂಟರು ಒದಗಿಸಿ, ಯುಕ್ತಗಳಾದ ಮತ್ತು ಅನುಕೂಲಗಳಾದ ಸ್ಥಳಗಳಲ್ಲಿ ಇಡಿಸಬಹುದು; ಮತ್ತು ಬೀದಿಗಳೊಳಗಿರುವ ಮನೆಗಳ ವಾಸಸ್ಥರು ಮೇಲೆ ಕಂಡ ದರೋಬಸ್ತು ಕಚರೇ ವಗೈರೇಯನ್ನು ಪ್ರತಿದಿನವಾಗಲಿ, ಅನ್ಯಥಾ ಯಾವದಾದರೊಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀದ್ಮಾಡಬಹುದು.

ಅಂತಾ ಆಧಾರಗಳು ಕಲ್ಪಿಸಲ್ಪಟ್ಟ ಬಳಿಕ ಮತ್ತು ಮೇಲೆ ಕಂಡಮೇರೆ ತಾಕೀದ್ ಮಾಡಲ್ಪಟ್ಟ ಬಳಿಕ ಪ್ರೆಸೀಡೆಂಟರಿಂದ ಗೊತ್ತುಮಾಡಲ್ಪಡುವ ಅಂತಾ ಆಧಾರಗಳಲ್ಲಿ ಯಾ ಸ್ಥಳಗಳಲ್ಲಿ ಮತ್ತು ಅಂತಾ ರೀತಿಯಾಗಿ, ಮತ್ತು ಅಂತಾ ಹೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪದಾರ್ಥಗಳನ್ನಾಗಲಿ ಯಾವ ಬೀದಿಯೊಳಗಾಗಲಿ, ಯಾವದಾದರೂ ಮನೆಯ ಸ್ಥಿರವಾದ ಜಗಲಿ, ಯಾ ಹಜಾರ ಇಂತಾದ್ದರಮೇಲೆಯಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲಾಗಲಿ, ಜಮಾಯಿಸಿ ಇಡುವ ಯಾ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ 2 ಆಣೆ ಲಾಗಾಯತು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರಿಂದ ಗೊತ್ತುಮಾಡಲ್ಪಡತಕ್ಕ ಸ್ಥಳಗಳೊಳಗೂ, ಆರೀತಿಯಾಗಿಯೂ, ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವನು ಕಶ್ಮಲವನ್ನು ಹಾಕಿ ಇಡುತ್ತಾನೋ ಯಾ ಇಡಗೊಡಿಸುತ್ತಾನೋ ಅಥವಾ ಯಾವದಾದರೂ ಬೀದಿಯಲ್ಲಿಯಾಗಲಿ, ಮನೆಯ ತಳವರಸೆ, ಜಗತಿ, ಯಾ ವಸಾರೆಯಲ್ಲಿ ಅಥವಾ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವದಾದರೂ ಜಮೀನಿನಲ್ಲಾಗಲಿ, ನದೀತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವದಾದರೂ ಧೂಳು, ಕಸ, ಸಗಣಿ, ಬೂದಿ; ತೊಟ್ಟಿ, ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೆಯದಾದರೂ ಕಶ್ಮಲ, ಜಂತು ಸಂಬಂಧವಾದ ಯಾವದಾದರೂ ಪದಾರ್ಥ, ಅಥವಾ ಕನ್ನಡಿ ಯಾ ಮಡಿಕೆ ಚೂರು, ಇಟಿಗೇ ಮುರುಕು, ಗಾರೆ ಯಾ ಇತರ ಕಚರಾ, ಇಂತಾದ್ದನ್ನಾಗಲಿ, ಜಮಾಯಿಸಿ ಇಡುವಂತೆ ತನ್ನ ನೌಕರರಿಗೆ ಅಪ್ಪಣೇ ಕೊಡುತ್ತಾನೋ. ಅಂತಾ ಮನುಷ್ಯನು 2 ಆಣೆಗಳ ಲಾಗಾಯಿ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

37. ಯಾವನು, (ಬಚ್ಚಲುನೀರು ಬೀದಿಯಲ್ಲಿ ಹರಿಯಗೊಡಿಸಿ ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿರುವ ಯಾವದಾದರೂ ಬಚ್ಚಲು, ಯಾ ಚರಂಡಿ, ಯಾ ಪಾಯಖಾನೆ ಇಂತಾದ್ದರ ನೀರನ್ನಾಗಲಿ, ದುರ್ವಾಸನೆಯುಳ್ಳ ಇನ್ಯಾವ ದ್ರವ ಪದಾರ್ಥವನ್ನಾಗಲಿ, ಯಾವ ಬೀದಿಯಲ್ಲಾದರೂ, ಹರಿಯುವಂತೆ ಯಾ ಚಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡುತ್ತಾನೋ ಯಾ ಮಾಡುವಂತೆ ಅಪ್ಪಣೆ ಕೊಡುತ್ತಾನೋ, ಅಥವಾ, ಯಾವ ಪಾಯಖಾನೆ ಇಂದಲಾಗಲಿ ಬಚ್ಚಲು ಗುಣಿಯಿಂದಲಾಗಲಿ ಅಸಹ್ಯವಾದ ಯಾವ ಪದಾರ್ಥವಾದರೂ ಯಾವ ಬೀದಿಯೊಳಗಾಗಲಿ ಇರುವ ಮೇಲ್ಭಾಗದ ಚರಂಡಿಯೊಳಗೆ ಹರಿಯುವಂತೆ ಯಾ ಚಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೆ ಕೊಡುತ್ತಾನೋ ಅಂತಾವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

38. ಪ್ರೆಸಿಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗಲಿ, ಅಸಹ್ಯವಾದ ಅಂತಾ ಯಿತರ ವಸ್ತುವನ್ನಾಗಲಿ ತೆಗೆಸಿಹಾಕುವದು ನ್ಯಾಯವಾಗಿರತಕ್ಕದ್ದು. ಪ್ರೆಸೀಡೆಂಟರು ಅಂತಾ ಕಾಲವನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ್ ಕೊಟ್ಟಾಗ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿ ಯಾದರೂ ತೆಗದುಕ್ಕೊಂಡು ಹೋಗುತ್ತಾನೋ ಯಾ ತೆಗದುಕ್ಕೊಂಡು ಹೋಗುವಂತೆ ಮಾಡುತ್ತಾನೋ ಮತ್ತು ಯಾವನು ಪ್ರೆಸೀಡೆಂಟರಿಂದ ನಿಷ್ಕರ್ಷೆ ಯಾಗಿರಲಿ ಆಗದೆ ಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರದಂತೆ ತಕ್ಕ ಮುಚ್ಚಳವಿಲ್ಲದೆ ಯಾವದಾದರೂ ಬಂಡಿ ಯಾನಸಾಧನ ಯಾ ಯಿತರ ಆಧಾರ ಯಾ ಪಾತ್ರ ಯಿಂತಾದ್ದನ್ನು ಅಂತಾ ಯಾವ ಕಾರ್ಯಕ್ಕೋಸ್ಕರವಾಗಿ ಉಪಯೋಗಿಸುತ್ತಾನೋ ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗೆಸಿಕ್ಕೊಂಡು ಹೋಗುವಲ್ಲಿ ಅದನ್ನು ಕೆಳಗೆ ಚಲ್ಲುತ್ತಾನೋ ಯಾ ಸುರಿಯುತ್ತಾನೋ, ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲವಾದರೂ ಚೆಲ್ಲಿದ ಅಥವಾ ಬಿದ್ದಕಡೆಯಲ್ಲೆಲ್ಲಾ ಅದನ್ನು ಚನ್ನಾಗಿ ಗುಡಿಸಿ ಸಾಫುಮಾಡುವದಿಲ್ಲವೋ, ಯವನು ಮೇಲೆ ಕಂಡ ಯಾವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ ಯಾನ ಸಾಧನ ಆಧಾರ ಯಾ ಪಾತ್ರ ಇಂತಾದ್ದನ್ನು ಪ್ರೆಸೀಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟಿಸಮೂಲಕ ಸದರೀ ಬಗ್ಯೆ ಮೊಕರರ್ ಮಾಡುವ ಬೀದಿ, ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡೆಯುತ್ತಾನೋ, ಯಾ ತೆಗದುಕ್ಕೊಂಡು ಹೋಗುತ್ತಾನೋ, ಅಥವಾ ಹೊಡೆಯುವಂತೆ ಯಾ ತೆಗದು ಕ್ಕೊಂಡು ಹೋಗುವಂತೆ ಮಾಡುತ್ತಾನೋ. ಅಂಥಾ ಮನುಷ್ಯನು 5 ರೂಪಾಯಿಗ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

39. ಈ ಉಪನಿಬಂಧನೆಗಳಿಂದ ಉಂಟು ಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಕಶ್ಮಲವನ್ನು ಹಾಕಿ ಇಡುವ ಬಗ್ಯೆ, ಮಲ, ಸಗಣಿ, ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ, ಮತ್ತು ಈ ಉಪನಿಬಂಧನೆಗಳ ಬಾಬತು ಮೇಲೆ ಕಂಡ ಕಾರ್ಯಗಳಿಗಾಗಲಿ, ಆಪೈಕಿ ಯಾವ ಕಾರ್ಯಗಳಿಗಾಗಲಿ ಬೇಕಾದ ದರೋಬಸ್ತು ಜಾರ್ವಾರ್‌ಗಳನ್ನೂ, ಬಂಡಿಗಳನ್ನೂ, ಸಾಧನಗಳನ್ನೂ, ಇತರ ವಸ್ತುಗಳನ್ನೂ, ಇಡುವ ಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಮೆಂಬರ್‌ಗಳು, ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು. ಯಾ ಒದಗಿಸತಕ್ಕದ್ದು, ಮತ್ತು ಅಂತಾ ಯಾವ ಕಾರ್ಯಕ್ಕೋಸರವಾಗಲಿ ಮೆಂಬರ್‌ಗಳು, ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು, ಯಾ ಬಾಡಿಗ್ಯೆ ತೆಗದು ಕೊಳ್ಳಬಹುದು, ಅಥವಾ ತಮ್ಮಿಂದ ಕೊಂಡುಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದು ಕೊಳ್ಳತಕ್ಕ ಯಾವ ಜಮೀನಲ್ಲಾಗಲಿ ಯಾವ ಹೊಸ ಕಟ್ಟಡವಾದರೂ ಕಟ್ಟಿಸಲ್ಪಡುವಂತೆ ಮಾಡಬಹುದು.

40. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ, ಅದರ ಸಮೀಪದಲ್ಲಾಗಲಿ, ಪ್ರತಿ ಮನೆಯವಾಸಸ್ಥನೂ, ತನ್ನ ವತಾರದಿಂದ, ಮಲವಗೈರೇ ತೆಗದು ಕ್ಕೊಂಡು ಹೋಗುವ ಬಗ್ಯೆ ಮ್ಯುನಿಸಿಪಲ್ ಮೆಂಬರ್‌ಗಳಿಂದ ಒದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ, ಸಗಣಿಯನ್ನೂ, ಇತರ ಕಚರೇಯನ್ನೂ ಮ್ಯುನಿಸಿಪಲ್ ಮೆಂಬರ್‌ಗಳು ನಿಯಮಿಸುವ ಕಾಲದಲ್ಲಿಯೂ, ಅಂತಾ ರೀತಿಯಾಗಿಯೂ ಸಾಗಿಸುವದು ಅವನ ಕಾರ್ಯವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರ ಕಚರೆ ಇಂತಾದ್ದನ್ನು ಸಾಗಿಸಿಕ್ಕೊಂಡು ಹೋಗಬೇಕೆಂದು ಖಾಯಿಷ್ ಮಾಡಿದಲ್ಲಿ ಈ ಬೈಲಾನಿಬಂಧನೆಗಳ 38ನೇ ಸೆಕ್ಷನ್ ನಿಬಂಧನೆಗಳಿಗೆ ಅನುಗುಣವಾಗಿ ಆ ಮೇರೆ ಮಾಡುವದು ಅವನ ಎಖ್ತ್ಯಾರೀ ಮೇಲೆ ಇರತಕ್ಕದ್ದು.

41. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದಿನೊಳಗೆ ಯಿರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರದಲ್ಲಿ ಅಲ್ಲದೆ ಅನ್ಯಥಾ 24 ಗಂಟೆಗಳಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರಾ, ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಯಿಂತಾದ್ದನ್ನು ಅಂತಾ ಯಾವದಾದರೂ ಮನೆಗಳ ಛಾವಣೀಯಲ್ಲಿ ಯಾ ಛಾವಣಿಯ ಮೇಲೆ ಅಥವಾ ಅಂತಾ ಮನೆಗೆ ಸೇರಿದ ಮತ್ತು ಅಂತಾ ಮನೆಯ ವಾಸಸ್ಥನಿಂದ ವಾಸ ಮಾಡಲ್ಪಡುವ ಯಾವ ಔಟ್ ಹೌಸ್ ವಗೈರೆಯ ಛಾವಣೀ ಯೊಳಗೆ ಯಾ ಅದರ ಮೇಲ್ಗಡೆ, ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ ಯಿಡುತ್ತಾನೋ ಯಾ ಯಿಡಗೊಡಿಸುತ್ತಾನೋ ಅಂತಾವನು 2 ಆಣೆಗಳು ಲಾ॥ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

42. ಝಾಡ್ ಮಾಲೀರಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ಏಜಂಟರ ಮಾರಿಫತ್ ಮಾಡಿಸುತ್ತೇವೆಂತ, ಯಾವ ಮನೆಯ ವಾಸಸ್ಥನಿಗಾಗಲಿ, ವಾಸಸ್ಥರಿಗಾಗಲಿ, ಯಿದರ ಹಿಂದಿನಕಡೇ ಸೆಕ್ಷನ್‌ಗಳನ್ನು ಅನುಸರಿಸಿ ನೋಟಿಸ್ ಕೊಡೋಣವೂ, ಮತ್ತು ಈ ಬಗ್ಯೆ ಸಾಕಾದಷ್ಟು ಮಂದಿ ಝಾಡ್‌ಮಾಲೀಗಳನ್ನು ಯಿಡುವಣವೂ, ಮೆಂಬರ್‌ಗಳ ಕಾರ್ಯವಾಗಿರತಕ್ಕದ್ದಲ್ಲದೆ. ಯಾವ ಮನೆಯನ್ನು ಗುಡಿಸುವಕೆಲಸವು ಹಾಗೆ ಅವರುಗಳಿಂದ ವಹಿಸಲ್ಪಡುತ್ತೋ ಅಂತಾ ಪ್ರತಿ ಮನೆಗೂ, ಆ ಮನೆಯ ವಾಸಸ್ಥರು ಸಾಧಾರಣವಾದ ಒಬ್ಬ ಝಾಡ್ ಮಾಲೀಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದೋ ಅಷ್ಟಕ್ಕೆ ಜಾಸ್ತೀಯಿಲ್ಲದಂತೆ ಒಂದು ತೀರ್ವೆ ಮೊಕರರ್ ಮಾಡುವದು ಅವರುಗಳಿಗೆ ನ್ಯಾಯ್ಯವಾಗಿರತಕ್ಕದ್ದು.

43. ಮೆಂಬರ್‌ಗಳ ಹುಕ್ಕುಂ ಅನುಸರಿಸಿ ಬೀದಿಗಳಲ್ಲಿಯೂ ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ. ಜಲದಾರೆಗಳಲ್ಲಿಯೂ, ಬಚ್ಚಲು ತೊಟ್ಟಿಗಳಲ್ಲಿಯೂ, ಜಮಾಯಿಸಲ್ಪಡುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲದಾರೆ, ರೊಚ್ಚು, ಮಣ್ಣು ಸಗಣಿ, ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕವು; ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೇಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು-ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳೀ ಯಾಗುವ ಹಣವು ಈ ಬೈಲಾ ನಿಬಂಧನೆಗಳ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

44. ಮೆಂಬರ್‌ಗಳು ತಮ್ಮಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ್ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತ ಕೆಲಸಗಳನ್ನೂ, ಯಂತ್ರಗಳನ್ನೂ ಒದಗಿಸಬಹುದು.

45. ಮೆಂಬರುಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಪಬ್ಲಿಕ್ ಬೀದಿಗಳು, ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಅವಶ್ಯಕವೆಂದು ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ತೋರುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಒದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮದಲ್ಲಿ ಇಡಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಒರಸಿ ಪಾಕ್ ಮಾಡುವದು, ಸಿದ್ಧ ಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಮೆಂಬ

ರಿಗಳು ಆಗಿಂದಾಗ್ಗೆ ತಮಗೆ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ಜಾಸ್ತೀ ಮಾಡಬಹುದು, ಅಥವಾ ಬೇರೇ ವಿಧವಾಗಿ ಬದಲಾವಣೇ ಮಾಡಬಹುದು.

46. ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದತರುವಾಯ ಯಾವ ಪಬ್ಲಿಕ್ ಬೀದಿಯಲ್ಲಿಯಾಗಲಿ ರಸ್ತೆಯಲ್ಲಿಯಾಗಲಿ ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾಯಿರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ ಇಂತಾದ್ದರಲ್ಲಿಯಾಗಲಿ, ಇಂತಾದ್ದರಮೇಲೆಯಾಗಲಿ ಯಾವನು ಯಾವದಾದರೂ ಗೋಡೆ ಹಾಕುತ್ತಾನೋ ಅಥವಾ ಯಾವ ಆವರಣ ಮುಂತಾದ್ದನ್ನು ಯಾ ಇತರ ನಿರೋಧವನ್ನು, ಯಾ ಒತ್ತುವರಿಯನ್ನು ಕಟ್ಟುತ್ತಾನೋ ಯಾ ಇಡುತ್ತಾನೋ ಅಂತಾವನು ಯೆರಡಾಣೆಲಾಗಾಯಿತು ಐದುರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಮೆಂಬರ್‌ಗಳು ಅಂತಾ ಯಾವ ನಿರೋಧವನ್ನಾಗಲಿ, ಒತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಹಾಗೆ ತೊಲಗಿಸುವದರ ಲಾಗವಡು ಸದರೀ ಅಟಕಾವ್ ವಗೈರೆ ಉಂಟುಮಾಡಿದ ಮನುಷ್ಯನು ಕೊಡತಕ್ಕದ್ದಾಗಿ, ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು. ಪೋಲೀಸ್‌ಸೂಪರಿಂಟೆಂಡೆಂಟರ ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಿ ಆಗಲಿ ಉತ್ಸವ ಮದಿವೆ ಮುಂತಾದ ಸಮಯಗಳಲ್ಲಿ ಹಂಗಾಮಿಯ್ನಾಗಿ ಯಾವದಾದರೂ ಕಟ್ಟುವದಕ್ಕೆ ಅಪ್ಪಣೆ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿರುವ ಯಾವ ಅಂಶವೂ ಮೆಂಬರ್‌ಗಳನ್ನು ಆತಂಕಪಡಿಸತಕ್ಕದ್ದಲ್ಲವು.

47. ಯಾವನು ಯಾವ ಪಬ್ಲಿಕ್ ಬೀದಿಯ, ರಸ್ತೆಯ, ತಳವರಿಸೇ ಕಲ್ಲುಗಳನ್ನಾಗಲಿ, ಚಾಪು ಕಲ್ಲುಗಳನ್ನಾಗಲಿ ಇತರ ಸಾಮಾನುಗಳನ್ನಾಗಲಿ, ಅಥವಾ ಆವರಣಗಳು, ಕಂಭಗಳು, ಇಂತಾವುಗಳನ್ನಾಗಲಿ, ಪಬ್ಲಿಕ್ ದೀಪಸ್ತಂಭಗಳನ್ನಾಗಲಿ, ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತೀ ಯಿಲ್ಲದೆ ಅಥವಾ ಯಿತರ ನ್ಯಾಯವಾದ ಅಧಿಕಾರವಿಲ್ಲದೆ ಕೆಡಿಸುತ್ತಾನೋ, ಸ್ಥಳ ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ, ಅವುಗಳಲ್ಲಿ ಯೇನಾದರೂ ಬದಲಾವಣೇ ಮಾಡುತ್ತಾನೋ ಅಂತಾವನು ಯೆರಡಾಣೇಲಾಗಾಯಿತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

48. ಯಾವ ಬೀದಿಯು ಯಾವ ಹೆಸರಿನಲ್ಲಿ ತಿಳಿಯಲ್ಪಡತಕ್ಕದ್ದೋ ಆ ಹೆಸರನ್ನು ಪ್ರೆಸೀಡೆಂಟರು ಆಗಿಂದಾಗ್ಗೆ ಪ್ರತಿ ಬೀದಿಯ ಯೆರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂಥಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾದರೂ ಕಟ್ಟಡ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಇಡಿಸಬಹುದು, ಯಾ ಕಟ್ಟಿಸಬಹುದು; ಮತ್ತು ಯಾವನು ಅಂತಾ ಹೆಸರನ್ನು ನಾಶಪಡಿಸುತ್ತಾನೋ ಕಿತ್ತುಹಾಕುತ್ತಾನೋ ಕೆಡಿಸುತ್ತಾನೋ ಅಥವಾ ಪ್ರೆಸೀಡೆಂಟರ ಅಪ್ಪಣೇಮೇಲೆ ಇಡಲ್ಪಟ್ಟ ಹೆಸರು ಶಿವಾಯಿ ಬೇರೆ ಹೆಸರು ಯಿಡುತ್ತಾನೋ ಅಂತಾವನು ಯರಡಾಣೇ ಲಾಗಾಯತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

49. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟಡವಾದರೂ, ಗೋಡೆಯಾದರೂ, ಅದಕ್ಕೆ ಸೇರಿಸಲ್ಪಟ್ಟ ಮತ್ತೇನಾದರೂ, ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವಹಾಗೆ ಯಿರುವದಾಗಿ, ಅಥವಾ ಅಂತಾ ಕಟ್ಟಡದ ವಾಸಸ್ಥರಿಗೆ ಯಾ ಆಸಪಾಸ ಕಟ್ಟಡಗಳಿಗೆ ಯಾ ಅವುಗಳ ವಾಸಸ್ಥರಿಗೆ, ಯಾ ಅನುಭವದಾರರಿಗೆ ಯಾ ಬೀದೀಯಲ್ಲಿ ಹೋಗತಕ್ಕವರಿಗೆ ಯಾವರೀತಿಯಿಂದಲಾದರೂ ಅಪಾಯಕರವಾಗುವದಾಗಿ ಪ್ರೆಸೀಡೆಂಟರಿಗೆ ತೋರಬಂದರೆ, ಸದರೀ ಪ್ರಸೀಡೆಂಟರು ತಮಗೆ ಜರೂರ ತೋರಿದರೆ, ಬೀದಿಯಲ್ಲಿ ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಹಲಿಗೆಯನ್ನೂ ಯಾ ಆವರಣವನ್ನೂ, ಕೂಡ್ಲೇ ಹಾಕಿಸತಕ್ಕದ್ದು. ಮತ್ತು ಮಾಲೀಕನು ಫಲಾನೇ ಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವನಾಗಿ ಯಿದ್ದಲ್ಲಿ, ಅವನಿಗೆ ಬರವಣಿಗೇ ಮೂಲಕ ನೋಟಿಸ ಕೊಡಿಸತಕ್ಕದ್ದಲ್ಲದೇ ಅಂತಾ ನೋಟಿಸನ್ನು ಅಂತಾ ಕಟ್ಟಡ ವಗೈರೆಯ ಬಾಗಲಿಗಾಗಲಿ, ಯಿತರ ಪ್ರಸಿದ್ಧವಾದ ಭಾಗದೊಳಗಾಗಲಿ, ಚಿಕಟಾಯಿಸತಕ್ಕದ್ದು, ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡತಕ್ಕದರಲ್ಲಿ ಸಂದರ್ಭಾನುಸಾರ, ಅಂತಾ ಕಟ್ಟಡವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೂಡ್ಲೇ ತೆಗದು ಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತು ಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿಗೆ ತಾಕೀದ್ ಮಾಡತಕ್ಕದ್ದು, ಮತ್ತು ಅಂತಾ ಮಾಲೀಕ ಯಾ ವಾಸಸ್ತನು, ಅಂತಾ ನೋಟಿಸ್ ಕೊಟ್ಟ ಮೂರುದಿವಸಗಳೊಳಗಾಗಿ, ಸದರೀ ಕಟ್ಟಡವನ್ನು ರಿಪೇರ್ ಮಾಡಲಿಕ್ಕೆ ಯಾ ಕಿತ್ತು ಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಷುರು ಮಾಡಿ ಯುಕ್ತವಾದ ಮುತವಜ್ಜೀಯಿಂದ ಪೂರೈಸದೇ ಹೋದಲ್ಲಿ ಪ್ರೆಸೀಡೆಂಟರು, ಸದರೀ ಕಟ್ಟಡ, ಗೋಡೆ, ಯಾ ಯಿತರ ವಸ್ತು ಯಿಂತಾದ್ದರ ಪೈಕೀ ವಿಶಿಷ್ಟವನ್ನಾಗಲಿ, ತಾವು ಜರೂರೆಂದು ಭಾವಿಸುವಷ್ಟು ಭಾಗವನ್ನಾಗಲಿ, ಕಿತ್ತು ಹಾಕಿಸತಕ್ಕದ್ದು, ಯಾ ರಿಪೇರ್ ಮಾಡಿಸತಕ್ಕದ್ದು, ಯಾ ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀ ಕಟ್ಟಡದ ಸಾಮಾನುಗಳನ್ನು ಸದರೀ ಬಗ್ಗೆ ತಮಗೆ ಯುಕ್ತ ತೋರುವ ಪ್ರಕಾರ ಉಪಯೋಗಿಸಬಹುದು, ಮತ್ತು ಆಬಗ್ಗೆ ಹಿಡಿದ ದರೋಬಸ್ತು ಲಾಗವಡೂ ಸದರೀ ಕಟ್ಟಡ ಮುಂತಾದವುಗಳ ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

50. ಮೇಲೆ ಕಂಡ ಅಧಿಕಾರ ಬಲದಿಂದ ಅಂತಾ ಯಾವ ಕಟ್ಟಣವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತುಹಾಕಲ್ಪಟ್ಟಲ್ಲಿ, ಮೆಂಬರ್‌ಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಯೆಷ್ಟು ಕಿತ್ತು ಹಾಕಲ್ಪಡುತ್ತೋ ಅಷ್ಟನ್ನು, ಹರಾಜ್ ಹಾಕಿಸಿ ಅಂತಾ ಹರಾಜ್ ಹುಟ್ಟುವಳೀ ಹಣವನ್ನು, ಕಿತ್ತುಹಾಕಿದ ಲಾಗವೆಡನ್ನ ಕೊಡತಕ್ಕ ಬಗ್ಗೆ, ವಿನಿಯೋಗಿಸಬಹುದು. ಅಂತಾ ವಿಕ್ರಯದ ಮೊಬಲಗಿನ ಪೈಕೀ ಖರ್ಚು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟಣದ ಯಾ ಗೋಡೆಯ ಮಾಲೀಕನು ಹರಾಜ್ ತಾರೀಖು ಲಗಾಯ್ತ್ ಆರು ತಿಂಗಳೊಳಗಾಗಿ ಬಂದು ಕೇಳಿದರೆ ಅವನಿಗೆ ಕೊಟ್ಟುಬಿಡತಕ್ಕದ್ದೇಹೊರತು ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು. ಮೆಂಬರ್‌ಗಳು, ಅಂತಾ ಸಾಮಾನುಗಳನ್ನು ಮೇಲೆಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸಿದಾಗ್ಯೂ, ಸದರೀ ಲಾಗವಡಿನ ವಿಶಿಷ್ಟ ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಬೈಲಾ ನಿಬಂಧನೆಗಳ ದೆಸೆಯಿಂದ ಯಾವ ಪರಿಹಾರ ಉಂಟುಮಾಡಲ್ಪಟ್ಟಿರುತ್ತೋ ಮೇಲೆಕಂಡ ಹರಾಜ್‌ನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ್ದು ಜಾತಾ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೂ ಅದೇ ಪರಿಹಾರ ವುಂಟಾಗಿರತಕ್ಕದ್ದು.

51. ಮ್ಯುನಿಸಿಪೆಲ್ ಕಮಿಷ್ಷನಿನ ಪ್ರೆಸೀಡೆಂಟರು, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ, ತಾವಾದರೂ, ತಮ್ಮ ನೌಕರರ ಮಾರೀಫತ್ತಾದರೂ, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟಮೇಲೆ ದರೋಬಸ್ತು ಕಟ್ಟಗಳೊಳಗೂ, ಪ್ರವೇಶಿಸಿ ನೋಡುವದು, ವಿಶಿಷ್ಟ ಕಟ್ಟವಾಗಲಿ, ಯಾವ ಭಾಗವಾಗಲಿ, ಆರೋಗ್ಯಕ್ಕೋಸ್ಕರ ಕೂಡ್ಲೆ ಒಳಗೂ ಹೊರಗೂ ಸುಣ್ಣ ಬಳಿಸಲ್ಪಡುವಂತೆ ಅಥವಾ ಯಿತರ ರೀತಿಯಿಂದ ಪಾಕ್ ಮಾಡುವಂತೆ ಬರವಣಿಗೇ ಮೂಲಕ ಹುಕ್ಕುಂ ಕೊಡುವದು ಸಹ ಅವರಿಗೆ ನ್ಯಾಯ್ಯವಾಗಿರತಕ್ಕದ್ದು. ಅಂತಾ ಕಟ್ಟದ ಮಾಲೀಕ ಯಾ ವಾಸಸ್ಥನು ತನಗೆ ಅಂತಾ ಹುಕ್ಕುಂ ಕೊಡೋಣಾದ್ದು ಮೊದಲು ಯೆಂಟುದಿನಗಳೊಳಗಾಗಿ ಆ ಮೇರೆ ಪಾಕ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ, ಪ್ರೆಸೀಡೆಂಟರು ಆ ಕೆಲಸ ಮಾಡಿಸಬಹುದು, ಮತ್ತು ಆಬಗ್ಗೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಮ್ಯುನಿಸಿಪೆಲ್ ಇಲಾಖೆಯ ಸ್ಯಾನಿಟೆರಿ ಯಿನ್ಸ್‌ಪೆಕ್ಟರ್ ಎಂಬ ಅಧಿಕಾರಿಯು ರೋಗ ನಿಮಿತ್ತಗಳಾದ ಕಟ್ಟಗಳನ್ನು, ಹೊಗೆ ಹಾಕಿಸುವ ಬಗ್ಗೆ ಅಥವಾ ರೋಗ ವ್ಯಾಪನೆಯ ನಿಮಿತ್ತವನ್ನು ನಿವರ್ತಿ ಮಾಡುವ ಬಗ್ಗೆ ಮುಚ್ಚಿಸತಕ್ಕದ್ದು. ಪ್ರೆಸೀಡೆಂಟರ ಬರವಣಿಗೆಯ ಮೂಲಕ ಮಂಜೂರಾತಿಯನ್ನು ಅನುಸರಿಸಿ ಅಂತಾ ಕ್ರಮಗಳನ್ನು ಏರ್ಪಡಿಸತಕ್ಕದ್ದು.

52. ಯಾವ ಕಟ್ಟವಾದರೂ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಒಂದು ವಕ್ಕಲಿಗಿಂತ ಹೆಚ್ಚಾಗಿ ಇರುವಾಗ ಮ್ಯುನಿಸಿಪೆಲ್ ಬೋರ್ಡಿನ ಪ್ರೆಸೀಡೆಂಟರಿಗೆ ಸ್ಯಾನಿಟೇರಿ ಇನ್ಸ್‌ಪೆಕ್ಟರವರು ಸರಟಫೈ ಮಾಡುವಲ್ಲಿ, ಪ್ರೆಸೀಡೆಂಟರು, ಅಂಥಾ ಜನ ಸಮ್ಮರ್ದವನ್ನು ತಗ್ಗಿಸುವಬಗ್ಗೆ ಮಾಜಿಸ್ಟ್ರೇಟರಲ್ಲಿ ನಡವಳಿತ ನಡಿಸತಕ್ಕದ್ದು. ಮಾಜಿಸ್ಟ್ರೇಟರು ಅದರ ಮೇಲೆ ತಮಗೆ ಯುಕ್ತತೋರುವ ಹುಕ್ಕುಂ ಕೊಡತಕ್ಕದ್ದು. ಅಂತಾ ಜನ ಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕ್ಕುಂ ತಾರೀಖು ತರುವಾಯ ಹಾಗೆ ಜನ ಸಮ್ಮರ್ದವಿರುವ ಪ್ರತಿದಿನಕ್ಕೂ, ಒಂದು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

53. ಯಾವದಾದರೂ ಜಮೀನಿನಲ್ಲಿರತಕ್ಕ ಬೇಲೀಗಳು ಭೂಮಿಯಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಹಾಗೆ ಅವುಗಳನ್ನು ಕತ್ತರಿಸುವಂತೆ, ಯಾ ಕೊಂಬೆಗಳು ಕಡಿಯುವಂತೆ, ಮತ್ತು ಯಾವದಾದರೂ ಪಬ್ಲಿಕರಸ್ತೆ ಅಥವಾ ಬೀದಿಯಮೇಲೆ ವಾಲಿಇರುವದರಿಂದ ದಾರಿಗೆ ಅಟಕಾವ್‌ಆಗುವಂತಾ, ಅಥವಾ ಲುಕ್ಸಾನ್ ಆಗುವಂತಾ, ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುತಿದ್ದರೆ, ಅಂತವನಿಗೂ, ಅದರ ಅನುಭವದಾರನಿಗೂ, ಪ್ರೆಸೀಡೆಂಟರು ಬರವಣಿಗೆಯ ಮೂಲಕ ನೋಟಿಸ್ ಕೊಡಬಹುದು. ಅಂತಾ ನೋಟಿಸ್‌ನಲ್ಲಿ ಕಂಡ ತಾರೀಖುಲಾಗಾಯತ್ ಎಂಟುದಿನಗಳೊಳಗಾಗಿ, ಅದರಂತೆ ನಡೆಯದೆ ಇದ್ದ ಪಕ್ಷಕ್ಕೆ ಮಾಲೀಕನಾಗಲಿ, ಅನುಭವದಾರನಾಗಲಿ, ಮಾಜಿಸ್ಟ್ರೇಟರಮುಂದೆ ತಕಸೀರ್ ಆಪಾದನೆಪಟ್ಟು 2 ರೂಪಾಯಿಗಳ ಲಗಾಯತ್ 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಮತ್ತು ಅಂತಾ ತಕಸೀರಿಗಾಗಿ ಆಪಾದನೆ ಆದಮೇಲೆ ಸದರೀ ತಕಸೀರ್ ನಡೆಯುತ್ತಿರುವ ಪ್ರತಿದಿನಕ್ಕೂ, ಒಂದುರೂಪಾಯಿ ಮೊದಲು ಹತ್ತು ರೂಪಾಯಿಗಳ ವರಿಗೆ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

54. ಕ್ರಮಪ್ರಕಾರ ನೋಟಿಸ್ ಕೊಡಲ್ಪಟ್ಟತರುವಾಯ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸೀಡೆಂಟರಿಂದ ಲೈಸೆನ್ಸ್ ಪಡೆಯದೆ ಮ್ಯುನಿಸಿಪೆಲ್ ಸರಹದ್ದಿನೊಳಗೆ ಒಂದು ಸ್ಥಳದಲ್ಲಿ ಯಾವದಾದರೂ ಬಾಡಿಗೇ ಕುದುರೆಗಳ ಯಾ ಬಂಡಿಗಳ ತವೇಲೀಗಳು, ಕುದುರೆಲೈನ್‌ಗಳು, ಕುದುರೇ ಚಿಕಿತ್ಸೇಶಾಲೆಗಳು ಬಂಡಿಮಿಟ್ಟೆಗಳು, ದನಗಳ ಕೊಟ್ಟಿಗೆಗಳು ಅಥವಾ, ಪಬ್ಲಿಕ್ಕಾಗಿಬಂದು ಇಳಿದುಕ್ಕೊಳ್ಳುವಬಗ್ಗೆ ಇಡೋಣಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ, ಮೇಕೆ, ಯಾ ಹತ್ತಕ್ಕೆ ಮೀರಿದ ಕೊಂಬುಗಳುಳ್ಳ ಜಾನವರಗಳು ಇಂತಾವುಗಳಿಗೆ ಸ್ವಂತಗಾರನಾಗಿರುವ, ಯಾ ಇವುಗಳನ್ನು ಇಟ್ಟು ಇರುವ ಯಾವನಾಗಲಿ 2 ಆಣೆಗಳಮೊದಲು, 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಅಂತಾ ತಕಸೀರಿಗಾಗಿ ಆಪಾದನೆಆದಮೇಲೆ ಅಂತಾ ತಕಸೀರ್ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 1 ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

55. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸಿಡೆಂಟರ ಅಭಿಪ್ರಾಯ ಪ್ರಕಾರ ಆಸಪಾಸ ಜನಗಳಿಗೆ ಬಾಧಕವಾಗುತ್ತೆಂದು ತೋರುವ ಯಾವ ಹಂದಿಗಳನ್ನಾಗಲಿ ಯಾವನು ಇಡುತ್ತಾನೋ ಅವನು 2 ಆಣೆಗಳ ಮೊದಲು 5 ರೂಪಾಯಿಗಳ ವರೆಗೆ ಬಂದು ಜುರ್ಮಾನೆಗೂ, ಅಂತಾ ತಕ್ಸೀರ ಸ್ಥಾಪನೆಯಾದ ಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 5 ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದಲ್ಲದೆ, ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸಿಡೆಂಟರ ಹುಕ್ಕುಂ ನಿಂ, ಯಾವ ನುಕ್ಸಾನ್ ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಪೂರಾಗಿ ಕೊಂದು ಹಾಕ ಬಹುದು.

56. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ, ಯಾ ಅವುಗಳ ಮಾರ್ಗವಾಗಿ, ಯಾ ಕೆಳಗಡೆಗೆ, ಇರುವಂತಾ, ಅಥವಾ ತರುವಾಯ ಕಲ್ಪಿಸಲ್ಪಡುವಂತಾ ದರೋಬಸ್ತು ಪಬ್ಲಿಕ್ ಬಚ್ಚಲುಗಳು, ಚರಂಡೀಗಳು, ಮತ್ತು ತಮಾಂ ಬಚ್ಚಲುಗಳು, ಚರಂಡೀಗಳು, ನಲ್ಲೀಗಳು, ಮೊಹರೀಗಳು ಸಹ ಮೆಂಬರಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿರಲಿ, ಅನ್ಯಥಾ ಆದ್ದಾಗಿರಲಿ, ಅಂತಾ ಕೆಲಸಗಳು, ಅವುಗಳಿಗೆ ಸಂಬಂಧಿಸಿದ ದರೋಬಸ್ತು ಕೆಲಸಗಳು ಸಾಮಾನುಗಳು, ಪದಾರ್ಥಗಳು ಮೆಂಬರುಗಳ ವಶದಲ್ಲಿಡಲ್ಪಟ್ಟು ಅವರಿಗೆ ಸೇರಿದ್ದಾಗಿರತಕ್ಕದ್ದು.

57. ಮ್ಯುನಿಸಿಪಲ್ ಸರಹದ್ದುಗಳ ಜಲಧಾರೇ ನೀರು ಹರಿಯುವ ಬಗ್ಯೆ ಯಾವದಾದರೂ ಮುಖ್ಯ ಮೊಹರೀಗಳನ್ನಾಗಲಿ, ಇತರ ಮೊಹರೀಗಳನ್ನಾಗಲಿ ಮಾಡಿಸುವಲ್ಲಿ ಮೆಂಬರಗಳು, ಜರೂರಿದ್ದರೆ, ಯಾವದಾದರೂ ಬೀದಿಯ ಅಥವಾ ರಸ್ತೆಯ ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಉದ್ದೇಶಿಸಲ್ಪಟ್ಟ, ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ, ಆವರಣ ಕಲ್ಪಿಸಲ್ಪಟ್ಟ ಯಾ ಇತರ ವಿಧವುಳ್ಳ ಜಮೀನಿನಲ್ಲಿ, ಅದರ ಮಾರ್ಗವಾಗಿ ಯಾ ಕೆಳಗಡೆಗೆ ಇರುವ ಯಾವದಾದರೂ ನೆಲಮಾಳಿಗೆ ಕಮಾನ ಬಗ್ಗಿಸಿಯಿರುವ ನೆಲಮಾಳಿಗೆ ಇಂತಾದ್ದರ ಮಾರ್ಗವಾಗಿ, ಯಾ ಅಡ್ಡವಾಗಿ ಯಾ ಕೆಳಗಡೆಗೆ, (ಆ ವಿಷಯವನ್ನು ಕುರಿತು ತಕ್ಕವಾಯಿದೆನಿಶೀ ಬರವಣಿಗೇ ಮೂಲಕ ನೋಟಿಸ ಕೊಡಲ್ಪಟ್ಟ ತರುವಾಯ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದುಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿಕೊಡತಕದ್ದು ಅಂತಾ ಈಡು ಮೊಬಲಗ ವಿಷಯದಲ್ಲಾಗಲಿ ಅದನ್ನು ಹಂಚಿಕೆ ಮಾಡಿಕೊಡುವ ಅಂಶದಲ್ಲಾಗಲಿ ಯೇನಾದರೂ ತಕರಾರ ಉಂಟಾದ ಪಕ್ಷಕ್ಕೆ ನುಕ್ಸಾನ ವ ಲಾಗವಡುಗಳು ಇವುಗಳನ್ನು ಕುರಿತು ತಕರಾರ ವ್ಯವಸ್ಥೆ ಬಗ್ಯೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟರೀತಿಯಾಗಿ ಫೈಸಲ್ ಆಗತಕ್ಕದ್ದು.

58. ಈ ಬೈಲಾನಿಬಂಧನೆಗಳ ದೆಸೇಯಿಂದ ತಮ್ಮ ಸುಪರ್ದಮಾಡೋಣಾದ ಬಚ್ಚಲುಗಳು, ಯಾ ಚರಂಡೀಗಳು, ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ದುರಸ್ತು ಪಡಿಸತಕ್ಕದ್ದು. ಮತ್ತು ತಮಗೆ ಯುಕ್ತ ತೋರುವ ಮೇರೆ ವಿಸ್ತಾರಪಡಿಸತಕ್ಕದ್ದು, ಬದಲಾವಣೆಮಾಡತಕ್ಕದ್ದು, ಯಾ ಮೇಲ್ಗಡೆ ಕಮಾನ ಕಟ್ಟಿಸತಕ್ಕದ್ದು ಯಾ ಇತರ ವಿಧದಿಂದ ಅಭಿವೃದ್ಧಿ ಮಾಡಕ್ಕದ್ದು, ಮತ್ತು ಆ ಪೈಕಿ ಯಾವ ಭಾಗ ತಮಗೆ ನಿಷ್ಪ್ರಯೋಜಕವೆಂತಲೂ ಅನಾವಶ್ಯಕವೆಂತಲೂ, ತೋರುತ್ತೋ ಆ ಭಾಗವನ್ನು ಮೌಕೂಫ್ ಮಾಡಬಹುದು, ಮುಚ್ಚಿ ಸಿಬಿಡಬಹುದು ಯಾ ನಾಶಮಾಡಬಹುದು, ಪರಂತು, ಈ ಸೆಕ್ಷನ ಅನುಸರಿಸಿ ಯಾವ ಅಂಶವಾಗಲಿ ಮಾಡಲ್ಪಟ್ಟತೆಂಬ ಸಬಬಿನ ಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯ್ಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟರೆ ಮೆಂಬರಗಳು ತಮ್ಮ ಬಚ್ಚಲುಗಳ ನೀರು ಯಾವ ಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡೆದಿರುತ್ತಾರೋ ಅಂತಾ ಯಾವದ್ದಾದರೂ ಪಬ್ಲಿಕ್ ಬಚ್ಚಲಿನಲ್ಲಿಯಾಗಲಿ ಇತರ ಸ್ಥಳದಲ್ಲಿಯಾಗಲಿ, ಸದರೀ ಬಚ್ಚಲು ನೀರು ಹರಿಯುವ ಬಗ್ಯೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

59. ಮೆಂಬರಗಳು ತಮಗೆ ಸೇರಿದ ಬಚ್ಚಲುಗಳೂ ಚರಂಡೀಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಇರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಇಡಿಸತಕ್ಕದ್ದು. ಮತ್ತು ಕ್ರಮ ಪ್ರಕಾರ ಪಾಕ್ ಮಾಡಿಸತಕ್ಕದ್ದು, ಶೋಧಿಸತಕ್ಕದ್ದು, ಮತ್ತು ಖಾಲೀ ಮಾಡಿಸತಕ್ಕದ್ದು. ಸದರೀ ಬಚ್ಚಲುಗಳನ್ನು ನೀರು ವಾಟಮಾಡಲಿಕ್ಕೂ ಶುದ್ಧಪಡಿಸಲಿಕೂ, ಖಾಲೀ ಮಾಡಲಿಕ್ಕೂ ಭೂಮಿಯ ಮೇಲಾಗಲಿ, ಕೆಳಗಾಗಲಿ, ಜರೂರಾದ ತೊಟ್ಟಿ ವಗೈರೆಗಳನ್ನು ತೂಬುಗಳನ್ನೂ, ಯಂತ್ರಗಳನ್ನೂ, ಮತ್ತು ಜರೂರಾದ ಇತರ ಕೆಲಸಗಳನ್ನೂ ಅವರು ಕಟ್ಟಿಸಬಹುದು. ಇಡಿಸಬಹುದು, ಮತ್ತು ಚೀಪ ಕಮ್ಮಿಷನರವರ ಮಂಜೂರಾತೀನಿಂ ಅಂತಾ ಬಚ್ಚಲುಗಳು, ಯಾ ಚರಂಡಿಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ, ಯಾವದಾದರೂ ತಕ್ಕ ಸ್ಥಳದೊಡನೆ ಸೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆ ಮಾಡಬಹುದು, ಅಥವಾ ಅಂತಾ ಬಚ್ಚಲಗಳ ದೆಸೆಯಿಂದಲೂ ಚರಂಡೀಗಳ ದೆಸೆಯಿಂದಲೂ, ಬರುವ ಕಶ್ಮಲವನ್ನು ಜಮಾಯಿಸಿಯಿಡುವ ಬಗ್ಯೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು. ಮತ್ತು ಕೇವಲ ಜರೂರೆಂತ ಯೆಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಇತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು. ಆದರೆ ಹಾಗೆ ಉಪಯೋಗಿಸುವದರಿಂದ ಹೇಸಿಕೆಯುಂಟಾಗದೆ ಇರತಕ್ಕದ್ದು.

60. ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತಿಯನ್ನು ಮೊದಲು ಪಡಕೊಳ್ಳದೆ, ಈ ಬೈಲಾನಿಬಂಧನೆಗಳ ದೆಸೇಯಿಂದ ಮೆಂಬರಗಳ ವಶದಲ್ಲಿ ಇಡೋಣಾದ ಬಚ್ಚಲುಗಳು ಚರಂಡೀಗಳು ಇವುಗಳ ಪೈಕಿ ಯಾವದರಲ್ಲಾಗಲಿ ಯಾವನು ಯಾವ ಚರಂಡೀಯನ್ನಾದರೂ ಮಾಡುತ್ತಾನೋ ಯಾ ಮಾಡಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ್ ಚರಂಡೀಯಾಗಲಿ ಬಚ್ಚಲಾಗಲೀ ಸರ್ಕಾರೀ ಜಮೀನ್‌ಮಾರ್ಗವಾಗಿ ಹರಿಯಲೀ ಜನಗಳ ಸ್ವಂತ ಜಮೀನ್‌ಮಾರ್ಗವಾಗಿ ಹರಿಯಲೀ ಪರಂತು ಅಂತಾದ್ದನ್ನು ಯಾವನು ಬಂದ್ ಮಾಡುತಾನೋ ತಿರಿಗಿಸುತ್ತಾನೋ ಅಟಕಾವ್ ಮಾಡುತ್ತಾನೋ ಅಥವಾ ಮತ್ತ್ಯಾವ ವಿಧದಿಂದಲಾಗಲಿ, ಪ್ರವರ್ತಿಸುತ್ತಾನೋ ಅಂತಾ ಮನುಷ್ಯನು 1 ರೂಪಾಯಿ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೆಂಟರು ಅಂತಾ ಚರಂಡೀಯನ್ನಾಗಲಿ ಅಟಕಾವನ್ನಾಗಲಿ, ತಮಗೆ ಯುಕ್ತತೋರುವ ಪ್ರಕಾರ ನಾಶ ಪಡಿಸಬಹುದು, ಬದಲಾವಣಿ ಮಾಡಿಸಹುದು, ಹೊಸದಾಗಿ ಮಾಡಿಸಬಹುದು. ಅಥವಾ ಅನ್ಯಥಾ ತಮಗೆ ಯುಕ್ತತೋರುವ ಪ್ರಕಾರ ನಡಿಸಬಹುದು. ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ ಅಂಥಾ ಪ್ಲಾಟ್ ಚರಂಡಿಯನ್ನು ಯಾ ಅಟಕಾವನ್ನೂ ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

61. ಈ ಬೈಲಾನಿಬಂಧನೆಗಳಿಂದ ಮೆಂಬರಗಳವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸೀಡೆಂಟರ ಅನುಮತೀ ಇಲ್ಲದೆ ಯಾವ ಕಟ್ಟಣವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು, ಮತ್ತು ಯಾವ ಕಟ್ಟಣವಾಗಲಿ ಆ ಮೇರೇ ಕಟ್ಟಲ್ಪಟ್ಟಲ್ಲಿ ಪ್ರೆಸೀಡೆಂಟರು ಅಂತಾ ಕಟ್ಟಣವನ್ನು ಕಿತ್ತಿಹಾಕಿಸಬಹುದು. ಅಥವಾ ತಮಗೆ ಯುಕ್ತತೋರುವ ಪ್ರಕಾರ ಇತರ ರೀತಿಯಿಂದ ನಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕಶೀರ್ ನಡಿಸಿದ ಮನುಷ್ಯನು ಕೊಡತಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಿ ಕೊಳ್ಳಲ್ಪಡತಕ್ಕದ್ದು.

62. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಮೆಂಬರಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತದೋ ಅಂತಾ ಯಾವದಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಇರುವ ಯಾವದಾದರೂ ಕಟ್ಟಣವು ಯಾವಾಗಲಾಗಲಿ, ತಕ್ಕ ಚರಂಡೀಯಿಂದ ಯಾ ನಲ್ಲೀಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಇತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸೀಡೆಂಟರಿಗೆ ತೃಪ್ತಿಕರವಾಗಿ ಚರಂಡೀ ಇಡಲ್ಪಡದೇ ಇರುವ ಪಕ್ಷಕ್ಕೆ ಪ್ರೆಸೀಡೆಂಟರು, ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟಣದ ದೆಸೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನುಗಳ ದೆಸೆಯಿಂದೆ ಅಪ್ಪರ ಆಕಾರದಲ್ಲಿ, ಅಪ್ಪರಮಟ್ಟಕ್ಕೆ, ಮತ್ತು ಅಂತಾ ನೀರು ಪಾಟದಲ್ಲಿ ಮುಚ್ಚಲ್ಪಟ್ಟ, ಯಾ ಖುಲ್ಲಾಯಿರುವ ಚರಂಡಿಯನ್ನಾಗಲಿ, ನಲ್ಲೀಯನ್ನಾಗಲಿ ಅಂತಾ ಕಟ್ಟಣದಿಂದ ಕಟ್ಟಿಸಬಹುದು, ಅಥವಾ ಏರ್ಪಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೂಡ್ಲೇ ಕೊಡಲ್ಪಡದ ಪಕ್ಷಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

63. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಅಂತಾ ಕಟ್ಟಣದ ಬಚ್ಚಲ ನೀರು ಆಗ್ಯೆ ಇರುವಂತಾ ಅಥವಾ ಯೇರ್ಪಾಡು ಮಾಡಲ್ಪಡುವಂತಾ ಯಾವದಾದರೂ ಪಬ್ಲಿಕ್ ಬಚ್ಚಲುನಲ್ಲಿಯೂ, ಮೆಂಬರಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಕ್ಕೂ ತೆಗದುಕೊಂಡು ಹೋಗಲಿಕ್ಕೆ ತಕ್ಕ ನೀರು ಮಟ್ಟಕ್ಕಿಂತ ತಗ್ಗಾದ ನೀರು ಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟಣವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು ಪಬ್ಲಿಕ್ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನ್ ಯಾ ಕಟ್ಟಣಗಳ ಮಾಲೀಕರು ಯಾ ಅನುಭವದಾರರು, ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ, ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಣಗಳ ಮೊದಲಿನಲ್ಲಿ ಇರುವ ಬಾಜೂಕಾಲ್ವೆಗಳ ಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು, ಬದಲಾವಣೀ ಮಾಡತಕ್ಕದ್ದು, ಕಾಪಾಡತಕ್ಕದ್ದು, ಮತ್ತು ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೇ ಅಶ್ರದ್ಧೆಮಾಡಿದ ಪಕ್ಷಕ್ಕೆ ಪ್ರೆಸೀಡೆಂಟರು ಅದನ್ನು ಮಾಡಿಸಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ ಕೊಡತಕ್ಕದ್ದಲ್ಲದೆ ಆ ಮೊಬಲಗ ಇದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

64. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಃ ಕಟ್ಟೋಣಾದ ಯಾವ ಕಟ್ಟಣವಾಗಲಿ, ಇದರ ಹಿಂದಿನ ಕಡೇ ಸೆಕ್ಷನ್‌ನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರ ಇದ್ದಪಕ್ಷಕ್ಕೆ ಅದರ ಮಾಲೀಕನು ಅಂತಾ ಕಟ್ಟಣದ ನಿವೇಶನದ ದೆಸೇಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸೀಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಆಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರುಪಾಟದಿಂದಲೂ, ಒಂದು ಚರಂಡೀ ಕಟ್ಟಿಸತಕ್ಕದ್ದು ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆಮೇರೆ ಕಟ್ಟಲಿಕ್ಕೆ ಉಪೇಕ್ಷಿಸಿದಪಕ್ಷಕ್ಕೆ, ಪ್ರೆಸೀಡೆಂಟರು ಸದರೀ ಚರಂಡೀ ಕಟ್ಟಿಸಲ್ಪಡುವಂತೆ ಮಾಡಬಹುದು

ಮತ್ತು ಆಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

65. ಅಂತಾ ನೋಟಿಸನ್ನೂ ನಕ್ಷೆಯನ್ನೂ ಕಳುಹಿಸದೇಯಾಗಲಿ, ಸದರೀ ತಿಂಗಳೊಳಗಾಗಿ, ಪ್ರೆಸೀಡೆಂಟರಿಂದ ನಿರ್ಣಯಿಸಲ್ಪಟ್ಟ ಪ್ರಕಾರವಲ್ಲದೆ ಬೇರೆ ಮಟ್ಟಗಳ ಪ್ರಕಾರವಾಗಲಿ, ಈ ಬೈಲಾ ನಿಬಂಧನೆಗಳಿಗೆ ಮತ್ಯಾವ ವಿಧದಿಂದಲಾದರೂ ವಿರುದ್ಧವಾಗಿಯಾಗಲಿ, ಅಂತಾ ಕಟ್ಟಡವು ಆರಂಭಿಸಲ್ಪಟ್ಟರೆ, ಯಾ ಮಾಡಲ್ಪಟ್ಟರೆ, ಪ್ರಸೀಡೆಂಟರು ಜರೂರ್ ಇದ್ದಲ್ಲಿ ಸಂದರ್ಭಾನುಗುಣವಾಗಿಯಿರುವಂತೆ ಅದನ್ನು ಬದಲಾಯಿಸಲ್ಪಡುವಂತೆ ಯಾ ನಾಶ ಪಡಿಸಲ್ಪಡುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದ ಲಾಗವಡು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ಬೇರೆ ವಸೂಲ್ ಮಾಡಲ್ಪಡತಕ್ಕದ್ದು.

66. ಮೇಲೆ ಕಂಡ ಬೇರೆ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳನ್ನು ಕುರಿತು ಮಂಜೂರಾತಿಯನ್ನಾಗಲಿ, ಗೈರ ಮಂಜೂರಾತಿಯನ್ನಾಗಲಿ, ಪ್ರೆಸೀಡೆಂಟರು ಬರವಣಿಗೇ ಮೂಲಕ ತಿಳಿಸದೇಯೂ, ಅಂತಾ ನೋಟಿಸ್ ತಲಪಿದ ಮೇಲೆ ಒಂದು ತಿಂಗಳ ವಳಗಾಗಿ ಬೇರೆ ಮಟ್ಟವನ್ನು ಏರ್ಪಡಿಸದೆಯೂ ತಪ್ಪಿದ ಪಕ್ಷಕ್ಕೆ ಅಂತಾ ನೋಟಿಸಿ ಕೊಡುವ ಮನುಷ್ಯನು ಇದರಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಡವನ್ನು ಕಟ್ಟಿಸಲಿಕ್ಕಾಗಲಿ, ಖೋಲ್‌ಬಂದೀ ಮಾಡಿಸಲಿಕ್ಕಾಗಲಿ, ಪ್ರವರ್ತಿಸಬಹುದು; ಪರಂತು ಅಂತಾ ಕಟ್ಟಿಸೋಣವಾಗಲಿ ಖೋಲ್‌ಬಂದೀಯಾಗಲಿ ಅನ್ಯಥಾ ಈ ಬೈಲಾಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

67. ಮೆಂಬರ್‌ಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿ ಆಗಲಿ, ಅವುಗಳೊಡನೆ ಸಂಬಂಧಿಸುವ ಯಾವ ಚರಂಡಿಯಲ್ಲಾಗಲಿ, ಯಾವದಾದರೂ ಮಣ್ಣು, ಕಶ್ಮಲ, ಬೂದಿ, ತೋಟ, ಅಡಿಗೇಮನೆ, ಕುದುರೇಲಾಯ ಇಂತಾದ್ದರ ಬಾಬತು, ಕಚರೆ, ಗಾಜಿನ ಚೂರು, ಜೋಕಿಗಳು, ಯಾ ಇತರ ಕಸ (ಅಥವಾ ತಕ್ಕ ಬಚ್ಚಲು ತಯಾರ್ ಮಾಡಿಸಿ ಕೊಡುವ ಪರ್ಯಂತ) ಯಾವದಾದರೂ ಮಲ ಇಂತಾದ್ದನ್ನು ಯಾವನು ಹಾಕುತ್ತಾನೋ ಯಾ ಇಡುತ್ತಾನೋ ಅಥವಾ ತನ್ನ ನೌಕರರು ಹಾಕುವಂತೆ ಯಾ ಇಡುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

68. ಯಾವ ಜಮೀನುಗಳಿಗೆ ಯಾ ಕಟ್ಟಡಗಳಿಗೆ ಫೂಟ್ ಚರಂಡೀಗಳು ಸಂಬಧಿಸಿದವುಗಳಾಗಿರುತ್ತವೋ ಅಂತಾ ಜಮೀನುಗಳಲ್ಲಿ ಯಾ ಕಟ್ಟಡಗಳಲ್ಲಿ, ಅಥವಾ ಜಮೀನುಗಳ ಹೊರಗೆ ಯಾ ಕಟ್ಟಡಗಳ ಹೊರಗೆ ಇರುವ ದರೋಬಸ್ತು ಫೂಟ್ ಚರಂಡೀಗಳೂ ಯಾವದಾದರೂ, ಬೀದಿಯಲ್ಲಾಗಲಿ, ಬೀದಿಯ ಬಳಿಯಲ್ಲಾಗಲಿ, ಇರುವ ಪಾಯಖಾನೆಗಳು ಬಚ್ಚಲುಗಳು ಬಚ್ಚಲು ಗುಣಿಗಳು ಮೆಂಬರ್‌ಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನುಗಳಿಗೂ ಕಟ್ಟಡಕ್ಕೂ ಅವು ಸೇರಿ ಇರುತ್ತವೋ, ಅಥವಾ ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟಿರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತ್ತವೊ ಅಂತಾ ಜಮೀನುಗಳ ಮತ್ತು ಕಟ್ಟಡದ ಮಾಲೀಕರ ಲಾಗವಡ್‌ನಿಂದಲೂ, ಖರ್ಚುಗಳಿಂದಲೂ, ಸದರೀ ಪಾಯಖಾನೇ ಮುಂತಾದವು ಬದಲಾಯಿಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡೀಯಾಗಲಿ ಪಾಯಖಾನೇಯಾಗಲಿ ಬಚ್ಚಲು ಗುಂಡೀ ಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತದೋ ಅಂತಾ ಯಾವದಾದರೂ ಜಮೀನು ಯಾ ಕಟ್ಟಡಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಿಸ್ ಕೊಡೋಣಾದ ತರುವಾಯ ಎಂಟು ದಿನಗಳೊಳಗೆ ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿಸಿ ಇಡಲಿಕ್ಕೆ ಸಹ ಉಪೇಕ್ಷಿಸಿದ ಪಕ್ಷಕ್ಕೆ ಪ್ರೆಸೀಡೆಂಟರು ಅಂತಾ ಚರಂಡೀಯನ್ನಾದರೂ ಪಾಯಖಾನೇಯನ್ನಾದರೂ ಬಚ್ಚಲು ಗುಂಡಿಯನ್ನಾದರೂ ಬದಲಾಯಿಸುವಂತೆಯೂ, ದುರಸ್ತು ಪಡಿಸುವಂತೆಯೂ, ಬಂದೋಬಸ್ತು ಪಡಿಸುವಂತೆಯೂ, ಮಾಡಬಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

69. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದ ತರುವಾಯ ಪ್ರೆಸಿಡೆಂಟರು ಬರವಣಿಗೆ ಮೂಲಕವಾದ ಅನುಮತಿ ಇಲ್ಲದೆ ಯಾಗಲಿ, ಅವರ ಹುಕುಮಿಗೆ ಬರಖಿಲಾಫ್ ಆಗಲಿ, ಅಂತಾ ಯಾವ ಚರಂಡೀ ಯಾ ಪಾಯಖಾನೆ ಯಾ ಬಚ್ಚಲು ಇಂತಾದ್ದು ಕಟ್ಟಲ್ಪಟ್ಟರೆ, ಅಥವಾ ಕಿತ್ತು ಹಾಕಿಸುವಂತೆ, ಯಾ ನಿಲ್ಲಿಸುವಂತೆ ಯಾ ಮಾಡಿಸದೆ ಇರುವಂತೆ, ಪ್ರೆಸೀಡೆಂಟರಿಂದ ಹುಕ್ಕುಂ ಮಾಡಲ್ಪಟ್ಟಿರುವ ಯಾವ ಚರಂಡಿ ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದನ್ನು ಯಾವನಾದರೂ ಕಟ್ಟಿದರೆ ಖೋಲ್‌ಬಂದೀ ಮಾಡಿಸಿದರೆ ಯಾ ನಿಲ್ಲಿಸದೆ ನಡಿಸಿದರೆ ಹಾಗೆ ಮಾಡುವ ಪ್ರತಿ ಮನುಷ್ಯನೂ 2 ಆಣೆಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂತಾ ಯಾವ ಚರಂಡೀಯಲ್ಲಾಗಲೀ ಪಾಯಖಾನೆಯಲ್ಲಾಗಲಿ,

ಚಚ್ಚಲು ಗುಂಡಿಯನ್ನಾಗಲಿ, ತನಗೆ ಯುಕ್ತ ತೋರುವಂತ್ತಾ, ತಿದ್ದುಪಡಿಯನ್ನಾಗಲಿ, ಬದಲಾವಣೆಯನ್ನಾಗಲಿ, ಮಾಡಿಸಬಹುದು, ಮತ್ತು ಅದರ ಬಾಬತು ಲಾಗವಡನ್ನು ಅಂತಾ ಚರಂಡೀ ಯಾಗಲಿ ಪಾಯಖಾನೆಯಾಗಲಿ ಬಚ್ಚಲು ಗುಂಡಿಯಾಗಲಿ ಯಾವನಿಂದ ಅಕ್ರಮವಾಗಿ ಕಟ್ಟಿಸಲ್ಪಟ್ಟಿತೋ, ಯಾ ಖೋಲಬಂದೀ ಮಾಡಲ್ಪಟ್ಟಿತೋ, ಯಾ ನಿಲ್ಲಿಸದೆ ನಡಿಸಲ್ಪಟ್ಟಿತೋ, ಅಂತಾ ಮನುಷ್ಯನು, ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

70. ಪ್ರೆಸೀಡೆಂಟರಾಗಲಿ, ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರಾಗಲಿ, ಅಂತಾ ಚರಂಡಿಯನ್ನಾದರೂ, ಪಾಯಖಾನೆಯನ್ನಾದರೂ, ಬಚ್ಚಲು ಗುಂಡಿಯನ್ನಾದರೂ, ತನಿಖೀ ಮಾಡಬಹುದು, ಮತ್ತು ಆಬಗ್ಯೆ, ಸೂರ್ಯೋದಯದಮೊದಲು, ಸೂರ್ಯಾಸ್ತಮಯದೊಳಗೆ ಯಾವಾಗಲಾಗಲಿ ಅಂತಾ ಚರಂಡಿ, ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದು ಯಾವದಕ್ಕೆ ಸೇರಿಯಿರುತ್ತೋ ಅಂತಾ ಮನೆ ಮುಂತಾದವುಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ್ ಕೊಟ್ಟ ಹನ್ನೆರಡುಗಂಟೆಯತರುವಾಯ ಯಾವದಾದರೂ ಜಮೀನ್ನಲ್ಲಿಯೂ, ಕಟ್ಟಡದಲ್ಲಿಯೂ, ಜರೂರಾದಂತಾ ಕುಮುಕೀದಾರ್ರು, ಕಾರೇಗಾರ್ರು, ಯಿವರುಗಳುನಿಶೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಲೇಶವೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಿಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಖಾನೆ, ಯಾ ಬಚ್ಚಲುಗುಂಡಿ, ಬಂದೋಬಸ್ತಾಗಿಯೂ ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ, ಈ ಬೈಲಾಗಳ ಜಾರೀಲಿಬಂದ ಮೇಲೆ ಇವುಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಟ್ಟಿದೆಯೆಂತಲಾಗಲಿ ತಿಳಿಯಬಂದಲ್ಲಿ ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು, ಅಂತಾ ಚರಂಡಿ, ಯಾ ಪಾಯಖಾನೆ, ಯಾ ಬಚ್ಚಲುಗುಂಡಿ ಯಿವುಯಾವನಿಗೆ ಸೇರಿರುತವೋ ಅಂತಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡತಕ್ಕದ್ದು; ಆದರೆ ಚರಂಡಿಯಾಗಲಿ ಪಾಯಖಾನೆಯಾಗಲಿ ಬಚ್ಚಲುಗುಂಡಿಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುಂವತೆಯೂ ಈ ಬೈಲಾಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಡದೇಯೂ ಕಾಣಬಂದರೆ ಪ್ರೆಸೀಡೆಂಟರಾಗಲಿ ಮೇಲೆ ಕಂಡ ಆಫಿಸರಾಗಲಿ ಭೂಮಿಯನ್ನು ಭರ್ತೀಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಖಾನೆ, ಬಚ್ಚಲುಗುಂಡಿ, ಇವುಗಳನ್ನು ತೆಗೆಯುವದರಿಂದಲೂ, ಮುಚ್ಚುವದರಿಂದಲೂ, ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡುಗಳು ಅಂತಾ ಸಂಗತಿಯಲ್ಲಿ ಮೆಂಬರಗಳಿಂದ ಇಡಲ್ಪಡತಕ್ಕದ್ದು. ಪರಂತು ಮನೆಯೊಳಗೆ ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಅವಕಾಶ ಕೊಡುವ ಪರ್ಯಂತ ಹಾಗೆ ತನಿಖೀ ನೋಡಲಿಕ್ಕೋಸರ ಹಿಂದುಗಳು ಮುಸಲ್ಮಾನರು ಇವರುಗಳ ಹೆಂಗಸರು ಇರತಕ್ಕ ಬಗ್ಗೆ ಕ್ಲುಪ್ತವಾದ ಜನಾನೇಗಳಲ್ಲಾಗಲಿ ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟು ಮಾಡತಕ್ಕದ್ದಲ್ಲವು.

71. ಈ ಬೈಲಾನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟಡ, ಯಾ ಜಮೀನಿನ ಮಾಲೀಕನಿಂದಾಗಲಿ, ಅನುಭವದಾರನಿಂದಾಗಲಿ, ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿ ಯಿದ್ದು ಅಂತಾ ಕೆಲಸವನ್ನು ಅವನು ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷದಲ್ಲಿ, ಹಾಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆವಿಧಿಸಲ್ಪಡಲಿ ವಿಧಿಸಲ್ಪಡದೇ ಯಿರಲಿ ಪರಂತು ಅಂತಾ ಕೆಲಸವನ್ನು ಪ್ರೆಸೀಡೆಂಟರು ಮಾಡಿಸಬಹುದು. ಆ ಬಗ್ಗೆ ಹಿಡಿದ ಲಾಗವಡನ್ನು ಸದರೀ ಕಾಮಗಾರಿ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನು ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಆ ಮೊಬಲಗ್ ವಸೂಲ್ಮಾಡಲ್ಪಡತಕ್ಕದ್ದು.

72. (ಕಾಮಗಾರೀ ಮಾಡಿಸುವದಕ್ಕೆ) ತಪ್ಪಿದ ಮನುಷ್ಯನು, ಕಟ್ಟಡದ ಯಾ ಜಮೀನಿನ ಮಾಲೀಕನಾಗಿ ಯಿದ್ದರೆ, ಪ್ರೆಸೀಡೆಂಟರು ಈ ಬಗ್ಗೆ ಜಾಸ್ತೀಯಾಗಿ ಪರಿಹಾರವನ್ನು ಉಂಟುಮಾಡುವ ಉದ್ದಿಶ್ಯ ಅಂತಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ವ್ಯಾಜ್ಯ ಯಾ ನಡವಳಿತ ನಡಿಸಿಯಿರಲಿ ನಡಿಸದೇಯಿರಲಿ, ತತ್ಕಾಲದಲ್ಲಿ ಮಾಲೀಕನಿಂದ ಕೊಡಲ್ಪಡತಕ್ಕ ಲಾಗವಡು ಮೊಬಲಗ್ ವಿಶಿಷ್ಟವನ್ನಾಗಲಿ ಆ ಪೈಕೀ ಯಷ್ಟರಭಾಗವನ್ನಾಗಲಿ ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಮಾಲೀಕನ ವಶದಲ್ಲಿರತಕ್ಕ ಕಟ್ಟಡವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು. ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದ ಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂತಾ ಅನುಭವದಾರನ ಬಾಬತು ಚರಸ್ವತ್ತುಗಳ ಜಫ್ತೀಯಿಂದ ಅದು ವಸೂಲ್ಮಾಡಲ್ಪಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ, ಅಂತಾ ಯಾವ ಖರ್ಚಿನ ವಿಷಯದಲ್ಲಾಗಲಿ ತಾನು ಸದರೀಪ್ರಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತಂನ್ನಿಂದ ವಸೂಲ್ಮಾಡಲ್ಪಟ್ಟಷ್ಟು ಮಟ್ಟಿಗೆ ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗ್ನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕುಂ ಉಂಟಾಗಿರತಕದ್ದು.

73. ಯಾವದಾದರೂ ಕಟ್ಟಡ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಬೈಲಾಗಳಿಂದ ಕಟ್ಟೋಣಾದ ಯಾವ ಲಾಗವಡಗಳಿಗೋಸ್ಕರವಾಗಲಿ, ಯಾವ ಕಟ್ಟಡ ವಗ್ಯೆರೇಗಾಗಿ ಅಂತಾ ಲಾಗವಡು ಕೊಡಬೇಕಾಗಿರುತ್ತೋ ಆ ಕಟ್ಟಡಗಳಿಗೋಸರ ತಂನನ್ನು ಕೇಳಿದಾಗ ತನ್ನಿಂದ ಸಲ್ಲಬೇಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ

ಬಾಕೀಯಾದ ತನ್ನಿಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಪರಂತು ಪ್ರೆಸೀಡೆಂಟರು ಆವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿಗೇ ಬಾಬತು ಮೊಬಲಗ್ ಮತ್ತು ಯಾವನಿಗೆ ಅಂತಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು, ಅಡ್ರಹೆಸರು, ಇವುಗಳನ್ನು ವಾಸ್ತವ್ಯವಾಗಿ ಪ್ರಕಟಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗದೇ ಹೋಗುವದಿಲ್ಲವು. ಆದರೆ ಅಂತಾ ಅನುಭವದಾರನನ್ನು ಕೇಳಿದ ಮೊಬಲಗ್ ಹಾಗೆ ಕೇಳಿದ ಕಾಲದಲ್ಲಾಗಲಿ ತರುವಾಯವಾಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಯೆಂಬದಾಗಿ ರುಜುಮಾಡುವ ಭಾರ ಸದರೀ ಅನುಭವದಾರನನ್ನೇ ಸೇರಿಯಿರುತ್ತದೆ. ಮತ್ತು ಇದರಲ್ಲಿ ಅಡಗಿರುವ ಯಾವ ಅಂಶವೂ ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂತಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡೆದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಭಾಧಕವಾಗುತ್ತದೆಯೆಂದು ಗ್ರಹಿಸ ಕೂಡದು.

74. ಯಾವದಾದರೂ ಕಟ್ಟದ ಯಾ ಜಮೀನಿನ ಮಾಲೀಕನು ಪ್ರೆಸೀಡೆಂಟರು ತಾಕೀದ್ ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು. ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಸೆಯಿಂದ ಅಂತಾ ಮಾಲೀಕನಿಗೆ ಬಾಕೀ ಆಗತಕ್ಕ ಬಾಡಿಗೆಯಲ್ಲಿ ವಜಾ ಮಾಡಲ್ಪಡತಕ್ಕದ್ದು.

75. ಯಾವದಾದರೂ ಕಟ್ಟ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟ ಯಾ ಜಮೀನ್ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಯಾವ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ ಅದರ ಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ್ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ ಪ್ರೆಸೀಡೆಂಟರು, ಆ ವಿಷಯ ರುಜುವಾದ ಮೇಲೆ ಅಂತಾ ಕಟ್ಟ ಯಾ ಜಮೀನ್ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾದ ಅಂತಾ ದರೋಬಸ್ತು ಕಾಮಗಾರಿಗಳನ್ನೂ ನೆರವೇರಿಸುವ ಬಗ್ಗೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡ ತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕ್ಕುಂ ಕೋರಬಹುದು. ಮತ್ತು ಹುಕ್ಕುಂ ತಾರೀಖು ಲಾಗಾಯತ್ ಎಂಟು ದಿನಗಳು ಕಳೆದ ತರುವಾಯ ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತಿದ್ದರೆ ಹಾಗೆ ನಿರಾಕರಿಸುತಿರುವ ಪ್ರತಿ ದಿನಕ್ಕೂ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದು; ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತಿರುವಲ್ಲಿ ಅಂತಾ ಕಾಮಗಾರಿಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಬಹುದಾಗಿದ್ದ ಯಾವ ಜುರ್ಮಾನೆಯಿಂದಲೂ, ಮಾಫ಼ ಆಗತಕ್ಕದ್ದು.

76, ಈ ಬೈಲಾ ನಿಬಂಧನೆಗಳು ಜಾರೀಯಲ್ಲಿ ಬರುವ ಕಾಲದಲ್ಲಾಗಲಿ ಆತರುವಾಯವಾಗಲಿ, ಮಾಡಲ್ಪಟ್ಟ, ಇಡಲ್ಪಟ್ಟ ಯಾ ಕಟ್ಟಲ್ಪಟ್ಟ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲ್ವೆಗಳು ನೀರು ನಲ್ಲಿಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನ ಸಂಬಂಧವಾದ ಇತರ ಕಾಮಗಾರೀಗಳು, ಇಂತಾವು ಮೆಂಬರ್‌ಗಳ ಲಾಗವಾಡಿನಿಂದ ಕಲ್ಪಿಸಲ್ಪಡಲಿ, ಯಾ ಇಡಲ್ಪಡಲಿ, ಯಾ ಕಟ್ಟಲ್ಪಡಲಿ, ಅನ್ಯಥಾ ಆಗಲಿ, ಪರಂತು ಅಂತಾದ್ದೂ; ಮತ್ತು ಸದರೀ ಕೆರೇ ವಗೈರೇಗೆ ಸೇರಿದ ಯಾ ಆವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಗಳು, ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು, ಇವುಗಳೂ, ಮತ್ತು ಯಾವದಾದರೂ ಪಬ್ಲಿಕ್ ಕೆರೆಗೆ ಸಮೀಪವಾದ (ಸ್ವಂತ ಸ್ವತ್ತು ಅಲ್ಲದೆಯಾಗಲಿ ಸರ್ಕಾರದ ಸ್ವತ್ತಲ್ಲದೆಯಾಗಲಿ ಇರುವ) ಅದಕ್ಕೆ ಸೇರಿದಹಾಗೆ ಇರುವ ಯಾವದಾದರೂ ಜಮೀನ್ ಇಂತಾದ್ದೂ ಮೆಂಬರ್‌ಗಳ ಅಧಿಕಾರದಲ್ಲಿರತಕ್ಕದ್ದಲ್ಲದೆ ಅವರಿಗೆ ಸೇರಿದವುಗಳಾಗಿರತಕ್ಕವು.

77. ಮೆಂಬರ್‌ಗಳು ನಿವಾಸಿಗಳಿಗೆ ನೀರು ಒದಗಿಸುವದಕ್ಕೋಸ್ಕರವಾಗಲಿ, ಈ ಬೈಲಾ ನಿಬಂಧನೆಗಳಲ್ಲಿ ಕಂಡ ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಲೀ ಇರತಕ್ಕ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಮೊಹರೀಗಳು, ತೂಬಿನಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು ಇಂತಾವು ಜಾರೀಯಾಗಿ ನಡೆಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಅಥವಾ ಅವರು, ಅವುಗಳಿಗೆ ಬದಲಾಗಿ, ಅಂತಾ ಇತರ ಕಾಮಗಾರೀಗಳನ್ನು ಮಾಡಿಸಿ ಅವು ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಮತ್ತು ಮೆಂಬರ್‌ಗಳು ಕೊಡಗು ಶೀಮೆಯ ಚೀಫ್ ಕಮ್ಮಿಷನರವರ ಮುಂಜೂರಾತಿಯ ಮೇಲೆ ಆಗಿಂದಾಗ್ಗೆ ಮ್ಯುನಿಸಿಪಲ್ ಸರಹದ್ದುಗಳೊಳಗೆ ನೀರು ತರಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲೀಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು ಕುಂಟೆಗಳು ನೀರು ತೊಟ್ಟಿಗಳು ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರೀಗಳು ಇವುಗಳನ್ನೆಷ್ಟನ್ನಾಗಲಿ ಒದಗಿಸಬಹುದು.

78. ಸೆಕ್ಷರ್ಷ 79 ಅನುಸರಿಸಿ ಮೆಂಬರಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು ಅನ್ಯಥಾ ಮೆಂಬರ್‌ಗಳ ಬಾಬತು ಯಾವದಾದರೂ ಶೀನೀರಿನ ಬಗ್ಗೆ ಉದ್ದೇಶಿಸಲ್ಪಟ್ಟ ಯಾ ಕ್ಲುಪ್ತವಾದ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರು ತೊಟ್ಟಿ, ಜಲದಾರಿ, ಅಥವಾ ಕಾಲುವೆ, ಇಂತಾದ್ದರಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ, ಅಥವಾ ಇತರ ಜಂತುವು, ಅಥವಾ ತುಪ್ಪಟ, ಬಟ್ಟೆ, ಅಥವಾ ವುಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು; ಜಂತುವಿನ ಚರ್ಮ ತೊಗಲು ಅಥವಾ ಅಸಹ್ಯವಾದ ಯಾ ಉಪದ್ರವಕರವಾದ ಇತರವಸ್ತು ಇಂತಾದ್ದು ಯಾವದನ್ನಾಗಲಿ ತೊಳೆಯುವ, ಯಾ ತೊಳೆಯಿಸುವ; ಅಥವಾ ಅದರಲ್ಲಿ ಯಾವದಾದರೂ ಜಂತುವು ಗ್ರೇವಲ್ ಕಲ್ಲು, ಧೂಳು, ಅಥವಾ ಯಾವದಾದರೂ, ಕಚರ, ಕಶ್ಮಲ, ಕಲ್ಮಷ, ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂತಾದ್ದನ್ನು ಹಾಕುವ, ಇರಿಸುವ, ಬಿಸಾಡುವ, ಅಥವಾ ಪ್ರವೇಶಿಸುವಂತೆ ಮಾಡುವ, ಅಥವಾ ಅದರಲ್ಲಿ ಯಾವದಾದರೂ ಕೊಳೇ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು ಚರಂಡಿ, ಯಿಂತ) ಅಥವಾ ಕಡಾಯಿ, ಇಂತಾದ್ದರ ಬಾಬತು ನೀರು, ಅಥವಾ ತನ್ನದಾಗಿ ಇರುವ ಯಾ ತನ್ನ ಅನುಭವದಲ್ಲಿ ಇರುವ ಯಾವದಾದರೂ ಕಟ್ಟಣದಿಂದಾಗಲಿ, ಭೂಮಿಯಿಂಧಾಗಲಿ ಹರಿಯುವ ಅನಾರೋಗ್ಯಕರವಾದ ಯಾ ಅಸಹ್ಯವಾದ ಯಾವದಾದರೂ ದ್ರವಪದಾರ್ಥ ಯಾ ವಸ್ತು ಇಂತಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಯಾ ಅಪ್ಪಣೇ ಕೊಡುವ ಯಾ ಅಂತಾ ಯಾವ ನೀರಾಗಲಿ ಯೆಷ್ಟುಮಾತ್ರವಾದರೂ ಕೊಳೆಯಾಗುವಂತೆ ಯಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

79. ಮೆಂಬರ್‌ಗಳು ಯಾವ ಪಬ್ಲಿಕ್ ಪ್ರದೇಶವನ್ನಾಗಲಿ ಜನಗಳ ಖಾಸಗತ್ ಸ್ವತ್ತಲ್ಲದ ದೊಡ್ಡ ಕೆರೆಗಳ ಅಥವಾ ಯಾವದಾದರೂ "ರ್ಣ" ಎಂಬ ನದೀ ತೀರದ ಯಾವ ಭಾಗವನ್ನಾಗಲಿ, ಸ್ನಾನ ಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು. ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಬದಗಿಸಬಹುದು. ಅಥವಾ ಪ್ರತ್ಯೇಕವಾಗಿ ಏರ್ಪಡಿಸ ಬಹುದು. ಮತ್ತು ಜಂತುಗಳನ್ನು ತೊಳೆಯುವ ಬಗ್ಯಾಗಲಿ ಬಟ್ಟೆಗಳೊಗೆಯುವ ಬಗ್ಯಾಗಲಿ ಪ್ರಜೆಗಳ ಆರೋಗ್ಯ, ಪಾಕೀಜ್, ಸೌಖ್ಯ, ಇವುಗಳಿಗೆ ಸಂಬಂಧಿಸಿದ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು, ಯಾ ರ್ಣ ಎಂಬ ಪ್ರವಾಹಗಳನ್ನು ಪ್ರತ್ಯೇಕವಾಗಿ ಯೇರ್ಪಡಿಸಲೂ ಬಹುದು.

80. ಆರೋಗ್ಯ ಭಂಗಕಾರಿಯಾಗಿ ಯಾ ನೆರೆಹೊರೆಗೆ ಬಾಧಕವಾಗಿ ತೋರುವ ಯಾವದಾದರೂ ಖಾಸಗತ್ಳ ಕೆರೆಯನ್ನು, ಶೋಧಿಸುವಂತೆಯೂ ಅಂತಾ ಯಾವದಾದರೂ ನಿವೇಶನ ಮುಂತಾದದರೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದ್ದರಿಂದ ಕೆಟ್ಟುಹೋಗಿಯೂ ಇರುವ ನೀರನ್ನು ಎತ್ತಿಸಿಬಿಡುವಂತೆಯೂ ತೆಗೆಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟಿಸ್‌ದ್ವಾರಾ, ಯಾವ ನಿವೇಶನ ಮುಂತಾದವುಗಳ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯ್ಯವಾಗಿರತಕ್ಕದ್ದು. ಮತ್ತು ಅಂತಾ ಮಾಲೀಕನು ಅಂತಾ ನೋಟಿಸ್ ಜಾರೀಯಾದ ಲಾಗಾಯತು ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ, ಯಾ ಉಪೇಕ್ಷಿಸಿದರೆ ಪ್ರೆಸೀಡೆಂಟರೂ, ಅವರ ಆಫಿಸರ್‌ಗಳೂ, ಕೆಲಸದವರೂ ಪ್ರವೇಶಿಸಿ ತಮಗೆ ಯುಕ್ತತೋರುವ ಪ್ರಕಾರ ಮೇಲೆ ಕಂಡ ವಿಶಿಷ್ಟಾಂಶಗಳಿಗೋಸ್ಕರವಾಗಲಿ ಆಪೈಕೀ ಕೆಲವಕ್ಕೋಸ್ಕರವಾಗಲಿ ಜರೂರಾದ ದರೋಬಸ್ತು ಕಾರ್ಯಗಳನ್ನೂ ಮಾಡಬಹುದು. ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ ಅಂತಾ ನಿವೇಶನ ಮುಂತಾದವುಗಳ ಮಾಲೀಕನು ಕೊಡತಕ್ಕದ್ದಲ್ಲದೆ ಮ್ಯುನಿಸಿಪಾಲಿಟಿಗೆ ಸಲ್ಲತಕ್ಕ ಸಾಲೆದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

81. ಕೆಟ್ಟ ನೀರು ನಿಂತಿರುವ ಸ್ಥಳವಗೈರೇಗಳು ಯಾವ ಮನುಷ್ಯನ ಸ್ವಂತ ಆಸ್ತಿಯಾಗಿದ್ದರೂ ಅನ್ಯಥಾ ಇದ್ದರೂ ವಾಸಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಯಾವದಾದರೂ ಸ್ವಂತ ಆವರಣದಲ್ಲಿಲ್ಲದ, ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನೂ ಪ್ರೆಸೀಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತೀ ಮಾಡತಕ್ಕದ್ದು. ಅಥವಾ ನೀರು ತೆಗೆಯಿಸಿ ಹಾಕತಕ್ಕದ್ದು.

82. ಈ ಬೈಲಾ ನಿಬಂಧನೆಗಳಿಂದ ಮಾಡಲ್ಪಡತಕ್ಕದೆಂದು ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ, ಮಾಡಿಸುವಲ್ಲಿ ಹಾಗೆ ಮಾಡಿಸುವದ್ದರಿಂದ ಅಟಕಾವು ಮಾಡಲ್ಪಡುವ, ಹಾನಿ ಹೊಂದುವ, ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೇಗೆ ಬದಲಾಗಿ ಮ್ಯುನಿಸಿಪಲ್ ಫಂಡಿನಿಂದ ಲಾಗವಡು ಮುಟ್ಟಿಸಿ ಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡೀಗಳು, ನಾಲೇಗಳು, ಇವುಗಳನ್ನು ಮೆಂಬರ್‌ಗಳು ಬದಗಿಸತಕ್ಕದ್ದು, ಮತ್ತು ಮಾಡತಕ್ಕದ್ದು. ಮತ್ತು ಮೆಂಬರಗಳಿಗೂ, ಆದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ್ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರ್, ನುಕ್ಸಾನ್, ವ ಲಾಗವಾಡ್ ಇವುಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವ್ಯವಸ್ಥೆಯಾಗತಕ್ಕದ್ದು:

83. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆ ಅಥವಾ ಮೇಲ್ಭಾಗ, ಯಾವದಾದರೂ ಬಚ್ಚಲು ಯಾ ಚರಂಡಿ, ಇಂತಾದ್ದು ಮೆಂಬರುಗಳಿಂದ ತೆಗಿಯಿಸಲ್ಪಟ್ಟರೆ ಯಾ ಬಡೆಯಿಸಲ್ಪಟ್ಟರೆ, ಯಾವ ಬಗ್ಗೆ ಅವು ಆಗೆಯಿಸಲ್ಪಟ್ಟವೋ ಆ ಕಾಮ

ಗಾರೀಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತೀ ಮಾಡಿಸಿ ತಳವರಸೆಯನ್ನು ಮೇಲ್ಭಾಗವನ್ನು, ಬಚ್ಚಲನ್ನು, ಯಾ ಚರಂಡಿಯನ್ನು ಸರಿಮಾಡಿಸಿ ಅದರಲ್ಲಿ ಬೀಳುವ ಮಣ್ಣನ್ನು ತೆಗೆಸಿ ಹಾಕತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೆಯ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಸ್ಥಳಕ್ಕೆ ಕಟಕಟಿ ಕಟ್ಟಿಸಿ ಕಾವಲು ಇಡಿಸಿ ರಾತ್ರೇ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

84. ಮೆಂಬರುಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು, ಯಾ ಚರಂಡೀಗಳು, ಇಂತಾವ್ರುಗಳ ಪೈಕೀ ಯಾವದನ್ನಾಗಲಿ ತಾವು ಕಟ್ಟಿಸುತ್ತಿರುವಲ್ಲಿ ಯಾ ರೀಪೇರ್ ಮಾಡಿಸುತ್ತಿರುವಲ್ಲಿ, ನೆರೆ ಹೊರೆ ಮನೆಗಳಿಗೆ ಅಪಾಯ ಬಾರದಂತೆ ಪ್ರೋಟೇಕೊಟ್ಟು ಬಂದೋಬಸ್ತು ಪಡಿಸಿ ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ, ಬೀದಿಗೆ ಅಡ್ಡವಾಗಿಯಾಗಲಿ, ಅಂಥಾ ಕಾಮಗಾರೀ ನಡೆಯುತ್ತಿರುವಲ್ಲಿ ಸವಾರೀಗಳು, ಬಂಡಿಗಳು, ಇತರ ಯಾನಗಳು, ದನಗಳು, ಯಾ ಕುದುರೆ ಇವುಗಳು ಹೋಗುವ ಮಾರ್ಗವನ್ನು ಅಟಕಾವು ಮಾಡಲಿಕ್ಕೆ ಪ್ರೆಸೀಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು, ಇಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸೀಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಇತರ ಕೆಲಸಗಳು ಇವುಗಳನ್ನು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ್ ಮಾಡುತ್ತಿರುವಲ್ಲಿ ಅವುಗಳ ಬಳಿ ರಾತ್ರೇಹೊತ್ತು ಸಾಕಾದಷ್ಟು ದೀಪಗಳು ಇಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳೀ ಕಾವಲು ಇಡಿಸತಕ್ಕದ್ದು ಮತ್ತು ಪ್ರೆಸೀಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು ಸರಪಣಿಗಳು, ಯಾ ಕಂಭಗಳು, ಇವುಗಳ ಪೈಕೀ ಯಾವದನ್ನಾಗಲಿ, ತೆಗೆಯುವ, ಬದಲಾಯಿಸುವ, ಯಾ ಮತ್ತೊಂದು ಸ್ಥಳಕ್ಕೆ ತೆಗದುಕೊಂಡು ಹೋಗುವ ಯಾವದಾದರೂ ದೀಪವನ್ನು ಆರಿಸಿಬಿಡುವ, ಯಾವ ಮನುಷ್ಯನಾಗಲಿ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪ್ರೆಸೀಡೆಂಟರ ಅಪ್ಪಣೀ ಇಲ್ಲದೆ ಯಾವ ಮನುಷ್ಯನೂ, ಯಾವ ಬೀದಿಯಲ್ಲಿಯೂ ಯಾವ ಕಟ್ಟಡದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ, ಅವನು, ಆ ಸಾಮಾನುಗಳು ಆಚಿಗೆ ಸಾಗಿಸಲ್ಪಡುವ ಪರ್ಯಂತ ಯಾ ಹಳ್ಳ ಮುಚ್ಚಿಸಲ್ಪಡುವ ಪರ್ಯಂತ, ಅನ್ಯಥಾ ಬಂದೋಬಸ್ತು ಮಾಡಲ್ಪಡುವ ಪರ್ಯಂತ, ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ, ಯಾ ಹಳ್ಳಗಳಿಗೆ, ಸಾಕಾಗಿರುವ ಮೇರೆ ತಡೆಹಾಕಿಸುವಂತೆಯೂ, ಆವರಣ ಕಟ್ಟಿಸುವಂತೆಯೂ, ಮಾಡತಕ್ಕದಲ್ಲದೇ ರಾತ್ರಿ ಹೊತ್ತು ಅದರಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು; ಮತ್ತು ಅಂತಾ ಅಪ್ಪಣೆ ಇಲ್ಲದೇ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ, ಅಥವಾ ಅಂತಾ ಸಾಮಾನುಗಳು, ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೇಯಾಗಲಿ, ಆವರಣ ಕಲ್ಪಿಸದೇಯಾಗಲಿ ದೀಪ ಹಚ್ಚದೇಯಾಗಲಿತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಗಿಸಿಕ್ಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೇಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೇಯಾಗಲಿ, ಇರುತ್ತಾನೋ ಅಂತಾ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಪ್ರೆಸೀಡೆಂಟರು ನೋಟಿಸ್ ಕೊಟ್ಟ 24 ಗಂಟೆಯ ಹೊತ್ತಿಗೆ ತರುವಾಯ ಆ ತಕಸೀರ ನಡಿಸುತ್ತಿರುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

86. ಸರ್ಕಾರ್ ಜಮೀನಲ್ಲಾಗಲಿ ಜನಗಳ ಸ್ವಂತ ಜಮೀನಲ್ಲಾಗಲಿ ಇರುವ ಯಾವದಾದರೂ ಕಟ್ಟೆ, ಕೆರೆ, ಬಾವಿ, ಯಾ ಹಳ್ಳ, ಯಾ ಇತರ ಪ್ರದೇಶ ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು, ಯಾ ಆವರಣ, ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿ ಇದ್ದಪಕ್ಷಕ್ಕೆ ಪ್ರೆಸೀಡೆಂಟರು ಲಿಖಿತ ರೂಪವಾದ ನೋಟಿಸ್ ದ್ವಾರಾ, ಆದರ ದೆಸೆಯಿಂದ ಅಪಾಯವುಂಟಾಗದೇ ಇರುವಂತೆ ಅದು ರಿಪೇರ್‌ಮಾಡಲ್ಪಡತಕ್ಕದ್ದೆಂತಲಾಗಲಿ, ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ, ಆವರಣ ಕಟ್ಟಿಸಲ್ಪಡತಕ್ಕದೆಂತಲಾಗಲಿ, ಸದರೀ ನಿವೇಶನಗಳ ಮಾಲೀಕನಿಗಾದರೂ, ಅನುಭವದಾರನಿಗಾದರೂ, ತಾಕೀದ್ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಗಂಟೆಯ ಹೊತ್ತಿನೊಳಗೆ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೇ ನಿರಾಕರಿಸಿದ ಪಕ್ಷಕ್ಕೆ, ಅಥವಾ ಉಪೇಕ್ಷಿಸಿದರೆ, ಅಥವಾ ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿ ಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದಲ್ಲದೆ ಆ ಪ್ರಕಾರ ಮಾಡಲಿಕ್ಕೆ ದೇರ್ ಮಾಡುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ಸದರೀ ಕಟ್ಟೆ, ವಗೈರೇಗೆ ರಿಪೇರೀ ಯಾ ಬಂದೋಬಸ್ತು ಮಾಡಲ್ಪಡುವಂತೆ ಯಾ, ಆವರಣ ಕಲ್ಪಿಸಲ್ಪಡುವಂತೆ ಮಾಡುವದು, ಮೇಲೆ ಕಂಡ ದರೋಬಸ್ತು ಅಥವಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತತೋರುವ ಪ್ರಕಾರ ಜರೂರಾದ ದರೋಬಸ್ತು ಅಂಶಗಳನ್ನೂ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಬಗ್ಗೆ ಹಿಡಿದ ಲಾಗವಡು ಯಿದರಲ್ಲಿ ಮುಂದೆ ವಿಧಿಸಲ್ಪಡುವಪ್ರಕಾರ ವಸೂಲಾಗತಕ್ಕದ್ದು.

87. ಮೆಂಬರಗಳಾಗಲಿ, ಅವರಿಂದ ಸದರೀ ಬಗ್ಯೆ ಮೊಕ್ರರ್ ಮಾಡಲ್ಪಟ್ಟ ಯಾವ ಮನುಷ್ಯನಾಗಲಿ ಯಾವದಾದರೂ ಮಾರ್ಕೆಟ್, ಕಟ್ನ, ಅಂಗಡಿ, ತಟ್ಟೀ ಅಂಗಡಿ, ಅಥವಾ ಖಸೈಮಾಂಸ, ಕೋಳಿಗಳು, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿಂತಾವುಗಳನ್ನು ವಿಕ್ರಯಿಸುವ ಬಗ್ಯೆ ಯಾ ಖಸೈ ಮನೆ ಬಗ್ಯೆ ಉಪಯೋಗಿಸಲ್ಪಡುವ ಸ್ಥಳ ಯಿವುಗಳಲ್ಲಿ ನ್ಯಾಯವಾದ ಯೆಲ್ಲಾ ಕಾಲಗಳೊಳಗೂ ಕುಮ್ಮಕ್‌ದಾರ್ ಸಂಗಡಲೇ ಯಾಗಲಿ, ಅವರುಗಳು ಯಿಲ್ಲದೆಯಾಗಲಿ ಪ್ರವೇಶಿಸಿ ತನಖೀ ಮಾಡುವದು ಮಾತ್ರವಲ್ಲದೆ ಅದರಲ್ಲಿ ಯಿರಬಹುದಾದ ಯಾವಾದರೂ ಜಂತು, ಮುರ್ದಾರ್, ಮಾಂಸ, ಯಾವದಾದರೂ ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರಕಾರಿಗಳು ಇವು ಮನುಷ್ಯಾಹಾರಕ್ಕೋಸ್ಕರ ಉದ್ದೇಶಿಸಲ್ಪಟ್ಟವಾಗಿಯೂ, ಅಂತಾ ಆಹಾರಕ್ಕೆ ಅಯೋಗ್ಯವಾಗಿಯೂ, ಕಾಣಬರುವ ಸಂಗತಿಯಲ್ಲಿ ಅವುಗಳನ್ನು ಹಿಡಿದುಕೊಂಡು ಅವುಗಳನ್ನು ನಾಶ ಮಾಡಿಬಿಡುವಂತೆಯಾಗಲಿ ವಿಕ್ರಯಿಸುವ ಬಗ್ಯೆ ಕಾಣಿಸದಂತೆ ಯಾಗಲಿ, ಆಹಾರದ ಬಗ್ಯೆ ಉಪಯೋಗಿಸಲ್ಪಡದಂತೆ ಯಾಗಲಿ ವಿನಿಯೋಗಿಸಿ ಬಿಡುವಂತೆ ಹುಕ್ಕುಂ ಮಾಡಬಹುದು, ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ, ಅಂತಾ ಜಂತುವು, ಮುರ್ದಾರ್, ಮಾಂಸ, ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿವು ಮನುಷ್ಯನ ಆಹಾರಕ್ಕೆ ಅಯೋಗ್ಯವಾಗಿ ಯಿತ್ತೆಂತ ಬಬ್ಬ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ, ಅವುಗಳ ಮಾಲೀಕನಾಗಲಿ, ಅವು ಯಾರ ಸ್ವಾಧೀನದಲ್ಲಿ ಕಾಣಬಂದವೋ ಅಂತಾ ಮನುಷ್ಯನಾಗಲಿ, ಇಂಡ್ಯನ್ ಪೆನಲ್‌ಕೋಡಿನ 273ನೇ ಸೆಕ್ಷನ್‌ನಿಂದ ವಿಧಿಸಲ್ಪಟ್ಟ 5 ರೂಪಾಯಿಗಳ ಮೊದಲು 10 ರೂಪಾಯಿಗಳ ವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಆ ಮೇರೆ ನಾಶ ಮಾಡಲ್ಪಟ್ಟ ವಸ್ತುಗಳು ಮನುಷ್ಯಾಹಾರಕ್ಕೆ ಯೋಗ್ಯವಾಗಿತ್ತೆಂತ ಮಾಜಿಸ್ಟ್ರೇಟರು ಅಭಿಪ್ರಾಯ ಪಟ್ಟ ಪಕ್ಷಕ್ಕೆ ಸದರೀ ವಸ್ತುವಿನ ನ್ಯಾಯವಾದ ಕಿಮ್ಮತ್ತು ಯೆಂತ ಮಾಜಿಸ್ಟ್ರೇಟರಿಗೆ ತೋರುವ ಮೊಬಲಗನ್ನು ಸದರೀ ಮಾಲೀಕನಿಗೆ ಸಲ್ಲಿಸುವಂತೆ ಮೆಂಬರ್‌ಗಳಿಗೆ ಹುಕ್ಕುಂ ಮಾಡತಕ್ಕದ್ದು.

88. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಮಡಿಕೇರಿ ಲಷ್ಕರ್ ವ ಷಹರ್ ಸರಹದ್ದುಗಳೊಳಗೆ ಈ ಕೆಳಗೆ ಕಾಣಿಸಲ್ಪಡುವ ಕಾರ್ಯಗಳ ಪೈಕೀ ಯಾವ ಕಾರ್ಯಗಳಿಗೋಸ್ಕರವಾಗಲಿ ಅಂದರೆ, ಕೊಬ್ಬು ಕರಗಿಸುವದು, ಸತ್ತ ಜಂತುವಿನ ಕರಳು ಮುಂತಾದ ಮಾಂಸ, ರಕ್ತ ಯಿಂತಾದ್ದನ್ನು ಕಾಯಿಸುವದು, ಈ ಬಗ್ಗಾಗಲಿ, ಸಬ್ಬು, ಕರ್ಪೂರ, ಯೆಣ್ಣೆ, ಯಿಂತಾದ್ದನ್ನು ಕಾಯಿಸುವ ಮನೆಯಾಗಿ, ಗಾಣಿಗೆ, ಯಾ ಯೆಣ್ಣೆ ತೆಗೆಯುವ ಯಂತ್ರವಾಗಿ, ರಂಗಾರಿ ಮನೆಯಾಗಿ, ಯಾ ಅಂಗಳವಾಗಿ, ತೊಗಲು ಹದ ಮಾಡುವ ಸ್ಥಳವಾಗಿ, ಇಟ್ಟಿಗೆ ಯಾ ಕುಂಬಾರ ಸೂಳಾಗಿ, ಯಾ ಸುಣ್ಣದ ಗೂಡಾಗಿ, ಕಾಗದ ಕಾರ್ಖಾನೆಯಾಗಿ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಯಾವದಾದರೂ ಕಂಪುಳ್ಳ ಯಾವದಾದರೂ ಕೆಲಸ ನಡೆಯುವ ಕಾರ್ಖಾನೆಯಾಗಿ ಯಾ ಕೆಲಸ ಮಾಡುವ ಸ್ಥಳವಾಗಿ; ಅಥವಾ ಹೊಣಗರಿಕೆ, ಹುಲ್ಲು, ಮರದ ಸಾಮಾನುಗಳು, ಸಾದೆ, ಕರಿ, ಯಾ ಬೆರಣೀವಗೈರೆ ಯಿಂತಾದ್ದನ್ನು ಇಡುವ ದೊಡ್ಡಿ, ಯಾ ಕೋಣೆಯಾಗಿ ಉಪಯೋಗಿಸಿಕೊಳ್ಳಲ್ಪಟ್ಟ ಪ್ರತಿ ಸ್ಥಳದ ಮಾಲೀಕ ಯಾ ಅನುಭವದಾರನು, ಅವು ವಿಕ್ರಯದ ಬಗ್ಯೆ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಮತ್ತೊಂದು ಕಾರ್ಯಕ್ಕಾಗಿ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದ ತರುವಾಯ ಮೂರುತಿಂಗಳೊಳಗಾಗಿ ಆಬಗ್ಯೆ ಮೆಂಬರ್‌ಗಳ ದೆಸೆಯಿಂದ ಇಡಲ್ಪಡತಕ್ಕ ಬಂದು ಪುಸ್ತಕದಲ್ಲಿ ಅವರ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದು. ಮತ್ತು ಸದರೀ ಮೂರುತಿಂಗಳು ಕಳೆದ ತರುವಾಯ ಪ್ರೆಸಿಡೆಂಟರು ನೋಟಿಸ್ ಕೊಟ್ಟ ಯೆಂಟು ದಿನಗಳಿಗೆ ತರುವಾಯ ಯಾರಾದರೂ, ಅಂತಾ ಯಾವ ಸ್ಥಳವನ್ನಾಗಲಿ ರಿಜಿಸ್ಟರ್ ಮಾಡಿಸಿಕೊಳ್ಳದೆ ಉಪಯೋಗಿಸಿಕೊಂಡಲ್ಲಿ ಆ ತಕಸೀರ್ ನಡಿಸಲ್ಪಡುತ್ತಾ ಇರುವ ಪ್ರತಿದಿನಕ್ಕೂ 2 ಆಣೆ ಮೊದಲು, 5 ರೂಪಾಯಿಗಳವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

89. ಪರಂತು ಯಿದರಲ್ಲಿ ವಿಧಿಸಲ್ಪಟ್ಟ ಯಾ ಇಯಿಂದ ವಿಧಿಸಲ್ಪಡತಕ್ಕ ಬೈಲಾ ನಿಬಂಧನೆಗಳ ಪೈಕೀ ಯಾವದಾಗಲಿ, ಮಡಿಕೇರಿಯಲ್ಲಿ ಯಾವ ಬಗೆ ಜನಗಳಿಗಾಗಲಿ ಯಾವ ವ್ಯಕ್ತಿಗಾಗಲಿ, ಬಹಳ ಕಠಿಣವಾಗಿ ಕಾಣಬಂದ ಪಕ್ಷಕ್ಕೆ ಆಗ ಈ ಬೈಲಾನಿಬಂಧನೆಗಳು, ಚೀಫ್ ಕಮ್ಮಿಷನರವರ ಅನುಮತಿಯ ಮೇಲೆ ಬೋರ್ಡಿನವರ ಪೂರ್ಣವಾದ ಸಮಾಜದೊಳಗೆ ಯುಕ್ತ ತೋರುವ ಪ್ರಕಾರ ಯಾವಾಗ್ಯೂ ರದ್ದು ಮಾಡಲ್ಪಡಬಹುದು, ಪರಿಷ್ಕರಿಸಲ್ಪಡ ಬಹುದು, ಯಾ ತಿದ್ದುಪಡೀ ಮಾಡಲ್ಪಡಬಹುದು.

90. ಮತ್ತು ಕಾಫೀಸಾಗುವಳಿಯು ಜನಗಳ ಆರೋಗ್ಯ ಭಂಗಕಾರಿಯಾಗಿರುವದರಿಂದ ಅದನ್ನು ಪೇಟೆಯೊಳಗೆ ಮತ್ತು ರೋಮನ್ ಕ್ಯಾಥೋಲಿಕ್ ಗುಡಿವರಿಗೆ ಕಾಫೀಗಿಡ ಹಾಕುವಣ ನಿರೋಧಿಸಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 12, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮಿಶ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 11ನೇ ಆಗಸ್ಟ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಶ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ನಂ. ೪೨	ಚನ್ನಗಿರೀ ರಂಗಣ್ಣ ..	ಬಾಟ್ಟಣಿ ಕ್ರಿಷ್ಟರಾವ ವಗೈರೆ ..	೨೧ನೇ ಆಗಸ್ಟ್
ಸ್ಪಿ. ಅ. ೫೨ ರಿ. ೧೮	ಶೇತಾರಾಮಶಾಸ್ತ್ರಿ ..	ಧರಣ್ಣೈಯ ..	ಡಿಟೋ
ಸ್ಪಿ. ಅ. ೪೫	ಗಂಗವ್ಮಾ ..	ದೊಡ್ಡ ಬಚ್ಚವ್ಮ ವಗೈರೆ ..	ಡಿಟೋ
ಕೊ. ಸ್ಪಿ. ಅ. ೬	ಹಜಾಮರ ಹುಚ್ಚಾ ..	ಕಾಳೇಗಾಡ ..	೨೪ನೇ ಡಿಟೋ
ಸ್ಪಿ. ಅ. ೪೯	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	ಡಿಟೋ
ಸ್ಪಿ. ಅ. ೪೬	ಏಕಾಂಬರ ಮೊದಲ್ಯಾರ್ ..	ವೆಂಕಟರಮಣ್ಣೈಯ ..	ಡಿಟೋ
ಫೂಟ್ ಸ್ಪಿ. ಅ. ೯	ಪುಟ್ಟರಸವ್ಮ ..	ಬೆಟ್ಟೈಯ ..	ಡಿಟೋ
ಕೊ. ಅ. ನಂ. ೩	ರಾಮಶೆಟ್ಟಿ ಚಿಕ್ಕಪ್ಪೈಯ ..	ಮಲ್ಲುಶೆಟ್ಟಿ ..	೨೬ನೇ ಡಿಟೋ
ಸ್ಪಿ. ಅ. ೪೮	ವೆಂಕಟಕೃಷ್ಣಂಭಟ್ಟ ..	ಶ್ರೀನಿವಾಸ ಐಯಂಗಾರ್ ವಗೈರೆ ..	ಡಿಟೋ
ಕೊ. ಸ್ಪಿ. ಅ. ೭	ನಾರಣ್ಣೈಯ ..	ನಾಗೈಯ ..	ಡಿಟೋ
ಕೊ. ಸ್ಪಿ. ಅ. ೮	ಪುಟ್ಟವ್ಮ ..	ಬಿಂದಿ ಉರಫ್ ಗೌರಿ ..	೩೧ನೇ ಡಿಟೋ
ಅಪ್ಪೀಲ್ ೪ ರಿ. ನಂ. ೧೭	ಚನ್ನಮಲ್ಲೈಯ ..	ಮಲ್ಲವ್ಮ ವಗೈರೆ ..	೩೧ನೇ ಡಿಟೋ
ಸ್ಪಿ. ಅ. ೪೯	ಕೃಷ್ಣರಾವ್ ಯ. ಸುಬ್ಬರಾವ್ ..	ಮಹದೇವರಾವ್ ವಗೈರೆ ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಸಾಹೆಬರು ..	ನರಶಿಹ್ಮಮೇಸ್ತ್ರಿ ವಗೈರೆ ..	೫ನೇ ಸೆಪ್ಟಂಬರ
ಸ್ಪಿ. ಅ. ೪೭	ವೆಂಕಟಾಚಾರು ..	ಪೋಬಳಾಚಾರಿ ಗಾರ್ಡಿಯನ್ ಕನಕವ್ಮ ..	ಡಿಟೋ
ಕೊ. ಸ್ಪಿ. ಅ. ೯	ಹಿರಂಣ್ಣೈಯ ..	ನಂಜೇಗೌಡ ..	ಡಿಟೋ

J. D. GORDON, *Judl, Commr.*

ಪೋಲೀಸ್ ಇಲಾಖಾ.

ತಾರೀಖು 3ನೇ ಆಗಸ್ಟ್ 1876.

ತುಮಕೂರು ಡಿಸ್ಟ್ರಿಕ್ಟು ಸಬ್ ಇನ್ಸ್ಪೆಕ್ಟರ್ ಅಬ್ದುಲ್‌ಕರೀಂಯವರಿಗೆ 1876ನೇ ಇಸವೀ ಜೂಲೈ 28ನೇ ಮುಕ್ಕಾಂ ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೇ ಆಗಸ್ಟ್ 1876.

ಕೋಲಾರ ಡಿಸ್ಟ್ರಿಕ್ಟು ಸಬ್ ಇನ್ಸ್ಪೆಕ್ಟರ್ ನಾರಾಯಣಸಾಮಿನಾಯಿಕರಿಗೆ 1876ನೇ ಇಸವಿ ಜೂನ 29ನೇ ಮುಕ್ಕಾಂ ಲಗಾಯಿತು ಬಗರ್‌ತಲಬ್ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 10ನೇ ಆಗಸ್ಟ್ 1876.

ಕೋಲಾರ ಡಿಸ್ಟ್ರಿಕ್ಟು ಸಬ್ ಇನ್ಸ್ಪೆಕ್ಟರ್ ನಾರಾಯಣಸಾಮಿ ನಾಯಕರಿಗೆ 1876ನೇ ಇಸವಿ ಆಗಸ್ಟು 12ನೇ ಮುಕ್ಕಾಂ ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 10ನೇ ಆಗಸ್ಟ್ 1876.

ಹಾಸನ ಡಿಸ್ಟ್ರಿಕ್ಟು ಇನ್ಸ್ಪೆಕ್ಟರ್ ರಂಗರಾಯರಿಗೆ, 1876ನೇ ಜೂಲೈ 26ನೇ ತಾರೀಖು ಲಗಾಯಿತು 28ನೇ ತಾರಿಖೀ ವರಿಗೆ ಬಗರ್ ತಲಬ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕುಂ,"

W. PORTEOUS,
Offg. Dy. Inspector General of Police.

ಇನಾಂ ಇಲಾಖಾ.

ನಂ. 5. ತಾರೀಖು 21ನೇ ಜೂಲೈ 1876.

ಇದರಿಂದ ಇನಾಂದಾರ್ರುಗಳಿಗೆ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್ನಲ್ಲಿ ನಮೂದುಮಾಡಲ್ಪಟ್ಟ ತಾಲ್ಲೂಕುಗಳಲ್ಲಿರುವ ಇನಾಮತಿಗಳಿಗೆ ಆಡ್‌ಯಿರ್ಟರಿಂ ಯಂಬ ಮಧ್ಯಕಾಲದ ಸರಟಫಿಕೇಟಿಗಳು 745, ಕೋಲಾರ ವ ಬೆಂಗಳೂರು ಡಿಸ್ಟ್ರಿಕ್ಟುಗಳ ಡಿಫ್ಯುಟಿ ಕಮ್ಮಿಷನರಗಳಿಗೆ ಬಟವಾಡಿ ಬಗ್ಯೆ 1876ನೇ ಇಸವಿ ಜೂಲೈ 10 ವ 19 ಈ ತಾರೀಖುಗಳಲ್ಲಿ ಕಳುಹಿಸಲ್ಪಟ್ಟಿವೆ.

(ಮಾರ್ಜಿನ್: ಮುಳಬಾಗಲು, ಬೆಂಗಳೂರು, ದೇವನಹಳ್ಳಿ, ವ ನೆಲಮಂಗಲ.)

2. ಇನಾಂದಾರ್ರುಗಳು ಐರ್ಜ ತಾಲ್ಲೂಕುಗಳ ಅಮಲ್‌ದಾರ್ರುಗಳಿಂದ ಇಸಂವಾರ್ ನೋಟಿಸ ಬಂದ ಬಳಿಕ ಹಾಜರಾಗಿ ಸದರೀ ಸರಟಫಿಕೇಟಿಗಳನ್ನು ತೆಗದು ಕೊಳ್ಳತಕ್ಕದ್ದು. ಅಂಥಾ ನೋಟೀಸಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಅಮಲ್‌ದಾರ್ರುಗಳು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

R. A. COLE,
Supt. of Inam Settlements.

ಬೆಂಗಳೂರು ಮ್ಯುನಿಸಿಪಾಲಿಟಿ.

ತಾರೀಖು 5ನೇ ಆಗಸ್ಟು 1876.

ಸ 1871ನೇ ಇಸವಿ ಬೆಂಗಳೂರು ಮ್ಯುನಿಸಿಪಲ್ ರಿಗ್ಯುಲೇಷನ್‌ಗಳ 72ನೇ ಸೆಕ್ಷನ್‌ಕುರಿತು ಇದರಿಂದ ತಿಳಿಯಪಡಿಸುವದೇನಂದರೆ, ಬೆಂಗಳೂರು ಲಷ್ಕರ್ ಮ್ಯುನಿಸಿಪಲ್ ಸರಹದ್ದುಗಳೊಳಗೆ ಇರತಕ್ಕ ದರೋಬಸ್ತು ಮನೆಗಳು ಕಟ್ಟಗಳು ವ ಜಮೀನುಗಳು ಇವುಗಳ ಮೇಲೆ 1876—77ನೇ ಸಾಲಿಗೆ ಕಟ್ಟಲ್ಪಟ್ಟ ಸಾಲೀಯಾನಾ ಹುಟ್ಟುವಳಿ ಮತ್ತು ಅದರಮೇಲೆ ವಿಧಿಸಲ್ಪಟ್ಟ ರಿವಾಜು ಇವುಗಳನ್ನ ಅಡಗಿಸಿಕೊಂಡಿರುವ ರಿಜಿಸ್ಟರ್ ಬುಕ್ಕುಗಳನ್ನು ರೆಸಿಡೆನ್ಸಿ ರೋಡ್ 12ನೇ ನಂಬರ್ ಉಳ್ಳ ಮ್ಯುನಿಸಿಪಲ್ ಟ್ಯಾಕ್ಸೆಸ್ ಅಸೆಸ್ಸರ್ ವ ಕಲೆಕ್ಟರಯವರ ಆಫಿಸನಲ್ಲಿ ದಿನವಹಿ 11 ಘಂಟೆ ಲಾಗಾಯಿತು 4 ಘಂಟೆ ವರಿಗೂ ಮಾಲೀಕರಾಗಲಿ ಅವರಿಂದ ಅಧಿಕಾರ ಹೊಂದಿದ ಮುತಾಲೀಕರಾಗಲಿ ನೋಡಿಕ್ಕೊಳ್ಳಬಹುದು.

ಅಂತಾ ಹುಟ್ಟುವಳಿ ವ ರಿವಾಜುಗಳ ಮೇಲೆ ಮಾಡಲ್ಪಡುವ ದರೋಬಸ್ತು ಅಪ್ಪೀಲಗಳೂ ಈ ತಾರೀಖು ಲಗಾಯಿತು ಪೊಂ
ದು ತಿಂಗಳೊಳಗಾಗಿ ಮಾಡಲ್ಪಡತಕ್ಕದ್ದು, ಆ ತರುವಾಯ ಅಂತಾವುಗಳಿಗೆ ನಿಗೆ ಕೊಡಲ್ಪಡುವದಿಲ್ಲ.

J. H. Orr, M. D.,
President, Ml. Commission,
Bangalore Cantonment.

BANGALORE DISTRICT.

Notice of an application by Bairaiya for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟೀ ಕಮ್ಮಿಷನರವರ ಕೋರ್ಟಿನಿಂದ.

ಸಣ 1876ನೇ ಯಿಸವಿ ಶಿವಿಲ್ ಮಿಸಲೇನಿಯಸ್ ನಂಬರ್ 57.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಆನೆಕಲ್ಲು ತಾಲ್ಲೂಕು ರಾಗಿಹಳ್ಳಿ ಗ್ರಾಮದಲ್ಲಿ ಯಿರುವ ಮಶೀಹಳ್ಳಿ
ಬೈರೈಯನು ತನ್ನ ಮಗ ಕೆಂಪಣ್ಣನ ಲೇಣೆ 40 ರೂಪಾಯಿ ಬರವಮಾಡಿಕ್ಕೊಳ್ಳತಕ್ಕ ಬಗ್ಯೆ, ಸಣ 1860ನೇ ಇಸವಿ 27ನೇ ಆಕ್ಟ
ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷಣ 1876ನೇ ಇಸವಿ ಆಗಸ್ಟ 25ನೇ ತಾರೀಖು ದಿವಿ 12 ಘಂ
ಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೇಯಾಗಿ ಆ ಮೊಬಲಗ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ
ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 25ನೇ ಮಾಹೆ ಜುಲೈ ಸಣ 1876ನೇ ಇಸವೀ, ಮೊಕ್ಕಾಂ ಬೆಂಗಳೂರು.

Notice of an application by Nanjaiya for a certificate under Act XXVII of 1860.

ಸಣ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂ. 58.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ನೆಲವಂಗಲ ತಾಲ್ಲೂಕು ಬೊಮ್ಮಶೆಟ್ಟಿಹಳ್ಳಿ ಗ್ರಾಮದಲ್ಲಿ ಯಿರ್ರುವ
ಬೆಂಗಳೂರು ನಂಜೈಯನು ತನ್ನ ತಂದೆ ನಂಜೈಯನ ಲೇಣೆ 100 ರೂಪಾಯಿ ಬರವಮಾಡಿಕ್ಕೊಳ್ಳತಕ್ಕ ಬಗ್ಯೆ, ಸಣ 1860ನೇ ಇಸ
ವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷಣ 1876ನೇ ಇಸವಿ ಆಗಸ್ಟ 28ನೇ ತಾರೀ
ಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೇಯಾಗಿ ಆ ಮೊಬಲಗು ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ
ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice of an application by Krishnappa for a certificate under Act XXVII of 1860.

ಸಣ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 59.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಬಳ್ಳಾಪುರದ ಪೇಟೇಲಿ ಯಿರುವ ಇಂಜನೀಯರ್ ಆಫಿಸ ಬಂಡಿ
ಮೇಸ್ತ್ರಿ ಕೃಷ್ಣಪ್ಪನು ತಂದೆ ಪಾಪಣ್ಣನ ಲೇಣೆ 130 ರೂಪಾಯಿ ಬರವಮಾಡಿಕೊಳ್ಳತಕ್ಕ ಬಗ್ಯೆ ಸಣ 1860ನೇ ಇಸವಿ 27ನೇ ಆ
ಕ್ಟು ಪ್ರಕಾರ ಸರಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷಣ 1876ನೇ ಇಸವೀ ಆಗಸ್ಟ 30ನೇ ತಾರೀಖು ದಿವಿ 12
ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೇಯಾಗಿ ಆ ಮೊಬಲಗ ಮೇಲೆ ಹಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತ
ಮ್ಮ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

ಬತಾರೀಖು 29ನೇ ಮಾಹೆ ಜುಲೈ ಸಣ 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

L. Ricketts,
Offg. Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ತಾರಿಖು 31ನೇ ಜುಲೈ 1876.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸಲ್ಪಡುವ ಜೋಡೀ ಗ್ರಾಮಗಳಿಂದ ಸರಕಾರಕ್ಕೆ ಬರ
ತಕ್ಕ ಬಾಕೀ ಅದ್ಯಾಪಿ ಪಾವತೀ ಆಗಲಿಲ್ಲವಾದ ಸಬಬು ಅವುಗಳಿಂದ ಬರತಕ್ಕ ಬಾಕೀ ಮೊಬಲಗುಗಳನ್ನು ವಸೂಲ್ಮಾಡಿಕೊಳ್ಳಲಿ
ಕ್ಕೋಸ್ಕರ ಸದರೀ ಜೋಡೀ ಗ್ರಾಮಗಳು ಕುಣಿಗಲ್‌ನಲ್ಲಿರುವ ಅಮಲ್ದಾರ್ರವರ ಕಚ್ಚೇರಿಯಲ್ಲಿ 1876ನೇ ಇಸವಿ ಆಗಸ್ಟು
30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬ್ರ	ಹಣಕೊಡಲಿಕ್ಕೆತಪ್ಪಿದವರ ಹೆಸರು.	ಗ್ರಾಮದ ಹೆಸರು ಸಮ್ಮತು ವ ತಾಲ್ಲೂಕು.	1875–76 ಕ್ಕೆ ಬರಬೇಕಾದ ಜೋಡೀ.			ಪ್ರೊಸೆಸಖರ್ಚುಗಳು.			ಜಾಮಾ ಬರತಕ್ಕ ಬಾಕಿ.			ಷರಾಗಳು.
1	ವೆಂಕಟಪ್ಪವೆಗ್ಗೈರೇರು.	ಹುರಗಲ್‌ವಾಡಿ, ಕೊಪ್ಪಾ, ಕುಣಿಗಲ್.	117	4	4	7	0	0	124	4	0	ಖುಲ್ಲಾ ಜೋಡೀ 197 6 4 ಈ ಪೈಕಿ 80 ರೂಪಾಯಿ ವಸೂಲಾಗಿಧೆ.
2	ಅರುಣಾಚಲಭಟ್ಟ ಗ್ಗೈರೇರು.	ಕೃಷ್ಣಸಾಗರ ಅಗ್ರಹಾರ ಕುಣಿಗಲ್ ಕುಣಿಗಲ್.	102	6	0	1	0	0	103	6	0	ಖುಲ್ಲುಜೋಡಿ 328 ಈ ಪೈಕಿ 225—10 ವಸೂಲಾಗಿಧೆ.

T. E. Woodcock,
Offg. Dy. Commr.

ASHTAGRAM DIVISION.
ಅಷ್ಟಗ್ರಾಮದ ಡಿವೀಜನ್.

ತಾರೀಖು 2ನೇ ಆಗಸ್ಟು 1876.

ಇದರಿಂದ ತಿಳಿಯಪಡಿಸುವದೇನಂದರೆ,—ಚೀಫ್ ಕಮ್ಮಿಷನರ ಸಾಹೆಬರವರ 1876ನೇ ಇಸವಿ ಫೆಬ್ರವರಿ 9ನೇ ಮರಕ್ಕು೦ 365ನೇ ನಂಬರ ಹುಕ್ಕು೦ ಪ್ರಕಾರ ಸರ್ ಮಜಕೂರು ಫೆಬ್ರವರಿ 12ನೇ ಮರಕುಮಿನ ಮೈಸೂರು ಗೆಜೆಟ 23ನೇ ಪುಟದಲ್ಲಿ ತಾಲಿಂಖಾನೆಗಳನ್ನ ಕ್ರಮಪಡಿಸುವ ಬಗ್ಗೆ ಛಾಪಿಸಿರುವ ತಿದ್ದುಪಾಟು ಮಾಡಿದಂತಾ ರೂಲ್ಸಗಳು ಸರ್ 1876ನೇ ಇಸವೀ ಆಗಸ್ಟು 1ರ ಲಗಾಯತು ಈ ಡಿವಿಜನ್ನಿಗೆ ಸಂಬಂಧಪಟ್ಟ ಈ ಕೆಳಗೆ ವಿವರಿಸುವ ಷಹರಗಳಿಗೆ ಲಗಾವ್ ಆಗುತ್ತೆಂದು ಇದರಿಂದ ಪ್ರಚುರಪಡಿಸಿರುತ್ತೆ.

ಮೈಸೂರು ಡಿಸ್ಟ್ರಿಕ್ಟು.

1. ಮೈಸೂರು
2. ಶ್ರೀರಂಗಪಟ್ಣ
3. ಗಂಜಾಮು
4. ಮಳವಳ್ಳಿ
5. ಚಾಮರಾಜನಗರ
6. ಗುಂಡಲ್‌ಪೇಟೆ
7. ನಂಜನಗೂಡು
8. ಹುಣಸೂರು
9. ಪೆರ್‍ಯಾಪಟ್ಣ
10. ಸಾಲಿಗ್ರಾಮ
11. ಕಳಲೆ
12. ಕನ್ನೇಗವಡವಕೊಪ್ಪಲ್.
13. ಬನ್ನೂರು
14. ಕಿರಗಾವಲ್

ಹಾಸನ ಡಿಸ್ಟ್ರಿಕ್ಟು.

15. ಹಾಸನ
16. ಸಕಲೇಶಪುರ
17. ಮೂಡಗೆರೆ
18. ಅರಕಲಗೂಡ
19. ಕೋಣನೂರು
20. ನರಸೀಪುರ
21. ಮೇಲ್‌ಕೋಟೆ
22. ಕನ್ನಂಬಾಡಿ
23. ಚನ್ನರಾಯಪಟ್ಣ
24. ಶ್ರವಣಬಳಗೊಳ
25. ಬೇಲೂರು
26. ನಾಗಮಂಗಲ
27. ಬೆಳ್ಳೂರು.

A. C. Hay,
Commr.

MYSORE DISTRICT.

Notice of an application by Srinivasachari for a certificate under Act XXVII of 1860.

ಮೈಸೂರು ಡಿ|| ಜೆ|| ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಶಿವಿಲ್ ಫೂಟ ಮಿಸಲೇನಿಯಸ್ ನಂ. 57.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—ಫೌತೀಯಾದ ತನ್ನ ತಂದೆ ವೆಂಕಟರಾಯಾಚಾರ್‍ರಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರಟಿಫಿಕೇಟ ಆಗಬೇಕೆಂದು ನಂಜನಗೂಡು ಕಸಬಾದಲ್ಲಿ ಯಿರುವ ಶ್ರೀನಿವಾಸಾಚಾರ್ರು ಬರದುಕೊಂಡ ಅರ್ಜಿಯನ್ನು ಆಗಸ್ಟ ತಿಂಗಳು 4ನೇ ತಾರೀಖಿನಲ್ಲಿ ಹಿಯರಿಂಗ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟ ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿಧೆ.

ತಾರೀಖು 17ನೇ ಜುಲೈ 1876ನೇ ಇಸವಿ, ಮೊಕ್ಕಾ೦ ಮೈಸೂರು.

Notice of an application by Rukminiyamma for a certificate under Act XXVII of 1860.

ಸನ್ 1876ನೇ ಇಸವಿ ಶಿವಿಲ್ ಫ್ರೂ. ಮಿ. ನಂಬರ್ 59.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೃತೀಯಾದ ತನ್ನ ತಂದೆ ಮಹಾಭಾಷ್ಯ ಶ್ರೀನಿವಾಸ ಮೂರ್ತ್ಯಾಚಾರ್ರಿಗೆ ಬರಬೇಕಾದ 800 ರೂಪಾಯಿಗಳನ್ನು ವಸೂಲ್ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ತಲಕಾಡು ತಾಲ್ಲೂಕು ಅಶ್ವತ್ಥಪುರದ ಅಗ್ರಹಾರದಲ್ಲಿರುವ ರುಕ್ಮಿಣಿಯಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನು ಆಗಸ್ಟು ತಿಂಗಳು 26ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದಿಧೆ ತಿಳಿಯುವದು.

ತಾರೀಖು 18ನೇ ಮಾಹೆ ಜುಲೈ 1876ನೇ ವಿಸವಿ ಮೊಕ್ಕಾಂ ಮೈಸೂರು.

Notice of an application by Applachar for a certificate under Act XXVII of 1860.

1876ನೇ ಇಸವಿ ಶಿವಲ್ ಮಿಸಲೇನಿಯಸ್ ಮೊಕದ್ದಮಾ ನಂಬರ್ 60.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ;—ಮೃತೀಯಾದ ತನ್ನತಂದೆ ಗರ್ಗೇಶ್ವರಿ ವೆಂಕಟಾಚಾರ್ರಿಗೆ ಬರಬೇಕಾದ 50 ರೂಪಾಯಿ ಯಿದರ ಬಡ್ಡಿ ಗಳನ್ನು ವಸೂಲ್ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಯಳಂದೂರು ತಾಲ್ಲೂಕು ಮದ್ದೂರಲ್ಲಿರುವ ಅಪ್ಲಾಚಾರ್ರು ಕೊಟ್ಟಿರತಕ್ಕ ಅರ್ಜಿಯನ್ನು ಆಗಸ್ಟು ತಿಂಗಳು 18ನೇ ತಾರೀಖಿನಲ್ಲಿ ಯಿಯರಿಂಗ್ ಮಾಡುವದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ ಹಾಜರಾಗಿ ಅವರ ತಕರಾರನ್ನು ಸಿರಪಡಿಸಿಕ್ಕೊಳ್ಳತಕ್ಕದ್ದಿದೆ.

ತಾರೀಖು 17ನೇ ಮಾಹೆ ಜುಲೈ 1876ನೇ ಇಸವಿ ಮೊಕ್ಕಾಂ ಮೈಸೂರು

Notice of destruction of old Judicial records.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಜುಡಿಷಲ್ ಕಮ್ಮಿಷನರ್ ಸಾಹೆಬರವರ ಸನ್ 1867ನೇ ಇಸವೀ ಆಗಸ್ಟ 30ನೇ ಮರಕ್ಕುಂ 1045—39ನೇ ನಂಬರ್ ಸರ್ಕ್ಯೂಲರ್ ಅನುಸರಿಸಿ ಐದು ವರುಷಕ್ಕಿಂತ ಜಾಸ್ತಿಯಾಗಿ ನಿಂತು ಯಿರತಕ್ಕ ಡಿಸ್ಟ್ರಿಕ್ಟ ಮಜಕೂರಿನ ಈ ಕೆಳಗೆ ನಮೂದಾಗುವ ತಾಲ್ಲೂಕುಗಳ ಲೇಟ್ ಅಷ್ಟಗ್ರಾಮದ ಡಿವಿಜನ್ ಸೂಪರಿಂಟೆಂಡೆಂಟ್ ಕೋರ್ಟು, ಮತ್ತು ಡಿಸ್ಟ್ರಿಕ್ಟ್ ಮಜಕೂರ್ ಬಾಬತು ಜೂಡಿಷಲ್ ರಿಕಾರ್ಡುಗಳನ್ನ ಅಂದರೆ ಶಿವಿಲ್ ಮತ್ತು ಕ್ರಿಮಿನಲ್, ಅರಿಜನಲ್, ಅಪ್ಪೀಲ್, ಅಮಲ್‌ಜಾರಿ, ಮಿಸಲೇನಿಯಸ್ ಕಟ್ಟುಗಳನ್ನೂ, ಚಿಲ್ಲರೇ ಅರ್ಜೀ ವಗೈರೇ ಕಾಗದಗಳನ್ನೂ, ಲೆಖ್ಖಗಳನ್ನೂ ಮತ್ತು ಹದಿನಾಲ್ಕು ವರುಷಗಳು ಕಳದು ಹೋಗಿ ಯಿರತಕ್ಕ ಕ್ರಿಮಿನಲ್ ಮೊಕದ್ದಮೆಗಳ ಸಜಾ ನಾಮೆಗಳನ್ನೂ ಸಹ ನಾಶಪಡಿಸಬೇಕಾಗಿ ಇರುವದರಿಂದ ಯಿವುಗಳಲ್ಲಿ ದಸ್ತೈವಜು ಮುಂತಾದ ದಾಖಲೆಗಳು ಆವಶ್ಯಕ ವುಳ್ಳವರು ಈ ತಾರೀಖು ಲಗಾಯತು (30) ದಿವಸಗಳ ವಳಗಾಗಿ ಅವರುಗಳಿಗೆ ಆವಶ್ಯಕವಾದ ದಸ್ತೈವಜು ಮುಂತಾದ ದಾಖಲೆಗಳನ್ನು ಅವುಗಳು ಯಿರತಕ್ಕ ಕೋರ್ಟಿಗೆ ಹಾಜರಾಗಿ ಪಡೆದುಕೊಳ್ಳತಕ್ಕದ್ದು, ಹಾಗೆ ಪಡೆದುಕೊಳ್ಳದೇ ಹೋದರೆ ನಂತರ ದೊರೆಯಲಾರದು.

	ಯಾವ ಇ|| ಲಾ||	ಯಾವ ಇ|| ವರಿಗೆ.
ಲೇಟ್ ಅಷ್ಟಗ್ರಾಮದ ಡಿವಿಜನ್ ಸೂ|| ಕೋರ್ಟು ಬಾಬತು. ..	1833	1862
ಡಿಸ್ಟ್ರಿಕ್ಟ್ ಮಜಕೂರ್ ಬಾಬತು	1862	1870
ಮೈಸೂರು ತಾ|| ಲೇಟ್ ಟರ್ವ ಮುನಸೀಫ್ ಕೋರ್ಟು ಮತ್ತು ಸರಬಾಜೀ ಕೋರ್ಟು ಬಾಬತು. ..	1839	1870
ಅಷ್ಟಗ್ರಾಮದ ತಾ|| ಕೋರ್ಟು ಬಾ||	1869	1869
ಮಂಡ್ಯಾ. ..	1866	1869
ಲೇಟ್ ಮದ್ದೂರು ತಾಲ್ಲೂಕು. ..	1860	1869
ಮಳವಳ್ಳೀ.	1867	1869
ತಲಕಾಡು.	1864	1869
ಚಾಮರಾಜನಗರ.	1868	1869
ಗುಂಡಲು ..	1863	1869
ಹೆಗ್ಗಡದೇವನಕೋಟೆ. ..	1865	1870
ನಂಜನಗೂಡು.	1860	1869
ಪಿರ್ರ್ಯಾಪಟ್ಣ.	1867	1869
ಯಡತೊರೆ.	1867	1870
ಯಳಂದೂರು.	1867	1870

ತಾರೀಖು 2ನೇ ಮಾಹೇ ಆಗಸ್ಟ 1876ನೇ ಇಸವೀ ಮೊಕ್ಕಾಂ ಮೈಸೂರು.

C. J. PEARSE,
Dy. Commr.

HASSAN DISTRICT.

Notice of an application by Brahammaiya for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆ॥ ಕ॥ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಹಾಸನದಲ್ಲಿ ಇರುವ ಬ್ರಹ್ಮೈಯನೆಂಬುವನು ಪಾತೀ ಆದ ತನ್ನ ಅಜ ಪದ್ಮರಾಜ ಪುಟ್ಟಂಣಶೆಟ್ಟಿಯೆಂಬವನ ಸಾಲ 700 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ 60ನೇ ಇಸವೀ 27ನೇ ಆಕ್ಟು ಮೇರೆ ಸರಟಿಫಿಕೇಟ ಕೊಡಿಸಬೇಕೆಂತಾ ಕೊಟ್ಟ ಅರ್ಜೀ ಫೈಸಲಬಗ್ಯೆ ಸರ್ ಮಜಕೂರ ಆಗಸ್ಟ್ 24ನೇ ತಾರೀಖನ್ನ ನಿಷ್ಕರ್ಷೆಮಾಡಿ ಇರುವದರಿಂದ ತಕರಾರು ಇರತಕ್ಕವರೆಲ್ಲ ಮೇಲೆಕಂಡ ತಾರೀಖು ಹಗಲು 11 ಗಂಟೆಗೆ ಕೋರ್ಟುಇದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರುಮಾಡಿ ಕೊಳ್ಳಬೇಕು.

ತಾರೀಖು 26—7—67.

Notice of sale of a coffee land surreptitiously cultivated.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ,—ಮಂಜರಾಬಾದ ತಾಲ್ಲೂಕು ಬಂಣಕಲ್ಲು ಹೋಬಳಿ ಭೈರಾಪುರದ ಗ್ರಾಮಕ್ಕೆ ಸೇರಿದ ಈ ಕೆಳಗೆ ನಮೂದಾಗಲ್ಪಡುವ ಕಲ್ಲನ ಸುಬ್ಬನೆಂಬವ ಬಗರ್ ಹುಕ್ಕುಂ ಕಾಫೀ ಸಾಗುವಳೀ ಮಾಡಲ್ಪಟ್ಟು ಸರಕಾರಕ್ಕೆ ವಪ್ಪಿಸಲ್ಪಟ್ಟು ಯಿರುವಂತಾ ಜಂಗಲ್ ಜಮೀನನ್ನು ಅದೇ ಸ್ಥಳದಲ್ಲಿ 1876ನೇ ಇಸವೀ ಶೆಪ್ಟಂಬರ್ ತಾರೀಖು 5ನೇ ಹಗಲು 11 ಗಂಟೇ ಲಾಗಾಯತು ಸಾಯಿಂಕಾಲದ 4 ಗಂಟೇ ವರಿಗೂ ಹರಾಜು ಹಾಕಿಸುತ್ತೆ, ಯಿಚ್ಛೆವುಳ್ಳವರು ಆಕಾಲದಲ್ಲಿ ಜಡಿ ದರಖಾಸ್ತುಮಾಡಿ ಪಡೆಯ ಬಹುದು. ಮತ್ತು ಹರಾಜಿನ ಷರತ್ತುಗಳನ್ನು ಹರಾಜು ಮಾಡಿಸುವ ಆಫಿಸರು ಆಕಾಲದಲ್ಲಿ ಸಂಬಂಧಪಟ್ಟ ಜನರಿಗೆ ರೂಬರೂ ತಿಳಿಸುತ್ತಾರೆ.

1876ನೇ ಇಸವೀ ಶೆಪ್ಟಂಬರ್ ತಾರೀಖು 1ರ ವರಿಗೂ ಯಿದಕ್ಕಾಗಿ ದರಖಾಸ್ತು ಮಾಡತಕ್ಕವರು ಯಿದ್ದರೆ, ಕ್ರಮಪ್ರಕಾರ ನಮ್ಮ ಆಫಿಸಿನ ಹೆಸರಿಗೆ ಬರೆದುಕೊಳ್ಳುತ್ತಾ ಬರಬಹುದು, ಆದರೆ ದರಖಾಸ್ತು ಬರದುಕೊಂಡಂತಾವರು ಹರಾಜು ಕಾಲದಲ್ಲಿ ಆ ಸ್ಥಳದಲ್ಲಿ ಹಾಜರ್ ಯಿರಬೇಕು, ತಪ್ಪಿದರೆ ಅಂತಾವರ ದರಖಾಸ್ತನ್ನು ಮಂಜೂರ್ ಮಾಡತಕ್ಕ ಅಥವಾ ತಿರಸ್ಕರಿಸತಕ್ಕ ಅಧಿಕಾರವು ಡೆ॥ ಕಮ್ಮಿಷನರ್‌ಸಾಹೆಬರವರನ್ನ ಹೊಂದಿರುತೆ.

ವತ್ತುವರಿ ನಂಬರ್ 27ನೇ ಗುಂಡೀ ಹಿತ್ತಲ್.

ಚಕ್ಕುಬಂದಿ.

ಪೂರ್ವಕ್ಕೆ—ಗುಡ್ಡಾ ದಕ್ಷಿಣಕ್ಕೆ—ಹನಾಲ್.

ಪಶ್ಚಮಕ್ಕೆ—ಗುಡ್ಡಾ ವುತ್ತರಕ್ಕೆ—ಗುಡ್ಡದ ಮೇಲಗಡೆ ಕಿಸಾಲೆ ಘಾಟಿಗೆ ಹೋಗುವ ಮಾರ್ಗ ದಾರಿ.

ಈ ಮಧ್ಯೆ ಪೂರ್ವ ಪಶ್ಚಮ ಗಜ 65, ದಕ್ಷಣೋತ್ರ 80, ಸಲೆಗಜಗಳು 5200ಕ್ಕೆ ಯಕರೆ 1, ರೋಡ್ 0, ಪೋಲ್ 11, ಗಜ $27\frac{1}{4}$ ವುಳ್ಳದ್ದು.

ಬತಾರೀಖು 2ನೇ ಆಗಸ್ಟು ಸರ್ 1876ನೇ ಇಸವಿ, ಮೊಕ್ಕಾಂ ಹಾಸನ.

Notice of destruction of old Criminal records.

ಅತ್ತಿಗುಪ್ಪೆ ತಾಲ್ಲೂಕು ಕೋರ್ಟಿನಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಡಿಸ್ಟ್ರಿಕ್ಟ ಹುಜೂರಿಂದ ಸಾದರಾದ 1,959—676ನೇ ಹುಕ್ಕುಂ ಪ್ರಕಾರ ಕ್ರಿಮಿನಲ್ ರಿಕಾರ್ಡ ನಾಶಪಡಿಸತಕ್ಕ ಕಾಗದಗಳು.

ಸರ್ 1870ನೇ ಇಸವಿ ಶಂರ್ಟನ್ ಸಜಾನಾಮ ಶಿವಾಯಿ ಬಾಕೀ ಅಂದರೆ ಯಾದಾಸ್ತುಗಳು 1, ಪೂಟ ಹುಕ್ಕುಂಗಳು 2, ರಿಪೋರ್ಟುಗಳು 3, ವಿಸಿಷ್ಟ ಡೇರೀಗಳು 4, ಲೆಖ್ಖಗಳು 5, ಚಿಲ್ಲರೆ ನಡವಳಿಕೆಗಳು 6, ದಸ್ತೈವೇಜುಗಳು 7.

ಸರ್ 1857ನೇ ಇಸವಿ ಬಾಬತು 14 ವರೆಷಕ್ಕೆ ಮೇಲ್ಪಟ್ಟ ಶಂರ್ಟನ್ ಸಜಾನಾಮಾ ಯಿವುಳಗನ್ನ ಮುಂದೆ ಬರುವ ಯಿದೇ ಇಸವಿ ಆಗಸ್ಟ್ 31ನೇ ತಾರೀಖಿನಲ್ಲಿ ನಾಶ ಪಡಿಸುವದ್ದರಿಂದ ಅಪೇಕ್ಷೆ ವುಳ್ಳ ಕಕ್ಷಿಗಾರ್ರುಗಳು ಸದರೀವಾಯಿದೆ ವಳಗಾಗಿ ಕೋರ್ಟಿಗೆ ಹಾಜರಾಗಿ ಅವರವರಿಗೆ ಬೇಕಾದ ದಾಖಲೆಗಳನ್ನು ಧಾರಾಳವಾಗಿ ತೆಗದು ಕೊಳ್ಳಬಹುದು. ಅನಂತರ ಅಪೇಕ್ಷಿಸಿದಲ್ಲಿ ದೊರೆಯಲಾರದು.

ತಾರೀಖು 26ನೇ ಆಗಸ್ಟು 1876ನೇ ಇಸವಿ.

H. E. Mottet,
Dy. Commr.

NAGAR DIVISION.

ನಗರ ಡಿವೀಜನ್.

ನಂ. 14. ತಾರೀಖು 20ನೇ ಜುಲೈ 1876.

ಶಿವಮೊಗ್ಗಾ ತಾಲ್ಲೂಕು ಮರಮ್ಮತ್ ಮುತ್ಸದ್ದಿ ನಾಗೋಬರಾಯರು ಬೆಂಕೀಪುರದ ದುಮ್ಮಿ ರಸ್ತೆ ಬಾಬಿನಲ್ಲಿ ನಡದ ಖುರ್ದು ಬುರ್ದು ದರಿಯಾಫ್ತಿ ಆಗಲು ಮಾಹೇ ಮಜಕೂರು 11ನೇ ಮುಕ್ಕಾಂ ಲಗಾಯಿತು ಸಸ್ಪೆಂಡ್ ಮಾಡಲ್ಪಟ್ಟಿರುತ್ತಾರೆ.

ನಂ. 15. ತಾರೀಖು 20ನೇ ಜುಲೈ 1876.

ಶಿವಮೊಗ್ಗಾ ಡಿಸ್ಟ್ರಿಕ್ಟು ಲೋಕಲ್‌ಫಂಡ್ ಇಂಜೆನಿಯರ್ ಆಫಿಸ್ ಮುತ್ಸದ್ದಿ ಕೃಷ್ಣಯ್ಯಂಗಾರ್‌ರಿಗೆ ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 16. ತಾರೀಖು 20ನೇ ಜುಲೈ 1876.

ತರೀಕೆರೆ ತಾಲ್ಲೂಕು ಕಾಯಂ ಮೆಸ್ತ್ರೀ ಯಲ್ಲಪ್ಪನವರಿಗೆ ಕೊಡಲ್ಪಟ್ಟ ವೊಂದು ತಿಂಗಳ ಪ್ರಿವಿಲೀಜ್ ರಜಾ ಬಗರ್ ಅಲೌರ್ವೆನ್ಸ್ ರಜಾಕ್ಕೆ ಬದಲಾಯಿಸಲ್ಪಟ್ಟು ಬಗರ್ ಅಲೌರ್ವೆನ್ಸ್ ವೊಂದು ತಿಂಗಳು ಯಂಟು ದಿನಗಳ ಜಾಸ್ತೀ ರಜಾ ಕೊಡಲ್ಪಟ್ಟಿರುತ್ತೆ. ಮೈಲಾರ್ರಯ್ಯನವರು ಸದರೀ ಯವರಿಗೆ ಬದಲೀಯಾಗಿ ಮೊಕರರ್.

ನಂ. 17. ತಾರೀಖು 27ನೇ ಜುಲೈ 1876.

ಸಸ್ಪೆಂಡ್ ಮಾಡಲ್ಪಟ್ಟ ನಾಗೋಬರಾಯರಿಗೆ ಬದಲಾಗಿ ತಿರುನಾರಣ್ಯೆಯನವರು ಶಿವಮೊಗ್ಗಾ ತಾಲ್ಲೂಕು ಮರಮ್ಮತ್ ಮುತ್ಸದ್ದಿಯಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

J. A. CAMPBELL,
Commissioner.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಪೊಲೀ ಇಲಾಖಾ.

ತಾರೀಖು 4ನೇ ಆಗಸ್ಟ್ 1876.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಬೆಂಕೀಪುರ ತರೀಕೆರೆ ಇವುಗಳ ಮಧ್ಯೆ ಇರುವ ಕೆರೇ ಹಳ್ಳಿಯ ಕೆರೇ ಕಟ್ಟೇಮೇಲೆ ಇಳದಿದ್ದ ಕೆಲವು ಭಂಡಿಗಳಿಂದ 1876ನೇ ಜುಲೈ 19ನೇ ಮುಕ್ಕಾಂ ರಾತ್ರೆ ಶಿವಮಗ್ಗಾ ಕಸಬಾ ಷರಾಫ್ ರಂಗಪ್ಪನಬಾಬತು ಬಟ್ಟೆಗಳನ್ನು ಕಳವು ಮಾಡಿಕೊಂಡು ಹೋಗಿರುವ ಮೊಕದ್ದಮೆಯಲ್ಲಿ ಸೇರಿದ ತಕಸೀರ್ ವಂದರ ಪತ್ತೆ ಆಗಲಿಕ್ಕೂ ಅವರ ಮೇಲೆ ತಪ್ಪು ಸ್ಥಾಪನೆಆಗಲಿಕ್ಕೂ, ಸಹಾ ಸಾಧಕವಾದ ಖಾತಮೀ ಕೊಡುವ ಮನುಷ್ಯನಿಗೆ 20 ರೂಪಾಯಿಗಳ ಇನಾಂ ಸದರೀ ರಂಗಪ್ಪನಿಂದ ಕೊಡಲ್ಪಡುವದು.

Notice of an application by Ramachandrachar for a certificate under Act XXVII of 1860.

ಶಿವಮೊಗ್ಗಾ ಡಿ॥ ಡೆ॥ ಕೆ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಂದೆತಂದೆ ನರಸಿಹ್ಮಾಚಾರೀಯು ಪಾತೀಆಗಿ ಯಿರುವದರಿಂದ ಅವರಿಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 900 ರೂಪಾಯಿ ವಸೂಲ್ಮಾಡಿ ಕೊಳ್ಳುವದಕ್ಕೆ ತಂನ ಹೆಸರಿಗೆ ಸರಟಿಫಿಕೇಟ್ ಕೊಡಿಸಬೇಕಾಗಿ ನಗರದ ಕಸಬಾದಲ್ಲಿಯಿರುವ ಹೊಸಪೇಟೆ ರಾಮಚಂದ್ರಾಚಾರ್ಯನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಆಗಸ್ಟು 29ನೇ ದಿನ ಹಿಯರಿಂಗ್ ನಿಷ್ಕರ್ಷೇ ಮಾಡಿಯಿಧೆ ತಕರಾರು ವುಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿಧೆ.

ಬತಾರೀಖು 15ನೇ ಜುಲೈ 1876ನೇ ಇಸವೀ ಮೊಕ್ಕಾಂ ಶಿವಮೊಗ್ಗಾ.

Notice of an application by K. Ramachar for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಂನ ತಮ್ಮ ಗೋಪಾಲಾಚಾರಿಯು ಪಾತೀಲಾಗಿ ಇರುವದ್ದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವೀ ಸಾಲದಬಾಬತು 260 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ ಸರಟಿಫಿಕೇಟ ಕೊಡಿಸಬೇಕಾಗಿ ಶಿಕಾರಿಪುರದ ಕಸಬಾದಲ್ಲಿ ಇರುವ ಕುಪ್ಣಗಿ ರಾಮಾಚಾರ್ಯನು ಅಪ್ಲಿಕೇಷನ್ ಕೊಟ್ಟು ಸಂಗತಿ ವಿಚಾರಣೆಗೆ ಬರುವ ಆಗಸ್ಟ 31ನೇ ದಿನ ಹಿಯರಿಂಗ್ ನಿಷ್ಕರ್ಷೆ ಮಾಡಿಇದೆ ತಕರಾರು ಉಳ್ಳವರು ಆದಿನ ಹಗಲು 10 ಘಂಟೆಗೆ ಈ ಕೋರ್ಟಿನಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ. ತಾರೀಖು 29ನೇ ಜುಲೈ 1876ನೇ ಇಸವಿ ಮೊಕ್ಕಾಂ ಶಿವಮೊಗ್ಗ.

C. S. Blair,
Offg. Dy. Commr.

KADUR DISTRICT.

Notice of sale of lands in satisfaction of Government dues.

ಕಡೂರು ಡಿಸ್ಟ್ರಿಕ್ಟ ಡೆ|| ಕಮ್ಮಿಷನರವರ ಕೋರ್ಟಿನಿಂದ.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ ಈ ಕೆಳಗೆ ಕಂಡ ಜಮೀನಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನು ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ ತರೀಕೆರೆ ವಗೈರೇ ತಾಲ್ಲೂಕು ಆಯಾಯ ಗ್ರಾಮದಲ್ಲಿ ಚಾಲ್ತೀ ಇಸವಿ ಆಗಸ್ಟು ಮಾಹೆಯಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಆಯಾಯ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಜಡ ದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವಿ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭ ಬಿದ್ದಂತೆ ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಸೀಲ್ವಾರ ತೋರಿಸಲ್ಪಟ್ಟ ಪ್ರಕಾರ ರೂ|| 344 ಆ|| 13 ಪೈ|| 2 ಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತ್ತವೆ. ಜಮೀನ ತಪಶೀಲ್ಬಗ್ಯೆ ಜುಲೈ 29ನೇ ಮರ್ಕುಂ ಮೈಸೂರು ಗೆಜಟ್ 378 79ನೇ ಪುಟಗಳನ್ನು ನೋಡತಕ್ಕದ್ದು.

Notice offering a reward of Rs. 500 for the discovery of property stolen from the house of one Venkatgiriyappa at Shringeri on the night of the 16th July 1876.

ಕೊಪ್ಪ ತಾಲ್ಲೂಕು ಶ್ರಿಂಗೇರಿಯಲ್ಲಿರುವ ನಗರದ ಮಂಜೈಯನ ಮಗ ವೆಂಕಟಗಿರಿಯಪ್ಪನ ಬಾಬತು ಮನಿಗೆ ಜುಲೈ ತಾರೀಖು 16ನೇ ರಾತ್ರೆ ಕಳ್ಳರು ಕನ್ನಹಾಕಿ ಕಳವು ಮಾಡಿಕೊಂಡು ಹೋದ ಮಾಲ್ ಪಟ್ಟಿ, ಫಿರ್ಯಾದಿ ವೆಂಕಟಗಿರಿಯಪ್ಪನು ಈ ಮಾಲ್ ಪತ್ತೇಮಾಡಿ ಕೊಟ್ಟವರಿಗೆ 500 ರೂಪಾಯಿ ಇನಾಂ ಕೊಡುವದಾಗಿ ತಿಳಿಸಿರುತ್ತಾನೆ.

ಮಾಲ್ಪಟ್ಟಿಯನ್ನು ಮಾಹೇ ಮಜ|| 5ನೇ ಮರ್ಕುಂ ಗೆಜಟಿನ 389—391 ವರೆಗಿನ ಪೇಜುಗಳನ್ನು ನೋಡಿಕೊಳ್ಳತಕ್ಕದ್ದು.

Mahomed Saliha,
For Dy. Commr.

ಕರೆನ್ಸೀ ನೋಟಗಳು.

ಇದರಡಿ ನಮೂದಿಸಲ್ಪಡುವ ಕರೆನ್ಸಿ ನೋಟುಗಳ ತುಕಡಿಗಳು ಟಪಾಲ ದ್ವಾರಾ ಶಿವಮೊಗ್ಗೆ ಇಂದ ಚನ್ನಗಿರಿಗೆ ರವಾನೆ ಆಗುತ್ತಿರುವಲ್ಲಿ ಹೋಗಿರುತ್ತವೆ.

ನಂಬರು	ಮೊಬಲಗು	ಹಕ್ಕುದಾರ
$\frac{B}{34}$ 29994—ಬಲಭಾಗ	10	ಚನ್ನಗಿರಿ ತಾಲ್ಲೂಕು ಸೂಳೆಕೆರೆ ಪಟೇಲ್ ಕೃಷ್ಣಯ್ಯಂಗಾರ್.
$\frac{B}{49}$ 07254—ಎಡ ಭಾಗಗಳು	10	
$\frac{B}{35}$ 93915 „	20	
$\frac{B}{35}$ 93914 „	20	

ಮದರಾಸ ರೈಲ್ವೇ.

ರಿವಾಜುಗಳು ಕಮ್ಮೀ ಮಾಡೋಣ.

ತಾರೀಖು 5ನೇ ಆಗಸ್ಟು 1876.

ಇದರಿಂದ ತಿಳಿಯಪಡಿಸುವದೇನಂದರೆ—ಮಾಹೇ ಮಜಕೂರು 14ನೇ ತಾರೀಖು ಸೋಮವಾರದ ಲಾಗಾಯತು ವ ಆತರುವಾಯ ಯಿದರಡಿ ಬರುವ ಕಮ್ಮೀದರಗಳು ಜಾರೀಯಲ್ಲಿ ಬರುವವು.

1. ಯಿದರಡಿ ಬರುವ ಜಿನಿಸೀಗಳಿಗೆ ವರ್ಜ ವ ಫಾಸಲೆ ನಿಮಿತ್ಯವಿಲ್ಲದೆ ಮಿನಿಮಂ ಚಾರ್ಜು 1 ರೂಪಾಯಿಗೆ ವೊಳಪಟ್ಟು ಮೈಲೀ ವೊಂದಕ್ಕೆ ಟನ ವೊಂದಕ್ಕೆ 8 ಕಾಸುಗಳ ಮೇರೆ ಚಾರ್ಜು ಹಾಕಲ್ಪಡುವದು.

ನಾನಾವಿಧವಾದ ಧಾನ್ಯ.	ಹಿಂಡಿ	ಕಬ್ಬಿಣತುಂಡುಗಳು
ಕಳ್ಳೇಕಾಯಿ	ಈರುಳ್ಳಿ	ಕಲ್ಲು
ಜೆಲ್ಲಾ	ಉರಳಗಡ್ಡೆ	ವೊಗದುಂ ಸಕ್ಕರೆ
ಕಾಕಂಬಿ (ಪೀಪಾಯಿಗಳಲ್ಲಿ)	ನಾನಾಜಾತೀ ಬೀಜಗಳು	ಹುಳಿಹಣ್ಣು (ಬೇತಯಾರ ಬಾಬತು)
ಮೈರಾಬೊಲಾಸ್ಸ ಯಂಬ ಹಂಣುಗಳು	ಸೀಗೇಕಾಯಿ	ಅರಸಿನ (ಸಾಧಾರಣವಾದ್ದು)
ನಕ್ಸವಾಮಿಕಾ (ತಯಾರಾದ್ದು) ಅಥವಾ ಯಟ್ಟೀಕೊಟ್ಟೆ	ಚೌಳುಮಣ್ಣು	ಗೋಧಿ

2. ಜವಳೀಗಳಿಗೆ ಮತ್ತು ನೂಲುಗಳಿಗೆ (ಯುರೋಪ್ ಕಟ್ಟುಗಳ) ಮೈಲ 1ಕ್ಕೆ ಟನ 1ಕ್ಕೆ 18 ಕಾಸುಗಳಿಗೆ ಬದಲಾಗಿ 14 ಕಾಸುಗಳ ಮೇರೆ ಚಾರ್ಜು ಹಾಕಲ್ಪಡುತ್ತೆ, ಮತ್ತು ಜವಳೀಗಳಿಗೆ ವ ನೂಲುಗಳಿಗೆ (ವಳಾಗ ಕಟ್ಟುಗಳು) ಮೈಲ ವೊಂದಕ್ಕೆ ಟನ ವೊಂದಕ್ಕೆ 24 ಕಾಸುಗಳಿಗೆ ಬದಲಾಗಿ 18 ಕಾಸುಗಳ ಮೇರೆ ಚಾರ್ಜು ಹಾಕಲ್ಪಡುತ್ತೆ.

R. B. ELWIN,
Agent & Manager.

Mysore Government Press, Bangalore—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 12, ಸ೯ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಸ೯ 1871ನೇ ಯಿಸವೀ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟನ್ನು ತಿದ್ದುಪಡಿ ಮಾಡಲಿಕ್ಕೆ ಹುಟ್ಟಿದ ಬಿಲ್.

ಪೀಠಿಕೆ.

1871ನೇ ಯಿಸವಿಯ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟನ್ನು ತಿದ್ದುಪಡಿ ಮಾಡಲಿಕ್ಕೋಸ್ಕರ ಇದರಿಂದ ನಿರ್ಣಯಿಸಲ್ಪಡುವದೇನಂದರೆ.

1871ನೇ ಇಸವಿಯ 8ನೇ ಆಕ್ಟು, 7ನೇ ಸೆಕ್‌ಷನ್ ತಿದ್ದುಪಡಿ.

1· 7ನೇ ಸೆಕ್‌ಷನಿಗೆ ಬದಲಾಗಿ ಯಿದರಡಿ ಬರುವ ಸೆಕ್‌ಷನ್ ಯೇರ್ಪಡತಕ್ಕದ್ದು.

ರಿಜಿಸ್ಟ್ರಾರ್ ವ ಸಬ್ ರಿಜಿಸ್ಟ್ರಾರವರ ಆಫೀಸುಗಳು.

"7.—ಲೋಕಲ್ ಗವರ್ನಮೆಂಟಿನವರು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ರಿಜಿಸ್ಟ್ರಾರ್ ಆಫೀಸ ಯೆಂಬ ಹೆಸರುಳ್ಳ ಆಫೀಸನ್ನೂ ಪ್ರತಿ ಸಬ್ ಡಿಸ್ಟ್ರಿಕ್ಟಿನಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸ ಯಾ ಜಾಯಿಂಟ ಸಬ್ ರಿಜಿಸ್ಟ್ರಾರಗಳ ಆಫಿಸಗಳು ಯೆಂಬ ಆಫೀಸ ಯಾ ಆಫಿಸಗಳನ್ನೂ ಯೇರ್ಪಡಿಸತಕ್ಕದ್ದು.

ಮತ್ತು ವೊಬ್ಬ ರಿಜಿಸ್ಟ್ರಾರಯವರ ಯಾವ ಆಫಿಸಿಗಾಗಲಿ ವೊಬ್ಬ ಸಬ್ ರಿಜಿಸ್ಟ್ರಾರ್ ಯವರ ಯಾವ ಆಫೀಸನ್ನಾದರೂ ಸೇರಿಸಬಹುದು.

ಮತ್ತು ಯಾರ ಆಫೀಸ ಹಾಂಗೆ ಸೇರಿಸಲ್ಪಟ್ಟಿರುತ್ತೋ ಅಂತಾ ಯಾವ ಸಬ್ ರಿಜಿಸ್ಟ್ರಾರಾಗಲಿ 68 ವ 72ನೇ ಸೆಕ್‌ಷನ್‌ಗಳಿಂದ ಕೊಡಲ್ಪಟ್ಟ ಅಧಿಕಾರಗಳು ವಿನಾ ರಿಜಿಸ್ಟ್ರಾರಯವರ ವಿಶಿಷ್ಟ ಅಧಿಕಾರಗಳನ್ನಾಗಲಿ ಕೆಲಸಗಳನ್ನಾಗಲಿ ಅಪ್ಪೈಕೀ ಯಷ್ಟರಮಟ್ಟಿಗಾಗಲಿ ಚಲಾಯಿಸಲಿಕ್ಕೂ ನೆರವೇರಿಸಲಿಕ್ಕೂ ಅಧಿಕಾರ ಕೊಡಬಹುದು.

17ನೇ ಸೆಕ್‌ಷನ್ನಿನ (D) ಕ್ಲಾಜ್ ಯೆಂಬ ಅಧಿಕಾಂಶ.

2.—17ನೇ ಸೆಕ್‌ಷನ್ನಲ್ಲಿ (C) ಕ್ಲಾಜ್ ತರುವಾಯ ಯಿದರಡಿ ಬರುವ ಕ್ಲಾಜ್ ಸೇರಿಸಲ್ಪಡತಕ್ಕದ್ದು, ಹ್ಯಾಗಂದರೆ.

"ಅಥವಾ (D) ಯಾವ ದಸ್ತಾವೇಜು ಬರದು ಕೊಡಲ್ಪಡುವ ಕಾಲದಲ್ಲಿ ವೊಂದು ಸ್ಥಿರಸ್ವತ್ತಿಗೆ ಯಾ ಸ್ವತ್ತಿನಲ್ಲಿ 100 ರುಪಾಯಿಗಳು ವ ಅದಕ್ಕೆ ಮೇಲ್ಪಟ್ಟ ಕಿಮ್ಮತ್ತಿನದಾಗಿರುವ ಹಕ್ಕುಬಾಧ್ಯತೆ ವ ಸಂಬಂಧ ಇವುಗ

ಳನ್ನು ಉಂಟುಮಾಡುತ್ತೋ, ತಿಳಿಸುತ್ತೋ, ಹವಾಲ್ತ ಮಾಡುತ್ತೋ, ಹದ್ದುಪಡಿಸುತ್ತೋ, ಯಾ ಹೋಗಲಾಡಿಸುತ್ತೋ, ಅಂತಾ ವೊಂದು ದಸ್ತಾವೇಜನ್ನು ಪಡೆಯಲಿಕ್ಕೆ ಹಕ್ಕನ್ನುಮಾತ್ರ ಉಂಟುಮಾಡುವ ಯಾವದಸ್ತಾವೇಜಿಗೆ''

18ನೇ ಸೆಕ್ಷರ್ 7ನೇ ಕ್ಲಾಜಿನ ತಿದ್ದುಪಾಡು.

3.—18ನೇ ಸೆಕ್ಷನ್ನಲ್ಲಿ, (7) ನೇ ಕ್ಲಾಜಿಗೆ "ಅಂತಾ ದರೋಬಸ್ತು" ಯಂಬ ಮಾತುಗಳನ್ನು ಕೊನೆಗೆ ಶೇರಿಸತಕ್ಕದ್ದು; ಮತ್ತು ಅದೇ ಕ್ಲಾಜಿನ ಕಡೇ 7 ಮಾತುಗಳಿಗೆ ಬದಲಾಗಿ ಯಿದರಡಿ ಬರುವ ಮಾತುಗಳನ್ನು ದಾಖಲ್ಮಾಡತಕ್ಕದ್ದು" ಮತ್ತು ರಿಜಿಸ್ಟರ್ ಆಗಲಿಕ್ಕೆ 17ನೇ ಸೆಕ್ಷರ್ ಪ್ರಕಾರ ಆವಶ್ಯಕವಿಲ್ಲದ ಯಿತರ ದಸ್ತಾವೇಜುಗಳು''.

30ನೇ ಸೆಕ್ಷರ್ (b) ಕ್ಲಾಜಿನ ಅಧಿಕಾಂಶ.

4.—30ನೇ ಸೆಕ್ಷರ್ (b) ಕ್ಲಾಜ್ನಲ್ಲಿ "ಷಹರ" ಯಂಬ ಮಾತಿನ ತರುವಾಯ "ಮತ್ತು ಲಾಹೋರ್ ಡಿಸ್ಟ್ರಿಕ್ಟ ರಿಜಿಸ್ಟ್ರಾರ್" ಯಂಬ ಮಾತುಗಳನ್ನು ಸೇರಿಸತಕ್ಕದ್ದು.

31ನೇ ಸೆಕ್ಷರ್ ತಿದ್ದುಪಾಡು.

5—31ನೇ ಸೆಕ್ಷನ್ನಿಗೆ ಬದಲಾಗಿ ಯಿದರಡಿ ಬರುವ ಸೆಕ್ಷರ್ ಯೇರ್ಪಡತಕ್ಕದ್ದು.

ಖಾಸಗೀ ವಾಸ ಸ್ಥಳದಲ್ಲಿ ದಸ್ತಾವೇಜುಗಳನ್ನು ಹಾಜರ್ಮಾಡೋಣ ವ ಠೇವಣೀ ಇಡೋಣ.

"31 ಸಾಧಾರಣಸಂಗತಿಗಳಲ್ಲಿ, ಈ ಆಕ್ಟು ಅನುಸರಿಸಿ ದಸ್ತಾವೇಜುಗಳನ್ನು ರಿಜಿಸ್ಟರ್ ಬಗ್ಯೆ ಹಾಜರ್ಮಾಡೋಣ ಠೇವಣೀ ಯಿಡೋಣ ಯಿವು, ಸದರೀ ದಸ್ತಾವೇಜುಗಳನ್ನು ರಿಜಿಸ್ಟರ್ ಬಗ್ಯೆ ಯಾ ಠೇವಣೀ ಬಗ್ಯೆ ಅಂಗೀಕರಿಸಲಿಕ್ಕೆ ಅಧಿಕಾರ ಹೊಂದಿರುವ ಆಫಿಸರರ ಆಫಿಸ್ನಲ್ಲಿಯೇ ನಡಿಸಲ್ಪಡತಕ್ಕದ್ದು.

ಆದರೆ ಅಂತಾ ಆಫಿಸರರು ಮುಖ್ಯವಾದ ಸಬಬ್ ತೋರಿಸಿದಮೇಲೆ ರಿಜಿಸ್ಟರ್ ಬಗ್ಯೆ ವೊಂದು ದಸ್ತಾವೇಜನ್ನು ಹಾಜರ್ಮಾಡಲಿಕ್ಕಾಗಲಿ ವೊಂದು ಉಯಿಲನ್ನು ಠೇವಣಿ ಯಿಡಲಿಕ್ಕಾಗಲಿ ಅಪೇಕ್ಷಿಸುವ ಯಾವ ಮನುಷ್ಯನ ಮನೆಗಾದರೂ ಹೋಗಬಹುದು ಮತ್ತು ಅಂತಾ ದಸ್ತಾವೇಜನ್ನು ಯಾ ಉಯಿಲನ್ನು ರಿಜಿಸ್ಟ್ರೇಷರ್ ಬಗ್ಯೆ ಯಾ ಠೇವಣೀ ಬಗ್ಯೆ ಅಂಗೀಕರಿಸಬಹುದು".

34ನೇಸೆಕ್ಷನ್ನಿನ ಅಧಿಕಾಂಶ.

6—34ನೇ ಸೆಕ್ಷರ್ ವೊದಲನೇ ಕಲಮಿಗೆ ಯಿದರಡಿ ಬರುವ ಮಾತುಗಳು ಸೇರಿಸಲ್ಪಡತಕ್ಕದ್ದು, ಯಾವವಂದರೆ "23, 24, 25, ವ 26ನೇ ಸೆಕ್ಷರ್ಗಳ ಪ್ರಕಾರ" ಮತ್ತು ಅದೇ ಸೆಕ್ಷರ್ 2ನೇ ಕ್ಲಾಜಿನಲ್ಲಿ "ಸಾಧಾರಣ ರಿಜಿಸ್ಟ್ರೇಷರ್ ರುಸುಂ" ಯಂಬದರ ಮೇಲೆ "24ನೇ ಸೆಕ್ಷರ್ ಪ್ರಕಾರ ಕೊಡಬೇಕಾದ ಜುರ್ಮಾನೆ ಯೇನಾದರೂ ವಿಧಿಸಿ ಯಿದ್ದಲ್ಲಿ ಅದಕ್ಕೆ ಜಾಸ್ತೀಯಾಗಿ" ಯಂಬಮಾತುಗಳನ್ನು ಸೇರಿಸತಕ್ಕದ್ದು.

42ರ ಲಾಗಾಇತು 45ರ ವರಿಗಿನ ಸೆಕ್ಷರ್ಗಳ ತಿದ್ದುಪಾಡು.

7.— 42, 43, 44, ವ 45 ಈ ಸೆಕ್ಷರ್ಗಳಿಗೆ ಬದಲಾಗಿ ಯಿದರಡಿ ಬರುವ ಸೆಕ್ಷರ್ಗಳು ಯೇರ್ಪಡತಕ್ಕದ್ದು.

ಮೊಹರ್ಮಾಡಿದ ಲಿಫಾಫೆಯಲ್ಲಿ ಉಯಿಲ್ಗಳನ್ನು ಠೇವಣೀ ಇಡೋಣ.

"42 ಉಯಿಲನ್ನು ಬರೆದಿಡುವವನು ಖುದ್ದಾಗಲಿ ಕ್ರಮಪ್ರಕಾರ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಲಿ ತನ್ನ ಉಯಿಲನ್ನು ವೊಂದು ಲಿಫಾಫೆಯಲ್ಲಿ ಹಾಕಿ ಮೊಹರ್ಮಾಡಿ ಯಾವ ರಿಜಿಸ್ಟ್ರಾರವರ ಬಳಿಯಲ್ಲಾದರೂ ಠೇವಣೀ ಯಿಡಬಹುದು. ಹಾಗೆಇಡುವಲ್ಲಿ ಆ ಲಿಫಾಫೆಯ ಮೇಲೆ ಉಯಿಲು ಬರೆದಿಡುವವನ ಹೆಸರು ಮತ್ತು ಆತನ ಮುತಾಲೀಕ ಯಾರಾದರೂ ಯಿದ್ದಲ್ಲಿ ಆತನ ಹೆಸರು ಮತ್ತು ಅದರಲ್ಲಿರತಕ್ಕ ದಸ್ತಾವೇಜಿನ ಸ್ವಭಾವ ಯಿವುಗಳನ್ನು ಬರೆದಿಡತಕ್ಕದ್ದು.

ಉಯಿಲಗಳ ಠೇಣೀ ಇಟ್ಟ ಮೇಲಿನ ಕ್ರಮ.

"43—ಅಂತಾ ಲಿಪಾಫೆಯು ತಲಪಿದ ಮೇಲೆ, ರಿಜಿಸ್ಟ್ರಾರವರು, ಅದನ್ನು ಠೇವಣೀ ಬಗ್ಯೆ ಹಾಜರ್ಮಾಡಿದ ಮನುಷ್ಯನು ಉಯಿಲನ್ನು ಬರದವನೆಂತಲಾಗಲೀ ಆತನ ಮುತಾಲೀಕನೆಂತಲಾಗಲಿ ತೃಪ್ತಿ ಪಟ್ಟಲ್ಲಿ ಅವರ 5ನೇ ನಂಬರ್ ರಿಜಿಸ್ಟರ್ ಪುಸ್ತುಕದಲ್ಲಿ ಸದರೀ ಮೊಹರ್ಮಾಡಿದ ಲಿಪಾಫೆಯ ಮೇಲೆ ಬರದಿರುವದನ್ನು ನೋಡಿ ಬರಕೊಳ್ಳತಕ್ಕದ್ದು, ಮತ್ತು ಸದರೀ ರಿಜಿಷ್ಟ್ರಾರವರು ಅದೇ ಪುಸ್ತುಕದಲ್ಲಿ ಮತ್ತು ಆ ಮೊಹರ್ಮಾಡಿದ ಲಿಪಾಫೆಯ ಮೇಲೆ ಅದನ್ನು ಹಾಜರ್ಮಾಡಿದ ಮತ್ತು ಬರಮಾಡಿಕ್ಕೊಂಡ ಸಂವತ್ಸರ ತಿಂಗಳು, ದಿನ ವ ಹೊತ್ತು ಉಯಿಲು ಬರದಿಟ್ಟವನ ಯಾ ಅವನ ಮುತಾಲೀಕನ ಗುರ್ತುಹೇಳಲಿಕ್ಕೆ ಸಾಕ್ಷಿಕೊಡುವ ಮನುಷ್ಯರ ಹೆಸರುಗಳು ಮತ್ತು ಲಿಪಾಫೆಯ ಮೊಹರಿನ ಮೇಲೆ ಸ್ಪಷ್ಟವಾಗಿರುವ ಯಾವದಾದರೂ ಖಚಿತ, ಯಿವುಗಳನ್ನು ಸೂಚಿಸತಕ್ಕದ್ದು.

ತರುವಾಯ ರಿಜಿಸ್ಟ್ರಾರವರು ಆ ಲಿಪಾಫೆಯನ್ನು ಬೆಂಕಿಗೆ ಇಗ್ಗದ ತಮ್ಮ ಪೆಟ್ಟಿಗೆಯಲ್ಲಿಟ್ಟು ಭದ್ರಮಾಡತಕ್ಕದ್ದು.

ಉಯಿಲುಗಳು ಅಡಗಿರತಕ್ಕ ಲಿಪಾಫೆಗಳನ್ನು ವಾಪಸು ತೆಗದುಕೊಳ್ಳೋಣ.

"44.—ಅಂತಾ ಲಿಪಾಫೆಯನ್ನು ಠೇವಣೀ ಯಿಟ್ಟಂತಾ ಉಯಿಲ್ ಬರದವನು ಅದನ್ನು ವಾಪಸು ತೆಗದುಕೊಳ್ಳಲಿಕ್ಕೆ ಯಿಷ್ಟಪಟ್ಟರೆ ಅದನ್ನು ಠೇವಣಿಯಲ್ಲಿಟ್ಟು ಕೊಂಡಿರುವ ರಿಜಿಸ್ಟ್ರಾರವರಿಗೆಖುದ್ದಾಗಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಲಿ ಬರದುಕೊಳ್ಳಬಹುದು, ಮತ್ತು ಅಂತಾ ರಿಜಿಸ್ಟ್ರಾರವರು ಅರ್ಜೀದಾರ ವಾಸ್ತವವಾಗಿ ಉಯಿಲ್ ಬರದಿಟ್ಟವನು ಯಾ ಆತನ ಮುತಾಲೀಕನು ಯಂಬದಾಗಿ ತೃಪ್ತಿ ಪಟ್ಟಲ್ಲಿ ಅವರು ಆ ಲಿಪಾಫೆಯನ್ನು ಅದೇ ಪ್ರಕಾರ ಕೊಟ್ಟು ಬಿಡತಕ್ಕದ್ದು.

ಉಯಿಲ್ ಬರದವನ ಮರಣಾನಂತರ ನಡಿಸತಕ್ಕ ಕ್ರಮ.

"45—42ನೇ ಸೆಕ್ಷನ್ ಅನುಸರಿಸಿ ಮೊಹರ್ ಮಾಡಿದ ಲಿಪಾಫೆಯನ್ನು ಠೇವಣೀ ಯಿಟ್ಟ ಉಯಿಲ್‌ದಾರನು ಮೃತವಾದಮೇಲೆ ಆ ಲಿಪಾಫೆಯನ್ನು ಠೇವಣೀ ಯಿಟ್ಟುಕ್ಕೊಂಡಿರುವ ರಿಜಿಸ್ಟ್ರಾರವರಿಗೆ ಅದನ್ನು ತೆರೆಯ ಬೇಕೆಂತ ಅರ್ಜಿಕೊಡೋಣಾದರೆ ಮತ್ತು ಆ ಉಯಿಲ್ ಬರದವನು ಮೃತವಾದ್ದಾಗಿ ರಿಜಿಸ್ಟ್ರಾರವರು ತಪ್ತಿಪಟ್ಟ ಪಕ್ಷದಲ್ಲಿ ಅವರು ಸದರೀ ಅರ್ಜಿದಾರನ ಸಮುಕ್ಷಮದಲ್ಲಿ ಆಲಿಪಾಫೆಯನ್ನು ಒಡದು ಅದರ ಮತಲಬನ್ನು 3ನೇ ನಂಬರ್ ಪುಸ್ತುಕದಲ್ಲಿ ಅರ್ಜಿದಾರನ ಖರ್ಚಿನಿಂದ ನಕಲು ಬರಿಸತಕ್ಕದ್ದು."

46ನೇ ಸೆಕ್ಷನ್ ತಿದ್ದುಪಾಡು.

8.—46ನೇ ಸೆಕ್ಷನ್ನಲ್ಲಿ ಯೆರಡನೇ ವಾಕ್ಯಕ್ಕೆ ಬದಲಾಗಿ ಯಿದರಡಿ ಬರುವ ವಾಕ್ಯವು ಯೇರ್ಪಡತಕ್ಕದ್ದು. "ಆದರೆ ಅಂಥಾ ಹುಕ್ಕುಂ ಮಾಡಲ್ಪಟ್ಟಾಗ್ಯೆಲ್ಲಾ, ರಿಜಿಸ್ಟ್ರಾರವರು, 45ನೇ ಸೆಕ್ಷನ್ ಪ್ರಕಾರ ಆ ಉಯಿಲಿನ ನಕ್ಕಲ್ ಮಾಡಲ್ಪಡದೆ ಯಿದ್ದಲ್ಲಿ ಲಿಪಾಪೆಯನ್ನು ಒಡೆದು ಅವರ 3ನೇ ನಂಬರ್ ಪುಸ್ತುಕದಲ್ಲಿ ಸದರೀ ಉಯಿಲ್ ನಕಲು ಬರಕೋತಕ್ಕದ್ದು. ಮತ್ತು ಅಂತಾ ಪುಸ್ತುಕದಲ್ಲಿ ಮೇಲ್ಕಂಡ ಹುಕ್ಕುಮಿನ ಅನುಗುಣವಾಗಿ ಕೋರ್ಟಿಗೆ ಸದರೀ ಅಸಲ್ ಪ್ರತಿಯು ಕಳುಹಿಸಲ್ಪಟ್ಟಿರುತ್ತೆಂದು ಒಂದು ಷರಾ ಮಾಡತಕ್ಕದ್ದು."

50ನೇ ಸೆಕ್ಷನ್ನಿನ ಅಧಿಕಾಂಶ.

9.—50ನೇ ಸೆಕ್ಷನ್ನಿನ ಮೊದಲಿಗೆ ಯಿದರಡಿ ಬರುವ ಮಾತುಗಳನ್ನು ಸೇರಿಸತಕ್ಕದ್ದು. "17ನೇ ಸೆಕ್ಷನ್ (1) (2) (3) ವ (4)ನೇ ಕ್ಲಾಜಿಗಳಲ್ಲಿ ನಮೂದಿಸಲ್ಪಟ್ಟ ಪ್ರತಿ ದಸ್ತಾವೇಜು ಮತ್ತು".

59ನೇ ಸೆಕ್ಷನ್ ತಿದ್ದುಪಾಡು.

10.—59ನೇ ಸೆಕ್ಷನ್ನಲ್ಲಿ "ಇದಕ್ಕೆ ಮೇಲೆ ಅವ್ಯವ ಹಿತವಾಗಿರುವ ಪ್ರಕರಣದ' ಯಂಬ ಮಾತುಗಳಿಗೆ ಬದಲಾಗಿ "52 ವ 58ನೇ ಸೆಕ್ಷನ್‌ಗಳು" ಯಂಬ ಮಾತುಗಳನ್ನು ದಾಖಲ್ಮಾಡತಕ್ಕದ್ದು.

(16)

11—64, ನೇ ಸೆಕ್ಷನ್ನಲ್ಲಿ ಮತ್ತು 65ನೇ ಸೆಕ್ಷರ್ನ ಮೊದಲನೇ ಕಲಂನಲ್ಲಿ "ದಸ್ತಾವೇಜು" ಯಂಬ ಮಾತಿನ ತರುವಾಯ "ಮರಣ ಶಾಸನವಲ್ಲದ" ಯಂಬ ಮಾತುಗಳನ್ನು ಸೇರಿಸತಕ್ಕದ್ದು.

64 ವ 65ನೇ ಸೆಕ್ಷರ್ನಗಳ ಅಧಿಕಾಂಶ.

12.—71ನೇ ಸೆಕ್ಷನ್ನಿನ ಯರಡನೇ ಕ್ಲಾಜಿಗೆ ಬದಲಾಗಿ ಯಿದರಡಿ ಬರುವ ಅಂಶವು ಯೇರ್ಪಡತಕ್ಕದ್ದು.

71ನೇ ಸೆಕ್ಷರ್ನ 2ನೇ ಕ್ಲಾಜಿನ ತಿದ್ದು ಪಾಡು.

(a) " ಅದುಯಾವ ಸ್ವತ್ತಿಗೆ ಸಂಬಂಧಿಸುತ್ತೋ ಆ ಸ್ವತ್ತು ತನ್ನ ಡಿಸ್ಟ್ರಿಕ್ಟಿನಲ್ಲಿ ಯಾ ಸಬ್‌ಡಿಸ್ಟ್ರಿಕ್ಟಿನಲ್ಲಿ ಯಿರುವದಿಲ್ಲ, ಅಥವಾ

(b) ತಾನು ರಿಜಿಸ್ಟ್ರಾರ್, ಮತ್ತು ಆ ದಸ್ತಾವೇಜು ಪ್ರೊಬ್ಬ ಸಬ್ ರಿಜಿಸ್ಟ್ರಾರವರ ಆಫೀಸ್‌ನಲ್ಲಿ ರಿಜಿಸ್ಟರ್ಮಾಡಲ್ಪಡತಕ್ಕದ್ದಾಗಿರುತ್ತೆ ಯಂಬ ಸಬಬಿನ ಮೇಲೆ ವಿನಾ.

13.—73ನೇ ಸೆಕ್ಷನ್ನಿಗೆ ಯಿದರಡಿ ಬರುವ ವಿವರಣೆಯು ಸೇರಿಸಲ್ಪಡತಕ್ಕದ್ದು.

73ನೇ ಸೆಕ್ಷನ್ನಿನ ಅಧಿಕಾಂಶ.

" ವಿವರಣೆ—ಈ ಸೆಕ್ಷರ್ನನಲ್ಲಿ "ಡಿಸ್ಟ್ರಿಕ್ಟು ಕೋರ್ಟು" ಅಂದರೆ ಯಾವ ಕೋರ್ಟಿನ ಸ್ಥಳ ಸರಹದ್ದಿನೊಳಗೆ ರಿಜಿಸ್ಟರ್ ಬಗ್ಯೆ ತಿರಸ್ಕರಿಸಿ ಹುಕುಂ ಕೊಟ್ಟ ಆಫಿಸ್ ಯಿರುತ್ತೋ ಅಂತಾ ಅರಿಜನಲ್ ಅಧಿಕಾರವುಳ್ಳ ಮುಖ್ಯವಾದ ಸಿವಿಲ್ ಕೋರ್ಟು".

14 ಈ ಆಕ್ಟಿನಲ್ಲಿ ಸೆಕ್ಷರ್ನ ಅಂದರೆ 1871ನೇ ಯಿಸವಿಯ ಐರ್ಜ ಇಂಡ್ಯನ್ ರಿಜಿಸ್ಟ್ರೇಷರ್ನ ಆಕ್ಟಿನ ಸೆಕ್ಷರ್ನ ಯಂಬದು.

"ಸೆಕ್ಷರ್ನ, ಅರ್ಥ ವಿವರಣೆ.

ಉದ್ದೇಶ ಕಾರಣಗಳ ವಿವರಣೆ.

ರಿಜಿಸ್ಟ್ರೇಷರ್ನ ಆಕ್ಟಿನಲ್ಲಿ ಹದಿಮೂರು ತಿದ್ದು ಪಾಟುಗಳನ್ನು ಮಾಡುವಣವೇ ಈ ಬಿಲ್ಲಿನ ಉದ್ದೇಶವಾಗಿರುತ್ತದೆ, ಕಳೆದ ಅಯಿದುವರುಷಗಳ ಅನುಭವದದೆಸೆಯಿಂದ ಸದರೀ ತಿದ್ದುಪಡಿಗಳು ಆವಶ್ಯಕಗಳಾಗಿ ಕಾಣಬಂದಿರುತ್ತವೆ.

ಈ ಪೈಕಿ ಮೊದಲನೇದು, ಪ್ರತಿ ಸಬ್ ಡಿಸ್ಟ್ರಿಕ್ಟಿನಲ್ಲಿಯೂ, ಒಬ್ಬರಿಗಿಂತ ಹೆಚ್ಚುಮಂದಿ ಸಬ್ ರಿಜಿಸ್ಟ್ರಾರಗಳನ್ನು ಇಡುವಬಗ್ಯೆ ಲೋಕಲ್ ಗವರ್ನಮೆಂಟಿನವರನ್ನು ನಿಯಮಿಸುವದಕ್ಕೋಸ್ಕರ ಉದ್ದೇಶಿಸಲ್ಪಟ್ಟಿರುತ್ತೆ. ಸದರೀಸಬ್ ರಿಜಿಸ್ಟ್ರಾರಗಳು, ಸಮಾನಾಧಿಕಾರವನ್ನು ನಡಿಸತಕ್ಕದ್ದು. ಇಂತಾ ಅಧಿಕಾರವಿಲ್ಲದೆ ಯಿರುವದು ಲೋವರ್ ಪ್ರಾವಿನ್ಸ್‌ಗಳಲ್ಲಿಯೂ ಪ್ರಾಯಶಃ ಅನ್ಯತ್ರಲೂ ಬಹಳ ಅನಾನುಕೂಲವಾಗಿರುವಂತೆ ಕಾಣಬಂದಿರುತ್ತೆ; ಆಕ್ಟಿನ 68 ವ 72 ಈ ಸೆಕ್ಷರ್ನಗಳಿಂದ ಕೊಡಲ್ಪಟ್ಟ ಅಧಿಕಾರಗಳು ವಿನಾ, ರಿಜಿಸ್ಟ್ರಾರರ ದರೋಬಸ್ತು ಅಧಿಕಾರಗಳನ್ನೂ ನಡಿಸಲಿಕ್ಕೆ ರಿಜಿಸ್ಟ್ರಾರರ ಆಫಿಸನೊಡನೆ ಯಾರ ಆಫಿಸ್ ಸೇರಿಸಲ್ಪಟ್ಟಿರುತ್ತೋ ಅಂತಾ ಯಾವ ಸಬ್ ರಿಜಿಸ್ಟ್ರಾರನ್ನಾಗಲಿ ನಿಯಮಿಸಲಿಕ್ಕೆ ಸಹ ಅಧಿಕಾರವು ಕಂಠೋಕ್ತವಾಗಿ ಕೊಡಲ್ಪಟ್ಟಿರುತ್ತೆ. ಅಂತಾ ಅಧಿಕಾರವು ಅರ್ಥತಃ ಕೊಟ್ಟ ಹಾಗಾಗುತದೋ ಯಿಲ್ಲವೋ ಯಂಬ ಅಂಶ ಕೆಲವು ಮಟ್ಟಿಗೆ ಸಂದಿಗ್ಧವಾಗಿತ್ತು.

ಎರಡನೇದು, ಆಕ್ಟಿನ ಹದಿನೇಳನೇ ಸೆಕ್ಷನ್ನಲ್ಲಿ 1874ನೇ ಜುಲೈ 10ನೇ ಮರ್ಕುಂ 51—1906ನೇ ನಂಬರ್ ಉಳ್ಳ ಹೋಂಡಿಪಾರ್ಟು ಮೆಂಟಿನಲ್ಲಿ ಇಂಡ್ಯಗವರ್ನ ಮೆಂಟಿನ ರಿಜೋಲ್ಯೂಷನನ್ನು ಸೇರಿಸುತ್ತದೆ; ಅದರ ಫಲವೇನೆಂದರೆ—ಯಿತರ ದಸ್ತಾವೇಜುಗಳನ್ನು ಪಡೆಯಲಿಕ್ಕೆ ಬಾಧ್ಯತೆಯನ್ನು ಮಾತ್ರ ವುಂಟು ಮಾಡುವ ದಸ್ತಾವೇಜುಗಳನ್ನು ಅವಶ್ಯ ರಿಜಿಸ್ಟರ ಮಾಡಿಸಬೇಕಾದ ನಿರ್ಬಂಧದ ದೆಸೆಯಿಂದ ಕಂಠತಃ ವಿನಾಯಿಸುವಣವೇ. ಆದಸ್ತಾವೇಜು ಹುಟ್ಟಿದಲ್ಲಿ ಸ್ಥಿರಸ್ವತ್ತಿಗೆ 100ರೂಪಾಯಿಗಳ ವ ಅದಕ್ಕೆ ಮೇಲ್ಪಟ್ಟ, ಕಿಮ್ಮತ್ತಿನ ಹಕ್ಕುಗಳನ್ನು ಉಂಟು ಮಾಡುವದು ವಗೈರೆ ಅವುಗಳ ಕಾರ್ಯವಾಗಿರುತ್ತದೆ.

ಮೂರನೇದು, 18ನೇ ಸೆಕ್ಷರ್ಷ (7)ನೇ ಕ್ಲಾಜ್, 17ನೇ ಸೆಕ್ಷರ್ಷ ನಿಬಂಧನೆಗಳನ್ನು ಆಕ್ರಮಿಸತಕ್ಕದ್ದಲ್ಲವೆಂಬ ಅರ್ಥವನ್ನು ಸ್ಪಷ್ಟಪಡಿಸಲಿಕ್ಕೋಸ್ಕರ ಉದ್ದೇಶಿಸಲ್ಪಟ್ಟಿರುತ್ತೆ.

ನಾಲ್ಕನೇದು, ಬ್ರಿಟಿಷ ಯಿಂಡ್ಯದ ಯಾವ ಭಾಗದಲ್ಲಾಗಲಿ ಯಿರುವ ಜಮೀನಿಗೆ ಸಂಬಂಧಪಟ್ಟ ದಸ್ತಾವೇಜುಗಳ ವಿಷಯದಲ್ಲಿ ರಾಜಧಾನೀ ಪಟ್ಣಗಳು ವಳತವಾಗಿ ಡಿಸ್ಟ್ರಿಕ್ಟುಗಳ ರಿಜಿಸ್ಟ್ರಾರಗಳಿಗೆ ಸಮಾನವಾದ ಸ್ಥಿತಿಯನ್ನು ಲಾಹೂರ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರಿಗೆ ಉಂಟು ಮಾಡುತ್ತದೆ. ಈ ಬದಲಾವಣೆಯು ಲೋಕಲ್ ಗವರ್ನಮೆಂಟನವರ ಸಿಫಾರಸ್ಸಿನ ಮೇಲೆ ಮಾಡಲ್ಪಟ್ಟಿರುತ್ತೆ.

ಅಯಿದನೇದು, ಆಕ್ಟಿನ 31ನೇ ಸೆಕ್ಷನ್ನಿನ ಮುಸ್ಸೂದೇಯನ್ನು ಮಾತ್ರ ತಿದ್ದು ಪಡಿ ಮಾಡುತದೆ.

ಆರನೇದು; ಆಕ್ಟಿನ 34ನೇ ಸೆಕ್ಷನನ್ನು ವಿಧಿಸುವದರಲ್ಲಿ ನ್ಯಾಯ ವಿಧಾಯಕರಿಗೆ ಯಿದ್ದ ಯೆರಡು ಉದ್ದೇಶಗಳನ್ನು ವಿಶದವಾಗಿ ತಿಳಿಸುತದೇನಂದರೆ, (ದಸ್ತಾವೇಜನ್ನು) ಹಾಜರ ಮಾಡಲಿಕ್ಕೆ ಕೊಡಲ್ಪಟ್ಟ ಕಾಲವು 4ನೇ ಭಾಗದ ಮೊದಲನೇ ನಾಲ್ಕು ಸೆಕ್ಷರ್ಷಗಳನುಸರಿಸಿ ಕೊಡಲ್ಪಟ್ಟ ಕಾಲವಾಗಿರುತದೆ, ಅಂದರೆ ಸಾಧಾರಣವಾಗಿ ಕೊಡಲ್ಪಡುವ ಕೇವಲ (ನಾಲ್ಕು ತಿಂಗಳ) ಕಾಲವಲ್ಲವು, ಪರಂತು 24, 25, 26 ಈ ಸೆಕ್ಷರ್ಷಗಳನು ಸರಿಸಿ ಕೊಡೋಣಾದ ಜಾಸ್ತೀ ಕಾಲ ಸಹ ಅರ್ಥವು, ಮತ್ತು 34ನೇ ಸೆಕ್ಷರ್ಷನಲ್ಲಿ ಸಮೂದಿರುವ ಜುರ್ಮಾನೇ ಮಾತ್ರವಲ್ಲದೆ 24ನೇ ಸೆಕ್ಷರ್ಷ ಅನುಸರಿಸಿ ತೆರಲ್ಪಡತಕ್ಕ ಜುರ್ಮಾನೆಗಳು ಯಾವದಾದರೂ ಯಿದ್ದರೆ ಅದು ಸಹಿತ, ರಿಜಿಸ್ಟ್ರಾರ ಮುಂದೆ ಹಾಜರಾಗುವದಕ್ಕೆ ಸಾವಕಾಶ ವೇನಾದರೂ ಸಂಭವಿಸಿದ ಪಕ್ಷಕ್ಕೆ, ತೆರಲ್ಪಡತಕ್ಕದ್ದು.

ಏಳನೇದು, 42 ವ 43 ನೇ ಸೆಕ್ಷರ್ಷಗಳ ಮುಸೂದೆಯನ್ನು ತಿದ್ದು ಪಡಿ ಮಾಡಿ, 1871ನೇ ಯಿಸವಿಯ 8ನೇ ಆಕ್ಟನ್ನು ಮಾಡಿದವರ ಉದ್ದೇಶ ಪ್ರಕಾರ 44 ವ 45 ಈ ಸೆಕ್ಷರ್ಷಗಳನ್ನು, ಡಿಪಾಜಿಟ ಯಿಡುವ ಏಜಂಟ ಅಲ್ಲದೆ ಉಯಿಲದಾರನೇ ಉಯಿಲವಾಪಸ ತೆಗದುಕೊಳ್ಳಲಿಕ್ಕೆ ಖಾಯಿಷ್‌ಮಾಡುವ ಯಾ ಮೃತಪಟ್ಟಿರುವ ಸಂಗತಿಗಳ ವಟ್ಟಿಗೆ ಕಂಠತಃ ಹದ್ದು ಪಡಿಸುತದೆ.

ಎಂಟನೇದು, 45ನೆ ಸೆಕ್ಷರ್ಷ ಅನುಸರಿಸಿ ಪೂರ್ವವೇ ನಕ್ಕಲ ಬರೆಯಲ್ಪಟ್ಟಿರುವಲ್ಲಿ 46ನೇ ಸೆಕ್ಷರ್ಷ ಅನುಸರಿಸಿ ಉಯಿಲನ್ನು ನಕ್ಕಲ ಬರೆಯುವ ಕೆಲಸದಿಂದ ರಿಜಿಸ್ಟ್ರಾರನ್ನು ತಪ್ಪಿಸುತದೆ; ಮತ್ತು ಆತನು ಉಯಿಲನ್ನು ನಕ್ಕಲ ಬರೆಯ ಬೇಕಾಗಿ ಯಿರುವಲ್ಲಿ ಅದು ಯಾವ ಲಿಫಾಫೆಯಲ್ಲಿ ಹಾಕಿ ಮೊಹರನಿಶೀ ಭದ್ರಪಡಿಸಲ್ಪಟ್ಟಿರುತ್ತೋ ಅದನ್ನು ಖುಲ್ಲಾ ಮಾಡುವಂತೆ, ಕಂಠೋಕ್ತವಾಗಿ ಅಧಿಕಾರವನ್ನುಂಟುಮಾಡುತದೆ.

ಒಂಭತ್ತನೇದು, 50ನೇ ಸೆಕ್ಷನ್ನಿನ ತಿದ್ದು ಪಡಿಯಾಗಿ ಪೂರ್ವವೇ ಮೋಸಕೃತ್ಯಗಳಿಗೆ ಆಸ್ಪದ ಉಂಟುಮಾಡಿ ಯಿರುವ ಒಂದು ನ್ಯೂನತೆಯನ್ನು ಪೂರ್ತಿಮಾಡಲಿಕ್ಕೋಸ್ಕರ ಉದ್ದೇಶಿಸಲ್ಪಟ್ಟಿದೆ ಆ ಸೆಕ್ಷರ್ಷ, ಯಾವ ದಸ್ತಾವೇಜುಗಳ ರಿಜಿಸ್ಟ್ರೇರ್ಷ ಐಚ್ಛಿಕವಾಗಿರುತದೋ ಅಂತಾ, ಜಮೀನ ಸಂಬಂಧವಾದ, ರಿಜಸ್ಟರಾದ ದಸ್ತಾವೇಜುಗಳು ರಿಜಿಸ್ಟರಾಗದ ದಸ್ತಾವೇಜುಗಳಿಗೆ ವಿರುದ್ಧವಾಗಿ ಪ್ರವರ್ತಿಸತಕ್ಕದೆಂತ ಈಗ ವಿಧಿಸುತದೆ. ಆದರೆ ಯಾವ ದಸ್ತಾವೇಜುಗಳ ರಿಜಿಸ್ಟ್ರೇರ್ಷ ಅವಶ್ಯ ಮಾಡಲ್ಪಡತಕ್ಕದ್ದಾಗಿರುತ್ತವೋ, ಮತ್ತು ಆ ಮೇರೆ ಯಾವವು ರಿಜಿಸ್ಟರ ಮಾಡಲ್ಪಟ್ಟಿರುತ್ತವೋ ಅಂತಾ ದಸ್ತಾವೇಜುಗಳ ವಿಷಯದಲ್ಲಿ ಅಂತಾ ನಿಬಂಧನೆ ಯೇನೂಮಾಡುವದಿಲ್ಲವು. ಆಕ್ಟಿನ 18ನೇ ಸೆಕ್ಷನಿಗೆ ಒಳಪಡತಕ್ಕ ದಸ್ತಾವೇಜುಗಳು, ರಿಜಿಸ್ಟರ ಮಾಡಲ್ಪಟ್ಟರಲಿ ಯಿಲ್ಲದೇ ಯಿರಲಿ ಪರಂತು ಅವು 17ನೇ ಸೆಕ್ಷರ್ಷ ಪ್ರಾಕಾರ ರಿಜಿಸ್ಟರ ಮಾಡಲ್ಪಟ್ಟ ದಸ್ತಾವೇಜುಗಳಿಗೆ ವಿರುದ್ಧವಾಗಿ, ಹುಟ್ಟಿದ ತಾರೀಖ ಪ್ರಕಾರ ಜಾರೀ ಯಾಗುತವೆ. ಇದರ ಫಲವೇನಂದರೆ ಜಮೀನಿಗೆ 99ರೂಪಾಯಿಗಳ ಖರೀದೀ ಬಾಧ್ಯತೆಯನ್ನುಂಟು ಮಾಡುವ ರಿಜಿಸ್ಟರಾದ ಒಂದು ದಸ್ತಾವೇಜು ರಿಜಿಸ್ಟರಾಗದ ದಸ್ತಾವೇಜು ದೆಸೆಯಿಂದ ಭಂಜಿಸಲ್ಪಡಲಾರದಾದಾಗ್ಯೂ 101ರೂಪಾಯಿಗಳಿಗೆ ಒದಸ್ತೂರ ಬಾಧ್ಯತೆಉಂಟು ಮಾಡುವ ಒಂದು ರಿಜಿಸ್ಟರಾದ ದಸ್ತಾವೇಜು 100 ರೂಪಾಯಿಗಳ ವೊಳಗೆ ಯೆಷ್ಟರ ಮೊಬಲಗಿಗಾಗಲಿ ಬಾಧ್ಯತೆಯನ್ನುಂಟುಮಾಡುವ ಹಿಂದಿನ ತಾರೀಖ ಹಾ

ಕಲ್ಪಟ್ಟ ರಿಜಿಸ್ಟರ್ ಯಿಲ್ಲದ ದಸ್ತಾವೇಜಿನ ದೆಸೆಯಿಂದ ಭಂಜಿಸಲ್ಪಡಬಹುದು. ಇದರಿಂದ ಉಂಟಾಗುವದೆಂದು ಹೆದರಬೇಕಾಗಿರುವ ಕೆಡಕೇನಂದರೆ— ಭಾರೀ ಮೊಬಲಗಿನ ಬಾಧ್ಯತೆಯನ್ನು ಉಂಟುಮಾಡುವ ದಸ್ತಾವೇಜುಗಳನ್ನು ಭಂಜಿಸುವದಕ್ಕೋಸ್ಕರ ಜಾಜುವೀ ಮೊಬಲಗಿನ ಬಾಧ್ಯತೆಯನ್ನುಂಟು ಮಾಡುವದಾಗಿ ಬರದು ಕೊಡಲ್ಪಟ್ಟ ಸುಳ್ಳು ತಾರೀಖು ಉಳ್ಳ ದಸ್ತಾವೇಜುಗಳು ವಿಶೇಷವಾಗಿ ಸೃಷ್ಟಿನೆ ಆಗುತ್ತದೆಂಬದು. ಇದಕ್ಕೆ ಈ ಬಿಲ್ಲಿನಿಂದ ತಿಳಿಸಲ್ಪಡುವ ಪರಿಹಾರವೇನಂದರೆ 17ನೇ ಸೆಕ್ಷನ್ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ದಸ್ತಾವೇಜುಗಳು ರಿಜಿಸ್ಟರ್ ಆಗದ ದಸ್ತಾವೇಜುಗಳಿಗೆ ವಿರುದ್ಧವಾಗಿ ಜಾರೀ ಯಾಗುವಂತೆ ಮಾಡುವಣವೆ.

ಹತ್ತನೇ ತಿದ್ದುಪಡಿಯು—59ನೇ ಸೆಕ್ಷನ್ನಲ್ಲಿರುತ್ತದೆ; ಆ ಸೆಕ್ಷನ್ 58ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ಇಂಡಾರ್ಸ್‌ಮೆಂಟ್ ಗಳಿಗೆ ತಾರೀಖು ಹಾಕುವ ಬಗ್ಗೆ ವ ರುಜು ಮಾಡುವ ಬಗ್ಗೆ ಮಾತ್ರ ಯಿಾಗ ವಿಧಿಸುತ್ತದೆ. 52ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ಇಂಡಾರ್ಸ್‌ಮೆಂಟ್‌ಗಳ ಬಗ್ಗೆ ಬದಸ್ತೂರ್ ನಿಬಂಧನೆ ಮಾಡಬೇಕಾದ್ದು ಯುಕ್ತವಾಗಿದೆ.

ಹನ್ನೊಂದನೇ ತಿದ್ದುಪಡಿಯು—64 ವ 65ನೇ ಸೆಕ್ಷನ್‌ಗಳ ದೆಸೆಯಿಂದ ಉಯಿಲುಗಳನ್ನೂ ಕೊಡಿಸಿಲ್ (ಯಾನೆ ಉಯಿಲ್ ತಾಜಾಕಲಂಗಳನ್ನೂ) ವಿನಾಯಿಸುವದರಲ್ಲಿ ಅಡಗಿರುತದೆ.

ಹನ್ನೆರಡನೇ ತಿದ್ದುಪಡಿಯು—71ನೇ ಸೆಕ್ಷನನ್ನು ಮಸೂದೇ ಮಾಡುವಲ್ಲಿ ಅಲ್ಪವಾದ ಪರಂತು ಯುಕ್ತವಾದ ತಿದ್ದುಪಾಡನ್ನು ಉಂಟು ಮಾಡುತದೆ.

ಹದಿಮೂರನೇ ಮತ್ತು ಕಡೇ ತಿದ್ದುಪಡಿಯು,—72ನೇ ಸೆಕ್ಷನ್ನಲ್ಲಿರುವ ಡಿಸ್ಟ್ರಿಕ್ಟ್ ಕೋರ್ಟ್ ಎಂಬ ಮಾತಿನ ಅರ್ಥ ವಿಷಯದಲ್ಲಿ ಉಂಟಾಗಿರುವ ಸಂದೇಹವನ್ನು ನಿವೃತ್ತಿ ಮಾಡುತದೆ.

ಸಿಂಲಾ, ತಾರೀಖು 5ನೇ ಜೂನ್ 1876.

A. Hobhouse.

Mysore Government Press, Bangalore—1876.

ಮೈಸೂರ ಗೆಜೆಟ್.

ನಂ. 33 ಸರ್ಕಾರದಿಂದ ಛಾಯಿಷ್ ಆದ್ದು. ಸರ್ 1876.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 19, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	159—178
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್‌ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.	402—416
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	19—24
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 178. ತಾರೀಖು 12ನೇ ಆಗಸ್ಟ್ 1876.

ಸರ್ 1876ನೇ ಅಕ್ಟೋಬರ್ ಗುರ್‍ರೇ ಲಗಾಯತು 1878ನೇ ಸೆಪ್ಟಂಬರ್ 30ನೇ ಮುರ್ಕಾಂ ವರಿಗೆ ಬೆಂಗಳೂರು ಷಹರ್ ವ ಡಿಸ್ಟ್ರಿಕ್ಟ್‌ನಲ್ಲಿ ಷರಾಬ್‌ತಯಾರೀ ಬಿಕ್ರೀ ಇವುಗಳ ಬಾಬತು ಸಂಪೂರ್ಣ ಸ್ವಾತಂತ್ರ್ಯಕ್ಕೋಸ್ಕರ ದರಖಾಸ್ತುಗಳನ್ನು ಅಪೇಕ್ಷಿಸಿ 1876ನೇ ಜೂಲೈ 25ನೇ ಮುರ್ಕಾಂ 148ನೇ ನಂಬರ್ ಇಸ್ತಿಹಾರ್‌ನಾಮೆ ಛಾಯಿಷ್ಆದ ಈಚಿಗೆ ಹಾಲೀ ನಡೆಯುವ ಆಬ್‌ಕಾರೀ ಯೇರ್ಪಾಡುಗಳ ಬಾಬತು ಉದ್ದೇಶಿಸೋಣಾದ ವ್ಯವಸ್ಥೆಯನ್ನು ಕುರಿತು ಸೂಚಿಸಿ ಕಳೆದ ಮಾರ್ಚಿ 27ನೇ ಮುರ್ಕಾಂನಲ್ಲಿ ಈ ಆಫೀಸ್‌ನಿಂದ ಕೊಡೋಣಾದ ನೋಟೀಸಿನ ಉದ್ದೇಶವನ್ನು ಅನ್ಯಥಾ ಗ್ರಹಿಸಿ, ಯಾವ ಲೈಸೆನ್ಸ್‌ಗಳ ಅಮಲ್ ವಾಯಿದೆ 1877ನೇ ಮಾರ್ಚಿ 31ನೇ ಮುರ್ಕಾಂ ವರಿಗೆ ಪೂರೈಸತಕ್ಕದ್ದಲ್ಲವೋ ಅಂತಾ ಲೈಸೆನ್ಸ್‌ಗಳು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಒಟ್ಟುವ ಚಿಲ್ಲರೆ ಬಿಕ್ರೀ

ದಾರ್ರಿಗೆ ಕೊಡಲ್ಪಟ್ಟವು. ಆದ್ದರಿಂದ ಸದರೀ ಮೇರೆ ಸ್ಥಾಪಿಸಲ್ಪಟ್ಟಿರುವ ಸಂಬಂಧಗಳನ್ನು ಯುಕ್ತವಾಗಿ ಆಲೋಚಿಸುವ ಅಪೇಕ್ಷೆಯಿಂದ ಚೀಫ್‌ಕಮ್ಮಿಷನರವರು ಕೋರುವದೇನಂದರೆ—ಮೇಲೆ ಕಂಡ ಇಸ್ತಿಹಾರ್‌ನಾಮೆಯು ರದ್ದುಮಾಡಲ್ಪಟ್ಟು, ತಿಳಿಸೋಣಾದ ವ್ಯವಸ್ಥೆಯು ಈ ಸರ್ಕಾರ್‌ಸಾಲ್‌ನಲ್ಲಿ ನಿಲ್ಲಿಸಿ ಇಡಲ್ಪಟ್ಟಿರುತ್ತೆ.

ಬರುವ ಏಪ್ರೈಲ್ ಗುರ್ರೇತಾರೀಖಿನಿಂದ ಪ್ರವರ್ತಿಸತಕ್ಕ ಏರ್ಪಾಡುಗಳು ಕ್ಷಿಪ್ರದಲ್ಲಿಯೇ ಪ್ರಕಟಿಸಲ್ಪಡುವವು.

ನಂ. 179. ತಾರೀಖು 14ನೇ ಆಗಸ್ಟ್ 1876.

ಸರಹದ್ದು ಗುರುತುಗಳನ್ನು ಕಾಪಾಡುವಣ, ವ ದುರಸ್ತು ಮಾಡುವಣ, ಈ ವಿಷಯದಲ್ಲಿ 1868ನೇ ಸೆಪಟಂಬರ್ 26ನೇ ಮಿರ್ಕ್ಕಮಿನ ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡೋಣಾದ 12 ವ 13 ಈ ರೂಲ್‌ಸ್ ರದ್ದೀಯಾತೀಯಿಂದ, ಸಕಲಜನಗಳಿಗೂ ತಿಳಿಯುವಬಗ್ಗೆ ಈ ಕೆಳಗೆ ಬರುವ ಪರಿಷ್ಕರಿಸೋಣಾದ ರೂಲ್‌ಸ್ ಪ್ರಕಟಿಸಲ್ಪಡುತವೆ.

12ನೇ ರೂಲ್.

ಸರ್ಕಾರದ ಬಂಜರ್ ಜಮೀನ್‌ಗಳಿಗೆ ಎಲ್ಲೆ ಗುರುತುಗಳನ್ನು ಹಾಕುವಬಗ್ಗೆ ಬೇಕಾದ ಮೊಬಲಗನ್ನು ಒದಗಿಸುವದಕ್ಕೆ ಡೆಪ್ಯುಟಿ ಕಮ್ಮಿಷನರವರು ಸಾಲೀಯಾನಾ, ಸಾಗುವಳೀಯಿಲ್ಲದ ಸರ್ಕಾರ್ ಬಂಜರ್ ಜಮೀನಿನಲ್ಲಿ ಸಾವಿರ ಎಕ್ರೆಗಳಿಗೆ 5 ರೂಪಾಯಿಗಳಿಗಿಂತ ಜಾಸ್ತೀಇಲ್ಲದ ಒಂದು ಮೊಬಲಗನ್ನಾಗಲಿ, ಅಂತಾ ಜಮೀನ್‌ಗಳ ಕಾವಲ್ ಮೇಲೆ ವಸೂಲಾಗಿ ಸರ್ಕಾರಕ್ಕೆ ಜಮೇಬಂದ ಕುಲ್ ಮೊಬಲಗಿನಲ್ಲಿ ಸೇಕಡಾ 5 ಮೇರೆ ಆಗುವ ಮೊಬಲಗನ್ನಾಗಲಿ ಈ ಪೈಕಿ ಯಾವದು ಹೆಚ್ಚು ಮೊಬಲಗಾಗಿ ಇದ್ದಾಗ್ಯೂ, ಖಜಾನೇಯಿಂದ ಕೊಡುವಂತೆಯೂ, ಅದನ್ನು ಅಂತಾ ಜಮೀನ್‌ನಲ್ಲಿ ಎಲ್ಲೆ ಗುರ್ತುಗಳ ರಿಪೇರೀಬಗ್ಗೆ, ಈ ಕೆಳಗಿನ ನಿಬಂಧನೆಯ 2ನೇ ಕ್ಲಾಜ್‌ನಲ್ಲಿ ನಿಯಮಿಸಲ್ಪಟ್ಟ ಪ್ರಕಾರ ಅಥವಾ ಆಗಿಂದಾಗ್ಯೆ ಅನ್ಯಥಾ ನಿಯಮಿಸಲ್ಪಡುವ ಮೇರೆ ವಿನಿಯೋಗಿಸುವಂತೆಯೂ, ಅಧಿಕಾರ ಕೊಡಲ್ಪಡಬಹುದು.

13ನೇ ರೂಲ್.

ಸರ್ಕಾರ್ ಬಂಜರ್ ಜಮೀನ್‌ನಲ್ಲಿ ಎಲ್ಲೆ ಗುರುತುಗಳು ಬಹಳವಾಗಿ ಇರುವ ತಾಲ್ಲೂಕುಗಳೊಳಗೆ ಅಥವಾ ಯಾವ ಕಾರಣದಿಂದಲಾಗಲಿ, ಬಂಜರ್ ಜಮೀನ್‌ಪೈಕಿ ಪ್ರತಿ ಸಾವಿರ ಎಕರೆಗೆ 5 ರೂಪಾಯಿಗಿಂತ ಜಾಸ್ತೀಮೊಬಲಗ್ ಜರೂರೆಂದು ಕಾಣಬರುವಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಡಿವಿಜನ್ ಕಮ್ಮಿಷನರವರ ಮಂಜೂರಾತಿಯಮೇಲೆ ಸರ್ಕಾರ್ ಬಂಜರ್ ಜಮೀನ್‌ನಲ್ಲಿ ಪ್ರತಿ ಸಾವಿರ ಎಕರೆಗೆ 10 ರೂಪಾಯಿಗಳನ್ನು ಅಥವಾ, ಅಂತಾ ಜಮೀನ್‌ಗಳ ಕಾವಲ್‌ನಲ್ಲಿ ಹುಟ್ಟುವಳೀಯಾಗುವ ಮೊಬಲಗ್ ಪೈಕಿ ಸೇಕಡಾ 10ರೂಪಾಯಿಗಳನ್ನು ಇವುಗಳಪೈಕಿ ಯಾವದು ಹೆಚ್ಚಿದಾಗ್ಯೂ ಕೊಡಬಹುದು.

2ನೇ ಕ್ಲಾಜ್—ಸರ್ಕಾರದ ಬಂಜರ್ ಜಮೀನ್‌ನಲ್ಲಿರುವ ಎಲ್ಲೆಗುರುತುಗಳ ದುರಸ್ತೀಬಗ್ಗೆ ಗೊತ್ತಾಗಿರುವ ಮೊಬಲಗ್, ಪ್ರತಿ ಸಂವತ್ಸರ ಜನವರೀ ಗುರ್ರೇಯಲ್ಲಾಗಲಿ, ನಿಯಮಿಸಲ್ಪಡತಕ್ಕ ಇತರ ಯಾವ ದಿನದಲ್ಲಾಗಲಿ ಗ್ರಾಮದ ಪಟೇಲನಿಗೆ ಪಾವತೀ ಮಾಡಲ್ಪಡತಕ್ಕದ್ದು. ಆತನು ಅಂತಾ ಎಲ್ಲೆಗುರುತುಗಳನ್ನು ಕ್ರಮವಾಗಿ ಕಾಪಾಡಿಕೊಳ್ಳತಕ್ಕಬಗ್ಗೆ ಜವಾಬ್‌ದಾರನಾಗಿರತಕ್ಕದ್ದು.

3ನೇ ಕ್ಲಾಜ್—ಸರ್ಕಾರದ ಬಂಜರ್ ಜಮೀನ್‌ಗೆ ಆತುಕೊಂಡಿರುವ ಜಮೀನಿನ ಹಿಡುವಳೀದಾರರು ಸರ್ಕಾರದ ಬಂಜರ್ ಜಮೀನನ್ನೂ ತಮ್ಮ ಜಮೀನನ್ನೂ ವಿಂಗಡಿಸುವ ದರೋಬಸ್ತು ಗುರುತುಗಳನ್ನೂ. ಯುಕ್ತವಾದ ರಿಪೇರೀಯಲ್ಲಿಟ್ಟು ಕಾಪಾಡಿಕೊಳ್ಳುವದಕ್ಕೆ ಜವಾಬ್‌ದಾರರಾಗಿರುತ್ತಾರೆ ಮತ್ತು ಗ್ರಾಮಸ್ಥರು ತಮ್ಮ ಗ್ರಾಮಕ್ಕಾಗಿ ಬಿಡಲ್ಪಟ್ಟ ಗೋ ಭೂಮಿಯ ಸರಹದ್ದುಗಳನ್ನು ಏರ್ಪಡಿಸುವಂತಾ ದರೋಬಸ್ತು ಗುರುತುಗಳಬಗ್ಗೂ ಬದಸ್ತೂರ್ ಜವಾಬ್‌ದಾರರಾಗಿರುತ್ತಾರೆ. ಜಮೀನ್ ಹಿಡುವಳೀದಾರರಾಗಲಿ, ಗ್ರಾಮಸ್ಥರಾಗಲಿ ಗೋ ಭೂಮಿಗಳಲ್ಲಿ ತಮ್ಮ ಕಾರ್ಯಗಳನ್ನು ನೆರವೇರಿಸಲಿಕ್ಕೇನಾದರೂ ತಪ್ಪಿದಪಕ್ಷಕ್ಕೆ ಜರೂರಾದ ಕೆಲಸಗಳು ಪಟೇಲರಿಂದ ನೆರವೇರಿಸಲ್ಪಟ್ಟು ಅದರ ಲಾಗವಡು ಪ್ರತಿ ಗುರುತಿಗೂ ಎರಡು ಆಣೆಗೆ ಮೀರದಂತೆ ಒಂದು ದರಪ್ರಕಾರ ಮೊಕರರ್ ಮಾಡತಕ್ಕದ್ದು. ಕುಲ್‌ಲಾಗವಡು ಗ್ರಾಮದಲ್ಲಿ ಹಿಡುವಳೀದಾರರದೆಸೆಯಿಂದಲೂ, ಇನಾಂದಾರರದೆಸೆಯಿಂದಲೂ, ಅವರ ಜಮೀನ್‌ಗಳ ಸರ್ವೆ ಕಂದಾಯದ ಪರಿಮಾಣದಮೇಲೆ ದರವಾರ್ ವಸೂಲ್ ಮಾಡತಕ್ಕದ್ದು.

ನಂ. 180. ತಾರೀಖು 15ನೇ ಆಗಸ್ಟ್ 1876.

ಹೈಯರ್‌ಗ್ರೇಡ್‌ಸ್‌ಯಾನೆ ದೊಡ್ಡ ಹೋದೆಗಳ ಪೋಲೀಸ್ ಆಫೀಸರ್‌ಗಳಿಗೆ ಕುದರೆ ಅಲೌವನ್ಸ್ ಸಲ್ಲತಕ್ಕವಿಷಯವನ್ನು ಕುರಿತು ಇದರಡಿ ಬರುವ ನಿಬಂಧನೆಗಳು ಇಂಡ್ಯಗವರ್ನಮೆಂಟಿನವರ ಮಂಜೂರಾತಿನಿ ವಿಧಿಸಲ್ಪಟ್ಟವೆ.

ಪೊಲೀಸ್ ಆಫೀಸರ್‌ಗಳಿಗೆ ಹಾರಸ್ ಅಲೌರ್ವೆನ್ಸ್ ಯಾನೆ ಕುದರೆ ರುಸುಂಬಗ್ಯೆ ಕೊಡಲ್ಪಡುವ ಮೊಬಲಗ್ ಕುರಿತ ನಿಬಂಧನೆಗಳು.

ಪೊಲೀಸ್‌ಆಫೀಸರರು ಪ್ರಿವಿಲೀಜ್ ರಜಾದಮೇಲೆ ಇರುವಲ್ಲಿ ಅವರಿಗೆ ಬದಲೀ ಯಾರೂ ಮೊಕರರ್‌ಮಾಡಲ್ಪಡದೆ ಇದ್ದರೆ ಅಂತವರಿಗೆ ಸಿವಿಲ್‌ಲೀವ್‌ಕೋಡ್ 5ನೇ ರೂಲ್ಸ್ 24ನೇ ಸೆಕ್ಷನ್‌ನಲ್ಲಿ ವ್ಯವಸ್ಥಿತವಾದ ಕ್ರಮದಮೇಲೆ ಅಂತವರಿಗೆ ಕುದರೆ ಅಲೌರ್ವೆನ್ಸ ಪೂರಾ ಪಾವತೀ ಯಾಗಬಹುದು, ಆದರೆ, ಬದಲೀಮೊಕರರ್ ಆಗುವ ಪಕ್ಷಕ್ಕೆ ಸದರೀ ಲೌರ್ವೆನ್ಸ್ ಇಬ್ಬರು ಆಫಿಸರ್‌ಗಳಿಗೂ ಸಮನಾಗಿ ಹಂಚಲ್ಪಡತಕ್ಕದ್ದು. ಪರಂತು ಸದರೀ ಇಬ್ಬರೂ, ಕುದುರೇಯನ್ನು ಇಟ್ಟು ಕಾಪಾಡತಕ್ಕದ್ದಲ್ಲದೆ ತಮ್ಮ ತಮ್ಮ ಮಾಹೇವಾರೀ ಬಿಲ್ಲಿನಲ್ಲಿ ಆ ಬಗ್ಯೆ ಸರ್ಟಫೈ ಮಾಡತಕ್ಕದ್ದು.

2. ಪೊಲೀಸ್ ಆಫಿಸರರು ಸಸ್ಪೆಂಡ್ ಆಗಿರುವಕಾಲದಲ್ಲಿ ಆತನ ಕುದರೇ ಅಲೌರ್ವೆನ್ಸ್ ಆತನಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಬಗ್ಯೆ ಮೊಕರರ್ ಆದ ಆಫಿಸರು ತೆಗದುಕೊಳ್ಳತಕ್ಕದ್ದು.

3. ಮೆಡಿಕೆಲ್ ಸರ್ಟಫಿಕೇಟಿಮೇಲೆ ಯಾ ಫರ್‌ಲೋ ಮೇಲೆ ಗೈರ್ ಹಾಜರಾದ ಪೊಲೀಸ ಆಫಿಸರರು ಅಂತಾ ಗೈರ್ ಹಾಜರೀ ಕಾಲದಲ್ಲಿ ಕುದರೇ ಅಲೌರ್ವೆನ್ಸನ್ನು ತೆಗದುಕೊಳ್ಳಲಿಕ್ಕೆ ಅರ್ಹರಾಗಿರುವದಿಲ್ಲವು. ಮತ್ತು ಅಂತಾ ಅಲೌರ್ವೆನ್ಸು ಆತನ ಬದಲೀಮೊಕರರಾದವರಿಗೆ ಪಾವತೀಯಾಗಬಹುದು.

ನಂ. 181.　　ತಾರೀಖು 16ನೇ ಆಗಸ್ಟು 1876.

ಸ್ 1876ನೇ ಇಸವಿ ಆಗಸ್ಟು 8ನೇ ಮರಕುಂ 176ನೇ ನಂಬರ್ ಇಸ್ತಿಹಾರ್ ನಾಮೆಗೆ ಬದಲಾಗಿ ಯಿದರಡಿ ಬರುವ ಇಸ್ತಿಹಾರ್ ನಾಮೆಯು ಕೊಡಲ್ಪಟ್ಟಿರುತ್ತೆ.

ಸ್ 1872ನೇ ಇಸವಿ 10ನೇ ನಂಬರ್ ಆಕ್ಟಿಂಬ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 58ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಚೀಫ್ ಕಮ್ಮಿಷನ್ನರವರು ಅಪ್ಪಣೆ ಕೊಡಿಸುವದೇನಂದರೆ,—ಪಬ್ಲಿಕ್ ಪ್ರಾಸೀಕ್ಯೂಟರ್‌ಗಳು ಸೆಷನ್ ಜಡ್ಜಿಗಳ ಅಪ್ಪಣೆ ಯಿಂದ ಅಂತಾ ಸೆಷನ್ ಕೋರ್ಟ್ಸುಗಳ ಸ್ಥಳಾಧಿಕಾರದೊಳಗಿರುವ ಯಾವ ಮಾಜಿಸ್ಟ್ರೇಟರ ಮುಂದೆ ಯಾಗಲಿ ಯಾವ ಮೊಕದ್ದಮೆಯನ್ನಾದರೂ ಪ್ರಾಸೀಕ್ಯೂಟ್ ಮಾಡಬಹುದು

ನಂ. 182.　　ತಾರೀಖು 14ನೇ ಆಗಸ್ಟ 1876.

ಮೈಸೂರು ರೆವಿನ್ಯೂ ಸರ್ವೆ ಆಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೇಪ್ಟನ್ ಕೊವೀಯವರಿಗೆ 1876ನೇ ಇಸವಿ ಡಿಶಂಬರ್ ಗುರ್‍ರೇ ಲಗಾಯಿತು ಅಥವಾ ಅವರು ಯಾವ ತಾರೀಖಿನಿಂದ ಉಪಯೋಗಿಸಿಕೊಳ್ಳುತ್ತಾರೋ ಆ ಲಗಾಯಿತು ಸಿವಿಲ್ ಲೀವ್ ಕೋಡ್ 22ನೇ ಸೆಕ್ಷನ್ ಅನುಸರಿಸಿ ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 183.　　ತಾರೀಖು 14ನೇ ಆಗಸ್ಟು 1876.

ಅಪಾಥಿಕೆರಿ ಬೋವೀಯವರು, ಪ್ರಿವಿಲೀಜ್ ರಜಾದಮೇಲೆ ಸರ್ಜನ್ ಬೆಸನ್‌ಯವರ ಗೈರ್ ಹಾಜರೀಯಲ್ಲಿ, ನಗರ ಡಿವಿಜನ್ ಮೆಡಿಕಲ್ ಚಾರ್ಜನ್ನು 1876ನೇ ಇಸವಿ ಮೇ 19ನೇ ಮರ್ಕುಂ ಲಗಾಯಿತು ಜುಲೈ 3ನೇ ಮರ್ಕುಂ ವರಿಗೆ ವಹಿಸಿದ್ದರು.

ನಂ. 184.　　ತಾರೀಖು 16ನೇ ಆಗಸ್ಟ 1876.

ಪೇಷ್ಕಾರ್ ಕೊಯಿಲ್‌ಹೋಯವರು ಪ್ರಿವಿಲೀಜ್ ರಜಾದ ಮೇಲೆ ಹೋಗಿರುವ ಅಪ್ಪೂರಾಯರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಚಿಕ್ಕಮುಗಳೂರು ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 185.　　ತಾರೀಖು 17ನೇ ಆಗಸ್ಟ 1876.

ಈ ಕೆಳಗೆ ಬರುವ ಪೊಲೀಸ ಆಸಿಸ್ಟೆಂಟ್ ಕಮ್ಮಿಷನರುಗಳ ವರ್ಗಾವರ್ಗಿಗಳು ಮಂಜೂರಾಗಿರುತ್ತವೆ:—

ಮಾ॥ T. ವಿಜಯರಾಘವುಲು ನಾಯುಡು ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ಕಡೂರು ಡಿಸ್ಟ್ರಿಗೆ.

ಮಾ॥ R. ಮಹಮ್ಮದ್ ಅಲ್ಲಿಯವರು ಕಡೂರು ಡಿಸ್ಟ್ರಿಕ್ಟಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 6. ತಾರೀಖು 10ನೇ ಜುಲೈ 1876.

ಮಡಿಕೇರೆ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸೋಣಾದ ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ ಮಾಡಲ್ಪಟ್ಟು ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಸಲ್ಪಟ್ಟಿರುತವೆ.

"ಬಮೋಜೀಬ್ ಹುಕ್ಕುಂ."

T. Clarke,
Offg. Secretary.

ಮಡಿಕೇರೆ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸಲ್ಪಟ್ಟ ಬೈಲಾ ನಿಬಂಧನೆಗಳು.

1ನೇ ಅಧ್ಯಾಯ.

1. ಆಯಾ ತಿಂಗಳ ಮೊದಲನೇ ಸೋಮವಾರದ ದಿನ, ಮ್ಯುನಿಸಿಪೆಲ್ ಬೋರ್ಡಿನವರ ಸಾಮಾನ್ಯಸಮಾಜಗಳು ತಿಂಗಳು ತಿಂಗಳಿಗೂ ನಡೆಯುವದು.

2. ಜರೂರಾದಾಗಲೆಲ್ಲ ಮೇಲೆ ಕಂಡ ಸಾಮಾನ್ಯ ಸಮಾಜಗಳೊಡನೆ ವಿಶೇಷ ಸಮಾಜಗಳೂ ನಡೆಯುವವು.

3. ಕೊಡಗು ಸೂಪರ್ರಿಟೆಂಡೆಂಟರವರು ಬೋರ್ಡಿನ ಪ್ರೆಸೀಡೆಂಟರಾಗಿರುತ್ತಾರೆ. ಅವರ ಗೈರಹಾಜರೀಯಲ್ಲಿ 1ನೇ ಅಸಿಸ್ಟೆಂಟ ಸೂಪರ್ರಿಟೆಂಡೆಂಟರು ಪ್ರೆಸೀಡೆಂಟರಾಗಿರತಕ್ಕದ್ದು, ಇವರಿಬ್ಬರೂ ಗೈರಿ ಹಾಜರಾದಲ್ಲಿ ಕಮಾಂಡಿಂಗ್ ಆಫಿಸರವರು ಪ್ರೆಸೀಡೆಂಟ ಕೆಲಸವನ್ನು ನೋಡತಕ್ಕದ್ದು. ಈ ಮೂವರೂ ಇಲ್ಲದಿದ್ದರೆ, ಸೇರಿದ ಸಮಾಜದವರು ತತ್ಕಾಲಕ್ಕೆ ತಮಗೆ ಯುಕ್ತವಾದವರನ್ನು ಪ್ರೆಸೀಡೆಂಟರಾಗಿ ಯೇರ್ಪಡಿಸಿಕೊಳ್ಳತಕ್ಕದ್ದು.

ಒಂದು ಸಮಾಜದಲ್ಲಿ ಚರ್ಚಿಸಲ್ಪಡತಕ್ಕ ದರೋಬಸ್ತು ಅಂಶಗಳೂ ಸಮಾಜ ಸೇರುವದಕ್ಕೆ ಅಥವಾಪಕ್ಷ ಯೇಳು ದಿನಗಳಿಗೆ ಮುಂದಾಗಿ ಕೊಡೋಣಾದ ಒಂದು ಸರ್ಕ್ಯುಲರ್ ಮೂಲಕ ಮೆಂಬರಗಳ ತಿಳುವಳಿಕೆಗೆ ತರಲ್ಪಡತಕ್ಕವು.

4. ಹಾಜರಿರುವ ಯಾವ ಮೆಂಬರಾಗಲಿ, ಹುಕ್ಕುಮಾಗತಕ್ಕ ಯಾವ ಅಂಶವನ್ನಾದರೂ, ಪ್ರೆಸೀಡೆಂಟರಿಗೆ ಕಳುಹಿಸಬಹುದು.

5. ಯಾವ ವಿಷಯವನ್ನಾದರೂ ಸೂಚಿಸುವಲ್ಲಿ ಯಾ ಚರ್ಚಿಸುವಲ್ಲಿ ಪ್ರತಿಮೆಂಬರೂ, ತನ್ನ ಜಾಗಾದಲ್ಲಿದ್ದುಕೊಂಡು ಯಾವಾಗಲೂ ಪ್ರೆಸೀಡೆಂಟರನ್ನುದ್ದೇಶಿಸಿ ಮಾತನಾಡತಕ್ಕದ್ದು.

6. ಜವಾಬಾಗಿ ಸೂಚಿಸತಕ್ಕವನು ವಿನಾ, ಯಾವ ಮೆಂಬರೂ, ಯಾವ ಸೂಚನೆ ಯಾ ತಿದ್ದುಪಾಟಿನ ವಿಷಯದಲ್ಲಿಯೂ, ಯೆರಡಾವರ್ತಿ ಮಾತನಾಡಕೂಡದು.

7. ಯಾವ ಅಂಶವನ್ನಾಗಲಿ ಸೂಚಿಸಿದವನು ಅಂಗೀಕಾರವಪ್ಪುವರ ಪಟ್ಟೀ ಬೇಕೆಂದು ಕೇಳಿದರೆ ಕೈಗಳೆತ್ತಿ ತೋರಿಸುವದರ ಮೂಲಕ ಅಂಗೀಕಾರಗಳನ್ನು ತೆಗದುಕೊಳ್ಳತಕ್ಕದ್ದು.

8. ಪ್ರತಿ ಸೂಚನೆ ಅಥವಾ ತಿದ್ದುಪಾಡು ಬರವಣಿಗೆಯಲ್ಲಿರತಕ್ಕದ್ದು; ಆದರೆ ಪ್ರೆಸೀಡೆಂಟರಿಂದ ಅಪೇಕ್ಷಿಸಲ್ಪಟ್ಟ ಹೊರತು ಸೂಚನೆ ಯಾ ತಿದ್ದುಪಾಡು ಅನುಮೋದಿಸಲ್ಪಡ ಬೇಕಾದ ಅವಶ್ಯಕವಿಲ್ಲವು.

9. ಒಬ್ಬ ಮೆಂಬರಿಂದ ಮತ್ತೊಬ್ಬ ಮೆಂಬರಿಗೆ ಹಾಕಲ್ಪಡುವ, ಸಮಾಜದ ಕೆಲಸಕ್ಕೆ ಸಂಬಂಧಪಟ್ಟ ದರೋಬಸ್ತು ಪ್ರಶ್ನೆಗಳೂ ಪ್ರೆಸೀಡೆಂಟರ ಮೂಲಕವೇ ಹಾಕಲ್ಪಡತಕ್ಕವು.

10. ಮ್ಯುನಿಸಿಪೆಲ್ ಬೋರ್ಡಿನವರ ಸಮಾಜಗಳಲ್ಲಿ ಸಾಮಾನ್ಯವಾಗಿ ಜನಗಳು ಬರಬಹುದು, ಆದರೆ ಜರೂರಿದ್ದಲ್ಲಿ ಹೊರಗಿನವರನ್ನು ಹೊರಗೆ ಹೋಗುವಂತೆ ಹೇಳಬಹುದು.

11. ದರೋಬಸ್ತು ಸಮಾಜಗಳಲ್ಲಿಯೂ, ರೈಟರು ಹಾಜರಿದ್ದು ಕೇಳಿದ ಯಾವ ಲೆಕ್ಕವನ್ನಾಗಲಿ ಹಾಜರ್ ಮಾಡತಕ್ಕದ್ದು.

12. ಕಟ್ಟಣದ ಬಗ್ಯೆ, ಯಾ ಇತರ ಕೆಲಸಗಳಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, ಸಾಗುವಳೀಯಲ್ಲಿರುವ ಯಾ ಇತರ ವಿಧವಾಗಿರುವ ಜಮೀನನ್ನು ಕ್ರಯಕ್ಕಾಗಲಿ ಗೇಣೀಗಾಗಲಿ ಪಡೆಯಲಿಕ್ಕೆ ಅಪೇಕ್ಷೆಯುಳ್ಳ ಯಾವ ಮನುಷ್ಯನಾಗಲಿ ಖಾಯಿಷ್ ಮಾಡಿದ ಜಮೀನ್ ಇರುವ ಪ್ರದೇಶವನ್ನೂ, ಅದರ ವಿಸ್ತಾರವನ್ನೂ ವಿವರಿಸುವಂತಾ ನಕ್ಷೇಗಳ ಯೆರಡು ಪ್ರತಿಗಳು ನಿಶೀ, ಬರವಣಿಗೇ ಮೂಲಕವಾದ ದರಖಾಸ್ತನ್ನು ಪ್ರೆಸೀಡೆಂಟರಿಗೆ ಪರಭಾರೆ ಕೊಡತಕ್ಕದ್ದು.

ಪ್ರೆಸೀಡೆಂಟರ ಮಂಜೂರಾತೀಯನ್ನು ಮೊದಲೇ ಪಡೆದ ಹೊರತು ಯಾವ ಮನುಷ್ಯನೂ, ತಾನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಖರೀದಿಗೆ ಪಡೆದುಕೊಂಡ ಜಮೀನಿನಲ್ಲಿ ಕಟ್ಟಣ ಕಟ್ಟಿಸಲಿಕ್ಕೆ ಪ್ರಾರಂಭಿಸಲು ಅಧಿಕಾರವಿಲ್ಲವು.

ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಒಂದೇ ಜಮೀನಿಗಾಗಿ ಒಂದು ತಿಂಗಳೊಳಗೆ ಯೆರಡು ಅಥವಾ ಹೆಚ್ಚು ದರಖಾಸ್ತುಗಳು ಬಂದರೆ ಅವ್ವಲ್ ಖರೀದೀ ಠರಾವ್‌ನಿಂದ ಮೂರುವಾರಗಳ ವರಿಗೆ ಬಹಿರಂಗಗಳಾದ ಸ್ಥಳಗಳಲ್ಲಿ ನೋಟಿಸ್‌ಗಳನ್ನು ಹಚ್ಚುವ ಧ್ವರ ಮೂಲಕ ಘಾಯಿಷ್ ಮಾಡಿದ ಮೇಲೆ ಪ್ರಕಟವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

13. ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಜಮೀನನ್ನು ಗೇಣೀಗಾಗಲಿ, ಖರೀದೀಗಾಗಲಿ ಪಡೆದುಕೊಳ್ಳುವ ಬಗ್ಯೆ ಬರುವ ಯಾವ ದರಖಾಸ್ತನ್ನಾಗಲಿ, ಪ್ರೆಸೀಡೆಂಟರು ದರಖಾಸ್ತುದಾರಗೆ ತಕ್ಕ ಸಬಬ್‌ಗಳು ತಿಳಿಸಿ ನಿರಾಕರಿಸಬಹುದು. ಅಥವಾ ಷರತ್ತುಗಳ ಪೈಕೀ ಕಟ್ಟಣಗಳು, ಹೊರಗಿನ ಕಟ್ಟಣಗಳು, ಸುತ್ತು ಗೋಡೆಗಳು, ಯಾ ಆವರಣಗಳು, ಫಲಾನೇ ವಿಧವಾಗಿ ಯಾ ಫಲಾನೇ ಖರೀದೀ ಉಳ್ಳದ್ದಾಗಿರಬೇಕೆಂತಲೂ, ಹರಾಜ್ ಯಾ ಗೇಣೀಕಾಲದಲ್ಲಿ ನಿಷ್ಕರ್ಷೆಯಾಗತಕ್ಕಂತಾ ಕಾಲದೊಳಗಾಗಿ ಕಟ್ಟಲ್ಪಡತಕ್ಕದ್ದೆಂತಲೂ, ಇದಕ್ಕೆ ತಪ್ಪಿದರೆ ಯೆರಡು ವರುಷಗಳೊಳಗಾಗಿ ಸರ್ಕಾರಕ್ಕೆ ವಾಪಸ್ ಸೇರಿಸಿಕೊಳ್ಳಲ್ಪಡುವದೆಂತಲೂ, ಒಂದು ಷರತ್ ಮಾಡಬಹುದು.

14. ಖಾಲೀ ಇರುವ ಕಟ್ಟಣದ ಜಮೀನ್‌ಗಳು, ಯಾ ನಿವೇಶನಗಳು, ಯಾ ಅಂಗಡಿಗಳು ಪ್ರೆಸೀಡೆಂಟರ ಮಂಜೂರಾತೀ ಇಲ್ಲದೆ ವಿಭಾಗವಾಗತಕ್ಕದ್ದಲ್ಲವು.

15. ಬೀದಿಗಳಲ್ಲಿ ಅಥವಾ ಸಂದಿಗಳಲ್ಲಿ ಐದು ವರುಷಗಳ ಕಾಲ ವಾಸಸ್ಥರಿಲ್ಲದೆ ಬಿಡಲ್ಪಟ್ಟ ಯಾವ ನಿವೇಶನಗಳಾಗಲಿ ಮನೆಗಳು ಮುಂತಾದವುಗಳಾಗಲಿ, ಆರು ತಿಂಗಳವರಿಗೆ ಇಸ್ತಿಹಾರ್ ಘಾಯಿಷ್ ಆದಮೇಲೆ ಪ್ರೆಸೀಡೆಂಟರ ಅಧಿಕಾರಕ್ಕೆ ಒಳಗಾಗಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡಲಿಕ್ಕೆ ಗುರಿಯಾಗಿರುತ್ತವೆ. ಅಂತಾ ಹರಾಜ್‌ನಲ್ಲಿ ಹುಟ್ಟುವಳೀಯಾದ ಮೊಬಲಗಿಗೆ ಯಾರೂ ಬಾಧ್ಯತೆ ತಾರದೆ ಇದ್ದರೆ ಅದು, ಬೇವಾರಸ್ ಸ್ವತ್ತಿನ ನಿಬಂಧನೆಗಳ ಪ್ರಕಾರ ಮ್ಯುನಿಸಿಪೆಲ್ ಇಲಾಖೆಯ ಜಮೀನಿಗೆ ದಾಖಲ್ ಮಾಡಿಕೊಳ್ಳಲ್ಪಡುವದು.

16. ಸ್ಕ್ವಾಟರ್‌ಗಳು ಅಂದರೆ ದೃಢವಾದ ಬಾಧ್ಯತೆ ಯಿಲ್ಲದೆ ಪಬ್ಲಿಕ್ ಜಮೀನ್‌ನಲ್ಲಿ ನೆಲೆಗೊಳ್ಳುವ ಜನಗಳು, ಇದುವರಿಗೆ ವಾಸಮಾಡುತಿದ್ದ ಮನೆ ಮುಂತಾದವುಗಳನ್ನು ಒಳಗೊಂಡಿದ್ದ ಹಾಳು ಗೋಡೆಗಳು, ಸದರೀ ಮನೆ ಮುಂತಾದವುಗಳು ಖಾಲೀ ಮಾಡಲ್ಪಟ್ಟ ತರುವಾಯ ಕೆಡಹಿಸಿ ನೆಲ ಸಮಮಾಡಲ್ಪಡತಕ್ಕವು. ಅಂತಾ ಸಂಗತಿಗಳಲ್ಲಿ ಹಾಂಗೆ ಖಾಲೀ ಮಾಡಲ್ಪಟ್ಟ ಜಮೀನು ಮ್ಯುನಿಸಿಪೆಲ್ ಯಿಲಾಖೆಯವರ ಅಧೀನದಲ್ಲಿರತಕ್ಕದ್ದು.

II. ಪೂರ್ವ ಅನುಭವಿಸುತಿದ್ದ ಬಾಧ್ಯತೆಯ ಮೇಲೆ ಸ್ಕ್ವಾಟರ್‌ಗಳಿಂದ ಯಾ ಇತರ ಜನಗಳಿಂದ ತ್ಯಜಿಸಲ್ಪಟ್ಟ ನಿವೇಶನಗಳ, ಹಾಳು ಭೂಮಿಯ, ಯಾ ವಾಸಯೋಗ್ಯವಲ್ಲದೆ ಶಿಥಿಲವಾಗಿರುವ ಮನೆ ಮುಂತಾದವುಗಳ ಯಾವ ಬಿಕರೀಯೂ, ಪಟ್ಟೇ ಇಂದ ಯಾ ಗ್ರಾಂಟ್ ನಿಂದ ಯಾ ಸ್ 1864ನೇ ಇಸವೀ ಜುಲೈ ಗುರ್ರೇ ಮೊದಲು ಹುಟ್ಟಿದ ಕ್ರಯ ಶಾಸನದಿಂದ ಮತ್ತು ಸದರೀ ಜಮೀನಿನ ವಿವರಣದಿಂದ ಅಂತಾ ಬಾಧ್ಯತೆಯು ಬಲಪಡಿಸಲ್ಪಟ್ಟ ಹೊರ್ತು ದೃಢಪಡತಕ್ಕದಲ್ಲ.

III. ಇದು, ಒಂದು ತಿಂಗಳೊಳಗೆ ತಮ್ಮ ಮನೆಗಳನ್ನ ದುರಸ್ತು ಮಾಡುವ ಯಾ ಅವುಗಳನ್ನ ಖಾಲೀ ಮಾಡುವ ಜನಗಳಿಗೆ ಅಥವಾ ವಾಸಗೃಹ ಮುಂತಾದವುಗಳನ್ನು ಮಾರುವ ಜನಗಳಿಗೆ ಲಗಾವಾಗುವದಿಲ್ಲ.

17. ದರೋಬಸ್ತು ಬಂಡಿಗಳೂ, ಸವಾರಿಗಳೂ ತಮ್ಮ ಯೆದುರಿಗೆ ಬರತಕ್ಕ ಬಂಡಿಗಳು, ಸಂಧಿಸಿ ಬಲಗಡೆಗೆ ಹೋಗುವದಕ್ಕೆ ಅನುಕೂಲಿಸುವಂತೆ ರಸ್ತೆಯಲ್ಲಿ ತಮ್ಮ ಯೆಡಪಾರ್ಶ್ವಕ್ಕೇನೇ ಹೋಗುವಂತೆ ಬಲಾತ್ಕರಿಸಲ್ಪಡತಕ್ಕವು.

18. ಸಾಮಾನುಗಳು ತೆಗೆದುಕೊಂಡು ಹೋಗುವ ಬಗ್ಯೆ ಯೆತ್ತುಗಳು ಕಟ್ಟಿದ ಬಂಡೀ ಅಲ್ಲದ ಇತರ ಯಾವ ವಿಧವಾದ ಯಾವ ಸಾಧನವನ್ನಾಗಲಿ ಸೂರ್ಯಾಸ್ತಮಯದನಂತರ ಮುಕ್ಕಾಲು ಗಂಟೆಗೂ ಸೂರ್ಯೋದಯಕ್ಕೆ ಪೂರ್ವ ಒಂದು ಗಂಟೆಗೂ ಮಧ್ಯಕಾಲದಲ್ಲಿ ಯಾವಾಗಲಾದರೂ ಅಂತಾ ಗಾಡಿಯ ಉಭಯ ಪಾರ್ಶ್ವಕ್ಕೂ ಹಚ್ಚಿದ ದೀಪಗಳು ಇಡದೇ ಯಾವನು ನಡಿಸುತ್ತಾ

ನೋ ಅಂತಾವನು ದೀಪಗಳು ಅನಾವಶ್ಯಕವಾಗಲಿಕ್ಕೆ ಸಾಕಾದಷ್ಟು ಬೆಳದಿಂಗಳು ಇರಬಹುದಾಗಿ ಮ್ಯಾಜಿಸ್ಟ್ರೇಟರಿಗೆ ತೋರಿದಾಗ ಹೊರ್ತು ಇತರ ಕಾಲದಲ್ಲಿ 5ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

II. ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಾವ ರಸ್ತೆಯಲ್ಲಿಯಾದರೂ ರಾತ್ರಿ 7 ಗಂಟೆಗೂ ಬೆಳಿಗ್ಯೆ 4 ಗಂಟೆಗೂ ಮಧ್ಯೆ ಯೆತ್ತುಗಳು ಕಟ್ಟಿದ ಬಂಡಿಯನ್ನಾಗಲಿ, ಯಾವ ವಿಧವುಳ್ಳ ಸವಾರೀ ಗಾಡಿಯನ್ನಾಗಲಿ ಅಂತಾ ಗಾಡಿಯ ಉಭಯಪಾರ್ಶ್ವಕ್ಕೂ ಲಗತ್ ಮಾಡಲ್ಪಟ್ಟ ಹಚ್ಚಿದ ಲಾಂದರುಗಳು ಕಟ್ಟದೇ ನಡಸುವಂತಾವನು 5ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು. ಪರಂತು ಕಾಲು ನಡೆಗೆ ಸರಿಯಾಗಿ ಹೋಗುವ ಭರ್ತೀ ಬಂಡಿಗಳಿಗೆ ಮಧ್ಯದಲ್ಲಿ ತಗಲಹಾಕಲ್ಪಟ್ಟ ಬಂದು ಹಚ್ಚಿದ ಲಾಂದ್ರ ಯಿರಬಹುದು.

III. ಮ್ಯುನಿಸಿಪೆಲ್ ಸರಹದ್ದಿನಲ್ಲಿ ಯೆತ್ತುಗಳು ಕಟ್ಟಿದ ಯಾವ ಸಾಮಾನು ಬಂಡಿಯನ್ನಾಗಲಿ ನಡಿಸುವಂತವನು ಕಾಲು ನಡಿಗೆ ಸರಿಯಾಗಿ ನಡಿಸತಕ್ಕದ್ದು ಮತ್ತು ರಸ್ತೆಯೊಳಗೆ ಯೆಡಗಡೆಯಲ್ಲಿಯೇ ಹೋಗತಕ್ಕದ್ದು, ಮತ್ತು ಯೆತ್ತುಗಳನ್ನು ನಡಿಸತಕ್ಕವನು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟ್ಟೀಯಲ್ಲಿಟ್ಟುಕೊಳ್ಳುವ ಬಗ್ಯೆ ಸಾಕಾದಷ್ಟು ಬಲವಾದ ಹಗ್ಗದಿಂದೆ ಆ ಯೆತ್ತುಗಳಿಗೆ ಮೂಗುದಾರ ಹಾಕಿರತಕ್ಕದ್ದು. ಈ ಹುಕ್ಕುಂಗಳಿಗೆ ಬರಖಿಲಾಫ್ ನಡೆಯುವ ತಪ್ಪಿತಸ್ಥನು 5 ರೂಪಾಯಿಗಳಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

2ನೇ ಅಧ್ಯಾಯ.

ಸ್ಥಳಿಕ ತೊಂದರೆಗಳು.

19. ಪಬ್ಲಿಕ್ ಬೀದಿಗಳಲ್ಲಿ ದನಗಳನ್ನು ಕಟ್ಟುವಿಕೆ, ಪೆಟ್ಟಿಗೆಗಳನ್ನು ಖಾಲೀ ಬಂಡಿಗಳನ್ನು, ಯಾ ಸವಾರೀಗಾಡಿಗಳನ್ನು ಅಥವಾ ಯಾವವಿಧದ ನಿರೋಧಗಳನ್ನು ಮನೆಗಳ ಯಾ ಅಂಗಡಿಗಳ ಮುಂದೆ ಬಿಡುವಿಕೆ, ಮತ್ತು ಯಾವ ಅಂಗಡಿಯ ಯಾ ಮನೆಯ ಮುಂದುಗಡೆಯಾಗಲಿ ಯೆರಡು ಗಂಟೆಗಳ ಹೊತ್ತಿಗಿಂತ ಹೆಚ್ಚಾಗಿ ಬಂಡಿಗಳು ಯಾ ಸವಾರೀಗಾಡಿಗಳು ಭರ್ತೀ ಮಾಡುವಾಗ್ಯೆ ಯಾ ಯಿಳಿಸುವಾಗ್ಯೆ ಗುಂಪುಕೂಡುವದಕ್ಕೆ ಆಸ್ಪದ ಕೊಡುವಿಕೆ, ಇಂತಾದ್ದು 5 ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು.

20. ಮ್ಯುನಿಸಿಪೆಲ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾ ಅವರ ಹುಕ್ಕುಮಿಗೆ ವಿರುದ್ಧವಾಗಿ ಬಂಡೆಯಲ್ಲಿ ಗ್ರೇವಲ್ ಮತ್ತು ಕಲ್ಲು ತೆಗೆಯುವಿಕೆ, ಇಟ್ಟಿಗೆ ಮತ್ತು ಹೆಂಚುಗಳಿಗೋಸ್ಕರ ಮಣ್ಣು ಅಗಿಯುವಿಕೆ ಇಟ್ಟಿಗೆ ವ ಹೆಂಚುಗಳನ್ನು ಮಾಡುವ ಬಗ್ಯೆ ಲೈಸೆರ್ಸಗಳನ್ನು ಮ್ಯುನಿಸಿಪೆಲ್ ಆಫೀಸನಲ್ಲಿ ದರಖಾಸ್ತು ಮಾಡಿ ಪಡೆದುಕೊಳ್ಳಬಹುದು. ಈ ಸ್ಥಳವೊಳಗೆ ತರಲ್ಪಡುವ ಇಟ್ಟಿಗಳಿಗೆ 1000ಕ್ಕೆ 4 ಆಣಿ, ಹೆಂಚುಗಳು 1000ಕ್ಕೆ 4 ಆಣಿ, ಈ ಮೇರೆ ವಸೂಲ್ ಮಾಡಲ್ಪಡತಕ್ಕದ್ದಲ್ಲದೆ, ಬಂದು ಬಂಡಿ ಕಲ್ಲಿಗೆ 6 ಕಾಸು ಅಥವಾ ಚದರ ಗಜ ಬಂದಕ್ಕೆ 2 ಆಣೆಗಳ ಮೇರೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

21. ನೋಟಿಸ್ ತಲಪಿದ 8 ದಿನಗಳೊಳಗಾಗಿ ಯಾವ ಮನೆಗಾಗಲಿ ಕಟ್ಟಡಕ್ಕಾಗಲಿ, ಹೊರಗೆ ಯಾ ಒಳಗೆ ಸುಂಣ ಬಳಿಯಲಿಕ್ಕೆ ಅಥವಾ ಆರೋಗ್ಯ ನಿಮಿತ್ತದಿಂದ ಅವುಗಳನ್ನು ಪಾಕ್ ಮಾಡಲಿಕ್ಕೆ, ಅಥವಾ ಪಾಯಖಾನೆಗಳನ್ನು ಯಾ ಬಚ್ಚಲು ಗುಣಿಗಳನ್ನು ಕಂಪು ಯಿಲ್ಲದೆ ಮಾಡಲಿಕ್ಕೆ ಮೆಡಿಕೆಲ್ ಆಫೀಸರರ ಸಲಹೇ ಮೇಲೆ ಅಮಲ್ ನಡಿಸುವ ಪ್ರೆಸಿಡೆಂಟರ ಯಾವ ಹುಕ್ಕುಮಿಗಾಗಲಿ ಅವಿಧೇಯವಾಗಿ ನಡೆಯುವಿಕೆ—ಜುರ್ಮಾನೆ 10 ರೂಪಾಯಿ.

22. ಗ್ಲಾಂಡರ್ಸ್ ಯೆಂಬ ರೋಗವಾಗಲಿ, ಅಥವಾ ಅಪಾಯಕರವಾದ ಯಾ ಅಂಟುವ ಸ್ವಭಾವ ವುಳ್ಳ ಸಾಂಕ್ರಾಮಿಕವಾದ ಯಾ ಅನ್ಯಥಾ ಯಿರುವ ಯಾವ ರೋಗವಾಗಲಿ, ತಗಲಿದ, ಯಾವದಾದರೂ, ಕುದುರೆ ಯಾ ಯಿತರ ಜಾನ್ವರ್ಗಳುಳ್ಳ, ಮತ್ತು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಹಂಗಾಮಿಯಾಗಿ ಆಗಲಿ, ಅನ್ಯಥಾ ಆಗಲಿ, ವಾಸ ಮಾಡುವ ದರೋಬಸ್ತು ಜನಗಳೂ ಆ ಸಂಗತಿಯನ್ನು ಕುರಿತು ಕೂಡ್ಲೆ ಪ್ರೆಸಿಡೆಂಟರಿಗೆ ಜಾಹಿರ್ ಮಾಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು. ಸದರೀ ಪ್ರೆಸಿಡೆಂಟರು ಮೇಲೆ ಕಂಡ ಪ್ರಕಾರ ತಮಗೆ ನೋಟಿಸ್ ಬಂದ ಮೇಲೆ ಸಾಧ್ಯವಾದಷ್ಟು ತ್ವರೆಯಾಗಿ ಲಾಯಖಾದ ಬಬ್ಬ ಸಾಲಂತ್ರೀ ಮೂಲಕ ಜಾನ್ವರನ್ನು ಯಾ ಜಾನ್ವರ್ಗಳನ್ನು ಅಜಮಾಯಿಷೀಮಾಡಿಸಿ, ಸದರೀ ಜಾನ್ವರ್ ಯಾ ಜಾನ್ವರ್ಗಳನ್ನು ತೊಲಗಿಸುವದು ಆವಶ್ಯಕವೆಂದು ತೃಪ್ತಿಕರವಾಗಿ ತಿಳಿಯಬಂದರೆ, ಸ್ವಂತಗಾರನು ಅಂತಾ ಜಾನ್ವರನ್ನು ಕೂಡ್ಲೆ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಸಾಗಿಸಿ ಬಿಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು.

ಗ್ಲಾಂಡರ್ಸ್ ಎಂಬ ರೋಗವಾಗಲಿ, ಯಿತರ ಯಾವ ಸಾಂಕ್ರಾಮಿಕ ರೋಗವಾಗಲಿ, ತಗಲಿ ಯಿರುವ ಜಾನ್ವರ್ಗಳು ಉಳ್ಳ ಯಾವ ಮನುಷ್ಯನಾಗಲಿ, ಈ ಬೈಲಾ ನಿಬಂಧನೇ ಪ್ರಕಾರ ನಡೆಯದಿದ್ದರೆ, ಅಂತಾವನು ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾ

ಪಿಸಲ್ಪಟ್ಟ ಅವ್ವಲ್‌ದಫಾ ತಪ್ಪಿತಕ್ಕೆ 100 ರೂಪಾಯಿಗಳ, ಆ ತರುವಾಯ ಯರಡನೇ ಮತ್ತು ಪ್ರತಿಸಲದ ತಪ್ಪಿತಕ್ಕೂ, 200 ರೂಪಾಯಿಗಳ ಜುರ್ಮಾನೆಗೆ ಗುರಿಯಾಗತಕ್ಕದ್ದು.

23. ಸ್ವಂತಗಾರರ ಯಾ ಹಿಡುವಳೀದಾರರ ಮನೆ ಮುಂತಾದವುಗಳಲ್ಲಿ ಮೃತಪಡುವ ಯಾವ ಜಂತುವಿನ ಶವವನ್ನಾಗಲಿ, ಯುಕ್ತವಾದ ಕಾಲದೊಳಗೆ, ರಬ್ಬಿಷ್ ಡಿಪೋಯೆಂಬ ಕಶ್ಮಲ ಹಾಕುವ ಜಾಗಾಕ್ಕೆ ಸತ್ತ ಅಥವಾ, ಜಂತುಗಳ ಶರೀರಗಳನ್ನು ದರ್ಫ ಮಾಡುವ ಬಗ್ಯೆ ಪ್ರತ್ಯೇಕವಾಗಿ ಯೇರ್ಪಡಿಸಲ್ಪಟ್ಟ ಸ್ಥಳಕ್ಕೆ ತೆಗಸಿ ಹಾಕುವದಕ್ಕೆ ಉಪೇಕ್ಷಿಸುವಿಕೆ,—ಜುರ್ಮಾನೆ 5 ರೂಪಾಯಿಗಳು.

24. ಪಬ್ಲಿಕ್ ತೋಟಗಳಲ್ಲಿ ಯಾ ರಸ್ತೆಗಳ ಬಾಜಾಗಳಲ್ಲಿ ಮರಗಳನ್ನು ನಾಶ ಪಡಿಸುವಿಕೆ ಹಣ್ಣುಗಳನ್ನು ಯಾ ಹುವ್ವುಗಳನ್ನು ಕೊಯ್ಯುವಿಕೆ, ಯಾ ಹುಲ್ಲನ್ನು ಕೊಯ್ಯುವಿಕೆ, ಯಾ ಬೇರುಸಹಿತ ಕೀಳುವಿಕೆ, ಅಥವಾ ಯಾವ ವಿಧದಿಂದಲಾಗಲಿ, ರಸ್ತೆಗಳ ಬಾಜಾಗಳನ್ನು ಮತ್ತು ಬದುವುಗಳನ್ನು ನಾಶ ಪಡಿಸುವಿಕೆ, ಅಥವಾ ಕವಾಯತ್ ಜಾಗಾಗಳಲ್ಲಿ, ಯಾ ವಿಹಾರಾಪೇಕ್ಷೆಯುಳ್ಳವರಿಗಾಗಿ ಮಾತ್ರ ಉದ್ದೇಶಿಸಲ್ಪಟ್ಟ ಪಬ್ಲಿಕ್ ತೋಟಗಳಲ್ಲಿ ತಿರುಗಾಡಿ ರಾಫ್ತೆ ಮಾಡುವಿಕೆ,—ಜುರ್ಮಾನೆ 10 ರೂಪಾಯಿಗಳು.

25. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಯಿಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಟ್ಟ ಯಾವ ಗೋರೀಯಲ್ಲಾಗಲಿ, ಶವದ ಪೆಟ್ಟಿಗೆಯನ್ನೂ ಯಾ ಶವವನ್ನೂ, ಭೂಮಿಯ ಮಟ್ಟದಕೆಳಗೆ ಮೂರು ಅಡಿಗಿಂತ ಕಡಮೆಯಾದ ಆಳದಲ್ಲಿರುವ ಹಾಗೆ ದರ್ಫ ಮಾಡುವಿಕೆ.—ಜುರ್ಮಾನೆ 5 ರೂಪಾಯಿ.

26. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಇಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಡದೇ ಯಿರುವ ಯಾವ ಗೋರೀಯಲ್ಲಾಗಲಿ, ಯಾವ ಶವದ ಪೆಟ್ಟಿಗೆಯನ್ನಾಗಲಿ, ಶವವನ್ನಾಗಲಿ, ಭೂಮಟ್ಟದ ಕೆಳಗೆ 5 ಅಡಿಗಳಿಗೆ ಕಡಮೆಯಾದ ಆಳದಲ್ಲಿರುವಂತೆ ದರ್ಫ ಮಾಡುವಿಕೆ.—5 ರೂಪಾಯಿಗಳ ಜುರ್ಮಾನೆ.

27. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಜಾಗಾದಲ್ಲಾಗಲಿ, ಎರಡು ಅಡಿಗೆ ಕಡಮೆಯಾದ ದೂರದಲ್ಲಿ ಮತ್ತು ಮ್ಯುನಿಸಿಪೆಲ್ ಬೋರ್ಡಿನವರಿಂದ ವಿಧಿಸಲ್ಪಡದ ಜಾಬಿನಲ್ಲಿ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

28. ದರ್ಫ ಜಾಗಾಗಳ ಯಾ ದಹನ ಸ್ಥಳಗಳ ಸ್ವಂತಗಾರರು ಯಾ ಜಿಮ್ಮೆಉಳ್ಳವರು ದರ್ಫ ಯಾ ದಹನವಾದ 24 ಘಂಟೆ ಹೊತ್ತಿನ ಒಳಗಾಗಿ, ಮೃತಪಟ್ಟ ಮನುಷ್ಯನ ಹೆಸರುಗಳು, ಸ್ತ್ರೀ ಅಥವಾ ಪುರುಷನೆಂಬದು, ವಯಸ್ಸು, ಮತ್ತು ವಾಸಸ್ಥಾನ, ಮರಣಕಾರಣ, ಯಿಂತಾದ್ದನ್ನು ಕುರಿತು ಆ ಜನಗಳಿಗೆ ಸಾಧ್ಯವಾದ ದರೋಬಸ್ತು ಸಂಗತಿಯನ್ನೂ ಬೋರ್ಡಿನವರಿಗೆ ತಿಳಿಸಲಿಕ್ಕೆ ಉಪೇಕ್ಷಿಸುವಣ,—ಜುರ್ಮಾನೆ ರೂಪಾಯಿ 5.

29. ಕೊಬ್ಬನ್ನು ಕರಗಿಸುವದಕ್ಕೋಸ್ಕರ ಯಾ ಮಾಂಸ ಸಂಬಂಧವಾದ ಕಶ್ಮಲವನ್ನು, ಯಾ ರಕ್ತವನ್ನು ಕಾಯಿಸುವದಕ್ಕೋಸ್ಕರ ಉಪಯೋಗಿಸಲ್ಪಡುವ ಸ್ಥಳಗಳ, ಸಬ್ಬಿನಮನೆಯ, ಎಣ್ಣೇ ಕಾಯಿಸುವ ಮನೆಯ, ಬಣ್ಣಾ ಹಾಕುವ ಮನೆಯ, ತೊಗಲು ಹದಾಮಾಡುವ ಸ್ಥಳದ, ಇಟ್ಟಿಗೆ, ಕುಂಬಾರಸೂಳುಗಳ ಯಾ ಸುಣ್ಣಾದ ಗೂಡಿನ, ಸ್ಟೇಗೋ ಯಾ ಸಕ್ಕರೇ ಕಾರಖಾನೆಯ, ಅಥವಾ ಅಸಹ್ಯವಾದ ಯಾ ಅನಾರೋಗ್ಯವಾದ ವಾಸನೆ ಯುಂಟುಮಾಡುವ ಇತರ ಕಾರಖಾನೆಯ ಯಾ ಕೆಲಸ ನಡೆಯುವ ಸ್ಥಳಗಳ, ಯಾ ಬಾಡಿಗೇ ಕುದುರೇಲಾಯಗಳು ಯಾ ಯಿತರ ಲಾಯಗಳು, ದನದ ಕೊಟ್ಟಿಗೆಗಳು, ಹಂದೀ ಗೂಡುಗಳು, ಇಂತಾವುಗಳ, ಸ್ವಂತಗಾರರು, ಯಾ ಹಿಡುವಳೀದಾರರು, ಯಿವುಗಳನ್ನು ಪ್ರತಿಸಲವೂ ತೆಗಸಿ ಹಾಕಬೇಕಾದ ಕಾಲದಲ್ಲಿ ಅಂತಾ ಯಾವ ಸ್ಥಳದೊಳಗೆ ಯಾ ಅದರ ಸುತ್ತಮುತ್ತಲೂ, ಯಿರುವ ವಿಶಿಷ್ಟ ಕಶ್ಮಲವನ್ನೂ, ರೋತೆಯನ್ನೂ, ವ ಕಸವನ್ನೂ, ಅಥಮಪಕ್ಷ 24 ಘಂಟೆಗೊಂದಾವರ್ತಿ ತೆಗದು ಹಾಕದೆ ಯಾ ತೆಗೆಯಿಸಿ ಹಾಕದೇ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿಗಳು.

30. ಮನೆ ಸ್ವಂತಗಾರರು ಬಿದ್ದುಹೋದ ಗೋಡೆಗಳನ್ನು, ಯಾ ತಲೆಬಾಗಿಲ ನಿಲುವುಗಳನ್ನು ದುರಸ್ತು ಮಾಡಲಿಕ್ಕೆ, ಯಾ ತಮ್ಮ ಆವರಣಗಳ ಯಾ ಅಂಗಳಗಳ ಗೋಡೆಗಳಿಗೆ ಬಂಣ ಬಳಿಯುವದಕ್ಕೆ ಅಥವಾ ಯಿಟ್ಟಿಗೆಗಳಿಂದ ಯಾ ಹೆಂಚುಗಳಿಂದ ಅಂಚು ಕಟ್ಟಲಿಕ್ಕೆ ನೋಟಿಸ್ ಜಾರೀ ಮಾಡಲ್ಪಟ್ಟ ತರುವಾಯ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿ.

31. ಪಬ್ಲಿಕ್ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ ಸೂದೇ ಒಡೆಯುವಿಕೆ—ಜುರ್ಮಾನೆ 5 ರೂಪಾಯಿ.

32. ಸಂಗಡ ಯಿರತಕ್ಕಬಗ್ಗೆ ಸಾಕಾದಷ್ಟು ಮಂದಿ ಯಿಲ್ಲದೆ ರಸ್ತೆಯಲ್ಲಿ ಹೊಡಕೊಂಡು ಬರುವ ದನಗಳ ಯಾ ಹಂದಿಗಳ ಜಿಮ್ಮೆಯುಳ್ಳವರಾಗಿರುವಿಕೆ. ಅವುಗಳನ್ನು ಪಬ್ಲಿಕ್ ರಸ್ತೆಯಲ್ಲಿ ಮೇಯಲಿಕ್ಕೆ ಬಿಡುವಿಕೆ, ಯಾ ಹಂದಿಗಳನ್ನು ಸ್ವೇಚ್ಛೆಯಾಗಿ ತಿರುಗುವದಕ್ಕೆ ಬಿಡುವಿಕೆ.

II. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಬೆಳಿಗ್ಯೆ 4 ಘಂಟೆ ಲಾಗಾಯತ್ ರಾತ್ರಿ 8 ಘಂಟೆ ವರಿಗೆ ಕಾಯುವವನಿಲ್ಲದೆ ಯಾವ ಮನುಷ್ಯನೂ ದನಗಳನ್ನು ಮೇಯಿಸಕೂಡದು, ಮತ್ತು ಕಾಯುವವನಿಲ್ಲದೆ ಮೇಯುತಿದ್ದು ಶಿಕ್ಕುವ ದನಗಳು ತೊಂಡುವಾಡೆಗೆ ಒಯ್ಯಲ್ಪಡಲಿಕ್ಕೂ, ಅವುಗಳ ಸ್ವಂತಗಾರರು ಇದರಡಿ 3ನೇ ಕಲಂನಲ್ಲಿ ವಿವರಿಸಲ್ಪಟ್ಟ ಜುರ್ಮಾನೆಗಳನ್ನು ತೆರಲಿಕ್ಕೂ ಗುರಿಯಾಗತಕ್ಕದ್ದು.

III. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ರಾತ್ರಿ 8 ಘಂಟೆಗೂ, ಬೆಳಿಗ್ಯೆ 4 ಘಂಟೆಗೂ, ಮಧ್ಯೆ ದನಗಳನ್ನು ಮೇಯುವದಕ್ಕೆ ಯಾವ ಮನುಷ್ಯನೂ ಬಿಡಕೂಡದು. ಸದರೀ ಹೊತ್ತಿನ ಮಧ್ಯೆ ಮೇಯುತಿದ್ದು ಹಿಡಿಯಲ್ಪಟ್ಟ ದನಗಳು ತೊಂಡುವಾಡೆಗೆ ಹೊಡಿಯಲ್ಪಟ್ಟು, ಈ ಕೆಳಗೆ ನಮೂದಿಸುವ ಪ್ರಕಾರ ಜುರ್ಮಾನೆ ತೆತ್ತಹೊರ್ತು ಖುಲಾಸೇ ಮಾಡಲ್ಪಡಲಾರದು.

ಯೆಮ್ಮೆ ಕೋಣಗಳು	..	1—0—0	ಕರು ವ ಕತ್ತೆ	..	0—4—0
ಯೆತ್ತುಗಳು ಯಾ ಆಕಳು	..	0—8—0	ಕುದುರೆ ಯಾ ಟಾಕಣ	..	0—8—0
ಕುರಿ ಮ್ಯಾಕೆ	..	0—2—0			

33. ಒಂದು ಪಬ್ಲಿಕ್ ರಸ್ತೆಯಲ್ಲಿ ಯಾ ಒಂದು ಪಬ್ಲಿಕ್ ರಸ್ತೆಗೆ ಸಮೀಪವಾದ ಆಸ್‌ಪಾಸ್ ಪ್ರದೇಶದಲ್ಲಿ ದೇಹಭಾಧೆಗೆ ಹೋಗುವ ಅಥವಾ ಜನಗಳಿಗೆ ಹೇಸಿಕೆಯಾಗಿರುವ ಸ್ಥಳದಲ್ಲಿ ಯಾವ ಕಶ್ಮಲವನ್ನಾದರೂ, ಜಮಾಯಿಸಿ ಯಿಡುವ ಯಾವ ಮನುಷ್ಯನಾಗಲಿ, ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ಅವ್ವಲ್‌ದಫಾ ಅರ್ಧ ರೂಪಾಯಿ, ಎರಡನೇ ದಫಾ ಒಂದು ರೂಪಾಯಿ ಆತರುವಾಯ ನಡಿಸಲ್ಪಡುವ ಪ್ರತಿದಫಾಕ್ಕೂ, ಯೆರಡು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು.

34. ಅಲಿಯುವ ಯಾವ ತಿರಪಗಾರನೂ, (ಸ್ಟೇಷನ್) (ಷಹರ)ನ ಬೀದಿಗಳಲ್ಲಿ, ರಸ್ತೆಗಳಲ್ಲಿ ಯಾ ಸಂದಿಗಳಲ್ಲಿ ತಿರುಪಕ್ಕಾಗಿ ಬಾಧಿಸಕೂಡದು, ಯಾ ಜನಗಳನ್ನು ತಿರಪಬೇಡಕೂಡದು, ಮತ್ತು ರಸ್ತೆಗಳಲ್ಲಿ, ಬೀದಿಗಳಲ್ಲಿ ಯಾ ಗಲ್ಲಿಗಳಲ್ಲಿ ಯಾ ಬಂಡಿಗಳೊಳಗೆ ಯಾ ಮನೆಗಳೊಳಗೆ ತಿರಪಕ್ಕೋಸ್ಕರ ಬಾಧಿಸುವದಾಗಿ ಯಾ ಜನಗಳನ್ನು ತಿರುಪಬೇಡುವದಾಗಿ ತಮಗೆ ಶಿಕ್ಕಿದ ಯಾ ತಮ್ಮಲ್ಲಿ ಫಿರ್ಯಾದ್ ಮಾಡಲ್ಪಟ್ಟ, ಅಲಿಯುವ ಯಾವ ತಿರಪಗಾರರನ್ನಾಗಲಿ ಮ್ಯುನಿಸಿಪಲ್ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡೆದದಕ್ಕೋಸ್ಕರ ಖೈದ್‌ನಲ್ಲಿ ತೆಗದುಕೊಳ್ಳಲಿಕ್ಕೆ ಪೊಲೀಸ್‌ನವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಈ ಉಪನಿಬಂಧನೆಯು, ಆ ಯಾ ಜಾತಿಯ ನೇಟಿವ್‌ಗಳಿಂದ ಆದರಿಸಲ್ಪಟ್ಟು, ಪ್ರತಿದಿನವೂ ಆಹಾರಕ್ಕಾಗಿ ತಮ್ಮ ಮನೆಗಳಿಗೆ ಬರುವಂತೆ ಪ್ರೋತ್ಸಾಹ ಪಡಿಸಲ್ಪಟ್ಟ ಯಾವ ವಿಧದೊಳಗೂ ತೊಂದರೆ ಕೊಡದಂತಾ ಮತಸಂಬಂಧಿಗಳಾದ ಯಾಚಕರ ವಿಷಯದಲ್ಲಿ ಬಾಧಕ ವಾಗುವದಿಲ್ಲವು.

ಮೇಲೆ ಕಂಡ ಉಪನಿಬಂಧನೆಗೆ ಬರಿಖಿಲಾಫ್ ನಡೆಯುವದರಿಂದ ಹಾಗೆ ಅಪರಾಧಮಾಡುವ ಮನುಷ್ಯನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ನಾಲ್ಕು ದಿನಗಳ ಸಾಧಾರಣ ಖೈದಿಗೆ ಗುರಿಯಾಗತಕ್ಕದ್ದು.

II. ಅಸಹ್ಯವಾದ, ಅಥವಾ ಅಂಟುವಂತಾ ರೋಗ ತಗಲಿಯಿರುವ ಜನಗಳು, ಮ್ಯುನಿಸಿಪಾಲಿಟಿಯ (ಷಹರಿನ) ಮಾರ್ಕೆಟ್‌ಗಳಲ್ಲಾಗಲಿ ಅಂಗಡಿಗಳಲ್ಲಾಗಲಿ ಯಾವ ಆಹಾರಪದಾರ್ಥವನ್ನಾಗಲಿ ಮಾರಕೂಡದೆಂತ ಅಥವಾ ಮಾರಾಟದ ಬಗ್ಯೆ ಹೊರಗೆ ಯಿಡಕೂಡದೆಂತ ನಿಷೇಧಿಸಲ್ಪಟ್ಟಿರುತ್ತಾರೆ. ಅಂತಾತಕಸೀರ್‌ವಂತರು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟು ಮೊದಲು ದಫಾಕ್ಕೂ, ತರುವಾಯ ಪ್ರತಿದಫಾಕ್ಕೂ, ಒಂದು ರೂಪಾಯಿಗೆ ಜಾಸ್ತೀ ಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

35. ಮ್ಯುನಿಸಿಪಲ್ ಸರಹದ್ದುಗಳಲ್ಲಿ ಇಡಲ್ಪಟ್ಟ ಕುದುರೆಗಳು ಯಾ ಟಾಕಣಿಗಳು, ಯೆತ್ತುಗಳು, ಬಂಡಿಗಳು, ಮತ್ತು ನಾಯಿಗಳು, ಇವುಗಳ ಸ್ವಂತಗಾರರು ಈ ಕೆಳಗೆ ಕಂಡ ಪ್ರಕಾರ ತೆರಿಗೆಗಳನ್ನು ಕೊಡತಕ್ಕದ್ದು.

ಯೆರಡು ಚಕ್ರಗಳ ಬಂಡಿಗಳು	ಚಷ್ ಮಾಹೆ 1ಕ್ಕೆ	ರೂ	2—0—0
ನಾಲ್ಕು ಚಕ್ರಗಳ ಬಂಡಿಗಳು	,,	,,	3—0—0
ಈ ಕೀಮೆ ತಟ್ಟುವಿಗೆ	,,	,,	1—0—0
ಪ್ರತಿ ಟಾಕಣಿಗೆ	,,	,,	2—0—0
ಜೊತೆ ಬಂಡೀ ಯಾ ಗಾಡಿ ಯೆತ್ತುಗಳಿಗೆ	,,	,,	2—0—0
ನಾಯಿಗೆ	,,	,,	1—0—0
ಪ್ರತಿ ಕುದುರೆಗೂ	,,	,,	4—8—0

ತೆರಿಗೆ ಕೊಡೋಣಾದ ಮತ್ತು ಲೈಸೆನ್ಸ್ ತೆಗದುಕ್ಕೊಳ್ಳೋಣಾದ ನಾಯಿಗಳಿಗೆ ಕತ್ತಿಗೆ ಪಟ್ಟೀ ಹಾಕತಕ್ಕದ್ದು.

ಇಲ್ಲದಿದ್ದರೆ ತೊಂಡು ನಾಯಿಯೆಂತ ಯಾ ಬೇವಾರಸ್ ನಾಯಿಯೆಂತ ಕೊಂದು ಹಾಕಲ್ಪಡುವದಕ್ಕೆ ಗುರಿಯಾಗತಕ್ಕದ್ದು.

36. ಧೂಳು, ಕಸ, ಬೂದಿ, ವ ಕಚರಾ ಇಂತಾವುಗಳನ್ನು, ಆಚೆಗೆ ಸಾಗಿಸಿಕೊಂಡುಹೋಗುವ ಪರಿಯಂತ ಹಂಗಾಮೀ ಯಾಗಿ ಹಾಕಿ ಇಡಬಹುದಾದ, ಕದಲಿಸತಕ್ಕಂತಾ ಅಥವಾ ನೆಲೆಯಾಗಿರುವಂತಾ ಯಷ್ಟು ಕಚರೆ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ, ಪ್ರೆಸೀಡೆಂಟರು ಒದಗಿಸಿ, ಯುಕ್ತಗಳಾದ ಮತ್ತು ಅನುಕೂಲಗಳಾದ ಸ್ಥಳಗಳಲ್ಲಿ ಇಡಿಸಬಹುದು, ಮತ್ತು ಬೀದಿಗಳೊಳಗಿರುವ ಮನೆಗಳ ವಾಸಸ್ಥರು ಮೇಲೆ ಕಂಡ ದರೋಬಸ್ತು ಕಚರೇ ವಗೈರೇಯನ್ನು ಪ್ರತಿದಿನವಾಗಲಿ, ಅನ್ಯಥಾ ಯಾವದಾದರೊಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀದ್‌ಮಾಡಬಹುದು.

ಅಂತಾ ಆಧಾರಗಳು ಕಲ್ಪಿಸಲ್ಪಟ್ಟ ಬಳಿಕ ಮತ್ತು ಮೇಲೆ ಕಂಡಮೇರೆ ತಾಕೀದ್ ಮಾಡಲ್ಪಟ್ಟ ಬಳಿಕ ಪ್ರೆಸೀಡೆಂಟರಿಂದ ಗೊತ್ತುಮಾಡಲ್ಪಡುವ ಅಂತಾ ಆಧಾರಗಳಲ್ಲಿ ಯಾ ಸ್ಥಳಗಳಲ್ಲಿ ಮತ್ತು ಅಂತಾ ರೀತಿಯಾಗಿ, ಮತ್ತು ಅಂತಾ ಹೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪದಾರ್ಥಗಳನ್ನಾಗಲಿ ಯಾವ ಬೀದಿಯೊಳಗಾಗಲಿ, ಯಾವದಾದರೂ ಮನೆಯ ಸ್ಥಿರವಾದ ಜಗಲಿ, ಯಾ ಹಜಾರ ಇಂತಾದ್ದರಮೇಲೆಯಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲಾಗಲಿ, ಜಮಾಯಿಸಿ ಇಡುವ ಯಾ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ, 2 ಆಣೆ ಲಾಗಾಯತು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರಿಂದ ಗೊತ್ತುಮಾಡಲ್ಪಡತಕ್ಕ ಸ್ಥಳಗಳೊಳಗೂ, ಆರೀತಿಯಾಗಿಯೂ, ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವನು ಕಶ್ಮಲವನ್ನು ಹಾಕಿ ಇಡುತ್ತಾನೋ ಯಾ ಇಡಗೊಡಿಸುತ್ತಾನೋ ಅಥವಾ ಯಾವದಾದರೂ ಬೀದಿಯಲ್ಲಿಯಾಗಲಿ, ಮನೆಯ ತಳವರಸೆ, ಜಗತಿ, ಯಾ ವಸಾರೆಯಲ್ಲಿ ಅಥವಾ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವದಾದರೂ ಜಮೀನಿನಲ್ಲಾಗಲಿ, ನದೀತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವದಾದರೂ ಧೂಳು, ಕಸ, ಸಗಣಿ, ಬೂದಿ; ತೊಟ್ಟಿ, ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೆಯದಾದರೂ ಕಶ್ಮಲ, ಜಂತು ಸಂಬಂಧವಾದ ಯಾವದಾದರೂ ಪದಾರ್ಥ, ಅಥವಾ ಕನ್ನಡಿ ಯಾ ಮಡಿಕೆ ಚೂರು, ಇಟಿಗೇ ಮುರುಕು, ಗಾರೆ ಯಾ ಇತರ ಕಚರಾ, ಇಂತಾದ್ದನ್ನಾಗಲಿ, ಜಮಾಯಿಸಿ ಇಡುವಂತೆ ತನ್ನ ನೌಕರರಿಗೆ ಅಪ್ಪಣೇ ಕೊಡುತ್ತಾನೋ. ಅಂತಾ ಮನುಷ್ಯನು 2 ಆಣೆಗಳ ಲಾಗಾಯು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

37. ಯಾವನು, (ಬಚ್ಚಲುನೀರು ಬೀದಿಯಲ್ಲಿ ಹರಿಯಗೊಡಿಸಿ ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿರುವ ಯಾವದಾದರೂ ಬಚ್ಚಲು, ಯಾ ಚರಂಡಿ, ಯಾ ಪಾಯಖಾನೆ ಇಂತಾದ್ದರ ನೀರನ್ನಾಗಲಿ, ದುರ್ವಾಸನೆಯುಳ್ಳ ಇನ್ಯಾವ ದ್ರವ ಪದಾರ್ಥವನ್ನಾಗಲಿ, ಯಾವ ಬೀದಿಯಲ್ಲಾದರೂ, ಹರಿಯುವಂತೆ ಯಾ ಚಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡುತ್ತಾನೋ ಯಾ ಮಾಡುವಂತೆ ಅಪ್ಪಣೆ ಕೊಡುತ್ತಾನೋ, ಅಥವಾ, ಯಾವ ಪಾಯಖಾನೆ ಇಂದಲಾಗಲಿ ಬಚ್ಚಲು ಗುಣಿಯಿಂದಲಾಗಲಿ ಅಸಹ್ಯವಾದ ಯಾವ ಪದಾರ್ಥವಾದರೂ ಯಾವ ಬೀದಿಯೊಳಗಾಗಲಿ ಇರುವ ಮೇಲ್ಭಾಗದ ಚರಂಡಿಯೊಳಗೆ ಹರಿಯುವಂತೆ ಯಾ ಚಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೆ ಕೊಡುತ್ತಾನೋ ಅಂತಾವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

38. ಪ್ರೆಸಿಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗಲಿ, ಅಸಹ್ಯವಾದ ಅಂತಾ ಯಿತರ ವಸ್ತುವನ್ನಾಗಲಿ ತೆಗೆಸಿಹಾಕುವದು ನ್ಯಾಯವಾಗಿರತಕ್ಕದ್ದು, ಪ್ರೆಸೀಡೆಂಟರು ಅಂತಾ ಕಾಲವನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ್ ಕೊಟ್ಟಾಗ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿ ಯಾದರೂ ತೆಗೆದುಕೊಂಡು ಹೋಗುತ್ತಾನೋ ಯಾ ತೆಗೆದುಕೊಂಡು ಹೋಗುವಂತೆ ಮಾಡುತ್ತಾನೋ ಮತ್ತು ಯಾವನು ಪ್ರೆಸೀಡೆಂಟರಿಂದ ನಿಷ್ಕರ್ಷೆ ಯಾಗಿರಲಿ ಆಗದೆ ಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರದಂತೆ ತಕ್ಕ ಮುಚ್ಚಳವಿಲ್ಲದೆ ಯಾವದಾದರೂ ಬಂಡಿ ಯಾನಸಾಧನ ಯಾ ಯಿತರ ಆಧಾರ ಯಾ ಪಾತ್ರ ಯಿಂತಾದ್ದನ್ನು ಅಂತಾ ಯಾವ ಕಾರ್ಯಕ್ಕೋಸ್ಕರವಾಗಿ ಉಪಯೋಗಿಸುತ್ತಾನೋ ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗೆಸಿಕೊಂಡು ಹೋಗುವಲ್ಲಿ ಅದನ್ನು ಕೆಳಗೆ ಚಲ್ಲುತ್ತಾನೋ ಯಾ ಸುರಿಯುತ್ತಾನೋ, ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲವಾದರೂ ಚೆಲ್ಲಿದ ಅಥವಾ ಬಿದ್ದಕಡೆಯಲ್ಲೆಲ್ಲ ಅದನ್ನು ಚನ್ನಾಗಿ ಗುಡಿಸಿ ಸಾಫಮಾಡುವದಿಲ್ಲವೋ, ಯವನು ಮೇಲೆ ಕಂಡ ಯಾವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ ಯಾನ ಸಾಧನ ಆಧಾರ ಯಾ ಪಾತ್ರ ಇಂತಾದ್ದನ್ನು ಪ್ರಸೀಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟಿಸ್‌ಮೂಲಕ ಸದರೀ ಬಗ್ಯೆ ಮೊಕರರ್ ಮಾಡುವ ಬೀದಿ, ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡೆಯುತ್ತಾನೋ, ಯಾ ತೆಗೆದುಕೊಂಡು ಹೋಗುತ್ತಾನೋ; ಅಥವಾ ಹೊಡೆಯುವಂತೆ ಯಾ ತೆಗೆದು ಕೊಂಡು ಹೋಗುವಂತೆ ಮಾಡುತ್ತಾನೋ, ಅಂಥಾ ಮನುಷ್ಯನು 5 ರೂಪಾಯಿಗ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

39. ಈ ಉಪನಿಬಂಧನೆಗಳಿಂದ ಉಂಟು ಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಕಶ್ಮಲವನ್ನು ಹಾಕಿ ಇಡುವ ಬಗ್ಯೆ, ಮಲ, ಸಗಣಿ, ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ, ಮತ್ತು ಈ ಉಪನಿಬಂಧನೆಗಳ ಬಾಬತು ಮೇಲೆ ಕಂಡ ಕಾರ್ಯಗಳಿಗಾಗಲಿ, ಆನೈಕಿ ಯಾವ ಕಾರ್ಯಗಳಿಗಾಗಲಿ ಬೇಕಾದ ದರೋಬಸ್ತು ಜಾನವಾರಗಳನ್ನೂ, ಬಂಡಿಗಳನ್ನೂ, ಸಾಧನಗಳನ್ನೂ, ಇತರ ವಸ್ತುಗಳನ್ನೂ, ಇಡುವ ಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಮೆಂಬರಗಳು, ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು. ಯಾ ಬಿಡಗಿಸತಕ್ಕದ್ದು, ಮತ್ತು ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಮೆಂಬರಗಳು, ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು, ಯಾ ಬಾಡಿಗ್ಯೆ ತೆಗದು ಕೊಳ್ಳಬಹುದು, ಅಥವಾ ತಮ್ಮಿಂದ ಕೊಂಡುಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದು ಕೊಳ್ಳತಕ್ಕ ಯಾವ ಜಮೀನಲ್ಲಾಗಲಿ ಯಾವ ಹೊಸ ಕಟ್ಟಡವಾದರೂ ಕಟ್ಟಸಲ್ಪಡುವಂತೆ ಮಾಡಬಹುದು.

40. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ, ಅದರ ಸಮೀಪದಲ್ಲಾಗಲಿ, ಪ್ರತಿ ಮನೆಯವಾಸಸ್ಥನೂ, ತನ್ನ ವತಾರದಿಂದ, ಮಲವಗೈರೇ ತೆಗದು ಕ್ಕೊಂಡು ಹೋಗುವ ಬಗ್ಯೆ ಮ್ಯುನಿಸಿಪೆಲ್ ಮೆಂಬರಗಳಿಂದ ಬದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ, ಸಗಣಿಯನ್ನೂ, ಇತರ ಕಚರೇಯನ್ನೂ ಮ್ಯುನಿಸಿಪೆಲ್ ಮೆಂಬರಗಳು ನಿಯಮಿಸುವ ಕಾಲದಲ್ಲಿಯೂ, ಅಂತಾ ರೀತಿಯಾಗಿಯೂ ಸಾಗಿಸುವದು ಆವನ ಕಾರ್ಯವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರ ಕಚರೆ ಇಂತಾದ್ದನ್ನು ಸಾಗಿಸಿಕ್ಕೊಂಡು ಹೋಗಬೇಕೆಂದು ಖಾಯಿಷ ಮಾಡಿದಲ್ಲಿ ಈ ಬೈಲಾನಿಬಂಧನೆಗಳ 38ನೇ ಸೆಕ್ಷನ ನಿಬಂಧನೆಗಳಿಗೆ ಅನುಗುಣವಾಗಿ ಆ ಮೇರೆ ಮಾಡುವದು ಆವನ ಎಖ್ತಿಯಾರೀ ಮೇಲೆ ಇರತಕ್ಕದ್ದು.

41. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದಿನೊಳಗೆ ಯಿರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರದಲ್ಲಿ ಅಲ್ಲದೆ ಅನ್ಯಥಾ 24 ಗಂಟೆಗಳಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರಾ, ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಯಿಂತಾದ್ದನ್ನು ಅಂತಾ ಯಾವದಾದರೂ ಮನೆಗಳ ಛಾವಣೀಯಲ್ಲಿ ಯಾ ಛಾವಣಿಯ ಮೇಲೆ ಅಥವಾ ಅಂತಾ ಮನೆಗೆ ಸೇರಿದ ಮತ್ತು ಅಂತಾ ಮನೆಯ ವಾಸಸ್ಥನಿಂದ ವಾಸ ಮಾಡಲ್ಪಡುವ ಯಾವ ಔಟಹೌಸ್ ವಗೈರೆಯ ಛಾವಣೀ ಯೊಳಗೆ ಯಾ ಅದರ ಮೇಲ್ಗಡೆ, ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ ಯಿಡುತ್ತಾನೋ ಯಾ ಯಿಡಗೊಡಿಸುತ್ತಾನೋ ಅಂತಾವನು 2 ಆಣೆಗಳು ಲಾ॥ 5 ರೂಪಾಯಿಗಳ ವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

42. ಝಾಡ ಮಾಲೀಯಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ಏಜಂಟರ ಮಾರಿಫತ್ ಮಾಡಿಸ್ತ್ತೇವೆಂತ, ಯಾವ ಮನೆಯ ವಾಸಸ್ಥನಿಗಾಗಲಿ, ವಾಸಸ್ಥರಿಗಾಗಲಿ, ಯಿದರ ಹಿಂದಿನಕಡೇ ಸೆಕ್ಷನಗಳನ್ನು ಅನುಸರಿಸಿ ನೋಟಿಸ್ ಕೊಡೋಣವೂ, ಮತ್ತು ಈ ಬಗ್ಯೆ ಸಾಕಾದಷ್ಟು ಮಂದಿ ಝಾಡಮಾಲೀಗಳನ್ನು ಯಿಡುವಣವೂ, ಮೆಂಬರಗಳ ಕಾರ್ಯವಾಗಿರತಕ್ಕದ್ದಲ್ಲದೆ, ಯಾವ ಮನೆಯನ್ನು ಗುಡಿಸುವಕೆಲಸವು ಹಾಗೆ ಅವರುಗಳಿಂದ ವಹಿಸಲ್ಪಡುತ್ತೋ ಅಂತಾ ಪ್ರತಿ ಮನೆಗೂ, ಆ ಮನೆಯ ವಾಸಸ್ಥರು ಸಾಧಾರಣವಾದ ಬಬ್ಬ ಝಾಡ ಮಾಲೀಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದೋ ಅಷ್ಟಕ್ಕೆ ಜಾಸ್ತೀಯಿಲ್ಲದಂತೆ ಬಂದು ತೀರ್ವೆ ಮೊಕರರ್ ಮಾಡುವದು ಆವರುಗಳಿಗೆ ನ್ಯಾಯ್ಯವಾಗಿರತಕ್ಕದ್ದು.

43. ಮೆಂಬರಗಳ ಹುಕ್ಕುಂ ಅನುಸರಿಸಿ ಬೀದಿಗಳಲ್ಲಿಯೂ ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ. ಜಲದಾರೆಗಳಲ್ಲಿಯೂ, ಬಚ್ಚಲು ತೊಟ್ಟಿಗಳಲ್ಲಿಯೂ, ಜಮಾಯಿಸಲ್ಪಡುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲದಾರೆ, ರೊಚ್ಚು, ಮಣ್ಣು ಸಗಣಿ, ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕವು; ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೇಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು-ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳೀ ಯಾಗುವ ಹಣವು ಈ ಬೈಲಾ ನಿಬಂಧನೆಗಳ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

44. ಮೆಂಬರಗಳು ತಮ್ಮಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತ ಕೆಲಸಗಳನ್ನೂ, ಯಂತ್ರಗಳನ್ನೂ ಬದಗಿಸಬಹುದು.

45. ಮೆಂಬರುಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳು, ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಆವಶ್ಯಕವೆಂದು ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ತೋರುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಬದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮದಲ್ಲಿ ಇಡಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಬರಸಿ ಪಾಕ್ ಮಾಡುವದು, ಸಿದ್ಧಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟುಕ್ಕೊಳ್ಳತಕ್ಕದ್ದು. ಮತ್ತು ಮೆಂಬ

ರಗಳು ಆಗಿಂದಾಗ್ಗೆ ತಮಗೆ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ಜಾಸ್ತೀ ಮಾಡಬಹುದು, ಅಥವಾ ಬೇರೇ ವಿಧವಾಗಿ ಬದಲಾವಣೀ ಮಾಡಬಹುದು.

46. ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದತರುವಾಯ ಯಾವ ಪಬ್ಲಿಕ್ ಬೀದಿಯಲ್ಲಿಯಾಗಲಿ ರಸ್ತೆಯಲ್ಲಿಯಾಗಲಿ ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾಯಿರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ ಇಂತಾದ್ದರಲ್ಲಿಯಾಗಲಿ, ಇಂತಾದ್ದರಮೇಲೆಯಾಗಲಿ ಯಾವನು ಯಾವದಾದರೂ ಗೋಡೆ ಹಾಕುತ್ತಾನೋ ಅಥವಾ ಯಾವ ಆವರಣ ಮುಂತಾದ್ದನ್ನು ಯಾ ಇತರ ನಿರೋಧವನ್ನು, ಯಾ ಒತ್ತುವರಿಯನ್ನು ಕಟ್ಟುತ್ತಾನೋ ಯಾ ಇಡುತ್ತಾನೋ ಅಂತಾವನು ಯೆರಡಾಣೆಲಾಗಾಯಿತು ಐದುರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಮೆಂಬರ್‌ಗಳು ಅಂತಾ ಯಾವ ನಿರೋಧವನ್ನಾಗಲಿ, ಒತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಹಾಗೆ ತೊಲಗಿಸುವದರ ಲಾಗವಡು ಸದರೀ ಅಟಕಾವ್ ವಗ್ಯೆರೆ ಉಂಟುಮಾಡಿದ ಮನುಷ್ಯನು ಕೊಡತಕ್ಕದ್ದಾಗಿ, ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು. ಪೊಲೀಸ್‌ಸೂಪರ್‌ಇಂಟೆಂಡೆಂಟರ ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಿ ಆಗಲಿ ಉತ್ಸವ ಮದುವೆ ಮುಂತಾದ ಸಮಯಗಳಲ್ಲಿ ಹಂಗಾಮಿಯಾಗಿ ಯಾವದಾದರೂ ಕಟ್ಟುವದಕ್ಕೆ ಅಪ್ಪಣೆ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿರುವ ಯಾವ ಅಂಶವೂ ಮೆಂಬರ್‌ಗಳನ್ನು ಆತಂಕಪಡಿಸತಕ್ಕದ್ದಲ್ಲವು.

47. ಯಾವನು ಯಾವ ಪಬ್ಲಿಕ್ ಬೀದಿಯ, ರಸ್ತೆಯ, ತಳವರಿಸೇ ಕಲ್ಲುಗಳನ್ನಾಗಲಿ, ಚಾಪು ಕಲ್ಲುಗಳನ್ನಾಗಲಿ ಇತರ ಸಾಮಾನುಗಳನ್ನಾಗಲಿ, ಅಥವಾ ಆವರಣಗಳು, ಕಂಭಗಳು, ಇಂತಾವುಗಳನ್ನಾಗಲಿ, ಪಬ್ಲಿಕ್ ದೀಪಸ್ತಂಭಗಳನ್ನಾಗಲಿ, ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತೀ ಯಿಲ್ಲದೆ ಅಥವಾ ಯಿತರ ನ್ಯಾಯವಾದ ಅಧಿಕಾರವಿಲ್ಲದೆ ಕೆಡಿಸುತ್ತಾನೋ, ಸ್ಥಳ ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ, ಅವುಗಳಲ್ಲಿ ಯೇನಾದರೂ ಬದಲಾವಣೀ ಮಾಡುತ್ತಾನೋ ಅಂತಾವನು ಯೆರಡಾಣೇಲಾಗಾಯಿತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

48. ಯಾವ ಬೀದಿಯು ಯಾವ ಹೆಸರಿನಲ್ಲಿ ತಿಳಿಯಲ್ಪಡತಕ್ಕದ್ದೋ ಆ ಹೆಸರನ್ನು ಪ್ರೆಸೀಡೆಂಟರು ಆಗಿಂದಾಗ್ಗೆ ಪ್ರತಿ ಬೀದಿಯ ಯೆರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂಥಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾದರೂ ಕಟ್ಟಡ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಇಡಿಸಬಹುದು, ಯಾ ಕಟ್ಟಿಸಬಹುದು; ಮತ್ತು ಯಾವನು ಅಂತಾ ಹೆಸರನ್ನು ನಾಶಪಡಿಸುತ್ತಾನೋ ಕಿತ್ತುಹಾಕುತ್ತಾನೋ ಕೆಡಿಸುತ್ತಾನೋ ಅಥವಾ ಪ್ರೆಸೀಡೆಂಟರ ಅಪ್ಪಣೀಮೇಲೆ ಇಡಲ್ಪಟ್ಟ ಹೆಸರು ಶಿವಾಯಿ ಬೇರೆ ಹೆಸರು ಯಿಡುತ್ತಾನೋ ಅಂತಾವನು ಯೆರಡಾಣೇ ಲಾಗಾಯತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

49. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟಡವಾದರೂ, ಗೋಡೆಯಾದರೂ, ಅದಕ್ಕೆ ಸೇರಿಸಲ್ಪಟ್ಟ ಮತ್ತೇನಾದರೂ, ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವಹಾಗೆ ಯಿರುವದಾಗಿ, ಅಥವಾ ಅಂತಾ ಕಟ್ಟಡದ ವಾಸಸ್ಥರಿಗೆ ಯಾ ಆಸ್‌ಪಾಸ್ ಕಟ್ಟಡಗಳಿಗೆ ಯಾ ಅವುಗಳ ವಾಸಸ್ಥರಿಗೆ, ಯಾ ಅನುಭವದಾರ್ರಿಗೆ ಯಾ ಬೀದೀಯಲ್ಲಿ ಹೋಗತಕ್ಕವರಿಗೆ ಯಾವರೀತಿಯಿಂದಲಾದರೂ ಅಪಾಯಕರವಾಗುವದಾಗಿ ಪ್ರೆಸೀಡೆಂಟರಿಗೆ ತೋರಬಂದರೆ, ಸದರೀ ಪ್ರಸೀಡೆಂಟರು ತಮಗೆ ಜರೂರ್ ತೋರಿದರೆ, ಬೀದಿಯಲ್ಲಿ ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಹಲಿಗೆಯನ್ನೂ ಯಾ ಆವರಣವನ್ನೂ, ಕೂಡ್ಲೇ ಹಾಕಿಸತಕ್ಕದ್ದು. ಮತ್ತು ಮಾಲೀಕನು ಫಲಾನೇ ಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವನಾಗಿ ಯಿದ್ದಲ್ಲಿ, ಅವನಿಗೆ ಬರವಣಿಗೇ ಮೂಲಕ ನೋಟೀಸ್ ಕೊಡಿಸತಕ್ಕದ್ದಲ್ಲದೇ ಅಂತಾ ನೋಟಿಸನ್ನು ಅಂತಾ ಕಟ್ಟಡ ವಗ್ಯೆರೆಯ ಬಾಗಲಿಗಾಗಲಿ, ಯಿತರ ಪ್ರಸಿದ್ಧವಾದ ಭಾಗದೊಳಗಾಗಲಿ, ಚಿಕಟಾಯಿಸತಕ್ಕದ್ದು, ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡತಕ್ಕದರಲ್ಲಿ ಸಂದರ್ಭಾನುಸಾರ, ಅಂತಾ ಕಟ್ಟಡವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೂಡ್ಲೇ ತೆಗದು ಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತು ಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿಗೆ ತಾಕೀದ್ ಮಾಡತಕ್ಕದ್ದು, ಮತ್ತು ಅಂತಾ ಮಾಲೀಕ ಯಾ ವಾಸಸ್ತನು, ಅಂತಾ ನೋಟಿಸ್ ಕೊಟ್ಟ ಮೂರುದಿವಸಗಳೊಳಗಾಗಿ ಸದರೀ ಕಟ್ಟಡವನ್ನು ರಿಪೇರ್ ಮಾಡಲಿಕ್ಕೆ ಯಾ ಕಿತ್ತು ಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಷುರು ಮಾಡಿ ಯುಕ್ತವಾದ ಮುತವಜ್ಜೀಯಿಂದ ಪೂರೈಸದೇ ಹೋದಲ್ಲಿ ಪ್ರೆಸೀಡೆಂಟರು, ಸದರೀ ಕಟ್ಟಡ, ಗೋಡೆ, ಯಾ ಯಿತರ ವಸ್ತು ಯಿಂತಾದ್ದರ ಪೈಕೀ ವಿಶಿಷ್ಟವನ್ನಾಗಲಿ, ತಾವು ಜರೂರೆಂದು ಭಾವಿಸುವಷ್ಟು ಭಾಗವನ್ನಾಗಲಿ, ಕಿತ್ತು ಹಾಕಿಸತಕ್ಕದ್ದು, ಯಾ ರಿಪೇರ್ ಮಾಡಿಸತಕ್ಕದ್ದು, ಯಾ ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀ ಕಟ್ಟಡದ ಸಾಮಾನುಗಳನ್ನು ಸದರೀ ಬಗ್ಗೆ ತಮಗೆ ಯುಕ್ತ ತೋರುವ ಪ್ರಕಾರ ಉಪಯೋಗಿಸಬಹುದು, ಮತ್ತು ಆಬಗ್ಗೆ ಹಿಡಿದ ದರೋಬಸ್ತು ಲಾಗವಡೂ ಸದರೀ ಕಟ್ಟಡ ಮುಂತಾದವುಗಳ ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

50. ಮೇಲೆ ಕಂಡ ಅಧಿಕಾರ ಬಲದಿಂದ ಅಂತಾ ಯಾವ ಕಟ್ಟಣವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತುಹಾಕಲ್ಪಟ್ಟಲ್ಲಿ, ಮೆಂಬರ್‌ಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಯೆಷ್ಟು ಕಿತ್ತುಹಾಕಲ್ಪಡುತ್ತೋ ಅಷ್ಟನ್ನು, ಹರಾಜ್ ಹಾಕಿಸಿ ಅಂತಾ ಹರಾಜ್ ಹುಟ್ಟುವಳೀ ಹಣವನ್ನು, ಕಿತ್ತುಹಾಕಿದ ಲಾಗವಡನ್ನ ಕೊಡತಕ್ಕಬಗ್ಗೆ, ವಿನಿಯೋಗಿಸಬಹುದು. ಅಂತಾ ವಿಕ್ರಯದ ಮೊಬಲಗಿನ ಪೈಕೀ ಖರ್ಚು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟಣದ ಯಾ ಗೋಡೆಯ ಮಾಲೀಕನು ಹರಾಜ್ ತಾರೀಖು ಲಗಾಯತ್ ಆರು ತಿಂಗಳೊಳಗಾಗಿ ಬಂದು ಕೇಳಿದರೆ ಅವನಿಗೆ ಕೊಟ್ಟುಬಿಡತಕ್ಕದ್ದೇಹೊರತು ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು, ಮೆಂಬರ್‌ಗಳು, ಅಂತಾ ಸಾಮಾನುಗಳನ್ನು ಮೇಲೆಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸಿದಾಗ್ಯೂ, ಸದರೀ ಲಾಗವಡಿನ ವಿಷ್ಯು ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಬೈಲಾ ನಿಬಂಧನೆಗಳ ದೆಸೆಯಿಂದ ಯಾವ ಪರಿಹಾರ ಉಂಟುಮಾಡಲ್ಪಟ್ಟಿರುತ್ತೋ ಮೇಲಕಂಡ ಹರಾಜ್‌ನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ್ದು ಜಾತಾ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೂ ಅದೇ ಪರಿಹಾರ ವುಂಟಾಗಿರತಕ್ಕದ್ದು.

51. ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸೀಡೆಂಟರು, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ, ತಾವಾದರೂ, ತಮ್ಮ ನೌಕರರ ಮಾರ್ಫತ್ತಾದರೂ, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟಮೇಲೆ ದರೋಬಸ್ತು ಕಟ್ಟಗಳೊಳಗೂ, ಪ್ರವೇಶಿಸಿ ನೋಡುವದು, ವಿಶಿಷ್ಟ ಕಟ್ಟವಾಗಲಿ, ಯಾವ ಭಾಗವಾಗಲಿ, ಆರೋಗ್ಯಕ್ಕೋಸ್ಕರ ಕೂಡ್ಲೆ ಒಳಗೂ ಹೊರಗೂ ಸುಣ್ಣ ಬಳಿಸಲ್ಪಡುವಂತೆ ಅಥವಾ ಯಿತರ ರೀತಿಯಿಂದ ಪಾಕ್ ಮಾಡುವಂತೆ ಬರವಣಿಗೇ ಮೂಲಕ ಹುಕ್ಕುಂ ಕೊಡುವದು ಸಹ ಅವರಿಗೆ ನ್ಯಾಯ್ಯವಾಗಿರತಕ್ಕದ್ದು. ಅಂತಾ ಕಟ್ಟದ ಮಾಲೀಕ ಯಾ ವಾಸಸ್ಥನು ತನಗೆ ಅಂತಾ ಹುಕ್ಕುಂ ಕೊಡೋಣಾದ್ದು ಮೊದಲು ಯೆಂಟುದಿನಗಳೊಳಗಾಗಿ ಆ ಮೇರೆ ಪಾಕ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ, ಪ್ರೆಸೀಡೆಂಟರು ಆ ಕೆಲಸ ಮಾಡಿಸಬಹುದು, ಮತ್ತು ಆಬಗ್ಯೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಮ್ಯುನಿಸಿಪಲ್ ಇಲಾಖೆಯ ಸ್ಯಾನಿಟರಿ ಯಿನ್‌ಸ್ಪೆಕ್ಟರ್ ಎಂಬ ಅಧಿಕಾರಿಯು ರೋಗ ನಿಮಿತ್ತಗಳಾದ ಕಟ್ಟಗಳನ್ನು, ಹೊಗೆ ಹಾಕಿಸುವ ಬಗ್ಯೆ ಅಥವಾ ರೋಗ ವ್ಯಾಪನೆಯ ನಿಮಿತ್ತವನ್ನು ನಿವರ್ತಿ ಮಾಡುವ ಬಗ್ಯೆ ಮುಚ್ಚಿಸತಕ್ಕದ್ದು. ಪ್ರೆಸೀಡೆಂಟರ ಬರವಣಿಗೆಯ ಮೂಲಕ ಮಂಜೂರಾತಿಯನ್ನು ಅನುಸರಿಸಿ ಅಂತಾ ಕ್ರಮಗಳನ್ನು ನಿರ್ಣಡಿಸತಕ್ಕದ್ದು.

52. ಯಾವ ಕಟ್ಟವಾದರೂ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಒಂದು ವಕ್ಕಲಿಗಿಂತ ಹೆಚ್ಚಾಗಿ ಇರುವವಾಗಿ ಮ್ಯುನಿಸಿಪಲ್ ಬೋರ್ಡಿನ ಪ್ರೆಸೀಡೆಂಟರಿಗೆ ಸ್ಯಾನಿಟೇರಿ ಇನ್‌ಸ್ಪೆಕ್ಟರವರು ಸೆರ್ಟಿಫೈ ಮಾಡುವಲ್ಲಿ, ಪ್ರೆಸೀಡೆಂಟರು, ಅಂಥಾ ಜನ ಸಮ್ಮರ್ದವನ್ನು ತಗ್ಗಿಸುವಬಗ್ಯೆ ಮಾಜಿಸ್ಟ್ರೇಟರಲ್ಲಿ ನಡವಳಿತ ನಡಿಸತಕ್ಕದ್ದು. ಮಾಜಿಸ್ಟ್ರೇಟರು ಅದರ ಮೇಲೆ ತಮಗೆ ಯುಕ್ತತೋರುವ ಹುಕ್ಕುಂ ಕೊಡತಕ್ಕದ್ದು. ಅಂತಾ ಜನ ಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕ್ಕುಂ ತಾರೀಖು ತರುವಾಯ ಹಾಗೆ ಜನ ಸಮ್ಮರ್ದವಿರುವ ಪ್ರತಿದಿನಕ್ಕೂ, ಒಂದು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

53. ಯಾವದಾದರೂ ಜಮೀನಿನಲ್ಲಿರತಕ್ಕ ಬೇಲೀಗಳು ಭೂಮಿಯಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಹಾಗೆ ಅವುಗಳನ್ನು ಕತ್ತರಿಸುವಂತೆ, ಯಾ ಕೊಂಬೆಗಳು ಕಡಿಯುವಂತೆ, ಮತ್ತು ಯಾವದಾದರೂ ಪಬ್ಲಿಕ್‌ರಸ್ತೆ ಅಥವಾ ಬೀದಿಯಮೇಲೆ ವಾಲಿಇರುವದರಿಂದ ದಾರಿಗೆ ಅಟಕಾವ್‌ಆಗುವಂತಾ, ಅಥವಾ ಲುಕ್ಸಾನ್ ಆಗುವಂತಾ, ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಅವನು ಮ್ಯುನಿಸಿಪಲ್ ಸರಹದ್ದುಗಳೊಳಗೆ ವಾಸ ಮಾಡುತಿದ್ದರೆ, ಅಂತವನಿಗೂ, ಅದರ ಅನುಭವದಾರನಿಗೂ, ಪ್ರೆಸೀಡೆಂಟರು ಬರವಣಿಗೆಯ ಮೂಲಕ ನೋಟಿಸ್ ಕೊಡಬಹುದು. ಅಂತಾ ನೋಟಿಸ್‌ನಲ್ಲಿ ಕಂಡ ತಾರೀಖುಲಾಗಾಯಿತ್ ಎಂಟುದಿನಗಳೊಳಗಾಗಿ, ಅದರಂತೆ ನಡೆಯದೆ ಇದ್ದಪಕ್ಷಕ್ಕೆ ಮಾಲೀಕನಾಗಲಿ, ಅನುಭವದಾರನಾಗಲಿ, ಮಾಜಿಸ್ಟ್ರೇಟ್‌ಮುಂದೆ ತಕಸೀರ್ ಆಪಾದನೆಪಟ್ಟು 2 ರೂಪಾಯಿಗಳ ಲಗಾಯತ್ 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಮತ್ತು ಅಂತಾ ತಕಸೀರಿಗಾಗಿ ಆಪಾದನೆ ಆದಮೇಲೆ ಸದರೀ ತಕಸೀರ್ ನಡೆಯುತ್ತಿರುವ ಪ್ರತಿದಿನಕ್ಕೂ, ಒಂದುರೂಪಾಯಿ ಮೊದಲು ಹತ್ತು ರೂಪಾಯಿಗಳ ವರಿಗೆ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

54. ಕ್ರಮಪ್ರಕಾರ ನೋಟಿಸ್ ಕೊಡಲ್ಪಟ್ಟತರುವಾಯ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸೀಡೆಂಟರಿಂದ ಲೈಸೆನ್ಸ್ ಪಡೆಯದೆ ಮ್ಯುನಿಸಿಪಲ್ ಸರಹದ್ದಿನೊಳಗೆ ಒಂದು ಸ್ಥಳದಲ್ಲಿ ಯಾವದಾದರೂ ಬಾಡಿಗೇ ಕುದುರೆಗಳ ಯಾ ಬಂಡಿಗಳ ತಬೇಲೇಗಳು, ಕುದುರೆಲೈನ್‌ಗಳು, ಕುದುರೇ ಚಿಕಿತ್ಸೇಶಾಲೆಗಳು ಬಂಡಿಮಿಟ್ಟೆಗಳು, ದನಗಳ ಕೊಟ್ಟಿಗೆಗಳು ಅಥವಾ, ಪಬ್ಲಿಕ್ಕಾಗಿಬಂದು ಇಳಿದುಕೊಳ್ಳುವಬಗ್ಯೆ ಇಡೋಣಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ, ಮೇಕೆ, ಯಾ ಹತ್ತಕ್ಕೆ ಮೀರಿದ ಕೊಂಬುಗಳುಳ್ಳ ಜಾನವರ್‌ಗಳು ಇಂತಾವುಗಳಿಗೆ ಸ್ವಂತಗಾರನಾಗಿರುವ, ಯಾ ಇವುಗಳನ್ನು ಇಟ್ಟು ಇರುವ ಯಾವನಾಗಲಿ 2 ಆಣೆಗಳಮೊದಲು, 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಅಂತಾ ತಕಸೀರಿಗಾಗಿ ಆಪಾದನೆಆದಮೇಲೆ ಅಂತಾ ತಕಸೀರ್ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 1 ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

55. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸೀಡೆಂಟರ ಅಭಿಪ್ರಾಯ ಪ್ರಕಾರ ಆಸ್‌ಪಾಸ್ ಜನಗಳಿಗೆ ಬಾಧಕವಾಗುತ್ತೆಂದು ತೋರುವ ಯಾವ ಹಂದಿಗಳನ್ನಾಗಲಿ ಯಾವನು ಇಡುತ್ತಾನೋ ಅವನು 2 ಆಣೆಗಳ ಮೊದಲು 5 ರೂಪಾಯಿಗಳ ವರೆಗೆ ಒಂದು ಜುರ್ಮಾನೆಗೂ, ಅಂತಾ ತಕ್ಸೀರ್ ಸ್ಥಾಪನೆಯಾದ ಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 5 ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದಲ್ಲದೆ, ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸೀಡೆಂಟರ ಹುಕ್ಕುಂ ನಿಸೀ, ಯಾವ ನುಕ್ಸಾನ್ ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಫೂಟಾಗಿ ಕೊಂದು ಹಾಕ ಬಹುದು.

56. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ, ಯಾ ಅವುಗಳ ಮಾರ್ಗವಾಗಿ, ಯಾ ಕೆಳಗಡೆಗೆ, ಇರುವಂಥಾ, ಅಥವಾ ತರುವಾಯ ಕಲ್ಪಿಸಲ್ಪಡುವಂತಾ ದರೋಬಸ್ತು ಪಬ್ಲಿಕ್ ಬಚ್ಚಲುಗಳು, ಚರಂಡೀಗಳು, ಮತ್ತು ತಮಾಂ ಬಚ್ಚಲುಗಳು, ಚರಂಡೀಗಳು, ನಲ್ಲೀಗಳು, ಮೊಹರೀಗಳು ಸಹ ಮೆಂಬರ್‌ಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿರಲಿ, ಅನ್ಯಥಾ ಆದ್ದಾಗಿರಲಿ, ಅಂತಾ ಕೆಲಸಗಳು, ಅವುಗಳಿಗೆ ಸಂಬಂಧಿಸಿದ ದರೋಬಸ್ತು ಕೆಲಸಗಳು ಸಾಮಾನುಗಳು, ಪದಾರ್ಥಗಳು ಮೆಂಬರುಗಳ ವಶದಲ್ಲಿಡಲ್ಪಟ್ಟು ಅವರಿಗೆ ಸೇರಿದ್ದಾಗಿರತಕ್ಕದ್ದು.

57. ಮ್ಯುನಿಸಿಪಲ್ ಸರಹದ್ದುಗಳ ಜಲಧಾರೇ ನೀರು ಹರಿಯುವ ಬಗ್ಯೆ ಯಾವದಾದರೂ ಮುಖ್ಯ ಮೊಹರೀಗಳನ್ನಾಗಲಿ, ಇತರ ಮೊಹರೀಗಳನ್ನಾಗಲಿ ಮಾಡಿಸುವಲ್ಲಿ ಮೆಂಬರ್‌ಗಳು, ಜರೂರಿದ್ದರೆ, ಯಾವದಾದರೂ ಬೀದಿಯ ಅಥವಾ ರಸ್ತೆಯ ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಉದ್ದೇಶಿಸಲ್ಪಟ್ಟ, ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ, ಆವರಣ ಕಲ್ಪಿಸಲ್ಪಟ್ಟ ಯಾ ಇತರ ವಿಧವುಳ್ಳ ಜಮೀನಿನಲ್ಲಿ, ಅದರ ಮಾರ್ಗವಾಗಿ ಯಾ ಕೆಳಗಡೆಗೆ ಇರುವ ಯಾವದಾದರೂ ನೆಲಮಾಳಿಗೆ ಕಮಾನ್ ಬಗ್ಗಿಸಿಯಿರುವ ನೆಲಮಾಳಿಗೆ ಇಂತಾದ್ದರ ಮಾರ್ಗವಾಗಿ, ಯಾ ಅಡ್ಡವಾಗಿ ಯಾ ಕೆಳಗಡೆಗೆ, (ಆ ವಿಷಯವನ್ನು ಕುರಿತು ತಕ್ಕವಾಯಿದೆನಿಶೀ ಬರವಣಿಗೇ ಮೂಲಕ ನೋಟಿಸ್ ಕೊಡಲ್ಪಟ್ಟ ತರುವಾಯ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದುಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿಕೊಡತಕದ್ದು ಅಂತಾ ಈಡು ಮೊಬಲಗ್ ವಿಷಯದಲ್ಲಾಗಲಿ ಅದನ್ನು ಹಂಚಿಕೆ ಮಾಡಿಕೊಡುವ ಅಂಶದಲ್ಲಾಗಲಿ ಯೇನಾದರೂ ತಕರಾರ್ ಉಂಟಾದ ಪಕ್ಷಕ್ಕೆ ನುಕ್ಸಾನ್ ವ ಲಾಗವಡುಗಳು ಇವುಗಳನ್ನು ಕುರಿತು ತಕರಾರ್ ವ್ಯವಸ್ಥೆ ಬಗ್ಯೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟರೀತಿಯಾಗಿ ಫೈಸಲ್ ಆಗತಕ್ಕದ್ದು.

58. ಈ ಬೈಲಾನಿಬಂಧನೆಗಳ ದೆಸೇಯಿಂದ ತಮ್ಮ ಸುಪರ್ದಮಾಡೋಣಾದ ಬಚ್ಚಲುಗಳು, ಯಾ ಚರಂಡೀಗಳು, ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ದುರಸ್ತು ಪಡಿಸತಕ್ಕದ್ದು. ಮತ್ತು ತಮಗೆ ಯುಕ್ತ ತೋರುವ ಮೇರೆ ವಿಸ್ತಾರಪಡಿಸತಕ್ಕದ್ದು, ಬದಲಾವಣಿಮಾಡತಕ್ಕದ್ದು, ಯಾ ಮೇಲ್ಗಡೆ ಕಮಾನ್ ಕಟ್ಟಿಸತಕ್ಕದ್ದು ಯಾ ಇತರ ವಿಧದಿಂದ ಅಭಿವೃದ್ಧಿ ಮಾಡಕ್ಕದ್ದು, ಮತ್ತು ಆ ಪೈಕಿ ಯಾವ ಭಾಗ ತಮಗೆ ನಿಷ್ಪ್ರಯೋಜಕವೆಂತಲೂ ಅನಾವಶ್ಯಕವೆಂತಲೂ, ತೋರುತ್ತೋ ಆ ಭಾಗವನ್ನು ಮೌಕೂಫ್ ಮಾಡಬಹುದು, ಮುಚ್ಚಿಸಿಬಿಡಬಹುದು ಯಾ ನಾಶಮಾಡಬಹುದು, ಪರಂತು, ಈ ಸೆಕ್ಷನ್ ಅನುಸರಿಸಿ ಯಾವ ಅಂಶವಾಗಲಿ ಮಾಡಲ್ಪಟ್ಟತೆಂಬ ಸಬಬಿನ ಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯ್ಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟರೆ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರು ಯಾವ ಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡೆದಿರುತ್ತಾರೋ ಅಂತಾ ಯಾವದಾದರೂ ಪಬ್ಲಿಕ್ ಬಚ್ಚಲ್‌ನಲ್ಲಿಯಾಗಲಿ ಇತರ ಸ್ಥಳದಲ್ಲಿಯಾಗಲಿ, ಸದರೀ ಬಚ್ಚಲು ನೀರು ಹರಿಯುವ ಬಗ್ಯೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

59. ಮೆಂಬರ್‌ಗಳು ತಮಗೆ ಸೇರಿದ ಬಚ್ಚಲುಗಳೂ ಚರಂಡೀಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಇರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಇಡಿಸತಕ್ಕದ್ದು. ಮತ್ತು ಕ್ರಮ ಪ್ರಕಾರ ಪಾಕ್ ಮಾಡಿಸತಕ್ಕದ್ದು, ಶೋಧಿಸತಕ್ಕದ್ದು, ಮತ್ತು ಖಾಲೀ ಮಾಡಿಸತಕ್ಕದ್ದು. ಸದರೀ ಬಚ್ಚಲುಗಳನ್ನು ನೀರು ಪಾಟಮಾಡಲಿಕ್ಕೂ ಶುದ್ಧಪಡಿಸಲಿಕೂ, ಖಾಲೀ ಮಾಡಲಿಕ್ಕೂ ಭೂಮಿಯ ಮೇಲಾಗಲಿ, ಕೆಳಗಾಗಲಿ, ಜರೂರಾದ ತೊಟ್ಟಿವಗ್ಯೆರೆಗಳನ್ನು ತೂಬುಗಳನ್ನೂ, ಯಂತ್ರಗಳನ್ನೂ, ಮತ್ತು ಜರೂರಾದ ಇತರ ಕೆಲಸಗಳನ್ನೂ ಅವರು ಕಟ್ಟಿಸಬಹುದು. ಇಡಿಸಬಹುದು, ಮತ್ತು ಚೀಪ್ ಕಮ್ಮಿಷನರವರ ಮಂಜೂರಾತೀನಿಸೀ ಅಂತಾ ಬಚ್ಚಲುಗಳು, ಯಾ ಚರಂಡಿಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ, ಯಾವದಾದರೂ ತಕ್ಕ ಸ್ಥಳದೊಡನೆ ಸೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆ ಮಾಡಬಹುದು, ಅಥವಾ ಅಂತಾ ಬಚ್ಚಲಗಳ ದೆಸೆಯಿಂದಲೂ ಚರಂಡೀಗಳ ದೆಸೆಯಿಂದಲೂ, ಬರುವ ಕಶ್ಮಲವನ್ನು ಜಮಾಯಿಸಿಯಿಡುವ ಬಗ್ಯೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು. ಮತ್ತು ಕೇವಲ ಜರೂರೆಂತ ಯೆಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಇತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು. ಆದರೆ ಹಾಂಗೆ ಉಪಯೋಗಿಸುವದರಿಂದ ಹೇಸಿಕೆಯುಂಟಾಗದೆ ಇರತಕದ್ದು.

60. ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತಿಯನ್ನು ಮೊದಲು ಪಡಕೊಳ್ಳದೆ, ಈ ಬೈಲಾನಿಬಂಧನೆಗಳ ದೆಸೇಯಿಂದ ಮೆಂಬರಗಳ ವಶದಲ್ಲಿ ಇಡೋಣಾದ ಬಚ್ಚಲುಗಳು ಚರಂಡೀಗಳು ಇವುಗಳ ಪೈಕಿ ಯಾವದರಲ್ಲಾಗಲಿ ಯಾವನು ಯಾವ ಚರಂಡೀಯನ್ನಾದರೂ ಮಾಡುತ್ತಾನೋ ಯಾ ಮಾಡಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ್ ಚರಂಡೀಯಾಗಲಿ ಬಚ್ಚಲಾಗಲೀ ಸರ್ಕಾರೀ ಜಮೀನಾಮಾರ್ಗವಾಗಿ ಹರಿಯಲೀ ಜನಗಳ ಸ್ವಂತ ಜಮೀನಾಮಾರ್ಗವಾಗಿ ಹರಿಯಲೀ ಪರಂತು ಅಂತಾದ್ದನ್ನು ಯಾವನು ಬಂದ್ ಮಾಡುತಾನೋ ತಿರಿಗಿಸುತ್ತಾನೋ ಅಟಕಾವ್ ಮಾಡುತ್ತಾನೋ ಅಥವಾ ಮತ್ಯಾವ ವಿಧದಿಂದಲಾಗಲಿ, ಪ್ರವರ್ತಿಸುತ್ತಾನೋ ಅಂತಾ ಮನುಷ್ಯನು 1 ರೂಪಾಯಿ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೆಂಟರು ಅಂತಾ ಚರಂಡೀಯನ್ನಾಗಲಿ ಅಟಕಾವನ್ನಾಗಲಿ, ತಮಗೆ ಯುಕ್ತತೋರುವ ಪ್ರಕಾರ ನಾಶ ಪಡಿಸಬಹುದು, ಬದಲಾವಣೆ ಮಾಡಿಸಹುದು, ಹೊಸದಾಗಿ ಮಾಡಿಸಬಹುದು. ಅಥವಾ ಅನ್ಯಥಾ ತಮಗೆ ಯುಕ್ತತೋರುವ ಪ್ರಕಾರ ನಡಿಸಬಹುದು. ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ ಅಂಥಾ ಫೂಟೆ ಚರಂಡಿಯನ್ನು ಯಾ ಅಟಕಾವನ್ನೂ ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

61. ಈ ಬೈಲಾನಿಬಂಧನೆಗಳಿಂದ ಮೆಂಬರಗಳವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸೀಡೆಂಟರ ಅನುಮತೀ ಇಲ್ಲದೆ ಯಾವ ಕಟ್ಟಣವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು, ಮತ್ತು ಯಾವ ಕಟ್ಟಣವಾಗಲಿ ಆ ಮೇರೇ ಕಟ್ಟಲ್ಪಟ್ಟಲ್ಲಿ ಪ್ರೆಸೀಡೆಂಟರು ಅಂತಾ ಕಟ್ಟಣವನ್ನು ಕಿತ್ತಿ ಹಾಕಿಸಬಹುದು. ಅಥವಾ ತಮಗೆ ಯುಕ್ತತೋರುವ ಪ್ರಕಾರ ಇತರ ರೀತಿಯಿಂದ ನಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕಶೀರ್ ನಡಿಸಿದ ಮನುಷ್ಯನು ಕೊಡತಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಿ ಕೊಳ್ಳಲ್ಪಡತಕ್ಕದ್ದು.

62. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಮೆಂಬರಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತಾರೋ ಅಂತಾ ಯಾವದಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಇರುವ ಯಾವದಾದರೂ ಕಟ್ಟಣವು ಯಾವಾಗಲಾಗಲಿ, ತಕ್ಕ ಚರಂಡೀಯಿಂದ ಯಾ ನಲ್ಲೀಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಇತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸೀಡೆಂಟರಿಗೆ ತೃಪ್ತಿಕರವಾಗಿ ಚರಂಡೀ ಇಡಲ್ಪಡದೇ ಇರುವ ಪಕ್ಷಕ್ಕೆ ಪ್ರೆಸೀಡೆಂಟರು, ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟಣದ ದೆಸೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನುಗಳ ದೆಸೆಯಿಂದ ಅಷ್ಟರ ಆಕಾರದಲ್ಲಿ, ಅಷ್ಟರಮಟ್ಟಕ್ಕೆ, ಮತ್ತು ಅಂತಾ ನೀರು ವಾಟದಲ್ಲಿ ಮುಚ್ಚಲ್ಪಟ್ಟ, ಯಾ ಖುಲ್ಲಾಯಿರುವ ಚರಂಡಿಯನ್ನಾಗಲಿ, ನಲ್ಲೀಯನ್ನಾಗಲಿ ಅಂತಾ ಕಟ್ಟಣದಿಂದ ಕಟ್ಟಿಸಬಹುದು, ಅಥವಾ ಏರ್ಪಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೂಡ್ಲೇ ಕೊಡಲ್ಪಡದ ಪಕ್ಷಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

63. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಅಂತಾ ಕಟ್ಟಣದ ಬಚ್ಚಲ ನೀರು ಅಗ್ಯೆ ಇರುವಂತಾ ಅಥವಾ ಯೇರ್ಪಾಡು ಮಾಡಲ್ಪಡುವಂತಾ ಯಾವದಾದರೂ ಪಬ್ಲಿಕ್ ಬಚ್ಚಲುನಲ್ಲಿಯೂ, ಮೆಂಬರಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಕ್ಕೂ ತೆಗದುಕೊಂಡು ಹೋಗಲಿಕ್ಕೆ ತಕ್ಕ ನೀರು ಮಟ್ಟಕ್ಕಿಂತ ತಗ್ಗಾದ ನೀರು ಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟಣವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು ಪಬ್ಲಿಕ್ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನಾ ಯಾ ಕಟ್ಟಣಗಳ ಮಾಲೀಕರು ಯಾ ಅನುಭವದಾರರು, ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ, ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಣಗಳ ಮೊದಲಿನಲ್ಲಿ ಇರುವ ಛಾಜಾಕಾಲ್ವೆಗಳ ಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು, ಬದಲಾವಣೀ ಮಾಡತಕ್ಕದ್ದು, ಕಾಪಾಡತಕ್ಕದ್ದು, ಮತ್ತು ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೇ ಅಶ್ರದ್ಧೆಮಾಡಿದ ಪಕ್ಷಕ್ಕೆ ಪ್ರೆಸೀಡೆಂಟರು ಅದನ್ನು ಮಾಡಿಸಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ ಕೊಡತಕ್ಕದ್ದಲ್ಲದೆ ಆ ಮೊಬಲಗ್ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

64. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಃ ಕಟ್ಟೋಣಾದ ಯಾವ ಕಟ್ಟಣವಾಗಲಿ, ಇದರ ಹಿಂದಿನ ಕಡೇ ಸೆಕ್ಷನ್ನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರ ಇದ್ದಪಕ್ಷಕ್ಕೆ ಅದರ ಮಾಲೀಕನು ಅಂತಾ ಕಟ್ಟಣದ ನಿವೇಶನದ ದೆಸೇಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸೀಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಆಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರುವಾಟದಿಂದಲೂ, ಒಂದು ಚರಂಡೀ ಕಟ್ಟಿಸತಕ್ಕದ್ದು ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆಮೇರೆ ಕಟ್ಟಲಿಕ್ಕೆ ಉಪೇಕ್ಷಿಸಿದಪಕ್ಷಕ್ಕೆ, ಪ್ರೆಸೀಡೆಂಟರು ಸದರೀ ಚರಂಡೀ ಕಟ್ಟಿಸಲ್ಪಡುವಂತೆ ಮಾಡಬಹುದು

ಮತ್ತು ಆಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

65. ಅಂತಾ ನೋಟಸನ್ನೂ ನಕಷೇಯನ್ನೂ ಕಳುಹಿಸದೇಯಾಗಲಿ, ಸದರೀ ತಿಂಗಳೊಳಗಾಗಿ, ಪ್ರೆಸೀಡೆಂಟರಿಂದ ನಿರ್ಣಯಿಸಲ್ಪಟ್ಟ ಪ್ರಕಾರವಲ್ಲದೆ ಬೇರೆ ಮಟ್ಟಗಳ ಪ್ರಕಾರವಾಗಲಿ, ಈ ಬೈಲಾ ನಿಬಂಧನೆಗಳಿಗೆ ಮತ್ಯಾವ ವಿಧದಿಂದಲಾದರೂ ವಿರುದ್ಧವಾಗಿಯಾಗಲಿ, ಅಂತಾ ಕಟ್ಟಣವು ಆರಂಭಿಸಲ್ಪಟ್ಟರೆ, ಯಾ ಮಾಡಲ್ಪಟ್ಟರೆ, ಪ್ರಸೀಡೆಂಟರು ಜರೂರ್ ಇದ್ದಲ್ಲಿ ಸಂದರ್ಭಾನುಗುಣವಾಗಿಯಿರುವಂತೆ ಅದನ್ನು ಬದಲಾಯಿಸಲ್ಪಡುವಂತೆ ಯಾ ನಾಶ ಪಡಿಸಲ್ಪಡುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದ ಲಾಗವಡು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ ಮಾಡಲ್ಪಡತಕ್ಕದ್ದು.

66. ಮೇಲೆ ಕಂಡ ಮೇರೆ ಅಂತಾ ನಕಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳನ್ನು ಕುರಿತು ಮಂಜೂರಾತಿಯನ್ನಾಗಲಿ, ಬೇಮಂಜೂರಾತಿಯನ್ನಾಗಲಿ, ಪ್ರೆಸೀಡೆಂಟರು ಬರವಣಿಗೇ ಮೂಲಕ ತಿಳಿಸದೇಯೂ, ಅಂತಾ ನೋಟಸ್ ತಲಪಿದ ಮೇಲೆ ಒಂದು ತಿಂಗಳ ವಳಗಾಗಿ ಬೇರೆ ಮಟ್ಟವನ್ನು ಏರ್ಪಡಿಸದೆಯೂ ತಪ್ಪಿದ ಪಕ್ಷಕ್ಕೆ ಅಂತಾ ನೋಟಸ ಕೊಡುವ ಮನುಷ್ಯನು ಇದರಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ ನಕಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಣವನ್ನು ಕಟ್ಟಸಲಿಕ್ಕಾಗಲಿ, ಖೋಲ್‌ಬಂದೀ ಮಾಡಿಸಲಿಕ್ಕಾಗಲಿ, ಪ್ರವರ್ತಿಸಬಹುದು; ಪರಂತು ಅಂತಾ ಕಟ್ಟಸೋಣವಾಗಲಿ ಖೋಲ್‌ಬಂದೀಯಾಗಲಿ ಅನ್ಯಥಾ ಈ ಬೈಲಾಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

67. ಮೆಂಬರ್‌ಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿ ಆಗಲಿ, ಅವುಗಳೊಡನೆ ಸಂಬಂಧಿಸುವ ಯಾವ ಚರಂಡಿಯಲ್ಲಾಗಲಿ, ಯಾವದಾದರೂ ಮಣ್ಣು, ಕಶ್ಮಲ, ಬೂದಿ, ತೋಟ, ಅಡಿಗೇಮನೆ, ಕುದುರೇಲಾಯ ಇಂತಾದ್ದರ ಬಾಬತು, ಕಚರೆ, ಗಾಜಿನ ಚೂರು, ಜೋಕಿಗಳು, ಯಾ ಇತರ ಕಸ (ಅಥವಾ ತಕ್ಕ ಬಚ್ಚಲು ತಯಾರ್ ಮಾಡಿಸಿ ಕೊಡುವ ಪರ್ಯಂತ) ಯಾವದಾದರೂ ಮಲ ಇಂತಾದ್ದನ್ನು ಯಾವನು ಹಾಕುತ್ತಾನೋ ಯಾ ಇಡುತ್ತಾನೋ ಅಥವಾ ತನ್ನ ನೌಕರರು ಹಾಕುವಂತೆ ಯಾ ಇಡುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

68. ಯಾವ ಜಮೀನ್‌ಗಳಿಗೆ ಯಾ ಕಟ್ಟಣಗಳಿಗೆ ಫೂಟ್ ಚರಂಡೀಗಳು ಸಂಬಧಿಸಿದವುಗಳಾಗಿರುತ್ತವೋ ಅಂತಾ ಜಮೀನ್‌ಗಳಲ್ಲಿ ಯಾ ಕಟ್ಟಣಗಳಲ್ಲಿ, ಅಥವಾ ಜಮೀನ್‌ಗಳ ಹೊರಗೆ ಯಾ ಕಟ್ಟಣಗಳ ಹೊರಗೆ ಇರುವ ದರೋಬಸ್ತು ಫೂಟ್ ಚರಂಡೀಗಳೂ ಯಾವದ್ದಾದರೂ, ಬೀದಿಯಲ್ಲಾಗಲಿ, ಬೀದಿಯ ಬಳಿಯಲ್ಲಾಗಲಿ, ಇರುವ ಪಾಯಖಾನೆಗಳು ಬಚ್ಚಲುಗಳು ಬಚ್ಚಲು ಗುಣಿಗಳು ಮೆಂಬರ್‌ಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನ್‌ಗಳಿಗೂ ಕಟ್ಟಣಕ್ಕೂ ಅವು ಸೇರಿ ಇರುತ್ತವೋ, ಅಥವಾ ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟಿರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತ್ತವೊ ಅಂತಾ ಜಮೀನ್‌ಗಳ ಮತ್ತು ಕಟ್ಟಣದ ಮಾಲೀಕರ ಲಾಗವಡ್‌ನಿಂದಲೂ, ಖರ್ಚುಗಳಿಂದಲೂ, ಸದರೀ ಪಾಯಖಾನೇ ಮುಂತಾದವು ಬದಲಾಯಿಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡೀಯಾಗಲಿ ಪಾಯಖಾನೇ ಯಾಗಲಿ ಬಚ್ಚಲು ಗುಂಡೀ ಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತದೋ ಅಂತಾ ಯಾವದಾದರೂ ಜಮೀನ್ ಯಾ ಕಟ್ಟಣಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಸ್ ಕೊಡೋಣಾದ ತರುವಾಯು ಎಂಟ ದಿನಗಳೊಳಗೆ ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿಸಿ ಇಡಲಿಕ್ಕೆ ಸಹ ಉಪೇಕ್ಷಿಸಿದ ಪಕ್ಷಕ್ಕೆ ಪ್ರೆಸೀಡೆಂಟರು ಅಂತಾ ಚರಂಡೀಯನ್ನಾದರೂ ಪಾಯಖಾನೇಯನ್ನಾದರೂ ಬಚ್ಚಲು ಗುಂಡಿಯನ್ನಾದರೂ ಬದಲಾಯಿಸುವಂತೆಯೂ, ದುರಸ್ತು ಪಡಿಸುವಂತೆಯೂ, ಬಂದೋಬಸ್ತು ಪಡಿಸುವಂತೆಯೂ, ಮಾಡಬಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

69. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದ ತರುವಾಯ ಪ್ರೆಸಿಡೆಂಟರು ಬರವಣಿಗೆ ಮೂಲಕವಾದ ಅನುಮತಿ ಇಲ್ಲದೆ ಯಾಗಲಿ, ಅವರ ಹುಕುಮಿಗೆ ಬರಕಿಲಾಫ್ ಆಗಲಿ, ಅಂತಾ ಯಾವ ಚರಂಡೀ ಯಾ ಪಾಯಖಾನೆ ಯಾ ಬಚ್ಚಲು ಇಂತಾದ್ದು ಕಟ್ಟಲ್ಪಟ್ಟರೆ, ಅಥವಾ ಕಿತ್ತು ಹಾಕಿಸುವಂತೆ, ಯಾ ನಿಲ್ಲಿಸುವಂತೆ ಯಾ ಮಾಡಿಸದೆ ಇರುವಂತೆ, ಪ್ರೆಸೀಡೆಂಟರಿಂದ ಹುಕ್ಕುಂ ಮಾಡಲ್ಪಟ್ಟಿರುವ ಯಾವ ಚರಂಡಿ ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದನ್ನು ಯಾವನಾದರೂ ಕಟ್ಟದರೆ ಖೋಲ್‌ಬಂದೀ ಮಾಡಿಸದರೆ ಯಾ ನಿಲ್ಲಿಸದೆ ನಡಿಸಿದರೆ ಹಾಗೆ ಮಾಡುವ ಪ್ರತಿ ಮನುಷ್ಯನೂ 2 ಆಣೆಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂತಾ ಯಾವ ಚರಂಡೀಯಲ್ಲಾಗಲೀ ಪಾಯಖಾನೆಯಲ್ಲಾಗಲಿ,

ಬಚ್ಚಲು ಗುಂಡಿಯಲ್ಲಾಗಲಿ, ತಮಗೆ ಯುಕ್ತ ತೋರುವಂತ್ತು, ತಿದ್ದುಪಡಿಯನ್ನಾಗಲಿ, ಬದಲಾವಣೆಯನ್ನಾಗಲಿ, ಮಾಡಿಸ ಬಹುದು, ಮತ್ತು ಅದರ ಬಾಬತು ಲಾಗವಡನ್ನು ಅಂತಾ ಚರಂಡೀ ಯಾಗಲಿ ಪಾಯಖಾನೆಯಾಗಲಿ ಬಚ್ಚಲು ಗುಂಡಿಯಾಗಲಿ ಯಾವನಿಂದ ಅಕ್ರಮವಾಗಿ ಕಟ್ಟಿಸಲ್ಪಟ್ಟಿತೋ, ಯಾ ಖೋಲ್‌ಬಂದೀ ಮಾಡಲ್ಪಟ್ಟಿತೋ, ಯಾ ನಿಲ್ಲಿಸದೆ ನಡಿಸಲ್ಪಟ್ಟಿತೋ, ಅಂತಾ ಮನುಷ್ಯನು, ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

70. ಪ್ರೆಸೀಡೆಂಟರಾಗಲಿ, ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರಾಗಲಿ, ಅಂತಾ ಚರಂಡಿಯನ್ನಾದರೂ, ಪಾಯಖಾನೆಯನ್ನಾದರೂ, ಬಚ್ಚಲು ಗುಂಡಿಯನ್ನಾದರೂ, ತನಿಖೀ ಮಾಡಬಹುದು, ಮತ್ತು ಆಬಗ್ಯೆ, ಸೂರ್ಯೋದಯದುದಮೊದಲು, ಸೂರ್ಯಾಸ್ತಮಯದೊಳಗೆ ಯಾವಾಗಲಾಗಲಿ ಅಂತಾ ಚರಂಡಿ, ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದು ಯಾವದಕ್ಕೆ ಸೇರಿಯಿರುತ್ತೋ ಅಂತಾ ಮನೆ ಮುಂತಾದವುಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ್ ಕೊಟ್ಟ ಹನ್ನೆರಡುಗಂಟೆಯತರುವಾಯ ಯಾವದಾದರೂ ಜಮೀನಿನಲ್ಲಿಯೂ, ಕಟ್ಟಡದಲ್ಲಿಯೂ, ಜರೂರಾದಂತಾ ಕುಮಕೀದಾರು, ಕಾಲೇಗಾರು, ಯಿವರುಗಳುನಿಶೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಲೇಶವೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಿಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಖಾನೆ, ಯಾ ಬಚ್ಚಲುಗುಂಡಿ, ಬಂದೋಬಸ್ತಾಗಿಯೂ ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ, ಈ ಬೈಲಾಗಳ ಜಾರೀಲಿಬಂದ ಮೇಲೆ ಇವುಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಟ್ಟಿದೆಯೆಂತಲಾಗಲಿ ತಿಳಿಯಬಂದಲ್ಲಿ ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು, ಅಂತಾ ಚರಂಡಿ, ಯಾ ಪಾಯಖಾನೆ, ಯಾ ಬಚ್ಚಲುಗುಂಡಿ ಯಿವುಯಾವನಿಗೆ ಸೇರಿರುತವೋ ಅಂತಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್‌ಮಾಡತಕ್ಕದ್ದು; ಆದರೆ ಚರಂಡಿಯಾಗಲಿ ಪಾಯಖಾನೆಯಾಗಲಿ ಬಚ್ಚಲುಗುಂಡಿಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುವತೆಯೂ ಈ ಬೈಲಾಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಡದೇಯೂ ಕಾಣಬಂದರೆ ಪ್ರೆಸೀಡೆಂಟರಾಗಲಿ ಮೇಲೆ ಕಂಡ ಆಫಿಸರಾಗಲಿ ಭೂಮಿಯನ್ನು ಭರ್ತೀಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಖಾನೆ, ಬಚ್ಚಲುಗುಂಡಿ, ಇವುಗಳನ್ನು ತೆಗೆಯುವದರಿಂದಲೂ, ಮುಚ್ಚುವದರಿಂದಲೂ, ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡುಗಳು ಅಂತಾ ಸಂಗತಿಯಲ್ಲಿ ಮೆಂಬರ್‌ಗಳಿಂದ ಇಡಲ್ಪಡತಕ್ಕದ್ದು. ಪರಂತು ಮನೆಯೊಳಗೆ ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಅವಕಾಶ ಕೊಡುವ ಪರ್ಯಂತ ಹಾಗೆ ತನಿಖೀ ನೋಡಲಿಕ್ಕೋಸ್ಕರ ಹಿಂದುಗಳು ಮುಸಲ್ಮಾನರು ಇವರುಗಳ ಹೆಂಗಸರು ಇರತಕ್ಕ ಬಗ್ಗೆ ಕ್ಲುಪ್ತವಾದ ಜನಾನೇಗಳಲ್ಲಾಗಲಿ ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟು ಮಾಡತಕ್ಕದ್ದಲ್ಲವು.

71. ಈ ಬೈಲಾನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟಡ, ಯಾ ಜಮೀನಿನ ಮಾಲೀಕನಿಂದಾಗಲಿ, ಅನುಭವದಾರನಿಂದಾಗಲಿ, ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿ ಯಿದ್ದು ಅಂತಾ ಕೆಲಸವನ್ನು ಅವನು ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷದಲ್ಲಿ, ಹಾಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆವಿಧಿಸಲ್ಪಡಲಿ ವಿಧಿಸಲ್ಪಡದೇ ಯಿರಲಿ ಪರಂತು ಅಂತಾ ಕೆಲಸವನ್ನು ಪ್ರೆಸೀಡೆಂಟರು ಮಾಡಿಸಬಹುದು. ಆ ಬಗ್ಗೆ ಹಿಡಿದ ಲಾಗವಡನ್ನು ಸದರೀ ಕಾಮಗಾರಿ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನು ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಆ ಮೊಬಲಗ್ ವಸೂಲ್ಮಾಡಲ್ಪಡತಕ್ಕದ್ದು.

72. (ಕಾಮಗಾರೀ ಮಾಡಿಸುವದಕ್ಕೆ) ತಪ್ಪಿದ ಮನುಷ್ಯನು, ಕಟ್ಟಡ ಯಾ ಜಮೀನಿನ ಮಾಲೀಕನಾಗಿ ಯಿದ್ದರೆ, ಪ್ರೆಸೀಡೆಂಟರು ಈ ಬಗ್ಗೆ ಜಾಸ್ತೀಯಾಗಿ ಪರಿಹಾರವನ್ನು ಉಂಟುಮಾಡುವ ಉದ್ದಿಶ್ಯ ಅಂತಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ವ್ಯಾಜ್ಯ ಯಾ ನಡವಳಿತ ನಡಿಸಿಯಿರಲಿ ನಡಿಸದೇಯಿರಲಿ, ತತ್ಕಾಲದಲ್ಲಿ ಮಾಲೀಕನಿಂದ ಕೊಡಲ್ಪಡತಕ್ಕ ಲಾಗವಡು ಮೊಬಲಗ್ ವಿಷ್ಟುವನ್ನಾಗಲಿ ಆ ಪೈಕೀ ಯಷ್ಟರಭಾಗವನ್ನಾಗಲಿ ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಮಾಲೀಕನ ವಶದಲ್ಲಿರತಕ್ಕ ಕಟ್ಟಡವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದ ಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂತಾ ಅನುಭವದಾರನ ಬಾಬತು ಚರಸ್ವತ್ತುಗಳ ಜಪ್ತೀಯಿಂದ ಅದು ವಸೂಲ್ಮಾಡಲ್ಪಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ, ಅಂತಾ ಯಾವ ಖರ್ಚಿನ ವಿಷಯದಲ್ಲಾಗಲಿ ತಾನು ಸದರೀ ಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತನ್ನಿಂದ ವಸೂಲ್‌ಮಾಡಲ್ಪಟ್ಟಷ್ಟು ಮಟ್ಟಿಗೆ ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗ್‌ನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕುಂ ಉಂಟಾಗಿರತಕದ್ದು.

73. ಯಾವದಾದರೂ ಕಟ್ಟಡ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಬೈಲಾಗಳಿಂದ ಕಟ್ಬೋಣಾದ ಯಾವ ಲಾಗವಡಗಳಿಗೋಸ್ಕರವಾಗಲಿ, ಯಾವ ಕಟ್ಟಡ ವಗೈರೇಗಾಗಿ ಅಂತಾ ಲಾಗವಡು ಕೊಡಬೇಕಾಗಿರುತ್ತೋ ಆ ಕಟ್ಟಡಗಳಿಗೋಸ್ಕರ ತಂನನ್ನು ಕೇಳಿದಾಗ ತನ್ನಿಂದ ಸಲ್ಲತಕ್ಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ

ಬಾಕೀಯಾದ ತನ್ನಿಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಪರಂತು ಪ್ರೆಸೀಡೆಂಟರು ಆವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿಗೇ ಬಾಬತು ಮೊಬಲಗ್ ಮತ್ತು ಯಾವನಿಗೆ ಅಂತಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು, ಅಡ್ರಹೆಸರು, ಇವುಗಳನ್ನು ವಾಸ್ತವ್ಯವಾಗಿ ಪ್ರಕಟಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗದೇ ಹೋಗುವದಿಲ್ಲವು. ಆದರೆ ಅಂತಾ ಅನುಭವದಾರನನ್ನು ಕೇಳಿದ ಮೊಬಲಗ್ ಹಾಗೆ ಕೇಳಿದ ಕಾಲದಲ್ಲಾಗಲಿ ತರುವಾಯವಾಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಯೆಂಬದಾಗಿ ರುಜುಮಾಡುವ ಭಾರ ಸದರೀ ಅನುಭವದಾರನನ್ನೇ ಸೇರಿಯಿರುತ್ತದೆ. ಮತ್ತು ಇದರಲ್ಲಿ ಅಡಗಿರುವ ಯಾವ ಅಂಶವೂ ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂತಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡೆದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಭಾಧಕವಾಗುತ್ತದೆಯೆಂದು ಗ್ರಹಿಸ ಕೂಡದು.

74. ಯಾವದಾದರೂ ಕಟ್ಟಡ ಯಾ ಜಮೀನಿನ ಮಾಲೀಕನು ಪ್ರೆಸೀಡೆಂಟರು ತಾಕೀದ್ ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು. ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಸೆಯಿಂದ ಅಂತಾ ಮಾಲೀಕನಿಗೆ ಬಾಕೀ ಆಗತಕ್ಕ ಬಾಡಿಗೆಯಲ್ಲಿ ವಜಾ ಮಾಡಲ್ಪಡತಕ್ಕದ್ದು.

75. ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಯಾವ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ ಅದರ ಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ್ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ ಪ್ರೆಸೀಡೆಂಟರು, ಆ ವಿಷಯ ರುಜುವಾದ ಮೇಲೆ ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾದ ಅಂತಾ ದರೋಬಸ್ತು ಕಾಮಗಾರಿಗಳನ್ನೂ ನೆರವೇರಿಸುವ ಬಗ್ಗೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕ್ಕುಂ ಕೋರಬಹುದು. ಮತ್ತು ಹುಕ್ಕುಂ ತಾರೀಖು ಲಾಗಾಯತ್ ಎಂಟು ದಿನಗಳು ಕಳೆದ ತರುವಾಯ ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತಿದ್ದರೆ ಹಾಗೆ ನಿರಾಕರಿಸುತಿರುವ ಪ್ರತಿ ದಿನಕ್ಕೂ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದು; ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತಿರುವಲ್ಲಿ ಅಂತಾ ಕಾಮಗಾರಿಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಬಹುದಾಗಿದ್ದ ಯಾವ ಜುರ್ಮಾನೆಯಿಂದಲೂ, ಮಾ ಆಗತಕ್ಕದ್ದು.

76, ಈ ಬೈಲಾ ನಿಬಂಧನೆಗಳು ಜಾರೀಯಲ್ಲಿ ಬರುವ ಕಾಲದಲ್ಲಾಗಲಿ ಆತರುವಾಯವಾಗಲಿ, ಮಾಡಲ್ಪಟ್ಟ, ಇಡಲ್ಪಟ್ಟ ಯಾ ಕಟ್ಟಲ್ಪಟ್ಟ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳ್, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲ್ವೆಗಳು ನೀರು ನಲ್ಲಿಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನ ಸಂಬಂಧವಾದ ಇತರ ಕಾಮಗಾರೀಗಳು, ಇಂತಾವು ಮೆಂಬರ್‌ಗಳ ಲಾಗವಾಡಿನಿಂದ ಕಲ್ಪಿಸಲ್ಪಡಲಿ, ಯಾ ಇಡಲ್ಪಡಲಿ, ಯಾ ಕಟ್ಟಲ್ಪಡಲಿ, ಅನ್ಯಥಾ ಆಗಲಿ, ಪರಂತು ಅಂತಾದ್ದೂ; ಮತ್ತು ಸದರೀ ಕೆರೇ ವಗೈರೇಗೆ ಸೇರಿದ ಯಾ ಅವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಡಗಳು, ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು, ಇವುಗಳೂ, ಮತ್ತು ಯಾವದಾದರೂ ಪಬ್ಲಿಕ್ ಕೆರೆಗೆ ಸಮೀಪವಾದ (ಸ್ವಂತ ಸ್ವತ್ತು ಅಲ್ಲದೆಯಾಗಲಿ ಸರ್ಕಾರದ ಸ್ವತ್ತಲ್ಲದೆಯಾಗಲಿ ಇರುವ) ಅದಕ್ಕೆ ಸೇರಿದಹಾಗೆ ಇರುವ ಯಾವದಾದರೂ ಜಮೀನ್ ಇಂತಾದ್ದೂ ಮೆಂಬರ್‌ಗಳ ಅಧಿಕಾರದಲ್ಲಿರತಕ್ಕದ್ದಲ್ಲದೆ ಅವರಿಗೆ ಸೇರಿದವುಗಳಾಗಿರತಕ್ಕವು.

77. ಮೆಂಬರ್‌ಗಳು ನಿವಾಸಿಗಳಿಗೆ ನೀರು ಒದಗಿಸುವದಕ್ಕೋಸ್ಕರವಾಗಲಿ, ಈ ಬೈಲಾ ನಿಬಂಧನೆಗಳಲ್ಲಿ ಕಂಡ ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಲೀ ಇರತಕ್ಕ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಮೊಹರೀಗಳು, ತೂಬಿನಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು ಇಂತಾವು ಜಾರೀಯಾಗಿ ನಡೆಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಅಥವಾ ಅವರು, ಅವುಗಳಿಗೆ ಬದಲಾಗಿ, ಅಂತಾ ಇತರ ಕಾಮಗಾರೀಗಳನ್ನು ಮಾಡಿಸಿ ಅವು ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಮತ್ತು ಮೆಂಬರ್‌ಗಳು ಕೊಡಗು ಶೀಮೆಯ ಚೀಫ್ ಕಮ್ಮಿಷನರವರ ಮಂಜೂರಾತಿಯ ಮೇಲೆ ಆಗಿಂದಾಗ್ಗೆ ಮ್ಯುನಿಸಿಪಲ್ ಸರಹದ್ದುಗಳೊಳಗೆ ನೀರು ತರಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲೀಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು ಕುಂಟೆಗಳು ನೀರು ತೊಟ್ಟಿಗಳು ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರೀಗಳು ಇವುಗಳನ್ನೆಷ್ಟನ್ನಾಗಲಿ ಒದಗಿಸಬಹುದು.

78. ಸೆಕ್ಷರ್ 79 ಅನುಸರಿಸಿ ಮೆಂಬರಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು ಅನ್ಯಥಾ ಮೆಂಬರಗಳ ಬಾಬತು ಯಾವದಾದರೂ ಶೀನೀರಿನ ಬಗ್ಗೆ ಉದ್ದೇಶಿಸಲ್ಪಟ್ಟ ಯಾ ಕ್ಲುಪ್ತವಾದ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರು ತೊಟ್ಟಿ, ಜಲದಾರಿ, ಅಥವಾ ಕಾಲುವೆ, ಇಂತಾದ್ದರಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ, ಅಥವಾ ಇತರ ಜಂತುವು, ಅಥವಾ ತುಪ್ಪಟ, ಬಟ್ಟೆ, ಅಥವಾ ವುಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು, ಜಂತುವಿನ ಚರ್ಮ ತೊಗಲು ಅಥವಾ ಅಸಹ್ಯವಾದ ಯಾ ಉಪದ್ರವಕರವಾದ ಇತರವಸ್ತು ಇಂತಾದ್ದು ಯಾವದನ್ನಾಗಲಿ ತೊಳೆಯುವ, ಯಾ ತೊಳೆಯಿಸುವ; ಅಥವಾ ಅದರಲ್ಲಿ ಯಾವದಾದರೂ ಜಂತುವು ಗ್ರೇವಲ ಕಲ್ಲು, ಧೂಳು, ಅಥವಾ ಯಾವದಾದರೂ, ಕಚರ, ಕಶ್ಮಲ, ಕಲ್ಮಷ, ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂತಾದ್ದನ್ನು ಹಾಕುವ, ಇರಿಸುವ, ಬಿಸಾಡುವ, ಅಥವಾ ಪ್ರವೇಶಿಸುವಂತೆ ಮಾಡುವ, ಅಥವಾ ಅದರಲ್ಲಿ ಯಾವದಾದರೂ ಕೊಳೇ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು ಚರಂಡಿ, ಯಿಂತ್ರ ಅಥವಾ ಕಡಾಯಿ, ಇಂತಾದ್ದರ ಬಾಬತು ನೀರು, ಅಥವಾ ತನ್ನದಾಗಿ ಇರುವ ಯಾ ತನ್ನ ಅನುಭವದಲ್ಲಿ ಇರುವ ಯಾವದಾದರೂ ಕಟ್ಟಡದಿಂದಾಗಲಿ, ಭೂಮಿಯಿಂದಾಗಲಿ ಹರಿಯುವ ಅನಾರೋಗ್ಯಕರವಾದ ಯಾ ಅಸಹ್ಯವಾದ ಯಾವದಾದರೂ ದ್ರವಪದಾರ್ಥ ಯಾ ವಸ್ತು ಇಂತಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಯಾ ಅಪ್ಪಣೇ ಕೊಡುವ ಯಾ ಅಂತಾ ಯಾವ ನೀರಾಗಲಿ ಯೆಷ್ಟುಮಾತ್ರವಾದರೂ ಕೊಳೆಯಾಗುವಂತೆ ಯಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

79. ಮೆಂಬರಗಳು ಯಾವ ಪಬ್ಲಿಕ ಪ್ರದೇಶವನ್ನಾಗಲಿ ಜನಗಳ ಖಾಸಗಿ ಸ್ವತ್ತಲ್ಲದ ದೊಡ್ಡ ಕೆರೆಗಳ ಅಥವಾ ಯಾವದಾದರೂ "ರ್ಗ" ಎಂಬ ನದೀ ತೀರದ ಯಾವ ಭಾಗವನ್ನಾಗಲಿ, ಸ್ನಾನ ಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು. ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಬದಗಿಸಬಹುದು. ಅಥವಾ ಪ್ರತ್ಯೇಕವಾಗಿ ಏರ್ಪಡಿಸಬಹುದು; ಮತ್ತು ಜಂತುಗಳನ್ನು ತೊಳೆಯುವ ಬಗ್ಯಾಗಲಿ ಬಟ್ಟೆಗಳೊಗೆಯುವ ಬಗ್ಯಾಗಲಿ ಪ್ರಜೆಗಳ ಆರೋಗ್ಯ, ಪಾಕೀಜ್, ಸೌಖ್ಯ, ಇವುಗಳಿಗೆ ಸಂಬಂಧಿಸಿದ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು, ಯಾ ರ್ಗ ಎಂಬ ಪ್ರವಾಹಗಳನ್ನು ಪ್ರತ್ಯೇಕವಾಗಿ ಯೇರ್ಪಡಿಸಲೂ ಬಹುದು.

80. ಆರೋಗ್ಯ ಭಂಗಕಾರಿಯಾಗಿ ಯಾ ನೆರೆಹೊರೆಗೆ ಬಾಧಕವಾಗಿ ತೋರುವ ಯಾವದಾದರೂ ಖಾಸಗತೆಳ ಕೆರೆಯನ್ನು ಶೋಧಿಸುವಂತೆಯೂ ಅಂತಾ ಯಾವದಾದರೂ ನಿವೇಶನ ಮುಂತಾದವರೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋಗಿಯೂ ಇರುವ ನೀರನ್ನು ಎತ್ತಿಸಿಬಿಡುವಂತೆಯೂ ತೆಗೆಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟಿಸದ್ವಾರಾ, ಯಾವ ನಿವೇಶನ ಮುಂತಾದವುಗಳ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸಿಡೆಂಟರಿಗೆ ನ್ಯಾಯ್ಯವಾಗಿರತಕ್ಕದ್ದು. ಮತ್ತು ಅಂತಾ ಮಾಲೀಕನು ಅಂತಾ ನೋಟೀಸ ಜಾರೀಯಾದ ಲಾಗಾಯತು ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ, ಯಾ ಉಪೇಕ್ಷಿಸಿದರೆ ಪ್ರೆಸೀಡೆಂಟರೂ, ಅವರ ಆಫಿಸರಗಳೂ, ಕೆಲಸದವರೂ ಪ್ರವೇಶಿಸಿ ತಮಗೆ ಯುಕ್ತತೋರುವ ಪ್ರಕಾರ ಮೇಲೆ ಕಂಡ ವಿಷ್ಯಾಂಶಗಳಿಗೋಸ್ಕರವಾಗಲಿ ಆಪೈಕೀ ಕೆಲವಕ್ಕೋಸ್ಕರವಾಗಲಿ ಜರೂರಾದ ದರೋಬಸ್ತು ಕಾರ್ಯಗಳನ್ನೂ ಮಾಡಬಹುದು. ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ ಅಂತಾ ನಿವೇಶನ ಮುಂತಾದವುಗಳ ಮಾಲೀಕನು ಕೊಡತಕ್ಕದ್ದಲ್ಲದೆ ಮ್ಯುನಿಸಿಪಾಲಿಟಿಗೆ ಸಲ್ಲತಕ್ಕ ಸಾಲದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

81 ಕೆಟ್ಟ ನೀರು ನಿಂತಿರುವ ಸ್ಥಳವಗೈರೇಗಳು ಯಾವ ಮನುಷ್ಯನ ಸ್ವಂತ ಆಸ್ತಿಯಾಗಿದ್ದರೂ ಅನ್ಯಥಾ ಇದ್ದರೂ ವಾಸಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಯಾವದಾದರೂ ಸ್ವಂತ ಆವರಣದಲ್ಲಿಲ್ಲದ, ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನೂ ಪ್ರೆಸಿಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತೀ ಮಾಡತಕ್ಕದ್ದು. ಅಥವಾ ನೀರು ತೆಗೆಯಿಸಿ ಹಾಕತಕ್ಕದ್ದು.

82. ಈ ಬೈಲಾ ನಿಬಂಧನೆಗಳಿಂದ ಮಾಡಲ್ಪಡತಕ್ಕದೆಂದು ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ, ಮಾಡಿಸುವಲ್ಲಿ ಹಾಗೆ ಮಾಡಿಸುವದ್ದರಿಂದ ಅಟಕಾವು ಮಾಡಲ್ಪಡುವ, ಹಾನಿ ಹೊಂದುವ, ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೇಗೆ ಬದಲಾಗಿ ಮ್ಯುನಿಸಿಪಲ್ ಫಂಡಿನಿಂದ ಲಾಗವಡು ಮುಟ್ಟಿಸಿ ಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡೀಗಳು, ನಾಲೇಗಳು, ಇವುಗಳನ್ನು ಮೆಂಬರಗಳು ಒದಗಿಸತಕ್ಕದ್ದು, ಮತ್ತು ಮಾಡತಕ್ಕದ್ದು. ಮತ್ತು ಮೆಂಬರಗಳಿಗೂ, ಅದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ್ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರ್, ನುಕ್ಸಾನ್, ವ ಲಾಗವಾಡ ಇವುಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವ್ಯವಸ್ಥೆಯಾಗತಕ್ಕದ್ದು.

83. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆ ಅಥವಾ ಮೇಲ್ಭಾಗ, ಯಾವದಾದರೂ ಬಚ್ಚಲು ಯಾ ಚರಂಡಿ, ಇಂತಾದ್ದು ಮೆಂಬರುಗಳಿಂದ ತೆಗಿಯಿಸಲ್ಪಟ್ಟರೆ ಯಾ ಒಡೆಯಿಸಲ್ಪಟ್ಟರೆ, ಯಾವ ಬಗ್ಗೆ ಅವು ಅಗೆಯಿಸಲ್ಪಟ್ಟವೋ ಆ ಕಾಮ

ಗಾರೀಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತೀ ಮಾಡಿಸಿ ತಳವರಸೆಯನ್ನು ಮೇಲ್ಭಾಗವನ್ನು, ಬಚ್ಚಲನ್ನು, ಯಾ ಚರಂಡಿಯನ್ನು ಸರಿಮಾಡಿಸಿ ಅದರಲ್ಲಿ ಬೀಳುವ ಮಣ್ಣನ್ನು ತೆಗೆಸಿ ಹಾಕತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೆಯ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಸ್ಥಳಕ್ಕೆ ಕಟಕಟೆ ಕಟ್ಟಿಸಿ ಕಾವಲು ಇಡಿಸಿ ರಾತ್ರೀ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

84. ಮೆಂಬರುಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು, ಯಾ ಚರಂಡೀಗಳು, ಇಂತಾವುಗಳ ಪೈಕೀ ಯಾವದನ್ನಾಗಲಿ ತಾವು ಕಟ್ಟಿಸುತ್ತಿರುವಲ್ಲಿ ಯಾ ರೀಪೇರ್ ಮಾಡಿಸುತ್ತಿರುವಲ್ಲಿ, ನೆರೆ ಹೊರೆ ಮನೆಗಳಿಗೆ ಅಪಾಯ ಬಾರದಂತೆ ಪೋಟೀ ಕೊಟ್ಟು ಬಂದೋಬಸ್ತು ಪಡಿಸಿ ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ; ಬೀದಿಗೆ ಅಡ್ಡವಾಗಿಯಾಗಲಿ, ಅಂಥಾ ಕಾಮಗಾರೀ ನಡೆಯುತ್ತಿರುವಲ್ಲಿ ಸವಾರೀಗಳು, ಬಂಡಿಗಳು, ಇತರ ಯಾನಗಳು, ದನಗಳು, ಯಾ ಕುದುರೆ ಇವುಗಳು ಹೋಗುವ ಮಾರ್ಗವನ್ನು ಅಟಕಾವು ಮಾಡಲಿಕ್ಕೆ ಪ್ರೆಸೀಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು, ಅಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸೀಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಇತರ ಕೆಲಸಗಳು ಇವುಗಳನ್ನು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ್ ಮಾಡುತ್ತಿರುವಲ್ಲಿ ಅವುಗಳ ಬಳಿ ರಾತ್ರೀಹೊತ್ತು ಸಾಕಾದಷ್ಟು ದೀಪಗಳು ಇಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳೀ ಕಾವಲು ಇಡಿಸತಕ್ಕದ್ದು ಮತ್ತು ಪ್ರೆಸೀಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು ಸರಪಣಿಗಳು, ಯಾ ಕಂಭಗಳು, ಇವುಗಳ ಪೈಕೀ ಯಾವದನ್ನಾಗಲಿ, ತೆಗೆಯುವ, ಬದಲಾಯಿಸುವ, ಯಾ ಮತ್ತೊಂದು ಸ್ಥಳಕ್ಕೆ ತೆಗದುಕೊಂಡು ಹೋಗುವ, ಯಾವದಾದರೂ ದೀಪವನ್ನು ಆರಿಸಿಬಿಡುವ, ಯಾವ ಮನುಷ್ಯನಾಗಲಿ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪ್ರೆಸೀಡೆಂಟರ ಅಪ್ಪಣೇ ಇಲ್ಲದೆ ಯಾವ ಮನುಷ್ಯನೂ, ಯಾವ ಬೀದಿಯಲ್ಲಿಯೂ ಯಾವ ಕಟ್ಟಡದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ, ಅವನು, ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತ ಯಾ ಹಳ್ಳ ಮುಚ್ಚಿಸಲ್ಪಡುವ ಪರ್ಯಂತ, ಅನ್ಯಥಾ ಬಂದೋಬಸ್ತು ಮಾಡಲ್ಪಡುವ ಪರ್ಯಂತ, ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ, ಯಾ ಹಳ್ಳಗಳಿಗೆ, ಸಾಕಾಗಿರುವ ಮೇರೆ ತಡೆಹಾಕಿಸುವಂತೆಯೂ, ಆವರಣ ಕಟ್ಟಿಸುವಂತೆಯೂ, ಮಾಡತಕ್ಕದಲ್ಲದೇ ರಾತ್ರಿ ಹೊತ್ತು ಅದರಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು; ಮತ್ತು ಅಂತಾ ಅಪ್ಪಣೆ ಇಲ್ಲದೇ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ, ಅಥವಾ ಅಂತಾ ಸಾಮಾನುಗಳು, ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೇಯಾಗಲಿ, ಆವರಣ ಕಲ್ಪಿಸದೇಯಾಗಲಿ ದೀಪ ಹಚ್ಚದೇಯಾಗಲಿತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಗಿಸಿಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೇಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೇಯಾಗಲಿ, ಇರುತ್ತಾನೋ ಅಂತಾ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಪ್ರೆಸೀಡೆಂಟರು ನೋಟಿಸ್ ಕೊಟ್ಟ 24 ಗಂಟೆಯ ಹೊತ್ತಿಗೆ ತರುವಾಯ ಆ ತಕಸೀರ್ ನಡಿಸುತ್ತಿರುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

86. ಸರ್ಕಾರ್ ಜಮೀನಿನಲ್ಲಾಗಲಿ ಜನಗಳ ಸ್ವಂತ ಜಮೀನಿನಲ್ಲಾಗಲಿ ಇರುವ ಯಾವದಾದರೂ ಕಟ್ಟ, ಕೆರೆ, ಬಾವಿ, ಯಾ ಹಳ್ಳ, ಯಾ ಇತರ ಪ್ರದೇಶ ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು, ಯಾ ಆವರಣ, ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿ ಇದ್ದಪಕ್ಷಕ್ಕೆ ಪ್ರೆಸೀಡೆಂಟರು ಲಿಖಿತ ರೂಪವಾದ ನೋಟಿಸ್ ದ್ವಾರಾ, ಅದರ ದೆಸೆಯಿಂದ ಅಪಾಯವುಂಟಾಗದೇ ಇರುವಂತೆ ಅದು ರಿಪೇರ್‌ಮಾಡಲ್ಪಡತಕ್ಕದ್ದೆಂತಲಾಗಲಿ, ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ, ಆವರಣ ಕಟ್ಟಿಸಲ್ಪಡತಕ್ಕದೆಂತಲಾಗಲಿ, ಸದರೀ ನಿವೇಶನಗಳ ಮಾಲೀಕನಿಗಾದರೂ, ಅನುಭವದಾರನಿಗಾದರೂ, ತಾಕೀದ್ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಮನುಷ್ಯನು ಇಪ್ಪತ್ತನಾಲ್ಕು ಗಂಟೆಯ ಹೊತ್ತಿನೊಳಗೆ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೇ ನಿರಾಕರಿಸಿದ ಪಕ್ಷಕ್ಕೆ, ಅಥವಾ ಉಪೇಕ್ಷಿಸಿದರೆ, ಅಥವಾ ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿ ಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದಲ್ಲದೆ ಆ ಪ್ರಕಾರ ಮಾಡಲಿಕ್ಕೆ ದೇರ್ ಮಾಡುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ಸದರೀ ಕಟ್ಟ, ವಗೈರೆಗೆ ರಿಪೇರೀ ಯಾ ಬಂದೋಬಸ್ತು ಮಾಡಲ್ಪಡುವಂತೆ ಯೂ, ಆವರಣ ಕಲ್ಪಿಸಲ್ಪಡುವಂತೆ ಮಾಡುವದು, ಮೇಲೆ ಕಂಡ ದರೋಬಸ್ತು ಅಥವಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತತೋರುವ ಪ್ರಕಾರ ಜರೂರಾದ ದರೋಬಸ್ತು ಅಂಶಗಳನ್ನೂ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಬಗ್ಯೆ ಹಿಡಿದ ಲಾಗವಡು ಯಿದರಲ್ಲಿ ಮುಂದೆ ವಿಧಿಸಲ್ಪಡುವಪ್ರಕಾರ ವಸೂಲಾಗತಕ್ಕದ್ದು.

87. ಮೆಂಬರ್‌ಗಳಾಗಲಿ, ಅವರಿಂದ ಸದರೀ ಬಗ್ಗೆ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯನಾಗಲಿ ಯಾವದಾದರೂ ಮಾರ್ಕೆಟ್, ಕಟ್ಟ, ಅಂಗಡಿ, ತಟ್ಟೀ ಅಂಗಡಿ, ಅಥವಾ ಖಸ್ಸೈಮಾಂಸ, ಕೋಳಿಗಳು, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿಂತಾವುಗಳನ್ನು ವಿಕ್ರಯಿಸುವ ಬಗ್ಗೆ ಯಾ ಖಸ್ಸೈ ಮನೆ ಬಗ್ಗೆ ಉಪಯೋಗಿಸಲ್ಪಡುವ ಸ್ಥಳ ಯಿವುಗಳಲ್ಲಿ ನ್ಯಾಯವಾದ ಯೆಲ್ಲಾ ಕಾಲಗಳೊಳಗೂ ಕುಮ್ಮಕ್‌ದಾರ್ ಸಂಗಡಲೇ ಯಾಗಲಿ, ಅವರುಗಳು ಯಿಲ್ಲದೆಯಾಗಲಿ ಪ್ರವೇಶಿಸಿ ತನಖೀ ಮಾಡುವದು ಮಾತ್ರವಲ್ಲದೆ ಅದರಲ್ಲಿ ಯಿರಬಹುದಾದ ಯಾವಾದರೂ ಜಂತು, ಮುರ್ದಾರ್, ಮಾಂಸ, ಯಾವದಾದರೂ ಕೋಳಿಗಳ, ಪೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರಕಾರಿಗಳು ಇವು ಮನುಷ್ಯಾಹಾರಕ್ಕೋಸ್ಕರ ಉದ್ದೇಶಿಸಲ್ಪಟ್ಟವಾಗಿಯೂ, ಅಂತಾ ಆಹಾರಕ್ಕೆ ಅಯೋಗ್ಯವಾಗಿಯೂ, ಕಾಣಬರುವ ಸಂಗತಿಯಲ್ಲಿ ಅವುಗಳನ್ನು ಹಿಡಿದುಕೊಂಡು ಅವುಗಳನ್ನು ನಾಶ ಮಾಡಿಬಿಡುವಂತೆಯಾಗಲಿ ವಿಕ್ರಯಿಸುವ ಬಗ್ಗೆ ಕಾಣಿಸವಂತೆ ಯಾಗಲಿ, ಆಹಾರದ ಬಗ್ಗೆ ಉಪಯೋಗಿಸಲ್ಪಡದಂತೆ ಯಾಗಲಿ ವಿನಿಯೋಗಿಸಿ ಬಿಡುವಂತೆ ಹುಕ್ಕುಂ ಮಾಡಬಹುದು, ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ, ಅಂತಾ ಜಂತುವು, ಮುರ್ದಾರ್, ಮಾಂಸ, ಕೋಳಿಗಳು, ಪೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿವು ಮನುಷ್ಯನ ಆಹಾರಕ್ಕೆ ಅಯೋಗ್ಯವಾಗಿ ಯಿತ್ತೆಂತ ಒಬ್ಬ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ, ಅವುಗಳ ಮಾಲೀಕನಾಗಲಿ, ಅವು ಯಾರ ಸ್ವಾಧೀನದಲ್ಲಿ ಕಾಣಬಂದವೋ ಅಂತಾ ಮನುಷ್ಯನಾಗಲಿ, ಇಂಡ್ಯನ್ ಪೆನಲ್‌ಕೋಡಿನ 273ನೇ ಸೆಕ್ಷನಿಂದ ವಿಧಿಸಲ್ಪಟ್ಟ 5 ರೂಪಾಯಿಗಳ ಮೊದಲು 10 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಆ ಮೇರೆ ನಾಶ ಮಾಡಲ್ಪಟ್ಟ ವಸ್ತುಗಳು ಮನುಷ್ಯಾಹಾರಕ್ಕೆ ಯೋಗ್ಯವಾಗಿತ್ತೆಂತ ಮಾಜಿಸ್ಟ್ರೇಟರು ಅಭಿಪ್ರಾಯ ಪಟ್ಟ ಪಕ್ಷಕ್ಕೆ ಸದರೀ ವಸ್ತುವಿನ ನ್ಯಾಯವಾದ ಕಿಮ್ಮತ್ತು ಯೆಂತ ಮಾಜಿಸ್ಟ್ರೇಟರಿಗೆ ತೋರುವ ಮೊಬಲಗನ್ನು ಸದರೀ ಮಾಲೀಕನಿಗೆ ಸಲ್ಲಿಸುವಂತೆ ಮೆಂಬರ್‌ಗಳಿಗೆ ಹುಕ್ಕುಂ ಮಾಡತಕ್ಕದ್ದು.

88. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಮಡಿಕೆರೆ ಲಷ್ಕರ್ ವ ಷಹರ್ ಸರಹದ್ದುಗಳೊಳಗೆ ಈ ಕೆಳಗೆ ಕಾಣಿಸಲ್ಪಡುವ ಕಾರ್ಯಗಳ ಪೈಕೀ ಯಾವ ಕಾರ್ಯಗಳಿಗೋಸ್ಕರವಾಗಲಿ ಅಂದರೆ, ಕೊಬ್ಬು ಕರಗಿಸುವದು, ಸತ್ತ ಜಂತುವಿನ ಕರುಳು ಮುಂತಾದ ಮಾಂಸ, ರಕ್ತ ಯಿಂತಾದ್ದನ್ನು ಕಾಯಿಸುವದು, ಈ ಬಗ್ಗಾಗಲಿ, ಸಬ್ಬು, ಕರ್ಪೂರ, ಯೆಣ್ಣೆ, ಯಿಂತಾದ್ದನ್ನು ಕಾಯಿಸುವ ಮನೆಯಾಗಿ, ಗಾಣಿಗೆ, ಯಾ ಯೆಣ್ಣೆ ತೆಗೆಯುವ ಯಂತ್ರವಾಗಿ, ರಂಗಾರಿ ಮನೆಯಾಗಿ, ಯಾ ಅಂಗಳವಾಗಿ, ತೊಗಲು ಹದ ಮಾಡುವ ಸ್ಥಳವಾಗಿ, ಇಟ್ಟಿಗೆ ಯಾ ಕುಂಬಾರ ಸೂಳಾಗಿ, ಯಾ ಸುಣ್ಣದ ಗೂಡಾಗಿ, ಕಾಗದ ಕಾರ್ಖಾನೆಯಾಗಿ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಯಾವದಾದರೂ ಕಂಪುಳ್ಳ ಯಾವದಾದರೂ ಕೆಲಸ ನಡೆಯುವ ಕಾರ್ಖಾನೆಯಾಗಿ ಯಾ ಕೆಲಸ ಮಾಡುವ ಸ್ಥಳವಾಗಿ; ಅಥವಾ ಮೊಣ್ಗಾರಿಕೆ, ಹುಲ್ಲು, ಮರದ ಸಾಮಾನುಗಳು, ಸಾದೆ, ಕರ್ರಿ, ಯಾ ಬೆರಣೀವಗ್ಯೆರೆ ಯಿಂತಾದ್ದನ್ನು ಇಡುವ ದೊಡ್ಡಿ, ಯಾ ಕೋಠೀಯಾಗಿ ಉಪಯೋಗಿಸಿಕೊಳ್ಳಲ್ಪಟ್ಟ ಪ್ರತಿ ಸ್ಥಳವ ಮಾಲೀಕ ಯಾ ಅನುಭವದಾರನು, ಅವು ವಿಕ್ರಯದ ಬಗ್ಗೆ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಮತ್ತೊಂದು ಕಾರ್ಯಕ್ಕಾಗಿ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದ ತರುವಾಯ ಮೂರುತಿಂಗಳೊಳಗಾಗಿ ಆಬಗ್ಗೆ ಮೆಂಬರ್‌ಗಳ ದೆಸೆಯಿಂದ ಇಡಲ್ಪಡತಕ್ಕ ಒಂದು ಪುಸ್ತಕದಲ್ಲಿ ಅವರ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದು. ಮತ್ತು ಸದರೀ ಮೂರುತಿಂಗಳು ಕಳೆದ ತರುವಾಯ ಪ್ರೆಸಿಡೆಂಟರು ನೋಟಿಸ್ ಕೊಟ್ಟ ಯೆಂಟು ದಿನಗಳಿಗೆ ತರುವಾಯ ಯಾರಾದರೂ, ಅಂತಾ ಯಾವ ಸ್ಥಳವನ್ನಾಗಲಿ ರಿಜಿಸ್ಟರ್ ಮಾಡಿಸಿಕೊಳ್ಳದೆ ವುಪಯೋಗಿಸಿಕೊಂಡಲ್ಲಿ ಆ ತಕಸೀರ್ ನಡಿಸಲ್ಪಡುತ್ತಾ ಇರುವ ಪ್ರತಿದಿನಕ್ಕೂ 2 ಆಣೆ ಮೊದಲು, 5 ರೂಪಾಯಿಗಳವರಿಗೆ, ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

89. ಪರಂತು ಯಿದರಲ್ಲಿ ವಿಧಿಸಲ್ಪಟ್ಟ ಯಾ ಐಯಿಂದ ವಿಧಿಸಲ್ಪಡತಕ್ಕ ಬೈಲಾ ನಿಬಂಧನೆಗಳ ಪೈಕೀ ಯಾವದಾಗಲಿ, ಮಡಿಕೆರೆಯಲ್ಲಿ ಯಾವ ಬಗೆ ಜನಗಳಿಗಾಗಲಿ ಯಾವ ವ್ಯಕ್ತಿಗಾಗಲಿ, ಬಹಳ ಕಠಿಣವಾಗಿ ಕಾಣಬಂದ ಪಕ್ಷಕ್ಕೆ ಆಗ ಈ ಬೈಲಾನಿಬಂಧನೆಗಳು, ಚೀಫ್ ಕಮ್ಮಿಷನರ್‌ರವರ ಅನುಮತಿಯ ಮೇಲೆ ಬೋರ್ಡಿನವರ ಪೂರ್ಣವಾದ ಸಮಾಜದೊಳಗೆ ಯುಕ್ತ ತೋರುವ ಪ್ರಕಾರ ಯಾವಾಗ್ಯೂ ರದ್ದು ಮಾಡಲ್ಪಡಬಹುದು, ಪರಿಷ್ಕರಿಸಲ್ಪಡ ಬಹುದು, ಯಾ ತಿದ್ದುಪಡೀ ಮಾಡಲ್ಪಡಬಹುದು.

90. ಮತ್ತು ಕಾಫೀಸಾಗುವಳಿಯು ಜನಗಳ ಆರೋಗ್ಯ ಭಂಗಕಾರಿಯಾಗಿರುವದರಿಂದ ಅದನ್ನು ಪೇಟೇಯೊಳಗೆ ಮತ್ತು ರೋಮನ್ ಕ್ಯಾಥೋಲಿಕ್ ಗುಡಿವರಿಗೆ ಕಾಫೀಗಿಡ ಹಾಕುವಣ ನಿರೋಧಿಸಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 19, ಸನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 11ನೇ ಆಗಸ್ಟ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ನಂ. ೪೨	ಚನ್ನಗಿರೀ ರಂಗಣ್ಣ ..	ಬಾಟ್ಟಣಿ ಕ್ರಿಷ್ಟರಾವ ವಗೈರೆ ..	೨೨ನೇ ಆಗಸ್ಟ್
ಸ್ಪಿ. ಅ. ೫೨ ರಿ. ೧೮	ಶೀತಾರಾಮಶಾಸ್ತ್ರಿ ..	ಧರಣ್ಣೈಯ ..	ಡಿಟೋ
ಸ್ಪಿ. ಅ. ೪೫	ಗಂಗಮ್ಮಾ ..	ದೊಡ್ಡಬಚ್ಚಮ್ಮ ವಗೈರೆ ..	ಡಿಟೋ
ಕೊ. ಸ್ಪಿ. ಅ. ೬	ಹಜಾಮರ ಹುಚ್ಚಾ ..	ಕಾಳೇಗೌಡ ..	೨೪ನೇ ಡಿಟೋ
ಸ್ಪಿ. ಅ. ೩೯	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	ಡಿಟೋ
ಸ್ಪಿ. ಅ. ೪೬	ಏಕಾಂಬರ ಮೊದಲ್ಯಾರ್ ..	ವೆಂಕಟರಮಣೈಯ ..	ಡಿಟೋ
ಫೂಟ್ ಸ್ಪಿ. ಅ. ೯	ಪುಟ್ಟರಸಮ್ಮ ..	ಬೆಟ್ಟೈಯ ..	ಡಿಟೋ
ಕೊ. ಅ. ನಂ. ೩	ರಾಮಶೆಟ್ಟಿ ಚಿಕ್ಕಪ್ಪೈಯ ..	ಮಲ್ಲುಶೆಟ್ಟಿ ..	೨೬ನೇ ಡಿಟೋ
ಸ್ಪಿ. ಅ. ೪೮	ವೆಂಕಟಕೃಷ್ಣಂಭಟ್ಟ ..	ಶ್ರೀನಿವಾಸ ಐಯಂಗಾರ್ ವಗೈರೆ ..	ಡಿಟೋ
ಕೊ. ಸ್ಪಿ. ಅ. ೨	ನಾರಣ್ಣೈಯ ..	ನಾಗೈಯ ..	ಡಿಟೋ
ಕೊ. ಸ್ಪಿ. ಅ. ೮	ಪುಟ್ಟಮ್ಮ ..	ಬಿಂದಿ ಉರಫ್ ಗೌರಿ ..	೩೧ನೇ ಡಿಟೋ
ಅಪ್ಪೀಲ್ ೪ ರಿ. ನಂ. ೧೩	ಚನ್ನಮಲ್ಲೈಯ ..	ಮಲ್ಲಮ್ಮ ವಗೈರೆ ..	೩೧ನೇ ಡಿಟೋ
ಸ್ಪಿ. ಅ. ೪೯	ಕೃಷ್ಣರಾವ್ ಯ. ಸುಬ್ಬರಾವ್ ..	ಮಹದೇವರಾವ್ ವಗೈರೆ ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಸಾಹೆಬರು ..	ನರಶಿಹ್ಮಮೇಸ್ತ್ರಿ ವಗೈರೆ ..	೫ನೇ ಸೆಪ್ಟಂಬರ್
ಸ್ಪಿ. ಅ. ೪೩	ವೆಂಕಟಾಚಾರ್ರು ..	ಪೋಬಳಾಚಾರಿ ಗಾರ್ಡಿಯನ್ ಕನಕಮ್ಮ ..	ಡಿಟೋ
ಕೊ. ಸ್ಪಿ. ಅ. ೯	ಹಿರಂಣೈಯ ..	ನಂಜೇಗೌಡ ..	ಡಿಟೋ

J. D. GORDON, *Judl, Commr.*

ಪೊಲೀಸ್ ಇಲಾಖಾ.

ತಾರೀಖು 15ನೇ ಆಗಸ್ಟ 1876.

ಹಾಸನ ಡಿಸ್ಟ್ರಿಕ್ಟ ಸಬ್ ಇನ್ಸ್ಪೆಕ್ಟರ ನಾರಾಯಣಸಿಂಗರಿಗೆ 1876ನೇ ಆಗಸ್ಟು 15ನೇ ಮೊದಲ್ಗೊಂಡು ಲಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜಿಬ್ ಹುಕ್ಕುಂ,"

W. PORTEOUS,
Offg. Dy. Inspector General of Police.

ಇನಾಂ ಇಲಾಖಾ.

ನಂ. 5. ತಾರೀಖು 21ನೇ ಜುಲೈ 1876.

ಇದರಿಂದ ಇನಾಂದಾರ್‍ರುಗಳಿಗೆ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್ನಲ್ಲಿ ನಮೂದುಮಾಡಲ್ಪಟ್ಟ ತಾಲ್ಲೂಕುಗಳಲ್ಲಿರುವ ಇನಾಮತಿಗಳಿಗೆ ಆಡ್ಮಿರ್‌ಟರಿಂ ಯಂಬ ಮಧ್ಯಕಾಲದ ಸರಟಫಿಕೇಟ್‌ಗಳು 745, ಕೋಲಾರ ವ ಬೆಂಗಳೂರು ಡಿಸ್ಟ್ರಿಕ್ಟುಗಳ ಡಿಪ್ಯುಟಿ ಕಮ್ಮಿಷನರಗಳಿಗೆ ಬಟವಾಡೆ ಬಗ್ಯೆ 1876ನೇ ಇಸವಿ ಜುಲೈ 10 ವ 19 ಈ ತಾರೀಖುಗಳಲ್ಲಿ ಕಳುಹಿಸಲ್ಪಟ್ಟಿವೆ.

(ಮುಳಬಾಗಲು, ಬೆಂಗಳೂರು, ದೇವನಹಳ್ಳಿ, ವ ನೆಲಮಂಗಲ.)

2. ಇನಾಂದಾರ್‍ರುಗಳು ಐರ್ಜ ತಾಲ್ಲೂಕುಗಳ ಅಮಲ್‌ದಾರ್‍ರುಗಳಿಂದ ಇಸಂವಾರ್ ನೋಟಿಸ್ ಬಂದ ಬಳಿಕ ಹಾಜರಾಗಿ ಸದರೀ ಸರಟಫಿಕೇಟ್‌ಗಳನ್ನು ತೆಗದು ಕೊಳ್ಳತಕ್ಕದ್ದು. ಅಂಥಾ ನೋಟೀಸ್‌ಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಅಮಲ್‌ದಾರ್‍ರುಗಳು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

R. A. COLE,
Supt. of Inam Settlements.

ಬೆಂಗಳೂರು ಮ್ಯುನಿಸಿಪಾಲಿಟಿ.

ತಾರೀಖು 5ನೇ ಆಗಸ್ಟು 1876.

ಸ॥ 1871ನೇ ಇಸವಿ ಬೆಂಗಳೂರು ಮ್ಯುನಿಸಿಪೆಲ್ ರಿಗ್ಯುಲೇಷನ್‌ಗಳ 72ನೇ ಸೆಕ್ಷನ್‌ಕುರಿತು ಇದರಿಂದ ತಿಳಿಯಪಡಿಸುವದೇನಂದರೆ, ಬೆಂಗಳೂರು ಲಷ್ಕರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಇರತಕ್ಕ ದರೋಬಸ್ತು ಮನೆಗಳು ಕಟ್ಟಗಳು ವ ಜಮೀನ್‌ಗಳು ಇವುಗಳ ಮೇಲೆ 1876—77ನೇ ಸಾಲಿಗೆ ಕಟ್ಟಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಮತ್ತು ಅದರಮೇಲೆ ವಿಧಿಸಲ್ಪಟ್ಟ ರಿವಾಜು ಇವುಗಳನ್ನ ಅಡಗಿಸಿಕೊಂಡಿರುವ ರಿಜಿಸ್ಟರ್ ಬುಕ್ಕುಗಳನ್ನು ರೆಸಿಡೆನ್ಸಿ ರೋಡ್ 12ನೇ ನಂಬರ್ ಉಳ್ಳ ಮ್ಯುನಿಸಿಪೆಲ್ ಟ್ಯಾಕಸಸ್ ಅಸೆಸ್ಸರ್ ವ ಕಲೆಕ್ಟರಯವರ ಆಫಿಸ್‌ನಲ್ಲಿ ದಿನವಹಿ 11 ಘಂಟೆ ಲಾಗಾಯಿತು 4 ಘಂಟೆ ವರಿಗೂ ಮಾಲೀಕರಾಗಲಿ ಅವರಿಂದ ಅಧಿಕಾರ ಹೊಂದಿದ ಮುತಾಲೀಕರಾಗಲಿ ನೋಡಿಕ್ಕೊಳ್ಳಬಹುದು.

ಅಂತಾ ಹುಟ್ಟುವಳಿ ವ ರಿವಾಜುಗಳ ಮೇಲೆ ಮಾಡಲ್ಪಡುವ ದರೋಬಸ್ತು ಅಪ್ಪೀಲ್‌ಗಳೂ ಈ ತಾರೀಖು ಲಗಾಯಿತು ಒಂದು ತಿಂಗಳೊಳಗಾಗಿ ಮಾಡಲ್ಪಡತಕ್ಕದ್ದು, ಆ ತರುವಾಯ ಅಂತಾವುಗಳಿಗೆ ನಿಗೆ ಕೊಡಲ್ಪಡುವದಿಲ್ಲ.

J. H. ORR, M. D.,
President, Ml. Commission,
Bangalore Cantonment.

BANGALORE DISTRICT.

Notice of an application by Virabhadraiya for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟೀ ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಯಿಸವಿ ಶಿವಿಲ್ ಮಿಸಲೇನಿಯಸ್ ನಂಬರ್. 60.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಬೆಂಗಳೂರಲ್ಲಿ ಯಿರುವ ಪಾಂಚಾಳ ವೀರಭದ್ರಯ್ಯನು ತನ್ನ ತಂದೆ ವಸ್ಲಯ್ಯನ ಲೇಣೆ 50 ರೂಪಾಯಿ ಬರವಮಾಡಿಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಆಗಸ್ಟು 30ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ವೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

Notice of an application by Lalamiya for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂ. 61.

ಇದರಿಂದ ಸಮಸ್ತರಿಗೂ, ತಿಳಿಯಪಡಿಸುವದೇನಂದರೆ,—ಹೊಸೂರು ತಾಲ್ಲೂಕು ಮತ್ತಿಕೆರೆಯಲ್ಲಿ ಯಿರುವ ಲಾಲಾಮಿಯ್ಯನು ತನ್ನ ತಂದೆ ಆದಂಸಾಹೆಬನ ಲೇಣೆ 200 ರೂಪಾಯಿಗಳು ಬರವಮಾಡಿ ಕೊಳ್ಳತಕ್ಕ ಬಗ್ಯೆ, ಸರ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಸೆಪ್ಟಂಬರ್ ತಿಂಗಳು 1ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ವೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

Notice of an application by Nanje Gauda for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್. 62.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ದೊಡ್ಡ ಬಳ್ಳಾಪುರ ತಾಲ್ಲೂಕು ಶಾಕಲದೇವನ ಪುರದಲ್ಲಿ ಯಿರುವ ಪಟೇಲ್ ನಂಜೇಗೌಡನು ತನ್ನ ತಂದೆ ಚನ್ನವೀರೇಗೌಡನ ಲೇಣೆ 200 ರೂಪಾಯಿ ಬರವಮಾಡಿ ಕೊಳ್ಳತಕ್ಕ ಬಗ್ಯೆ, ಸರ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಸೆಪ್ಟಂಬರ್ 1ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ವೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

ಬತಾರೀಖು 2ನೇ ಮಾಹೆ ಆಗಸ್ಟ್ ಸರ್ 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

T. L. Ricketts,
Offg. Dy. Commr.

KOLAP

Notice of an application by Muniyappa f[illegible] under Act XXVII of 1860.

ಕೋಲಾರ ಡಿಸ್ಟ್ರಿಕ್ಟ್ ಡೆ[illegible] ಕೋರ್ಟಿನಿಂದ. ನಂ. 48.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸು[illegible] ೂರು ಕಸಬಾದಲ್ಲಿ ಯಿರುವ ಲಿಂಗಾಯಿತ ವೀರಶೆಟ್ಟೀ ಚಿಕ್ಕಣ್ಣನವರ ಮಗ ಮುನಿಯಪ್ಪನೆಂಬವನು ಪಾಪ್ತೀಪಟ್ಟ[illegible] ನ ಹೆಸರಿನ ಲೇವಾದೇವೀ ಬಾಬತು 500 ರೂಪಾಯಿಗಳ ವರಿವಿಗೂ ವಸೂಲ್ ಮಾಡಿಕೊಳ್ಳತಕ್ಕ ಬಗ್ಯೆ 18[illegible] ನೇ ಆಕ್ಟ್ ಪ್ರಕಾರ ವಾರಸ್ ಸರಟಫಿಕೇಟ್ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜೀಯು ಸರ್ ಮುಜಕೂರ್[illegible] ಕ್ಕೆ ವಿಚಾರಣೇ ಮಾಡಲ್ಪಡುತ್ತೆಯಾಗಿ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ದಿವಿ 11 ಘಂಟೆಗೆ ಕೋರ್ಟು ಯಿರುವ ಸ್ಥಳಕ್ಕೆ ಬಂದು ರೂಬರೂ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು 7ನೇ ಮಾಹೆ ಆಗಸ್ಟ್ ಸರ್ 1876ನೇ ಇಸವಿ, ಮೊಕ್ಕಾಂ ಕೋಲಾರ.

P. N. Purnaiya,
For Dy. Commr.

TUMKUR DISTRICT.

ತುಮಕೂರು ಡಿಸ್ರಿಕ್ಟು.

ತಾರಿಖು 31ನೇ ಜೂಲೈ 1876.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸಲ್ಪಡುವ ಜೋಡೀ ಗ್ರಾಮಗಳಿಂದ ಸರಕಾರಕ್ಕೆ ಬರತಕ್ಕ ಬಾಕೀ ಅದ್ಯಾಪಿ ಪಾವತೀ ಆಗಲಿಲ್ಲವಾದ ಸಬಬು ಅವುಗಳಿಂದ ಬರತಕ್ಕ ಬಾಕೀ ಮೊಬಲಗುಗಳನ್ನು ವಸೂಲ್ಮಾಡಿಕೊಳ್ಳಲಿಕ್ಕೋಸ್ಕರ ಸದರೀ ಜೋಡೀ ಗ್ರಾಮಗಳು ಕುಣಿಗಲ್‌ನಲ್ಲಿರುವ ಅಮಲ್ದಾರ್ರವರ ಕಚ್ಚೇರೀಯಲ್ಲಿ 1876ನೇ ಇಸವಿ ಆಗಸ್ಟ್ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹಣಕೊಡಲಿಕ್ಕೆತಪ್ಪಿದವರ ಹೆಸರು.	ಗ್ರಾಮದ ಹೆಸರು ಸಮ್ಮತು ವ ತಾಲ್ಲೂಕು.	1875–76 ಕ್ಕೆ ಬರಬೇಕಾದ ಜೋಡೀ.			ಪ್ರೊಸೆಸ್‌ಖರ್ಚುಗಳು.			ಜಮಾ ಬರತಕ್ಕ ಬಾಕಿ.			ಷರಾಗಳು.
1	ವೆಂಕಟಪ್ಪವಗೈರೇರು.	ಹುರಗಲ್‌ವಾಡಿ, ಕೊಪ್ಪ್ರಾ, ಕುಣಿಗಲ್.	117	4	4	7	0	0	124	4	0	ಖುಲ್ಲಾ ಜೋಡೀ 197 6 4 ಈ ಪೈಕಿ 80 ರೂಪಾಯಿ ವಸೂಲಾಗಿಧೆ.
2	ಅರುಣಾಚಲಭಟ್ಟ ಗೈರೇರು.	ಕೃಷ್ಣಸ್ಸಾಗರ ಅಗ್ರಹಾರ ಕುಣಿಗಲ್ ಕುಣಿಗಲ್.	102	6	0	1	0	0	103	6	0	ಖುಲ್ಲಜೋಡಿ 328 ಈ ಪೈಕಿ 225—10 ವಸೂಲಾಗಿಧೆ.

Notice of an application by Siddappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ, ತುಮಕೂರು ತಾಲ್ಲೂಕು ಕ್ಯಾತಸಂದ್ರ ಗ್ರಾಮದ ವಾಸನಾಗಿಯಿದ್ದ ಪಾತೀ ಯಾದ ಪುರಡಿಗೆರೆ ಸಿದ್ದಲಿಂಗಪ್ಪ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 2000 ರೂಪಾಯಿಗಳು ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ ಯಿವನಮಗ ಸಿದ್ದಪ್ಪ ಯಂಬುವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಸೆಪ್ಟಂಬರು ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್ಯಾರಾದರೂ ಇದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 8ನೇ ಮಾಹೆ ಆಗಸ್ಟ್ 187 ಮೊಕ್ಕಾಂ ತುಮಕೂರು.

T. E. WOODCOCK,
Offg. Dy. Commr.

ASHT SION.

ಅ ಷ

ತಾ ಸ್ಟ 1876.

ಇದರಿಂದ ತಿಳಿಯಪಡಿಸುವದೇನಂದರೆ,—ಚೀಫ್ ಕಮಿಷನರ ಸಾಹೇಬರವರ 1876ನೇ ಇಸವಿ ಫಿಬ್ರವರೀ 9ನೇ ಮರಕ್ಕಿನ 365ನೇ ನಂಬರ್ ಹುಕ್ಕುಂ ಪ್ರಕಾರ ಸನ್ ಮಜಕೂರು ಫಿಬ್ರವರೀ 12ನೇ ಮರಕುಮಿನ ಮೈಸೂರು ಗೆಜೆಟ 23ನೇ ಪುಟದಲ್ಲಿ ತಾಲಿಂಖಾನೆಗಳನ್ನ ಕ್ರಮಪಡಿಸುವ ಬಗ್ಯೆ ಛಾಪಿಸಿರುವ ತಿದ್ದುಪಾಟು ಮಾಡಿದಂತಾ ರೂಲ್ಸ್‌ಗಳು ಸನ್ 1876ನೇ ಇಸವೀ ಆಗಸ್ಟು 1ರ ಲಗಾಯತು ಈ ಡಿವಿಜನ್ನಿಗೆ ಸಂಬಂಧಪಟ್ಟ ಈ ಕೆಳಗೆ ವಿವರಿಸುವ ಷಹರ್‌ಗಳಿಗೆ ಲಗಾವ್ ಆಗುತ್ತೆಂದು ಇದರಿಂದ ಪ್ರಚುರ ಪಡಿಸಿರುತ್ತೆ.

ಮೈಸೂರು ಡಿಸ್ಟ್ರಿಕ್ಟು.

1. ಮೈಸೂರು	5. ಚಾಮರಾಜನಗರ	9. ಪೆರ್ಯಾಪಟ್ಣ	13. ಬನ್ನೂರು
2. ಶ್ರೀರಂಗಪಟ್ಣ	6. ಗುಂಡಲ್‌ಪೇಟೆ	10. ಸಾಲಿಗ್ರಾಮ	14. ಕಿರಗಾವಲ್
3. ಗಂಜಾಮು	7. ನಂಜನಗೂಡು	11. ಕಳಲೆ	
4. ಮಳವಳ್ಳಿ	8. ಹುಣಸೂರು	12. ಕನ್ನೇಗವಡನಕೊಪ್ಪಲ್.	

ಹಾಸನ ಡಿಸ್ಟ್ರಿಕ್ಟು.

15. ಹಾಸನ	19. ಕೋಣನೂರು	23. ಚನ್ನರಾಯಪಟ್ಣ	27. ಬೆಳ್ಳೂರು.
16. ಸಕಲೇಶಪುರ	20. ನರಸೀಪುರ	24. ಶ್ರವಣಬಳಗೊಳ	
17. ಮೂಡಗೆರೆ	21. ಮೇಲ್‌ಕೋಟೆ	25. ಬೇಲೂರು	
18. ಅರಕಲ್‌ಗೂಡ್	22. ಕನ್ನಂಬಾಡಿ	26. ನಾಗಮಂಗಲ	

A. C. HAY,
Commr.

MYSORE DISTRICT.

Notice of an application by Rukminiyamma for a certificate under Act XXVII of 1860.

ಮೈಸೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಶಿವಿಲ್ ಫ್ರೊ. ಮಿ. ನಂಬರ 59.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಪಾತೀಯಾದ ತನ್ನ ತಂದೆ ಮಹಾಭಾಷ್ಯ ಶ್ರೀನಿವಾಸ ಮೂರ್ತ್ಯಾಚಾರ್ರಿಗೆ ಬರಬೇಕಾದ 800 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ತಲಕಾಡು ತಾಲ್ಲೂಕು ಅಶ್ವತ್ಥಪುರದ ಅಗ್ರಹಾರದಲ್ಲಿರುವ ರುಕ್ಮಿಣಿಯಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನು ಆಗಸ್ಟು ತಿಂಗಳು 26ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದಿಧೆ ತಿಳಿಯುವದು.

ತಾರೀಖು 18ನೇ ಮಾಹೆ ಜುಲೈ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Appachar for a certificate under Act XXVII of 1860.

1876ನೇ ಇಸವಿ ಶಿವಲ್ ಮಿಸಲೇನಿಯಸ್ ಮೊಕದ್ದಮಾ ನಂಬರ್ 60.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಪಾತೀಯಾದ ತನ್ನ ತಂದೆ ಗರ್ಗೇಶ್ವರಿ ವೆಂಕಟಾಚಾರ್ರಿಗೆ ಬರಬೇಕಾದ 50 ರೂಪಾಯಿ ಯಿದರ ಬಡ್ಡಿ ಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಯಳಂದೂರು ತಾಲ್ಲೂಕು ಮದ್ದೂರಲ್ಲಿರುವ ಅಪ್ಪಾಚಾರ್ರು ಕೊಟ್ಟಿರತಕ್ಕ ಅರ್ಜಿಯನ್ನು ಆಗಸ್ಟು ತಿಂಗಳು 25ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 17ನೇ ಮಾಹೆ ಜುಲೈ 1876ನೇ ಇಸವಿ ಮೊಕ್ಕಾಂ ಮೈಸೂರು

C. J. PEARSE,
Dy. Commr.

HASSAN DISTRICT.

Notice of an application by Channakesavaiya for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆ|| ಕ|| ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ, ಹಾಸನದಲ್ಲಿ ಇರುವ ನಾಡಿಗ ಚನ್ನ ಕೇಶವಯ್ಯನೆಂಬವನು ಪಾತೀ ಆದ ತನ್ನ ಚಿಕ್ಕ ತಂದೆ ನಾಡಿಗ ರಂಗಪ್ಪನವರ ಸಾಲ 900 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ 60ನೇ ಇಸವೀ 27ನೇ ಆಕ್ಟು ಮೇರೆ ಸ

ರ್ಟಿಫಿಕೇಟ ಕೊಡಿಸಬೇಕೆಂತ ಕೊಟ್ಟ ಅರ್ಜೀ ಫೈಸಲ ಬಗ್ಗೆ ಸ್ನ ಮಜಕೂರ ಆಗಸ್ಟ್ 31ನೇ ತಾರೀಖಿನ್ನ ನಿಷ್ಕರ್ಷೇ ಮಾಡಿ ಯಿರುವದರಿಂದ ತಕರಾರ್ ಯಿರತಕ್ಕವರೆಲ್ಲ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಇದ್ದ ಮೊಕ್ಕಾ ಮಿಗೆ ರೂಬರೂ ಹಾಜರಾಗಿ ಜಾಹಿರ್ ಮಾಡಿಕ್ಕೊಳ್ಳಬೇಕು.

Notice of an application by Srinivas Rao for a certificate under Act XXVII of 1860.

ಇದರಿಂದ ತಿಳಿಯಪಡಿಸುವದೇನಂದರೆ, ಹಾಸನ ತಾಲ್ಲೂಕು ಕಂಶಿಕದಲ್ಲಿ ಯಿರುವ ಅನಂತ ಸುಬ್ಬರಾಯರ ತಮ್ಮ ಶ್ರೀನಿವಾಸರಾಯ ನೆಂಬವನು ಪಾತೀ ಆದ ತನ್ನ ಅಣ್ಣನ ಸಾಲ 900 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ 60ನೇ ಇಸವೀ 27ನೇ ನಂಬರ್ ಆಕ್ಟ ಮೇರೆ ಸರ್ಟಿಫಿಕೇಟ ಕೊಡಿಸಬೇಕೆಂತ ಕೊಟ್ಟ ಅರ್ಜೀ ಫೈಸಲ್‌ಬಗ್ಗೆ ಸ್ನ ಮಜಕೂರ ಆಗಸ್ಟ್ 31ನೇ ತಾರೀಖಿನ್ನ ನಿಷ್ಕರ್ಷೇ ಮಾಡಿ ಯಿರುವದರಿಂದ ತಕರಾರು ಇರತಕ್ಕವರೆಲ್ಲ ಮೇಲೆಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಇದ್ದ ಮೊಕ್ಕಾ ಮಿಗೆ ರೂಬರೂ ಹಾಜರಾಗಿ ಜಾಹಿರ್ ಮಾಡಿಕ್ಕೊಳ್ಳಬೇಕು.

ತಾರೀಖು 2ನೇ ಆಗಸ್ಟ್ ಸ್ನ 1876ನೇ ಇಸವೀ.

Notice of an application by Subbe Gauda for a certificate under Act XXVII of 1860.

ಇದರಿಂದ ತಿಳಿಯಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಹಾಡ್ಯದಲ್ಲಿ ಯಿರುವ ರಾಮೇಗೌಡನ ತಮ್ಮ ಸುಬ್ಬೇಗೌಡ ನೆಂಬವನು ಪಾತೀ ಆದ ತನ್ನ ಅಣ್ಣನ ಸಾಲ 500 ರೂಪಾಯಿ ವಸೂಲ್‌ಮಾಡಿ ಕೊಳ್ಳುವದಕ್ಕೆ 60ನೇ ಇಸವೀ 27ನೇ ಆಕ್ಟ ಮೇರೆ ಸರಟಫಿಕೇಟ ಕೊಡಿಸಬೇಕೆಂತ ಕೊಟ್ಟ ಅರ್ಜೀ ಫೈಸಲ ಬಗ್ಗೆ ಸ್ನ ಮಜಕೂರ್ ಸೆಪ್ಟಂಬರ್ 11ನೇ ತಾರೀಖಿನ್ನ ನಿಷ್ಕರ್ಷೇ ಮಾಡಿ ಯಿರುವದರಿಂದ ತಕರಾರು ಯಿರತಕ್ಕವರೆಲ್ಲ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಯಿದ್ದ ಮೊಕ್ಕಾ ಮಿಗೆ ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳಬೇಕು.

ತಾರೀಖು 10ನೇ ಆಗಸ್ಟ್ 1876.

Notice of destruction of Judicial records.

ನರಶಿಂಹ್ಮಾಪುರ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ ಕೋರ್ಟುನಿಂದಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಜರತ್ ಅಷ್ಟಗ್ರಾಮ ಡಿವಿಜನ್ ಕಮ್ಮಿಷನರ ಸಾಹೇಬರವರ ಏಪ್ರೆಲ್ 20ನೇ ಮರ್ಸ್ತುಂ 53ನೇ ನಂ|| ಡಾಕಿಟ ಅನುಸರಿಸಿ ಇಲಾಖಾ ಹಾರ್ಸ ಡಿ|| ಡೆ|| ಕಮ್ಮಿಷನರ ಸಾಹೆಬರವರಿಂದ ಸಾದರಾಗಿ ಇರುವ ಮೇ 18ನೇ ಮ|| ಕ್ರಿಮಿನಲ್ 1283ನೇ ನಂಬರ್ ಹುಕುಂಮೇರೆಗೆ ತಾಲ್ಲೂಕು ಮಜಕೂರಿನಲ್ಲಿರುವ ರಿಕಾರ್ಡು ಪೈಕಿ 5 ವರುಷಗಳಿಗೆ ಮೇಲ್ಪಟ್ಟಬಾಬತು ಶಿವಿಲ್ ಮತ್ತೂ ಕ್ರಿಮಿನಲ್ ಬಾಬಿನ ಕಟ್ಟುಗಳು ವಗೈರೆ ಮಾರ ರ್ಜನಲ್ಲಿ ಕಂಡ ಕಾಗದಗಳನ್ನೂ ಬರುವ ಶಪಟಂಬರ್ 5ನೇ ತಾರೀಖಿನಲ್ಲಿ ಕಸಬಾ ಮೊಕ್ಕಾಂ ಕೋರ್ಟು ರೂಬರೂ ಜಲಾಯಿಸಲೂ ನಿಷ್ಕರ್ಷೇ ಮಾಡಿ ಇರುವದರಿಂದ ಮೇಲ್ಕಂಡ ರಿಕಾರ್ಡಿನಲ್ಲಿ ಶೇರಿ ಇರುವ ದಸ್ತೈವಜು ಮುಂತಾದ ಕಾಗದಗಳನ್ನೂ ತೆಗದುಕೊಳ್ಳಲೂ ಅಪೇಕ್ಷೆವುಳ್ಳವರು ಆವಾಯಿದೇವಳಗಾಗಿ ಹಾಜರಾಗಿ ಪಡೆಯಬಹುದು. ಅನಂತರ ಅಪೇಕ್ಷಿಸಿದರೆ ದೊರೆಯಲಾರದೆಂದು ಇದರಿಂದ ಪ್ರಸಿದ್ಧಪಡಿಸಿಇಧೆ.

ಸ್ನ 1870ನೇ ಇಸವೀ ಬಾಬತು ಶಿವಿಲ್.

51 ಅರ್ಜಿನಾಲ್ ಕಟ್ಟುಗಳು, ದಾವಾ ಅರ್ಜೀ ಫೈಸಲ್, ಶಿವಾಯಿ ಬಾಕಿಕಾಗದಗಳು.
20 ಅಮಲ್‌ಜಾರೀಕಟ್ಟುಗಳು.
11 ರಿಜಿಸ್ಟರ್‌ಗಳು.
106 ಲಿಖ್ತಗಳು.
22 ಚಿಲ್ಲರೆ ರಿಪೋರ್ಟುಗಳು.

ಕ್ರಿಮಿನಲ್‌ಬಾಬತು.

140 ಅರ್ಜಿನಲ್ ಕಟ್ಟುಗಳು, ಜಡ್ಜಿಮೆಂಟ್, ಶಂಟರ್ನಸಿವಿನ ಬಾಕೀ ಕಾಗದಗಳು.
26 ರಿಜಿಸ್ಟರಗಳು.
300 ಲಿಖ್ತಗಳು.
256 ಚಿಲ್ಲರೆ ರಿಪೋರ್ಟುಗಳು ವಗೈರೆ.

ತಾರೀಖು 8—8—76ನೇ ಮೊಕ್ಕಾಂ ಕಸಬಾ.

H. E. MOTTET,
Dy. Commr.

NAGAR DIVISION.

Notice of destruction of old Judicial records of the Nagar Division Commissioner's Court.

ನಗರ ಡಿವೀಜನ್ ಕಮ್ಮಿಷನರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಳೇ ಜೂಡಿಷಲ್ ರಿಕಾರ್ಡ್‌ಗಳನ್ನು ನಾಶಪಡಿಸತಕ್ಕ ಬಗ್ಗೆ ಸರ್ 1867ನೇ ಇಸವಿ ಆಗಸ್ಟ್ 27ನೇ ಮರಕುಂ ಮೈಸೂರು ಗೆಜೆಟ್ ಪಾನು 460ರಲ್ಲು ಘಾಯಿಷ್ ಮಾಡಿರುವ ನಿಬಂಧನೆ ಪ್ರಕಾರ ಮತ್ತು ಸರ್ 1876ನೇ ಜುಲೈ 27ನೇ ಮರ್ಕುಂ ಜೂಡಿಷಲ್ ಕಮ್ಮಿಷನರ್ ಸಾಹೆಬರವರ ನಂಬರ್ 294—74ನೇ ಲೆಟರ್ ಪ್ರಕಾರ ಸಹಾ ನಗರ ಡಿವೀಜನ್ ಕಮ್ಮಿಷನರ್ ಕೋರ್ಟಿಗೆ ಸಂಬಂಧಪಟ್ಟ ಸರ್ 1862 –63ನೇ ಇಸವಿ ಲಾಗಾಯತು 1870ನೇ ಇಸವಿ ಆಖೈರ್ ವರಿಗಿನ ಬಾಬತು ಜೂಡಿಷಲ್ ರಿಕಾರ್ಡ್‌ಗಳನ್ನು ನಾಶ ಪಡಿಸುವದರಿಂದ.

ವ್ಯಾಜ್ಯಗಳಿಗೆ ಸಾಧಕವಾಗಿ ಕಕ್ಷಿಗಾರ್ರು ದಾಖಲ್ ಮಾಡಿದ ದಸ್ತೈವಜುಗಳನ್ನು ವಾಪಸ್ ಪಡಿಯಬೇಕಾಗಿ ಯಿದ್ದಲ್ಲಿ ಈ ಲಾಗಾಯತು ವಂದು ತಿಂಗಳ ವಳಗಾಗಿ ಈ ಕೋರ್ಟಿನ ಮುಂದೆ ಹಾಜರಾಗಿ ಕ್ರಮಪ್ರಕಾರ ವಾಪಸ್ ಪಡಿಯಬಹುದು.

ತಾರೀಖು 8ನೇ ಆಗಸ್ಟು ಸರ್ 1876ನೇ ಇಸವಿ.

J. A. CAMPBELL,
Commissioner.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಪೊಲೀ ಇಲಾಖಾ.

ತಾರೀಖು 4ನೇ ಅಗಸ್ಟ್ 1876.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಬೆಂಕೀಪುರ ತರೀಕೆರೆ ಇವುಗಳ ಮಧ್ಯೆ ಇರುವ ಕೆರೇ ಹಳ್ಳಿಯ ಕೆರೇ ಕಟ್ಟೇಮೇಲೆ ಇಳದಿದ್ದ ಕೆಲವು ಭಂಡಿಗಳಿಂದ 1876ನೇ ಜುಲೈ 19ನೇ ಮರ್ಕುಂ ರಾತ್ರಿ ಶಿವಮೊಗ್ಗಾ ಕಸಬಾ ಷರಾಫ್ ರಂಗಪ್ಪನಬಾಬತು ಬಟ್ಟೆಗಳನ್ನು ಕಳವು ಮಾಡಿಕೊಂಡು ಹೋಗಿರುವ ಮೊಕದ್ದಮೆಯಲ್ಲಿ ಸೇರಿದ ತಕಸೀರ್ ವಂದರ ಪತ್ತೆ ಆಗಲಿಕ್ಕೂ ಅವರ ಮೇಲೆ ತಪ್ಪು ಸ್ಥಾಪನೆಆಗಲಿಕ್ಕೂ, ಸಹಾ ಸಾಧಕವಾದ ಬಾತಮೀ ಕೊಡುವ ಮನುಷ್ಯನಿಗೆ 20 ರೂಪಾಯಿಗಳ ಇನಾಂ ಸದರೀ ರಂಗಪ್ಪನಿಂದ ಕೊಡಲ್ಪಡುವದು.

Notice of an application by K. Ramachar for a certificate under Act XXVII of 1860.

ಶಿವಮೊಗ್ಗಾ ಡಿ|| ಡೆ|| ಕ|| ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಂನ ತಮ್ಮ ಗೋಪಾಲಾಚಾರಿಯು ಪಾತೀಆಗಿ ಇರುವದ್ದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೆವೀ ಸಾಲದಬಾಬತು 260 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ ಸರಟಿಫಿಕೇಟ್ ಕೊಡಿಸಬೇಕಾಗಿ ಶಿಕಾರಿಪುರದ ಕಸಬಾದಲ್ಲಿ ಇರುವ ಕುಣ್ಣಗಿ ರಾಮಾಚಾರ್ಯನು ಅಪ್ಲಿಕೇಷನ್ ಕೊಟ್ಟು ಸಂಗತಿ ವಿಚಾರಣೆಗೆ ಬರುವ ಆಗಸ್ಟ್ 31ನೇ ದಿನ ಹಿಯರಿಂಗ್ ನಿಷ್ಕರ್ಷೆ ಮಾಡಿಇಧೆ ತಕರಾರು ಉಳ್ಳವರು ಆದಿನ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ. ತಾರೀಖು 29ನೇ ಜುಲೈ 1876ನೇ ಇಸವಿ ಮೊಕ್ಕಾಂ ಶಿವಮೊಗ್ಗ.

Notice of an application by Chandappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—ತನ್ನ ತಂದೆ ಕುಂಶಿಯಲ್ಲಿ ಯಿದ್ದು ಹೊಳಹೊಂನೂರು ಮುರಿಗಪ್ಪ ಪಾತೀ ಆಗಿ ಯಿರುವದ್ದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವೀ ಸಾಲದ ಬಾಬತು 500 ರೂಪಾಯಿ ತಾನು ವಸೂಲ್ ಮಾಡಿ ಕೊಳ್ಳುವದಕ್ಕೆ ತನ್ನ ಹೆಸರಿಗೆ ಸರಟಿಫಿಕೇಟ್ ಕೊಡಿಸಬೇಕೆಂದು ಹೊನ್ನಾಳಿ ತಾಲ್ಲೂಕು ಕುಂಶಿಯಲ್ಲಿ ಯಿರುವ ಹೊಳೆಹೊಂನೂರು ಚಂದಪ್ಪನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಸೆಪ್ಟಂಬರ್ ತಾರೀಖು 14ನೇ ದಿವಸ ಹಿಯರಿಂಗ್ ನಿಷ್ಕರ್ಷೆ ಮಾಡಿಯಿಧೆ ತಕರಾರುವುಳ್ಳವರು ಆದಿನ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ಬತಾರೀಖು 8ನೇ ಆಗಸ್ಟು ಸರ್ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

W. J. CUNINGHAM,
For Offg. Dy. Commr.

KADUR DISTRICT.

Notice of sale of occupied lands in satisfaction of Government dues.

ಕಡೂರು ಡಿಸ್ಟ್ರಿಕ್ಟ್ ಡೆ॥ ಕಮ್ಮಿಷನರವರ ಕೋರ್ಟಿನಿಂದ.

1. ಇದರಿಂದ ತ್ರಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ ಈ ಕೆಳಗೆ ಕಂಡ ಜಮೀನ್‌ಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ್ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ್ ತರೀಕೆರೆ ಬಾಣಾವಾರ ತಾಲ್ಲೂಕು ಆಯಾ ಗ್ರಾಮದಲ್ಲಿ ಚಾಲ್ತೀ ಇಸವೀ ಸೆಪ್ಟಂಬರ್ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಆಯಾ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಚಡ ದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಸೀಲ್‌ವಾರ್ ತೋರಿಸಲ್ಪಟ್ಟ ಪ್ರಕಾರ ರೂ॥ 95 ಆ॥ 14 ಪೈ॥ 8 ಗಳಾಗುತ್ತವೆ. ಹರಾಜ್ ನಿಬಂಧನೆಗಳು ಹರಾಜ್ ಕಾಲದಲ್ಲಿ ತಿಳಿಸಲ್ಪಡುತ್ತವೆ.

ತಾಲ್ಲೂಕು.	ಗ್ರಾಮ.	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು.	ಜಮೀನು ತರೀಯೋ, ಖುಷ್ಕೀಯೋ, ಯಾಬಾಗಾಯಿತೋ, ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ॥ ಕಟ್ಟೊಗಳು ಯಾವದಾದರೂ ಯಿರುತ್ತವೆಯೋ.	ಜಮೀನ್. ನಂಬರ್.	ಜಮೀನ್. ಹೆಸರು	ಅಂದಾಜಾ ಬೀಜವರೀ. ಖಂ.	ಕೂ.	ಪ.	ಕಂದಾಯ. ರೂ.	ಆ.	ಪೈ.	ಸಾಲ್ ಮಜಕೂರಿಗೆ ಕ್ರಯದಾರನಿಂದ ಸಲ್ಲತಕ್ಕ (ಬಾಕೀ ಶಿವಾಯಿ) ಮೊಬಲಗು.		
			1874–75ನೇ ಇಸವೀ ಗೋಸ್ಕರ.		ಬಾಕೀ									
ತರೀಕೆರೆ.	ಸಾವತ್ತನಹಳ್ಳಿ	ಗುರುಸಿದ್ದಶೆಟ್ಟಿ	ಖುಷ್ಕೀ ಜಮೀನ್	35	ಹೊಲ	0	0	0	7	10	0			
				29—42	ಡಿಟೋ	0	0	0	11	5	6	0	1	0
				39—101	ಡಿಟೋ	0	0	0	11	5	6			
	ಕಾಟಿಗನೆರೆ	ರೇವಣ್ಣ	ಡಿಟೋ	20	ಡಿಟೋ	0	0	0	22	11	0	1	8	0
	ಮಾಳೇನಹಳ್ಳಿ	ನಿರಂಜಿಸಿ ಈರಣ್ಣ	ಡಿಟೋ	25	ಡಿಟೋ	0	0	0	22	11	0			
				45	ಡಿಟೋ	0	0	0	3	11	8			
				46	ಡಿಟೋ	0	0	0	3	1	1	1	0	0
	ಡಿಟೋ	ಶಂಕರಲಿಂಗೈಯನ ಹೆಂಡತಿ ಭಾಗೀರಥಿಯಮ್ಮ	ಡಿಟೋ	79	ಡಿಟೋ	0	0	0	3	12	9			
				80	ಡಿಟೋ	0	0	0	3	8	5	0	8	0
ಕಡೂರು.	ಕಡೂರು	ದೇವೋಜಿರಾಯರನಾರಾಯಣರಾವ್	ಡಿಟೋ	505	ಡಿಟೋ	0	2	5	2	10	2	0	8	0
				506	ಡಿಟೋ	0	1	3	0	9	11			

ಹರಾಜು ತಾರೀಖುಗಳು

ಸಾವತ್ತನಹಳ್ಳಿ ಬಾಕೀದಾರನ ಹಿಡುವಳಿ ಹರಾಜ್	7–9–76	ಮಾಳೇನಹಳ್ಳಿ ಬಾಕೀದಾರನ ಹಿಡುವಳೀ ಹರಾಜ್	8–9–76
ಕಾಟಿಗನೆರೆ ಬಾಕೀದಾರನ ಹಿಡುವಳೀ ಹರಾಜ್	7–9–76	ಕಡೂರು ಬಾಕೀದಾರನ ಹಿಡುವಳೀ ಹರಾಜ್	7–9–76

Notice offering a reward of Rs. 500 for the discovery of property stolen from the house of one Venkatgiriyappa at Shringeri on the night of the 16th July 1876.

ಕೊಪ್ಪ ತಾಲ್ಲೂಕು ಶ್ರಿಂಗೇರಿಯಲ್ಲಿರುವ ನಗರದ ಮಂಜೈಯನ ಮಗ ವೆಂಕಟಗಿರಿಯಪ್ಪನ ಬಾಬತು ಮನಿಗೆ ಜುಲೈ ತಾರೀಖು 16ನೇ ರಾತ್ರಿ ಕಳ್ಳರು ಕನ್ನಹಾಕಿ ಕಳವು ಮಾಡಿಕೊಂಡು ಹೋದ ಮಾಲ್ ಪಟ್ಟಿ, ಫಿರ್ಯಾದಿ ವೆಂಕಟಗಿರಿಯಪ್ಪನು ಈ ಮಾಲ್ ಪತ್ತೇಮಾಡಿ ಕೊಟ್ಟವರಿಗೆ 500 ರೂಪಾಯಿ ಇನಾಂ ಕೊಡುವದಾಗಿ ತಿಳಿಸಿರುತ್ತಾನೆ.

ಮಾಲ್‌ಪಟ್ಟಿಯನ್ನು ಮಾಹೇ ಮಜ್ಕೂರ 5ನೇ ಮುರ್ಕ್ಕುಂ ಗೆಜಟಿನ 389—391 ವರಿಗಿನ ಪೇಜುಗಳನ್ನು ನೋಡಿಕೊಳ್ಳತಕ್ಕದ್ದು.

Descriptive roll of prisoners absconded.

ಯಾದಾಸ್ತು ಕೊಪ್ಪದ ತಾಲ್ಲೂಕು ಶ್ರಿಂಗೇರೀ ಕಸಬಾದಲ್ಲಿ ಯಿರುವ ನಗರದ ವೆಂಕಟಗಿರಿಯಪ್ಪನ ಮನೇಯಲ್ಲಿ ಜುಲೈತಾ|| 16ನೇ ರಾತ್ರಿ ನಡೆದ ಕನ್ನ ಕಳವು ಮೊಕದ್ದಮಾದಲ್ಲಿ ಮಾಲು ಸಿಹಿ ಪರಾರೀಯಾದ ಖೈದೀರ ಚಹರೇ ಪಟ್ಟಿ.

ಖೈದೀ ಹೆಸರು	ಜಾತಿ	ತಂದೇ ಹೆಸರು	ವಯಸ್ಸು	ಯತ್ತರ ಅಡಿ	ಅಂ.	ಯಾವ ಗ್ರಾಮದ ವಾಸಸ್ಥ	ಮುಖ್ಯವಾದ ಗುರ್ತುಗಳು.
ಅಹಮ್ಮದು ಖಾನ್	ಮುಸಲ್‌ಮಾನ್ ಖಾದರ್	ಗೊತ್ತಿಲ್ಲ	28	5	6	ಪೆಷಾವರ್ ಪಂಜಾಬುಸೀಮೆ	ಕೆಂಪುವರ್ಣದ ಸಾದಾರಣ ತರಹಾದ ಆಳು ಗಡ್ಡಾ ಮೀಸೆ ಬಿಟ್ಟಿಧಾನೇ ಹಿಂಭಾಗದ ತಲೆಯಲ್ಲಿ ಗಿರ್ದ ಬಿಟಿಧಾನೆ ಸುಮಾರು 2½ ಅಂಗುಲವುದ್ದ ಸದರೀ ಕೂದ್ಲು ಬೆಳದಿದೆ ಬಲದಕೈ ಹೆಬ್ಬೆಟ್ಟಿಗೆ ಸಮನಾಗಿ ಮೇಲುಕಡೆ ಮುಂಗೈಮೇಲೆ 1 ರೂಪಾಯಿ ಅಗಲಾನೆ ಕುರುವಿನ ಕಲೆಯಿಧೆ ತಲೆಗೆ ಕೆಂಪು ಬನಾತಿನ ಕರೀ ಕುಚ್ಚಿನ ಟೋಪೀ ಹಾಕಿ ಯಿರುತ್ತಾನೆ ಈ ಜಾತಿ ಜನರು ಧರಿಸುವ ಪದ್ಧತಿ ಪ್ರಕಾರ ಬಿಳೆ ಸಾದಾ ಗಾಡದ ಬಹಳ ಸೊಡ್ಲವಾಗಿ ಇರುವ ಷರಾಯಿ ಮೊಳಕಾಲು ವರಿಗೂ ಯಿರುವ ಜುಬ್ಬಾ ತೊಟ್ಟಿರುತ್ತಾನೆ ಇವನ ಬಳಿ ಇಂಗು ಹಾಕಲಿಕ್ಕೆ ವುಪಯೋಗಿಸಿದ್ದ ವಂದು ಗೋಣಿ ಚೀಲಾ ಯಿಧೆ ಇಂಗು ಮಾರುವ ಕಸಬು ಮನುಷ್ಯ
ಅಬ್ಬಾಸ್ ಖಾನ್	ಡಿಟೋ	ಡಿಟೋ	34	5	8	ಡಿಟೋ	ಯಣೆಗೆಂಪು ವರ್ಣದ ದಪ್ಪತರಹಾದ ಆಳು ದಾಡಿ ಮೀಸೆ ಬಿಟ್ಟಿಧಾನೆ ತಲೆಯಲ್ಲಿ ಕೂದ್ಲು ಮುಂತಾದ್ದು ಬಿಟ್ಟಿಲ್ಲಾ ಇವನು ಕೆಂಪು ಬನಾತಿನ ಕುಚ್ಚು ಯಿಲ್ಲದಿದ್ದ ಟೋಪಿ ಹಾಕಿ ಬದಸ್ತೂರ ಬಿಳೀ ಷರಾಯಿ ಜುಬ್ಬ ತೊಟ್ಟಿರುತ್ತಾನೆ ಇವನ ಬಳಿಯಲ್ಲಿ ವಂದಕ್ಕು ಇಂಗು ಹಾಕುವ ಗೋಣೀ ಚೀಲ ಯಿಧೆ.

Notice of a torch-robbery committed in the house of one Nirvani, an oil man at Myarahalli, Chikmagalur Taluk, on the night of the 29th July 1876, when property including gold, silver, cloths &c., valued at Rs. 139—3—0, is said to have been stolen.

ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಕಳಸಾಪುರದ ಸಬ್ ಸ್ಟೇಷನ್‌ಗೆಸೇರಿದ ಈಶ್ವರಹಳ್ಳಿ ದಾಖಲೆ ಮ್ಯಾರಹಳ್ಳಿಯಲ್ಲಿರುವ ಗಾಣಿಗರ ನಿರ್ವಾಣಿಮನೆಗೆ 1876ನೇ ಇಸವಿ ಜುಲೈ 29ನೇ ಮುರ್ಕ್ಕುಂ ರಾತ್ರಿ ಮಷಾಲ್‌ಕಳ್ಳರು ನುಗ್ಗಿ 139—3 ಆಣೆ

ಕ್ರಯಬಾಳತಕ್ಕ ಬಂಗಾರ ಬೆಳ್ಳಿನಗಗಳು ಬಟ್ಟೆ ವಗೈರೆಗಳನ್ನೂ ಕದ್ದುಕೊಂಡು ಹೋಗಿರುವದಾಗಿ ತಿಳಿಯಬಂದಿರುವದ್ದರಿಂದ ಮಾಲ್ ಪತ್ತೇಬಗ್ಗೆ ಪ್ರಸಿದ್ಧಪಡಿಸಿಥೆ.

ತಾರೀಖು 7ನೇ ಆಗಸ್ಟ್ 1876.

P. Krishna Rao, *Dy. Commr.*

Notice of destruction of old Judicial records of the Judicial Assistant's Court, Kadur District.

ಕಡೂರು ಡಿಸ್ಟ್ರಿಕ್ಟ್ ಜ್ಯಾಡಿಷಿಯಲ್ ಅ॥ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಜುಡಿಷಿಯಲ್ ಕಮ್ಮಿಷನರ್ ಸಾಹೇಬರವರ ಸರ್ 1867ನೇ ಇಸವಿ ಶಪಟಂಬರ 7ನೇ ಮರ್ಕುಂ ರೂಲ್ಸ್ 1 ಸರ್ 1876ನೇ ಇಸವಿ ಜೂನ್ 27ನೇ ಮರಕುಂ ನಂಬರ 594—74ನೇ ಲೆಟರ ಮತ್ತು ನಗರ ಡಿ॥ ಕಮ್ಮಿಷನರ ಸಾಹೇಬರವರ ಸರ್ ಮಜಕೂರು ಜೂಲೈ 6ನೇ ಮರ್ಕುಂ 169ನೇ ನಂಬರ್ ಡಾಕಿಟೆ 1 ಸಹಾ ಅನುಸರಿಸಿ ಈ ಕೋರ್ಟು ರಿಕಾರ್ಡಿನಲ್ಲಿರತಕ್ಕ ಸರ್ 1867—68—69 ಈ 3 ಸಾಲು ಸಿವಿಲ್‌ರಿಕಾರ್ಡುಗಳು ಈ ಮಾರ್ಜನ್ನಲ್ಲಿ ನಮೂದಾಗುವ ಕೋರ್ಟುಗಳಬಾಬತು ಸರ್ ಮಜಕೂರು ನವೆಂಬರ್ ತಾರೀಖು 30ರಲ್ಲು ಜಲಾಯಿಸುನದ್ದರಿಂದ ಆ ಕಟ್ಟುಗಳಲ್ಲಿರತಕ್ಕ ದಸ್ತೈವಜು ವಗೈರೆಗಳನ್ನು ವಾಪಸುಪಡದು ಕೊಳ್ಳಲಾಪೇಕ್ಷೆಯುಳ್ಳ ಕಕ್ಷಿಗಾರವಗೈರೆ ಜನರು ಸದರೀ ವಾಯಿದೆವಳಗಾಗಿ ಈ ಕೋರ್ಟುಗೆ ಹಾಜರಾಗಿ ತೆಗದುಕೊಳ್ಳಬಹುದು. ಹಾಗೆ ಹಾಜರಾಗಿ ತೆಗದುಕೊಳ್ಳದೆ ಹೋದರೆ ಸದರೀ ವಾಯಿದೆ ಗುಜರಾದವಡನೆ ಜಲಾಯಿಸಲ್ಪಡುತ್ತೆ.

(Margin:) ಕಡೂರು ಡಿ॥ ಡಿಪ್ಯುಟಿ ಸೂ॥ ಕೋರ್ಟು. ಚಿಕ್ಕಮಗಳೂರ್ ತರಫ಼ಅ॥ ಸೂ॥ ಕೋರ್ಟು. ಕಡೂರು ತರಫ಼ಅ॥ ಸೂ॥ ಕೋರ್ಟು. ಕಡೂರು ಡಿ॥ ಜ್ಯೂ॥ ಅ॥ ಕ॥ ಕೋರ್ಟು ಬಾಬತು ಸರ್ 1869ನೇ ಇಸವಿ,

ತಾರೀಖು 9ನೇ ಆಗಸ್ಟ್ ಸರ್ 1876ನೇ ಇಸವಿ ಚಿಕ್ಕಮಗಳೂರು.

B. Srinivasaiengar,
Judl. Asstt. Commr.

ಸರ್ 1876ನೇ ಇಸವಿ ಜೂಲೈ ತಿಂಗಳ ಕಾಲಸ್ಥಿತೀ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ,—ಈ ತಿಂಗಳಲ್ಲಿ ಕೊಂಚ ಮಳೆ ಬಿತ್ತು, 60 ದೊಡ್ಡ ಮತ್ತು 181 ಚಿಕ್ಕ ಕೆರೆಗಳಿಗೆ ಮಾತ್ರ ಕೊಂಚವಾಗಿ ನೀರು ಬಂದಿರುತ್ತೆ.

ಫಸಲ್,—ಈ ತಿಂಗಳಲ್ಲಿ ಮಳೆ ಬೀಳುವದಕ್ಕೆ ಬಹಳವಾಗಿ ಆಲಸ್ಯವಾದ್ದರಿಂದ ಹವಾ ಚನ್ನಾಗಿರಲಿಲ್ಲ, ಅನೇಕ ಸ್ಥಳಗಳಲ್ಲಿ ಫಸಲ್ ಬಾಡಿದ ಹಾಗೆ ಕಾಣುತ್ತಾಯಿತ್ತು, ಆದಾಗ್ಯೂ ಈಚಿಗೆ ಕಾಲಕ್ಕೆ ಸರಿಯಾಗಿ ಬಿದ್ದ ಮಳಯಿಂದ ಫಸಲ್‌ಗಳು ಬಹಳವಾಗಿ ತಲೆಯತ್ತಿ ಕೊಂಡವು. ರಾಗಿ, ಅವರೆ, ತೊಗರಿ, ಸಾಮೆ, ಭತ್ತ, ಹರಳು ಇವು ಪೇರಾವಾಗಿರುತವೆ. ವೈಶಾಖೀ ಭತ್ತ ಕಟಾವಾಗಿರುತ್ತೆ.

ಆರೋಗ್ಯ,—ಸಾಧಾರಣವಾಗಿ ಚನ್ನಾಗಿತ್ತು. ನೆಲಮಂಗಲ, ಮಾಗಡೀ, ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳಲ್ಲಿ ಖೈಜುಲಾಬ್ ವ್ಯಾಪಿಸಿತ್ತು.

ಜನಸಾವು,—468 ಮಂದಿ ಸತ್ತರು ಜೂನ್ ತಿಂಗಳಲ್ಲಿ 406 ಸತ್ತರು.

ಜಾನವರ್,—ಈ ಕೆಳಗೆ ನಮೂದಿಸಿರುವ ಕಾರಣಗಳಿಂದ 3230 ಜಾನವರ್ ಸತ್ತವು. ಜೂನ್ ತಿಂಗಳಲ್ಲಿ 2248 ಹೋದವು.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗೋಮಾರಿ ರೋಗದಿಂದ	64	ಅಡವೀ ಮೃಗಗಳಿಂದ ಕೊಲ್ಲಲ್ಪಟ್ಟವು	141
ಯಿತರ ರೋಗಗಳಿಂದ	3,025	ಜುಮ್ಲಾ	3,230.

ಜಮೀನು,—2883—9—7 ಗಳ ಕಂದಾಯ ಬಾಳುವ ಜಮೀನು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟಿರುತ್ತವೆ.

L. Ricketts,
Offg. Dy. Commr.

ಕೋಲಾರ ಡಿಸ್ಟ್ರಿಕ್ಟು.

ಮಳೆ—ಈ ತಿಂಗಳಲ್ಲಿ ಸರಾಸರಿ 2 ಇಂಚ್‌ಗಳು 12¼ ಸೆಂಟ್‌ಗಳ ಮಳೆ ಬಿತ್ತು ಹವಾ ಸಾಧಾರಣವಾಗಿ ಮೋಡವಾಗಿ ಆಗಾಗ್ಗೆ ಬಿರುಘಾಳಿಯಿಂದ ಸೇರಿಯಿತ್ತು.

ಜಮೀನ್—ಈ ತಿಂಗಳಲ್ಲಿ 4386—2—8 ಪೈ ಕಂದಾಯವುಳ್ಳ ಜಮೀನ್ ಸಾಗುವಳಿಬಗ್ಗೆ ತೆಗದು ಕೊಳ್ಳಲ್ಪಟ್ಟಿತು ಜಮೀನ್‌ಗಳಿಗೆ ರಾಜೀನಾಮೆ ಬರಲಿಲ್ಲವು. ರಾಗಿ, ಅವರೆ, ತೊಗರಿ, ಭತ್ತ ಇವು ಈ ತಿಂಗಳಲ್ಲಿ ಪೇರಾವಾದವು ಯಾವ ಫಸಲೂ ಕಟಾವಾಗಲಿಲ್ಲ.

ಬೆಳೆ—ಮಳೆ ಯಿಲ್ಲದ್ದರಿಂದ ಡಿಸ್ಟ್ರಿಕ್ಟು ಮುಳೆ ಬೆಳೆಯಲ್ಲಿರುವ ಫಸಲ್‌ಗಳು ಒಳ್ಳೇ ಸ್ಥಿತಿಯಲ್ಲಿಲ್ಲವು.

ಆರೋಗ್ಯ—ಕಳದ ತಿಂಗಳಿಗಿಂತ ಈ ತಿಂಗಳಲ್ಲಿ ಜ್ವರೋಪದ್ರವವು ಹೆಚ್ಚಾಗಿತ್ತೆಂಬದು ವಿನಾ ಮಿಕ್ಕ ವಿಷಯದಲ್ಲಿ ಜನಾರೋಗ್ಯವು ಸಾಮಾನ್ಯವಾಗಿ ಚೆನ್ನಾಗಿತ್ತು· ಉಖಾಲ್ ಜುಲಾಬ್ ಉಪದ್ರವವು ಕಮ್ಮಿಯಾಗುತ್ತಲಿಧೆ. ಇದರಿಂದ 23 ಮಂದಿ ಮೃತಪಟ್ಟರು, ಕಳದ ತಿಂಗಳಲ್ಲಿ 60 ಮಂದಿ ಹೋದರು. ಇತರಕಾರಣಗಳಿಂದ ಮೃತಪಟ್ಟವರ ತಪಸೀಲ್.

	1876ನೇ ಜೂನ್ ತಿಂಗಳಲ್ಲಿ	ಜುಲೈ ತಿಂಗಳಲ್ಲಿ		1876ನೇ ಜೂನ್ ತಿಂಗಳಲ್ಲಿ	1876ನೇ ಜುಲೈ ತಿಂಗಳಲ್ಲಿ
ಜ್ವರದಿಂದ	289	317	ಅಕಸ್ಮಾತ್ ವ ಜಖಂಗಳಿಂದ	20	10
ಸಿಡುಬಿನಿಂದ	7	6	ಇತರ ರೋಗಗಳಿಂದ	140	174
ಹೊಟ್ಟೇನೋವಿನಿಂದ	30	30			

ಈ ತಿಂಗಳಲ್ಲಿ 477 ಜನನಗಳಾದವು ಜೂನ್ ತಿಂಗಳಲ್ಲಿ 398

ಜಾನವರ್—ಕಾಲ್ನಡೆಗಳು ಜೂನ್ ತಿಂಗಳಗಿಂತಲೂ ಜುಲೈ ತಿಂಗಳಲ್ಲಿ ಜಾಸ್ತಿಯಾಗಿ ಸತ್ತವು. ಅಂದರೆ ಈ ಕೆಳಗೆ ನಮೂದಿಸಲ್ಪಡುವ ತಪಶೀಲ್‌ಮೇರೆ ಈ ತಿಂಗಳಲ್ಲಿ 2741 ಆ ಹಿಂದಿನ ತಿಂಗಳಲ್ಲಿ 2483 ಈ ಮೇರೆ ಸತ್ತವು.

	1876ನೇ ಜೂನ್ ತಿಂಗಳಲ್ಲಿ	1876ನೇ ಜುಲೈ ತಿಂಗಳಲ್ಲಿ		1876ನೇ ಜೂನ್ ತಿಂಗಳಲ್ಲಿ	1876ನೇ ಜುಲೈ ತಿಂಗಳಲ್ಲಿ
ಹಸುಗಳು ಮತ್ತು ಹೋರಿಗಳು	773	763	ಕುದರೆಗಳು	15	24
ಯುಮ್ಮೆ ಕೋಣಗಳು	219	229	ಕತ್ತೆಗಳು	24	64
ಮೇಕೆ ಮತ್ತು ಕುರಿಗಳು	1452	1661	ಜಮ್ಲಾ	2483	2741

ನಿರ್ಖು—ಆಹಾರ ಜಿನಿಸಿಗಳ ನಿರ್ಖುಗಳು ಬಂದೇಪ್ರಕಾರವಾಗಿಧೆ.

P. N. PURNAIYA,
For Dy Commr.

ತುಮಕೂರು ಡಿಸ್ಟ್ರಿಕ್ಟು.

ಮಳೆ—ಸದರೀ ತಿಂಗಳಲ್ಲಿ ದರೋಬಸ್ತು ತಾಲ್ಲೂಕುಗಳೊಳಗೂ ಮಳೆ ಬಿತ್ತು, ಹೆಡ್ ಕ್ವಾರ್ಟರ್‌ನಲ್ಲಿ 4 ಅಂಗುಲವೂ 44 ಸೆಂಟೆಗಳ ಮಳೆ ಅಳೆಯಲ್ಪಟ್ಟಿತು ಸದರೀ ತಿಂಗಳ ಪೈಕೀ ಕಾಲವಾಸಿ ದಿನಗಳು ತುಮಕೂರಲ್ಲಿ ಬಹಳವಾಗಿ ತುಂತುರು ಮಳೆ ಬಿತ್ತು ಪ್ರಾಯಶಃ ಆ ತಿಂಗಳಲ್ಲಿ ಬಿರುಗಾಳಿ ತುಂತುರು ಮಳೆ ಸಹಿತ ಮೋಡ ಮುಚ್ಚಿಕೊಂಡಿತ್ತು.

ಫಸಲ್—ಡಿಸ್ಟ್ರಿಕ್ಟಿನ ದರೋಬಸ್ತು ತಾಲ್ಲೂಕುಗಳಲ್ಲೂ ಮುಂಗಾರೀ ಫಸಲ್ ಪೇರಾವಾಯಿತು ತುಮಕೂರು, ಮದ್ದಗಿರಿ ಈ ತಾಲ್ಲೂಕುಗಳಲ್ಲಿ ಗಿಡಗಳಿಗೆ ಕೆಲವುಮಟ್ಟಿಗೆ ಹುಳಗಳ ಭಾಧೆಯಿಂದ ತೊಂದರೆ ಸಂಭವಿಸಿದಾಗ್ಯೂ ಫಸಲ್‌ಗಳು ಚನ್ನಾಗಿದ್ದವು. ಚಿಕ್ಕನಾಯಕನಹಳ್ಳಿ, ಹೊನ್ನವಳ್ಳಿ ಇವುಗಳಲ್ಲಿ ಫಸಲ್ ಕೆಟ್ಟದೆ ಕೊರಟಗೆರೆ, ಕುಣಿಗಲ್, ಕಡಬ ಇವುಗಳಲ್ಲಿ ಮಧ್ಯಸ್ಥವಾಗಿದೆ, ಸೀರ್ಯದಲ್ಲಿ ಈಗಲೇ ವೃಧಿಯಾಗುತ್ತಿದೆ, ಸದರೀ ತಿಂಗಳಲ್ಲಿ ಗತ ಸಂವತ್ಸರದ ಗನ್ನ, ಅಡಿಕೆ ಈ ಫಸಲುಗಳು ಕಟಾವಾಯಿತು.

ಜನಾರೋಗ್ಯ—ವೃದ್ಧಿ ಯಾಗುತಿವೆ ಕುಣಿಗಲ್‌ನಲ್ಲಿ ಉಖಾಲ್ ಜುಲಾಬ್ ಕಡಮೆಯಾಗುತ್ತಿದೆ, ತುಮಕೂರು, ಕಡಬ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಈ ರೋಗ ಸ್ವಲ್ಪವಾಗಿ ಕಾಣಿಸಿಕೊಂಡಿತು ಕುಲ್ 534 ಮಂದಿ ಹೋದರು, ಆ ಹಿಂದಿನ ತಿಂಗಳಲ್ಲಿ 316 ಮಂದಿ ಹೋದರು.

ದನಗಳು—ಗೋಮಾರಿ, ದೊಡ್ಡರೋಗ ಸಹ ಅದ್ಯಾಪೀ ವ್ಯಾಪಿಸಿಕೊಂಡಿದೆ, ಸದರೀ ತಿಂಗಳಲ್ಲಿ 10121 ಕಾಲ್ನಡೆ ಹೋಗಿರುತವೆ, 22 ಕಾಡು ಮೃಗಗಳಿಂದ ಕೊಲ್ಲಲ್ಪಟ್ಟವು, ಕುಲ್ 10143 ಕಾಲ್ನಡೆ ಹೋದವು, ಸೀರಾ ತಾಲ್ಲೂಕಿನಲ್ಲಿ ಹೆಚ್ಚಾಗಿ ಹೋಗಿರುತವೆ.

ಜಮೀನ—3720 ರೂಪಾಯಿ 2 ಆಣೆ 1 ಪೈ ಕಂದಾಯವುಳ್ಳ ಜಮೀನ ಸದರೀ ತಿಂಗಳಲ್ಲಿ ಸಾಗುವಳಿಗೆ ತೆಗದುಕೊಳ್ಳಲ್ಪಟ್ಟಿತು.

ಧಾರಣೆವಾಸಿ—ಮುಖ್ಯ ಜಿನಿಸೀಗಳ ಧಾರಣೆ ಸದರೀ ತಿಂಗಳಲ್ಲಿ ಜಾಸ್ತೀ ಯಾಯಿತು.

T. E. WOODCOCK,
Offg. Dy. Commr.

ಮೈಸೂರು ಡಿಸ್ಟ್ರಿಕ್ಟು.

ಮಳೆ,—ಈ ತಿಂಗಳಲ್ಲಿ ಮಳೆ ಆಗಾಗ್ಯೆ ಬೀಳುತಿತ್ತು, ಮೈಸೂರಲ್ಲಿ ಫೊಂದು ಇಂಚ್ಸ 44 ಸೇಂಟ್ಸಗಳ ಮಳೆ ಅಳೆಯಲ್ಪಟ್ಟಿತು.

ಬೆಳೆ,—ಬೆಳೆ ಕೊಂಚ ಕೊಂಚವಾಗಿ ಅಭಿವೃದ್ಧಿ ಹೊಂದುತ್ತಲಿದೆ, ಜೋಳ, ರಾಗಿ, ಯಳ್ಳು, ಹರಳು, ಯಿನ್ನೂ ಇತರ ಕೆಲವು ಫಸಲ್‌ಗಳ ಬಗ್ಯೆ ಬೀಜ ಪೇರಾವಾದವು.

ಆರೋಗ್ಯ,—ಡಿಸ್ಟ್ರಿಕ್ಟಿನಲ್ಲಿ ಉಚ್ಚಾಲ್ ಜ್ವಾಲಾಬಿನಿಂದ 151 ಮಂದಿ ಸತ್ತರು. ಯಲ್ಲಾ ಕಾರಣಗಳಿಂದಲೂ 541 ಮಂದಿ ಸತ್ತರು. ಕಳದ ತಿಂಗಳಲ್ಲಿ 746 ಮಂದಿ ಸತ್ತರು.

ಜಾನವರ್,—ಮೈಸೂರು, ಮಳವಳ್ಳಿ ತಾಲ್ಲೂಕುಗಳಲ್ಲಿ ಮರ್ರೀ ರೋಗವು ವ್ಯಾಪಿಸಿ ಯಿದರಿಂದ 120 ಕಾಲ್ನಡಿಗಳು ಮೃತಪಟ್ಟವು. ಯಲ್ಲಾ ಕಾರಣಗಳಿಂದಲೂ 3975 ಕಾಲ್ನಡಿಗಳು ಸತ್ತವು.

ನಿರ್ಖ,—ಈ ತಿಂಗಳಲ್ಲಿ ಹೆಚ್ಚುತ್ತಾ ಕಮ್ಮಿಯಾಗುತ್ತಾ ಯಿತ್ತು.

MAHOMED ALI,
For Dy. Commr.

ಚಿತ್ರದುರ್ಗ ಡಿಸ್ಟ್ರಿಕ್ಟು.

ಹವ—ಹಗಲು ಮೋಡ ಹಾಕಿಕೊಂಡಿತ್ತು ಬಲವಾದ ನೈರುತಿದಿಕ್ಕಿನ ಗಾಳಿ ಪ್ರಬಲವಾಗಿತ್ತು ಡಿಸ್ಟ್ರಿಕ್ಟಿನ ಯಲ್ಲಾಭಾಗಗಳಲ್ಲಿಯೂ ಕೊಂಚ ಹೆಚ್ಚು ಕಮ್ಮಿ ಮಳೆ ಬಿದ್ದಿರುತ್ತದೆ ಆದರೆ ಈಗ ಬೆಳೆಯಲ್ಲಿರುವ ಫಸಲುಗಳಿಗೆ ಬೇಕಾದಷ್ಟು ಮಳೆ ಬಿದ್ದಿರುವದಿಲ್ಲ ಮಳೆ ತಾಲ್ಲೂಕು ಹೆಡ್ ಕ್ವಾರ್ಟರಗಳಲ್ಲಿ ಅಳೆಯಲ್ಪಟ್ಟದ್ದನ್ನು ಮತ್ತು ಸ್ನ 1875ನೇ ಇಸವಿ ಇದೇ ತಿಂಗಳಲ್ಲಿ ಬಿದ್ದದನ್ನು ಈ ಕೆಳಗೆ ಕೊಡಲ್ಪಟ್ಟಿರುತ್ತೆ.

	ಇ. ಸಂ. 1876		ಇ. ಸಂ. 1875	
ಚಿತ್ರದುರ್ಗ ..	2	$58\frac{3}{4}$	3	$71\frac{1}{4}$
ದಾವಣಗೆರೆ ..	3	15	2	45
ಕಣಕುಪ್ಪ ..	1	35	2	95
ದೊಡ್ಡೇರಿ ..	1	30	1	10

	ಇ. ಸಂ. 1876		ಇ. ಸಂ. 1875	
ಹಿರಿಯೂರು ..	0	25	1	0
ಬುದಿಹಾಳ ..	1	10	1	26
ಹೊಸದುರ್ಗ ..	2	90	2	25
ಪಾವಗಡ ..	0	40	1	15

ಡಿಸ್ಟ್ರಿಕ್ಟಿನಲ್ಲಿ ಬಹಳ ಕೊಂಚ ಕೆರೆಗಳಿಗೆ ಮಾತ್ರ ನೀರು ಬಂದಿರುತ್ತೆ.

ಫಸಲ್—ರಾಗಿ, ಅವರೆ, ತೊಗರಿ, ನವಣೆ, ಭತ್ತ ಇವು ಪೇರಾವಾದವು. ಫಸಲುಗಳು ಕೆಲವು ಕಡೆಗಳಲ್ಲಿ ಕೆಟ್ಟುಹೋಗಿರುತವೆ ಇನ್ನು ಕೆಲವು ಕಡೆಗಳಲ್ಲಿ ಚನ್ನಾಗಿರುತವೆ. ಕಪಿಲೇಭಾವಿಗಳು ಮತ್ತು ಕಟ್ಟೆಗಳ ನೀರಾವರಿಯಲ್ಲಿರುವಂತ ಫಸಲುಗಳು ಚನ್ನಾಗಿರುವದಾಗಿ ತಿಳಿಯಬಂದಿರುತ್ತೆ.

ಈ ತಿಂಗಳಲ್ಲಿ 1386 ರೂಪಾಯಿಗಳ ಕಂದಾಯ ಬಾಳುವ ಜಮೀನು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟಿರುತ್ತೆ.

ಆರೋಗ್ಯ—ಜನಾರೋಗ್ಯ ಚನ್ನಾಗಿರಲಿಲ್ಲ ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲಿ ಖೈ ಜ್ವಾಲಾಬ್, ಜ್ವರ, ಆಮಶಂಕೆ ವ್ಯಾಪಿಸಿತ್ತು ಇವುಗಳಿಂದಲೂ ಮತ್ತು ಇತರ ಕಾರಣಗಳಿಂದಲೂ 383 ಮಂದಿ ಸತ್ತಹಾಗೆ ರಿಪೋರ್ಟಾಗಿರುತ್ತೆ, ಹಿಂದಿನ ತಿಂಗಳಲ್ಲಿ 592 ಸತ್ತರು.

ಕಾಲ್ನಡೆ—ಜಾನವರಗಳ ಸ್ಥಿತಿ ಬಹಳ ಕೆಟ್ಟದ್ದಾಗಿತ್ತು, ಈ ತಿಂಗಳಲ್ಲಿ ಗೋಮಾರಿ ರೋಗದಿಂದಲೂ ಮತ್ತು ಹೊಟ್ಟೆಗೆ ಇಲ್ಲದೆಯೂ 17,562 ಸತ್ತಹಾಗೆ ರಿಪೋರ್ಟಾಗಿರುತ್ತದೆ.

ನಿರಖು—ಧಾರಣೆವಾಸಿ ಯಥಾಪ್ರಕಾರ ವಿರುತ್ತೆ.

E. F. H. ARMSTRONG,
Dy. Commr.

ಕೊಡಗು ಡಿಸ್ಟ್ರಿಕ್ಟು.

ತರೀ ಜಮೀನ್,—ಕಾರ್ತೀಕ ಬೆಳೆ ಪೈರು ನಾಟಲ್ಪಡುವದು ಪ್ರಾರಂಭವಾಗಿದೆ. ವೈಶಾಖೀ ಫಸಲ್ ಕಟಾವು ಪೂರೈಸಿತು.

ಇಲಾಚಿ,—ಇಲಾಚಿ ತೋಟಗಳು ಚನ್ನಾಗಿರುವದಾಗಿ ರಿಪೋರ್ಟು ತಲಪಿರುತ್ತೆ.

ರಾಗಿ,—ರಾಗಿ ಬೆಳೆಯು ಚನ್ನಾಗಿದೆ.

ಕಾಫಿ,—ಕಾಫಿ ನಾಟಗೆಯು ನಡಿಯುತ್ತಲಿದೆ, ಈ ತೋಟಗಳ ಬೆಳೆಗಳು ಚನ್ನಾಗಿ ಆಗುವದಾಗಿ ತೋರುತ್ತೆ.

ಜನಸಾವು,—ಈ ಸೀಮೆಯ ಜನಗಳ ಪೈಕೀ 362 ಮಂದಿ ಸತ್ತರು ಸಾಲ್ ಗುದಸ್ತೆ ಯಿದೇ ತಿಂಗಳಲ್ಲಿ 420 ಮಂದಿ ಸತ್ತರು ಹ್ಯಾಗಂದರೆ.—

ಉಬಾಲ್‌ಜುಲಾಬಿನಿಂದ	32
ಆಮಶಂಕೆಯಿಂದ	38
ಶಿಡುಬಿನಿಂದ	2
ಜ್ವರದಿಂದ	279
ಇತರ ರೋಗಗಳಿಂದ	10
ಆಕಸ್ಮಿಕ	1
ಕುಲ್	362

ಮಡಿಕೆರೆ ತಾಲ್ಲೂಕು ..	51
ಪಡಿನಾಲ್ಕು ನಾಡು	64
ಯೆಡೆನಾಲ್ಕು ನಾಡು	32
ಕಿಗ್ಗಟ್ಟುನಾಡು	74
ನಂಜರಾಜಪಟ್ಣ	91
ಏಳುಸಾವಿರ ಸೀಮೆ	37
ಷಹರಗಳು	
ಮಹದೇವಪೇಟೆ	4
ವೀರರಾಜಪೇಟೆ	9
ಕುಲ್	362

ಈ ಪೈಕಿ 160 ಗಂಡಸರು, 94 ಹೆಂಗಸರು, 108 ಹುಡಗರು, ಯಿವರ ಜಾತಿಗಳು ಯಾವೆನಂದರೆ, ಕ್ರೀಸ್ತರು 3, ಕೊಡಗರು 56, ಹಿಂದುಗಳು 275, ಮಹಮದೀಯರು 14, ಇತರ ಜಾತೀಯವರು 14 ಕುಲ್ 362.

ಜಾನವರ್,—ಜಾನವರ್‌ಗಳ ಪೈಕೀ 1104 ಸತ್ತವು, ಸಾಲ್ ಗುದಸ್ತೆ ಯಿದೇ ತಿಂಗಳಲ್ಲಿ 946 ಸತ್ತವು ಹ್ಯಾಗಂದರೆ:--

ಹೋರಿಗಳು 354, ಹಸುಗಳು 247, ಕರುಗಳು 200, ಕೋಣಗಳು 107, ಯಮ್ಮೆಗಳು 122, ಯಮ್ಮೆಕರುಗಳು 75 ಜುಮ್ಲಾ 1104.

ನಿರಖು,—ಚಡಾವಾಗುತ್ತಿದೆ.	ಇಂಚ್ಸ್	ಸೆಂಟ್ಸ್
ಮಡಿಕೆರೆಯಲ್ಲಿ 6ನೇ ಜುಲೈ ತಿಂಗಳೊಳಗೆ	52	80
ಕುಲ್ ಮಳೆ ಬಿದ್ದದ್ದು.	70	64
ಸೋಮವಾರ ಪೇಟೇಯಲ್ಲಿ 1876ನೇ ಜುಲೈ ತಿಂಗಳಲ್ಲಿ ಬಿದ್ದ ಮಳೆ.	62	72
ಕುಲ್ ಮಳೆ ಬಿದ್ದದ್ದು.	78	26

E. SHAW,
Offg. Supt.

ಮದರಾಸ್ ರೈಲ್ವೇ.

ರಿವಾಜುಗಳು ಕಮ್ಮೀ ಮಾಡೋಣ.

ತಾರೀಖು 5ನೇ ಆಗಸ್ಟು 1876.

ಇದರಿಂದ ತಿಳಿಯಪಡಿಸುವದೇನಂದರೆ—ಮಾಹೇ ಮಜಕೂರು 14ನೇ ತಾರೀಖು ಸೋಮವಾರದ ಲಾಗಾಯತು ವ ಆತರುವಾಯ ಯಿದರಡಿ ಬರುವ ಕಮ್ಮೀದರಗಳು ಜಾರೀಯಲ್ಲಿ ಬರುವವು.

1. ಯಿದರಡಿ ಬರುವ ಜಿನಿಸೀಗಳಿಗೆ ವರ್ಜ ವ ಫಾಸಲೆ ನಿಮಿತ್ಯವಿಲ್ಲದೆ ಮಿನಿಮಂ ಚಾರ್ಜ 1 ರೂಪಾಯಿಗೆ ಪೊಳಪಟ್ಟು ಮೈಲೀ ವೊಂದಕ್ಕೆ ಟರ್ ವೊಂದಕ್ಕೆ 8 ಕಾಸುಗಳ ಮೇರೆ ಚಾರ್ಜ ಹಾಕಲ್ಪಡುವದು.

ನಾನಾವಿಧವಾದ ಧಾನ್ಯ.	ಹಿಂಡಿ	ಕಬ್ಬಿಣತುಂಡುಗಳು
ಕಳ್ಳೇಕಾಯಿ	ಈರುಳ್ಳಿ	ಕಲ್ಲು
ಜಲ್ಲಾ	ಉರಳಗಡ್ಡೆ	ಮೊಗದುಂ ಸಕ್ಕರೆ
ಕಾಕಂಬಿ (ಪೀಪಾಯಿಗಳಲ್ಲಿ)	ನಾನಾಜಾತೀ ಬೀಜಗಳು	ಹುಳಿಹಣ್ಣು (ಬೇತಯಾರ್ ಬಾಬತು)
ಮೈರಾಬೊಲಾನ್ಸ್ ಯಂಬ ಹಂಣುಗಳು	ಸೀಗೇಕಾಯಿ	ಅರಸಿನ (ಸಾಧಾರಣವಾದ್ದು
ನಕ್ಸ್‌ವಾಮಿಕಾ (ತಯಾರಾದ್ದು) ಅಥವಾ ಯಟ್ಟೀಕೊಟ್ಟೆ	ಚೌಳುಮಣ್ಣು	ಗೋಧಿ

2. ಜವಳೀಗಳಿಗೆ ಮತ್ತು ನೂಲುಗಳಿಗೆ (ಯುರೋಪ್ ಕಟ್ಟುಗಳ) ಮೈಲ್ 1ಕ್ಕೆ ಟರ್ 1ಕ್ಕೆ 18 ಕಾಸುಗಳಿಗೆ ಬದಲಾಗಿ 14 ಕಾಸುಗಳ ಮೇರೆ ಚಾರ್ಜ ಹಾಕಲ್ಪಡುತ್ತೆ, ಮತ್ತು ಜವಳೀಗಳಿಗೆ ವ ನೂಲುಗಳಿಗೆ (ವಳಾಗ) ಕಟ್ಟುಗಳು) ಮೈಲ್ ವೊಂದಕ್ಕೆ ಟರ್ ವೊಂದಕ್ಕೆ 24 ಕಾಸುಗಳಿಗೆ ಬದಲಾಗಿ 18 ಕಾಸುಗಳ ಮೇರೆ ಚಾರ್ಜ ಹಾಕಲ್ಪಡುತ್ತೆ.

R. B. Elwin,
Agent & Manager.

Mysore Government Press, Bangalore—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಗಸ್ಟ ತಾ॥ 19, ಸಣ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3 ನೇ ಭಾಗ.

ಸಣ 1871ನೇ ಯಿಸವೀ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟನ್ನು ತಿದ್ದುಪಡಿ ಮಾಡಲಿಕ್ಕೆ ಹುಟ್ಟಿದ ಬಿಲ್.

ಪೀಠಿಕೆ.

1871ನೇ ಯಿಸವಿಯ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟನ್ನು ತಿದ್ದುಪಡಿ ಮಾಡಲಿಕ್ಕೋಸ್ಕರ ಇದರಿಂದ ನಿರ್ಣಯಿಸಲ್ಪಡುವದೇನಂದರೆ.

1871ನೇ ಇಸವಿಯ 8ನೇ ಆಕ್ಟ, 7ನೇ ಸೆಕ್ಷನ್ ತಿದ್ದುಪಡಿ.

1· 7ನೇ ಸೆಕ್ಷನಿಗೆ ಬದಲಾಗಿ ಯಿದರಡಿ ಬರುವ ಸೆಕ್ಷನ್ ಯೇರ್ಪಡತಕ್ಕದ್ದು.

ರಿಜಿಸ್ಟ್ರಾರ್ ವ ಸಬ್ ರಿಜಿಸ್ಟ್ರಾರವರ ಆಫೀಸಗಳು.

"7.–ಲೋಕಲ್ ಗವರ್ನಮೆಂಟನವರು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ರಿಜಿಸ್ಟ್ರಾರ್ ಆಫೀಸ ಯಂಬ ಹೆಸರುಳ್ಳ ಆಫೀಸನ್ನೂ ಪ್ರತಿ ಸಬ್ ಡಿಸ್ಟ್ರಿಕ್ಟಿನಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸ ಯಾ ಜಾಯಿಂಟ ಸಬ್ ರಿಜಿಸ್ಟ್ರಾರಗಳ ಆಫಿಸಗಳು ಯಂಬ ಆಫೀಸ ಯಾ ಆಫಿಸಗಳನ್ನೂ ಯೇರ್ಪಡಿಸತಕ್ಕದ್ದು.

ಮತ್ತು ವೊಬ್ಬ ರಿಜಿಸ್ಟ್ರಾರಯವರ ಯಾವ ಆಫಿಸಿಗಾಗಲಿ ವೊಬ್ಬ ಸಬ್ ರಿಜಿಸ್ಟ್ರಾರ ಯವರ ಯಾವ ಆಫೀಸನ್ನಾದರೂ ಸೇರಿಸಬಹುದು.

ಮತ್ತು ಯಾರ ಆಫೀಸ ಹಾಂಗೆ ಸೇರಿಸಲ್ಪಟ್ಟಿರುತ್ತೋ ಅಂತಾ ಯಾವ ಸಬ್ ರಿಜಿಸ್ಟ್ರಾರಾಗಲಿ 68 ವ 72ನೇ ಸೆಕ್ಷನ್‌ಗಳಿಂದ ಕೊಡಲ್ಪಟ್ಟ ಅಧಿಕಾರಗಳು ವಿನಾ ರಿಜಿಸ್ಟ್ರಾರಯವರ ವಿಶಿಷ್ಟ ಅಧಿಕಾರಗಳನ್ನಾಗಲಿ ಕೆಲಸಗಳನ್ನಾಗಲಿ ಆಪೈಕೀ ಯಷ್ಟರಮಟ್ಟಿಗಾಗಲಿ ಚಲಾಯಿಸಲಿಕ್ಕೂ ನೆರವೇರಿಸಲಿಕ್ಕೂ ಅಧಿಕಾರ ಕೊಡಬಹುದು.

17ನೇ ಸೆಕ್ಷನ್ನಿನ (D) ಕ್ಲಾಜ್ ಯಂಬ ಅಧಿಕಾಂಶ.

2.–17ನೇ ಸೆಕ್ಷನ್ನಲ್ಲಿ (C) ಕ್ಲಾಜ್ ತರುವಾಯ ಯಿದರಡಿ ಬರುವ ಕ್ಲಾಜ್ ಸೇರಿಸಲ್ಪಡತಕ್ಕದ್ದು, ಹ್ಯಾಗಂದರೆ.

"ಅಥವಾ (D) ಯಾವ ದಸ್ತಾವೇಜು ಬರದು ಕೊಡಲ್ಪಡುವ ಕಾಲದಲ್ಲಿ ವೊಂದು ಸ್ಥಿರಸ್ವತ್ತಿಗೆ ಯಾ ಸ್ವತ್ತಿನಲ್ಲಿ 100 ರುಪಾಯಿಗಳು ವ ಅದಕ್ಕೆ ಮೇಲ್ಪಟ್ಟ ಕಿಮ್ಮತ್ತಿನದಾಗಿರುವ ಹಕ್ಕುಬಾಧ್ಯತೆ ವ ಸಂಬಂಧ ಇವುಗ

ಳನ್ನು ಉಂಟುಮಾಡುತ್ತೋ, ತಿಳಿಸುತ್ತೋ, ಹವಾಲ್ತು ಮಾಡುತ್ತೋ, ಹದ್ದುಪಡಿಸುತ್ತೋ, ಯಾ ಹೋಗಲಾಡಿಸುತ್ತೋ, ಅಂತಾ ವೊಂದು ದಸ್ತಾವೇಜನ್ನು ಪಡೆಯಲಿಕ್ಕೆ ಹಕ್ಕನ್ನುಮಾತ್ರ ಉಂಟುಮಾಡುವ ಯಾವದಸ್ತಾವೇಜಿಗೆ''

18ನೇ ಸೆಕ್ಷರ್ನ 7ನೇ ಕ್ಲಾಜಿನ ತಿದ್ದುಪಾಡು.

3—18ನೇ ಸೆಕ್ಷನ್ನಲ್ಲಿ, (7) ನೇ ಕ್ಲಾಜಿಗೆ "ಅಂತಾ ದರೋಬಸ್ತು" ಯಂಬ ಮಾತುಗಳನ್ನು ಕೊನೆಗೆ ಶೇರಿಸತಕ್ಕದ್ದು; ಮತ್ತು ಅದೇ ಕ್ಲಾಜಿನ ಕಡೇ 7 ಮಾತುಗಳಿಗೆ ಬದಲಾಗಿ ಯಿದರಡಿ ಬರುವ ಮಾತುಗಳನ್ನು ದಾಖಲ್ಮಾಡತಕ್ಕದ್ದು" ಮತ್ತು ರಿಜಿಸ್ಟರ್ ಆಗಲಿಕ್ಕೆ 17ನೇ ಸೆಕ್ಷರ್ನ ಪ್ರಕಾರ ಆವಶ್ಯಕವಿಲ್ಲದ ಯಿತರ ದಸ್ತಾವೇಜುಗಳು''.

30ನೇ ಸೆಕ್ಷರ್ನ (b) ಕ್ಲಾಜಿನ ಅಧಿಕಾಂಶ.

4.—30ನೇ ಸೆಕ್ಷರ್ನ (b) ಕ್ಲಾಜ್‌ನಲ್ಲಿ "ಷಹರ" ಯಂಬ ಮಾತಿನ ತರುವಾಯ "ಮತ್ತು ಲಾಹೋರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್" ಯಂಬ ಮಾತುಗಳನ್ನು ಸೇರಿಸತಕ್ಕದ್ದು.

31ನೇ ಸೆಕ್ಷರ್ನ ತಿದ್ದುಪಾಡು.

5—31ನೇ ಸೆಕ್ಷನ್ನಿಗೆ ಬದಲಾಗಿ ಯಿದರಡಿ ಬರುವ ಸೆಕ್ಷರ್ನ ಯೇರ್ಪಡತಕ್ಕದ್ದು.

ಖಾಸಗೀ ವಾಸ ಸ್ಥಳವಲ್ಲಿ ದಸ್ತಾವೇಜುಗಳನ್ನು ಹಾಜರ್ಮಾಡೋಣ ವ ಠೇವಣೀ ಇಡೋಣ.

"31 ಸಾಧಾರಣಸಂಗತಿಗಳಲ್ಲಿ, ಈ ಆಕ್ಟು ಅನುಸರಿಸಿ ದಸ್ತಾವೇಜುಗಳನ್ನು ರಿಜಿಸ್ಟರ್ ಬಗ್ಯೆ ಹಾಜರ್ಮಾಡೋಣ ಠೇವಣೀ ಯಿಡೋಣ ಯಿವು, ಸದರೀ ದಸ್ತಾವೇಜುಗಳನ್ನು ರಿಜಿಸ್ಟರ್ ಬಗ್ಯೆ ಯಾ ಠೇವಣೀ ಬಗ್ಯೆ ಅಂಗೀಕರಿಸಲಿಕ್ಕೆ ಅಧಿಕಾರ ಹೊಂದಿರುವ ಆಫಿಸರರ ಆಫಿಸ್‌ನಲ್ಲಿಯೇ ನಡಿಸಲ್ಪಡತಕ್ಕದ್ದು.

ಆದರೆ ಅಂತಾ ಆಫಿಸರರು ಮುಖ್ಯವಾದ ಸಬಬ್ ತೋರಿಸಿದಮೇಲೆ ರಿಜಿಸ್ಟರ್ ಬಗ್ಯೆ ವೊಂದು ದಸ್ತಾವೇಜನ್ನು ಹಾಜರ್‌ಮಾಡಲಿಕ್ಕಾಗಲಿ ವೊಂದು ಉಯಿಲನ್ನು ಠೇವಣಿ ಯಿಡಲಿಕ್ಕಾಗಲಿ ಅಪೇಕ್ಷಿಸುವ ಯಾವ ಮನುಷ್ಯನ ಮನೆಗಾದರೂ ಹೋಗಬಹುದು ಮತ್ತು ಅಂತಾ ದಸ್ತಾವೇಜನ್ನು ಯಾ ಉಯಿಲನ್ನು ರಿಜಿಸ್ಟ್ರೇಷರ್ನ ಬಗ್ಯೆ ಯಾ ಠೇವಣೀ ಬಗ್ಯೆ ಅಂಗೀಕರಿಸಬಹುದು''.

34ನೇಸೆಕ್ಷನ್ನಿನ ಅಧಿಕಾಂಶ.

6—34ನೇ ಸೆಕ್ಷರ್ನ ಮೊದಲನೇ ಕಲಮಿಗೆ ಯಿದರಡಿ ಬರುವ ಮಾತುಗಳು ಸೇರಿಸಲ್ಪಡತಕ್ಕದ್ದು, ಯಾವದೆಂದರೆ "23, 24, 25, ವ 26ನೇ ಸೆಕ್ಷರ್ನಗಳ ಪ್ರಕಾರ" ಮತ್ತು ಅದೇ ಸೆಕ್ಷರ್ನ 2ನೇ ಕ್ಲಾಜಿನಲ್ಲಿ "ಸಾಧಾರಣ ರಿಜಿಸ್ಟ್ರೇಷರ್ನ ರುಸಂ" ಯಂಬದರ ಮೇಲೆ "24ನೇ ಸೆಕ್ಷರ್ನ ಪ್ರಕಾರ ಕೊಡಬೇಕಾದ ಜುರ್ಮಾನೆ ಯೇನಾದರೂ ವಿಧಿಸಿ ಯಿದ್ದಲ್ಲಿ ಅದಕ್ಕೆ ಜಾಸ್ತೀಯಾಗಿ" ಯಂಬಮಾತುಗಳನ್ನು ಸೇರಿಸತಕ್ಕದ್ದು.

42ರ ಲಾಗಾಯತು 45ರ ವರಿಗಿನ ಸೆಕ್ಷರ್ನಗಳ ತಿದ್ದುಪಾಡು.

7.— 42, 43, 44, ವ 45 ಈ ಸೆಕ್ಷರ್ನಗಳಿಗೆ ಬದಲಾಗಿ ಯಿದರಡಿ ಬರುವ ಸೆಕ್ಷರ್ನಗಳು ಯೇರ್ಪಡತಕ್ಕದ್ದು.

ಮೊಹರ್‌ಮಾಡಿದ ಲಿಪಾಫೆಯಲ್ಲಿ ಉಯಿಲ್‌ಗಳನ್ನು ಠೇವಣೀ ಇಡೋಣ.

"42 ಉಯಿಲನ್ನು ಬರೆದಿಡುವವನು ಖುದ್ದಾಗಲಿ ಕ್ರಮಪ್ರಕಾರ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಲಿ ತನ್ನ ಉಯಿಲನ್ನು ವೊಂದು ಲಿಪಾಫೆಯಲ್ಲಿ ಹಾಕಿ ಮೊಹರ್ಮಾಡಿ ಯಾವ ರಿಜಿಸ್ಟ್ರಾರವರ ಬಳಿಯಲ್ಲಾದರೂ ಠೇವಣೀ ಯಿಡಬಹುದು. ಹಾಗೆಇಡುವಲ್ಲಿ ಆ ಲಿಪಾಫೆಯ ಮೇಲೆ ಉಯಿಲು ಬರೆದಿಡುವವನ ಹೆಸರು ಮತ್ತು ಆತನ ಮುತಾಲೀಕ ಯಾರಾದರೂ ಯಿದ್ದಲ್ಲಿ ಆತನ ಹೆಸರು ಮತ್ತು ಅದರಲ್ಲಿರತಕ್ಕ ದಸ್ತಾವೇಜಿನ ಸ್ವಭಾವ ಯಿವುಗಳನ್ನು ಬರದಿಡತಕ್ಕದ್ದು.

"43—ಅಂತಾ ಲಿಫಾಫೆಯು ತಲಪಿದ ಮೇಲೆ, ರಿಜಿಸ್ಟ್ರಾರವರು, ಆದನ್ನು ಠೇವಣೀ ಬಗ್ಯೆ ಹಾಜರ್ಮಾಡಿದ ಮನುಷ್ಯನು ಉಯಿಲನ್ನು ಬರದವನೆಂತಲಾಗಲೀ ಆತನ ಮುತಾಲೀಕನೆಂತಲಾಗಲಿ ತೃಪ್ತಿ ಪಟ್ಟಲ್ಲಿ ಅವರ 5ನೇ ನಂಬರ್ ರಿಜಿಸ್ಟರ್ ಪುಸ್ತಕದಲ್ಲಿ ಸದರೀ ಮೊಹರ್ಮಾಡಿದ ಲಿಫಾಫೆಯ ಮೇಲೆ ಬರದಿರುವದನ್ನು ನೋಡಿ ಬರಕೊಳ್ಳತಕ್ಕದ್ದು, ಮತ್ತು ಸದರೀ ರಿಜಿಸ್ಟ್ರಾರವರು ಅದೇ ಪುಸ್ತಕದಲ್ಲಿ ಮತ್ತು ಆ ಮೊಹರ್ಮಾಡಿದ ಲಿಫಾಫೆಯು ಮೇಲೆ ಅದನ್ನು ಹಾಜರ್ಮಾಡಿದ ಮತ್ತು ಬರಮಾಡಿಕ್ಕೊಂಡ ಸಂವತ್ಸರ ತಿಂಗಳು, ದಿನ ವ ಹೊತ್ತು ಉಯಿಲು ಬರದಿಟ್ಟವನ ಯಾ ಅವನ ಮುತಾಲೀಕನ ಗುರ್ತುಹೇಳಲಿಕ್ಕೆ ಸಾಕ್ಷಿಕೊಡುವ ಮನುಷ್ಯರ ಹೆಸರುಗಳು ಮತ್ತು ಲಿಫಾಫೆಯ ಮೊಹರಿನ ಮೇಲೆ ಸ್ಪಷ್ಟವಾಗಿರುವ ಯಾವದಾದರೂ ಖಚಿತ, ಯಿವುಗಳನ್ನು ಸೂಚಿಸತಕ್ಕದ್ದು.

ಉಯಿಲಗಳ ಠೇಣೀ ಇಟ್ಟ ಮೇಲಿನ ಕ್ರಮ.

ತರುವಾಯ ರಿಜಿಸ್ಟ್ರಾರವರು ಆ ಲಿಫಾಫೆಯನ್ನು ಬೆಂಕಿಗೆ ಜಗ್ಗದ ತಮ್ಮ ಪೆಟ್ಟಿಗೆಯಲ್ಲಿಟ್ಟು ಭದ್ರಮಾಡತಕ್ಕದ್ದು.

"44.—ಅಂತಾ ಲಿಫಾಫೆಯನ್ನು ಠೇವಣೀ ಯಿಟ್ಟಂತಾ ಉಯಿಲ್ ಬರದವನು ಆದನ್ನು ವಾಪಸು ತೆಗದುಕೊಳ್ಳಲಿಕ್ಕೆ ಯಿಷ್ಟಪಟ್ಟರೆ ಅದನ್ನು ಠೇವಣಿಯಲ್ಲಿಟ್ಟು ಕೊಂಡಿರುವ ರಿಜಿಸ್ಟ್ರಾರವರಿಗೆಖುದ್ದಾಗಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಲಿ ಬರದುಕೊಳ್ಳಬಹುದು, ಮತ್ತು ಅಂತಾ ರಿಜಿಸ್ಟ್ರಾರವರು ಅರ್ಜೀದಾರ ವಾಸ್ತವವಾಗಿ ಉಯಿಲ್ ಬರದಿಟ್ಟವನು ಯಾ ಆತನ ಮುತಾಲೀಕನು ಯಂಬದಾಗಿ ತೃಪ್ತಿ ಪಟ್ಟಲ್ಲಿ ಅವರು ಆ ಲಿಫಾಫೆಯನ್ನು ಅದೇ ಪ್ರಕಾರ ಕೊಟ್ಟು ಬಿಡತಕ್ಕದ್ದು.

ಉಯಿಲುಗಳು ಅಡಗಿರತಕ್ಕ ಲಿಫಾಫೆಗಳನ್ನು ವಾಪಸು ತೆಗದುಕೊಳ್ಳೋಣ.

"45—42ನೇ ಸೆಕ್ಷನ್ ಅನುಸರಿಸಿ ಮೊಹರ್ ಮಾಡಿದ ಲಿಫಾಫೆಯನ್ನು ಠೇವಣೀ ಯಿಟ್ಟ ಉಯಿಲ್ದಾರನು ಮೃತವಾದಮೇಲೆ ಆ ಲಿಫಾಫೆಯನ್ನು ಠೇವಣೀ ಯಿಟ್ಟುಕೊಂಡಿರುವ ರಿಜಿಸ್ಟ್ರಾರವರಿಗೆ ಅದನ್ನು ತೆರೆಯ ಬೇಕೆಂತ ಅರ್ಜಿಕೊಡೋಣಾದರೆ ಮತ್ತು ಆ ಉಯಿಲ್ ಬರದವನು ಮೃತವಾದ್ದಾಗಿ ರಿಜಿಸ್ಟ್ರಾರವರು ತಪ್ತಿಪಟ್ಟ ಪಕ್ಷದಲ್ಲಿ ಅವರು ಸದರೀ ಅರ್ಜಿದಾರನ ಸಮಕ್ಷಮದಲ್ಲಿ ಆಲಿಫಾಫೆಯನ್ನು ಒಡದು ಅದರ ಮುತಲಬನ್ನು 3ನೇ ನಂಬರ್ ಪುಸ್ತಕದಲ್ಲಿ ಅರ್ಜಿದಾರನ ಖರ್ಚಿನಿಂದ ನಕಲು ಬರಿಸತಕ್ಕದ್ದು."

ಉಯಿಲ್ ಬರದವನ ಮರಣಾನಂತರ ನಡಿಸತಕ್ಕ ಕ್ರಮ.

8.—46ನೇ ಸೆಕ್ಷನ್ನಲ್ಲಿ ಯರಡನೇ ವಾಕ್ಯಕ್ಕೆ ಬದಲಾಗಿ ಯಿದರಡಿ ಬರುವ ವಾಕ್ಯವು ಯೇರ್ಪಡತಕ್ಕದ್ದು. "ಆದರೆ ಅಂಥಾ ಹುಕ್ಕುಂ ಮಾಡಲ್ಪಟ್ಟಾಗ್ಯೆಲ್ಲಾ, ರಿಜಿಸ್ಟ್ರಾರವರು, 45ನೇ ಸೆಕ್ಷನ್ ಪ್ರಕಾರ ಆ ಉಯಿಲಿನ ನಕ್ಕಲ್ ಮಾಡಲ್ಪಡದೆ ಯಿದ್ದಲ್ಲಿ ಲಿಫಾಫೆಯನ್ನು ಒಡೆದು ಅವರ 3ನೇ ನಂಬರ್ ಪುಸ್ತಕದಲ್ಲಿ ಸದರೀ ಉಯಿಲ್ ನಕಲು ಬರಕೋತಕ್ಕದ್ದು. ಮತ್ತು ಅಂತಾ ಪುಸ್ತಕದಲ್ಲಿ ಮೇಲ್ಕಂಡ ಹುಕ್ಕುಮಿನ ಅನುಗುಣವಾಗಿ ಕೋರ್ಟಿಗೆ ಸದರೀ ಅಸಲ್ ಪ್ರತಿಯು ಕಳುಹಿಸಲ್ಪಟ್ಟಿರುತ್ತೆಂದು ಒಂದು ಷರಾ ಮಾಡತಕ್ಕದ್ದು."

46ನೇ ಸೆಕ್ಷನ್ ತಿದ್ದುಪಾಡು.

9.—50ನೇ ಸೆಕ್ಷನ್ನಿನ ಮೊದಲಿಗೆ ಯಿವಗಡಿ ಬರುವ ಮಾತುಗಳನ್ನು ಸೇರಿಸತಕ್ಕದ್ದು. "17ನೇ ಸೆಕ್ಷನ್ (1) (2) (3) ವ (4)ನೇ ಕ್ಲಾಜ್‌ಗಳಲ್ಲಿ ಸಮೂದಿಸಲ್ಪಟ್ಟ ಪ್ರತಿ ದಸ್ತಾವೇಜು ಮತ್ತು".

50ನೇ ಸೆಕ್ಷನ್ನಿನ ಅಧಿಕಾಂಶ.

10.—59ನೇ ಸೆಕ್ಷನ್ನಲ್ಲಿ "ಇದಕ್ಕೆ ಮೇಲೆ ಅನ್ವಯ ಹಿತವಾಗಿರುವ ಪ್ರಕರಣದ" ಯಂಬ ಮಾತುಗಳಿಗೆ ಬದಲಾಗಿ "52 ವ 58ನೇ ಸೆಕ್ಷನ್‌ಗಳು" ಯಂಬ ಮಾತುಗಳನ್ನು ದಾಖಲ್ಮಾಡತಕ್ಕದ್ದು.

59ನೇ ಸೆಕ್ಷನ್ ತಿದ್ದುಪಾಡು.

64 ವ 65ನೇ ಸೆಕ್ಷರ್ಷಗಳ ಅಧಿಕಾಂಶ.

11—64, ನೇ ಸೆಕ್ಷನ್ನಲ್ಲಿ ಮತ್ತು 65ನೇ ಸೆಕ್ಷರ್ಷ ಮೊದಲನೇ ಕಲಂನಲ್ಲಿ "ದಸ್ತಾವೇಜು" ಯಂಬ ಮಾತಿನ ತರುವಾಯ "ಮರಣ ಶಾಸನವಲ್ಲದ" ಯಂಬ ಮಾತುಗಳನ್ನು ಸೇರಿಸತಕ್ಕದ್ದು.

71ನೇ ಸೆಕ್ಷರ್ಷ 2ನೇ ಕ್ಲಾಜಿನ ತಿದ್ದುಪಾಡು.

12.—71ನೇ ಸೆಕ್ಷನ್ನಿನ ಯರಡನೇ ಕ್ಲಾಜಿಗೆ ಬದಲಾಗಿ ಯಿದರಡಿ ಬರುವ ಅಂಶವು ಯೇರ್ಪಡತಕ್ಕದ್ದು.

(a) " ಅದುಯಾವ ಸ್ವತ್ತಿಗೆ ಸಂಬಂಧಿಸುತ್ತೋ ಆ ಸ್ವತ್ತು ತನ್ನ ಡಿಸ್ಟ್ರಿಕ್ಟಿನಲ್ಲಿ ಯಾ ಸಬ್‌ಡಿಸ್ಟ್ರಿಕ್ಟಿನಲ್ಲಿ ಯಿರುವದಿಲ್ಲ, ಅಥವಾ

(b) ತಾನು ರಿಜಿಸ್ಟ್ರಾರ್, ಮತ್ತು ಆ ದಸ್ತಾವೇಜು ವೊಬ್ಬ ಸಬ್ ರಿಜಿಸ್ಟ್ರಾರವರ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಲ್ಪಡತಕ್ಕದ್ದಾಗಿರುತ್ತೆ ಯಂಬ ಸಬಬಿನ ಮೇಲೆ ವಿನಾ.

73ನೇ ಸೆಕ್ಷನ್ನಿನ ಅಧಿಕಾಂಶ.

13.—73ನೇ ಸೆಕ್ಷನ್ನಿಗೆ ಯಿದರಡಿ ಬರುವ ವಿವರಣೆಯು ಸೇರಿಸಲ್ಪಡತಕ್ಕದ್ದು.

" ವಿವರಣೆ—ಈ ಸೆಕ್ಷರ್ಷನಲ್ಲಿ "ಡಿಸ್ಟ್ರಿಕ್ಟು ಕೋರ್ಟು" ಅಂದರೆ ಯಾವ ಕೋರ್ಟಿನ ಸ್ಥಳ ಸರಹದ್ದಿನೊಳಗೆ ರಿಜಿಸ್ಟರ್ ಬಗ್ಯೆ ತಿರಸ್ಕರಿಸಿ ಹುಕುಂ ಕೊಟ್ಟ ಆಫಿಸ್ ಯಿರುತ್ತೋ ಅಂತಾ ಆರಿಜನಲ್ ಅಧಿಕಾರಉಳ್ಳ ಮುಖ್ಯವಾದ ಸಿವಿಲ್ ಕೋರ್ಟು".

"ಸೆಕ್ಷರ್ಷ, ಅರ್ಥ ವಿವರಣೆ.

14 ಈ ಆಕ್ಟಿನಲ್ಲಿ ಸೆಕ್ಷರ್ಷ ಅಂದರೆ 1871ನೇ ಯಿಸವಿಯ ಐರ್ಜ ಇಂಡ್ಯನ್ ರಿಜಿಸ್ಟ್ರೇರ್ಷ ಆಕ್ಟಿನ ಸೆಕ್ಷರ್ಷ ಯಂಬದು.

ಉದ್ದೇಶ ಕಾರಣಗಳ ವಿವರಣೆ.

ರಿಜಿಸ್ಟ್ರೇರ್ಷ ಆಕ್ಟಿನಲ್ಲಿ ಹದಿಮೂರು ತಿದ್ದುಪಾಟುಗಳನ್ನು ಮಾಡುವಣವೇ ಈ ಬಿಲ್ಲಿನ ಉದ್ದೇಶವಾಗಿರುತ್ತದೆ. ಕಳೆದ ಅಯಿದುವರುಷಗಳ ಅನುಭವದದೆಸೆಯಿಂದ ಸದರೀ ತಿದ್ದುಪಡಿಗಳು ಆವಶ್ಯಕಗಳಾಗಿ ಕಾಣಬಂದಿರುತ್ತವೆ.

ಈ ಪೈಕಿ ಮೊದಲನೇದು, ಪ್ರತಿ ಸಬ್ ಡಿಸ್ಟ್ರಿಕ್ಟಿನಲ್ಲಿಯೂ, ಒಬ್ಬರಿಗಿಂತ ಹೆಚ್ಚು ಮಂದಿ ಸಬ್ ರಿಜಿಸ್ಟ್ರಾರ್‌ಗಳನ್ನು ಇಡುವಬಗ್ಯೆ ಲೋಕಲ್ ಗವರ್ನಮೆಂಟಿನವರನ್ನು ನಿಯಮಿಸುವದಕ್ಕೋಸ್ಕರ ಉದ್ದೇಶಿಸಲ್ಪಟ್ಟಿರುತ್ತೆ. ಸದರೀಸಬ್ ರಿಜಿಸ್ಟ್ರಾರ್‌ಗಳು, ಸಮಾನಾಧಿಕಾರವನ್ನು ನಡಿಸತಕ್ಕದ್ದು. ಇಂತಾ ಅಧಿಕಾರವಿಲ್ಲದೆ ಯಿರುವದು ಲೋವರ್ ಪ್ರಾವಿನ್ಸ್‌ಗಳಲ್ಲಿಯೂ ಪ್ರಾಯಶಃ ಅನ್ಯತ್ರಲೂ ಬಹಳ ಅನಾನುಕೂಲವಾಗಿರುವಂತೆ ಕಾಣಬಂದಿರುತ್ತೆ; ಆಕ್ಟಿನ 68 ವ 72 ಈ ಸೆಕ್ಷರ್ಷಗಳಿಂದ ಕೊಡಲ್ಪಟ್ಟ ಅಧಿಕಾರಗಳು ವಿನಾ, ರಿಜಿಸ್ಟ್ರಾರರ ದರೋಬಸ್ತು ಅಧಿಕಾರಗಳನ್ನೂ ನಡಿಸಲಿಕ್ಕೆ ರಿಜಿಸ್ಟ್ರಾರರ ಆಫಿಸ್‌ನೊಡನೆ ಯಾರ ಆಫಿಸ್ ಸೇರಿಸಲ್ಪಟ್ಟಿರುತ್ತೋ ಅಂತಾ ಯಾವ ಸಬ್ ರಿಜಿಸ್ಟ್ರಾರನ್ನಾಗಲಿ ನಿಯಮಿಸಲಿಕ್ಕೆ ಸಹ ಅಧಿಕಾರವು ಕಂಠೋಕ್ತವಾಗಿ ಕೊಡಲ್ಪಟ್ಟಿರುತ್ತೆ. ಅಂತಾ ಅಧಿಕಾರವು ಅರ್ಥತಃ ಕೊಟ್ಟ ಹಾಗಾಗುತದೋ ಯಿಲ್ಲವೋ ಯಂಬ ಅಂಶ ಕೆಲವು ಮಟ್ಟಿಗೆ ಸಂದಿಗ್ಧವಾಗಿತ್ತು.

ಎರಡನೇದು, ಆಕ್ಟಿನ ಹದಿನೇಳನೇ ಸೆಕ್ಷನ್ನಲ್ಲಿ 1874ನೇ ಜೂಲೈ 10ನೇ ಮರ್ಕುಂ 51—1906ನೇ ನಂಬರ್ ಉಳ್ಳ, ಹೋಂಡಿಪಾರ್ಟುಮೆಂಟಿನಲ್ಲಿ ಇಂಡ್ಯಗವರ್ನಮೆಂಟಿನ ರಿಜೋಲ್ಯೂಷನನ್ನು ಸೇರಿಸುತ್ತದೆ; ಅದರ ಫಲವೇನೆಂದರೆ—ಯಿತರ ದಸ್ತಾವೇಜುಗಳನ್ನು ಪಡೆಯಲಿಕ್ಕೆ ಬಾಧ್ಯತೆಯನ್ನು ಮಾತ್ರ ವುಂಟು ಮಾಡುವ ದಸ್ತಾವೇಜುಗಳನ್ನು ಅವಶ್ಯ ರಿಜಿಸ್ಟರ್ ಮಾಡಿಸಬೇಕಾದ ನಿರ್ಬಂಧದ ದೆಸೆಯಿಂದ ಕಂಠತಃ ವಿನಾಯಿಸುವಣವೇ. ಆದಸ್ತಾವೇಜು ಹುಟ್ಟದಲ್ಲಿ ಸ್ಥಿರಸ್ವತ್ತಿಗೆ 100ರೂಪಾಯಿಗಳ ವ ಅದಕ್ಕೆ ಮೇಲ್ಪಟ್ಟ, ಕಿಮ್ಮತ್ತಿನ ಹಕ್ಕುಗಳನ್ನು ಉಂಟು ಮಾಡುವದು ವಗ್ಯೆರೆ ಅವುಗಳ ಕಾರ್ಯವಾಗಿರುತ್ತದೆ.

ಮೂರನೇದು, 18ನೇ ಸೆಕ್ಷನ್ (7)ನೇ ಕ್ಲಾಜ್, 17ನೇ ಸೆಕ್ಷನ್ ನಿಬಂಧನೆಗಳನ್ನು ಆಕ್ರಮಿಸತಕ್ಕದ್ದಲ್ಲವೆಂಬ ಅರ್ಥವನ್ನು ಸ್ಪಷ್ಟಪಡಿಸಲಿಕ್ಕೋಸ್ಕರ ಉದ್ದೇಶಿಸಲ್ಪಟ್ಟಿರುತ್ತೆ.

ನಾಲ್ಕನೇದು, ಬ್ರಿಟಿಷ್ ಯಿಂಡ್ಯದ ಯಾವ ಭಾಗದಲ್ಲಾಗಲಿ, ಯಿರುವ ಜಮೀನಿಗೆ ಸಂಬಂಧಪಟ್ಟ ದಸ್ತಾವೇಜುಗಳ ವಿಷಯದಲ್ಲಿ ರಾಜಧಾನೀ ಪಟ್ಟಣಗಳು ವಳತವಾಗಿ ಡಿಸ್ಟ್ರಿಕ್ಟುಗಳ ರಿಜಿಸ್ಟ್ರಾರಗಳಿಗೆ ಸಮಾನವಾದ ಸ್ಥಿತಿಯನ್ನು ಲಾಹೋರ್ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರಿಗೆ ಉಂಟು ಮಾಡುತ್ತದೆ. ಈ ಬದಲಾವಣೆಯು ಲೋಕಲ್ ಗವರ್ನಮೆಂಟಿನವರ ಸಿಫಾರಸ್ಸಿನ ಮೇಲೆ ಮಾಡಲ್ಪಟ್ಟಿರುತ್ತೆ.

ಅಯಿದನೇದು, ಆಕ್ಟಿನ 31ನೇ ಸೆಕ್ಷನ್ನಿನ ಮುಸೂದೇಯನ್ನು ಮಾತ್ರ ತಿದ್ದು ಪಡಿ ಮಾಡುತದೆ.

ಆರನೇದು; ಆಕ್ಟಿನ 34ನೇ ಸೆಕ್ಷನನ್ನು ವಿಧಿಸುವದರಲ್ಲಿ ನ್ಯಾಯ ವಿಧಾಯಕರಿಗೆ ಯಿದ್ದ ಯೆರಡು ಉದ್ದೇಶಗಳನ್ನು ವಿಶದವಾಗಿ ತಿಳಿಸುತದೇನಂದರೆ, (ದಸ್ತಾವೇಜನ್ನು) ಹಾಜರ್ ಮಾಡಲಿಕ್ಕೆ ಕೊಡಲ್ಪಟ್ಟ ಕಾಲವು 4ನೇ ಭಾಗದ ಮೊದಲನೇ ನಾಲ್ಕು ಸೆಕ್ಷನ್‌ಗಳನುಸರಿಸಿ ಕೊಡಲ್ಪಟ್ಟ ಕಾಲವಾಗಿರುತದೆ, ಅಂದರೆ ಸಾಧಾರಣವಾಗಿ ಕೊಡಲ್ಪಡುವ ಕೇವಲ (ನಾಲ್ಕು ತಿಂಗಳ) ಕಾಲವಲ್ಲವು, ಪರಂತು 24, 25, 26 ಈ ಸೆಕ್ಷನ್‌ಗಳನು ಸರಿಸಿ ಕೊಡೋಣಾದ ಜಾಸ್ತೀ ಕಾಲ ಸಹ ಅರ್ಥವು, ಮತ್ತು 34ನೇ ಸೆಕ್ಷನ್‌ನಲ್ಲಿ ನಮೂದಿರುವ ಜುರ್ಮಾನೇ ಮಾತ್ರವಲ್ಲದೆ 24ನೇ ಸೆಕ್ಷನ್ ಅನುಸರಿಸಿ ತೆರಲ್ಪಡತಕ್ಕ ಜುರ್ಮಾನೆಗಳು ಯಾವದಾದರೂ ಯಿದ್ದರೆ ಅದು ಸಹಿತ, ರಿಜಿಸ್ಟ್ರಾರ ಮುಂದೆ ಹಾಜರಾಗುವದಕ್ಕೆ ಸಾವಕಾಶ ವೇನಾದರೂ ಸಂಭವಿಸಿದ ಪಕ್ಷಕ್ಕೆ, ತೆರಲ್ಪಡತಕ್ಕದ್ದು.

ಏಳನೇದು, 42 ವ 43 ನೇ ಸೆಕ್ಷನ್‌ಗಳ ಮುಸೂದೆಯನ್ನು ತಿದ್ದು ಪಡಿ ಮಾಡಿ, 1871ನೇ ಯಿಸವಿಯ 8ನೇ ಆಕ್ಟನ್ನು ಮಾಡಿದವರ ಉದ್ದೇಶ ಪ್ರಕಾರ 44 ವ 45 ಈ ಸೆಕ್ಷನ್‌ಗಳನ್ನು, ಡಿಪಾಜಿಟ್ ಯಿಡುವ ಏಜಂಟ್ ಅಲ್ಲದೆ ಉಯಿಲ್‌ದಾರನೇ ಉಯಿಲ್‌ವಾಪಸ್ ತೆಗದುಕೊಳ್ಳಲಿಕ್ಕೆ ಖಾಯಿಷ್‌ಮಾಡುವ ಯಾ ಮೃತಪಟ್ಟಿರುವ ಸಂಗತಿಗಳ ಮಟ್ಟಿಗೆ ಕಂಠತಃ ಹದ್ದು ಪಡಿಸುತದೆ.

ಎಂಟನೇದು, 45ನೆ ಸೆಕ್ಷನ್ ಅನುಸರಿಸಿ ಪೂರ್ವವೇ ನಕ್ಕಲ್ ಬರೆಯಲ್ಪಟ್ಟಿರುವಲ್ಲಿ 46ನೇ ಸೆಕ್ಷನ್ ಅನುಸರಿಸಿ ಉಯಿಲನ್ನು ನಕ್ಕಲ್ ಬರೆಯುವ ಕೆಲಸದಿಂದ ರಿಜಿಸ್ಟ್ರಾರನ್ನು ತಪ್ಪಿಸುತವೆ; ಮತ್ತು ಆತನು ಉಯಿಲನ್ನು ನಕ್ಕಲ್ ಬರೆಯ ಬೇಕಾಗಿ ಯಿರುವಲ್ಲಿ ಅದು ಯಾವ ಲಿಫಾಫೆಯಲ್ಲಿ ಹಾಕಿ ಮೊಹರಿನಿಂ ಭದ್ರಪಡಿಸಲ್ಪಟ್ಟಿರುತ್ತೋ ಅದನ್ನು ಖುಲ್ಲಾ ಮಾಡುವಂತೆ, ಕಂಠೋಕ್ತವಾಗಿ ಅಧಿಕಾರವನ್ನುಂಟುಮಾಡುತದೆ.

ಒಂಭತ್ತನೇದು, 50ನೇ ಸೆಕ್ಷನ್ನಿನ ತಿದ್ದು ಪಡಿಯಾಗಿ ಪೂರ್ವವೇ ಮೋಸಕೃತ್ಯಗಳಿಗೆ ಆಸ್ಪದ ಉಂಟು ಮಾಡಿ ಯಿರುವ ಒಂದು ನ್ಯೂನತೆಯನ್ನು ಪೂರ್ತಿಮಾಡಲಿಕ್ಕೋಸ್ಕರ ಉದ್ದೇಶಿಸಲ್ಪಟ್ಟಿದೆ ಆ ಸೆಕ್ಷನ್, ಯಾವ ದಸ್ತಾವೇಜುಗಳ ರಿಜಿಸ್ಟ್ರೇಷನ್ ಐಚ್ಛಿಕವಾಗಿರುತದೋ ಅಂತಾ, ಜಮೀನ್ ಸಂಬಂಧವಾದ, ರಿಜಸ್ಟರಾದ ದಸ್ತಾವೇಜುಗಳು ರಿಜಿಸ್ಟರಾಗದ ದಸ್ತಾವೇಜುಗಳಿಗೆ ವಿರುದ್ಧವಾಗಿ ಪ್ರವರ್ತಿಸತಕ್ಕದೆಂತ ಈಗ ವಿಧಿಸುತದೆ. ಆದರೆ ಯಾವ ದಸ್ತಾವೇಜುಗಳ ರಿಜಿಸ್ಟ್ರೇಷನ್ ಅವಶ್ಯ ಮಾಡಲ್ಪಡತಕ್ಕದ್ದಾಗಿರುತ್ತವೋ, ಮತ್ತು ಆ ಮೇರೆ ಯಾವವು ರಿಜಿಸ್ಟರ್ ಮಾಡಲ್ಪಟ್ಟಿರುತ್ತವೋ ಅಂತಾ ದಸ್ತಾವೇಜುಗಳ ವಿಷಯದಲ್ಲಿ ಅಂತಾ ನಿಬಂಧನೆ ಯೇನೂಮಾಡುವದಿಲ್ಲವು. ಆಕ್ಟಿನ 18ನೇ ಸೆಕ್ಷನಿಗೆ ಒಳಪಡತಕ್ಕ ದಸ್ತಾವೇಜುಗಳು, ರಿಜಿಸ್ಟರ್ ಮಾಡಲ್ಪಟ್ಟಿರಲಿ ಯಿಲ್ಲದೇ ಯಿರಲಿ ಪರಂತು ಅವು 17ನೇ ಸೆಕ್ಷನ್ ಪ್ರಾಕಾರ ರಿಜಿಸ್ಟರ್ ಮಾಡಲ್ಪಟ್ಟ ದಸ್ತಾವೇಜುಗಳಿಗೆ ವಿರುದ್ಧವಾಗಿ, ಹುಟ್ಟಿದ ತಾರೀಖ್ ಪ್ರಕಾರ ಜಾರೀ ಯಾಗುತವೆ. ಇದರ ಫಲವೇನಂದರೆ ಜಮೀನಿಗೆ 99ರೂಪಾಯಿಗಳ ಖರೀದೀ ಬಾಧ್ಯತೆಯನ್ನುಂಟು ಮಾಡುವ ರಿಜಿಸ್ಟರಾದ ಒಂದು ದಸ್ತಾವೇಜು ರಿಜಿಸ್ಟರಾಗದ ದಸ್ತಾವೇಜು ದೆಸೆಯಿಂದ ಭಂಜಿಸಲ್ಪಡಲಾರದಾದಾಗ್ಯೂ 101ರೂಪಾಯಿಗಳಿಗೆ ಬದಸ್ತೂರ್ ಬಾಧ್ಯತೆಯುಂಟು ಮಾಡುವ ಒಂದು ರಿಜಿಸ್ಟರಾದ ದಸ್ತಾವೇಜು 100 ರೂಪಾಯಿಗಳ ವೊಳಗೆ ಯೆಷ್ಟರ ಮೊಬಲಗಿಗಾಗಲಿ ಬಾಧ್ಯತೆಯನ್ನುಂಟುಮಾಡುವ ಹಿಂದಿನ ತಾರೀಖ್ ಹಾ

ಕಲ್ಪಟ್ಟ ರಿಜಿಸ್ಟರ್ ಯಿಲ್ಲದ ದಸ್ತಾವೇಜಿನ ದೆಸೆಯಿಂದ ಭಂಜಿಸಲ್ಪಡಬಹುದು. ಇದರಿಂದ ಉಂಟಾಗುವದೆಂದು ಹೆದರಬೇಕಾಗಿರುವ ಕೆಡಕೇನಂದರೆ— ಭಾರೀ ಮೊಬಲಗಿನ ಬಾಧ್ಯತೆಯನ್ನು ಉಂಟುಮಾಡುವ ದಸ್ತಾವೇಜುಗಳನ್ನು ಭಂಜಿಸುವದಕ್ಕೋಸ್ಕರ ಜುಜುಬೀ ಮೊಬಲಗಿನ ಬಾಧ್ಯತೆಯನ್ನುಂಟು ಮಾಡುವದಾಗಿ ಬರದು ಕೊಡಲ್ಪಟ್ಟ ಸುಳ್ಳು ತಾರೀಖು ಉಳ್ಳ ದಸ್ತಾವೇಜುಗಳು ವಿಶೇಷವಾಗಿ ಸೃಷ್ಟನೆ ಆಗುತ್ತದೆಂಬದು. ಇದಕ್ಕೆ ಈ ಬಿಲ್ಲಿನಿಂದ ತಿಳಿಸಲ್ಪಡುವ ಪರಿಹಾರವೇನಂದರೆ 17ನೇ ಸೆಕ್‌ಷನ್ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ದಸ್ತಾವೇಜುಗಳು ರಿಜಿಸ್ಟರ್ ಆಗದ ದಸ್ತಾವೇಜುಗಳಿಗೆ ವಿರುದ್ಧವಾಗಿ ಜಾರೀ ಯಾಗುವಂತೆ ಮಾಡುವಣವೆ.

ಹತ್ತನೇ ತಿದ್ದುಪಡಿಯು—59ನೇ ಸೆಕ್‌ಷನ್‌ನಲ್ಲಿರುತ್ತದೆ; ಆ ಸೆಕ್‌ಷನ್ 58ನೇ ಸೆಕ್‌ಷನ್ ಅನುಸರಿಸಿ ಮಾಡಲ್ಪಟ್ಟ ಇಂಡಾರ್ಸ್‌ಮೆಂಟ ಗಳಿಗೆ ತಾರೀಖು ಹಾಕುವ ಬಗ್ಗೆ ವ ರುಜು ಮಾಡುವ ಬಗ್ಗೆ ಮಾತ್ರ ಯಿಾಗ ವಿಧಿಸುತ್ತದೆ. 52ನೇ ಸೆಕ್‌ಷನ್ ಅನುಸರಿಸಿ ಮಾಡಲ್ಪಟ್ಟ ಇಂಡಾರ್ಸ್‌ಮೆಂಟಗಳ ಬಗ್ಗೆ ಬದಸ್ತೂರ್ ನಿಬಂಧನೆ ಮಾಡಬೇಕಾದ್ದು ಯುಕ್ತವಾಗಿದೆ.

ಹನ್ನೊಂದನೇ ತಿದ್ದುಪಡಿಯು—64 ವ 65ನೇ ಸೆಕ್‌ಷನ್‌ಗಳ ದೆಸೆಯಿಂದ ಉಯಿಲುಗಳನ್ನೂ ಕೊಡಿಸಿಲ್ (ಯಾನೆ ಉಯಿಲ್ ತಾಜಾಕಲಂಗಳನ್ನೂ) ವಿನಾಯಿಸುವದರಲ್ಲಿ ಅಡಗಿರುತದೆ.

ಹನ್ನೆರಡನೇ ತಿದ್ದುಪಡಿಯು—71ನೇ ಸೆಕ್‌ಷನನ್ನು ಮುಸೂದೇ ಮಾಡುವಲ್ಲಿ ಅಲ್ಪವಾದ ಪರಂತು ಯುಕ್ತವಾದ ತಿದ್ದುಪಾಡನ್ನು ಉಂಟು ಮಾಡುತದೆ.

ಹದಿಮೂರನೇ ಮತ್ತು ಕಡೇ ತಿದ್ದುಪಡಿಯು,—72ನೇ ಸೆಕ್‌ಷನ್‌ನಲ್ಲಿರುವ ಡಿಸ್ಟ್ರಿಕ್ಟು ಕೋರ್ಟು ಎಂಬ ಮಾತಿನ ಅರ್ಥ ವಿಷಯದಲ್ಲಿ ಉಂಟಾಗಿರುವ ಸಂದೇಹವನ್ನು ನಿವೃತ್ತಿ ಮಾಡುತದೆ.

ಸಿಂಲಾ, ತಾರೀಖು 5ನೇ ಜೂನ್ 1876.

A. Hobhouse.

Mysore Government Press, Bangalore—1876.

ಮೈಸೂರ ಗೆಜೆಟ್.

ನಂ. 34 ಸರ್ಕಾರದಿಂದ ಛಾಯಿಷ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 26, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

ಪುಟ

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು. .. .. 179—198

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಂಟೆಂಡೆಂಟರು, ಡೆಪ್ಯುಟಿ ಅಕ್ಕಾಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್ರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು. .. 417—425

3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. .. 25—30

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖುಲಾಸೆಯಾದ ಖೈದಿಗಳ ಜಾಪರೆ ಪಟ್ಟಿ. .. .. 99—111

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 179. ತಾರೀಖು 14ನೇ ಆಗಸ್ಟ್, 1876.

ಸರಹದ್ದು ಗುರುತುಗಳನ್ನು ಕಾಪಾಡುವಣ, ವ ದುರಸ್ತು ಮಾಡುವಣ, ಈ ವಿಷಯದಲ್ಲಿ 1868ನೇ ಸೆಪಟಂಬರ್ 26ನೇ ಮಾರ್ಖಿನ ಮೈಸೂರು ಗೆಜೆಟನಲ್ಲಿ ಛಾಯಿಷ್ ಮಾಡೋಣಾದ 12 ವ 13 ಈ ರೂಲ್ಸ್ ರದ್ದೀಯಾತೀಯಿಂದ, ಸಕಲಜನಗಳಿಗೂ ತಿಳಿಯುವಬಗ್ಗೆ ಈ ಕೆಳಗೆ ಬರುವ ಪರಿಷ್ಕರಿಸೋಣಾದ ರೂಲ್ಸ್ ಪ್ರಕಟಿಸಲ್ಪಡುತವೆ.

12ನೇ ರೂಲ್.

ಸರ್ಕಾರದ ಬಂಜರ್ ಜಮೀನುಗಳಿಗೆ ಎಲ್ಲಿ ಗುರುತುಗಳನ್ನು ಹಾಕುವಬಗ್ಗೆ ಬೇಕಾದ ಮೊಬಲಗನ್ನು ಒದಗಿಸುವದಕ್ಕೆ ಡೆಪ್ಯುಟಿ ಕಮ್ಮಿಷನರವರು ಸಾಲೀಯಾನಾ, ಸಾಗುವಳೀಯಿಲ್ಲದ ಸರ್ಕಾರ್ ಬಂಜರ್ ಜಮೀನಿನಲ್ಲಿ ಸಾವಿರ ಎಕ್ರೆಗಳಿಗೆ 5 ರೂಪಾಯಿಗಳಿಗಿಂತ ಜಾಸ್ತೀಇಲ್ಲದ ಒಂದು ಮೊಬಲಗನ್ನಾಗಲಿ, ಅಂತಾ ಜಮೀನುಗಳ ಕಾವಲ್ ಮೇಲೆ ವಸೂಲಾಗಿ ಸರ್ಕಾರಕ್ಕೆ ಜಮೆಬಂದ ಕುಲ್ ಮೊಬಲಗಿನಲ್ಲಿ ಸೇಕಡಾ 5 ಮೇರೆ ಆಗುವ ಮೊಬಲಗನ್ನಾಗಲಿ ಈ ಖೈಕಿ ಯಾವದು ಹೆಚ್ಚು ಮೊಬಲಗಾಗಿ ಇದ್ದಾಗ್ಯೂ, ಖಜಾನೇಯಿಂದ ಕೊಡುವಂತೆಯೂ, ಅದನ್ನು ಅಂತಾ ಜಮೀನಿನಲ್ಲಿ ಎಲ್ಲಿ ಗುರ್ತುಗಳ ರಿಪೇರೀಬಗ್ಗೆ, ಈ ಕೆಳಗಿನ ನಿಬಂಧನೆಯ 2ನೇ ಕ್ಲಾ

ಜ್‌ನಲ್ಲಿ ನಿಯಮಿಸಲ್ಪಟ್ಟ ಪ್ರಕಾರ ಅಥವಾ ಆಗಿಂದಾಗ್ಯೆ ಅನ್ಯಥಾ ನಿಯಮಿಸಲ್ಪಡುವ ಮೇರೆ ವಿನಿಯೋಗಿಸುವಂತೆಯೂ, ಅಧಿಕಾರ ಕೊಡಲ್ಪಡಬಹುದು.

13ನೇ ರೂಲ್.

ಸರ್ಕಾರ್ ಬಂಜರ್ ಜಮೀನಲ್ಲಿ ಎಲ್ಲೆ ಗುರುತುಗಳು ಬಹಳವಾಗಿ ಇರುವ ತಾಲ್ಲೂಕುಗಳೊಳಗೆ ಅಥವಾ ಯಾವ ಕಾರಣದಿಂದಲಾಗಲಿ, ಬಂಜರ್ ಜಮೀನ್‌ಪೈಕಿ ಪ್ರತಿ ಸಾವಿರ ಎಕರೆಗೆ 5 ರೂಪಾಯಿಗಿಂತ ಜಾಸ್ತೀಮೊಬಲಗ್ ಜರೂರೆಂದು ಕಾಣಬರುವಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಡಿವಿಜನ್ ಕಮ್ಮಿಷನರವರ ಮಂಜೂರಾತಿಯಮೇಲೆ ಸರ್ಕಾರ್ ಬಂಜರ್ ಜಮೀನ್‌ನಲ್ಲಿ ಪ್ರತಿ ಸಾವಿರ ಎಕರೆಗೆ 10 ರೂಪಾಯಿಗಳನ್ನು ಅಥವಾ, ಅಂತಾ ಜಮೀನ್‌ಗಳ ಕಾವಲ್‌ನಲ್ಲಿ ಹುಟ್ಟುವಳೀಯಾಗುವ ಮೊಬಲಗ್ ಪೈಕಿ ಸೇಕಡಾ 10ರೂಪಾಯಿಗಳನ್ನು ಇವುಗಳಪೈಕಿ ಯಾವದು ಹೆಚ್ಚಿದಾಗ್ಯೂ ಕೊಡಬಹುದು.

2ನೇ ಕ್ಲಾಜ್—ಸರ್ಕಾರದ ಬಂಜರ್ ಜಮೀನ್‌ನಲ್ಲಿರುವ ಎಲ್ಲೆ ಗುರುತುಗಳ ದುರಸ್ತೀಬಗ್ಯೆ ಗೊತ್ತಾಗಿರುವ ಮೊಬಲಗ್, ಪ್ರತಿ ಸಂವತ್ಸರ ಜನವರೀ ಗುರ್‍ರೇಯಲ್ಲಾಗಲಿ, ನಿಯಮಿಸಲ್ಪಡತಕ್ಕ ಇತರ ಯಾವ ದಿನದಲ್ಲಾಗಲಿ ಗ್ರಾಮದ ಪಟೇಲನಿಗೆ ಪಾಪತೀ ಮಾಡಲ್ಪಡತಕ್ಕದ್ದು. ಆತನು ಅಂತಾ ಎಲ್ಲೆ ಗುರುತುಗಳನ್ನು ಕ್ರಮವಾಗಿ ಕಾಪಾಡಿಕೊಳ್ಳತಕ್ಕಬಗ್ಯೆ ಜವಾಬ್‌ದಾರನಾಗಿರತಕ್ಕದ್ದು.

3ನೇ ಕ್ಲಾಜ್—ಸರ್ಕಾರದ ಬಂಜರ್ ಜಮೀನ್‌ಗೆ ಆತುಕೊಂಡಿರುವ ಜಮೀನಿನ ಹಿಡುವಳೀದಾರರು ಸರ್ಕಾರದ ಬಂಜರ್ ಜಮೀನನ್ನೂ ತಮ್ಮ ಜಮೀನನ್ನೂ ವಿಂಗಡಿಸುವ ದರೋಬಸ್ತು ಗುರುತುಗಳನ್ನೂ, ಯುಕ್ತವಾದ ರಿಪೇರೀಯಲ್ಲಿಟ್ಟು ಕಾಪಾಡಿಕೊಳ್ಳುವದಕ್ಕೆ ಜವಾಬ್‌ದಾರರಾಗಿರುತ್ತಾರೆ ಮತ್ತು ಗ್ರಾಮಸ್ಥರು ತಮ್ಮ ಗ್ರಾಮಕ್ಕಾಗಿ ಬಿಡಲ್ಪಟ್ಟ ಗೋ ಭೂಮಿಯ ಸರಹದ್ದುಗಳನ್ನು ಯೇರ್ಪಡಿಸುವಂತಾ ದರೋಬಸ್ತು ಗುರುತುಗಳಬಗ್ಯೂ ಬದಸ್ತೂರ್ ಜವಾಬ್‌ದಾರರಾಗಿರುತ್ತಾರೆ. ಜಮೀನ್ ಹಿಡುವಳೀದಾರರಾಗಲಿ, ಗ್ರಾಮಸ್ಥರಾಗಲಿ ಗೋ ಭೂಮಿಗಳಲ್ಲಿ ತಮ್ಮ ಕಾರ್ಯಗಳನ್ನು ನೆರವೇರಿಸಲಿಕ್ಕೇನಾದರೂ ತಪ್ಪಿದಪಕ್ಷಕ್ಕೆ ಜರೂರಾದ ಕೆಲಸಗಳು ಪಟೇಲರಿಂದ ನೆರವೇರಿಸಲ್ಪಟ್ಟು ಅದರ ಲಾಗವಡು ಪ್ರತಿ ಗುರುತಿಗೂ ಎರಡು ಆಣೆಗೆ ಮೀರದಂತೆ ಬಂದು ದರಪ್ರಕಾರ ಮೊಕರರ್ ಮಾಡತಕ್ಕದ್ದು. ಕುಲ್‌ಲಾಗವಡು ಗ್ರಾಮದಲ್ಲಿ ಹಿಡುವಳೀದಾರರದೆಸೆಯಿಂದಲೂ, ಇನಾಂದಾರರದೆಸೆಯಿಂದಲೂ, ಅವರ ಜಮೀನ್‌ಗಳ ಸರ್ವೆ ಕಂದಾಯದ ಪರಿಮಾಣದಮೇಲೆ ದರವಾರ್ ವಸೂಲ್ ಮಾಡತಕ್ಕದ್ದು.

ಪ್ರಸಿದ್ಧ ಪತ್ರಿಕೆ.

ನಂ. 187. ತಾರೀಖು 18ನೇ ಆಗಸ್ಟ 1876.

ಸರ್ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ರೂಲ್ ನಿಬಂಧನೆಗಳನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಬೆಂಗಳೂರಲ್ಲಿರುವ ಈ ಕೆಳಗೆ ಕಂಡ ಜಮೀನ್ ಬಂದಾನೊಂದು ಸರ್ಕಾರ್ ಕೆಲಸಕ್ಕಾಗಿ ಅಂದರೆ, ಮೈಸೂರು ರಸ್ತೆಯಲ್ಲಿ ಖಸ್ಯೆ ಮಾರ್ಕೆಟ್ಟಿಗೆ ಪೂರ್ವ ದಿಕ್ಕಿನೊಳಗೆ ಮೀನ್‌ಗಳು ಮಾರತಕ್ಕ ಬಂದು ಮಾರ್ಕೆಟ್ಟನ್ನು ಕಟ್ಟಿಸುವಬಗ್ಯೆ ಬೇಕಾಗಿರುತ್ತೆ.

ಮೈಸೂರು ರಸ್ತೆಯಲ್ಲಿರುವ ಖಸ್ಯೆ ಮಾರ್ಕೆಟ್ಟಿಗೆ ಪೂರ್ವದಿಕ್ಕಿನ ಸಮೀಪದಲ್ಲಿ ಇರುವ 65½ ಅಡಿ ಲಾಂಬಿಯೂ 58 ಅಡಿ ರುಂದಿಯೂ ಅಂದರೆ 422 ಗಜಗಳುಳ್ಳ, ಮತ್ತು ಪೂರ್ವಕ್ಕೆ ಖಸ್ಯೆ ಅಬ್ದುಲ್ ರಹಿಮಾನ್ ಮನೆಗೆ ಹೋಗುವ ಬಂದು ಸಂದಿ ಪಶ್ಚಿಮಕ್ಕೆ, ಪೆರಿಮೈಯನೆಂಬವನ ತರಕಾರೀ ತೋಟ—ಉತ್ತರಕ್ಕೆ, ಖಸ್ಯೆ ಅಬ್ದುಲ್ ರಹಿಮಾನ್ ಮನೆ—ದಕ್ಷಿಣಕ್ಕೆ ಈಗಿನ ಮಿನುಗಳು ಮಾರುವ ಮಾರ್ಕೆಟ.

2. ಸದರೀ ಜಮೀನಿನ ಸ್ಕೆಚ್ ಪ್ಲಾನ್ ಯಾನೆ ಕಡಗಟ್ಟಿನ ನಕಷೆಯು, ಬೆಂಗಳೂರು ತಾಲ್ಲೂಕು ಕಚೇರಿಯೊಳಗೆ ಷಹರ್ ಮ್ಯುನಿಸಿಪಲ್ ಕಮ್ಮಿಷನ್ ಆಫಿಸ್‌ನಲ್ಲಿ ನೋಡಲಿಕ್ಕೆ ತಯೂರಾಗಿರುತ್ತೆ.

ನಂ. 188. ತಾರೀಖು 21ನೇ ಆಗಸ್ಟ 1876.

ಸರ್ 1874ನೇ ಸೆಪಟಂಬರ್ 21ನೇ ಮರ್ಕುಂ 177ನೇ ನಂಬರ್ ಈ ಆಫಿಸ್ ಇಸ್ತಿಹಾರ್‌ನಾಮೆಯನ್ನು ಅನುಸರಿಸಿ ಪ್ರಕಟಿಸಲ್ಪಡತಕ್ಕದ್ದೆಂದು ಚೀಫ್ ಕಮ್ಮಿಷನರವರು ಅಪ್ಪಣೇ ಕೊಡಿಸುವದೇನಂದರೆ, ಸರ್ಕಾರ್ ನವುಕರರು, ಜಾಯಿಂಟ ಸ್ಟಾಕ್ ಯಾ ಇತರ ಕಂಪೆನಿಗಳಲ್ಲಿ ತಮಗಿರುವ ಸಂಬಂಧವನ್ನು ಉಳಿಸಿಕೊಳ್ಳ ಕೂಡದೆಂದು ನಿಷೇಧಿಸುವ ನಿಬಂಧನೆಯು, ಅಂಥಾ ಬ್ಯಾಂಕ್‌ಗಳ ಕೆಲಸಗಳು ಯಾವ ಡಿಸ್ಟ್ರಿಕ್ಟಿನಲ್ಲಿ ನಡೆಯುತ್ತವೋ ಆ ಡಿಸ್ಟ್ರಿಕ್ಟಿನಲ್ಲಿ ಉದ್ಯೋಗವುಳ್ಳ ಸರ್ಕಾರ್ ನವುಕರಿಂದ ಬ್ಯಾಂಕ್‌ಗಳ ಹಿಸ್ಸೆಗಳಲ್ಲಿ ಹಣ ಹಾಕಿ ಇರುವಂತಾದ್ದಕ್ಕೆ ಸಹ ಸಂಬಂಧಿಸುತ್ತೆ.

1874ನೇ ಸೆಪಟಂಬರ್ 26ನೇ ಮರ್ಕುಂ ಮೈಸೂರು ಗೆಜೆಟ 240ನೇ ಪುಟದಲ್ಲಿ ಪ್ರಕಟಿಸಲ್ಪಟ್ಟದ್ದು.

ನಂ. 189. ತಾರೀಖು 25ನೇ ಆಗಸ್ಟ್ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ರಾಜ್ಯ ಭಾರದ ಕೆಲಸಗಳಿಗೋಸ್ಕರ ಈ ಕೆಳಗೆ ನಮೂದಿಸಿರುವ ಪ್ರಕಾರ ಕೆಲವು ಗ್ರಾಮಗಳ ವಿನಾ, ಮಾಗಡೀ ತಾಲ್ಲೂಕಿಗೆ ಶೇರಿದ ಬಿಡದಿ ಹೋಬಳಿಯನ್ನ ಕ್ಲೋಸ್‌ಪೇಟೆ ತಾಲ್ಲೂಕಿಗೆ ಶೇರಿಸೋಣಾಗಿರುತ್ತೆ.

I.

ಬೆಂಗಳೂರು ತಾಲ್ಲೂಕು ಪೈಕಿ ಕೆಂಗೇರಿ ಹೋಬಳಿಗೆ ಶೇರಿಸಲ್ಪಡುವ ಗ್ರಾಮಗಳು.

1. ರಾಮೋಹಳ್ಳಿ
2. ಮಾಲಗೊಂಡಹಳ್ಳಿ
3. ಭೀಮನಕುಪ್ಪೆ
4. ರಾಮಸಾಗರ
5. ಮಾರಗೊಂಡಹಳ್ಳಿ
6. ಅಜ್ಜನಾಳು
7. ಕೋಮಘಟ್ಟ
8. ಸೂಲಿಕೆರೆ
9. ಶೇಷಗಿರಿಪುರ
10. ಕೃಷ್ಣಸಾಗರ
11. ಜಳ್ಳಘಟ್ಟ

II.

ಮಾಗಡಿ ತಾಲ್ಲೂಕು ಪೈಕಿ ಗುಡೇಮಾರನಹಳ್ಳಿ ಹೋಬಳಿಗೆ ಸೇರಿಸಲ್ಪಡುವ ಗ್ರಾಮಗಳು.

1. ದೊಡ್ಡಮಾರನಹಳ್ಳಿ
2. ಚಂಚನಗುಪ್ಪೆ
3. ಬೇಲಾಳು
4. ದೋಣೇನಹಳ್ಳಿ

ಮಾಗಡಿ ತಾಲ್ಲೂಕು ಪೈಕಿ ತಾವರೆಕೆರೆ ಹೋಬಳಿಗೆ ಶೇರಿದ ಈ ಕೆಳಗೆ ನಮೂದಾಗುವ 5 ಗ್ರಾಮಗಳನ್ನ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿಗೆ ಶೇರಿಸೋಣಾಗಿಧೆ.

1. ನಾಗರಬಾವಿ 2. ಮಾಳಿಗಾಳು 3. ಗಿಡದಕೋನೇನಹಳ್ಳಿ 4. ಹೇರೋಹಳ್ಳಿ 5. ಗಂಗನಹಳ್ಳಿ.

ಮೇಲೆ ತಿಳಿಸೋಣಾದ ವರ್ಗಾ ವರ್ಗಿಯೂ, ಸ್ 1876ನೇ ಇಸವಿ ಸೆಪ್ಟಂಬರ್ ಗುರ್ರೇ ಲಾಗಾಯತು ಜಾರೀಲಿಬರತಕ್ಕದ್ದು.

ನಂ. 190. ತಾರೀಖು 21ನೇ ಆಗಸ್ಟು 1876.

ಅಸಿಸ್ಟೆಂಟ್ ಇನಾಂ ಸೂಪರಿಂಟೆಂಡೆಂಟ್ ಮಿಸ್ಟರ್ ಸೈಯದ್ ನಸೀರುದ್ದೀನ್ ರವರಿಗೆ 1876ನೇ ಸೆಪ್ಟಂಬರ್ 4ನೇ ಮುಕ್ಕಾಂ ಲಗಾಯತ್ ಅಥವಾ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯತ್ ಮೂರು ವಾರಗಳ ಪ್ರಿವಿಲೇಜ್ ರಜಾ ಮುಂಜೂರಾಗಿರುತ್ತೆ.

ನಂ. 191. ತಾರೀಖು 23ನೇ ಆಗಸ್ಟು 1876.

ಸರಜೆಯನ್ ಟೀ. ಜೆ. ಮೆಕ್‌ಗ್ರಾನ್ ಯವರು ಮೈಸೂರಿಗೆ ಪ್ರಯಾಣವಾದ್ದು ಮೊದಲು, ಈ ಕೆಳಗೆ ಬರುವ ಹಂಗಾಮಿ ಯೇರ್ಪಾಡುಗಳು ನಿಯಮಿಸಲ್ಪಟ್ಟಿವೆ.

ಅಸಿಸ್ಟೆಂಟ್ ಕಮ್ಮಿಷನರ್ ಮೇಜರ್ ಲಿಂಡ್ಸೆ ಸಾಹೇಬರು, ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟಿನ ತಮ್ಮ ಆಫಿಷಿಯೇಟಿಂಗ್ ಜಡ್ಜಿ ಕೆಲಸದೊಡನೆ, ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಸೆಂಟ್ರಲ್ ಜ್ಯೆಯಿಲ್ ವಿಚಾರಣೆಯ ಕೆಲಸದ ಚಾರ್ಜನ್ನು ವಹಿಸುವಂತೆ ಮೊಕರರ್.

ಮೈಸೂರು ಕಮ್ಮಿಷನ್ ಸರ್ಜಿಯನ್ರಾದ ಸರ್ಜಿಯನ್ ಮೇಜರ್ ಆಸ್ ವಾಲ್ಡ್ ಯವರು, ಸರಜೆಯನ್ ಮೇಜರ್ ಹೌಸ್ಟನ್ ಯವರಿಗೆ ಚಾರ್ಜ್ ಒಪ್ಪಿಸುವ ಪರ್ಯಂತ, ಪೇಟೆಯ ಡಿಸ್ಪೆನ್ಸರಿ, ಮತ್ತು ಸೆಂಟ್ರಲ್ ಜೆಯಿಲ್ ಯಿವುಗಳ ಚಾರ್ಜನ್ನು ತೆಗದುಕೊಳ್ಳುವಂತೆ ಮೊಕರರ್.

ನಂ. 192. ತಾರೀಖು 23ನೇ ಆಗಸ್ಟು 1876

2ನೇ ಸರ್ಕಲ್ ಪಾಠಶಾಲೆಗಳ ಇನ್ಸ್ಪೆಕ್ಟರ್ ಮಿ|| ಮಾರಿಸ್ಸನ್ B. A. ಯವರಿಗೆ 1876ನೇ ಜಾಲೈ 31ನೇ ಮುಕ್ಕಾಂ ಲಗಾಯತ್ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 6. ತಾರೀಖು 10ನೇ ಜುಲೈ 1876.

ಮಡಿಕೇರಿ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸೋಣಾದ ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ ಮಾಡಲ್ಪಟ್ಟು ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಟ್ಟಿರುತವೆ.

"ಬಮೋಜೀಬ್ ಹುಕ್ಕುಂ."

T. Clarke,
Offg. Secretary.

ಮಡಿಕೇರಿ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸಲ್ಪಟ್ಟ ಬೈಲಾ ನಿಬಂಧನೆಗಳು.

1ನೇ ಅಧ್ಯಾಯು.

1. ಆಯಾ ತಿಂಗಳ ಮೊದಲನೇ ಸೋಮವಾರದ ದಿನ, ಮ್ಯುನಿಸಿಪೆಲ್ ಬೋರ್ಡಿನವರ ಸಾಮಾನ್ಯಸಮಾಜಗಳು ತಿಂಗಳು ತಿಂಗಳಿಗೂ ನಡೆಯುವದು.

2. ಜರೂರಾದಾಗಲೆಲ್ಲ ಮೇಲೆ ಕಂಡ ಸಾಮಾನ್ಯ ಸಮಾಜಗಳೊಡನೆ ವಿಶೇಷ ಸಮಾಜಗಳೂ ನಡೆಯುವವು.

3. ಕೊಡಗು ಸೂಪರಿಂಟೆಂಡೆಂಟರವರು ಬೋರ್ಡಿನ ಪ್ರೆಸೀಡೆಂಟರಾಗಿರುತ್ತಾರೆ. ಅವರ ಗೈರಹಾಜರೀಯಲ್ಲಿ 1ನೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಪ್ರೆಸೀಡೆಂಟರಾಗಿರತಕ್ಕದ್ದು, ಇವರಿಬ್ಬರೂ ಗೈರ ಹಾಜರಾದಲ್ಲಿ ಕಮಾಂಡಿಂಗ್ ಆಫಿಸರವರು ಪ್ರೆಸೀಡೆಂಟ್ ಕೆಲಸವನ್ನು ನೋಡತಕ್ಕದ್ದು. ಈ ಮೂವರೂ ಇಲ್ಲದಿದ್ದರೆ, ಸೇರಿದ ಸಮಾಜದವರು ತತ್ಕಾಲಕ್ಕೆ ತಮಗೆ ಯುಕ್ತವಾದವರನ್ನು ಪ್ರೆಸೀಡೆಂಟರಾಗಿ ಯೇರ್ಪಡಿಸಿಕೊಳ್ಳತಕ್ಕದ್ದು.

ಒಂದು ಸಮಾಜದಲ್ಲಿ ಚರ್ಚಿಸಲ್ಪಡತಕ್ಕ ದರೋಬಸ್ತು ಅಂಶಗಳೂ ಸಮಾಜ ಸೇರುವದಕ್ಕೆ ಅಥವಾಪಕ್ಷ ಯೇಳು ದಿನಗಳಿಗೆ ಮುಂದಾಗಿ ಕೊಡೋಣಾದ ಒಂದು ಸರ್ಕ್ಯುಲರ್ ಮೂಲಕ ಮೆಂಬರಗಳ ತಿಳುವಳಿಕೆಗೆ ತರಲ್ಪಡತಕ್ಕವು.

4. ಹಾಜರಿರುವ ಯಾವ ಮೆಂಬರಾಗಲಿ, ಹುಕ್ಕುಮಾಗತಕ್ಕ ಯಾವ ಅಂಶವನ್ನಾದರೂ, ಪ್ರೆಸೀಡೆಂಟರಿಗೆ ಕಳುಹಿಸಬಹುದು.

5. ಯಾವ ವಿಷಯವನ್ನಾದರೂ ಸೂಚಿಸುವಲ್ಲಿ ಯಾ ಚರ್ಚಿಸುವಲ್ಲಿ ಪ್ರತಿಮೆಂಬರೂ, ತನ್ನ ಜಾಗಾದಲ್ಲಿದ್ದುಕೊಂಡು ಯಾವಾಗಲೂ ಪ್ರೆಸೀಡೆಂಟರನ್ನುದ್ದೇಶಿಸಿ ಮಾತನಾಡತಕ್ಕದ್ದು.

6. ಜವಾಬಾಗಿ ಸೂಚಿಸತಕ್ಕವನು ವಿನಾ, ಯಾವ ಮೆಂಬರೂ, ಯಾವ ಸೂಚನೆ ಯಾ ತಿದ್ದುಪಾಟಿನ ವಿಷಯದಲ್ಲಿಯೂ ಯೆರಡಾವರ್ತಿ ಮಾತನಾಡಕೂಡದು.

7. ಯಾವ ಅಂಶವನ್ನಾಗಲಿ ಸೂಚಿಸಿದವನು ಅಂಗೀಕಾರಪಟ್ಟವರ ಪಟ್ಟೀ ಬೇಕೆಂದು ಕೇಳಿದರೆ ಕೈಗಳೆತ್ತಿ ತೋರಿಸುವದರ ಮೂಲಕ ಅಂಗೀಕಾರಗಳನ್ನು ತೆಗದು ಕೊಳ್ಳತಕ್ಕದ್ದು.

8. ಪ್ರತಿ ಸೂಚನೆ ಅಥವಾ ತಿದ್ದುಪಾಡು ಬರವಣಿಗೆಯಲ್ಲಿರತಕ್ಕದ್ದು; ಆದರೆ ಪ್ರೆಸೀಡೆಂಟರಿಂದ ಅಪೇಕ್ಷಿಸಲ್ಪಟ್ಟ ಹೊರತು ಸೂಚನೆ ಯಾ ತಿದ್ದುಪಾಡು ಅನುಮೋದಿಸಲ್ಪಡ ಬೇಕಾದ ಆವಶ್ಯಕವಿಲ್ಲವು.

9. ಒಬ್ಬ ಮೆಂಬರಿಂದ ಮತ್ತೊಬ್ಬ ಮೆಂಬರಿಗೆ ಹಾಕಲ್ಪಡುವ, ಸಮಾಜದ ಕೆಲಸಕ್ಕೆ ಸಂಬಂಧಪಟ್ಟ ದರೋಬಸ್ತು ಪ್ರಶ್ನೆಗಳೂ ಪ್ರೆಸೀಡೆಂಟರ ಮೂಲಕವೇ ಹಾಕಲ್ಪಡತಕ್ಕವು.

10. ಮ್ಯುನಿಸಿಪೆಲ್ ಬೋರ್ಡಿನವರ ಸಮಾಜಗಳಲ್ಲಿ ಸಾಮಾನ್ಯವಾಗಿ ಜನಗಳು ಬರಬಹುದು, ಆದರೆ ಜರೂರಿದ್ದಲ್ಲಿ ಹೊರಗಿನವರನ್ನು ಹೊರಗೆ ಹೋಗುವಂತೆ ಹೇಳಬಹುದು.

11. ದರೋಬಸ್ತು ಸಮಾಜಗಳಲ್ಲಿಯೂ, ರೈಟರು ಹಾಜರಿದ್ದು ಕೇಳಿದ ಯಾವ ಲೆಕ್ಕವನ್ನಾಗಲಿ ಹಾಜರ್ ಮಾಡತಕ್ಕದ್ದು.

12. ಕಟ್ಟಡದ ಬಗ್ಯೆ, ಯಾ ಇತರ ಕೆಲಸಗಳಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, ಸಾಗುವಳೀಯಲ್ಲಿರುವ ಯಾ ಇತರ ವಿಧವಾಗಿರುವ ಜಮೀನನ್ನು ಕ್ರಯಕ್ಕಾಗಲಿ ಗೇಣೀಗಾಗಲಿ ಪಡೆಯಲಿಕ್ಕೆ ಅಪೇಕ್ಷೆಯುಳ್ಳ ಯಾವ ಮನುಷ್ಯನಾಗಲಿ ಖಾಯಿಷ್ ಮಾಡಿದ ಜಮೀನ್ ಇರುವ ಪ್ರದೇಶವನ್ನೂ, ಅದರ ವಿಸ್ತಾರವನ್ನೂ ವಿವರಿಸುವಂತಾ ನಕ್ಷೇಗಳ ಯೆರಡು ಪ್ರತಿಗಳು ಸಹ, ಬರವಣಿಗೇ ಮೂಲಕವಾದ ದರಖಾಸ್ತನ್ನು ಪ್ರೆಸೀಡೆಂಟರಿಗೆ ಪರಭಾರೆ ಕೊಡತಕ್ಕದ್ದು.

ಪ್ರೆಸೀಡೆಂಟರ ಮಂಜೂರಾತೀಯನ್ನು ಮೊದಲೇ ಪಡೆದ ಹೊರತು ಯಾವ ಮನುಷ್ಯನೂ, ತಾನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಖರೀದಿಗೆ ಪಡೆದುಕೊಂಡ ಜಮೀನಿನಲ್ಲಿ ಕಟ್ಟಡ ಕಟ್ಟಿಸಲಿಕ್ಕೆ ಪ್ರಾರಂಭಿಸಲು ಅಧಿಕಾರವಿಲ್ಲವು.

ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಒಂದೇ ಜಮೀನಿಗಾಗಿ ಒಂದು ತಿಂಗಳೊಳಗೆ ಯೆರಡು ಅಥವಾ ಹೆಚ್ಚು ದರಖಾಸ್ತುಗಳು ಬಂದರೆ ಅವ್ವಲ್ ಖರೀದೀ ತರಾವ್‌ನಿಂದ ಮೂರುವಾರಗಳವರಿಗೆ ಬಹಿರಂಗಗಳಾದ ಸ್ಥಳಗಳಲ್ಲಿ ನೋಟಿಸ್‌ಗಳನ್ನು ಹಚ್ಚುವದರ ಮೂಲಕ ಫಾಯಿಷ್ ಮಾಡಿದ ಮೇಲೆ ಪ್ರಕಟವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

13. ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಜಮೀನನ್ನು ಗೇಣೀಗಾಗಲಿ, ಖರೀದೀಗಾಗಲಿ ಪಡೆದುಕೊಳ್ಳುವ ಬಗ್ಯೆ ಬರುವ ಯಾವ ದರಖಾಸ್ತನ್ನಾಗಲಿ, ಪ್ರೆಸೀಡೆಂಟರು ದರಖಾಸ್ತುದಾರಗೆ ತಕ್ಕ ಸಬಬ್‌ಗಳು ತಿಳಿಸಿ ನಿರಾಕರಿಸಬಹುದು. ಅಥವಾ ಷರತ್ತುಗಳ ಪೈಕೀ ಕಟ್ಟಡಗಳು, ಹೊರಗಿನ ಕಟ್ಟಡಗಳು, ಸುತ್ತು ಗೋಡೆಗಳು, ಯಾ ಆವರಣಗಳು, ಫಲಾನೇ ವಿಧವಾಗಿ ಯಾ ಫಲಾನೇ ಖರೀದೀ ಉಳ್ಳದ್ದಾಗಿರಬೇಕೆಂತಲೂ, ಹರಾಜ್ ಯಾ ಗೇಣೀಕಾಲದಲ್ಲಿ ನಿಷ್ಕರ್ಷೆಯಾಗತಕ್ಕಂತಾ ಕಾಲದೊಳಗಾಗಿ ಕಟ್ಟಲ್ಪಡತಕ್ಕದ್ದೆಂತಲೂ, ಇದಕ್ಕೆ ತಪ್ಪಿದರೆ ಯೆರಡು ವರುಷಗಳೊಳಗಾಗಿ ಸರ್ಕಾರಕ್ಕೆ ವಾಪಸ್ ಸೇರಿಸಿಕೊಳ್ಳಲ್ಪಡುವದೆಂತಲೂ, ಒಂದು ಷರತ್ ಮಾಡಬಹುದು.

14. ಹಾಲೀ ಇರುವ ಕಟ್ಟಣದ ಜಮೀನ್‌ಗಳು, ಯಾ ನಿವೇಶನಗಳು, ಯಾ ಅಂಗಡಿಗಳು ಪ್ರೆಸೀಡೆಂಟರ ಮಂಜೂರಾತೀ ಇಲ್ಲದೆ ವಿಭಾಗವಾಗತಕ್ಕದ್ದಲ್ಲವು.

15. ಬೀದಿಗಳಲ್ಲಿ ಅಥವಾ ಸಂದಿಗಳಲ್ಲಿ ಐದು ವರುಷಗಳ ಕಾಲ ವಾಸಸ್ಥರಿಲ್ಲದೆ ಬಿಡಲ್ಪಟ್ಟ ಯಾವ ನಿವೇಶನಗಳಾಗಲಿ ಮನೆಗಳು ಮುಂತಾದವುಗಳಾಗಲಿ, ಆರು ತಿಂಗಳವರಿಗೆ ಇಸ್ತಿಹಾರ್ ಫಾಯಿಷ್ ಆದಮೇಲೆ ಪ್ರೆಸೀಡೆಂಟರ ಅಧಿಕಾರಕ್ಕೆ ಒಳಗಾಗಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡಲಿಕ್ಕೆ ಗುರಿಯಾಗಿರುತ್ತವೆ. ಅಂತಾ ಹರಾಜ್‌ನಲ್ಲಿ ಹುಟ್ಟುವಳೀಯಾದ ಮೊಬಲಗಿಗೆ ಯಾರೂ ಬಾಧ್ಯತೆ ತಾರದೆ ಇದ್ದರೆ ಅದು, ಬೇವಾರಸ್ ಸ್ವತ್ತಿನ ನಿಬಂಧನೆಗಳ ಪ್ರಕಾರ ಮ್ಯುನಿಸಿಪೆಲ್ ಇಲಾಖೆಯು ಜಮೀನಿಗೆ ದಾಖಲ್ ಮಾಡಿಕೊಳ್ಳಲ್ಪಡುವದು.

16. ಸ್ಕ್ವಾಟರ್‌ಗಳು ಅಂದರೆ ದೃಢವಾದ ಬಾಧ್ಯತೆ ಯಿಲ್ಲದೆ ಪಬ್ಲಿಕ್ ಜಮೀನ್‌ನಲ್ಲಿ ನೆಲೆಗೊಳ್ಳುವ ಜನಗಳು, ಇದುವರಿಗೆ ವಾಸಮಾಡುತ್ತಿದ್ದ ಮನೆ ಮುಂತಾದವುಗಳನ್ನು ಒಳಗೊಂಡಿದ್ದ ಹಾಳು ಗೋಡೆಗಳು, ಸದರೀ ಮನೆ ಮುಂತಾದವುಗಳು ಖಾಲೀ ಮಾಡಲ್ಪಟ್ಟ ತರುವಾಯ ಕೆಡಹಿಸಿ ನೆಲ ಸಮಮಾಡಲ್ಪಡತಕ್ಕವು. ಅಂತಾ ಸಂಗತಿಗಳಲ್ಲಿ ಹಾಂಗೆ ಖಾಲೀ ಮಾಡಲ್ಪಟ್ಟ ಜಮೀನು ಮ್ಯುನಿಸಿಪೆಲ್ ಯಿಲಾಖೆಯವರ ಅಧೀನದಲ್ಲಿರತಕ್ಕದ್ದು.

II. ಪೂರ್ವ ಅನುಭವಿಸುತಿದ್ದ ಬಾಧ್ಯತೆಯ ಮೇಲೆ ಸ್ಕ್ವಾಟರ್‌ಗಳಿಂದ ಯಾ ಇತರ ಜನಗಳಿಂದ ತ್ಯಜಿಸಲ್ಪಟ್ಟ ನಿವೇಶನಗಳ, ಪಾಳು ಭೂಮಿಯ, ಯಾ ವಾಸಯೋಗ್ಯವಲ್ಲದೆ ಶಿಥಿಲವಾಗಿರುವ ಮನೆ ಮುಂತಾದವುಗಳ ಯಾವ ಬಿಕರೀಯೂ, ಪಟ್ಟೇ ಇಂದ ಯಾ ಗ್ರಾಂಟ್ ನಿಂದ ಯಾ ಸರ್ 1864ನೇ ಇಸವೀ ಜನ್ ಗುರ್ರೇ ಮೊದಲು ಹುಟ್ಟಿದ ಕ್ರಯ ಶಾಸನದಿಂದ ಮತ್ತು ಸದರೀ ಜಮೀನಿನ ವಿವರಣದಿಂದ ಅಂತಾ ಬಾಧ್ಯತೆಯು ಬಲಪಡಿಸಲ್ಪಟ್ಟ ಹೊರ್ತು ದೃಢಪಡತಕ್ಕದಲ್ಲ.

III. ಇದು. ಒಂದು ತಿಂಗಳೊಳಗೆ ತಮ್ಮ ಮನೆಗಳನ್ನ ದುರಸ್ತು ಮಾಡುವ ಯಾ ಅವುಗಳನ್ನ ಖಾಲೀ ಮಾಡುವ ಜನಗಳಿಗೆ ಅಥವಾ ವಾಸಗೃಹ ಮುಂತಾದವುಗಳನ್ನು ಮಾರುವ ಜನಗಳಿಗೆ ಲಗಾವಾಗುವದಿಲ್ಲ.

17. ದರೋಬಸ್ತು ಬಂಡಿಗಳೂ, ಸವಾರಿಗಳೂ ತಮ್ಮ ಯದುರಿಗೆ ಬರತಕ್ಕ ಬಂಡಿಗಳು, ಸಂಧಿಸಿ ಬಲಗಡೆಗೆ ಹೋಗುವದಕ್ಕೆ ಅನುಕೂಲಿಸುವಂತೆ ರಸ್ತೆಯಲ್ಲಿ ತಮ್ಮ ಯಡಪಾರ್ಶ್ವಕ್ಕೇನೇ ಹೋಗುವಂತೆ ಬಲಾತ್ಕರಿಸಲ್ಪಡ ತಕ್ಕವು.

18. ಸಾಮಾನುಗಳು ತೆಗದುಕೊಂಡು ಹೋಗುವ ಬಗ್ಯೆ ಯೆತ್ತುಗಳು ಕಟ್ಟಿದ ಬಂಡೀ ಅಲ್ಲದ ಇತರ ಯಾವ ವಿಧವಾದ ಯಾವ ಸಾಧನವನ್ನಾಗಲಿ ಸೂರ್ಯಾಸ್ತಮಯದನಂತರ ಮುಕ್ಕಾಲು ಗಂಟೆಗೂ ಸೂರ್ಯೋದಯಕ್ಕೆ ಪೂರ್ವ ಒಂದು ಗಂಟೆಗೂ ಮಧ್ಯ ಕಾಲದಲ್ಲಿ ಯಾವಾಗಲಾದರೂ ಅಂತಾ ಗಾಡಿಯ ಉಭಯ ಪಾರ್ಶ್ವಕ್ಕೂ ಹಚ್ಚಿದ ದೀಪಗಳು ಇಡದೇ ಯಾವನು ನಡಿಸುತ್ತಾ

ನೋ ಅಂತಾವನು ದೀಪಗಳು ಅನಾವಶ್ಯಕವಾಗಲಿಕ್ಕೆ ಸಾಕಾದಷ್ಟು ಬೆಳದಿಂಗಳು ಇರಬಹುದಾಗಿ ಮಾಜಿಸ್ಟ್ರೇಟರಿಗೆ ತೋರಿದಾಗ ಹೊರ್ತು ಇತರ ಕಾಲದಲ್ಲಿ 5ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಗತಕ್ಕದ್ದು.

II. ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಾವ ರಸ್ತೆಯಲ್ಲಿಯಾದರೂ ರಾತ್ರಿ 7 ಗಂಟೆಗೂ ಬೆಳಿಗ್ಯೆ 4 ಗಂಟೆಗೂ ಮಧ್ಯೆ ಯೆತ್ತುಗಳು ಕಟ್ಟಿದ ಬಂಡಿಯನ್ನಾಗಲಿ, ಯಾವ ವಿಧವುಳ್ಳ ಸವಾರೀ ಗಾಡಿಯನ್ನಾಗಲಿ ಅಂತಾ ಗಾಡಿಯ ಉಭಯಪಾರ್ಶ್ವಕ್ಕೂ ಲಗತ್ ಮಾಡಲ್ಪಟ್ಟ ಹಚ್ಚಿದ ಲಾಂದರುಗಳು ಕಟ್ಟದೇ ನಡಸುವಂತಾವನು 5ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು. ಪರಂತು ಕಾಲು ನಡೆಗೆ ಸರಿಯಾಗಿ ಹೋಗುವ ಭರ್ತಿ ಬಂಡಿಗಳಿಗೆ ಮಧ್ಯದಲ್ಲಿ ತಗಲಹಾಕಲ್ಪಟ್ಟ ಬಂದು ಹಚ್ಚಿದ ಲಾಂದ್ರ ಯಿರಬಹುದು.

III. ಮ್ಯುನಿಸಿಪೆಲ್ ಸರಹದ್ದಿನಲ್ಲಿ ಯೆತ್ತುಗಳು ಕಟ್ಟಿದ ಯಾವ ಸಾಮಾನು ಬಂಡಿಯನ್ನಾಗಲಿ ನಡಿಸುವಂತವನು ಕಾಲು ನಡೆಗೆ ಸರಿಯಾಗಿ ನಡಿಸತಕ್ಕದ್ದು ಮತ್ತು ರಸ್ತೆಯೊಳಗೆ ಯೆಡಗಡೆಯಲ್ಲಿಯೇ ಹೋಗತಕ್ಕದ್ದು, ಮತ್ತು ಯೆತ್ತುಗಳನ್ನು ನಡಿಸತಕ್ಕವನು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಬಗ್ಯೆ ಸಾಕಾದಷ್ಟು ಬಲವಾದ ಹಗ್ಗದಿಂದ ಆ ಯೆತ್ತುಗಳಿಗೆ ಮೂಗುದಾರ ಹಾಕಿರತಕ್ಕದ್ದು. ಈ ಹುಕ್ಕುಂಗಳಿಗೆ ಖಿಲಾಫ್ ನಡೆಯುವ ತಪ್ಪಿತಸ್ಥನು 5 ರೂಪಾಯಿಗಳಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

2ನೇ ಅಧ್ಯಾಯ.

ಸ್ಥಳಿಕ ತೊಂದರೆಗಳು.

19. ಪಬ್ಲಿಕ್ ಬೀದಿಗಳಲ್ಲಿ ದನಗಳನ್ನು ಕಟ್ಟುವಿಕೆ, ಪೆಟ್ಟಿಗೆಗಳನ್ನು ಖಾಲೀ ಬಂಡಿಗಳನ್ನು, ಯಾ ಸವಾರೀಗಾಡಿಗಳನ್ನು ಅಥವಾ ಯಾವವಿಧದ ನಿರೋಧಗಳನ್ನು ಮನೆಗಳ ಯಾ ಅಂಗಡಿಗಳ ಮುಂದೆ ಬಿಡುವಿಕೆ, ಮತ್ತು ಯಾವ ಅಂಗಡಿಯು ಯಾ ಮನೆಯು ಮುಂದುಗಡೆಯಾಗಲಿ ಯೆರಡು ಗಂಟೆಗಳ ಹೊತ್ತಿಗಿಂತ ಹೆಚ್ಚಾಗಿ ಬಂಡಿಗಳು ಯಾ ಸವಾರೀಗಾಡಿಗಳು ಭರ್ತಿ ಮಾಡುವಾಗ್ಯೆ ಯಾ ಯಿಳಿಸುವಾಗ್ಯೆ ಗುಂಪುಕೂಡುವದಕ್ಕೆ ಆಸ್ಪದ ಕೊಡುವಿಕೆ, ಇಂತಾದ್ದು 5 ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು;

20. ಮ್ಯುನಿಸಿಪೆಲ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾ ಅವರ ಹುಕ್ಕುಮಿಗೆ ವಿರುದ್ಧವಾಗಿ ಬಂಡೆಯಲ್ಲಿ ಗ್ರೇವಲ್ ಮತ್ತು ಕಲ್ಲು ತೆಗೆಯುವಿಕೆ, ಇಟ್ಟಿಗೆ ಮತ್ತು ಹೆಂಚುಗಳಿಗೋಸ್ಕರ ಮಣ್ಣು ಅಗಿಯುವಿಕೆ ಇಟ್ಟಿಗೆ ವ ಹೆಂಚುಗಳನ್ನು ಮಾಡುವ ಬಗ್ಯೆ ಲೈಸೆನ್ಸ್‌ಗಳನ್ನು ಮ್ಯುನಿಸಿಪೆಲ್ ಆಫಿಸಿನಲ್ಲಿ ದರಖಾಸ್ತು ಮಾಡಿ ಪಡೆದುಕೊಳ್ಳಬಹುದು. ಈ ಸ್ಥಳವೊಳಗೆ ತಯಾರಪ್ಪಡುವ ಇಟ್ಟಿಗೆಗಳಿಗೆ 1000ಕ್ಕೆ 4 ಆಣೆ, ಹೆಂಚುಗಳು 1000ಕ್ಕೆ 4 ಆಣೆ, ಈ ಮೇರೆ ವಸೂಲ್ ಮಾಡಲ್ಪಡತಕ್ಕದ್ದಲ್ಲದೆ, ಬಂದು ಬಂಡಿ ಕಲ್ಲಿಗೆ 6 ಕಾಸು ಅಥವಾ ಚದರ ಗಜ ಬಂದಕ್ಕೆ 2 ಆಣೆಗಳ ಮೇರೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

21. ನೋಟಿಸ್ ತಲಪಿದ 8 ದಿನಗಳೊಳಗಾಗಿ ಯಾವ ಮನೆಗಾಗಲಿ ಕಟ್ಟಡಕ್ಕಾಗಲಿ, ಹೊರಗೆ ಯಾ ಒಳಗೆ ಸುಣ್ಣ ಬಳಿಯಲಿಕ್ಕೆ ಅಥವಾ ಆರೋಗ್ಯ ನಿಮಿತ್ತದಿಂದ ಅವುಗಳನ್ನು ಪಾಕ್ ಮಾಡಲಿಕ್ಕೆ, ಅಥವಾ ಪಾಯಖಾನೆಗಳನ್ನು ಯಾ ಬಚ್ಚಲು ಗುಣಿಗಳನ್ನು ಕಂಪು ಯಿಲ್ಲದೆ ಮಾಡಲಿಕ್ಕೆ ಮೆಡಿಕೆಲ್ ಆಫಿಸರರ ಸಲಹೇ ಮೇಲೆ ಅಮಲ್ ನಡಿಸುವ ಪ್ರೆಸಿಡೆಂಟರ ಯಾವ ಹುಕ್ಕುಮಿಗಾಗಲಿ ಅವಿಧೇಯವಾಗಿ ನಡೆಯುವಿಕೆ—ಜುರ್ಮಾನೆ 10 ರೂಪಾಯಿ.

22. ಗ್ಲಾಂಡರ್ಸ್ ಯೆಂಬ ರೋಗವಾಗಲಿ, ಅಥವಾ ಅಪಾಯಕರವಾದ ಯಾ ಅಂಟುವ ಸ್ವಭಾವವುಳ್ಳ ಸಾಂಕ್ರಾಮಿಕವಾದ ಯಾ ಅನ್ಯಥಾ ಯಿರುವ ಯಾವ ರೋಗವಾಗಲಿ, ತಗಲಿದ, ಯಾವದಾದರೂ ಕುದುರೆ ಯಾ ಯಿತರ ಜಾನವರ್‌ಗಳುಳ್ಳ, ಮತ್ತು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಹಂಗಾಮಿಯಾಗಿ ಆಗಲಿ, ಅನ್ಯಥಾ ಆಗಲಿ, ವಾಸ ಮಾಡುವ ದರೋಬಸ್ತು ಜನಗಳೂ ಆ ಸಂಗತಿಯನ್ನು ಕುರಿತು ಕೂಡ್ಲೆ ಪ್ರೆಸಿಡೆಂಟರಿಗೆ ಜಾಹಿರ್ ಮಾಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು. ಸದರೀ ಪ್ರೆಸಿಡೆಂಟರು ಮೇಲೆ ಕಂಡ ಪ್ರಕಾರ ತಮಗೆ ನೋಟಿಸ್ ಬಂದ ಮೇಲೆ ಸಾಧ್ಯವಾದಷ್ಟು ತ್ವರೆಯಾಗಿ ಲಾಯಖಾದ ಒಬ್ಬ ಸಾಲಂತ್ರೀ ಮೂಲಕ ಜಾನವರನ್ನು ಯಾ ಜಾನವರ್‌ಗಳನ್ನು ಅಜಮಾಯಿಷೀಮಾಡಿಸಿ, ಸದರೀ ಜಾನವರ್ ಯಾ ಜಾನವರ್‌ಗಳನ್ನು ತೊಲಗಿಸುವದು ಆವಶ್ಯಕವೆಂದು ತೃಪ್ತಿಕರವಾಗಿ ತಿಳಿಯಬಂದರೆ, ಸ್ವಂತಗಾರನು ಅಂತಾ ಜಾನವರನ್ನು ಕೂಡ್ಲೆ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಸಾಗಿಸಿ ಬಿಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು

ಗ್ಲಾಂಡರ್ಸ್ ಎಂಬ ರೋಗವಾಗಲಿ, ಯಿತರ ಯಾವ ಸಾಂಕ್ರಾಮಿಕ ರೋಗವಾಗಲಿ, ತಗಲಿ ಯಿರುವ ಜಾನವರ್‌ಗಳು ಉಳ್ಳ ಯಾವ ಮನುಷ್ಯನಾಗಲಿ, ಈ ಬೈಲಾ ನಿಬಂಧನೇ ಪ್ರಕಾರ ನಡೆಯದಿದ್ದರೆ, ಅಂತಾವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾ

ಪಿಸಲ್ಪಟ್ಟ ಅವ್ವಲ್‌ದಫಾ ತಪ್ಪಿತಕ್ಕೆ 100 ರೂಪಾಯಿಗಳ, ಆ ತರುವಾಯ ಯರಡನೇ ಮತ್ತು ಪ್ರತಿಸಲದ ತಪ್ಪಿತಕ್ಕೂ, 200 ರೂಪಾಯಿಗಳ ಜುರ್ಮಾನೆಗೆ ಗುರಿಯಾಗತಕ್ಕದ್ದು.

23. ಸ್ವಂತಗಾರರ ಯಾ ಹಿಡುವಳೀದಾರರ ಮನೆ ಮುಂತಾದವುಗಳಲ್ಲಿ ಮೃತಪಡುವ ಯಾವ ಜಂತುವಿನ ಶವವನ್ನಾಗಲಿ, ಯುಕ್ತವಾದ ಕಾಲದೊಳಗೆ, ರಬ್ಬಿಷ್ ಡಿಪೋಯೆಂಬ ಕಶ್ಮಲ ಹಾಕುವ ಜಾಗಾಕ್ಕೆ ಸತ್ತ ಅಥವಾ, ಜಂತುಗಳ ಶರೀರಗಳನ್ನು ದರ್ಫ ಮಾಡುವ ಬಗ್ಗೆ ಪ್ರತ್ಯೇಕವಾಗಿ ಯೇರ್ಪಡಿಸಲ್ಪಟ್ಟ ಸ್ಥಳಕ್ಕೆ ತೆಗಸಿ ಹಾಕುವದಕ್ಕೆ ಉಪೇಕ್ಷಿಸುವಿಕೆ,—ಜುರ್ಮಾನೆ 5 ರೂಪಾಯಿಗಳು.

24. ಪಬ್ಲಿಕ್ ತೋಟಗಳಲ್ಲಿ ಯಾ ರಸ್ತೆಗಳ ಬಾಜುಗಳಲ್ಲಿ ಮರಗಳನ್ನು ನಾಶ ಪಡಿಸುವಿಕೆ. ಹಣ್ಣುಗಳನ್ನು ಯಾ ಹುವ್ವಗಳನ್ನು ಕೊಯ್ಯುವಿಕೆ, ಯಾ ಹುಲ್ಲನ್ನು ಕೊಯ್ಯುವಿಕೆ, ಯಾ ಬೇರುಸಹಿತ ಕೀಳುವಿಕೆ, ಅಥವಾ ಯಾವ ವಿಧದಿಂದಲಾಗಲಿ, ರಸ್ತೆಗಳ ಬಾಜುಗಳನ್ನು ಮತ್ತು ಬದುವುಗಳನ್ನು ನಾಶ ಪಡಿಸುವಿಕೆ, ಅಥವಾ ಕವಾಯತ್ ಜಾಗಾಗಳಲ್ಲಿ, ಯಾ ವಿಹಾರಾಪೇಕ್ಷೆಯುಳ್ಳವರಿಗಾಗಿ ಮಾತ್ರ ಉದ್ದೇಶಿಸಲ್ಪಟ್ಟ ಪಬ್ಲಿಕ್ ತೋಟಗಳಲ್ಲಿ ತಿರುಗಾಡಿ ರಾಪ್ತೆ ಮಾಡುವಿಕೆ,—ಜುರ್ಮಾನೆ 10 ರೂಪಾಯಿಗಳು.

25. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಯಿಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಟ್ಟ ಯಾವ ಗೋರೀಯಲ್ಲಾಗಲಿ, ಶವದ ಪೆಟ್ಟಿಗೆಯನ್ನೂ ಯಾ ಶವವನ್ನೂ, ಭೂಮಿಯ ಮಟ್ಟದಕೆಳಗೆ ಮೂರು ಅಡಿಗಿಂತ ಕಡಮೆಯಾದ ಆಳದಲ್ಲಿರುವ ಹಾಗೆ ದರ್ಫ ಮಾಡುವಿಕೆ.—ಜುರ್ಮಾನೆ 5 ರೂಪಾಯಿ.

26. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಇಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಡದೇ ಯಿರುವ ಯಾವ ಗೋರೀಯಲ್ಲಾಗಲಿ, ಯಾವ ಶವದ ಪೆಟ್ಟಿಗೆಯನ್ನಾಗಲಿ, ಶವವನ್ನಾಗಲಿ; ಭೂಮಟ್ಟದ ಕೆಳಗೆ 5 ಅಡಿಗಳಿಗೆ ಕಡಮೆಯಾದ ಆಳದಲ್ಲಿರುವಂತೆ ದರ್ಫ ಮಾಡುವಿಕೆ.—5 ರೂಪಾಯಿಗಳ ಜುರ್ಮಾನೆ.

27. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಜಾಗಾದಲ್ಲಾಗಲಿ, ಎರಡು ಅಡಿಗೆ ಕಡಮೆಯಾದ ದೂರದಲ್ಲಿ ಮತ್ತು ಮ್ಯುನಿಸಿಪೆಲ್ ಬೋರ್ಡಿನವರಿಂದ ವಿಧಿಸಲ್ಪಡದ ಜಾಬಿನಲ್ಲಿ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

28. ದರ್ಫ ಜಾಗಾಗಳ ಯಾ ದಹನ ಸ್ಥಳಗಳ ಸ್ವಂತಗಾರರು ಯಾ ಜಿಮ್ಮೆಉಳ್ಳವರು ದರ್ಫ ಯಾ ದಹನವಾದ 24 ಘಂಟೆ ಹೊತ್ತಿನ ಒಳಗಾಗಿ, ಮೃತಪಟ್ಟ ಮನುಷ್ಯನ ಹೆಸರುಗಳು, ಸ್ತ್ರೀ ಅಥವಾ ಪುರುಷನೆಂಬದು, ವಯಸ್ಸು, ಮತ್ತು ವಾಸಸ್ಥಾನ, ಮರಣಕಾರಣ, ಯಿಂತಾದ್ದನ್ನು ಕುರಿತು ಆ ಜನಗಳಿಗೆ ಸಾಧ್ಯವಾದ ದರೋಬಸ್ತು ಸಂಗತಿಯನ್ನೂ ಬೋರ್ಡಿನವರಿಗೆ ತಿಳಿಸಲಿಕ್ಕೆ ಉಪೇಕ್ಷಿಸುವಣ,—ಜುರ್ಮಾನೆ ರೂಪಾಯಿ 5.

29. ಕೊಬನ್ನು ಕರಗಿಸುವದಕ್ಕೋಸ್ಕರ ಯಾ ಮಾಂಸ ಸಂಬಂಧವಾದ ಕಶ್ಮಲವನ್ನು, ಯಾ ರಕ್ತವನ್ನು ಕಾಯಿಸುವದಕ್ಕೋಸ್ಕರ ಉಪಯೋಗಿಸಲ್ಪಡುವ ಸ್ಥಳಗಳ, ಸಬ್ಬಿನಮನೆಯ, ಎಣ್ಣೇ ಕಾಯಿಸುವ ಮನೆಯ, ಬಣ್ಣಾ ಹಾಕುವ ಮನೆಯ, ತೊಗಲು ಹದಾಮಾಡುವ ಸ್ಥಳದ, ಇಟ್ಟಿಗೆ, ಕುಂಬಾರಸೂಳುಗಳ ಯಾ ಸುಣ್ಣದ ಗೂಡಿನ, ಸೇಗೋ ಯಾ ಸಖ್ಖರೇ ಕಾರ್ಖಾನೆಯ, ಅಥವಾ ಅನಹ್ಯವಾದ ಯಾ ಅನಾರೋಗ್ಯವಾದ ವಾಸನೆ ಯುಂಟುಮಾಡುವ ಇತರ ಕಾರ್ಖಾನೆಯ ಯಾ ಕೆಲಸ ನಡೆಯುವ ಸ್ಥಳಗಳ, ಯಾ ಬಾಡಿಗೇ ಕುದುರೇಲಾಯಗಳು ಯಾ ಯಿತರ ಲಾಯಗಳು, ದನದ ಕೊಟ್ಟಿಗೆಗಳು, ಹಂದೀ ಗೂಡುಗಳು, ಇಂತಾವುಗಳ ಸ್ವಂತಗಾರರು, ಯಾ ಹಿಡುವಳೀದಾರರು, ಯಿವುಗಳನ್ನು ಪ್ರತಿಸಲವೂ ತೆಗಸಿ ಹಾಕಬೇಕಾದ ಕಾಲದಲ್ಲಿ ಅಂತಾ ಯಾವ ಸ್ಥಳವೊಳಗೆ ಯಾ ಅದರ ಸುತ್ತಮುತ್ತಲೂ ಯಿರುವ ವಿಶಿಷ್ಟ ಕಶ್ಮಲವನ್ನೂ, ರೋಶೆಯನ್ನೂ, ವ ಕಸವನ್ನೂ, ಅಧಮಪಕ್ಷ 24 ಘಂಟೆಗೊಂದಾವರ್ತಿ ತೆಗದು ಹಾಕದೆ ಯಾ ತೆಗೆಯಿಸಿ ಹಾಕದೇ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿಗಳು.

30. ಮನೆ ಸ್ವಂತಗಾರರು ಬಿದ್ದುಹೋದ ಗೋಡೆಗಳನ್ನು, ಯಾ ತಲೆಬಾಗಿಲು ನಿಲುವುಗಳನ್ನು ದುರಸ್ತು ಮಾಡಲಿಕ್ಕೆ, ಯಾ ಶವ್ಕು ಆವರಣಗಳ ಯಾ ಅಂಗಳಗಳ ಗೋಡೆಗಳಿಗೆ ಬಿಂಣ ಬಳಿಯುವದಕ್ಕೆ ಅಥವಾ ಯಿಟ್ಟಿಗೆಗಳಿಂದ ಯಾ ಹೆಂಚುಗಳಿಂದ ಅಂಚು ಕಟ್ಟಲಿಕ್ಕೆ ನೋಟಿಸ್ ಜಾರೀ ಮಾಡಲ್ಪಟ್ಟ ತರುವಾಯ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿ.

31. ಪಬ್ಲಿಕ್ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ ಸಾದೇ ಒಡೆಯುವಿಕೆ—ಜುರ್ಮಾನೆ 5 ರೂಪಾಯಿ.

32. ಸಂಗಡ ಯಿರತಕ್ಕಬಗ್ಗೆ ಸಾಕಾದಷ್ಟು ಮಂದಿ ಯಿಲ್ಲದೆ ರಸ್ತೆಯಲ್ಲಿ ಹೊಡಕೊಂಡು ಬರುವ ದನಗಳ ಯಾ ಹಂದಿಗಳ ಜಿಮ್ಮೆಯುಳ್ಳವರಾಗಿರುವಿಕೆ. ಅವುಗಳನ್ನು ಪಬ್ಲಿಕ್ ರಸ್ತೆಯಲ್ಲಿ ಮೇಯಲಿಕ್ಕೆ ಬಿಡುವಿಕೆ, ಯಾ ಹಂದಿಗಳನ್ನು ಸ್ವೇಚ್ಛೆಯಾಗಿ ತಿರುಗುವದಕ್ಕೆ ಬಿಡುವಿಕೆ.

II. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಬೆಳಿಗ್ಯೆ 4 ಘಂಟೆ ಲಾಗಾಯತ್ ರಾತ್ರಿ 8 ಘಂಟೆ ವರಿಗೆ ಕಾಯುವವನಿಲ್ಲದೆ ಯಾವ ಮನುಷ್ಯನೂ ದನಗಳನ್ನು ಮೇಯಿಸಕೂಡದು; ಮತ್ತು ಕಾಯುವವನಿಲ್ಲದೆ ಮೇಯುತಿದ್ದು ಶಿಕ್ಕುವ ದನಗಳು ತೊಂಡುವಾಡೆಗೆ ಒಯ್ಯಲ್ಪಡಲಿಕ್ಕೂ, ಅವುಗಳ ಸ್ವಂತಗಾರರು ಇದರಡಿ 3ನೇ ಕಲಂನಲ್ಲಿ ವಿವರಿಸಲ್ಪಟ್ಟ ಜುರ್ಮಾನೆಗಳನ್ನು ತೆರಲಿಕ್ಕೂ ಗುರಿಯಾಗತಕ್ಕದ್ದು.

III. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ರಾತ್ರಿ 8 ಘಂಟೆಗೂ, ಬೆಳಿಗ್ಯೆ 4 ಘಂಟೆಗೂ, ಮಧ್ಯೆ ದನಗಳನ್ನು ಮೇಯುವದಕ್ಕೆ ಯಾವ ಮನುಷ್ಯನೂ ಬಿಡಕೂಡದು. ಸದರೀ ಹೊತ್ತಿನ ಮಧ್ಯೆ ಮೇಯುತಿದ್ದು ಹಿಡಿಯಲ್ಪಟ್ಟ ದನಗಳು ತೊಂಡುವಾಡೆಗೆ ಹೊಡಿಯಲ್ಪಟ್ಟು, ಈ ಕೆಳಗೆ ನಮೂದಿಸುವ ಪ್ರಕಾರ ಜುರ್ಮಾನೆ ತೆತ್ತ ಹೊರ್ತು ಖುಲಾಸೇ ಮಾಡಲ್ಪಡಲಾರದು.

ಯೆಮ್ಮೇ ಕೋಣಗಳು	..	1—0—0	ಕರು ವ ಕತ್ತೆ	..	0—4—0
ಯೆತ್ತುಗಳು ಯಾ ಆಕಳು	..	0—8—0	ಕುದುರೆ ಯಾ ಟಾಕಣ	..	0—8—0
ಕುರಿ ಮ್ಯಾಕೆ	..	0—2—0			

33. ಒಂದು ಪಬ್ಲಿಕ್ ರಸ್ತೆಯಲ್ಲಿ ಯಾ ಒಂದು ಪಬ್ಲಿಕ್ ರಸ್ತೆಗೆ ಸಮೀಪವಾದ ಆಸ್‌ಪಾಸ್ ಪ್ರದೇಶದಲ್ಲಿ ದೇಹಭಾಧೆಗೆ ಹೋಗುವ ಅಥವಾ ಜನಗಳಿಗೆ ಹೇಸಿಕೆಯಾಗಿರುವ ಸ್ಥಳದಲ್ಲಿ ಯಾವ ಕಶ್ಮಲವನ್ನಾದರೂ, ಜಮಾಯಿಸಿ ಯಿಡುವ ಯಾವ ಮನುಷ್ಯನಾಗಲಿ, ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ಆವ್ವಲ್‌ದಫಾ ಅರ್ಧ ರೂಪಾಯಿ, ಎರಡನೇ ದಫಾ ಒಂದು ರೂಪಾಯಿ ಆತರುವಾಯ ನಡಿಸಲ್ಪಡುವ ಪ್ರತಿದಫಾಕ್ಕೂ, ಯೆರಡು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು.

34. ಅಲಿಯುವ ಯಾವ ತಿರಪಗಾರನೂ, (ಸ್ಟೇಷನ) (ಷಹರ್)ನ ಬೀದಿಗಳಲ್ಲಿ, ರಸ್ತೆಗಳಲ್ಲಿ ಯಾ ಸಂದಿಗಳಲ್ಲಿ ತಿರುಪಕ್ಕಾಗಿ ಬಾಧಿಸಕೂಡದು, ಯಾ ಜನಗಳನ್ನು ತಿರಪಪೇಡಕೂಡದು, ಮತ್ತು ರಸ್ತೆಗಳಲ್ಲಿ, ಬೀದಿಗಳಲ್ಲಿ ಯಾ ಗಲ್ಲಿಗಳಲ್ಲಿ ಯಾ ಬಂಡಿಗಳೊಳಗೆ ಯಾ ಮನೆಗಳೊಳಗೆ ತಿರಪಕ್ಕೋಸ್ಕರ ಬಾಧಿಸುವದಾಗಿ ಯಾ ಜನಗಳನ್ನು ತಿರುಪಬೇಡುವದಾಗಿ ತಮಗೆ ಶಿಕ್ಕಿದ ಯಾ ತಮ್ಮಲ್ಲಿ ಫಿರ್ಯಾದ್ ಮಾಡಲ್ಪಟ್ಟ, ಅಲಿಯುವ ಯಾವ ತಿರಪಗಾರರನ್ನಾಗಲಿ ಮ್ಯುನಿಸಿಪಲ್ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡೆದವಕ್ಕೋಸ್ಕರ ಖೈದ್‌ನಲ್ಲಿ ತೆಗದುಕೊಳ್ಳಲಿಕ್ಕೆ ಪೊಲೀಸ್‌ನವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಈ ಉಪನಿಬಂಧನೆಯು, ಆ ಯಾ ಜಾತಿಯ ನೇಟಿವ್‌ಗಳಿಂದ ಆದರಿಸಲ್ಪಟ್ಟು, ಪ್ರತಿದಿನವೂ ಆಹಾರಕ್ಕಾಗಿ ತಮ್ಮ ಮನೆಗಳಿಗೆ ಬರುವಂತೆ ಪ್ರೋತ್ಸಾಹ ಪಡಿಸಲ್ಪಟ್ಟ ಯಾವ ವಿಧದೊಳಗೂ ತೊಂದರೆ ಕೊಡದಂತಾ ಮತಸಂಬಂಧಿಗಳಾದ ಯಾಚಕರ ವಿಷಯದಲ್ಲಿ ಬಾಧಕ ವಾಗುವದಿಲ್ಲವು.

ಮೇಲೆ ಕಂಡ ಉಪನಿಬಂಧನೆಗೆ ಬರಿಕಿಲಾಫ್ ನಡೆಯುವದರಿಂದ ಹಾಗೆ ಅಪರಾಧಮಾಡುವ ಮನುಷ್ಯನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ನಾಲ್ಕು ದಿನಗಳ ಸಾಧಾರಣ ಖೈದಿಗೆ ಗುರಿಯಾಗತಕ್ಕದ್ದು.

II. ಅಸಹ್ಯವಾದ, ಅಥವಾ ಅಂಟುವಂತಾ ರೋಗ ತಗಲಿಯಿರುವ ಜನಗಳು, ಮ್ಯುನಿಸಿಪಾಲಿಟಿಯ (ಷಹರಿನ) ಮಾರ್ಕೆಟ್‌ಗಳಲ್ಲಾಗಲಿ ಅಂಗಡಿಗಳಲ್ಲಾಗಲಿ ಯಾವ ಆಹಾರಪದಾರ್ಥವನ್ನಾಗಲಿ ಮಾರಕೂಡದೆಂತ ಅಥವಾ ಮಾರಾಟದ ಬಗ್ಯೆ ಹೊರಗೆ ಯಿಡಕೂಡದೆಂತ ನಿಷೇಧಿಸಲ್ಪಟ್ಟಿರುತ್ತಾರೆ. ಅಂತಾತಕಸೀರ್‌ವಂತರು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟು ಮೊದಲು ದಫಾಕ್ಕೂ, ತರುವಾಯ ಪ್ರತಿದಫಾಕ್ಕೂ, ಒಂದು ರೂಪಾಯಿಗೆ ಜಾಸ್ತೀ ಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

35. ಮ್ಯುನಿಸಿಪಲ್ ಸರಹದ್ದುಗಳಲ್ಲಿ ಇಡಲ್ಪಟ್ಟ ಕುದುರೆಗಳು ಯಾ ಟಾಕಣಿಗಳು, ಯೆತ್ತುಗಳು, ಬಂಡಿಗಳು, ಮತ್ತು ನಾಯಿಗಳು, ಇವುಗಳ ಸ್ವಂತಗಾರರು ಈ ಕೆಳಗೆ ಕಂಡ ಪ್ರಕಾರ ತೆರಿಗೆಗಳನ್ನು ಕೊಡತಕ್ಕದ್ದು.

ಯೆರಡು ಚಕ್ರಗಳ ಬಂಡಿಗಳು	ಚಷ್ ಮಾಹೆ 1ಕ್ಕೆ	ರೂ	2—0—0
ನಾಲ್ಕು ಚಕ್ರಗಳ ಬಂಡಿಗಳು	,,	,,	3—0—0
ಈ ಶೀಮೆ ತಟ್ಟುವಿಗೆ	,,	,,	1—0—0
ಪ್ರತಿ ಟಾಕಣಿಗೆ	,,	,,	2—0—0
ಜೊತೆ ಬಂಡೀ ಯಾ ಗಾಡಿ ಯೆತ್ತುಗಳಿಗೆ	,,	,,	2—0—0
ನಾಯಿಗೆ	,,	,,	1—0—0
ಪ್ರತಿ ಕುದುರೆಗೂ	,,	,,	4—8—0

ತೆರಿಗೆ ಕೊಡೋಣಾದ ಮತ್ತು ಲೈಸೆನ್ಸ್ ತೆಗದುಕ್ಕೊಳ್ಳೋಣಾದ ನಾಯಿಗಳಿಗೆ ಕತ್ತಿಗೆ ಪಟ್ಟೇ ಹಾಕತಕ್ಕದ್ದು.

ಇಲ್ಲದಿದ್ದರೆ ತೊಂಡು ನಾಯಿಯೆಂತ ಯಾ ಬೇವಾರಸ್ ನಾಯಿಯೆಂತ ಕೊಂದು ಹಾಕಲ್ಪಡುವದಕ್ಕೆ ಗುರಿಯಾಗತಕ್ಕದ್ದು.

36. ಧೂಳು, ಕಸ, ಬೂದಿ, ವ ಕಚರಾ ಇಂತಾವುಗಳನ್ನು, ಆಚಿಗೆ ಸಾಗಿಸಿಕ್ಕೊಂಡುಹೋಗುವ ಪರಿಯಂತ ಹಂಗಾಮೀ ಯಾಗಿ ಹಾಕಿ ಇಡಬಹುದಾದ, ಕದಲಿಸತಕ್ಕಂತಾ ಅಥವಾ ನೆಲೆಯಾಗಿರುವಂತಾ ಯೆಷ್ಟು ಕಚರೆ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ, ಪ್ರೆಸೀಡೆಂಟರು ಒದಗಿಸಿ, ಯುಕ್ತಗಳಾದ ಮತ್ತು ಅನುಕೂಲಗಳಾದ ಸ್ಥಳಗಳಲ್ಲಿ ಇಡಿ ಸಬಹುದು, ಮತ್ತು ಬೀದಿಗಳೊಳಗಿರುವ ಮನೆಗಳ ವಾಸಸ್ಥರು ಮೇಲೆ ಕಂಡ ದರೋಬಸ್ತು ಕಚರೇ ವಗೈರೇಯನ್ನು ಪ್ರತಿದಿ ನವಾಗಲಿ, ಅನ್ಯಥಾ ಯಾವದಾದರೊಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀ ದುಮಾಡಬಹುದು.

ಅಂತಾ ಆಧಾರಗಳು ಕಲ್ಪಿಸಲ್ಪಟ್ಟ ಬಳಿಕ ಮತ್ತು ಮೇಲೆ ಕಂಡಮೇರೆ ತಾಕೀದ್ ಮಾಡಲ್ಪಟ್ಟ ಬಳಿಕ ಪ್ರೆಸೀಡೆಂಟರಿಂದ ಗೊತ್ತುಮಾಡಲ್ಪಡುವ ಅಂತಾ ಆಧಾರಗಳಲ್ಲಿ ಯಾ ಸ್ಥಳಗಳಲ್ಲಿ ಮತ್ತು ಅಂತಾ ರೀತಿಯಾಗಿ, ಮತ್ತು ಅಂತಾ ಹೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪದಾರ್ಥಗಳನ್ನಾಗಲಿ ಯಾವ ಬೀದಿಯೊಳಗಾಗಲಿ, ಯಾವದಾದರೂ ಮನೆಯ ಸ್ಥಿರವಾದ ಜಗ ಲಿ, ಯಾ ಹಜಾರ ಇಂತಾದ್ದರಮೇಲೆಯಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲಾಗಲಿ, ಜಮಾಯಿಸಿ ಇಡುವ ಯಾ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ, 2 ಆಣೆ ಲಾಗಾಯತು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರಿಂದ ಗೊತ್ತುಮಾಡಲ್ಪಡತಕ್ಕ ಸ್ಥಳಗಳೊಳಗೂ, ಆರೀತಿಯಾಗಿಯೂ, ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವನು ಕಶ್ಮಲವನ್ನು ಹಾಕಿ ಇಡುತಾ ನೋ ಯಾ ಇಡಗೊಡಿಸುತ್ತಾನೋ ಅಥವಾ ಯಾವದಾದರೂ ಬೀದಿಯಲ್ಲಿಯಾಗಲಿ, ಮನೆಯ ತಳವರಸೆ, ಜಗತಿ, ಯಾ ವಸಾರೆಯಲ್ಲಿ ಅಥವಾ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ದಾದರೂ ಜಮೀನನಲ್ಲಾಗಲಿ, ನದೀತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವದಾದರೂ ಧೂಳು, ಕಸ, ಸಗಣಿ, ಬೂದಿ; ತೊಟ್ಟಿ ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೆಯದಾದರೂ ಕಶ್ಮಲ, ಜಂತು ಸಂಬಂಧವಾದ ಯಾವದಾದರೂ ಪದಾರ್ಥ, ಅಥವಾ ಕನ್ನಡಿ ಯಾ ಮಡಿಕೆ ಚೂರು, ಇಟಿಗೇ ಮುರುಕು, ಗಾರೆ ಯಾ ಇತರ ಕಚರಾ, ಇಂತಾದ್ದ ನ್ನಾಗಲಿ, ಜಮಾಯಿಸಿ ಇಡುವಂತೆ ತನ್ನ ನಾಕರರಿಗೆ ಅಪ್ಪಣೇ ಕೊಡುತ್ತಾನೋ. ಅಂತಾ ಮನುಷ್ಯನು 2 ಆಣೆಗಳ ಲಾಗಾ ಯತ್ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

37. ಯಾವನು, (ಬಚ್ಚಲುನೀರು ಬೀದಿಯಲ್ಲಿ ಹರಿಯಗೊಡಿಸಿ ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿ ರುವ ಯಾವದಾದರೂ ಬಚ್ಚಲು, ಯಾ ಚರಂಡಿ, ಯಾ ಪಾಯಖಾನೆ ಇಂತಾದ್ದರ ನೀರನ್ನಾಗಲಿ, ದುರ್ವಾಸನೆಯುಳ್ಳ ಇನ್ಯಾವ ದ್ರವ ಪದಾರ್ಥವನ್ನಾಗಲಿ, ಯಾವ ಬೀದಿಯಲ್ಲಾದರೂ, ಹರಿಯುವಂತೆ ಯಾ ಚೆಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡು ತ್ತಾನೋ ಯಾ ಮಾಡುವಂತೆ ಅಪ್ಪಣೆ ಕೊಡುತ್ತಾನೋ, ಅಥವಾ, ಯಾವ ಪಾಯಖಾನೆ ಇಂದಲಾಗಲಿ ಬಚ್ಚಲು ಗುಣಿಯಿಂದ ಲಾಗಲಿ ಅಸಹ್ಯವಾದ ಯಾವ ಪದಾರ್ಥವಾದರೂ ಯಾವ ಬೀದಿಯೊಳಗಾಗಲಿ ಇರುವ ಮೇಲ್ಭಾಗದ ಚರಂಡಿಯೊಳಗೆ ಹರಿ ಯುವಂತೆ ಯಾ ಚೆಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೇ ಕೊಡುತ್ತಾನೋ ಅಂತಾವನು 2 ಆಣೆಗಳ ಮೊದಲ್ಗೊ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

38. ಪ್ರೆಸೀಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗ ಲಿ, ಅಸಹ್ಯವಾದ ಅಂತಾ ಯಿತರ ವಸ್ತುವನ್ನಾಗಲಿ ತೆಗೆಸಿಹಾಕುವದು ನ್ಯಾಯವಾಗಿರತಕ್ಕದ್ದು. ಪ್ರೆಸೀಡೆಂಟರು ಅಂತಾ ಕಾಲವ ನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ್ ಕೊಟ್ಟಾಗ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿ ಯಾದರೂ ತೆಗದುಕ್ಕೊಂಡು ಹೋಗುತ್ತಾನೋ ಯಾ ತೆಗದುಕ್ಕೊಂಡು ಹೋಗುವಂತೆ ಮಾಡುತ್ತಾನೋ ಮತ್ತು ಯಾವನು ಪ್ರೆಸೀಡೆಂಟರಿಂದ ನಿಷ್ಕರ್ಷೆ ಯಾ ಗಿರಲಿ ಆಗದೆ ಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರ ದಂತೆ ತಕ್ಕ ಮುಚ್ಚಳವಿಲ್ಲದೆ ಯಾವದಾದರೂ ಬಂಡಿ ಯಾನಸಾಧನ ಯಾ ಯಿತರ ಆಧಾರ ಯಾ ಪಾತ್ರ ಯಿಂತಾದ್ದನ್ನು ಅಂತಾ ಯಾವ ಕಾರ್ಯಕ್ಕೋಸ್ಕರವಾಗಿ ಉಪಯೋಗಿಸುತ್ತಾನೋ ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗೆಸಿಕ್ಕೊಂ ಡು ಹೋಗುವಲ್ಲಿ ಅದನ್ನು ಕೆಳಗೆ ಚೆಲ್ಲುತ್ತಾನೋ ಯಾ ಸುರಿಯುತ್ತಾನೋ, ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲ ವಾದರೂ ಚೆಲ್ಲಿದ ಅಥವಾ ಬಿದ್ದಕಡೆಯಲ್ಲೆಲ್ಲ ಅದನ್ನು ಚನ್ನಾಗಿ ಗುಡಿಸಿ ಸಾಫಮಾಡುವದಿಲ್ಲವೋ, ಯಾವನು ಮೇಲೆ ಕಂಡ ಯಾ ವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ ಯಾನ ಸಾಧನ ಆಧಾರ ಯಾ ಪಾತ್ರ ಇಂತಾದ್ದನ್ನು ಪ್ರಸೀ ಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟಿಸ್‌ಮೂಲಕ ಸದರೀ ಬಗ್ಯೆ ಮೊಕರರ್ ಮಾಡುವ ಬೀದಿ, ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡೆಯುತ್ತಾನೋ, ಯಾ ತೆಗದುಕ್ಕೊಂಡು ಹೋಗುತ್ತಾನೋ, ಅಥವಾ ಹೊಡೆಯುವಂ ತೆ ಯಾ ತೆಗದು ಕ್ಕೊಂಡು ಹೋಗುವಂತೆ ಮಾಡುತಾ ನೋ. ಅಂತಾ ಮನುಷ್ಯನು 5 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

39. ಈ ಉಪನಿಬಂಧನೆಗಳಿಂದ ಉಂಟು ಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಕಶ್ಮಲವನ್ನು ಹಾಕಿ ಇಡುವ ಬಗ್ಯೆ, ಮಲ, ಸಗಣಿ, ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ, ಮತ್ತು ಈ ಉಪನಿಬಂಧನೆಗಳ ಬಾಬತು ಮೇಲೆ ಕಂಡ ಕಾರ್ಯಗಳಿಗಾಗಲಿ, ಆಪೈಕಿ ಯಾವ ಕಾರ್ಯಗಳಿಗಾಗಲಿ ಬೇಕಾದ ದರೋಬಸ್ತು ಜಾನವಾರ್‌ಗಳನ್ನೂ, ಬಂಡಿಗಳನ್ನೂ, ಸಾಧನಗಳನ್ನೂ, ಇತರ ವಸ್ತುಗಳನ್ನೂ, ಇಡುವ ಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಮೆಂಬರ್‌ಗಳು, ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು. ಯಾ ಒದಗಿಸತಕ್ಕದ್ದು, ಮತ್ತು ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಮೆಂಬರ್‌ಗಳು, ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು. ಯಾ ಬಾಡಿಗ್ಯೆ ತೆಗದು ಕೊಳ್ಳಬಹುದು, ಅಥವಾ ತಮ್ಮಿಂದ ಕೊಂಡುಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದು ಕೊಳ್ಳತಕ್ಕ ಯಾವ ಜಮೀನಲ್ಲಾಗಲಿ ಯಾವ ಹೊಸ ಕಟ್ಟಡವಾದರೂ ಕಟ್ಟಿಸಲ್ಪಡುವಂತೆ ಮಾಡಬಹುದು.

40. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ, ಅದರ ಸಮೀಪದಲ್ಲಾಗಲಿ, ಪ್ರತಿ ಮನೆಯವಾಸಸ್ಥನೂ, ತನ್ನ ವತಾರದಿಂದ, ಮಲವಗೈರೇ ತೆಗದುಕೊಂಡು ಹೋಗುವ ಬಗ್ಯೆ ಮ್ಯುನಿಸಿಪಲ್ ಮೆಂಬರ್‌ಗಳಿಂದ ಒದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ, ಸಗಣಿಯನ್ನೂ, ಇತರ ಕಚರೇಯನ್ನೂ ಮ್ಯುನಿಸಿಪಲ್ ಮೆಂಬರ್‌ಗಳು ನಿಯಮಿಸುವ ಕಾಲದಲ್ಲಿಯೂ, ಅಂತಾ ರೀತಿಯಾಗಿಯೂ ಸಾಗಿಸುವದು ಅವನ ಕಾರ್ಯವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರ ಕಚರೆ ಇಂತಾದ್ದನ್ನು ಸಾಗಿಸಿಕೊಂಡು ಹೋಗಬೇಕೆಂದು ಖಾಯಿಷ್ ಮಾಡಿದಲ್ಲಿ ಈ ಬೈಲಾನಿಬಂಧನೆಗಳ 38ನೇ ಸೆಕ್ಷನ್ ನಿಬಂಧನೆಗಳಿಗೆ ಅನುಗುಣವಾಗಿ ಆ ಮೇರೆ ಮಾಡುವದು ಅವನ ಎಖ್ತ್ಯಾರೀ ಮೇಲೆ ಇರತಕ್ಕದ್ದು.

41. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದಿನೊಳಗೆ ಯಿರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರದಲ್ಲಿ ಅಲ್ಲದೆ ಅನ್ಯಥಾ 24 ಗಂಟೆಗಳಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರಾ, ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಯಿಂತಾದ್ದನ್ನು ಅಂತಾ ಯಾವದಾದರೂ ಮನೆಗಳ ಛಾವಣೀಯಲ್ಲಿ ಯಾ ಛಾವಣಿಯ ಮೇಲೆ ಅಥವಾ ಅಂತಾ ಮನೆಗೆ ಸೇರಿದ ಮತ್ತು ಅಂತಾ ಮನೆಯ ವಾಸಸ್ಥನಿಂದ ವಾಸ ಮಾಡಲ್ಪಡುವ ಯಾವ ಔಟ ಹೌಸ ವಗೈರೆಯ ಛಾವಣೀ ಯೊಳಗೆ ಯಾ ಅದರ ಮೇಲ್ಗಡೆ, ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ ಯಿಡುತ್ತಾನೋ ಯಾ ಯಿಡಗೊಡಿಸುತ್ತಾನೋ ಅಂತಾವನು 2 ಆಣೆಗಳ ಲಾ॥ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

42. ಝಾಡ್ ಮಾಲೀರಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ಏಜಂಟರ ಮಾರೀಫತ್ ಮಾಡಿಸುತ್ತೇವೆಂತ, ಯಾವ ಮನೆಯ ವಾಸಸ್ಥನಿಗಾಗಲಿ, ವಾಸಸ್ಥರಿಗಾಗಲಿ, ಯಿದರ ಹಿಂದಿನಕಡೇ ಸೆಕ್ಷನ್‌ಗಳನ್ನು ಅನುಸರಿಸಿ ನೋಟಿಸ ಕೊಡೋಣವೂ, ಮತ್ತು ಈ ಬಗ್ಯೆ ಸಾಕಾದಷ್ಟು ಮಂದಿ ಝಾಡಮಾಲೀಗಳನ್ನು ಯಿಡುವಣವೂ, ಮೆಂಬರ್‌ಗಳ ಕಾರ್ಯವಾಗಿರತಕ್ಕದ್ದಲ್ಲದೆ ಯಾವ ಮನೆಯನ್ನು ಗುಡಿಸುವಕೆಲಸವು ಹಾಗೆ ಅವರುಗಳಿಂದ ವಹಿಸಲ್ಪಡುತ್ತೋ ಅಂತಾ ಪ್ರತಿ ಮನೆಗೂ, ಆ ಮನೆಯ ವಾಸಸ್ಥರು ಸಾಧಾರಣವಾದ ಒಬ್ಬ ಝಾಡ್ ಮಾಲೀಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದೋ ಅಷ್ಟಕ್ಕೆ ಜಾಸ್ತೀಯಿಲ್ಲದಂತೆ ಒಂದು ತೀರ್ವೆ ಮೊಕರರ್ ಮಾಡುವದು ಅವರುಗಳಿಗೆ ನ್ಯಾಯ್ಯವಾಗಿರತಕ್ಕದ್ದು.

43. ಮೆಂಬರ್‌ಗಳ ಹುಕ್ಕುಂ ಅನುಸರಿಸಿ ಬೀದಿಗಳಲ್ಲಿಯೂ ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ. ಜಲದಾರೆಗಳಲ್ಲಿಯೂ, ಬಚ್ಚಲು ತೊಟ್ಟಿಗಳಲ್ಲಿಯೂ, ಜಮಾಯಿಸಲ್ಪಡುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲದಾರೆ, ರೊಚ್ಚು, ಮಣ್ಣು ಸಗಣಿ, ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕವು; ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೇಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು-ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳೀ ಯಾಗುವ ಹಣವು ಈ ಬೈಲಾ ನಿಬಂಧನೆಗಳ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

44. ಮೆಂಬರ್‌ಗಳು ತಮ್ಮಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತ ಕೆಲಸಗಳನ್ನೂ, ಯಂತ್ರಗಳನ್ನೂ ಒದಗಿಸಬಹುದು.

45. ಮೆಂಬರುಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳು, ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಆವಶ್ಯಕವೆಂದು ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ತೋರುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಒದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮದಲ್ಲಿ ಇಡಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಒರಸಿ ಸಾಫ್ ಮಾಡುವದು, ಸಿದ್ಧಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಮೆಂಬ

ರಿಗಳು ಆಗಿಂದಾಗ್ಗೆ ತಮಗೆ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ಜಾಸ್ತೀ ಮಾಡಬಹುದು, ಅಥವಾ ಬೇರೇ ವಿಧವಾಗಿ ಬದಲಾವಣೀ ಮಾಡಬಹುದು.

46. ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದತರುವಾಯ ಯಾವ ಪಬ್ಲಿಕ್ ಬೀದಿಯಲ್ಲಿಯಾಗಲಿ ರಸ್ತೆಯಲ್ಲಿಯಾಗಲಿ ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾಯಿರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ ಇಂತಾದ್ದರಲ್ಲಿ ಯಾಗಲಿ, ಇಂತಾದ್ದರಮೇಲೆಯಾಗಲಿ ಯಾವನು ಯಾವದಾದರೂ ಗೋಡೆ ಹಾಕುತ್ತಾನೋ ಅಥವಾ ಯಾವ ಆವರಣ ಮುಂತಾದ್ದನ್ನು ಯಾ ಇತರ ನಿರೋಧವನ್ನು, ಯಾ ಒತ್ತುವರಿಯನ್ನು ಕಟ್ಟುತ್ತಾನೋ ಯಾ ಇಡುತ್ತಾನೋ ಅಂತಾವನು ಯೆರಡಾಣೆ ಲಾಗಾಯಿತು ಐದುರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಮೆಂಬರ್‌ಗಳು ಅಂತಾ ಯಾವ ನಿರೋಧವನ್ನಾಗಲಿ, ಒತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಹಾಗೆ ತೊಲಗಿಸುವದರ ಲಾಗವಡು ಸದರೀ ಅಟಕಾವ್ ವಗೈರೆ ಉಂಟುಮಾಡಿದ ಮನುಷ್ಯನು ಕೊಡತಕ್ಕದ್ದಾಗಿ, ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು. ಪೋಲೀಸ್‌ಸೂಪರಿಂಟೆಂಡೆಂಟರ ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಿ ಆಗಲಿ ಉತ್ಸವ ಮದಿವೆ ಮುಂತಾದ ಸಮಯಗಳಲ್ಲಿ ಹಂಗಾಮಿಯಾಗಿ ಯಾವದಾದರೂ ಕಟ್ಟುವದಕ್ಕೆ ಅಪ್ಪಣೆ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿರುವ ಯಾವ ಅಂಶವೂ ಮೆಂಬರ್‌ಗಳನ್ನು ಆತಂಕಪಡಿಸತಕ್ಕದ್ದಲ್ಲವು.

47. ಯಾವನು ಯಾವ ಪಬ್ಲಿಕ್ ಬೀದಿಯ, ರಸ್ತೆಯ, ತಳವರಿಸೇ ಕಲ್ಲುಗಳನ್ನಾಗಲಿ, ಚಾಪು ಕಲ್ಲುಗಳನ್ನಾಗಲಿ ಇತರ ಸಾಮಾನುಗಳನ್ನಾಗಲಿ, ಅಥವಾ ಆವರಣಗಳು, ಕಂಭಗಳು, ಇಂತಾವುಗಳನ್ನಾಗಲಿ, ಪಬ್ಲಿಕ್ ದೀಪಸ್ತಂಭಗಳನ್ನಾಗಲಿ, ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತೀ ಯಿಲ್ಲದೆ ಅಥವಾ ಯಿತರ ನ್ಯಾಯವಾದ ಅಧಿಕಾರವಿಲ್ಲದೆ ಕೆಡಿಸುತ್ತಾನೋ, ಸ್ಥಳ ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ, ಅವುಗಳಲ್ಲಿ ಯೇನಾದರೂ ಬದಲಾವಣೀ ಮಾಡುತ್ತಾನೋ ಅಂತಾವನು ಯೆರಡಾಣೇಲಾಗಾಯಿತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

48. ಯಾವ ಬೀದಿಯು ಯಾವ ಹೆಸರಿನಲ್ಲಿ ತಿಳಿಯಲ್ಪಡತಕ್ಕದ್ದೋ ಆ ಹೆಸರನ್ನು ಪ್ರೆಸೀಡೆಂಟರು ಆಗಿಂದಾಗ್ಗೆ ಪ್ರತಿ ಬೀದಿಯ ಯೆರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂಥಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾದರೂ ಕಟ್ಟ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಇಡಿಸಬಹುದು, ಯಾ ಕಟ್ಟಿಸಬಹುದು; ಮತ್ತು ಯಾವನು ಅಂತಾ ಹೆಸರನ್ನು ನಾಶಪಡಿಸುತ್ತಾನೋ ಕಿತ್ತು ಹಾಕುತ್ತಾನೋ ಕೆಡಿಸುತ್ತಾನೋ ಅಥವಾ ಪ್ರೆಸೀಡೆಂಟರ ಅಪ್ಪಣೇಮೇಲೆ ಇಡಲ್ಪಟ್ಟ ಹೆಸರು ಶಿವಾಯಿ ಬೇರೆ ಹೆಸರು ಯಿಡುತ್ತಾನೋ ಅಂತಾವನು ಯರಡಾಣೇ ಲಾಗಾಯತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

49. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟವಾದರೂ, ಗೋಡೆಯಾದರೂ, ಅದಕ್ಕೆ ಸೇರಿಸಲ್ಪಟ್ಟ ಮತ್ತೇನಾದರೂ, ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವಹಾಗೆ ಯಿರುವದಾಗಿ, ಅಥವಾ ಅಂತಾ ಕಟ್ಟದ ವಾಸಸ್ಥರಿಗೆ ಯಾ ಆಸ್‌ಪಾಸ್ ಕಟ್ಟಗಳಿಗೆ ಯಾ ಅವುಗಳ ವಾಸಸ್ಥರಿಗೆ, ಯಾ ಅನುಭವದಾರರಿಗೆ ಯಾ ಬೀದೀಯಲ್ಲಿ ಹೋಗತಕ್ಕವರಿಗೆ ಯಾವರೀತಿಯಿಂದಲಾದರೂ ಅಪಾಯಕರವಾಗುವದಾಗಿ ಪ್ರೆಸೀಡೆಂಟರಿಗೆ ತೋರಬಂದರೆ, ಸದರೀ ಪ್ರಸೀಡೆಂಟರು ತಮಗೆ ಜರೂರ್ ತೋರಿದರೆ, ಬೀದಿಯಲ್ಲಿ ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಹಲಿಗೆಯನ್ನೂ ಯಾ ಆವರಣವನ್ನೂ, ಕೂಡ್ಲೇ ಹಾಕಿಸತಕ್ಕದ್ದು. ಮತ್ತು ಮಾಲೀಕನು ಫಲಾನೇ ಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವನಾಗಿ ಯಿದ್ದಲ್ಲಿ, ಅವನಿಗೆ ಬರವಣಿಗೇ ಮೂಲಕ ನೋಟಿಸ್ ಕೊಡಿಸತಕ್ಕದ್ದಲ್ಲದೇ ಅಂತಾ ನೋಟಿಸನ್ನು ಅಂತಾ ಕಟ್ಟ ವಗೈರೆಯ ಬಾಗಲಿಗಾಗಲಿ, ಯಿತರ ಪ್ರಸಿದ್ಧವಾದ ಭಾಗದೊಳಗಾಗಲಿ, ಚಿಕ್ಕಾಯಿಸತಕ್ಕದ್ದು, ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡತಕ್ಕದರಲ್ಲಿ ಸಂದರ್ಭಾನುಸಾರ, ಅಂತಾ ಕಟ್ಟವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೂಡ್ಲೇ ತೆಗದು ಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತು ಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿಗೆ ತಾಕೀದ್ ಮಾಡತಕ್ಕದ್ದು, ಮತ್ತು ಅಂತಾ ಮಾಲೀಕ ಯಾ ವಾಸಸ್ತನು, ಅಂತಾ ನೋಟಿಸ್ ಕೊಟ್ಟ ಮೂರುದಿವಸಗಳೊಳಗಾಗಿ, ಸದರೀ ಕಟ್ಟವನ್ನು ರಿಪೇರ್ ಮಾಡಲಿಕ್ಕೆ ಯಾ ಕಿತ್ತು ಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಷುರು ಮಾಡಿ ಯುಕ್ತವಾದ ಮುತವಜ್ಜೀಯಿಂದ ಪೂರೈಸದೇ ಹೋದಲ್ಲಿ ಪ್ರೆಸೀಡೆಂಟರು, ಸದರೀ ಕಟ್ಟ, ಗೋಡೆ, ಯಾ ಯಿತರ ವಸ್ತು ಯಿಂತಾದ್ದರ ಪೈಕೀ ವಿಷ್ಟವನ್ನಾಗಲಿ, ತಾವು ಜರೂರೆಂದು [illegible]ಸುವಷ್ಟು ಭಾಗವನ್ನಾಗಲಿ, ಕಿತ್ತು ಹಾಕಿಸತಕ್ಕದ್ದು, ಯಾ ರಿಪೇರ್ ಮಾಡಿಸತಕ್ಕದ್ದು, ಯಾ ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀ ಕಟ್ಟದ ಸಾಮಾನುಗಳನ್ನು ಸದರೀ ಬಗ್ಗೆ ತಮಗೆ ಯುಕ್ತ ತೋರುವ ಪ್ರಕಾರ ಉಪಯೋಗಿಸಬಹುದು, ಮತ್ತು ಆಬಗ್ಗೆ ಹಿಡಿದ ದರೋಬಸ್ತು ಲಾಗವಡೂ ಸದರೀ ಕಟ್ಟ ಮುಂತಾದವುಗಳ ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

50. ಮೇಲೆ ಕಂಡ ಅಧಿಕಾರ ಬಲದಿಂದ ಅಂತಾ ಯಾವ ಕಟ್ಟಣವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತು ಹಾಕಲ್ಪಟ್ಟಲ್ಲಿ, ಮೆಂಬರಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಯಿಷ್ಟು ಕಿತ್ತು ಹಾಕಲ್ಪಡುತ್ತೋ ಅಷ್ಟನ್ನು, ಹರಾಜ್ ಹಾಕಿಸಿ ಅಂತಾ ಹರಾಜ್ ಹುಟ್ಟುವಳೀ ಹಣವನ್ನು, ಕಿತ್ತು ಹಾಕಿದ ಲಾಗವಡನ್ನ ಕೊಡತಕ್ಕ ಬಗ್ಯೆ, ವಿನಿಯೋಗಿಸಬಹುದು. ಅಂತಾ ವಿಕ್ರಯದ ಮೊಬಲಗಿನ ಪೈಕೀ ಖರ್ಚು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟಣದ ಯಾ ಗೋಡೆಯ ಮಾಲೀಕನು ಹರಾಜ್ ತಾರೀಖು ಲಗಾಯತ್ ಆರು ತಿಂಗಳೊಳಗಾಗಿ ಬಂದು ಕೇಳಿದರೆ ಅವನಿಗೆ ಕೊಟ್ಟುಬಿಡತಕ್ಕದ್ದೇಹೊರತು ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು, ಮೆಂಬರ್‌ಗಳು, ಅಂತಾ ಸಾಮಾನುಗಳನ್ನು ಮೇಲೆಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸಿದಾಗ್ಯೂ, ಸದರೀ ಲಾಗವಡಿನ ವಿಶಿಷ್ಟ ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಬೈಲಾ ನಿಬಂಧನೆಗಳ ದೆಸೆಯಿಂದ ಯಾವ ಪರಿಹಾರ ಉಂಟುಮಾಡಲ್ಪಟ್ಟಿರುತ್ತೋ ಮೇಲೆಕಂಡ ಹರಾಜ್‌ನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ್ದು ಜಾತಾ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೂ ಅದೇ ಪರಿಹಾರ ವುಂಟಾಗಿರತಕ್ಕದ್ದು.

51. ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸೀಡೆಂಟರು, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ, ತಾವಾದರೂ, ತಮ್ಮ ನೌಕರರ ಮಾರಿಫತ್ತಾದರೂ, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟಮೇಲೆ ದರೋಬಸ್ತು ಕಟ್ಟಡಗಳೊಳಗೂ, ಪ್ರವೇಶಿಸಿ ನೋಡುವದು, ವಿಶಿಷ್ಟ ಕಟ್ಟಡವಾಗಲಿ, ಯಾವ ಭಾಗವಾಗಲಿ, ಆರೋಗ್ಯಕ್ಕೋಸ್ಕರ ಕೂಡಲೆ ಒಳಗೂ ಹೊರಗೂ ಸುಣ್ಣ ಬಳಿಸಲ್ಪಡುವಂತೆ ಅಥವಾ ಯಿತರ ರೀತಿಯಿಂದ ಪಾಕ್ ಮಾಡುವಂತೆ ಬರವಣಿಗೇ ಮೂಲಕ ಹುಕ್ಕುಂ ಕೊಡುವದು ಸಹ ಅವರಿಗೆ ನ್ಯಾಯ್ಯವಾಗಿರತಕ್ಕದ್ದು. ಅಂತಾ ಕಟ್ಟಡದ ಮಾಲೀಕ ಯಾ ವಾಸಸ್ಥನು ತನಗೆ ಅಂತಾ ಹುಕ್ಕುಂ ಕೊಡೋಣಾದ್ದು ಮೊದಲು ಯೆಂಟುದಿನಗಳೊಳಗಾಗಿ ಆ ಮೇರೆ ಪಾಕ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ, ಪ್ರೆಸೀಡೆಂಟರು ಆ ಕೆಲಸ ಮಾಡಿಸಬಹುದು, ಮತ್ತು ಆಬಗ್ಯೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಮ್ಯುನಿಸಿಪೆಲ್ ಇಲಾಖೆಯ ಸ್ಯಾನಿಟರಿ ಯಿನ್ಸ್‌ಪೆಕ್ಟರ್ ಎಂಬ ಅಧಿಕಾರಿಯು ರೋಗ ನಿಮಿತ್ತಗಳಾದ ಕಟ್ಟಡಗಳನ್ನು, ಹೊಗೆ ಹಾಕಿಸುವ ಬಗ್ಯೆ ಅಥವಾ ರೋಗ ವ್ಯಾಪನೆಯ ನಿಮಿತ್ತವನ್ನು ನಿವರ್ತಿ ಮಾಡುವ ಬಗ್ಯೆ ಮುಚ್ಚಿಸತಕ್ಕದ್ದು. ಪ್ರೆಸೀಡೆಂಟರ ಬರವಣಿಗೆಯ ಮೂಲಕ ಮಂಜೂರಾತಿಯನ್ನು ಅನುಸರಿಸಿ ಅಂತಾ ಕ್ರಮಗಳನ್ನು ಏರ್ಪಡಿಸತಕ್ಕದ್ದು.

52. ಯಾವ ಕಟ್ಟಡವಾದರೂ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಒಂದು ವಕ್ಕಲಿಗಿಂತ ಹೆಚ್ಚಾಗಿ ಇರುವಾಗಿ ಮ್ಯುನಿಸಿಪೆಲ್ ಬೋರ್ಡಿನ ಪ್ರಸೀಡೆಂಟರಿಗೆ ಸಾನಿಟೇರಿ ಇನ್ಸ್‌ಪೆಕ್ಟರವರು ಸೆರ್ಟಿಫೈ ಮಾಡುವಲ್ಲಿ, ಪ್ರಸೀಡೆಂಟರು, ಅಂಥಾ ಜನ ಸಮ್ಮರ್ದವನ್ನು ತಗ್ಗಿಸುವಬಗ್ಯೆ ಮಾಜಿಸ್ಟ್ರೇಟರಲ್ಲಿ ನಡವಳಿತ ನಡಿಸತಕ್ಕದ್ದು. ಮಾಜಿಸ್ಟ್ರೇಟರು ಅದರ ಮೇಲೆ ತಮಗೆ ಯುಕ್ತತೋರುವ ಹುಕ್ಕುಂ ಕೊಡತಕ್ಕದ್ದು. ಅಂತಾ ಜನ ಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕ್ಕುಂ ತಾರೀಖು ತರುವಾಯ ಹಾಗೆ ಜನ ಸಮ್ಮರ್ದವಿರುವ ಪ್ರತಿದಿನಕ್ಕೂ, ಒಂದು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

53. ಯಾವದಾದರೂ ಜಮೀನಿನಲ್ಲಿರತಕ್ಕ ಪೇಲೀಗಳು ಭೂಮಿಯಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಹಾಗೆ ಅವುಗಳನ್ನು ಕತ್ತರಿಸುವಂತೆ, ಯಾ ಕೊಂಬೆಗಳು ಕಡಿಯುವಂತೆ, ಮತ್ತು ಯಾವದಾದರೂ ಪಬ್ಲಿಕ್ ರಸ್ತೆ ಅಥವಾ ಬೀದಿಯಮೇಲೆ ವಾಲಿಇರುವದರಿಂದ ದಾರಿಗೆ ಅಟಕಾವ್ ಆಗುವಂತಾ, ಅಥವಾ ಲುಕ್ಸಾನ್ ಆಗುವಂತಾ, ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುತಿದ್ದರೆ, ಅಂತವನಿಗೂ, ಅದರ ಅನುಭವದಾರನಿಗೂ, ಪ್ರಸೀಡೆಂಟರು ಬರವಣಿಗೆಯ ಮೂಲಕ ನೋಟಿಸ್ ಕೊಡಬಹುದು. ಅಂತಾ ನೋಟಿಸ್‌ನಲ್ಲಿ ಕಂಡ ತಾರೀಖುಲಗಾಯತ್ ಎಂಟುದಿನಗಳೊಳಗಾಗಿ, ಅದರಂತೆ ನಡೆಯದೆ ಇದ್ದ ಪಕ್ಷಕ್ಕೆ ಮಾಲೀಕನಾಗಲಿ, ಅನುಭವದಾರನಾಗಲಿ, ಮಾಜಿಸ್ಟ್ರೇಟರಮುಂದೆ ತಕಸೀರ್ ಆಪಾದನೆಪಟ್ಟು 2 ರೂಪಾಯಿಗಳ ಲಗಾಯತ್ 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಮತ್ತು ಅಂತಾ ತಕಸೀರಿಗಾಗಿ ಆಪಾದನೆ ಆದಮೇಲೆ ಸದರೀ ತಕಸೀರ್ ನಡೆಯುತ್ತಿರುವ ಪ್ರತಿದಿನಕ್ಕೂ, ಒಂದುರೂಪಾಯಿ ಮೊದಲು ಹತ್ತು ರೂಪಾಯಿಗಳ ವರಿಗೆ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

54. ಕ್ರಮಪ್ರಕಾರ ನೋಟಿಸ್ ಕೊಡಲ್ಪಟ್ಟತರುವಾಯ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸೀಡೆಂಟರಿಂದ ಲೈಸೆನ್ಸ್ ಪಡೆಯದೆ ಮ್ಯುನಿಸಿಪೆಲ್ ಸರಹದ್ದಿನೊಳಗೆ ಒಂದು ಸ್ಥಳದಲ್ಲಿ ಯಾವದಾದರೂ ಬಾಡಿಗೆ ಕುದುರೆಗಳ ಯಾ ಬಂಡಿಗಳ ತಬೇಲೀಗಳು, ಕುದುರೆಲೈನ್‌ಗಳು, ಕುದುರೇ ಚಿಕಿತ್ಸೇಶಾಲೆಗಳು ಬಂಡಿಪೆಟ್ಟಿಗೆ, ದನಗಳ ಕೊಟ್ಟಿಗೆಗಳು ಅಥವಾ, ಪಬ್ಲಿಕ್ಕಾಗಿಬಂದು ಇಳಿದುಕೊಳ್ಳುವಬಗ್ಯೆ ಇಡೋಣಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ, ಮೇಕೆ, ಯಾ ಹತ್ತಕ್ಕೆ ಮೀರಿದ ಕೊಂಬುಗಳುಳ್ಳ ಜಾನವರ್‌ಗಳು ಇಂತಾವುಗಳಿಗೆ ಸ್ವಂತಗಾರನಾಗಿರುವ, ಯಾ ಇವುಗಳನ್ನು ಇಟ್ಟು ಇರುವ ಯಾವನಾಗಲಿ 2 ಆಣೆಗಳಮೊದಲು, 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಅಂತಾ ತಕಸೀರಿಗಾಗಿ ಆಪಾದನೆಆದಮೇಲೆ ಅಂತಾ ತಕಸೀರ್ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 1 ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

55. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸೀಡೆಂಟರ ಅಭಿಪ್ರಾಯ ಪ್ರಕಾರ ಆಸ್‌ಪಾಸ್ ಜನಗಳಿಗೆ ಬಾಧಕವಾಗುತ್ತೆಂದು ತೋರುವ ಯಾವ ಹಂದಿಗಳನ್ನಾಗಲಿ ಯಾವನು ಇಡುತ್ತಾನೋ ಅವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೂ, ಅಂತಾ ತಕ್ಸೀರ್ ಸ್ಥಾಪನೆಯಾದ ಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 5 ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದಲ್ಲದೆ, ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸೀಡೆಂಟರ ಹುಕ್ಕುಂ ನಿಃ, ಯಾವ ನುಕ್ಸಾನ್ ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಘೂಟಾಗಿ ಕೊಂದು ಹಾಕ ಬಹುದು.

56. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ, ಯಾ ಅವುಗಳ ಮಾರ್ಗವಾಗಿ ಯಾ ಕೆಳಗಡೆಗೆ, ಇರುವಂತಾ, ಅಥವಾ ತರುವಾಯ ಕಲ್ಪಿಸಲ್ಪಡುವಂತಾ ದರೋಬಸ್ತು ಪಬ್ಲಿಕ್ ಬಚ್ಚಲುಗಳು, ಚರಂಡೀಗಳು, ಮತ್ತು ತಮಾಂ ಬಚ್ಚಲುಗಳು, ಚರಂಡೀಗಳು, ನಲ್ಲೀಗಳು, ಮೊಹರೀಗಳು ಸಹ ಮೆಂಬರ್‌ಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿರಲಿ, ಅನ್ಯಥಾ ಆದ್ದಾಗಿರಲಿ, ಅಂತಾ ಕೆಲಸಗಳು, ಅವುಗಳಿಗೆ ಸಂಬಂಧಿಸಿದ ದರೋಬಸ್ತು ಕೆಲಸಗಳು ಸಾಮಾನುಗಳು, ಪದಾರ್ಥಗಳೂ ಮೆಂಬರುಗಳ ವಶದಲ್ಲಿಡಲ್ಪಟ್ಟು ಅವರಿಗೆ ಸೇರಿದ್ದಾಗಿರತಕ್ಕದ್ದು.

57. ಮ್ಯುನಿಸಿಪಲ್ ಸರಹದ್ದುಗಳ ಜಲಧಾರೇ ನೀರು ಹರಿಯುವ ಬಗ್ಯೆ ಯಾವದಾದರೂ ಮುಖ್ಯ ಮೊಹರೀಗಳನ್ನಾಗಲಿ, ಇತರ ಮೊಹರೀಗಳನ್ನಾಗಲಿ ಮಾಡಿಸುವಲ್ಲಿ ಮೆಂಬರ್‌ಗಳು, ಜರೂರಿದ್ದರೆ, ಯಾವದಾದರೂ ಬೀದಿಯು ಅಥವಾ ರಸ್ತೆಯು ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಉದ್ದೇಶಿಸಲ್ಪಟ್ಟ, ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ, ಆವರಣ ಕಲ್ಪಿಸಲ್ಪಟ್ಟ ಯಾ ಇತರ ವಿಧವುಳ್ಳ ಜಮೀನಿನಲ್ಲಿ, ಅದರ ಮಾರ್ಗವಾಗಿ ಯಾ ಕೆಳಗಡೆಗೆ ಇರುವ ಯಾವದಾದರೂ ನೆಲಮಾಳಿಗೆ ಕಮಾನ್ ಬಗ್ಗಿಸಿಯಿರುವ ನೆಲಮಾಳಿಗೆ ಇಂತಾದ್ದರ ಮಾರ್ಗವಾಗಿ, ಯಾ ಅಡ್ಡವಾಗಿ ಯಾ ಕೆಳಗಡೆಗೆ, (ಆ ವಿಷಯವನ್ನು ಕುರಿತು ತಕ್ಕವಾಯಿದೆನಿಶೀ ಬರವಣಿಗೇ ಮೂಲಕ ನೋಟಿಸ್ ಕೊಡಲ್ಪಟ್ಟ ತರುವಾಯ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದುಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿಕೊಡತಕದ್ದು ಅಂತಾ ಈಡು ಮೊಬಲಗ್ ವಿಷಯದಲ್ಲಾಗಲಿ ಅದನ್ನು ಹಂಚಿಕೆ ಮಾಡಿಕೊಳುವ ಅಂಶದಲ್ಲಾಗಲಿ ಯೇನಾದರೂ ತಕರಾರ್ ಉಂಟಾದ ಪಕ್ಷಕ್ಕೆ ನುಕ್ಸಾನ್ ವ ಲಾಗವಡುಗಳು ಇವುಗಳನ್ನು ಕುರಿತು ತಕರಾರ್ ವ್ಯವಸ್ಥೆ ಬಗ್ಯೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟರೀತಿಯಾಗಿ ಫೈಸಲ್ ಆಗತಕ್ಕದ್ದು.

58. ಈ ಬೈಲಾನಿಬಂಧನೆಗಳ ದೆಸೇಯಿಂದ ತಮ್ಮ ಸುಪರ್ದಿಮಾಡೋಣಾದ ಬಚ್ಚಲುಗಳು, ಯಾ ಚರಂಡೀಗಳು, ಇವುಗಳ ಪೈಕಿ ವಿಷ್ಟವನ್ನಾಗಲಿ, ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ದುರಸ್ತು ಪಡಿಸತಕ್ಕದ್ದು. ಮತ್ತು ತಮಗೆ ಯುಕ್ತ ತೋರುವ ಮೇರೆ ವಿಸ್ತಾರಪಡಿಸತಕ್ಕದ್ದು, ಬದಲಾವಣಿಮಾಡತಕ್ಕದ್ದು, ಯಾ ಮೇಲ್ಗಡೆ ಕಮಾನ್ ಕಟ್ಟಿಸತಕ್ಕದ್ದು ಯಾ ಇತರ ವಿಧದಿಂದ ಅಭಿವೃದ್ಧಿ ಮಾಡತಕ್ಕದ್ದು, ಮತ್ತು ಆ ಪೈಕಿ ಯಾವ ಭಾಗ ತಮಗೆ ನಿಷ್ಪ್ರಯೋಜಕವೆಂತಲೂ ಅನಾವಶ್ಯಕವೆಂತಲೂ, ತೋರುತ್ತೋ ಆ ಭಾಗವನ್ನು ಮಾಕೂಫ್ ಮಾಡಬಹುದು, ಮುಚ್ಚಿಸಿಬಿಡಬಹುದು ಯಾ ನಾಶಮಾಡಬಹುದು, ಪರಂತು, ಈ ಸೆಕ್ಷನ್ ಅನುಸರಿಸಿ ಯಾವ ಅಂಶವಾಗಲಿ ಮಾಡಲ್ಪಟ್ಟಿತೆಂಬ ಸಬಬಿನ ಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯ್ಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟರೆ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರು ಯಾವ ಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡೆದಿರುತ್ತಾರೋ ಅಂತಾ ಯಾವದಾದರೂ ಪಬ್ಲಿಕ್ ಬಚ್ಚಲ್‌ನಲ್ಲಿಯಾಗಲಿ ಇತರ ಸ್ಥಳದಲ್ಲಿಯಾಗಲಿ, ಸದರೀ ಬಚ್ಚಲು ನೀರು ಹರಿಯುವ ಬಗ್ಯೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

59. ಮೆಂಬರ್‌ಗಳು ತಮಗೆ ಸೇರಿದ ಬಚ್ಚಲುಗಳೂ ಚರಂಡೀಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಇರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಇಡಿಸತಕ್ಕದ್ದು. ಮತ್ತು ಕ್ರಮ ಪ್ರಕಾರ ಸಾಫ್ ಮಾಡಿಸತಕ್ಕದ್ದು, ಶೋಧಿಸತಕ್ಕದ್ದು, ಮತ್ತು ಖಾಲೀ ಮಾಡಿಸತಕ್ಕದ್ದು. ಸದರೀ ಬಚ್ಚಲುಗಳನ್ನು ನೀರು ವಾಟಮಾಡಲಿಕ್ಕೂ ಶುದ್ಧಪಡಿಸಲಿಕ್ಕೂ, ಖಾಲೀ ಮಾಡಲಿಕ್ಕೂ ಭೂಮಿಯ ಮೇಲಾಗಲಿ, ಕೆಳಗಾಗಲಿ, ಜರೂರಾದ ತೊಟ್ಟಿವಗ್ಯೆರೆಗಳನ್ನು ತೂಬುಗಳನ್ನೂ, ಯಂತ್ರಗಳನ್ನೂ, ಮತ್ತು ಜರೂರಾದ ಇತರ ಕೆಲಸಗಳನ್ನೂ ಅವರು ಕಟ್ಟಿಸಬಹುದು. ಇಡಿಸಬಹುದು, ಮತ್ತು ಚೀಪ್ ಕಮ್ಮಿಷನರವರ ಮಂಜೂರಾತೀನಿಃ ಅಂತಾ ಬಚ್ಚಲುಗಳು, ಯಾ ಚರಂಡಿಗಳು ಇವುಗಳ ಪೈಕಿ ವಿಷ್ಟವನ್ನಾಗಲಿ, ಯಾವದನ್ನಾಗಲಿ, ಯಾವದಾದರೂ ತಕ್ಕ ಸ್ಥಳದೊಡನೆ ಸೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆ ಮಾಡಬಹುದು, ಅಥವಾ ಅಂತಾ ಬಚ್ಚಲಗಳ ದೆಸೆಯಿಂದಲೂ ಚರಂಡೀಗಳ ದೆಸೆಯಿಂದಲೂ, ಬರುವ ಕಶ್ಮಲವನ್ನು ಜಮಾಯಿಸಿಯಿಡುವ ಬಗ್ಯೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು. ಮತ್ತು ಕೇವಲ ಜರೂರೆಂತ ಯೆಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಇತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು. ಆದರೆ ಹಾಂಗೆ ಉಪಯೋಗಿಸುವದರಿಂದ ಹೇಸಿಕೆಯುಂಟಾಗದೆ ಇರತಕದ್ದು.

60. ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತಿಯನ್ನು ಮೊದಲು ಪಡಕೊಳ್ಳದೆ, ಈ ಬೈಲಾನಿಬಂಧನೆಗಳ ದೆಸೇಯಿಂದ ಮೆಂಬರ್‌ಗಳ ವಶದಲ್ಲಿ ಇಡೋಣಾದ ಬಚ್ಚಲುಗಳು ಚರಂಡೀಗಳು ಇವುಗಳ ಪೈಕಿ ಯಾವದರಲ್ಲಾಗಲಿ ಯಾವನು ಯಾವ ಚರಂಡೀಯನ್ನಾದರೂ ಮಾಡುತ್ತಾನೋ ಯಾ ಮಾಡಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ್ ಚರಂಡೀಯಾಗಲಿ ಬಚ್ಚಲಾಗಲೀ ಸರ್ಕಾರೀ ಜಮೀನ್‌ಮಾರ್ಗವಾಗಿ ಹರಿಯಲೀ ಜನಗಳ ಸ್ವಂತ ಜಮೀನ್‌ಮಾರ್ಗವಾಗಿ ಹರಿಯಲೀ ಪರಂತು ಅಂತಾದ್ದನ್ನು ಯಾವನು ಬಂದ್ ಮಾಡುತಾನೋ ತಿರಗಿಸುತ್ತಾನೋ ಅಟಕಾವ್ ಮಾಡುತ್ತಾನೋ ಅಥವಾ ಮತ್ಯಾವ ವಿಧದಿಂದಲಾಗಲಿ, ಪ್ರವರ್ತಿಸುತ್ತಾನೋ ಅಂತಾ ಮನುಷ್ಯನು 1 ರೂಪಾಯಿ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೆಂಟರು ಅಂತಾ ಚರಂಡೀಯನ್ನಾಗಲಿ ಅಟಕಾವನ್ನಾಗಲಿ, ತಮಗೆ ಯುಕ್ತತೋರುವ ಪ್ರಕಾರ ನಾಶ ಪಡಿಸಬಹುದು, ಬದಲಾವಣಿ ಮಾಡಿಸಹುದು, ಹೊಸದಾಗಿ ಮಾಡಿಸಬಹುದು. ಅಥವಾ ಅನ್ಯಥಾ ತಮಗೆ ಯುಕ್ತತೋರುವ ಪ್ರಕಾರ ನಡಿಸಬಹುದು. ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ ಅಂಥಾ ಫೂಟ್ ಚರಂಡಿಯನ್ನು ಯಾ ಅಟಕಾವನ್ನೂ ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

61. ಈ ಬೈಲಾನಿಬಂಧನೆಗೊಳದ ಮೆಂಬರ್‌ಗಳವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸೀಡೆಂಟರ ಅನುಮತೀ ಇಲ್ಲದೆ ಯಾವ ಕಟ್ಟವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು, ಮತ್ತು ಯಾವ ಕಟ್ಟವಾಗಲಿ ಆ ಮೇರೇ ಕಟ್ಟಲ್ಪಟ್ಟಲ್ಲಿ ಪ್ರೆಸೀಡೆಂಟರು ಅಂತಾ ಕಟ್ಟವನ್ನು ಕಿತ್ತಿಹಾಕಿಸಬಹುದು. ಅಥವಾ ತಮಗೆ ಯುಕ್ತತೋರುವ ಪ್ರಕಾರ ಇತರ ರೀತಿಯಿಂದ ನಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕಶೀರ್ ನಡಿಸಿದ ಮನುಷ್ಯನು ಕೊಡತಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಿಕ್ಕೊಳ್ಳಲ್ಪಡತಕ್ಕದ್ದು.

62. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತಾರೋ ಅಂತಾ ಯಾವದ್ದಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಇರುವ ಯಾವದಾದರೂ ಕಟ್ಟವು ಯಾವಾಗಲಾಗಲಿ, ತಕ್ಕಚರಂಡೀಯಿಂದ ಯಾ ನಲ್ಲೀಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಇತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸೀಡೆಂಟರಿಗೆ ತೃಪ್ತಿಕರವಾಗಿ ಚರಂಡೀ ಇಡಲ್ಪಡದೇ ಇರುವ ಪಕ್ಷಕ್ಕೆ ಪ್ರೆಸೀಡೆಂಟರು, ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟದ ದೆಸೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನ್‌ಗಳ ದೆಸೆಯಿಂದೆ ಅಷ್ಟರ ಆಕಾರದಲ್ಲಿ, ಅಷ್ಟರಮಟ್ಟಕ್ಕೆ, ಮತ್ತು ಅಂತಾ ನೀರು ಪಾಟದಲ್ಲಿ ಮುಚ್ಚಲ್ಪಟ್ಟ, ಯಾ ಖುಲ್ಲಾಯಿರುವ ಚರಂಡಿಯನ್ನಾಗಲಿ, ನಲ್ಲೀಯನ್ನಾಗಲಿ ಅಂತಾ ಕಟ್ಟದಿಂದ ಕಟ್ಟಿಸಬಹುದು, ಅಥವಾ ಏರ್ಪಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವತು ಮಾಲೀಕನಿಂದ ಕೂಡ್ಲೇ ಕೊಡಲ್ಪಡದ ಪಕ್ಷಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

63. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಅಂತಾ ಕಟ್ಟದ ಬಚ್ಚಲ ನೀರು ಆಗ್ಯೆ ಇರುವಂತಾ ಅಥವಾ ಯೇರ್ಪಡು ಮಾಡಲ್ಪಡುವಂತಾ ಯಾವದಾದರೂ ಪಬ್ಲಿಕ್ ಬಚ್ಚಲುನಲ್ಲಿಯೂ, ಮೆಂಬರ್‌ಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಕ್ಕೂ ತೆಗದುಕೊಂಡು ಹೋಗಲಿಕ್ಕೆ ತಕ್ಕ ನೀರು ಮಟ್ಟಕ್ಕಿಂತ ತಗ್ಗಾದ ನೀರು ಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು ಪಬ್ಲಿಕ್ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನ್ ಯಾ ಕಟ್ಟಗಳ ಮಾಲೀಕರು ಯಾ ಅನುಭವದಾರರು, ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ, ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಗಳ ಮೊದಲಿನಲ್ಲಿ ಇರುವ ಬಾಜೂಕಾಲ್ವೆಗಳ ಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು, ಬದಲಾವಣೀ ಮಾಡತಕ್ಕದ್ದು, ಕಾಪಾಡತಕ್ಕದ್ದು, ಮತ್ತು ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೇ ಅಶ್ರದ್ಧೆಮಾಡಿದ ಪಕ್ಷಕ್ಕೆ ಪ್ರೆಸೀಡೆಂಟರು ಅದನ್ನು ಮಾಡಿಸಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ ಕೊಡತಕ್ಕದ್ದಲ್ಲದೆ ಆ ಮೊಬಲಗ್ ಇವರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

64. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಶ್ಚ ಕಟ್ಟೋಣಾದ ಯಾವ ಕಟ್ಟವಾಗಲಿ, ಇದರ ಹಿಂದಿನ ಕಡೇ ಸೆಕ್ಷನ್‌ನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರ ಇದ್ದಪಕ್ಷಕ್ಕೆ ಅದರ ಮಾಲೀಕನು ಅಂತಾ ಕಟ್ಟದ ನಿವೇಶನದ ದೆಸೇಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸೀಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಆ ಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರುಪಾಟದಿಂದಲೂ, ಒಂದು ಚರಂಡೀ ಕಟ್ಟಿಸತಕ್ಕದ್ದು ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆಮೇರೆ ಕಟ್ಟಲಿಕ್ಕೆ ಉಪೇಕ್ಷಿಸಿದಪಕ್ಷಕ್ಕೆ, ಪ್ರೆಸೀಡೆಂಟರು ಸದರೀ ಚರಂಡೀ ಕಟ್ಟಿಸಲ್ಪಡುವಂತೆ ಮಾಡಬಹುದು

218

ಮತ್ತು ಆಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

65. ಅಂತಾ ನೋಟಿಸನ್ನೂ ನಕ್ಷೆಯನ್ನೂ ಕಳುಹಿಸದೇಯಾಗಲಿ, ಸದರೀ ತಿಂಗಳೊಳಗಾಗಿ, ಪ್ರೆಸೀಡೆಂಟರಿಂದ ನಿರ್ಣಯಿಸಲ್ಪಟ್ಟ ಪ್ರಕಾರವಲ್ಲದೆ ಬೇರೆ ಮಟ್ಟಗಳ ಪ್ರಕಾರವಾಗಲಿ, ಈ ಬೈಲಾ ನಿಬಂಧನೆಗಳಿಗೆ ಮತ್ತ್ಯಾವ ವಿಧದಿಂದಲಾದರೂ ವಿರುದ್ಧವಾಗಿಯಾಗಲಿ, ಅಂತಾ ಕಟ್ಟಣವು ಆರಂಭಿಸಲ್ಪಟ್ಟರೆ, ಯಾ ಮಾಡಲ್ಪಟ್ಟರೆ, ಪ್ರೆಸೀಡೆಂಟರು ಜರೂರ್ ಇದ್ದಲ್ಲಿ ಸಂದರ್ಭಾನುಗುಣವಾಗಿಯಿರುವಂತೆ ಅದನ್ನು ಬದಲಾಯಿಸಲ್ಪಡುವಂತೆ ಯಾ ನಾಶ ಪಡಿಸಲ್ಪಡುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದ ಲಾಗವಡು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ ಮಾಡಲ್ಪಡತಕ್ಕದ್ದು.

66. ಮೇಲೆ ಕಂಡ ಮೇರೆ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳನ್ನು ಕುರಿತು ಮಂಜೂರಾತಿಯನ್ನಾಗಲಿ, ನಾಮಂಜೂರಾತಿಯನ್ನಾಗಲಿ, ಪ್ರೆಸೀಡೆಂಟರು ಬರವಣಿಗೇ ಮೂಲಕ ತಿಳಿಸದೇಯೂ, ಅಂತಾ ನೋಟಿಸ್ ತಲಪಿದ ಮೇಲೆ ಒಂದು ತಿಂಗಳ ವಳಗಾಗಿ ಬೇರೆ ಮಟ್ಟವನ್ನು ಏರ್ಪಡಿಸದೆಯೂ ತಪ್ಪಿದ ಪಕ್ಷಕ್ಕೆ ಅಂತಾ ನೋಟಿಸ ಕೊಡುವ ಮನುಷ್ಯನು ಇದರಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಣವನ್ನು ಕಟ್ಟಿಸಲಿಕ್ಕಾಗಲಿ, ಖೋಲ್‌ಬಂದೀ ಮಾಡಿಸಲಿಕ್ಕಾಗಲಿ ಪ್ರವರ್ತಿಸಬಹುದು; ಪರಂತು ಅಂತಾ ಕಟ್ಟೋಣವಾಗಲಿ ಖೋಲ್‌ಬಂದೀಯಾಗಲಿ ಅನ್ಯಥಾ ಈ ಬೈಲಾಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

67. ಮೆಂಬರಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿ ಆಗಲಿ, ಅವುಗಳೊಡನೆ ಸಂಬಂಧಿಸುವ ಯಾವ ಚರಂಡಿಯಲ್ಲಾಗಲಿ, ಯಾವದಾದರೂ ಮಣ್ಣು, ಕಲ್ಮಲ, ಬೂದಿ, ತೋಟ, ಅಡಿಗೇಮನೆ, ಕುದುರೇಲಾಯ ಇಂತಾದ್ದರ ಬಾಬತು, ಕಚರೆ, ಗಾಜಿನ ಚೂರು, ಪೋಕಿಗಳು, ಯಾ ಇತರ ಕಸ (ಅಥವಾ ತಕ್ಕ ಬಚ್ಚಲು ತಯಾರ್ ಮಾಡಿಸಿ ಕೊಡುವ ಪರ್ಯಂತ) ಯಾವದಾದರೂ ಮಲ ಇಂತಾದ್ದನ್ನು ಯಾವನು ಹಾಕುತ್ತಾನೋ ಯಾ ಇಡುತ್ತಾನೋ ಅಥವಾ ತನ್ನ ನೌಕರರು ಹಾಕುವಂತೆ ಯಾ ಇಡುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

68. ಯಾವ ಜಮೀನ್ಗಳಿಗೆ ಯಾ ಕಟ್ಟಣಗಳಿಗೆ ಫೂಟ್ ಚರಂಡೀಗಳು ಸಂಬಂಧಿಸಿದವುಗಳಾಗಿರುತ್ತವೋ ಅಂತಾ ಜಮೀನ್ಗಳಲ್ಲಿ ಯಾ ಕಟ್ಟಣಗಳಲ್ಲಿ, ಅಥವಾ ಜಮೀನ್ಗಳ ಹೊರಗೆ ಯಾ ಕಟ್ಟಣಗಳ ಹೊರಗೆ ಇರುವ ದರೋಬಸ್ತು ಫೂಟ್ ಚರಂಡೀಗಳೂ ಯಾವದಾದರೂ, ಬೀದಿಯಲ್ಲಾಗಲಿ, ಬೀದಿಯ ಬಳಿಯಲ್ಲಾಗಲಿ, ಇರುವ ಪಾಯಖಾನೆಗಳು ಬಚ್ಚಲುಗಳು ಬಚ್ಚಲು ಗುಣಿಗಳು ಮೆಂಬರಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನ್ಗಳಿಗೂ ಕಟ್ಟಣಕ್ಕೂ ಅವು ಸೇರಿ ಇರುತ್ತವೋ, ಅಥವಾ ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟಿರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತ್ತವೋ ಅಂತಾ ಜಮೀನ್ಗಳ ಮತ್ತು ಕಟ್ಟಣದ ಮಾಲೀಕರ ಲಾಗವಡನಿಂದಲೂ, ಖರ್ಚುಗಳಿಂದಲೂ, ಸದರೀ ಪಾಯಖಾನೇ ಮುಂತಾದವು ಬದಲಾಯಿಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡೀಯಾಗಲಿ ಪಾಯಖಾನೇ ಯಾಗಲಿ ಬಚ್ಚಲು ಗುಂಡೀ ಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತದೋ ಅಂತಾ ಯಾವದಾದರೂ ಜಮೀನ್ ಯಾ ಕಟ್ಟಣಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಿಸ್ ಕೊಡೋಣಾದ ತರುವಾಯ ಎಂಟು ದಿನಗಳೊಳಗೆ ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿಸಿ ಇಡಲಿಕ್ಕೆ ಸಹ ಉಪೇಕ್ಷಿಸಿದ ಪಕ್ಷಕ್ಕೆ ಪ್ರೆಸೀಡೆಂಟರು ಅಂತಾ ಚರಂಡೀಯನ್ನಾದರೂ ಪಾಯಖಾನೇಯನ್ನಾದರೂ ಬಚ್ಚಲು ಗುಂಡಿಯನ್ನಾದರೂ ಬದಲಾಯಿಸುವಂತೆಯೂ, ದುರಸ್ತು ಪಡಿಸುವಂತೆಯೂ, ಬಂದೋಬಸ್ತು ಪಡಿಸುವಂತೆಯೂ, ಮಾಡಬಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

69. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದ ತರುವಾಯ ಪ್ರೆಸಿಡೆಂಟರು ಬರವಣಿಗೆ ಮೂಲಕವಾದ ಅನುಮತಿ ಇಲ್ಲದೆ ಯಾಗಲಿ, ಅವರ ಹುಕುಮಿಗೆ ಬರಖಿಲಾಫ್ ಆಗಲಿ, ಅಂತಾ ಯಾವ ಚರಂಡೀ ಯಾ ಪಾಯಖಾನೆ ಯಾ ಬಚ್ಚಲು ಇಂತಾದ್ದು ಕಟ್ಟಲ್ಪಟ್ಟರೆ, ಅಥವಾ ಕಿತ್ತು ಹಾಕಿಸುವಂತೆ, ಯಾ ನಿಲ್ಲಿಸುವಂತೆ ಯಾ ಮಾಡಿಸದೆ ಇರುವಂತೆ, ಪ್ರೆಸೀಡೆಂಟರಿಂದ ಹುಕ್ಕುಂ ಮಾಡಲ್ಪಟ್ಟಿರುವ ಯಾವ ಚರಂಡಿ ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದನ್ನು ಯಾವನಾದರೂ ಕಟ್ಟಿದರೆ ಖೋಲ್‌ಬಂದೀ ಮಾಡಿಸಿದರೆ ಯಾ ನಿಲ್ಲಿಸದೆ ನಡಿಸಿದರೆ ಹಾಗೆ ಮಾಡುವ ಪ್ರತಿ ಮನುಷ್ಯನೂ 2 ಆಣೆಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂತಾ ಯಾವ ಚರಂಡೀಯಲ್ಲಾಗಲೀ ಪಾಯಖಾನೆಯಲ್ಲಾಗಲಿ

ಚೆಚ್ಚಲು ಗುಂಡಿಯಲ್ಲಾಗಲಿ, ತಮಗೆ ಯುಕ್ತ ತೋರುವಂತ್ಹಾ ತಿದ್ದುಪಡಿಯನ್ನಾಗಲಿ, ಬದಲಾವಣೆಯನ್ನಾಗಲಿ, ಮಾಡಿಸಬಹುದು, ಮತ್ತು ಅದರ ಬಾಬತು ಲಾಗವಡನ್ನು ಅಂತಾ ಚರಂಡೀಯಾಗಲಿ ಪಾಯಖಾನೆಯಾಗಲಿ ಬಚ್ಚಲು ಗುಂಡಿಯಾಗಲಿ ಯಾವನಿಂದ ಅಕ್ರಮವಾಗಿ ಕಟ್ಟಿಸಲ್ಪಟ್ಟಿತೋ, ಯಾ ಖೋಲ್‌ಬಂದೀ ಮಾಡಲ್ಪಟ್ಟಿತೋ, ಯಾ ನಿಲ್ಲಿಸದೆ ನಡಿಸಲ್ಪಟ್ಟಿತೋ, ಅಂತಾ ಮನುಷ್ಯನು, ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

70. ಪ್ರೆಸೀಡೆಂಟರಾಗಲಿ, ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫೀಸರಾಗಲಿ, ಅಂತಾ ಚರಂಡಿಯನ್ನಾದರೂ, ಪಾಯಖಾನೆಯನ್ನಾದರೂ, ಬಚ್ಚಲು ಗುಂಡಿಯನ್ನಾದರೂ, ತನಿಖೀ ಮಾಡಬಹುದು, ಮತ್ತು ಆ ಬಗ್ಯೆ, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದೊಳಗೆ ಯಾವಾಗಲಾಗಲಿ ಅಂತಾ ಚರಂಡಿ, ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದು ಯಾವದಕ್ಕೆ ಸೇರಿಯಿರುತ್ತೋ ಅಂತಾ ಮನೆ ಮುಂತಾದವುಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ್ ಕೊಟ್ಟ ಹನ್ನೆರಡು ಗಂಟೆಯ ತರುವಾಯ ಯಾವದಾವರೂ ಜಮೀನನಲ್ಲಿಯೂ, ಕಟ್ಟಡದಲ್ಲಿಯೂ, ಜರೂರಾದಂತಾ ಕುಮಕೀದಾರ್ರು, ಕಾಲೀಗಾರ್ರು, ಯಿವರುಗಳು ನಿಶೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಲೇಶವೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಿಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಖಾನೆ, ಯಾ ಬಚ್ಚಲುಗುಂಡಿ, ಬಂದೋಬಸ್ತಾಗಿಯೂ ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ, ಈ ಬೈಲಾಗಳ ಜಾರೀಲಿಬಂದ ಮೇಲೆ ಇವುಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಟ್ಟಿದೆಯೆಂತಲಾಗಲಿ ತಿಳಿಯಬಂದಲ್ಲಿ ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು, ಅಂತಾ ಚರಂಡಿ, ಯಾ ಪಾಯಖಾನೆ, ಯಾ ಬಚ್ಚಲುಗುಂಡಿ ಯಿವು ಯಾವನಿಗೆ ಸೇರಿರುತವೋ ಅಂತಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ ಮಾಡತಕ್ಕದ್ದು; ಆದರೆ ಚರಂಡಿಯಾಗಲಿ ಪಾಯಖಾನೆಯಾಗಲಿ ಬಚ್ಚಲುಗುಂಡಿಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುವಂತೆಯೂ ಈ ಬೈಲಾಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಡದೇಯೂ ಕಾಣಬಂದರೆ ಪ್ರೆಸೀಡೆಂಟರಾಗಲಿ ಮೇಲೆ ಕಂಡ ಆಫೀಸರಾಗಲಿ ಭೂಮಿಯನ್ನು ಭರ್ತೀ ಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಖಾನೆ, ಬಚ್ಚಲುಗುಂಡಿ, ಇವುಗಳನ್ನು ತೆಗೆಯುವದರಿಂದಲೂ, ಮುಚ್ಚುವದರಿಂದಲೂ, ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡುಗಳು ಅಂತಾ ಸಂಗತಿಯಲ್ಲಿ ಮುಂಬರ್‌ಗಳಿಂದ ಇಡಲ್ಪಡತಕ್ಕದ್ದು. ಪರಂತು ಮನೆಯೊಳಗೆ ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಅವಕಾಶ ಕೊಡುವ ಪರ್ಯಂತ ಹಾಗೆ ತನಿಖೀ ನೋಡಲಿಕ್ಕೋಸರ ಹಿಂದುಗಳು ಮುಸಲ್ಮಾನರು ಇವರುಗಳ ಹೆಂಗಸರು ಇರತಕ್ಕ ಬಗ್ಗೆ ಕ್ಲುಪ್ತವಾದ ಜನಾನೇಗಳಲ್ಲಾಗಲಿ ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟು ಮಾಡತಕ್ಕದ್ದಲ್ಲವು.

71. ಈ ಬೈಲಾ ನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟಡ, ಯಾ ಜಮೀನಿನ ಮಾಲೀಕನಿಂದಾಗಲಿ, ಅನುಭವದಾರನಿಂದಾಗಲಿ, ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿ ಯಿದ್ದು ಅಂತಾ ಕೆಲಸವನ್ನು ಅವನು ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷದಲ್ಲಿ, ಹಾಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆ ವಿಧಿಸಲ್ಪಡಲಿ ವಿಧಿಸಲ್ಪಡದೇ ಯಿರಲಿ ಪರಂತು ಅಂತಾ ಕೆಲಸವನ್ನು ಪ್ರೆಸೀಡೆಂಟರು ಮಾಡಿಸಬಹುದು. ಆ ಬಗ್ಗೆ ಹಿಡಿದ ಲಾಗವಡನ್ನು ಸದರೀ ಕಾಮಗಾರಿ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನು ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಆ ಮೊಬಲಗ್ ವಸೂಲ್ ಮಾಡಲ್ಪಡತಕ್ಕದ್ದು.

72. (ಕಾಮಗಾರೀ ಮಾಡಿಸುವದಕ್ಕೆ) ತಪ್ಪಿದ ಮನುಷ್ಯನು, ಕಟ್ಟಡದ ಯಾ ಜಮೀನಿನ ಮಾಲೀಕನಾಗಿ ಯಿದ್ದರೆ, ಪ್ರೆಸೀಡೆಂಟರು ಈ ಬಗ್ಗೆ ಜಾಸ್ತೀಯಾಗಿ ಪರಿಹಾರವನ್ನು ಉಂಟುಮಾಡುವ ಉದ್ದಿಶ್ಯ ಅಂತಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ವ್ಯಾಜ್ಯ ಯಾ ನಡವಳಿತ ನಡಿಸಿಯಿರಲಿ ನಡಿಸದೇಯಿರಲಿ, ತತ್ಕಾಲದಲ್ಲಿ ಮಾಲೀಕನಿಂದ ಕೊಡಲ್ಪಡತಕ್ಕ ಲಾಗವಡು ಮೊಬಲಗ್ ವಿಶಿಷ್ಟವನ್ನಾಗಲಿ ಆ ಪೈಕೀ ಯಷ್ಟರಭಾಗವನ್ನಾಗಲಿ ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಮಾಲೀಕನ ವಶದಲ್ಲಿರತಕ್ಕ ಕಟ್ಟಡವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು. ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದ ಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂತಾ ಅನುಭವದಾರನ ಬಾಬತು ಚರಸ್ವತ್ತುಗಳ ಜಫ್ತೀಯಿಂದ ಅದು ವಸೂಲ್ ಮಾಡಲ್ಪಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ, ಅಂತಾ ಯಾವ ಖರ್ಚಿನ ವಿಷಯದಲ್ಲಾಗಲಿ ತಾನು ಸದರೀ ಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತನ್ನಿಂದ ವಸೂಲ್ ಮಾಡಲ್ಪಟ್ಟಷ್ಟು ಮಟ್ಟಿಗೆ ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗ್‌ನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕು ಉಂಟಾಗಿರತಕ್ಕದ್ದು.

73. ಯಾವದಾದರೂ ಕಟ್ಟಡ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಬೈಲಾಗಳಿಂದ ಕಟ್ಟೋಣಾದ ಯಾವ ಲಾಗವಡುಗಳಿಗೋಸ್ಕರವಾಗಲಿ, ಯಾವ ಕಟ್ಟಡ ವಗೈರೇಗಾಗಿ ಅಂತಾ ಲಾಗವಡು ಕೊಡಬೇಕಾಗಿರುತ್ತೋ ಆ ಕಟ್ಟಡಗಳಿಗೋಸ್ಕರ ತನ್ನನ್ನು ಕೇಳಿದಾಗ ತನ್ನಿಂದ ಸಲ್ಲಬೇಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ

ಬಾಕೀಯಾದ ತನ್ನಿಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಪರಂತು ಪ್ರೆಸೀಡೆಂಟರು ಆವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿಗೇ ಬಾಬತು ಮೊಬಲಗ್ ಮತ್ತು ಯಾವನಿಗೆ ಅಂತಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು, ಅಡ್ಡ ಹೆಸರು, ಇವುಗಳನ್ನು ವಾಸ್ತವ್ಯವಾಗಿ ಪ್ರಕಟಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗದೇ ಹೋಗುವದಿಲ್ಲವು. ಆದರೆ ಅಂತಾ ಅನುಭವದಾರನನ್ನು ಕೇಳಿದ ಮೊಬಲಗ್ ಹಾಗೆ ಕೇಳಿದ ಕಾಲದಲ್ಲಾಗಲಿ ತರುವಾಯವಾಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಯೆಂಬದಾಗಿ ರುಜುಮಾಡುವ ಭಾರ ಸದರೀ ಅನುಭವದಾರನನ್ನೇ ಸೇರಿಯಿರುತ್ತದೆ. ಮತ್ತು ಇದರಲ್ಲಿ ಅಡಗಿರುವ ಯಾವ ಅಂಶವೂ ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂತಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡೆದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಭಾಧಕವಾಗುತ್ತದೆಯೆಂದು ಗ್ರಹಿಸ ಕೂಡದು.

74. ಯಾವದಾದರೂ ಕಟ್ಟಡ ಯಾ ಜಮೀನಿನ ಮಾಲೀಕನು, ಪ್ರೆಸೀಡೆಂಟರು ತಾಕೀದ್ ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು. ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಸೆಯಿಂದ ಅಂತಾ ಮಾಲೀಕನಿಗೆ ಬಾಕೀ ಆಗತಕ್ಕ ಬಾಡಿಗೆಯಲ್ಲಿ ವಜಾ ಮಾಡಲ್ಪಡತಕ್ಕದ್ದು.

75. ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಯಾವ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ ಅದರ ಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ್ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ ಪ್ರೆಸೀಡೆಂಟರು, ಆ ವಿಷಯ ರುಜುವಾದ ಮೇಲೆ ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾದ ಅಂತಾ ದರೋಬಸ್ತು ಕಾಮಗಾರಿಗಳನ್ನೂ ನೆರವೇರಿಸುವ ಬಗ್ಗೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕ್ಕುಂ ಕೊಡಬಹುದು. ಮತ್ತು ಹುಕ್ಕುಂ ತಾರೀಖು ಲಾಗಾಯತ್ ಎಂಟು ದಿನಗಳು ಕಳೆದ ತರುವಾಯ ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತಿದ್ದರೆ ಹಾಗೆ ನಿರಾಕರಿಸುತಿರುವ ಪ್ರತಿ ದಿನಕ್ಕೂ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದು; ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತಿರುವಲ್ಲಿ ಅಂತಾ ಕಾಮಗಾರಿಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಬಹುದಾಗಿದ್ದ ಯಾವ ಜುರ್ಮಾನೆಯಿಂದಲೂ, ಮಾಫ್ ಆಗತಕ್ಕದ್ದು.

76. ಈ ಬೈಲಾ ನಿಬಂಧನೆಗಳು ಜಾರೀಯಲ್ಲಿ ಬರುವ ಕಾಲದಲ್ಲಾಗಲಿ ಆತರುವಾಯವಾಗಲಿ, ಮಾಡಲ್ಪಟ್ಟ, ಇಡಲ್ಪಟ್ಟ ಯಾ ಕಟ್ಟಲ್ಪಟ್ಟ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲ್ವೆಗಳು ನೀರು ನಲ್ಲಿಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನ ಸಂಬಂಧವಾದ ಇತರ ಕಾಮಗಾರೀಗಳು, ಇಂತಾವು ಮೆಂಬರ್‌ಗಳ ಲಾಗವಾಡಿನಿಂದ ಕಲ್ಪಿಸಲ್ಪಡಲಿ, ಯಾ ಇಡಲ್ಪಡಲಿ, ಯಾ ಕಟ್ಟಲ್ಪಡಲಿ, ಅನ್ಯಥಾ ಆಗಲಿ, ಪರಂತು ಅಂತಾದ್ದೂ; ಮತ್ತು ಸದರೀ ಕೆರೇ ವಗೈರೇಗೆ ಸೇರಿದ ಯಾ ಅವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಡಗಳು, ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು, ಇವುಗಳೂ, ಮತ್ತು ಯಾವದಾದರೂ ಪಬ್ಲಿಕ್ ಕೆರೆಗೆ ಸಮೀಪವಾದ (ಸ್ವಂತ ಸ್ವತ್ತು ಅಲ್ಲದೆಯಾಗಲಿ ಸರ್ಕಾರದ ಸ್ವತ್ತಲ್ಲದೆಯಾಗಲಿ ಇರುವ) ಅದಕ್ಕೆ ಸೇರಿದಹಾಗೆ ಇರುವ ಯಾವದಾವರೂ ಜಮೀನ್ ಇಂತಾದ್ದೂ ಮೆಂಬರ್‌ಗಳ ಅಧಿಕಾರದಲ್ಲಿರತಕ್ಕದ್ದಲ್ಲದೆ ಅವರಿಗೆ ಸೇರಿದವುಗಳಾಗಿರತಕ್ಕವು.

77. ಮೆಂಬರ್‌ಗಳು ನಿವಾಸಿಗಳಿಗೆ ನೀರು ಒದಗಿಸುವದಕ್ಕೋಸ್ಕರವಾಗಲಿ, ಈ ಬೈಲಾ ನಿಬಂಧನೆಗಳಲ್ಲಿ ಕಂಡ ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಲೀ ಇರತಕ್ಕ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಮೊಹರೀಗಳು, ತೂಬಿನಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು ಇಂತಾವು ಜಾರೀಯಾಗಿ ನಡೆಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಅಥವಾ ಅವರು, ಅವುಗಳಿಗೆ ಬದಲಾಗಿ, ಅಂತಾ ಇತರ ಕಾಮಗಾರೀಗಳನ್ನು ಮಾಡಿಸಿ ಅವು ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಮತ್ತು ಮೆಂಬರ್‌ಗಳು ಕೊಡಗು ಶೀಮೆಯ ಚೀಫ್ ಕಮಿಷ್ಷನರವರ ಮಂಜೂರಾತಿಯ ಮೇಲೆ ಆಗಿಂದಾಗ್ಗೆ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ನೀರು ತರಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲೀಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು ನೀರು ಕುಂಟೆಗಳು ತೊಟ್ಟಿಗಳು ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರೀಗಳು ಇವುಗಳನ್ನೆಷ್ಟನ್ನಾಗಲಿ ಒದಗಿಸಬಹುದು.

78. ಸೆಕ್ಷರ್ಷ 79 ಅನುಸರಿಸಿ ಮೆಂಬರ್‌ಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು ಅನ್ಯಥಾ ಮೆಂಬರ್‌ಗಳ ಬಾಬತು ಯಾವದಾದರೂ ಶೀನೀರಿನ ಬಗ್ಗೆ ಉದ್ದೇಶಿಸಲ್ಪಟ್ಟ ಯಾ ಕ್ಲುಪ್ತವಾದ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರು ತೊಟ್ಟಿ, ಜಲದಾರಿ, ಅಥವಾ ಕಾಲುವೆ, ಇಂತಾದ್ದರಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ, ಅಥವಾ ಇತರ ಜಂತುವು, ಅಥವಾ ತುಪ್ಪಟ, ಬಟ್ಟೆ, ಅಥವಾ ಪುಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು, ಜಂತುವಿನ ಚರ್ಮ ತೊಗಲು ಅಥವಾ ಅಸಹ್ಯವಾದ ಯಾ ಉಪದ್ರವಕರವಾದ ಇತರವಸ್ತು ಇಂತಾದ್ದು ಯಾವದನ್ನಾಗಲಿ ತೊಳೆಯುವ, ಯಾ ತೊಳೆಯಿಸುವ; ಅಥವಾ ಅದರಲ್ಲಿ ಯಾವದಾದರೂ ಜಂತುವು ಗ್ರೇವಲ್ ಕಲ್ಲು ಧೂಳು, ಅಥವಾ ಯಾವದಾದರೂ, ಕಚರ, ಕಶ್ಮಲ, ಕಲ್ಮಷ, ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂತಾದ್ದನ್ನು ಹಾಕುವ, ಇರಿಸುವ, ಬಿಸಾಡುವ, ಅಥವಾ ಪ್ರವೇಶಿಸುವಂತೆ ಮಾಡುವ, ಅಥವಾ ಅದರಲ್ಲಿ ಯಾವದಾದರೂ ಕೊಳೇ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು ಚರಂಡಿ, ಯಂತ್ರ ಅಥವಾ ಕಡಾಯಿ, ಇಂತಾದ್ದರ ಬಾಬತು ನೀರು, ಅಥವಾ ತನ್ನದಾಗಿ ಇರುವ ಯಾ ತನ್ನ ಅನುಭವದಲ್ಲಿ ಇರುವ ಯಾವದಾದರೂ ಕಟ್ಟಡದಿಂದಾಗಲಿ, ಭೂಮಿಯಿಂದಾಗಲಿ ಹರಿಯುವ ಅನಾರೋಗ್ಯಕರವಾದ ಯಾ ಅಸಹ್ಯವಾದ ಯಾವದಾದರೂ ದ್ರವಪದಾರ್ಥ ಯಾ ವಸ್ತು ಇಂತಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಯಾ ಅಪ್ಪಣೇ ಕೊಡುವ ಯಾ ಅಂತಾ ಯಾವ ನೀರಾಗಲಿ ಯೆಷ್ಟುಮಾತ್ರವಾದರೂ ಕೊಳೆಯಾಗುವಂತೆ ಯಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

79. ಮೆಂಬರ್‌ಗಳು ಯಾವ ಪಬ್ಲಿಕ್ ಪ್ರದೇಶವನ್ನಾಗಲಿ ಜನಗಳ ಖಾಸ್‌ಗತ್ ಸ್ವತ್ತಲ್ಲದ ದೊಡ್ಡ ಕೆರೆಗಳ ಅಥವಾ ಯಾವದಾದರೂ "ರ್ಣ" ಎಂಬ ನದೀ ತೀರದ ಯಾವ ಭಾಗವನ್ನಾಗಲಿ, ಸ್ನಾನ ಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು. ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಒದಗಿಸಬಹುದು. ಅಥವಾ ಪ್ರತ್ಯೇಕವಾಗಿ ಏರ್ಪಡಿಸ ಬಹುದು. ಮತ್ತು ಜಂತುಗಳನ್ನು ತೊಳೆಯುವ ಬಗ್ಯಾಗಲಿ ಬಟ್ಟೆಗಳೊಗೆಯುವ ಬಗ್ಯಾಗಲಿ ಪ್ರಜೆಗಳ ಆರೋಗ್ಯ, ಪಾಕೀಜ್, ಸೌಖ್ಯ, ಇವುಗಳಿಗೆ ಸಂಬಂಧಿಸಿದ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು, ಯಾ ರ್ಣ ಎಂಬ ಪ್ರವಾಹಗಳನ್ನು ಪ್ರತ್ಯೇಕವಾಗಿ ಯೇರ್ಪಡಿಸಲೂ ಬಹುದು.

80. ಆರೋಗ್ಯ ಭಂಗಕಾರಿಯಾಗಿ ಯಾ ನೆರೆಹೊರೆಗೆ ಬಾಧಕವಾಗಿ ತೋರುವ ಯಾವದಾದರೂ ಖಾಸ್‌ಗತ್‌ಳ ಕೆರೆಯನ್ನು ಶೋಧಿಸುವಂತೆಯೂ ಅಂತಾ ಯಾವದಾದರೂ ನಿವೇಶನ ಮುಂತಾದದರೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋಗಿಯೂ ಇರುವ ನೀರನ್ನು ಎತ್ತಿಸಿಬಿಡುವಂತೆಯೂ ತೆಗೆಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟಿಸ್‌ದ್ವಾರಾ, ಯಾವ ನಿವೇಶನ ಮುಂತಾದವುಗಳ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯ್ಯವಾಗಿರತಕ್ಕದ್ದು. ಮತ್ತು ಅಂತಾ ಮಾಲೀಕನು ಅಂತಾ ನೋಟಿಸ್ ಜಾರೀಯಾದ ಲಾಗಾಯತು ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ, ಯಾ ಉಪೇಕ್ಷಿಸಿದರೆ ಪ್ರೆಸೀಡೆಂಟರೂ, ಅವರ ಆಫಿಸರ್‌ಗಳೂ, ಕೆಲಸದವರೂ ಪ್ರವೇಶಿಸಿ ತಮಗೆ ಯುಕ್ತತೋರುವ ಪ್ರಕಾರ ಮೇಲೆ ಕಂಡ ವಿಷ್ಯಾಂಶಗಳಿಗೋಸ್ಕರವಾಗಲಿ ಆಪೈಕೀ ಕೆಲವಕ್ಕೋಸ್ಕರವಾಗಲಿ ಜರೂರಾದ ದರೋಬಸ್ತು ಕಾರ್ಯಗಳನ್ನೂ ಮಾಡಬಹುದು. ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ ಅಂತಾ ನಿವೇಶನ ಮುಂತಾದವುಗಳ ಮಾಲೀಕನು ಕೊಡತಕ್ಕದ್ದಲ್ಲದೆ ಮ್ಯುನಿಸಿಪಾಲಿಟಿಗೆ ಸಲ್ಲತಕ್ಕ ಸಾಲದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

81. ಕೆಟ್ಟ ನೀರು ನಿಂತಿರುವ ಸ್ಥಳವಗೈರೇಗಳು ಯಾವ ಮನುಷ್ಯನ ಸ್ವಂತ ಆಸ್ತಿಯಾಗಿದ್ದರೂ ಅನ್ಯಥಾ ಇದ್ದರೂ ವಾಸಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಯಾವದಾದರೂ ಸ್ವಂತ ಆವರಣದಲ್ಲಿಲ್ಲದ, ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನೂ ಪ್ರೆಸೀಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತೀ ಮಾಡತಕ್ಕದ್ದು. ಅಥವಾ ನೀರು ತೆಗೆಯಿಸಿ ಹಾಕತಕ್ಕದ್ದು.

82. ಈ ಬೈಲಾ ನಿಬಂಧನೆಗಳಿಂದ ಮಾಡಲ್ಪಡತಕ್ಕದೆಂದು ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ, ಮಾಡಿಸುವಲ್ಲಿ ಹಾಗೆ ಮಾಡಿಸುವದ್ದರಿಂದ ಅಟಕಾವು ಮಾಡಲ್ಪಡುವ, ಹಾನಿ ಹೊಂದುವ, ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೇಗೆ ಬದಲಾಗಿ ಮ್ಯುನಿಸಿಪಲ್ ಫಂಡಿನಿಂದ ಲಾಗವಡು ಮುಟ್ಟಿಸಿ ಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡೀಗಳು, ನಾಲೇಗಳು, ಇವುಗಳನ್ನು ಮೆಂಬರ್‌ಗಳು ಒದಗಿಸತಕ್ಕದ್ದು, ಮತ್ತು ಮಾಡತಕ್ಕದ್ದು. ಮತ್ತು ಮೆಂಬರ್‌ಗಳಿಗೂ, ಅದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ್ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರ್, ನುಕ್ಸಾನ್, ವ ಲಾಗವಾಡ್ ಇವುಗಳ ವ್ಯವಸ್ತೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವ್ಯವಸ್ತೆಯಾಗತಕ್ಕದ್ದು.

83. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆ ಅಥವಾ ಮೇಲ್ಭಾಗ, ಯಾವದಾದರೂ ಬಚ್ಚಲು ಯಾ ಚರಂಡಿ, ಇಂತಾದ್ದು ಮೆಂಬರುಗಳಿಂದ ತೆಗಿಯಿಸಲ್ಪಟ್ಟರೆ ಯಾ ಬಡೆಯಿಸಲ್ಪಟ್ಟರೆ, ಯಾವ ಬಗ್ಗೆ ಅವು ಅಗೆಯಿಸಲ್ಪಟ್ಟವೋ ಆ ಕಾಮ

ಗಾರೀಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತೀ ಮಾಡಿಸಿ ತಳವರಸೆಯನ್ನು ಮೇಲ್ಭಾಗವನ್ನು, ಬಚ್ಚಲನ್ನು, ಯಾ ಚರಂಡಿಯನ್ನು ಸರಿಮಾಡಿಸಿ ಅದರಲ್ಲಿ ಬೀಳುವ ಮಣ್ಣನ್ನು ತೆಗೆಸಿ ಹಾಕತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೆಯ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಸ್ಥಳಕ್ಕೆ ಕಟಕಟೆ ಕಟ್ಟಿಸಿ ಕಾವಲು ಇಡಿಸಿ ರಾತ್ರೇ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

84. ಮೆಂಬರುಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು, ಯಾ ಚರಂಡೀಗಳು, ಇಂತಾವುಗಳ ಪೈಕೀ ಯಾವದನ್ನಾಗಲಿ ತಾವು ಕಟ್ಟಿಸುತ್ತಿರುವಲ್ಲಿ ಯಾ ರೀಪೇರ್ ಮಾಡಿಸುತ್ತಿರುವಲ್ಲಿ, ನೆರೆ ಹೊರೆ ಮನೆಗಳಿಗೆ ಅಪಾಯ ಬಾರದಂತೆ ಪೋಟೇ ಕೊಟ್ಟು ಬಂದೋಬಸ್ತು ಪಡಿಸಿ ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ; ಬೀದಿಗೆ ಅಡ್ಡವಾಗಿಯಾಗಲಿ, ಅಂಥಾ ಕಾಮಗಾರೀ ನಡೆಯುತ್ತಿರುವಲ್ಲಿ ಸವಾರೀಗಳು, ಬಂಡಿಗಳು, ಇತರ ಯಾನಗಳು, ದನಗಳು, ಯಾ ಕುದುರೆ ಇವುಗಳು ಹೋಗುವ ಮಾರ್ಗವನ್ನು ಅಟಕಾವು ಮಾಡಲಿಕ್ಕೆ ಪ್ರೆಸೀಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು, ಇಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸೀಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಇತರ ಕೆಲಸಗಳು ಇವುಗಳನ್ನು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ್ ಮಾಡುತ್ತಿರುವಲ್ಲಿ ಅವುಗಳ ಬಳಿ ರಾತ್ರೇಹೊತ್ತು ಸಾಕಾದಷ್ಟು ದೀಪಗಳು ಇಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳೀ ಕಾವಲು ಇಡಿಸತಕ್ಕದ್ದು ಮತ್ತು ಪ್ರೆಸೀಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು ಸರಪಣಿಗಳು, ಯಾ ಕಂಭಗಳು, ಇವುಗಳ ಪೈಕೀ ಯಾವದನ್ನಾಗಲಿ, ತೆಗೆಯುವ, ಬದಲಾಯಿಸುವ, ಯಾ ಮತ್ತೊಂದು ಸ್ಥಳಕ್ಕೆ ತೆಗದುಕೊಂಡು ಹೋಗುವ ಯಾವದಾದರೂ ದೀಪವನ್ನು ಆರಿಸಿಬಿಡುವ, ಯಾವ ಮನುಷ್ಯನಾಗಲಿ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪ್ರೆಸೀಡೆಂಟರ ಅಪ್ಪಣೇ ಇಲ್ಲದೆ ಯಾವ ಮನುಷ್ಯನೂ, ಯಾವ ಬೀದಿಯಲ್ಲಿಯೂ ಯಾವ ಕಟ್ಟಡದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ, ಅವನು, ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತ ಯಾ ಹಳ್ಳ ಮುಚ್ಚಿಸಲ್ಪಡುವ ಪರ್ಯಂತ, ಅನ್ಯಥಾ ಬಂದೋಬಸ್ತು ಮಾಡಲ್ಪಡುವ ಪರ್ಯಂತ, ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ, ಯಾ ಹಳ್ಳಗಳಿಗೆ, ಸಾಕಾಗಿರುವ ಮೇರೆ ತಡೆಹಾಕಿಸುವಂತೆಯೂ, ಆವರಣ ಕಟ್ಟಿಸುವಂತೆಯೂ, ಮಾಡತಕ್ಕದಲ್ಲದೇ ರಾತ್ರಿ ಹೊತ್ತು ಅದರಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು; ಮತ್ತು ಅಂತಾ ಅಪ್ಪಣೆ ಇಲ್ಲದೇ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ, ಅಥವಾ ಅಂತಾ ಸಾಮಾನುಗಳು, ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೇಯಾಗಲಿ, ಆವರಣ ಕಲ್ಪಿಸದೇಯಾಗಲಿ ದೀಪ ಹಚ್ಚದೇಯಾಗಲಿತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಗಿಸಿಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೇಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೇಯಾಗಲಿ, ಇರುತ್ತಾನೋ ಅಂತಾ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಪ್ರೆಸೀಡೆಂಟರು ನೋಟಿಸ್ ಕೊಟ್ಟ 24 ಗಂಟೆಯ ಹೊತ್ತಿಗೆ ತರುವಾಯ ಆ ತಕಸೀರ್ ನಡಿಸುತ್ತಿರುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

86. ಸರ್ಕಾರ್ ಜಮೀನಲ್ಲಾಗಲಿ ಜನಗಳ ಸ್ವಂತ ಜಮೀನಲ್ಲಾಗಲಿ ಇರುವ ಯಾವದಾದರೂ ಕಟ್ಟೆ, ಕೆರೆ, ಬಾವಿ, ಯಾ ಹಳ್ಳ, ಯಾ ಇತರ ಪ್ರದೇಶ ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು, ಯಾ ಆವರಣ, ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿ ಇದ್ದಪಕ್ಷಕ್ಕೆ ಪ್ರೆಸೀಡೆಂಟರು ಲಿಖಿತ ರೂಪವಾದ ನೋಟಿಸ್ ದ್ವಾರಾ, ಅದರ ದೆಸೆಯಿಂದ ಅಪಾಯವುಂಟಾಗದೇ ಇರುವಂತೆ ಅದು ರಿಪೇರ್‌ಮಾಡಲ್ಪಡತಕ್ಕದ್ದೆಂತಲಾಗಲಿ, ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ, ಆವರಣ ಕಟ್ಟಸಲ್ಪಡತಕ್ಕದೆಂತಲಾಗಲಿ, ಸದರೀ ನಿವೇಶನಗಳ ಮಾಲೀಕನಿಗಾದರೂ, ಅನುಭವದಾರನಿಗಾದರೂ, ತಾಕೀದ್ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಗಂಟೆಯ ಹೊತ್ತಿನೊಳಗೆ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೇ ನಿರಾಕರಿಸಿದ ಪಕ್ಷಕ್ಕೆ, ಅಥವಾ ಉಪೇಕ್ಷಿಸಿದರೆ, ಅಥವಾ ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿ ಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದಲ್ಲದೆ ಆ ಪ್ರಕಾರ ಮಾಡಲಿಕ್ಕೆ ದೇರ್ ಮಾಡುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ಸದರೀ ಕಟ್ಟೆ, ವಗೈರೇಗೆ ರಿಪೇರೀ ಯಾ ಬಂದೋಬಸ್ತು ಮಾಡಲ್ಪಡುವಂತೆ ಯಾ, ಆವರಣ ಕಲ್ಪಿಸಲ್ಪಡುವಂತೆ ಮಾಡುವದು, ಮೇಲೆ ಕಂಡ ಬಂದೋಬಸ್ತು ಅಥವಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತತೋರುವ ಪ್ರಕಾರ ಜರೂರಾದ ಬಂದೋಬಸ್ತು ಅಂಶಗಳನ್ನೂ ಮಾಡುವದು ಪ್ರಸೀಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಬಗ್ಯೆ ಹಿಡಿದ ಲಾಗವಡು ಯಿದರಲ್ಲಿ ಮುಂದೆ ವಿಧಿಸಲ್ಪಡುವಪ್ರಕಾರ ವಸೂಲಾಗತಕ್ಕದ್ದು.

87. ಮೆಂಬರ್‌ಗಳಾಗಲಿ, ಅವರಿಂದ ಸದರೀ ಬಗ್ಯೆ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯನಾಗಲಿ ಯಾವದಾದರೂ ಮಾರ್ಕೆಟ್, ಕಟ್ಟ, ಅಂಗಡಿ, ತಟ್ಟೀ ಅಂಗಡಿ, ಅಥವಾ ಖಸೈಮಾಂಸ, ಕೋಳಿಗಳು, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿಂತಾವುಗಳನ್ನು ವಿಕ್ರಯಿಸುವ ಬಗ್ಯೆ ಯಾ ಖಸೈ ಮನೆ ಬಗ್ಯೆ ಉಪಯೋಗಿಸಲ್ಪಡುವ ಸ್ಥಳ ಯಿವುಗಳಲ್ಲಿ ನ್ಯಾಯವಾದ ಯೆಲ್ಲಾ ಕಾಲಗಳೊಳಗೂ ಕುಮ್ಮಕ್‌ದಾರ್ ಸಂಗಡಲೇ ಯಾಗಲಿ, ಅವರುಗಳು ಯಿಲ್ಲದೆಯಾಗಲಿ ಪ್ರವೇಶಿಸಿ ತನಖೀ ಮಾಡುವದು ಮಾತ್ರವಲ್ಲದೆ ಅದರಲ್ಲಿ ಯಿರಬಹುದಾದ ಯಾವಾದರೂ ಜಂತು, ಮುರ್ದಾರ್, ಮಾಂಸ, ಯಾವದಾದರೂ ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರಕಾರಿಗಳು ಇವು ಮನುಷ್ಯಾ ಹಾರಕ್ಕೋಸ್ಕರ ಉದ್ದೇಶಿಸಲ್ಪಟ್ಟವಾಗಿಯೂ, ಅಂತಾ ಆಹಾರಕ್ಕೆ ಅಯೋಗ್ಯವಾಗಿಯೂ, ಕಾಣಬರುವ ಸಂಗತಿಯಲ್ಲಿ ಅವುಗಳನ್ನು ಹಿಡಿದುಕೊಂಡು ಅವುಗಳನ್ನು ನಾಶ ಮಾಡಿಬಿಡುವಂತೆಯಾಗಲಿ ವಿಕ್ರಯಿಸುವ ಬಗ್ಯೆ ಕಾಣಿಸದಂತೆ ಯಾಗಲಿ, ಆಹಾರದ ಬಗ್ಯೆ ಉಪಯೋಗಿಸಲ್ಪಡದಂತೆ ಯಾಗಲಿ ವಿನಿಯೋಗಿಸಿ ಬಿಡುವಂತೆ ಹುಕ್ಕುಂ ಮಾಡಬಹುದು, ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ, ಅಂತಾ ಜಂತುವು, ಮುರ್ದಾರ್, ಮಾಂಸ, ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿವು ಮನುಷ್ಯನ ಆಹಾರಕ್ಕೆ ಅಯೋಗ್ಯವಾಗಿ ಯಿತ್ತೆಂತ ಬಬ್ಬ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ, ಅವುಗಳ ಮಾಲೀಕನಾಗಲಿ, ಅವು ಯಾರ ಸ್ವಾಧೀನದಲ್ಲಿ ಕಾಣಬಂದವೋ ಅಂತಾ ಮನುಷ್ಯನಾಗಲಿ, ಇಂಡ್ಯನ್ ಪೆನಲ್‌ಕೋಡಿನ 273ನೇ ಸೆಕ್ಷನ್‌ನಿಂದ ವಿಧಿಸಲ್ಪಟ್ಟ 5 ರೂಪಾಯಿಗಳ ಮೊದಲು 10 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಆ ಮೇರೆ ನಾಶ ಮಾಡಲ್ಪಟ್ಟ ವಸ್ತುಗಳು ಮನುಷ್ಯಾಹಾರಕ್ಕೆ ಯೋಗ್ಯವಾಗಿತ್ತೆಂತ ಮಾಜಿಸ್ಟ್ರೇಟರು ಅಭಿಪ್ರಾಯ ಪಟ್ಟ ಪಕ್ಷಕ್ಕೆ ಸದರೀ ವಸ್ತುವಿನ ನ್ಯಾಯವಾದ ಕಿಮ್ಮತ್ತು ಯೆಂತ ಮಾಜಿಸ್ಟ್ರೇಟರಿಗೆ ತೋರುವ ಮೊಬಲಗನ್ನು ಸದರೀ ಮಾಲೀಕನಿಗೆ ಸಲ್ಲಿಸುವಂತೆ ಮೆಂಬರ್‌ಗಳಿಗೆ ಹುಕ್ಕುಂ ಮಾಡತಕ್ಕದ್ದು.

88. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಮಡಿಕೆರೆ ಲಷ್ಕರ್ ವ ಷಹರ್ ಸರಹದ್ದುಗಳೊಳಗೆ ಈ ಕೆಳಗೆ ಕಾಣಿಸಲ್ಪಡುವ ಕಾರ್ಯಗಳ ಪೈಕೀ ಯಾವ ಕಾರ್ಯಗಳಿಗೋಸ್ಕರವಾಗಲಿ ಅಂದರೆ, ಕೊಬ್ಬು ಕರಗಿಸುವದು, ಸತ್ತ ಜಂತುವಿನ ಕರಳು ಮುಂತಾದ ಮಾಂಸ, ರಕ್ತ ಯಿಂತಾದ್ದನ್ನು ಕಾಯಿಸುವದು, ಈ ಬಗ್ಯಾಗಲಿ, ಸಬ್ಬು, ಕರ್ಪೂರ, ಯೆಣ್ಣೆ, ಯಿಂತಾದ್ದನ್ನು ಕಾಯಿಸುವ ಮನೆಯಾಗಿ, ಗಾಣಿಗೆ, ಯಾ ಯೆಣ್ಣೆ ತೆಗೆಯುವ ಯಂತ್ರವಾಗಿ, ರಂಗಾರಿ ಮನೆಯಾಗಿ, ಯಾ ಅಂಗಳವಾಗಿ, ತೊಗಲು ಹದ ಮಾಡುವ ಸ್ಥಳವಾಗಿ, ಇಟ್ಟಿಗೆ ಯಾ ಕುಂಬಾರ ಸೂಳಾಗಿ, ಯಾ ಸುಣ್ಣದ ಗೂಡಾಗಿ, ಕಾಗದ ಕಾರ್ಖಾನೆಯಾಗಿ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಯಾವದಾದರೂ ಕಂಪುಳ್ಳ ಯಾವದಾದರೂ ಕೆಲಸ ನಡೆಯುವ ಕಾರ್ಖಾನೆಯಾಗಿ ಯಾ ಕೆಲಸ ಮಾಡುವ ಸ್ಥಳವಾಗಿ; ಅಥವಾ ಹೊಣಗರಿಕೆ, ಹುಲ್ಲು, ಮರದ ಸಾಮಾನುಗಳು, ಸಾದೆ, ಕರಿ, ಯಾ ಜೆರಣೀವಗೈರೆ ಯಿಂತಾದ್ದನ್ನು ಇಡುವ ದೊಡ್ಡಿ, ಯಾ ಕೋಠೀಯಾಗಿ ಉಪಯೋಗಿಸಿಕೊಳ್ಳಲ್ಪಟ್ಟ ಪ್ರತಿ ಸ್ಥಳದ ಮಾಲೀಕ ಯಾ ಅನುಭವದಾರನು, ಅವು ವಿಕ್ರಯದ ಬಗ್ಯೆ ಇಟ್ಟುಕೊಳ್ಳಲ್ಪಟ್ಟಿದ್ದಾಗ್ಯೂ ಸರಿ, ಮತ್ತೊಂದು ಕಾರ್ಯಕ್ಕಾಗಿ ಇಟ್ಟುಕೊಳ್ಳಲ್ಪಟ್ಟಿದ್ದಾಗ್ಯೂ ಸರಿ, ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದ ತರುವಾಯ ಮೂರುತಿಂಗಳೊಳಗಾಗಿ ಆಬಗ್ಯೆ ಮೆಂಬರ್‌ಗಳ ದೆಸೆಯಿಂದ ಇಡಲ್ಪಡತಕ್ಕ ಒಂದು ಪುಸ್ತಕದಲ್ಲಿ ಅವರ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದು. ಮತ್ತು ಸದರೀ ಮೂರುತಿಂಗಳು ಕಳೆದ ತರುವಾಯ ಪ್ರೆಸಿಡೆಂಟರು ನೋಟಿಸ್ ಕೊಟ್ಟ ಯೆಂಟು ದಿನಗಳಿಗೆ ತರುವಾಯ ಯಾರಾದರೂ, ಅಂತಾ ಯಾವ ಸ್ಥಳವನ್ನಾಗಲಿ ರಿಜಿಸ್ಟರ್ ಮಾಡಿಸಿಕೊಳ್ಳದೆ ಉಪಯೋಗಿಸಿಕೊಂಡಲ್ಲಿ ಆ ತಕಸೀರ್ ನಡಿಸಲ್ಪಡುತ್ತಾ ಇರುವ ಪ್ರತಿದಿನಕ್ಕೂ 2 ಆಣೆ ಮೊದಲು, 5 ರೂಪಾಯಿಗಳವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

89. ಪರಂತು ಯಿದರಲ್ಲಿ ವಿಧಿಸಲ್ಪಟ್ಟ ಯಾ ಯಿಂದ ವಿಧಿಸಲ್ಪಡತಕ್ಕ ಬೈಲಾ ನಿಬಂಧನೆಗಳ ಪೈಕೀ ಯಾವದಾಗಲಿ, ಮಡಿಕೆರೆಯಲ್ಲಿ ಯಾವ ಬಗೆ ಜನಗಳಿಗಾಗಲಿ ಯಾವ ವ್ಯಕ್ತಿಗಾಗಲಿ, ಬಹಳ ಕಠಿಣವಾಗಿ ಕಾಣಬಂದ ಪಕ್ಷಕ್ಕೆ ಆಗ ಈ ಬೈಲಾನಿಬಂಧನೆಗಳು, ಚೀಫ್ ಕಮ್ಮಿಷನರವರ ಅನುಮತಿಯ ಮೇಲೆ ಜೋರ್ಡಿನವರ ಪೂರ್ಣವಾದ ಸಮಾಜದೊಳಗೆ ಯುಕ್ತ ತೋರುವ ಪ್ರಕಾರ ಯಾವಾಗ್ಯೂ ರದ್ದು ಮಾಡಲ್ಪಡಬಹುದು, ಪರಿಷ್ಕರಿಸಲ್ಪಡ ಬಹುದು, ಯಾ ತಿದ್ದುಪಡೀ ಮಾಡಲ್ಪಡಬಹುದು.

90. ಮತ್ತು ಕಾಫೀಸಾಗುವಳಿಯು ಜನಗಳ ಆರೋಗ್ಯ ಭಂಗಕಾರಿಯಾಗಿರುವದರಿಂದ ಅದನ್ನು ಪೇಟೆಯೊಳಗೆ ಮತ್ತು ರೋಮನ್ ಕ್ಯಾಥೋಲಿಕ್ ಗುಡಿವರಿಗೆ ಕಾಫೀಗಿಡ ಹಾಕುವಣ ನಿರೋಧಿಸಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 26, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 25ನೇ ಆಗಸ್ಟ್ 1876.

ಮೈಸೂರು ಥೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ನಂ. ೪೨	ಚನ್ನಗಿರೀ ರಂಗಣ್ಣ ..	ಬಾಟ್ಟಣಿ ಕ್ರಿಷ್ಟರಾವ್ ವಗೈರೆ ..	೨೬ನೇ ಆಗಸ್ಟ್
ಸ್ಪಿ. ಅ. ೪೫	ಗಂಗವ್ಮಾ ..	ದೊಡ್ಡಬಚ್ಚವ್ಮ ವಗೈರೆ ..	ಡಿಟೋ
ಸ್ಪಿ. ಅ. ೪೮	ವೆಂಕಟಕೃಷ್ಣಂಭಟ್ಟ ..	ಶ್ರೀನಿವಾಸ ಐಯಂಗಾರ್ ವಗೈರೆ ..	ಡಿಟೋ
ಕೊ. ಅ. ನಂ. ೩	ರಾಮಶೆಟ್ಟಿ ಚಿಕ್ಕಪ್ಪೈಯ ..	ಮಲ್ಲುಶೆಟ್ಟಿ ..	ಡಿಟೋ
ಕೊ. ಸ್ಪಿ. ಅ. ೩	ನಾರಣ್ಯೈಯ ..	ನಾಗೈಯ ..	ಡಿಟೋ
ಅಪ್ಪೀಲ್ ೪ ರಿ. ನಂ. ೧೩	ಚನ್ನಮಲ್ಲೈಯ ..	ಮಲ್ಲವ್ಮ ವಗೈರೆ ..	೩೧ನೇ ಡಿಟೋ
ಸ್ಪಿ. ಅ. ೪೯	ಕ್ರಷ್ಣರಾವ್ ಯ. ಸುಬ್ಬರಾವ್ ..	ಮಹದೇವರಾವ್ ವಗೈರೆ ..	ಡಿಟೋ
ಕೊ. ಸ್ಪಿ. ಅ. ೮	ಪುಟ್ಟವ್ಮ ..	ಬಿಂದಿ ಉರಫ್ ಗೌರಿ ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಯಸ್‌ಕ್ವಯರ್ ..	ನರಶಿಹ್ಮಮೇಸ್ತ್ರಿ ವಗೈರೆ ..	೫ನೇ ಸೆಪ್ಟಂಬರ್
ಸ್ಪಿ. ಅ. ೪೩	ವೆಂಕಟಾಚಾರು ..	ಪೋಬಳಾಚಾರಿ ಗಾರ್ಡಿಯನ್ ಕನಕವ್ಮ ..	ಡಿಟೋ
ಕೊ. ಸ್ಪಿ. ಅ. ೬	ಹಿರಣ್ಯೈಯ ..	ನಂಜೇಗೌಡ ..	ಡಿಟೋ
ಸ್ಪಿ. ಅ. ೫೦	ಸುಬ್ಬಾಸಾನಿ ..	ಶಿವಣ್ಣ ..	೧೯ನೇ ಡಿಟೋ
ಸ್ಪಿ. ಅ. ೫೪	ರಾಮಕ್ರಿಷ್ಣಪ್ಪ ವಗೈರೆ ..	ತಿಮ್ಮಪ್ಪ ವಗೈರೆ ..	ಡಿಟೋ
ಫೂಟ್ ಅ. ೮	ರಾಮಾನುಜವ್ಮ ..	ಲಕ್ಷ್ಮವ್ಮ ..	ಡಿಟೋ
ಸ್ಪಿ. ಅ. ೫೧	ದಾಸಪ್ಪ ..	ಈರಿಗಾ ..	೨೧ನೇ ಡಿಟೋ
ಸ್ಪಿ. ಅ. ೫೨	ಗೊಪಾಲೈಯ ವಗೈರೆ ..	ವೃಜನಿ ಮರುಳೈಯ ವಗೈರೆ ..	೨೦ನೇ ಡಿಟೋ
ಸ್ಪಿ. ಅ. ೫೫	ಗರುಡಾಚಾರಿ ..	ಮಹಮ್ಮದ್ ಅಹಮ್ಮದ್ ..	೨೦ನೇ ಡಿಟೋ
ಸ್ಪಿ. ಅ. ೩೯	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	೨೩ನೇ ಡಿಟೋ
ಸ್ಪಿ. ಅ. ೫೩	ಪುವಮ್ಮಾಜಿ ..	ಸುಬ್ಬಣ್ಣ ವಗೈರೆ ..	೨೩ನೇ ಡಿಟೋ
ಫೂಟ್ ಅ. ೩	ಪುಟ್ಟಣ್ಣ ..	ದುಗ್ಗ ಹೆಗ್ಗಡತಿ ವಗೈರೆ ..	೨೩ನೇ ಡಿಟೋ

J. D. GORDON, *Judl. Commr.*

ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 16ನೇ ಆಗಸ್ಟು 1876.

ಮೈಸೂರು ಸರ್ವೆ ವ ಸೆಟಲ್ಮೆಂಟ್ ಕಮ್ಮಿಷನರ್ ಕರ್ನಲ್ ಆಂಡರ್‌ಸನ್‌ಯವರು ಮೂರು ತಿಂಗಳ ಪ್ರಿವಿಲೀಜ್ ರಜಾದಿಂದ ವಾಪಸ್ ಬಂದು ತಮ್ಮ ಕೆಲಸದ ಚಾರ್ಜನ್ನು ಮಾಹೇ ಮಜಕೂರು 16ನೇ ಮರ್ಕ್ಕುಂ ಕಚ್ಚೇರಿ ಹೊತ್ತಿಗೆ ಪೂರ್ವವೆ ಪುನಃ ವಹಿಸಿದರು.

W. C. ANDERSON,
Survey & Settlement Commr., Mysore.

ಇನಾಂ ಇಲಾಖಾ.

ತಾರೀಖು 16ನೇ ಆಗಸ್ಟು 1876.

ಮೈಸೂರು ಇನಾಂ ಕಮ್ಮಿಷನರ್ ಕರ್ನಲ್ ಆಂಡರ್‌ಸನ್ ಯವರು ಮೂರು ತಿಂಗಳ ಪ್ರಿವಿಲೀಜ್ ರಜಾದಿಂದ ವಾಪಸ್ ಬಂದು ತಮ್ಮ ಕೆಲಸದ ಚಾರ್ಜನ್ನು ಮಾಹೇ ಮಜಕೂರು 16ನೇ ಮರ್ಕ್ಕುಂ ಕಚ್ಚೇರಿ ಹೊತ್ತಿಗೆ ಪೂರ್ವವೇ ಪುನಃ ವಹಿಸಿದರು.

W. C. ANDERSON,
Inam Commr., Mysore.

ಬೆಂಗಳೂರು ಮ್ಯುನಿಸಿಪಾಲಿಟಿ.

ತಾರೀಖು 5ನೇ ಆಗಸ್ಟು 1876.

ಸರ್ 1871ನೇ ಇಸವಿ ಬೆಂಗಳೂರು ಮ್ಯುನಿಸಿಪಲ್ ರಿಗ್ಯುಲೇಷನ್‌ಗಳ 72ನೇ ಸೆಕ್‌ಷನ್‌ಕುರಿತು ಇದರಿಂದ ತಿಳಿಯಪಡಿಸುವದೇನಂದರೆ, ಬೆಂಗಳೂರು ಲಷ್ಕರ್ ಮ್ಯುನಿಸಿಪಲ್ ಸರಹದ್ದುಗಳೊಳಗೆ ಇರತಕ್ಕ ದರೋಬಸ್ತು ಮನೆಗಳು ಕಟ್ಟಗಳು ವ ಜಮೀನ್‌ಗಳು ಇವುಗಳ ಮೇಲೆ 1876—77ನೇ ಸಾಲಿಗೆ ಕಟ್ಟಲ್ಪಟ್ಟ ಸಾಲೀಯಾನಾ ಹುಟ್ಟುವಳಿ ಮತ್ತು ಅದರಮೇಲೆ ವಿಧಿಸಲ್ಪಟ್ಟ ರಿವಾಜು ಇವುಗಳನ್ನ ಅಡಗಿಸಿಕೊಂಡಿರುವ ರಿಜಿಸ್ಟರ್ ಬುಕ್ಕುಗಳನ್ನು ರೆಸಿಡೆನ್ಸಿ ರೋಡ್ 12ನೇ ನಂಬರ್ ಉಳ್ಳ ಮ್ಯುನಿಸಿಪಲ್ ಟ್ಯಾಕ್ಸಸ್ ಅಸೆಸ್ಸರ್ ವ ಕಲೆಕ್ಟರ್‌ಯವರ ಆಫೀಸ್‌ನಲ್ಲಿ ದಿನವಹಿ 11 ಘಂಟೆ ಲಗಾಯಿತು 4 ಘಂಟೆ ವರಿಗೂ ಮಾಲೀಕರಾಗಲಿ ಅವರಿಂದ ಅಧಿಕಾರ ಹೊಂದಿದ ಮುತಾಲೀಕರಾಗಲಿ ನೋಡಿಕ್ಕೊಳ್ಳಬಹುದು.

ಅಂತಾ ಹುಟ್ಟುವಳಿ ವ ರಿವಾಜುಗಳ ಮೇಲೆ ಮಾಡಲ್ಪಡುವ ದರೋಬಸ್ತು ಅಪ್ಪೀಲ್‌ಗಳೂ ಈ ತಾರೀಖು ಲಗಾಯಿತು ಒಂದು ತಿಂಗಳೊಳಗಾಗಿ ಮಾಡಲ್ಪಡತಕ್ಕದ್ದು, ಆ ತರುವಾಯ ಅಂತಾವುಗಳಿಗೆ ನಿಗೆ ಕೊಡಲ್ಪಡುವದಿಲ್ಲ.

J. H. ORR, M. D.,
President, Ml. Commission,
Bangalore Cantonment.

BANGALORE DISTRICT.

Notice of an application by Krishnavva for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಯಿಸವಿ ಶಿವಿಲ್ ಮಿಸಲೇನಿಯಸ್ ನಂಬರ್. 63.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಅರಳೇಪೇಟೆಯಲ್ಲಿ ಇರುವ ಕೃಷ್ಣಮ್ಮನೆಂಬವಳು ತನ್ನ ಮಗ ಬಾಳಾಜಿ ಬೀಮೋಜೀ ಲೇಹೆ 250 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಗೆ ಸರ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ

ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ಶಪಟಂಬರ 22ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗು ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 16ನೇ ಮಾಹೆ ಆಗಸ್ಟು 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

L. Ricketts,
Offg. Dy. Commr.

KOLAR DISTRICT.

Notice of an application by Puttamma for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ ಡೆ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ದೇವನಹಳ್ಳಿಲಿರುವ ಚಿಕ್ಕಬಳ್ಳಾಪುರದ ನಗರತ ವೀರಶೆಟ್ಟರ ಹೆಂಡತಿ ಪುಟ್ಟಮ್ಮನೆಂಬವಳು ಘಾತೀಸಟ್ಟು ತನ್ನ ಗಂಡನ ಹೆಸರಿನ ಲೇವಾದೇವಿ ಮೊಬಲಗು 3,200 ರೂಪಾಯಿಗಳು ವಸೂಲ್ ಮಾಡಿಕೊಳ್ಳತಕ್ಕ ಬಗ್ಯೆ ಸ 1860ನೇ ಇಸವಿ 27ನೇ ಆಕ್ಟ ಪ್ರಕಾರ ವಾರಸ ಸರ್ಟಿಫಿಕೇಟ ಕೊಡಿಸಬೇಕೆಂದು ಗುಜರಾಯಿಸಿಕೊಂಡ ಅರ್ಜಿಯು ಸ ಮ|| ಶಪಟಂಬರು 22ನೇ ತಾರೀಖಿನಲ್ಲಿ ವಿಚಾರಿಸಲ್ಪಡುತಾದ್ದರಿಂದ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಅಂತಾವರೆಲ್ಲ ಆ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದಾಗಿ ಇರುತ್ತೆ.

ತಾರೀಖು 16ನೇ ಮಾಹೇ ಆಗಸ್ಟ 1876ನೇ ಇಸವಿ, ಮೊಕ್ಕಾಂ ಕೋಲಾರ.

P. N. Purnaiya,
For Dy. Commr.

TUMKUR DISTRICT.

Notice of an application by Siddappa for a certificate under Act XXVII of 1860.

ತುಮಕೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ, ತುಮಕೂರು ತಾಲ್ಲೂಕು ಕ್ಯಾತಸಂದ್ರ ಗ್ರಾಮದ ವಾಸಸ್ಥನಾಗಿಯಿದ್ದ ಪಾತೀ ಯಾದ ವುರಡಿಗೆರೆ ಸಿದ್ದಲಿಂಗಪ್ಪ ಯುಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 2000 ರೂಪಾಯಿಗಳು ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಅಪೇಕ್ಷಿಸಿ ಯಿವನಮಗ ಸಿದ್ದಪ್ಪ ಯಂಬುವನು ದಾಖಾಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಸೆಪ್ಟಂಬರು ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್‍ಯಾರಾದರೂ ಇದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 8ನೇ ಮಾಹೆ ಆಗಸ್ಟ 1876ನೇ ಇಸವಿ, ಮೊಕ್ಕಾಂ ತುಮಕೂರು.

T. E. Woodcock,
Offg. Dy. Commr.

ASHTAGRAM DIVISION.

ಅಷ್ಟಗ್ರಾಮದ ಡಿವಿಜನ.

ತಾರೀಖು 2ನೇ ಆಗಸ್ಟು 1876.

ಇದರಿಂದ ತಿಳಿಯಪಡಿಸುವದೇನಂದರ,—ಚೀಫ ಕಮ್ಮಿಷನರ ಸಾಹೇಬರವರ 1876ನೇ ಇಸವಿ ಫಿಬ್ರುವರೀ 9ನೇ ಮರಕ್ಕುಂ 635ನೇ ನಂಬರ ಹುಕ್ಕುಂ ಪ್ರಕಾರ ಸ ಮಜಕೂರು ಫಿಬ್ರುವರೀ 12ನೇ ಮರಕುಮಿನ ಮೈಸೂರು ಗೆಜೆಟ 23ನೇ ಪುಟದಲ್ಲಿ

ತಾಲಿಂಖಾನೆಗಳನ್ನ ಕ್ರಮಪಡಿಸುವ ಬಗ್ಯೆ ಛಾಪಿಸಿರುವ ತಿದ್ದುಪಾಟು ಮಾಡಿದಂತಾ ರೂಲ್ಸಗಳು ಸನ್ 1876ನೇ ಇಸವೀ ಆಗಸ್ಟು 1ರ ಲಗಾಯತು ಈ ಡಿವಿಜನ್ನಿಗೆ ಸಂಬಂಧಪಟ್ಟ ಈ ಕೆಳಗೆ ವಿವರಿಸುವ ಷಹರ್‌ಗಳಿಗೆ ಲಗಾವ್ ಆಗುತ್ತೆಂದು ಇದರಿಂದ ಪ್ರಚುರ ಪಡಿಸಿರುತ್ತೆ.

ಮೈಸೂರು ಡಿಸ್ಟ್ರಿಕ್ಟು.

1. ಮೈಸೂರು	5. ಚಾಮರಾಜನಗರ	9. ಪೆರ್ಯಾಪಟ್ಣ	13. ಬನ್ನೂರು
2. ಶ್ರೀರಂಗಪಟ್ಣ	6. ಗುಂಡಲ್‌ಪೇಟೆ	10. ಸಾಲಿಗ್ರಾಮ	14. ಕಿರಗಾವಲ್
3. ಗಂಜಾಮು	7. ಸಂಜನಗೂಡು	11. ಕಳಲೆ	
4. ಮಳವಳ್ಳಿ	8. ಹುಣಸೂರು	12. ಕನ್ನೇಗವಡನಕೊಪ್ಪಲ್.	

ಹಾಸನ ಡಿಸ್ಟ್ರಿಕ್ಟು.

15. ಹಾಸನ	19. ಕೋಣನೂರು	23. ಚನ್ನರಾಯಪಟ್ಣ	27. ಬೆಳ್ಳೂರು.
16. ಸಕಲೇಶಪುರ	20. ನರಸೀಪುರ	24. ಶ್ರವಣಬಳಗೊಳ	
17. ಮೂಡಗೆರೆ	21. ಮೇಲ್‌ಕೋಟೆ	25. ಬೇಲೂರು	
18. ಅರಕಲಗೂಡ್	22. ಕನ್ನಂಬಾಡಿ	26. ನಾಗಮಂಗಲ	

A. C. HAY,
Commissioner.

NAGAR DIVISION.

Notice of destruction of old Judicial records of the Nagar Division Commissioner's Court.

ನಗರ ಡಿವೀಜನ್ ಕಮ್ಮಿಷನರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಳೇ ಜುಡಿಷಲ್ ರಿಕಾರ್ಡಗಳನ್ನು ನಾಶಪಡಿಸತಕ್ಕ ಬಗ್ಯೆ ಸನ್ 1867ನೇ ಇಸವಿ ಆಗಸ್ಟು 27ನೇ ಮರ್ಕುಂ ಮೈಸೂರು ಗೆಜೆಟ ಪಾನು 460ರಲ್ಲು ಛಾಯಿಷ್ ಮಾಡಿರುವ ನಿಬಂಧನೆ ಪ್ರಕಾರ ಮತ್ತು ಸನ್ 1876ನೇ ಜುಲೈ 27ನೇ ಮರ್ಕುಂ ಜುಡಿಷಲ್ ಕಮ್ಮಿಷನರ ಸಾಹೆಬರವರ ನಂಬರ್ 294—74ನೇ ಲೆಟರ ಪ್ರಕಾರ ಸಹಾ ನಗರ ಡಿವೀಜನ್ ಕಮ್ಮಿಷನರ್ ಕೋರ್ಟಿಗೆ ಸಂಬಂಧಪಟ್ಟ ಸನ್ 1862 –63ನೇ ಇಸವಿ ಲಾಗಾಯತು 1870ನೇ ಇಸವಿ ಆಖೈರ ವರಿಗಿನ ಬಾಬತು ಜುಡಿಷಲ್ ರಿಕಾರ್ಡಗಳನ್ನು ನಾಶ ಪಡಿಸುವದರಿಂದ,

ವ್ಯಾಜ್ಯಗಳಿಗೆ ಸಾಧಕವಾಗಿ ಕಕ್ಷಿಗಾರ್ರು ದಾಖಲ್ ಮಾಡಿದ ದಸ್ತೈವಜುಗಳನ್ನು ವಾಪಸ ಪಡಿಯಬೇಕಾಗಿ ಯಿದ್ದಲ್ಲಿ ಈ ಲಾಗಾಯತು ವಂದು ತಿಂಗಳ ವಳಗಾಗಿ ಈ ಕೋರ್ಟು ಮುಂದೆ ಹಾಜರಾಗಿ ಕ್ರಮಪ್ರಕಾರ ವಾಪಸ್ ಪಡಿಯಬಹುದು.

ತಾರೀಖು 8ನೇ ಆಗಸ್ಟು ಸನ್ 1876ನೇ ಇಸ್ವಿ.

J. A. CAMPBELL,
Commissioner.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಪೊಲೀ ಇಲಾಖಾ.

ತಾರೀಖು 4ನೇ ಅಗಸ್ಟ 1876.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಬೆಂಕೀಪುರ ತರೀಕೆರೆ ಇವುಗಳ ಮಧ್ಯೆ ಇರುವ ಕೆರೇ ಹಳ್ಳಿಯ ಕೆರೇ ಕಟ್ಟೇಮೇಲೆ ಇಳದಿದ್ದ ಕೆಲವು ಭಂಡಿಗಳಿಂದ 1876ನೇ ಜುಲೈ 19ನೇ ಮರ್ಕುಂ ರಾತ್ರೆ ಶಿವಮಗ್ಗಾ ಕಸಬಾ ಷರಾಫ್ ರಂಗಪ್ಪನಬಾಬತು ಬಟ್ಟೆಗಳನ್ನು ಕಳವು ಮಾಡಿಕ್ಕೊಂಡು ಹೋಗಿರುವ ಮೊಕದ್ದಮೆಯಲ್ಲಿ ಸೇರಿದ ತಕಸೀರ್ ವಂದರ ಪತ್ತೆ ಆಗಲಿಕ್ಕೂ ಅವರ ಮೇಲೆ ತಪ್ಪು ಸ್ಥಾಪನೆಆಗಲಿಕ್ಕೂ, ಸಹಾ ಸಾಧಕವಾದ ಖಾತಮೀ ಕೊಡುವ ಮನುಷ್ಯನಿಗೆ 20 ರೂಪಾಯಿಗಳ ಇನಾಂ ಸದರೀ ರಂಗಪ್ಪನಿಂದ ಕೊಡಲ್ಪಡುವದು.

Notice of an application by Chandappa for a certificate under Act XXVII of 1860.

ಶಿವಮೊಗ್ಗಾ ಡಿ॥ ಡೆ॥ ಕ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—ತನ್ನ ತಂದೆ ಕುಂಶಿಯಲ್ಲಿ ಯಿದ್ದ ಹೊಳೆಹೊನ್ನೂರು ಮುರಿಗಪ್ಪ ಫೌತೀ ಆಗಿ ಯಿರುವದ್ದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವೀ ಸಾಲದ ಬಾಬತು 500 ರೂಪಾಯಿ ತಾನು ವಸೂಲ್ ಮಾಡಿ ಕೊಳ್ಳುವದಕ್ಕೆ ತನ್ನ ಹೆಸರಿಗೆ ಸರಟಿಫಿಕೇಟ ಕೊಡಿಸಬೇಕೆಂದು ಹೊನ್ನಾಳಿ ತಾಲ್ಲೂಕು ಕುಂಶಿಯಲ್ಲಿ ಯಿರುವ ಹೊಳೆಹೊನ್ನೂರು ಚಂದಪ್ಪನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಸೆಪ್ಟಂಬರ್ ತಾರೀಖು 14ನೇ ದಿವಸ ಹಿಯರಿಂಗ್ ನಿಷ್ಕರ್ಷೆ ಮಾಡಿಯಿಧೆ ತಕರಾರುವುಳ್ಳವರು ಆದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ಬತಾರೀಖು ೮ನೇ ಆಗಸ್ಟು ಸನ್ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

Notice of an application by Tate Rao Jagattappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತನ್ನ ಖಾಸಾಅಂಣ ಸಂತಾಜಿ ಜಗತಾಪ್ ಯಂಬವನು ಫೌತೀ ಆಗಿ ಆರುವದರಿಂದ ಆತನಿಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 250 ರೂಪಾಯಿ ತಾನು ವಸೂಲ್ಮಾಡಿಕ್ಕೊಳ್ಳುವದಕ್ಕೆ ಸರ್ಟಿಫಿಕೇಟ್ ಕೊಡಿಸಬೇಕೆಂದು ಶಿವಮೊಗ್ಗಾ ತಾಲ್ಲೂಕು ಬೆಂಕಿಪುರದಲ್ಲಿ ಇರುವ ತಾತೆರಾವು ಜಗತಾಪನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಶಪಟಂಬರು ತಾರೀಖು 14ನೇ ದಿನ ಹೀರಿಂಗ್ ನಿಷ್ಕರ್ಷೆ ಮಾಡಿ ಇದೆ, ತಕರಾರ್ ಉಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ಬತಾರೀಖು 11ನೇ ಮಾಹೇ ಆಗಸ್ಟ ಸನ್ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

Notice of an application by Satyasandachari for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತನ್ನ ತಂದೆ ಅಂಬಲಗೋಳದ ವ್ಯಾಸರಾಮಾಚಾರಿಯು ಫೌತೀ ಆಗಿ ಇರುವದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವೀ ಸಾಲದ ಬಾಬತು 900 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ತನ್ನ ಹೆಸರಿಗೆ ಸರ್ಟಫಿಕೇಟ್ ಕೊಡಿಸಬೇಕೆಂತ ಕವಲೇದುರ್ಗ ತಾಲ್ಲೂಕು ಮಹಿಷಿಯಲ್ಲಿ ಯಿರುವ ಸತ್ಯಸಂಧಾಚಾರಿಯು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಅಕ್ಟೋಬರ್ 5ನೇ ತಾರೀಖು ದಿನ ಹಿಯರಿಂಗ್ ನಿಶ್ಚಯಿಸಿಧೆ ತಕರಾರ್ ವುಳ್ಳವರು ಆ ದಿನಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದಿಧೆ.

ಬತಾರೀಖು 17ನೇ ಆಗಸ್ಟು 1876ನೇ ಇಸವಿ ಮೊಕ್ಕಾಂ ಶಿವಮೊಗ್ಗಾ.

C. S. Blair,
Offg. Dy. Commr.

KADUR DISTRICT.

Notice of sale of occupied lands in satisfaction of Government dues.

ಕಡೂರು ಡಿಸ್ಟ್ರಿಕ್ಟ ಡೆ॥ ಕಮಿಶ್ನರವರ ಕೋರ್ಟನಿಂದ.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ ಈ ಕೆಳಗೆ ಕಂಡ ಜಮೀನಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ ತರೀಕೆರೆ ಬಾಣಾವಾರ ತಾಲ್ಲೂಕು ಆಯಾ ಗ್ರಾಮದಲ್ಲಿ ಚಾಲ್ತೀ ಇಸವೀ ಸೆಪ್ಟಂಬರ್ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಆಯಾ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಚಡ ದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭ ಬಿದ್ದಂತೆ ಮುಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ, ತಪ್ಸೀಲವಾರ ತೋರಿಸಲ್ಪಟ್ಟ ಪ್ರಕಾರ ರೂ॥ 95 ಆ॥ 14 ಪೈ॥ 8 ಗಳಾಗುತ್ತವೆ. ಹರಾಜ್ ನಿಬಂಧನೆಗಳು ಹರಾಜ್ ಕಾಲದಲ್ಲಿ ತಿಳಿಸಲ್ಪಡುತ್ತವೆ. ಜಮೀನ ತಪ್ಸೀಲಬಗ್ಯೆ ಮಾಹೆ ಮ॥ 19ನೇ ಮರು ೦ ಗೆಜೆಟ ನೋಡಿಕ್ಕೊಳ್ಳ ತಕ್ಕದ್ದು.

Descriptive roll of prisoners absconded.

ಯಾದಾಸ್ತು ಕೊಪ್ಪದ ತಾಲ್ಲೂಕು ಶ್ರಿಂಗೇರೀ ಕಸಬಾದಲ್ಲಿ ಯಿರುವ ನಗರದ ವೆಂಕಟಗಿರಿಯಪ್ಪನ ಮನೇಯಲ್ಲಿ ಜೂಲೈ ತಾ|| 16ನೇ ರಾತ್ರಿ ನಡೆದ ಕನ್ನ ಕಳವು ಮೊಕದ್ದಮಾದಲ್ಲಿ ಮಾಲು ಸಿಕೀ ಪರಾರೀಯಾದ ಖೈದೀರ ಚಹರೇ ಪಟ್ಟಿ.

ಖೈದೀ ಹೆಸರು	ಜಾತಿ	ತಂದೇ ಹೆಸರು	ವಯಸ್ಸು	ಯತ್ತರ ಅಡಿ	ಅಂ.	ಯಾವ ಗ್ರಾಮದ ವಾಸಸ್ಥ	ಮುಖ್ಯವಾದ ಗುರ್ತುಗಳು.
ಅಹಮ್ಮದು ಖಾನ್	ಮುಸಲ್ಮಾನ್ ಖಾದರ್	ಗೊತ್ತಿಲ್ಲ	28	5	6	ಪೆಷಾವರ್ ಪಂಜಾಬು ಸೀಮೆ	ಕೆಂಪುವರ್ಣದ ಸಾದಾರಣ ತರಹಾದ ಆಳು ಗಡ್ಡಾ ಮೀಶೆ ಬಿಟ್ಟಿಧಾನೇ ಹಿಂಭಾಗದ ತಲೆಯಲ್ಲಿ ಗರ್ದ ಬಿಟಿಧಾನೆ ಸುಮಾರು $2\frac{1}{2}$ ಅಂಗುಲವುದ್ದ ಸದರೀ ಕೂದ್ಲು ಬೆಳದಿದೆ ಬಲದಕೈ ಹೆಬ್ಬೆಟ್ಟಿಗೆ ಸಮನಾಗಿ ಮೇಲ್ಕಡೆ ಮುಂಗೈಮೇಲೆ 1 ರೂಪಾಯಿ ಅಗಲಾನೆ ಕುರುವಿನ ಕಲೆಯಿಧೆ ತಲೆಗೆ ಕೆಂಪು ಬನಾತಿನ ಕರೀ ಕುಚ್ಚಿನ ಟೋಪೀ ಹಾಕಿ ಯಿರುತ್ತಾನೆ ಈ ಜಾತಿ ಜನರು ಧರಿಸುವ ಪದ್ಧತಿ ಪ್ರಕಾರ ಬಿಳೆ ಸಾದಾ ಗಾಡದ ಬಹಳ ಸೊಡ್ಲವಾಗಿ ಇರುವ ಷರಾಯಿ ಮೊಳಕಾಲು ವರಿಗೂ ಯಿರುವ ಜುಬ್ಬಾ ತೊಟ್ಟಿರುತ್ತಾನೆ ಇವನ ಬಳಿ ಇಂಗು ಹಾಕಲಿಕ್ಕೆ ವುಪಯೋಗಿಸಿದ್ದ ವಂದು ಗೋಣಿ ಚೀಲಾ ಯಿಧೆ ಇಂಗು ಮಾರುವ ಕಸಬು ಮನುಷ್ಯ
ಅಬ್ಬಾಸ್ ಖಾನ್	ಡಿಟೋ	ಡಿಟೋ	34	5	8	ಡಿಟೋ	ಯಣೆಗೆಂಪು ವರ್ಣದ ದಪ್ಪತರಹಾದ ಆಳು ದಾಡಿ ಮೀಶೆ ಬಿಟ್ಟಿಧಾನೆ ತಲೆಯಲ್ಲಿ ಕೂದ್ಲು ಮುಂತಾದ್ದು ಬಿಟ್ಟಿಲ್ಲಾ ಇವನು ಕೆಂಪು ಬನಾತಿನ ಕುಚ್ಚು ಯಿಲ್ಲದಿದ್ದ ಟೋಪಿ ಹಾಕಿ ಬದಸ್ತೂರ್ ಬಿಳೇ ಷರಾಯಿ ಜುಬ್ಬ ತೊಟ್ಟಿರುತ್ತಾನೆ ಇವನ ಬಳಿಯಲ್ಲಿ ವಂದಕ್ಕು ಇಂಗು ಹಾಕುವ ಗೋಣೀ ಚೀಲ ಯಿಧೆ.

P. Krishna Rao,
Dy. Commr.

Notice of destruction of old Judicial records of the Judicial Assistant's Court, Kadur District.

ಕಡೂರು ಡಿಸ್ಟ್ರಿಕ್ಟ್ ಜುಡಿಷಿಯಲ್ ಅ|| ಕಮ್ಮಿಷನರ್ ಕೋರ್ಟಿನಿಂದ.

ಕಡೂರು ಡಿ|| ಡಿಪ್ಯುಟಿ ಸೂ|| ಕೋರ್ಟು.

ಚಿಕ್ಕಮಗಳೂರ್ ತರಫ಼ ಅ|| ಸೂ|| ಕೋರ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಜುಡಿಷಿಯಲ್ ಕಮ್ಮಿಷನರ್ ಸಾಹೆಬರವರ ಸನ್ 1867ನೇ ಇಸವಿ ಶಪಟಂಬರ 7ನೇ ಮರ್ಕುಂ ರೂಲ್ಸ್ 1 ಸನ್ 1876ನೇ ಇಸವಿ ಜೂನ್ 27ನೇ ಮರಕುಂ ನಂಬರ್ 594—74ನೇ ಲೆಟರ್ ಮತ್ತು ನಗರ ಡಿ|| ಕಮ್ಮಿಷನರ ಸಾಹೆಬರವರ ಸನ್ ಮಜಕೂರು ಜೂಲೈ 6ನೇ ಮರಕುಂ 169ನೇ ನಂಬರ್ ಡಾಕಿಟ 1 ಸಹಾ ಅನುಸರಿಸಿ ಈ ಕೋರ್ಟಿನ ರಿಕಾರ್ಡಿನಲ್ಲಿರತಕ್ಕ ಸನ್ 1867—68—69 ಈ 3 ಸಾಲು ಸಿವಿಲ್ ರಿಕಾರ್ಡುಗಳು ಈ ಮಾರ್ಜನ್ನಲ್ಲಿ ನಮೂದಾಗುವ ಕೋರ್ಟುಗಳಬಾಬ

ಕಡೂರು ತರಫಲ್ಲ ಸೂ|| ಕೋರ್ಟ್. ಕಡೂರು ಡಿ|| ಜ್|| ಅ|| ಕ|| ಕೋರ್ಟ್ ಬಾಬತು ಸರ್ 1869ನೇ ಇಸವಿ.

ತು ಸರ್ ಮಜಕೂರು ನವೆಂಬರ್ ತಾರೀಖು 30ರಲ್ಲು ಜಲಾಯಿಸುವದರಿಂದ ಆ ಕಟ್ಟುಗಳಲ್ಲಿರತಕ್ಕ ದಸ್ತ್ರವಜು ವಗೈರೆಗಳನ್ನು ವಾಪಸುಪಡದು ಕೊಳ್ಳಲಾಪೇಕ್ಷೆಯುಳ್ಳ ಕಕ್ಷಿಗಾರವಗೈರೆ ಜನರು ಸದರೀ ವಾಯಿದೆವಳಗಾಗಿ ಈ ಕೋರ್ಟಿಗೆ ಹಾಜರಾಗಿ ತೆಗದುಕೊಳ್ಳಬಹುದು. ಹಾಗೆ ಹಾಜರಾಗಿ ತೆಗದುಕೊಳ್ಳದೆ ಹೋದರೆ ಸದರೀ ವಾಯಿದೆ ಗುಜರಾದವಡನೆ ಜಲಾಯಿಸಲ್ಪಡುತ್ತೆ.

ತಾರೀಖು 9ನೇ ಆಗಸ್ಟ್ ಸರ್ 1876ನೇ ಇಸವಿ ಚಿಕ್ಕಮಗಳೂರು.

B. SRINIVASAIENGAR,
Judl. Asstt. Commr.

ಸರ್ 1876ನೇ ಇಸವಿ ಜುಲೈ ತಿಂಗಳ ಕಾಲಸ್ಥಿತೀ ರಿಪೋರ್ಟ್.

ಹಾಸನ ಡಿಸ್ಟ್ರಿಕ್ಟು.

ಹವಾ.—ಹವಾ ಮೇಘಾವೃತವಾಗಿಯೇ ಯಿತ್ತು ಡಿಸ್ಟ್ರಿಕ್ಟಾವುಳ್ಳೆ ಹೆಚ್ಚು ಕಡಮೆಯಾಗಿ ಮಳೆ ಆಯಿತು ಡಿಸ್ಟ್ರಿಕ್ಟಿನ ವ ಕೆಲವು ತಾಲ್ಲೂಕುಗಳ ಹೆಡ್‌ಕ್ವಾರ್ಟರಗಳಲ್ಲಿ ಬಿದ್ದ ಮಳೆಯ ತಪಶೀಲ್ ಈ ಕೆಳಗೆ ಕಂಡ ಪಟ್ಟಿಯಲ್ಲಿ ಕಾಣಿಸಲ್ಪಡುತ್ತೆ.

		1876. ಜುಲೈ	1875. ಜುಲೈ	1874 ಜುಲೈ.
ಹಾಸನ.	ಇಂಜೆನಿಯರ್ ಗೇಜ್ ಪ್ರಕಾರ	5 41	5 27	7
	ಪಾರ್ಕರ್ಸ ಡಿಟೋ.	5 55	5 40	7 $20\frac{1}{2}$
	ಡಿಸ್ಪೆನ್ಸೇರಿಯಲ್ಲಿಅಬ್ ಜರ್‌ವೇಟಿರಿ	6 13	5 55	8 58
	ತಾಲ್ಲೂಕು ಕಚ್ಚೇರಿಯಲ್ಲಿ ..	5 31	ನಂಬತಕ್ಕದ್ದಲ್ಲವು.	
ಮಂಜರಾಬಾದ (ಸಕಲೇಶಪುರ)		29 34	26 10	28 60
ಅರಕಲ್‌ಗೂಡ್	..	5 66	6 $22\frac{1}{2}$	9 60
ಅತ್ತಿಗುಪ್ಪೆ	..	2 5	„ 75	2 40
ಬೇಲೂರು	..	8 80	2 90	6 44
ಚನ್ನರಾಯಪಟ್ಟಣ	..	1 5	„ 75	2 40
ನಾಗಮಂಗಲ	..	„ 50	„ „	2 58
ಹಾರನಹಳ್ಳಿ	..	6 14	„ 43	2 52
ನರಸೀಪುರ	..	3 53	3 $67\frac{1}{2}$	4 5

ಕೆರೆಗಳು.—ಕೆರೆಗಳಿಗೆ ಬಹಳ ಸ್ವಲ್ಪವಾಗಿ ಅಂದರೆ ದೊಡ್ಡಕೆರೆಗಳಲ್ಲಿ ಯೆಂಟುದಿನಗಳ ಮೊದಲು ಒಂದು ತಿಂಗಳಿಗೆ ಆಗುವಷ್ಟು ನೀರೂ ಸಣ್ಣ ಕೆರೆಗಳಲ್ಲಿ ಯೆಂಟು ದಿನಗಳ ಮೊದಲು ಯೆರಡುತಿಂಗಳವರಿಗೆ ಆಗುವಷ್ಟುನೀರೂ ಬಂದಿರುತ್ತೆ. ಕಳೆದ ಯೆರಡು ವರುಷಗಳ ಇದೇ ತಿಂಗಳಲ್ಲಿ, ಮುಖ್ಯವಾಗಿ 1874ನೇ ಇಸವಿಯಲ್ಲಿ ಯಿದು ಅನ್ಯಥಾ ಯಿತ್ತು.

ತಾಲ್ಲೂಕುಗಳ ಹೆಸರು.	ದೊಡ್ಡ ಕೆರೆಗಳು.				ಸಣ್ಣ ಕೆರೆಗಳು.			
	ನಂಬರು.	1876ನೇ ಜುಲೈ	1875ನೇ ಜುಲೈ	1874ನೇ ಜುಲೈ	ನಂಬರು.	1876ನೇ ಜುಲೈ	1875ನೇ ಜುಲೈ	1874ನೇ ಜುಲೈ.
ಹಾಸನ	84	15 ದಿನ	3 ತಿಂ||	5 ತಿಂ||	$406\frac{1}{2}$	1 ತಿಂ||	4 ತಿಂ||	3 ತಿಂ||
ಮಂಜರಾಬಾದ	3	1 ತಿಂ||	4 „	8 „	352	2 „ „	3 „	8 „
ಅರಕಲಗೂಡು	61	8 ದಿನ	6 „	6 „	620	15 ದಿನ	3 „	6 „
ಅತ್ತಿಗುಪ್ಪಾ	50	8 „	6 „	6 „	63	15 „	3 „	3 „
ಬೇಲೂರು	26	1 ತಿಂ||	3 „	6 „	461	2 ತಿಂ||	2 „	4 „
ಚನ್ನರಾಯಪಟ್ಟು	40	8 ದಿನ	2 „	6 „	185	8 ದಿನ	2 „	6 „
ನಾಗಮಂಗಲ	22	8 „	2 „	6 „	53	15 „	2 „	3 „
ಹಾರನಹಳ್ಳಿ	$15\frac{1}{2}$	8 „	2 „	6 „	73	8 „ „	2 „	3 „
ನರಸೀಪುರ	5	15 „	3 „	6 „	$93\frac{1}{2}$	15 „	2 „	5 „

ಜಮೀನುಗಳು,—ಅತ್ತಿಗುಪ್ಪೆ ವಿನಾ ಡಿಸ್ಟ್ರಿಕ್ಟಿನ ಮಿಕ್ಕ ದರೋಬಸ್ತು ತಾಲ್ಲೂಕುಗಳಲ್ಲಿಯೂ, ಸಾಗುವಳೀಬಗ್ಗೆ ಜಮೀನುಗಳು ತೆಗದುಕೊಳ್ಳಲ್ಪಟ್ಟವು ಅವುಗಳ ಬಾಬತು ಕುಲ್ ಕಂದಾಯವು 772ರೂ. 8ಆ 7ಪೈಗಳಾಗುತವೆ ಇವುಗಳತಪಶೀಲ್.

	ರೂ.	ಆ.	ಪೈ.		ರೂ.	ಆ.	ಪೈ.
ಹಾಸನ	287	13	6	ನಾಮಂಗಲ	143	4	8
ಮಂಜರಾಬಾದ್	78	13	10	ಹಾರನಹಳ್ಳಿ	86	8	6
ಅರಕಲ್‌ಗೂಡು	27	3	5	ನರಸೀಪುರ	2	12	8
ಬೇಲೂರು	80	0	0				
ಚೆನ್ನರಾಯಪಟ್ಣ	65	0	0	ಕುಲ	772	8	7

1875 ಮತ್ತು 74 ಈ ಇಸವೀಗಳ ಇದೇತಿಂಗಳಲ್ಲಿ 1432-1-1 ಮತ್ತು 20—20—15—5 ಈ ಮೇರೆ ಕಂದಾಯವುಳ್ಳ ಜಮೀನುಗಳು ತೆಗದುಕೊಳ್ಳಲ್ಪಟ್ಟವು. ರಾಜೀನಾಮೆಯಾವದೂ ಬಂದಿರುವದಿಲ್ಲ.

ಫಸಲ್,—ನಾಗಮಂಗಲ ವಿನಾ ಮಿಕ್ಕ ತಾಲ್ಲೂಕುಗಳಲ್ಲೆಲ್ಲ ಎಲ್ಲ ಫಸಲ್‌ಗಳೂ ಚನ್ನಾಗಿರುವಂತೆ ತಿಳಿಯಬರುತ್ತೆ ನಾಗಮಂಗಲದಲ್ಲಿ ಮಳೆಸಾಲದೆ ಫಸಲ್ ಕೆಟ್ಟಿದೆ, ಜೋಳ, ಹಾರಕ, ಗಸ್ನಾ ಸಹ ಸದರೀ ತಿಂಗಳಲ್ಲಿ ಅತ್ತಿಗುಪ್ಪೆತಾಲ್ಲೂಕು ಪೈಕಿ ಕೆಲವು ಪ್ರದೇಶಗಳಲ್ಲಿ ಕಟಾವಾಯಿತು.

ಧಾರಣೆವಾಸಿ,—ಆಲೂರು ಸಂತೆಯಲ್ಲಿ ಅಕ್ಕೀ ಧಾರಣೆ ಒಂದೇಬಗೆಯಾಗಿದೆ ಆದರೆ ರಾಗಿ ಖರೀದಿ ರೂಪಾಯಿಗೆ 20 ಲಾ $17\frac{3}{4}$ ಸೇರುವರೆಗೂ, ಹುರುಳಿ 13ರ ಮೊದಲು $11\frac{1}{4}$ ಸೇರುವರೆಗೂ ಇದೆ. ಕಳೆದ ತಿಂಗಳಲ್ಲಿ ಜಿನಿಸೀಧಾರಣೆ ಈ ಕೆಳಗೆ ತಿಳಿಸಲ್ಪಡುತ್ತೆ ಹ್ಯಾಗಂದರೆ,

	1876		1875	1874		1876		1875	1874
ಜಿನಸೀ	ಜುಲೈ	ಜೂನ್	ಜುಲೈ	ಜುಲೈ	ಜಿನಸೀ	ಜುಲೈ	ಜೂನ್	ಜುಲೈ	ಜುಲೈ
ಅಕ್ಕಿ ಅವ್ವಲ್‌ತರಹ	10	10	$14\frac{1}{2}$	$14\frac{1}{2}$	ರಾಗಿ	$17\frac{3}{4}$	20	44	$37\frac{1}{2}$
" ದುಯ್ಯಂತರ	$11\frac{1}{2}$	$11\frac{1}{2}$	16	$16\frac{3}{4}$	ಹುರಳಿ	$11\frac{1}{4}$	13	23	20

ಆರೋಗ್ಯ.—ಸದರೀ ತಿಂಗಳಲ್ಲಿ ಜನಾರೋಗ್ಯವು ಡಿಸ್ಟ್ರಿಕ್ಟು ಮುಳೆ ಪ್ರಾಯಶಃ ಚನ್ನಾಗಿಯೇ ಇತ್ತು. ಮೈಜುಲಾಬ್ ಬಹಳ ಮಟ್ಟಿಗೆ ತಗ್ಗಿತು. ಎಲ್ಲಾ ಕಾರಣಗಳಿಂದಲೂ 520 ಮಂದಿ ಹೋದರು. 1875, 74 ಈ ಇಸವಿಗಳಲ್ಲಿ 571 ಮತ್ತು 553 ಈ ಮೇರೆ ಹೋಗಿರುತವೆ. ಜೂನ್ ತಿಂಗಳಲ್ಲಿಮಾತ್ರ 1051 ಮಂದಿ ಹೋಗಿರುತ್ತಾರೆ ಸದರೀ ತಪಸೀಲ್ ಹ್ಯಾಗಂದರೆ.

	1876ನೇ ಜೂಲೈ	1875ನೇ ಜೂಲೈ	1874ನೇ ಜೂಲೈ		1876ನೇ ಜೂಲೈ	1875ನೇ ಜೂಲೈ	1874ನೇ ಜೂಲೈ
ಉಬಾಲ್‌ಜುಲಾಬ್‌ನಿಂದ	168	0	0	ಹೊಟ್ಟೆಸುಗ್ಗಿನಿಂದ	52	62	95
ಸಿಡುಬುಉಪದ್ರವದಿಂದ	3	6	21	ಮಿಕ್ಕ ಯೆಲ್ಲ ರೋಗಗಳಿಂದ	79	131	145
ಜ್ವರ	218	372	292	ಕುಲ್	520	571	553

ಜನನ,—ಸದರೀ ತಿಂಗಳಲ್ಲಿ 283 ಜನನಗಳಾದಂತೆ ರಿಜಿಸ್ಟರ್ ಆಗಿರುತವೆ, ಆ ಹಿಂದಿನತಿಂಗಳಲ್ಲಿ 251 ಜನನಗಳಾದವು

ದನಗಳು,—ದನಗಳಿಗೆ ರೋಗೋಪದ್ರವ ಇಲ್ಲದೆ ಇದ್ದಾಗ್ಯೂ ಹೊಟ್ಟೆಗೆ ಇಲ್ಲದೆ ಬಹಳವಾಗಿ ಸತ್ತವು, 9653 ಕಾಲ್ನಡೆ ಹೋದವು.

ಇದರ ತಪಶೀಲು.

ಹಾಸನ ತಾಲ್ಲೂಕು ..	749	ಚೆನ್ನರಾಯಪಟ್ಣ, ತಾಲ್ಲೂಕು ..	476
ಮಂಜರಾಬಾದ್ ..	524	ನಾಗಮಂಗಲ ..	477
ಅರಕಲ್‌ಗೂಡ್ ..	813	ಹಾರನಹಳ್ಳಿ ..	2117
ಅತ್ತಿಗುಪ್ಪಾ ..	1743	ನರಸೀಪುರ ..	754
ಬೇಲೂರು ..	1800	ಕುಲ್	9653

ಕಾಡು ಮೃಗಗಳಿಗೆರೆಯಾದ್ದು 16, ಜುಮ್ಲಾ 9669.

ಹಿಂದಿನ ತಿಂಗಳಲ್ಲಿ 3493, ಕಳೆದ ಇಸವಿ ಜೂಲೈಯಲ್ಲಿ 3557 ಈ ಮೇರೆ ಹೋದವು.

A. SRINIVASAIENGAR,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟ.

ಮಳೆ,—ಚನ್ನಗಿರಿ, ಹೊನ್ನಾಳ್ಳಿ ಈ ತಾಲ್ಲೂಕುಗಳು ಶಿವಾಯಿ ಮಿಕ್ಕ ದರೋಬಸ್ತು ತಾಲ್ಲೂಕುಗಳೊಳಗೂ ವಳ್ಳೆಯ ಮಳೆ ಯಾಗಿರುತ್ತೆ.

ಫಸಲ್,—ಬೆಳೆಯಲ್ಲಿರುವ ದರೋಬಸ್ತು ಫಸಲಗಳೂ ಚನ್ನಾಗಿರುವದಾಗಿ ತಿಳಿಯಬರುತ್ತೆ. ಆದರೆ, ಅಡಿಕೇಫಸಲಿಗೆ ಮಾತ್ರ ಕೊಳೇರೋಗ ತಗಲಿಯಿದೆ.

ಜನಾರೋಗ್ಯ,—ನಗರ, ಕವಲೇದುರ್ಗ, ಸಾಗರ ಈ ತಾಲ್ಲೂಕುಗಳು ಹೊರತಾಗಿ ಮಿಕ್ಕ ತಾಲ್ಲೂಕುಗಳೊಳಗೆಲ್ಲ ಉಬಾಲ್ ಜುಲಾಬ್ ವ್ಯಾಪಿಸಿ ಯಿತ್ತು. ಸದರೀ ತಿಂಗಳಲ್ಲಿ ಕುಲ್ 836 ಮಂದಿ ಹೋದರು. ಈ ಪೈಕಿ 425 ಮಂದಿ ಉಬಾಲ್ ಜುಲಾಬ್‌ನಿಂದ ಹೋಗಿರುತ್ತಾರೆ. ಇದು ಗತಮಾಸ ಸಂಖ್ಯೆಗಿಂತ 363 ಕಡಮೆಯಾಗಿರುತ್ತೆ. 444 ಜನನಗಳು ರಿಜಿಸ್ಟರ್ ಆದವು.

ದನಗಳು,—ದನಗಳಲ್ಲಿ 7125 ಕಾಲ್ನಡೆ ಹೋದವು. ಈ ಪೈಕೀ ಹೆಚ್ಚು ಸಂಖ್ಯೆಯುಳ್ಳ ದನಗಳು ಮೇವಿಲ್ಲದೆ ಸತ್ತಿರುತ್ತವೆ.

ದಾರಣೆವಾಸಿ,—ಚಡಾವಿನಲ್ಲಿದೆ.

C. S. Blair,
Offg. Dy. Commr.

ಮದರಾಸ್ ರೈಲ್ವೇ.

ರಿವಾಜುಗಳು ಕಮ್ಮೀ ಮಾಡೋಣ.

ತಾರೀಖು 5ನೇ ಆಗಸ್ಟ 1876.

ಇದರಿಂದ ತಿಳಿಯಪಡಿಸುವದೇನಂದರೆ—ಮಾಹೇ ಮಜಕೂರು 14ನೇ ತಾರೀಖು ಸೋಮವಾರದ ಲಾಗಾಯತು ವ ಆತರು ವಾಯ ಯಿದರಡಿ ಬರುವ ಕಮ್ಮೀದರಗಳು ಜಾರೀಯಲ್ಲಿ ಬರುವವು.

1. ಯಿದರಡಿ ಬರುವ ಜಿನಿಸೀಗಳಿಗೆ ವರ್ಜ ವ ಫಾಸಲೆ ನಿಮಿತ್ಯವಿಲ್ಲದೆ ಮಿನಿಮಂ ಚಾರ್ಜ 1 ರೂಪಾಯಿಗೆ ಪೇಳಪಟ್ಟು ಮೈಲೀ ವೊಂದಕ್ಕೆ ಟನ ವೊಂದಕ್ಕೆ 8 ಕಾಸುಗಳ ಮೇರೆ ಚಾರ್ಜು ಹಾಕಲ್ಪಡುವದು.

ನಾನಾವಿಧವಾದ ಧಾನ್ಯ.	ಹಿಂಡಿ	ಕಬ್ಬಿಣತುಂಡುಗಳು
ಕಳ್ಳೇಕಾಯಿ	ಈರುಳ್ಳಿ	ಕಲ್ಲು
ಬೆಲ್ಲಾ	ಉರಳಗಡ್ಡೆ	ಮೊಗದುಂ ಸಕ್ಕರೆ
ಕಾಕಂಬಿ (ಪೀಪಾಯಿಗಳಲ್ಲಿ)	ನಾನಾಜಾತೀ ಬೀಜಗಳು	ಹುಳಿಹಣ್ಣು (ಬೇತಯಾರ ಬಾಬತು)
ಮೈರಾಬೊಲಾಸ್ಸ ಯಂಬ ಹಂಣುಗಳು	ಸೀಗೇಕಾಯಿ	ಅರಸಿನ (ಸಾಧಾರಣವಾದ್ದು)
ನಕ್ಸವಾಮಿಕಾ (ತಯಾರಾದ್ದು) ಅಥವಾ ಯಟ್ಟೀಕೊಟ್ಟೆ	ಚೌಳುಮಣ್ಣು	ಗೋಧಿ

2. ಜವಳೀಗಳಿಗೆ ಮತ್ತು ನೂಲುಗಳಿಗೆ (ಯುರೋಪ್ ಕಟ್ಟುಗಳ) ಮೈಲ್ 1ಕ್ಕೆ ಟನ 1ಕ್ಕೆ 18 ಕಾಸುಗಳಿಗೆ ಬದಲಾಗಿ 14 ಕಾಸುಗಳ ಮೇರೆ ಚಾರ್ಜ ಹಾಕಲ್ಪಡುತ್ತೆ, ಮತ್ತು ಜವಳೀಗಳಿಗೆ ವ ನೂಲುಗಳಿಗೆ (ವಳಾಗ್ರ ಕಟ್ಟುಗಳು) ಮೈಲ್ ವೊಂದಕ್ಕೆ ಟನ ವೊಂದಕ್ಕೆ 24 ಕಾಸುಗಳಿಗೆ ಬದಲಾಗಿ 18 ಕಾಸುಗಳ ಮೇರೆ ಚಾರ್ಜ ಹಾಕಲ್ಪಡುತ್ತೆ.

R. B. Elwin,
Agent & Manager.

Mysore Government Press, Bangalore—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 26, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3 ನೇ ಭಾಗ.

ಸರ್ 1871ನೇ ಯಿಸವೀ ಇಂಡ್ಯರ್ ರಿಜಿಸ್ಟ್ರೇಷರ್ ಆಕ್ಟನ್ನು ತಿದ್ದುಪಡಿ ಮಾಡಲಿಕ್ಕೆ ಹುಟ್ಟಿದ ಬಿಲ್.

ಪೀಠಿಕೆ.

1871ನೇ ಯಿಸವಿಯ ಇಂಡ್ಯರ್ ರಿಜಿಸ್ಟ್ರೇಷರ್ ಆಕ್ಟನ್ನು ತಿದ್ದುಪಡಿ ಮಾಡಲಿಕ್ಕೋಸ್ಕರ ಇದರಿಂದ ನಿರ್ಣಯಿಸಲ್ಪಡುವದೇನಂದರೆ.

1871ನೇ ಇಸವಿಯ 8ನೇ ಆಕ್ಟ, 7ನೇ ಸೆಕ್ಷರ್ ತಿದ್ದುಪಡಿ.

1· 7ನೇ ಸೆಕ್ಷನಿಗೆ ಬದಲಾಗಿ ಯಿದರಡಿ ಬರುವ ಸೆಕ್ಷರ್ ಯೇರ್ಪಡತಕ್ಕದ್ದು.

ರಿಜಿಸ್ಟ್ರಾರ್ ವ ಸಬ್ ರಿಜಿಸ್ಟ್ರಾರವರ ಆಫೀಸ್‌ಗಳು.

"7.—ಲೋಕಲ್ ಗವರ್ರ್ಮೆಂಟಿನವರು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ರಿಜಿಸ್ಟ್ರಾರ್ ಆಫೀಸ್ ಯಂಬ ಹೆಸರುಳ್ಳ ಆಫೀಸನ್ನೂ ಪ್ರತಿ ಸಬ್ ಡಿಸ್ಟ್ರಿಕ್ಟಿನಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸ್ ಯಾ ಜಾಯಿಂಟ್ ಸಬ್ ರಿಜಿಸ್ಟ್ರಾರ್‌ಗಳ ಆಫಿಸ್‌ಗಳು ಯಂಬ ಆಫೀಸ್ ಯಾ ಆಫಿಸ್‌ಗಳನ್ನೂ ಯೇರ್ಪಡಿಸತಕ್ಕದ್ದು.

ಮತ್ತು ವೊಬ್ಬ ರಿಜಿಸ್ಟ್ರಾರ್‌ಯವರ ಯಾವ ಆಫಿಸಿಗಾಗಲಿ ವೊಬ್ಬ ಸಬ್ ರಿಜಿಸ್ಟ್ರಾರ್ ಯವರ ಯಾವ ಆಫೀಸನ್ನಾದರೂ ಸೇರಿಸಬಹುದು.

ಮತ್ತು ಯಾರ ಆಫೀಸ್ ಹಾಂಗೆ ಸೇರಿಸಲ್ಪಟ್ಟಿರುತ್ತೋ ಅಂತಾ ಯಾವ ಸಬ್ ರಿಜಿಸ್ಟ್ರಾರಾಗಲಿ 68 ವ 72ನೇ ಸೆಕ್ಷರ್‌ಗಳಿಂದ ಕೊಡಲ್ಪಟ್ಟ ಅಧಿಕಾರಗಳು ವಿನಾ ರಿಜಿಸ್ಟ್ರಾರ್‌ಯವರ ವಿಶಿಷ್ಟ ಅಧಿಕಾರಗಳನ್ನಾಗಲಿ ಕೆಲಸಗಳನ್ನಾಗಲಿ ಆಪೈಕೀ ಯಷ್ಟರಮಟ್ಟಿಗಾಗಲಿ ಚಲಾಯಿಸಲಿಕ್ಕೂ ನೆರವೇರಿಸಲಿಕ್ಕೂ ಅಧಿಕಾರ ಕೊಡಬಹುದು.

17ನೇ ಸೆಕ್ಷನ್ನಿನ (D) ಕ್ಲಾಜ್ ಯಂಬ ಅಧಿಕಾಂಶ.

2·—17ನೇ ಸೆಕ್ಷನ್ನಲ್ಲಿ (C) ಕ್ಲಾಜ್ ತರುವಾಯ ಯಿದರಡಿ ಬರುವ ಕ್ಲಾಜ್ ಸೇರಿಸಲ್ಪಡತಕ್ಕದ್ದು, ಹ್ಯಾಗಂದರೆ.

"ಅಥವಾ (D) ಯಾವ ದಸ್ತಾವೇಜು ಬರೆದು ಕೊಡಲ್ಪಡುವ ಕಾಲದಲ್ಲಿ ವೊಂದು ಸ್ಥಿರಸ್ವತ್ತಿಗೆ ಯಾ ಸ್ವತ್ತಿನಲ್ಲಿ 100 ರುಪಾಯಿಗಳು ವ ಅದಕ್ಕೆ ಮೇಲ್ಪಟ್ಟ ಕಿಮ್ಮತ್ತಿನದಾಗಿರುವ ಹಕ್ಕುಬಾಧ್ಯತೆ ವ ಸಂಬಂಧ ಇವುಗ

ಳನ್ನು ಉಂಟುಮಾಡುತ್ತೋ, ತಿಳಿಸುತ್ತೋ, ಹವಾಲ್ತು ಮಾಡುತ್ತೋ, ಹದ್ದುಪಡಿಸುತ್ತೋ, ಯಾ ಹೋಗಲಾಡಿಸುತ್ತೋ, ಅಂತಾ ವೊಂದು ದಸ್ತಾವೇಜನ್ನು ಪಡೆಯಲಿಕ್ಕೆ ಹಕ್ಕನ್ನುಮಾತ್ರ ಉಂಟುಮಾಡುವ ಯಾವದಸ್ತಾವೇಜಿಗೆ"

18ನೇ ಸೆಕ್ಷನ 7ನೇ ಕ್ಲಾಜಿನ ತಿದ್ದುಪಾಡು.

3 — 18ನೇ ಸೆಕ್ಷನ್ನಲ್ಲಿ, (7) ನೇ ಕ್ಲಾಜಿಗೆ "ಅಂತಾ ದರೋಬಸ್ತು" ಯೆಂಬ ಮಾತುಗಳನ್ನು ಕೊನೆಗೆ ಶೇರಿಸತಕ್ಕದ್ದು; ಮತ್ತು ಆದೇ ಕ್ಲಾಜಿನ ಕಡೇ 7 ಮಾತುಗಳಿಗೆ ಬದಲಾಗಿ ಯಿದರಡಿ ಬರುವ ಮಾತುಗಳನ್ನು ದಾಖಲ್ಮಾಡತಕ್ಕದ್ದು" ಮತ್ತು ರಿಜಿಸ್ಟರ ಆಗಲಿಕ್ಕೆ 17ನೇ ಸೆಕ್ಷನ ಪ್ರಕಾರ ಆವಶ್ಯಕವಿಲ್ಲದ ಯಿತರ ದಸ್ತಾವೇಜುಗಳು".

30ನೇ ಸೆಕ್ಷನ (b) ಕ್ಲಾಜಿನ ಅಧಿಕಾಂಶ.

4.—30ನೇ ಸೆಕ್ಷನ (b) ಕ್ಲಾಜಿನಲ್ಲಿ "ಷಹರ" ಯೆಂಬ ಮಾತಿನ ತರುವಾಯ "ಮತ್ತು ಲಾಹೋರ ಡಿಸ್ಟ್ರಿಕ್ಟ ರಿಜಿಸ್ಟ್ರಾರ" ಯೆಂಬ ಮಾತುಗಳನ್ನು ಸೇರಿಸತಕ್ಕದ್ದು.

31ನೇ ಸೆಕ್ಷನ ತಿದ್ದುಪಾಡು.

5—31ನೇ ಸೆಕ್ಷನ್ನಿಗೆ ಬದಲಾಗಿ ಯಿದರಡಿ ಬರುವ ಸೆಕ್ಷನ ಯೇರ್ಪಡತಕ್ಕದ್ದು.

ಖಾಸಗೀ ವಾಸಸ್ಥಳದಲ್ಲಿ ದಸ್ತಾವೇಜುಗಳನ್ನು ಹಾಜರ್ಮಾಡೋಣ ವ ಠೇವಣೀ ಇಡೋಣ.

"31 ಸಾಧಾರಣಸಂಗತಿಗಳಲ್ಲಿ, ಈ ಆಕ್ಟ್ಟ ಅನುಸರಿಸಿ ದಸ್ತಾವೇಜುಗಳನ್ನು ರಿಜಿಸ್ಟರ ಬಗ್ಗೆ ಹಾಜರ್ಮಾಡೋಣ ಠೇವಣೀ ಯಿಡೋಣ ಯೆಪ್ಪು, ಸದರೀ ದಸ್ತಾವೇಜುಗಳನ್ನು ರಿಜಿಸ್ಟರ ಬಗ್ಗೆ ಯಾ ಠೇವಣೀ ಬಗ್ಗೆ ಅಂಗೀಕರಿಸಲಿಕ್ಕೆ ಅಧಿಕಾರ ಹೊಂದಿರುವ ಆಫಿಸರರ ಆಫಿಸ್ನಲ್ಲಿಯೇ ನಡಿಸಲ್ಪಡತಕ್ಕದ್ದು.

ಆದರೆ ಅಂತಾ ಆಫಸರರು ಮುಖ್ಯವಾದ ಸಬಬ ತೋರಿಸಿದಮೇಲೆ ರಿಜಿಸ್ಟರ ಬಗ್ಗೆ ವೊಂದು ದಸ್ತಾವೇಜನ್ನು ಹಾಜರಮಾಡಲಿಕ್ಕಾಗಲಿ ವೊಂದು ಉಯಿಲನ್ನು ಠೇವಣಿ ಯಿಡಲಿಕ್ಕಾಗಲಿ ಅಪೇಕ್ಷಿಸುವ ಯಾವ ಮನುಷ್ಯನ ಮನೆಗಾದರೂ ಹೋಗಬಹುದು ಮತ್ತು ಅಂತಾ ದಸ್ತಾವೇಜನ್ನು ಯಾ ಉಯಿಲನ್ನು ರಿಜಿಸ್ಟ್ರೇಷನ ಬಗ್ಗೆ ಯಾ ಠೇವಣೀ ಬಗ್ಗೆ ಅಂಗೀಕರಿಸಬಹುದು".

34ನೇಸೆಕ್ಷನ್ನಿನ ಅಧಿಕಾಂಶ.

6 —34ನೇ ಸೆಕ್ಷನ ಮೊದಲನೇ ಕಲಮಿಗೆ ಯಿದರಡಿ ಬರುವ ಮಾತುಗಳು ಸೇರಿಸಲ್ಪಡತಕ್ಕದ್ದು, ಯಾವದಂದರೆ "23, 24, 25, ವ 26ನೇ ಸೆಕ್ಷನಗಳ ಪ್ರಕಾರ" ಮತ್ತು ಅದೇ ಸೆಕ್ಷನ 2ನೇ ಕ್ಲಾಜಿನಲ್ಲಿ "ಸಾಧಾರಣ ರಿಜಿಸ್ಟ್ರೇಷನ ರುಸುಂ" ಯೆಂಬದರ ಮೇಲೆ "24ನೇ ಸೆಕ್ಷನ ಪ್ರಕಾರ ಕೊಡಬೇಕಾದ ಜುರ್ಮಾನೆ ಯೇನಾದರೂ ವಿಧಿಸಿ ಯಿದ್ದಲ್ಲಿ ಅದಕ್ಕೆ ಜಾಸ್ತೀಯಾಗಿ" ಯೆಂಬಮಾತುಗಳನ್ನು ಸೇರಿಸತಕ್ಕದ್ದು.

42ರ ಲಾಗಾಯತು 45ರ ವರಿಗಿನ ಸೆಕ್ಷನಗಳ ತಿದ್ದುಪಾಡು.

7.— 42, 43, 44, ವ 45 ಈ ಸೆಕ್ಷನಗಳಿಗೆ ಬದಲಾಗಿ ಯಿದರಡಿ ಬರುವ ಸೆಕ್ಷನಗಳು ಯೇರ್ಪಡತಕ್ಕದ್ದು.

ಮೊಹರಮಾಡಿದ ಲಿಪಾಫೆಯಲ್ಲಿ ಉಯಿಲಗಳನ್ನು ಠೇವಣೀ ಇಡೋಣ.

"42 ಉಯಿಲನ್ನು ಬರೆದಿಡುವವನು ಖುದ್ದಾಗಲಿ ಕ್ರಮಪ್ರಕಾರ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಲಿ ತನ್ನ ಉಯಿಲನ್ನು ವೊಂದು ಲಿಪಾಫೆಯಲ್ಲಿ ಹಾಕಿ ಮೊಹರ್ಮಾಡಿ ಯಾವ ರಿಜಿಸ್ಟ್ರಾರರವರ ಬಳಿಯಲ್ಲಾದರೂ ಠೇವಣೀ ಯಿಡಬಹುದು. ಹಾಗೆಇಡುವಲ್ಲಿ ಆ ಲಿಪಾಫೆಯ ಮೇಲೆ ಉಯಿಲು ಬರೆದಿಡುವವನ ಹೆಸರು ಮತ್ತು ಆತನ ಮುತಾಲೀಕ ಯಾರಾದರೂ ಯಿದ್ದಲ್ಲಿ ಆತನ ಹೆಸರು ಮತ್ತು ಅದರಲ್ಲಿರತಕ್ಕ ದಸ್ತಾವೇಜಿನ ಸ್ವಭಾವ ಯಿವುಗಳನ್ನು ಬರದಿಡತಕ್ಕದ್ದು.

" 43—ಅಂತಾ ಲಿಪಾಫೆಯು ತಲಪಿದ ಮೇಲೆ, ರಿಜಿಸ್ಟ್ರಾರವರು, ಆದನ್ನು ಠೇವಣೀ ಬಗ್ಯೆ ಹಾಜರ್ಮಾಡಿದ ಮನುಷ್ಯನು ಉಯಿಲನ್ನು ಬರದವನೆಂತಲಾಗಲೀ ಆತನ ಮುತಾಲೀಕ ನೆಂತಲಾಗಲಿ ತೃಪ್ತಿ ಪಟ್ಟಲ್ಲಿ ಅವರ 5ನೇ ನಂಬರ್ ರಿಜಿಸ್ಟರ್ ಪುಸ್ತುಕದಲ್ಲಿ ಸದರೀ ಮೊಹರ್ಮಾಡಿದ ಲಿಪಾಫೆಯ ಮೇಲೆ ಬರದಿರುವದನ್ನು ನೋಡಿ ಬರಕೊಳ್ಳತಕ್ಕದ್ದು, ಮತ್ತು ಸದರೀ ರಿಜಿಸ್ಟ್ರಾರವರು ಅದೇ ಪುಸ್ತುಕದಲ್ಲಿ ಮತ್ತು ಆ ಮೊಹರ್ಮಾಡಿದ ಲಿಪಾಫೆಯ ಮೇಲೆ ಅದನ್ನು ಹಾಜರ್ಮಾಡಿದ ಮತ್ತು ಬರಮಾಡಿಕೊಂಡ ಸಂವತ್ಸರ ತಿಂಗಳು, ದಿನ ವ ಹೊತ್ತು ಉಯಿಲು ಬರದಿಟ್ಟವನ ಯಾ ಅವನ ಮುತಾಲೀಕನ ಗುರ್ತುಹೇಳಲಿಕ್ಕೆ ಸಾಕ್ಷಿಕೊಡುವ ಮನುಷ್ಯರ ಹೆಸರುಗಳು ಮತ್ತು ಲಿಪಾಫೆಯ ಮೊಹರಿನ ಮೇಲೆ ಸ್ಪಷ್ಟವಾಗಿರುವ ಯಾವದಾದರೂ ಖಚಿತ, ಯಿವುಗಳನ್ನು ಸೂಚಿಸತಕ್ಕದ್ದು.

ಉಯಿಲಗಳ ಠೇಣೀ ಇಟ್ಟ ಮೇಲಿನ ಕ್ರಮ.

ತರುವಾಯ ರಿಜಿಸ್ಟ್ರಾರವರು ಆ ಲಿಪಾಫೆಯನ್ನು ಬೆಂಕಿಗೆ ಜಗ್ಗದ ತಮ್ಮ ಪೆಟ್ಟಿಗೆಯಲ್ಲಿಟ್ಟು ಭದ್ರಮಾಡತಕ್ಕದ್ದು.

"44.—ಅಂತಾ ಲಿಪಾಫೆಯನ್ನು ಠೇವಣೀ ಯಿಟ್ಟಂತಾ ಉಯಿಲ ಬರದವನು ಅದನ್ನು ವಾಪಸು ತೆಗದುಕೊಳ್ಳ ಲಿಕ್ಕೆ ಯಿಷ್ಟಪಟ್ಟರೆ ಅದನ್ನು ಠೇವಣಿಯಲ್ಲಿಟ್ಟು ಕೊಂಡಿರುವ ರಿಜಿಸ್ಟ್ರಾರವರಿಗೆಖುದ್ದಾಗಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಲಿ ಬರದುಕೊಳ್ಳಬಹುದು, ಮತ್ತು ಅಂತಾ ರಿಜಿಸ್ಟ್ರಾರವರು ಅರ್ಜೀದಾರ ವಾಸ್ತವವಾಗಿ ಉಯಿಲ್ ಬರದಿಟ್ಟವನು ಯಾ ಆತನ ಮುತಾಲೀಕನು ಯಂಬದಾಗಿ ತೃಪ್ತಿ ಪಟ್ಟಲ್ಲಿ ಅವನು ಆ ಲಿಪಾಫೆಯನ್ನು ಅದೇ ಪ್ರಕಾರ ಕೊಟ್ಟು ಬಿಡತಕ್ಕದ್ದು.

ಉಯಿಲುಗಳು ಅಡಗಿರತಕ್ಕ ಲಿಪಾಫೆಗಳನ್ನು ವಾಪಸು ತೆಗದುಕೊಳ್ಳೋಣ.

" 45—42ನೇ ಸೆಕ್ಷನ್ ಅನುಸರಿಸಿ ಮೊಹರ್ ಮಾಡಿದ ಲಿಪಾಫೆಯನ್ನು ಠೇವಣೀ ಯಿಟ್ಟ ಉಯಿಲ್‌ದಾರನು ಮೃತವಾದಮೇಲೆ ಆ ಲಿಪಾಫೆಯನ್ನ ಠೇವಣೀ ಯಿಟ್ಟುಕೊಂಡಿರುವ ರಿಜಿಸ್ಟ್ರಾರವರಿಗೆ ಅದನ್ನು ತೆರೆಯ ಬೇಕೆಂತ ಅರ್ಜಿಕೊಡೋಣಾದರೆ ಮತ್ತು ಆ ಉಯಿಲ್ ಬರದವನು ಮೃತವಾದ್ದಾಗಿ ರಿಜಿಸ್ಟ್ರಾರವರು ತೃಪ್ತಿ ಪಟ್ಟ ಪಕ್ಷದಲ್ಲಿ ಅವರು ಸದರೀ ಅರ್ಜಿದಾರನ ಸಮಕ್ಷಮದಲ್ಲಿ ಆಲಿಪಾಫೆಯನ್ನು ಒಡದು ಅದರ ಮತಲಬನ್ನು 3ನೇ ನಂಬರ್ ಪುಸ್ತುಕದಲ್ಲಿ ಅರ್ಜಿದಾರನ ಖರ್ಚಿನಿಂದ ನಕಲು ಬರಿಸತಕ್ಕದ್ದು."

ಉಯಿಲ್ ಬರದವನ ಮರಣಾನಂತರ ನಡಿಸತಕ್ಕ ಕ್ರಮ.

8.—46ನೇ ಸೆಕ್ಷನ್ನಲ್ಲಿ ಯೆರಡನೇ ವಾಕ್ಯಕ್ಕೆ ಬದಲಾಗಿ ಯಿದರಡಿ ಬರುವ ವಾಕ್ಯವು ಯೇರ್ಪಡತಕ್ಕದ್ದು. "ಆದರೆ ಅಂಥಾ ಹುಕ್ಕುಂ ಮಾಡಲ್ಪಟ್ಟಾಗ್ಯೆಲ್ಲಾ, ರಿಜಿಸ್ಟ್ರಾರವರು, 45ನೇ ಸೆಕ್ಷನ್ ಪ್ರಕಾರ ಆ ಉಯಿಲಿನ ನಕ್ಕಲ್ ಮಾಡಲ್ಪಡದೆ ಯಿದ್ದಲ್ಲಿ ಲಿಪಾಫೆಯನ್ನು ಒಡೆದು ಅವರ 3ನೇ ನಂಬರ್ ಪುಸ್ತುಕದಲ್ಲಿ ಸದರೀ ಉಯಿಲ್ ನಕಲು ಬರಕೋತಕ್ಕದ್ದು. ಮತ್ತು ಅಂತಾ ಪುಸ್ತುಕದಲ್ಲಿ ಮೇಲ್ಕಂಡ ಹುಕ್ಕುಮಿನ ಅನುಗುಣವಾಗಿ ಕೋರ್ಟಿಗೆ ಸದರೀ ಅಸಲ್ ಪ್ರತಿಯು ಕಳುಹಿಸಲ್ಪಟ್ಟಿರುತ್ತೆಂದು ಒಂದು ಷರಾ ಮಾಡತಕ್ಕದ್ದು."

46ನೇ ಸೆಕ್ಷನ್ ತಿದ್ದುಪಾಡು.

9.—50ನೇ ಸೆಕ್ಷನ್ನಿನ ಮೊದಲಿಗೆ ಯಿದರಡಿ ಬರುವ ಮಾತುಗಳನ್ನು ಸೇರಿಸತಕ್ಕದ್ದು. "17ನೇ ಸೆಕ್ಷನ್ (1) (2) (3) ವ (4)ನೇ ಕ್ಲಾಜಿಗಳಲ್ಲಿ ನಮೂದಿಸಲ್ಪಟ್ಟ ಪ್ರತಿ ದಸ್ತಾವೇಜು ಮತ್ತು".

50ನೇ ಸೆಕ್ಷನ್ನಿನ ಅಧಿಕಾಂಶ.

10.—59ನೇ ಸೆಕ್ಷನ್ನಲ್ಲಿ "ಇದಕ್ಕೆ ಮೇಲೆ ಅವ್ಯವ ಹಿತವಾಗಿರುವ ಪ್ರಕರಣದ" ಯಂಬ ಮಾತುಗಳಿಗೆ ಬದಲಾಗಿ "52 ವ 58ನೇ ಸೆಕ್ಷನ್‌ಗಳು" ಯಂಬ ಮಾತುಗಳನ್ನು ದಾಖಲ್ಮಾಡತಕ್ಕದ್ದು.

59ನೇ ಸೆಕ್ಷನ್ ತಿದ್ದುಪಾಡು.

11—64, ನೇ ಸೆಕ್ಷನ್ನಲ್ಲಿ ಮತ್ತು 65ನೇ ಸೆಕ್ಷರ್ನ ವೊದಲನೇ ಕಲಂನಲ್ಲಿ "ದಸ್ತಾವೇಜು" ಯಂಬ ಮಾತಿನ ತರುವಾಯ "ಮರಣ ಶಾಸನವಲ್ಲದ" ಯಂಬ ಮಾತುಗಳನ್ನು ಸೇರಿಸತಕ್ಕದ್ದು.

64 ವ 65ನೇ ಸೆಕ್ಷರ್ನಗಳ ಅಧಿಕಾಂಶ.

12.—71ನೇ ಸೆಕ್ಷನ್ನಿನ ಯರಡನೇ ಕ್ಲಾಜಿಗೆ ಬದಲಾಗಿ ಯಿದಡಿ ಬರುವ ಅಂಶವು ಯೇರ್ಪಡತಕ್ಕದ್ದು.

71ನೇ ಸೆಕ್ಷರ್ನ 2ನೇ ಕ್ಲಾಜಿನ ತಿದ್ದುಪಾಡು.

(a) " ಆದುಯಾವ ಸ್ವತ್ತಿಗೆ ಸಂಬಂಧಿಸುತ್ತೋ ಆ ಸ್ವತ್ತು ತನ್ನ ಡಿಸ್ಟ್ರಿಕ್ಟಿನಲ್ಲಿ ಯಾ ಸಬಡಿಸ್ಟ್ರಿಕ್ಟಿನಲ್ಲಿ ಯಿರುವದಿಲ್ಲ, ಅಥವಾ

(b) ತಾನು ರಿಜಿಸ್ಟ್ರಾರ್, ಮತ್ತು ಆ ದಸ್ತಾವೇಜು ವೊಪ್ಪ ಸಬ ರಿಜಿಸ್ಟ್ರಾರವರ ಆಫೀಸ್‌ನಲ್ಲಿ ರಿಜಿಸ್ಟರ್ಮಾಡಲ್ಪಡತಕ್ಕದ್ದಾಗಿರುತ್ತೆ ಯಂಬ ಸಬಬಿನ ಮೇಲೆ ವಿನಾ.

13.—73ನೇ ಸೆಕ್ಷನ್ನಿಗೆ ಯಿದಂಡಿ ಬರುವ ವಿವರಣೆಯು ಸೇರಿಸಲ್ಪಡತಕ್ಕದ್ದು.

73ನೇ ಸೆಕ್ಷನ್ನಿನ ಅಧಿಕಾಂಶ.

" ವಿವರಣೆ—ಈ ಸೆಕ್ಷರ್ನನಲ್ಲಿ "ಡಿಸ್ಟ್ರಿಕ್ಟು ಕೋರ್ಟು" ಅಂದರೆ ಯಾವ ಕೋರ್ಟಿನ ಸ್ಥಳ ಸರಹದ್ದಿನೊಳಗೆ ರಿಜಿಸ್ಟರ್ ಬಗ್ಯೆ ತಿರಸ್ಕರಿಸಿ ಹುಕುಂ ಕೊಟ್ಟ ಆಫಿಸ ಯಿರುತ್ತೋ ಅಂತಾ ಆರಿಜನಲ್ ಅಧಿಕಾರವುಳ್ಳ ಮುಖ್ಯವಾದ ಸಿವಿಲ್ ಕೋರ್ಟು".

14 ಈ ಆಕ್ಟಿನಲ್ಲಿ ಸೆಕ್ಷರ್ನ ಅಂದರೆ 1871ನೇ ಯಿಸವಿಯ ಐರ್ನ ಇಂಡ್ಯರ್ನ ರಿಜಿಸ್ಟ್ರೇಷರ್ನ ಆಕ್ಟಿನ ಸೆಕ್ಷರ್ನ ಯಂಬದು.

"ಸೆಕ್ಷರ್ನ, ಅರ್ಥ ವಿವರಣೆ.

ಉದ್ದೇಶ ಕಾರಣಗಳ ವಿವರಣೆ.

ರಿಜಿಸ್ಟ್ರೇಷರ್ನ ಆಕ್ಟಿನಲ್ಲಿ ಹದಿಮೂರು ತಿದ್ದುಪಾಟುಗಳನ್ನು ಮಾಡುವಣವೇ ಈ ಬಿಲ್ಲಿನ ಉದ್ದೇಶವಾಗಿರುತ್ತದೆ, ಕಳೆದ ಅಯಿದುವರುಷಗಳ ಅನುಭವದದೆಸೆಯಿಂದ ಸದರೀ ತಿದ್ದುಪಡಿಗಳು ಆವಶ್ಯಕಗಳಾಗಿ ಕಾಣಬಂದಿರುತ್ತವೆ.

ಈ ಪೈಕಿ ವೊದಲನೇದು, ಪ್ರತಿ ಸಬ ಡಿಸ್ಟ್ರಿಕ್ಟಿನಲ್ಲಿಯೂ, ಒಬ್ಬರಿಗಿಂತ ಹೆಚ್ಚುಮಂದಿ ಸಬ ರಿಜಿಸ್ಟ್ರಾರ್‌ಗಳನ್ನು ಇಡುವಬಗ್ಯೆ ಲೋಕಲ್ ಗವರ್ನಮೆಂಟಿನವರನ್ನು ನಿಯಮಿಸುವದಕ್ಕೋಸ್ಕರ ಉದ್ದೇಶಿಸಲ್ಪಟ್ಟಿರುತ್ತೆ. ಸದರೀಸಬ ರಿಜಿಸ್ಟ್ರಾರ್‌ಗಳು, ಸಮಾನಾಧಿಕಾರವನ್ನು ನಡಿಸತಕ್ಕದ್ದು. ಇಂತಾ ಅಧಿಕಾರವಿಲ್ಲದೆ ಯಿರುವದು ಲೋವರ್ ಪ್ರಾವಿನ್ಸಗಳಲ್ಲಿಯೂ ಪ್ರಾಯಶಃ ಅನ್ಯತ್ರಲೂ ಬಹಳ ಅನಾನುಕೂಲವಾಗಿರುವಂತೆ ಕಾಣಬಂದಿರುತ್ತೆ; ಆಕ್ಟಿನ 68 ವ 72 ಈ ಸೆಕ್ಷರ್ನಗಳಿಂದ ಕೊಡಲ್ಪಟ್ಟ ಅಧಿಕಾರಗಳು ವಿನಾ, ರಿಜಿಸ್ಟ್ರಾರರ ದರೋಬಸ್ತು ಅಧಿಕಾರಗಳನ್ನೂ ನಡಿಸಲಿಕ್ಕೆ ರಿಜಿಸ್ಟ್ರಾರರ ಆಫಿಸನೊಡನೆ ಯಾರ ಆಫಿಸ ಸೇರಿಸಲ್ಪಟ್ಟಿರುತ್ತೋ ಅಂತಾ ಯಾವ ಸಬ ರಿಜಿಸ್ಟ್ರಾರನ್ನಾಗಲಿ ನಿಯಮಿಸಲಿಕ್ಕೆ ಸಹ ಅಧಿಕಾರವು ಕಂಠೋಕ್ತವಾಗಿ ಕೊಡಲ್ಪಟ್ಟಿರುತ್ತೆ. ಅಂತಾ ಅಧಿಕಾರವು ಅರ್ಥತಃ ಕೊಟ್ಟ ಹಾಗಾಗುತದೋ ಯಿಲ್ಲವೋ ಯಂಬ ಅಂಶ ಕೆಲವು ಮಟ್ಟಿಗೆ ಸಂದಿಗ್ಧವಾಗಿತ್ತು.

ಎರಡನೇದು, ಆಕ್ಟಿನ ಹದಿನೇಳನೇ ಸೆಕ್ಷನ್ನಲ್ಲಿ 1874ನೇ ಜುಲೈ 10ನೇ ಮರ್ಕುಂ 51—1906ನೇ ನಂಬರ್ ಉಳ್ಳ, ಹೋಂಡಿಪಾರ್ಟು ಮೆಂಟಿನಲ್ಲಿ ಇಂಡ್ಯಗವರ್ನ ಮೆಂಟಿನ ರಿಜೊಲ್ಯೂಷನನ್ನು ಸೇರಿಸುತ್ತದೆ; ಅದರ ಫಲವೇನೆಂದರೆ—ಯಿತರ ದಸ್ತಾವೇಜುಗಳನ್ನು ಪಡೆಯಲಿಕ್ಕೆ ಬಾಧ್ಯತೆಯನ್ನು ಮಾತ್ರ ವುಂಟು ಮಾಡುವ ದಸ್ತಾವೇಜುಗಳನ್ನು ಅವಶ್ಯ ರಿಜಿಸ್ಟರ್ ಮಾಡಿಸಬೇಕಾದ ನಿರ್ಬಂಧದ ದೆಸೆಯಿಂದ ಕಂಠತಃ ವಿನಾಯಿಸುವಣವೇ. ಆದಸ್ತಾವೇಜು ಹುಟ್ಟಿದಲ್ಲಿ ಸ್ಥಿರಸ್ವತ್ತಿಗೆ 100ರೂಪಾಯಿಗಳ ವ ಅದಕ್ಕೆ ಮೇಲ್ಪಟ್ಟ, ಕಿಮ್ಮತ್ತಿನ ಹಕ್ಕುಗಳನ್ನು ಉಂಟು ಮಾಡುವದು ವಗ್ಯೆರೆ ಅವುಗಳ ಕಾರ್ಯವಾಗಿರುತ್ತದೆ.

ಮೂರನೇದು, 18ನೇ ಸೆಕ್ಷನ (7)ನೇ ಕ್ಲಾಜ್, 17ನೇ ಸೆಕ್ಷನ ನಿಬಂಧನೆಗಳನ್ನು ಅಕ್ರಮಿಸತಕ್ಕದ್ದಲ್ಲವೆಂಬ ಅರ್ಥವನ್ನು ಸ್ಪಷ್ಟಪಡಿಸಲಿಕ್ಕೋಸ್ಕರ ಉದ್ದೇಶಿಸಲ್ಪಟ್ಟಿರುತ್ತೆ.

ನಾಲ್ಕನೇದು, ಬ್ರಿಟಿಷ್ ಯಿಂಡ್ಯದ ಯಾವ ಭಾಗದಲ್ಲಾಗಲಿ ಯಿರುವ ಜಮೀನಿಗೆ ಸಂಬಂಧಪಟ್ಟ ದಸ್ತಾವೇಜುಗಳ ವಿಷಯದಲ್ಲಿ ರಾಜಧಾನೀ ಪಟ್ನಗಳು ವಳಿತವಾಗಿ ಡಿಸ್ಟ್ರಿಕ್ಟುಗಳ ರಿಜಿಸ್ಟ್ರಾರಗಳಿಗೆ ಸಮಾನವಾದ ಸ್ಥಿತಿಯನ್ನು ಲಾಹೂರ್ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರಿಗೆ ಉಂಟು ಮಾಡುತ್ತದೆ. ಈ ಬದಲಾವಣೆಯು ಲೋಕಲ್ ಗವರ್ನಮೆಂಟಿನವರ ಸಿಫಾರಸ್ಸಿನ ಮೇಲೆ ಮಾಡಲ್ಪಟ್ಟಿರುತ್ತೆ.

ಅಯಿದನೇದು, ಆಕ್ಟಿನ 31ನೇ ಸೆಕ್ಷನ್ನಿನ ಮುಸೂದೇಯನ್ನು ಮಾತ್ರ ತಿದ್ದು ಪಡಿ ಮಾಡುತದೆ.

ಆರನೇದು; ಆಕ್ಟಿನ 34ನೇ ಸೆಕ್ಷನನ್ನು ವಿಧಿಸುವದರಲ್ಲಿ ನ್ಯಾಯ ವಿಧಾಯಕರಿಗೆ ಯಿದ್ದ ಯೆರಡು ಉದ್ದೇಶಗಳನ್ನು ವಿಶದವಾಗಿ ತಿಳಿಸುತದೇನಂದರೆ, (ದಸ್ತಾವೇಜನ್ನು) ಹಾಜರ್ ಮಾಡಲಿಕ್ಕೆ ಕೊಡಲ್ಪಟ್ಟ ಕಾಲವು 4ನೇ ಭಾಗದ ಮೊದಲನೇ ನಾಲ್ಕು ಸೆಕ್ಷನಗಳನುಸರಿಸಿ ಕೊಡಲ್ಪಟ್ಟ ಕಾಲವಾಗಿರುತದೆ, ಅಂದರೆ ಸಾಧಾರಣವಾಗಿ ಕೊಡಲ್ಪಡುವ ಕೇವಲ (ನಾಲ್ಕು ತಿಂಗಳ) ಕಾಲವಲ್ಲವು, ಪರಂತು 24, 25, 26 ಈ ಸೆಕ್ಷನಗಳನು ಸರಿಸಿ ಕೊಡೋಣಾದ ಜಾಸ್ತೀ ಕಾಲ ಸಹ ಅರ್ಥವು, ಮತ್ತು 34ನೇ ಸೆಕ್ಷನಲ್ಲಿ ನಮೂದಿರುವ ಜುರ್ಮಾನೇ ಮಾತ್ರವಲ್ಲದೆ 24ನೇ ಸೆಕ್ಷನ ಅನುಸರಿಸಿ ತೆರಲ್ಪಡತಕ್ಕ ಜುರ್ಮಾನೆಗಳು ಯಾವದಾದರೂ ಯಿದ್ದರೆ ಅದು ಸಹಿತ, ರಿಜಿಸ್ಟ್ರಾರ ಮುಂದೆ ಹಾಜರಾಗುವದಕ್ಕೆ ಸಾವಕಾಶ ವೇನಾದರೂ ಸಂಭವಿಸಿದ ಪಕ್ಷಕ್ಕೆ, ತೆರಲ್ಪಡತಕ್ಕದ್ದು.

ಏಳನೇದು, 42 ವ 43 ನೇ ಸೆಕ್ಷನಗಳ ಮುಸೂದೆಯನ್ನು ತಿದ್ದು ಪಡಿ ಮಾಡಿ, 1871ನೇ ಯಿಸವಿಯ 8ನೇ ಆಕ್ಟನ್ನು ಮಾಡಿದವರ ಉದ್ದೇಶ ಪ್ರಕಾರ 44 ವ 45 ಈ ಸೆಕ್ಷನಗಳನ್ನು, ಡಿಪಾಜಿಟ್ ಯಿಡುವ ಏಜಂಟ ಅಲ್ಲದೆ ಉಯಿಲದಾರನೇ ಉಯಿಲ್ ವಾಪಸ್ ತೆಗದುಕ್ಕೊಳ್ಳಲಿಕ್ಕೆ ಖಾಯಿಷ್ ಮಾಡುವ ಯಾ ಮೃತಪಟ್ಟಿರುವ ಸಂಗತಿಗಳ ವುಟ್ಟಿಗೆ ಕಂಠತಃ ಹದ್ದು ಪಡಿಸುತದೆ.

ಎಂಟನೇದು, 45ನೆ ಸೆಕ್ಷನ ಅನುಸರಿಸಿ ಪೂರ್ವವೇ ನಕ್ಕಲ್ ಬರೆಯಲ್ಪಟ್ಟಿರುವಲ್ಲಿ 46ನೇ ಸೆಕ್ಷನ ಅನುಸರಿಸಿ ಉಯಿಲನ್ನು ನಕ್ಕಲ್ ಬರೆಯುವ ಕೆಲಸದಿಂದ ರಿಜಿಸ್ಟ್ರಾರನ್ನು ತಪ್ಪಿಸುತದೆ; ಮತ್ತು ಆತನು ಉಯಿಲನ್ನು ನಕ್ಕಲ್ ಬರೆಯ ಬೇಕಾಗಿ ಯಿರುವಲ್ಲಿ ಅದು ಯಾವ ಲಿಫಾಫೆಯಲ್ಲಿ ಹಾಕಿ ಮೊಹರ್‌ನಿಂ ಭದ್ರಪಡಿಸಲ್ಪಟ್ಟಿರುತ್ತೋ ಅದನ್ನು ಖುಲ್ಲಾ ಮಾಡುವಂತೆ, ಕಂಠೋಕ್ತವಾಗಿ ಅಧಿಕಾರವನ್ನುಂಟುಮಾಡುತದೆ.

ಒಂಭತ್ತನೇದು, 50ನೇ ಸೆಕ್ಷನ್ನಿನ ತಿದ್ದು ಪಡಿಯಾಗಿ ಪೂರ್ವವೇ ಮೋಸಕೃತ್ಯಗಳಿಗೆ ಆಸ್ಪದ ಉಂಟು ಮಾಡಿ ಯಿರುವ ಒಂದು ನ್ಯೂನತೆಯನ್ನು ಪೂರ್ತಿಮಾಡಲಿಕ್ಕೋಸ್ಕರ ಉದ್ದೇಶಿಸಲ್ಪಟ್ಟಿದೆ ಆ ಸೆಕ್ಷನ, ಯಾವ ದಸ್ತಾವೇಜುಗಳ ರಿಜಿಸ್ಟ್ರೇಷನ ಐಚ್ಛಿಕವಾಗಿರುತದೋ ಅಂತಾ, ಜಮೀನ ಸಂಬಂಧವಾದ, ರಿಜಸ್ಟರಾದ ದಸ್ತಾವೇಜಗಳು ರಿಜಿಸ್ಟರಾಗದ ದಸ್ತಾವೇಜುಗಳಿಗೆ ವಿರುದ್ಧವಾಗಿ ಪ್ರವರ್ತಿಸತಕ್ಕದೆಂತ ಈಗ ವಿಧಿಸುತದೆ. ಆದರೆ ಯಾವ ದಸ್ತಾವೇಜುಗಳ ರಿಜಿಸ್ಟ್ರೇಷನ ಅವಶ್ಯ ಮಾಡಲ್ಪಡತಕ್ಕದ್ದಾಗಿರುತ್ತವೋ, ಮತ್ತು ಆ ಮೇರೆ ಯಾವವು ರಿಜಿಸ್ಟರ್ ಮಾಡಲ್ಪಟ್ಟಿರುತ್ತವೋ ಅಂತಾ ದಸ್ತಾವೇಜುಗಳ ವಿಷಯದಲ್ಲಿ ಅಂತಾ ನಿಬಂಧನೆ ಯೇನೂಮಾಡುವದಿಲ್ಲವು. ಆಕ್ಟಿನ 18ನೇ ಸೆಕ್ಷನಿಗೆ ಒಳಪಡತಕ್ಕ ದಸ್ತಾವೇಜುಗಳು, ರಿಜಿಸ್ಟರ್ ಮಾಡಲ್ಪಟ್ಟಿರಲಿ ಯಿಲ್ಲದೇ ಯಿರಲಿ ಪರಂತು ಅವು 17ನೇ ಸೆಕ್ಷನ ಪ್ರಾಕಾರ ರಿಜಿಸ್ಟರ್ ಮಾಡಲ್ಪಟ್ಟ ದಸ್ತಾವೇಜುಗಳಿಗೆ ವಿರುದ್ಧವಾಗಿ, ಹುಟ್ಟಿದ ತಾರೀಖ್ ಪ್ರಕಾರ ಜಾರೀ ಯಾಗುತವೆ. ಇದರ ಫಲವೇನಂದರೆ ಜಮೀನಿಗೆ 99ರೂಪಾಯಿಗಳ ಖರೀದೀ ಬಾಧ್ಯತೆಯನ್ನುಂಟು ಮಾಡುವ ರಿಜಿಸ್ಟರಾದ ಒಂದು ದಸ್ತಾವೇಜು ರಿಜಿಸ್ಟರಾಗದ ದಸ್ತಾವೇಜು ದೆಸೆಯಿಂದ ಭಂಜಿಸಲ್ಪಡಲ್ಲಾ ರದಾದಾಗ್ಯೂ 101ರೂಪಾಯಿಗಳಿಗೆ ಬದಸ್ತೂರಿ ಬಾಧ್ಯತೆಉಂಟು ಮಾಡುವ ಒಂದು ರಿಜಿಸ್ಟರಾದ ದಸ್ತಾವೇಜು 100 ರೂಪಾಯಿಗಳ ವೊಳಗೆ ಯೆಷ್ಟರ ಮೊಬಲಗಿಗಾಗಲಿ ಬಾಧ್ಯತೆಯನ್ನುಂಟುಮಾಡುವ ಹಿಂದಿನ ತಾರೀಖ್ ಹಾ

ಕಲ್ಪಟ್ಟ ರಿಜಿಸ್ಟರ್ ಯಿಲ್ಲದ ದಸ್ತಾವೇಜಿನ ದೆಸೆಯಿಂದ ಭಂಜಿಸಲ್ಪಡಬಹುದು. ಇದರಿಂದ ಉಂಟಾಗುವದೆಂದು ಹೆದರಬೇಕಾಗಿರುವ ಕೆಡಕೇನಂದರೆ— ಭಾರೀ ಮೊಬಲಗಿನ ಬಾಧ್ಯತೆಯನ್ನು ಉಂಟುಮಾಡುವ ದಸ್ತಾವೇಜುಗಳನ್ನು ಭಂಜಿಸುವದಕ್ಕೋಸ್ಕರ ಜುಜುವೀ ಮೊಬಲಗಿನ ಬಾಧ್ಯತೆಯನ್ನುಂಟು ಮಾಡುವದಾಗಿ ಬರದು ಕೊಡಲ್ಪಟ್ಟ ಸುಳ್ಳು ತಾರೀಖು ಉಳ್ಳ ದಸ್ತಾವೇಜುಗಳು ವಿಶೇಷವಾಗಿ ಸೃಷ್ಟನೆ ಆಗುತ್ತದೆಂಬದು. ಇದಕ್ಕೆ ಈ ಬಿಲ್ಲಿನಿಂದ ತಿಳಿಸಲ್ಪಡುವ ಪರಿಹಾರವೇನಂದರೆ 17ನೇ ಸೆಕ್ಷನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ದಸ್ತಾವೇಜುಗಳು ರಿಜಿಸ್ಟರ್ ಆಗದ ದಸ್ತಾವೇಜುಗಳಿಗೆ ವಿರುದ್ಧವಾಗಿ ಜಾರೀ ಯಾಗುವಂತೆ ಮಾಡುವಣವೆ.

ಹತ್ತನೇ ತಿದ್ದುಪಡಿಯು—59ನೇ ಸೆಕ್ಸನನಲ್ಲಿರುತ್ತದೆ; ಆ ಸೆಕ್ಷನ 58ನೇ ಸೆಕ್ಷನ ಅನುಸರಿಸಿ ಮಾಡಲ್ಪಟ್ಟ ಇಂಡಾರ್ಸ್ಮೆಂಟ ಗಳಿಗೆ ತಾರೀಖು ಹಾಕುವ ಬಗ್ಗೆ ವ ರುಜಾ ಮಾಡುವ ಬಗ್ಗೆ ಮಾತ್ರ ಯಿಾಗ ವಿಧಿಸುತ್ತದೆ. 52ನೇ ಸೆಕ್ಷನ ಅನುಸರಿಸಿ ಮಾಡಲ್ಪಟ್ಟ ಇಂಡಾರ್ಸ್ಮೆಂಟಗಳ ಬಗ್ಗೆ ಬದಸ್ತೂರ್ ನಿಬಂಧನೆ ಮಾಡಬೇಕಾದ್ದು ಯುಕ್ತವಾಗಿದೆ.

ಹನ್ನೊಂದನೇ ತಿದ್ದುಪಡಿಯು—64 ವ 65ನೇ ಸೆಕ್ಷನಗಳ ದೆಸೆಯಿಂದ ಉಯಿಲುಗಳನ್ನೂ ಕೊಡಿಸಿಲ್ (ಯಾನೆ ಉಯಿಲ್ ತಾಜಾಕಲಂಗಳನ್ನೂ) ವಿನಾಯಿಸುವದರಲ್ಲಿ ಅಡಗಿರುತದೆ.

ಹನ್ನೆರಡನೇ ತಿದ್ದುಪಡಿಯು—71ನೇ ಸೆಕ್ಷನನ್ನು ಮುಸೂದೇ ಮಾಡುವಲ್ಲಿ ಅಲ್ಪವಾದ ಪರಂತು ಯುಕ್ತವಾದ ತಿದ್ದುಪಾಡನ್ನು ಉಂಟು ಮಾಡುತದೆ.

ಹದಿಮೂರನೇ ಮತ್ತು ಕಡೇ ತಿದ್ದುಪಡಿಯು,—72ನೇ ಸೆಕ್ಷನನಲ್ಲಿರುವ ಡಿಸ್ಟ್ರಿಕ್ಟು ಕೋರ್ಟು ಎಂಬ ಮಾತಿನ ಅರ್ಥ ವಿಷಯದಲ್ಲಿ ಉಂಟಾಗಿರುವ ಸಂದೇಹವನ್ನು ನಿವೃತ್ತಿ ಮಾಡುತದೆ.

ಸಿಂಲಾ, ತಾರೀಖು 5ನೇ ಜೂನ 1876.

A. HOBHOUSE.

Mysore Government Press, Bangalore—1876.

ಭಾರೀ ತಕಸೀರಗಳಿಗೋಸ್ಕರ ಖೈದ್ ಮಾಡಲ್ಪಟ್ಟು ಸಜಾ ಮಾಯಿದೇ ಪೂರೈಸಿದ ಬಳಿಕ
ಖುಲಾಸೇ ಮಾಡಲ್ಪಟ್ಟ ಜನಗಳ ಚಹರೇ ಪಟ್ಟಿ.

[illegible]	ಜೈಲ್ ರಿಜಿಸ್ಟರಿನ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ ಅದನ್ನು ವಿಧಿಸಿದ ತಾರೀಖು ಮತ್ತು ಯಾವತ ಕಸೀರಿಗೋಸ್ಕರ.	ಖುಲಾಸೇ ತಾರೀಖು.	[illegible]	ಷರಾ.	[illegible]
1	2	3	4	5	6	7	8	9	10
ಬೆಂಗಳೂರು.	7534	ಮುನಿಯಪ್ಪ, ಬಣಜಿಗ, ವ್ಯಾಪಾರಸ್ತ, ಹೊಸಕೋಟೆ.	ಯಡತೋಳಿನ ಮುಂಭಾಗದಲ್ಲಿ ಉದ್ದವಾದ ಘಾಯದಕಲೆ, ಜನ್ನಿನ ಮೇಲೆ ಯಡಗಡೆ ಪಕ್ಕೆ ಯಲುವುಗಳ ಮೇಲೆ ಒಂದು ದೊಡ್ಡ ಘಾಯದ ಕಲೆ, ಎತ್ತರ 5—7.	ಕೃಷ್ಣಪ್ಪ, ಹೊಸಕೋಟೆ.	ಮೂರು ವರುಷ ಕಠಿಣ ಸಜಾ, 5ನೇ ಜೂಲೈ 1873, ಕಂಕೀಇಂದ ಕೆಡಕುಮಾಡಿದ್ದು, ಮೊ॥ ನಂ. 4, ನಂದೀದುರ್ಗ ಡಿವೀಜರ್ ಸೆಕ್ಷರ್ಸ ಕೋರ್ಟು.	5ನೇ ಜೂಲೈ 1876.	ಇಲ್ಲ.		
	9125	ರಾಮೀ, ದಾಸರಿ, ವ್ಯಾಪಾರಸ್ತ, ತಿರುಗಾಡುತ್ತಿರುವವ.	ಮೇಲ್ ತುಟಿಯಲ್ಲಿ ಯಡಪಾರ್ಶ್ವ ಒಂದು ಘಾಯದ ಕಲೆ, ಮೂಗಿನ ದಿಂಡಿನ ಯಡಪಾರ್ಶ್ವ ಒಂದು ಚಿಕ್ಕ ಘಾಯದ ಕಲೆ, ಯಡಕಿವಿಯ ವಳಪಾರ್ಶ್ವ ಒಂದು ಮಚ್ಚೆ, ಎತ್ತರ 5—2.	ವೆಂಕಟಿಗ, ತಿರುಗಾಡುತ್ತಿರುವವ.	ಯೆಂಟುದಿವಸಗಳು ಡಿ॥ 27ನೇ ಜೂನ 1876, ಕಳವು, ಬೆಂಗಳೂರು ಅಮಲ್‌ದಾರರ ಕೋರ್ಟು.	ಡಿಟೋ	ಇಲ್ಲ.		
	9126	ತಿಮ್ಮೀ, ಡಿಟೋ.	ಕಣ್ಣುಗಳು ಕಪಿಲೆವರ್ಣ, ಯಡಕಿವಿಯ ಕೆಳಭಾಗ ಹೋಗಿರುತ್ತೆ, ಯಡಪಾದದ ಮೂರನೇ ಬೆರಳು ವಕ್ರವಾಗಿದೆ. ಎತ್ತರ 4-10.	ಈರ, ಡಿಟೋ	ಡಿಟೋ	ಡಿಟೋ	ಇಲ್ಲ.		
	8580	ಪಯನಿ ಉರಫ್ ತಲವಿರಿಬಾ, ಹೊಲೆಯ, ಕುಶನಿ, ಲಷ್ಕರ.	ಸುಮಾರು ಕಪ್ಪಗಿದ್ದಾನೆ, ಕೋಣಾಕಾರವಾದ ಮುಖಭಾವ, ಕೊನೆಯಾದ ಮೂಗು, ಬಲಗೆನ್ನೇ ಯಲುವಿನ ಮೇಲೆ ಘಾಯದ ಕಲೆ, ಮೂಗಿನ ಬುಡದಲ್ಲಿ ಚಿಕ್ಕ ಹಚ್ಚೇಗುರುತು, ಎತ್ತರ 5-4.	ಕುಪ್ಪಾ, ಲಷ್ಕರ.	ಒಂಬತು ವರುಷ ಡಿಟೋ 8ನೇ ಜೂಲೈ 1875, ಕಳಲು, ಮೊಕದ್ದಮಾ ನಂಬರ 380, ಷಹರ್ ಮತ್ತು ಲಷ್ಕರ್ ಮಾಜಿಸ್ಟ್ರೇಟ.	8ನೇ ಡಿಟೋ	ಒಂದಾವರ್ತಿ.		

99

239

ಯಾವಜೈಲಿನಿಂದ ಖುಲಾಸೇಮಾಡಲ್ಪಟ್ಟದ್ದು.	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲಿನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಬೆಂಗಳೂರು.	8604	ಷೇಕ್ ಅಲ್ಲಿ, ಮುಸಲ್ಮಾನ್, ವ್ಯಾಪಾರಸ್ತ, ಲಷ್ಕರ್.	ಚಟುವಟಿಕೆಯಾಗಿಯೂ, ದಪ್ಪನಾಗಿಯೂ, ಇರತಕ್ಕವ, ಅಕ್ರಮವಾದ ಹಲ್ಲುಗಳು, ಕೆಳಹೊಟ್ಟೆಯಲ್ಲಿ ಬೆಂಕಿಇಂದ ಸುಟ್ಟ ಘಾಯದ ಕಲೆಗಳು, ಎಡಕಾಲು ಗುಲ್ಪಗಳ ಮೇಲೆ ಘಾಯದ ಕಲೆಗಳು, ಎತ್ತರ 5—1½.	ಮಹಮ್ಮದ್ ಗೌಸ್, ಲಷ್ಕರ್.	ಒಂದು ವರುಷ ಕಠಿಣ ಸಜಾ, 21ನೇ ಜುಲೈ 1875, ಮನೆಗೆ ಕನ್ನಾ ಹಾಕಿದ್ದು. ಮತ್ತು ಕಳವು, ಷಹರ್ ಮತ್ತು ಲಷ್ಕರ್ ಮಾಜಿಸ್ಟ್ರೇಟರ ಕೋರ್ಟು.	21ನೇ ಜುಲೈ 1876.	ಇಲ್ಲ.		
	6270	ಓಬಳಪ್ಪ, ಬ್ರಾಹ್ಮಣ, ಶಾನುಭೋಗ. ಚಿಕ್ಕಬಳ್ಳಾಪುರ.	ಮುಖದಮೇಲೆ ಬಹಳವಾಗಿ ದೇವೀಕಲೆ, ಕೊನೆಯಾಗಿರುವ ಮೂಗು, ಮಂದಮತಿ, ಕುತ್ತಿಗೆಯ ಬುಡದಲ್ಲಿ ಎರಡು ನರಹುಲಿ, ಎತ್ತರ 5—6.	ನಾರಣಪ್ಪ, ಚಿಕ್ಕಬಳ್ಳಾಪುರ.	ಐದುವರುಷಗಳು ಡಿ॥, 22ನೇ ಜುಲೈ 1871, ಡಕಾಇತಿ, ಮೊ॥ ನಂ. 48, ಕೋಲಾರ್ ಡಿ॥ ಮಾಜಿಸ್ಟ್ರೇಟ್.	22ನೇ ಡಿಟೋ.	ಇಲ್ಲ.		
	6271	ನಂಜ, ಬೇಡರ್, ಜಿರಾಯತ್, ಡಿಟೋ	ಎಡಕಿವಿಯ ಹಿಂದೆ ಬಹಳವಾಗಿ ಹಳ್ಳಬಿದ್ದಿರುವ ಘಾಯದ ಕಲೆ, ಎಡಕಣ್ಣಿನ ಹೊರಕುಣಿಕೆಯಲ್ಲಿ ಒಂದು ಚಿಕ್ಕ ಕರೇಮಚ್ಚೆ, ಹಣೆ ಉಬ್ಬಾಗಿಯೂ, ಎತ್ತರವಾಗಿಯೂ ಇದೆ, ಬಲಗೈತರ್ಜನೀ ಬೆರಳಿನ ಬುಡದಲ್ಲಿ ಘಾಯದ ಕಲೆ, ಎತ್ತರ 5–4.	ಕದರಿಗ, ಡಿಟೋ.	ಡಿಟೋ	ಡಿಟೋ	ಇಲ್ಲ.		
	6272	ಧರ್ಮಿಂಗ್, ಲಂಬಾಣಿ, ಡಿಟೋ,	ಹಣೆಯ ಮಧ್ಯದಲ್ಲೂ ಮತ್ತು ಕಪಾಳಗಳಲ್ಲೂ ಗುಂಡಿಯೋಪಾದಿಯಲ್ಲಿರುವ ಘಾಯದ ಕಲೆಗಳು, ಹೊಟ್ಟೆಯ ಪಕ್ಕೆಗಳಲ್ಲಿ ಕೆಲವು ಕಲೆಗಳು, ಮೂಗು ಕೊನೆಯಾಗಿರುತ್ತೆ, ಎತ್ತರ 5—4.	ಲಚ್ಮನಾಯಕ, ಡಿಟೋ,	ಡಿಟೋ	ಡಿಟೋ	ಇಲ್ಲ.		

ಬೆಂಗಳೂರು.	6273	ಗೋಪಿಗ, ಡಿಟ್ಟೋ	ಬಲಭುಜದ ರೆಕ್ಕೆಯ ಮೇಲೆ ಒಂದು ಘಾಯದ ಕಲೆ, ಬಲ ಮಣಿಕಟ್ಟಿನ ಮೇಲೆ ಇನ್ನೊಂದು ಕೆನ್ನೆ ಯೆಲುವುಗಳ ಮೇಲೆ ಮಚ್ಚೆ, ಎತ್ತರ 5—3.	ಡಿಟ್ಟೋ	ಡಿಟ್ಟೋ	ಡಿಟ್ಟೋ	ಇಲ್ಲ.		T. J. McGANN, *Offg. Supt., Central Jail.*
	6275	ಭೀಮ, ಲಂಬಾಣಿ, ಜಿರಾಯತ್, ಚಿಕ ಬಳ್ಳಾಪುರ.	ಯಡಭುಜದಲ್ಲಿ ಹಚ್ಚೆಯ ಗುರುತಿನ ಮೇಲೆ ಒಂದು ಉದ್ದವಾದ ಘಾಯದ ಕಲೆ, ಮತ್ತು ಯದೆಯ ಯಡಭಾಗದ ಮಧ್ಯದಲ್ಲಿ ಒಂದು ಘಾಯದ ಕಲೆ, ಎತ್ತರ 5—4.	ರಾಮಚಂದ್ರ, ಚಿಕ್ಕಬಳ್ಳಾಪುರ.	ಐದು ವರುಷಗಳು ಕಠಿಣ ಸಜಾ, 22ನೇ ಜುಲೈ 1871, ಡಕಾಯಿತಿ, ಮೊ॥ ನಂ. 48, ಕೋಲಾರ ಡಿ॥ ಮಾಜಿಸ್ಟ್ರೇಟ.	22ನೇ ಜುಲೈ 1876.	ಇಲ್ಲ.		
	6276	ತಿಮ್ಮ, ಬೇಡರ್, ಡಿಟ್ಟೋ.	ಯಡಮೊಲೇ ಕೊನೆಯ ಪಳಪಾರ್ಶ್ವ ಘಾಯದ ಕಲೆ, ಮತ್ತು ಬಲಮುಂಗೈ ಜುಡದಲ್ಲಿ ಇನ್ನೊಂದು ಮಚ್ಚೆ, ಮುಖದ ಮೇಲೆ ಸ್ವಲ್ಪ ದೇವೀಕಲೆ ಇರುತ್ತೆ ಎತ್ತರ 5—3.	ದಾಸ, ಡಿಟ್ಟೋ	ಡಿಟ್ಟೋ	ಡಿಟ್ಟೋ	ಒಂದಾವರ್ತಿ		
	8607	ಮಲ್ಲಿ, ತಿಗಳರ್, ವ್ಯಾಪಾರ, ಬೆಂಗಳೂರು.	ಮಡ್ಡಿಮುಖ, ಯಡಕೆನ್ನೇ ಮೇಲೆ ಕೆಲವು ಘಾಯದ ಕಲೆಗಳು, ಎರಡು ತೋಳುಗಳ ಮೇಲೂ ಹಚ್ಚೆ, ಎತ್ತರ 5—3,	ಮಾಸ್ತಿಪ್ಪ, ಬೆಂಗಳೂರು.	ಒಂದು ವರುಷ ಡಿಟ್ಟೋ, 23ನೇ ಜುಲೈ 1875, ಕಳವು ಮಾಲನ್ನು ತೆಗೆದುಕೊಂಡದ್ದು, ಮೊಕದ್ದಮಾ ನಂ. 408, ಷಹರ್ ಮತ್ತು ಲಷ್ಕರ್ ಮಾಜಿಸ್ಟ್ರೇಟರ ಕೋರ್ಟು.	22ನೇ ಡಿಟ್ಟೋ	ಇಲ್ಲ.	23ನೇ ಭಾನುವಾರ ಪ್ರಯುಕ್ತ.	
	8608	ಹನುಮಿ, ಡಿಟ್ಟೋ.	ಹಣೇಮೇಲೆ ಹಚ್ಚೆ, ಮತ್ತು ಘಾಯದ ಗುರ್ತುಗಳು, ಯರಡು ತೋಳುಗಳ ಮೇಲೂ ಮಚ್ಚೆ, ಎತ್ತರ 5—1.	ಹೊನ್ನಪ್ಪ, ಡಿಟ್ಟೋ	ಡಿಟ್ಟೋ	ಡಿಟ್ಟೋ	ಇಲ್ಲ.	ಡಿಟ್ಟೋ	
ಕೋಲಾರ.	1352	ನಾರಾಯಣಿ, ನಗರ್ತ, ಚಿಲ್ಲರೇ ವ್ಯಾಪಾರ, ಬುರಡುಕುಂಟೆ ತಾಲ್ಲೂಕು ಶಿಡ್ಲಘಟ್ಟ.	ಅಡಿ5 ಅಂಗುಲ2 ಶಾಮಲ ವರ್ಣ ಗುಂಡುಮೊಖ ಹೊಟ್ಟೇಮ್ಯಾಲೆ 4ಕಡೆ ಕಾಸಿನ ಅಗಲ ಬರೇ ಗುರ್ತು ಯಿದೆ.	ಶೀತಾರಾಮಪ್ಪ, ಬುರಡುಗುಂಟೆ ತಾಲ್ಲೂಕು ಶಿಡ್ಲಘಟ್ಟ.	ಚಿಕ್ಕಬಳ್ಳಾಪುರ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು 76ನೇ, ಇಸವಿ, ಫಿಬ್ರುವರೀ ತಾರೀಖು 22 ರಲ್ಲು 8ನೇ ನಂ. ಮೊಕದ್ದಮೇಲಿ 454ನೇ ಸೆಕ್ಷನ ಪ್ರಕಾರ ಕಳವಿಗಾಗಿ 5 ತಿಂಗಳು ರಿಗರ್ಸ.	22ನೇ ಜುಲೈ 1876ನೇ ಇಸವಿ,	ಇಲ್ಲ.		

241

ಯಾವಜೈಲ್‌ಸಿಂದಖುಲಾಸೇಮಾಡಲ್ಪಟ್ಟದ್ದು	ಜೈಯಿಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖುಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ಇಂಟೆಂಡೆಂಟರವರ ದಸ್ತಖತ್ತು
1	2	3	4	5	6	7	8	9	10
ಕೋಲಾರ.	1500	ರಾಮು, ಗಂಧೂಡಿ ವ್ಯಾಪಾರ, ಹುತ್ತೂರು, ತಾಲ್ಲೂಕು ಕೋಲಾರ.	5–7. ಕೆಂಪುಬಣ್ಣ, ಗುಂಡುಮುಖ, ದೇವೀಕಲಮೆ ಮುಖದ ಮೇಲೆ ಯಿದೆ. ಬಲಗಡೆ ತೊಡೇಮೇಲೆ ಹುಣ್ಣಿನ ಮಚ್ಚೆ, ಯಿದೆ.	ವೆಂಕಟ್ರಾಮು, ಹುತ್ತೂರು, ತಾಲ್ಲೂಕು ಕೋಲಾರ.	ಕೋಲಾರ ತಾಲ್ಲೂಕು ಕೋರ್ಟು 76ನೇ ಇಸವಿ ಜೂನ್ ತಾರೀಖು 22 ರಲ್ಲು ಕ್ರಿಮಿನಲ್ 69ನೇ ನಂ. ಮೊಕದ್ದಮೇಲಿ, 380ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 30 ದಿವಸ ರಿಗರ್ಸ್.	22ನೇ ಜೂಲೈ 1876ನೇ ಇಸವಿ.	ಇಲ್ಲ.		
	1503	ಅನಂತಪ್ಪ, ಜೈನರು, ವ್ಯಾಪಾರ ಗುಡಿಬಂಡೇ ಕಸಬಾ.	5–5 ಕಪ್ಪುಬಣ್ಣ, ವೃದ್ಧಮುಖ, ದೇವೀಕಲಮೆ ಮುಖದ ಮೇಲೆ ಯಿದೆ. ಬಲಗಡೆ ಮಣಕಾಲು ಮೇಲೆ ಘಾಯದ ಗುರ್ತು ಯಿಧೆ.	ದ್ಯಾವಪ್ಪ, ಗುಡಿಬಂಡೇ ಕಸಬಾ.	ಗುಡಿಬಂಡೇ ತಾಲ್ಲೂಕು ಕೋರ್ಟು 76ನೇ ಇಸವಿ, ಜೂನ್ ತಾರೀಖು 23 ರಲ್ಲು ಕ್ರಿಮಿನಲ್ 45ನೇ ನಂಬರ್ ಮೊಕದ್ದಮೇಲಿ, 380ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 30 ದಿವಸ ರಿಗರ್ಸ್.	ಡಿಟೋ	ಡಿಟೋ		
	1504	ಮುಚ್ಚು ನರಸಿಗಾ, ಯಡಗೈ ಕೂಲಿ, ನಾಗಸಂದ್ರ ತಾಲ್ಲೂಕು ಗೋರೀಬಿದನೂರು.	5—5 ಕಪ್ಪುಬಣ್ಣ, ಗುಂಡುಮುಖ, ಯಡದ ಕೈ ಮೇಲೆ ಘಾಯದ ಗುರ್ತು ಯಿಧೆ.	ಹನುಮ, ನಾಗಸಂದ್ರ, ತಾಲ್ಲೂಕು ಗೋರೀಬಿದನೂರು.	ಗೋರೀಬಿದನೂರು. ತಾಲ್ಲೂಕು ಕೋರ್ಟು 76ನೇ ಇಸವಿ, ಜೂನ್ ತಾರೀಖು 22 ರಲ್ಲು ಕ್ರಿಮಿನಲ್ 41ನೇ ನಂಬರ್ ಮೊಕದ್ದಮೇಲಿ, 379ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 30 ದಿವಸ ರಿಗರ್ಸ್.	ಡಿಟೋ.	ಡಿಟೋ		
	1394	ಅಣ್ಣಯ್ಯ, ನಗರ್ತ, ವ್ಯಾಪಾರ ದೊಡ್ಡಬಳ್ಳಾಪುರ ಕಸಬಾ.	5—6 ಅಗಲ ಮುಖ, ಕಪ್ಪುಬಣ್ಣ, ದೇವೀ ಕಲಮೆ ಯಿಧೆ. ಯಡೇ ಮಧ್ಯದಲ್ಲಿ ಮಚ್ಚೆ, ಯಿಧೆ.	ಚಿಕ್ಕನಂಜುಂಡಪ್ಪ, ದೊಡ್ಡಬಳ್ಳಾಪುರ ಕಸಬಾ.	ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್ ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು 75ನೇ ಇಸವಿ,	26ನೇ ಜೂಲೈ 1876ನೇ ಇಸವಿ,	ಡಿಟೋ		

243

				ಜೂಲೈ ತಾರೀಖು 26 ರಲ್ಲು ಕ್ರಿಮಿನಲ್ 18ನೇ ನಂ. ಮೊಕದ್ದಮೇಲಿ 457ನೇ ಸೆಕ್ಷರ್ನ ಪ್ರಕಾರ ಕಳವಿಗಾಗಿ 1 ವರುಷ ರಿಗರ್ಸ್.			
1520	ಮುನಿಗ, ಬ್ಯಾಡರವ, ಕೂಲಿ, ಹಗಲಗುರಿ ತಾಲ್ಲೂಕು ಚಿಕ್ಕಬಳ್ಳಾಪುರ.	5—4 ಕಪ್ಪುಬಣ್ಣ, ವೃದ್ಧಮುಖ, ಬಲಗಡೆ ಮೊಣಕಾಲ್ ಮೇಲೆ, ಗಾಯದ ಮಚ್ಚೆಯಿಧೆ.	ವೆಂಕಟಗ, ಹಗಲಗುರಿ ತಾಲ್ಲೂಕು ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ ತಾಲ್ಲೂಕು ಕೋರ್ಟು 76ನೇ ಇಸವಿ, ಜೂಲೈ 9ನೇ ತಾರೀಖಿನಲ್ಲಿ ಕ್ರಿಮಿನಲ್ 84ನೇ ನಂ. ಮೊ॥ 379ನೇ ಸೆಕ್ಷರ್ನ ಪ್ರಕಾರ ಕಳವಿಗಾಗಿ 20 ದಿವಸ ರಿಗರ್ಸ್.	29ನೇ ಜೂಲೈ 1876.	ಇಲ್ಲ.	
1316	ಹೆಂಗಸು ಸುಬ್ಬಿ, ಮತಸುವಕ್ಕಲಿಗರು, ಜಿರಾಯತು, ಬೆಸ್ತರಪಲ್ಲಿ ತಾಲ್ಲೂಕು ಗುಮ್ಮನಾಯಕನಪಾಳ್ಯ.	ಅಡಿ 5 ಅಂಗುಲ 4 ಶಾಮಲವರ್ಣ, ಗುಂಡುಮುಖ, ಹಣೇಮೇಲೆ ಗಾಯದ ಗುರ್ತು ಯಿಧೆ.	ಶೀತರಡ್ಡಿ ಬೆಸ್ತರಪಲ್ಲಿ ತಾಲ್ಲೂಕು ಗುಮ್ಮನಾಯಕನಪಾಳ್ಯ.	ಚಿಕ್ಕಬಳ್ಳಾಪುರ ಅಸಿಸ್ಟೆಂಟ್ ಕಮ್ಮಿಷನರ ಕೋರ್ಟು 76ನೇ ಇಸವಿ ಜನವರೀ ತಾರೀಖು 11 ರಲ್ಲು ಕ್ರಿಮಿನಲ್ ಮೊದ್ದಮಾ 2ನೇ ನಂಬರಿನಲ್ಲಿ 457ನೇ ಸೆಕ್ಷರ್ನ, ಪ್ರಕಾರ ಕಳವು ತಕಸೀರಿಗಾಗಿ 5 ತಿಂಗಳು ಸಿಂಪಿಲ್ 8 ರೂಪಾಯಿ ಜುರ್ಮಾನೆ ಕೊಡದೇ ಯಿದ್ದರೆ, 1 ತಿಂಗಳು ಜಾಸ್ತಿ.	1ನೇ ಜೂಲೈ 1876.	ಡಿಟೋ	ಜುರ್ಮಾನೇ ಪೈಕೀ 5—11—5 ರೂಪಾಯಿ ವಸೂಲಾಗಲಿಲ್ಲ.
1487	ಕೋಡಿಗ, ಕುರುಬರು, ಜಿರಾಯತು, ಬೈಲಪಲ್ಲಿ ತಾಲ್ಲೂಕು ಬೇತಮಂಗಲ.	5—6 ಕಪ್ಪುಬಣ್ಣ ವೃದ್ಧಮುಖ, ಯದೇಮೇಲೆ ಬರೇ ಗುರ್ತು ಯಿಧೆ.	ತೇಗಿಗಾಡು, ಬೈಲಪಲ್ಲಿ ತಾಲ್ಲೂಕು ಬೇತಮಂಗಲ.	ಬೇತಮಂಗಲ ತಾಲ್ಲೂಕು ಕೋರ್ಟು 76ನೇ ಇಸವಿ ಜೂನ್ ತಾರೀಖು 12 ರಲ್ಲು ಕ್ರಿಮಿನಲ್ 64ನೇ ನಂಬರ್ ಮೊಕದ್ದಮಾ 379ನೇ ಸೆಕ್ಷರ್ನ ಪ್ರಕಾರ ಕಳವಿಗಾಗಿ 1 ತಿಂಗಳು ರಿಗರ್ಸ್.	12ನೇ ಜೂಲೈ 1876.	ಡಿಟೋ	
1492	ಹೆಂಗಸು, ತಿಮ್ಮಿ, ಕೊರಚರು, ಚಿಲ್ಲರೇ ವ್ಯಾಪಾರ ಗೊತ್ತಿಲ್ಲ.	5—ಕಪ್ಪುಬಣ್ಣ, ವೃದ್ಧಮುಖ, ಯಡಗೈ ಮುಂಗೈ ಮೇಲೆ ಹಚ್ಚೇ ಗುರ್ತು ಯಿಧೆ.	ವೆಂಕಟಗ, ಗೊತ್ತಿಲ್ಲ.	ಕೋಲಾರ ತಾಲ್ಲೂಕು ಕೋರ್ಟು 76ನೇ ಇಸವಿ ಜೂನ್ ತಾರೀಖು 17 ರಲ್ಲು 379ನೇ ಸೆಕ್ಷರ್ನ ಪ್ರಕಾರ ಕಳವು, ತಕಸೀರಿಗಾಗಿ30 ದಿವಸ ರಿಗರ್ಸ್	17ನೇ ಜೂಲೈ 1876.	ಡಿಟೋ	

ಯಾವ ಜೈಲ್‌ನಿಂದ ಖುಲಾಸೆ ಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸ್ಥಾರಣ ಕಸಬ, ಮತ್ತು ವಾಸಸ್ಥಳ	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್
1	2	3	4	5	6	7	8	9	10
ಕೋಲಾರ.	1511	ವೆಂಕಟಸಾಮಿ, ಬಣಜಿಗ, ಜಿರಾಯಿತು ನಂದೀ ತಾಲ್ಲೂಕು ಚಿಕ್ಕಬಳ್ಳಾಪುರ.	5—8 ಕೆಂಪುಬಣ್ಣ, ಗುಂಡುಮುಖ, ಹಣೇಮೇಲೆ, ಬಿಳೀಮಚ್ಚೆ, ಯಿಧೆ.	ವೆಂಕಟರಮಣ, ತಾಲ್ಲೂಕು ಚಿಕ್ಕಬಳ್ಳಾಪುರ ನಂದೀ.	ಚಿಕ್ಕಬಳ್ಳಾಪುರ ತಾಲ್ಲೂಕು ಕೋರ್ಟು 76ನೇ ಇಸವಿ ಜೂನ್ ತಾರೀಖು 28 ರಲ್ಲು ಕ್ರಿಮಿನಲ್ 79ನೇ ನಂಬರ್ ಮೊಕದ್ದಮಾ 379ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 20 ದಿವಸ ರಿಗರ್ಸ್.	18ನೇ ಜೂಲೈ 1876.	ಇಲ್ಲ.		P. N. Purnaiya, *Officer in charge of Jail.*
	1497	ಹೆಂಗಸು, ಬಸಿವಿ ಮಾವಕ್ಕಲಿಗರು, ಕೂಲಿ, ಮೊಲ್ಲಹಳ್ಳಿ ತಾಲ್ಲೂಕು ಕೋಲಾರ.	5—7 ಕೆಂಪುಬಣ್ಣ, ವುದ್ದಮುಖ, ಹಣೇಮೇಲೆ ಗಾಯದ ಗುರ್ತು ಯಿಧೆ.	ಯಿರಗಪ್ಪ, ಮೊಲ್ಲಹಳ್ಳಿ, ತಾಲ್ಲೂಕ ಕೋಲಾರ.	ಕೋಲಾರ ತಾಲ್ಲೂಕು ಕೋರ್ಟು 76ನೇ ಇಸವಿ ಜೂನ್ ತಾರೀಖು 20 ರಲ್ಲು 380ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 30 ದಿವಸ ರಿಗರ್ಸ್ 67ನೇ ನಂಬರ್ ಮೊಕದ್ದಮಾ.	20ನೇ ಜೂಲೈ 1876ನೇ ಇಸವಿ.	ಡಿಟೋ		
ತುಮಕೂರು.	1001	ಯೆಂಕಿ ಹೆಂಗಸು ಬಸ್ತ್ರ ತುಮಕೂರು ಕಸಬಾ ಕೂಲಿ.	ಯೆಣೆಕೆಂಪು ವುದ್ದಾ 4—8 ಹಣೇಮ್ಯಾಲೆ ಅವರೇ ಬ್ಯಾಳೇ ಅಗಲಾ ವಂದು ಹಚ್ಚೆ ಯಿಧೆ ಎರಡು ಕೈಮೇಲೆ ಹಚ್ಚೆ ಹಾಕಿಯಿಧೆ.	ಯಲ್ಲಪ್ಪಾ ತುಮಕೂರು.	380ನೇ ಸೆಕ್ಷನ್ ಪ್ರಕಾರ ಸನ್ 1875ನೇ ಇಸವಿ ಅಕ್ಟೋಬರು 16ರ ಲಾಗಾಯತು 9 ತಿಂಗಳು ಕಠಿಣ ಸಜಾ.	16ನೇ ಜೂಲೈ 1876ನೇ ಯಿಸವಿ.	ವಂದು ದಫಾ		V. Krishnasami, *Officer in charge of Jail.*
ಮೈಸೂರು	1443	ಜವನೀಮಾದಾ ವುಪ್ಪಲಿಗರ ವ ತೋಟದ ಕಸಬಿನವನು, ಚಾಮರಾಜನರ ತಾಲ್ಲೂಕು ಅಂಚವಾಡಿ ಗ್ರಾಮು	5 ಅಡಿ 4½ ಅಂಗುಲ ಮಾಲೆಕಂಣು ವಳಭಾಗಕ್ಕೆ ವಂದು ಅಂಗುಲ ಮೇಲ್ಗಡೆ ವಂದು ಗುಂಡಾದ ಕಲೆಇಧೆ, ಯದೆಯಮೇಲೆ 3—4 ಅಡ್ಡ ಗುರುತು ಕಲೆಗಳು ಇಧೆ. ಕಪ್ಪುವರ್ಣ ಕಂಣುಕಪ್ಪು ಕೂದಲುಕಪ್ಪು	ಜವನಾ ಚಾಮರಾಜನಗರ.	10 ವರುಷ ಕಠಿಣಸಜಾ ತಾರೀಖು 4ನೇ ಜೂಲೈ 1866ನೇ ಇಸವಿ ಡಕಾಯಿತಿ ಮೊಕದ್ದಮಾ ನಂಬರು 36ನೇ 1866ನೇ ಇಸವಿ ಅಷ್ಟಗ್ರಾಮ ಡಿ॥ ಸೂಪರಿಂಟೆಂಡೆಂಟರವರ ಕೋರ್ಟು.	4ನೇ ಜೂಲೈ 1876ನೇ ಇಸವಿ.	ಇಲ್ಲ.		

1444	ಈರಾ ಡಿಟೋ	5 ಅಡಿ $5\frac{1}{4}$ ಅಂಗುಲ ಹಳ್ಳಿಕೆನ್ನೆಯಮೇಲೆಸುಮಾರಾಗಿ ಕಾಣುವಂತಾ ವಂದುಕಲೆಇಧೆ ಬಲದ ಕಿರಬೆರಳು 2ನೇ ಬೆರಳಿನ ಕೊನೆಗಳು ಸ್ವಲ್ಪಬೊಗ್ಗಿಯಿಧೆ. ಯಡದ ಕೊಂಡಿಬೆರಳು ಸ್ವಲ್ಪ ಸೊಟ್ಟೆಯಾಗಿಇಧೆ. ಕಪ್ಪುವರ್ಣ ಕೂದಲುಕಪ್ಪು ಕಂಣುಕಪ್ಪು	ಬಿಳ್ಲಾ ಚಾಮರಾಜನಗರ.	ಡಿಟೋ	ಡಿಟೋ	ಡಿಟೋ		
1445	ಜವನಿ, ರಂಗಾ, ಡಿಟೋ	5 ಅಡಿ $5\frac{1}{2}$ ಅಂಗುಲ ಬಲಕಿವಿಕೆಳಗೆ ಚನ್ನಾಗಿ ಕಾಣುವಂತಾ ವಂದು ದೊಡ್ಡಕಲೆಇಧೆ. ಕಪ್ಪುವರ್ಣ ಕೂದಲುಕಪ್ಪುಕಂಣುಕಪ್ಪು	ಮಾದಾ ಅಂಚವಾಡಿ	ಡಿಟೋ	ಡಿಟೋ	ಡಿಟೋ		
1446	ಸಿದ್ದಾ, ಡಿಟೋ	5 ಅಡಿ 5 ಅಂಗುಲ ಕಂಣುಬ್ಬಿನಮೇಲೆ ವಂದು ಅಂಗುಲದಲ್ಲಿ ಕಲೆಇಧೆ. ಯಡದ ದವಡೇಮೂಲೆ ಬಿಳಿವಂದು ಕಲೆಇಧೆ. ಯರಡು ತೊಡೆಗಳಮೇಲೂ ಅನೇಕಕಲೆಗಳುಇಧೆ. ಕಪ್ಪುವರ್ಣ ಕೂದಲುಕಪ್ಪು ಕಂಣುಕಪ್ಪು	ಈರಾ ಅಂಚವಾಡಿ	ಡಿಟೋ	ಡಿಟೋ	ಡಿಟೋ		
1447	ಪುಟ್ಟುಮಾದಾ ಡಿಟೋ	5 ಅಡಿ $4\frac{3}{4}$ ಅಂಗುಲ ಯಡಕಂಣುಬಿನ ವಂದು ಅಂಗುಲದಮೇಲೆ ವಂದುಗುಂಡಾದ ಕಲೆಇಧೆ. 2 ಹಳ್ಳಿಕೆನ್ನೆಯಮೇಲೂ ಸುಟ್ಟ ಕಲೆಗಳುಇಧೆ. ಶಾಮಲವರ್ಣ ಬಿಳೀಕೂದಲು ಪರೇಕಂಣು	ಕುನ್ನಾ ಚಾಮರಾಜನಗರ.	ಡಿಟೋ	ಡಿಟೋ	ಡಿಟೋ		
4703	ತಿಮ್ಮಾ ಬೆಸ್ತರವಾ, ಮಜಾರಿದಾರ ಅರಕಲಗೂಡು ತಾಲ್ಲೂಕು.	5 ಅಡಿ 2 ಅಂಗುಲ ಮೂಗಿನ ಕಂಬದ ಮೇಲೆ ವಂದು ಕಲೆ ಯಿಧೆ ಬಲಭುಜದ ಮೇಲೆ ಚನ್ನಾಗಿ ಕಾಣುವಂತೆ 2 ಅಂಗುಲ ಪ್ರಮಾಣ ವಂದು ಕಲೆ ಇಧೆ, ಯಡದ ಮೊಲೆಯ 1 ಅಂಗುಲದ ಮೇಲೆ 1 ಅಂಗುಲದ	ಹನುಮಾ ಅರಕಲಗೂಡು.	5 ತಿಂಗಳು ಕಠಿಣ ಖೈದು ಕಳವಿಗಾಗಿ ತಾರೀಖು 19ನೇ ಮಾರ್ಚೆ ಫಿಬ್ರವರೀ ಸರ್ 1876ನೇ ಇಸವಿ ಹುಣುಸೂರು ಸಬ್ ಅ॥ ಕಮ್ಮಿಷನರ ಕೋರ್ಟು ಕೇಸ್ ನಂಬರು 21ನೇ ಸರ್ 1876ನೇ ಇಸವಿ.	ತಾರೀಖು 19ನೇ ಜುಲೈ ಸರ್ 1876ನೇ ಇಸವೀ.	ಇಲ್ಲ.		

ಯಾವಜೈಲಿನಿಂದಖುಲಾಸೇವಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಶೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
			ಕಲೆ ಯಿಧೆ, ಬಲಧ ಮೊಲೆಯ ಪಕ್ಕದಲ್ಲಿ 1 ಅಂಗುಲ ಪ್ರಮಾಣದ 2 ಕಲೆ ಇಧೆ, ಶಾಮಲವರ್ಣ ಕಪ್ಪುಕೂದಲು, ಕಣ್ಣು ಕಪ್ಪಾಗಿ ಯಿಧೆ.						
ಮೈಸೂರು.	4894	ಹೊಂಬಾ, ಬಲಗೈ ಜಾತಿ, ಮಜಾರೀದಾರ ಕೇತನಹಳ್ಳಿ, ಮೈಸೂರು.	5 ಅಡಿ 2 ಅಂಗುಲ ಬಲದ ಗಡ್ಡದ ಬಳಿ ವಂದು ಕಲೆ ಇಧೆ, ಯಡದ ಗಡ್ಡದಬಳಿ ವಂದು ಪುಲುಪುರೀ ಕಾಯಿ ಯಿಧೆ, ಬಲದ ಕಾಲಿನ ಮುಂಭಾಗದ ಮೇಲೆ ವಂದು ಮಚೆ ಇಧೆ ಕಾಲುಬೆರಳುಗಳು ಪುಗುರುಗಳೆಲ್ಲ ಗಾಯದ ಕಲೆ ಇಧೆ, ಶಾಮಲವರ್ಣ ಕೂದಲು ಕಪ್ಪು ಕಣ್ಣು ಕಪ್ಪು.	ಕೆಂಪಿ.	7 ದಿವಸ ಕಠಿಣ ಖೈದು ಕಳವಿಗಾಗಿ ತಾರೀಖು 12ನೇ ಜುಲೈ ಸರ್ 1876ನೇ ಇಸವೀ ಮೈಸೂರು ಡಿ॥ ಡಿ॥ ಕಮ್ಮಿಶನರ್ ಕೋರ್ಟಿನಿಂದ ಕೇಸ ನಂಬರು 7ನೇ ಸರ್ 1876ನೇ ಇಸವಿ.	19ನೇ ಜುಲೈ 1876ನೇ ಇಸವಿ.	ಇಲ್ಲ.		J. Houston, M. D., *Supt. of Jail.*
ಚಿತ್ರದುರ್ಗ.	231	ಜೊಟ್ಟಕೆಂಚೆ, ಬ್ಯಾಡರು, ಕೂಲಿ, ಹೊಸದುರ್ಗತಾಲ್ಲೂಕು ಬಣಶಿಹಳ್ಳಿ.	ಎಣೆಕೆಂಪು, ಉದ್ದ ಮುಖ, ಹುಳುಕು ಮುಖ, ಯರಡು ಕೈಗಳೂ ಸೊಟ್ಟಸೊಟ್ಟಾಗಿ ಯಿಧೆ. ವುದ್ದ 5—5.	ಕೆಂಚಾ, ಹೊಸದುರ್ಗತಾಲ್ಲೂಕು ಬಣಶಿಹಳ್ಳಿ.	ಚಾಲ್ತೀ ಇಸವೀ ಜುಲೈ 11 ರಲಾಗಾಯತು 10 ದಿವಸ ಸಾದಾ ಖೈದ್ 2 ರೂಪಾಯಿ ಜುರ್ಮಾನೆ ಕೊಡದಿದ್ದರೆ, ಜಾಸ್ತೀ 3 ದಿವಸ ಬದಸ್ತೂರ ಸಜಾ, ಅನುಭವಿಸಬೇಕೆಂತ ಹೊಸದುರ್ಗತಾಲ್ಲೂಕು ಸಬ್ ಮಾಜಿಸ್ಟ್ರೇಟ ಕೋರ್ಟು ಸರ್ 1876ನೇ ಇಸವೀ ಕ್ರಿಮಿನಲ್ ನಂಬರ್ 41ನೇ ಮೊಕದ್ದಮೇಯಲ್ಲಿ ಇಂ॥ ಪೆ॥ ಕೋ॥ 379ನೇ ಸೆಕ್ಷನ್ ಪ್ರಕಾರ.	24-7-76	ಡಿಟೋ	ಜುರ್ಮಾನೆ 2 ರೂಪಾಯಿ ವಸೂಲ್ ಬರದೇ ಹೋದಕಾರಣ ಜುಲೈ ತಾರೀಖು 24 ರಲ್ಲು ಖುಲಾಸೇ ಆಗಿದ್ದಾನೆ.	

246

232	ಕಿದ್ದಾ, ಹೊಲೇರು, ಕೂಲಿ, ಹೊಸದುರ್ಗ ತಾಲ್ಲೂಕು ಬಣಶೆಹಳ್ಳಿ.	ಎಣೆಕೆಂಪು, ಗುಂಡುಮುಖ, ಬಲ ಮೊಲೇ ಕೆಳಗೆ ಕಡ್ಡಿಧಪ್ಪವಾಗಿ 3 ಅಂಗುಲ ಪುದ್ದವಾಗಿ ಒಂದು ಹುಣ್ಣಿನ ಕಲೆ ಯಿಧೆ, ಯಡಮೊಳಕಾಲು ಗೆಣ್ಣಿನ ಮೇಲೆ ಕಾಚಿನಗಲ ಒಂದು ಹುಣ್ಣಿನ ಕಲೆ ಯಿಧೆ. ವುದ್ದ 5—5.	ಈರಮಲ್ಲಪ್ಪ, ಹೊಸದುರ್ಗ ತಾಲ್ಲೂಕು ಬಣಶೆಹಳ್ಳಿ.	ಡಿಟೋ	21-7-76	ಡಿಟೋ	ಜುರ್ಮಾನೆ 2 ರೂಪಾಯಿ ವಸೂಲ್ ಬಂದ ಕಾರಣ ಜೂಲೈ ತಾರೀಖು 21ರಲ್ಲು ಖುಳಾಸೆ ಆಗಿ ಯಿದ್ದಾನೆ.
105	ಯಲ್ಲಗಾ, ಮಾದಿಗರು, ಜಾತಿ ಕಸಬು ಚಿತ್ರದುರ್ಗ ತಾಲ್ಲೂಕು ತೊರೇ ಬೈಲು.	ಕರೀವರ್ಣ, ವುದ್ದಮುಖ, ಮುಳ್ಳುಮುಖ, ಬಲಭುಜದ ಮೇಲೆ 5 ಕಡೆ ಬೇರೆ ಬೇರೆಯಾಗಿ ಮಚ್ಚೆ ಯಿಧೆ ವುದ್ದ 5—0.	ಹನುಮಾ, ಚಿತ್ರದುರ್ಗ ತಾಲ್ಲೂಕು ತೊರೇ ಬೈಲು.	ಅ॥ ಕಮ್ಮಿಷನರ ಕೋರ್ಟು ಸರ 1876ನೇ ಇಸವೀ ಕ್ರಿಮಿನಲ್ ನಂ. 39ನೇ ಮೊಕದ್ದಮಾದಲ್ಲಿ ಇಂ॥ ಪಿ॥ ಕೋ॥ 461ನೇ ಸೆಕ್ಷನ ಪ್ರಕಾರ ಜಾಲ್ತೀ ಇಸವಿ ಏಪ್ರಲ್ ತಾರೀಖು 29ರ ಲಗಾಯತು 3 ತಿಂಗಳ ಕಠಿಣ ಸಜಾ, 10 ರೂಪಾಯಿ ಜುರ್ಮಾನೆ ಕೊಡದಿದ್ದರೆ, ಜಾಸ್ತೀ ಬದಸ್ತೂರ 1 ತಿಂಗಳು ಸಜಾ, ಅನುಭವಿಸಬೇಕೆಂತಾ.	29-7-76	ಡಿಟೋ	ಜುರ್ಮಾನೆ 10 ರೂಪಾಯಿ ವಸೂಲ್ ಬಂದಕಾರಣ ಜಾಸ್ತೀ ಸಜಾ ವಜಾ ಮಾಡಿ ಏಕ ಸಜಾ ವಾಯಿದೆ ಪೂರೈಸಿ ಜುಲೈ 29 ರಲ್ಲು ಖುಲಾಸೆ ಆಗಿದ್ದಾನೆ.
174	ಹಯಾತ್, ಮುಸಲ್ಮಾನ್, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ, ಕೂಲಿ,	ಕೆಂಪುವರ್ಣ ವುದ್ದಮುಖ, ಬಲರಟ್ಟೆ ಮೇಲೆ ಕಾಚಿನಗಲ ಒಂದು ಸುಟ್ಟಕಲೆ ಯಿಧೆ ಯಡಮುಂಗೈ ಮೇಲೆ ಕಾಚಿನಗಲ ಒಂದು ಹುಣ್ಣಿನ ಕಲೆ ಯಿಧೆ. 2 ಕಂಕುಳಗಳ ಸೋಗೇಯಲ್ಲಿ ನಡು ಹುಬ್ಬಿನಲ್ಲಿ ಸಹ ತೊಗರೀಬೇಳೆ ಅಗಲ ಸುಟ್ಟ ಕಲೆಗಳು ಯಿಧೆ. ವುದ್ದ 5—8.	ಹುಸೇನಸಾಬ್, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಜಾಲ್ತೀ ಇಸವಿ ಜೂನ 14 ರ ಲಗಾಯತು 1 ತಿಂಗಳು ಕಠಿಣ ಸಜಾ, ಅನುಭವಿಸ ಬೇಕೆಂತಾ ಹಿರಿಯೂರು ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ ಕೋರ್ಟು ಸರ 1876ನೇ ಇಸವೀ ಕ್ರಿಮಿನಲ್ ನಂ. 37ನೇ ಮೊಕದ್ದಮಾದಲ್ಲಿ ಇಂ॥ ಪಿ॥ ಕೋ॥ 379ನೇ ಸೆಕ್ಷನಪ್ರಕಾರ.	14-7-76	ಡಿಟೋ	
175	ರಾಮ, ಬ್ಯಾಡರು, ಕೂಲಿ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಯಣೆಕೆಂಪು, ವುದ್ದಮುಖ, ಬಲಮೂಗಿನ ಮೇಲೆ ಹೆಸರುಕಾಳು ಧಪ್ಪ ಒಂದು ನರಹುಲಿ ಯಿಧೆ, ಹಣೇ ಮೇಲೆ ರಾಗೀಕಾಳು ಧಪ್ಪ ಒಂದು ನರಹುಲಿ ಯಿಧೆ. ವುದ್ದ 5–6.	ತಿಪ್ಪಯ್ಯ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಡಿಟೋ	ಡಿಟೋ	ಡಿಟೋ	-

ಯಾವಜೈಲ್‌ನಿಂದ ಖುಲಾಸೇಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರನಲ್ಲಿ ಜನರಲ್ ನಂಬರ.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿ ದ್ದದ್ದು.	ಷರಾ.	ಜೈಲ್ ಸೂಪರ್ರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಚಿತ್ರದುರ್ಗ.	176	ಸಣ್ಣಗಾ, ಮಾದಿಗರು, ಕೂಲಿ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಕರೀವರ್ಣ, ವೃದ್ಧಮುಖ, ನಡು ಬೆನ್ನಿನ ಮೇಲೆ ಕಾಸಿನಗಲ ಒಂದು ಸುಟ್ಟಕಲೆ ಯಿರುಥೆ, ಹೆಕ್ಕತ್ತಿನ ಮೇಲೆ ಕಾಸಿನಗಲ ಒಂದು ಸುಟ್ಟಕಲೆ ಯಿಥೆ, ಯಡಮೊಳಕಾಲು ಚಿಪ್ಪಿನ ಮೇಲೆ ದುಗ್ಗಾಣೀ ಅಗಲ, ಒಂದು ಹುಣ್ಣಿನ ಕಲೆ ಯಿಥೆ. ವೃದ್ಧ 5—4.	ಸುಬ್ಬುಗ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಚಾಲ್ತೀ ಇಸವೀ ಜೂ 14ರ ಲಾ॥ 1ವೆಂದು ತಿಂಗಳು ಕಠಿಣ ಸಜಾ ಅನುಭವಿಸಬೇಕೆಂತ ಹಿರಿಯೂರು ತಾ॥ 3ನೇಕ್ಲಾಸ ಮಾಜಿಸ್ಟ್ರೇಟಕೋರ್ಟು 1876ನೇ ಇಸವೀ ಕ್ರಿಮಿನಲ್ 37ನೆ ಮೊಕದ್ದಮಾದಲ್ಲಿ ಇಂ॥ ಪೀ॥ ಕೋ॥ 379ನೇ ಸೆಕ್ಷಪ್ರಕಾರ.	14-7-76			
	177	ಕದರ, ಮಾದಿಗ, ಕೂಲಿ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಯಣೆಕೆಂಪು, ವೃದ್ಧಮುಖ, ಯಡಕೈ ಕಟ್ಟೇಮೇಲೆ ಅವರೇಬೇಳೇ ಅಗಲ ಒಂದು ಕರೇಮಚ್ಚೆಯಿಥೆ, ಯರಡು ಕಣ್ಣುಗಳ ಕೆಳಗೆ ಅವರೇಬೇಳೇ ಅಗಲ ಒಂದು ಕಲೆಗಳು ಯಿಥೆ. ವೃದ್ಧ 5—7.	ಹೊಟ್ಟೆಗಾ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಡಿಟೋ	ಡಿಟೋ	ಡಿಟೋ		
	178	ನರಸಾ, ಮಾದಿಗರು, ಕೂಲಿ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಯಣೆಕೆಂಪು, ಗುಂಡುಮುಖ, ಯಡಮುಂಗೈ ಮೇಲೆ ಕಾಸಿನಗಲ ಒಂದು ಸುಟ್ಟಕಲೆ ಯಿಥೆ. ಬಲರಟ್ಟೇಮೇಲೆ ಕಾಸಿನಗಲ ಒಂದು ಸುಟ್ಟ ಕಲೆಯಿಥೆ, ವೃದ್ಧ 5—6	ಕದರ, ಹಿರಿಯೂರು ತಾಲ್ಲೂಕು ಸೊರಗಾನಹಳ್ಳಿ.	ಚಾಲ್ತೀ ಇಸವೀ ಜೂ 14 ರ ಲಗಾಯತು 1 ತಿಂಗಳು ಕಠಿಣ ಸಜಾ, ಅನುಭವಿಸ ಬೇಕೆಂತ ಹಿರಿಯೂರು ತಾಲ್ಲೂಕು ಸಬ್ ಮಾಜಿಸ್ಟ್ರೇಟ್ ಕೋರ್ಟು 1876ನೇ ಇಸವೀ ಕ್ರಿಮಿನಲ್ ನಂ ಮೊಕದ್ದಮೇಯಲ್ಲಿ ಇಂ॥ ಪೀ॥ ಕೋ॥ 379ನೇ ಸೆಕ್ಷಪ್ರಕಾರ.	14-7-76			

248

179	ಹನುಮ, ವೊಡಿಗ ಕೂಲಿ, ಹಿರಿಯೂರು ತಾಲ್ಲೂಕು ಸೊರಗಾನ ಹಳ್ಳಿ.	ಕರೇವರ್ಣ ವೃದ್ಧಮುಖ, ಕತ್ತಿನ ಮೇಲೆ ತೋಗರೀಬೇಳೆ ಅಗಲ ಒಂದು ನರಹುಲಿ ಯಿಧೆ. ಬಲಕಾಲಿನ ಗೆಣ್ಣಿನ ಮೇಲೆ ಕಾಶಿನ ಗಲ 3 ಸುಟ್ಟ ಕಲೆಗಳು ಯಿಧೆ. ವುದ್ದ 5—6	ಈರ ಡಿಟೋ, ಸೊರಗಾನಹಳ್ಳಿ.	ಡಿಟೋ	ಡಿಟೋ			
156	ಲಚ್ಚಮ, ದಾವಣಗೆರೇ ತಾಲ್ಲೂಕು ನಾಕಗನಹಳ್ಳಿ ಲಂಬಾಣಿ ಕೂಲಿ	ಕೆಂಪುವರ್ಣ ವೃದ್ಧಮುಖ, ಯಡಭುಜದಮೇಲೆ ಕಾಶಿನಗಲ ವಂದು ಹುಣ್ಣಿನಕಲೆಯಿಧೆ, ಬಲಗಡೆ ಮಿಾನುಖಂಡದಮೇಲೆ ತೊಗರೀಬ್ಯಾಳೇಅಗಲ ವಂದು ಹುಣ್ಣಿನಕಲೆಇಧೆ, ವುದ್ದ 5—0	ಲಗಗೀ ದಾವಣಗೆರೇ ತಾಲ್ಲೂಕು ನಾಕಗನಹಳ್ಳಿ	ದಾವಣಗೆರೆ ತಾಲ್ಲೂಕು 3ನೇ ಕ್ಲಾಜ್ ಮಾಜಿಸ್ಟ್ರೇಟ ಕೋರ್ಟು ಸರ್ಕ 1876ನೇ ಇಸವಿ ಕ್ರಿಮಿನಲ್ ನಂಬರ 9ನೇ ಮೊಕದ್ದಮೆಯಲ್ಲಿ ಚಾಲ್ತೀ ಇಸವಿ ಜೂನ ತಾರೀಖು 7ರ ಲಗಾಇತು 30 ದಿವಸ ಕಠಿಣ ಸಜಾ ಅನುಭವಿಸಬೇಕೆಂತ ಇ॥೦ ಪೆ॥ ಕೋ॥ 379ನೇ ಸೆಕ್ಷನ ಪ್ರಕಾರ.	7—7—76	..		
111	ಕೃಷ್ಣಾಚಾರಿ, ಹರಿಹರ, ಮಾಧ್ವಬ್ರಾಹ್ಮಣ, ಭಿಕ್ಷ,	ಕರೇವರ್ಣ ವೃದ್ಧಮುಖ, ಹಣೇಮೇಲೆ ಕಾಶಿನಗಲ ವಂದು ಹುಣ್ಣಿ ನಕಲೆಇಧೆ ಬಲಕಣ್ಣುಕೆಳಗೆ ಸೂಜಿಯಲ್ಲಿ ಸುಟ್ಟದ್ದು ವಂದು ಕಲೆಇಧೆ, ಯಡಪಕ್ಕೆಮೇಲೆ 3 ಅಂಗುಲ ವುದ್ದ ವಂದೂವರೆ ಅಂಗುಲ ಅಗಲವುಳ್ಳ ವಂದು ಹುಣ್ಣಿನ ಕಲೆಇಧೆ, ವುದ್ದ 5—5	ರಾಘವೇಂದ್ರಾಚಾರೀ ದಾವಣಗೆರೇ ತಾಲ್ಲೂಕು ಹರಿಹರ.	ಚಾಲ್ತೀ ಇಸವಿ ಮೇ ತಾರೀಖು 9ರ ಲಗಾಯತು 2 ತಿಂಗಳು ಕಠಿಣ ಸಜಾ ಅನುಭವಿಸಬೇಕೆಂದು ಚಿತ್ರದುರ್ಗ ಡಿಸ್ಟ್ರಿಕ್ಟ ಡೆಪ್ಯುಟಿಕಮ್ಮಿಷನರ ಕೋರ್ಟು 1876ನೇ ಇಸವಿ ಕ್ರಿಮಿನಲ್ ನಂ. 3ನೇ ಮೊಕದ್ದಮೇಲಿ ಇಂ॥ ಪೆ॥ ಕೋ॥ 447ನೇ ಸೆಕ್ಷನ ಪ್ರಕಾರ.	8—7—76	..	ಚಾಲ್ತೀ ಇಸವಿ ಜುಲೈ ತಾರೀಖು 9ರಲ್ಲು ಖುಲಾಸೆ ಆಗಬೇಕು, ಆದಿಸ ಭಾನುವಾರವಾದ್ದರಿಂದ ತಾ॥ 8ನೇ ಸಾಯಂಕಾಲಕ್ಕೆ ಖುಲಾಸೆ ಆಗಿದ್ದಾನೆ	
118	ಬೋರ, ಚಿತ್ರದುರ್ಗ ತಾಲ್ಲೂಕು ಹಳೆಯೂರು, ಬ್ಯಾಡರು ಕೂಲಿ.	ಯಣೆಕೆಂಪು ವೃದ್ಧಮುಖ, ಬಲತೊಡೇಮೇಲೆ ದುಗ್ಗಾಣೀಅಗಲ ವಂದು ಹುಣ್ಣಿನ ಕಲೆಇಧೆ, ವುದ್ದ 5—9	ದೊಡ್ಡಗಾ, ಚಿತ್ರದುರ್ಗ ತಾಲ್ಲೂಕು ಹಳೆಯೂರು.	ಚಾಲ್ತೀ ಇಸವಿ ಮೇ 26ರ ಲಗಾಯತು ತಕಸೀರು 2ಕ್ಕೆ 30 ದಿವಸ ಕಠಿಣ ಸಜಾ 10 ರೂಪಾಯಿ ಜುರ್ಮಾನೆ ಕೊಡದೇಯಿದ್ದರೆ ಜಾಸ್ತೀ ಬದಸ್ತೂರು 14 ದಿವಸಕಠಿಣ ಸಜಾ ಅನುಭವಿಸಬೇಕೆಂದು ಚಿತ್ರದುರ್ಗ ತಾಲ್ಲೂಕು 3ನೇ ಕ್ಲಾಜ್ ಮಾಜಿಸ್ಟ್ರೇಟ ಕೋರ್ಟು 1876ನೇ ಇಸವಿ ಕ್ರಿ	8—7—76	..	ಡಿಟೋ	

ಯಾವ ಜಿಲ್ಲೆಯಿಂದ ಬಿಡುಗಡೆಯಾದ್ದು.	ಜೈಲ್ ರಿಜಿಸ್ಟರ್ ನಂಬರು.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಜಹರ.	ತಂದೇಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ,ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಬಿಡುಗಡೆ ತಾರೀಖು.	[illegible]	ಷರಾ.	[illegible]
1	2	3	4	5	6	7	8	9	10
ಚಿತ್ರದುರ್ಗ.					ಮಿನಲ್ ನಂ. 77ನೇ ಮೊಕದ್ದಮೇಲಿ ಇಂ॥ಪೆ॥ ಕೋ॥ 379ನೇ ಸೆಕ್ಷನ್ ಪ್ರಕಾರ.				S. VENKAT VARDAIENGAR, *Officer in charge of Jail.*
	120	ಪರಸಾ, ಚಿತ್ರದುರ್ಗ ತಾಲ್ಲೂಕು ಹಳೆಯೂರು ಬ್ಯಾಡರು ಕೂಲಿ,	ಯಣೆಕೆಂಪು ವುದ್ದ ಮುಖ, ಬಲಕಯ್ಯಿಹಸ್ತ ಮೋಟಾಗಿ ಇದೆ, ವುದ್ದ 5—8	ಭರಮ, ಚಿತ್ರದುರ್ಗ ತಾಲ್ಲೂಕು ಹಳೆಯೂರು,	ಡಿಟೋ	8—7—76	..	ಡಿಟೋ	
	123	ಪಾಪ, ಚಿತ್ರದುರ್ಗ ತಾಲ್ಲೂಕು ಹಳೆಯೂರು, ಬ್ಯಾಡರು ಜಿರಾಯತು.	ಕೆಂಪುವರ್ಣ,ವುದ್ದ ಮುಖ,ಬಲರಟ್ಟೇಮೇಲೆ ತೊಗರೀಬ್ಯಾಳೇ ಅಗಲ ವಂದು ಹುಂಣಿನ ಕಲೆಯಿದೆ; ಬನ್ನಿನ ಮೇಲೆ ಕಾಸಗಲ ವಂದು ಹುಂಣಿನ ಕಲೆ ಯಿಧೆ, ವುದ್ದ 5—5.	ಪಾಪಮುತ್ತಿ, ಚಿತ್ರದುರ್ಗ ತಾಲ್ಲೂಕು ಹಳೆಯೂರು.	ಚಾಲ್ತೀ ಇಸವಿ ಮೇ ತಾ॥ 26ರಲ್ಲಿ ತಕಸೀರ್ 2ಕ್ಕೆ 30 ದಿವಸ ಕಠಿಣ ಸಜಾ 10 ರೂಪಾಯಿ ಜುರ್ಮಾನೆ ಕೊಡದಿದ್ದರೆ ಜಾಸ್ತೀ ಬದಸ್ತೂರ 14 ದಿವಸ ಕಠಿಣ ಸಜಾ ಅನುಭವಿಸಬೇಕೆಂದು ಚಿತ್ರದುರ್ಗ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರ ಕೋರ್ಟು ಸರ್ 1876ನೇ ಇಸವಿ ಕ್ರಿಮಿನಲ್ ನಂ. 77ನೇ ಮೊಕದ್ದಮೆಯಲ್ಲಿ ಇಂ॥ ಪೆ॥ ಕೋ॥ 379ನೇ ಸೆಕ್ಷನ್ ಪ್ರಕಾರ.	8-7-76	..	ಚಾಲ್ತೀ ಇಸವಿ ಜುಲೈ 9ರಲ್ಲು ಖುಲಾಸೇ ಆಗಬೇಕು, ಆದಿವಸ ಭಾನುವಾರವಾದ್ದರಿಂದ ತಾ॥ 8ನೇ ಸಾಯಿಂಕಾಲಕ್ಕೆ ಖುಲಾಸೇ ಆಗಿದ್ದಾನೆ,	
	195	ರಂಗಾ, ಹಿರಿಯೂರ್ ತಾಲ್ಲೂಕು ಕಸಬಾ, ಕಲ್ಲುವಡ್ಡರು ಕೂಲಿ.	ಕರೀವರ್ಣ ವುದ್ದ ಮುಖ 2 ಭುಜದಮೇಲೆ ಹಚ್ಚೆ ಯಿದೆ, ಬಲ ಮೊಳಕಯ್ಯಿ ಮೇಲೆ ವಂದು ಕಾಶಿನಗಲ ಹುಂಣಿನ ಕಲೆ ವಂದು ಯಿದೆ, ವುದ್ದ 5—9.	ಲಚ್ಮಾ ಭೋಯಿ, ಕಸಬಾ ಹಿರಿಯೂರು.	ಚಾಲ್ತೀ ಇಸವಿ ಜೂನ್ ತಾರೀಖು 24ರ ಲಾಗಾಯತು 15 ದಿವಸ ಕಠಿಣ ಸಜಾ ಅನುಭವಿಸ ಬೇಕೆಂದು ಹಿರಿಯೂರು ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟು 1876ನೇ ಇಸವಿ ಕ್ರಿಮಿನಲ್ ನಂ॥ 38ನೇ ಮೊಕದ್ದಮೆಯಲ್ಲಿ ಇಂ॥ಪೆ॥ಕೋ॥ 379ನೇ ಸೆಕ್ಷನ್ ಪ್ರಕಾರ.	8-7-76	..	ಡಿಟೋ	

ಕೊಡಗು.

569	ಯರ್ಲಾರ್ರನ್ಸ್, ಈ ಸ್ಟಿಂಡ್ಯೆಕ್, ಕಾಫೀತೋಟದ ವೋವರ್ಸಿ, ಕನ್ನ್ಯಾನೂರು, ಬಳಿ ತಲಚೇರಿ ವಸೂಸ್ತು.	ಮೊಖದಲ್ಲಿ ಶಿಡುಬಿನಕಲೆಗಳು ಚನ್ನಾಗಿಧೆ ಯಡದ ತೋಳುಕ್ಕೆ ವೆಳ್ಗಗಡೆ ವಂದು ಗಾಯವಿಧೆ. ಬಲದಕ್ಕೈ ಸಂಣ ಬೆಟ್ಟುವೇಲೆ ವಂದು ಗಾಯಯಿಧೆ ಯೆಣೆಕೆಂಪುವರ್ನ 5 ಅಡಿ 8 ಇಂಚು ಯತ್ರ ಇದ್ಧಾನೆ.	ಎಫ್ ಲಾರ್ರನ್ಸ್.	ವಿಶ್ವಾಸಘಾತಕತೆ ಮಾಡಿದ್ದಕ್ಕೋಸ್ಕರ ಕೊ॥ ಫ॥ ಅ॥ ಸೂಪರ್ರಿಂಟೆಂಡೆಂಟ ಸಾಹೆಬರವರ ಸನ 1874ನೇ ಇಸವಿ ಕ್ರಿಮಿನಲ್ ಕೇ॥ ನಂಬರ್ 50ರ ಫೈಸಲ್‌ಮೇರೆ 1874ನೇ ಇಸವಿ ಜುಲೈ ತಾರೀಖು 25ರ ಲಾಗಾಯುತಿನಿಂದ 2 ವರುಷ ಕಠಿಣ ಖೈದು.	25ನೇ ಜುಲೈ ಸನ 1876ನೇ ಇಸವಿ.	ಇಲ್ಲ.	
200	ಯಂಗಟ, ಕೊಡಗು ಡಿಸ್ಟ್ರಿಕ್ಟ್ಟು ಏಳುಸಾವಿರಸೀಮೇ ತಾಲ್ಲೂಕು ಬೆಳಹಾರಹೋಬ್ಳಿ, ಹಜಾಮಜಾತಿ, ಕೂಲಿ ಕಸಬು.	ಕಂಣು ಸ್ವಲ್ಪಅಧೋ ದೃಷ್ಟಿ ಆಗಿಇಧೆ ಬಲದಕ್ಕೈತೋಳುಮೇಲೆ ವಂದು ಗಾಯವಿಧೆ ಯೆಣೆಕೆಂಪುವರ್ಣ 5 ಅಡಿ 10 ಇಂಚು ಯತ್ರ ಇದ್ಧಾನೆ.	ಕೋನ್ನಾರಿ.	ಕನ್ನಹಾಕಿದ್ದಕ್ಕೋಸ್ಕರ ಮತ್ತು ಕಳವಿನ ಮಾಲ್ ತೆಗದುಕೊಂಡದ್ದಕ್ಕೆ ಸಹ ಕೊಡಗು ಸೆಷನ್ ಜಡ್ಜೀರವರ ಕೋರ್ಟು 1871ನೇ ಇಸವಿ ಕ್ರಿ॥ ಕೇಸ್‌ನಂಬರ್ 4-6-7ರ ಫೈಸಲ್‌ಮೇರೆ ಸನ 1871ನೇ ಇಸವಿ ಜುಲೈ ತಾರೀಖು 28ರ ಲಾಗಾಯತಿನಿಂದ 5 ವರುಷ ಕಠಿಣ ಖೈದು.	28ನೇ ಜುಲೈ ಸನ 1876ನೇ ಇಸವಿ.	ಇಲ್ಲ.	
641	ವೆಂಕ, ತೆಲುಗುಬಣಜಿಗ, ವ್ಯಾಪಾರ ಕಸಬು, ಮಡಿಕೆರೆ ಮಹದೇವನಪ್ಯಾಟೇ ವಾಸಸ್ತು.	ಮೊಖದಲ್ಲಿ ಸಿಡುಬಿನಕಲೆಗಳು ಗುಂಡಿಯಾಗಿ ಇಧೆ, ಹಳ್ಳಬಿದ್ದಕಂಣು ಯಡದ ಹೆಗಲು ಮೊಳ್ಕೇಮೇಲೆ 1 ಮಚ್ಚೆ ಇಧೆ, ಹಿಂದುಗಡೆ 3 ಕಲೆಗಳುಇಧೆ, ಯಡದಅಂಡಿನಮೇಲೆ ವಂದು ಕಲೆಇಧೆ, ಕಪ್ಪುವರ್ಣ 5 ಅಡಿ ಯತ್ರ.	ರಡ್ಡಿ.	ಕೊಡಗು ಫ॥ ಅಸಿಸ್ಟೆಂಟ ಸೂಪರ್ರಿಂಟೆಂಡೆಂಟ ಸಾಹೆಬರವರ ಸನ 1875ನೇ ಇಸವಿ ಕೇಸ್ ನಂಬರ್ 11ರ ಫೈಸಲ್‌ಮೇರೆ ಕಳವುಮಾಡಿದ್ದಕ್ಕಾಗಿ ಸನ 1875ನೇ ಇಸವಿ ಜನವರೀತಾರೀಖು 20ರ ಲಾಗಾಯತಿನಿಂದ 18 ತಿಂಗಳುಕಠಿಣಖೈದುಸಜಾ·	20ನೇ ಜುಲೈ ಸನ 1876ನೇ ಇಸವಿ.	ಇಲ್ಲ.	

E. Shaw,
Supt., in charge of Jail.

Mysore Government Press, Bangalore—1876.

ಮೈಸೂರ ಗೆಜೆಟ್.

ನಂ. 35 ಸರ್ಕಾರದಿಂದ ಫ್ರಾಯಿಷ್ ಆದ್ದು. ಸೇ 1876.

ಬೆಂಗಳೂರು, ಶನಿವಾರ, ಶಪ್ಟಂಬರ ತಾ|| 2, ಸೇ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಫುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟನವರ ಇಸ್ತಿಹಾರ್ ನಾಮೆಗಳು. .. .. ಫುಟ 199—219

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡುಪ್ರಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು; ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು. .. 426—435

3ನೇ ಭಾಗ—ಇಂಡ್ಯ ಗವರ್ನಮೆಂಟನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ್ಧ ಪತ್ರಗಳು.— .. ..

ಸಪ್ಲಿಮೆಂಟ—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ. .. ..

1ನೇ ಭಾ[ಗ].

ಮೈಸೂರು ಚೀಫ್ ಕಮ್ಮಿಷನರವರಿಂದ ಕೊ[ಡೋಣಾ]ದ ಇಸ್ತಿಹಾರ್‌ನಾಮೆಗಳು.

ಜನ[ರಲ್].

ಇಸ್ತಿಹಾರ್ ನಾಮೆ[ಗ]ು.

ನಂ. 179. ತಾರೀಖು 14ನೇ ಆಗಸ್ಟ್ 1876.

ಸರಹದ್ದು ಗುರುತುಗಳನ್ನು ಕಾಪಾಡುವಣ, ವ ದುರಸ್ತುಮಾಡುವಣ, ಈ ವಿಷಯದಲ್ಲಿ 1868ನೇ ಸೆಪಟಂಬರ 26ನೇ ಮರ್ಕ್ಕುಮಿನ ಮೈಸೂರು ಗೆಜೆಟಿನಲ್ಲಿ ಫ್ರಾಯಿಷ್ ಮಾಡೋಣಾದ 12 ವ 13 ಈ ರೂಲ್‌ಸ್ ರದ್ದೀಯಾತೀಯಿಂದ, ಸಕಲಜನಗಳಿಗೂ ತಿಳಿಯುವಬಗ್ಯೆ ಈ ಕೆಳಗೆ ಬರುವ ಪರಿಷ್ಕರಿಸೋಣಾದ ರೂಲ್‌ಸ್ ಪ್ರಕಟಸಲ್ಪಡುತವೆ.

12ನೇ ರೂಲ್.

ಸರ್ಕಾರದ ಬಂಜರ ಜಮೀನುಗಳಿಗೆ ಎಲ್ಲೆ ಗುರುತುಗಳನ್ನು ಹಾಕುವಬಗ್ಗೆ ಬೇಕಾದ ಮೊಬಲಗನ್ನು ಒದಗಿಸುವದಕ್ಕೆ ಡೆಪ್ಯುಟಿ ಕಮ್ಮಿಷನರವರು ಸಾಲೀಯಾನಾ, ಸಾಗುವಳೀಯಿಲ್ಲದ ಸರ್ಕಾರ ಬಂಜರ ಜಮೀನಿನಲ್ಲಿ ಸಾವಿರ ಎಕ್ರೆಗಳಿಗೆ 5 ರೂಪಾಯಿಗಳಿಗಿಂತ ಜಾಸ್ತೀಇಲ್ಲದ ಒಂದು ಮೊಬಲಗನ್ನಾಗಲಿ, ಅಂತಾ ಜಮೀನುಗಳ ಕಾವಲ ಮೇಲೆ ವಸೂಲಾಗಿ ಸರ್ಕಾರಕ್ಕೆ ಜಮೇಬಂದ ಕುಲ ಮೊಬಲಗಿನಲ್ಲಿ ಸೇಕಡಾ 5 ಮೇರೆ ಆಗುವ ಮೊಬಲಗನ್ನಾಗಲಿ ಈ ಪೈಕಿ ಯಾವದು ಹೆಚ್ಚು ಮೊಬಲಗಾಗಿ ಇದ್ದಾಗ್ಯೂ, ಖಜಾನೇಯಿಂದ ಕೊಡುವಂತೆಯೂ, ಅದನ್ನು ಅಂತಾ ಜಮೀನಿನಲ್ಲಿ ಎಲ್ಲೆ ಗುರ್ತುಗಳ ರಿಪೇರೀಬಗ್ಗೆ, ಈ ಕೆಳಗಿನ ನಿಬಂಧನೆಯ 2ನೇ ಕ್ಲಾಜಿನಲ್ಲಿ ನಿಯಮಿಸಲ್ಪಟ್ಟ ಪ್ರಕಾರ ಅಥವಾ ಆಗಿಂದಾಗ್ಯೆ ಅನ್ಯಥಾ ನಿಯಮಿಸಲ್ಪಡುವ ಮೇರೆ ವಿನಿಯೋಗಿಸುವಂತೆಯೂ, ಅಧಿಕಾರ ಕೊಡಲ್ಪಡಬಹುದು.

13ನೇ ರೂಲ್.

ಸರ್ಕಾರ ಬಂಜರ ಜಮೀನಿನಲ್ಲಿ ಎಲ್ಲೆ ಗುರುತುಗಳು ಬಹಳವಾಗಿ ಇರುವ ತಾಲ್ಲೂಕುಗಳೊಳಗೆ ಅಥವಾ ಯಾವ ಕಾರಣದಿಂದಲಾಗಲಿ, ಬಂಜರ ಜಮೀನುಪೈಕಿ ಪ್ರತಿ ಸಾವಿರ ಎಕರೆಗೆ 5 ರೂಪಾಯಿಗಿಂತ ಜಾಸ್ತೀಮೊಬಲಗ ಜರೂರೆಂದು ಕಾಣಬರುವಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಡಿವಿಜನ ಕಮ್ಮಿಷನರವರ ಮಂಜೂರಾತಿಯಮೇಲೆ ಸರ್ಕಾರ ಬಂಜರ ಜಮೀನಿನಲ್ಲಿ ಪ್ರತಿ ಸಾವಿರ ಎಕರೆಗೆ 10 ರೂಪಾಯಿಗಳನ್ನು ಅಥವಾ, ಅಂತಾ ಜಮೀನುಗಳ ಕಾವಲಿನಲ್ಲಿ ಹುಟ್ಟುವಳೀಯಾಗುವ ಮೊಬಲಗ ಪೈಕಿ ಸೇಕಡಾ 10ರೂಪಾಯಿಗಳನ್ನು ಇವುಗಳಪೈಕಿ ಯಾವದು ಹೆಚ್ಚಿದಾಗ್ಯೂ ಕೊಡಬಹುದು.

2ನೇ ಕ್ಲಾಜ—ಸರ್ಕಾರದ ಬಂಜರ ಜಮೀನಿನಲ್ಲಿರುವ ಎಲ್ಲೆಗುರುತುಗಳ ದುರಸ್ತೀಬಗ್ಗೆ ಗೊತ್ತಾಗಿರುವ ಮೊಬಲಗ, ಪ್ರತಿ ಸಂವತ್ಸರ ಜನವರೀ ಗುರ್ರೇಯಲ್ಲಾಗಲಿ, ನಿಯಮಿಸಲ್ಪಡತಕ್ಕ ಇತರ ಯಾವ ದಿನದಲ್ಲಾಗಲಿ ಗ್ರಾಮದ ಪಟೇಲನಿಗೆ ಪಾವತೀ ಮಾಡಲ್ಪಡತಕ್ಕದ್ದು. ಆತನು ಅಂತಾ ಎಲ್ಲೆ ಗುರುತುಗಳನ್ನು ಕ್ರಮವಾಗಿ ಕಾಪಾಡಿಕೊಳ್ಳತಕ್ಕ ಬಗ್ಗೆ ಜವಾಬ್ದಾರನಾಗಿರತಕ್ಕದ್ದು.

3ನೇ ಕ್ಲಾಜ—ಸರ್ಕಾರದ ಬಂಜರ ಜಮೀನಿಗೆ ಆತುಕೊಂಡಿರುವ ಜಮೀನಿನ ಹಿಡುವಳೀದಾರರು ಸರ್ಕಾರದ ಬಂಜರ ಜಮೀನನ್ನೂ ತಮ್ಮ ಜಮೀನನ್ನೂ ವಿಂಗಡಿಸುವ ದರೋಬಸ್ತು ಗುರುತುಗಳನ್ನೂ, ಯುಕ್ತವಾದ ರಿಪೇರೀಯಲ್ಲಿಟ್ಟು ಕಾಪಾಡಿಕೊಳ್ಳುವದಕ್ಕೆ ಜವಾಬ್ದಾರರಾಗಿರುತ್ತಾರೆ. ಮತ್ತು ಗ್ರಾಮಸ್ಥರು ತಮ್ಮ ಗ್ರಾಮಕ್ಕಾಗಿ ಬಿಡಲ್ಪಟ್ಟ ಗೋ ಭೂಮಿಯ ಸರಹದ್ದುಗಳನ್ನೂ ಏರ್ಪಡಿಸುವಂತಾ ದರೋಬಸ್ತು ಗುರುತುಗಳಬಗ್ಗೂ ಬದಸ್ತೂರ ಜವಾಬ್ದಾರರಾಗಿರುತ್ತಾರೆ. ಜಮೀನು ಹಿಡುವಳೀದಾರರಾಗಲಿ. ಗ್ರಾಮಸ್ಥರಾಗಲಿ ಗೋ ಭೂಮಿಗಳಲ್ಲಿ ತಮ್ಮ ಕಾರ್ಯಗಳನ್ನು ನೆರವೇರಿಸಲಿಕ್ಕೇನಾದರೂ ತಪ್ಪಿದಪಕ್ಷಕ್ಕೆ ಜರೂರಾದ ಕೆಲಸಗಳು ಪಟೇಲರಿಂದ ನೆರವೇರಿಸಲ್ಪಟ್ಟು ಅದರ ಲಾಗವಡು ಪ್ರತಿ ಗುರುತಿಗೂ ಎರಡು ಆಣೆಗೆ ಮೀರದಂತೆ ಒಂದು ದರಪ್ರಕಾರ ಮೊಕರರ ಮಾಡತಕ್ಕದ್ದು. ಕುಲ್ಲಾಗವಡು ಗ್ರಾಮದಲಿ ಹಿಡುವಳೀದಾರರದೆಸೆಯಿಂದಲೂ, ಇನಾಂದಾರರದೆಸೆಯಿಂದಲೂ, ಅವರ ಜಮೀನುಗಳ ಸರ್ವೆ ಕಂದಾಯದ ಪರಿಮಾಣದಮೇ[illegible] ರವಾರ ವಸೂಲ ಮಾಡತಕ್ಕದ್ದು.

[illegible]ದ್ಧಿ ಪತ್ರಿಕೆ.

ನಂ. 187. ತಾ[illegible]ನೇ ಆಗಸ್ಟ್ 1876.

ಸನ್ 1870ನೇ ಇಸವಿ 10ನೇ ನಂಬರ ಲ್ಯಾ[illegible]ಕ್ವಿಜಿಷನ ಆಕ್ಟಿನ 6ನೇ ರೂಲ ನಿಬಂಧನೆಗಳನುಸರಿಸಿ ಇದರಿಂದ ಪ್ರಕಟಸಲ್ಪಡುವದೇನಂದರೆ, ಬೆಂಗಳೂರಲ್ಲಿರುವ ಈ ಕೆಳ[illegible] ಜಮೀನು ಬಂದಾನೊಂದು ಸರ್ಕಾರ ಕೆಲಸಕ್ಕಾಗಿ ಅಂದರೆ, ಮೈಸೂರು ರಸ್ತೆಯಲ್ಲಿ ಖಸ್ಸೆ ಮಾರ್ಕೆಟ್ಟಿಗೆ ಪೂರ್ವ ದಿಕ್ಕಿನೊ[illegible]ಗಳು ಮಾರತಕ್ಕ ಒಂದು ಮಾರ್ಕೆಟ್ಟನ್ನು ಕಟ್ಟಿಸುವಬಗ್ಗೆ ಬೇಕಾಗಿರುತ್ತೆ.

ಮೈಸೂರು ರಸ್ತೆಯಲ್ಲಿರುವ ಖಸ್ಸೆ ಮಾರ್ಕೆ[illegible]ಗೆ ಪೂರ್ವದಿಕ್ಕಿನ ಸಮೀಪದಲ್ಲಿ ಇರುವ 65½ ಅಡಿ ಲಾಂಬಿಯೂ 58 ಅಡಿ ರುಂದಿಯೂ ಅಂದರೆ 422 ಗಜಗಳುಳ್ಳ, ಮತ್ತು ಪೂರ್ವಕ್ಕೆ ಖಸ್ಸೆ ಅಬ್ದುಲ ರಹಿಮಾನ ಮನೆಗೆ ಹೋಗುವ ಒಂದು ಸಂದಿ ಪಶ್ಚಿಮಕ್ಕೆ, ಪೆರಿಮೈಯನೆಂಬವನ ತರಕಾರೀ ತೋಟ—ಉತ್ತರಕ್ಕೆ, ಖಸ್ಸೆ ಅಬ್ದುಲ ರಹಿಮಾನ ಮನೆ—ದಕ್ಷಿಣಕ್ಕೆ ಈಗಿನ ಮೀನುಗಳು ಮಾರುವ ಮಾರ್ಕೆಟ.

2. ಸದರೀ ಜಮೀನಿನ ಸ್ಕೆಚ ಪ್ಲಾನ ಯಾನೆ ಕಡಗಟ್ಟಿನ ನಕಷೆಯು, ಬೆಂಗಳೂರು ತಾಲ್ಲೂಕು ಕಚೇರಿಯೊಳಗೆ ಷಹರ ಮ್ಯುನಿಸಿಪಲ ಕಮ್ಮಿಷನ ಆಫೀಸಿನಲ್ಲಿ ನೋಡಲಿಕ್ಕೆ ತಯಾರಾಗಿರುತ್ತೆ.

ನಂ. 188. ತಾರೀಖು 21ನೇ ಆಗಸ್ಟ್ 1876.

ಸಙ 1874ನೇ ಸೆಪಟಂಬರ 21ನೇ ಮರ್‍ಕುಂ 177ನೇ ನಂಬರ ಈ ಆಫಿಸ ಇಸ್ತಿಹಾರ್‍ನಾಮೆಯನ್ನು ಅನುಸರಿಸಿ ಪ್ರಕಟಿಸಲ್ಪಡತಕ್ಕದ್ದೆಂದು ಚೀಫ್ ಕಮ್ಮಿಷನರವರು ಅಪ್ಪಣೀ ಕೊಡಿಸುವದೇನಂದರೆ, ಸರಾರ್ ನವುಕರರು, ಜಾಯಿಂಟ ಸ್ಟಾಕ್ ಯಾ ಇತರ ಕಂಪೆನಿಗಳಲ್ಲಿ ತಮಗಿರುವ ಸಂಬಂಧವನ್ನು ಉಳಿಸಿಕೊಳ್ಳ ಕೂಡದೆಂದು ನಿಷೇಧಿಸುವ ನಿಬಂಧನೆಯು, ಅಂಥಾ ಬ್ಯಾಂಕ್‌ಗಳ ಕೆಲಸಗಳು ಯಾವ ಡಿಸ್ಟ್ರಿಕ್ಟಿನಲ್ಲಿ ನಡೆಯುತ್ತವೋ ಆ ಡಿಸ್ಟ್ರಿಕ್ಟಿನಲ್ಲಿ ಉದ್ಯೋಗವುಳ್ಳ ಸರ್ಕಾರ್ ನವುಕರಿಂದ ಬ್ಯಾಂಕ್‌ಗಳ ಹಿಸ್ಸೆಗಳಲ್ಲಿ ಹಣ ಹಾಕಿ ಇರುವಂತಾದ್ದಕ್ಕೆ ಸಹ ಸಂಬಂಧಿಸುತ್ತೆ.

1874ನೇ ಸೆಪಟಂಬರ 26ನೇ ಮರ್‍ಕುಂ ಮೈಸೂರು ಗೆಜೆಟ್ 240ನೇ ಪುಟದಲ್ಲಿ ಪ್ರಕಟಿಸಲ್ಪಟ್ಟದ್ದು.

ನಂ. 189. ತಾರೀಖು 25ನೇ ಆಗಸ್ಟ್ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ರಾಜ್ಯ ಭಾರದ ಕೆಲಸಗಳಿಗೋಸ್ಕರ ಈ ಕೆಳಗೆ ನಮೂದಿಶಿರುವ ಪ್ರಕಾರ ಕೆಲವು ಗ್ರಾಮಗಳ ವಿನಾ, ಮಾಗಡೀ ತಾಲ್ಲೂಕಿಗೆ ಶೇರಿದ ಬಿಡದಿ ಹೋಬಳಿಯನ್ನ ಕ್ಲೋಸ್‌ಪೇಟೆ ತಾಲ್ಲೂಕಿಗೆ ಶೇರಿಸೋಣಾಗಿರುತ್ತೆ.

I.

ಬೆಂಗಳೂರು ತಾಲ್ಲೂಕು ಪೈಕಿ ಕೆಂಗೇರಿ ಹೋಬಳಿಗೆ ಶೇರಿಸಲ್ಪಡುವ ಗ್ರಾಮಗಳು.

1. ರಾಮೋಹಳ್ಳಿ
2. ಮೊಲಗೊಂಡಹಳ್ಳಿ
3. ಭೀಮನಕುಪ್ಪೆ
4. ರಾಮಸಾಗರ
5. ಮಾರಗೊಂಡಹಳ್ಳಿ
6. ಅಜ್ಜನಾಳು
7. ಕೊಂಮಘಟ್ಟ
8. ಸೂಲಿಕೆರೆ
9. ಶೇಷಗಿರಿಪುರ
10. ಕೃಷ್ಣಸಾಗರ
11. ಚಳ್ಳಘಟ್ಟ

II.

ಮಾಗಡಿ ತಾಲ್ಲೂಕು ಪೈಕಿ ಗುಡೇಮಾರನಹಳ್ಳಿ ಹೋಬಳಿಗೆ ಸೇರಿಸಲ್ಪಡುವ ಗ್ರಾಮಗಳು.

1. ದೊಡ್ಡಮಾರನಹಳ್ಳಿ 2. ಚಂಚನಗುಪ್ಪೆ 3. ಬೇಲಾಳು 4. ದೋಣೇನಹಳ್ಳಿ

ಮಾಗಡಿ ತಾಲ್ಲೂಕು ಪೈಕಿ ತಾವರೆಕೆರೆ ಹೋಬಳಿಗೆ ಶೇರಿದ ಈ ಕೆಳಗೆ ನಮೂದಾಗುವ 5 ಗ್ರಾಮಗಳನ್ನ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿಗೆ ಶೇರಿಸೋಣಾಗಿಧೆ.

1. ನಾಗರಬಾವಿ 2. ಮಾಳಿಗಾಳು 3. ಗಿಡದಕೋನೇನಹಳ್ಳಿ 4. ಹೇರೋಹಳ್ಳಿ 5. ಗಂಗನಹಳ್ಳಿ.

ಮೇಲೆ ತಿಳಿಸೋಣಾದ ವರ್ಗಾ ವರ್ಗಿಯೂ, ಸಙ 1876ನೇ ಇಸವಿ ಸೆಪ್ಟಂಬರ ಗುರ್‍ರೇ ಲಾಗಾಯತು ಜಾರೀಲಿಬರತಕ್ಕದ್ದು.

ನಂ. 194. ತಾರೀಖು 25ನೇ ಆಗಸ್ಟು 1876.

ಸಿವಿಲ್ ಪೆಂಷನ ಕೋಡ 28ನೇ ಸೆಕ್ಷನ ನಿಬಂಧನೆಗಳ ಅನುಸರಿಸಿ ಚೀಫ್ ಕಮ್ಮಿಷನರವರು ಅಪ್ಪಣೀ ಕೊಡಿಸುವದೇನಂದರೆ,—ಮೈಸೂರು ಶೀಮೆಯ ಡಿಸ್ಟ್ರಿಕ್ಟು ಫಂಡ್ ಲವಾಜಮೆಗೆ ಸೇರಿದ ಕಾಯಂ ಉದ್ಯೋಗಗಳಲ್ಲಿ ಮಾಡಲ್ಪಟ್ಟ ನೌಕರಿಯು ಸದರೀ ಕೋಡ್‌ನಲ್ಲಿ ವಿಧಿಸಿ ಯಿರುವ ಷರತ್ತಿಗಳ ಮೇರೆ ಪೆಂಷನಿಗೆ ಯಾ ಗ್ರಾಟ್ಯುಯಿಟಿಗೆ ಅರ್ಹರಾಗುವದಾಗಿ ಯೆಣಿಸತಕ್ಕದ್ದು.

ನಂ. 195. ತಾರೀಖು 25ನೇ ಆಗಸ್ಟು 1876.

ಅಪ್ಪುಗ್ರಾಮಡಿವೀಜನ ಪೈಕೀ ಈ ಕೆಳಗೆ ಬರುವ ತಾಲ್ಲೂಕು ಅಮಲ್‌ದಾರುಗಳ ವರ್ಗಾವರ್ಗಿ ಮಂಜೂರ್ ಮಾಡಲ್ಪಟ್ಟಿವೆ.

ಅಬ್ದುಲ್‌ಖಾದರ್ ಯವರಿಗೆ ಹೆಗ್ಗಡದೇವನಕೋಟೆ ತಾಲ್ಲೂಕಿನಿಂದ ಬೇಲೂರು ತಾಲ್ಲೂಕಿಗೆ.

ಗೋಪಾಲ್ ಕೃಷ್ಣಯ್ಯಂಗಾರ್‍ರಿಗೆ ಬೇಲೂರು ತಾಲ್ಲೂಕಿನಿಂದ ಹೆಗ್ಗಡದೇವನಕೋಟೆ ತಾಲ್ಲೂಕಿಗೆ.

ನಂ. 196. ತಾರೀಖು 28ನೇ ಆಗಸ್ಟು 1876.

ಅಸಿಸ್ಟೆಂಟ ಕಮ್ಮಿಷನರ ಕೆಪ್ಟನ ಮೆಕ್ಕಂಜಿ ಸಾಹೆಬರವರು ಷಹರ ವ ಕಂಟೋನ್ಮೆಂಟ ಮಾಜಿಸ್ಟ್ರೇಟರ ಕೋರ್ಟಿನ ಚಾರ್ಜನ್ನು ಕೊಟ್ಟುಬಿಟ್ಟ ಮೇಲೆ ಮೇಜರ ಲಿಂಡಸೆ ಸಾಹೆಬರವರಿಂದ ಬೆಂಗಳೂರು ಸೆಂಟ್ರಲ ಜೇಯಿಲ ಅಡ್ಮಿನಿಸ್ಟ್ರೇಟಿವ ಯಾನೇ ವಿಚಾರಣೆಯ ಚಾರ್ಜನ್ನು ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಹಂಗಾಮಿ ತರೀಕ ವಹಿಸತಕ್ಕದ್ದು.

ನಂ. 197. ತಾರೀಖು 28ನೇ ಆಗಸ್ಟ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ ಸೂಪರಿಂಟೆಂಡೆಂಟ ಮಿಸ್ಟರ ಬೆಠಾಂ ಯವರಿಗೆ 1876ನೇ ಸೆಪ್ಟಂಬರ ಗುರ್ರೇ ಲಗಾಯತ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯತು ಒಂದು ತಿಂಗಳ ಪ್ರಿವಿಲೀಜ ರಜಾ ಮಂಜೂರಾಗಿರುತ್ತೆ.

ನಂ. 198. ತಾರೀಖು 29ನೇ ಆಗಸ್ಟು 1876.

ಕೆಪ್ಟನ ಲಡ್ಲೊ ಸಾಹೆಬರು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಆಫಿಸ ವ ಡಿ|| ಟ್ರೆಜರಿ ಚಾರ್ಜನ್ನು ಮಿಸ್ಟರ ಯವರಿಂದ ಮಾಹೇ ಮಜಕೂರ 14ನೇ ಮರ್ಕುಂ ಪೂರ್ವಾಹ್ನದಲ್ಲಿ ಪುನಃ ವಹಿಸಿದರು.

ನಂ. 199. ತಾರೀಖು 30ನೇ ಆಗಸ್ಟು 1876.

ಅಸಿಸ್ಟೆಂಟ ಕಮ್ಮಿಷನರ ಕೆಪ್ಟನ ಮೆಕ್ಕಂಜಿ ಸಾಹೆಬರವರು ಡಾಕ್ಟರ ಆಸವಾಲ್ಡ ಸಾಹೆಬರವರಿಂದ ಚಾರ್ಜ ತೆಗದುಕೊಂಡೆ ತಾರೀಖು ಲಗಾಯಿತು ಮೈಸೂರು ಗವರ್ನಮೆಂಟ ಮ್ಯೂಜಿಯಂ ಸೂಪರಿಂಟೆಂಡೆಂಟರಾಗಿ ನೌಕರರ ಮಾಡಲ್ಪಟ್ಟಿರುತ್ತಾರೆ.

ನಂ. 200. ತಾರೀಖು 30ನೇ ಆಗಸ್ಟು 1876.

ಚಿತ್ರದುರ್ಗದ ಮುನಸೀಫರಾದ ಸಚ್ಚಿದಾನಂದ ಪಿಳ್ಳೆಯವರಿಗೆ ಅವರು ಯಾವ ತಾರೀಖು ಲಾಗಾಯಿತು ವುಪಯೋಗಿಸಿಕೊಳ್ಳುವರೋ ಆ ಲಾಗಾಯಿತು ವಂದು ತಿಂಗಳ ಪ್ರಿವಿಲೀಜ ರಜಾ ಕೊಡಲ್ಪಟ್ಟಿರುತ್ತೆ.

ನಂ. 201. ತಾರೀಖು 30ನೇ ಆಗಸ್ಟ 1876.

ಚಿಕ್ಕಬಳ್ಳಾಪುರದ ಮುನಸಿಫರಾದ ಮುದ್ದುಕ್ರಿಷ್ಣನಾಯಿಡು ಯವರಿಗೆ ಅವರು ಯಾವತಾರೀಖು ಲಗಾಯಿತು ವುಪಯೋಗಿಸಿ ಕೊಳ್ಳುವರೋ ಆ ಲಾಗಾಯಿತು ವಂದು ತಿಂಗಳ ಪ್ರಿವಿಲೀಜ ರಜಾ ಕೊಡಲ್ಪಟ್ಟಿರುತ್ತೆ.

ನಂ. 202. ತಾರೀಖು 31ನೇ ಆಗಸ್ಟು 1876.

ಅಸಿಸ್ಟೆಂಟ ಕಮ್ಮಿಷನರ ಮೇಜರ ಲಿಂಡಸೆ ಸಾಹೆಬರವರು ಸ 1876ನೇ ಇಸವಿ ಮಾಹೆ ಆಗಸ್ಟು 22ರ ಮಧ್ಯಾನ್ಹಾತ್ಪರ ಸರ್ಜನ ಮೆಕಗ್ರಾ ಸಾಹೆಬರವರಿಂದ ಬೆಂಗಳೂರು ಸೆಂಟ್ರಲ ಜೇಯಿಲಿನ ವಿಚಾರಣೆಯ ಚಾರ್ಜನ್ನು ತೆಗದುಕೊಂಡಿರುತ್ತಾರೆ.

ನಂ. 203. ತಾರೀಖು 31ನೇ ಆಗಸ್ಟು, 1876.

ಸರ್ಜನ ಮೆಕಗ್ರಾ ಸಾಹೆಬರವರು, ಸ 1876ನೇ ಇಸವಿ ಆಗಸ್ಟು ತಾರೀಖು 24ನೇ ಮಧ್ಯಾನ್ಹಕ್ಕೆ ಪೂರ್ವ ಅಷ್ಟಗ್ರಾಮ ಡಿವಿಜನ ಶಿವಿಲ ಸರ್ಜನ ಉದ್ಯೋಗದ ಚಾರ್ಜನ್ನು ಮತ್ತು ಮೈಸೂರು ಜೈಯಿಲಿನ ಚಾರ್ಜನ್ನು ಸಹ ಸರ್ಜನ ಮೇಜರ ಹೌಸ್ಟನ ಸಾಹೆಬರವರಿಂದ ತೆಗದುಕೊಂಡಿರುತ್ತಾರೆ.

ಡಿಸ್ಟ್ರಿಕ್ಟು ಫಂಡ ಇಲಾಖಾ.

ನಂ 204. ತಾರೀಖು 30ನೇ ಆಗಸ್ಟು 2876.

ಹೊನ್ನಾಳ್ಳಿ ತಾಲ್ಲೂಕು ಹಂಗಾಮೀ ಮೇಸ್ತ್ರಿ ವೈಲಾರ್ಯಯಗೆ 1876ನೇ ಜುಲೈ 8ನೇ ಮರ್ಕುಂ 130ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ ರಜಾ ಬಗರ ಲೌನ ರಜಾಕ್ಕೆ ಬದಲಾಯಿಸಿಕೊಳ್ಳಲ್ಪಟ್ಟಿರುತ್ತೆ.

"ಬಮೋಜೀಬ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಜನರಲ್.

ಇಸ್ತಿಹಾರ ನಾಮೆಗಳು.

ನಂ. 6. ತಾರೀಖು 10ನೇ ಜುಲೈ 1876.

ಮಡಿಕೆರೆ ಮ್ಯುನಿಸಿಪಲ್ ಇಲಾಖೆಗೋಸ್ಕರ ಏರ್ಪಡಿಸೋಣಾದ ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ ಮಾಡಲ್ಪಟ್ಟು ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಸಲ್ಪಟ್ಟಿರುತವೆ.

"ಬಮೋಜಿಬ್ ಹುಕ್ಕುಂ."

T. Clarke,
Offg. Secretary.

ಮಡಿಕೆರೆ ಮ್ಯುನಿಸಿಪಲ್ ಇಲಾಖೆಗೋಸ್ಕರ ಏರ್ಪಡಿಸಲ್ಪಟ್ಟ ಬೈಲಾ ನಿಬಂಧನೆಗಳು.

1ನೇ ಅಧ್ಯಾಯ.

1. ಆಯಾ ತಿಂಗಳ ಮೊದಲನೇ ಸೋಮವಾರದ ದಿನ, ಮ್ಯುನಿಸಿಪಲ್ ಬೋರ್ಡಿನವರ ಸಾಮಾನ್ಯಸಮಾಜಗಳು ತಿಂಗಳು ತಿಂಗಳಿಗೂ ನಡೆಯುವದು.

2. ಜರೂರಾದಾಗಲೆಲ್ಲ ಮೇಲೆ ಕಂಡ ಸಾಮಾನ್ಯ ಸಮಾಜಗಳೊಡನೆ ವಿಶೇಷ ಸಮಾಜಗಳೂ ನಡೆಯುವವು.

3. ಕೊಡಗು ಸೂಪರಿಂಟೆಂಡೆಂಟರವರು ಬೋರ್ಡಿನ ಪ್ರೆಸೀಡೆಂಟರಾಗಿರುತ್ತಾರೆ. ಅವರ ಗೈರಹಾಜರೀಯಲ್ಲಿ 1ನೇ ಅಸಿಸ್ಟೆಂಟ ಸೂಪರಿಂಟೆಂಡೆಂಟರು ಪ್ರೆಸೀಡೆಂಟರಾಗಿರತಕ್ಕದ್ದು, ಇವರಿಬ್ಬರೂ ಗೈರ ಹಾಜರಾದಲ್ಲಿ ಕಮಾಂಡಿಂಗ್ ಆಫಿಸರವರು ಪ್ರೆಸೀಡೆಂಟ ಕೆಲಸವನ್ನು ನೋಡತಕ್ಕದ್ದು. ಈ ಮೂವರೂ ಇಲ್ಲದಿದ್ದರೆ, ಸೇರಿದ ಸಮಾಜದವರು ತತ್ಕಾಲಕ್ಕೆ ತಮಗೆ ಯುಕ್ತವಾದವರನ್ನು ಪ್ರೆಸೀಡೆಂಟರಾಗಿ ಯೇರ್ಪಡಿಸಿಕೊಳ್ಳತಕ್ಕದ್ದು.

ಒಂದು ಸಮಾಜದಲ್ಲಿ ಚರ್ಚಿಸಲ್ಪಡತಕ್ಕ ದರೋಬಸ್ತು ಅಂಶಗಳೂ ಸಮಾಜ ಸೇರುವದಕ್ಕೆ ಅಥವಾ ಪಕ್ಷ ಯೇಳು ದಿನಗಳಿಗೆ ಮುಂದಾಗಿ ಕೊಡೋಣಾದ ಒಂದು ಸರ್ಕ್ಯುಲರ ಮೂಲಕ ಮೆಂಬರಗಳ ತಿಳುವಳಿಕೆಗೆ ತರಲ್ಪಡತಕ್ಕವು.

4. ಹಾಜರಿರುವ ಯಾವ ಮೆಂಬರಾಗಲಿ, ಹುಕ್ಕುಮಾಗತಕ್ಕ ಯಾವ ಅಂಶವನ್ನಾದರೂ, ಪ್ರೆಸೀಡೆಂಟರಿಗೆ ಕಳುಹಿಸಬಹುದು.

5. ಯಾವ ವಿಷಯವನ್ನಾದರೂ ಸೂಚಿಸುವಲ್ಲಿ ಯಾ ಚರ್ಚಿಸುವಲ್ಲಿ ಪ್ರತಿಮೆಂಬರೂ, ತನ್ನ ಜಾಗಾದಲ್ಲಿದ್ದುಕೊಂಡು ಯಾವಾಗಲೂ ಪ್ರೆಸೀಡೆಂಟರನ್ನುದ್ದೇಶಿಸಿ ಮಾತನಾಡತಕ್ಕದ್ದು.

6. ಜವಾಬಾಗಿ ಸೂಚಿಸತಕ್ಕವನು ವಿನಾ, ಯಾವ ಮೆಂಬರೂ, ಯಾವ ಸೂಚನೆ ಯಾ ತಿದ್ದುಪಾಟಿನ ವಿಷಯದಲ್ಲಿಯೂ, ಯೆರಡಾವರ್ತಿ ಮಾತನಾಡಕೂಡದು.

7. ಯಾವ ಅಂಶವನ್ನಾಗಲಿ ಸೂಚಿಸಿದವನು ಅಂಗೀಕಾರಪಟ್ಟವರ ಪಟ್ಟೀ ಬೇಕೆಂದು ಕೇಳಿದರೆ ಕೈಗಳೆತ್ತಿ ತೋರಿಸುವದರ ಮೂಲಕ ಅಂಗೀಕಾರಗಳನ್ನು ತೆಗೆದು ಕೊಳ್ಳತಕ್ಕದ್ದು.

8. ಪ್ರತಿ ಸೂಚನೆ ಅಥವಾ ತಿದ್ದುಪಾಡು ಬರವಣಿಗೆ ಯಲ್ಲಿರತಕ್ಕದ್ದು; ಆದರೆ ಪ್ರೆಸೀಡೆಂಟರಿಂದ ಅಪೇಕ್ಷಿಸಲ್ಪಟ್ಟ ಹೊರತ ಸೂಚನೆ ಯಾ ತಿದ್ದುಪಾಡು ಅನುಮೋದಿಸಲ್ಪಡಬೇಕಾದ ಆವಶ್ಯಕವಿಲ್ಲವು.

9. ಒಬ್ಬ ಮೆಂಬರಿಂದ ಮತ್ತೊಬ್ಬ ಮೆಂಬರಿಗೆ ಹಾಕಲ್ಪಡುವ, ಸಮಾಜದ ಕೆಲಸಕ್ಕೆ ಸಂಬಂಧಪಟ್ಟ ದರೋಬಸ್ತು ಪ್ರಶ್ನೆಗಳೂ ಪ್ರೆಸೀಡೆಂಟರ ಮೂಲಕವೇ ಹಾಕಲ್ಪಡತಕ್ಕವು.

10. ಮ್ಯುನಿಸಿಪಲ್ ಬೋರ್ಡಿನವರ ಸಮಾಜಗಳಲ್ಲಿ ಸಾಮಾನ್ಯವಾಗಿ ಜನಗಳು ಬರಬಹುದು, ಆದರೆ ಜರೂರಿದ್ದಲ್ಲಿ ಹೊರಗಿನವರನ್ನು ಹೊರಗೆ ಹೋಗುವಂತೆ ಹೇಳಬಹುದು.

11. ದರೋಬಸ್ತು ಸಮಾಜಗಳಲ್ಲಿಯೂ, ರೈತರು ಹಾಜರಿದ್ದು ಕೇಳಿದ ಯಾವ ಲೆಕ್ಕವನ್ನಾಗಲಿ ಹಾಜರ ಮಾಡತಕ್ಕದ್ದು.

12. ಕಟ್ಟಣದ ಬಗ್ಯೆ, ಯಾ ಇತರ ಕೆಲಸಗಳಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, ಸಾಗುವಳೀಯಲ್ಲಿರುವ ಯಾ ಇತರ ವಿಥವಾಗಿರುವ ಜಮೀನನ್ನು ಕ್ರಯಕ್ಕಾಗಲಿ ಗೇಣೀಗಾಗಲಿ ಪಡೆಯಲಿಕ್ಕೆ ಅಪೇಕ್ಷೆಯುಳ್ಳ ಯಾವ ಮನುಷ್ಯನಾಗಲಿ ಖಾಯಿ ಷಮಾಡಿದ ಜಮೀನ್ ಇರುವ ಪ್ರದೇಶವನ್ನೂ, ಅದರ ವಿಸ್ತಾರವನ್ನೂ ವಿವರಿಸುವಂತಾ ನಕ್ಷೇಗಳ ಯೆರಡು ಪ್ರತಿಗಳು ನಿೀ, ಬರವಣಿಗೇ ಮೂಲಕವಾದ ದರಖಾಸ್ತನ್ನು ಪ್ರೆಸೀಡೆಂಟರಿಗೆ ಪರಭಾರೆ ಕೊಡತಕ್ಕದ್ದು.

ಪ್ರೆಸೀಡೆಂಟರ ಮಂಜೂರಾತೀಯನ್ನು ಮೊದಲೇ ಪಡೆದ ಹೊರತು ಯಾವ ಮನುಷ್ಯನೂ, ತಾನು ಮ್ಯುನಿಸಿಪೆಲ್ ಸರಹ ದ್ದುಗಳೊಳಗೆ ಖರೀದಿಗೆ ಪಡೆದುಕೊಂಡ ಜಮೀನಿನಲ್ಲಿ ಕಟ್ಟಣ ಕಟ್ಟಿಸಲಿಕ್ಕೆ ಪ್ರಾರಂಭಿಸಲು ಅಧಿಕಾರವಿಲ್ಲವು.

ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಒಂದೇ ಜಮೀನಿಗಾಗಿ ಒಂದು ತಿಂಗಳೊಳಗೆ ಯೆರಡು ಅಥವಾ ಹೆಚ್ಚು ದರಖಾಸ್ತು ಗಳು ಬಂದರೆ ಅವ್ವಲ್ ಖರೀದೀ ಠರಾವ್‌ನಿಂದ ಮೂರುವಾರಗಳ ವರಿಗೆ ಬಹಿರಂಗಗಳಾದ ಸ್ಥಳಗಳಲ್ಲಿ ನೋಟಿಸ್‌ಗಳನ್ನು ಹಚ್ಚುವ ದರ ಮೂಲಕ ಪ್ರಾಯಿಷ್ ಮಾಡಿದ ಮೇಲೆ ಪ್ರಕಟವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

13. ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಜಮೀನನ್ನು ಗೇಣೀಗಾಗಲಿ, ಖರೀದೀಗಾಗಲಿ ಪಡೆದುಕೊಳ್ಳುವ ಬಗ್ಯೆ ಬರುವ ಯಾವ ದರಖಾಸ್ತನ್ನಾಗಲಿ, ಪ್ರೆಸೀಡೆಂಟರು ದರಖಾಸ್ತುದಾರಗೆ ತಕ್ಕ ಸಬಬ್‌ಗಳು ತಿಳಿಸಿ ನಿರಾಕರಿಸಬಹುದು. ಅಥವಾ ಷರತ್ತುಗಳ ಪೈಕೀ ಕಟ್ಟಣಗಳು, ಹೊರಗಿನ ಕಟ್ಟಣಗಳು, ಸುತ್ತು ಗೋಡೆಗಳು, ಯಾ ಆವರಣಗಳು, ಫಲಾನೇ ವಿಧವಾಗಿ ಯಾ ಫಲಾನೇ ಖರೀದೀ ಉಳ್ಳದ್ದಾಗಿರಬೇಕೆಂತಲೂ, ಹರಾಜ್ ಯಾ ಗೇಣೀಕಾಲದಲ್ಲಿ ನಿಷ್ಕರ್ಷೆಯಾಗತಕ್ಕಂತಾ ಕಾಲದೊಳಗಾಗಿ ಕಟ್ಟ ಲ್ಪಡತಕ್ಕದ್ದೆಂತಲೂ, ಇದಕ್ಕೆ ತಪ್ಪಿದರೆ ಯೆರಡು ವರುಷಗಳೊಳಗಾಗಿ ಸರ್ಕಾರಕ್ಕೆ ವಾಪಸ್ ಸೇರಿಸಿಕೊಳ್ಳಲ್ಪಡುವದೆಂತಲೂ, ಒಂದು ಷರತ್ ಮಾಡಬಹುದು.

14. ಖಾಲೀ ಇರುವ ಕಟ್ಟಣದ ಜಮೀನ್‌ಗಳು, ಯಾ ನಿವೇಶನಗಳು, ಯಾ ಅಂಗಡಿಗಳು ಪ್ರೆಸೀಡೆಂಟರ ಮಂಜೂರಾತೀ ಇಲ್ಲದೆ ವಿಭಾಗವಾಗತಕ್ಕದ್ದಲ್ಲವು.

15. ಬೀದಿಗಳಲ್ಲಿ ಅಥವಾ ಸಂದಿಗಳಲ್ಲಿ ಐದು ವರುಷಗಳ ಕಾಲ ವಾಸಸ್ಥರಿಲ್ಲದೆ ಬಿಡಲ್ಪಟ್ಟ ಯಾವ ನಿವೇಶನಗಳಾಗಲಿ ಮನೆಗಳು ಮುಂತಾದವುಗಳಾಗಲಿ, ಆರು ತಿಂಗಳವರಿಗೆ ಇಸ್ತಿಹಾರ್ ಪ್ರಾಯಿಷ್ ಆದಮೇಲೆ ಪ್ರೆಸೀಡೆಂಟರ ಅಧಿಕಾರಕ್ಕೆ ಒಳಗಾಗಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡಲಿಕ್ಕೆ ಗುರಿಯಾಗಿರುತ್ತವೆ. ಅಂತಾ ಹರಾಜ್‌ನಲ್ಲಿ ಹುಟ್ಟುವಳೀಯಾದ ಮೊಬಲ ಗಿಗೆ ಯಾರೂ ಬಾಧ್ಯತೆ ತಾರದೆ ಇದ್ದರೆ ಅದು, ಬೇವಾರಸ್ ಸ್ವತ್ತಿನ ನಿಬಂಧನೆಗಳ ಪ್ರಕಾರ ಮ್ಯುನಿಸಿಪೆಲ್ ಇಲಾಖೆಯ ಜಮೀನಿಗೆ ದಾಖಲ್ ಮಾಡಿಕೊಳ್ಳಲ್ಪಡುವದು.

16. ಸ್ಕ್ವಾಟರ್‌ಗಳು ಅಂದರೆ ದೃಢವಾದ ಬಾಧ್ಯತೆ ಯಿಲ್ಲದೆ ಪಬ್ಲಿಕ್ ಜಮೀನ್‌ನಲ್ಲಿ ನೆಲೆಗೊಳ್ಳುವ ಜನಗಳು, ಇದು ವರಿಗೆ ವಾಸಮಾಡುತ್ತಿದ್ದ ಮನೆ ಮುಂತಾದವುಗಳನ್ನು ಒಳಗೊಂಡಿದ್ದ ಹಾಳು ಗೋಡೆಗಳು, ಸದರೀ ಮನೆ ಮುಂತಾದವುಗಳು ಖಾಲೀ ಮಾಡಲ್ಪಟ್ಟ ತರುವಾಯ ಕೆಡಹಿಸಿ ನೆಲ ಸಮಾಮಾಡಲ್ಪಡತಕ್ಕವು. ಅಂತಾ ಸಂಗತಿಗಳಲ್ಲಿ ಹಾಂಗೆ ಖಾಲೀ ಮಾಡಲ್ಪಟ್ಟ ಜಮೀನು ಮ್ಯುನಿಸಿಪೆಲ್ ಯಿಲಾಖೆಯವರ ಅಧೀನದಲ್ಲಿರತಕ್ಕದ್ದು.

II. ಪೂರ್ವ ಅನುಭವಿಸುತಿದ್ದ ಬಾಧ್ಯತೆಯ ಮೇಲೆ ಸ್ಕ್ವಾಟರ್‌ಗಳಿಂದ ಯಾ ಇತರ ಜನಗಳಿಂದ ತ್ಯಜಿಸಲ್ಪಟ್ಟ ನಿವೇಶನಗಳ, ಪಾಳು ಭೂಮಿಯು, ಯಾ ವಾಸಯೋಗ್ಯವಲ್ಲದೆ ಶಿಥಿಲವಾಗಿರುವ ಮನೆ ಮುಂತಾದವುಗಳ ಯಾವ ಬಿಕರೀಯೂ, ಪಟ್ಟೇ ಇಂದ ಯಾ ಗ್ರಾಂಟ್ ನಿಂದ ಯಾ ಸ್ನ 1864ನೇ ಇಸವೀ ಜುಲೈ ಗುರ್ರೀ ಮೊದಲು ಹುಟ್ಟಿದ ಕ್ರಯ ಶಾಸನದಿಂದ ಮತ್ತು ಸದರೀ ಜಮೀನಿನ ವಿವರಣದಿಂದ ಅಂತಾ ಬಾಧ್ಯತೆಯು ಬಿಪಡಿಸಲ್ಪಟ್ಟ ಹೊರ್ತು ದೃಢಪಡತಕ್ಕದಲ್ಲ.

III. ಇದು, ಒಂದು ತಿಂಗಳೊಳಗೆ ತಮ್ಮ ಮನೆಗಳನ್ನ ದುರಸ್ತು ಮಾಡುವ ಯಾ ಅವುಗಳನ್ನ ಖಾಲೀ ಮಾಡುವ ಜನಗಳಿಗೆ ಅಥವಾ ವಾಸಗೃಹ ಮುಂತಾದವುಗಳನ್ನು ಮಾರುವ ಜನಗಳಿಗೆ ಲಗಾವಾಗುವದಿಲ್ಲ.

17. ದರೋಬಸ್ತು ಬಂಡಿಗಳೂ, ಸವಾರಿಗಳೂ ತಮ್ಮ ಯದುರಿಗೆ ಬರತಕ್ಕ ಬಂಡಿಗಳು, ಸಂಧಿಸಿ ಬಲಗಡೆಗೆ ಹೋಗು ವದಕ್ಕೆ ಅನುಕೂಲಿಸುವಂತೆ ರಸ್ತೆಯಲ್ಲಿ ತಮ್ಮ ಯಡಪಾರ್ಶ್ವಕ್ಕೇನೇ ಹೋಗುವಂತೆ ಬಲಾತ್ಕರಿಸಲ್ಪಡ ತಕ್ಕವು.

18. ಸಾಮಾನುಗಳು ತೆಗದುಕೊಂಡು ಹೋಗುವ ಬಗ್ಯೆ ಯೆತ್ತುಗಳು ಕಟ್ಟಿದ ಬಂಡೀ ಅಲ್ಲದ ಇತರ ಯಾವ ವಿಧವಾದ ಯಾವ ಸಾಧನವನ್ನಾಗಲಿ ಸೂರ್ಯಾಸ್ತಮಯದನಂತರ ಮುಕ್ಕಾಲು ಗಂಟೆಗೂ ಸೂರ್ಯೋದಯಕ್ಕೆ ಪೂರ್ವ ಒಂದು ಗಂಟೆಗೂ ಕಾಲದಲ್ಲಿ ಯಾವಾಗಲಾದರೂ ಅಂತಾ ಗಾಡಿಯ ಉಭಯ ಪಾರ್ಶ್ವಕ್ಕೂ ಹಚ್ಚಿದ ದೀಪಗಳು ಇಡದೇ ಯಾವನು ನಡಿಸುತ್ತಾ

ನೋ ಅಂತಾವನು ದೀಪಗಳು ಅನಾವಶ್ಯಕವಾಗಲಿಕ್ಕೆ ಸಾಕಾದಷ್ಟು ಬೆಳದಿಂಗಳು ಇರಬಹುದಾಗಿ ಮಾಜಿಸ್ಟ್ರೇಟರಿಗೆ ತೋರಿದಾಗ ಹೊರ್ತು ಇತರ ಕಾಲದಲ್ಲಿ 5ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

II. ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಾವ ರಸ್ತೆಯಲ್ಲಿಯಾದರೂ ರಾತ್ರಿ 7 ಗಂಟೆಗೂ ಬೆಳಿಗ್ಗೆ 4 ಗಂಟೆಗೂ ಮಧ್ಯೆ ಯೆತ್ತುಗಳು ಕಟ್ಟಿದ ಬಂಡಿಯನ್ನಾಗಲಿ, ಯಾವ ವಿಧವುಳ್ಳ ಸವಾರೀ ಗಾಡಿಯನ್ನಾಗಲಿ ಅಂತಾ ಗಾಡಿಯ ಉಭಯಪಾರ್ಶ್ವಕ್ಕೂ ಲಗತ್ ಮಾಡಲ್ಪಟ್ಟ ಹಚ್ಚಿದ ಲಾಂದರುಗಳು ಕಟ್ಟದೇ ನಡಸುವಂತಾವನು 5ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು. ಪರಂತು ಕಾಲು ನಡೆಗೆ ಸರಿಯಾಗಿ ಹೋಗುವ ಭರ್ತೀ ಬಂಡಿಗಳಿಗೆ ಮಧ್ಯದಲ್ಲಿ ತಗಲಹಾಕಲ್ಪಟ್ಟ ಬಂದು ಹಚ್ಚಿದ ಲಾಂದ್ರ ಯಿರಬಹುದು.

III. ಮ್ಯುನಿಸಿಪೆಲ್ ಸರಹದ್ದಿನಲ್ಲಿ ಯೆತ್ತುಗಳು ಕಟ್ಟಿದ ಯಾವ ಸಾಮಾನು ಬಂಡಿಯನ್ನಾಗಲಿ ನಡಿಸುವಂತವನು ಕಾಲು ನಡೆಗೆ ಸರಿಯಾಗಿ ನಡಿಸತಕ್ಕದ್ದು ಮತ್ತು ರಸ್ತೆಯೊಳಗೆ ಯೆಡಗಡೆಯಲ್ಲಿಯೇ ಹೋಗತಕ್ಕದ್ದು, ಮತ್ತು ಯೆತ್ತುಗಳನ್ನು ನಡಿಸತಕ್ಕವನು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟೀಯಲ್ಲಿಟ್ಟುಕೊಳ್ಳುವ ಬಗ್ಯೆ ಸಾಕಾದಷ್ಟು ಬಲವಾದ ಹಗ್ಗದಿಂದ ಆ ಯೆತ್ತುಗಳಿಗೆ ಮೂಗುದಾರ ಹಾಕಿರತಕ್ಕದ್ದು. ಈ ಹುಕ್ಕುಂಗಳಿಗೆ ಬರಖಿಲಾಫ್ ನಡೆಯುವ ತಪ್ಪಿತಸ್ಥನು 5 ರೂಪಾಯಿಗಳಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

2ನೇ ಅಧ್ಯಾಯ.

ಸ್ಥಳಿಕ ತೊಂದರೆಗಳು.

19. ಪಬ್ಲಿಕ್ ಬೀದಿಗಳಲ್ಲಿ ದನಗಳನ್ನು ಕಟ್ಟುವಿಕೆ, ಪೆಟ್ಟಿಗೆಗಳನ್ನು ಖಾಲೀ ಬಂಡಿಗಳನ್ನು, ಯಾ ಸವಾರೀಗಾಡಿಗಳನ್ನು ಅಥವಾ ಯಾವವಿಧದ ನಿರೋಧಗಳನ್ನು ಮನೆಗಳ ಯಾ ಅಂಗಡಿಗಳ ಮುಂದೆ ಬಿಡುವಿಕೆ, ಮತ್ತು ಯಾವ ಅಂಗಡಿಯ ಯಾ ಮನೆಯ ಮುಂದುಗಡೆಯಾಗಲಿ ಯೆರಡು ಗಂಟೆಗಳ ಹೊತ್ತಿಗಿಂತ ಹೆಚ್ಚಾಗಿ ಬಂಡಿಗಳು ಯಾ ಸವಾರೀಗಾಡಿಗಳು ಭರ್ತೀ ಮಾಡುವಾಗ್ಯೆ ಯಾ ಯಿಳಿಸುವಾಗ್ಯೆ ಗುಂಪುಕೂಡುವದಕ್ಕೆ ಆಸ್ಪದ ಕೊಡುವಿಕೆ, ಇಂತಾದ್ದು 5 ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

20. ಮ್ಯುನಿಸಿಪೆಲ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾ ಅವರ ಹುಕ್ಕುಮಿಗೆ ವಿರುದ್ಧವಾಗಿ ಬಂಡೆಯಲ್ಲಿ ಗ್ರೇವಲ್ ಮತ್ತು ಕಲ್ಲು ತೆಗೆಯುವಿಕೆ, ಇಟ್ಟಿಗೆ ಮತ್ತು ಹೆಂಚುಗಳಿಗೋಸ್ಕರ ಮಣ್ಣು ಅಗಿಯುವಿಕೆ ಇಟ್ಟಿಗೆ ವ ಹೆಂಚುಗಳನ್ನು ಮಾಡುವ ಬಗ್ಯೆ ಲೈಸೆನ್ಸ್‌ಗಳನ್ನು ಮ್ಯುನಿಸಿಪೆಲ್ ಆಫೀಸನಲ್ಲಿ ದರಖಾಸ್ತು ಮೂಲಕ ಪಡೆದುಕೊಳ್ಳಬಹುದು. ಈ ಸ್ಥಳದೊಳಗೆ ತರಲ್ಪಡುವ ಇಟ್ಟಿಗೆಗಳಿಗೆ 1000ಕ್ಕೆ 4 ಆಣೆ, ಹೆಂಚುಗಳು 1000ಕ್ಕೆ 4 ಆಣೆ, ಈ ಮೇರೆ ವಸೂಲ್ ಮಾಡಲ್ಪಡತಕ್ಕದ್ದಲ್ಲದೆ, ಬಂದು ಬಂಡಿ ಕಲ್ಲಿಗೆ 6 ಕಾಸು ಅಥವಾ ಚದರ ಗಜ ಬಂದಕ್ಕೆ 2 ಆಣೆಗಳ ಮೇರೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

21. ನೋಟಿಸ್ ತಲಪಿದ 8 ದಿನಗಳೊಳಗಾಗಿ ಯಾವ ಮನೆಗಾಗಲಿ ಕಟ್ಟಡಕ್ಕಾಗಲಿ, ಹೊರಗೆ ಯಾ ಒಳಗೆ ಸುಣ್ಣ ಬಳಿಯುವಿಕೆ ಅಥವಾ ಆರೋಗ್ಯ ನಿಮಿತ್ತದಿಂದ ಅವುಗಳನ್ನು ಪಾಕ್ ಮಾಡಲಿಕ್ಕೆ, ಅಥವಾ ಪಾಯಖಾನೆಗಳನ್ನು ಯಾ ಬಚ್ಚಲು ಗುಣಿಗಳನ್ನು ಕಂಪು ಯಿಲ್ಲದೆ ಮಾಡಲಿಕ್ಕೆ ಮೆಡಿಕೆಲ್ ಆಫಿಸರರ ಸಲಹೇ ಮೇಲೆ ಅಮಲ್ ನಡಿಸುವ ಪ್ರೆಸಿಡೆಂಟರ ಯಾವ ಹುಕ್ಕುಮಿಗಾಗಲಿ ಅವಿಧೇಯವಾಗಿ ನಡೆಯುವಿಕೆ—ಜುರ್ಮಾನೆ 10 ರೂಪಾಯಿ.

22. ಗ್ಲಾಂಡರ್ಸ್ ಯೆಂಬ ರೋಗವಾಗಲಿ, ಅಥವಾ ಅಪಾಯಕರವಾದ ಯಾ ಅಂಟುವ ಸ್ವಭಾವವುಳ್ಳ ಸಾಂಕ್ರಾಮಿಕವಾದ ಯಾ ಅನ್ಯಥಾ ಯಿರುವ ಯಾವ ರೋಗವಾಗಲಿ, ತಗಲಿದ, ಯಾವದಾದರೂ, ಕುದುರೆ ಯಾ ಯಿತರ ಜಾನವರ್‌ಗಳುಳ್ಳ, ಮತ್ತು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಹಂಗಾಮಿಯಾಗಿ ಆಗಲಿ, ಅನ್ಯಥಾ ಆಗಲಿ, ವಾಸ ಮಾಡುವ ಪರೋಬಸ್ತು ಜನಗಳೂ ಆ ಸಂಗತಿಯನ್ನು ಕುರಿತು ಕೂಡ್ಲೆ ಪ್ರೆಸಿಡೆಂಟರಿಗೆ ಜಾಹಿರ್ ಪಡಿಸುವಂತೆ ತಾಕೀದ್ ಮಾಡಲ್ಪಡತಕ್ಕದ್ದು. ಸದರೀ ಪ್ರೆಸಿಡೆಂಟರು ಮೇಲೆ ಕಂಡ ಪ್ರಕಾರ ತಮಗೆ ನೋಟಿಸ್ ಬಂದ ಮೇಲೆ ಸಾಧ್ಯವಾದಷ್ಟು ತ್ವರೆಯಾಗಿ ಲಾಯಖಾದ ಬಬ್ಬ ಸಾಲಂತ್ರೀ ಮೂಲಕ ಜಾನವರನ್ನು ಯಾ ಜಾನವರ್‌ಗಳನ್ನು ಆಜಮಾಯಿಷೀಮಾಡಿಸಿ, ಸದರೀ ಜಾನವರ್ ಯಾ ಜಾನವರ್‌ಗಳನ್ನು ತೊಲಗಿಸುವದು ಆವಶ್ಯಕವೆಂದು ತೃಪ್ತಿಕರವಾಗಿ ತಿಳಿಯಬಂದರೆ, ಸ್ವಂತಗಾರನು ಅಂತಾ ಜಾನವರನ್ನು ಕೂಡ್ಲೆ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಸಾಗಿಸಿ ಬಿಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು

ಗ್ಲಾಂಡರ್ಸ್ ಎಂಬ ರೋಗವಾಗಲಿ, ಯಿತರ ಯಾವ ಸಾಂಕ್ರಾಮಿಕ ರೋಗವಾಗಲಿ, ತಗಲಿ ಯಿರುವ ಜಾನವರ್‌ಗಳು ಯಾವ ಮನುಷ್ಯನಾಗಲಿ, ಈ ಬೈಲಾ ನಿಬಂಧನೇ ಪ್ರಕಾರ ನಡೆಯದಿದ್ದರೆ, ಅಂತಾವನು ಬಬ್ಬ ಮಾಜಿಸ್ಟ್ರೇಟರ ಮುಂದೆ

ಪಿಸಲ್ಪಟ್ಟು ಅವ್ವಲ್‌ದಫೆ ತಪ್ಪಿತಕ್ಕೆ 100 ರೂಪಾಯಿಗಳ, ಆ ತರುವಾಯ ಯರಡನೇ ಮತ್ತು ಪ್ರತಿಸಲದ ತಪ್ಪಿತಕ್ಕೂ, 200 ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.

23. ಸ್ವಂತಗಾರರ ಯಾ ಹಿಡುವಳೀದಾರರ ಮನೆ ಮುಂತಾದವುಗಳಲ್ಲಿ ಮೃತಪಡುವ ಯಾವ ಜಂತುವಿನ ಶವವನ್ನಾಗಲಿ, ಯುಕ್ತವಾದ ಕಾಲದೊಳಗೆ, ರಬ್ಬಿಷ್ ಡಿಪೋಯೆಂಬ ಕಶ್ಮಲ ಹಾಕುವ ಜಾಗಾಕ್ಕೆ ಸತ್ತ ಅಥವಾ, ಜಂತುಗಳ ಶರೀರಗಳನ್ನು ದಫನ ಮಾಡುವ ಬಗ್ಗೆ ಪ್ರತ್ಯೇಕವಾಗಿ ಯೇರ್ಪಡಿಸಲ್ಪಟ್ಟ ಸ್ಥಳಕ್ಕೆ ತೆಗಸಿ ಹಾಕುವದಕ್ಕೆ ಉಪೇಕ್ಷಿಸುವಿಕೆ,—ಜುಲ್ಮಾನೆ 5 ರೂಪಾಯಿಗಳು.

24. ಪಬ್ಲಿಕ ತೋಟಗಳಲ್ಲಿ ಯಾ ರಸ್ತೆಗಳ ಬಾಜೂಗಳಲ್ಲಿ ಮರಗಳನ್ನು ನಾಶ ಪಡಿಸುವಿಕೆ, ಹಣ್ಣುಗಳನ್ನು ಯಾ ಹುವ್ವುಗಳನ್ನು ಕೊಯ್ಯುವಿಕೆ, ಯಾ ಹುಲ್ಲನ್ನು ಕೊಯ್ಯುವಿಕೆ, ಯಾ ಬೇರುಸ್ಸಹಿತ ಕೀಳುವಿಕೆ, ಅಥವಾ ಯಾವ ವಿಧದಿಂದಲಾಗಲಿ, ರಸ್ತೆಗಳ ಬಾಜೂಗಳನ್ನು ಮತ್ತು ಬದುವುಗಳನ್ನು ನಾಶ ಪಡಿಸುವಿಕೆ, ಅಥವಾ ಕವಾಯತ್ ಜಾಗಾಗಳಲ್ಲಿ, ಯಾ ವಿಹಾರಾಪೇಕ್ಷೆಯುಳ್ಳವರಿಗಾಗಿ ಮಾತ್ರ ಉದ್ದೇಶಿಸಲ್ಪಟ್ಟ ಪಬ್ಲಿಕ ತೋಟಗಳಲ್ಲಿ ತಿರುಗಾಡಿ ರಾಪ್ತೆ ಮಾಡುವಿಕೆ,—ಜುಲ್ಮಾನೆ 10 ರೂಪಾಯಿಗಳು.

25. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದಫನ ಭೂಮಿಯಲ್ಲಾಗಲಿ, ಯಿಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಟ್ಟ ಯಾವ ಗೋರೀಯಲ್ಲಾಗಲಿ, ಶವದ ಪೆಟ್ಟಿಗೆಯನ್ನೂ ಯಾ ಶವವನ್ನೂ, ಭೂಮಿಯ ಮಟ್ಟದಕೆಳಗೆ ಮೂರು ಅಡಿಗಿಂತ ಕಡಮೆಯಾದ ಆಳದಲ್ಲಿರುವ ಹಾಗೆ ದಫನ ಮಾಡುವಿಕೆ.—ಜುಲ್ಮಾನೆ 5 ರೂಪಾಯಿ.

26. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದಫನ ಭೂಮಿಯಲ್ಲಾಗಲಿ, ಇಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಡದೇ ಯಿರುವ ಯಾವ ಗೋರೀಯಲ್ಲಾಗಲಿ, ಯಾವ ಶವದ ಪೆಟ್ಟಿಗೆಯನ್ನಾಗಲಿ, ಶವವನ್ನಾಗಲಿ, ಭೂಮಟ್ಟದ ಕೆಳಗೆ 5 ಅಡಿಗಳಿಗೆ ಕಡಮೆಯಾದ ಆಳದಲ್ಲಿರುವಂತೆ ದಫನ ಮಾಡುವಿಕೆ.—5 ರೂಪಾಯಿಗಳ ಜುಲ್ಮಾನೆ.

27. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದಫನ ಜಾಗಾದಲ್ಲಾಗಲಿ, ಎರಡು ಅಡಿಗೆ ಕಡಮೆಯಾದ ದೂರದಲ್ಲಿ ಮತ್ತು ಮ್ಯುನಿಸಿಪೆಲ್ ಬೋರ್ಡಿನವರಿಂದ ವಿಧಿಸಲ್ಪಡದ ಜಾಬಿನಲ್ಲಿ ದಫನ ಮಾಡುವಿಕೆ,—5 ರೂಪಾಯಿಗಳ ಜುಲ್ಮಾನೆ.

28. ದಫನ ಜಾಗಾಗಳ ಯಾ ದಹನ ಸ್ಥಳಗಳ ಸ್ವಂತಗಾರರು ಯಾ ಜಿಮ್ಮೆಉಳ್ಳವರು ದಫನ ಯಾ ದಹನವಾದ 24 ಘಂಟೆ ಹೊತ್ತಿನ ಒಳಗಾಗಿ, ಮೃತಪಟ್ಟ ಮನುಷ್ಯನ ಹೆಸರುಗಳು, ಸ್ತ್ರೀ ಅಥವಾ ಪುರುಷನೆಂಬದು, ವಯಸ್ಸು, ಮತ್ತು ವಾಸಸ್ಥಾನ, ಮರಣಕಾರಣ, ಯಿಂತಾದ್ದನ್ನು ಕುರಿತು ಆ ಜನಗಳಿಗೆ ಸಾಧ್ಯವಾದ ದರೋಬಸ್ತು ಸಂಗತಿಯನ್ನೂ ಬೋರ್ಡಿನವರಿಗೆ ತಿಳಿಸಲಿಕ್ಕೆ ಉಪೇಕ್ಷಿಸುವಣ,—ಜುಲ್ಮಾನೆ ರೂಪಾಯಿ 5.

29. ಕೊಬ್ಬನ್ನು ಕರಗಿಸುವದಕ್ಕೋಸ್ಕರ ಯಾ ಮಾಂಸ ಸಂಬಂಧವಾದ ಕಶ್ಮಲವನ್ನು, ಯಾ ರಕ್ತವನ್ನು ಕಾಯಿಸುವದಕ್ಕೋಸ್ಕರ ಉಪಯೋಗಿಸಲ್ಪಡುವ ಸ್ಥಳಗಳ, ಸಬ್ಬಿನಮನೆಯ, ಎಣ್ಣೇ ಕಾಯಿಸುವ ಮನೆಯ, ಬಣ್ಣಾ ಹಾಕುವ ಮನೆಯ, ತೊಗಲು ಹದಾಮಾಡುವ ಸ್ಥಳದ, ಇಟ್ಟಿಗೆ, ಕುಂಬಾರಸೂಳುಗಳ ಯಾ ಸುಣ್ಣದ ಗೂಡಿನ, ಸೇಗೋ ಯಾ ಸಕ್ಕರೇ ಕಾರಖಾನೆಯ, ಅಥವಾ ಅಸಹ್ಯವಾದ ಯಾ ಅನಾರೋಗ್ಯವಾದ ವಾಸನೆ ಯುಂಟುಮಾಡುವ ಇತರ ಕಾರಖಾನೆಯ ಯಾ ಕೆಲಸ ನಡೆಯುವ ಸ್ಥಳಗಳ, ಯಾ ಬಾಡಿಗೇ ಕುದುರೇಲಾಯಗಳು ಯಾ ಯಿತರ ಲಾಯಗಳು, ದನದ ಕೊಟ್ಟಿಗೆಗಳು, ಹಂದೀ ಗೂಡುಗಳು, ಇಂತಾವುಗಳ, ಸ್ವಂತಗಾರರು, ಯಾ ಹಿಡುವಳೀದಾರರು, ಯಿವುಗಳನ್ನು ಪ್ರತಿಸಲವೂ ತೆಗಸಿ ಹಾಕಬೇಕಾದ ಕಾಲದಲ್ಲಿ ಅಂತಾ ಯಾವ ಸ್ಥಳದೊಳಗೆ ಯಾ ಅದರ ಸುತ್ತಮುತ್ತಲೂ, ಯಿರುವ ವಿಶಿಷ್ಟ ಕಶ್ಮಲವನ್ನೂ, ರೋತೆಯನ್ನೂ, ವ ಕಸವನ್ನೂ, ಅಧಮಪಕ್ಷ 24 ಘಂಟೆಗೊಂದಾವರ್ತಿ ತೆಗದು ಹಾಕದೆ ಯಾ ತೆಗೆಯಿಸಿ ಹಾಕದೇ ಉಪೇಕ್ಷಿಸುವಿಕೆ,—ಜುಲ್ಮಾನೆ 10 ರೂಪಾಯಿಗಳು.

30. ಮನೆ ಸ್ವಂತಗಾರರು ಬಿದ್ದುಹೋದ ಗೋಡೆಗಳನ್ನು, ಯಾ ತಲೆಬಾಗಿಲ ನಿಲುವುಗಳನ್ನು ದುರಸ್ತು ಮಾಡಲಿಕ್ಕೆ, ಯಾ ತಮ್ಮ ಆವರಣಗಳ ಯಾ ಅಂಗಳಗಳ ಗೋಡೆಗಳಿಗೆ ಬಂಣ ಬಳಿಯುವದಕ್ಕೆ ಅಥವಾ ಯಿಟ್ಟಿಗೆಗಳಿಂದ ಯಾ ಹೆಂಚುಗಳಿಂದ ಅಂಚು ಕಟ್ಟಲಿಕ್ಕೆ ನೋಟಿಸ್ ಜಾರೀ ಮಾಡಲ್ಪಟ್ಟ ತರುವಾಯ ಉಪೇಕ್ಷಿಸುವಿಕೆ,—ಜುಲ್ಮಾನೆ 10 ರೂಪಾಯಿ.

31. ಪಬ್ಲಿಕ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ ಸಾದೇ ಬಡೆಯುವಿಕೆ—ಜುಲ್ಮಾನೆ 5 ರೂಪಾಯಿ.

32. ಸಂಗಡ ಯಿರತಕ್ಕಬಗ್ಗೆ ಸಾಕಾದಷ್ಟು ಮಂದಿ ಯಿಲ್ಲದೆ ರಸ್ತೆಯಲ್ಲಿ ಹೊಡಕೊಂಡು ಬರುವ ದನಗಳ ಯಾ ಹಂದಿಗಳ ಜಿಮ್ಮೆಯುಳ್ಳವರಾಗಿರುವಿಕೆ, ಅವುಗಳನ್ನು ಪಬ್ಲಿಕ ರಸ್ತೆಯಲ್ಲಿ ಮೇಯ್ಯಲಿಕ್ಕೆ ಬಿಡುವಿಕೆ, ಯಾ ಹಂದಿಗಳನ್ನು ಸ್ವೇಚ್ಛೆಯಾಗಿ ಯಿರುವದಕ್ಕೆ ಬಿಡುವಿಕೆ.

II. ಮ್ಯುನಿಸಿಪಲ್ ಸರಹದ್ದುಗಳೊಳಗೆ ಛೆಳಿಗ್ಯೆ 4 ಘಂಟೆ ಲಾಗಾಯತ್ ರಾತ್ರಿ 8 ಘಂಟೆ ವರಿಗೆ ಕಾಯುವವನಿಲ್ಲದೆ ಯಾವ ಮನುಷ್ಯನೂ ದನಗಳನ್ನು ಮೇಯಿಸಕೂಡದು, ಮತ್ತು ಕಾಯುವವನಿಲ್ಲದೆ ಮೇಯುತಿದ್ದು ಶಿಕ್ಕುವ ದನಗಳು ತೊಂಡುವಾಡೆಗೆ ಒಯ್ಯಲ್ಪಡಲಿಕ್ಕೂ, ಅವುಗಳ ಸ್ವಂತಗಾರರು ಇದರಡಿ 3ನೇ ಕಲಂನಲ್ಲಿ ವಿವರಿಸಲ್ಪಟ್ಟ ಜುರ್ಮಾನೆಗಳನ್ನು ತೆರಲಿಕ್ಕೂ ಗುರಿಯಾಗತಕ್ಕದ್ದು.

III. ಮ್ಯುನಿಸಿಪಲ್ ಸರಹದ್ದುಗಳೊಳಗೆ ರಾತ್ರಿ 8 ಘಂಟೆಗೂ, ಛೆಳಿಗ್ಯೆ 4 ಘಂಟೆಗೂ, ಮಧ್ಯೆ ದನಗಳನ್ನು ಮೇಯುವದಕ್ಕೆ ಯಾವ ಮನುಷ್ಯನೂ ಬಿಡಕೂಡದು. ಸದರೀ ಹೊತ್ತಿನ ಮಧ್ಯೆ ಮೇಯುತಿದ್ದು ಹಿಡಿಯಲ್ಪಟ್ಟ ದನಗಳು ತೊಂಡುವಾಡೆಗೆ ಹೊಡಿಯಲ್ಪಟ್ಟು, ಈ ಕೆಳಗೆ ನಮೂದಿಸುವ ಪ್ರಕಾರ ಜುರ್ಮಾನೆ ತೆತ್ತಹೊರ್ತು ಖುಲಾಸೇ ಮಾಡಲ್ಪಡಲಾರದು.

ಯೆಮ್ಮೇ ಕೋಣಗಳು ..	1—0—0	ಕರು ವ ಕತ್ತೆ ..	0—4—0
ಯೆತ್ತುಗಳು ಯಾ ಆಕಳು ..	0—8—0	ಕುದುರೆ ಯಾ ಟಾಕಣ ..	0—8—0
ಕುರಿ ಮ್ಯಾಕೆ	0—2—0		

33. ಒಂದು ಪಬ್ಲಿಕ್ ರಸ್ತೆಯಲ್ಲಿ ಯಾ ಒಂದು ಪಬ್ಲಿಕ್ ರಸ್ತೆಗೆ ಸಮೀಪವಾದ ಆಸ್‌ಪಾಸ್ ಪ್ರದೇಶದಲ್ಲಿ ದೇಹಭಾಧೆಗೆ ಹೋಗುವ ಅಥವಾ ಜನಗಳಿಗೆ ಹೇಸಿಕೆಯಾಗಿರುವ ಸ್ಥಳದಲ್ಲಿ ಯಾವ ಕಶ್ಮಲವನ್ನಾದರೂ, ಜಮಾಯಿಸಿ ಯಿಡುವ ಯಾವ ಮನುಷ್ಯನಾಗಲಿ, ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ಆವ್ವಲ್‌ದಫಾ ಅರ್ಧ ರೂಪಾಯಿ, ಎರಡನೇ ದಫಾ ಒಂದು ರೂಪಾಯಿ ಆತರುವಾಯ ನಡಿಸಲ್ಪಡುವ ಪ್ರತಿದಫಾಕ್ಕೂ, ಯೆರಡು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು.

34. ಅಲಿಯುವ ಯಾವ ತಿರಪಗಾರನೂ, (ಸ್ಟೇಷ್) (ಷಹರ್)ನ ಬೀದಿಗಳಲ್ಲಿ, ರಸ್ತೆಗಳಲ್ಲಿ ಯಾ ಸಂದಿಗಳಲ್ಲಿ ತಿರುಪಕ್ಕಾಗಿ ಬಾಧಿಸಕೂಡದು, ಯಾ ಜನಗಳನ್ನು ತಿರಪಪೇಡಕೂಡದು, ಮತ್ತು ರಸ್ತೆಗಳಲ್ಲಿ, ಬೀದಿಗಳಲ್ಲಿ ಯಾ ಗಲ್ಲಿಗಳಲ್ಲಿ ಯಾ ಬಂಡಿಗಳೊಳಗೆ ಯಾ ಮನೆಗಳೊಳಗೆ ತಿರಪಕ್ಕೋಸ್ಕರ ಬಾಧಿಸುವದಾಗಿ ಯಾ ಜನಗಳನ್ನು ತಿರುಪಪೇಡುವದಾಗಿ ತನಗೆ ಶಿಕ್ಕಿದ ಯಾ ತಮ್ಮಲ್ಲಿ ಫಿರ್ಯಾಧ ಮಾಡಲ್ಪಟ್ಟ, ಅಲಿಯುವ ಯಾವ ತಿರಪಗಾರರನ್ನಾಗಲಿ ಮ್ಯುನಿಸಿಪಲ್ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡೆದದಕ್ಕೋಸ್ಕರ ಖೈದಿನಲ್ಲಿ ತೆಗದುಕೊಳ್ಳಲಿಕ್ಕೆ ಪೋಲೀಸ್‌ನವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಈ ಉಪನಿಬಂಧನೆಯು, ಆ ಯಾ ಜಾತಿಯ ನೇಟಿವ್‌ಗಳಿಂದ ಆದರಿಸಲ್ಪಟ್ಟು, ಪ್ರತಿದಿನವೂ ಆಹಾರಕ್ಕಾಗಿ ತಮ್ಮ ಮನೆಗಳಿಗೆ ಬರುವಂತೆ ಪ್ರೋತ್ಸಾಹ ಪಡಿಸಲ್ಪಟ್ಟ ಯಾವ ವಿಧದೊಳಗೂ ತೊಂದರೆ ಕೊಡದಂತಾ ಮತಸಂಬಂಧಿಗಳಾದ ಯಾಚಕರ ವಿಷಯದಲ್ಲಿ ಬಾಧಕ ವಾಗುವದಿಲ್ಲವು.

ಮೇಲೆ ಕಂಡ ಉಪನಿಬಂಧನೆಗೆ ಬರಖಿಲಾಫ್ ನಡೆಯುವದರಿಂದ ಹಾಗೆ ಅಪರಾಧಮಾಡುವ ಮನುಷ್ಯನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ನಾಲ್ಕು ದಿನಗಳ ಸಾಧಾರಣ ಖೈದಿಗೆ ಗುರಿಯಾಗತಕ್ಕದ್ದು.

II. ಅಸಹ್ಯವಾದ, ಅಥವಾ ಅಂಟುವಂತಾ ರೋಗ ತಗಲಿಯಿರುವ ಜನಗಳು, ಮ್ಯುನಿಸಿಪಾಲಿಟಿಯ (ಷಹರಿನ) ಮಾರ್ಕೆಟ್‌ಗಳಲ್ಲಾಗಲಿ ಅಂಗಡಿಗಳಲ್ಲಾಗಲಿ ಯಾವ ಆಹಾರಪದಾರ್ಥವನ್ನಾಗಲಿ ಮಾರಕೂಡದೆಂತ ಅಥವಾ ಮಾರಾಟದ ಬಗ್ಯೆ ಹೊರಗೆ ಯಿಡಕೂಡದೆಂತ ನಿಷೇಧಿಸಲ್ಪಟ್ಟಿರುತ್ತಾರೆ. ಅಂತಾತಕಸೀರ್‌ವಂತರು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟು ಮೊದಲು ದಫಾಕ್ಕೂ, ತರುವಾಯ ಪ್ರತಿದಫಾಕ್ಕೂ, ಒಂದು ರೂಪಾಯಿಗೆ ಜಾಸ್ತೀ ಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

35. ಮ್ಯುನಿಸಿಪಲ್ ಸರಹದ್ದುಗಳಲ್ಲಿ ಇಡಲ್ಪಟ್ಟ ಕುದುರೆಗಳು ಯಾ ಟಾಕಣೆಗಳು, ಯೆತ್ತುಗಳು, ಬಂಡಿಗಳು, ಮತ್ತು ನಾಯಿಗಳು, ಇವುಗಳ ಸ್ವಂತಗಾರರು ಈ ಕೆಳಗೆ ಕಂಡ ಪ್ರಕಾರ ತೆರಿಗೆಗಳನ್ನು ಕೊಡತಕ್ಕದ್ದು.

ಯೆರಡು ಚಕ್ರಗಳ ಬಂಡಿಗಳು	ಜಷ್ ಮಾಹೆ 1ಕ್ಕೆ	ರೂ	2—0—0
ನಾಲ್ಕು ಚಕ್ರಗಳ ಬಂಡಿಗಳು	„	„	3—0—0
ಈ ಸೀಮೆ ತಟ್ಟುವಿಗೆ	„	„	1—0—0
ಪ್ರತಿ ಟಾಕಣೆಗೆ	„	„	2—0—0
ಜೊತೆ ಬಂಡೀ ಯಾ ಗಾಡಿ ಯೆತ್ತುಗಳಿಗೆ	„	„	2—0—0
ನಾಯಿಗೆ	„	„	1—0—0
ಪ್ರತಿ ಕುದುರೆಗೂ	„	„	4—8—0

ತೆರಿಗೆ ಕೊಡೋಣಾದ ಮತ್ತು ಲೈಸೆನ್ಸ್ ತೆಗದುಕೊಳ್ಳೋಣಾದ ನಾಯಿಗಳಿಗೆ ಕತ್ತಿಗೆ ಪಟ್ಟೀ ಹಾಕತಕ್ಕದ್ದು.

ಇಲ್ಲದಿದ್ದರೆ ತೊಂಡು ನಾಯಿಯೆಂತ ಯಾ ಬೇವಾರಸ್ ನಾಯಿಯೆಂತ ಕೊಂದು ಹಾಕಲ್ಪಡುವದಕ್ಕೆ ಗುರಿಯಾಗತಕ್ಕದ್ದು.

36. ಧೂಳು, ಕಸ, ಬೂದಿ, ವ ಕಚರಾ ಇಂತಾವುಗಳನ್ನು, ಆಚೆಗೆ ಸಾಗಿಸಿಕೊಂಡುಹೋಗುವ ಪರಿಯಂತ ಹಂಗಾಮೀಯಾಗಿ ಹಾಕಿ ಇಡಬಹುದಾದ, ಕದಲಿಸತಕ್ಕಂತಾ ಅಥವಾ ನೆಲೆಯಾಗಿರುವಂತಾ ಯೆಷ್ಟು ಕಚರೆ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ, ಪ್ರೆಸೀಡೆಂಟರು ಒದಗಿಸಿ, ಯುಕ್ತಗಳಾದ ಮತ್ತು ಅನುಕೂಲಗಳಾದ ಸ್ಥಳಗಳಲ್ಲಿ ಇಡಿಸಬಹುದು. ಮತ್ತು ಬೀದಿಗಳೊಳಗಿರುವ ಮನೆಗಳ ವಾಸಸ್ಥರು ಮೇಲೆ ಕಂಡ ದರೋಬಸ್ತು ಕಚರೇ ವಗೈರೇಯನ್ನು ಪ್ರತಿದಿನವಾಗಲಿ, ಅನ್ಯಥಾ ಯಾವದಾದರೊಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀದ್‌ಮಾಡಬಹುದು.

ಅಂತಾ ಆಧಾರಗಳು ಕಲ್ಪಿಸಲ್ಪಟ್ಟ ಬಳಿಕ ಮತ್ತು ಮೇಲೆ ಕಂಡಮೇರೆ ತಾಕೀದ್ ಮಾಡಲ್ಪಟ್ಟ ಬಳಿಕ ಪ್ರೆಸೀಡೆಂಟರಿಂದ ಗೊತ್ತುಮಾಡಲ್ಪಡುವ ಅಂತಾ ಆಧಾರಗಳಲ್ಲಿ ಯಾ ಸ್ಥಳಗಳಲ್ಲಿ ಮತ್ತು ಅಂತಾ ರೀತಿಯಾಗಿ; ಮತ್ತು ಅಂತಾ ಹೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪಧಾರ್ಥಗಳನ್ನಾಗಲಿ ಯಾವ ಬೀದಿಯೊಳಗಾಗಲಿ, ಯಾವದಾದರೂ ಮನೆಯ ಸ್ಥಿರವಾದ ಜಗಲಿ, ಯಾ ಹಜಾರ ಇಂತಾದ್ದರಮೇಲೆಯಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲಾಗಲಿ, ಜಮಾಯಿಸಿ ಇಡುವ ಯಾ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ; 2 ಆಣೆ ಲಾಗಾಯತು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರಿಂದ ಗೊತ್ತುಮಾಡಲ್ಪಡತಕ್ಕ ಸ್ಥಳಗಳೊಳಗೂ, ಆರೀತಿಯಾಗಿಯೂ, ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವನು ಕಶ್ಮಲವನ್ನು ಹಾಕಿ ಇಡುತಾನೋ ಯಾ ಇಡಗೊಡಿಸುತ್ತಾನೋ ಅಥವಾ ಯಾವದಾದರೂ ಬೀದಿಯಲ್ಲಿಯಾಗಲಿ, ಮನೆಯ ತಳವರಸೆ, ಜಗತಿ, ಯಾ ವಸಾರೆಯಲ್ಲಿ ಅಥವಾ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವದಾದರೂ ಜಮೀನಲ್ಲಾಗಲಿ, ನದೀತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವದಾದರೂ ಧೂಳು, ಕಸ, ಸಗಣಿ, ಬೂದಿ; ತೊಟ್ಟಿ, ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೆಯದಾದರೂ ಕಶ್ಮಲ, ಜಂತು ಸಂಬಂಧವಾದ ಯಾವದಾದರೂ ಪದಾರ್ಥ, ಅಥವಾ ಕನ್ನಡಿ ಯಾ ಮಡಿಕೆ ಚೂರು, ಇಟಿಗೇ ಮುರುಕು, ಗಾರೆ ಯಾ ಇತರ ಕಚರಾ, ಇಂತಾದ್ದನ್ನಾಗಲಿ, ಜಮಾಯಿಸಿ ಇಡುವಂತೆ ತನ್ನ ನೌಕರರಿಗೆ ಅಪ್ಪಣೇ ಕೊಡುತ್ತಾನೋ. ಅಂತಾ ಮನುಷ್ಯನು 2 ಆಣೆಗಳ ಲಾಗಾಯತ್ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

37. ಯಾವನು, (ಬಚ್ಚಲುನೀರು ಬೀದಿಯಲ್ಲಿ ಹರಿಯಗೊಡಿಸಿ ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿರುವ ಯಾವದಾದರೂ ಬಚ್ಚಲು, ಯಾ ಚರಂಡಿ, ಯಾ ಪಾಯಖಾನೆ ಇಂತಾದ್ದರ ನೀರನ್ನಾಗಲಿ, ದುರ್ವಾಸನೆಯುಳ್ಳ ಇನ್ಯಾವ ದ್ರವ ಪದಾರ್ಥವನ್ನಾಗಲಿ, ಯಾವ ಬೀದಿಯಲ್ಲಾದರೂ, ಹರಿಯುವಂತೆ ಯಾ ಚಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡುತ್ತಾನೋ ಯಾ ಮಾಡುವಂತೆ ಅಪ್ಪಣೆ ಕೊಡುತ್ತಾನೋ, ಅಥವಾ, ಯಾವ ಪಾಯಖಾನೆ ಇಂದಲಾಗಲಿ ಬಚ್ಚಲು ಗುಣಿಯಿಂದಲಾಗಲಿ ಅಸಹ್ಯವಾದ ಯಾವ ಪದಾರ್ಥವಾದರೂ ಯಾವ ಬೀದಿಯೊಳಗಾಗಲಿ ಇರುವ ಮೇಲ್ಭಾಗದ ಚರಂಡಿಯೊಳಗೆ ಹರಿಯುವಂತೆ ಯಾ ಚಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೇ ಕೊಡುತ್ತಾನೋ ಅಂತಾವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

38. ಪ್ರೆಸೀಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗಲಿ, ಅಸಹ್ಯವಾದ ಅಂತಾ ಯಿತರ ವಸ್ತುವನ್ನಾಗಲಿ ತೆಗೆಸಿಹಾಕುವದು ನ್ಯಾಯವಾಗಿರತಕ್ಕದ್ದು. ಪ್ರೆಸೀಡೆಂಟರು ಅಂತಾ ಕಾಲವನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ್ ಕೊಟ್ಟಾಗ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿ ಯಾದರೂ ತೆಗದುಕೊಂಡು ಹೋಗುತ್ತಾನೋ ಯಾ ತೆಗದುಕೊಂಡು ಹೋಗುವಂತೆ ಮಾಡುತ್ತಾನೋ ಮತ್ತು ಯಾವನು ಪ್ರೆಸೀಡೆಂಟರಿಂದ ನಿಷ್ಕರ್ಷೆ ಯಾಗಿರಲಿ ಆಗದೆ ಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರದಂತೆ ತಕ್ಕ ಮುಚ್ಚಳವಿಲ್ಲದೆ ಯಾವದಾದರೂ ಬಂಡಿ ಯಾನಸಾಧನ ಯಾ ಯಿತರ ಆಧಾರ ಯಾ ಪಾತ್ರ ಯಿಂತಾದ್ದನ್ನು ಅಂತಾ ಯಾವ ಕಾರ್ಯಕ್ಕೋಸ್ಕರವಾಗಿ ಉಪಯೋಗಿಸುತ್ತಾನೋ ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗೆಸಿಕೊಂಡು ಹೋಗುವಲ್ಲಿ ಅದನ್ನು ಕೆಳಗೆ ಚಲ್ಲುತ್ತಾನೋ ಯಾ ಸುರಿಯುತ್ತಾನೋ, ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲವಾದರೂ ಚೆಲ್ಲಿದ ಅಥವಾ ಬಿದ್ದ ಕಡೆಯಲ್ಲೇ! ಅದನ್ನು ಚನ್ನಾಗಿ ಗುಡಿಸಿ ಸಾಫ್‌ಮಾಡುವದಿಲ್ಲವೋ, ಯಾವನು ಮೇಲೆ ಕಂಡ ಯಾವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ ಯಾನ ಸಾಧನ ಆಧಾರ ಯಾ ಪಾತ್ರ ಇಂತಾದ್ದನ್ನು ಪ್ರೆಸೀಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟಿಸ್‌ಮೂಲಕ ಸದರೀ ಬಗ್ಯೆ ಮೊಕರರ್ ಮಾಡುವ ಬೀದಿ, ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡೆಯುತ್ತಾನೋ, ಯಾ ತೆಗದುಕೊಂಡು ಹೋಗುತ್ತಾನೋ, ಅಥವಾ ಹೊಡೆಯುವಂತೆ ಯಾ ತೆಗದು ಕೊಂಡು ಹೋಗುವಂತೆ ಮಾಡುತಾನೋ, ಅಂತಾ ಮನುಷ್ಯನು 5 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

39. ಈ ಉಪನಿಬಂಧನೆಗಳಿಂದ ಉಂಟು ಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಕಶ್ಮಲವನ್ನು ಹಾಕಿ ಇಡುವ ಬಗ್ಯೆ, ಮಲ, ಸಗಣಿ, ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ, ಮತ್ತು ಈ ಉಪನಿಬಂಧನೆಗಳ ಬಾಬತು ಮೇಲೆ ಕಂಡ ಕಾರ್ಯಗಳಿಗಾಗಲಿ, ಅವೈಕಿ ಯಾವ ಕಾರ್ಯಗಳಿಗಾಗಲಿ ಬೇಕಾದ ದರೋಬಸ್ತು ಜರ್ನಾವಾರ್‌ಗಳನ್ನೂ, ಬಂಡಿಗಳನ್ನೂ, ಸಾಧನ್ನಗಳನ್ನೂ, ಇತರ ವಸ್ತುಗಳನ್ನೂ, ಇಡುವ ಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಮೆಂಬರ್‌ಗಳು, ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು. ಯಾ ಬದಗಿಸತಕ್ಕದ್ದು, ಮತ್ತು ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಮೆಂಬರ್‌ಗಳು, ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು; ಯಾ ಬಾಡಿಗ್ಯೆ ತೆಗದು ಕೊಳ್ಳಬಹುದು, ಅಥವಾ ತಮ್ಮಿಂದ ಕೊಂಡುಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದುಕೊಳ್ಳತಕ್ಕ ಯಾವ ಜಮೀನನಲ್ಲಾಗಲಿ ಯಾವ ಹೊಸ ಕಟ್ಟಡವಾದರೂ ಕಟ್ಟಿಸಲ್ಪಡುವಂತೆ ಮಾಡಬಹುದು.

40. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ, ಅದರ ಸಮೀಪದಲ್ಲಾಗಲಿ, ಪ್ರತಿ ಮನೆಯ ವಾಸಸ್ಥನೂ, ತನ್ನ ವತಾರದಿಂದ, ಮಲವಗೈರೇ ತೆಗದು ಕೊಂಡು ಹೋಗುವ ಬಗ್ಯೆ ಮ್ಯುನಿಸಿಪಲ್ ಮೆಂಬರ್‌ಗಳಿಂದ ಬದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ, ಸಗಣಿಯನ್ನೂ, ಇತರ ಕಚರೇಯನ್ನೂ ಮ್ಯುನಿಸಿಪಲ್ ಮೆಂಬರ್‌ಗಳು ನಿಯಮಿಸುವ ಕಾಲದಲ್ಲಿಯೂ, ಅಂತಾ ರೀತಿಯಾಗಿಯೂ ಸಾಗಿಸುವದು ಅವನ ಕಾರ್ಯವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರ ಕಚರೆ ಇಂತಾದ್ದನ್ನು ಸಾಗಿಸಿಕೊಂಡು ಹೋಗಬೇಕೆಂದು ಖಾಯಿಷ್ ಮಾಡಿದಲ್ಲಿ ಈ ಬೈಲಾನಿಬಂಧನೆಗಳ 38ನೇ ಸೆಕ್ಷನ್ ನಿಬಂಧನೆಗಳಿಗೆ ಅನುಗುಣವಾಗಿ ಆ ಮೇರೆ ಮಾಡುವದು ಅವನ ಎಖ್ತ್ಯಾರೀ ಮೇಲೆ ಇರತಕ್ಕದ್ದು.

41. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದಿನೊಳಗೆ ಯಿರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರದಲ್ಲಿ ಅಲ್ಲದೆ ಅನ್ಯಥಾ 24 ಗಂಟೆಗಳಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರಾ, ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಯಿಂತಾದ್ದನ್ನು ಅಂತಾ ಯಾವದಾದರೂ ಮನೆಗಳ ಛಾವಣೀಯಲ್ಲಿ ಯಾ ಛಾವಣಿಯ ಮೇಲೆ ಅಥವಾ ಅಂತಾ ಮನೆಗೆ ಸೇರಿದ ಮತ್ತು ಅಂತಾ ಮನೆಯ ವಾಸಸ್ಥನಿಂದ ವಾಸ ಮಾಡಲ್ಪಡುವ ಯಾವ ಔಟ್ ಹೌಸ್ ವಗೈರೆಯ ಛಾವಣೀ ಯೊಳಗೆ ಯಾ ಅವರ ಮೇಲ್ಗಡೆ, ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ, ಯಿಡುತ್ತಾನೋ ಯಾ ಯಿಡಗೊಡಿಸುತ್ತಾನೋ ಅಂತಾವನು 2 ಆಣೆಗಳ ಲಾ॥ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

42. ಝಾಡ್ ಮಾಲೀಯಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ಏಜಂಟರ ಮಾರಿಫತ್ ಮಾಡಿಸುತ್ತೇವೆಂತ, ಯಾವ ಮನೆಯ ವಾಸಸ್ಥನಿಗಾಗಲಿ, ವಾಸಸ್ಥರಿಗಾಗಲಿ, ಯಿದರ ಹಿಂದಿನಕಡೇ ಸೆಕ್ಷನ್‌ಗಳನ್ನು ಅನುಸರಿಸಿ ನೋಟಿಸ್ ಕೊಡೋಣವೂ, ಮತ್ತು ಈ ಬಗ್ಯೆ ಸಾಕಾದಷ್ಟು ಮಂದಿ ಝಾಡ್‌ಮಾಲೀಗಳನ್ನು ಯಿಡುವಣವೂ, ಮೆಂಬರ್‌ಗಳ ಕಾರ್ಯವಾಗಿರತಕ್ಕದ್ದಲ್ಲದೆ ಯಾವ ಮನೆಯನ್ನು ಗುಡಿಸುವ ಕೆಲಸವು ಹಾಗೆ ಅವರುಗಳಿಂದ ವಹಿಸಲ್ಪಡುತ್ತೋ ಅಂತಾ ಪ್ರತಿ ಮನೆಗೂ, ಆ ಮನೆಯ ವಾಸಸ್ಥರು ಸಾಧಾರಣವಾದ ಬಬ್ಬ ಝಾಡ್ ಮಾಲೀಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದೋ ಅಷ್ಟಕ್ಕೆ ಜಾಸ್ತೀಯಿಲ್ಲದಂತೆ ಒಂದು ತೀರ್ವೆ ಮೊಕರರ್ ಮಾಡುವದು ಅವರುಗಳಿಗೆ ನ್ಯಾಯ್ಯವಾಗಿರತಕ್ಕದ್ದು.

43. ಮೆಂಬರ್‌ಗಳ ಹುಕ್ಕುಂ ಅನುಸರಿಸಿ ಬೀದಿಗಳಲ್ಲಿಯೂ ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ, ಜಲದಾರೆಗಳಲ್ಲಿಯೂ, ಬಚ್ಚಲು ತೊಟ್ಟಿಗಳಲ್ಲಿಯೂ, ಜಮಾಯಿಸಲ್ಪಡುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲದಾರೆ, ರೊಜ್ಜು, ಮಣ್ಣು ಸಗಣಿ, ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕವು; ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೇಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳೀ ಯಾಗುವ ಹಣವು ಈ ಬೈಲಾ ನಿಬಂಧನೆಗಳ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

44. ಮೆಂಬರ್‌ಗಳು ತಮ್ಮಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ್ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತ ಕೆಲಸಗಳನ್ನೂ, ಯಂತ್ರಗಳನ್ನೂ ಒದಗಿಸಬಹುದು.

45. ಮೆಂಬರುಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಪಬ್ಲಿಕ್ ಬೀದಿಗಳು, ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಆವಶ್ಯಕವೆಂದು ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ತೋರುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಒದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮದಲ್ಲಿ ಇಡಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಒರಸಿ ಪಾಕ್ ಮಾಡುವದು, ಸಿದ್ಧಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಮೆಂಬ

ರಗಳು ಆಗಿಂದಾಗ್ಗೆ ತಮಗೆ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ಜಾಸ್ತೀ ಮಾತಬು
ಹುದು, ಅಥವಾ ಬೇರೇ ವಿಧವಾಗಿ ಬದಲಾವಣೀ ಮಾಡಬಹುದು.

46. ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದತರುವಾಯ್ತು ಯಾವ ಪಬ್ಲಿಕ್ ಬೀದಿಯಲ್ಲಿಯಾಗಲಿ ರಸ್ತೆಯಲ್ಲಿಯಾಗಲಿ
ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾಯಿರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ ಇಂತಾದ್ದರಲ್ಲಿ
ಯಾಗಲಿ, ಇಂತಾದ್ದರಮೇಲೆಯಾಗಲಿ ಯಾವನು ಯಾವದ್ದಾದರೂ ಗೋಡೆ ಹಾಕುತ್ತಾನೋ ಅಥವಾ ಯಾವ ಆವರಣ ಮುಂತಾ
ದ್ದನ್ನು ಯಾ ಇತರ ನಿರೋಧವನ್ನು, ಯಾ ಬತ್ತುವರಿಯನ್ನು ಕಟ್ಟುತ್ತಾನೋ ಯಾ ಇಡುತ್ತಾನೋ ಅಂತಾವನು ಯೆರಡಾಣೆ
ಲಾಗಾಯಿತು ಐದ್ದುರೂಪಾಯಿಗಳವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಮೆಂಬರಗಳು ಅಂತಾ ಯಾವ ನಿರೋಧವ
ನ್ನಾಗಲಿ, ಬತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಹಾಗೆ ತೊಲಗಿಸುವದರ ಲಾಗವಡು ಸದರೀ
ಅಟಕಾವ ವಗೈರೆ ಉಂಟುಮಾಡಿದ ಮನುಷ್ಯನು ಕೊಡತಕ್ಕದ್ದಾಗಿ, ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂ
ಲ್ಮಾಡಲ್ಪಡತಕ್ಕದ್ದು. ಪೊಲೀಸ್‌ಸೂಪರಿಂಟೆಂಡೆಂಟರ ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಿ ಆಗಲಿ ಉತ್ಸವ ಮದಿವೆ
ಮುಂತಾದ ಸಮಯಗಳಲ್ಲಿ ಹಂಗಾಮಿಯಾಗಿ ಯಾವದಾದರೂ ಕಟ್ಟುವದಕ್ಕೆ ಅಪ್ಪಣೆ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿ
ರುವ ಯಾವ ಅಂಶವೂ ಮೆಂಬರಗಳನ್ನು ಅತಂಕಪಡಿಸತಕ್ಕದ್ದಲ್ಲವು.

47. ಯಾವನು ಯಾವ ಪಬ್ಲಿಕ್ ಬೀದಿಯ, ರಸ್ತೆಯ, ತಳವರಿಸೇ ಕಲ್ಲುಗಳನ್ನಾಗಲಿ, ಚಾಪು ಕಲ್ಲುಗಳನ್ನಾಗಲಿ ಇತರ
ಸಾಮಾನುಗಳನ್ನಾಗಲಿ, ಅಥವಾ ಆವರಣಗಳು, ಕಂಭಗಳು ಇಂತಾವುಗಳನ್ನಾಗಲಿ, ಪಬ್ಲಿಕ್ ದೀಪಸ್ತಂಭಗಳನ್ನಾಗಲಿ, ಪ್ರೆಸೀಡೆಂ
ಟರ ಬರವಣಿಗೇ ಮೂಲಕವಾದ ಅನುಮತೀ ಯಿಲ್ಲದೆ ಅಥವಾ ಯಿತರ ನ್ಯಾಯವಾದ ಅಧಿಕಾರವಿಲ್ಲದೆ ಕೆಡಿಸುತ್ತಾನೋ, ಸ್ಥಳ
ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ, ಅವುಗಳಲ್ಲಿ ಯೇನಾದರೂ ಬದಲಾವಣೀ ಮಾಡುತ್ತಾನೋ ಅಂತಾವನು ಯೆರಡಾಣೇಲಾ
ಗಾಯಿತು ಐದು ರೂಪಾಯಿಗಳ ವರಿವಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

48. ಯಾವ ಬೀದಿಯು ಯಾವ ಹೆಸರಿನಲ್ಲಿ ತಿಳಿಯಲ್ಪಡತಕ್ಕದ್ದೋ ಆ ಹೆಸರನ್ನು ಪ್ರೆಸೀಡೆಂಟರು ಆಗಿಂದಾಗ್ಗೆ ಪ್ರತಿ
ಬೀದಿಯ ಯೆರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂಥಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾ
ದರೂ ಕಟ್ಟಡ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಇಡಿಸಬಹುದು, ಯಾ ಕಟ್ಟಿಸಬಹುದು; ಮತ್ತು
ಯಾವನು ಅಂತಾ ಹೆಸರನ್ನು ನಾಶಪಡಿಸುತ್ತಾನೋ ಕಿತ್ತುಹಾಕುತ್ತಾನೋ ಕೆಡಿಸುತ್ತಾನೋ ಅಥವಾ ಪ್ರೆಸೀಡೆಂಟರ ಅಪ್ಪಣೇಮೇಲೆ
ಇಡಲ್ಪಟ್ಟ ಹೆಸರು ಶಿವಾಯಿ ಬೇರೆ ಹೆಸರು ಯಿಡುತ್ತಾನೋ ಅಂತಾವನು ಯರಡಾಣೇ ಲಾಗಾಯತು ಐದು ರೂಪಾಯಿಗಳ ವರಿ
ವಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದು.

49. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟಡವಾದರೂ, ಗೋಡೆಯಾದರೂ, ಅದಕ್ಕೆ ಸೇರಿಸಲ್ಪಟ್ಟ ಮತ್ತೇನಾದ
ರೂ, ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವಹಾಗೆ ಯಿರುವದಾಗಿ, ಅಥವಾ ಅಂತಾ ಕಟ್ಟಡದ ವಾಸಸ್ಥರಿಗೆ ಯಾ
ಆಸ್‌ಪಾಸ್ ಕಟ್ಟಡಗಳಿಗೆ ಯಾ ಅವುಗಳ ವಾಸಸ್ಥರಿಗೆ, ಯಾ ಅನುಭವದಾರರಿಗೆ ಯಾ ಬೀದೀಯಲ್ಲಿ ಹೋಗತಕ್ಕವರಿಗೆ ಯಾವರೀತಿಯಿಂದ
ಲಾದರೂ ಅಪಾಯಕರವಾಗುವದಾಗಿ ಪ್ರೆಸೀಡೆಂಟರಿಗೆ ತೋರಬಂದರೆ, ಸದರೀ ಪ್ರೆಸೀಡೆಂಟರು ತಮಗೆ ಜರೂರ್ ತೋರಿದರೆ, ಬೀದಿಯಲ್ಲಿ
ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಹಲಿಗೆಯನ್ನೂ ಯಾ ಆವರಣವನ್ನೂ, ಕೂಡ್ಲೇ ಹಾಕಿಸತಕ್ಕದ್ದು. ಮತ್ತು ಮಾಲೀಕನು
ಫಲಾನೇ ಯವನೆಂತ ತಿಳಿದಿದ್ದು, ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವನಾಗಿ ಯಿದ್ದಲ್ಲಿ, ಅವನಿಗೆ ಬರವಣಿಗೇ
ಮೂಲಕ ನೋಟಿಸ್ ಕೊಡಿಸತಕ್ಕದ್ದಲ್ಲದೇ ಅಂತಾ ನೋಟಿಸನ್ನು ಅಂತಾ ಕಟ್ಟಡ ವಗೈರೆಯ ಬಾಗಲಿಗಾಗಲಿ, ಯಿತರ ಪ್ರಸಿದ್ಧವಾದ
ಭಾಗದೊಳಗಾಗಲಿ, ಚಿಕಟಾಯಿಸತಕ್ಕದ್ದು ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡ
ತಕ್ಕದರಲ್ಲಿ ಸಂದರ್ಭಾನುಸಾರ, ಅಂತಾ ಕಟ್ಟಡವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೊ
ಡ್ಲೇ ತೆಗೆದು ಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತು ಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿ
ಗೆ ತಾಕೀದ್ ಮಾಡತಕ್ಕದ್ದು, ಮತ್ತು ಅಂತಾ ಮಾಲೀಕ ಯಾ ವಾಸಸ್ಥನು, ಅಂತಾ ನೋಟಿಸ್ ಕೊಟ್ಟ ಮೂರುದಿವಸಗಳೊಳಗಾಗಿ
ಸದರೀ ಕಟ್ಟಡವನ್ನು ರಿಪೇರ್ ಮಾಡಲಿಕ್ಕೆ ಯಾ ಕಿತ್ತು ಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಷುರು ಮಾಡಿ ಯುಕ್ತವಾದ
ಮುತವಜ್ಜೇಯಿಂದ ಪೂರೈಸದೇ ಹೋದಲ್ಲಿ ಪ್ರೆಸೀಡೆಂಟರು, ಸದರೀ ಕಟ್ಟಡ, ಗೋಡೆ, ಯಾ ಯಿತರ ವಸ್ತು ಯಿಂತಾದ್ದರ ಪೈಕಿ ಶಿವಿಶಿ
ಷ್ಟವನ್ನಾಗಲಿ, ತಾವು ಜರೂರೆಂದು ಭಾವಿಸುವಷ್ಟು ಭಾಗವನ್ನಾಗಲಿ, ಕಿತ್ತು ಹಾಕಿಸತಕ್ಕದ್ದು, ಯಾ ರಿಪೇರ್ ಮಾಡಿಸತಕ್ಕದ್ದು, ಯಾ
ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀ ಕಟ್ಟಡದ ಸಾಮಾನುಗಳನ್ನು ಸದರೀ
ಬಗ್ಗೆ ತಮಗೆ ಯುಕ್ತ ತೋರುವ ಪ್ರಕಾರ ಉಪಯೋಗಿಸಬಹುದು, ಮತ್ತು ಆಬಗ್ಗೆ ಹಿಡಿದ ದರೋಬಸ್ತು ಲಾಗವಡೂ ಸದರೀ ಕಟ್ಟಡ
ಮುಂತಾದವುಗಳ ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

50. ಮೇಲೆ ಕಂಡ ಅಧಿಕಾರ ಬಲದಿಂದ ಅಂತಾ ಯಾವ ಕಟ್ಟಣವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತುಹಾಕಲ್ಪಟ್ಟಲ್ಲಿ, ಮೆಂಬರ್‌ಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಯೆಷ್ಟು ಕಿತ್ತುಹಾಕಲ್ಪಡುತ್ತೋ ಅಷ್ಟನ್ನು, ಹರಾಜ್ ಹಾಕಿಸಿ ಅಂತಾ ಹರಾಜ್ ಹುಟ್ಟುವಳೀ ಹಣವನ್ನು, ಕಿತ್ತುಹಾಕಿದ ಲಾಗವಡನ್ನ ಕೊಡತಕ್ಕ ಬಗ್ಯೆ, ವಿನಿಯೋಗಿಸಬಹುದು. ಅಂತಾ ವಿಕ್ರಯದ ಮೊಬಲಗಿನ ಪೈಕೀ ಖರ್ಜು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟಣದ ಯಾ ಗೋಡೆಯ ಮಾಲೀಕನು ಹರಾಜ್ ತಾರೀಖು ಲಗಾಯತ್ ಆರು ತಿಂಗಳೊಳಗಾಗಿ ಬಂದು ಕೇಳಿದರೆ ಅವನಿಗೆ ಕೊಟ್ಟುಬಿಡತಕ್ಕದ್ದೇಹೊರತು ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು. ಮೆಂಬರ್‌ಗಳು, ಅಂತಾ ಸಾಮಾನುಗಳನ್ನು ಮೇಲೆಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸಿದ್ದಾಗ್ಯೂ, ಸದರೀ ಲಾಗವಡಿನ ವಿಶಿಷ್ಟ ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಬೈಲಾ ನಿಬಂಧನೆಗಳ ದೆಸೆಯಿಂದ ಯಾವ ಪರಿಹಾರ ಉಂಟುಮಾಡಲ್ಪಟ್ಟಿರುತ್ತೋ ಮೇಲ್ಕಂಡ ಹರಾಜ್‌ನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ್ದು ಜಾತಾ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೂ ಅದೇ ಪರಿಹಾರ ವುಂಟಾಗಿರತಕ್ಕದ್ದು.

51. ಮ್ಯುನಿಸಿಪೆಲ ಕಮ್ಮಿಷನಿನ ಪ್ರೆಸೀಡೆಂಟರು, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ, ತಾವಾದರೂ, ತಮ್ಮ ನೌಕರರ ಮಾರೀಫತ್ತಾದರೂ, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟಮೇಲೆ ದರೋಬಸ್ತು ಕಟ್ಟಗಳೊಳಗೂ, ಪ್ರವೇಶಿಸಿ ನೋಡುವದು, ವಿಶಿಷ್ಟ ಕಟ್ಟವಾಗಲಿ, ಯಾವ ಭಾಗವಾಗಲಿ, ಆರೋಗ್ಯಕ್ಕೋಸ್ಕರ ಕೂಡ್ಲೆ ಒಳಗೂ ಹೊರಗೂ ಸುಣ್ಣ ಬಳಿಸಲ್ಪಡುವಂತೆ ಅಥವಾ ಯಿತರ ರೀತಿಯಿಂದ ಪಾಕ್ ಮಾಡುವಂತೆ ಬರವಣಿಗೇ ಮೂಲಕ ಹುಕ್ಕುಂ ಕೊಡುವದು ಸಹ ಅವರಿಗೆ ನ್ಯಾಯ್ಯವಾಗಿರತಕ್ಕದ್ದು. ಅಂತಾ ಕಟ್ಟದ ಮಾಲೀಕ ಯಾ ವಾಸಸ್ಥನು ತನಗೆ ಅಂತಾ ಹುಕ್ಕುಂ ಕೊಡೋಣಾದ್ದು ಮೊದಲು ಯೆಂಟುದಿನಗಳೊಳಗಾಗಿ ಆ ಮೇರೆ ಪಾಕ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ, ಪ್ರೆಸೀಡೆಂಟರು ಆ ಕೆಲಸ ಮಾಡಿಸಬಹುದು, ಮತ್ತು ಆಬಗ್ಯೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಮ್ಯುನಿಸಿಪೆಲ್ ಇಲಾಖೆಯ ಸ್ಯಾನಿಟೆರಿ ಇನ್ಸ್‌ಪೆಕ್ಟರ್ ಎಂಬ ಅಧಿಕಾರಿಯು ರೋಗ ನಿಮಿತ್ತಗಳಾದ ಕಟ್ಟಗಳನ್ನು, ಹೊಗೆ ಹಾಕಿಸುವ ಬಗ್ಯೆ ಅಥವಾ ರೋಗ ವ್ಯಾಪನೆಯ ನಿಮಿತ್ತವನ್ನು ನಿವರ್ತಿ ಮಾಡುವ ಬಗ್ಯೆ ಮುಚ್ಚಿಸತಕ್ಕದ್ದು. ಪ್ರೆಸೀಡೆಂಟರ ಬರವಣಿಗೆಯ ಮೂಲಕ ಮಂಜೂರಾತಿಯನ್ನು ಅನುಸರಿಸಿ ಅಂತಾ ಕ್ರಮಗಳನ್ನು ವಿರ್ಪಡಿಸತಕ್ಕದ್ದು.

52. ಯಾವ ಕಟ್ಟವಾದರೂ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಬಂದು ವಕ್ಕಲಿಗಿಂತ ಹೆಚ್ಚಾಗಿ ಇರುವಾಗ ಮ್ಯುನಿಸಿಪೆಲ್ ಬೋರ್ಡಿನ ಪ್ರೆಸೀಡೆಂಟರಿಗೆ ಸಾನಿಟೇರಿ ಇನ್ಸ್‌ಪೆಕ್ಟರವರು ಸೆರಟಿಫೈ ಮಾಡುವಲ್ಲಿ, ಪ್ರೆಸೀಡೆಂಟರು, ಅಂಥಾ ಜನ ಸಮ್ಮರ್ದವನ್ನು ತಗ್ಗಿಸುವಬಗ್ಯೆ ಮಾಜಿಸ್ಟ್ರೇಟರಲ್ಲಿ ನಡವಳಿತ ನಡಿಸತಕ್ಕದ್ದು. ಮಾಜಿಸ್ಟ್ರೇಟರು ಅದರ ಮೇಲೆ ತಮಗೆ ಯುಕ್ತತೋರುವ ಹುಕ್ಕುಂ ಕೊಡತಕ್ಕದ್ದು. ಅಂತಾ ಜನ ಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕ್ಕುಂ ತಾರೀಖು ತರುವಾಯ ಹಾಗೆ ಜನ ಸಮ್ಮರ್ದವಿರುವ ಪ್ರತಿದಿನಕ್ಕೂ, ಬಂದು ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

53. ಯಾವದಾದರೂ ಜಮೀನಿನಲ್ಲಿರತಕ್ಕ ಹೆಲೀಗಳು ಭೂಮಿಯಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಹಾಗೆ ಅವುಗಳನ್ನು ಕತ್ತರಿಸುವಂತೆ, ಯಾ ಕೊಂಬೆಗಳು ಕಡಿಯುವಂತೆ, ಹುತ್ತು ಯಾವದಾದರೂ ಪಬ್ಲಿಕ್‌ರಸ್ತೆ ಅಥವಾ ಬೀದಿಯಮೇಲೆ ವಾಲಿಇರುವದರಿಂದ ದಾರಿಗೆ ಅಟಕಾವ್‌ಆಗುವಂತಾ, ಅಥವಾ ಲುಕ್ಸಾನ್ ಆಗುವಂತಾ, ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುತಿದ್ದರೆ, ಅಂತವನಿಗೂ, ಅದರ [illegible]ವದಾರನಿಗೂ, ಪ್ರೆಸೀಡೆಂಟರು ಬರವಣಿಗೆಯ ಮೂಲಕ ನೋಟಿಸ್ ಕೊಡಬಹುದು. ಅಂತಾ ನೋಟಿಸ್‌ನಲ್ಲಿ ಕಂಡ ತಾರೀಖುಲಗಾಯತ್ ಎಂಟುದಿನಗಳೊಳಗಾಗಿ, ಅದರಂತೆ ನಡೆಯದೆ ಇದ್ದ ಪಕ್ಷಕ್ಕೆ ಮಾಲೀಕನಾಗಲಿ, ಅನುಭವದಾರನಾಗಲಿ, ಮಾಜಿಸ್ಟ್ರೇಟರಮುಂದೆ ತಕಸೀರ್ ಅಪಾದನೆಪಟ್ಟು 2 ರೂಪಾಯಿಗಳ ಲಗಾಯತ್ 5 ರೂಪಾಯಿಗಳವರಿಗೆ ಬಂದು ಜುರ್ಮಾನೆಗೂ, ಮತ್ತು ಅಂತಾ ತಕಸೀರಿಗಾಗಿ ಆಪಾದನೆ ಆದಮೇಲೆ ಸದರೀ ತಕಸೀರ್ ನಡೆಯುತ್ತಿರುವ ಪ್ರತಿದಿನಕ್ಕೂ, ಬಂದುರೂಪಾಯಿ ಮೊದಲು ಹತ್ತು ರೂಪಾಯಿಗಳ ವರಿಗೆ ಬಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

54. ಕ್ರಮಪ್ರಕಾರ ನೋಟಿಸ್ ಕೊಡಲ್ಪಟ್ಟತರುವಾಯ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸೀಡೆಂಟರಿಂದ ಲೈಸೆನ್ಸ್ ಪಡೆಯದೆ ಮ್ಯುನಿಸಿಪೆಲ್ ಸರಹದ್ದಿನೊಳಗೆ ಬಂದು ಸ್ಥಳದಲ್ಲಿ ಯಾವದಾದರೂ ಬಾಡಿಗೇ ಕುದುರೆಗಳ ಯಾ ಬಂಡಿಗಳ ತಬೇಲೀಗಳು, ಕುದುರೆಲೈನ್‌ಗಳು, ಕುದುರೇ ಚಿಕಿತ್ಸೇಶಾಲೆಗಳು ಬಂಡಿಮಿಟ್ಟೆಗಳು, ದನಗಳ ಕೊಟ್ಟಿಗೆಗಳು ಅಥವಾ, ಪಬ್ಲಿಕ್ಕಾಗಿ ಬಂದು ಇಳಿದುಕೊಳ್ಳುವಬಗ್ಯೆ ಇಡೋಣಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ, ಮೇಕೆ, ಯಾ ಹತ್ತಕ್ಕೆ ಮೀರಿದ ಕೊಂಬುಗಳುಳ್ಳ ಜಾನವರ್‌ಗಳು ಇಂತಾವುಗಳಿಗೆ ಸ್ವಂತಗಾರನಾಗಿರುವ, ಯಾ ಇವುಗಳನ್ನು ಇಟ್ಟು ಇರುವ ಯಾವನಾಗಲಿ 2 ಆಣೆಗಳ ಮೊದಲು, 5 ರೂಪಾಯಿಗಳವರಿಗೆ ಬಂದು ಜುರ್ಮಾನೆಗೂ, ಅಂತಾ ತಕಸೀರಿಗಾಗಿ ಆಪಾದನೆಆದಮೇಲೆ ಅಂತಾ ತಕಸೀರ್ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 1 ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

55. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸೀಡೆಂಟರ ಅಭಿಪ್ರಾಯ ಪ್ರಕಾರ ಆಸ್‌ಪಾಸ್ ಜನಗಳಿಗೆ ಬಾಧಕವಾಗುತ್ತೆಂದು ತೋರುವ ಯಾವ ಹಂದಿಗಳನ್ನಾಗಲಿ ಯಾವನು ಇಡುತ್ತಾನೋ ಅವನು 2 ಆಣೆಗಳ ಮೊದಲು 5 ರೂಪಾಯಿಗಳ ವರೆಗೆ ಬರುವ ಜುರ್ಮಾನೆಗೂ, ಅಂತಾ ತಕ್ಸೀರ್ ಸ್ಥಾಪನೆಯಾದ ಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 5 ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದಲ್ಲದೆ, ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸೀಡೆಂಟರ ಹುಕ್ಕುಂ ನಿಂ, ಯಾವ ನುಕ್ಸಾನ್ ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಪೂರಾಗಿ ಕೊಂದು ಹಾಕ ಬಹುದು.

56. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ, ಯಾ ಅವುಗಳ ಮಾರ್ಗವಾಗಿ ಯಾ ಕೆಳಗಡೆಗೆ, ಇರುವಂತಾ, ಅಥವಾ ತರುವಾಯ ಕಲ್ಪಿಸಲ್ಪಡುವಂತಾ ದರೋಬಸ್ತು ಪಬ್ಲಿಕ್ ಬೆಚ್ಚಲುಗಳು, ಚರಂಡೀಗಳು, ಮತ್ತು ತವರಾಂ ಬಚ್ಚಲುಗಳು, ಚರಂಡೀಗಳು, ನಲ್ಲೀಗಳು, ಮೊಹರೀಗಳು ಸಹ ಮೆಂಬರ್‌ಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿರಲಿ, ಅನ್ಯಥಾ ಆದ್ದಾಗಿರಲಿ, ಅಂತಾ ಕೆಲಸಗಳು, ಅವುಗಳಿಗೆ ಸಂಬಂಧಿಸಿದ ದರೋಬಸ್ತು ಕೆಲಸಗಳು ಸಾಮಾನುಗಳು, ಪದಾರ್ಥಗಳು ಮೆಂಬರುಗಳ ವಶದಲ್ಲಿಡಲ್ಪಟ್ಟು ಅವರಿಗೆ ಸೇರಿದ್ದಾಗಿರತಕ್ಕದ್ದು.

57. ಮ್ಯುನಿಸಿಪಲ್ ಸರಹದ್ದುಗಳ ಜಲಧಾರೇ ನೀರು ಹರಿಯುವ ಬಗ್ಗೆ ಯಾವದಾದರೂ ಮುಖ್ಯ ಮೊಹರೀಗಳನ್ನಾಗಲಿ, ಇತರ ಮೊಹರೀಗಳನ್ನಾಗಲಿ ಮಾಡಿಸುವಲ್ಲಿ ಮೆಂಬರ್‌ಗಳು, ಜರೂರಿದ್ದರೆ, ಯಾವದಾದರೂ ಬೀದಿಯ ಅಥವಾ ರಸ್ತೆಯ ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಉದ್ದೇಶಿಸಲ್ಪಟ್ಟ, ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ, ಆವರಣ ಕಲ್ಪಿಸಲ್ಪಟ್ಟ ಯಾ ಇತರ ವಿಧವುಳ್ಳ ಜಮೀನಿನಲ್ಲಿ, ಅದರ ಮಾರ್ಗವಾಗಿ ಯಾ ಕೆಳಗಡೆಗೆ ಇರುವ ಯಾವದಾದರೂ ನೆಲಮಾಳಿಗೆ ಕಮಾನ್ ಬಗ್ಗಿಸಿಯಿರುವ ನೆಲಮಾಳಿಗೆ ಇಂತಾದ್ದರ ಮಾರ್ಗವಾಗಿ, ಯಾ ಅಡ್ಡವಾಗಿ ಯಾ ಕೆಳಗಡೆಗೆ, (ಆ ವಿಷಯವನ್ನು ಕುರಿತು ತಕ್ಕವಾಯಿದೆನಿಶೀ ಬರವಣಿಗೇ ಮೂಲಕ ನೋಟಿಸ್ ಕೊಡಲ್ಪಟ್ಟ ತರುವಾಯ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದುಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿಕೊಡತಕದ್ದು ಅಂತಾ ಈಡು ಮೊಬಲಗ್ ವಿಷಯದಲ್ಲಾಗಲಿ ಅದನ್ನು ಹಂಚಿಕೆ ಮಾಡಿಕೊಡುವ ಅಂಶದಲ್ಲಾಗಲಿ ಯೇನಾದರೂ ತಕರಾರ್ ಉಂಟಾದ ಪಕ್ಷಕ್ಕೆ ನುಕ್ಸಾನ್ ವ ಲಾಗವಡುಗಳು ಇವುಗಳನ್ನು ಕುರಿತು ತಕರಾರ್ ವ್ಯವಸ್ಥೆ ಬಗ್ಯೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟರೀತಿಯಾಗಿ ಫೈಸಲ್ ಆಗತಕ್ಕದ್ದು.

58. ಈ ಬೈಲಾನಿಬಂಧನೆಗಳ ದೆಸೇಯಿಂದ ತಮ್ಮ ಸುಪರ್ದ್‌ಮಾಡೋಣಾದ ಬಚ್ಚಲುಗಳು, ಯಾ ಚರಂಡೀಗಳು, ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ದುರಸ್ತು ಪಡಿಸತಕ್ಕದ್ದು ಮತ್ತು ತಮಗೆ ಯುಕ್ತ ತೋರುವ ಪ್ರಕಾರ ವಿಸ್ತಾರಪಡಿಸತಕ್ಕದ್ದು, ಬದಲಾವಣಿಮಾಡತಕ್ಕದ್ದು, ಯಾ ಮೇಲ್ಗಡೆ ಕಮಾನ್ ಕಟ್ಟಿಸತಕ್ಕದ್ದು ಯಾ ಇತರ ವಿಧದಿಂದ ಅಭಿವೃದ್ಧಿ ಮಾಡತಕ್ಕದ್ದು, ಮತ್ತು ಆ ಪೈಕಿ ಯಾವ ಭಾಗ ತಮಗೆ ನಿಷ್ಪ್ರಯೋಜಕವೆಂತಲೂ ಅನಾವಶ್ಯಕವೆಂತಲೂ, ತೋರುತ್ತೋ ಆ ಭಾಗವನ್ನು ಮೌಕೂಫ್ ಮಾಡಬಹುದು, ಮುಚ್ಚಿಸಿಬಿಡಬಹುದು ಯಾ ನಾಶಮಾಡಬಹುದು. ಪರಂತು, ಈ ಸೆಕ್ಷನ್ ಅನುಸರಿಸಿ ಯಾವ ಅಂಶವಾಗಲಿ ಮಾಡಲ್ಪಟ್ಟತೆಂಬ ಸಬಬಿನ ಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯ್ಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟರೆ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರು ಯಾವ ಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡೆದಿರುತ್ತಾರೋ ಅಂತಾ ಯಾವದಾದರೂ ಪಬ್ಲಿಕ್ ಬಚ್ಚಲ್‌ನಲ್ಲಿಯಾಗಲಿ ಇತರ ಸ್ಥಳದಲ್ಲಿಯಾಗಲಿ, ಸದರೀ ಬಚ್ಚಲು ನೀರು ಹರಿಯುವ ಬಗ್ಯೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

59. ಮೆಂಬರ್‌ಗಳು ತಮಗೆ ಸೇರಿದ ಬಚ್ಚಲುಗಳೂ ಚರಂಡೀಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಇರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಇಡಿಸತಕ್ಕದ್ದು, ಮತ್ತು ಕ್ರಮ ಪ್ರಕಾರ ಪಾಕ್ ಮಾಡಿಸತಕ್ಕದ್ದು, ಶೋಧಿಸತಕ್ಕದ್ದು, ಮತ್ತು ಖಾಲೀ ಮಾಡಿಸತಕ್ಕದ್ದು. ಸದರೀ ಬಚ್ಚಲುಗಳನ್ನು ನೀರು ವಾಟುಮಾಡಲಿಕ್ಕೂ ಶುದ್ಧಪಡಿಸಲಿಕ್ಕೂ, ಖಾಲೀ ಮಾಡಲಿಕ್ಕೂ ಭೂಮಿಯ ಮೇಲಾಗಲಿ, ಕೆಳಗಾಗಲಿ, ಜರೂರಾದ ತೊಟ್ಟಿವಗೈರೆಗಳನ್ನು ತೂಬುಗಳನ್ನೂ, ಯಂತ್ರಗಳನ್ನೂ, ಮತ್ತು ಜರೂರಾದ ಇತರ ಕೆಲಸಗಳನ್ನೂ ಅವರು ಕಟ್ಟಿಸಬಹುದು, ಇಡಿಸಬಹುದು, ಮತ್ತು ಚೀಫ್ ಕಮಿಷನರವರ ಮಂಜೂರಾತೀನಿಂ ಅಂತಾ ಬಚ್ಚಲುಗಳು, ಯಾ ಚರಂಡಿಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ, ಯಾವದಾದರೂ ತಕ್ಕ ಸ್ಥಳದೊಡನೆ ಸೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆ ಮಾಡಬಹುದು, ಅಥವಾ ಅಂತಾ ಬಚ್ಚಲುಗಳ ದೆಸೆಯಿಂದಲೂ ಚರಂಡೀಗಳ ದೆಸೆಯಿಂದಲೂ, ಬರುವ ಕಶ್ಮಲವನ್ನು ಜಮಾಯಿಸಿಯಿಡುವ ಬಗ್ಯೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು. ಮತ್ತು ಕೇವಲ ಜರೂರೆಂತ ಯೆಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಇತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು. ಆದರೆ ಹಾಂಗೆ ಉಪಯೋಗಿಸುವದರಿಂದ ಹೇಸಿಕೆಯುಂಟಾಗದೆ ಇರತಕ್ಕದ್ದು.

60. ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತಿಯನ್ನು ಮೊದಲು ಪಡಕೊಳ್ಳದೆ, ಈ ಬೈಲಾನಿಬಂಧನೆಗಳ ದೆಸೇಯಿಂದ ಮೆಂಬರ್‌ಗಳ ವಶದಲ್ಲಿ ಇಡೋಣಾದ ಬಚ್ಚಲುಗಳು ಚರಂಡೀಗಳು ಇವುಗಳ ಪೈಕಿ ಯಾವದರಲ್ಲಾಗಲಿ ಯಾವನು ಯಾವ ಚರಂಡೀಯನ್ನಾದರೂ ಮಾಡುತ್ತಾನೋ ಯಾ ಮಾಡಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ್ ಚರಂಡೀಯಾಗಲಿ ಬಚ್ಚಲಾಗಲೀ ಸರ್ಕಾರೀ ಜಮೀನ್ ಮಾರ್ಗವಾಗಿ ಹರಿಯಲೀ ಜನಗಳ ಸ್ವಂತ ಜಮೀನ್ ಮಾರ್ಗವಾಗಿ ಹರಿಯಲೀ ಪರಂತು ಅಂತಾದ್ದನ್ನು ಯಾವನು ಬಂದ್ ಮಾಡುತಾನೋ ತಿರಿಗಿಸುತ್ತಾನೋ ಅಟಕಾವ್ ಮಾಡುತ್ತಾನೋ ಅಥವಾ ಮತ್ಯಾವ ವಿಧದಿಂದಲಾಗಲಿ, ಪ್ರವರ್ತಿಸುತ್ತಾನೋ ಅಂತಾ ಮನುಷ್ಯನು 1 ರೂಪಾಯಿ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೆಂಟರು ಅಂತಾ ಚರಂಡೀಯನ್ನಾಗಲಿ ಅಟಕಾವನ್ನಾಗಲಿ, ತಮಗೆ ಯುಕ್ತತೋರುವ ಪ್ರಕಾರ ನಾಶ ಪಡಿಸಬಹುದು, ಬದಲಾವಣಿ ಮಾಡಿಸಹುದು, ಹೊಸದಾಗಿ ಮಾಡಿಸಬಹುದು. ಅಥವಾ ಅನ್ಯಥಾ ತಮಗೆ ಯುಕ್ತತೋರುವ ಪ್ರಕಾರ ನಡಿಸಬಹುದು. ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ ಅಂಥಾ ಘೂಟ ಚರಂಡಿಯನ್ನು ಯಾ ಅಟಕಾವನ್ನೂ ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

61. ಈ ಬೈಲಾನಿಬಂಧನೆಗಳಿಂದ ಮೆಂಬರ್‌ಗಳವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸೀಡೆಂಟರ ಅನುಮತೀ ಇಲ್ಲದೆ ಯಾವ ಕಟ್ಟವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು, ಮತ್ತು ಯಾವ ಕಟ್ಟವಾಗಲಿ ಆ ಮೇರೆ ಕಟ್ಟಲ್ಪಟ್ಟಲ್ಲಿ ಪ್ರೆಸೀಡೆಂಟರು ಅಂತಾ ಕಟ್ಟವನ್ನು ಕಿತ್ತಿ ಹಾಕಿಸಬಹುದು. ಅಥವಾ ತಮಗೆ ಯುಕ್ತತೋರುವ ಪ್ರಕಾರ ಇತರ ರೀತಿಯಿಂದ ನಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕಶೀರ್ ನಡಿಸಿದ ಮನುಷ್ಯನು ಕೊಡತಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಿ ಕೊಳ್ಳಲ್ಪಡತಕ್ಕದ್ದು.

62. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತಾರೋ ಅಂತಾ ಯಾವದಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಇರುವ ಯಾವದಾದರೂ ಕಟ್ಟವು ಯಾವಾಗಲಾಗಲಿ, ತಕ್ಕ ಚರಂಡೀಯಿಂದ ಯಾ ನಲ್ಲೀಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಇತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸೀಡೆಂಟರಿಗೆ ತೃಪ್ತಿಕರವಾಗಿ ಚರಂಡೀ ಇಡಲ್ಪಡದೇ ಇರುವ ಪಕ್ಷಕ್ಕೆ ಪ್ರೆಸೀಡೆಂಟರು, ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟದ ದೆಸೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನುಗಳ ದೆಸೆಯಿಂದೆ ಅಷ್ಟರ ಆಕಾರದಲ್ಲಿ, ಅಷ್ಟರವುಟ್ಟಕ್ಕೆ, ಮತ್ತು ಅಂತಾ ನೀರು ಪಾಟದಲ್ಲಿ ಮುಚ್ಚಲ್ಪಟ್ಟ, ಯಾ ಖುಲ್ಲಾಯಿರುವ ಚರಂಡಿಯನ್ನಾಗಲಿ, ನಲ್ಲೀಯನ್ನಾಗಲಿ ಅಂತಾ ಕಟ್ಟದಿಂದ ಕಟ್ಟಿಸಬಹುದು, ಅಥವಾ ಏರ್ಪಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೂಡ್ಲೇ ಕೊಡಲ್ಪಡದ ಪಕ್ಷಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

63. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಅಂತಾ ಕಟ್ಟದ ಬಚ್ಚಲ ನೀರು ಆಗ್ಯೆ ಇರುವಂತಾ ಅಥವಾ ಯೇರ್ಪಾಡು ಮಾಡಲ್ಪಡುವಂತಾ ಯಾವದಾದರೂ ಪಬ್ಲಿಕ್ ಬಚ್ಚಲುನಲ್ಲಿಯೂ, ಮೆಂಬರ್‌ಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಕ್ಕೂ ತೆಗದುಕೊಂಡು ಹೋಗಲಿಕ್ಕೆ ತಕ್ಕ ನೀರು ಮಟ್ಟಕ್ಕಿಂತ ತಗ್ಗಾದ ನೀರು ಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು ಪಬ್ಲಿಕ್ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನ್ ಯಾ ಕಟ್ಟಗಳ ಮಾಲೀಕರು ಯಾ ಅನುಭವದಾರರು, ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ, ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಗಳ ಮೊದಲಿನಲ್ಲಿ ಇರುವ ಬಾಜುಕಾಲ್ವೆಗಳ ಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು, ಬದಲಾವಣೀ ಮಾಡತಕ್ಕದ್ದು, ಕಾಪಾಡತಕ್ಕದ್ದು, ಮತ್ತು ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೇ ಅಶ್ರದ್ಧೆಮಾಡಿದ ಪಕ್ಷಕ್ಕೆ ಪ್ರೆಸೀಡೆಂಟರು ಅದನ್ನು ಮಾಡಿಸಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ ಕೊಡತಕ್ಕದ್ದಲ್ಲದೆ ಆ ಮೊಬಲಗ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

64. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಃ ಕಟ್ಟೋಣಾದ ಯಾವ ಕಟ್ಟವಾಗಲಿ, ಇದರ ಹಿಂದಿನ ಕಡೇ ಸೆಕ್ಷನ್‌ನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರ ಇದ್ದಪಕ್ಷಕ್ಕೆ ಅದರ ಮಾಲೀಕನು ಅಂತಾ ಕಟ್ಟದ ನಿವೇಶನದ ದೆಸೇಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸೀಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಅಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರುಪಾಟದಿಂದಲೂ, ಒಂದು ಚರಂಡೀ ಕಟ್ಟಿಸತಕ್ಕದ್ದು ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆಮೇರೆ ಕಟ್ಟಲಿಕ್ಕೆ ಉಪೇಕ್ಷಿಸಿದಪಕ್ಷಕ್ಕೆ, ಪ್ರೆಸೀಡೆಂಟರು ಸದರೀ ಚರಂಡೀ ಕಟ್ಟಿಸಲ್ಪಡುವಂತೆ ಮಾಡಬಹುದು.

ಮತ್ತು ಆಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

65. ಅಂತಾ ನೋಟಿಸನ್ನೂ ನಕ್ಷೇಯನ್ನೂ ಕಳುಹಿಸದೇಯಾಗಲಿ, ಸದರೀ ತಿಂಗಳೊಳಗಾಗಿ, ಪ್ರೆಸೀಡೆಂಟರಿಂದ ನಿರ್ಣಯಿಸಲ್ಪಟ್ಟ ಪ್ರಕಾರವಲ್ಲದೆ ಬೇರೆ ಮಟ್ಟಗಳ ಪ್ರಕಾರವಾಗಲಿ, ಈ ಬೈಲಾ ನಿಬಂಧನೆಗಳಿಗೆ ಮತ್ಯಾವ ವಿಧದಿಂದಲಾದರೂ ವಿರುದ್ಧವಾಗಿಯಾಗಲಿ, ಅಂತಾ ಕಟ್ಟಣವು ಆರಂಭಿಸಲ್ಪಟ್ಟರೆ, ಯಾ ಮಾಡಲ್ಪಟ್ಟರೆ, ಪ್ರೆಸೀಡೆಂಟರು ಜರೂರ್ ಇದ್ದಲ್ಲಿ ಸಂದರ್ಭಾನುಗುಣವಾಗಿಯಿರುವಂತೆ ಅದನ್ನು ಬದಲಾಯಿಸಲ್ಪಡುವಂತೆ ಯಾ ನಾಶ ಪಡಿಸಲ್ಪಡುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದಲಾಗವಡು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ ಮಾಡಲ್ಪಡತಕ್ಕದ್ದು.

66. ಮೇಲೆ ಕಂಡ ಮೇರೆ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳನ್ನು ಕುರಿತು ಮಂಜೂರಾತಿಯನ್ನಾಗಲಿ, ಗೈಮಂಜೂರಾತಿಯನ್ನಾಗಲಿ, ಪ್ರೆಸೀಡೆಂಟರು ಬರವಣಿಗೇ ಮೂಲಕ ತಿಳಿಸದೇಯೂ, ಅಂತಾ ನೋಟಿಸ್ ತಲಪಿದ ಮೇಲೆ ಒಂದು ತಿಂಗಳ ವಳಗಾಗಿ ಬೇರೆ ಮಟ್ಟವನ್ನು ಏರ್ಪಡಿಸದೆಯೂ ತಪ್ಪಿದ ಪಕ್ಷಕ್ಕೆ ಅಂತಾ ನೋಟಿಸ್ ಕೊಡುವ ಮನುಷ್ಯನು ಇದರಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಣವನ್ನು ಕಟ್ಟಿಸಲಿಕ್ಕಾಗಲಿ, ಖೋಲ್‌ಬಂದೀ ಮಾಡಿಸಲಿಕ್ಕಾಗಲಿ, ಪ್ರವರ್ತಿಸಬಹುದು; ಪರಂತು ಅಂತಾ ಕಟ್ಟಿಸೋಣವಾಗಲಿ ಖೋಲ್‌ಬಂದೀಯಾಗಲಿ ಅನ್ಯಥಾ ಈ ಬೈಲಾಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

67. ಮೆಂಬರ್‌ಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿ ಆಗಲಿ, ಅವುಗಳೊಡನೆ ಸಂಬಂಧಿಸುವ ಯಾವ ಚರಂಡಿಯಲ್ಲಾಗಲಿ, ಯಾವದಾದರೂ ಮಣ್ಣು, ಕಶ್ಮಲ, ಬೂದಿ, ತೋಟ, ಅಡಿಗೇಮನೆ, ಕುದುರೇಲಾಯ ಇಂತಾದ್ದರ ಬಾಬತು, ಕಚರೆ, ಗಾಜಿನ ಚೂರು, ಚೋಕಿಗಳು, ಯಾ ಇತರ ಕಸ (ಅಥವಾ ತಕ್ಕ ಬಚ್ಚಲು ತಯಾರ್ ಮಾಡಿಸಿ ಕೊಡುವ ಪರ್ಯಂತ) ಯಾವದಾದರೂ ಮಲ ಇಂತಾದ್ದನ್ನು ಯಾವನು ಹಾಕುತ್ತಾನೋ ಯಾ ಇಡುತ್ತಾನೋ ಅಥವಾ ತನ್ನ ನೌಕರರು ಹಾಕುವಂತೆ ಯಾ ಇಡುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

68. ಯಾವ ಜಮೀನುಗಳಿಗೆ ಯಾ ಕಟ್ಟಣಗಳಿಗೆ ಫೂಟ್ ಚರಂಡೀಗಳು ಸಂಬಂಧಿಸಿದವುಗಳಾಗಿರುತ್ತವೋ ಅಂತಾ ಜಮೀನುಗಳಲ್ಲಿ ಯಾ ಕಟ್ಟಣಗಳಲ್ಲಿ, ಅಥವಾ ಜಮೀನುಗಳ ಹೊರಗೆ ಯಾ ಕಟ್ಟಣಗಳ ಹೊರಗೆ ಇರುವ ದರೋಬಸ್ತು ಫೂಟ್ ಚರಂಡೀಗಳೂ ಯಾವದಾದರೂ, ಬೀದಿಯಲ್ಲಾಗಲಿ, ಬೀದಿಯ ಬಳಿಯಲ್ಲಾಗಲಿ, ಇರುವ ಪಾಯಖಾನೆಗಳು ಬಚ್ಚಲುಗಳು ಬಚ್ಚಲು ಗುಣಿಗಳು ಮೆಂಬರ್‌ಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನುಗಳಿಗೂ ಕಟ್ಟಣಕ್ಕೂ ಅವು ಸೇರಿ ಇರುತ್ತವೋ, ಅಥವಾ ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟಿರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತ್ತವೊ ಅಂತಾ ಜಮೀನುಗಳ ಮತ್ತು ಕಟ್ಟಣದ ಮಾಲೀಕರ ಲಾಗವಡನಿಂದಲೂ, ಖರ್ಚುಗಳಿಂದಲೂ, ಸದರೀ ಪಾಯಖಾನೇ ಮುಂತಾದವು ಬದಲಾಯಿಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡೀಯಾಗಲಿ ಪಾಯಖಾನೇ ಯಾಗಲಿ ಬಚ್ಚಲು ಗುಂಡೀ ಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತದೋ ಅಂತಾ ಯಾವದಾದರೂ ಜಮೀನು [illegible] ಟ್ಟಣಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಿಸ್ ಕೊಡೋಣಾದ ತರುವಾಯ ಎಂಟು ದಿನಗಳೊಳಗೆ ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿಸಿ ಇಡಲಿಕ್ಕೆ ಸಹ ಉಪೇಕ್ಷಿಸಿದ ಪಕ್ಷಕ್ಕೆ ಪ್ರೆಸೀಡೆಂಟರು ಅಂತಾ ಚರಂಡೀಯನ್ನಾದರೂ ಪಾಯಖಾನೇಯನ್ನಾದರೂ ಬಚ್ಚಲು ಗುಂಡಿಯನ್ನಾದರೂ ಬದಲಾಯಿಸುವಂತೆಯೂ, ದುರಸ್ತು ಪಡಿಸುವಂತೆಯೂ, ಬಂದೋಬಸ್ತು ಪಡಿಸುವಂತೆಯೂ, ಮಾಡಬಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

69. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದ ತರುವಾಯ ಪ್ರೆಸಿಡೆಂಟರು ಬರವಣಿಗೆ ಮೂಲಕವಾದ ಅನುಮತಿ ಇಲ್ಲದೆ ಯಾಗಲಿ, ಅವರ ಹುಕುಮಿಗೆ ಬರಕಿಲಾಫ್ ಆಗಲಿ, ಅಂತಾ ಯಾವ ಚರಂಡೀ ಯಾ ಪಾಯಖಾನೆ ಯಾ ಬಚ್ಚಲು ಇಂತಾದ್ದು ಕಟ್ಟಲ್ಪಟ್ಟರೆ, ಅಥವಾ ಕಿತ್ತು ಹಾಕಿಸುವಂತೆ, ಯಾ ನಿಲ್ಲಿಸುವಂತೆ ಯಾ ಮಾಡಿಸದೆ ಇರುವಂತೆ, ಪ್ರೆಸೀಡೆಂಟರಿಂದ ಹುಕ್ಕುಂ ಮಾಡಲ್ಪಟ್ಟಿರುವ ಯಾವ ಚರಂಡಿ ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದನ್ನು ಯಾವನಾದರೂ ಕಟ್ಟಿದರೆ ಖೋಲ್‌ಬಂದೀ ಮಾಡಿಸಿದರೆ ಯಾ ನಿಲ್ಲಿಸದೆ ನಡಿಸಿದರೆ ಹಾಗೆ ಮಾಡುವ ಪ್ರತಿ ಮನುಷ್ಯನೂ 2 ಆಣೆಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂತಾ ಯಾವ ಚರಂಡೀಯಲ್ಲಾಗಲೀ ಪಾಯಖಾನೆಯಲ್ಲಾಗಲಿ

ಬಚ್ಚಲು ಗುಂಡಿಯನ್ನಾಗಲಿ, ತಮಗೆ ಯುಕ್ತ ತೋರುವಂತ್ತು, ತಿದ್ದುಪಡಿಯನ್ನಾಗಲಿ, ಬದಲಾವಣೆಯನ್ನಾಗಲಿ, ಮಾಡಿಸ ಬಹುದು, ಮತ್ತು ಅದರ ಬಾಬತು ಲಾಗವಡನ್ನು ಅಂತಾ ಚರಂಡೀ ಯಾಗಲಿ ಪಾಯಖಾನೆ ಯಾಗಲಿ ಬಚ್ಚಲು ಗುಂಡಿಯಾಗಲಿ ಯಾವನಿಂದ ಅಕ್ರಮವಾಗಿ ಕಟ್ಟಿಸಲ್ಪಟ್ಟಿತೋ, ಯಾ ಖೋಲ್‌ಬಂದೀ ಮಾಡಲ್ಪಟ್ಟಿತೋ, ಯಾ ನಿಲ್ಲಿಸದೆ ನಡಿಸಲ್ಪಟ್ಟಿತೋ, ಅಂತಾ ಮನುಷ್ಯನು, ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

70. ಪ್ರೆಸೀಡೆಂಟರಾಗಲಿ, ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರಾಗಲಿ, ಅಂತಾ ಚರಂಡಿಯನ್ನಾದರೂ, ಪಾಯಖಾನೆಯನ್ನಾದರೂ, ಬಚ್ಚಲು ಗುಂಡಿಯನ್ನಾದರೂ, ತನಿಖೀ ಮಾಡಬಹುದು, ಮತ್ತು ಆಬಗ್ಯೆ, ಸೂರ್ಯೋದಯದವೊದಲು, ಸೂರ್ಯಾಸ್ತಮಯದೊಳಗೆ ಯಾವಾಗಲಾಗಲಿ ಅಂತಾ ಚರಂಡಿ, ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದು ಯಾವದಕ್ಕೆ ಸೇರಿಯಿರುತ್ತೋ ಅಂತಾ ಮನೆ ಮುಂತಾದವುಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ್ ಕೊಟ್ಟ ಹನ್ನೆರಡುಗಂಟೆಯತರುವಾಯ ಯಾವದಾದರೂ ಜಮೀರ್ನನಲ್ಲಿಯೂ, ಕಟ್ಟಡದಲ್ಲಿಯೂ, ಜರೂರಾದಂತಾ ಕುಮಕೀದಾರ್ರು, ಕಾಲೇಗಾರ್ರು, ಯಿವರುಗಳುನಿಶೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಲೇಶವೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಿಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಖಾನೆ, ಯಾ ಬಚ್ಚಲುಗುಂಡಿ, ಬಂದೋಬಸ್ತಾಗಿಯೂ ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ, ಈ ಬೈಲಾಗಳ ಜಾರೀಲಿಬಂದ ಮೇಲೆ ಇವುಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಟ್ಟದೆಯೆಂತಲಾಗಲಿ ತಿಳಿಯಬಂದಲ್ಲಿ ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು, ಅಂತಾ ಚರಂಡಿ, ಯಾ ಪಾಯಖಾನೆ, ಯಾ ಬಚ್ಚಲುಗುಂಡಿ ಯಿವುಯಾವನಿಗೆ ಸೇರಿರುತವೋ ಅಂತಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್‌ಮಾಡತಕ್ಕದ್ದು; ಆದರೆ ಚರಂಡಿಯಾಗಲಿ ಪಾಯಖಾನೆಯಾಗಲಿ ಬಚ್ಚಲುಗುಂಡಿಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುಂವತೆಯೂ ಈ ಬೈಲಾಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಡದೇಯೂ ಕಾಣಬಂದರೆ ಪ್ರೆಸೀಡೆಂಟರಾಗಲಿ ಮೇಲೆ ಕಂಡ ಆಫಿಸರಾಗಲಿ ಭೂಮಿಯನ್ನು ಭರ್ತೀಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಖಾನೆ, ಬಚ್ಚಲುಗುಂಡಿ, ಇವುಗಳನ್ನು ತೆಗೆಯುವದರಿಂದಲೂ, ಮುಚ್ಚುವದರಿಂದಲೂ, ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡುಗಳು ಅಂತಾ ಸಂಗತಿಯಲ್ಲಿ ಮೆಂಬರ್‌ಗಳಿಂದ ಇಡಲ್ಪಡತಕ್ಕದ್ದು. ಪರಂತು ಮನೆಯೊಳಗೆ ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಅವಕಾಶ ಕೊಡುವ ಪರ್ಯಂತ ಹಾಗೆ ತನಿಖೀ ನೋಡಲಿಕ್ಕೋಸ್ಕರ ಹಿಂದುಗಳು ಮುಸಲ್ಮಾನರು ಇವರುಗಳ ಹೆಂಗಸರು ಇರತಕ್ಕ ಬಗ್ಗೆ ಕ್ಲುಪ್ತವಾದ ಜನಾನೇಗಳಲ್ಲಾಗಲಿ ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟು ಮಾಡತಕ್ಕದ್ದಲ್ಲವು.

71. ಈ ಬೈಲಾನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟಡ, ಯಾ ಜಮೀನಿನ ಮಾಲೀಕನಿಂದಾಗಲಿ, ಅನುಭವದಾರನಿಂದಾಗಲಿ, ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿ ಯಿದ್ದು ಅಂತಾ ಕೆಲಸವನ್ನು ಅವನು ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷದಲ್ಲಿ, ಹಾಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆವಿಧಿಸಲ್ಪಡಲಿ ವಿಧಿಸಲ್ಪಡದೇ ಯಿರಲಿ ಪರಂತು ಅಂತಾ ಕೆಲಸವನ್ನು ಪ್ರೆಸೀಡೆಂಟರು ಮಾಡಿಸಬಹುದು. ಆ ಬಗ್ಗೆ ಹಿಡಿದ ಲಾಗವಡನ್ನು ಸದರೀ ಕಾಮಗಾರಿ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನು ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಆ ಮೊಬಲಗ್ ವಸೂಲ್ಮಾಡಲ್ಪಡತಕ್ಕದ್ದು.

72. (ಕಾಮಗಾರೀ ಮಾಡಿಸುವದಕ್ಕೆ) ತಪ್ಪಿದ ಮನುಷ್ಯನು, ಕಟ್ಟಡ ಯಾ ಜಮೀನಿನ ಮಾಲೀಕನಾಗಿ ಯಿದ್ದರೆ, ಪ್ರೆಸೀಡೆಂಟರು ಈ ಬಗ್ಗೆ ಜಾಸ್ತೀಯಾಗಿ ಪರಿಹಾರವನ್ನು ಉಂಟುಮಾಡುವ ಉದ್ದಿಶ್ಯ ಅಂತಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ವ್ಯಾಜ್ಯ ಯಾ ನಡಾವಳಿತ ನಡಿಸಿಯಿರಲಿ ನಡಿಸದೇಯಿರಲಿ, ತಕ್ಕಾಲದಲ್ಲಿ ಮಾಲೀಕನಿಂದ ಕೊಡಲ್ಪಡತಕ್ಕ ಲಾಗವಡು ಮೊಬಲಗ ವಿಶಿಷ್ಟವನ್ನಾಗಲಿ ಆ ಪೈಕೀ ಯಿಷ್ಟರಭಾಗವನ್ನಾಗಲಿ ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಮಾಲೀಕನ ವಶದಲ್ಲಿರತಕ್ಕ ಕಟ್ಟಡವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು, ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂತಾ ಅನುಭವದಾರನ ಬಾಬತು ಚರಸ್ವತ್ತುಗಳ ಜಫ್ತೀಯಿಂದ ಅದು ವಸೂಲ್ಮಾಡಲ್ಪಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ, ಅಂತಾ ಯಾವ ಖರ್ಚಿನ ವಿಷಯದಲ್ಲಾಗಲಿ ತಾನು ಸದರೀ ಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತನ್ನಿಂದ ವಸೂಲ್‌ಮಾಡಲ್ಪಟ್ಟಷ್ಟು ಮಟ್ಟಿಗೆ ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗ್‌ನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕು ಉಂಟಾಗಿರತಕದ್ದು.

73. ಯಾವದಾದರೂ ಕಟ್ಟಡ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಬೈಲಾಗಳಿಂದ ಕಟ್ಟೋಣಾದ ಯಾವ ಲಾಗವಡಗಳಿಗೋಸ್ಕರವಾಗಲಿ, ಯಾವ ಕಟ್ಟಡ ವಗೈರೇಗಾಗಿ ಅಂತಾ ಲಾಗವಡು ಕೊಡಬೇಕಾಗಿರುತ್ತೋ ಆ ಕಟ್ಟಡಗಳಿಗೋಸ್ಕರ ತಂನನ್ನು ಕೇಳಿದಾಗ ತನ್ನಿಂದ ಸಲ್ಲಬೇಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ

ಬಾಕೀಯಾದ ತನ್ನಿಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಪರಂತು ಪ್ರೆಸೀಡೆಂಟರು ಆವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿಗೇ ಬಾಬತು ಮೊಬಲಗ್ ಮತ್ತು ಯಾವನಿಗೆ ಅಂತಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು, ಅಡ್ಡಹೆಸರು, ಇವುಗಳನ್ನು ವಾಸ್ತವ್ಯವಾಗಿ ಪ್ರಕಟಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗದೇ ಹೋಗುವದಿಲ್ಲವು. ಆದರೆ ಅಂತಾ ಅನುಭವದಾರನನ್ನು ಕೇಳಿದ ಮೊಬಲಗ್ ಹಾಗೆ ಕೇಳಿದ ಕಾಲದಲ್ಲಾಗಲಿ ತರುವಾಯವಾಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಯೆಂಬದಾಗಿ ರುಜುಮಾಡುವ ಭಾರ ಸದರೀ ಅನುಭವದಾರನನ್ನೇ ಸೇರಿಯಿರುತ್ತದೆ. ಮತ್ತು ಇದರಲ್ಲಿ ಅಡಗಿರುವ ಯಾವ ಅಂಶವೂ ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂತಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡೆದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಭಾಧಕವಾಗುತ್ತದೆಯೆಂದು ಗ್ರಹಿಸ ಕೂಡದು.

74. ಯಾವದಾದರೂ ಕಟ್ಟಡ ಯಾ ಜಮೀನಿನ ಮಾಲೀಕನು, ಪ್ರೆಸೀಡೆಂಟರು ತಾಕೀದ್ ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು. ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಸೆಯಿಂದ ಅಂತಾ ಮಾಲೀಕನಿಗೆ ಬಾಕೀ ಆಗತಕ್ಕ ಬಾಡಿಗೆಯಲ್ಲಿ ವಜಾ ಮಾಡಲ್ಪಡತಕ್ಕದ್ದು.

75. ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಯಾವ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ ಅದರ ಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ್ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ ಪ್ರೆಸೀಡೆಂಟರು, ಆ ವಿಷಯ ರುಜುವಾದ ಮೇಲೆ ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾದ ಅಂತಾ ದರೋಬಸ್ತು ಕಾಮಗಾರಿಗಳನ್ನೂ ನೆರವೇರಿಸುವ ಬಗ್ಗೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕ್ಕುಂ ಕೊಡಬಹುದು. ಮತ್ತು ಹುಕ್ಕುಂ ತಾರೀಖು ಲಾಗಾಯತ್ ಎಂಟು ದಿನಗಳು ಕಳೆದ ತರುವಾಯ ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತಿದ್ದರೆ ಹಾಗೆ ನಿರಾಕರಿಸುತಿರುವ ಪ್ರತಿ ದಿನಕ್ಕೂ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದು; ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತಿರುವಲ್ಲಿ ಅಂತಾ ಕಾಮಗಾರಿಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಬಹುದಾಗಿದ್ದ ಯಾವ ಜುರ್ಮಾನೆಯಿಂದಲೂ, ಮಾಫ್ ಆಗತಕ್ಕದ್ದು.

76, ಈ ಬೈಲಾ ನಿಬಂಧನೆಗಳು ಜಾರೀಯಲ್ಲಿ ಬರುವ ಕಾಲದಲ್ಲಾಗಲಿ ಅತರುವಾಯವಾಗಲಿ, ಮಾಡಲ್ಪಟ್ಟ, ಇಡಲ್ಪಟ್ಟ ಯಾ ಕಟ್ಟಲ್ಪಟ್ಟ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲ್ವೆಗಳು ನೀರು ನಲ್ಲಿಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನ ಸಂಬಂಧವಾದ ಇತರ ಕಾಮಗಾರೀಗಳು, ಇಂತಾವು ಮೆಂಬರಗಳ ಲಾಗವಾಡಿನಿಂದ ಕಲ್ಪಿಸಲ್ಪಡಲಿ, ಯಾ ಇಡಲ್ಪಡಲಿ, ಯಾ ಕಟ್ಟಲ್ಪಡಲಿ, ಅನ್ಯಥಾ ಆಗಲಿ, ಪರಂತು ಅಂತಾದ್ದೂ; ಮತ್ತು ಸದರೀ ಕೆರೇ ವಗೈರೇಗೆ ಸೇರಿದ ಯಾ ಅವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಗಳು, ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು, ಇವುಗಳೂ, ಮತ್ತು ಯಾವದಾದರೂ ಪಬ್ಲಿಕ್ ಕೆರೆಗೆ ಸಮೀಪವಾದ (ಸ್ವಂತ ಸ್ವತ್ತು ಅಲ್ಲದೆಯಾಗಲಿ ಸರ್ಕಾರದ ಸ್ವತ್ತಲ್ಲದೆಯಾಗಲಿ ಇರುವ) ಅದಕ್ಕೆ ಸೇರಿದಹಾಗೆ ಇರುವ ಯಾವದಾದರೂ ಜಮೀನ್ ಇಂತಾದ್ದೂ ಮೆಂಬರಗಳ ಅಧಿಕಾರದಲ್ಲಿರತಕ್ಕದ್ದಲ್ಲದೆ ಅವರಿಗೆ ಸೇರಿದವುಗಳಾಗಿರತಕ್ಕವು.

77. ಮೆಂಬರಗಳು ನಿವಾಸಿಗಳಿಗೆ ನೀರು ಒದಗಿಸುವದಕ್ಕೋಸ್ಕರವಾಗಲಿ, ಈ ಬೈಲಾ ನಿಬಂಧನೆಗಳಲ್ಲಿ ಕಂಡ ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಗೇ ಇರತಕ್ಕ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರುತೊಟ್ಟಿಗಳು, ಬಾವಿಗಳು, ಕಾಲುವೆಗಳು, ಮೊಹರೀಗಳು, ತೂಬಿನಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು ಇಂತಾವು ಜಾರೀಯಾಗಿ ನಡೆಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಅಥವಾ ಅವರು, ಅವುಗಳಿಗೆ ಬದಲಾಗಿ, ಅಂತಾ ಇತರ ಕಾಮಗಾರೀಗಳನ್ನು ಮಾಡಿಸಿ ಅವು ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಮತ್ತು ಮೆಂಬರಗಳು ಕೊಡಗು ಶೀಮೆಯ ಚೀಫ್ ಕಮ್ಮಿಷನರವರ ಮಂಜೂರಾತಿಯ ಮೇಲೆ ಆಗಿಂದಾಗ್ಗೆ ಮ್ಯುನಿಸಿಪಲ್ ಸರಹದ್ದುಗಳೊಳಗೆ ನೀರು ತರಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲೀಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು ನೀರು ಕುಂಟೆಗಳು ತೊಟ್ಟಿಗಳು ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರೀಗಳು ಇವುಗಳನ್ನೆಷ್ಟನ್ನಾಗಲಿ ಒದಗಿಸಬಹುದು.

78. ಸೆಕ್ಷರ್ 79 ಅನುಸರಿಸಿ ಮೆಂಬರಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು ಅನ್ಯಥಾ ಮೆಂಬರಗಳ ಬಾಬತು ಯಾವದಾದರೂ ಶೀನೀರಿನ ಬಗ್ಗೆ ಉದ್ದೇಶಿಸಲ್ಪಟ್ಟ ಯಾ ಕ್ಲುಪ್ತವಾದ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರುತೊಟ್ಟಿ, ಜಲದಾರಿ, ಅಥವಾ ಕಾಲುವೆ, ಇಂತಾದ್ದರಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ, ಅಥವಾ ಇತರ ಜಂತುವು, ಅಥವಾ ತುಪ್ಪಟ, ಬಟ್ಟೆ, ಅಥವಾ ವುಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು, ಜಂತುವಿನ ಚರ್ಮ ತೊಗಲು ಅಥವಾ ಅಸಹ್ಯವಾದ ಯಾ ಉಪದ್ರವಕರವಾದ ಇತರವಸ್ತು ಇಂತಾದ್ದು ಯಾವದನ್ನಾಗಲಿ ತೊಳೆಯುವ, ಯಾ ತೊಳೆಯಿಸುವ; ಅಥವಾ ಅದರಲ್ಲಿ ಯಾವದಾದರೂ ಜಂತುವು ಗ್ರೇವಲ್ ಕಲ್ಲು, ಧೂಳು, ಅಥವಾ ಯಾವದಾದರೂ, ಕಚರ, ಕಶ್ಮಲ, ಕಲ್ಮಷ, ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂತಾದ್ದನ್ನು ಹಾಕುವ, ಇರಿಸುವ, ಬಿಸಾಡುವ, ಅಥವಾ ಪ್ರವೇಶಿಸುವಂತೆ ಮಾಡುವ, ಅಥವಾ ಅದರಲ್ಲಿ ಯಾವದಾದರೂ ಕೊಳೇ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು ಚರಂಡಿ, ಯಂತ್ರ ಅಥವಾ ಕಡಾಯಿ, ಇಂತಾದ್ದರ ಬಾಬತು ನೀರು, ಅಥವಾ ತನ್ನದಾಗಿ ಇರುವ ಯಾ ತನ್ನ ಅನುಭವದಲ್ಲಿ ಇರುವ ಯಾವದಾದರೂ ಕಟ್ಟಡದಿಂದಾಗಲಿ, ಭೂಮಿಯಿಂದಾಗಲಿ ಹರಿಯುವ ಅನಾರೋಗ್ಯಕರವಾದ ಯಾ ಅಸಹ್ಯವಾದ ಯಾವದಾದರೂ ದ್ರವಪದಾರ್ಥ ಯಾ ವಸ್ತು ಇಂತಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಯಾ ಅಪ್ಪಣೇ ಕೊಡುವ ಯಾ ಅಂತಾ ಯಾವ ನೀರಾಗಲಿ ಯೆಷ್ಟುಮಾತ್ರವಾದರೂ ಕೊಳೆಯಾಗುವಂತೆ ಯಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

79. ಮೆಂಬರಗಳು ಯಾವ ಪಬ್ಲಿಕ ಪ್ರದೇಶವನ್ನಾಗಲಿ ಜನಗಳ ಖಾಸಗತಿ ಸ್ವತ್ತಲ್ಲದ ದೊಡ್ಡ ಕೆರೆಗಳ ಅಥವಾ ಯಾವದಾದರೂ "ರ್ಕ" ಎಂಬ ನದೀ ತೀರದ ಯಾವ ಭಾಗವನ್ನಾಗಲಿ, ಸ್ನಾನ ಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು. ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಒದಗಿಸಬಹುದು. ಅಥವಾ ಪ್ರತ್ಯೇಕವಾಗಿ ಏರ್ಪಡಿಸ ಬಹುದು. ಮತ್ತು ಜಂತುಗಳನ್ನು ತೊಳೆಯುವ ಬಗ್ಯಾಗಲಿ ಬಟ್ಟೆಗಳೊಗೆಯುವ ಬಗ್ಯಾಗಲಿ ಪ್ರಜೆಗಳ ಆರೋಗ್ಯ, ಪಾಕೀಜ್, ಸೌಖ್ಯ, ಇವುಗಳಿಗೆ ಸಂಬಂಧಿಸಿದ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು, ಯಾ ರ್ಕ ಎಂಬ ಪ್ರವಾಹಗಳನ್ನು ಪ್ರತ್ಯೇಕವಾಗಿ ಯೇರ್ಪಡಿಸಲೂ ಬಹುದು.

80. ಆರೋಗ್ಯ ಭಂಗಕಾರಿಯಾಗಿ ಯಾ ನೆರೆಹೊರೆಗೆ ಬಾಧಕವಾಗಿ ತೋರುವ ಯಾವದಾದರೂ ಖಾಸಗತಿ ಕೆರೆಯನ್ನು ಶೋಧಿಸುವಂತೆಯೂ ಅಂತಾ ಯಾವದಾದರೂ ನಿವೇಶನ ಮುಂತಾದದರೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋಗಿಯೂ ಇರುವ ನೀರನ್ನು ಎತ್ತಿಸಿಬಿಡುವಂತೆಯೂ ತೆಗೆಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟೀಸದ್ವಾರಾ, ಯಾವ ನಿವೇಶನ ಮುಂತಾದವುಗಳ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯ್ಯವಾಗಿರತಕ್ಕದ್ದು. ಮತ್ತು ಅಂತಾ ಮಾಲೀಕನು ಅಂತಾ ನೋಟೀಸ್ ಜಾರೀಯಾದ ಲಾಗಾಯತು ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ, ಯಾ ಉಪೇಕ್ಷಿಸಿದರೆ ಪ್ರೆಸೀಡೆಂಟರೂ, ಅವರ ಆಫಿಸರಗಳೂ, ಕೆಲಸದವರೂ ಪ್ರವೇಶಿಸಿ ತಮಗೆ ಯುಕ್ತತೋರುವ ಪ್ರಕಾರ ಮೇಲೆ ಕಂಡ ವಿಶಿಷ್ಟಾಂಶಗಳಿಗೋಸ್ಕರವಾಗಲಿ ಅಪೈಕೀ ಕೆಲವಕ್ಕೋಸ್ಕರವಾಗಲಿ ಜರೂರಾದ ದರೋಬಸ್ತು ಕಾರ್ಯಗಳನ್ನೂ ಮಾಡಬಹುದು. ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ ಅಂತಾ ನಿವೇಶನ ಮುಂತಾದವುಗಳ ಮಾಲೀಕನು ಕೊಡತಕ್ಕದ್ದಲ್ಲದೆ ಮ್ಯುನಿಸಿಪಾಲಿಟಿಗೆ ಸಲ್ಲತಕ್ಕ ಸಾಲದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

81. ಕೆಟ್ಟ ನೀರು ನಿಂತಿರುವ ಸ್ಥಳವಗೈರೇಗಳು ಯಾವ ಮನುಷ್ಯನ ಸ್ವಂತ ಆಸ್ತಿಯಾಗಿದ್ದರೂ ಅನ್ಯಥಾ ಇದ್ದರೂ ವಾಸಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಯಾವದಾದರೂ ಸ್ವಂತ ಆವರಣದಲ್ಲಿಲ್ಲದ, ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನೂ ಪ್ರೆಸೀಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತೀ ಮಾಡತಕ್ಕದ್ದು. ಅಥವಾ ನೀರು ತೆಗೆಯಿಸಿ ಹಾಕತಕ್ಕದ್ದು.

82. ಈ ಬೈಲಾ ನಿಬಂಧನೆಗಳಿಂದ ಮಾಡಲ್ಪಡತಕ್ಕದೆಂದು ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ, ಮಾಡಿಸುವಲ್ಲಿ ಹಾಗೆ ಮಾಡಿಸುವದ್ದರಿಂದ ಅಟಕಾವು ಮಾಡಲ್ಪಡುವ, ಹಾನಿ ಹೊಂದುವ, ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೇಗೆ ಬದಲಾಗಿ ಮ್ಯುನಿಸಿಪಲ್ ಫಂಡಿನಿಂದ ಲಾಗವಡು ಮುಟ್ಟಿಸಿ ಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡೀಗಳು, ನಾಲೇಗಳು, ಇವುಗಳನ್ನು ಮೆಂಬರಗಳು ಒದಗಿಸತಕ್ಕದ್ದು, ಮತ್ತು ಮಾಡತಕ್ಕದ್ದು. ಮತ್ತು ಮೆಂಬರಗಳಿಗೂ, ಅದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ್ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರ್, ನುಕ್ಸಾನ್, ವ ಲಾಗವಾಡ ಇವುಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವ್ಯವಸ್ಥೆಯಾಗತಕ್ಕದ್ದು.

83. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆ ಅಥವಾ ಮೇಲ್ಭಾಗ, ಯಾವದಾದರೂ ಬಚ್ಚಲು ಯಾ ಚರಂಡಿ, ಇಂತಾದ್ದು ಮೆಂಬರುಗಳಿಂದ ತೆಗಿಯಿಸಲ್ಪಟ್ಟರೆ ಯಾ ಒಡೆಯಿಸಲ್ಪಟ್ಟರೆ, ಯಾವ ಬಗ್ಗೆ ಅವು ಅಗೆಯಿಸಲ್ಪಟ್ಟವೋ ಆ ಕಾಮ

ಗಾರೀಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತೀ ಮಾಡಿಸಿ ತಳವರಸೆಯನ್ನು ಮೇಲ್ಭಾಗವನ್ನು, ಬಚ್ಚಲನ್ನು, ಯಾ ಚರಂಡಿಯನ್ನು ಸರಿಮಾಡಿಸಿ ಅದರಲ್ಲಿ ಬೀಳುವ ಮಣ್ಣನ್ನು ತೆಗೆಸಿ ಹಾಕತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೆಯ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಸ್ಥಳಕ್ಕೆ ಕಟಕಟೆ ಕಟ್ಟಿಸಿ ಕಾವಲು ಇಡಿಸಿ ರಾತ್ರೀ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

84. ಮೆಂಬರುಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು, ಯಾ ಚರಂಡೀಗಳು, ಇಂತಾವುಗಳ ಪೈಕೀ ಯಾವದನ್ನಾಗಲಿ ತಾವು ಕಟ್ಟಿಸುತ್ತಿರುವಲ್ಲಿ ಯಾ ರೀಪೇರ್ ಮಾಡಿಸುತ್ತಿರುವಲ್ಲಿ, ನೆರೆ ಹೊರೆ ಮನೆಗಳಿಗೆ ಅಪಾಯ ಬಾರದಂತೆ ಪೋಟೀ ಕೊಟ್ಟು ಬಂದೋಬಸ್ತು ಪಡಿಸಿ ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ, ಬೀದಿಗೆ ಅಡ್ಡವಾಗಿಯಾಗಲಿ, ಅಂಥಾ ಕಾಮಗಾರೀ ನಡೆಯುತ್ತಿರುವಲ್ಲಿ ಸವಾರೀಗಳು, ಬಂಡಿಗಳು, ಇತರ ಯಾನಗಳು, ದನಗಳು, ಯಾ ಕುದುರೆ ಇವುಗಳು ಹೋಗುವ ಮಾರ್ಗವನ್ನು ಅಟಕಾವು ಮಾಡಲಿಕ್ಕೆ ಪ್ರೆಸೀಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು, ಇಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸೀಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಇತರ ಕೆಲಸಗಳು ಇವುಗಳನ್ನು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ್ ಮಾಡುತ್ತಿರುವಲ್ಲಿ ಅವುಗಳ ಬಳಿ ರಾತ್ರೀಹೊತ್ತು ಸಾಕಾದಷ್ಟು ದೀಪಗಳು ಇಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳೀ ಕಾವಲು ಇಡಿಸತಕ್ಕದ್ದು ಮತ್ತು ಪ್ರೆಸೀಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು ಸರಪಣಿಗಳು, ಯಾ ಕಂಭಗಳು, ಇವುಗಳ ಪೈಕೀ ಯಾವದನ್ನಾಗಲಿ, ತೆಗೆಯುವ, ಬದಲಾಯಿಸುವ, ಯಾ ಮತ್ತೊಂದು ಸ್ಥಳಕ್ಕೆ ತೆಗದುಕೊಂಡು ಹೋಗುವ ಯಾವದಾದರೂ ದೀಪವನ್ನು ಆರಿಸಿಬಿಡುವ, ಯಾವ ಮನುಷ್ಯನಾಗಲಿ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪ್ರೆಸೀಡೆಂಟರ ಅಪ್ಪಣೀ ಇಲ್ಲದೆ ಯಾವ ಮನುಷ್ಯನೂ, ಯಾವ ಬೀದಿಯಲ್ಲಿಯೂ ಯಾವ ಕಟ್ಟಡದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ, ಅವನು, ಆ ಸಾಮಾನುಗಳು ಆಚಿಗೆ ಸಾಗಿಸಲ್ಪಡುವ ಪರ್ಯಂತ ಯಾ ಹಳ್ಳ ಮುಚ್ಚಿಸಲ್ಪಡುವ ಪರ್ಯಂತ, ಅನ್ಯಥಾ ಬಂದೋಬಸ್ತು ಮಾಡಲ್ಪಡುವ ಪರ್ಯಂತ, ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ, ಯಾ ಹಳ್ಳಗಳಿಗೆ ಸಾಕಾಗಿರುವ ಮೇರೆ ತಡೆಹಾಕಿಸುವಂತೆಯೂ, ಆವರಣ ಕಟ್ಟಿಸುವಂತೆಯೂ, ಮಾಡತಕ್ಕದಲ್ಲದೇ ರಾತ್ರಿ ಹೊತ್ತು ಅದರಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು; ಮತ್ತು ಅಂತಾ ಅಪ್ಪಣೆ ಇಲ್ಲದೇ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ, ಅಥವಾ ಅಂತಾ ಸಾಮಾನುಗಳು, ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೇಯಾಗಲಿ, ಆವರಣ ಕಲ್ಪಿಸದೇಯಾಗಲಿ ದೀಪ ಹಚ್ಚದೇಯಾಗಲಿತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಗಿಸಿಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೇಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೇಯಾಗಲಿ, ಇರುತ್ತಾನೋ ಅಂತಾ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಪ್ರೆಸೀಡೆಂಟರು ನೋಟೀಸ್ ಕೊಟ್ಟ 24 ಗಂಟೆಯ ಹೊತ್ತಿಗೆ ತರುವಾಯ ಆ ತಕಸೀರ್ ನಡಿಸುತ್ತಿರುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

86. ಸರ್ಕಾರ್ ಜಮೀನಲ್ಲಾಗಲಿ ಜನಗಳ ಸ್ವಂತ ಜಮೀನಲ್ಲಾಗಲಿ ಇರುವ ಯಾವದಾದರೂ ಕಟ್ಟ, ಕೆರೆ, ಬಾವಿ, ಯಾ ಹಳ್ಳ, ಯಾ ಇತರ ಪ್ರದೇಶ ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು, ಯಾ ಆವರಣ, ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿ ಇದ್ದಪಕ್ಷಕ್ಕೆ ಪ್ರೆಸೀಡೆಂಟರು ಲಿಖಿತ ರೂಪವಾದ ನೋಟೀಸ್ ದ್ವಾರಾ, ಅದರ ದೆಸೆಯಿಂದ ಅಪಾಯವುಂಟಾಗದೇ ಇರುವಂತೆ ಅದು ರಿಪೇರ್‌ಮಾಡಲ್ಪಡತಕ್ಕದ್ದೆಂತಲಾಗಲಿ, ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ, ಆವರಣ ಕಟ್ಟಿಸಲ್ಪಡತಕ್ಕದೆಂತಲಾಗಲಿ, ಸದರೀ ನಿವೇಶನಗಳ ಮಾಲೀಕನಿಗಾದರೂ, ಅನುಭವದಾರನಿಗಾದರೂ, ತಾಕೀದ್ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಗಂಟೆಯ ಹೊತ್ತಿನೊಳಗೆ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೇ ನಿರಾಕರಿಸಿದ ಪಕ್ಷಕ್ಕೆ, ಅಥವಾ ಉಪೇಕ್ಷಿಸಿದರೆ, ಅಥವಾ ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿ ಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದಲ್ಲದೆ ಆ ಪ್ರಕಾರ ಮಾಡಲಿಕ್ಕೆ ದೇರ್ ಮಾಡುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ಸದರೀ ಕಟ್ಟ, ವಗೈರೇಗೆ ರಿಪೇರೀ ಯಾ ಬಂದೋಬಸ್ತು ಮಾಡಲ್ಪಡುವಂತೆಯು, ಆವರಣ ಕಲ್ಪಿಸಲ್ಪಡುವಂತೆ ಮಾಡುವದು, ಮೇಲೆ ಕಂಡ ದರೋಬಸ್ತು ಅಥವಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತತೋರುವ ಪ್ರಕಾರ ಜರೂರಾದ ದರೋಬಸ್ತು ಅಂಶಗಳನ್ನೂ ಮಾಡುವದು ಪ್ರಸೀಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಬಗ್ಯೆ ಹಿಡಿದ ಲಾಗವಡು ಯಿದರಲ್ಲಿ ಮುಂದೆ ವಿಧಿಸಲ್ಪಡುವಪ್ರಕಾರ ವಸೂಲಾಗತಕ್ಕದ್ದು.

87. ಮೆಂಬರ್‌ಗಳಾಗಲಿ, ಅವರಿಂದ ಸದರೀ ಬಗ್ಗೆ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯನಾಗಲಿ ಯಾವದಾದರೂ ಮಾರ್ಕೆಟ್, ಕಟ್ಟ, ಅಂಗಡಿ, ತಟ್ಟೀ ಅಂಗಡಿ, ಅಥವಾ ಖಸ್ಸೈಮಾಂಸ, ಕೋಳಿಗಳು, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿಂತಾವುಗಳನ್ನು ವಿಕ್ರಯಿಸುವ ಬಗ್ಗೆ ಯಾ ಖಸ್ಸೈ ಮನೆ ಬಗ್ಗೆ ಉಪಯೋಗಿಸಲ್ಪಡುವ ಸ್ಥಳ ಯಿವುಗಳಲ್ಲಿ ನ್ಯಾಯವಾದ ಯೆಲ್ಲಾ ಕಾಲಗಳೊಳಗೂ ಕುಮ್ಮಕ್‌ದಾರ್ ಸಂಗಡಲೀ ಯಾಗಲಿ, ಅವರುಗಳು ಯಿಲ್ಲದೆಯಾಗಲಿ ಪ್ರವೇಶಿಸಿ ತನಖೀ ಮಾಡುವದು ಮಾತ್ರವಲ್ಲದೆ ಅದರಲ್ಲಿ ಯಿರಬಹುದಾದ ಯಾವಾದರೂ ಜಂತು, ಮುರ್ದಾರ್, ಮಾಂಸ, ಯಾವದಾದರೂ ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರಕಾರಿಗಳು ಇವು ಮನುಷ್ಯಾಹಾರಕ್ಕೋಸ್ಕರ ಉದ್ದೇಶಿಸಲ್ಪಟ್ಟವಾಗಿಯೂ, ಅಂತಾ ಆಹಾರಕ್ಕೆ ಅಯೋಗ್ಯವಾಗಿಯೂ, ಕಾಣಬರುವ ಸಂಗತಿಯಲ್ಲಿ ಅವುಗಳನ್ನು ಹಿಡಿದುಕೊಂಡು ಅವುಗಳನ್ನು ನಾಶ ಮಾಡಿಬಿಡುವಂತೆಯಾಗಲಿ ವಿಕ್ರಯಿಸುವ ಬಗ್ಗೆ ಕಾಣಿಸದಂತೆ ಯಾಗಲಿ, ಆಹಾರದ ಬಗ್ಗೆ ಉಪಯೋಗಿಸಲ್ಪಡದಂತೆ ಯಾಗಲಿ ವಿನಿಯೋಗಿಸಿ ಬಿಡುವಂತೆ ಹುಕ್ಕುಂ ಮಾಡಬಹುದು, ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ, ಅಂತಾ ಜಂತುವು, ಮುರ್ದಾರ್, ಮಾಂಸ, ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿವು ಮನುಷ್ಯನ ಆಹಾರಕ್ಕೆ ಅಯೋಗ್ಯವಾಗಿ ಯಿತ್ತೆಂತ ಒಬ್ಬ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ, ಅವುಗಳ ಮಾಲೀಕನಾಗಲಿ, ಅವು ಯಾರ ಸ್ವಾಧೀನದಲ್ಲಿ ಕಾಣಬಂದವೋ ಅಂತಾ ಮನುಷ್ಯನಾಗಲಿ, ಇಂಡ್ಯನ್ ಪೆನಲ್‌ಕೋಡಿನ 273ನೇ ಸೆಕ್ಷನ್ನಿಂದ ವಿಧಿಸಲ್ಪಟ್ಟ 5 ರೂಪಾಯಿಗಳ ಮೊದಲು 10 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಆ ಮೇರೆ ನಾಶ ಮಾಡಲ್ಪಟ್ಟ ವಸ್ತುಗಳು ಮನುಷ್ಯಾಹಾರಕ್ಕೆ ಯೋಗ್ಯವಾಗಿತ್ತೆಂತ ಮಾಜಿಸ್ಟ್ರೇಟರು ಅಭಿಪ್ರಾಯ ಪಟ್ಟ ಪಕ್ಷಕ್ಕೆ ಸದರೀ ವಸ್ತುವಿನ ನ್ಯಾಯವಾದ ಕಿಮ್ಮತ್ತು ಯೆಂತ ಮಾಜಿಸ್ಟ್ರೇಟರಿಗೆ ತೋರುವ ಮೊಬಲಗನ್ನು ಸದರೀ ಮಾಲೀಕನಿಗೆ ಸಲ್ಲಿಸುವಂತೆ ಮೆಂಬರ್‌ಗಳಿಗೆ ಹುಕ್ಕುಂ ಮಾಡತಕ್ಕದ್ದು.

88. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಮಡಿಕೆರೆ ಲಷ್ಕರ್ ವ ಷಹರ್ ಸರಹದ್ದುಗಳೊಳಗೆ ಈ ಕೆಳಗೆ ಕಾಣಿಸಲ್ಪಡುವ ಕಾರ್ಯಗಳ ಪೈಕೀ ಯಾವ ಕಾರ್ಯಗಳಿಗೋಸ್ಕರವಾಗಲಿ ಅಂದರೆ, ಕೊಬ್ಬು ಕರಗಿಸುವದು, ಸತ್ತ ಜಂತುವಿನ ಕರಳು ಮುಂತಾದ ಮಾಂಸ, ರಕ್ತ ಯಿಂತಾದ್ದನ್ನು ಕಾಯಿಸುವದು, ಈ ಬಗ್ಗಾಗಲಿ, ಸಬ್ಬು, ಕರ್ಪೂರ, ಯೆಣ್ಣೆ, ಯಿಂತಾದ್ದನ್ನು ಕಾಯಿಸುವ ಮನೆಯಾಗಿ, ಗಾಣಿಗೆ, ಯಾ ಯೆಣ್ಣೆ ತೆಗೆಯುವ ಯಂತ್ರವಾಗಿ, ರಂಗಾರಿ ಮನೆಯಾಗಿ, ಯಾ ಅಂಗಳವಾಗಿ, ತೊಗಲು ಹದ ಮಾಡುವ ಸ್ಥಳವಾಗಿ, ಇಟ್ಟಿಗೆ ಯಾ ಕುಂಬಾರ ಸೂಳಾಗಿ, ಯಾ ಸುಣ್ಣದ ಗೂಡಾಗಿ, ಕಾಗದ ಕಾರ್ಖಾನೆಯಾಗಿ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಯಾವದಾದರೂ ಕಂಪುಳ್ಳ ಯಾವದಾದರೂ ಕೆಲಸ ನಡೆಯುವ ಕಾರ್ಖಾನೆಯಾಗಿ ಯಾ ಕೆಲಸ ಮಾಡುವ ಸ್ಥಳವಾಗಿ; ಅಥವಾ ಮೊಣಗರಿಕೆ, ಹುಲ್ಲು, ಮರದ ಸಾಮಾನುಗಳು, ಸಾದೆ, ಕರಿ, ಯಾ ಬೆರಣೀವಗೈರೆ ಯಿಂತಾದ್ದನ್ನು ಇಡುವ ದೊಡ್ಡಿ, ಯಾ ಕೋಠೀಯಾಗಿ ಉಪಯೋಗಿಸಿಕೊಳ್ಳಲ್ಪಟ್ಟ ಪ್ರತಿ ಸ್ಥಳದ ಮಾಲೀಕ ಯಾ ಅನುಭವದಾರನು, ಅವು ವಿಕ್ರಯದ ಬಗ್ಗೆ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಮತ್ತೊಂದು ಕಾರ್ಯಕ್ಕಾಗಿ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದ ತರುವಾಯ ಮೂರುತಿಂಗಳೊಳಗಾಗಿ ಆಬಗ್ಗೆ ಮೆಂಬರ್‌ಗಳ ದೆಸೆಯಿಂದ ಇಡಲ್ಪಡತಕ್ಕ ಒಂದು ಪುಸ್ತಕದಲ್ಲಿ ಅವರ ಆಫಿಸನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದು. ಮತ್ತು ಸದರೀ ಮೂರುತಿಂಗಳು ಕಳೆದ ತರುವಾಯ ಪ್ರೆಸಿಡೆಂಟರು ನೋಟಿಸ್ ಕೊಟ್ಟ ಯೆಂಟು ದಿನಗಳಿಗೆ ತರುವಾಯ ಯಾರಾದರೂ, ಅಂತಾ ಯಾವ ಸ್ಥಳವನ್ನಾಗಲಿ ರಿಜಿಸ್ಟರ್ ಮಾಡಿಸಿಕೊಳ್ಳದೆ ಉಪಯೋಗಿಸಿಕೊಂಡಲ್ಲಿ ಆ ತಕಸೀರ್ ನಡಿಸಲ್ಪಡುತ್ತಾ ಇರುವ ಪ್ರತಿದಿನಕ್ಕೂ 2 ಆಣೆ ಮೊದಲು, 5 ರೂಪಾಯಿಗಳವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

89. ಪರಂತು ಯಿದರಲ್ಲಿ ವಿಧಿಸಲ್ಪಟ್ಟ ಯಾ ಐಯಿಂದ ವಿಧಿಸಲ್ಪಡತಕ್ಕ ಬೈಲಾ ನಿಬಂಧನೆಗಳ ಪೈಕೀ ಯಾವದಾಗಲಿ, ಮಡಿಕೇರಿಯಲ್ಲಿ ಯಾವ ಬಗೆ ಜನಗಳಿಗಾಗಲಿ ಯಾವ ವ್ಯಕ್ತಿಗಾಗಲಿ, ಬಹಳ ಕಠಿಣವಾಗಿ ಕಾಣಬಂದ ಪಕ್ಷಕ್ಕೆ ಆಗ ಈ ಬೈಲಾನಿಬಂಧನೆಗಳು, ಚೀಪ್ ಕಮ್ಮಿಷನರವರ ಅನುಮತಿಯ ಮೇಲೆ ಬೋರ್ಡಿನವರ ಪೂರ್ಣವಾದ ಸಮಾಜದೊಳಗೆ ಯುಕ್ತ ತೋರುವ ಪ್ರಕಾರ ಯಾವಾಗ್ಯೂ ರದ್ದು ಮಾಡಲ್ಪಡಬಹುದು, ಪರಿಷ್ಕರಿಸಲ್ಪಡ ಬಹುದು, ಯಾ ತಿದ್ದುಪಡೀ ಮಾಡಲ್ಪಡಬಹುದು.

90. ಮತ್ತು ಕಾಫೀಸಾಗುವಳಿಯು ಜನಗಳ ಆರೋಗ್ಯ ಭಂಗಕಾರಿಯಾಗಿರುವದರಿಂದ. ಅದನ್ನು ಪೇಟೇಯೊಳಗೆ ಮತ್ತು ರೋಮನ್ ಕ್ಯಾಥೋಲಿಕ್ ಗುಡಿವರಿಗೆ ಕಾಫೀಗಿಡ ಹಾಕುವಣ ನಿರೋಧಿಸಲ್ಪಡತಕ್ಕದ್ದು.

"ಬಮೋಜಿಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಶಪ್ಟಂಬರ್ ತಾ॥ 2, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮಿಷ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 1ನೇ ಶಪ್ಟಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಷ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ಯಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಅಪ್ಪೀಲ್ ೨	ಆರ್. ಶಿ. ಡಾಬಸ್ ಯಸ್ಕ್ವಯರ ..	ನರಶಿಹ್ಮಮೇಸ್ತ್ರಿ ವಗೈರೆ ..	೫ನೇ ಸೆಪ್ಟಂಬರ್
ಸ್ಪೆ. ಅ. ೪೩	ವೆಂಕಟಾಚಾರ್ರು ..	ಪೋಬಳಾಚಾರಿ ಗಾರ್ಡಿಯನ್ ಕನಕಮ್ಮ ..	ಡಿಟ್ಟೋ
ಕೊ. ಅ. ನಂ. ೩	ರಾಮುಶೆಟ್ಟಿ ಚಿಕ್ಕಪ್ಪೈಯ ..	ಮಲ್ಲುಶೆಟ್ಟಿ ..	ಡಿಟ್ಟೋ
ಕೊ. ಸ್ಪೆ. ಅ. ೯	ಹಿರಂಣ್ಯೈಯ ..	ನಂಜೇಗೌಡ ..	ಡಿಟ್ಟೋ
ಕೊ. ಕ್ರಿ. ಪಿ. ನಂ. ೪	ಕೊಮಾರಿಗೌಡ ವಗೈರೆ ..	ಸಿದ್ಧಲಿಂಗೇಗೌಡ ..	ಡಿಟ್ಟೋ
ಸ್ಪೆ. ಅ. ೫೦	ಸುಬ್ಬಾಸಾನಿ ..	ಶಿವಂಣ ..	೧೯ನೇ ಡಿಟ್ಟೋ
ಸ್ಪೆ. ಅ. ೫೪	ರಾಮಕ್ರಿಷ್ಣಪ್ಪ ವಗೈರೆ ..	ತಿಮ್ಮಪ್ಪ ವಗೈರೆ ..	ಡಿಟ್ಟೋ
ಅಪ್ಪೀಲ್ ೪ ರಿ. ನಂ. ೧೩	ಚೆನ್ನಮಲ್ಲೈಯ ..	ಮಲ್ಲಮ್ಮ ವಗೈರೆ .	ಡಿಟ್ಟೋ
ಫೂಟ್ ಅ. ೭	ರಾಮಾನುಜಮ್ಮ ..	ಲಕ್ಷ್ಮಮ್ಮ ..	ಡಿಟ್ಟೋ
ಸ್ಪೆ. ಅ. ೫೧	ದಾಸಪ್ಪ .	ಈರಿಗಾ ..	೨೧ನೇ ಡಿಟ್ಟೋ
ಸ್ಪೆ. ಅ. ೫೨	ಗೊಪಾಲೈಯ ವಗೈರೆ ..	ವುಜ್ಜನಿ ಮರುಳೈಯ ವಗೈರೆ ..	ಡಿಟ್ಟೋ
ಸ್ಪೆ. ಅ. ೫೫	ಗರುಡಾಚಾರಿ ..	ಮಹಮ್ಮದ್ ಅಹಮ್ಮದ್ ..	ಡಿಟ್ಟೋ
ಸ್ಪೆ. ಅ. ೫೩	ವುಮ್ಮಾಜಿ ..	ಸುಬ್ಬಣ್ಣ ವಗೈರೆ ..	೨೩ನೇ ಡಿಟ್ಟೋ
ಫೂಟ್ ಅ. ೩	ಪುಟ್ಟಣ್ಣ ..	ದುಗ್ಗ ಹೆಗ್ಗಡತಿ ವಗೈರೆ ..	ಡಿಟ್ಟೋ
ಸ್ಪೆ. ಅ. ೬೯	ಚರಂತೆಪ್ಪಾ ..	ಚನ್ನವೀರಪ್ಪಾ ವಗೈರೆ ..	ಡಿಟ್ಟೋ
ಕೊ. ಸ್ಪೆ. ಅ. ೩	ನಾರಣ್ಯೈಯ ..	ನಾಗೈಯ ..	೩೦ನೇ ಡಿಟ್ಟೋ
ಸ್ಪೆ. ಅ. ೪೯	ಕೃಷ್ಣರಾವ್ ಯ. ಸುಬ್ಬರಾವ್ ..	ಮಹದೇವರಾವ್ ವಗೈರೆ ..	ಡಿಟ್ಟೋ
ಕೋಲಾರ ಡಿ. ಕೆ. ನಂ. ೩	ಕೆ. ವಸಂತೈಯ ..	ನಂಜುಂಡೈಯ ..	ಡಿಟ್ಟೋ

J. D. GORDON, *Judl. Commr.*

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 25ನೇ ಅಗಸ್ಟ್ 1876.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸ.ಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಕವಲೇದುರ್ಗ,	4ನೇ	ಅಕ್ಟೋಬರ	1876.	ಹೆಚ್ಚು ಕಡಮೆ 200 ಟನ್‌ಗಳ ವಜನಿ.
ಶಿವಮೊಗ್ಗಾ,	16ನೇ	,,	,,	
ಸಾಗರ,	25ನೇ	,,	,,	
ಹುಣಸೂರು,	4ನೇ	ನವಂಬರ	,,	ಹೆಚ್ಚು ಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಣ,	8ನೇ	,,	,,	
ಬೆಂಗಳೂರು,	1ನೇ	ಡಿಶಂಬರ	,,	ಹೆಚ್ಚು ಕಡಮೆ 100 ಟನ್‌ಗಳು.
ಫ್ರೇಜರಪೇಟೆ	18ನೇ	,,	,,	80 ,,

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ 28ನೇ ಮುಕ್ಕಾಂ 47ನೇ ನಂಬರು ಮೈಸೂರು ಗಜೆಟನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯ ಹರಾಜ್‌ಗಳು ನವಂಬರ 8ಕ್ಕೆ ಖೈದುಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಳಿ ಡಿಪಾಜಿಟ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ಕಾಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಸೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮುಕ್ಕಾಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಸೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತುಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ್, ಪಾಂಡ್, ಹಂಡ್ರೆಡ್ ವೆಯಿಟ್ ಟನ್‌ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. van Someren, *Captain,*
Conservator of Forests, Mysore & Coorg.

BANGALORE DISTRICT.

Notice of an application by Appanachari for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟನಿಂದ.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 64.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಲೋಸಪೇಟೆ ತಾಲ್ಲೂಕು ಚನ್ನಪಟ್ಣ ಕಿಲ್ಲೇಲಿ ಯಿರುವ ಕಾನಖಾನಹಳ್ಳಿ ಅಪ್ಪಣಾಚಾರೀ ಯಂಬವನು ತನ್ನ ಮಾವ ಮೂರಟಿಗೆ ಕೃಷ್ಣಾಚಾರೀ ಬಗೆ ಸ್ಥಿರ ಚರ ಸ್ವತ್ತುಗಳು ಮುತ್ತು ಆತನ ಮೈನರ್ ಮಕ್ಕಳು ರಾಮಾಚಾರಿ, ಕೃಷ್ಣಾಚಾರಿ ಯಿವರುಗಳ ಪೋಷಣೆ ಬಗ್ಗೆ ಸಹ ತಂನನ್ನು ಗಾರ್ಡಿಯನ್ನಾಗಿ ಯೇರ್ಪಡಿಸಬೇಕೆಂತ ಕೊಟ್ಟಿರುವ ಅಪ್ಲಿಕೇಷನ್ ಸೆಪ್ಟಂಬರ 20ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟನಲ್ಲಿ ವಿಮರ್ಸಿಸಲ್ಪಡುತ್ತೆ, ಸದರೀ ಸಂಗತಿಯಲ್ಲಿ ಆಕ್ಷೇಪಣೆ ವುಳ್ಳವರು ಆವೈಮಿಗೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನ ತಿಳಿಯಪಡಿಸ ಬಹುದಾಗಿ ಯಿರುತ್ತೆ.

ತಾರೀಖು 19ನೇ ಆಗಸ್ಟ್ 1876ನೇ ಇಸವಿ ಮೊಕ್ಕಾಂ ಬೆಂಗಳೂರು.

Notice of an application by Sub Rao for a certificate under Act XXVII of 1860.

1876ನೇ ಇಸವಿ ಸಿವಲ್ ಮಿಸಲೇನಿಯಸ್ ನಂಬರ್

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಹಾಲೀ ಬೆಂಗಳೂರಲ್ಲಿ ಯಿರುವ ಪಾವಗಡ ಸುಬ್ಬರಾಯನು ತನ್ನ ತಾತ ಸದಾಶಿವಯ್ಯನ ಲೇಣೇ 3000 ರೂಪಾಯಿ ಬರವಾಡಿ ಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಅಸವಿ ಸೆಪ್ಟಂಬರು 8ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಸೆ ಆಗಲ್ಪಡುತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice of an application by Chateppa and another for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್. 66

ಇಧರಿಂದ ಸಮಸ್ತರಿಗೂ ತಿಳಿಯಪಡಿಸುವ ದೇನಂದರೆ,—ಹೊಸಕೋಟೇ ತಾಲ್ಲೂಕು ನಲ್ಲೂರುಹಳ್ಳೀ ಗ್ರಾಮದಲ್ಲಿ ಯಿರುವ ತಿಗಳರ ಚಾಟಿಪ್ಪ ಮಣಿಕೆಪ್ಪನು ಸಹ ತನ್ನ ತಂದೆ ಮಟಕಾರಪ್ಪನ ಲೇಣೆ 100 ರೂಪಾಯಿ ಬರಮ್ಮಾಡಿಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ್‌ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಸೆಪ್ಟಂಬರ್ 15ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 17ನೇ ಮಾಹೇ ಆಗಸ್ಟು 1876ನೇ ಯಿಸವಿ ಮೊಕ್ಕಾಂ ಬೆಂಗಳೂರು.

L. Ricketts,
Offg. Dy. Commr.

ಸರ್ ೧೮೭೬ನೇ ಇಸವಿ ಆಗಸ್ಟು ೨೬ನೇ ರಾತ್ರಿ, ಯಾ ೨೭ನೇ ಪ್ರಾತಃಕಾಲ ಬೆಂಗಳೂರು ಸೆಂಟ್ರೆಲ್ ಜೈಲ್ ನಿಂದ ಪರಾರೀಯಾದ ಖೈದಿಯ ಚಹರೇ ಪಟ್ಟಿ.

ಜೈಲ್ ನಂಬರ್; 8358—ಖೈದಿಯ ಹೆಸರು ಅವನ ತಂದೆ ಹೆಸರು ಸಹಾ; ಕಿಷ್ಟಪ್ಪನ ಮಗ ವೆಂಕಟ ಉರುಪ್ ರಾಮಸಾಮಿ, ಮೊದಲ್ ಸಜಾ ಆದಾಗ ತಂದೆ ಹೆಸರು ತಿರುಮಲನೆಂದು ಬರಸಿರುತ್ತಾನೆ—ಜಾತಿ ವಾಸಸ್ಥಳ; ವಡ್ಡರ್ ಪೂರ್ವದಲ್ಲಿ ಬ್ಯಾಡರವನೆಂದು ಬರಸಿ ಯಿದ್ದಾನೆ ಪಾಪನಪಲ್ಲಿ ತಾಲ್ಲೂಕು ಯೇಕಾಸಿ ಹಳ್ಳಿ—ತಕ್ಸೀರು; ರಾತ್ರಿ ಕನ್ನ ಚೋರಿ—ಸಜಾ; 10 ವರುಷ—ವಯಸ್ಸು; 34 ವರುಷ, 6 ತಿಂಗಳು—ಯತ್ತರ, 5 ಅಡಿ, 5 ಅಂಗುಲ—ಯಾರಿಂದ ಸಜಾ ವಿಧಿಸಲ್ಪಟ್ಟಿದ್ದು; ಸರ್ 1874ನೇ ಇಸವಿ ನವೆಂಬರ್ 6ನೇ ತಾರೀಖಿನಲ್ಲಿ ನಂದೀದುರ್ಗ ಡಿವಿಜನ್ ಸೆಷನ್ ಜಡ್ಜಿಯವರಿಂದ—ಮುಖ್ಯವಾದ ಗುರ್ತುಗಳು; ನೇರವಿಲ್ಲದರೂಪ ದೇವಿಕಲೆ ಬಲಭುಜದಮೇಲೆ ಅಚ್ಚೆಗುರ್ತು ಯಡತೊಡೇಹಿಂದೆ ಮಚ್ಚೆ ಯಡಮುಂಗೈಮೇಲೆ ಸುಟ್ಟ ಹೊಸಘಾಯ ಮೊದಲ್ ವೊಂದಾವರ್ತಿ 2 ವರುಷ ಸಜಾ ತೀರಿಸಿ 73ನೇ ಇಸವಿ ಆಗಸ್ಟು 2ನೇ ತಾರೀಖಿನಲ್ಲಿ ಖುಲಾಸೆ ಆಗಿಯಿದ್ದವನು—ಷರಾ; ಕಾಯಿಲೆ ಸಬಬ್ ಆಸಪತ್ರಿಯಲ್ಲಿರುವಾಗ್ಯೆ ಛಾವಣಿಯನ್ನು ಭೇದಿಸಿಕ್ಕೊಂಡು ಜೈಲ್ ಉಡುಪು ಯಿಲ್ಲದೆ ಪರಾರಿ, ಯರಡು ಕಾಲಿನಲ್ಲೂ ಕಬ್ಬಿಣದ ಬಳೆಗಳು ಬಲಗಾಲಿಗೆ ಸರಪಣಿ ಸಹಾ ಯಿತ್ತು.

ಸರ್ ೧೮೭೬ನೇ ಇಸವಿ ಆಗಸ್ಟು ೨೬ನೇ ರಾತ್ರಿ ಯಾ ೨೭ನೇ ಪ್ರಾತಃಕಾಲ ಬೆಂಗಳೂರು ಸೆಂಟ್ರಲ್ ಜೈಲ್‌ನಿಂದ ಪರಾರೀ ಯಾದ ಖೈದಿಯ ಚಹರೇ ಪಟ್ಟಿ.

ಜೈಲ್ ನಂಬರ್; 6528—ಖೈದಿಯ ಹೆಸರು ಅವನ ತಂದೆ ಹೆಸರು; ವೆಂಕಟನಮಗ ವೆಂಕಟಬೋಯಿ—ಜಾತಿ ವಾಸಸ್ಥಳ; ವಡ್ಡರ್ ಮಾಗಡಿ ತಾಲ್ಲೂಕು ಕರೇಗಿಡವ ಪಾಳ್ಯ—ತಕ್ಸೀರು; ಖೂನಸಹಿತ ಡಕಾಯಿತಿ—ಸಜಾ, 10 ವರುಷಗಳು—ವಯಸ್ಸು; ಸುಮಾರು 40 ವರುಷ—ಯತ್ತರ, 5 ಅಡಿ, 5 ಅಂಗುಲ—ಯಾರಿಂದ ಸಜಾ ವಿಧಿಸಲ್ಪಟ್ಟಿದ್ದು; ಸರ್ 1871ನೇ ಇಸವಿ ಡಿಸೆಂಬರ್ 23ನೇ ತಾರೀಖಿನಲ್ಲಿ ನಂದೀದುರ್ಗ ಡಿವಿಜನ್ ಸೆಷನ್ ಜಡ್ಜಿಯವರಿಂದ—ಮುಖ್ಯವಾದ ಗುರ್ತುಗಳು; ವರಟು ರೂಪ ಬಲಗಂಣಿನ ಕೆಳಗೂ ಬಲಮುಂಗೈ ಹಿಂದೆಯೂ ಮಚ್ಚೆಗಳಿವೆ, ಬಲತೊಡೇ ಮೇಲೆ ವುದ್ದನೆ ಸುಟ್ಟ ಗುರ್ತು ಯಿಧೆ—ಷರಾ; ಕಾಯಿಲೆ ಸಬಬ್ ಆಸಪತ್ರಿಯಲ್ಲಿರುವಾಗ್ಯೆ ಛಾವಣೀಯನ್ನು ಭೇದಿಸಿಕ್ಕೊಂಡು ಜೈಲ್ ಉಡುಪು ಯಿಲ್ಲದೆ ಫರಾರೀ ಬಲಗಾಲಿನಲ್ಲಿ ವೊಂದು ಕಬ್ಬಿಣದ ಬಳೆ ಯಿತ್ತು.

A. W. C. Lindsay, *Major,*
Offg. Supt., Central Jail.

TUMKUR DISTRICT.

Notice of an application by Siddappa for a certificate under Act XXVII of 1860.

ತುಮುಕೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ, ತುಮುಕೂರು ತಾಲ್ಲೂಕು ಕ್ಯಾತಸಂದ್ರ ಗ್ರಾಮದ ವಾಸಸ್ಥನಾಗಿ ಯಿದ್ದ ಪಾತೀ ಯಾದ ವುರಡಿಗೆರೆ ಸಿದ್ದಲಿಂಗಪ್ಪ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 2000 ರೂಪಾಯಿಗಳು ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ ಯಿವನಮಗ ಸಿದ್ದಪ್ಪ ಯಂಬುವನು ದಾಖಲ್ ಮಾಡಿ ಯಿರುವ ಅರ್ಜಿಯನ್ನು 1876ನೇ ಇಸವಿ ಸೆಪ್ಟಂಬರು ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್ಯಾರಾದರೂ ಇದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 8ನೇ ಮಾಹೆ ಆಗಸ್ಟು 1876ನೇ ಇಸವಿ, ಮೊಕ್ಕಾಂ ತುಮುಕೂರು.

T. E. WOODCOCK,
Offg. Dy. Commr.

MYSORE DISTRICT.

Notice of an application by Vire Gauda for a certificate under Act XXVII of 1860.

ಮೈಸೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸಾ 1876ನೇ ಇಸವಿ ಸಿವಿಲ್ ಪೂಟೆ ಮಿಸಲೇನಿಯಸ್ ನಂಬರ್ 61.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ತಂದೆ ಚನ್ನವೀರದೇವರಿಗೆ ಬರಬೇಕಾದ 200 ರೂಪಾಯಿ ಸಾಲಗಳನ್ನು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗ ಬೇಕೆಂದು ಚಾಮರಾಜನಗರ ತಾಲ್ಲೂಕು ಪೈಕೀ ಗೂಳೀಪುರದ ಗ್ರಾಮದಲ್ಲಿರುವ ವೀರೇಗೌಡನು ಕೊಟ್ಟಿರತಕ್ಕ ಅರ್ಜಿಯನ್ನು ಸೆಪ್ಟಂ ಬರ್ ತಾರೀಖು 19ರಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸ ರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Venkat Rao for a certificate under Act XXVII of 1860.

1876ನೇ ಇಸವಿ ಶಿವಿಲ್ ಪೂಟೆ ಮಿಸಲೇನಿಯಸ್ ನಂಬರ್ 62.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ಓವರಸೀಯರ್ ಶ್ರೀನಿವಾಸರಾಯ ನೆಂಬುವನಿಗೆ ಬರಬೇಕಾದ 100 ರೂಪಾಯಿ ಅದರ ಬಡ್ಡಿ ಸಹ ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ಹೊಸಅಗ್ರಹಾರದಲ್ಲಿರುವ ವೆಂಕಟರಾವ್ ಯಂಬವನು ಕೊಟ್ಟಿರತಕ್ಕ ಅರ್ಜೀ ಯನ್ನು ಸಪಟಂಬರ್ ಮಾಹೇ ತಾರೀಖು 19ರಲ್ಲಿ ಹಿಯರಿಂಗ್ ಮಾಡುತ್ತೆಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

Notice of an application by Ramachari for a certificate under Act XXVII of 1860.

1876ನೇ ಇಸವಿ ಶಿವಿಲ್ ಪೂಟೆ ಮಿಸಲೇನಿಯಸ್ ನಂಬರ್ 63.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ಮಾನೋಡೀ ಶ್ರೀನಿವಾಸಾಚಾರಿಗೆ ಬರಬೇಕಾದ 1250 ರೂಪಾಯಿಗಳನ್ನು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸ ರಟಫಿಕೇಟ್ ಆಗಬೇಕೆಂದು ಮೈಸೂರು ತತ್ತಾಡೀಪುರದ ಅಗ್ರಹಾರದಲ್ಲಿ ಯಿರುವ ಮಾನೋಡೀ ರಾಮಾಚಾರೀ ಯೆಂಬುವನು ಕೊ ಟ್ಟಿರತಕ್ಕ ಅರ್ಜೀಯನ್ನು ಸೆಪ್ಟಂಬರ್ ತಾರೀಖು 19ರಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

ತಾರೀಖು 18ನೇ ಆಗಸ್ಟು 1876ನೇ ಇಸವಿ ಮೊಕ್ಕಾಂ ಮೈಸೂರು.

C. J. PEARSE,
Dy. Commr.

HASSAN DISTRICT.

ಹಾಸನ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟ್ 1876.

ಹೇಮಾವತೀ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಆಫಿಸುಮುನ್ಷಿ ಸಿಕಂದರಬೇಗ್ ಎಂಬವನ ಚಹರೇಪಟ್ಟಿ—ಸದರೀಯುವನು, ಅತ್ತಿಗುಪ್ಪಾತಾಲ್ಲೂಕು ಖಜಾನೆಯಿಂದ ಓವರಸಿಯರ್ ಮೆಸ್ಟರ್ ಕಾರ್ಲೆಯವರಿಗೆ ಪಾವತಿಮಾಡಬೇಕಾಗಿ ತನ್ನ ವಶದಲ್ಲಿ ಕೊಡಲ್ಪಟ್ಟಿದ್ದ ಗವರ್ನಮೆಂಟ್ ರೂಪಾಯಿಗಳು 342 ಆಣೆಗಳು 5 ಸರೇಮು ಸೊಬಲಗ್ ಸೀ ಪರಾರೀ ಆಗಿರುತ್ತಾನೆ.

ಎತ್ತರ—ಸುಮಾರ್ 5 ಅಡಿ 2 ಅಂಗಲ—ಬಣ್ಣ ಸ್ವಲ್ಪಕೆಂಪ್ಪಗಿದ್ದಾನೆ—ಜಾತಿ ಮುಸಲ್ಮಾನ—ಕಣ್ಣುಗಳು ಕಪ್ಪು—ದೊಡ್ಡವು, ಉಬ್ಬಾಗಿವೆ. ಸಾಮಾನ್ಯಗುರುತು ತೆಳ್ಳಗೆ ನರಗಳು ಸ್ಪಷ್ಟವಾಗಿ ಕಾಣುತಿರುತವೆ ಸ್ವಲ್ಪ ದಾಡಿ ವ ಜುಲ್ಪಾ ಬಿಟ್ಟಿರುತ್ತಾನೆ. ವಾಸಸ್ಥಾನ—ಪೂರ್ವದಲ್ಲಿ ಮೈಸೂರು, ತಪ್ಪಿಸಿಕೊಂಡಾಗ್ಯೂ ನರಸೀಪುರದಲ್ಲಿರುವದು ನರಸೀಪುರದಲ್ಲಿ ಅವನ ಬಂಧುಗಳು ಇದ್ದಾರೆ.

H. E. Mottet,
Dy. Commr.

NAGAR DIVISION.

Notice of destruction of old Judicial records of the Nagar Division Commissioner's Court.

ನಗರ ಡಿವೀಜನ್ ಕಮ್ಮಿಷನರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಳೇ ಜುಡಿಷಲ್ ರಿಕಾರ್ಡುಗಳನ್ನು ನಾಶಪಡಿಸತಕ್ಕ ಬಗ್ಯೆ ಸರ್ 1867ನೇ ಇಸವಿ ಆಗಸ್ಟು 27ನೇ ಮರಕಂ ಮೈಸೂರು ಗೆಜೆಟ್ ಪಾನು 460ರಲ್ಲು ಪ್ರಾಯಿಷ್ ಮಾಡಿರುವ ನಿಬಂಧನೆ ಪ್ರಕಾರ ಮತ್ತು ಸರ್ 1876ನೇ ಜುಲೈ 27ನೇ ಮರ್ಕೂಂ ಜುಡಿಷಲ್ ಕಮ್ಮಿಷನರ್ ಸಾಹೇಬರವರ ನಂಬರ್ 294—74ನೇ ಲೆಟರ ಪ್ರಕಾರ ಸಹಾ ನಗರ ಡಿವೀಜನ್ ಕಮ್ಮಿಷನರ್ ಕೋರ್ಟಿಗೆ ಸಂಬಂಧಪಟ್ಟ ಸರ್ 1862 –63ನೇ ಇಸವಿ ಲಾಗಾಯತು 1870ನೇ ಇಸವಿ ಆಖೈರ್ ವರಿಗಿನ ಬಾಬತು ಜುಡಿಷಲ್ ರಿಕಾರ್ಡುಗಳನ್ನು ನಾಶ ಪಡಿಸುವದರಿಂದ,

ವ್ಯಾಜ್ಯಗಳಿಗೆ ಸಾಧಕವಾಗಿ ಕಕ್ಷಿಗಾರು ದಾಖಲ್ ಮಾಡಿದ ದಸ್ತೈವಜುಗಳನ್ನು ವಾಪಸ್ ಪಡಿಯಬೇಕಾಗಿ ಯಿದ್ದಲ್ಲಿ ಈ ಲಾಗಾಯತು ವಂದು ತಿಂಗಳ ವಳಗಾಗಿ ಈ ಕೋರ್ಟು ಮುಂದೆ ಹಾಜರಾಗಿ ಕ್ರಮಪ್ರಕಾರ ವಾಪಸ್ ಪಡಿಯಬಹುದು.

ತಾರೀಖು 8ನೇ ಆಗಸ್ಟು ಸರ್ 1876ನೇ ಇಸವಿ.

J. A. Campbell,
Commissioner.

SHIMOGA DISTRICT.

Notice of an application by Tate Rao Jagatapa for a certificate under Act XXVII of 1860.

ಶಿವಮೊಗ್ಗಾ ಡಿ॥ ಜೆ॥ ಕೆ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತನ್ನ ಖಾಸಾಅಣ್ಣಾ ಸಂತಾಜಿ ಜಗತಾಪ್ ಯಂಬವನು ಪಾಲೀ ಆಗಿ ಇರುವದರಿಂದ ಅತನಿಗೆ ಹೊರಗಿನಿಂದ ಬರತಕ್ಕ ಲೇಣ ದೇವಿ ಸಾಲದ ಬಾಬತು 250 ರೂಪಾಯಿ ತಾನು ವಸೂಲ್ಮಾಡಿಕ್ಕೊಳ್ಳುವದಕ್ಕೆ ಸರ್ಟಿಫಿಕೇಟ್ ಕೊಡಿಸಬೇಕೆಂದು ಶಿವಮೊಗ್ಗಾ ತಾಲ್ಲೂಕು ಬೆಂಕಿಪುರದಲ್ಲಿ ಇರುವ ತಾತೆರಾವು ಜಗತಾಪನು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಶಪಟಂಬರು ತಾರೀಖು 14ನೇ ದಿನ ಹೀರಿಂಗ್ ನಿಷ್ಕರ್ಷೆ ಮಾಡಿ ಇದೆ, ತಕರಾರ್ ಉಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ಬತಾರೀಖು 11ನೇ ಮಾಹೇ ಆಗಸ್ಟು ಸರ್ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

Notice of an application by Satyasandhachari for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತನ್ನ ತಂದೆ ಅಂಬಲಗೋಳದ ವ್ಯಾಸರಾಮಾಚಾರಿಯು ಮಾತೀ ಆಗಿ ಇರುವದರಿಂದ ಆತಗೆ ಹೊರಗಿನಿಂದ ಬರತಕ್ಕ ಲೇವಾದೇವೀ ಸಾಲದ ಬಾಬತು 900 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ತನ್ನ ಹೆಸರಿಗೆ ಸರ್ಟಿಫಿಕೇಟ ಕೊಡಿಸಬೇಕೆಂತ ಕವಲೇದುರ್ಗ ತಾಲ್ಲೂಕು ಮಹಿಷಿಯಲ್ಲಿ ಯಿರುವ ಸತ್ಯ ಸಂಧಾಚಾರಿಯು ಅಪ್ಲಿಕೇಷನ್ನ ಕೊಟ್ಟ ಸಂಗತಿ ವಿಚಾರಣೆಗೆ ಬರುವ ಅಕ್ಟೋಬರ 5ನೇ ತಾರೀಖು ದಿನ ಹಿಯರಿಂಗ ನಿಶ್ಚಯಿಸಿಧೆ ತಕರಾರ ವುಳ್ಳವರು ಆ ದಿನಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕ್ಕೊಳ್ಳತಕ್ಕದ್ದಿಧೆ.

ಬಿತಾರೀಖು 17ನೇ ಆಗಸ್ಟು 1876ನೇ ಇಸವಿ ಮೊಕ್ಕಾಂ ಶಿವಮೊಗ್ಗಾ.

C. S. Blair,
Offg. Dy. Commr.

KADUR DISTRICT.

Descriptive roll of prisoners absconded.

ಕಡೂರು ಡಿಸ್ಟ್ರಿಕ್ಟ ಡೆ|| ಕಮಿಷ್ನರವರ ಕೋರ್ಟಿನಿಂದ.

ಯಾದಾಸ್ತು ಕೊಪ್ಪದ ತಾಲ್ಲೂಕು ಶ್ರಿಂಗೇರೀ ಕಸಬಾದಲ್ಲಿ ಯಿರುವ ನಗರದ ವೆಂಕಟಗಿರಿಯಪ್ಪನ ಮನೇಯಲ್ಲಿ ಜೂಲೈ ತಾ|| 16ನೇ ರಾತ್ರಿ ನಡೆದ ಕನ್ನ ಕಳವು ಮೊಕದ್ದಮಾದಲ್ಲಿ ಮಾಲು ನಿಶೀ ಪರಾರೀಯಾದ ಖೈದೀರ ಚಹರೇ ಪಟ್ಟಿ.

ಖೈದೀ ಹೆಸರು	ಜಾತಿ	ತಂದೇ ಹೆಸರು	ವಯಸ್ಸು	ಯೆತ್ತರ ಅಡಿ	ಅಂ.	ಯಾವ ಗ್ರಾಮದ ವಾಸಸ್ಥ	ಮುಖ್ಯವಾದ ಗುರ್ತುಗಳು.
ಅಹಮ್ಮದು ಖಾ	ಮುಸಲ್ಮಾನ ಪಾದರ	ಗೊತ್ತಿಲ್ಲ	28	5	6	ಪೆಷಾವರ ಪಂಜಾಬುಸೀಮೆ	ಕೆಂಪುವರ್ಣದ ಸಾಧಾರಣ ತರಹಾದ ಆಳು ಗಡ್ಡಾ ಮೀಶೆ ಬಿಟ್ಟಿಧಾನೇ ಹಿಂಭಾಗದ ತಲೆಯಲ್ಲಿ ಗಿರ್ದ ಬಿಟಿಧಾನೆ ಸುಮಾರು 2½ ಅಂಗುಲವುದ್ದ ಸದರೀ ಕೂದ್ಲು ಬೆಳದಿದೆ ಬಲದಕೈ ಹೆಬ್ಬೆಟ್ಟಿಗೆ ಸಮಾನಾಗಿ ಮೇಲಕಡೆ ಮುಂಗೈಮೇಲೆ 1 ರೂಪಾಯಿ ಅಗಲಾನೆ ಕುರುವಿನ ಕಲೆಯಿಧೆ ತಲೆಗೆ ಕೆಂಪು ಬನಾತಿನ ಕರೀ ಕುಚ್ಚಿನ ಟೋಪೀ ಹಾಕಿ ಯಿರುತ್ತಾನೆ ಈ ಜಾತಿ ಜನರು ಧರಿಸುವ ಪದ್ಧತಿ ಪ್ರಕಾರ ಬಿಳೆ ಸಾದಾ ಗಾಡದ ಬಹಳ ಸೊಡ್ಲವಾಗಿ ಇರುವ ಷರಾಯಿ ಮೊಳಕಾಲು ವರಿಗೂ ಯಿರುವ ಜುಬ್ಬಾ ತೊಟ್ಟಿರುತ್ತಾನೆ ಇವನ ಬಳಿ ಇಂಗು ಹಾಕಲಿಕ್ಕೆ ವುಪಯೋಗಿಸಿದ್ದ ವೆಂದು ಗೋಣಿ ಚೀಲಾ ಯಿಧೆ ಇಂಗು ಮಾರುವ ಕಸಬು ಮನುಷ್ಯ.
ಅಬ್ಬಾಸ್ ಖಾ	ಡಿಟೋ	ಡಿಟೋ	34	5	8	ಡಿಟೋ	ಯಣೆಗೆಂಪು ವರ್ಣದ ದಪ್ಪತರಹಾದ ಆಳು ದಾಡಿ ಮೀಶೆ ಬಿಟ್ಟಿಧಾನೆ ತಲೆಯಲ್ಲಿ ಕೂದ್ಲು ಮುಂತಾದ್ದು ಬಿಟ್ಟಿಲ್ಲಾ ಇವನು ಕೆಂಪು ಬನಾತಿನ ಕುಚ್ಚು ಯಿಲ್ಲದಿದ್ದ ಟೋಪಿ ಹಾಕಿ ಬದಸ್ತೂರ ಬಿಳೇ ಷರಾಯಿ ಜುಬ್ಬ ತೊಟ್ಟಿರುತ್ತಾನೆ ಇವನ ಬಳಿಯಲ್ಲಿ ವಂದಕ್ಕು ಇಂಗು ಹಾಕುವ ಗೋಣೀ ಚೀಲ ಯಿಧೆ.

Notice of sale of occupied lands in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ,—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವರಿಂದ ಸಲ್ಲತ
ಕ್ಕ ಜಮೀನ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ ಈ ಕೆಳಗೆ ಕಂಡ ಜಮೀನಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ
ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ ತರೀಕೆರೆ ಬಾಣಾವಾರ ತಾಲ್ಲೂಕು ಆಯಾ ಗ್ರಾಮದ
ಲ್ಲಿ ಚಾಲ್ತೀ ಇಸವೀ ಸೆಪ್ಟಂಬರ್ ಮಾಹೇಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಆಯಾ ಗ್ರಾಮದಲ್ಲಿ ಹಿಡುವಳೀ ಸಮಾ
ಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಶಿಷ್ಟಾಂಶಗಳೊಡನೆ ಜಮೀನುಗಳು ಚಡ ದರಖಾಸ್ತುದಾರಗೆ ವಿಕ್ರಯಿಸಲ್ಪಡು
ವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವೀ ಪೂರಾ ಆಗಲಿ (ಉಳಿದಕಾಲಕ್ಕಾಗಲಿ ಸಂದರ್ಭ ಬಿದ್ದಂತೆ ಮುಜಕೂ.
ರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಪ್ಸೀಲವಾರ ತೋರಿಸಲ್ಪಟ್ಟ ಪ್ರಕಾರ ರೂ|| 95 ಆ|| 14 ಪೈ|| 8
ಗಳಾಗುತ್ತವೆ. ಹರಾಜ್ ನಿಬಂಧನೆಗಳು ಹರಾಜ್ ಕಾಲದಲ್ಲಿ ತಿಳಿಸಲ್ಪಡುತ್ತವೆ. ಜಮೀನ ತಪ್ಸೀಲಬಗ್ಯೆ ಮಾಹೆ ಮ|| 19ನೇ ಮ
ರು ೦ ಗೆಜೆಟ ನೋಡಿಕೊಳ್ಳ ತಕ್ಕದ್ದು.

P. KRISHNA RAO,
Dy. Commr.

Notice of destruction of old Judicial records of the Judicial Assistant's Court, Kadur District.

ಕಡೂರು ಡಿಸ್ಟ್ರಿಕ್ಟ ಜುಡಿಷಿಯಲ್ ಅ|| ಕಮ್ಮಿಷನರ್ ಕೋರ್ಟಿನಿಂದ.

ಕಡೂರು ಡಿ|| ಡಿಪ್ಯುಟಿ ಸೂ|| ಕೋರ್ಟು.
ಚಿಕ್ಕಮಗಳೂರ ತರಫ ಅ|| ಸೂ|| ಕೋರ್ಟು.
ಕಡೂರು ತರಫ ಅ|| ಸೂ|| ಕೋರ್ಟು.
ಕಡೂರು ಡಿ|| ಜು|| ಅ|| ಕ|| ಕೋರ್ಟು
ಬಾಬತು ಸನ್ 1869ನೇ ಇಸವಿ,

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಜುಡಿಷಿಯಲ್ ಕಮ್ಮಿಷನರ್ ಸಾಹೆಬರವರ ಸನ್
1867ನೇ ಇಸವಿ ಶಪಟಂಬರ 7ನೇ ಮರ್ಕುಂ ರೂಲ್ಸ 1 ಸನ್ 1876ನೇ ಇಸವಿ ಜೂನ
27ನೇ ಮರಕುಂ ನಂಬರ 594—74ನೇ ಲೆಟರ ಮತ್ತು ನಗರ ಡಿ|| ಕಮ್ಮಿಷನರ
ಸಾಹೆಬರವರ ಸನ್ ಮಜಕೂರು ಜೂಲೈ 6ನೇ ಮರಕುಂ 169ನೇ ನಂಬರ ಡಾಕಿಟ
1 ಸಹಾ ಅನುಸರಿಸಿ ಈ ಕೋರ್ಟು ರಿಕಾರ್ಡಿನಲ್ಲಿರತಕ್ಕ ಸನ್ 1867—68—69 ಈ
3 ಸಾಲು ಸಿವಿಲ್‌ರಿಕಾರ್ಡುಗಳು ಈ ಮಾರ್ಜನ್ನಲ್ಲಿ ನಮೂದಾಗುವ ಕೋರ್ಟುಗಳಬಾಬ
ತು ಸನ್ ಮಜಕೂರು ನವಬರ್ ತಾರೀಖು 30ರಲ್ಲು ಜಲಾಯಿಸುವದ್ದರಿಂದ ಆ ಕಟ್ಟು
ಗಳಲ್ಲಿರತಕ್ಕ ದಸ್ತೈವಜು ಗೈರೆಗಳನ್ನು ವಾಪಸುಪಡದು ಕೊಳ್ಳಲಾಪೇಕ್ಷೆಯುಳ್ಳ ಕಕ್ಷಿ
ಗಾರವಗೈರೆ ಜನರು ಸದರಿ ವಾಯಿದೆವಳಗಾಗಿ ಈ ಕೋರ್ಟಿಗೆ ಹಾಜರಾಗಿ ತೆ ದ್ಯು
ಕೊಳ್ಳಬಹುದು. ಹಾಗೆ ಹಾಜರಾಗಿ ತೆಗದುಕೊಳ್ಳದೆ ಹೋದರೆ ಸದರೀ ವಾಯಿದೆ
ಗುಜರಾದವಡನೆ ಜಲಾಯಿಸ್ಪಡುತ್ತೆ.

ತಾರೀಖು 9ನೇ ಆಗಸ್ಟ ಸನ್ 1876ನೇ ಇಸವಿ ಚಿಕ್ಕಮಗಳೂರ

B. SRINIVASAIENGAR,
Judl. Asstt. Commr.

Notice to one Mohadin Saib to receive back a docuent presented by him for registration in the Sub-Registrar's Office, Chikmagalur.

ಕಡೂರು ಡಿಸ್ಟ್ರಿಕ್ಟ ರಿಜಿಸ್ಟ್ರಾರವರ ಆಫಿಸಿನಿಂದ.

ವಸ್ತಾರಾ ತಾಲ್ಲೂಕು ದಫೇದಾರ್ ನೆಲವಂಗಲದ ಶೇಕ್ ಇಮಾಮ್ ಸಾಬನು ಅತ್ತಿಗುಂಡಿಯಲ್ಲಿ ಯಿರುವ ಜಫರ್‌ದಾರ್, ಶಿಲೆಮಾನ
ಖಾನ ಸಾಬನ ಮಗ ಖಾಜಾ ಚಂದೆ ಮಹತಾಬ್ ಖಾನ ಸಾಹೆಬಗೆ ತನ್ನ ಬಾಬತು ಚಿಕ್ಕಮುಗಳೂರ ಕಸಬಾ ದೊಡ್ಡ ಮಸಜೀದಿ
ಪೂರ್ವ ದಿಕ್ಕಿನಲ್ಲಿ ಯಿರುವ ಮೂರು ಅಂಕಣದ ಹೆಂಚಿನ ಮನೆ ಮತ್ತು ಇದಕ್ಕೆ ಸೇರಿದ ನಿವೇಶನವನ್ನು ಸಹ 150 ರೂಪಾಯಿ
ಗಳಿಗೆ ಶುದ್ಧ ಖರೀದಿಗೆ ಕೊಟ್ಟು ಸನ್ 1874ನೇ ಇಸವಿ ಫೆಬ್ರುವರೀ ತಾರೀಖು 19ರಲ್ಲಿ ಬರಕೊಟ್ಟ ದಸ್ತೈವಜು ಸನ್ 1874ನೇ
ಇಸವಿ ಮೇ ತಾರೀಖು 21ರಲ್ಲು ಸದರೀ ಖಾಜಾ ಚಂದೆ ಮಹತಾಬ್ ಖಾನ ಸಾಬನ ಮೊಖ್ತ್ಯಾರ ಅಂಬೂರ ಮೋದೀನ ಸಾಬ್ ಎಂ
ಬವನಿಂದ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ಮುಂದೆ ರಿಜಿಸ್ಟ್ರೇಷನ [illegible] ಹಾಜರಾದ್ದು ಆ ಆಫಿಸ ಸನ್ 1874—75ನೇ ಇಸ
ವಿ 1ನೇ ಬುಕ್ಕು ನಂಬರ 50ಕ್ಕೆ ರಿಜಿಸ್ಟರ ಮಾಡಲ್ಪಟ್ಟು ಸದರೀ [illegible] ಅಮಾನತ್ತು ಯಿರುತ್ತದೆ. ಸದರೀ ದಸ್ತೈವಜು ವಾಪ
ಸ ಪಡೆಯತಕ್ಕ ಬಗ್ಗೆ ವಾಯಿದೆನಿಶೀ ಸದರೀ ಮೋದೀನ ಸಾಬ[illegible] [illegible]ರೀ ಆಗಿ ಬಹಳ ದಿವಸ ವಾದಾಗ್ಯೂ ಅದ್ಯಾಪೀ ಹಾಜ

ರಾಗದೆ 3 ವರುಷದ ಕಾಲ ಕಳದು ಯಿರುವಂತೆ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ್ ಮೂಹೇ ಮಜಕೂರ್ 12ನೇ ಮುಕ್ಕಾಂ ನಂಬರ್ 99ನೇ ಯಿತ್ತಿಲ್ಲಿ ತಲ್ಪಿ ಯಿರುವದ್ದರಿಂದ ಸದರೀ ತನುಸೂಕಿನಲ್ಲಿ ಕಂಡ ಖಾಜಾ ಚಂದೆ ಮಹತಾಬ್ ಖಾನನ ಮೊಖ್ತ್ಯಾರ ಸದರೀ ವೋದೀರ್ ಸಾಬನೇ ಆಗಲಿ ಯಿಲ್ಲವೆ ಯಿವನಿಂದ ಕ್ರಮಪ್ರಕಾರ ಆಧಿಕಾರ ಹೊಂದಿದ ಬೇರೇ ಮುತಾಲೀಕನೇ ಆಗಲಿ, ಈ ತಾರೀಖು ಲಗಾಯತು 3 ತಿಂಗಳ ವಳಗೆ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ಮುಂದೆ ಷುರೂ ಕೊಡಲ್ಪಟ್ಟ ರಶೀದೀನಿಶೀ ಹಾಜರಾಗಿ ಐರ್ಜ ದಸ್ತ್ಯವೆಜು ವಾಪಸ್ ಪಡೆಯಬೇಕು. ಆವೋರೆ ತೆಗದುಕೊಳ್ಳದಿದ್ದರೆ ರಿಜಿಸ್ಟ್ರೇಷನ್ ಆಕ್ಟು 83ನೇ ಸೆಕ್ಷನ್ ಅನುಸರಿಸಿ ಸದರೀ ತನುಸೂಕನ್ನು ನಾಶ ಪಡಿಸಲಾಧೀತು ವಾಯಿದೇ ಅನಂತರ ಬರುವ ಫಿರಿಯಾದು ಅಂಗೀಕರಿಸೋಣಾಗಲಿಕ್ಕೆ ಯಿಲ್ಲ.

ತಾರೀಖು 24ನೇ ಆಗಸ್ಟು ಸ್ನ 1876ನೇ ಇಸವಿ ಮೊಕ್ಕಾಂ ಚಿಕ್ಕಮುಗಳೂರ್.

P. KRISHNA RAO,
Registrar.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇದರಿಂದ ತಿಳಿಸಲ್ಪಡುವದೇನಂದರೆ—ಇದ[illegible] ವರಿಸಿ ಇರುವ ಕದರಿಗನೆಂಬ ಆಸಾಮಿ ಪಟೇಲ್ ಸಿದ್ದಣ್ಣನೆಂಬವನ ನವುಕರಿಯಲ್ಲಿದ್ದು ತಾರೀಕ ನಂಬರು ಮೈಸೂರುಗೆಜೆಟ ನೇ ಪುಟದಲ್ಲಿ ಘಾಯಿಷಾದ ಪಟ್ಟಿಯಲ್ಲಿ ನಮೂದಿರುವ ಸ್ವತ್ತು ಸಹಿತ ಪರಾರೀಯಾದಂತೆ ತಿಳಿಸಲ್ಪಟ್ಟಸಬಬ್ ಅವನ ದಸ್ತಗಿರೀಗೆ ಅನುಕೂಲಿಸುವ ಸಂಗತಿಯನ್ನು ತಿಳಿಸುವಂತಾವರಿಗೆ 100 ರೂಪಾಯಿಗಳ ಇನಾಂ ಕೊಡಲ್ಪಡುತ್ತೆಂತ ಪಾವಗಡತಾಲ್ಲೂಕು ಅಜ್ಜಮ್ಮನಹಳ್ಳಿ ಜೋಡೀದಾರ ತಿರುಮಲರಾವ್ ಬಯರ್ಮಾಡುತ್ತಾರೆ. ಮತ್ತು ಪತ್ತೇಯಾದ ಮಾಲ್ ಪೈಕೀ ಸಾವಿರಕ್ಕೆ 25 ರೂಪಾಯಿಗಳ ಮೇರೆಯೂ ಇನಾಂಕೊಡುವಂತೆ ಬಯರ್ಮಾಡುತ್ತಾರೆ.

ಕದ್ದುಗನ ಚಹರೇ ಪಟ್ಟೀ.

ವಯಸ್ಸು—ಷುಮಾರ್ 30 ವರುಷಗಳು ಎತ್ತರ 5 ಅಡಿ 4 ಅಂಗುಲ; ಉದ್ದಮುಖ, ಶಿಡುಬಿನಕಲೆಗಳಿವೆ, ಉದ್ದವಾದಮೀಸೇ ಬಿಟ್ಟಿದ್ದಾನೆ, ಹೊಕ್ಕಳಕೆಳಭಾಗಕ್ಕೆ ಚುಟ್ಟಕೇಗುರುತು; ವಾಸಸ್ಥಳ ಬಳ್ಳಾರೀಡಿಸ್ಟ್ರಿಕ್ಟು ತಾಡಪತ್ರಿತಾಲ್ಲೂಕು ಚಾಗಲ್ಎಂಬ ಸ್ಥಳ.

ABDUL RAHIMAN,
For Dy. Commr.

COORG.

ಕೊಡಗು ಸೂಪರ್ಟೆಂಡೆಂಟ್ ಕಚ್ಚೇರಿಯಿಂದ.

ಅಕ್ರಮ ಸ್ತ್ರೀಸಂಗ ಮಾಡಿದ ತಪ್ಪು ಹೊರಿಸಲ್ಪಟ್ಟ ಪರಾರೀಯಾದ ಅಮ್ಮತ್ನಾಡ್ ತಾಲ್ಲೂಕು ಆತ್ತೂರುಗ್ರಾಮದ ಪೂವಯ್ಯನ ಮಗ ಕೊಕ್ಕಂಡ ಪೊನ್ನಪ್ಪ ನೆಂಬವನು ಪತ್ತೆಯಾಗುವ ಬಗ್ಯೆ, ತಕಶೀರ್ ಸ್ಥಾಪನೇ ಬಗ್ಯೆ ಅನುಕೂಲಿಸತಕ್ಕ ಸಂಗತೀ ತಿಳಿಸುವವರಿಗೆ 150 ರೂಪಾಯಿಗಳು ಇನಾಂ ಕೊಡಲ್ಪಡುತ್ತೆ. ತಕಶೀರ್ ಮಂದನ ಚಹರೇಪಟ್ಟಿ.

ತಕಸೀರ್ ಮಂದನ ಹೆಸರು—ಪೂವಯ್ಯನಮಗ ಕೊಕ್ಕಂಡ ಪೊನ್ನಪ್ಪ—ಜಾತಿ ಕೊಡಗಿನವ—ವಯಸ್ಸು ಮೂವತ್ತುವರುಷಗಳು—ತಕಸೀರ್ ಇಂಡಿಯನ್ ಪೆನಲ್ ಕೋಡ್ 30ನೇ ಸೆಕ್ಷನ್ ಪ್ರಕಾರ—ಎತ್ತರ 5 ಅಡಿಗಳು.

ತಪಸೀಲ್—ಶಾಮಲವರ್ಣ, ದುಂಡುಮೋರೆ ದಪ್ಪರದ ಆಳು, ಸಣ್ಣಮೀಸೆ, ಮಾತಿನಲ್ಲಿ ನತ್ತು ಇದೆ. ಕುಡಿಮಿ ಯಿಟ್ಟಿರುತ್ತಾನೆ, ರುದ್ರಾಕ್ಷೀ ಸರ ಹಾಕಿದ್ದಾನೆ, ಹತ್ತು ಕಡಕು ಹಾಕಿದನೆ.

ಸಮಸ್ತ ಜನರಿಗೂ ಪ್ರಕಟಸುವದೇನಂದರೆ,—ಕಾಸಾಗುವಳೀಗೆ ಪಡಕೊಂಡಿದ್ದ ರೈತರು ಕೆಳಗೆ ಬರದ ಇಲಾಖೇ ಮಲೆಗಳ ಸರ್ವೇ ಚಾರ್ಜ್ ಈಕಂಭರ್ತೀ ವಗೈರೆ ಕೊಡಲ[illegible]ನೆಂದು ಹೇಳುವದ್ದರಿಂದ ಈ ಮಲೆಗಳಲ್ಲಿ ಸ್ನ 1876—77ನೇ ಸರಕಾರ ಕೋಸ್ಟರ ಉತ್ಪತ್ತಿ ಆಗಿರುವ ಫಸಲನ್ನು ಬರುವ ಸೆ[illegible] ತಾರೀಖು 18ನೇ ದಿನ ಪಾಡಿನಾಲ್ಕುನಾಡು ತಾಲೂಕು ಕಚ್ಚೇರಿಯಲ್ಲಿ ಹರಾಜು ಹಾಕಲ್ಪಡುತ್ತೆ ಅಪೇಕ್ಷೆಉಳ್ಳವರು ಹಾಜ[illegible] ಸರಖಾಸ್ತಿನಿಂದ ಪಡಕೊಳ್ಳ ಬಹುದು. ಮತ್ತು ಹರಾಜಿನ ಮೊಬಲಗನ್ನು ಸ್ನ 1877ನೇ ಇಸವಿ ಜನವೇ ಮೂಹೇ [illegible] ಸಾಕಲ್ಯವಾಗಿ ಪಾವತೀ ಮಾಡಬೇಕು ಮಲೆಗಳ ವಿವರಾ:

ಸರ್ವೆ ನಂಬರು	ತಾಲ್ಲೂಕು.	ನಾಡು.	ಗ್ರಾಮ.	ತೋಟ.	ತೋಟಗಾರನಹೆಸರು.	ಏಕರಾ.
4168	ಪಾಡಿನಾಲ್ಕು ನಾಡು ತಾಲ್ಲೂಕು.	ಪಾಡಿನಾಲ್ಕು ನಾಡು	ಯವ್ವಕಪಾಡಿ	ಕಂ... ಲೆ ತುಂಡು	ಅಪ್ಪರಂಡ್ರಮಂಡಂಣ	11· 6
4030	ಡಿಟೋ	ಡಿಟೋ	ಡಿಟೋ	ಪಂಗ... ರೆತುಂಡು	ಡಿಟೋ	3·28
3664	ಡಿಟೋ	ಡಿಟೋ	ಪುಲಿಕೋಟು	ಬೆಂಗ... ಮಲೆ	ಮುಕ್ಕಾಟಐಯ್ಯಪ್ಪ	1732·65
4112	ಡಿಟೋ	ತವನಾಡು	...ಕೆ	ಪಡ... ದ ಮಲೆ	ಕಬ್ಬಿನ ಹಿತ್ಲು ಶಂಕ್ರ ಭಟ್ಟ	852·94
4084	ಡಿಟೋ	ಡಿಟೋ	ಡಿಟೋ	ನೊ... ಡ ಮಲೆ	ಸ್ವಾ॥ ವೆಂಕಟೇಶಯ್ಯ	763·58
4070	ಡಿಟೋ	ಡಿಟೋ	ಪೇರಜೆ	ನಿಡಿ... ಮಲೆ	ನಿಡ್ಯಮಲೆ ಕೃಷ್ಣಪ್ಪ	676·87
2060	ಡಿಟೋ	ಡಿಟೋ	ಚೆರಂಗಾಲ್	ಬಾ... ತ ಮಲೆ	ಪಾಂಡಿ ಮಾದಯ್ಯ	1069·12
4161	ಡಿಟೋ	ಡಿಟೋ	ಕರಿಕೆ	ಐ...ಟ್ಟಿ ಮಲೆ	ನಕಿಹಿತ್ಲು ಮಹದೇವಯ್ಯ	394·51

ತಾರೀಖು 1ನೇ ಆಗಸ್ಟ ಸನ್ 1876ನೇ ಇಸವಿ.

E. Shaw,
Offg. Supt.

ಸನ್ 1876ನೇ ಇಸವಿ ಜುಲೈ ತಿಂಗ... ಕಾಲಸ್ಥಿತೀ ರಿಪೋರ್ಟು.

ಕಡೂರು ...ಟ್

ಸಾಧಾರಣ ಷರಾಗಳು—ಈ ಡಿಸ್ಟ್ರಿಕ್ಟಿನ ಮಲನಾಡು ಪ್ರದೇ... ಮಳೆ ಬಲವಾಗಿ ಬಿದ್ದಿರುತ್ತೆ. ಆದರೆ ಮೈದಾನಪ್ರದೇಶಗಳಲ್ಲಿ ಬೆಳೆಯುಲ್ಲಿರುವ ಫಸಲುಗಳು ನಾಶನವಾಗದೆ ಕಾಪಾಡುವದಕ್ಕೆ ...ದಷ್ಟು ಮಳೆಯಾದರು ಬೀಳಲಿಲ್ಲವು. ಮಳೆ ಬಂದೀತೆಯೆಂದು ಯೆದುರುನೋಡೋಣಾಗಿರುತ್ತದೆ. ಹೀಗಿರುವಂತಾದ್ದು ...ಸ... ಮಾತ್ರವೇ ಅಲ್ಲ, ಮನುಷ್ಯರಿಗೂ ದನಕರಗಳಿಗೂ ಆಧಾರವಾಗಿರುವ ತಟಾಕಗಳಿಗೂ ವೆ ಭಾವಿಗಳಿಗೂ ನೀರು ಬಂದಿ... ಕೂಡ ಯೆದುರು ನೋಡೋಣಾಗಿರುತ್ತದೆ, ಈ ಡಿಸ್ಟ್ರಿಕ್ಟಿನ ಬೈಲು ಸೀಮೆಯಲ್ಲಿ ತಟಾಕಗಳಲ್ಲಿಯೂ ಭಾವಿಗಳಲ್ಲಿಯೂ ... ...ಯಾಗಿರುತ್ತದೆ.

		ಇ.	ಸೆ.
ಸನ್ 1876ನೇ ಇಸವಿ ಜೂನ್ ತಿಂಗಳಲ್ಲಿ	.. .. ..	1	16½
ಸನ್ 1876ನೇ ಇಸವಿ ಜುಲೈ ತಿಂಗಳಲ್ಲಿ	.. .. ..	6	99¼
ಸನ್ 1875ನೇ ಇಸವಿ ಜುಲೈ ತಿಂಗಳಲ್ಲಿ	.. .. ..	5	57

ಪೇರಾವಾದ ಫಸಲು—ಈ ತಿಂಗಳಲ್ಲಿ ಈ ಡಿಸ್ಟ್ರಿಕ್ಟಿನ ಪೈಕಿ ತರೀ... ತಾಲ್ಲೂಕಿನಲ್ಲಿ ಭತ್ತ, ರಾಗಿ, ಅವರೆ, ತೊಗರಿ, ಹುರಳಿ, ಹರಳು, ಕುರಾಸಾನಿ, ಜೋಳ, ಧನಿಯ, ವುದ್ದು, ಹೆಸರು ಚಿಕ್ಕ... ತಾಲ್ಲೂಕಿನಲ್ಲಿ ಭತ್ತ, ದೊಡ್ಡರಾಗಿ, ಹುರಳಿ ಬಾಣಾವಾರ ತಾಲ್ಲೂಕಿನಲ್ಲಿ. ರಾಗಿ, ಅವರೆ, ತೊಗರಿ, ಹರಳು ಈಮೇರೆ ಮ... ಪೇರಾವಾದವು. ಲಕ್ಕುವಳ್ಳಿ, ಮತ್ತು ಕೊಪ್ಪ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಫಸಲು ನಾಟ್ಟವಾಗಿರುತೆ...

ಫಸಲಿನ ಸ್ಥಿತಿ—ತರೀಕೆರೆ ತಾಲ್ಲೂಕಿನಲ್ಲಿ ಮಳೆ ಬಿದ್ದ... ಶಗಳಲ್ಲಿ ಫಸಲು ಚೆನ್ನಾಗಿರುತ್ತವೆ. ಆದರೆ ಗೋಧಿ, ಕಡಲೆ ಮೊಂತಾದ "ಹಿಂಗಾರು" ಫಸಲುಗಳಿಗೆ ಸಾಧಾರಣವಾಗಿ ...ರುತ್ತೆ. ಲಕ್ಕುವಳ್ಳಿ, ತಾಲ್ಲೂಕಿನಲ್ಲಿ ಭತ್ತ, ಗನ್ನ, ಸುಪಾರಿ, ಇದೂಂದು ಚೆನ್ನಾಗಿರುವದಾಗಿ ರಿಪೋರ್ಟಾಗಿರುತ್ತದೆ. ಕೊಪ್ಪ ತಾ॥ನ ಕೆಲವು ಪ್ರದೇಶಗಳಲ್ಲಿ ಸುಪಾರಿ ಫಸಲಿಗೆ "ಕೊಳೇರೋಗ" ತಗಲಿರುತ್ತೆ. ಆದರೆ ಇಲಾಚಿ ಫಸಲು ಚೆನ್ನಾಗಿರುತ್ತದೆ. ಚಿ...ಗಳೂರು ತಾಕಿನಲ್ಲಿ ಗಿಡ್ಡರಾಗಿ ಮತ್ತು ಗನ್ನದ ಫಸಲು

ವಣಗಿದಹಾಗೆ ಕಾಣುತ್ತದೆ. ಮತ್ತು ಅದಕ್ಕೆ ... ವೆ ಅಗತ್ಯವಾಗಿ ಬೇಕಾಗಿರುತ್ತದೆ, ಕಸಬಾ ಬಾಣಾವಾರದ ಸುತ್ತು 7 ಮೈಲುಗ ಳೊಳಗಾಗಿ ಗನ್ನ, ಹರಳಿನ ಫಸಲು ಚನ್ನಾಗಿರುತ್ತ... ಆದರೆ ಈ ತಾಲ್ಲೂಕಿನ ಇತರ ಭಾಗಗಳಲ್ಲಿ ಬೆಳೆಯಲ್ಲಿರುವ ಫಸಲುಗಳು ಮ ಳೆ ಯಿಲ್ಲದೆ ವಣಗುತ್ತಾ ಯಿವೆ.

ಜನಾರೋಗ್ಯ—ಡಿಸ್ಟ್ರಿಕ್ಟಿನ ಮುಳೆ ಜನಾರೋ... ಚನ್ನಾಗಿರಲಿಲ್ಲ, ತರೀಕೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಜ್ವರ, ಮತ್ತು ಛಳಿ ವ್ಯಾಪಿಸಿತ್ತು ಚಿಕ್ಕಮಗಳೂರು ಬಾಣಾವ... ಮತ್ತು ತರೀಕೆರೆಯ ಕೆಲವು ಭಾಗಗಳಲ್ಲಿ ಕೂಲಿ ಯಿಂದಲೇ ಜೀವನಮಾ ಡುತ್ತಾಯಿದ್ದ ಬಡಮನುಷ್ಯರುಗಳಿಗೆ ಈ ವರುಷ... ಳೆ ಯಿಲ್ಲದ ಕಾರಣ ಹೊಲಗಳಲ್ಲಿ ಯಾವ ಕೃಷಿಯೂ ದೊರಿಯದೆ ಬಹಳ ತೊಂದರೆ ಪಡುತ್ತಾ ಯಿದ್ದಾರೆ, ಅಂತಾವರು ಜೀ... ಮಾಡುವದಕ್ಕೆ ಸಾಧಕವಾ... ಮತ್ತು ಧಾನ್ಯಕ್ಕೇನೂ ಕಡಿಮೇಯಿಲ್ಲವಾಗಿ ಧಾನ್ಯವನ್ನು ಕೊಳ್ಳಲಿಕ್ಕೆ ಅಂತಾವರು ಹಣವನ್ನು... ಗಿರುವವಕ್ಕಾಗಿಯೂ ... ದವರು ಕ್ಷಾಮ ನಿವೃರ್ತಕವಾದ ಕಾಮಗಾ ರಿಗಳು ಪ್ರಾರಂಭಿಸಿರುತ್ತಾರೆ. ಇದರಿಂದ ಅವರು ... ಕಷ್ಟಗಳನ್ನು ನಿವಾರಣೆ ಮಾಡಿಕ್ಕೊಳ್ಳುವರು ಮತ್ತು ಈಗ ಅವರಲ್ಲಿ ವ್ಯಾಪಿಸಿರುವಂತಾ ಕ್ಷಾಮವನ್ನು ಕೊಂಚ ಮಟ್ಟಿಗೆ ... ಶಮನ ಮಾಡಿಕೊಳ್ಳುವರು.

ಈ ತಿಂಗಳಲ್ಲಿ 268 ಮಂದಿ ಸತ್ತಹಾಗೆ ರಿಪೋರ್ಟಾಗಿರುತ್ತದೆ, ಹಿಂದಿನ ತಿಂಗಳಲ್ಲಿ 356 ಮಂದಿ. ಸ್ 1875ನೇ ಇಸವಿ ಜುಲೈ ತಿಂಗಳಲ್ಲಿ 3... ಮಂದಿ.

ಕಾಲ್ನಡೆಯ ಸ್ಥಿತಿ—ಲಕ್ಕವಳ್ಳಿ, ಚಿಕ್ಕಮಗಳೂರು ಬಾಣಾವರ ತಾಲ್ಲೂಕುಗಳಲ್ಲಿ "ದೊಡ್ಡರೋಗ" "ಮತ್ತು" ಕಾಲ್ ಬಾ ಯಿ ಜ್ವರ ಯಾನೆ ಗೋಛಪಾರಿ ರೋಗ ವ್ಯಾಪಿಸಿರುತ್ತೆ, ...ಮೇವು ನೀರು ಇಲ್ಲದ್ದರಿಂದ ತರೀಕೆರೆ, ಚಿಕ್ಕಮಗಳೂರು, ಬಾಣಾವಾರ ಈ ತಾಲ್ಲೂಕುಗಳಲ್ಲಿ ಕೆಲವು, ಕಾಲ್ನಡಿ ಸತ್ತವು. ಸಾಯ...ವುಳಿದವುಗಳು ಮಲೆ ಮುಂತಾದವುಗಳನ್ನು ಮೇಯಿಸುತ್ತಾ ಗುಟ್ಟಗಳ ಮೇಲಕ್ಕೆ ಅಟ್ಟಲ್ಪಟ್ಟು ಅಲ್ಲಿ ದೊರೆಯತಕ್ಕ ಕೊಂ...ಗ್ರಾಸದಿಂದ ನಳ್ಳರ್ಕಡುತ್ತಾ ಯಿದ್ದವು. ಸಾಧಾರಣವಾಗಿ ಅವುಗಳ ಸ್ಥಿತಿ ಯು ಈ ತಾಲ್ಲೂಕುಗಳಲ್ಲಿ ಬಹಳ ಪಶ್ಚಾತ್ತಾಪಕರವಾಗಿದೆ.

ಯಲ್ಲಾ ಕಾರಣಗಳಿಂದಲೂ ಯೆಕೋಣಾ 6260 ಕಾಲ್ನಡಿ ಸತ್ತವು. ಹಿಂದಿನ ತಿಂಗಳಲ್ಲಿ 2539, ಸ್ 1875ನೇ ಇಸವಿ ಜುಲೈ ತಿಂಗಳಲ್ಲಿ 943 ಸತ್ತವು.

P. KRISHNA RAO,
Dy. Commr.

... ಮಹಲ್.

ದನಗ... ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬ... ಕೆಲವು ಹೋರಿಗಳು, ಹಸುವುಗಳು, ಕರುವುಗಳು, ಸಣ್ಣ ಯೆತ್ತು ಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡಿ 1876ನೇ ಅಕ್ಟೋಬರ್ 26ನೇ ಮಾರ್ಕ...ಂ ಗುರುವಾರ ದಿನದಲ್ಲೂ ಆತರುವಾಯ ದಿ ನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜಿನ ನಿಬಂಧನೆ—ನಗದು.

ಇದ್ದರಡಿ ರುಜು ಮಾಡತಕ್ಕವರನ್ನು ಕೇಳಿ ತಪಶೀಲ ತಿಳಿದುಕೊಳ್ಳಬಹುದು.

ಮು—ವಿ—50 ಜೊತೆ ಯೆತ್ತುಗಳು ಬಂಡಿಗೆ ತ... ಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದ ಕ್ಕೆ ತಯಾರ್ ಮಾಡಲ್ಪಡುವವು.

CHAS. McINROY, *Major*,
Sub-Asstt. Commissary Genl.,
In charge Amrut Mahal by Mysore.

MYSORE GOVERNME[NT P]RESS, BANGALORE—1876.

ಮೈಸೂರ ಗೆಜೆಟ್.

ನಂ. 36 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಶಪ್ಟಂಬರ ತಾ॥ 9, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ ನಾಮೆಗಳು.	221—244
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್‌ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು; ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್‌ವೇಟರು, ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. ..	437—444
3ನೇ ಭಾಗ—ಇಂಡ್ಯ ಗವರ್ನಮೆಂಟ್ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ಪ್ರಸಿದ್ಧ ಪತ್ರಿಕೆ.

ತಾರೀಖು 18ನೇ ಆಗಸ್ಟ್ 1876.

ನಂ. 187.

ಸನ್ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ರೂಲ್ ನಿಬಂಧನೆಗಳನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಬೆಂಗಳೂರಲ್ಲಿರುವ ಈ ಕೆಳಗೆ ಕಂಡ ಜಮೀನು ಬಂದಾನೊಂದು ಸರ್ಕಾರ ಕೆಲಸಕ್ಕಾಗಿ ಅಂದರೆ, ಮೈಸೂರು ರಸ್ತೆಯಲ್ಲಿ ಖಸ್ಬೆ ಮಾರ್ಕೆಟ್ಟಿಗೆ ಪೂರ್ವ ದಿಕ್ಕಿನೊಳಗೆ ಮಿಗಗಳು ಮಾರತಕ್ಕ ಒಂದು ಮಾರ್ಕೆಟ್ಟನ್ನು ಕಟ್ಟಿಸುವಬಗ್ಯೆ ಬೇಕಾಗಿರುತ್ತೆ.

ಮೈಸೂರು ರಸ್ತೆಯಲ್ಲಿರುವ ಖಸ್ಸೈ ಮಾರ್ಕೆಟ್ಟಿಗೆ ಪೂರ್ವದಿಕ್ಕಿನ ಸಮೀಪದಲ್ಲಿ ಇರುವ 65½ ಅಡಿ ಲಾಂಬಿಯೂ 58 ಅಡಿ ರುಂದಿಯೂ ಅಂದರೆ 422 ಗಜಗಳುಳ್ಳ, ಮತ್ತು ಪೂರ್ವಕ್ಕೆ ಖಸ್ಸೈ ಅಬ್ದುಲ್ ರಹಿಮಾನ್ ಮನೆಗೆ ಹೋಗುವ ಒಂದು ಸಂದಿ ಪಶ್ಚಿಮಕ್ಕೆ, ಪೆರಿಮೈಯನೆಂಬವನ ತರಕಾರೀ ತೋಟ—ಉತ್ತರಕ್ಕೆ, ಖಸ್ಸೈ ಅಬ್ದುಲ್ ರಹಿಮಾನ್ ಮನೆ—ದಕ್ಷಿಣಕ್ಕೆ ಈಗಿನ ಮಿಾನುಗಳು ಮಾರುವ ಮಾರ್ಕೆಟ್.

2. ಸದರೀ ಜಮೀನಿನ ಸ್ಕೆಚ್ ಪ್ಲಾನ್ ಯಾನೆ ಕಡಗಟ್ಟಿನ ನಕಷೆಯು, ಬೆಂಗಳೂರು ತಾಲ್ಲೂಕು ಕಚೇರಿಯೊಳಗೆ ಷಹರ್ ಮ್ಯುನಿಸಿಪಲ್ ಕಮಿಷನರ್ ಆಫೀಸನಲ್ಲಿ ನೋಡಲಿಕ್ಕೆ ತಯಾರಾಗಿರುತ್ತೆ.

ನಂ. 189. ತಾರೀಖು 25ನೇ ಆಗಸ್ಟ್ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ರಾಜ್ಯ ಭಾರದ ಕೆಲಸಗಳಿಗೋಸ್ಕರ ಈ ಕೆಳಗೆ ನಮೂದಿಶಿರುವ ಪ್ರಕಾರ ಕೆಲವು ಗ್ರಾಮಗಳ ವಿನಾ, ಮಾಗಡೀ ತಾಲ್ಲೂಕಿಗೆ ಶೇರಿದ ಬಿಡದಿ ಹೋಬಳಿಯನ್ನ ಕ್ಲೋಸಪೇಟೆ ತಾಲ್ಲೂಕಿಗೆ ಶೇರಿಸೋಣಾಗಿರುತ್ತೆ.

I.

ಬೆಂಗಳೂರು ತಾಲ್ಲೂಕು ಪೈಕಿ ಕೆಂಗೇರಿ ಹೋಬಳಿಗೆ ಶೇರಿಸಲ್ಪಡುವ ಗ್ರಾಮಗಳು.

1. ರಾಮೋಹಳ್ಳಿ
2. ಮಾಲಗೊಂಡಹಳ್ಳಿ
3. ಭೀಮನಕುಪ್ಪೆ
4. ರಾಮಸಾಗರ
5. ಮಾರಗೊಂಡಹಳ್ಳಿ
6. [illegible]
7. ಕೊಮ್ಮಘಟ್ಟ
8. ಸೂಳಿಕೆರೆ
9. ಶೇಷಗಿರಿಪುರ
10. ಕೃಷ್ಣಸಾಗರ
11. ಚಳ್ಳಘಟ್ಟ

II.

ಮಾಗಡಿ ತಾಲ್ಲೂಕು ಪೈಕಿ ಗುಡೇಮಾರನಹಳ್ಳಿ ಹೋಬಳಿಗೆ ಸೇರಿಸಲ್ಪಡುವ ಗ್ರಾಮಗಳು.

1. ದೊಡ್ಡಮಾರನಹಳ್ಳಿ 2. ಚಂಚನಗುಪ್ಪೆ 3. ಬೇಲಾಳು 4. ದೋಣೇನಹಳ್ಳಿ

ಮಾಗಡಿ ತಾಲ್ಲೂಕು ಪೈಕಿ ತಾವರೆಕೆರೆ ಹೋಬಳಿಗೆ ಶೇರಿದ ಈ ಕೆಳಗೆ ನಮೂದಾಗುವ 5 ಗ್ರಾಮಗಳನ್ನ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿಗೆ ಶೇರಿಸೋಣಾಗಿದೆ.

1. ನಾಗರಬಾವಿ 2. ಮಾಳಿಗಾಳು 3. ಗಿಡದಕೋನೇನಹಳ್ಳಿ 4. ಹೇರೋಹಳ್ಳಿ 5. ಗಂಗೇನಹಳ್ಳಿ.

ಮೇಲೆ ತಿಳಿಸೋಣಾದ ವರ್ಗಾ ವರ್ಗಿಯೂ, ಸರ್ 1876ನೇ ಇಸವಿ ಶಪ್ಟೆಂಬರ್ ಗುರ್ರೇ ಲಾಗಾಯತು ಜಾರೀಲಿಬರತಕ್ಕದ್ದು.

ನಂ. 205. ತಾರೀಖು 2ನೇ ಶಪ್ಟೆಂಬರ್ 1876.

1874ನೇ ನವೆಂಬರ್ 10ನೇ ಮರ್ಕೂಂ 234ನೇ ನಂಬರ್ ಇಸ್ತಿಹಾರ್ನಾಮೇವಿಷಯದಲ್ಲಿ ಚೀಫ್ ಕಮಿಷನರವರು ಅಪ್ಪಣೇ ಕೊಡಿಸುವದೇನಂದರೆ, ತತ್ಕಾಲಕ್ಕೆ ಸೆಂಟ್ರಲ್ ಜೆಯಿಲ್ ಮೆಡಿಕೆಲ್ ಚಾರ್ಜಿನಲ್ಲಿರುವ ಆಫೀಸರರು, 1874ನೇ ಇಸವೀ ಆಗಸ್ಟು 8ನೇ ಮರ್ಕೂಂ ಮೈಸೂರು ಗೆಜೆಟ್ಟಿನ 204ನೇ ಪುಟದಲ್ಲಿ ಪ್ರಕಟಸಲ್ಪಟ್ಟ, ಮೈಸೂರು ಶೀಮೇಯೊಳಗೆ ಹುಚ್ಚರ ಆಸ್ಪಿಟಲ್‌ಗಳಲ್ಲಿ ಹುಚ್ಚರನ್ನು ಅಂಗೀಕರಿಸಿ ಯಿಡಿಸಿಕೊಳ್ಳುವ ಬಗ್ಯೆ ಆದರೂಲ್ಸಿನ 2ನೇ ಕಲಂ ನಿಬಂಧನೆಗಳನುಸರಿಸಿ, ಹುಚ್ಚರ ಆಸ್ಪಿಟಲ್‌ಗಳನ್ನು ನೋಡುವ ಬಗ್ಯೆ ಬರುವ ಸರ್ಕಾರ್ ಉದ್ಯೋಗಸ್ಥರ ಪೈಕೀ ಒಬ್ಬರಾಗಿರತಕ್ಕದ್ದು.

ನಂ. 206. ತಾರೀಖು 2ನೇ ಶಪ್ಟೆಂಬರ್ 1876.

ಬೆಂಗಳೂರು ಲಷ್ಕರ್ ಮ್ಯುನಿಸಿಪಾಲಿಟಿ ಬಗ್ಯಾಗಿ ಏರ್ಪಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮಿಷನರವರಿಂದ ಮಂಜೂರು ಮಾಡಲ್ಪಟ್ಟ ಸರ್ವರಿಗೂ ತಿಳಿಯುವ ಬಗ್ಯೆ ಶಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಷ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಚದರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ಪೊಂದು ಹಂಗಾಮೀ ಚಪ್ಪರವನ್ನು ಕಟ್ಟಿಸುವ ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ಪೊಂದು ರೂಪಾಯಿಯನ್ನು ಕೊಡತಕ್ಕದ್ದು. ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಚದರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಚಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದೆಸೆಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 207. ತಾರೀಖು 2ನೇ ಶಪ್ಟಂಬರ್ 1876.

ಮೆಸ್ಟರ್ ಇ. ಚಿದಂಬರಂ ಅಯ್ಯರವರು ಮೈಸೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟಂಟ್ ಕಮ್ಮಿಷನರ್ ಆಫಿಸ್ ಚಾರ್ಜನ್ನು ಮೆ॥ ಮಹಮ್ಮದಲ್ಲಿಯವರಿಂದ 1876ನೇ ಆಗಸ್ಟು 19ನೇ ಮಧ್ಯಾಹ್ನದಲ್ಲು ತೆಗೆದುಕೊಂಡರು. ಅದೇ ತಾರೀಖಿನಲ್ಲಿ ಮೆ॥ ಮಹಮ್ಮದಲ್ಲಿಯವರು 1876ನೇ ಜುಲೈ 31ನೇ ಮಧ್ಯಾಹ್ನ 268ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ತಮಗೆ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾವನ್ನು ಉಪಯೋಗಿಸಿಕೊಂಡರು.

ನಂ. 209. ತಾರೀಖು 4ನೇ ಶಪ್ಟಂಬರ್ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಬಾರ್ಕರ್ ಯವರಿಗೆ 1876ನೇ ಶಪ್ಟಂಬರ್ 5ನೇ ಮಧ್ಯಾಹ್ನ ಲಗಾಯತ್ತು ಅಥವಾ ಹೊರಡುವ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ನಂ. 210. ತಾರೀಖು 4ನೇ ಶಪ್ಟಂಬರ್ 1876.

ಅಸಿಸ್ಟೆಂಟ್ ಕಮ್ಮಿಷನರ್ ಲೆಫ್ಟಿನೆಂಟ್ ಕರ್‍ನಲ್ ಬೆಂಸನ್‍ಯವರು ಬೆಂಗಳೂರು ಷಹರ್ ವ ಕಂಟೋನ್ಮೆಂಟ್ ಮಾಜಿಸ್ಟ್ರೇಟ್ ಕೋರ್ಟಿನ ಚಾರ್ಜನ್ನು 1876ನೇ ಆಗಸ್ಟು 30ನೇ ಮಧ್ಯಾಹ್ನ ಪೂರ್ವಾಹ್ನದಲ್ಲಿ ಕೆಪ್ಟನ್ ಮೆಕ್ಕಂಜೀಯವರಿಂದ ಮರಳಿ ತೆಗೆದುಕೊಂಡರು.

ನಂ. 211. ತಾರೀಖು 5ನೇ ಶಪ್ಟಂಬರ್ 1876.

ಅಸಿಸ್ಟೆಂಟ್ ಕಮ್ಮಿಷನರ್ ಕೇಪ್ಟನ್ ಮೆಕ್ಕಂಜಿಯವರು 1876ನೇ ಶಪ್ಟಂಬರ್ 1ನೇ ಮಧ್ಯಾಹ್ನ ಪೂರ್ವಾಹ್ನದಲ್ಲಿ ಡಾಕ್ಟರ್ ಆಸ್ವಲ್ಡ್ ಯವರಿಂದ ಮೈಸೂರು ಗವರ್ನಮೆಂಟ್ ಮ್ಯೂಜಿಯಮಿನ ಚಾರ್ಜನ್ನು ವಹಿಸಿದರು.

ನಂ. 212. ತಾರೀಖು 6ನೇ ಶಪ್ಟಂಬರ್ 1876.

ಅರಕಲಗೂಡು ತಾಲ್ಲೂಕು ಅಮಲ್ದಾರ್ ಖಾದರ್‍ಅಲ್ಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯತು 10 ದಿನಗಳ ಪ್ರಿವೀಜ್ ರಜಾ ಕೊಡಲ್ಪಟ್ಟಿರುತೆ.

ಅರಕಲಗೂಡು ತಾಲ್ಲೂಕು ಶಿರಸ್ತೇದಾರ್ ಪುಟ್ಟಣ್ಣಯ್ಯನವರು, ಖಿರ್ಜಾ ಖಾದರ್‍ಅಲ್ಲಿಯವರ ಗೈರ್ ಹಾಜರೀಯಲ್ಲಿ ಅಥವ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಅದೇ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮೇಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್.

ನಂ. 213. ತಾರೀಖು 6ನೇ ಶಪ್ಟಂಬರ್ 1876.

ಮದರಾಸ್ ಫೌಜಿನ ಘನವನ್ನು ಹೊಂದಿದ ಕಮಾಂಡರ್‍ಇನ್ ಚೀಫ್‍ಯವರಿಂದ ಕೊಡಲ್ಪಟ್ಟ ಈ ಕೆಳಗೆ ಬರುವ 1876ನೇ ಆಗಸ್ಟು 25ನೇ ಮಧ್ಯಾಹ್ನ ಪೋಟ್ಟು ಹುಕ್ಕುಂ ಪುನಃ ಪ್ರಾಯಿಷ್ ಮಾಡಲ್ಪಡುತ್ತೆ.

ಡಿಪ್ಯುಟಿ ಸರ್ಜನ್ ಜನರಲ್ ಫಿಟ್ಜ್‍ಗೆರಲ್ಡ್‍ಯವರು ಬ್ರಿಟಿಷ್ ಬರಮಾ ಡಿವೀಜನ್ನಿಂದ ಮೈಸೂರು ಡಿವೀಜನ್‍ಗೆ ವರ್ಗ, ಹೋಗಿ ಸೇರತಕ್ಕದ್ದು.

ಡಿಪ್ಯುಟಿ ಸರ್ಜನ್ ಜನರಲ್ ಆಸ್ವಾಲ್ಡ್‍ಯವರು ಬ್ರಿಟಿಷ್ ಬರಮಾ ಡಿವೀಜನ್‍ಗೆ ವರ್ಗ ಆದರೆ, ಕೆಲಸದ ಚಾರ್ಜ ಕೊಡುವ ಪರಿಯಂತ ಮೈಸೂರು ಡಿವಿಜನ್ನಲ್ಲಿ ಆಕ್ಟಿಂಗಾಗಿ ಕೆಲಸ ನೋಡತಕ್ಕದ್ದು.

ಮೇಲೆ ನಮೂದಾಗಿರುವ ಪ್ರಕಾರ ಡಾಕ್ಟರ್ ಆಸ್ವಾಲ್ಡ್‍ಯವರು ಮೈಸೂರು ಡಿವೀಜನ್ ವ ಸೀಡೆಡ್ ಡಿಸ್ಟ್ರಿಕ್ಟುಗಳ ಇಂಡ್ಯ ಮೆಡಿಕಲ್ ಡಿಪಾರ್ಟ್‍ಮೆಂಟ್ ಡಿಪ್ಯುಟಿ ಸರ್ಜನ್ ಜನರಲ್‍ಯವರ ಆಫೀಸ್ ಚಾರ್ಜನ್ನು 1876ನೇ ಇಸವಿ ಶಪ್ಟಂಬರ್ 2ನೇ ಮಧ್ಯಾಹ್ನ ಪೂರ್ವ ತೆಗೆದುಕೊಂಡರು.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಕೊಡಗು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 6. ತಾರೀಖು 10ನೇ ಜುಲೈ 1876.

ಮಡಿಕೆರಿ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸೋಣಾದ ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ ಮಾಡಲ್ಪಟ್ಟು ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಸಲ್ಪಟ್ಟಿರುತವೆ.

"ಬಮೋಜೀಬ್ ಹುಕ್ಕುಂ."

T. Clarke,
Offg. Secretary.

ಮಡಿಕೆರಿ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸಲ್ಪಟ್ಟ ಬೈಲಾ ನಿಬಂಧನೆಗಳು.

1ನೇ ಅಧ್ಯಾಯ.

1. ಆಯಾ ತಿಂಗಳ ಮೊದಲನೇ ಸೋಮವಾರದ ದಿನ, ಮ್ಯುನಿಸಿಪೆಲ್ ಬೋರ್ಡಿನವರ ಸಾಮಾನ್ಯಸಮಾಜಗಳು ತಿಂಗಳು ತಿಂಗಳಿಗೂ ನಡೆಯುವದು.

2. ಜರೂರಾದಾಗಲೆಲ್ಲ ಮೇಲೆ ಕಂಡ ಸಾಮಾನ್ಯ ಸಮಾಜಗಳೊಡನೆ ವಿಶೇಷ ಸಮಾಜಗಳೂ ನಡೆಯುವವು.

3. ಕೊಡಗು ಸೂಪರಿಂಟೆಂಡೆಂಟರವರು ಬೋರ್ಡಿನ ಪ್ರೆಸೀಡೆಂಟರಾಗಿರುತ್ತಾರೆ. ಅವರ ಗೈರ್‌ಹಾಜರೀಯಲ್ಲಿ 1ನೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಪ್ರೆಸೀಡೆಂಟರಾಗಿರತಕ್ಕದ್ದು, ಇವರಿಬ್ಬರೂ ಗೈರ್ ಹಾಜರಾದಲ್ಲಿ ಕಮಾಂಡಿಂಗ್ ಆಫಿಸರವರು ಪ್ರೆಸೀಡೆಂಟ್ ಕೆಲಸವನ್ನು ನೋಡತಕ್ಕದ್ದು. ಈ ಮೂವರೂ ಇಲ್ಲದಿದ್ದರೆ, ಸೇರಿದ ಸಮಾಜದವರು ತತ್ಕಾಲಕ್ಕೆ ತಮಗೆ ಯುಕ್ತವಾದವರನ್ನು ಪ್ರೆಸೀಡೆಂಟರಾಗಿ ಯೇರ್ಪಡಿಸಿಕ್ಕೊಳ್ಳತಕ್ಕದ್ದು.

ಒಂದು ಸಮಾಜದಲ್ಲಿ ಚರ್ಚಿಸಲ್ಪಡತಕ್ಕ ದರೋಬಸ್ತು ಅಂಶಗಳೂ ಸಮಾಜ ಸೇರುವದಕ್ಕೆ ಅಧವ ಪಕ್ಷ ಯೇಳು ದಿನಗಳಿಗೆ ಮುಂದಾಗಿ ಕೊಡೋಣಾದ ಒಂದು ಸರ್ಕ್ಯುಲರ್ ಮೂಲಕ ಮೆಂಬರಗಳ ತಿಳುವಳಿಕೆಗೆ ತರಲ್ಪಡತಕ್ಕವು.

4. ಹಾಜರಿರುವ ಯಾವ ಮೆಂಬರಾಗಲಿ, ಹುಕ್ಕುಮಾಗತಕ್ಕ ಯಾವ ಅಂಶವನ್ನಾದರೂ, ಪ್ರೆಸೀಡೆಂಟರಿಗೆ ಕಳುಹಿಸಬಹುದು.

5. ಯಾವ ವಿಷಯವನ್ನಾದರೂ ಸೂಚಿಸುವಲ್ಲಿ ಯಾ ಚರ್ಚಿಸುವಲ್ಲಿ ಪ್ರತಿಮೆಂಬರೂ, ತನ್ನ ಜಾಗಾದಲ್ಲಿದ್ದುಕೊಂಡು ಯಾವಾಗಲೂ ಪ್ರೆಸೀಡೆಂಟರನ್ನುದ್ದೇಶಿಸಿ ಮಾತನಾಡತಕ್ಕದ್ದು.

6. ಜವಾಬಾಗಿ ಸೂಚಿಸತಕ್ಕವನು ವಿನಾ, ಯಾವ ಮೆಂಬರೂ, ಯಾವ ಸೂಚನೆ ಯಾ ತಿದ್ದುಪಾಟಿನ ವಿಷಯದಲ್ಲಿಯೂ, ಯೆರಡಾವರ್ತಿ ಮಾತನಾಡಕೂಡದು.

7. ಯಾವ ಅಂಶವನ್ನಾಗಲಿ ಸೂಚಿಸಿದವನು ಅಂಗೀಕಾರಪಟ್ಟವರ ಪಟ್ಟೀ ಬೇಕೆಂದು ಕೇಳಿದರೆ ಕೈಗಳೆತ್ತಿ ತೋರಿಸುವದರ ಮೂಲಕ ಅಂಗೀಕಾರಗಳನ್ನು ತೆಗದುಕೊಳ್ಳತಕ್ಕದ್ದು.

8. ಪ್ರತಿ ಸೂಚನೆ ಅಥವಾ ತಿದ್ದುಪಾಡು ಬರವಣಿಗೆ ಯಲ್ಲಿರತಕ್ಕದ್ದು; ಆದರೆ ಪ್ರೆಸೀಡೆಂಟರಿಂದ ಅಪೇಕ್ಷಿಸಲ್ಪಟ್ಟ ಹೊರತ ಸೂಚನೆ ಯಾ ತಿದ್ದುಪಾಡು ಅನುಮೋದಿಸಲ್ಪಡ ಬೇಕಾದ ಆವಶ್ಯಕವಿಲ್ಲವು.

9. ಒಬ್ಬ ಮೆಂಬರಿಂದ ಮತ್ತೊಬ್ಬ ಮೆಂಬರಿಗೆ ಹಾಕಲ್ಪಡುವ, ಸಮಾಜದ ಕೆಲಸಕ್ಕೆ ಸಂಬಂಧಪಟ್ಟ ದರೋಬಸ್ತು ಪ್ರಶ್ನೆಗಳೂ ಪ್ರೆಸೀಡೆಂಟರ ಮೂಲಕವೇ ಹಾಕಲ್ಪಡತಕ್ಕವು.

10. ಮ್ಯುನಿಸಿಪೆಲ್ ಬೋರ್ಡಿನವರ ಸಮಾಜಗಳಲ್ಲಿ ಸಾಮಾನ್ಯವಾಗಿ ಜನಗಳು ಬರಬಹುದು, ಆದರೆ ಜರೂರಿದ್ದೆಲ್ಲಿ ಹೊರಗಿನವರನ್ನು ಹೊರಗೆ ಹೋಗುವಂತೆ ಹೇಳಬಹುದು.

11. ದರೋಬಸ್ತು ಸಮಾಜಗಳಲ್ಲಿಯೂ, ರೈತರು ಹಾಜರಿದ್ದು ಕೇಳಿದ ಯಾವ ಲೆಕ್ಕವನ್ನಾಗಲಿ ಹಾಜರ್ ಮಾಡತಕದ್ದು.

12. ಕಟ್ಟಡದ ಬಗ್ಯೆ, ಯಾ ಇತರ ಕೆಲಸಗಳಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, ಸಾಗುವಳೀಯಲ್ಲಿರುವ ಯಾ ಇತರ ವಿಧವಾಗಿರುವ ಜಮೀನನ್ನು ಕ್ರಯಕ್ಕಾಗಲಿ ಗೇಣೀಗಾಗಲಿ ಪಡೆಯಲಿಕ್ಕೆ ಅಪೇಕ್ಷೆಯುಳ್ಳ ಯಾವ ಮನುಷ್ಯನಾಗಲಿ ಖಾಯಿಷ್ಟಮಾಡಿದ ಜಮೀನು ಇರುವ ಪ್ರದೇಶವನ್ನೂ; ಅದರ ವಿಸ್ತಾರವನ್ನೂ ವಿವರಿಸುವಂತಾ ನಕ್ಷೇಗಳ ಯೆರಡು ಪ್ರತಿಗಳು ಸಹಿ, ಬರವಣಿಗೇ ಮೂಲಕವಾದ ದರಖಾಸ್ತನ್ನು ಪ್ರೆಸೀಡೆಂಟರಿಗೆ ಪರಭಾರೆ ಕೊಡತಕ್ಕದ್ದು.

ಪ್ರೆಸೀಡೆಂಟರ ಮಂಜೂರಾತೀಯನ್ನು ಮೊದಲೇ ಪಡೆದ ಹೊರತು ಯಾವ ಮನುಷ್ಯನೂ, ತಾನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಖರೀದಿಗೆ ಪಡೆದುಕೊಂಡ ಜಮೀನಿನಲ್ಲಿ ಕಟ್ಟಡ ಕಟ್ಟಿಸಲಿಕ್ಕೆ ಪ್ರಾರಂಭಿಸಲು ಅಧಿಕಾರವಿಲ್ಲವು.

ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಒಂದೇ ಜಮೀನಿಗಾಗಿ ಒಂದು ತಿಂಗಳೊಳಗೆ ಯೆರಡು ಅಥವಾ ಹೆಚ್ಚು ದರಖಾಸ್ತುಗಳು ಬಂದರೆ ಅವ್ವಲ್ ಖರೀದೀ ತರಾವ್‌ನಿಂದ ಮೂರುವಾರಗಳವರಿಗೆ ಬಹಿರಂಗಗಳಾದ ಸ್ಥಳಗಳಲ್ಲಿ ನೋಟಿಸುಗಳನ್ನು ಹಚ್ಚುವದರ ಮೂಲಕ ಫಾಯಿಷ್ ಮಾಡಿದ ಮೇಲೆ ಪ್ರಕಟವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

13. ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಜಮೀನನ್ನು ಗೇಣೀಗಾದಲಿ, ಖರೀದೀಗಾಗಲಿ ಪಡೆದುಕೊಳ್ಳುವ ಬಗ್ಯೆ ಬರುವ ಯಾವ ದರಖಾಸ್ತನ್ನಾಗಲಿ, ಪ್ರೆಸೀಡೆಂಟರು ದರಖಾಸ್ತುದಾರರಿಗೆ ತಕ್ಕ ಸಬಬ್‌ಗಳು ತಿಳಿಸಿ ನಿರಾಕರಿಸಬಹುದು. ಅಥವಾ ಷರತ್ತುಗಳ ಪೈಕೀ ಕಟ್ಟಡಗಳು, ಹೊರಗಿನ ಕಟ್ಟಡಗಳು, ಸುತ್ತು ಗೋಡೆಗಳು, ಯಾ ಆವರಣಗಳು, ಫಲಾನೇ ವಿಧವಾಗಿ ಯಾ ಫಲಾನೇ ಖರೀದೀ ಉಳ್ಳದ್ದಾಗಿರಬೇಕೆಂತಲೂ, ಹರಾಜ್ ಯಾ ಗೇಣೀಕಾಲದಲ್ಲಿ ನಿಷ್ಕರ್ಷೆಯಾಗತಕ್ಕಂತಾ ಕಾಲದೊಳಗಾಗಿ ಕಟ್ಟಲ್ಪಡತಕ್ಕದ್ದೆಂತಲೂ, ಇದಕ್ಕೆ ತಪ್ಪಿದರೆ ಯೆರಡು ವರುಷಗಳೊಳಗಾಗಿ ಸರ್ಕಾರಕ್ಕೆ ವಾಪಸ್ ಸೇರಿಸಿಕೊಳ್ಳಲ್ಪಡುವದೆಂತಲೂ, ಒಂದು ಷರತ್ ಮಾಡಬಹುದು.

14. ಹಾಲೀ ಇರುವ ಕಟ್ಟಣದ ಜಮೀನುಗಳು, ಯಾ ನಿವೇಶನಗಳು, ಯಾ ಅಂಗಡಿಗಳು ಪ್ರೆಸೀಡೆಂಟರ ಮಂಜೂರಾತೀ ಇಲ್ಲದೆ ವಿಭಾಗವಾಗತಕ್ಕದ್ದಲ್ಲವು.

15. ಬೀದಿಗಳಲ್ಲಿ ಅಥವಾ ಸಂದಿಗಳಲ್ಲಿ ಐದು ವರುಷಗಳ ಕಾಲ ವಾಸವಿಲ್ಲದೆ ಬಿಡಲ್ಪಟ್ಟ ಯಾವ ನಿವೇಶನಗಳಾಗಲಿ ಮನೆಗಳು ಮುಂತಾದವುಗಳಾಗಲಿ, ಆರು ತಿಂಗಳವರಿಗೆ ಇಸ್ತಿಹಾರ್ ಫಾಯಿಷ್ ಆದಮೇಲೆ ಪ್ರೆಸೀಡೆಂಟರ ಅಧಿಕಾರಕ್ಕೆ ಒಳಗಾಗಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡಲಿಕ್ಕೆ ಗುರಿಯಾಗಿರುತ್ತವೆ. ಅಂತಾ ಹರಾಜ್‌ನಲ್ಲಿ ಹುಟ್ಟುವಹೀಯಾದ ವೊಬಲಗಿಗೆ ಯಾರೂ ಬಾಧ್ಯತೆ ತಾರದೆ ಇದ್ದರೆ ಅದು, ಬೇವಾರಸ್ ಸ್ವತ್ತಿನ ನಿಬಂಧನೆಗಳ ಪ್ರಕಾರ ಮ್ಯುನಿಸಿಪೆಲ್ ಇಲಾಖೆಯ ಜಮೀನಿಗೆ ದಾಖಲ್ ಮಾಡಿಕೊಳ್ಳಲ್ಪಡುವದು.

16. ಸ್ಕ್ವಾಟರ್‌ಗಳು ಅಂದರೆ ದೃಢವಾದ ಬಾಧ್ಯತೆ ಯಿಲ್ಲದೆ ಪಬ್ಲಿಕ್ ಜಮೀನಿನಲ್ಲಿ ನೆಲೆಗೊಳ್ಳುವ ಜನಗಳು, ಇದುವರಿಗೆ ವಾಸ್ತವಮಾಡುತ್ತಿದ್ದ ಮನೆ ಮುಂತಾದವುಗಳನ್ನು ಒಳಗೊಂಡಿದ್ದ ಹಾಳು ಗೋಡೆಗಳು, ಸದರೀ ಮನೆ ಮುಂತಾದವುಗಳು ಖಾಲೀ ಮಾಡಲ್ಪಟ್ಟ ತರುವಾಯ ಕೆಡಹಿಸಿ ನೆಲ ಸಮಮಾಡಲ್ಪಡತಕ್ಕವು. ಅಂತಾ ಸಂಗತಿಗಳಲ್ಲಿ ಹಾಂಗೆ ಖಾಲೀ ಮಾಡಲ್ಪಟ್ಟ ಜಮೀನು ಮ್ಯುನಿಸಿಪೆಲ್ ಯಿಲಾಖೆಯವರ ಅಧೀನದಲ್ಲಿರತಕ್ಕದ್ದು.

II. ಪೂರ್ವ ಅನುಭವಿಸುತ್ತಿದ್ದ ಬಾಧ್ಯತೆಯ ಮೇಲೆ ಸ್ಕ್ವಾಟರ್‌ಗಳಿಂದ ಯಾ ಇತರ ಜನಗಳಿಂದ ತ್ಯಜಿಸಲ್ಪಟ್ಟ ನಿವೇಶನಗಳ, ಪಾಳು ಭೂಮಿಯ, ಯಾ ವಾಸಯೋಗ್ಯವಲ್ಲದೆ ಶಿಥಿಲವಾಗಿರುವ ಮನೆ ಮುಂತಾದವುಗಳ ಯಾವ ಬಿಕರೀಯೂ, ಪಟ್ಟೇ ಇಂದ ಯಾ ಗ್ರಾಂಟ್ ನಿಂದ ಯಾ ಸರ್ 1864ನೇ ಇಸವೀ ಜರ್ ಗುರ್ರೇ ಮೊದಲು ಹುಟ್ಟಿದ ಕ್ರಯ ಶಾಸನದಿಂದ ಮತ್ತು ಸದರೀ ಜಮೀನಿನ ವಿವರಣದಿಂದ ಅಂತಾ ಬಾಧ್ಯತೆಯು ಬಲಪಡಿಸಲ್ಪಟ್ಟ ಹೊರ್ತು ದೃಢಪಡತಕ್ಕದಲ್ಲ.

III. ಇದು ಒಂದು ತಿಂಗಳೊಳಗೆ ತಮ್ಮ ಮನೆಗಳನ್ನ ದುರಸ್ತು ಮಾಡುವ ಯಾ ಅವುಗಳನ್ನ ಖಾಲೀ ಮಾಡುವ ಜನಗಳಿಗೆ ಅಥವಾ ವಾಸಗೃಹ ಮುಂತಾದವುಗಳನ್ನು ಮಾರುವ ಜನಗಳಿಗೆ ಲಗಾವಾಗುವದಿಲ್ಲ.

17. ದರೋಬಸ್ತು ಬಂಡಿಗಳೂ, ಸವಾರಿಗಳೂ ತಮ್ಮ ಯೆದುರಿಗೆ ಬರತಕ್ಕ ಬಂಡಿಗಳು, ಸಂಧಿಸಿ ಬಲಗಡೆಗೆ ಹೋಗುವದಕ್ಕೆ ಅನುಕೂಲಿಸುವಂತೆ ರಸ್ತೆಯಲ್ಲಿ ತಮ್ಮ ಯೆಡಪಾರ್ಶ್ವಕ್ಕೇನೇ ಹೋಗುವಂತೆ ಬಲಾತ್ಕರಿಸಲ್ಪಡ ತಕ್ಕವು.

18. ಸಾಮಾನುಗಳು ತೆಗದುಕೊಂಡು ಹೋಗುವ ಬಗ್ಯೆ ಯೆತ್ತುಗಳು ಕಟ್ಟಿದ ಬಂಡೀ ಅಲ್ಲದ ಇತರ ಯಾವ ವಿಧವಾದ ಯಾವ ಸಾಧನವನ್ನಾಗಲಿ ಸೂರ್ಯಾಸ್ತಮಯದನಂತರ ಮುಕ್ಕಾಲು ಗಂಟೆಗೂ ಸೂರ್ಯೋದಯಕ್ಕೆ ಪೂರ್ವ ಒಂದು ಗಂಟೆಗೂ ಮಧ್ಯ ಕಾಲದಲ್ಲಿ ಯಾವಾಗಲಾದರೂ ಅಂತಾ ಗಾಡಿಯ ಉಭಯ ಪಾರ್ಶ್ವಕ್ಕೂ ಹಚ್ಚಿದ ದೀಪಗಳು ಇಡದೇ ಯಾವನು ನಡಿಸುತ್ತಾ

ನೋ ಅಂತಾವನು ದೀಪಗಳು ಅನಾವಶ್ಯಕವಾಗಲಿಕ್ಕೆ ಸಾಕಾದಷ್ಟು ಪೆಳದಿಂಗಳು ಇರಬಹುದಾಗಿ ಮಾಜಿಸ್ಟ್ರೇಟರಿಗೆ ತೋರಿದಾಗ ಹೊರ್ತು ಇತರ ಕಾಲದಲ್ಲಿ 5ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಗತಕ್ಕದ್ದು.

II. ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಾವ ರಸ್ತೆಯಲ್ಲಿಯಾದರೂ ರಾತ್ರಿ 7 ಗಂಟೆಗೂ ಬೆಳ್ಗ್ಯೆ 4 ಗಂಟೆಗೂ ಮಧ್ಯೆ ಯೆತ್ತುಗಳು ಕಟ್ಟಿದ ಬಂಡಿಯನ್ನಾಗಲಿ, ಯಾವ ವಿಧವುಳ್ಳ ಸವಾರೀ ಗಾಡಿಯನ್ನಾಗಲಿ ಅಂತಾ ಗಾಡಿಯ ಉಭಯಪಾರ್ಶ್ವಕ್ಕೂ ಲಗತ್ ಮಾಡಲ್ಪಟ್ಟ ಹಚ್ಚಿದ ಲಾಂದರುಗಳು ಕಟ್ಟದೇ ನಡಸುವಂತಾವನು 5ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು. ಪರಂತು ಕಾಲು ನಡಿಗೆ ಸರಿಯಾಗಿ ಹೋಗುವ ಭರ್ತೀ ಬಂಡಿಗಳಿಗೆ ಮಧ್ಯದಲ್ಲಿ ತಗಲಹಾಕಲ್ಪಟ್ಟ ಬಂದು ಹಚ್ಚಿದ ಲಾಂದ್ರ ಯಿರಬಹುದು.

III. ಮ್ಯುನಿಸಿಪೆಲ್ ಸರಹದ್ದಿನಲ್ಲಿ ಯೆತ್ತುಗಳು ಕಟ್ಟಿದ ಯಾವ ಸಾಮಾನು ಬಂಡಿಯನ್ನಾಗಲಿ ನಡಿಸುವಂತವನು ಕಾಲು ನಡಿಗೆ ಸರಿಯಾಗಿ ನಡಿಸತಕ್ಕದ್ದು ಮತ್ತು ರಸ್ತೆಯೊಳಗೆ ಯೆಡಗಡೆಯಲ್ಲಿಯೇ ಹೋಗತಕ್ಕದ್ದು, ಮತ್ತು ಯೆತ್ತುಗಳನ್ನು ನಡಿಸತಕ್ಕವನು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟೀಯಲ್ಲಿಟ್ಟುಕೊಳ್ಳುವ ಬಗ್ಯೆ ಸಾಕಾದಷ್ಟು ಬಲವಾದ ಹಗ್ಗದಿಂದ ಆ ಯೆತ್ತುಗಳಿಗೆ ಮೂಗುದಾರ ಹಾಕಿರತಕ್ಕದ್ದು. ಈ ಹುಕ್ಕುಂಗಳಿಗೆ ಬರಖಿಲಾಫ್ ನಡೆಯುವ ತಪ್ಪಿತಸ್ಥನು 5 ರೂಪಾಯಿಗಳಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

2ನೇ ಅಧ್ಯಾಯ.

ಸ್ಥಳಿಕ ತೊಂದರೆಗಳು.

19. ಪಬ್ಲಿಕ್ ಬೀದಿಗಳಲ್ಲಿ ದನಗಳನ್ನು ಕಟ್ಟುವಿಕೆ, ಪೆಟ್ಟಿಗೆಗಳನ್ನು ಖಾಲೀ ಬಂಡಿಗಳನ್ನು, ಯಾ ಸವಾರೀಗಾಡಿಗಳನ್ನು ಅಥವಾ ಯಾವವಿಧದ ನಿರೋಧಗಳನ್ನು ಮನೆಗಳ ಯಾ ಅಂಗಡಿಗಳ ಮುಂದೆ ಬಿಡುವಿಕೆ, ಮತ್ತು ಯಾವ ಅಂಗಡಿಯ ಯಾ ಮನೆಯ ಮುಂದುಗಡೆಯಾಗಲಿ ಯೆರಡು ಗಂಟೆಗಳ ಹೊತ್ತಿಗಿಂತ ಹೆಚ್ಚಾಗಿ ಬಂಡಿಗಳು ಯಾ ಸವಾರೀಗಾಡಿಗಳು ಭರ್ತೀ ಮಾಡುವಾಗ್ಯೆ ಯಾ ಯಿಳಿಸುವಾಗ್ಯೆ ಗುಂಪುಕೂಡುವದಕ್ಕೆ ಆಸ್ಪದ ಕೊಡುವಿಕೆ, ಇಂತಾದ್ದು 5 ರೂಪಾಯಿಗೆ ಮೀರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

20. ಮ್ಯುನಿಸಿಪೆಲ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾ ಅವರ ಹುಕ್ಕುಮಿಗೆ ವಿರುದ್ಧವಾಗಿ ಬಂಡೆಯಲ್ಲಿ ಗ್ರೇವಲ್ ಮತ್ತು ಕಲ್ಲು ತೆಗೆಯುವಿಕೆ, ಇಟ್ಟಿಗೆ ಮತ್ತು ಹೆಂಚುಗಳಿಗೋಸ್ಕರ ಮಣ್ಣು ಅಗಿಯುವಿಕೆ ಇಟ್ಟಿಗೆ ವ ಹೆಂಚುಗಳನ್ನು ಮಾಡುವ ಬಗ್ಯೆ ಲೈಸೆನ್ಸ್‌ಗಳನ್ನು ಮ್ಯುನಿಸಿಪೆಲ್ ಆಫಿಸಿನಲ್ಲಿ ದರಖಾಸ್ತು ಮಾಡಿ ಪಡೆದುಕೊಳ್ಳಬಹುದು. ಈ ಸ್ಥಳಪೊಳಗೆ ತರಲ್ಪಡುವ ಇಟ್ಟಿಗೆಗಳಿಗೆ 1000ಕ್ಕೆ 4 ಆಣೆ, ಹೆಂಚುಗಳು 1000ಕ್ಕೆ 4 ಆಣೆ, ಈ ಮೇರೆ ವಸೂಲ್ ಮಾಡಲ್ಪಡತಕ್ಕದ್ದಲ್ಲದೆ, ಬಂದು ಬಂಡಿ ಕಲ್ಲಿಗೆ 6 ಕಾಸು ಅಥವಾ ಚದರ ಗಜ ಬಂದಕ್ಕೆ 2 ಆಣೆಗಳ ಮೇರೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

21. ನೋಟಿಸ್ ತಲಪಿದ 8 ದಿನಗಳೊಳಗಾಗಿ ಯಾವ ಮನೆಗಾಗಲಿ ಕಟ್ಟಡಕ್ಕಾಗಲಿ, ಹೊರಗೆ ಯಾ ಒಳಗೆ ಸುಣ್ಣ ಬಳಿಯುವಿಕೆ ಅಥವಾ ಆರೋಗ್ಯ ನಿಮಿತ್ತದಿಂದ ಅವುಗಳನ್ನು ಪಾಕ್ ಮಾಡಲಿಕ್ಕೆ, ಅಥವಾ ಪಾಯಖಾನೆಗಳನ್ನು ಯಾ ಬಚ್ಚಲು ಗುಣಿಗಳನ್ನು ಕಂಪು ಯಿಲ್ಲದೆ ಮಾಡಲಿಕ್ಕೆ ಮೆಡಿಕಲ್ ಆಫಿಸರರ ಸಲಹೇ ಮೇಲೆ ಅಮಲ್ ನಡಿಸುವ ಪ್ರೆಸಿಡೆಂಟರ ಯಾವ ಹುಕ್ಕುಮಿಗಾಗಲಿ ಅವಿಧೇಯವಾಗಿ ನಡೆಯುವಿಕೆ—ಜುರ್ಮಾನೆ 10 ರೂಪಾಯಿ.

22. ಗ್ಲಾಂಡರ್ಸ್ ಯೆಂಬ ರೋಗವಾಗಲಿ, ಅಥವಾ ಅಪಾಯಕರವಾದ ಯಾ ಅಂಟುವ ಸ್ವಭಾವವುಳ್ಳ ಸಾಂಕ್ರಾಮಿಕವಾದ ಯಾ ಅನ್ಯಥಾ ಯಿರುವ ಯಾವ ರೋಗವಾಗಲಿ, ತಗಲಿದ, ಯಾವದಾದರೂ, ಕುದುರೆ ಯಾ ಯಿತರ ಜಾನ್ವರ್‌ಗಳುಳ್ಳ, ಮತ್ತು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಹಂಗಾಮಿಯಾಗಿ ಆಗಲಿ, ಅನ್ಯಥಾ ಆಗಲಿ, ವಾಸ ಮಾಡುವ ದರೋಬಸ್ತು ಜನಗಳೂ ಆ ಸಂಗತಿಯನ್ನು ಕುರಿತು ಕೂಡ್ಲೆ ಪ್ರೆಸಿಡೆಂಟರಿಗೆ ಜಾಹಿರ್ ಮಾಡ್ಪುವಂತೆ ತಾಕೀದ್ ಮಾಡಲ್ಪಡತಕ್ಕದ್ದು. ಸದರೀ ಪ್ರೆಸಿಡೆಂಟರು ಮೇಲೆ ಕಂಡ ಪ್ರಕಾರ ತಮಗೆ ನೋಟಿಸ್ ಬಂದ ಮೇಲೆ ಸಾಧ್ಯವಾದಷ್ಟು ತ್ವರೆಯಾಗಿ ಲಾಯಖಾದ ಒಬ್ಬ ಸಾಲಂತ್ರೀ ಮೂಲಕ ಜಾನ್ವರನ್ನು ಯಾ ಜಾನ್ವರ್‌ಗಳನ್ನು ಅಜಮಾಯಿಷಿಮಾಡಿಸಿ, ಸದರೀ ಜಾನ್ವರ್ ಯಾ ಜಾನ್ವರ್‌ಗಳನ್ನು ತೊಲಗಿಸುವದು ಆವಶ್ಯಕವೆಂದು ತೃಪ್ತಿಕರವಾಗಿ ತಿಳಿಯಬಂದರೆ, ಸ್ವಂತಗಾರನು ಅಂತಾ ಜಾನ್ವರನ್ನು ಕೂಡ್ಲೆ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಸಾಗಿಸಿ ಬಿಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು

ಗ್ಲಾಂಡರ್ಸ್ ಎಂಬ ರೋಗವಾಗಲಿ, ಯಿತರ ಯಾವ ಸಾಂಕ್ರಾಮಿಕ ರೋಗವಾಗಲಿ, ತಗಲಿ ಯಿರುವ ಜಾನ್ವರ್‌ಗಳು ಉಳ್ಳ ಯಾವ ಮನುಷ್ಯನಾಗಲಿ, ಈ ಬೈಲಾ ನಿಬಂಧನೇ ಪ್ರಕಾರ ನಡೆಯದಿದ್ದರೆ, ಅಂತಾವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾ

ಪಿಸಲ್ಪಟ್ಟು ಅವ್ವಲ್‌ದಫಾ ತಪ್ಪಿತಕ್ಕೆ 100 ರೂಪಾಯಿಗಳ, ಆ ತರುವಾಯ ಯರಡನೇ ಮತ್ತು ಪ್ರತಿಸಲದ ತಪ್ಪಿತಕ್ಕೂ, 200 ರೂಪಾಯಿಗಳ ಜುರ್ಮಾನೆಗೆ ಗುರ್‍ಯಾಗತಕ್ಕದ್ದು.

23. ಸ್ವಂತಗಾರರ ಯಾ ಹಿಡುವಳೀದಾರರ ಮನೆ ಮುಂತಾದವುಗಳಲ್ಲಿ ಮೃತಪಡುವ ಯಾವ ಜಂತುವಿನ ಶವವನ್ನಾಗಲಿ, ಯುಕ್ತವಾದ ಕಾಲದೊಳಗೆ, ರಬ್ಬಿಷ್ ಡಿಪೋಯೆಂಬ ಕಶ್ಮಲ ಹುಕುವ ಜಾಗಾಕ್ಕೆ ಸತ್ತ ಅಥವಾ, ಜಂತುಗಳ ಶರೀರಗಳನ್ನು ದರ್ಫ ಮಾಡುವ ಬಗ್ಯೆ ಪ್ರತ್ಯೇಕವಾಗಿ ಯೇರ್ಪಡಿಸಲ್ಪಟ್ಟ ಸ್ಥಳಕ್ಕೆ ತೆಗಸಿ ಹಾಕುವದಕ್ಕೆ ಉಪೇಕ್ಷಿಸುವಿಕೆ,—ಜುರ್ಮಾನೆ 5 ರೂಪಾಯಿಗಳು.

24. ಪಬ್ಲಿಕ್ ತೋಟಗಳಲ್ಲಿ ಯಾ ರಸ್ತೆಗಳ ಬಾಜೂಗಳಲ್ಲಿ ಮರಗಳನ್ನು ನಾಶಪಡಿಸುವಿಕೆ, ಹಣ್ಣುಗಳನ್ನು ಯಾ ಹುವ್ವುಗಳನ್ನು ಕೊಯ್ಯುವಿಕೆ, ಯಾ ಹುಲ್ಲನ್ನು ಕೊಯ್ಯುವಿಕೆ, ಯಾ ಬೇರುಸಹಿತ ಕೀಳುವಿಕೆ, ಅಥವಾ ಯಾವ ವಿಧದಿಂದಲಾಗಲಿ, ರಸ್ತೆಗಳ ಬಾಜೂಗಳನ್ನು ಮತ್ತು ಬದುವುಗಳನ್ನು ನಾಶಪಡಿಸುವಿಕೆ, ಅಥವಾ ಕವಾಯತ್ ಜಾಗಾಗಳಲ್ಲಿ, ಯಾ ವಿಹಾರಾಪೇಕ್ಷೆಯುಳ್ಳವರಿಗಾಗಿ ಮಾತ್ರ ಉದ್ದೇಶಿಸಲ್ಪಟ್ಟ ಪಬ್ಲಿಕ್ ತೋಟಗಳಲ್ಲಿ ತಿರುಗಾಡಿ ರಾಪ್ತೆ ಮಾಡುವಿಕೆ,—ಜುರ್ಮಾನೆ 10 ರೂಪಾಯಿಗಳು.

25. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಯಿಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಟ್ಟ ಯಾವ ಗೋರೀಯಲ್ಲಾಗಲಿ, ಶವದ ಪೆಟ್ಟಿಗೆಯನ್ನೂ ಯಾ ಶವವನ್ನೂ, ಭೂಮಿಯ ಮಟ್ಟದಕೆಳಗೆ ಮೂರು ಅಡಿಗಿಂತ ಕಡಮೆಯಾದ ಆಳದಲ್ಲಿರುವ ಹಾಗೆ ದರ್ಫ ಮಾಡುವಿಕೆ,—ಜುರ್ಮಾನೆ 5 ರೂಪಾಯಿ.

26. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಇಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಡದೇ ಯಿರುವ ಯಾವ ಗೋರೀಯಲ್ಲಾಗಲಿ, ಯಾವ ಶವದ ಪೆಟ್ಟಿಗೆಯನ್ನಾಗಲಿ, ಶವವನ್ನಾಗಲಿ, ಭೂಮಟ್ಟದ ಕೆಳಗೆ 5 ಅಡಿಗಳಿಗೆ ಕಡಮೆಯಾದ ಆಳದಲ್ಲಿರುವಂತೆ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

27. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಜಾಗಾದಲ್ಲಾಗಲಿ, ಎರಡು ಅಡಿಗೆ ಕಡಮೆಯಾದ ದೂರದಲ್ಲಿ ಮತ್ತು ಮ್ಯುನಿಸಿಪೆಲ್ ಬೋರ್ಡಿನವರಿಂದ ವಿಧಿಸಲ್ಪಡದ ಜಾಬಿನಲ್ಲಿ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

28. ದರ್ಫ ಜಾಗಾಗಳ ಯಾ ದಹನ ಸ್ಥಳಗಳ ಸ್ವಂತಗಾರರು ಯಾ ಜಿಮ್ಮೆಯುಳ್ಳವರು ದರ್ಫ ಯಾ ದಹನವಾದ 24 ಘಂಟೆ ಹೊತ್ತಿನ ಒಳಗಾಗಿ, ಮೃತಪಟ್ಟ ಮನುಷ್ಯನ ಹೆಸರುಗಳು, ಸ್ತ್ರೀ ಅಥವಾ ಪುರುಷನೆಂಬದು, ವಯಸ್ಸು, ಮತ್ತು ವಾಸಸ್ಥಾನ, ಮರಣಕಾರಣ, ಯಿಂತಾದ್ದನ್ನು ಕುರಿತು ಆ ಜನಗಳಿಗೆ ಸಾಧ್ಯವಾದ ದರೋಬಸ್ತು ಸಂಗತಿಯನ್ನೂ ಬೋರ್ಡಿನವರಿಗೆ ತಿಳಿಸಲಿಕ್ಕೆ ಉಪೇಕ್ಷಿಸುವಣ,—ಜುರ್ಮಾನೆ ರೂಪಾಯಿ 5.

29. ಕೊಬ್ಬನ್ನು ಕರಗಿಸುವದಕ್ಕೋಸ್ಕರ ಯಾ ಮಾಂಸ ಸಂಬಂಧವಾದ ಕಶ್ಮಲವನ್ನು, ಯಾ ರಕ್ತವನ್ನು ಕಾಯಿಸುವದಕ್ಕೋಸ್ಕರ ಉಪಯೋಗಿಸಲ್ಪಡುವ ಸ್ಥಳಗಳ, ಸಬ್ಬಿನಮನೆಯು, ಎಣ್ಣೇ ಕಾಯಿಸುವ ಮನೆಯು, ಬಣ್ಣಾ ಹಾಕುವ ಮನೆಯು, ತೊಗಲು ಹದಮಾಡುವ ಸ್ಥಳದ, ಇಟ್ಟಿಗೆ, ಕುಂಬಾರಸೂಳುಗಳ ಯಾ ಸುಣ್ಣದ ಗೂಡಿನ, ಸೇಗೋ ಯಾ ಸಕ್ಕರೇ ಕಾರ್ಖಾನೆಯ, ಅಥವಾ ಅಸಹ್ಯವಾದ ಯಾ ಅನಾರೋಗ್ಯವಾದ ವಾಸನೆ ಯುಂಟುಮಾಡುವ ಇತರ ಕಾರ್ಖಾನೆಯ ಯಾ ಕೆಲಸ ನಡೆಯುವ ಸ್ಥಳಗಳ, ಯಾ ಬಾಡಿಗೇ ಕುದುರೇಲಾಯಗಳು ಯಾ ಯಿತರ ಲಾಯಗಳು, ದನದ ಕೊಟ್ಟಿಗೆಗಳು, ಹಂದೀ ಗೂಡುಗಳು, ಇಂತಾವುಗಳ, ಸ್ವಂತಗಾರರು, ಯಾ ಹಿಡುವಳೀದಾರರು, ಯಿವುಗಳನ್ನು ಪ್ರತಿಸಲವೂ ತೆಗಸಿ ಹಾಕಬೇಕಾದ ಕಾಲದಲ್ಲಿ ಅಂತಾ ಯಾವ ಸ್ಥಳದೊಳಗೆ ಯಾ ಅದರ ಸುತ್ತಮುತ್ತಲೂ, ಯಿರುವ ವಿಶಿಷ್ಟ ಕಶ್ಮಲವನ್ನೂ, ರೋತೆಯನ್ನೂ, ವ ಕಸವನ್ನೂ, ಅಧಮಪಕ್ಷ 24 ಘಂಟೆಗೊಂದಾವರ್ತಿ ತೆಗದು ಹಾಕದೆ ಯಾ ತೆಗೆಯಿಸಿ ಹಾಕದೇ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿಗಳು.

30. ಮನೆ ಸ್ವಂತಗಾರರು ಬಿದ್ದುಹೋದ ಗೋಡೆಗಳನ್ನು, ಯಾ ತಲೆಬಾಗಿಲು ನಿಲುವುಗಳನ್ನು ದುರಸ್ತು ಮಾಡಲಿಕ್ಕೆ, ಯಾ ತಮ್ಮ ಆವರಣಗಳ ಯಾ ಅಂಗಳಗಳ ಗೋಡೆಗಳಿಗೆ ಬಂಣ ಬಳಿಯುವದಕ್ಕೆ ಅಥವಾ ಯಿಟ್ಟಿಗೆಗಳಿಂದ ಯಾ ಹೆಂಚುಗಳಿಂದ ಅಂಚು ಕಟ್ಟಲಿಕ್ಕೆ ನೋಟಿಸ್ ಜಾರೀ ಮಾಡಲ್ಪಟ್ಟ ತರುವಾಯ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿ.

31. ಪಬ್ಲಿಕ್ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ ಸಾದೇ ಒಡೆಯುವಿಕೆ—ಜುರ್ಮಾನೆ 5 ರೂಪಾಯಿ.

32. ಸಂಗಡ ಯಿರತಕ್ಕಬಗ್ಗೆ ಸಾಕಾದಷ್ಟು ಮಂದಿ ಯಿಲ್ಲದೆ ರಸ್ತೆಯಲ್ಲಿ ಹೊಡಕೊಂಡು ಬರುವ ದನಗಳ ಯಾ ಹಂದಿಗಳ ಜಿಮ್ಮೆಯುಳ್ಳವರಾಗಿರುವಿಕೆ. ಅವುಗಳನ್ನು ಪಬ್ಲಿಕ್ ರಸ್ತೆಯಲ್ಲಿ ಮೇಯಲಿಕ್ಕೆ ಬಿಡುವಿಕೆ, ಯಾ ಹಂದಿಗಳನ್ನು ಸ್ವೇಚ್ಛೆ[illegible] ತಿರುಗುವದಕ್ಕೆ ಬಿಡುವಿಕೆ.

II. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಬೆಳಿಗ್ಯೆ 4 ಘಂಟೆ ಲಾಗಾಯತ್ ರಾತ್ರಿ 8 ಘಂಟೆ ವರಿಗೆ ಕಾಯುವವನಿಲ್ಲದೆ ಯಾವ ಮನುಷ್ಯನೂ ದನಗಳನ್ನು ಮೇಯಿಸಕೂಡದು, ಮತ್ತು ಕಾಯುವವನಿಲ್ಲದೆ ಮೇಯುತಿದ್ದ ಶಿಕ್ಕುವ ದನಗಳು ತೊಂಡುವಾಡೆಗೆ ಒಯ್ಯಲ್ಪಡಲಿಕ್ಕೂ, ಅವುಗಳ ಸ್ವಂತಗಾರರು ಇದರಡಿ 3ನೇ ಕಲಂನಲ್ಲಿ ವಿವರಿಸಲ್ಪಟ್ಟ ಜುರ್ಮಾನೆಗಳನ್ನು ತೆರಲಿಕ್ಕೂ ಗುರಿಯಾಗತಕ್ಕದ್ದು.

III. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ರಾತ್ರಿ 8 ಘಂಟೆಗೂ, ಬೆಳಿಗ್ಯೆ 4 ಘಂಟೆಗೂ, ಮಧ್ಯೆ ದನಗಳನ್ನು ಮೇಯುವದಕ್ಕೆ ಯಾವ ಮನುಷ್ಯನೂ ಬಿಡಕೂಡದು. ಸದರೀ ಹೊತ್ತಿನ ಮಧ್ಯೆ ಮೇಯುತಿದ್ದು ಹಿಡಿಯಲ್ಪಟ್ಟ ದನಗಳು ತೊಂಡುವಾಡೆಗೆ ಹೊಡಿಯಲ್ಪಟ್ಟು, ಈ ಕೆಳಗೆ ನಮೂದಿಸುವ ಪ್ರಕಾರ ಜುರ್ಮಾನೆ ತೆತ್ತಹೊರ್ತು ಖುಲಾಸೇ ಮಾಡಲ್ಪಡಲಾರದು.

ಯೆಮ್ಮೇ ಕೋಣಗಳು	1—0—0	ಕರು ವ ಕತ್ತೆ	0—4—0
ಯೆತ್ತುಗಳು ಯಾ ಆಕಳು	0—8—0	ಕುದುರೆ ಯಾ ಟಾಕಣ	0—8—0
ಕುರಿ ಮ್ಯಾಕೆ	0—2—0		

33. ಒಂದು ಪಬ್ಲಿಕ್ ರಸ್ತೆಯಲ್ಲಿ ಯಾ ಒಂದು ಪಬ್ಲಿಕ್ ರಸ್ತೆಗೆ ಸಮೀಪವಾದ ಆಸ್‌ಪಾಸ್ ಪ್ರದೇಶದಲ್ಲಿ ದೇಹಭಾಧೆಗೆ ಹೋಗುವ ಅಥವಾ ಜನಗಳಿಗೆ ಹೇಸಿಕೆಯಾಗಿರುವ ಸ್ಥಳದಲ್ಲಿ ಯಾವ ಕಶ್ಮಲವನ್ನಾದರೂ, ಜಮಾಯಿಸಿ ಯಿಡುವ ಯಾವ ಮನುಷ್ಯನಾಗಲಿ, ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ಅವ್ವಲ್‌ದಫಾ ಅರ್ಧ ರೂಪಾಯಿ, ಎರಡನೇ ದಫಾ ಒಂದು ರೂಪಾಯಿ ಆತರುವಾಯ ನಡಿಸಲ್ಪಡುವ ಪ್ರತಿದಫಾಕೂ, ಯೆರಡು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು.

34. ಅಲಿಯುವ ಯಾವ ತಿರಪಗಾರನೂ, (ಸ್ಟ್ರೇಪರ್) (ಷಹರ್)ನ ಬೀದಿಗಳಲ್ಲಿ, ರಸ್ತೆಗಳಲ್ಲಿ ಯಾ ಸಂದಿಗಳಲ್ಲಿ ತಿರುಪಕ್ಕಾಗಿ ಬಾಧಿಸಕೂಡದು, ಯಾ ಜನಗಳನ್ನು ತಿರಪಬೇಡಕೂಡದು, ಮತ್ತು ರಸ್ತೆಗಳಲ್ಲಿ, ಬೀದಿಗಳಲ್ಲಿ ಯಾ ಗಲ್ಲಿಗಳಲ್ಲಿ ಯಾ ಬಂಡಿಗಳೊಳಗೆ ಯಾ ಮನೆಗಳೊಳಗೆ ತಿರಪಕ್ಕೋಸ್ಕರ ಬಾಧಿಸುವದಾಗಿ ಯಾ ಜನಗಳನ್ನು ತಿರುಪಬೇಡುವದಾಗಿ ತಮಗೆ ಶಿಕ್ಕಿದ ಯಾ ತಮ್ಮಲ್ಲಿ ಫಿರ್ಯಾದ್ ಮಾಡಲ್ಪಟ್ಟ, ಅಲಿಯುವ ಯಾವ ತಿರಪಗಾರರನ್ನಾಗಲಿ ಮ್ಯುನಿಸಿಪಲ್ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡೆದದಕ್ಕೋಸ್ಕರ ಖೈದಿನಲ್ಲಿ ತೆಗದುಕೊಳ್ಳಲಿಕ್ಕೆ ಪೋಲೀಸ್‌ನವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಈ ಉಪನಿಬಂಧನೆಯು, ಆ ಯಾ ಜಾತಿಯ ನೇಟಿವ್‌ಗಳಿಂದ ಆದರಿಸಲ್ಪಟ್ಟು, ಪ್ರತಿದಿನವೂ ಆಹಾರಕ್ಕಾಗಿ ತಮ್ಮ ಮನೆಗಳಿಗೆ ಬರುವಂತೆ ಪ್ರೋತ್ಸಾಹ ಪಡಿಸಲ್ಪಟ್ಟ ಯಾವ ವಿಧದೊಳಗೂ ತೊಂದರೆ ಕೊಡದಂತಾ ಮತಸಂಬಂಧಿಗಳಾದ ಯಾಚಕರ ವಿಷಯದಲ್ಲಿ ಬಾಧಕ ವಾಗುವದಿಲ್ಲವು.

ಮೇಲೆ ಕಂಡ ಉಪನಿಬಂಧನೆಗೆ ಬರ್ಖಿಲಾಫ್ ನಡೆಯುವದರಿಂದ ಹಾಗೆ ಅಪರಾಧಮಾಡುವ ಮನುಷ್ಯನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ನಾಲ್ಕು ದಿನಗಳ ಸಾಧಾರಣ ಖೈದಿಗೆ ಗುರಿಯಾಗತಕ್ಕದ್ದು.

II. ಅಸಹ್ಯವಾದ, ಅಥವಾ ಅಂಟುವಂತಾ ರೋಗ ತಗಲಿಯಿರುವ ಜನಗಳು, ಮ್ಯುನಿಸಿಪಾಲಿಟಿಯ (ಷಹರಿನ) ಮಾರ್ಕೆಟ್‌ಗಳಲ್ಲಾಗಲಿ ಅಂಗಡಿಗಳಲ್ಲಾಗಲಿ ಯಾವ ಆಹಾರಪದಾರ್ಥವನ್ನಾಗಲಿ ಮಾರಕೂಡದೆಂತ ಅಥವಾ ಮಾರಾಟದ ಬಗ್ಯೆ ಹೊರಗೆ ಯಿಡಕೂಡದೆಂತ ನಿಷೇಧಿಸಲ್ಪಟ್ಟಿರುತ್ತಾರೆ. ಅಂತಾತಕಸ್ಬೇರವಂತರು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟು ಮೊದಲು ದಫಾಕ್ಕೂ, ತರುವಾಯ ಪ್ರತಿದಫಾಕ್ಕೂ, ಒಂದು ರೂಪಾಯಿಗೆ ಜಾಸ್ತೀ ಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

35. ಮ್ಯುನಿಸಿಪಲ್ ಸರಹದ್ದುಗಳಲ್ಲಿ ಇಡಲ್ಪಟ್ಟ ಕುದುರೆಗಳು ಯಾ ಟಾಕಣಿಗಳು, ಯೆತ್ತುಗಳು, ಬಂಡಿಗಳು, ಮತ್ತು ನಾಯಿಗಳು, ಇವುಗಳ ಸ್ವಂತಗಾರರು ಈ ಕೆಳಗೆ ಕಂಡ ಪ್ರಕಾರ ತೆರಿಗೆಗಳನ್ನು ಕೊಡತಕ್ಕದ್ದು.

ಯೆರಡು ಚಕ್ರಗಳ ಬಂಡಿಗಳು	ಜಷ್ ಮಾಹೆ 1ಕ್ಕೆ	ರೂ	2—0—0
ನಾಲ್ಕು ಚಕ್ರಗಳ ಬಂಡಿಗಳು	„	„	3—0—0
ಈ ಶೀಮೆ ತಟ್ಟುವಿಗೆ	„	„	1—0—0
ಪ್ರತಿ ಟಾಕಣಿಗೆ	„	„	2—0—0
ಜೊತೆ ಬಂಡೀ ಯಾ ಗಾಡಿ ಯೆತ್ತುಗಳಿಗೆ	„	„	2—0—0
ನಾಯಿಗೆ	„	„	1—0—0
ಪ್ರತಿ ಕುದುರೆಗೂ	„	„	4—8—0

ತೆರಿಗೆ ಕೊಡೋಣಾದ ಮತ್ತು ಲೈಸೆನ್ಸ್ ತೆಗದುಕೊಳ್ಳೋಣಾದ ನಾಯಿಗಳಿಗೆ ಕತ್ತಿಗೆ ಪಟ್ಟೀ ಹಾಕತಕ್ಕದ್ದು.

ಇಲ್ಲದಿದ್ದರೆ ತೊಂಡು ನಾಯಿಯೆಂತ ಯಾ ಬೇವಾರಸ್ ನಾಯಿಯೆಂತ ಕೊಂದು ಹಾಕಲ್ಪಡುವದಕ್ಕೆ ಗುರಿಯಾಗತಕ್ಕದ್ದು.

36. ಧೂಳು, ಕಸ, ಬೂದಿ, ವ ಕಚರಾ ಇಂತಾದ್ದುಗಳನ್ನು, ಆಚೆಗೆ ಸಾಗಿಸಿಕೊಂಡುಹೋಗುವ ಪರಿಯಂತ ಹಂಗಾಮೀ ಯಾಗಿ, ಹಾಕಿ ಇಡಬಹುದಾದ, ಕ್ರಮಿಸತಕ್ಕಂತಾ ಅಥವಾ ನೆಲೆಯಾಗಿರುವಂತಾ ಯಪ್ಪು ಕಚರೆ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ, ಪ್ರೆಸೀಡೆಂಟರು ಒದಗಿಸಿ, ಯುಕ್ತಗಳಾದ ಮತ್ತು ಅನುಕೂಲಗಳಾದ ಸ್ಥಳಗಳಲ್ಲಿ ಇಡಿಸಬಹುದು, ಮತ್ತು ಬೀದಿಗಳೊಳಗಿರುವ ಮನೆಗಳ ವಾಸಸ್ಥರು ಮೇಲೆ ಕಂಡ ದರೋಬಸ್ತು ಕಚರೇ ವಗೈರೇಯನ್ನು ಪ್ರತಿದಿನವಾಗಲಿ, ಅನ್ಯಥಾ ಯಾವದಾದರೊಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀದುಮಾಡಬಹುದು.

ಅಂತಾ ಆಧಾರಗಳು ಕಲ್ಪಿಸಲ್ಪಟ್ಟ ಬಳಿಕ ಮತ್ತು ಮೇಲೆ ಕಂಡಪ್ರಕಾರ ತಾಕೀದ ಮಾಡಲ್ಪಟ್ಟ ಬಳಿಕ ಪ್ರೆಸೀಡೆಂಟರಿಂದ ಗೊತ್ತುಮಾಡಲ್ಪಡುವ ಅಂತಾ ಆಧಾರಗಳಲ್ಲಿ ಯಾ ಸ್ಥಳಗಳಲ್ಲಿ ಮತ್ತು ಅಂತಾ ರೀತಿಯಾಗಿ, ಮತ್ತು ಅಂತಾ ಹೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪದಾರ್ಥಗಳನ್ನಾಗಲಿ ಯಾವ ಬೀದಿಯೊಳಗಾಗಲಿ, ಯಾವದಾದರೂ ಮನೆಯ ಸ್ಥಿರವಾದ ಜಗಲಿ, ಯಾ ಹಜಾರ ಇಂತಾದ್ದರಮೇಲೆಯಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲಾಗಲಿ, ಜಮಾಯಿಸಿ ಇಡುವ ಯಾ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ, 2 ಆಣೆ ಲಾಗಾಯತು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರಿಂದ ಗೊತ್ತುಮಾಡಲ್ಪಡತಕ್ಕ ಸ್ಥಳಗಳೊಳಗೂ, ಆರೀತಿಯಾಗಿಯೂ, ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವನು ಕಶ್ಮಲವನ್ನು ಹಾಕಿ ಇಡುತಾನೋ ಯಾ ಇಡಗೊಡಿಸುತ್ತಾನೋ ಅಥವಾ ಯಾವನಾದರೂ ಬೀದಿಯಲ್ಲಿಯಾಗಲಿ, ಮನೆಯ ತಳವರಸೆ, ಜಗತಿ, ಯಾ ವಸಾರೆಯಲ್ಲಿ ಅಥವಾ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವದಾದರೂ ಜಮೀನನಲ್ಲಾಗಲಿ, ನದೀತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವದಾದರೂ ಧೂಳು, ಕಸ, ಸಗಣಿ, ಬೂದಿ; ತೊಟ್ಟಿ, ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೆಯದಾದರೂ ಕಶ್ಮಲ, ಜಂತು ಸಂಬಂಧವಾದ ಯಾವದಾದರೂ ಪದಾರ್ಥ, ಅಥವಾ ಕನ್ನಡಿ ಯಾ ಮಡಿಕೆ ಚೂರು, ಇಟಿಗೇ ಮುರುಕು, ಗಾರೆ ಯಾ ಇತರ ಕಚರಾ, ಇಂತಾದ್ದನ್ನಾಗಲಿ, ಜಮಾಯಿಸಿ ಇಡುವಂತೆ ತನ್ನ ನೌಕರರಿಗೆ ಅಪ್ಪಣೇ ಕೊಡುತ್ತಾನೋ. ಅಂತಾ ಮನುಷ್ಯನು 2 ಆಣೆಗಳ ಲಾಗಾಯತ 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

37. ಯಾವನು, (ಬಚ್ಚಲುನೀರು ಬೀದಿಯಲ್ಲಿ ಹರಿಯಗೊಡಿಸಿ ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ, ಯಾ ಪಾಯಖಾನೆ ಇಂತಾದ್ದರ ನೀರನ್ನಾಗಲಿ, ದುರ್ವಾಸನೆಯುಳ್ಳ ಇನ್ಯಾವ ದ್ರವ ಪದಾರ್ಥವನ್ನಾಗಲಿ, ಯಾವ ಬೀದಿಯಲ್ಲಾದರೂ, ಹರಿಯುವಂತೆ ಯಾ ಚಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡುತ್ತಾನೋ ಯಾ ಮಾಡುವಂತೆ ಅಪ್ಪಣೆ ಕೊಡುತ್ತಾನೋ, ಅಥವಾ, ಯಾವ ಪಾಯಖಾನೆ ಇಂದಲಾಗಲಿ ಬಚ್ಚಲು ಗುಣಿಯಿಂದಲಾಗಲಿ ಅಸಹ್ಯವಾದ ಯಾವ ಪದಾರ್ಥವಾದರೂ ಯಾವ ಬೀದಿಯೊಳಗಾಗಲಿ ಇರುವ ಮೇಲ್ಭಾಗದ ಚರಂಡಿಯೊಳಗೆ ಹರಿಯುವಂತೆ ಯಾ ಚಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೇ ಕೊಡುತ್ತಾನೋ ಅಂತಾವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

38. ಪ್ರೆಸೀಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗಲಿ, ಅಸಹ್ಯವಾದ ಅಂತಾ ಯಿತರ ವಸ್ತುವನ್ನಾಗಲಿ ತೆಗೆಸಿಹಾಕುವದು ನ್ಯಾಯವಾಗಿರತಕ್ಕದ್ದು. ಪ್ರೆಸೀಡೆಂಟರು ಅಂತಾ ಕಾಲವನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ ಕೊಟ್ಟಾಗ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿ ಯಾವರೂ ತೆಗದುಕೊಂಡು ಹೋಗುತ್ತಾನೋ ಯಾ ತೆಗದುಕೊಂಡು ಹೋಗುವಂತೆ ಮಾಡುತ್ತಾನೋ ಮತ್ತು ಯಾವನು ಪ್ರೆಸೀಡೆಂಟರಿಂದ ನಿಷ್ಕರ್ಷೆ ಯಾಗಿರಲಿ ಆಗದೆ ಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರದಂತೆ ತಕ್ಕ ಮುಚ್ಚಳವಿಲ್ಲದೆ ಯಾವದಾದರೂ ಬಂಡಿ ಯಾನಸಾಧನ ಯಾ ಯಿತರೆ ಆಧಾರ ಯಾ ಪಾತ್ರ ಯಿಂತಾದ್ದನ್ನು ಅಂತಾ ಯಾವ ಕಾರ್ಯಕ್ಕೋಸ್ಕರವಾಗಿ ಉಪಯೋಗಿಸುತ್ತಾನೋ ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗೆಸಿಕೊಂಡು ಹೋಗುವಲ್ಲಿ ಅದನ್ನು ಕೆಳಗೆ ಚಲ್ಲುತ್ತಾನೋ ಯಾ ಸುರಿಯುತ್ತಾನೋ, ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲವಾದರೂ ಚೆಲ್ಲಿದ ಅಥವಾ ಬಿದ್ದಕಡೆಯಲ್ಲೆಲ್ಲಾ ಅದನ್ನು ಚನ್ನಾಗಿ ಗುಡಿಸಿ ಶುಚಿಮಾಡದಿದ್ದರೆ, ಯಾವನು ಮೇಲೆ ಕಂಡ ಯಾವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ ಯಾನ ಸಾಧನ ಆಧಾರ ಯಾ ಪಾತ್ರ ಇಂತಾದ್ದನ್ನು ಪ್ರೆಸೀಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟೀಸಮೂಲಕ ಸದರೀ ಬಗ್ಯೆ ಮೊಕರರ ಮಾಡುವ ಬೀದಿ, ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡೆಯುತ್ತಾನೋ, ಯಾ ತೆಗದುಕೊಂಡು ಹೋಗುತ್ತಾನೋ, ಅಥವಾ ಹೊಡೆಯುವಂತೆ ಯಾ ತೆಗದು ಕೊಂಡು ಹೋಗುವಂತೆ ಮಾಡುತಾನೋ, ಅಂತಾ ಮನುಷ್ಯನು 5 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

39. ಈ ಉಪನಿಬಂಧನೆಗಳಿಂದ ಉಂಟು ಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಕಶ್ಮಲ ವನ್ನು ಹಾಕಿ ಇಡುವ ಬಗ್ಯೆ, ಮಲ, ಸಗಣಿ, ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ, ಮತ್ತು ಈ ಉಪನಿಬಂಧನೆಗಳ ಬಾಬತು ಮೇಲೆ ಕಂಡ ಕಾರ್ಯಗಳಿಗಾಗಲಿ, ಅಪ್ಪೈಕಿ ಯಾವ ಕಾರ್ಯಗಳಿಗಾಗಲಿ ಬೇಕಾದ ದರೋಬಸ್ತು ಜಾನವಾರಗಳನ್ನೂ, ಬಂಡಿಗಳನ್ನೂ, ಸಾಧನಗಳನ್ನೂ, ಇತರ ವಸ್ತುಗಳನ್ನೂ, ಇಡುವ ಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಮೆಂಬರಗಳು, ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು. ಯಾ ಬದಗಿಸತಕ್ಕದ್ದು, ಮತ್ತು ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಮೆಂಬರಗಳು, ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು, ಯಾ ಬಾಡಿಗ್ಯೆ ತೆಗದು ಕೊಳ್ಳಬಹುದು, ಅಥವಾ ತಮ್ಮಿಂದ ಕೊಂಡುಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದು ಕೊಳ್ಳತಕ್ಕ ಯಾವ ಜಮೀನಿನಲ್ಲಾಗಲಿ ಯಾವ ಹೊಸ ಕಟ್ಟಡವಾದರೂ ಕಟ್ಟಿಸಲ್ಪಡುವಂತೆ ಮಾಡಬಹುದು.

40. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ, ಅದರ ಸಮೀಪದಲ್ಲಾಗಲಿ, ಪ್ರತಿ ಮನೆಯವಾಸಸ್ಥನೂ, ತನ್ನ ವೆಚ್ಚದಿಂದ, ಮಲವಗೈರೇ ತೆಗದು ಕೊಂಡು ಹೋಗುವ ಬಗ್ಯೆ ಮ್ಯುನಿಸಿಪಲ್ ಮೆಂಬರಗಳಿಂದ ಬದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ, ಸಗಣಿಯನ್ನೂ, ಇತರ ಕಚರೇಯನ್ನೂ ಮ್ಯುನಿಸಿಪಲ್ ಮೆಂಬರಗಳು ನಿಯಮಿಸುವ ಕಾಲದಲ್ಲಿಯೂ, ಅಂತಾ ರೀತಿಯಾಗಿಯೂ ಸಾಗಿಸುವದು ಅವನ ಕಾರ್ಯವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರ ಕಚರೆ ಇಂತಾದ್ದನ್ನು ಸಾಗಿಸಿಕೊಂಡು ಹೋಗಬೇಕೆಂದು ಖಾಯಿಷ್ ಮಾಡಿದಲ್ಲಿ ಈ ಬೈಲಾನಿಬಂಧನೆಗಳ 38ನೇ ಸೆಕ್ಷನ ನಿಬಂಧನೆಗಳಿಗೆ ಅನುಗುಣವಾಗಿ ಆ ಮೇರೆ ಮಾಡುವದು ಅವನ ಎಖ್ತ್ಯಾರೀ ಮೇಲೆ ಇರತಕ್ಕದ್ದು.

41. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದಿನೊಳಗೆ ಯಿರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರದಲ್ಲಿ ಅಲ್ಲದೆ ಅನ್ಯಥಾ 24 ಗಂಟೆಗಳಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರಾ, ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಯಿಂತಾದ್ದನ್ನು ಅಂತಾ ಯಾವದಾದರೂ ಮನೆಗಳ ಛಾವಣೀಯಲ್ಲಿ ಯಾ ಛಾವಣಿಯ ಮೇಲೆ ಅಥವಾ ಅಂತಾ ಮನೆಗೆ ಸೇರಿದ ಮತ್ತು ಅಂತಾ ಮನೆಯ ವಾಸಸ್ಥನಿಂದ ವಾಸ ಮಾಡಲ್ಪಡುವ ಯಾವ ಔಟ ಹೌಸ್ ವಗೈರೆಯ ಛಾವಣೀ ಯೊಳಗೆ ಯಾ ಅವರ ಮೇಲ್ಗಡೆ, ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ ಯಿಡುತ್ತಾನೋ ಯಾ ಯಿಡಗೊಡಿಸುತ್ತಾನೋ ಅಂತಾವನು 2 ಆಣೆಗಳ ಲಾ|| 5 ರೂಪಾಯಿಗಳ ವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

42. ಝಾಡ ಮಾಲೀರಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ಏಜಂಟರ ಮಾರಿಫತ್ ಮಾಡಿಸುತ್ತೇವೆಂತ, ಯಾವ ಮನೆಯ ವಾಸಸ್ಥನಿಗಾಗಲಿ, ವಾಸಸ್ಥರಿಗಾಗಲಿ, ಯಿದರ ಹಿಂದಿನಕಡೇ ಸೆಕ್ಷನಗಳನ್ನು ಅನುಸರಿಸಿ ನೋಟಿಸ ಕೊಡೋಣವೂ, ಮತ್ತು ಈ ಬಗ್ಯೆ ಸಾಕಾದಷ್ಟು ಮಂದಿ ಝಾಡಮಾಲೀಗಳನ್ನು ಯಿಡುವಣವೂ, ಮೆಂಬರಗಳ ಕಾರ್ಯವಾಗಿರತಕ್ಕದ್ದಲ್ಲದೆ ಯಾವ ಮನೆಯನ್ನು ಗುಡಿಸುವ ಕೆಲಸವು ಹಾಗೆ ಅವರುಗಳಿಂದ ವಹಿಸಲ್ಪಡುತ್ತೋ ಅಂತಾ ಪ್ರತಿ ಮನೆಗೂ, ಆ ಮನೆಯ ವಾಸಸ್ಥರು ಸಾಧಾರಣವಾದ ಒಬ್ಬ ಝಾಡ ಮಾಲೀಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದ್ದೋ ಅಷ್ಟಕ್ಕೆ ಜಾಸ್ತೀಯಿಲ್ಲದಂತ ಬಂದು ಶೀರ್ವೆ ಮೊಕರರ ಮಾಡುವದು ಅವರುಗಳಿಗೆ ನ್ಯಾಯ್ಯವಾಗಿರತಕ್ಕದ್ದು.

43. ಮೆಂಬರಗಳ ಹುಕ್ಕುಂ ಅನುಸರಿಸಿ ಬೀದಿಗಳಲ್ಲಿಯೂ ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ, ಜಲದಾರೆಗಳಲ್ಲಿಯೂ, ಬಚ್ಚಲು ತೊಟ್ಟಿಗಳಲ್ಲಿಯೂ, ಜಮಾಯಿಸಲ್ಪಡುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲದಾರೆ, ರೊಚ್ಚು, ಮಣ್ಣು ಸಗಣಿ, ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕವು; ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೇಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು-ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳೀ ಯಾಗುವ ಹಣವು ಈ ಬೈಲಾ ನಿಬಂಧನೆಗಳ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

44. ಮೆಂಬರಗಳು ತಮ್ಮಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತ ಕೆಲಸಗಳನ್ನೂ, ಯಂತ್ರಗಳನ್ನೂ ಬದಗಿಸಬಹುದು.

45. ಮೆಂಬರುಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳು, ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಆವಶ್ಯಕವೆಂದು ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ತೋರುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಬದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮದಲ್ಲಿ ಇಡಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಒರಸಿ ಪಾಕ ಮಾಡುವದು, ಸಿದ್ಧ ಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಮೆಂಬ

ರಿಗಳು ಆಗಿಂದಾಗ್ಗೆ ತಮಗೆ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ಜಾಸ್ತೀ ಮಾಡಬಹುದು, ಅಥವಾ ಬೇರೇ ವಿಧವಾಗಿ ಬದಲಾವಣೀ ಮಾಡಬಹುದು.

46. ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದತರುವಾಯ ಯಾವ ಪಬ್ಲಿಕ್ ಬೀದಿಯಲ್ಲಿಯಾಗಲಿ ರಸ್ತೆಯಲ್ಲಿಯಾಗಲಿ ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾಯಿರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ ಇಂತಾದ್ದರಲ್ಲಿಯಾಗಲಿ, ಇಂತಾದ್ದರಮೇಲೆಯಾಗಲಿ ಯಾವನು ಯಾವದಾದರೂ ಗೋಡೆ ಹಾಕುತ್ತಾನೋ ಅಥವಾ ಯಾವ ಆವರಣ ಮುಂತಾದ್ದನ್ನು ಯಾ ಇತರ ನಿರೋಧವನ್ನು, ಯಾ ಒತ್ತುವರಿಯನ್ನು ಕಟ್ಟುತ್ತಾನೋ ಯಾ ಇಡುತ್ತಾನೋ ಅಂತಾವನು ಯೆರಡಾಣೆ ಲಾಗಾಯಿತು ಐದುರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಮೆಂಬರ್‌ಗಳು ಅಂತಾ ಯಾವ ನಿರೋಧವನ್ನಾಗಲಿ, ಒತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಹಾಗೆ ತೊಲಗಿಸುವದರ ಲಾಗವಡು ಸದರೀ ಅಟಕಾವ್ ವಗೈರೆ ಉಂಟುಮಾಡಿದ ಮನುಷ್ಯನು ಕೊಡತಕ್ಕದ್ದಾಗಿ, ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು. ಪೊಲೀಸ್‌ಸೂಪರಿಂಟೆಂಡೆಂಟರ ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಿ ಆಗಲಿ ಉತ್ಸವ ಮದಿವೆ ಮುಂತಾದ ಸಮಯಗಳಲ್ಲಿ ಹಂಗಾಮಿಯಾಗಿ ಯಾವದಾದರೂ ಕಟ್ಟುವದಕ್ಕೆ ಅಪ್ಪಣೆ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿರುವ ಯಾವ ಅಂಶವೂ ಮೆಂಬರ್‌ಗಳನ್ನು ಆತಂಕಪಡಿಸತಕ್ಕದ್ದಲ್ಲವು.

47. ಯಾವನು ಯಾವ ಪಬ್ಲಿಕ್ ಬೀದಿಯು, ರಸ್ತೆಯು, ತಳವರಿಸೇ ಕಲ್ಲುಗಳನ್ನಾಗಲಿ, ಚಾಪು ಕಲ್ಲುಗಳನ್ನಾಗಲಿ ಇತರ ಸಾಮಾನುಗಳನ್ನಾಗಲಿ, ಅಥವಾ ಆವರಣಗಳು, ಕಂಭಗಳು, ಇಂತಾವುಗಳನ್ನಾಗಲಿ, ಪಬ್ಲಿಕ್ ದೀಪಸ್ತಂಭಗಳನ್ನಾಗಲಿ, ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತೀ ಯಿಲ್ಲದೆ ಅಥವಾ ಯಿತರ ನ್ಯಾಯವಾದ ಅಧಿಕಾರವಿಲ್ಲದೆ ಕೆಡಿಸುತ್ತಾನೋ, ಸ್ಥಳ ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ, ಅವುಗಳಲ್ಲಿ ಯೇನಾದರೂ ಬದಲಾವಣೀ ಮಾಡುತ್ತಾನೋ ಅಂತಾವನು ಯೆರಡಾಣೇ ಲಾಗಾಯಿತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

48. ಯಾವ ಬೀದಿಯು ಯಾವ ಹೆಸರಿನಲ್ಲಿ ತಿಳಿಯಲ್ಪಡತಕ್ಕದ್ದೋ ಆ ಹೆಸರನ್ನು ಪ್ರೆಸೀಡೆಂಟರು ಆಗಿಂದಾಗ್ಗೆ ಪ್ರತಿ ಬೀದಿಯ ಯೆರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂಥಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾದರೂ ಕಟ್ಟಡ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಇಡಿಸಬಹುದು, ಯಾ ಕಟ್ಟಿಸಬಹುದು; ಮತ್ತು ಯಾವನು ಅಂತಾ ಹೆಸರನ್ನು ನಾಶಪಡಿಸುತ್ತಾನೋ ಕಿತ್ತು ಹಾಕುತ್ತಾನೋ ಕೆಡಿಸುತ್ತಾನೋ ಅಥವಾ ಪ್ರೆಸೀಡೆಂಟರ ಅಪ್ಪಣೇಮೇಲೆ ಇಡಲ್ಪಟ್ಟ ಹೆಸರು ಶಿವಾಯಿ ಬೇರೆ ಹೆಸರು ಯಿಡುತ್ತಾನೋ ಅಂತಾವನು ಯರಡಾಣೇ ಲಾಗಾಯತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

49. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟಡವಾದರೂ, ಗೋಡೆಯಾದರೂ, ಅದಕ್ಕೆ ಸೇರಿಸಲ್ಪಟ್ಟ ಮತ್ತೇನಾದರೂ, ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವಹಾಗೆ ಯಿರುವದಾಗಿ, ಅಥವಾ ಅಂತಾ ಕಟ್ಟಡದ ವಾಸಸ್ಥರಿಗೆ ಯಾ ಆಸ್‌ಪಾಸ್ ಕಟ್ಟಡಗಳಿಗೆ ಯಾ ಅವುಗಳ ವಾಸಸ್ಥರಿಗೆ, ಯಾ ಅನುಭವದಾರರಿಗೆ ಯಾ ಬೀದೀಯಲ್ಲಿ ಹೋಗತಕ್ಕವರಿಗೆ ಯಾವರೀತಿಯಿಂದಲಾದರೂ ಅಪಾಯಕರವಾಗುವದಾಗಿ ಪ್ರೆಸೀಡೆಂಟರಿಗೆ ತೋರಬಂದರೆ, ಸದರೀ ಪ್ರೆಸೀಡೆಂಟರು ತಮಗೆ ಜರೂರ್ ತೋರಿದರೆ, ಬೀದಿಯಲ್ಲಿ ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಹಲಿಗೆಯನ್ನೂ ಯಾ ಆವರಣವನ್ನೂ, ಕೂಡ್ಲೇ ಹಾಕಿಸತಕ್ಕದ್ದು. ಮತ್ತು ಮಾಲೀಕನು ಫಲಾನೇ ಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವನಾಗಿ ಯಿದ್ದಲ್ಲಿ, ಅವನಿಗೆ ಬರವಣಿಗೇ ಮೂಲಕ ನೋಟಿಸ್ ಕೊಡಿಸತಕ್ಕದ್ದಲ್ಲದೇ ಅಂತಾ ನೋಟಿಸನ್ನು ಅಂತಾ ಕಟ್ಟಡ ವಗೈರೆಯ ಬಾಗಲಿಗಾಗಲಿ, ಯಿತರ ಪ್ರಸಿದ್ಧವಾದ ಭಾಗದೊಳಗಾಗಲಿ, ಚಿಕಟಾಯಿಸತಕ್ಕದ್ದು, ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡತಕ್ಕದರಲ್ಲಿ ಸಂದರ್ಭಾನುಸಾರ, ಅಂತಾ ಕಟ್ಟಡವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೂಡ್ಲೇ ತೆಗದು ಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತು ಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿಗೆ ತಾಕೀದ್ ಮಾಡತಕ್ಕದ್ದು, ಮತ್ತು ಅಂತಾ ಮಾಲೀಕ ಯಾ ವಾಸಸ್ತನು, ಅಂತಾ ನೋಟಿಸ್ ಕೊಟ್ಟ ಮೂರು ದಿವಸಗಳೊಳಗಾಗಿ ಸದರೀ ಕಟ್ಟಡವನ್ನು ರಿಪೇರ್ ಮಾಡಲಿಕ್ಕೆ ಯಾ ಕಿತ್ತು ಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಷುರು ಮಾಡಿ ಯುಕ್ತವಾದ ಮುತವಜ್ಜೆಯಿಂದ ಪೂರೈಸದೇ ಹೋದಲ್ಲಿ ಪ್ರೆಸೀಡೆಂಟರು, ಸದರೀ ಕಟ್ಟಡ, ಗೋಡೆ, ಯಾ ಯಿತರ ವಸ್ತು ಯಿಂತಾದ್ದರ ಪೈಕೀ ವಿಷ್ಟವನ್ನಾಗಲಿ, ತಾವು ಜರೂರೆಂದು ಭಾವಿಸುವಷ್ಟು ಭಾಗವನ್ನಾಗಲಿ, ಕಿತ್ತು ಹಾಕಿಸತಕ್ಕದ್ದು, ಯಾ ರಿಪೇರ್ ಮಾಡಿಸತಕ್ಕದ್ದು, ಯಾ ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀ ಕಟ್ಟಡದ ಸಾಮಾನುಗಳನ್ನು ಸದರೀ ಬಗ್ಗೆ ತಮಗೆ ಯುಕ್ತ ತೋರುವ ಪ್ರಕಾರ ಉಪಯೋಗಿಸಬಹುದು, ಮತ್ತು ಆಬಗ್ಗೆ ಹಿಡಿದ ಬಂದೋಬಸ್ತು ಲಾಗವಡೂ ಸದರೀ ಕಟ್ಟಡ ಮುಂತಾದವುಗಳ ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

50. ಮೇಲೆ ಕಂಡ ಅಧಿಕಾರ ಬಲದಿಂದ ಅಂತಾ ಯಾವ ಕಟ್ಟಣವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತು ಹಾಕಲ್ಪಟ್ಟಲ್ಲಿ, ಮೆಂಬರಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಯೆಷ್ಟು ಕಿತ್ತು ಹಾಕಲ್ಪಡುತ್ತೋ ಅಷ್ಟನ್ನು, ಹರಾಜ್ ಹಾಕಿಸಿ ಅಂತಾ ಹರಾಜ್ ಹುಟ್ಟುವಳೀ ಹಣವನ್ನು, ಕಿತ್ತು ಹಾಕಿದ ಲಾಗವೆದನ್ನ ಕೊಡತಕ್ಕ ಬಗ್ಯೆ, ವಿನಿಯೋಗಿಸಬಹುದು. ಅಂತಾ ವಿಕ್ರಯದ ಮೊಬಲಗಿನ ಪೈಕೀ ಖರ್ಚು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟಣದ ಯಾ ಗೋಡೆಯ ಮಾಲೀಕನು ಹರಾಜ್ ತಾರೀಖು ಲಗಾಯ್ತು ಆರು ತಿಂಗಳೊಳಗಾಗಿ ಬಂದು ಕೇಳಿದರೆ ಅವನಿಗೆ ಕೊಟ್ಟುಬಿಡತಕ್ಕದ್ದೇ ಹೊರತು ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು, ಮೆಂಬರಗಳು, ಅಂತಾ ಸಾಮಾನುಗಳನ್ನು ಮೇಲೆ ಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸಿದಾಗ್ಯೂ, ಸದರೀ ಲಾಗವಡಿನ ವಿಷ್ಟು ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಬೈಲಾ ನಿಬಂಧನೆಗಳ ದೆಸೆಯಿಂದ ಯಾವ ಪರಿಹಾರ ಉಂಟುಮಾಡಲ್ಪಟ್ಟಿರುತ್ತೋ ಮೇಲೆ ಕಂಡ ಹರಾಜ್‌ನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ್ದು ಜಾತಾ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೂ ಅದೇ ಪರಿಹಾರ ವುಂಟಾಗಿರತಕ್ಕದ್ದು.

51. ಮ್ಯುನಿಸಿಪೆಲ್ ಕಮಿಷನಿನ ಪ್ರೆಸೀಡೆಂಟರು, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ, ತಾವಾದರೂ, ತಮ್ಮ ನೌಕರರ ಮಾರ್ಫತ್ತಾದರೂ, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟಮೇಲೆ ದರೋಬಸ್ತು ಕಟ್ಟಗಳೊಳಗೂ, ಪ್ರವೇಶಿಸಿ ನೋಡುವದು, ವಿಷ್ಟ ಕಟ್ಟವಾಗಲಿ, ಯಾವ ಭಾಗವಾಗಲಿ, ಆರೋಗ್ಯಕ್ಕೋಸ್ಕರ ಕೂಡ್ಲೆ ಒಳಗೂ ಹೊರಗೂ ಸುಣ್ಣ ಬಳಿಸಲ್ಪಡುವಂತೆ ಅಥವಾ ಯಿತರ ರೀತಿಯಿಂದ ಸಾಕ್ ಮಾಡುವಂತೆ ಬರವಣಿಗೇ ಮೂಲಕ ಹುಕ್ಕುಂ ಕೊಡುವದು ಸಹ ಅವರಿಗೆ ನ್ಯಾಯ್ಯವಾಗಿರತಕ್ಕದ್ದು. ಅಂತಾ ಕಟ್ಟದ ಮಾಲೀಕ ಯಾ ವಾಸಸ್ಥನು ತನಗೆ ಅಂತಾ ಹುಕ್ಕುಂ ಕೊಡೋಣಾದ್ದು ಮೊದಲು ಯೆಂಟುದಿನಗಳೊಳಗಾಗಿ ಆ ಮೇರೆ ಸಾಕ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ, ಪ್ರೆಸೀಡೆಂಟರು ಆ ಕೆಲಸ ಮಾಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಮ್ಯುನಿಸಿಪೆಲ್ ಇಲಾಖೆಯ ಸ್ಯಾನಿಟೆರಿ ಯಿನ್ಸ್‌ಪೆಕ್ಟರ್ ಎಂಬ ಅಧಿಕಾರಿಯು ರೋಗ ನಿಮಿತ್ತಗಳಾದ ಕಟ್ಟಗಳನ್ನು, ಹೊಗೆ ಹಾಕಿಸುವ ಬಗ್ಯೆ ಅಥವಾ ರೋಗ ವ್ಯಾಪನೆಯ ನಿಮಿತ್ತವನ್ನು ನಿವರ್ತಿ ಮಾಡುವ ಬಗ್ಯೆ ಮುಚ್ಚಿಸತಕ್ಕದ್ದು. ಪ್ರೆಸೀಡೆಂಟರ ಬರವಣಿಗೆಯ ಮೂಲಕ ಮಂಜೂರಾತಿಯನ್ನು ಅನುಸರಿಸಿ ಅಂತಾ ಕ್ರಮಗಳನ್ನು ನಿರ್ಣಯಿಸತಕ್ಕದ್ದು.

52. ಯಾವ ಕಟ್ಟವಾದರೂ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಒಂದು ವಕ್ಕಲಿಗಿಂತ ಹೆಚ್ಚಾಗಿ ಇರುವ ಾಗಿ ಮ್ಯುನಿಸಿಪೆಲ್ ಬೋರ್ಡಿನ ಪ್ರೆಸೀಡೆಂಟರಿಗೆ ಸಾನಿಟೇರಿ ಇನ್ಸ್‌ಪೆಕ್ಟರವರು ಸೆರ್ಟಿಫಿಕೆಟ್ ಮಾಡುವಲ್ಲಿ, ಪ್ರೆಸೀಡೆಂಟರು, ಅಂಥಾ ಜನ ಸಮ್ಮರ್ದವನ್ನು ತಗ್ಗಿಸುವ ಬಗ್ಯೆ ಮಾಜಿಸ್ಟ್ರೇಟರಲ್ಲಿ ನಡವಳಿತ ನಡಿಸತಕ್ಕದ್ದು. ಮಾಜಿಸ್ಟ್ರೇಟರು ಅದರ ಮೇಲೆ ತಮಗೆ ಯುಕ್ತತೋರುವ ಹುಕ್ಕುಂ ಕೊಡತಕ್ಕದ್ದು. ಅಂತಾ ಜನ ಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕ್ಕುಂ ತಾರೀಖು ತರುವಾಯ ಹಾಗೆ ಜನ ಸಮ್ಮರ್ದವಿರುವ ಪ್ರತಿದಿನಕ್ಕೂ, ಒಂದು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

53. ಯಾವದಾದರೂ ಜಮೀನಿನಲ್ಲಿಂತಕ್ಕ ಬೇಲೀಗಳು ಭೂಮಿಯ ಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಹಾಗೆ ಅವುಗಳನ್ನು ಕತ್ತರಿಸುವಂತೆ, ಯಾ ಕೊಂಬೆಗಳು ಕಡಿಯುವಂತೆ, ಮತ್ತು ಯಾವದಾದರೂ ಪಬ್ಲಿಕ್ ರಸ್ತೆ ಅಥವಾ ಬೀದಿಯ ಮೇಲೆ ವಾಲಿಇರುವದರಿಂದ ದಾರಿಗೆ ಅಟಕಾವ್ ಆಗುವಂತಾ, ಅಥವಾ ಲುಕ್ಸಾನ್ ಆಗುವಂತಾ, ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುತಿದ್ದರೆ, ಅಂತವನಿಗೂ, ಅದರ ಅನುಭವದಾರನಿಗೂ, ಪ್ರೆಸೀಡೆಂಟರು ಬರವಣಿಗೆಯ ಮೂಲಕ ನೋಟಿಸ್ ಕೊಡಬಹುದು. ಅಂತಾ ನೋಟಿಸ್‌ನಲ್ಲಿ ಕಂಡ ತಾರೀಖು ಲಗಾಯ್ತು ಎಂಟುದಿವಗಳೊಳಗಾಗಿ, ಅದರಂತೆ ನಡೆಯದೇ ಇದ್ದ ಪಕ್ಷಕ್ಕೆ ಮಾಲೀಕನಾಗಲಿ, ಅನುಭವದಾರನಾಗಲಿ, ಮಾಜಿಸ್ಟ್ರೇಟರ ಮುಂದೆ ತಕಸೀರ್ ಅಪಾದನೆಪಟ್ಟು 2 ರೂಪಾಯಿಗಳ ಲಗಾಯ್ತು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಮತ್ತು ಅಂತಾ ತಕಸೀರಿನಾಗಿ ಅಪಾದನೆ ಆದಮೇಲೆ ಸದರೀ ತಕಸೀರ್ ನಡೆಯುತ್ತಿರುವ ಪ್ರತಿದಿನಕ್ಕೂ, ಒಂದುರೂಪಾಯಿ ಮೊದಲು ಹತ್ತು ರೂಪಾಯಿಗಳ ವರಿಗೆ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

54. ಕ್ರಮಪ್ರಕಾರ ನೋಟಿಸ್ ಕೊಡಲ್ಪಟ್ಟತರುವಾಯ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸೀಡೆಂಟರಿಂದ ಲೈಸೆನ್ಸ್ ಪಡೆಯದೆ ಮ್ಯುನಿಸಿಪೆಲ್ ಸರಹದ್ದಿನೊಳಗೆ ಒಂದು ಸ್ಥಳದಲ್ಲಿ ಯಾವದಾದರೂ ಬಂಡಿ, ಕುದುರೆಗಳ ಯಾ ಬಂಡಿಗಳ ತವೇಲೆಗಳು, ಕುದುರೆ ಲಾಯಗಳು, ಕುದುರೇ ಚಿಕಿತ್ಸಾಶಾಲೆಗಳು ಬಂಡಿಮಿಟ್ಟೆಗಳು, ದನಗಳ ಕೊಟ್ಟಿಗೆಗಳು ಅಥವಾ, ಪಬ್ಲಿಕ್ಕಾಗಿ ಬಂದು ಇಳಿದುಕೊಳ್ಳುವ ಬಗ್ಯೆ ಪೋಷಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ, ಮೇಕೆ, ಯಾ ಹತ್ತಕ್ಕೆ ಮೀರಿದ ಕೊಂಬುಗಳುಳ್ಳ ಜಾನವರಗಳು ಇಂತಾವುಗಳಿಗೆ ಸ್ವಂತಗಾರನಾಗಿರುವ, ಯಾ ಇವುಗಳನ್ನು ಇಟ್ಟು ಇರುವ ಯಾವನಾಗಲಿ 2 ಅಣೆ ಮೊದಲು, 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೂ, ಅಂತಾ ತಕಸೀರಿಗಾಗಿ ಅಪಾದನೆಆದಮೇಲೆ ಅಂತಾ ತಕಸೀರ್ ನಡಿಸುವ ಪ್ರತಿದಿನಕ್ಕೂ 1 ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

55. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸೀಡೆಂಟರ ಅಭಿಪ್ರಾಯ ಪ್ರಕಾರ ಆಸ್‌ಪಾಸ್ ಜನಗಳಿಗೆ ಬಾಧಕವಾಗುತ್ತೆಂದು ತೋರುವ ಯಾವ ಹಂದಿಗಳನ್ನಾಗಲಿ ಯಾವನು ಇಡುತ್ತಾನೋ ಅವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಬಂದು ಜುರ್ಮಾನೆಗೂ, ಅಂತಾ ತಕ್ಸೀರ್ ಸ್ಥಾಪನೆಯಾದ ಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 5 ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದಲ್ಲದೆ, ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸೀಡೆಂಟರ ಹುಕ್ಕುಂ ನಿಶೀ, ಯಾವ ನುಕ್ಸಾನ್ ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಪೂರಾಗಿ ಕೊಂದು ಹಾಕ ಬಹುದು.

56. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ, ಯಾ ಅವುಗಳ ಮಾರ್ಗವಾಗಿ ಯಾ ಕೆಳಗಡೆಗೆ, ಇರುವಂತಾ, ಅಥವಾ ತರುಬಾಯ ಕಲ್ಪಿಸಲ್ಪಡುವಂತಾ ದರೋಬಸ್ತು ಪಬ್ಲಿಕ್ ಬಚ್ಚಲುಗಳು, ಚರಂಡೀಗಳು, ಮತ್ತು ತಮಾಂ ಬಚ್ಚಲುಗಳು, ಚರಂಡೀಗಳು, ನಲ್ಲೀಗಳು, ಮೊಹರೀಗಲು ಸಹ ಮೆಂಬರ್‌ಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿರಲಿ, ಅನ್ಯಥಾ ಆದ್ದಾಗಿರಲಿ, ಅಂತಾ ಕೆಲಸಗಳು, ಅವುಗಳಿಗೆ ಸಂಬಂಧಿಸಿದ ದರೋಬಸ್ತು ಕೆಲಸಗಳು ಸಾಮಾನುಗಳು, ಪದಾರ್ಥಗಳೆ ಮೆಂಬರುಗಳ ವಶದಲ್ಲಿಡಲ್ಪಟ್ಟು ಅವರಿಗೆ ಸೇರಿದ್ದಾಗಿರತಕ್ಕದ್ದು.

57. ಮ್ಯುನಿಸಿಪಲ್ ಸರಹದ್ದುಗಳ ಜಲಧಾರೇ ನೀರು ಹರಿಯುವ ಬಗ್ಯೆ ಯಾವದಾದರೂ ಮುಖ್ಯ ಮೊಹರೀಗಳನ್ನಾಗಲಿ, ಇತರ ಮೊಹರೀಗಳನ್ನಾಗಲಿ ಮಾಡಿಸುವಲ್ಲಿ ಮೆಂಬರ್‌ಗಳು, ಜರೂರಿದ್ದರೆ, ಯಾವದಾದರೂ ಬೀದಿಯ ಅಥವಾ ರಸ್ತೆಯ ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಉದ್ದೇಶಿಸಲ್ಪಟ್ಟ, ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ, ಆವರಣ ಕಲ್ಪಿಸಲ್ಪಟ್ಟ ಯಾ ಇತರ ವಿಧವುಳ್ಳ ಜಮೀನಿನಲ್ಲಿ, ಅದರ ಮಾರ್ಗವಾಗಿ ಯಾ ಕೆಳಗಡೆಗೆ ಇರುವ ಯಾವದಾದರೂ ನೆಲಮಾಳಿಗೆ ಕಮಾನ್ ಬಗ್ಗಿಸಿಯಿರುವ ನೆಲಮಾಳಿಗೆ ಇಂತಾದ್ದರ ಮಾರ್ಗವಾಗಿ, ಯಾ ಅಡ್ಡವಾಗಿ ಯಾ ಕೆಳಗಡೆಗೆ, (ಆ ವಿಷಯವನ್ನು ಕುರಿತು ತಕ್ಕ ವಾಯಿದೆನಿಶೀ ಬರವಣಿಗೇ ಮೂಲಕ ನೋಟಿಸ್ ಕೊಡಲ್ಪಟ್ಟ ತರುವಾಯ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದುಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿಕೊಡತಕದ್ದು ಅಂತಾ ಈಡು ಮೊಬಲಗ್ ವಿಷಯದಲ್ಲಾಗಲಿ ಅದನ್ನು ಹಂಚಿಕೆ ಮಾಡಿಕೊಡುವ ಅಂವಶದಲ್ಲಾಗಲಿ ಯೇನಾದರೂ ತಕರಾರ್ ಉಂಟಾದ ಪಕ್ಷಕ್ಕೆ ನುಕ್ಸಾನ್‌ವ ಲಾಗವಡುಗಳು ಇವುಗಳನ್ನು ಕುರಿತು ತಕರಾರ್ ವ್ಯವಸ್ಥೆ ಬಗ್ಯೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟರೀತಿಯಾಗಿ ಫೈಸಲ್ ಆಗತಕ್ಕದ್ದು.

58. ಈ ಬೈಲಾನಿಬಂಧನೆಗಳ ದೆಸೇಯಿಂದ ತಮ್ಮ ಸುಪರ್ದ್‌ಮಾಡೋಣಾದ ಬಚ್ಚಲುಗಳು, ಯಾ ಚರಂಡೀಗಳು, ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ದುರಸ್ತು ಪಡಿಸತಕ್ಕದ್ದು. ಮತ್ತು ತಮಗೆ ಯುಕ್ತ ತೋರುವ ಮೇರೆ ವಿಸ್ತಾರಪಡಿಸತಕ್ಕದ್ದು, ಬದಲಾವಣೆಮಾಡತಕ್ಕದ್ದು, ಯಾ ಮೇಲ್ಗಡೆ ಕಮಾನ್ ಕಟ್ಟಿಸತಕ್ಕದ್ದು ಯಾ ಇತರ ವಿಧದಿಂದ ಅಭಿವೃದ್ಧಿ ಮಾಡಕ್ಕದ್ದು, ಮತ್ತು ಆ ಪೈಕಿ ಯಾವ ಭಾಗ ತಮಗೆ ನಿಷ್ಪ್ರಯೋಜಕವೆಂತಲೂ ಅನಾವಶ್ಯಕವೆಂತಲೂ, ತೋರುತ್ತೋ ಆ ಭಾಗವನ್ನು ಮೌಕೂಫ್ ಮಾಡಬಹುದು, ಮುಚ್ಚಿಸಿಬಿಡಬಹುದು ಯಾ ನಾಶಮಾಡಬಹುದು, ಪರಂತು, ಈ ಸೆಕ್ಷನ್ ಅನುಸರಿಸಿ ಯಾವ ಅಂಶವಾಗಲಿ ಮಾಡಲ್ಪಟ್ಟಿತೆಂಬ ಸಬಬಿನ ಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯ್ಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟರೆ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರು ಯಾವ ಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡೆದಿರುತ್ತಾರೋ ಅಂತಾ ಯಾವದಾದರೂ ಪಬ್ಲಿಕ್ ಬಚ್ಚಲ್‌ನಲ್ಲಿಯಾಗಲಿ ಇತರ ಸ್ಥಳದಲ್ಲಿಯಾಗಲಿ, ಸದರೀ ಬಚ್ಚಲು ನೀರು ಹರಿಯುವ ಬಗ್ಯೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

59. ಮೆಂಬರ್‌ಗಳು ತಮಗೆ ಸೇರಿದ ಬಚ್ಚಲುಗಳೂ ಚರಂಡೀಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಇರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಇಡಿಸತಕ್ಕದ್ದು. ಮತ್ತು ಕ್ರಮ ಪ್ರಕಾರ ಪಾಕ್ ಮಾಡಿಸತಕ್ಕದ್ದು, ಶೋಧಿಸತಕ್ಕದ್ದು, ಮತ್ತು ಖಾಲೀ ಮಾಡಿಸತಕ್ಕದ್ದು. ಸದರೀ ಬಚ್ಚಲುಗಳನ್ನು ನೀರು ಪಾಟಮಾಡಲಿಕ್ಕೂ ಶುದ್ಧಪಡಿಸಲಿಕ್ಕೂ. ಖಾಲೀ ಮಾಡಲಿಕ್ಕೂ ಭೂಮಿಯ ಮೇಲಾಗಲಿ, ಕೆಳಗಾಗಲಿ, ಜರೂರಾದ ತೊಟ್ಟಿವಗ್ಯೆರೆಗಳನ್ನು ತೂಬುಗಳನ್ನೂ, ಯಂತ್ರಗಳನ್ನೂ, ಮತ್ತು ಜರೂರಾದ ಇತರ ಕೆಲಸಗಳನ್ನೂ ಅವರು ಕಟ್ಟಿಸಬಹುದು. ಇಡಿಸಬಹುದು, ಮತ್ತು ಚೀಫ್ ಕಮಿಷನರವರ ಮಂಜೂರಾತೀನಿಶೀ ಅಂತಾ ಬಚ್ಚಲುಗಳು, ಯಾ ಚರಂಡಿಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ, ಯಾವದಾದರೂ ತಕ್ಕ ಸ್ಥಳದೊಡನೆ ಸೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆ ಮಾಡಬಹುದು, ಅಥವಾ ಅಂತಾ ಬಚ್ಚಲಗಳ ದೆಸೆಯಿಂದಲೂ ಚರಂಡೀಗಳ ದೆಸೆಯಿಂದಲೂ, ಬರುವ ಕಶ್ಮಲವನ್ನು ಜಮಾಯಿಸಿಯಿಡುವ ಬಗ್ಯೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು. ಮತ್ತು ಕೇವಲ ಜರೂರೆಂತ ಯೆಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಇತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು. ಆದರೆ ಹಾಂಗೆ ಉಪಯೋಗಿಸುವದರಿಂದ ಹೇಸಿಕೆಯುಂಟಾಗದೆ ಇರತಕದ್ದು.

60. ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತಿಯನ್ನು ಮೊದಲು ಪಡಕೊಳ್ಳದೆ, ಈ ಬೈಲಾನಿಬಂಧನೆಗಳ ದೆಸೇಯಿಂದ ಮೆಂಬರ್‌ಗಳ ವಶದಲ್ಲಿ ಇಡೋಣಾದ ಬಚ್ಚಲುಗಳು ಚರಂಡೀಗಳು ಇವುಗಳ ಪೈಕಿ ಯಾವದರಲ್ಲಾಗಲಿ ಯಾವನು ಯಾವೆ ಚರಂಡೀಯನ್ನಾದರೂ ಮಾಡುತ್ತಾನೋ ಯಾ ಮಾಡಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ್ ಚರಂಡೀಯಾಗಲಿ ಬಚ್ಚಲಾಗಲೀ ಸರ್ಕಾರೀ ಜಮೀನ್ ಮಾರ್ಗವಾಗಿ ಹರಿಯಲೀ ಜನಗಳ ಸ್ವಂತ ಜಮೀನ್ ಮಾರ್ಗವಾಗಿ ಹರಿಯಲೀ ಪರಂತು ಅಂತಾದ್ದನ್ನು ಯಾವನು ಬಂದ್ ಮಾಡುತಾನೋ ತಿರಿಗಿಸುತ್ತಾನೋ ಅಟಕಾವ್ ಮಾಡುತ್ತಾನೋ ಅಥವಾ ಮತ್ಯಾವ ವಿಧದಿಂದಲಾಗಲಿ, ಪ್ರವರ್ತಿಸುತ್ತಾನೋ ಅಂತಾ ಮನುಷ್ಯನು 1 ರೂಪಾಯಿ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೆಂಟರು ಅಂತಾ ಚರಂಡೀಯನ್ನಾಗಲಿ ಅಟಕಾವನ್ನಾಗಲಿ, ತಮಗೆ ಯುಕ್ತತೋರುವ ಪ್ರಕಾರ ನಾಶ ಪಡಿಸಬಹುದು, ಬದಲಾವಣಿ ಮಾಡಿಸಹುದು, ಹೊಸದಾಗಿ ಮಾಡಿಸಬಹುದು. ಅಥವಾ ಅನ್ಯಥಾ ತಮಗೆ ಯುಕ್ತತೋರುವ ಪ್ರಕಾರ ನಡಿಸಬಹುದು. ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ ಅಂಥಾ ಫೂಟೆ ಚರಂಡಿಯನ್ನು ಯಾ ಅಟಕಾವನ್ನೂ ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

61. ಈ ಬೈಲಾನಿಬಂಧನೆಗಳಿಂದ ಮೆಂಬರ್‌ಗಳವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸೀಡೆಂಟರ ಅನುಮತೀ ಇಲ್ಲದೆ ಯಾವ ಕಟ್ಟಣವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು, ಮತ್ತು ಯಾವ ಕಟ್ಟಣವಾಗಲಿ ಆ ಮೇರೇ ಕಟ್ಟಲ್ಪಟ್ಟಲ್ಲಿ ಪ್ರೆಸೀಡೆಂಟರು ಅಂತಾ ಕಟ್ಟಣವನ್ನು ಕಿತ್ತಿ ಹಾಕಿಸಬಹುದು. ಅಥವಾ ತಮಗೆ ಯುಕ್ತತೋರುವ ಪ್ರಕಾರ ಇತರ ರೀತಿಯಿಂದ ನಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕಶೀರ್ ನಡಿಸಿದ ಮನುಷ್ಯನು ಕೊಡತಕದ್ದಲ್ಲದೆ. ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಿ ಕ್ಕೊಳ್ಳಲ್ಪಡತಕ್ಕದ್ದು.

62. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತಾರೋ ಅಂತಾ ಯಾವಧಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಇರುವ ಯಾವದಾದರೂ ಕಟ್ಟಣವು ಯಾವಾಗಲಾಗಲಿ, ತಕ್ಕ ಚರಂಡೀಯಿಂದ ಯಾ ನಲ್ಲೀಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಇತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸೀಡೆಂಟರಿಗೆ ತೃಪ್ತಿಕರವಾಗಿ ಚರಂಡೀ ಇಡಲ್ಪಡದೇ ಇರುವ ಪಕ್ಷಕ್ಕೆ ಪ್ರೆಸೀಡೆಂಟರು, ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟಣದ ದೆಸೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನ್‌ಗಳ ದೆಸೆಯಿಂದ ಅಷ್ಟರ ಆಕಾರದಲ್ಲಿ, ಅಷ್ಟರವಟ್ಟಕ್ಕೆ, ಮತ್ತು ಅಂತಾ ನೀರು ವಾಟದಲ್ಲಿ ಮುಚ್ಚಲ್ಪಟ್ಟ, ಯಾ ಖುಲ್ಲಾಯಿರುವ ಚರಂಡಿಯನ್ನಾಗಲಿ, ನಲ್ಲೀಯನ್ನಾಗಲಿ ಅಂತಾ ಕಟ್ಟಣದಿಂದ ಕಟ್ಟಿಸಬಹುದು, ಅಥವಾ ಏರ್ಪಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೂಡ್ಲೇ ಕೊಡಲ್ಪಡದ ಪಕ್ಷಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

63. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಅಂತಾ ಕಟ್ಟಣದ ಬಚ್ಚಲ ನೀರು ಆಗ್ಯೆ ಇರುವಂತಾ ಅಥವಾ ಯೇರ್ಪಾಡು ಮಾಡಲ್ಪಡುವಂತಾ ಯಾವದಾದರೂ ಪಬ್ಲಿಕ್ ಬಚ್ಚಲುನಲ್ಲಿಯೂ, ಮೆಂಬರ್‌ಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಕ್ಕೂ ತೆಗದುಕೊಂಡು ಹೋಗಲಿಕ್ಕೆ ತಕ್ಕ ನೀರು ಮಟ್ಟಕ್ಕಿಂತ ತಗ್ಗಾದ ನೀರು ಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟಣವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು. ಪಬ್ಲಿಕ್ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನ್ ಯಾ ಕಟ್ಟಣಗಳ ಮಾಲೀಕರು ಯಾ ಅನುಭವದಾರರು, ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ, ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಣಗಳ ಮೊದಲಿನಲ್ಲಿ ಇರುವ ಬಾಜೂಕಾಲ್ವೆಗಳ ಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು, ಬದಲಾವಣೀ ಮಾಡತಕ್ಕದ್ದು, ಕಾಪಾಡತಕ್ಕದ್ದು, ಮತ್ತು ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೇ ಅಶ್ರದ್ಧೆಮಾಡಿದ ಪಕ್ಷಕ್ಕೆ ಪ್ರೆಸೀಡೆಂಟರು ಆದನ್ನು ಮಾಡಿಸಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ ಕೊಡತಕ್ಕದ್ದಲ್ಲದೆ ಆ ಮೊಬಲಗ್ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

64. ಈ ಬೈಲಾ ನಿಬಂಧನೆಗಳು ಜಾರೀಲಿ. ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಃ ಕಟ್ಟೋಣಾದ ಯಾವ ಕಟ್ಟಣವಾಗಲಿ, ಇದರ ಹಿಂದಿನ ಕಡೇ ಸೆಕ್ಷನ್‌ನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರ ಇದ್ದಪಕ್ಷಕ್ಕೆ ಆದರ ಮಾಲೀಕನು ಅಂತಾ ಕಟ್ಟಣದ ನಿವೇಶನದ ದೆಸೇಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸೀಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಆಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರುವಾಟದಿಂದಲೂ, ಒಂದು ಚರಂಡೀ ಕಟ್ಟಿಸತಕ್ಕದ್ದು ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆಮೇರೆ ಕಟ್ಟಲಿಕ್ಕೆ ಉಪೇಕ್ಷಿಸಿದಪಕ್ಷಕ್ಕೆ, ಪ್ರೆಸೀಡೆಂಟರು ಸದರೀ ಚರಂಡೀ ಕಟ್ಟಿಸಲ್ಪಡುವಂತೆ ಮಾಡಬಹುದು

ಮತ್ತು ಆಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

65. ಅಂತಾ ನೋಟಿಸನ್ನೂ ನಕ್ಷೇಯನ್ನೂ ಕಳುಹಿಸದೇಯಾಗಲಿ, ಸದರೀ ತಿಂಗಳೊಳಗಾಗಿ, ಪ್ರೆಸೀಡೆಂಟರಿಂದ ನಿರ್ಣಯಿಸಲ್ಪಟ್ಟ ಪ್ರಕಾರವಲ್ಲದೆ ಜೇರೆ ಮಟ್ಟಗಳ ಪ್ರಕಾರವಾಗಲಿ, ಈ ಬೈಲಾ ನಿಬಂಧನೆಗಳಿಗೆ ಮತ್ಯಾವ ವಿಧದಿಂದಲಾದರೂ ವಿರುದ್ಧವಾಗಿಯಾಗಲಿ, ಅಂತಾ ಕಟ್ಟಡವು ಆರಂಭಿಸಲ್ಪಟ್ಟರೆ, ಯಾ ಮಾಡಲ್ಪಟ್ಟರೆ, ಪ್ರೆಸೀಡೆಂಟರು ಜರೂರ್ ಇದ್ದಲ್ಲಿ ಸಂದರ್ಭಾನುಗುಣವಾಗಿಯಿರುವಂತೆ ಅದನ್ನು ಬದಲಾಯಿಸಲ್ಪಡುವಂತೆ ಯಾ ನಾಶ ಪಡಿಸಲ್ಪಡುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದಲಾಗವಡು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ ಮಾಡಲ್ಪಡತಕ್ಕದ್ದು.

66. ಮೇಲೆ ಕಂಡ ಮೇರೆ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳನ್ನು ಕುರಿತು ಮಂಜೂರಾತಿಯನ್ನಾಗಲಿ, ಜೇಮಂಜೂರಾತಿಯನ್ನಾಗಲಿ, ಪ್ರೆಸೀಡೆಂಟರು ಬರವಣಿಗೇ ಮೂಲಕ ತಿಳಿಸದೇಯೂ, ಅಂತಾ ನೋಟಿಸ ತಲಪಿದ ಮೇಲೆ ಒಂದು ತಿಂಗಳ ವಳಗಾಗಿ ಜೇರೆ ಮಟ್ಟವನ್ನು ಏರ್ಪಡಿಸದೆಯೂ ತಪ್ಪಿದ ಪಕ್ಷಕ್ಕೆ ಅಂತಾ ನೋಟಿಸ ಕೊಡುವ ಮನುಷ್ಯನು ಇದರಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಡವನ್ನು ಕಟ್ಟಿಸಲಿಕ್ಕಾಗಲಿ, ಖೋಲ್‌ಬಂದೀ ಮಾಡಿಸಲಿಕ್ಕಾಗಲಿ, ಪ್ರವರ್ತಿಸಬಹುದು; ಪರಂತು ಅಂತಾ ಕಟ್ಟಸೋಣವಾಗಲಿ ಖೋಲ್‌ಬಂದೀಯಾಗಲಿ ಅನ್ಯಥಾ ಈ ಬೈಲಾಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

67. ಮೆಂಬರಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿ ಆಗಲಿ, ಅವುಗಳೊಡನೆ ಸಂಬಂಧಿಸುವ ಯಾವ ಚರಂಡಿಯಲ್ಲಾಗಲಿ, ಯಾವದಾದರೂ ಮಣ್ಣು, ಕಶ್ಮಲ, ಬೂದಿ, ತೋಟ, ಅಡಿಗೇಮನೆ, ಕುದುರೇಲಾಯ ಇಂತಾದ್ದರ ಬಾಬತು, ಕಚರೆ, ಗಾಜಿನ ಚೂರು, ಪೋಕಿಗಳು, ಯಾ ಇತರ ಕಸ (ಅಥವಾ ತಕ್ಕ ಬಚಲು ತಯಾರ್ ಮಾಡಿಸಿ ಕೊಡುವ ಪರ್ಯಂತ) ಯಾವದಾದರೂ ಮಲ ಇಂತಾದ್ದನ್ನು ಯಾವನು ಹಾಕುತ್ತಾನೋ ಯಾ ಇಡುತ್ತಾನೋ ಅಥವಾ ತನ್ನ ನೌಕರರು ಹಾಕುವಂತೆ ಯಾ ಇಡುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

68. ಯಾವ ಜಮೀನುಗಳಿಗೆ ಯಾ ಕಟ್ಟಡಗಳಿಗೆ ಫೂಟ್ ಚರಂಡೀಗಳು ಸಂಬಂಧಿಸಿದವುಗಳಾಗಿರುತ್ತವೋ ಅಂತಾ ಜಮೀನುಗಳಲ್ಲಿ ಯಾ ಕಟ್ಟಡಗಳಲ್ಲಿ, ಅಥವಾ ಜಮೀನುಗಳ ಹೊರಗೆ ಯಾ ಕಟ್ಟಡಗಳ ಹೊರಗೆ ಇರುವ ದರೋಬಸ್ತು ಫೂಟ್ ಚರಂಡೀಗಳೂ ಯಾವದಾದರೂ, ಬೀದಿಯಲ್ಲಾಗಲಿ, ಬೀದಿಯ ಬಳಿಯಲ್ಲಾಗಲಿ, ಇರುವ ಪಾಯಖಾನೆಗಳು ಬಚ್ಚಲುಗಳು ಬಚ್ಚಲು ಗುಣಿಗಳು ಮೆಂಬರಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನುಗಳಿಗೂ ಕಟ್ಟಡಕ್ಕೂ ಅವು ಸೇರಿ ಇರುತ್ತವೋ, ಅಥವಾ ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟಿರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತ್ತವೋ ಅಂತಾ ಜಮೀನುಗಳ ಮತ್ತು ಕಟ್ಟಡದ ಮಾಲೀಕರ ಲಾಗವಡಿನಿಂದಲೂ, ಖರ್ಚುಗಳಿಂದಲೂ, ಸದರೀ ಪಾಯಖಾನೇ ಮುಂತಾದವು ಬದಲಾಯಿಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡೀಯಾಗಲಿ ಪಾಯಖಾನೇ ಯಾಗಲಿ ಬಚ್ಚಲು ಗುಂಡೀ ಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತದೋ ಅಂತಾ ಯಾವದಾದರೂ ಜಮೀನು ಯಾ ಕಟ್ಟಡಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಿಸ್ ಕೊಡೋಣಾದ ತರುವಾಯ ಎಂಟು ದಿನಗಳೊಳಗೆ ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿಸಿ ಇಡಲಿಕ್ಕೆ ಸಹ ಉಪೇಕ್ಷಿಸಿದ ಪಕ್ಷಕ್ಕೆ ಪ್ರೆಸೀಡೆಂಟರು ಅಂತಾ ಚರಂಡೀಯನ್ನಾದರೂ ಪಾಯಖಾನೇಯನ್ನಾದರೂ ಬಚ್ಚಲು ಗುಂಡಿಯನ್ನಾದರೂ ಬದಲಾಯಿಸುವಂತೆಯೂ, ದುರಸ್ತು ಪಡಿಸುವಂತೆಯೂ, ಬಂದೋಬಸ್ತು ಪಡಿಸುವಂತೆಯೂ, ಮಾಡಬಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

69. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದ ತರುವಾಯ ಪ್ರೆಸಿಡೆಂಟರು ಬರವಣಿಗೆ ಮೂಲಕವಾದ ಅನುಮತಿ ಇಲ್ಲದೆ ಯಾಗಲಿ, ಅವರ ಹುಕುಮಿಗೆ ಬರಕಿಲಾಫ್ ಆಗಲಿ, ಅಂತಾ ಯಾವ ಚರಂಡೀ ಯಾ ಪಾಯಖಾನೆ ಯಾ ಬಚ್ಚಲು ಇಂತಾದ್ದು ಕಟ್ಟಲ್ಪಟ್ಟರೆ, ಅಥವಾ ಕಿತ್ತು ಹಾಕಿಸುವಂತೆ, ಯಾ ನಿಲ್ಲಿಸುವಂತೆ ಯಾ ಮಾಡಿಸದೆ ಇರುವಂತೆ, ಪ್ರೆಸೀಡೆಂಟರಿಂದ ಹುಕ್ಕುಂ ಮಾಡಲ್ಪಟ್ಟಿರುವ ಯಾವ ಚರಂಡಿ ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದನ್ನು ಯಾವನಾದರೂ ಕಟ್ಟಿದರೆ ಖೋಲ್‌ಬಂದೀ ಮಾಡಿದರೆ ಯಾ ನಿಲ್ಲಿಸದೆ ನಡಿಸಿದರೆ ಹಾಗೆ ಮಾಡುವ ಪ್ರತಿ ಮನುಷ್ಯನೂ 2 ಆಣೆ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂತಾ ಯಾವ ಚರಂಡೀಯಲ್ಲಾಗಲೀ ಪಾಯಖಾನೆಯಲ್ಲಾಗಲಿ

ಬಚ್ಚಲು ಗುಂಡಿಯಲ್ಲಾಗಲಿ, ತಮಗೆ ಯುಕ್ತ ತೋರುವಂತ್ತಾ, ತಿದ್ದುಪಡಿಯನ್ನಾಗಲಿ, ಬದಲಾವಣೆಯನ್ನಾಗಲಿ, ಮಾಡಿಸಬಹುದು, ಮತ್ತು ಅದರ ಬಾಬತು ಲಾಗವಡನ್ನು ಅಂತಾ ಚರಂಡೀ ಯಾಗಲಿ ಪಾಯಖಾನೆಯಾಗಲಿ ಬಚ್ಚಲು ಗುಂಡಿಯಾಗಲಿ ಯಾವನಿಂದ ಅಕ್ರಮವಾಗಿ ಕಟ್ಟಿಸಲ್ಪಟ್ಟಿತೋ, ಯಾ ಖೋಲ್‌ಬಂದೀ ಮಾಡಲ್ಪಟ್ಟಿತೋ, ಯಾ ನಿಲ್ಲಿಸದೆ ನಡಿಸಲ್ಪಟ್ಟಿತೋ, ಅಂತಾ ಮನುಷ್ಯನು, ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

70. ಪ್ರೆಸೀಡೆಂಟರಾಗಲಿ, ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರಾಗಲಿ, ಅಂತಾ ಚರಂಡಿಯನ್ನಾದರೂ, ಪಾಯಖಾನೆಯನ್ನಾದರೂ, ಬಚ್ಚಲು ಗುಂಡಿಯನ್ನಾದರೂ, ತನಿಖೀ ಮಾಡಬಹುದು, ಮತ್ತು ಆಬಗ್ಯೆ, ಸೂರ್ಯೋದಯದಮೊದಲು, ಸೂರ್ಯಾಸ್ತಮಯದೊಳಗೆ ಯಾವಾಗಲಾಗಲಿ ಅಂತಾ ಚರಂಡಿ, ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದು ಯಾವದಕ್ಕೆ ಸೇರಿಯಿರುತ್ತ್ತೋ ಅಂತಾ ಮನೆ ಮುಂತಾದವುಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ್ ಕೊಟ್ಟ ಹನ್ನೆರಡುಗಂಟೆಯತರುವಾಯ ಯಾವದಾದರೂ ಜಮೀನಲ್ಲಿಯೂ, ಕಟ್ಟಡದಲ್ಲಿಯೂ, ಜರೂರಾದಂತಾ ಕುಮಕೀದಾರ್ರು, ಕಾರೇಗಾರ್ರು, ಯಿವರುಗಳುನಿಕೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಲೇಶವೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಿಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಖಾನೆ, ಯಾ ಬಚ್ಚಲುಗುಂಡಿ, ಬಂದೋಬಸ್ತಾಗಿಯೂ ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ, ಈ ಬೈಲಾಗಳ ಜಾರೀಲಿಬಂದ ಮೇಲೆ ಇವುಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಟ್ಟಿದೆಯೆಂತಲಾಗಲಿ ತಿಳಿಯಬಂದಲ್ಲಿ ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು, ಅಂತಾ ಚರಂಡಿ, ಯಾ ಪಾಯಖಾನೆ. ಯಾ ಬಚ್ಚಲುಗುಂಡಿ ಯಿವುಯಾವನಿಗೆ ಸೇರಿರುತವೋ ಅಂತಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್‌ಮಾಡತಕ್ಕದ್ದು; ಆದರೆ ಚರಂಡಿಯಾಗಲಿ ಪಾಯಖಾನೆಯಾಗಲಿ ಬಚ್ಚಲುಗುಂಡಿಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುಂವತೆಯೂ ಈ ಬೈಲಾಗಳ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಡದೇಯೂ ಕಾಣಬಂದರೆ ಪ್ರೆಸೀಡೆಂಟರಾಗಲಿ ಮೇಲೆ ಕಂಡ ಆಫಿಸರಾಗಲಿ ಭೂಮಿಯನ್ನು ಭರ್ತೀಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಖಾನೆ, ಬಚ್ಚಲುಗುಂಡಿ, ಇವುಗಳನ್ನು ತೆಗೆಯುವದರಿಂದಲೂ, ಮುಚ್ಚುವದರಿಂದಲೂ, ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡುಗಳು ಅಂತಾ ಸಂಗತಿಯಲ್ಲಿ ಮೆಂಬರ್‌ಗಳಿಂದ ಇಡಲ್ಪಡತಕ್ಕದ್ದು. ಪರಂತು ಮನೆಯೊಳಗೆ ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಅವಕಾಶ ಕೊಡುವ ಪರ್ಯಂತ ಹಾಗೆ ತನಿಖೀ ನೋಡಲಿಕ್ಕೋಸ್ಕರ ಹಿಂದುಗಳು ಮುಸಲ್ಮಾನರು ಇವರುಗಳ ಹೆಂಗಸರು ಇರತಕ್ಕ ಬಗ್ಗೆ ಕ್ಲುಪ್ತವಾದ ಜನಾನೇಗಳಲ್ಲಾಗಲಿ ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟು ಮಾಡತಕ್ಕದ್ದಲ್ಲವು.

71. ಈ ಬೈಲಾನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟಡ, ಯಾ ಜಮೀನಿನ ಮಾಲೀಕನಿಂದಾಗಲಿ, ಅನುಭವದಾರನಿಂದಾಗಲಿ, ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿ ಯಿದ್ದು ಅಂತಾ ಕೆಲಸವನ್ನು ಅವನು ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷದಲ್ಲಿ, ಹಾಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆವಿಧಿಸಲ್ಪಡಲಿ ವಿಧಿಸಲ್ಪಡದೇ ಯಿರಲಿ ಪರಂತು ಅಂತಾ ಕೆಲಸವನು, ಪ್ರೆಸೀಡೆಂಟರು ಮಾಡಿಸಬಹುದು. ಆ ಬಗ್ಗೆ ಹಿಡಿದ ಲಾಗವಡನ್ನು ಸದರೀ ಕಾಮಗಾರಿ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನು ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಆ ಮೊಬಲಗ್ ವಸೂಲ್ಮಾಡಲ್ಪಡತಕ್ಕದ್ದು.

72. (ಕಾಮಗಾರೀ ಮಾಡಿಸುವದಕ್ಕೆ) ತಪ್ಪಿದ ಮನುಷ್ಯನು, ಕಟ್ಟಡ ಯಾ ಜಮೀನಿನ ಮಾಲೀಕನಾಗಿ ಯಿದ್ದರೆ, ಪ್ರೆಸೀಡೆಂಟರು ಈ ಬಗ್ಗೆ ಜಾಸ್ತೀಯಾಗಿ ಪರಿಹಾರವನ್ನು ಉಂಟುಮಾಡುವ ಉದ್ದಿಶ್ಯ ಅಂತಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ವ್ಯಾಜ್ಯ ಯಾ ನಡವಳಿತ ನಡಿಸಿಯಿರಲಿ ನಡಿಸದೇಯಿರಲಿ, ತತ್ಕಾಲದಲ್ಲಿ ಮಾಲೀಕನಿಂದ ಕೊಡಲ್ಪಡತಕ್ಕ ಲಾಗವಡು ಮೊಬಲಗ್ ಪೂರ್ತಿಯನ್ನಾಗಲಿ ಆ ಪೈಕೀ ಯಷ್ಟರಭಾಗವನ್ನಾಗಲಿ ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಮಾಲೀಕನ ವಶದಲ್ಲಿರತಕ್ಕ ಕಟ್ಟಡವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು. ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂತಾ ಅನುಭವದಾರನ ಬಾಬತು ಚರಸ್ವತ್ತುಗಳ ಜಪ್ತೀಯಿಂದ ಅದು ವಸೂಲ್ಮಾಡಲ್ಪಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ, ಅಂತಾ ಯಾವ ಖರ್ಚಿನ ವಿಷಯದಲ್ಲಾಗಲಿ ತಾನು ಸದರೀ ಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತನ್ನಿಂದ ವಸೂಲ್‌ಮಾಡಲ್ಪಟ್ಟಷ್ಟು ಮಟ್ಟಿಗೆ ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗ್‌ನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕು ಉಂಟಾಗಿರತಕದ್ದು.

73. ಯಾವದಾದರೂ ಕಟ್ಟಡ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಬೈಲಾಗಳಿಂದ ಕಟ್ಟೋಣಾದ ಯಾವ ಲಾಗವಡಗಳಿಗೋಸ್ಕರವಾಗಲಿ, ಯಾವ ಕಟ್ಟಡ ವಗೈರೇಗಾಗಿ ಅಂತಾ ಲಾಗವಡು ಕೊಡಬೇಕಾಗಿರುತ್ತೋ ಆ ಕಟಗಳಿಗೋಸ್ಕರ ತಂನನ್ನು ಕೇಳಿದಾಗ ತನ್ನಿಂದ ಸಲ್ಲಬೇಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ

ಬಾಕೀಯಾದ ತನ್ನಿಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಪರಂತು ಪ್ರೆಸೀಡೆಂಟರು ಆವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿಗೇ ಬಾಬತು ಮೊಬಲಗ್ ಮತ್ತು ಯಾವನಿಗೆ ಅಂತಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು, ಅಷ್ಟ ಹೆಸರು, ಇವುಗಳನ್ನು ವಾಸ್ತವ್ಯವಾಗಿ ಪ್ರಕಟಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗವೇ ಹೋಗುವದಿಲ್ಲವು. ಆದರೆ ಅಂತಾ ಅನುಭವದಾರನನ್ನು ಕೇಳಿದ ಮೊಬಲಗ್ ಹಾಗೆ ಕೇಳಿದ ಕಾಲದಲ್ಲಾಗಲಿ ತರುವಾಯವಾಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಯೆಂಬದಾಗಿ ರುಜುಮಾಡುವ ಭಾರ ಸದರೀ ಅನುಭವದರನನ್ನೇ ಸೇರಿಯಿರುತ್ತದೆ. ಮತ್ತು ಇದರಲ್ಲಿ ಅಡಗಿರುವ ಯಾವ ಅಂಶವೂ ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂತಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡೆದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಭಾಧಕವಾಗುತ್ತದೆಯೆಂದು ಗ್ರಹಿಸ ಕೂಡದು.

74. ಯಾವದಾದರೂ ಕಟ್ಟಡ ಯಾ ಜಮೀನಿನ ಮಾಲೀಕನು, ಪ್ರೆಸೀಡೆಂಟರು ತಾಕೀದ್ ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು. ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಸೆಯಿಂದ ಅಂತಾ ಮಾಲೀಕನಿಗೆ ಬಾಕೀ ಆಗತಕ್ಕ ಬಾಡಿಗೆಯಲ್ಲಿ ವಜಾ ಮಾಡಲ್ಪಡತಕ್ಕದ್ದು.

75. ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟಡ ಯಾ ಜಮೀನ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಯಾವ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ ಅದರ ಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ್ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ ಪ್ರೆಸೀಡೆಂಟರು, ಆ ವಿಷಯ ರುಜುವಾದ ಮೇಲೆ ಅಂತಾ ಕಟ್ಟಡ ಯಾ ಜಮೀನ ವಿಷಯದಲ್ಲಿ ಈ ಬೈಲಾನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾದ ಅಂತಾ ದರೋಬಸ್ತು ಕಾಮಗಾರಿಗಳನ್ನೂ ನೆರವೇರಿಸುವ ಬಗ್ಗೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕ್ಕುಂ ಕೊಡಬಹುದು. ಮತ್ತು ಹುಕ್ಕುಂ ತಾರೀಖು ಲಾಗಾಯತ್ ಎಂಟು ದಿನಗಳು ಕಳೆದ ತರುವಾಯ ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತಿದ್ದರೆ ಹಾಗೆ ನಿರಾಕರಿಸುತಿರುವ ಪ್ರತಿ ದಿನಕ್ಕೂ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು; ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತಿರುವಲ್ಲಿ ಅಂತಾ ಕಾಮಗಾರಿಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಬಹುದಾಗಿದ್ದ ಯಾವ ಜುರ್ಮಾನೆಯಿಂದಲೂ, ಮಾಫ್ ಆಗತಕ್ಕದ್ದು.

76, ಈ ಬೈಲಾ ನಿಬಂಧನೆಗಳು ಜಾರೀಯಲ್ಲಿ ಬರುವ ಕಾಲದಲ್ಲಾಗಲಿ ಆತರುವಾಯವಾಗಲಿ, ಮಾಡಲ್ಪಟ್ಟ, ಇಡಲ್ಪಟ್ಟ ಯಾ ಕಟ್ಟಲ್ಪಟ್ಟ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲ್ವೆಗಳು ನೀರು ನಲ್ಲಿಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನ ಸಂಬಂಧವಾದ ಇತರ ಕಾಮಗಾರೀಗಳು, ಇಂತಾವು ಮೆಂಬರ್‌ಗಳ ಲಾಗವಾಡಿನಿಂದ ಕಲ್ಪಿಸಲ್ಪಡಲಿ, ಯಾ ಇಡಲ್ಪಡಲಿ, ಯಾ ಕಟ್ಟಲ್ಪಡಲಿ, ಅನ್ಯಥಾ ಆಗಲಿ, ಪರಂತು ಅಂತಾದ್ದೂ; ಮತ್ತು ಸದರೀ ಕೆರೇ ವಗೈರೇಗೆ ಸೇರಿದ ಯಾ ಅವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಡಗಳು, ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು, ಇವುಗಳೂ, ಮತ್ತು ಯಾವದಾದರೂ ಪಬ್ಲಿಕ್ ಕೆರೆಗೆ ಸಮೀಪವಾದ (ಸ್ವಂತ ಸ್ವತ್ತು ಅಲ್ಲದೆಯಾಗಲಿ ಸರ್ಕಾರದ ಸ್ವತ್ತಲ್ಲದೆಯಾಗಲಿ ಇರುವ) ಅದಕ್ಕೆ ಸೇರಿದಹಾಗೆ ಇರುವ ಯಾವದಾದರೂ ಜಮೀನ ಇಂತಾದ್ದೂ ಮೆಂಬರ್‌ಗಳ ಅಧಿಕಾರದಲ್ಲಿರತಕ್ಕದ್ದಲ್ಲವೆ ಅವರಿಗೆ ಸೇರಿದವುಗಳಾಗಿರತಕ್ಕವು.

77. ಮೆಂಬರ್‌ಗಳು ನಿವಾಸಿಗಳಿಗೆ ನೀರು ಒದಗಿಸುವದಕ್ಕೋಸ್ಕರವಾಗಲಿ, ಈ ಬೈಲಾ ನಿಬಂಧನೆಗಳಲ್ಲಿ ಕಂಡ ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಲೀ ಇರತಕ್ಕ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಮೋಹರೀಗಳು, ತೂಬಿನ ಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು ಇಂತಾವು ಜಾರೀಯಾಗಿ ನಡೆಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಅಥವಾ ಅವರು, ಅವುಗಳಿಗೆ ಬದಲಾಗಿ, ಅಂತಾ ಇತರ ಕಾಮಗಾರೀಗಳನ್ನು ಮಾಡಿಸಿ ಅವು ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಮತ್ತು ಮೆಂಬರ್‌ಗಳು ಕೊಡಗು ಶೀಮೆಯ ಚೀಫ್ ಕಮಿಷನರವರ ಮಂಜೂರಾತಿಯ ಮೇಲೆ ಆಗಿಂದಾಗ್ಗೆ ಮ್ಯುನಿಸಿಪಲ್ ಸರಹದ್ದುಗಳೊಳಗೆ ನೀರು ತರಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲೀಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು ನೀರು ಕುಂಟೆಗಳು ತೊಟ್ಟಿಗಳು ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರೀಗಳು ಇವುಗಳನ್ನೆಷ್ಟನ್ನಾಗಲಿ ಒದಗಿಸಬಹುದು.

78. ಸೆಕ್ಷರ್ನ 79 ಅನುಸರಿಸಿ ಮೆಂಬರಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು ಅನ್ಯಥಾ ಮೆಂಬರಗಳ ಬಾಬತು ಯಾವದಾದರೂ ನೀರಿನ ಬಗ್ಗೆ ಉದ್ದೇಶಿಸಲ್ಪಟ್ಟ ಯಾ ಕ್ಲುಪ್ತವಾದ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರುತೊಟ್ಟಿ, ಜಲದಾರಿ, ಅಥವಾ ಕಾಲುವೆ, ಇಂತಾದ್ದರಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ, ಅಥವಾ ಇತರ ಜಂತುವು, ಅಥವಾ ತುಪ್ಪಟ, ಬಟ್ಟೆ, ಅಥವಾ ವುಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು, ಜಂತುವಿನ ಚರ್ಮ ತೊಗಲು ಅಥವಾ ಅಸಹ್ಯವಾದ ಯಾ ಉಪದ್ರವಕರವಾದ ಇತರವಸ್ತು ಇಂತಾದ್ದು ಯಾವದನ್ನಾಗಲಿ ತೊಳೆಯುವ, ಯಾ ತೊಳೆಯಿಸುವ; ಅಥವಾ ಅದರಲ್ಲಿ ಯಾವದಾದರೂ ಜಂತುವು ಗ್ರೇವಲ್ ಕಲ್ಲು ಧೂಳು, ಅಥವಾ ಯಾವದಾದರೂ, ಕಚರ, ಕಶ್ಮಲ, ಕಲ್ಮಷ, ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂತಾದ್ದನ್ನು ಹಾಕುವ, ಇರಿಸುವ, ಬಿಸಾಡುವ, ಅಥವಾ ಪ್ರವೇಶಿಸುವಂತೆ ಮಾಡುವ, ಅಥವಾ ಅದರಲ್ಲಿ ಯಾವದಾದರೂ ಕೊಳೆ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು ಚರಂಡಿ, ಯಂತ್ರ ಅಥವಾ ಕಡಾಯಿ, ಇಂತಾದ್ದರ ಬಾಬತು ನೀರು, ಅಥವಾ ತನ್ನದಾಗಿ ಇರುವ ಯಾ ತನ್ನ ಅನುಭವದಲ್ಲಿ ಇರುವ ಯಾವದಾದರೂ ಕಟ್ಟಡದಿಂದಾಗಲಿ, ಭೂಮಿಯಿಂದಾಗಲಿ ಹರಿಯುವ ಅನಾರೋಗ್ಯಕರವಾದ ಯಾ ಅಸಹ್ಯವಾದ ಯಾವದಾದರೂ ದ್ರವಪದಾರ್ಥ ಯಾ ವಸ್ತು ಇಂತಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಯಾ ಅಪ್ಪಣೇ ಕೊಡುವ ಯಾ ಅಂತಾ ಯಾವ ನೀರಾಗಲಿ ಯೆಷ್ಟುಮಾತ್ರವಾದರೂ ಕೊಳೆಯಾಗುವಂತೆ ಯಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

79. ಮೆಂಬರಗಳು ಯಾವ ಪಬ್ಲಿಕ್ ಪ್ರದೇಶವನ್ನಾಗಲಿ ಜನಗಳ ಖಾಸಗತ್ ಸ್ವತ್ತಲ್ಲದ ದೊಡ್ಡ ಕೆರೆಗಳ ಅಥವಾ ಯಾವದಾದರೂ "ರ್ಗ" ಎಂಬ ನದೀ ತೀರದ ಯಾವ ಭಾಗವನ್ನಾಗಲಿ, ಸ್ನಾನ ಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು. ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಒದಗಿಸಬಹುದು. ಅಥವಾ ಪ್ರತ್ಯೇಕವಾಗಿ ಏರ್ಪಡಿಸ ಬಹುದು. ಮತ್ತು ಜಂತುಗಳನ್ನು ತೊಳೆಯುವ ಬಗ್ಯಾಗಲಿ ಬಟ್ಟೆಗಳೊಗೆಯುವ ಬಗ್ಯಾಗಲಿ ಪ್ರಜೆಗಳ ಆರೋಗ್ಯ, ಪಾಕೀಜ್, ಸೌಖ್ಯ, ಇವುಗಳಿಗೆ ಸಂಬಂಧಿಸಿದ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು, ಯಾ ರ್ಗ ಎಂಬ ಪ್ರವಾಹಗಳನ್ನು ಪ್ರತ್ಯೇಕವಾಗಿ ಯೇರ್ಪಡಿಸಲೂ ಬಹುದು.

80. ಆರೋಗ್ಯ ಭಂಗಕಾರಿಯಾಗಿ ಯಾ ನೆರೆಹೊರೆಗೆ ಬಾಧಕವಾಗಿ ತೋರುವ ಯಾವದಾದರೂ ಖಾಸಗತ್ಳ ಕೆರೆಯನ್ನು ಶೋಧಿಸುವಂತೆಯೂ ಅಂತಾ ಯಾವದಾದರೂ ನಿವೇಶನ ಮುಂತಾದದರೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋಗಿಯೂ ಇರುವ ನೀರನ್ನು ಎತ್ತಿಸಿಬಿಡುವಂತೆಯೂ ತೆಗೆಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟೀಸದ್ವಾರಾ, ಯಾವ ನಿವೇಶನ ಮುಂತಾದವುಗಳ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯ್ಯವಾಗಿರತಕ್ಕದ್ದು. ಮತ್ತು ಅಂತಾ ಮಾಲೀಕನು ಅಂತಾ ನೋಟೀಸ್ ಜಾರೀಯಾದ ಲಾಗಾಯತು ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ, ಯಾ ಉಪೇಕ್ಷಿಸಿದರೆ ಪ್ರೆಸೀಡೆಂಟರರೂ, ಅವರ ಆಫೀಸರಗಳೂ, ಕೆಲಸದವರೂ ಪ್ರವೇಶಿಸಿ ತಮಗೆ ಯುಕ್ತತೋರುವ ಪ್ರಕಾರ ಮೇಲೆ ಕಂಡ ವಿಶಿಷ್ಟಾಂಶಗಳಿಗೋಸ್ಕರವಾಗಲಿ ಅಪೈಕೀ ಕೆಲವಕ್ಕೋಸ್ಕರವಾಗಲಿ ಜರೂರಾದ ದರೋಬಸ್ತು ಕಾರ್ಯಗಳನ್ನೂ ಮಾಡಬಹುದು. ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ ಅಂತಾ ನಿವೇಶನ ಮುಂತಾದವುಗಳ ಮಾಲೀಕನು ಕೊಡತಕ್ಕದ್ದಲ್ಲದೆ ಮ್ಯುನಿಸಿಪಾಲಿಟಿಗೆ ಸಲ್ಲತಕ್ಕ ಸಾಲದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

81. ಕೆಟ್ಟ ನೀರು ನಿಂತಿರುವ ಸ್ಥಳವಗೈರೇಗಳು ಯಾವ ಮನುಷ್ಯನ ಸ್ವಂತ ಆಸ್ತಿಯಾಗಿದ್ದರೂ ಅನ್ಯಥಾ ಇದ್ದರೂ ವಾಸಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಯಾವದಾದರೂ ಸ್ವಂತ ಆವರಣದಲ್ಲಿಲ್ಲದ, ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನೂ ಪ್ರೆಸೀಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತೀ ಮಾಡತಕ್ಕದ್ದು. ಅಥವಾ ನೀರು ತೆಗೆಯಿಸಿ ಹಾಕತಕ್ಕದ್ದು.

82. ಈ ಬೈಲಾ ನಿಬಂಧನೆಗಳಿಂದ ಮಾಡಲ್ಪಡತಕ್ಕದೆಂದು ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ, ಮಾಡಿಸುವಲ್ಲಿ ಹಾಗೆ ಮಾಡಿಸುವದ್ದರಿಂದ ಅಟಕಾವು ಮಾಡಲ್ಪಡುವ, ಹಾನಿ ಹೊಂದುವ, ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೇಗೆ ಬದಲಾಗಿ ಮ್ಯುನಿಸಿಪೆಲ್ ಫಂಡಿನಿಂದ ಲಾಗವಡು ಮುಟ್ಟಿಸಿ ಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡೀಗಳು, ನಾಲೇಗಳು, ಇವುಗಳನ್ನು ಮೆಂಬರಗಳು ಒದಗಿಸತಕ್ಕದ್ದು, ಮತ್ತು ಮಾಡತಕ್ಕದ್ದು. ಮತ್ತು ಮೆಂಬರಗಳಿಗೂ, ಅದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ್ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರ್, ನುಕ್ಸಾನ್, ವ ಲಾಗವಾಡ್ ಇವುಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವ್ಯವಸ್ಥೆಯಾಗತಕ್ಕದ್ದು.

83. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆ ಅಥವಾ ಮೇಲ್ಭಾಗ, ಯಾವದಾದರೂ ಬಚ್ಚಲು ಯಾ ಚರಂಡಿ, ಇಂತಾದ್ದು ಮೆಂಬರುಗಳಿಂದ ತೆಗಿಯಿಸಲ್ಪಟ್ಟರೆ ಯಾ ಒಡೆಯಿಸಲ್ಪಟ್ಟರೆ, ಯಾವ ಬಗ್ಗೆ ಅವು ಅಗೆಯಿಸಲ್ಪಟ್ಟವೋ ಆ ಕಾನು

ಗಾರೀಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತೀ ಮಾಡಿಸಿ ತಳವರಸೆಯನ್ನು ಮೇಲ್ಭಾಗವನ್ನು, ಬಚ್ಚಲನ್ನು, ಯಾ ಚರಂಡಿಯನ್ನು ಸರಿಮಾಡಿಸಿ ಅದರಲ್ಲಿ ಬೀಳುವ ಮಣ್ಣನ್ನು ತೆಗೆಸಿ ಹಾಕತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೆಯ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಸ್ಥಳಕ್ಕೆ ಕಟಕಟೆ ಕಟ್ಟಿಸಿ ಕಾವಲು ಇಡಿಸಿ ರಾತ್ರೀ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

84. ಮೆಂಬರುಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು, ಯಾ ಚರಂಡೀಗಳು, ಇಂತಾವುಗಳ ಪೈಕೀ ಯಾವದನ್ನಾಗಲಿ ತಾವು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ್ ಮಾಡಿಸುತ್ತಿರುವಲ್ಲಿ, ನೆರೆ ಹೊರೆ ಮನೆಗಳಿಗೆ ಅಪಾಯ ಬಾರದಂತೆ ಪೋಟೀ ಕೊಟ್ಟು ಬಂದೋಬಸ್ತು ಪಡಿಸಿ ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ, ಬೀದಿಗೆ ಅಡ್ಡವಾಗಿಯಾಗಲಿ, ಅಂಥಾ ಕಾಮಗಾರೀ ನಡೆಯುತ್ತಿರುವಲ್ಲಿ ಸವಾರೀಗಳು, ಬಂಡಿಗಳು, ಇತರ ಯಾನಗಳು, ದನಗಳು, ಯಾ ಕುದುರೆ ಇವುಗಳು ಹೋಗುವ ಮಾರ್ಗವನ್ನು ಅಟಕಾವು ಮಾಡಲಿಕ್ಕೆ ಪ್ರೆಸೀಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು, ಇಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸೀಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಇತರ ಕೆಲಸಗಳು ಇವುಗಳನ್ನು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ್ ಮಾಡುತ್ತಿರುವಲ್ಲಿ ಅವುಗಳ ಬಳಿ ರಾತ್ರೀಹೊತ್ತು ಸಾಕಾದಷ್ಟು ದೀಪಗಳು ಇಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳೀ ಕಾವಲು ಇಡಿಸತಕ್ಕದ್ದು ಮತ್ತು ಪ್ರೆಸೀಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು ಸರಪಣಿಗಳು, ಯಾ ಕಂಭಗಳು, ಇವುಗಳ ಪೈಕೀ ಯಾವದನ್ನಾಗಲಿ, ತೆಗೆಯುವ, ಬದಲಾಯಿಸುವ, ಯಾ ಮತ್ತೊಂದು ಸ್ಥಳಕ್ಕೆ ತೆಗದುಕೊಂಡು ಹೋಗುವ ಯಾವದಾದರೂ ದೀಪವನ್ನು ಆರಿಸಿಬಿಡುವ, ಯಾವ ಮನುಷ್ಯನಾಗಲಿ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪ್ರೆಸೀಡೆಂಟರ ಅಪ್ಪಣೀ ಇಲ್ಲದೆ ಯಾವ ಮನುಷ್ಯನೂ, ಯಾವ ಬೀದಿಯಲ್ಲಿಯೂ ಯಾವ ಕಟ್ಟಡ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ, ಅವನು, ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತ ಯಾ ಹಳ್ಳ ಮುಚ್ಚಿಸಲ್ಪಡುವ ಪರ್ಯಂತ, ಅನ್ಯಥಾ ಬಂದೋಬಸ್ತು ಮಾಡಲ್ಪಡುವ ಪರ್ಯಂತ, ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ, ಯಾ ಹಳ್ಳಗಳಿಗೆ, ಸಾಕಾಗಿರುವ ಮೇರೆ ತಡಿಹಾಕಿಸುವಂತೆಯೂ, ಆವರಣ ಕಟ್ಟಿಸುವಂತೆಯೂ, ಮಾಡತಕ್ಕದಲ್ಲದೇ ರಾತ್ರಿ ಹೊತ್ತು ಅದರಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು; ಮತ್ತು ಅಂತಾ ಅಪ್ಪಣೆ ಇಲ್ಲದೇ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ, ಅಥವಾ ಅಂತಾ ಸಾಮಾನುಗಳು, ಹಳ್ಳಗಳು ಇರುವ ಸ್ಥಳದಲ್ಲಿ ತಡಿಕಟ್ಟಿಸದೇಯಾಗಲಿ, ಆವರಣ ಕಲ್ಪಿಸದೇಯಾಗಲಿ ದೀಪ ಹಚ್ಚದೇಯಾಗಲಿತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಗಿಸಿಕ್ಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೇಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೇಯಾಗಲಿ, ಇರುತ್ತಾನೋ ಅಂತಾ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಪ್ರೆಸೀಡೆಂಟರು ನೋಟಿಸ್ ಕೊಟ್ಟ 24 ಗಂಟೆಯ ಹೊತ್ತಿಗೆ ತರುವಾಯ ಆ ತಕಸೀರ್ ನಡಿಸುತ್ತಿರುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

86. ಸರ್ಕಾರ್ ಜಮೀನಲ್ಲಾಗಲಿ ಜನಗಳ ಸ್ವಂತ ಜಮೀನಲ್ಲಾಗಲಿ ಇರುವ ಯಾವದಾದರೂ ಕಟ್ಟಡ, ಕೆರೆ, ಬಾವಿ, ಯಾ ಹಳ್ಳ, ಯಾ ಇತರ ಪ್ರದೇಶ ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು, ಯಾ ಆವರಣ, ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿ ಇದ್ದಪಕ್ಷಕ್ಕೆ ಪ್ರೆಸೀಡೆಂಟರು ಲಿಖಿತ ರೂಪವಾದ ನೋಟಿಸ್ ದ್ವಾರಾ, ಅದರ ದೆಸೆಯಿಂದ ಅಪಾಯ ವುಂಟಾಗದೇ ಇರುವಂತೆ ಅದು ರಿಪೇರ್‌ಮಾಡಲ್ಪಡತಕ್ಕದ್ದೆಂತಲಾಗಲಿ, ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ, ಆವರಣ ಕಟ್ಟಿಸಲ್ಪಡತಕ್ಕದೆಂತಲಾಗಲಿ, ಸದರೀ ನಿವೇಶನಗಳ ಮಾಲೀಕನಿಗಾದರೂ, ಅನುಭವದಾರನಿಗಾದರೂ, ತಾಕೀಪ್ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಗಂಟೆಯ ಹೊತ್ತಿನೊಳಗೆ ಸದರೀ ತಾಕೀಪ್ ಮಾಡಲ್ಪಟ್ಟ ಪ್ರಕಾರ ನಡಿಸದೇ ನಿರಾಕರಿಸಿದ ಪಕ್ಷಕ್ಕೆ, ಅಥವಾ ಉಪೇಕ್ಷಿಸಿದರೆ, ಅಥವಾ ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿ ಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಆ ಪ್ರಕಾರ ಮಾಡಲಿಕ್ಕೆ ದೇರ್ ಮಾಡುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ಸದರೀ ಕಟ್ಟಡ, ವಗೈರೆಗೆ ರಿಪೇರೀ ಯಾ ಬಂದೋಬಸ್ತು ಮಾಡಲ್ಪಡುವಂತೆ ಯಾ, ಆವರಣ ಕಲ್ಪಿಸಲ್ಪಡುವಂತೆ ಮಾಡುವದು, ಮೇಲೆ ಕಂಡ ಬಂದೋಬಸ್ತು ಅಥವಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತತೋರುವ ಪ್ರಕಾರ ಜರೂರಾದ ಬಂದೋಬಸ್ತು ಅಂಶಗಳನ್ನೂ ಮಾಡುವದು ಪ್ರೆಸೀಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಬಗ್ಯೆ ಹಿಡಿದ ಲಾಗವಡು ಯಿದರಲ್ಲಿ ಮುಂದೆ ವಿಧಿಸಲ್ಪಡುವಪ್ರಕಾರ ವಸೂಲಾಗತಕ್ಕದ್ದು.

4135	ಬಸಂಣಾ, ಲಿಂಗಾಯಿತ್, ಭಿಕ್ಷಾಟಣೆ; ಶಿಕಾರಿಪುರದ ತಾಲ್ಲೂಕು ಜುರುಚಗೊಂಡಿ ವಾಸಸ್ಥ.	ವರ್ನ ಕಂಣು ಸಹಾ ಯಂಣಗೆಂಪು ಬಲದ ಕಪಾಲದಮೇಲೆ ವಂದು ಸಂಣಕಲೆ ಬಲತೋಳಿನ ವಳಬಾಗದಲ್ಲಿ ವಂದು ಸಂಣ ಕರೇಮಚ್ಚೆ ಯಡಭುಜದಲ್ಲಿ ವಳಬಾಗಲ್ಲಿ ಬದಸ್ತೂರು ವಂದು ಮಚ್ಚೆಇಥೆ, ವಯುಸ್ಸು 42 ಅಡಿ 5 ಅಂಗುಲ 6	ಈರಂಣ ತುರ್ಚಗುಂಡಿ.	ಚಾಲ್ತೀ ಇಸವಿ ಜೂನ್ ತಾರೀಖು 28ರಲ್ಲು ಕಳವಿನ ತಕಸೀರಿನ ಗೋಸ್ಕರ ಸಿಕಾರಿಪುರಿ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರು 25 ದಿವಸ ಕಠಿಣಕೈದು ವಿಧಿಸಿದ್ದಾರೆ ಕೇಸ್ ನಂಬರು 24ನೇ ಬಾ॥	23ನೇ ಜೂಲೈ 76ನೇ ಇಸವಿ
4188	ಗಿರಿಯಾ, ವಡ್ಡರ್.	ಕಂಣು ಮತ್ತು ವರ್ನ ಸಹಾಕಪಿಲಾ ಬ	ಶೀಮ ಶೆಟ್ಟಿಹಳ್ಳಿ	ಸರ್ ಮಜಕೂರು ಕೇಸ್ ಸಂಬ	13ನೇ ಆಗಸ್ಟ್ 1876.

ಯಾವಜೈಲ್‌ನಿಂದಖುಲಾಸಿ ಮಾಡಲ್ಪಟ್ಟದ್ದು.	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಶಿವಮೊಗ್ಗಾ.		ಕೂಲಿ, ಶಿಕಾರಿಪುರ ತಾಲ್ಲೂಕು ಶೆಟ್ಟಿಹಳ್ಳಿ	ಲಕಿವಿಮುಂದಗಡೆಯಲ್ಲಿ ವಂದು ಸಂಣ ಕರೇಮಚ್ಚೆ. ಮೊಖದ ಯಡಗಡೇಭಾಗದಲ್ಲಿ 5 ಸಂಣಮಚ್ಚೆಗಳು ಬಲಭುಜದ ಯಲುವಿನ ಮೇಲೆ 5 ಅಂಗುಲ ವುದ್ದ 4 ಅಂಗುಲ ಅಗಲವುಳ್ಳ ವಂದುಕಲೆ, ಬಲತೊಡೆ ಹೊರಭಾಗದಲ್ಲಿ 2 ಅಂಗುಲವುದ್ದ 1 ಅಂಗುಲ ಅಗಲವಾದ ವಂದುಕಲೆಇದೆ, ವಯಸ್ಸು 35 ಅಡಿ 5 ಅಂಗುಲ 1		ರು 31ನೇ ಮೊಕದ್ದೆ ಮಾದಲ್ಲಿ ಕಳವಿನತಕಸೀರಿಗೆ ಜೂಲೈ ತಾರಿಖು 24ರಲ್ಲು ಸಿಕಾರಿಪುರ ತಾಲ್ಲೂಕು 3ನೇ ಕ್ಲಾಸ್ ಮೇಜಸ್ಟ್ರೇಟರು 20 ದಿವಸ ಕೊಣಕೈದು ಮೊಕರರು ಮಾಡಿದರು				P. H. BENSON, M. B., *Superintendent of Jail.*
	4189	ತಿಂಮಾ, ಡಿಟೋ	ವರ್ನ ಕಂಣು ಸಹ ಕಪಿಲಾ ಹಣೇಬಲಗಡೆಲಿ ವಂದು ಗುಂಡಿಯಾದ ಸೊಟ್ಟಕಲೆ ಬಲಕೋಳಿನ ಹಿಂದಗಡೇಲಿ ವಂದುಕಲೆ 2 ಪಕ್ಕೇಮೇಲೂ ವಂದು ದೊಡ್ಡಕಲೆ, ವಯಸ್ಸು 40 ವುನ್ನತ ಅಡಿ 5 ಅಂಗುಲ 2	ಡಿಟೋ	ಡಿಟೋ	ಡಿಟೋ			
ಚಿತ್ರದುರ್ಗ.	79	ಗವೀರಂಗ, ಹೊಸದುರ್ಗತಾಲ್ಲೂಕು ಗಂಗಸಮುದ್ರ; ಬ್ಯಾಡರು; ಕೂಲಿ.	ಕರೇವರ್ಣ, ವುದ್ದಮುಖ, ಯಡಮೊಳಕಾಲು ಮೇಲೆ 3 ಹುಣ್ಣಿನ ಕಲೆಗಳು ಯಿಧೆ, ಎತ್ತರ 5—6.	ಗವಿಯಪ್ಪ, ಹೊಸದುರ್ಗತಾಲ್ಲೂಕು ಗಂಗಸಮುದ್ರ.	ಸರ್ 1876ನೇ ಇಸವಿ ಏಪ್ರೆಲ್ 19ರ ಲಗಾಯತು 4 ತಿಂಗಳು ಕಠಿಣ ಸಜಾ, 10 ರೂಪಾಯಿ ಜುರ್ಮಾನೆ ಕೊಡದಿದ್ದರೆ ಜಾಸ್ತಿ 1 ತಿಂಗಳು ಬದಸೂರ್ ಸಜಾ ಅನುಭವಿಸ ಬೇಕೆಂತಾ ಚಳ್ಳಕೆರೆ ಸ॥ ಅಸಿಸ್ಟೆಂಟ್ ಕಮ್ಮಿಷನರ್.	19ನೇ ಆಗಸ್ಟ್ 1876.		10 ರೂಪಾಯಿ ಜುರ್ಮಾನೆ ವಸೂಲ್ ಬಂದ ಕಾರಣ ಜಾಸ್ತಿ ಸಜಾ ವಜಾ ಆಗಿಯಿಧೆ. ಆಗಸ್ಟ್ ತಾರೀಖು 19 ರಲ್ಲು ಖುಲಾಸೇ ಆಗಿದ್ದಾನೆ.	

353

ಚಿತ್ರದುರ್ಗ.

				ಕೋರ್ಟು ಚಾಲ್ತಿ ಇಸವಿ ಕ್ರಿಮಿನಲ್ ನಂ. 30ನೇ ಮೊಕದ್ದಮೆಯಲ್ಲಿ ಇಂಡ್ಯನ್ ಪೀನಲ್ ಕೋಡ್ 457ನೇ ಸೆಕ್ಷನ್ ಪ್ರಕಾರ.			
230	ಕುಂಟ, ಮಾದಿಗರು, ಜಾತಿ ಕಸಬು ಚಿತ್ರದುರ್ಗ ತಾಲ್ಲೂಕು ಕುರಿಮಳಲು.	ಕರೇವರ್ಣ, ಗುಂಡುಮುಖ, ಜನ್ನುಮೇಲೆ 2 ಕಡೆ 2 ಅಂಗುಲ ಉದ್ದ ಒಂದು ಅಂಗುಲ ಅಗಲವುಳ್ಳ ಹುಣ್ಣಿನ ಕಲೆಗಳು, 2 ಯಿರುಥೆ, ಉದ್ದ 5–3.	ಸಂಜೀವ, ಚಿತ್ರದುರ್ಗ ತಾಲ್ಲೂಕು ಕುರುಮಳಲು	ಚಾಲ್ತಿ ಇಸವೀ ಜುಲೈ ತಾರೀಖು 12 ರ ಲಗಾಯತು 1 ತಿಂಗಳ ಕಠಿಣ ಸಜಾ, 2 ರೂಪಾಯಿ ಜುರ್ಮಾನೆ ಕೊಡದಿದ್ದರೆ ಜಾಸ್ತಿ 10 ದಿವಸ ಬದಸ್ತೂರ್ ಸಜಾ, ಅನುಭವಿಸಬೇಕೆಂದು ಚಳ್ಳಕೆರೆ ಸ॥ ಅ॥ ಕೋರ್ಟು ಸನ 1876ನೇ ಇಸವಿ ಕ್ರಿಮಿನಲ್ ನಂ. 87 ಮೊಕದ್ದಮೆಯಲ್ಲಿ ಇಂ॥ ಪೀ॥ ಕೋ॥ 457ನೇ ಸೆಕ್ಷನ್ ಪ್ರಕಾರ.	ಆಗಸ್ಟ್ 22 76ನೇ ಇಸವಿ.	ಇಲ್ಲ.	ಜುರ್ಮಾನೆ 2 ರೂಪಾಯಿ ವಸೂಲ್ ಬಂದದ್ದರಿಂದ ಆಗಸ್ಟ್ 22ರಲ್ಲು ಖುಲಾಸೆ ಆಗಿದ್ದಾನೆ
287	ಮಾದಿಗರ ಓಬ, ಮಾದಿಗ, ಜಾತಿಕಸಬು ಚಿತ್ರದುರ್ಗ ತಾಲ್ಲೂಕು ವರಕೆರೆ ದೇವರ ಪುರಾ	ಕರೇವರ್ಣ, ಉದ್ದಮುಖ, ನಡುಸನ್ನಿನ ಮೇಲೆ 3 ಬೆಟ್ಟು ಅಗಲ ಉದ್ದ 2 ಅಂಗುಲವುಳ್ಳ ಹುಣ್ಣಿನಕಲೆ ಒಂದು ಯಿಥೆ. ಯಡಮೊಳಕಾಲು ಚಿಪ್ಪಿನಮೇಲೆ ಕಾಶಿನಗಲ 3 ಘಾಯದ ಕಲೆಗಳು ಯಿಥೆ, ಉದ್ದ 5—4.	ರಾಮ ಡಿಟೋ ವರಕೆರೆ ದೇವರ ಪುರ.	ಚಿತ್ರದುರ್ಗ ತಾಲ್ಲೂಕು ಸಬ್ ಡಿವಿಜನ್ ಮೇಜಸ್ಟ್ರೇಟ್ ಕೋರ್ಟು ಸನ ಯಿಲೆ ಕ್ರಿಮಿನಲ್ 124ನೇ ಮೊ॥ಲಿ ಇಂ॥ ಪೀ॥ ಕೋ॥ 379ನೇ ಸೆಕ್ಷನ್ ಮೇರಿಗೆ ಜುಲೈ ತಾ॥ 29ರ ಲಗಾಯಿತು 3 ರೂಪಾಯಿ ಜುಲುಮಾನಾ ಕೊಡದಿದ್ದರೆ 5ದಿವಸ ಸಾದಾ ಕೈದು ಅನುಭವಿಸಬೇಕೆಂತಾ,	3 8 76	ಡಿಟೋ	ಜುರುಮಾನಾ 3 ರೂ ವಸೂಲು ಬರದ್ದರಿಂದ ಸಬಬ್ ಅನುಭವಿಸಿ ಆಗಸ್ಟು ತಾ॥ 3ರಲ್ಲು ಖುಲಾಸೆ ಆಗಿದ್ದಾನೆ.
8	ಭೀಮ, ಲಂಬಾಣಿ, ಕೂಲಿ, ದಾವಣಗೆರೆ ತಾಲ್ಲೂಕು ಕಾಲಿಗೆರೆ.	ಕೆಂಪುವರ್ಣ, ಉದ್ದಮುಖ, ಮುಖದಮೇಲೆ ಮೈಲಿ ಕಲೆಗಳು ಯಿಥೆ; ಯಡಭುಜದ ಮೇಲೆ ಒಂದು ಅಂಗುಲ ಉದ್ದಕ್ಕೆ ಕಾಲು ಅಂಗುಲ ಅಗಲಕ್ಕೆ ಯಿಥೆ, ಉದ್ದ 5—0.	ಗೋರಯನಾಕ ದಾವಣಗೆರೆ ತಾಲ್ಲೂಕು ಕಾಲಿಗೆರೆ.	ಡಿಪ್ಯುಟಿ ಕಮ್ಮಿಷನರ್ ಕೋರ್ಟು ಸನ 1876ನೇ ಇಸವಿ ಕ್ರಿಮಿನಲ್ ನಂ॥ 3ನೇ ಮೊ॥ಲಿ ಇಂ॥ ಪೀ॥ ಕೋ॥ 392ನೇ ಸೆಕ್ಷನ್ ಮೇರಿಗೆ ಯಿದೆ ಇಸವಿ ಫೆಬ್ರವರೀ 4ರ ಲಾಗಾಯತು 6ತಿಂಗಳು ಕಠಿಣ ಸಜಾ ಅನುಭವಿಸಬೇಕೆಂತಾ,	4—8—76		

354

ಯಾವಜೆಲ್‌ನಿಂದಖುಲ ಲಾಸೇಮಾಡಲ್ಪಟ್ಟದು	ಜೈಲ್‌ರಿಜಿಸ್ಟರ್‌ನಲ್ಲಿಜ ನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತು ವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟುದಫಾಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ರಿಂಟೆಡೆಂಟ್‌ರವರದಸ್ತಖತ್ತು
1.	2	3	4	5	6	7	8	9	10
ಚಿತ್ರದುರ್ಗ.	286	ದಾದೆಸಾಬ್, ಉರ್ಫೆ ಮಹಮ್ಮದ್ ಹುಶೇನ್, ಮುಸಲ್‌ಮಾನ್, ಜಿರಾಯತು ಚಿತ್ರದುರ್ಗ ತಾಲ್ಲೂಕು ಹಳೇಕೆರೆ	ಯಣಗೆಂಪು, ವೃದ್ಧಮುಖ, ಬಲಪಾದದ ಮೇಲೆ 2 ಅಂಗುಲವುದ್ದ ಕಾಲು ಅಂಗುಲ ಅಗಲವುಳ್ಳ ನಾರಹುಣ್ಣಿನ ಒಂದು ಕಲೆ ಯಿಧೆ, ವೃದ್ಧ 5—8.	ನದಿಮುಸಾಬ್ ಡಿಟೋ ಪಿಳ್ಳೇಕೆರೆ.	ಚಿತ್ರದುರ್ಗ ತಾಲ್ಲೂಕು ಸಬ್ ಡಿವಿಜನ್ ಮೇಜಸ್ಟ್ರೇಟ್ ಕೋ॥ ಸರ್ ಯಿಲೆ ಕ್ರಿಮಿನಲ್ 45ನೇ ಮೊ॥ಲಿ ಇ॥ ಪೆ॥ ಕೋ॥ 379ನೇ ಸೆಕ್ಷನ್ ಪ್ರಕಾರ ಆಗಸ್ಟು 1ರ, ಲಾಗಾಯತು 3 ದಿನ ಕಠಿಣಸಜಾ 15 ರೂಪಾಯಿ ಕೊಡದಿದ್ದರೆ ಜಾಸ್ತಿ 3 ದಿನಸಜಾ ಅನುಭವಿಸಬೇಕೆಂತಾ,	4—8—76		ಜುಲುಮಾನಾ 15 ರೂಪಾಯಿ ವಸೂಲು ಬಂದಕಾರಣ ಜಾಸ್ತಿ ಸಜ ವಜಾಮಾಡಿ ಖಾಸ ಸಜಾ ಪೂರೈಸಿ ಆಗಸ್ಟು 4ರಲ್ಲು ಕುಲಾಶೆ ಆಗಿಯಿದ್ದಾನೆ.	S. Venkat Vardaiengar, *Officer in charge of Jail.*
	219	ರಾಮಾಜಿ, ಲಂಬಾಣಿ, ಕೂಲಿ ಬೂದಿಹಾಳ್ ತಾಲ್ಲೂಕು ಮಾಳಪ್ಪನಹಳ್ಳಿ.	ಯಣೆಕೆಂಪು, ವೃದ್ಧಮುಖ, ಯಡಮೊಳಕಾಲು ಗೆಂಣಿನ ಹತ್ತರ ದೊಡ್ಡಾಣೆ ಅಗಲ ಒಂದು ಹುಣ್ಣಿನ ಕಲೆ ಯಿಧೆ, ಮೊಳಕಾಲು ಮೇಲೆ ಕಾಶಿನಗಲ ಒಂದು ಹುಣ್ಣಿನ ಕಲೆ ಯಿಧೆ, ಬೀತೊಡೆಮೇಲೆ ಅರ್ಧಾಣೆ ಅಗಲ ಒಂದು ಹುಣ್ಣಿನಕಲೆ ಯಿಧೆ. ವೃದ್ಧ 5—10.	ಜಿವಲ, ಬೂದಿಹಾಳು ತಾಲ್ಲೂಕು ಮಾಳಪ್ಪನ ಹಳ್ಳಿ.	ಹಿರಿಯೂರು ತಾಲ್ಲೂಕು ಸ॥ ಮೇಜಸ್ಟ್ರೇಟ್ ಕೋ॥ ಸರ್ ಯಿಲೆ ಕ್ರಿಮಿನಲ್ 44ನೇ ಮೊ॥ಲಿ ಇ॥ ಪೆ॥ ಕೋ॥ 379ನೇ ಸೆಕ್ಷನ್ ಮೇರಿಗೆ ಜೂಲೈ 6 ಲಾಗಾಯತು 1 ತಿಂಗಳು ಕಠಿಣಸಜಾ ಅನುಭವಿಸಬೇಕೆಂತಾ,	5 8 76		ಆಗಸ್ಟು ತಾ॥ 6ರಲ್ಲು ಭಾನುವಾರ ಆದ್ದರಿಂದ ಆಗಸ್ಟು 5ನೆ ಸಾಯಿಂಕಾಲಕ್ಕೆ ಕುಲಾಸೆ ಆಗಿದ್ದಾನೆ.	
	241	ವಿರುಪಾಕ್ಷ, ಕೋಮಟಿ, ವ್ಯಾಪಾರ, ಕಣಕುಪ್ಪಾ ತಾಲ್ಲೂಕು ಬಿಳಜೋಡು.	ಕರೀವರ್ನ, ವೃದ್ಧಮೊಖ, ಬಲಕಂಣು ಕುರುಡು, ಯಡಕೈಯರ್ರೆಟ್ಟೆ ಮುರಮುಇ ವೃದ್ಧ 5—3	ನರಸಪ್ಪ ಕಣಕುಪ್ಪಾ ತಾಲ್ಲೂಕು ಬಿಳಜೋಡಿ	ಕಣಕುಪ್ಪಾ ತಾಲ್ಲೂಕು ಕೋ॥ ಸರ್ 1876ನೇ ಇಸವಿ ಕ್ರಿಮಿನಲ್ 11ನೇ ಮೊ॥ಲಿ ಇ॥ ಪೆ॥ ಕೋ॥ 379ನೇ ಸೆಕ್ಷನ್ ಮೇರಿಗೆ ಜೂಲೈ ತಾರೀಖು 15ರ ಲಾಗಾಯತು 20ದಿವಸ ಕಠಿಣಸಜಾ ಅನುಭವಿಸಬೇಕೆಂತಾ,	4 8 76	ವಂದುದಫಾ	ಯಿವನುಯ ಠಜಾವತ್ತಿನ ಸಜಾ ಅನುಭವಿಸಿದವನಾದಕಾರಣ ಜು॥ ಕ॥ ಸಾ॥ ಸರಕಿಲರ್ ಹುಕುಂಅನುಸರಿಸಿಕುಲಾಸೆ ತಾರೀಖಿಗೆ 3 ದಿವಸ ಮುಂಚಿತವಾಗಿ ಪೋಲೀಸಿನವರ ಮಾರೀಫತ್ತು ಕಳುಹಿಸಿಕೊ	

								ಟ್ಟು ಅವರ ಮಾರಿಫತು ಆಗಸ್ಟು ತಾರಿಖು 4ಲ್ಲು ಖುಲಾಸೇ ಆಗಿದ್ದಾನೆ.	
ಚಿತ್ರದುರ್ಗ.	130	ದಾಸರತಿಮ್ಮ, ತೆಲುಗುಬಣಜಿಗರ, ಬಿಕ್ಷಗೇ ಹೊನ್ನಾಳಿ ತಾಲ್ಲೂಕು ನ್ಯಾಮತಿ.	ಕೆಂಪ್ರವರ್ಣ, ವೃದ್ಧಮೊಖ, ಯೆಡಗಾಂಡಿಲಿ ಕಾಶಿನಗಲ ಸುಟ್ಟಕಲೆ ವಂದುಇಧೆ, ಹುಳುಕುಮುಕ, ಬಲತೊಡೆಹಿಂದುಗಡೆ ಅರ್ಧಾಣೆಅಗಲ ವಂದು ದುಗ್ಗಾಣಿಅಗಲ ವಂದು ಸಣ್ಣ ಸುಟ್ಟುಕಲೆಗಳುಇಧೆ,	ವೆಂಕಟ ಹೊನ್ನಾಳಿ ತಾಲ್ಲೂಕು ನ್ಯಾಮತಿ.	ಡಿ॥ ಮ್ಯಾ॥ ಕೋ॥ ಸರ್ 1875ನೇ ಇಸವಿ ಕ್ರಿಮಿನಲ್ ನಂ॥ 39ನೇ ಮೊ॥ಲಿ ಇಂ॥ ಪೆ॥ ಕೋ॥ 379ನೇ ಸೆಕ್ಷರ್ ಮೇರಿಗೆ 75ನೇ ಆಗಸ್ಟು ತಾ॥ 5ರ ಲಾಗಾಯತು ವಂದು ವರುಷ ಕಠಿಣಸಜಾ ಅನುಭವಿಸಬೇಕೆಂತಾ,	5-8-76			
ಕೊಡಗು.	662	ರಸೂಲ್‌ಸಾಬಿ, ಮುಸಲ್ಮಾನ್ ರೈಯ್ಯತ್ ಹಾಸನ ಡಿ॥ ಅರಕಲ್‌ಗೂಡು ತಾಲ್ಲೂಕು	ಮೊಖದಲ್ಲಿ ಸಿಡುಬಿನಕಲೆಗಳು ತೆಳ್ಳಗೆಯಿಧೆ ಬಲದ ಮೊಲೆಗೊಂಡೆಗೆ 3 ಯಿಂಚುಕೆಳಗೆ 1ಕಲೆಯೂ ಹೊಕ್ಕಳದಬಳಿ 1ಕಲೆಯೂಬಲದಕೈಅರ್ಕಾಳದ ಕೆಳಗೆ ಸಣ್ಣದೊಂದುಮಚ್ಚೆಯು ಸದರೀ ಕೈ ತೋಳಿನ ಹಿಂದೆ 1 ಕಲೆಯೂ ಯಡದಕೈ ತೋಳಿನ ಒಳಗಡೆ 1 ವೃದ್ಧವಾದಕಲೆಯೂ ಯಡದಕಾಲ್ ಮಂಡೀಮೇಲೆ 1 ಕಲೆಯೂ ಅದರಿಂದ 1 ಯಿಂಚು ಕೆಳಗಡೆ 1 ಕಲೆಯೂ ಸ್ವಹ ಇಧೆ. ಯಣ್ಣೆಕಪ್ಪುವರ್ಣ, ಅಡಿ 5 ಯಿಂಚು 8ರ ಎತ್ತರಯಿದಾನೆ.	ಜಮಾಲ್‌ಸಾಬಿ.	ದುರುಪಯೋಗ ತಪ್ಪಿತ ಮಾಡಿದ್ದಕ್ಕೋಸ್ಕರ ಕೊಡಗು ಫ॥ ಅ॥ ಸೂಪರಿಂಟೆಂಡೆಂಟ್ ಸಾಹೇಬರವರ ಸರ್ 1875ನೇ ಇಸವಿ ಕ್ರಿಮಿನಲ್ ಕೇಸ್ ನಂಬರು 27ರ ಫೈಸಲ್‌ಮೇರೆ ಸರ್ 1875ನೇ ಇಸವಿ ಫೆಬ್ರುವರೀ ತಾ॥ 23ರಿಂದ 18 ತಿಂಗಳು ಕಠಿಣ ಕೈದು.	23ನೇಆಗಸ್ಟು ಸರ್ 1876ನೇ ಇಸವಿ	ಇಲ್ಲ.		E. SHAW, *Superintendent, in charge of Jail.*

ಮೈಸೂರ ಗೆಜೆಟ್.

ನಂ. 39 ಸರ್ಕಾರದಿಂದ ಛಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಶಪ್ಟೆಂಬರ ತಾ॥ 30, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	253—256
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್‌ಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. ..	463—470
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 2ನೇ ಶಪ್ಟೆಂಬರ 1876.

ನಂ. 206.

ಬೆಂಗಳೂರು ಲಷ್ಕರ್ ಮ್ಯುನಿಸಿಪಾಲಿಟಿ ಬಗ್ಯಾಗಿ ಏರ್ಪಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮ್ಮಿಷನರವರಿಂದ ಮಂಜೂರು ಮಾಡಲ್ಪಟ್ಟ ಸರ್ವರಿಗೂ ತಿಳಿಯುವ ಬಗ್ಯೆ ಛಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಷ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಚದರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ವೊಂದು ಹಂಗಾಮೀ ಚಪ್ಪರವನ್ನು ಕಟ್ಟಸುವ

ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ವೊಂದು ರೂಪಾಯಿಯನ್ನು ಕೊಡತಕ್ಕದ್ದು, ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಚದರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಚಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದೆಸೇಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 219. ತಾರೀಖು 18ನೇ ಶಪ್ಟಂಬರ 1876.

ಬೆಂಗಳೂರು ಷಹರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜಾರೀಯಾಗತಕ್ಕ ಬಗ್ಯೆ, ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಮಂಜೂರ್ ಮಾಡಲ್ಪಟ್ಟವೆ:-

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದಫನ ಭೂಮಿಯಲ್ಲಾಗಲಿ; ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾಫಿನಯಾನೆ ಚಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದಫನ ಮಾಡಕೂಡದು, ಯಾ ದಫನ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದಫನ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದಫನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ; ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ; ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲಕ ಭೂಮಿಯೊಳಗಾಗಲಿ; ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲಕ ಮಾಡುವಲ್ಲಿ ಯಾ ಮಾಡಿಸುವಲ್ಲಿ ಆದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚಿಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29.—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲಕ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲಕ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲಕ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದಫನ ಯಾ ಜಲಕ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜಲಕ ಯಾ ದಫನ ಭೂಮಿಗಳ ಟ್ರಸ್ಟೀಗಳಾಗಲಿ ಅಥವಾ ಅವುಗಳ ಚಾರ್ಜವುಳ್ಳ ಇತರ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ

ಮಿರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಹ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿ ದಿನಕ್ಕೂ ಯೆರಡು ರೂಪಾಯಿಗಳಿಗೆ ಮಿರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 230. ತಾರೀಖು 22ನೇ ಶಪ್ಟಂಬರ 1876.

ಸ 1869ನೇ ಇಸವಿ ಯೇಪ್ರೆಲ್ 30ನೇ ಮರ್ಕುಂ 83ನೇ ನಂಬರ ಬಾಬತು ಇಂಡ್ಯ ಗವರ್ನಮೆಂಟ ಫಾರಿ ಇಲಾಖೆಯವರ ಇಸ್ತಿಹಾರನಾಮೆ ದೆಸೇಯಿಂದ ಮೈಸೂರು ಸೀಮೆಗೆ ಜಾರೀ ಮಾಡಲ್ಪಟ್ಟ 1868ನೇ ಇಸವಿ ಮುಂಬೈ ಆಕ್ಟಿನ 17ನೇ ಸೆಕ್ಷಹ 2ನೇ ರೂಲ್ ನಿಬಂಧನೆಗಳನುಸಾರವಾಗಿ "ಮಿನಿಮುಂಯೇರಿಯ" ಅಂದರೆ ಕಮ್ಮಿ ಬೀಜವರಿಯು ಈ ಕೆಳಗೆ ನಮೂದಿಸಲ್ಪಟ್ಟಿರುವ ಪ್ರಕಾರ ನಿಷ್ಕರ್ಷೆ ಮಾಡಲ್ಪಟ್ಟಿರುತ್ತೆ. ಸಿವಿಲ್ ಕೋರ್ಟಿನ, ವೊಂದು ಡಿಕ್ರಿ ಅಮಲ್‌ಜಾರೀ ಮಾಡುವಲ್ಲಿ ಸದರೀ ಮೇರೆ ಗೊತ್ತಾದ ಬೀಜವರಿ ಗಿಂತ ಕಮ್ಮಿಯಾಗಿ ವೊಂದು ಸರ್ವೆ ನಂಬರ ಜಮಿನಿಗೆ ಸಬ್ ಡಿವಿಜನ ಅಂದರೆ ವೊಳಭಾಗವು ಮಾಡಲ್ಪಡಕೂಡದು.

		ಯಕರೆ—ಗುಂಟೆ			ಯಕರೆ—ಗುಂಟೆ			ಯಕರೆ—ಗುಂಟೆ	
ಖುಷ್ಕಿ ಜಮೀನು	3	0	ತರೀ ಜಮೀನು	0	20	ಬಾಗಾಯಿತು ಜಮೀನ	0	10	

ನಂ. 231. ತಾರೀಖು 22ನೇ ಸೆಪ್ಟಂಬರ 1876.

ಇದರಿಂದ ಸರ್ವರಿಗೂ ತಿಳಿಯತಕ್ಕ ಬಗ್ಯೆ ಫಾಯಿಷ್ ಮಾಡುವದೇನಂದರೆ,—1876ನೇ ಇಸವೀ ಅಕ್ಟೋಬರ ಗುರ್ರೇ ತಾರೀಖು ಲಗಾಯಿತು ವ ಆತರುವಾಯ ಯುರೋಪ ವಗೈರೇ ಪ್ರದೇಶಗಳಿಂದ "ಇಂಡ್ಯ ಭಾಂಗಿ ಟಪ್ಪಾಲ್" ದ್ವಾರಾ, ಕವರಗಳಲ್ಲಾಗಲಿ (ಪೆಟ್ಟಿಗೆ) ಕೇಸಗಳಲ್ಲಾಗಲಿ, ಯಲ್ಲ ಕಡೆಯಲ್ಲಿಯೂ ಬಂದ ಮಾಡಲ್ಪಟ್ಟು ಬರುವ ವಸ್ತು ಮೈಸೂರು ಶೀಮೆಯ ಪೈಕಿ ದಿಗರಸ್ಥಳಕ್ಕೆ ಮೇಲ್ವಿಳಾಸ ಬರಿಯಲ್ಪಟ್ಟ ಭಾಂಗಿಗಳಿಗೆ ಸ 1873ನೇ ಇಸವೀ ಮಾರ್ಚಿ 24ನೇ ಮರ್ಕುಂ 321ನೇ ನಂಬರ ಚೀಫ್ ಕಮ್ಮಿಷನ್ನರವರ ಇಸ್ತಿಹಾರಿನಲ್ಲಿ ಫಾಯಿಷ್ ಮಾಡಲ್ಪಟ್ಟ ರೂಲ್ಸ ಅನುಸರಿಸಿ ಭಾಂಗಿಗಳಿಗಾಗಿ ವಿಧಿಸಲ್ಪಟ್ಟ ಹಾಸಲ್ ಪೈಕಿ ಅರ್ಧ ಹಾಸಲು ಕಟ್ಟಲ್ಪಡುತ್ತಲ್ಲದೆ ಹರವೋಜಸ್ಟೀ ಪೋಸ್ಟ ಆಫೀಸಗಳ ದ್ವಾರಾ ರವಾನೆ ಆಗತಕ್ಕ ಬಗ್ಯೆ ಈ ಶೀಮೆಯ ದಿಗರ ಸ್ಥಳಗಳಲ್ಲಿ ತೆಗದುಕ್ಕೊಳ್ಳಲ್ಪಡುವ ಭಾಂಗಿಗಳ ಮೇಲೂ ಅದೇ ದರದ ಪ್ರಕಾರ ಹಾಸಲ್ ಕಟ್ಟಲ್ಪಡುವದು.

ನಂ. 232. ತಾರೀಖು 25ನೇ ಶಪ್ಟಂಬರ 1876.

2ನೇ ಕ್ಲಾಸ ಅಸಿಸ್ಟೆಂಟ ಕಮ್ಮಿಷನರ ಕೇಪ್ಟನ ಮಾಲ್ಟಬಿಯವರು ತಾವು ಫರಲೋ ರಜಾದಿಂದ ವಾಪಸು ಬಂದ ಸಂಗತಿಯನ್ನು ಕುರಿತು ಮುಂಬಾಯಿಯಲ್ಲಿ 1876ನೇ ಇಸವಿ ಶಪ್ಟಂಬರ 19ನೇ ತಾರೀಖಿನಲ್ಲು, ಬೆಂಗಳೂರಲ್ಲಿ 23ನೇ ತಾರೀಖಿನಲ್ಲು ರಿಪೋರ್ಟು ಮಾಡಿದರು.

ಕೆಪ್ಟನ ಮಾಲ್ಟಬಿಯವರು ಹಂಗಾಮಿಯಾಗಿ ಬೆಂಗಳೂರು ಡಿಸ್ಟ್ರಿಕ್ಟಿಗೆ ದಾಖಲ್ಮಾಡಲ್ಪಟ್ಟಿರುತ್ತಾರೆ.

ನಂ. 233. ತಾರೀಖು 26ನೇ ಶಪ್ಟಂಬರ 1876.

ಸ 1876ನೇ ಇಸವಿ ಶಪ್ಟಂಬರ 15ನೇ ಮರ್ಕುಂ 222ನೇ ನಂಬರ ಇಸ್ತಿಹಾರ ಅನುಸರಿಸಿ, ರಜಾದಮೇಲೆ ಇರುವ ಮೇಸ್ಟರ ಲಾರೆನ್ಸಿಯವರ ಗೈರ ಹಾಜರೀಯಲ್ಲಿ, ಬೆಂಗಳೂರು ಡಿಸ್ಟ್ರಿಕ್ಟು 3ನೇ ನಂಬರ ಸರ್ಕಲ್ ಮುನಸೀಫ್ ಕೋರ್ಟು ಚಾರ್ಜ ಸಹಾ ತೆಗದುಕ್ಕೊಳ್ಳುವಂತೆ ಯಲಹಂಕದ 2ನೇ ನಂಬರ ಸರ್ಕಲ್ ಮುನಸೀಫರನ್ನು ಚೀಫ್ ಕಮ್ಮಿಷನರ ಸಾಹೇಬರವರು ನೇಮಕರ್ಮಾಡುತ್ತಾರೆ.

ನಂ. 234. ತಾರೀಖು 27ನೇ ಶಪ್ಟಂಬರ 1876.

ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ಪೂರ್ಣಯ್ಯನವರಿಗೆ 1876ನೇ ಇಸವಿ ಶಪ್ಟಂಬರ 15ನೇ ಮರ್ಕುಂ ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 235. ತಾರೀಖು 28ನೇ ಶಪ್ಟಂಬರ 1876.

ಅಸಿಸ್ಟೆಂಟ ಕಮ್ಮಿಷನರ ಕೆಪ್ಟನ ಮಾಲ್ಟಬಿಯವರಿಗೆ 1872ನೇ ಇಸವಿ 10ನೇ ನಂಬರ ಆಕ್ಟಾದ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 19 ವ 28ನೇ ಸೆಕಷನಗಳ ನಿಬಂಧನೆಗಳನುಸರಿಸಿ ಫಸ್ಟ ಕ್ಲಾಸ ಮೇಜಸ್ಟ್ರೇಟ ಅಧಿಕಾರಗಳೂ, ಡಿಸ್ಟ್ರಿಕ್ಟಿನ ಪೈಕಿ ವೊಂದು ಡಿವಿಜನ ಮ್ಯಾಜಿಸ್ಟ್ರೇಟರ ಅಧಿಕಾರಗಳೂ, 29ನೇ ಸೆಕಷನ್ನಲ್ಲಿ ನಮೂದಾಗಿರುವ ಅಧಿಕಾರಗಳೂ ಕೊಡಲ್ಪಟ್ಟಿವೆ.

ನಂ. 256. ತಾರೀಖು 28ನೇ ಶೆಪ್ಟಂಬರ 1876.

ಡಾಕ್ಟರ ಫಿಟಿಸ್‌ಜರಲ್ಡ್ ಯವರು ಮೈಸೂರು ವ ಸೀಡೆಡ್ ಡಿಸ್ಟ್ರಿಕ್ಟುಗಳ ಇಂಡ್ಯನ ಮೆಡಿಕಲ್ ಇಲಾಖಾ ಡಿಪ್ಯುಟಿ ಸರ್ಜನ ಜನರಲ್‌ಯವರ ಆಫಿಸ್ ಚಾರ್ಜನ್ನು ಡಾಕ್ಟರ ಆಸ್‌ವಾಲ್ಡ್ ಯವರಿಂದ 1876ನೇ ಇಸವಿ ಶಪ್ಟಂಬರ 27ನೇ ಮರ್ಕುಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕೊಂಡರು.

"ಬಮೋಜೀಬ ಹುಕುಂ,"

T. CLARKE,
Offg. Secretary.

ಕೊಡಗು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 15ನೇ ಶಪ್ಟಂಬರ 1876.

ಈ ಕೆಳಗೆ ಬರುವ ಮ್ಯುನಿಸಿಪಲ್ ಬೈಲಾ ನಿಬಂಧನೆಯು ವೀರರಾಜೇಂದ್ರ ಪೇಟೆಯಲ್ಲಿ ಚಾಲ್ತೀ ಇಸವಿಯಲ್ಲಿ ಮಾತ್ರ ಜಾರೀಯಲ್ಲಿರುವ ಹಾಗೆ ಇದನ್ನು ಚೀಪ್ ಕಮ್ಮಿಷನ್ನರ ಸಾಹೆಬರವರು ಮಂಜೂರು ಮಾಡಿರುತ್ತಾರೆ.

ಮ್ಯುನಿಸಿಪಲ್ ಸರಹದ್ದಿನ ವಳಕ್ಕೆ ವಿಕ್ರಯಕ್ಕಾಗಿ ತರಲ್ಪಡುವ ಪ್ರತಿ ಯತ್ತಿಗೂ, ಆಕಳಿಗೂ, ಯಾ ಎಮ್ಮೆಕೋಣಕ್ಕೂ ವೊಂದು ಆಣೆ ತೆರಿಗೆ ವಸೂಲ್ ಮಾಡಲ್ಪಡತಕ್ಕದು.

"ಬಮೋಜೀಬ ಹುಕುಂ."

T. CLARKE,
Offg. Secretary.

ಇಂಡ್ಯ ಗವರ್ನಮೆಂಟಿನವರಿಂದ ಕೊಡಲ್ಪಟ್ಟ ಇಸ್ತಿಹಾರನಾಮೆಗಳು.

ರೆವಿನ್ಯು ಅಗ್ರಿಕಲ್ಚರ ವ ಕಾಮರ್ಸ ಇಲಾಖಾ.

ಇಸ್ತಿಹಾರ ನಾಮೆಗಳು.

ಫಾರಿಸ್ಟ್ ಇಲಾಖಾ.

ತಾರೀಖು 8ನೇ ಶಪ್ಟಂಬರ 1876 ಮೊಕ್ಕಾಂ ಸಿಂಲಾ.

ನಂ. 893—ಯಿದರಡಿ ಬರುವ ಆಫಿಸರಗಳು 1876ನೇ ಇಸವಿ ಮೇ ಗುರ್ರೇ ತಾರೀಖು ಲಗಾಯತು ಬಡತೀ ಮಾಡಲ್ಪಟ್ಟಿರುತ್ತಾರೆ. * * *

ಮೈಸೂರು ಫಾರೆಸ್ಟು ಸಬ್ ಅಸಿಸ್ಟೆಂಟ ಕನ್ಸರ್ವೇಟರ ಮಿಸ್ಟರ ಕಿಂಗಯವರು 3ನೇ ಗ್ರೇಡ ಅಸಿಸ್ಟೆಂಟ ಕನ್ಸರ್ವೇಟರಾಗಿರತಕ್ಕದ್ದು.

ಕೊಡಗು ಫಾರೆಸ್ಟು ಸಬ್ ಅಸಿಸ್ಟೆಂಟ ಕನ್ಸರ್ವೇಟರ ಮಿಸ್ಟರ ರಿಂಗಯವರು 3ನೇ ಗ್ರೇಡ ಅಸಿಸ್ಟೆಂಟ ಕನ್ಸರ್ವೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದು.

A. O. HUME,
Secretary to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಸ್ ಆದ್ದು.

ಬೆಂಗಳೂರು, ಶನಿವಾರ, ಶಪ್ಟಂಬರ್ ತಾ॥ 30, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮಿಶ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 29ನೇ ಶಪ್ಟಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಶ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಸ್ಟ್ರೂಪ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೪೯	ಕೃಷ್ಣರಾವ್ ..	ಮಹದೇವರಾವ್ ವಗೈರೆ ..	೩೦ನೇ ಶಪ್ಟಂಬರ್
ಕೊ. ಸ್ಪಿ. ಅ. ೭	ನಾರಣೈಯ ..	ನಾಗೈಯನ ಹೆಂಡತಿ ಕುಪ್ಪಮ್ಮ ..	ಡಿಟೋ
ಕೋ. ಜು. ಅ. ಕೋ. ರಿ. ಕೇ. ನಂ. ೩	ಕೆ. ವಸಂತೈಯ ..	ನಂಜುಂಡೈಯ ..	ಡಿಟೋ
ಕ್ರಿ. ಪಿಟಿಷನ್ ೨೬	ದೊಡ್ಡಮಲ್ಲೈಯ ವಗೈರೆ ..	... ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಯಸ್ಕ್ವಯರ್ ..	ನರಶಿಹ್ಮಮೇಸ್ತ್ರೀ ವಗೈರೆ ..	೧ನೇ ಅಕ್ಟೋಬರ್
ಕೊ. ಕ್ರಿ. ಪಿ. ೩	ಕೈದಿ ಜೇಮುಸರಸಲ್ ..	.. ..	ಡಿಟೋ
ಸ್ಪಿ. ಅ. ೫೬	ವೆಂಕಟರಾವ್ ..	ರಾಮೈಯ ...	೫ನೇ ಡಿಟೋ
ಸ್ಮಾ. ರಿ. ನಂ. ೫	ಮಾಸೂಮಿಯ್ಯಾ ವಗೈರೆ ..	ಮುಸ್ತಫಖಾ ..	ಡಿಟೋ
ಸ್ಪಿ. ಅ. ೫೭	ಮಲ್ಲಯ್ಯಾ ..	ಮರಿದೇವೇಗೌಡ ..	೭ನೇ ಡಿಟೋ
ಸ್ಪಿ. ಅ. ೫೮	ರಾಮಣ್ಣ ..	ಜವರಾನಾಯಕ ವಗೈರೆ ..	ಡಿಟೋ
ಕ್ರಿ. ಅ. ೫೭	ಕೈದಿ ಚವಡಾ ..	.. ..	ಡಿಟೋ
ಸ್ಪಿ. ಅ. ೫೯	ತಿಮ್ಮಾ ವಗೈರೆ ..	ಬೆಸ್ತರ ದಾಸೀ ವಗೈರೆ ..	೧೦ನೇ ಡಿಟೋ
ಸ್ಪಿ. ಅ. ೬೦	ದೊಡ್ಡಅಜ್ಜೈಯ ..	ಕಪ್ಪೈಯ ..	ಡಿಟೋ
ಸ್ಪಿ. ಅ. ೫೨	ಗೋಪಾಲೈಯಾ ವಗೈರೆ ..	ಪುಜನೀ ಮರುಳೈಯಾ ವಗೈರೆ ..	೧೯ನೇ ಡಿಟೋ

J. D. GORDON,
Judl. Commr.

ಸ್ಟೇಟೆ ವ ಡಿಸ್ಟ್ರಿಕ್ಟು ಫಾರೆಸ್ಟು ರೆವಿನ್ಯೂ ವಿಷಯ.

ಸರ್ಕ್ಯೂಲರ್ ನಂಬರ್ 1292, ತಾರೀಖು 28ನೇ ಶಪ್ಟಂಬರ್ 1876.

ಡೆಪ್ಯೂಟಿ ಕಮ್ಮಿಷನರಗಳು, ಡಿಸ್ಟ್ರಿಕ್ಟು ಟ್ರೆಜರೀ ಆಫಿಸರಗಳು, ವ ಅಮಲ್‌ದಾರ್ರುಗಳು ಯಿವರುಗಳಿಗೆ.

ಜಂಗ್ಲೀ ಬಾಬಿನ ಜಮೇ ಯನ್ನು ಕುರಿತು ಹುಟ್ಟಿದ 1873ನೇ ಇಸವಿ ಏಪ್ರೆಲ್ 26ನೇ ಮರ್ಕುಂ 998ನೇ ನಂಬರ್ ಅಕ್ಕಾಂಟ್ ಸರ್ಕ್ಯೂಲರ್ ವಿಷಯದಲ್ಲಿ ಡೆಪ್ಯೂಟಿ ಅಕ್ಕಾಂಟೆಂಟ್ ಜನರಲ್ಲವರು ತಿಳಿಸುವದೇನಂದರೆ, ಚೀಫ್ ಕಮ್ಮಿಷನರವರು 1876ನೇ ಇಸವಿ 22ನೇ ಮರ್ಕುಂ 5181—900ನೇ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ, ಫಾರೆಸ್ಟ್ ಯಿಲಾಖಾ ವಿಚಾರಣೆಯಲ್ಲಿ ಜಂಗ್ಲೀ ಹುಟ್ಟುವಳೀ ಬಾಬತು ಸರ್ಕಾರಕ್ಕೆ ಬರತಕ್ಕದ್ದು, ವಸೂಲು, ಬಾಕಿ ಯಿವುಗಳನ್ನು ಕುರಿತು ನಂಬರ್ 24ನೇ, ಮತ್ತು ಡಿಸ್ಟ್ರಿಕ್ಟು ಫಾರೆಸ್ಟಿಗಾಗಿ ನಂಬರ್ 25ನೇ ಪರಿಷ್ಕರಿಸೋಣಾದ ನಮೂನೇಗಳನ್ನು ಮಂಜೂರ್ ಮಾಡಿರುತ್ತಾರೆ. ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್‌ವೇಟರಗಳಿಂದಾಗಲಿ, ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರಗಳಿಂದಾಗಲಿ, ಮೊಬಲಗ್ ಬಂದಲ್ಲಿ ಸದರೀ ನಮೂನೇಗಳಲ್ಲಿ ತೋರಿಸಲ್ಪಟ್ಟ ಆ ಮೊಬಲಗಿಗೆ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರಗಳು ಮಾಮೂಲ್ ಮೇರೆ ಸರಟಿಫೈ ಮಾಡತಕ್ಕದ್ದೆಂದು ಕೋರಲ್ಪಡುತ್ತಾರೆ.

2. (ಸ್ಟೇಟ್ ಫಾರೆಸ್ಟಿನ ಬಾಬತು) 24ನೇ ನಂಬರ್ ಸ್ಟೇಟಿಮೆಂಟಿಗೆ ಸಂಬಂಧಿಸಿದ ಮೊಬಲಗ, 998ನೇ ಅಕ್ಕಾಂಟ ಸರ್ಕ್ಯೂಲರಿನ 1, 2ನೇ ನಿಬಂಧನೆಗಳಲ್ಲಿ ವಿಧಿಸಲ್ಪಟ್ಟ ಮೇರೆ ಫಾರೆಸ್ಟು ಆಫಿಸರಿಂದ ಅಡ್ವೈಸ್‌ಗಳು ಬಂದಮೇಲೆಯೇ ಜಮೆ ಯಿಡಲ್ಪಡುವದು. ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು 25ನೇ ನಂಬರಿಗೆ ಸೇರಿದ ಮೊಬಲಗ್ ಗಳು, ಅದೇ ಸರ್ಕ್ಯೂಲರಿನ 5ನೇ ರೂಲ್ ಪ್ರಕಾರ ಅಂದರೆ, ರೆವಿನ್ಯೂ ಆಫಿಸರ (ಅಮಲ್‌ದಾರ್) ಯಿಂದ ವಸೂಲ್ ಮಾಡಲ್ಪಟ್ಟ ಮೊಬಲಗನ್ನು ಕುರಿತು ಕೂಡ್ಲೆ ಆತನು ಫಾರೆಸ್ಟು ಆಫಿಸರಿಗೆ ರಿಪೋರ್ಟು ಮಾಡತಕ್ಕದ್ದು. ಪರಂತು ಟ್ರೆಜರೀ ಆಫಿಸರು ಖಜಾನೇಗೆ ಅಡ್ವೈಸನ್ನು ಕೊಡತಕ್ಕದ್ದಿಲ್ಲವು.

3. ಟ್ರೆಜರೀ ಲೆಕ್ಕದ ನಮೂನೇಯಲ್ಲಿ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರು "ಫಾರೆಸ್ಟ್" ಯೆಂಬ ಮೇಜರ ಹೆಡ್ ಕೆಳಗೆ, ಸ್ಟೇಟ್ ಫಾರೆಸ್ಟ್ ಮತ್ತು ಡಿಸ್ಟ್ರಿಕ್ಟು ಫಾರೆಸ್ಟ್ ಯಿವುಗಳ ಹುಟ್ಟುವಳಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಧಿಸಲ್ಪಟ್ಟ ತಪಶೀಲ್‌ಗಳೊಡನೆ ತೋರಿಸುವ ಬಗ್ಯೆ ಸೇರಿದಹಾಗೆ ಯಿರುವ ಯರಡು ಮದ್‌ಗಳನ್ನು ಕಲ್ಪಿಸಬೇಕೆಂದು ಕೋರುತ್ತೆ.

H. HUDSON,
Dy. Acc. General in Mysore.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 25ನೇ ಅಗಸ್ಟ್ 1876.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಕವಲೇದುರ್ಗ,	4ನೇ	ಅಕ್ಟೋಬರ	1876.	ಹೆಚ್ಚು ಕಡಮೆ 200 ಟನ್‌ಗಳ ವಜನಿ.
ಶಿವಮೊಗ್ಗಾ,	16ನೇ	„	„	
ಸಾಗರ,	25ನೇ	„	„	
ಹುಣಸೂರು,	4ನೇ	ನವಂಬರ	1876	ಹೆಚ್ಚು ಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಟಣ,	8ನೇ	„	„	
ಬೆಂಗಳೂರು,	1ನೇ	ಡಿಶಂಬರ	„	ಹೆಚ್ಚು ಕಡಮೆ 100 ಟನ್‌ಗಳು.
ಫ್ರೇಜರ್‌ಪೇಟೆ	18ನೇ	„	„	80 „

ಹರಾಜ್ ನಿಬಂಧನೆ—ಹರಾಜ್ ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್ ತಾರೀಖು ಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ 28ನೇ ಮರ್ಕುಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋರೀಟಿನಲ್ಲಿಯೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ನ ಈ ಉಭಯಸ್ಥಳಗಳ ಆಸಪಾಸ ಕೋಠೀಗಳಲ್ಲಿ ಯು ಹರಾಜಗಳು ನವಂಬರ 8ಕ್ಕೆ ಖೈದುಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ ಮೊಬಲಗ ಸದರೀ ಮೇರೆ ಶ್ರೀರಂಗಪಟ್ನ ಕೋಠೀಯಬಗೆ ಡಿಪಾಜಿಟ ಸಲ್ಲಬೇ ಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುರ್ಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗು ತದೆ. ಸದರೀ ಉಭಯ ಹರಾಜಗಳ ಬಾಬತು ಪೂರಾಮೊಬಲಗ 1877ನೇ ಇಸವೀ ಫೆಬ್ರುವರಿ 6ನೇ ಮುರ್ಕ್ತಂ ಸಾಯಂಕಾಲ 4 ಘಂ ಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ, ಪಾಂಡ, ಹಂಡ್ರೆಡ ವೆಯಿಟ ಟುಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. van Someren, *Captain,*
Conservator of Forests, Mysore & Coorg.

ಎಕ್ಸಪೆರಿಮೆಂಟಲ ಫಾರಂ.

ತಾರೀಖು 18ನೇ ಶಪ್ಟೆಂಬರ 1876.

ಫಾರಂ ಅಂದರೆ ವ್ಯವಸಾಯ ವಿಷಯದ ಅಜಮಾಯಿಷೀ ಜಮೀನಿನ ಸೂಪರಿಂಟೆಂಡೆಂಟರು ಇದರಿಂದ ತಿಳಿಯಪಡಿಸುವ ದೇನಂದರೆ,—ಯಾವದಿನದಲ್ಲಾಗಲಿ ಬೆಳಿಗ್ಯೆ 7 ಗಂಟೆಗಳಮೊದಲು 9 ಗಂಟೆಗಳವರಿಗೆ ಫಾರಂ ಜಾಗಾದಲ್ಲಿ ಬರತಕ್ಕ ಅಮಲ್ದಾರರು ನೇಟಿವ ಪೇಸಾಯಗಾರರು ಮತ್ತು ಬೇಸಾಯದ ವಿಷಯದೊಳಗೆ ಅಕ್ಕರೆವುಳ್ಳ ಜನಗಳು ಇವರುಗಳನ್ನು ಸದರೀ ಜಮೀನಿನಲ್ಲಿ ಬೆಳೆ ಇಡಲ್ಪಟ್ಟ ಹೊಸ ಫಸಲಗಳ ಗುಣವನ್ನೂ ಹೊಸ ಸಾಧನಗಳ ಉಪಯೋಗಗಳನ್ನೂ, ವಿಧವಿಧವಾದ ಪೇಸಾಯದ ತರಹೇಗಳ ನ್ನೂ ಕುರಿತು ವಿವರಿಸುವಬಗ್ಯೆ ನೋಡಲಿಕ್ಕೆ ಅಪೇಕ್ಷೆಯುಳ್ಳವರಾಗಿದ್ದಾರೆ.

F. E. Harman,
Supt. of Experimental Farm.

BANGALORE DISTRICT.

Notice of an application by Puttanna for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಶಿವಿಲ ಮಿಸಲೇನಿಯಸ ನಂ. 74.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮಾಗಡಿ ಕಸಬೆಯಲ್ಲಿ ಯಿರುವ ಪಾಂಚಾಳವ ಪುಟ್ಟಂಣ ನೆಂಬುವ ನು ತನ್ನ ಅಂಣ ಅಪ್ಪಂಣನ ಲೇಣಿ 500 ರೂಪಾಯಿ ಬರಮಾಡಿ ಕೊಳ್ಳತಕ್ಕಬಗ್ಯೆ ಸರ 1860ನೇ ಇಸವಿ 27ನೇ ಆಕ್ಟ ಪ್ರ ಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ಅಕ್ಟೋಬರ 13ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನು ಸ್ಥಾಪಿಸಿ ಕೊಡಬಹುದು.

ಬತಾರೀಖು 19ನೇ ಮಾಹೇ ಸೆಪ್ಟಂಬರ 1876ನೇ ಇಸವಿ ಮೊಕ್ಕಾಂ ಬೆಂಗಳೂರು.

L. Ricketts,
Offg. Dy. Commr.

MYSORE DISTRICT.

Notice of an application by Venkatachar for a certificate under Act XXVII of 1860.

ಮೈಸೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಶಿವಿಲ ಮಿಸಲೇನಿಯಸ ನಂ. 67.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಲಕ್ಷ್ಮೀಪುರಂ ಚಿನ್ನಕೃಷ್ಣಮಾ ಚಾರ್ರಿಗೆ ಬರಬೇಕಾದ 900 ರೂಪಾಯಿಗಳನ್ನು ವಸೂಲ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ

ಟಫಿಕೇಟ್ ಆಗಬೇಕೆಂದು ತಲಕಾಡ್ ತಾಲ್ಲೂಕು ಸೊಸಲೇ ಹೋಬಳಿ ಶ್ರೀರಂಗರಾಜಪುರದಲ್ಲಿ ಯಿರುವ ಲಕ್ಷ್ಮೀಪುರಂ ವೆಂಕಟಾಚಾರ್ರ್ಯಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ್ ತಿಂಗಳು 10ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರವರ ತಕರಾರನ್ನ ಸ್ಥಿರಪಡಿಸಿಕ್ಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮಾಹೇ ಶಪ್ಟೆಂಬರು ಸರ್ 1876ನೇ ಇಸವಿ, ಮೊಕ್ಕಾಂ ಮೈಸೂರು.

E. C. SHANMUGAVELU PILLE,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಚನ್ನಗಿರೀಯಿಂದ ಶಿವಮೊಗ್ಗಾ ಜೆಯಿಲ್‌ಗೆ ಪೋಲಿಸ್‌ನವರ ಪಹರೇಮೇಲೆ ತೆಗದುಕ್ಕೊಂಡು ಹೋಗುತ್ತಿರುವ ಸಮಯದಲ್ಲಿ ಪರಾರಿಯಾದ ಖೈದಿ ಹೆಂಗಸಿನ ಚಹರೆ ಪಟ್ಟಿ.

ಹೆಸರು ರಂಗಿ—ಜಾತಿ ಬಡಿಗಿಯವಳು—ವೇಶ್ಯಾವೃತ್ತಿಯಲ್ಲಿ ಬೆಳಿಸಲ್ಪಟ್ಟವಳು—ವಾಸಸ್ಥಳ ಗೊತ್ತಿಲ್ಲ—ತಪ್ಪಿತ ಮನೇ ಇಳೇಬಿದ್ದದ್ದು—ಶಿಕ್ಷೆ ಯರಡು ವರುಷಗಳ ಕಠಿಣಖೈದು—ವಯಸ್ಸು ಸುಮಾರು 25 ವರುಷ—ಎತ್ತರ ನಾಲ್ಕು ಅಡಿ ನಾಲ್ಕು ಅಂಗುಲ—ಯಾರಿಂದ ಶಿಕ್ಷೆ ವಿಧಿಸಲ್ಪಟ್ಟದ್ದು ಸಾಗರ ಸಬ್ ಡಿ॥ 1ನೇ ಕ್ಲಾಸ್ ಮೇಜಿಸ್ಟ್ರೇಟರಿಂದ.

ಮುಖ್ಯವಾದ ಗುರುತುಗಳು, ಕೆಂಪುಬಣ್ಣ ದಪ್ಪವಾದ ಶರೀರ.

MAHOMED ALI,
For Offg. Dy. Commr.

KADUR DISTRICT.

Notice of a torch robbery with a list of property stolen.

ಕಡೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಯಾದಾಸ್ತು ದಾನಿವಾಸದ ಮಾಗಣಿ ಗುಳದಮನೆ ಗ್ರಾಮದ ಶಿವಾಚಾರದ ಪುಟ್ಟಮ್ಮಾ ಇದೇಗ್ರಾಮದ ಸಿಗಮನೇ ಶಿದ್ದಯಿವರ ಮನೆಗೆ ಮಾಹೇಮಜಕೂರು ತಾರೀಖು 13ನೇ ಬುಧವಾರದ ರಾತ್ರೆ ಸುಮಾರು 8—9 ಘಂಟೆಕಾಲದಲ್ಲಿ 20ಜನದವರಿಗೆ ಕಳ್ಳರು ಮಷಾಲ್ ನಿಶಿ ಮನೆಗೆ ಹೊಕ್ಕು ಕಳವುಮಾಡಿಕ್ಕೊಂಡು ಹೋದರೆಂದು ಮುದ್ದೈರು ಬರಸಿದ ಜಿಂದಗಿ ಪಟ್ಟಿ, ತಾಲ್ಲೂಕು ಲಕ್ಕುವಳ್ಳಿ, ಕಸಬಾ ಯಡಿಹಳ್ಳಿ ಪ್ಯೇಷ್ ಸರ್ 1876ನೇ ಇಸವಿ ಶಪಟಂಬರು ತಾರೀಖು 14.

ಪುಟ್ಟಮ್ಮನ ಬಾಬತು.

ಮಾಲಿನ ಹೆಸರು.	ಕಿಮ್ಮತ್ತು. ರೂ.	ಪೈ.
ಚಿನ್ನದಬಳೆವಾಲೆ ಜೊತೆ 1ಕ್ಕೆ ತೂಕ ವರಹಾ 4 ವರಹಾಬಣ್ಣಾ ಮುತ್ತು ಹಚ್ಚಿದ ಯರಡು ಚಳತುಂಬು ಸಹಾ ..	24	0
ಚಿನ್ನದ ಬಾಬು ಬಳೆ ವಾಲೆ ಜೊತೆ 1ಕ್ಕೆ 3ವರಹಾ ತೂಕ ವರಹಾಬಣ್ಣಾ ..	12	0
ಬಿಡಿಗಿಚಿನ್ನದ ಗಿಣಿಹಚ್ಚಿದ ತಿರಪಿನ ವಾಲೆ ಜೊತೆ1ಕ್ಕೆ ತೂಕ ವರಹಾ ..	16	0
3ನೇ ನಂಬರ್ ವಾಲೆಗೆ ಹಚ್ಚಿದ ಚಳತುಂಬು ಜೊತೆ 1ಕ್ಕೆ ಮುತ್ತು ಸುತ್ತಿದ ಬಾಬತು ..	8	0
ಚೊಕ್ಕಚಿನ್ನದ ರ್ಯಾಗಟೆ 1ಕ್ಕೆ ಸುಮಾರು ತೂ॥ ವರಹಾ 4	20	0
ಚೊಕ್ಕಚಿನ್ನಧ ಚೌರಿಕಟ್ಟು 1ಕ್ಕೆ ತೂಕ ವರಹಾ 3	15	0
ಚೊಕ್ಕ ಚಿನ್ನದ ಪ್ರತಿಮೆಯುಳ್ಳ ಜಡೆ ಬಿಲ್ಲೆ 1ಕ್ಕೆ ತೂಕಾಗೊತ್ತಿಲ್ಲ ಅಕ್ಕಸಾಲೆ ಪರಸು ರಾಮೈಯನು ಕೊಂಡ ಬಾಬತು	20	0
ಚೊಕ್ಕಚಿನ್ನದ ಜಡೆಬಿಲ್ಲೆ 1ಕ್ಕೆ ವರಹಾ ತೂಕ ಬೆಳ್ಳಿಬಿಲ್ಲೆ ಹಾಕಿಧೆ ಪೂರ್ಣೈಯೆನಲ್ಲಿ ಕೊಂಡ ಬಾಬತು	6	0
ಏಳುಕಳಸದ ವರಹಾಬಣ್ಣದ ಬುಗಡಿ ಜೊತೆ 1 ಮುತ್ತು ಸುತ್ತಿದ ಬಾಬತು ಸಂಣ ಚಳತುಂಬು ಹಚ್ಚಿದ ಬಾಬತು	24	0
ಐದುಕಳಸದ ಬುಗಡಿ ಜೊತೆ 1ಕ್ಕೆ ವರಹಾ ಬಣ್ಣ ತೂಕಗೊತ್ತಿಲ್ಲ	6	0

ಮಕ್ಕಳಿಗೆ ಹಾಕುವ ಹಣಿಬಟ್ಟು 1ಕ್ಕೆ ಸುಮಾರು 2—3 ಸಾಲು ವಜ್ರ ಕೆಂಪುಗಳು ಸಹಾ ಕೆತ್ತಿದ ಬಾಬತು 7—ಯಾ 9 ದೊಡ್ಡ ದೊಡ್ಡ ಮುತ್ತುಗಳು ಹಾಕಿದೆ	50	0
ಮೀನಬಾವಲಿ ಜೊತೆ 1ಕ್ಕೆ 3ಹೊಂನು ತೂಕ ಮುತ್ತು ಹಚ್ಚಿವೆ .. .	12	0
ಗುಂಡುಬಾವಲಿ 1ಕ್ಕೆ ಮುತ್ತು ಹಚ್ಚಿದ ಬಾಬತು ತೂಕ ಬಣ್ಣ ಗೊತ್ತಿಲ್ಲ ..	8	0
ಹೊಂನುವ್ವು ಜೊತೆ 1ಕ್ಕೆ ತೂಕಾ ವರಹಾ 1 ವರಹಾ ಬಣ್ಣ	4	0
ಕೊಪ್ಪಿನ ಜೊತೆ 2ಕ್ಕೆ ವರಹಾ ಬಣ್ಣ 6 ವರಹಾ ತೂಕ	24	0
ಗೌರಿಕಣ್ಣು ಯಾನೆ ಜಂಗೋರಿ ಸರಾ 1ಕ್ಕೆ ತೂಕ ವಗ್ಯೆರೆ ಗೊತ್ತಿಲ್ಲ	20	0
ಪಂಜರದ ಗೂಡಿನ ಕಾಳೀತಾಳಿ ಸರಾ 1ಕ್ಕೆ ತಾಳಿ 1 ಗುಂಡು 6 ಹವಳಾ 6	12	0
ಕಲ್ಯಾಣ ಕಾಸಿತಾಳಿ ಹೊಂಸು ತೂಕ ವರಹಾ ಬಣ್ಣ	2	0
ವಂಟಿ ಜೊತೆ 2ಕ್ಕೆ ಯಜ್ಜದ ಕೆಂಪು ಹಾಕಿದ ಬಾಬತು	6	0
ಕೊಟ್ಟೆಗೆ ಮುರು 1ಕ್ಕೆ ..	2	0
ಗಾಡಿಮುಖ್ರ 1ಕ್ಕೆ ಮುತ್ತುಗಳು ಹಾಕಿದ ಬಾಬತು ಪೂರ್ಣೈಯ ಕೊಂಡದ್ದು ಸಂಣ ಮುತ್ತುಗಳು ಹಾಕಿವೆ	16	0

ಬೆಳ್ಳಿ ಬಾಬತು.

ಬೆಳ್ಳಿ ನಡುವಿನ ಪಟ್ಟಿ 1ಕ್ಕೆ ತೂಕ 12 ಚೊಕ್ಕ	12	0
ಬೆಳ್ಳಿ ನಡುವಿನ ಪಟ್ಟಿ 1ಕ್ಕೆ ತೂಕ 8 ಡಿಟೋ	8	0
ಬೆಳ್ಳಿಪಾಡಗಾ ಜೊತೆ 1ಕ್ಕೆ ತೂಕಾ 12ಚೊಕ್ಕ	12	0
ಕಾಲಸರಪಣಿ ಜೊತೆ 1ಕ್ಕೆ ಹರಡಿ ತಿರಪು .. ಸಹಾ ಯಿಧೆ	24	0
ಕಾಲಕಡಗಾ ಜೊತೆ 1ಕ್ಕೆ ಹಲಸಿನ ಮುಳ್ಳು ಬಾಬತು ತೂಕ 12 ಚೊಕ್ಕ	12	0
ಬೆಳ್ಳಿ ಗಟ್ಟಿ ದೊಂಟಿನ ಜೊತೆ ತೂಕಾ. 8 ಮುಕ್ಕರಿ	6	0
ಬೆಳ್ಳಿ ಗಟ್ಟಿ ದುಂಡು ಜೊತೆ 1ಕ್ಕೆ ಚೊಕ್ಕ ..	12	0
ಪಟ್ಟಿ ವುಡುದಾರ 1ಕ್ಕೆ ತೂಕ 12 ಚೊಕ್ಕ ..	12	0
ಬೆಳ್ಳಿ ಮುಂಗೈ ಸರಪಣಿ ಜೊತೆ 1ಕ್ಕೆ ತೂಕ 8 ಡಿಟೋ	8	0
ಬೆಳ್ಳಿ ಪಟ್ಟಿ ತಾಯಿತಿ ತೋಳುಸರಿಗೆ 1 ತೂಕ 5	5	0
ದುಂಡು ತಾಯಿತಿ ತೋಳುಸರಿಗೆ 1ತೂಕ 4 ..	4	0
ಬೆಳ್ಳಿ ಟೋಳು ದುಂಡು 2ಕ್ಕೆ ತೂಕ 3½ ಚೊಕ್ಕ	3	8
ಡಿಟೋ ಡಿಟೋ ಡಿಟೋ	3	0
ಹಾಲಕಡಗಾ ಬೆಳ್ಳಿ ಬಾಬತು ತೂಕ 5 ಚೊಕ್ಕ	5	0
ಬೆಳ್ಳಿ ಸುತ್ತು ಕಾಲುಂಗರ ಜೊತೆ 2ಕ್ಕೆ ಚೊಕ್ಕ	4	0
ಡಿಟೋ 1ಕ್ಕೆ ಡಿಟೋ	3	0
ಬೆಳ್ಳಿ ಜಡೆಬಿಲ್ಲೆ 2ಕ್ಕೆ ..	1	8
ಹಳೇಯಿಕ್ಕೇರಿ 1 ಹೊಸ ಯಿಕ್ಕೇರಿ 2 ವರಹಾ ಸಹಾ	12	0
ಬೆಳ್ಳಿ ಹಲ್ಲುಕಡ್ಡಿ ಗುಗ್ಗೇ ಕಡ್ಡಿ ಸರಪಣಿ ..	2	0
ಯಿದೆಲ್ಲ ಅಡಿಗೆ ಮನೆ ಬಳಿ ದೇವರ ಕೋಣೆಯ ದಕ್ಷಣದಿಕ್ಕಿನ ಗೋಡೆಯಲ್ಲಿ ಹೂಳಿದ್ದ ಮಂಣುಕುಂಭದ ಬಾಬತು ಈ ಕುಂಭದ ಬಾಯಿಗೆ ಮಂಣು ಹೆಂಟೆ ಯಿಟ್ಟು ಮೆತ್ತಿಗೆಮಾಡಿ ಇದ್ದದನ್ನ ಕಿತ್ತು ತೆಗದು ಕೊಂಡು ಯಿಧಾರೆ		
ಡಿಟೋ ಕೋಣೆಯೊಳಗಿನ ಮಡಿಕೆಗಳ ಹಿಂದೆಬಿದರ ಅಂಡೆಯಲ್ಲಿ ಹಾಕಿ ಯಿಟ್ಟಿದ್ದ ನಗದು ರೂಪಾಯಿಗಳು	43	0
ರೇಷಿಮೆ ಮೂರು ಡುಂಡಿನ ಮಂಣು ಸೂಸಿನ ಶೀರೆ 1ಕ್ಕೆ	6	0
ಕಾಗಿನಶೀರೆ 1 ರುದ್ರಾಕ್ಷಿಪೇಟೆ ಅಂಚು	10	0
ಪರಕಾಳಿನ ಅಂಗಿ 1ಕ್ಕೆ	1	0
ರೇಷ್ಮೇ ಬುಗಡಿ ಅಂಚಿನ ದೋತ್ರ ಜೊತೆ 1ಕ್ಕೆ ವೊಗದದ್ದು. .. .	4	0
ಕವಡಿಕೆ ಬಿಳಿ ರುಮಾಲ್ 1ಕ್ಕೆ 5 ಮಳ ..	2	0
ಕರೀಮಾಂಣಂಚಿನ ಶೀರೆ 1ಕ್ಕೆ ..	2	10
ಭಂಗಾರಬಳೆ ರೇಷ್ಮೆ ಅಂಚಿನ ಖಣ 1ಕ್ಕೆ ..	0	6
ಡಿಟೋ	0	10
ಹಸರ ಖಣಾ 1ಕ್ಕೆ	0	8
ಕಾಗಿನ ರವಿಕೆ 2ಕ್ಕೆ ಹೊಲದದ್ದು. ..	1	0
ನೆಟ್ಟನೆ ಕತ್ತಿ 1 ಬಾಗಿನ ಕತ್ತಿ 1 ಸಹಾ ..	4	0
ಯಿದೆಲ್ಲ ಕೊಣೇಯಲ್ಲಿ ಯಿದ್ದ ಬಾಬತು		
ಭೋಜನ ಶಾಲೆ ಅಟ್ಟದ ಮೇಲೆ ಪಂಗಡಿ ಬಹಲಿನಲ್ಲಿ ಕುಂಬ ಹೂಳಿದ್ದರಲ್ಲಿ 1½ ಶೇರು ಅಳದು ಯಿಟ್ಟ ನಗದು ರೂಪಾಯಿಗಳು	150	0
ಇದಕ್ಕೆ ದಕ್ಷಣಕ್ಕೆ 1 ಗಜ ಫಾಸಲೇಯಲ್ಲಿ ಹೂಳಿದ್ದು ವ ಕುಂಬದಲ್ಲಿ ಯಿದ್ದದ್ದು ರೋಕ್ಕ ಸಹಾ.	10	0

ಶಿದ್ಧನ ಬಾಬತು.

ಹಿತ್ತಾಳಿ ತಂಬಿಗೆ ಶೇರು ಸುಮಾರು 5ಕ್ಕೆ ..	1	4
ಸಾಶಿವೆ ಬಣ್ಣದ ರೇಷ್ಮೆ ಅಂಚಿನ ಶೀರೆ 1ಕ್ಕೆ ..	5	0
ಕಾಗಿನ ಖಣ 1ಕ್ಕೆ	0	6
ವುಗರಂಚಿನ ದೋತ್ರ 1ಕ್ಕೆ ಹೊಸದು ..	1	8
ನಿಲವಂಗಿ ಪರಖಾಳೇದು ಹೊಸದು ..	1	0
6½ ಮಳದ ಬಿಳೀ ರುಮಾಲ್ 1ಕ್ಕೆ ..	4	0

ಹಳೆ ಬಿಳೆ ರುಮಾಲ್ 1ಕ್ಕೆ	0	4
ಪಂಚೆಗಳು 3 ಹಳೇದು 1 ಹೊಸದು 2. ..	0	10
ಕೆಂಪುವಸ್ತ್ರ 1ಕ್ಕೆ	0	4
ಜಾಡಿಕಂಬಳಿ ಹೊಸದು 1ಕ್ಕೆ.. ..	1	8
ನಗದು ರೂಪಾಯಿ 3 ರೋಕ್ಕಾ 2 ರೂಪಾಯಿ.	5	0

ಯಿದು ನಡಮನೆ ಅಟ್ಟದ ಮೇಲೆ ಬಿದರ ಪೆಟ್ಟಿಗೆ ಯಲ್ಲಿ ಯಿದ್ದ ಬಾಬತು.

ಮುದ್ದೈ ಪುಟ್ಟಮ್ಮನ ಮಗಳು ರುದ್ರಮ್ಮನು ಗದ್ದೆ ಕಡೆ ನೋಡುವದಕ್ಕೆ ಹೋಗುತ್ತಿದ್ದವಳನ್ನ ಕೃತ್ಯ ನಡಸಲಿಕ್ಕೆ ಬಂದು ಪ್ರವೇಶ ಮಾಡುವಾಗ ಮಾರ್ಗದಲ್ಲಿ ಹಿಡಕೊಂಡು 2ನೇ ಮುದ್ದೈ ಮನೇಬಳಿ ಸುಲಕೊಂಡದ್ದು ರುದ್ರಮ್ಮನ ಮೈಮೇಲೆ ಯಿದ್ದದ್ದು.

ರುಂದಾವನದ ಅಡ್ಡಿಕೆ ಸುಮಾರು ತೂಕ 2 ವರಹಾ ಬಂಣ	8	0
ಬೆಳ್ಳಿ ದುಂಡು 2ಕ್ಕೆ	2	0
ಬೆಳ್ಳಿ ತಟ್ಟು ಕಡಗ 1ಕ್ಕೆ.. ..	2	0
ಕೆಂಪು ಹರಳಿನ ಮೂಗಬಟ್ಟು ..	0	2

ಈ ಮೇರೆ ಮಾಲ್ ಹೋದವೆಂದು ಕಸಬಾ ಸ್ಟೇಷನ ಜಮೆದಾರರಲ್ಲಿ ಬರಸಿದಕ್ಕೆ ಹಾಜರಿದ್ದ ಪಂಚಾಯಿತರ ರುಜು ತೆಗಿಯಲಾಯಿತು ಯಿದು ಶಿವಾಯಿ ಇನ್ನೇನು ಹೋಗಲಿಲ್ಲವೆಂದು ಮುದ್ದೈರು ಬರಸಿದರು ಈ ಬಳಿ ಪಂಚಾಯಿತರ ಮುದ್ದೈರ ರುಜು ಯಿದೆ.

ತಾರೀಖು 15ಲ್ಲಿ ದಫಾ 1ನೇ ಫಿರಿಯಾದಿ ಬರೆಸಿದ್ದು

ಹವಳದ ಸರಾ ಯಿದರಲ್ಲಿ ಚಿನ್ನದ ಅಡ್ಡಿಕೆ ಈ ನೈಕಿ ಬೆಳ್ಳಿ ಅಡ್ಡಿಕೆ 1 ಕುಪ್ಪಿ ಭಂಗಾರದಲ್ಲಿ ಹಾಕಿ ಯಿರುವದು 1 ಯಿದರ ಕಿಮ್ಮತು	10	0
ಕೊಳಗದ ಹಿತ್ತಾಳೆದು	0	2
ಹಿತ್ತಾಳೆ ಗಿಂಡಿ ಸಿಹ್ಮದ ಮುಖಕ್ಕೆ ತೂಬು ಯಿರುವದು	0	2
ಕೋಳಿ ಯರಡು ಮುದ್ದೈಮನೆ ಕೊಟ್ಟಿಗೆಯಲ್ಲಿ ಬೆಂಕಿಯಲ್ಲಿ ಸುಟ್ಟು ತೆಗದುಕೊಂಡು ಹೋದಂತೆ ಹೇಳುವದು..	0	4
ಸದರೀ ದುರ್ಗಿ ಬಾಬತು ಹಿಡಿ ಇಲ್ಲದ ಕರನಿ..	0	4
ಜುಮ್ಲಾ	734	12

ಈ ರೀತಿ ಹೋಗಿರುತ್ತೆಂತ ಬರಸಿದ್ದಾನೆ.

P. KRISHNA RAO,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು.

ಜುಡಿಷಲ್ ಅಸಿಸ್ಟೆಂಟ ಕಮ್ಮಿಷನರವರ ಕೋರ್ಟು.

ತಾರೀಖು 8ನೇ ಶಪ್ಟಂಬರ 1876.

ಇದರಿಂದ ತಿಳಿಸುವದೇನಂದರೆ,—ಹಳೇ ಜುಡಿಷಲ್ ರಿಕಾರ್ಡಗಳನ್ನು ನಾಶಪಡಿಸುವ ಬಗ್ಗೆ ಹುಟ್ಟಿದ ರೂಲ್ಸ್ ಅನುಸರಿಸಿ, ಕಷ್ಟಿಗಾರ್ರಿಂದ ಈ ಕೋರ್ಟನೊಳಗೆ ಅರಿಜನಲ್, ಸ್ಮಾಲ್‌ಕಾಜ್ ಮೊಕದ್ದಮೆಗಳಲ್ಲಿ ಅಮಲ್‌ಜಾರೀ ಮತ್ತು ಇತರ ಚಿಲ್ಲರೆ ಮೊಕದ್ದಮೆಗಳಲ್ಲಿ ವ ಪ್ರೊಸೀಡಿಂಗ್ಸನೊಳಗೆ 1870ನೇ ಜನವರೀ ಮೊದಲು 1870ನೇ ಡಿಸಂಬರ 31ನೇ ಪರ್ಯಂತ ವರಿಗೆ ದಾಖಲಾದ ದರೋಬಸ್ತು ದಸ್ತಾವೇಜುಗಳು ಎಗ್ಜಿಬಿಟಗಳು, ಲೆಕ್ಕಗಳು ಯಿತರ ಕಾಗದ ಪತ್ರಗಳು ಯಿವು 1876ನೇ ಡಿಸಂಬರ 30ರಲ್ಲು ನಾಶಪಡಿಸಲ್ಪಡುತ್ತೆ.

ಸದರೀ ಮೊಕದ್ದಮೆಗಳಿಗೆ ವ ಪ್ರೊಸೀಡಿಂಗ್ಸ್‌ಗೆ ಸಂಬಂಧಿಸಿ ಮೊಬಲಗಿನ ಬಾಬತು ಯಾವ ದಸ್ತಾವೇಜುಗಳನ್ನಾಗಲಿ ವಾಪಸ್ ಪಡೆಯುವ ಖಾಯಿಷ್ ಉಳ್ಳ ಕಕ್ಷಿಗಾರರು ಸದರೀ ತಾರೀಖಿಗೆ ಮುಂಚಿತವಾಗಿ ಕೋರ್ಟು ಆಗುವ ದಿನಗಳಲ್ಲಿ ಮಧ್ಯಾನ್ಹಾತ್ಪರ 1ಗಂಟೆಯ ಮೊದಲು 4 ಗಂಟೆಯ ವರಿಗೆ ಕೋರ್ಟು ಶಿರಸ್ತೇದಾರರಲ್ಲಿ ದರಖಾಸ್ತು ಮಾಡತಕ್ಕದ್ದು.

Notice inviting claimants, if any, to the house tendered by the Shroff, Chitaldroog Taluk Treasury, as a security for the office he holds.

ಇದರಿಂದ ಸಮಸ್ತ ಜನಗಳಿಗೂ ತಿಳೆಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟು ಚಿತ್ರದುರ್ಗದ ತಾಲ್ಲೂಕು ಖಜಾನಾ ಸರಾಫ ಗುಂಡಪ್ಪನೆಂಬಾತನು ತನ್ನ ವುದ್ಯೋಗಕ್ಕಾಗಿ ಜಾಮೀನು ಖಾತರೀಬಗ್ಗೆ ಇದೆ ಚಿತ್ರದುರ್ಗದ ಕಸಬಾ ಟೌನನಲ್ಲಿ ಇರುವ ಸರಸುಮಾರು 1000 ರೂಪಾಯಿ ಕ್ರಯ ಬಾಳಬಹುದಾದ ಮ್ಯುನಿಸಿಫಲ್ ನಂಬರು 851ನೇ ಬಾಬತು ತನ್ನ ಸ್ವಂತ ಮನೆಯನ್ನ ಸರಕಾರಕ್ಕೆ ಖಾತರಗೋಸ್ಕರ ಈಡು ಮಾಡಿಕೊಟ್ಟಿರುತ್ತಾನಾಗಿ ಈ ಮನೆಗೆ ಮತ್ಯಾರು ಹಕ್ಕು ಇದ್ದಾಗ್ಯೂ ಈ ಲಾಗಾಯಿತು 3 ತಿಂಗಳು ವಳಗಾಗಿ ಅಂತಾ ಹಕ್ಕು ವುಳ್ಳವರು ಕ್ರಮವಾದ ದಸ್ತೈವೇಜು ವಗ್ಯೆರೆ ಸಹಿತ ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರಿ ಆಫಿಸರವರ ಬಳಿಗೆ ಹಾಜರಾಗಬೇಕು ಆ ವಾಯಿದೆ ನಂತರ ಹಾಜರಾಗುವ ಪಕ್ಷಕ್ಕೆ ಅಂತಾ ವಿಷಯ ಮಂಜೂರು ಮಾಡುವದಿಲ್ಲ ತಿಳಿಯುವದು.

ತಾರೀಖು 15ನೇ ಮಾಹೇ ಶಪ್ಟಂಬರು 1876ನೇ ಇಸವಿ ಚಿತ್ರದುರ್ಗ.

S. VENKAT VARDAIENGAR,
Treasury Officer.

ಸರ್ 1876ನೇ ಇಸವಿ ಆಗಸ್ಟು ತಿಂಗ್ಳಳ ಕಾಲಸ್ಥಿತೀ ರಿಪ್ರೋರ್ಟು.

ಹಾಸನ ಡಿಸ್ಟ್ರಿಕ್ಟು

ಹವಾ,—ಆಗಾಗ್ಯೆ ತುಂತುರು ಮಳೆ ಬೀಳುತ್ತಾ ಮೋಡ ಹಾಕಿಕೊಂಡು ಯಿತ್ತು. ಹವಾ ಅನುಕೂಲ ಸ್ಥಿತಿಗೆ ಬಂದಿದ್ದಾಗ್ಯೂ ಯಿನ್ನೂ ಮಳೆಗೆ ನಿರೀಕ್ಷಿಸೋಣಾಗಿರುತ್ತದೆ, ಡಿಸ್ಟ್ರಿಕ್ಟಿನಲ್ಲಿ ಈ ತಿಂಗಳಲ್ಲಿಯೂ ಕಳದ ಯರಡು ವರುಷಗಳ ಯಿದೇ ತಿಂಗಳುಗಳಲ್ಲಿಯೂ ಬಿದ್ದಮಳೆಯು ಈ ಕೆಳಗೆ ವಿವರಿಸೋಣಾಗಿರುತ್ತದೆ;—

ಸ್ಥಳಗಳು.			ಮಳೆ ಬಿದ್ದದ್ದು.					
			ಆಗಸ್ಟು 1876		ಆಗಸ್ಟು 1875		ಆಗಸ್ಟು 1874	
			ಇಂ.	ಸೆಂ.	ಇಂ.	ಸೆಂ.	ಇಂ.	ಸೆಂ.
ಹಾಸನ	ಇಂಜಿನೀರ್ ಆಫೀಸ್	ಎಗಜಿಕ್ಯೂಟಿವ್ ಇಂಜಿನೀರವರ ಅಳತೆ	1	63	1	41	1	38¼
		ಪಾರ್ಕರ್ಸ್ ರವರ ಅಳತೆ	1	70	1	37	1	94¼
		ಡಿಸ್ಪೆನ್ಸೇರಿ ಅಬ್‌ಸರವೇಟರಿಯಲ್ಲಿ	2	1	1	10	2	37
		ತಾಲ್ಲೂಕು ಕಚ್ಚೇರಿಯಲ್ಲಿ ..	1	98	1	13	0	73
ಮಂಜರಾಬಾದ (ಸಕಲೇಶಪುರ) ..			6	34	7	69	12	94
ಅರಕಲ್‌ಗೂಡ್			2	22	2	15	2	3
ಅತ್ತಿಗುಪ್ಪೆ			3	0	0	0	0	0
ಬೇಲೂರು			2	10	0	50	5	40
ಚನ್ನರಾಯಪಟ್ಟಣ			0	40	0	5	0	20
ನಾಗಮಂಗಲ			3	47	1	18	1	87
ಹಾರನಹಳ್ಳಿ			1	82	0	0	0	73
ನರಸೀಪುರ			1	64	0	30	1	15

ಕೆರೆಗಳು,—ಡಿಸ್ಟ್ರಿಕ್ಟಿನಲ್ಲಿ ಕೆರೆಗಳಿಗೆ ನೀರು ವಿಶೇಷ ಬಂದಿರುವದಿಲ್ಲ, 202½ ದೊಡ್ಡ ಕೆರೆಗಳಲ್ಲಿಯೂ 2,314½ ಸಣ್ಣ ಕೆರೆಗಳಲ್ಲಿಯೂ 15 ದಿವಸಗಳ ಲಗಾಯತು ಬಂದು ತಿಂಗಳ ವರಿವಿಗೂ ಆಗುವಷ್ಟು ನೀರು ಯಿರುತ್ತೆ. 104 ದೊಡ್ಡ ಕೆರೆಗಳು 499½ ಸಣ್ಣ ಕೆರೆಗಳು ಒಣಗಿರುತ್ತವೆ.

ಜಮೀನು,—ಈ ತಿಂಗಳೊಳಗೆ 672—8—0 ರೂಪಾಯಿಗಳು ಕಂದಾಯ ವುಳ್ಳ ಜಮೀನುಗಳಿಗೆ ಸಾಗುವಳೀ ಬಗ್ಯಾಗಿ ದರಖಾಸ್ತುಗಳು ತಲಪಿದವು, ಮತ್ತು ಅಂತಾ ಜಮೀನುಗಳು ದರಖಾಸ್ತುದಾರ್ರ ಸ್ವಾಧೀನ ಮಾಡಲ್ಪಟ್ಟವು ಅತ್ತಿಕುಪ್ಪ, ನಾಗಮಂಗಲ, ಹಾರನಹಳ್ಳಿ, ತಾಲ್ಲೂಕುಗಳಲ್ಲಿ ಸಾಗುವಳೀ ಬಗ್ಯಾಗಿ ಜಮೀನುಗಳು ತೆಗದುಕೊಳ್ಳಲಿಲ್ಲ.

ಬೆಳೆ,—ಅರಕಲ್‌ಗೂಡು, ಚನ್ನರಾಯಪಟ್ಟಣ, ಅತ್ತಿಕುಪ್ಪ, ನಾಗಮಂಗಲ ತಾಲ್ಲೂಕುಗಳಲ್ಲಿ ಹುರುಳಿ, ಹೈರಾಗಿ, ಅವರೆ, ನವಣೆ ಮತ್ತು ಎಳ್ಳು ಬಿತ್ತಲ್ಪಟ್ಟವು. ಹಾಸನ, ಮಂಜರಾಬಾದ್, ಅರಕಲ್‌ಗೂಡು ತಾಲ್ಲೂಕುಗಳಲ್ಲಿ ಬೆಳೆಗಳು ಚನ್ನಾಗಿಯೂ, ಅತ್ತಿಕುಪ್ಪ, ಬೇಲೂರು, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಸುಮಾರಾಗಿಯೂ, ಮತ್ತು ಹಾರನಹಳ್ಳಿ, ನರಸೀಪುರ ತಾಲ್ಲೂಕುಗಳಲ್ಲಿ ಒಣಗುತ್ತಲೂ ಯಿವೆ.

ಧಾರಣೆ,—ಎಲ್ಲಾಜಿನಸೀಗಳ ಧಾರಣೆಯು ಯಥಾ ಪ್ರಕಾರ ವಿದೆ.

ಆರೋಗ್ಯ,—ಅತ್ತಿಕುಪ್ಪ, ಮಂಜರಾಬಾದ್ ತಾಲ್ಲೂಕುಗಳಲ್ಲಿ ಕೆಲವು ಮಟ್ಟಿಗೆ ಜ್ವರ ವ್ಯಾಪಿಸಿತ್ತು ಯಿದು ಸಿವಾಯಿ ಡಿಸ್ಟ್ರಿಕ್ಟು ಮುಳೆ ಆರೋಗ್ಯವು ಚನ್ನಾಗಿತ್ತು. ಈ ತಿಂಗಳೊಳಗೆ ಡಿಸ್ಟ್ರಿಕ್ಟು ಮುಳೆ 410 ಮಂದಿಯು ಆ ಹಿಂದಿನ ತಿಂಗಳೊಳಗೆ 520, ಮಂದಿಯೂ ಮೃತಪಟ್ಟಿರುತ್ತಾರೆ ಮತ್ತು ಅದರ ತಪಸೀಲ್ ಹ್ಯಾಗಂದರೆ;—

ಖೈ ಜುಲಾಬ್‌ನಿಂದ ..	55	ಹೊಟ್ಟೆ ನೋವಿನಿಂದ		42
ಶಿಡುಬಿನಿಂದ ..	5	ಇತರ ಕಾರಣಗಳಿಂದ ..		113
ಜ್ವರದಿಂದ ..	195		ಕುಲ್	410

ಜನನ,—182 ಜನನವಾದವು (80 ಗಂಡು, 99 ಹೆಂಣು) ಆ ಹಿಂದಿನ ತಿಂಗಳಲ್ಲಿ 283 ಆದವು.

ಕಾಲ್ನಡೆ,—ದನಗಳಿಗೆ ಮೇವಿನ ದುರ್ಭಿಕ್ಷ ಬಹಳವಾಗಿರುತ್ತೆ. ಮೇವಿಲ್ಲದೆಯೂ ಮತ್ತು ಇತರ ಕಾರಣಗಳಿಂದಲೂ 5,274 ಕಾಲ್ನಡೆಗಳು ಹೋದವು. ಆ ಹಿಂದಿನ ತಿಂಗಳಲ್ಲಿ 9,653 ಹೋದವು, ಹಾರನಹಳ್ಳಿಯಲ್ಲಿ 1,929 ಹೋದವು, ಅತ್ತಿಕುಪ್ಪ, ಮಂಜರಾಬಾದ್ ತಾಲ್ಲೂಕುಗಳಲ್ಲಿ ಕಾಲ್ನಡೆಗಳಿಗೆ ಕಾಲುಬಾಇ ಜ್ವರ ವ್ಯಾಪಿಸಿದೆ.

H. E. Mottet,
Dy. Commr.

ಕಡೂರು ಡಿಸ್ಟ್ರಿಕ್ಟ್.

ಮಳೆ—ಮಲನಾಡು ಪ್ರಾಂತದಲ್ಲಿ ವಿಸ್ತಾರವಾಗಿ ಮಳೆ ಯಾಯಿತು, ಆದರೆ ಈ ಡಿಸ್ಟ್ರಿಕ್ಟಿನ ಮೈದಾನ ಪ್ರದೇಶಗಳಲ್ಲಿ ಬಹಳ ಸ್ವಲ್ಪವಾಗಿ ಮಳೆ ಯಾದ್ದರಿಂದ ಅದು ಬೆಳೆಯಲ್ಲಿರುವ ಫಸಲ್ ನಷ್ಟವಾಗದೆ ಉಳಿಯುವದಕ್ಕೂ ಪಶುಗಳಿಗೂ ಮನುಷ್ಯರಿಗೂ ಕುಡಿಯುವದಕ್ಕೂ ಸಾಕಾಗುವಷ್ಟು ಬೀಳಲಿಲ್ಲ ಮಳೆಯ ತಪಸೀಲ್ ಹ್ಯಾಗಂದರೆ.

1876ನೇ ಜುಲೈನಲ್ಲಿ 6 ಅಂಗುಲ 99¼ ಸೆಂಟಿಗಳು 1876ನೇ ಅಗಸ್ಟು 1—65. 1875ನೇ ಆಗಸ್ಟು 1—24.

ಪೇರಾವಾದ ಬಿತ್ತನೆ—ಲಕ್ಕುವಳ್ಳಿ ವ ಕೊಪ್ಪ ಈ ತಾಲ್ಲೂಕುಗಳಲ್ಲಿ ಭತ್ತದ ಫಸಲ್ ನಾಟ್ಟವಾಯಿತು ದೊಡ್ಡರಾಗಿ, ಹುರಳಿ, ಇವುಗಳು ಚಿಕ್ಕ ಮಗಳೂರು ತಾಲ್ಲೂಕಿನೊಳಗೂ, ಹುರಳಿ ಮತ್ತು ಖುರಾಸಾನಿ ಈ ಧಾನ್ಯಗಳು ಬಾಣಾವಾರ ತಾಲ್ಲೂಕಿನಲ್ಲೂ ಪೇರಾವಾದವು.

ಫಸಲ್‌ಸ್ಥಿತಿ—ರಾಗಿ, ಅವರೆ ವಗೈರೆ ಫಸಲ್‌ಗಳು ತರೀಕೆರೇ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಚನ್ನಾಗಿವೆ. ಇತರ ಪ್ರದೇಶಗಳಲ್ಲಿ ಮಳೆ ಯಿಲ್ಲದೆ ವಣಗುತ್ತಿವೆ ಗನ್ನ ವ ಕಾಫಿ ಈ ಫಸಲ್‌ಗಳು ಲಕ್ಕುವಳ್ಳಿ ತಾಲ್ಲೂಕಿನಲ್ಲಿ ಚನ್ನಾಗಿವೆ. ಕೊಪ್ಪ ಪ್ರಾಂತದಲ್ಲಿ ಭತ್ತ, ಯಾಲಕ್ಕಿ ಇವು ವಳ್ಳೆ ಸ್ಥಿತಿಯಲ್ಲಿರುವಂತೆ ತಿಳಿಯುಬರುತ್ತೆ. ಈ ತಾಲ್ಲೂಕಿನ ಮತ್ತು ಲಕ್ಕುವಳ್ಳಿ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಸುಪಾರೀ ಫಸಲಿಗೆ ಕೊಳೆರೋಗ ತಗಲಿಯಿದೆ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಭತ್ತದ ಫಸಲಿಗೆ ಇನ್ನು ಬಹಳ ಮಳೆ ಬೇಕಾಗಿರುತ್ತೆ.

ಬಾಣಾವಾರ ತಾಲ್ಲೂಕಿನಲ್ಲಿ ಹೆಸರು, ವುದ್ದು ಚನ್ನಗಿದೇ ತಾಲ್ಲೂಕಿನಲ್ಲಿ ಗಿಡ್ಡರಾಗಿ ಕಟಾವಾದಹಾಗೆ ರಿಪೋರ್ಟಾಗಿರುತ್ತೆ.

ಜನಾರೋಗ್ಯ—ಡಿಸ್ಟ್ರಿಕ್ಟಾ ಮುಳೆ ಆರೋಗ್ಯ ಚನ್ನಾಗಿರಲಿಲ್ಲ, ಕೊಪ್ಪ ತಾಲ್ಲೂನಲ್ಲಿ ಜ್ವರ ಮತ್ತು ಛಳಿ ಜ್ವರ ವ್ಯಾಪಿಸಿರುತ್ತೆ. ಡಿಸ್ಟ್ರಿಕ್ಟಿನ ಪೈಕಿ ಮೈದಾನ ಪ್ರದೇಶಗಳಲ್ಲಿ ಬಡಜನರು ಜೀವನಕ್ಕೆ ಸಂಪಾದಿಸಿಕೊಳ್ಳಲಿಕ್ಕೆ ಬಹಳ ಪ್ರಯಾಸ ಪಡುತ್ತಾರೆ. ಅಲ್ಲಲ್ಲಿ ಅಂದರೆ ಜನಿಗಳಿಗೆ ತೊಂದರೆ ಸಂಭವಿಸಿರುವ ಕಡೆಗಳಲ್ಲಿ 4000 ರೂಪಾಯಿಗಳ ರಿಲೀಫ್ ವರ್ಕನಿಯಾನೆ ಕ್ಷಾಮ ನಿವೃತ್ಯರ್ಥ ಕೆಲಸಗಳು ಜರಿಗಿಸಲ್ಪಡುತ್ತಾಯಿವೆ. ಸದರೀ ಕೆಲಸವು ರಸ್ತೆ ದುರಸ್ತು ಕಾಮಗಾರಿ ಮುಂತಾದ್ದು ಜೀವನಕ್ಕೆ ತೊಂದರೆ ಪಡುತ್ತಾಯಿದ್ದಂತ್ತಾವರಿಗೆ ಕೊಂಚಮಟ್ಟಿಗೆ ವುಪಯೋಗವಾಯಿತು ಮಳೆ ಬೀಳಲೇಯಿಲ್ಲ ಕೆಲವು ಕಡೆಗಳಲ್ಲಿ ಈಗ ಬೆಳೆಯಲ್ಲಿರುವ ಫಸಲು ಯಿಲ್ಲವುನ್ನು ಅಥವಾ ಕೊಂಚ ಹೆಚ್ಚು ಕಡಿಮೆ ಯಿಲ್ಲವುಂನು ಫಲಿಸದೇ ಹೋಗುವದೆಂದು ಭಯ ವುಂಟಾಗಿರುತ್ತೆ, ಯಲ್ಲ ಕಾರಣಗಳಿಂದಲೂ 243 ಮಂದಿ ಸತ್ತರು, ಹಿಂದಿನ ತಿಂಗಳಲ್ಲಿ 268 ಮಂದಿ ಸತ್ತರು, ಸನ 1875ನೇ ಆಗಸ್ಟುನಲ್ಲಿ 311 ಮಂದಿ ಸತ್ತರು.

ಜಾನವರ್—ಚಿಕ್ಕಮಗಳೂರು, ತರೀಕೆರೆ ತಾಲ್ಲೂಕುಗಳಲ್ಲಿ ದೊಡ್ಡರೋಗ ವ ಗೋಮಾರಿ ರೋಗ ವ್ಯಾಪಿಸಿತ್ತು, ತರೀಕೆರೆ, ಚಿಕ್ಕಮಗಳೂರು, ಬಾಣಾವಾರ ತಾಲ್ಲೂಕುಗಳಲ್ಲಿ ಮೇವು ನೀರು ಯಿಲ್ಲದೆ ಜೀವಧನ ಬಹಳ ತೊಂದರೆ ಪಡುತ್ತಾಯಿವೆ.

ಯಲ್ಲ ಕಾರಣಗಳಿಂದಲೂ ಈ ತಿಂಗಳಲ್ಲಿ 4395 ಕಾಲ್ನಡೆ ಸತ್ತವು, ಹಿಂದಿನ ತಿಂಗಳಲ್ಲಿ 6260 ಸತ್ತವು, ಸನ 1875ನೇ ಆಗಸ್ಟುನಲ್ಲಿ 625 ಸತ್ತವು.

P. KRISHNA RAO,
Dy. Commr.

ಅಮೃತ ಮಹಲ್.

ದನಗಳ ಮುಖ್ಯವಾದ ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಯೆ ತಕ್ಕ ಕೆಲವು ಹೋರಿಗಳು, ಹಸುವುಗಳು, ಕರುಪ್ರಗಳು, ಸಣ್ಣ ಯೆತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ 26ನೇ ವುರ್ಕುಂ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರನ್ನು ಕೇಳಿ ತಪಶೀಲ್ ತಿಳಿದುಕೊಳ್ಳಬಹುದು.

ಮು—ವಿ—50 ಜೊತೆ ಯೆತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. MCINROY, *Major,*
Sub-Asstt. Commissary Genl.,
In charge Amrut Mahal, by Mysore.

MYSORE GOVERNMENT PRESS, BANGALORE—1876.

369

ಮೈಸೂರ ಗೆಜೆಟ್.

ನಂ. 40 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಅಕ್ಟೋಬರ ತಾ॥ 7, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	257—260
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರಡರ್ ಕಂಟ್ರೋಲರು, ಪಬ್ಲಿಕ್ ವರ್ಕ್‌ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತಿ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.	471—475
3ನೇ ಭಾಗ—ಇಂಡ್ಯ ಗವರ್ರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. ..	31 —33
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— ..	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ. ..	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 2ನೇ ಸಪ್ಟಂಬರ್ 1876.

ನಂ. 206.

ಬೆಂಗಳೂರು ಲಷ್ಕರ್ ಮ್ಯುನಿಸಿಪಾಲಿಟಿ ಬಗ್ಯಾಗಿ ಏರ್ಪಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮ್ಮಿಷನರವರಿಂದ ಮಂಜೂರು ಮಾಡಲ್ಪಟ್ಟ ಸರ್ವರಿಗೂ ತಿಳಿಯುವ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಷ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಚದರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ವೊಂದು ಹಂಗಾಮೀ ಚಪ್ಪರವನ್ನು ಕಟ್ಟಿಸುವ

ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ಪ್ರಿಂದು ರೂಪಾಯಿಯನ್ನು ಕೊಡತಕ್ಕದ್ದು. ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಚದರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಚಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದೆಸೇಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 219. ತಾರೀಖು 18ನೇ ಶಪ್ಟಂಬರ್ 1876.

ಬೆಂಗಳೂರು ಷಹರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜಾರೀಯಾಗತಕ್ಕ ಬಗ್ಯೆ, ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಮಂಜೂರ್ ಮಾಡಲ್ಪಟ್ಟವೆ:-

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾರ್ಫಿಯಾನೆ ಚಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದರ್ಫ ಮಾಡಕೂಡದು, ಯಾ ದರ್ಫ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದರ್ಫ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದರ್ಫ ಭೂಮಿಯೊಳಗಾಗಲಿ. ಹಾಲೀ ಯಿರುವ ಯಾವ ಸಮಾಧಿಗಾಗಲಿ; ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲ್ಫ ಭೂಮಿಯೊಳಗಾಗಲಿ; ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲ್ಫ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದಿಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚೆಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29.—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲ್ಫ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲ್ಫ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲ್ಫ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದರ್ಫ ಯಾ ಜಲ್ಫ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜಲ್ಫ ಯಾ ದರ್ಫ ಭೂಮಿಗಳ ಟ್ರಸ್ಟೀಗಳಾಗಲಿ ಅಥವಾ ಅವುಗಳ ಚಾರ್ಜ್‌ವುಳ್ಳ ಇತರ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ

ಮಿಾರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಖ ಭೂಮಿಗಳಿಗಾಗಲಿ ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿ ದಿನಕ್ಕೂ ಯರಡು ರೂಪಾಯಿಗಳಿಗೆ ಮಿಾರದ ಬಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 230. ತಾರೀಖು 22ನೇ ಶೆಪ್ಟಂಬರ್ 1876.

ಸನ್ 1869ನೇ ಇಸವಿ ಯೇಪ್ರೆಲ್ 30ನೇ ಮರ್ಸ್ತುಂ 83ನೇ ನಂಬರ್ ಬಾಬತು ಇಂಡ್ಯ ಗವರ್ನಮೆಂಟ ಫಾರೆ ಇಲಾಖೆಯವರ ಇಸ್ತಿಹಾರ್‌ನಾಮೆ ದೆಸೇಯಿಂದ ಮೈಸೂರು ಸೀಮೆಗೆ ಜಾರೀ ಮಾಡಲ್ಪಟ್ಟ 1868ನೇ ಇಸವಿ ಮುಂಬೈ ಆಕ್ಟಿನ 17ನೇ ಸೆಕ್ಷನ್ 2ನೇ ರೂಲ್ ನಿಬಂಧನೆಗಳನುಸಾರವಾಗಿ "ಮಿನಿಮಂಯೇರಿಯ" ಅಂದರೆ ಕಮ್ಮಿ ಬೀಜವರಿಯು ಈ ಕೆಳಗೆ ನಮೂದಿಸಲ್ಪಟ್ಟಿರುವ ಪ್ರಕಾರ ನಿಷ್ಕರ್ಷೆ ಮಾಡಲ್ಪಟ್ಟಿರುತ್ತೆ. ಸಿವಿಲ್ ಕೋರ್ಟಿನ, ವೊಂದು ಡಿಕ್ರಿ ಅಮಲ್‌ಜಾರೀ ಮಾಡುವಲ್ಲಿ ಸದರೀ ಮೇರೆ ಗೊತ್ತಾದ ಬೀಜವರಿ ಗಿಂತ ಕಮ್ಮಿಯಾಗಿ ವೊಂದು ಸರ್ವೆ ನಂಬರ್ ಜಮಿಾನಿಗೆ ಸಬ್ ಡಿವಿಜನ್ ಅಂದರೆ ವೊಳಭಾಗವು ಮಾಡಲ್ಪಡಕೂಡದು.

	ಯಕರೆ	ಗುಂಟೆ		ಯಕರೆ	ಗುಂಟೆ		ಯಕರೆ	ಗುಂಟೆ
ಖುಷ್ಕೀ ಜಮಿಾನು	3	0	ತರೀ ಜಮಿಾನು	0	20	ಬಾಗಾಯಿತು ಜಮಿಾನ್	0	10

ನಂ. 238. ತಾರೀಖು 2ನೇ ಅಕ್ಟೋಬರ್ 1876.

ಕಡೂರು ಡಿಸ್ಟ್ರಿಕ್ಟ ಆಫಿಷಿಯೇಟಿಂಗ್ ಪೋಲೀಸ್ ಅ॥ ಕಮ್ಮಿಷನರ ಮ॥ ವಿಜಯರಾಘವಲು ನಾಯಕರಿಗೆ 1876ನೇ ಜುಲೈ 24ನೇ ಮರ್ಸ್ತುಂ 154ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಮಂಜೂರ್ ಮಾಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಬಂದು ತಿಂಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ನಂ. 239. ತಾರೀಖು 4ನೇ ಅಕ್ಟೋಬರ್ 1876.

ಅರಕಲ್‌ಗೋಡು ತಾಲ್ಲೂಕು ಅಮಲ್‌ದಾರ್ ಬಾದರಅಲ್ಲಿ ಯವರಿಗೆ 1876ನೇ ಇಸವಿ ಶೆಪ್ಟಂಬರ್ 6ನೇ ಮರ್ಸ್ತುಂ 212ನೇ ನಂಬರ್ ಇಸ್ತಿಹಾರಿನಲ್ಲಿ ಮಂಜೂರ್‌ಮಾಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ 3 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 240. ತಾರೀಖು 5ನೇ ಅಕ್ಟೋಬರ್ 1876.

ಆಫಿಷಿಯೇಟಿಂಗ್ ಪೋಲಿಸ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆದ ಮಿಸ್ಟರ್ ಪ್ಲೋರಿಯನ್ ಯವರಿಗೆ ಸನ್ 1876ನೇ ಇಸವಿ ಶೆಪ್ಟಂಬರ್ 30ನೇ ತಾರೀಖು ಲಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 241. ತಾರೀಖು 5ನೇ ಅಕ್ಟೋಬರ್ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಲೆಪ್ಟಿನೆಂಟ್ ವ್ಯಾ ಸಿಂ ಟಿಯರ್ ಯವರಿಗೆ 1876ನೇ ಇಸವೀ ಅಕ್ಟೋಬರ್ 6ನೇ ಮರ್ಸ್ತುಂ ಲಗಾಯಿತು ಅಥವಾ ಅವರು ಯಾವ ಲಗಾಯಿತು ಉಪಯೋಗಿಸಿಕೊಳ್ಳುತ್ತಾರೋ ಆ ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 242. ತಾರೀಖು 5ನೇ ಅಕ್ಟೋಬರ್ 1876.

ಇಂಡ್ಯ ಗವರ್ನಮೆಂಟನವರ ಮಂಜೂರಾತಿಗೆ ವೊಳಪಡಿಸಿ 6ನೇ ಕ್ಲಾಸ್ ಪ್ರೊಬೇಷನೇರಿ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕಲ್ಯಾಣಸುಂದರಂ ಚಟ್ಟಿಯವರು ಅವರ ಖಾಯಿಷ್ ಪ್ರಕಾರ ಅವರ ಉದ್ಯೋಗಕ್ಕೆ ರಾಜೀನಾಮೆ ಕೊಡಲು ಅಪ್ಪಣೆಕೊಡಲ್ಪಟ್ಟಿರುತ್ತಾರೆ.

ಮಿ ಲ ಟೇ ರಿ ಇ ಲಾ ಖಾ .

ನಂ. 243. ತಾರೀಖು 5ನೇ ಅಕ್ಟೋಬರ್ 1876.

ಮೈಸೂರು 5ನೇ ನಂಬರ್ ಕಂಪೆನಿ ಕೆಪ್ಟನ್ ಡೇವಿ ಯವರು ಬೆಂಗಳೂರು ರೈಫಲ್ ವಾಲಂಟಿಯರ್ ಕೋರಿನಲ್ಲಿ ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಡಲು ಅವರ ಖಾಯಿಷ್ ಪ್ರಕಾರ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ಬೆಂಗಳೂರು ರೈಫಲ್ ವಾಲಂಟಿಯರ್ಸ್ನ ಮೈಸೂರು 5ನೇ ನಂಬರ ಕಂಪನಿ ಲೆಫ್ಟಿನೆಂಟ್ ನಾರ್ತ್ರಯವರು ಕೇಪ್ಟನ್ ಹೋದೆಗೆ ರಾಜೀನಾಮೆ ಕೊಟ್ಟ ಕೇಪ್ಟನ್ ಡೇವಿ ಯವರಿಗೆ ಬದಲಾಗಿ ಬಡತಿ ಮಾಡಲ್ಪಟ್ಟಿರುತ್ತಾರೆ.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಪಬ್ಲಿಕ ವರಕ್ಸ್.

ನಂ. 46. ತಾರೀಖು 3ನೇ ಅಕ್ಟೋಬರ 1876.

ಶಿವಮೊಗ್ಗಾ ಡಿವಿಜನ ಸಬ್ ಓವರಸಿಯರ್ ಮೆಸ್ಟರ್ ಮೆರ್ಕಿಟ್ಟೈಯರ್ ಯವರಿಗೆ ಮಾಹೇ ಗುಜಸ್ತಾ 8ನೇ ಮುರ್ಕುಂ ಲಗಾಯತು 6 ತಿಂಗಳ ರಜಾ ಜಾಸ್ತಿಯಾಗಿ ಕೊಡಲ್ಪಟ್ಟಿರುತ್ತೆ.

"ಹುಕ್ಕುಂ ಬಮೋಜೀಬ್."

C. Bowen, *Captain*, R. E.,
Offg. Under-Secy., R. and B. Branch

ನಂ. 47. ತಾರೀಖು 3ನೇ ಅಕ್ಟೋಬರ 1876.

1ನೇ ನಂಬರ್ ಸಬ್ ಡಿವಿಜನಗೆ ಸೇರಿದ ಓವರಸಿಯರ್ ಕುಮಾರಗುರು ಮೊದಲಿಯಾರು 2ನೇ ಗ್ರೇಡ್‌ನಿಂದ 3ನೇ ಗ್ರೇಡಿಗೆ ಮಾಹೇ ಮಜಕೂರ್ ಗುರ್ರೇ ತಾರೀಖು ಲಗಾಯತು ಕಂಪರಾ ಹೊಂದಿರುತ್ತಾರೆ.

"ಹುಕ್ಕುಂ ಬಮೋಜೀಬ್,"

W. Chrystie, *Major*, R. E.,
Under-Secy., Irrigation Branch.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 15ನೇ ಶಪ್ಟಂಬರ 1876.

ಈ ಕೆಳಗೆ ಬರುವ ಮ್ಯುನಿಸಿಫಲ್ ಬೈಲಾ ನಿಬಂಧನೆಯು ವೀರರಾಜೇಂದ್ರ ಪೇಟೆಯಲ್ಲಿ ಚಾಲ್ತೀ ಇಸವಿಯಲ್ಲಿ ಮಾತ್ರ ಜಾರೀ ಯಲ್ಲಿರುವ ಹಾಗೆ ಇದನ್ನು ಚೀಫ್ ಕಮ್ಮಿಷನ್ನರ್ ಸಾಹೆಬರವರು ಮಂಜೂರು ಮಾಡಿರುತ್ತಾರೆ.

ಮ್ಯುನಿಸಿಪಲ್ ಸರಹದ್ದಿನ ಪಳಕ್ಕೆ ವಿಕ್ರಯಕ್ಕಾಗಿ ತರಲ್ಪಡುವ ಪ್ರತಿ ಯೆತ್ತಿಗೂ, ಆಕಳಿಗೂ, ಯಾ ಎಮ್ಮೆ ಕೋಣಕ್ಕೂ ಒಂದು ಆಣೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 7, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮಿಷ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 6ನೇ ಅಕ್ಟೋಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಷ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಸ್ಪೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೫೯	ಮಲ್ಲಯ್ಯ ..	ಮರಿದೇವೇಗೌಡ ..	೯ನೇ ಅಕ್ಟೋಬರ್
ಸ್ಪಿ. ಅ. ೫೭	ರಾಮಣ್ಣಾ ..	ಜವರನಾಯಕ ವಗೈರೆ ..	ಡಿಟೋ
ಕ್ರಿ. ಅ. ೪೮	ಕೈದೀ ವೀರಭದ್ರೈಯ ವಗೈರೆ ..	.. ..	ಡಿಟೋ
ಕ್ರಿ. ಅ. ೫೨, ೫೪	ಕೈದೀ ವೆಂಕಟಾ ವಗೈರೆ ..	.. ..	ಡಿಟೋ
ಕ್ರಿ. ಅ. ೫೬	ಕೈದೀ ನಾಗ ..	.. ..	ಡಿಟೋ
ಕ್ರಿ. ಅ. ೫೯	ಕೈದೀ ಚವುಡಾ ..	.. ..	ಡಿಟೋ
ಕ್ರಿ. ಪಿಟಿಷನ್ ೨೬	ದೊಡ್ಡ ಮಲ್ಲೈಯ ವಗೈರೆ ..	.. ..	ಡಿಟೋ
ಸ್ಪಿ. ಅ. ೫೭	ತಿಮ್ಮಾ ವಗೈರೆ ..	ಬೆಸ್ತರ ದಾಸೀ ವಗೈರೆ ..	೧೦ನೇ ಡಿಟೋ
ಸ್ಪಿ. ಅ. ೬೦	ದೊಡ್ಡ ಅಚ್ಚೈಯ ..	ಕಪ್ಪೈಯ ..	ಡಿಟೋ
ಸ್ಪೂಟ ಅ. ೧೧	ಪುಟ್ಟಚನ್ನಮ್ಮ ವಗೈರೆ ..	ನಂಜಮ್ಮ ..	ಡಿಟೋ
ಕೊ. ಸ್ಪಿ. ಅ. ೯	ನಾರಣೈಯ ..	ಕುಪ್ಪಮ್ಮ ..	೧೨ನೇ ಡಿಟೋ
ಸ್ಪಿ. ಅ. ೫೨	ಗೋಪಾಲೈಯ ವಗೈರೆ ..	ವುಜನೀ ಮರುಳೈಯ ವಗೈರೆ ..	೧೭ನೇ ಡಿಟೋ
ಸ್ಪಿ. ಅ. ೫೪	ವುಂಮ್ಮಾಜಿ ..	ಸುಬ್ಬಣ್ಣಾ ವಗೈರೆ ..	ಡಿಟೋ
ಸ್ಪಿ. ಅ. ೪೭	ಚೆರಂತಪ್ಪಾ ..	ಚನ್ನವೀರಪ್ಪ ವಗೈರೆ ..	೨೪ನೇ ಡಿಟೋ
ಕ್ರಿ. ಪಿಟಿಷನ್ ೨೪	ಗರುಡಾಚಾರಿ ..	.. ..	ಡಿಟೋ
ಸ್ಪೂಟ. ಸ್ಪಿ. ಅ. ೧೧	ಕಾಶೀಪತೈಯ ..	ಮುನಿಯಪ್ಪಾ ವಗೈರೆ ..	ಡಿಟೋ
ಸ್ಪಿ. ಅ. ೬೧	ಬಸವೇಗೌಡ ..	ಶಿದ್ದೇಗೌಡ ..	೨೮ನೇ ಡಿಟೋ
ಸ್ಪಿ. ಅ. ೬೨	ಶಿ. ಪುಟ್ಟೇಗೌಡ ..	ಟಿ. ಪುಟ್ಟೇಗೌಡ ..	ಡಿಟೋ
ಕೊ. ಸ್ಪಿ. ಅ. ೧೧	ಮೋದೈಯ ..	ಮಾದೈಯ ವಗೈರೆ ..	೩೧ನೇ ಡಿಟೋ
ಸ್ಪೂಟ ಸ್ಪಿ. ಅ. ೧೦	ವೆಂಕಟರಾಜೇಅರಸು ..	ಸುಬ್ಬಶೆಟ್ಟಿ ..	೨ನೇ ನವೆಂಬರ್
ಸ್ಪೂಟ ಸ್ಪಿ. ಅ. ೧೨	ಶೀತಮ್ಮ ..	ಲಿಂಗೇಗೌಡ ..	ಡಿಟೋ

J. D. GORDON, *Judl. Commr.*

ರೆವಿನ್ಯೂ ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 2ನೇ ಅಕ್ಟೋಬರ್ 1876.

ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಮೇಜರ್ ಗ್ರಾಂಟ್ ಸಾಹೇಬರು ಆಫಿಷಿಯೇಟಿಂಗ್ ಸೂಪರಿಂಟೆಂಡೆಂಟ್ ಮೇಜರ್ ಆಂಡರರ್ಸನ್ ಯವರಿಗೆ 1876ನೇ ಸೆಪ್ಟಂಬರ್ 25ನೇ ಮರ್ಕ್ಕುಂ ಪೂರ್ವಾಹ್ನದಲ್ಲಿ ತಮ್ಮ ಆಫಿಸ್ ಚಾರ್ಜನ್ನು ಕೊಟ್ಟರು.

ನಂ. ತಾರೀಖು 2ನೇ ಅಕ್ಟೋಬರ್ 1876.

ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಮೇಜರ್ ಗ್ರಾಂಟ್ ಸಾಹೇಬರು, 1876ನೇ ಸೆಪ್ಟಂಬರ್ 15ನೇ ಮರ್ಕುಮಿನ ಚೀಪ್ ಕಮ್ಮಿಷನರವರ ಇಸ್ತಿಹಾರ್ ನಾಮೆ ಪ್ರಕಾರ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾವನ್ನು ಅದೇತಿಂಗಳು 25ನೇ ತಾರೀಕ್ ಪೂರ್ವಾಹ್ನದಲ್ಲಿ ಉಪಯೋಗಿಸಿಕ್ಕೊಂಡರು.

ನಂ. ತಾರೀಖು 2ನೇ ಅಕ್ಟೋಬರ್ 1876.

ಮೇಜರ್ ಆಂಡರ್‌ಸನ್ ಯವರು ಮೈಸೂರು ರೆವಿನ್ಯೂ ಸರ್ವೆ ಡಿಪ್ಟಿ ಸೂಪರಿಂಟೆಂಡೆಂಟ್ ಆಫಿಸ್ ಚಾರ್ಜನ್ನು ಕೆಪ್ಟನ್ ಜಿ. ಮೆಕ್ಕಂಜಿ ಯವರಿಗೆ 1876ನೇ ಇಸವೀ ಶಪ್ಟಂಬರು 25ನೇ ಮರ್ಕ್ಕುಂ ಮಧ್ಯಾನಕ್ಕೆ ಪೂರ್ವ ಕೊಟ್ಟರು.

W. C. ANDERSON,
Survey & Settlement Commr., Mysore.

ಇನಾಂ ಇಲಾಖಾ.

ನಂ. 6. ತಾರೀಖು 3ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಯಿರುವ ಇನಾಂಗಳ ಸಲುವಳಿಯ ವಿಚಾರಣೆಯು ಸದರೀ ತಾಲ್ಲೂಕು ಕಸಬೇಯಲ್ಲಿ ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಶ್ರೀನಿವಾಸೈಯಂಗಾರಿಂದ ನಡಿಸಲ್ಪಟ್ಟು 1876ನೇ ನವೆಂಬರ್ 1ನೇ ಮರ್ಕ್ಕುಂನಲ್ಲಿ ಷುರು ಮಾಡಲ್ಪಡುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಯಿನಾಂಗಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ, ರೂಬರೂ ಯಾ ತಮ್ಮ ಮುತಾಲೀಕರ ಮೂಲಕ ಹಾಜರಾಗಿ ತಮ್ಮತಮ್ಮ ಹಕ್ಕುದಾರೀಗಳನ್ನು ಸ್ಥಾಪಿಸಿ ತಮ್ಮಲ್ಲಿರುವ ಸನ್ನದ್‌ಗಳು ವ ಯಿತರ ದಸ್ತಾವೇಜುಗಳು ಯಿವುಗಳನ್ನು ಹಾಜರ್‌ಮಾಡಬೇಕೆಂದು ನಿಯಮಿಸಲ್ಪಡುತ್ತಾರೆ, ಹಾಗೆ ಮಾಡದೆ ತಪ್ಪಿದ ಪಕ್ಷಕ್ಕೆ ಅವರ ಯಿನಾಂಗಳು ಪ್ರಥಮತಃ ಜಫ್ತೀಮಾಡಲ್ಪಟ್ಟು ತರುವಾಯ ಶೇವಟೀಗೆ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

R. A. COLE,
Supt. of Inam Settlements.

ಸ್ಟೇಟ್ ವ ಡಿಸ್ಟ್ರಿಕ್ಟು ಫಾರೆಸ್ಟ್ ರೆವಿನ್ಯೂ ವಿಷಯು.

ಸರ್ಕ್ಯುಲರ್ ನಂಬರ್ 1292, ತಾರೀಖು 28ನೇ ಶಪ್ಟಂಬರ್ 1876.

ಡೆಪ್ಯುಟಿ ಕಮ್ಮಿಷನರ್‌ಗಳು, ಡಿಸ್ಟ್ರಿಕ್ಟು ಟ್ರೆಜರೀ ಆಫಿಸರ್‌ಗಳು, ವ ಅಮಲ್‌ದಾರ್ರುಗಳು ಯಿವರುಗಳಿಗೆ.

ಜಂಗ್ಲೀ ಬಾಬಿನ ಜಮೇ ಯನ್ನು ಕುರಿತು ಹುಟ್ಟಿದ 1873ನೇ ಇಸವಿ ಏಪ್ರಿಲ್ 26ನೇ ಮರ್ಕ್ಕುಂ 998ನೇ ನಂಬರ್ ಅಕ್ಕಾಂಟ್ ಸರ್ಕ್ಯುಲರ್ ವಿಷಯದಲ್ಲಿ ಡೆಪ್ಯುಟಿ ಅಕ್ಕಾಂಟೆಂಟ್ ಜನರಲ್ಲವರು ತಿಳಿಸುವದೇನಂದರೆ, ಚೀಪ್ ಕಮ್ಮಿಷನರವರು 1876ನೇ ಇಸವಿ 22ನೇ ಮರ್ಕ್ಕುಂ 5181—900ನೇ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ, ಫಾರೆಸ್ಟ್ ಯಿಲಾಖಾ ವಿಚಾರಣೆಯಲ್ಲಿ ಜಂಗ್ಲೀ ಹುಟ್ಟುವಳೀ ಬಾಬತು ಸರ್ಕಾರಕ್ಕೆ ಬರತಕ್ಕದ್ದು, ವಸೂಲು, ಬಾಕಿ ಯಿವುಗಳನ್ನು ಕುರಿತು ನಂಬರ್ 24ನೇ, ಮತ್ತು ಡಿಸ್ಟ್ರಿಕ್ಟು ಫಾರೆಸ್ಟಗಾಗಿ ನಂಬರ್ 25ನೇ ಪರಿಷ್ಕರಿಸೋಣಾದ ನಮೂನೇಗಳನ್ನು ಮಂಜೂರ್ ಮಾಡಿರುತ್ತಾರೆ. ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್‌ವೇಟರ್‌ಗಳಿಂದಾಗಲಿ, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್‌ಗಳಿಂದಾಗಲಿ, ಮೊಬಲಗ್ ಬಂದಲ್ಲಿ ಸದರೀ ನಮೂನೇಗಳಲ್ಲಿ ತೋರಿಸಲ್ಪಟ್ಟ ಆ ಮೊಬಲಗಿಗೆ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರ್‌ಗಳು ಮಾಮೂಲ್ ಮೇರೆ ಸರ್ಟಿಫೈ ಮಾಡತಕ್ಕದ್ದೆಂದು ಕೋರಲ್ಪಡುತ್ತಾರೆ.

2. (ಸ್ಟೇಟ್ ಫಾರೆಸ್ಟಿನ ಬಾಬತು) 24ನೇ ನಂಬರ್ ಸ್ಟೇಟ್‌ಮೆಂಟಿಗೆ ಸಂಬಂಧಿಸಿದ ಮೊಬಲಗ್, 998ನೇ ಅಕ್ಕಾಂಟ್ ಸರ್ಕ್ಯುಲರಿನ 1, 2ನೇ ನಿಬಂಧನೆಗಳಲ್ಲಿ ವಿಧಿಸಲ್ಪಟ್ಟ ಮೇರೆ ಫಾರೆಸ್ಟು ಆಫಿಸರಿಂದ ಅಡ್‌ವೈಸ್‌ಗಳು ಬಂದಮೇಲೆಯೇ ಜಮೆ ಯಿಡಲ್ಪಡುವದು. ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು 25ನೇ ನಂಬರಿಗೆ ಸೇರಿದ ಮೊಬಲಗ್ ಗಳು, ಅದೇ ಸರ್ಕ್ಯುಲರಿನ 5ನೇ ರೂಲ್ ಪ್ರಕಾರ

ಅಂದರೆ, ರೆವಿನ್ಯೂ ಆಫಿಸರ (ಅಮಲ್‌ದಾರ್) ಯಿಂದ ವಸೂಲ್ ಮಾಡಲ್ಪಟ್ಟ ಮೊಬಲಗನ್ನು ಕುರಿತು ಕೂಡ್ಲೆ ಆತನು ಫಾರೆಸ್ಟ್ ಆಫಿಸರಿಗೆ ರಿಪೋರ್ಟು ಮಾಡತಕ್ಕದು. ಪರಂತು ಫಾರೆಸ್ಟು ಆಫಿಸರು ಖಜಾನೇಗೆ ಅಡ್ವೈಸನ್ನು ಕಳುಹಿಸಬೇಕಾದಲ್ಲವು.

3. ಟ್ರೆಜರೀ ಲೆಕ್ಕದ ನಮೂನೇಯಲ್ಲಿ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರು "ಫಾರೆಸ್ಟ್" ಯೆಂಬ ಮೇಜರ್ ಹೆಡ್ ಕೆಳಗೆ, ಸ್ಟೇಟ್ ಫಾರೆಸ್ಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಯಿವುಗಳ ಹುಟ್ಟುವಳಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಧಿಸಲ್ಪಟ್ಟ ತಪಶೀಲಗಳೊಡನೆ ತೋರಿಸುವ ಬಗ್ಗೆ ಸೇರಿದಹಾಗೆ ಯಿರುವ ಯೆರಡು ಮದ್‌ಗಳನ್ನು ಕಲ್ಪಿಸಬೇಕೆಂದು ಕೋರುತ್ತೆ.

H. HUDSON,
Dy. Acctt. General in Mysore.

ಪಬ್ಲಿಕ್ ವರ್ಕ್ಸ ಇಲಾಖಾ.

ತಾರೀಖು 3ನೇ ಅಕ್ಟೋಬರ್ 1876.

ಇದರಡಿಬರುವ ವರ್ಗಾ ವರ್ಗಿಯು ಮಂಜೂರ್ಮಾಡಲ್ಪಟ್ಟಿರುತ್ತೆ.

3ನೇ ಗ್ರೇಡ್ ಓವರಸಿಯರ್ ಕೃಷ್ಣಯ್ಯನವರು ಟ್ಯಾಂಕ್ ಡಿವೀಜನ್ 2ನೇ ನಂಬರಿನಿಂದ 1ನೇ ನಂಬರ್ ಟ್ಯಾಂಕ್ ಡಿವೀಜನ್ನಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

2. ಈ ವರ್ಗಾ ವರ್ಗಿಯು ಸರಕಾರ ಪ್ರಯೋಜನಕ್ಕಾಗಿ ಮಾಡಲ್ಪಟ್ಟಿರುತ್ತೆ.

W. CHRYSTIE, *Major*, R. E.,
Supg. Engr. of Irrigation.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಶಿವಮೊಗ್ಗಾ,	16ನೇ	ಅಕ್ಟೋಬರ್	1876.	ಹೆಚ್ಚು ಕಡಮೆ 200 ಟನ್‌ಗಳ ವಜನಿ.
ಸಾಗರ,	25ನೇ	,,	,,	
ಹುಣಸೂರು,	4ನೇ	ನವಂಬರ್	1876	ಹೆಚ್ಚು ಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಣ,	8ನೇ	,,	,,	
ಬೆಂಗಳೂರು,	1ನೇ	ಡಿಶಂಬರ್	,,	ಹೆಚ್ಚು ಕಡಮೆ 100 ಟನ್‌ಗಳು.
ಫ್ರೆಜರ್‌ಪೇಟೆ	18ನೇ	,,	,,	80 ,,

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮುರ್ಕ್ಕಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯು ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುರ್ಕ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮುರ್ಕ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತುಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ್, ಪೌಂಡ್, ಹಂಡ್ರೆಡ್ ವೆಯಿಟ್ ಟನ್‌ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain*,
Conservator of Forests, Mysore & Coorg.

ನಂದೀದುರ್ಗ ಡಿವೀಜನ.

ತಾರೀಖು 29ನೇ ಶಪ್ಟಂಬರ 1876.

ಶಿಡ್ಲಘಟ್ಟದ ತಾಲ್ಲೂಕು ಹಂಗಾಮೀ ಮರಹಮ್ಮತ್ ಮುತ್ಸದ್ದಿ ಗುಂಡಪ್ಪಗೆ ಆತ ಉಪಯೋಗಿಸಿಕೊಳ್ಳುವ ತಾರೀಖು ಲಗಾಯತ್ ರಾಮಕೃಷ್ಣೈಯ್ಯನೆಂಬವನ ಬದಲೀಮೇಲೆ 25 ದಿನಗಳ ರಜಾ ಮಂಜೂರಾಗಿರುತ್ತೆ.

J. L. Pearse,
Commissioner.

ಎಕ್ಸ್‌ಪೆರಿಮೆಂಟಲ್ ಫಾರಂ.

ತಾರೀಖು 18ನೇ ಶಪ್ಟಂಬರ 1876.

ಫಾರಂ ಅಂದರೆ ವ್ಯವಸಾಯ ವಿಷಯದ ಅಜಮಾಯಿಷೀ ಜಮೀನಿನ ಸೂಪರಿಂಟೆಂಡೆಂಟರು ಇದರಿಂದ ತಿಳಿಯಪಡಿಸುವದೇನಂದರೆ,—ಯಾವದಿನದಲ್ಲಾಗಲಿ ಬೆಳಿಗ್ಯೆ 7 ಗಂಟೆಗಳಮೊದಲು 9 ಗಂಟೆಗಳವರಿಗೆ ಫಾರಂ ಜಾಗಾದಲ್ಲಿ ಬರತಕ್ಕ ಅಮಲ್ದಾರರು ನೇಟಿವ್ ಬೇಸಾಯಗಾರರು ಮತ್ತು ಬೇಸಾಯದ ವಿಷಯದೊಳಗೆ ಅಕ್ಕರೆವುಳ್ಳ ಜನಗಳು ಇವರುಗಳನ್ನು ಸದರೀ ಜಮೀನಿನಲ್ಲಿ ಬೆಳೆ ಇಡಲ್ಪಟ್ಟ ಹೊಸ ಫಸಲ್‌ಗಳ ಗುಣವನ್ನೂ ಹೊಸ ಸಾಧನಗಳ ಉಪಯೋಗಗಳನ್ನೂ, ವಿಧವಿಧವಾದ ಬೇಸಾಯದ ತರಹೇಗಳನ್ನೂ ಕುರಿತು ವಿವರಿಸುವಬಗ್ಯೆ ನೋಡಲಿಕ್ಕೆ ಅಪೇಕ್ಷೆಯುಳ್ಳವರಾಗಿದ್ದಾರೆ.

F. E. Harman,
Supt. of Experimental Farm.

MYSORE DISTRICT.

Notice of an application by Venkatachar for a certificate under Act XXVII of 1860.

ಮೈಸೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಸನ 1876ನೇ ಇಸವಿ ಶಿವಿಲ ಮಿಸಲೇನಿಯಸ ನಂ. 67.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಲಕ್ಷ್ಮೀಪುರಂ ಚಿನ್ನಕೃಷ್ಣಮಾಚಾರ್ರಿಗೆ ಬರಬೇಕಾದ 900 ರೂಪಾಯಿಗಳನ್ನ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಆಗಬೇಕೆಂದು ತಲಕಾಡ ತಾಲ್ಲೂಕು ಸೋಸಲೇ ಹೋಬಳಿ ಶ್ರೀರಂಗರಾಜಪುರದಲ್ಲಿ ಯಿರುವ ಲಕ್ಷ್ಮೀಪುರಂ ವೆಂಕಟಾಚಾರ್ರೆಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ ತಿಂಗಳು 10ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನ ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮಾಹೇ ಶಪ್ಟಂಬರು ಸನ 1876ನೇ ಇಸವಿ, ಮೊಕ್ಕಾಂ ಮೈಸೂರು.

E. C. Shanmugavelu Pille,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಚನ್ನಗಿರೀಯಿಂದ ಶಿವಮೊಗ್ಗಾ ಜೆಯಿಲ್‌ಗೆ ಪೋಲಿಸನವರ ಪಹರೇಮೇಲೆ ತೆಗದುಕೊಂಡು ಹೋಗುತ್ತಿರುವ ಸಮಯದಲ್ಲಿ ಪರಾರಿಯಾದ ಖೈದಿ ಹೆಂಗಸಿನ ಚಹರೆ ಪಟ್ಟಿ.

ಹೆಸರು ರಂಗಿ—ಜಾತಿ ಬಡಿಗಿಯವಳು—ವೇಶ್ಯಾವೃತ್ತಿಯಲ್ಲಿ ಬೆಳಿಸಲ್ಪಟ್ಟವಳು—ವಾಸಸ್ಥಳ ಗೊತ್ತಿಲ್ಲ—ತಪ್ಪಿತ ಮನೇ ಇಳೇಬಿದ್ದದ್ದು—ಶಿಕ್ಷೆ ಯರಡು ವರುಷಗಳ ಕಠಿಣಖೈದು—ವಯಸ್ಸು ಸುಮಾರು 25 ವರುಷ—ಎತ್ತರ ನಾಲ್ಕು ಅಡಿ ನಾಲ್ಕು ಅಂಗುಲ—ಯಾರಿಂದ ಶಿಕ್ಷೆ ವಿಧಿಸಲ್ಪಟ್ಟದ್ದು ಸಾಗರ ಸಬ್ ಡಿ|| 1ನೇ ಕ್ಲಾಸ್ ಮೇಜಿಸ್ಟ್ರೇಟರಿಂದ.

ಮುಖ್ಯವಾದ ಗುರುತುಗಳು, ಕೆಂಪುಬಣ್ಣ ದಪ್ಪವಾದ ಶರೀರ.

Mahomed Ali,
For Offg. Dy. Commr.

CHITALDROOG DISTRICT.

Notice inviting claimants, if any, to the house tendered by the Shroff, Chitaldroog Taluk Treasury, as a security for the office he holds.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಜುಡಿಷಲ್ ಅಸಿಸ್ಟೆಂಟೆ ಕಮ್ಮಿಷನರವರ ಕೋರ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟು ಚಿತ್ರದುರ್ಗದ ತಾಲ್ಲೂಕು ಖಜಾನಾ ಸರಾಫ ಗುಂಡಪ್ಪನೆಂಬಾತನು ತನ್ನ ವುದ್ಯೋಗಕ್ಕಾಗಿ ಜಾಮೀನು ಖಾತರೇಬಗ್ಗೆ ಇದೆ ಚಿತ್ರದುರ್ಗದ ಕಸಬಾ ಟೌನ್ನಲ್ಲಿ ಇರುವ ಸುಮಾರು 1000 ರೂಪಾಯಿ ಕ್ರಯ ಬಾಳಬಹುದಾದ ಮ್ಯುನಸಿಫಲ್ ನಂಬರು 851ನೇ ಬಾಬತು ತನ್ನ ಸ್ವಂತ ಮನೆಯನ್ನ ಸರ ಕಾರಕ್ಕೆ ಖಾತರೆಗೋಸ್ಕರ ಈಡು ಮಾಡಿಕೊಟ್ಟಿರುತ್ತಾನಾಗಿ ಈ ಮನೆಗೆ ಮತ್ಯಾರು ಹಕ್ಕು ಇದ್ದಾಗ್ಯೂ ಈ ಲಾಗಾಯಿತು 3 ತಿಂಗ ಳು ವಳಗಾಗಿ ಅಂತಾ ಹಕ್ಕು ವುಳ್ಳವರು ಕ್ರಮವಾದ ದಸ್ತೈವೇಜು ವಗೈರೆ ನಿಸೀ ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರವರ ಬಳಿಗೆ ಹಾಜರಾಗಬೇಕು ಆ ವಾಯಿದೆ ನಂತರ ಹಾಜರಾಗುವ ಪಕ್ಷಕ್ಕೆ ಅಂತಾ ವಿಷಯ ಮಂಜೂರು ಮಾಡುವದಿಲ್ಲ ತಿಳಿಯುವದು.

ತಾರೀಖು 15ನೇ ಮಾಹೇ ಶಪ್ಟಂಬರು 1876ನೇ ಇಸವಿ ಚಿತ್ರದುರ್ಗ.

S. VENKAT VARDAIENGAR,
Treasury Officer.

ಕರ್ರೆಸೀ ನೋಟಿಗಳು.

ಇದರಡಿ ನಮೂದಿಸಲ್ಪಡುವ ಕರ್ರೆಸಿ ನೋಟುಗಳ ಅರ್ಧ ಭಾಗಗಳು ಕುಣಿಗಲನಿಂದ ಬೆಂಗಳೂರಿಗೆ ಟಪಾಲ್ ದ್ವಾರ ರವಾನೆ ಆಗುವಲ್ಲಿ ಹೋಗಿರುತ್ತವೆ.

ನಂಬರ್.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
$\frac{B}{50}$ 14029	ಮದ್ರಾಸ್	100	ಬೆಂಗಳೂರು ನಗರ್ತಪೇಟೆಯಲ್ಲಿರುವ ಜವಳೀ ವರ್ತಕ ಮಂಗಳಗಿರಿ ಪೇರ್ಕ್ಯ ಯಶೆಟ್ಟಿ
$\frac{B}{44}$ 64251	ಡಿಟೋ	100	
$\frac{B}{44}$ 26975	ಡಿಟೋ	100	
$\frac{B}{44}$ 22176	ಡಿಟೋ	100	
$\frac{B}{35}$ 88386	ಡಿಟೋ	20	
$\frac{B}{42}$ 39527	ಡಿಟೋ	20	

ಯಿದರಡಿ ನಮೂದಿಸಲ್ಪಡುವ ಕರ್ರೆಸಿನೋಟು ಹೋಗಿರುತ್ತೆ.

ನಂಬರ್.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
$\frac{B}{44}$ 78677	ಮದ್ರಾಸ್.	100	ಬೆಂಗಳೂರಲ್ಲಿರುವ ಚೀಫ್ ಕಮ್ಮಿಷನ್ನರವರ ಖಜಾನೆ ಬಕ್ಷೀರು ಮೆ॥ ಶಿತುರಾಯರು.

ಅಮೃತ ಮಹಲ್.

ದನಗಳ ಮುಖ್ಯವಾದ ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಯೆ ತಕ್ಕ ಕೆಲವು ಹೋರಿಗಳು, ಹಸುವುಗಳು, ಕರುವುಗಳು, ಸಣ್ಣ ಯಿತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ 26ನೇ ಮುರ್ಕಂ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರನ್ನು ಕೇಳಿ ತಪಶೀಲ್ ತಿಳಿದುಕೊಳ್ಳಬಹುದು.

ಮು—ಎ—50 ಜೊತೆ ಯಿತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. MCINROY, *Major,*
Sub-Asstt. Commissary Genl.,
In charge Amrut Mahal, by Mysore.

MYSORE GOVERNMENT PRESS, BANGALORE—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ ತಾ॥ 7, ಸನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಸನ 1871ನೇ ಇಸವಿಯ ಲ್ಯಾಂಡ ಇಂಪ್ರೂವ್‌ಮೆಂಟ್‌ಯಾನೆ ಜಮೀನ ಅಭಿವೃದ್ಧಿಯ ಆಕ್ಟನ್ನು ತಿದ್ದುಪಡೀ ಮಾಡುವ ಬಗ್ಯೆ ಹುಟ್ಟಿದ ಮುಸುವಿದಾ ಆಕ್ಟು.

---:0:---

ಪೀಠಿಕೆ. 1871ನೇ ಇಸವಿಯ ಲ್ಯಾಂಡ ಇಂಪ್ರೂವ್‌ಮೆಂಟ ಆಕ್ಟುಯಾನೆ ಜಮೀನ ಅಭಿವೃದ್ಧಿಯ ಆಕ್ಟಿನ ಕೆಲವು ನಿಬಂಧನೆಗಳ ಅಮಲ ವಿಷಯದಲ್ಲಿ ಸಂದೇಹಗಳು ವುಂಟಾಗಿರುವದರಿಂದ ಅಂತಾ ಸಂದೇಹಗಳನ್ನು ನಿವರ್ತಿ ಮಾಡುವ ಉದ್ದೇಶದೊಡನೆ ಐರ್ಜ ಆಕ್ಟನ್ನು ತಿದ್ದುಪಡಿ ಮಾಡುವದು ಯುಕ್ತವಾಗಿರೋಣದರಿಂದ ನಿರ್ಣಯಿಸಲ್ಪಡುವದೇನಂದರೆ.

ಸ್ಥಳಿಕ ವ್ಯಾಪ್ತಿ. ಈ ಆಕ್ಟು ಬ್ರಿಟಿಷ್ ಇಂಡ್ಯದ ಸರ್ವತ್ರ ವ್ಯಾಪಿಸುತ್ತದೆ.

ಕಲ್ಪನೆ. ಯಿದು 1871ನೇ ಇಸವಿಯ ಸದರೀ ಜಮೀನ ಅಭಿವೃದ್ಧಿ ಆಕ್ಟಿನೊಂದಿಗೆ ಓದಲ್ಪಟ್ಟು ಅದರ ವೊಂದು ಭಾಗವಾಗಿ ಅಂಗೀಕರಿಸಲ್ಪಡತಕ್ಕದ್ದು.

ಷುರು. ಮತ್ತು ಯಿದು 1871ನೇ ಇಸವಿ ಶಪ್ಟಂಬರ 28ನೇ ತಾರೀಖಿನಲ್ಲಿ ಜಾರೀಗೆ ಬಂದಂತೆ ಯೆಣಿಸಲ್ಪಡತಕ್ಕದ್ದು—ಯಾತಕ್ಕಂದರೆ ಸದರೀ ತಾರೀಖಿನಲ್ಲಿ ಐರ್ಜ ಆಕ್ಟು ಜಾರೀಗೆ ತರಲ್ಪಟ್ಟಿತು.

1871ನೇ ಇಸವಿಯ 26ನೇ ನಂ ಆಕ್ಟಿನ 15ನೇ ಸೆಕ್ಷನ ತಿದ್ದುಪಾಡು. ಐರ್ಜ ಆಕ್ಟಿನ 15ನೇ ಸೆಕ್ಷನ ರದ್ದು ಮಾಡಲ್ಪಟ್ಟಿರುತ್ತೆ, ಮತ್ತು ಅದಕ್ಕೆ ಬದಲಾಗಿ ಯಿದರ ಕೆಳಗೆ ಬರುವ ಸೆಕ್ಷನ ಯೇರ್ಪಡಿಸಲ್ಪಡ ತಕ್ಕದ್ದು.

"15. ಈ ಆಕ್ಟು ಪ್ರಕಾರ ಅಡ್ವಾನಸ ಕೊಡಲ್ಪಟ್ಟ ದರೋಬಸ್ತು ಮೊಬಲಗಗಳೂ ಅವು ಬಾಕೀ ಆದಾಗ ಈ ಕೆಳಗೆ ನಮೂದಿಸಲ್ಪಡುವ ವಿಶಿಷ್ಟ ವಿಧಗಳಿಂದಲಾಗಲಿ, ಅಪೈಕಿ ಯಾವ ವಿಧದಿಂದಲಾಗಲಿ, ವಸೂಲ್ಮಾಡಲ್ಪಡ ತಕ್ಕದ್ದು.

(a.) ಹಣ ತೆಗೆದುಕೊಂಡವನಿಂದ, ಸದರೀ ಮೊಬಲಗ ಜಮೀನ ಕಂದಾಯದ ಬಾಕೀಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(*b.*) ಜಾಮೀರ್ದಾರ ಯಾವನಾದರೂ ಯಿದ್ದರೆ ಆತನಿಂದ, ಸದರೀ ಮೊಬಲಗ್ ಜಮೀನ್ ಕಂದಾಯದ ಬಾಕಿಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(*c.*) ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಿಂದ, ಸದರೀ ಮೊಬಲಗ್ ಅಂತಾ ಜಮೀನಿಗಾಗಿ ಸಲ್ಲಬೇಕಾದ ಕಂದಾಯದ ಬಾಕೀ ಮೊಬಲಗಾಗಿದ್ದರೆ ಹ್ಯಾಂಗೋ ಹಾಂಗೆ,

(*d.*) ಯಿತರ ಖಾತರು ಯೆನಾದರೂ ಯಿದ್ದರೆ, ಅಂತಾ ಖಾತರು ದಸ್ತಾವೇಜಿನ ಷರತ್ತುಗಳ ಪ್ರಕಾರ ಅಂತಾ ಖಾತರು ಅಡಗಿಸಿಕ್ಕೊಂಡಿರುವ ಸ್ವತ್ತಿನಿಂದ,—
ಪರಂತು,

(*e.*) ಹಣ ತೆಗೆದುಕೊಂಡವನು ಜಮೀರ್ದಾರನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಸಾಗುವಳೀದಾರ ವುಂಟಾಗಿರತಕ್ಕ ಸ್ವಂತ ಯಾ ಸಾಗುವಳೀ ಹಕ್ಕು ಅಡ್ವಾನ್ಸ್ ತೆಗದುಕ್ಕೊಂಡ ಮೊಬಲಗಿಗೆ ಸಾಗುವಳೀದಾರನು ಅಂತಾ ಹಕ್ಕನ್ನು ಯಿತರ ಖಾತರಾಗಿ ಮಾಡಿಕೊಟ್ಟಿದ್ದರೇನೇ ಹೊರತು ಅಂತಾ ಅಡ್ವಾನ್ಸ್ ಮೊಬಲಗ್ ಬರಮಾಡಿ ಕೊಳ್ಳುವದಕ್ಕೋಸ್ಕರ ಹರಾಜು ಆಗಲಿಕ್ಕೆ ಗುರಿಯಾಗಿರ ತಕ್ಕದ್ದಿಲ್ಲಾ.

(*f.*) ಹಣ ತೆಗದುಕ್ಕೊಂಡವನು 7ನೇ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ಸಾಗುವಳೀದಾರ ನಂತಾವನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಜಮೀರ್ದಾರನಿಗೆ ಯಿರತಕ್ಕ ಹಕ್ಕುದಾರಿಯು ಅಡ್ವಾನ್ಸ್ ಕೊಟ್ಟ ಮೊಬಲಗ್ ಬರಮಾಡಿ ಕೊಳ್ಳುವದಕ್ಕೋಸ್ಕರ ಹರಾಜುಆಗಲಿಕ್ಕೆ ಗುರಿಯಾಗಿರಕ್ಕದ್ದಿಲ್ಲಾ.

(*g.*) ಮತ್ತು ಅಡ್ವಾನ್ಸ್ ಕೊಟ್ಟಿದ್ದ ಮೊಬಲಗು, ಹಣ ತೆಗದುಕ್ಕೊಂಡವನ ಯಾ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನ ದೇಣೀ ಸಮಾಧಾನಕ್ಕಾಗಿ ಜಾಮೀರ್ದಾರನಿಂದಲಾಗಲಿ ಆತನ ಸ್ವತ್ತಿನ ಮೇಲಾಗಲಿ, ವಸೂಲ್ ಮಾಡಿಕೊಳ್ಳಲ್ಪಟ್ಟರೆ, ಹಣ ತೆಗದುಕ್ಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನ್ ಮೇಲೂ ಅಡ್ವಾನ್ಸ್ ಕೊಟ್ಟ ಮೊಬಲಗು ಬರಬೇಕಾದಾಗ ಸರಕಾರದವರಿಗೆ ಯಾವ ದಾವೆಗಳು ವ ಪರಿಹಾರಗಳು ವುಂಟಾಗಿದ್ದವೋ ಅದೇ ದಾವೆಗಳೂ ಪರಿಹಾರಗಳೂ ಹಣ ತೆಗದುಕ್ಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನ್ ಮೇಲೂ ಸದರೀ ಜಾಮೀರ್ದಾರಗೆ ಉಂಟಾಗಿರ ತಕ್ಕದ್ದು.

ಉದ್ದೇಶ ಕಾರಣಗಳ ವಿವರಣೆ.

(1871ನೇ ಇಸವಿಯ 26ನೇ) ಲ್ಯಾಂಡ್ ಇಂಪ್ರೂವ್ ಮೆಂಟಿಯಾನೆ ಜಮೀನ್ ಅಭಿವೃದ್ಧಿಯ ಆಕ್ಟಿನ 14ನೇ ಸೆಕ್ಷನ್ ವಿಧಿಸುವದೇನಂದರೆ.—ಸದರೀ ಆಕ್ಟು ಅನುಸರಿಸಿ ಅಡ್ವಾನ್ಸ್ ಕೊಡುವಂತಾ ಕಲೆಕ್ಟರಿಂದ ಕೊಡಲ್ಪಡುವ ಪ್ರತಿ ಸರಟಿಫಿಕೇಟಿನಲ್ಲೂ, ಅಡ್ವಾನ್ಸ್ ಮೊಬಲಗ್ ಅಭಿವೃದ್ಧಿ ಮಾಡತಕ್ಕ ಜಮೀನ್ ಯಿರುವ ಜಾಗಾ, ವಿಸ್ತೀರ್ಣ, ಚತುರ್ಗಡಿಗಳು ಮತ್ತು ಅಭಿವೃದ್ಧಿಯಾಗತಕ್ಕ ಜಮೀನ್ ಅಲ್ಲದೆ ಯಿತರವಾದ ಜಾಮೀನ್ (ಯಾವದಾದರೂ ಯಿದ್ದಲ್ಲಿ) ಅಂತಾದ್ದರ ಸ್ವರೂಪ, ಮತ್ತು ಮೊಬಲಗ್ ಯಿಂತಾವುಗಳನ್ನು ವಿವರಿಸತಕ್ಕದ್ದು, ಎಂಬದು. ಬಳಿಕ 15ನೇ ಸೆಕ್ಷನ್ ವಿಧಿಸುವದೇನಂದರೆ,—ಹಾಗೆ ವಿವರಿಸಲ್ಪಟ್ಟ ಮೊಬಲಗ್ ಯಾರಿಗೆ ಅಡ್ವಾನ್ಸ್ ಕೊಡಲ್ಪಟ್ಟಿತೋ ಅಂತಾ ಮನುಷ್ಯನಿಂದಲಾಗಲಿ "ಮೊಬಲಗ್ ಪಾವತೀ ಮಾಡುವಬಗ್ಯೆ ಜಾಮೀನಾದ ಯಾವ ಮನುಷ್ಯನಿಂದಾಗಲಿ, ಅಡ್ವಾನ್ಸ್ ಕೊಡಲ್ಪಟ್ಟ ಮನುಷ್ಯನಿಂದ ಯಾ ಅವನ ಜಾಮೀರ್ದಾರನಿಂದ ಸಲ್ಲತಕ್ಕ ಜಮೀರ್ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದೆಂಬದು."

15ನೇ ಸೆಕ್ಷನಿನ ಉಳಿದ ಭಾಗವು ಈ ಕೆಳಗೆ ಬರುವ ಪ್ರಕಾರ ಇರುತ್ತೆ.

"ಅಂತಾ ಯಾವ ಮೊಬಲಗಾಗಲಿ ಆ ಮೇರೆ ವಸೂಲಾಗದೆ ಇದ್ದರೆ ಅದು ಸದರೀ ಸರಟಫಿಕೇಟನಲ್ಲಿ ವಿವರಿ
ಸಲ್ಪಟ್ಟ ಜಮೀನ ಬಗ್ಯೆ ಸಲ್ಲತಕ್ಕ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದು,

"ಪರಂತು, ಅಡ್ವಾನ್ಸ ಕೊಡಲ್ಪಟ್ಟ ಮನುಷ್ಯ ಜಮೀನದಾರನಾಗಿ ಅಥವಾ, ಜಮೀನದಾರನ ಅನುಮತಿಯಿಲ್ಲ
ದೆ ಜಮೀನ ಸಂಬಂಧವನ್ನು ಪರಭಾರೇಮಾಡಲಿಕ್ಕೆ ಬಾಧ್ಯತೆಯುಳ್ಳ ಸಾಗುವಳೀದಾರನಾಗಿದ್ದರೆಹೊರತು ಅನ್ಯಥಾ
ಅಂತಾ ಜಮೀನದಾರನಲ್ಲದ ಯಾ ಸಾಗುವಳೀದಾರನಲ್ಲದ, ಯಿತರ ಯಾವ ಮನುಷ್ಯನ ಸದರೀ ಜಮೀನ ಸಂಬಂಧ
ವೂ ಈಸೆಕ್ಷನ ಅನುಸರಿಸಿ ಮಾರಲ್ಪಡತಕ್ಕದ್ದಲ್ಲವು.

ಈ ಕ್ಲಾಜ್ ಮೇಲೆ ಎರಡಂಶಗಳು ವಿಚಾರಣೀಯಗಳಾಗಿರುತ್ತವೆ, ಮೊದಲನೇದು—ಗವರ್ನಮೆಂಟನವರು
ಕೊಡುವ ಅಡ್ವಾನ್ಸ ಮೊಬಲಗ್, ಯಿತರ ದರೋಬಸ್ತು ಖರ್ಚುಗಳಿಗಿಂತ ಅಭಿವೃದ್ಧಿ ಮಾಡತಕ್ಕ ಜಮೀನಿನ
ಬಾಬತು ಮೊದಲನೇ ಖರ್ಚಾಗಿರುತದೆಯೋ? ಈ ಖರ್ಚುಗಳು ಕಾಲದ ವಿಷಯದಲ್ಲಿ ಪೂರ್ವ ಭಾವಿಯಾದ್ದೆ ಅಲ್ಲವೆ?
ಎರಡನೇದು "ಸದರೀಸರಟಿಫಿಕೇಟಿನಲ್ಲಿ ವಿವರಿಸೋಣಾದ ಜಮೀನಯೆಂಬ ಮಾತು ಜಾಮೀನ ತರೀಕ್ ಕೊಡಬಹು
ದಾದ ಯಾವ ಜಮೀನನ್ನಾಗಲಿ ಅಡಗಿಸಿಕ್ಕೊಂಡಿರುತ್ತದೆಯೋ ಹ್ಯಾಗೆ? ಎಂಬವು.

ಈ ಸಂದೇಹಗಳನ್ನು ನಿವೃತ್ತಿ ಮಾಡುವದೇ ಪ್ರಕೃತ ಮಸವಿದಾ ಆಕ್ಟಿನ ಉದ್ದೇಶವಾಗಿರುತ್ತೆ. ಸದರೀ
ಆಕ್ಟು ಯಾವ ಆಧಾರಗಳ ಮೇಲೆ ಕಲ್ಪಿಸಲ್ಪಟ್ಟಿತೋ ಅಂತಾ ಆಧಾರಗಳಿಂದು ನಂಬಲ್ಪಟ್ಟಿರುವಂತಾವುಗಳ ಪ್ರ
ಕಾರ, ಮತ್ತು ಯಿದುವರಿಗೆ ದರೋಬಸ್ತು ಮುಬಾದಲೇಗಳೂ ನಿಸ್ಸಂಶಯವಾದ ಯಾವಅಭಿಪ್ರಾಯದಿಂದ ಯಿ
ದುವರಿಗೆ ಕೊಡಲ್ಪಟ್ಟಿತೋ, ತೆಗೆದುಕೊಳ್ಳಲ್ಪಟ್ಟಿತೋ-ವ ವಸೂಲ್ ಮಾಡಿಕೊಳ್ಳಲ್ಪಟ್ಟಿತೋ ಅಂತಾ ಅಭಿಪ್ರಾಯ
ಪ್ರಕಾರವೂ, ಸದರೀ ಬಿಲ್ ಅಂತಾ ಸಂಶಯ ನಿವೃತ್ತಿಯನ್ನು ಮಾಡುತ್ತಿದೆ ಅದು ಹ್ಯಾಗಂದರೆ—ಗವರ್ನಮೆಂಟಿ
ನಿಂದ ಸಲ್ಲುವ ಅಡ್ವಾನ್ಸಗಳು, ಅಂತಾ ಜಮೀನನಲ್ಲಿ ಆಗತಕ್ಕ ದರೋಬಸ್ತು ಯಿತರ ಖರ್ಚುಗಳು ಮತ್ತು ಸಂ
ಬಂಧಗಳು, ಯಿವುಗಳಿಗಿಂತ ಅಭಿವೃದ್ಧಿ ಮಾಡತಕ್ಕ ಜಮೀನ ಮೇಲೆ ತಗಲುವ ಖರ್ಚಾಗಿರತಕ್ಕದ್ದು, ಮತ್ತು
ಜಾಮೀನ ಬಗ್ಯೆ ಯಿತರ ಜಮೀನ ಕೊಡಲ್ಪಟ್ಟ ಪಕ್ಷಕ್ಕೆ ಗವರ್ನಮೆಂಟನಿಂದ ಸಂದ ಅಡ್ವಾನ್ಸ, ಸ್ವಂತ ಮನುಷ್ಯ
ನಿಂದ ಸಾಧಾರಣ ಅಡ್ವಾನಸಾಗಿದ್ದರೆ ಹ್ಯಾಗೋ ಹಾಗೆಯೇ ಯಿತರಖರ್ಚುಗಳ ತರೀಕ್ ಯೆಣಿಸಲ್ಪಡತಕ್ಕದ್ದು.

ಸದರೀ ಕ್ಲಾಜಿನ ಖಂಡಿತವಾದ ಅರ್ಥ ವಿಚಾರದಮೇಲೆ ಮುಖ್ಯಸ್ಥನ ಮೇಲಣ ಪರಿಹಾರಗಳಿಲ್ಲ ನಿವರ್ತ
ಗಳಾಗುವದಕ್ಕೆ ಮುಂದಾಗಿ ಜಾಮೀನದಾರನು ದಾವಾಮಾಡಲ್ಪಡತಕ್ಕದ್ದೆಂದು ಇನ್ನೊಂದು ಬಗೆಯಾಗಿಚರ್ಚಿಸಲ್ಪ
ಡಬಹುದು. ಅದು ನ್ಯಾಯವಲ್ಲವು, ಮತ್ತು ಹಾಗೆ ಉದ್ದೇಶಿಸಲ್ಪಡಲೂ ಯಿಲ್ಲವು. ಆದ್ದರಿಂದ ಈ ಯಂಶದಲ್ಲಿಯಿರ
ತಕ್ಕ ಸಂಶಯಗಳನ್ನು ನಿವರ್ತಿಮಾಡುವದಕ್ಕೂ, ಮುಖ್ಯಸ್ಥನು ಮತ್ತು ಜಾಮೀನದಾರನು ಯಿವರುಗಳ ಮೇ
ಲೆ ಯಿರತಕ್ಕ ಪರಿಹಾರವು ಮಾಮೂಲ್ ಸ್ಥಿತಿಯಲ್ಲಿರುತ್ತೆಂದು ಸ್ಪಷ್ಟಪಡಿಸುವದಕ್ಕೂ ಈ ಸಂದರ್ಭವನ್ನು ಅವ
ಲಂಬಿಸಲಾಯಿತು.

ಸಿಂಲಾ, ತಾರೀಖು 28ನೇ ಆಗಸ್ಟು 1876.

A. HOBHOUSE.

Mysore Government Press, Bangalore—1876.

382

ಮೈಸೂರ ಗೆಜೆಟ್.

ನಂ. 41 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಅಕ್ಟೋಬರ ತಾ॥ 14, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	261—266
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ ವರ್ಕಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ ಜನರಲ್ಲವರು, ವಿದ್ಯಾಶಾಖೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. ..	477—488
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	35— 37
4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 206. ತಾರೀಖು 2ನೇ ಶಪ್ಟಂಬರ 1876.

ಬೆಂಗಳೂರು ಲಷ್ಕರ್ ಮ್ಯುನಿಸಿಪಾಲಿಟಿ ಬಗ್ಗ್ಯಾಗಿ ಫಿರ್ಸಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮ್ಮಿಷನರವರಿಂದ ಮಂಜೂರು ಮಾಡಲ್ಪಟ್ಟು ಸರ್ವರಿಗೂ ತಿಳಿಯುವ ಬಗ್ಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಷ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಚದರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ವೊಂದು ಹಂಗಾಮೀ ಚಪ್ಪರವನ್ನು ಕಟ್ಟಿಸುವ ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ವೊಂದು ರೂಪಾಯಿಯನ್ನು ಕೊಡತಕ್ಕದ್ದು. ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಚದರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಚಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದೆಸೇಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 219. ತಾರೀಖು 18ನೇ ಶಪ್ಟಂಬರ 1876.

ಬೆಂಗಳೂರು ಷಹರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜಾರೀಯಾಗತಕ್ಕ ಬಗ್ಯೆ. ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಮಂಜೂರ್ ಮಾಡಲ್ಪಟ್ಟವೆ:-

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದಫನ ಭೂಮಿಯಲ್ಲಾಗಲಿ; ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾಫಿನಯಾನೆ ಚಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದಫನ ಮಾಡಕೂಡದು, ಯಾ ದಫನ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದಫನ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದಫನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ; ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೆ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲನ ಭೂಮಿಯೊಳಗಾಗಲಿ; ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲನ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚೆಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29.—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲನ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲನ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲನ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

೨೨ ಪ್ರತಿ ದರ್ಖ ಯಾ ಜರ್ಲ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜರ್ಲ ಯಾ ದರ್ಖ ಭೂಮಿಗಳ ಟ್ರಸ್ಟೀಗಳಾಗಲಿ ಅಥವಾ ಅವುಗಳ ಚಾರ್ಜವುಳ್ಳಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯೆಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಖ ಭೂಮಿಗಳಿಗಾಗಲಿ ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿ ದಿನಕ್ಕೂ ಯೆರಡು ರೂಪಾಯಿಗಳಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 230. ತಾರೀಖು 22ನೇ ಸೆಪ್ಟಂಬರ 1876.

ಸ್ನ 1869ನೇ ಇಸವಿ ಯೇಪ್ರೈಲ್ 30ನೇ ಮಕ್ಕಾಂ 83ನೇ ನಂಬರ್ ಬಾಬತು ಇಂಡ್ಯಾ ಗವರ್ನಮೆಂಟ ಫಾರಿನ್ ಇಲಾಖೆಯವರ ಇಸ್ತಿಹಾರನಾಮೆ ದೆಸೇಯಿಂದ ಮೈಸೂರು ಸೀಮೆಗೆ ಜಾರೀ ಮಾಡಲ್ಪಟ್ಟ 1868ನೇ ಇಸವಿ ಮುಂಬೈ ಆಕ್ಟಿನ 17ನೇ ಸೆಕ್ಷನ್ 2ನೇ ರೂಲ್ ನಿಬಂಧನೆಗಳನುಸಾರವಾಗಿ "ಮಿನಿಮಂಯೇರಿಯ" ಅಂದರೆ ಕಮ್ಮಿ ಬೀಜವರಿಯು ಈ ಕೆಳಗೆ ನಮೂದಿಸಲ್ಪಟ್ಟಿರುವ ಪ್ರಕಾರ ನಿಶ್ಚಯ ಮಾಡಲ್ಪಟ್ಟಿರುತ್ತೆ. ಸಿವಿಲ್ ಕೋರ್ಟಿನ, ವೊಂದು ಡಿಕ್ರಿ ಅಮಲ್‌ಜಾರೀ ಮಾಡುವಲ್ಲಿ ಸದರೀ ಮೇಕೆ ಗೊತ್ತಾದ ಬೀಜವರಿ ಗಿಂತ ಕಮ್ಮಿಯಾಗಿ ವೊಂದು ಸರ್ವೆ ನಂಬರ್ ಜಮೀನಿಗೆ ಸಬ್ ಡಿವಿಜನ್ ಅಂದರೆ ವೊಳಭಾಗವು ಮಾಡಲ್ಪಡಕೂಡದು.

	ಯಕರೆ	ಗುಂಟೆ		ಯಕರೆ	ಗುಂಟೆ		ಯಕರೆ	ಗುಂಟೆ
ಖುಷ್ಕೀ ಜಮೀನು	3	0	ತರೀ ಜಮೀನು	0	20	ಬಾಗಾಯಿತು ಜಮೀನ್	0	10

ನಂ. 245. ತಾರೀಖು 12ನೇ ಅಕ್ಟೋಬರ 1876.

ಇದರಿಂದ ಚೀಫ್ ಕಮ್ಮಿಷನರ ಸಾಹೇಬರವರು ಪ್ರಸಿದ್ಧಪಡಿಸುವದೇನಂದರೆ,—ಮಂತ್ರಾಲೋಚಕ ಸಭೆಯೊಳಗಣ ವೈಸರಾಯಿ ವ ಗವರನರ ಜನರಲ ಸಾಹೇಬರವರು, ಮಹಾರಾಣಿಯವರಿಂದ ಇಂಡ್ಯಾ ಚಕ್ರವರ್ತಿನೀಯೆಂಬ ಬಿರದನ್ನು ಅಂಗೀಕರಿಸಿದಂತಾ ವಿಶೇಷಕ್ಕಾಗಿ ಮೈಸೂರು ವ ಕೊಡಗು ಶೀಮೆಗಳ ದರೋಬಸ್ತು ಗವರ್ನಮೆಂಟ ಆಫಿಸ್‌ಗಳಿಗೆ, 1877ನೇ ಇಸವಿ ಜನವರೀ ಗುರ್ರೇ ತಾರೀಖು ಲಗಾಯತ್ 8ನೇ ತಾರೀಖು ವರಿಗೆ ಒಂದು ವಾರದ ಮಟ್ಟಿಗೆ ಸರ್ವತ್ರ ರಜಾ ಕೊಡಲ್ಪಡತಕ್ಕದ್ದೆಂದು ನಿಶ್ಚಯಿಸಿರುತ್ತಾರೆ.

ನಂ. 246. ತಾರೀಖು 11ನೇ ಅಕ್ಟೋಬರ 1876.

ಕೆಪ್ಟನ್ ಮಾಲ್ವಿಬಿ ಯವರು 1ನೇ ಅಸಿಸ್ಟೆಂಟ ಕಮ್ಮಿಷನರ ಕೋರ್ಟಿನ ಚಾರ್ಜನ್ನು 1876ನೇ ಶೆಪ್ಟಂಬರ 28ನೇ ಮಕ್ಕಾಮಿನ ಮಧ್ಯಾನ್ಹಾತ್ತರ ಮೆಸ್ಟರ್ ಕ್ರಿಷ್ಣಸ್ವಾಮಿ ಐಯಂಗಾರ್ರಿಂದ ತೆಗದುಕೊಂಡಿರುತ್ತಾರೆ.

ನಂ. 247 ತಾರೀಖು 12ನೇ ಅಕ್ಟೋಬರ 1876.

ಬೆಂಗಳೂರು ಡಿಸ್ಟ್ರಿಕ್ಟು ರಿಜಿಸ್ಟ್ರೇಷನ ಇಲಾಖಾ ಕ್ಲರ್ಕ ಮಂಗಪತಿ ನಾಯಕರು ಒಂದು ವರುಷದ ಪರ್ಯಂತ ಅಜಮಾಯಿಷಿ ಮೇಲೆ 3ನೇ ಗ್ರೇಡ ಮುನಸಿಫರಾಗಿ ಮೊಕರರ ಮಾಡಲ್ಪಟ್ಟು ಶಿವಮೊಗ್ಗಾ ಡಿಸ್ಟ್ರಿಕ್ಟು ಅನಂತಪುರ ಸರ್ಕಲಿಗೆ, ಮೃತಪಟ್ಟ ಲವರಿಯವರಿಗೆ ಬದಲಾಗಿ ಮೊಕರರಮಾಡಲ್ಪಟ್ಟಿರುತ್ತಾರೆ.

ನಂ. 244. ತಾರೀಖು 9ನೇ ಅಕ್ಟೋಬರ 1876.

ಇದರಿಂದ ಸಕಲಜನಗಳಿಗೂ ತಿಳಿಯುವಬಗ್ಯೆ ಪ್ರಕಟಿಸುವ ದೇನಂದರೆ.—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಗ್ರಾಮಗಳ ಈ ಕೆಳಗೆ ಕಂಡ ವರ್ಗಾವರ್ಗಿಗಳು 1876ನೇ ಅಕ್ಟೋಬರ ಗುರ್ರೇ ಲಗಾಯತ್ ಜಾರೀಯಾಗತಕ್ಕದ್ದಾಗಿ ಮಂಜೂರಾಗಿರುತ್ತವೆ.

ಗ್ರಾಮುಗಳ ಹೆಸರುಗಳು.	ಯಾವತಾಲ್ಲೂಕು ವ ಹೋಬಳೀ ಯಿಂದ.	ಯಾವತಾಲ್ಲೂಕು ವ ಹೋಬಳಿಗೆ.
ಬನದ ಕುಪ್ಪೆ. ಕ್ಯಾಕನಾಪುರ.	ಬನದಕುಪ್ಪೆ ಹೋಬಳಿ. ನಂಜನಗೂಡು ತಾಲ್ಲೂಕು.	ಚಾಮರಾಜನಗರದ ಹೋಬಳಿ. ಚಾಮರಾಜನಗರ ತಾಲ್ಲೂಕು.
ಕೋಣನೂರು. ಕೋಣನ ಪುರ.	ಡಿಟೋ	ದಾಸನೂರು ಹೋಬಳಿ. ಚಾಮರಾಜನಗರ ತಾಲ್ಲೂಕು.
ಹೆಗ್ಗಡವಾಡಿ. ಭುಜಗನ ಪುರ. ಕುರಿಹಳ್ಳಿ. ಮುಕ್ಕಡ ಹಳ್ಳಿ. ಕೇತನ ಪುರ. ನಂಜಹಳ್ಳಿ. ಗೋವಿಂದವಾಡಿ.	ಡಿಟೋ	ಉಯ್ಯಂಬಹಳ್ಳಿ ಹೋಬಳಿ. ಚಾಮರಾಜನಗರ ತಾಲ್ಲೂಕು.
ವಾಟಾಳ. ಸುಜಲೂರು.	ದಾಸನೂರು ಹೋಬಳಿ. ಚಾಮರಾಜನಗರ ತಾಲ್ಲೂಕು.	ನರಸೀಪುರಹೋಬಳಿ. ತಲಕಾಡು ತಾಲ್ಲೂಕು.
ದೇವನೂರು. ತಗಡೂರು. ಚಿಂಚನಹಳ್ಳಿ. ಕಕ್ಕರಹಳ್ಳಿ. ವರಹಳ್ಳಿ. ಚಿಕ್ಕಕವಲಂದಿ.	ದೇವನೂರು ಹೋಬಳಿ. ಚಾಮರಾಜನಗರ ತಾಲ್ಲೂಕು.	ನಂಜನಗೂಡು ತಾಲ್ಲೂಕಿಗೆ.
ರಾಮಪುರ. ಕೆಂಬಿಲ್ಲು. ಬಿದುರುಗೂಡು. ಮರಳೂರು. ಗುಡ್ಡನ ಪುರ. ತುರಹಳ್ಳಿ. ಯಚಗಹಳ್ಳಿ. ತಂಡ್ಯ. ಆಡಕನಹಳ್ಳಿ. ಹೆಬ್ಯ. ಮೂನವೆ. ಹುಳಿಮಾವು. ತೊರವಾವು. ಹಿಜ್ಜಿಗೆ. ಬಸವನಪುರ.	ಜೋಡೀ ರಾಮಪುರ. ಮೈಸೂರು ತಾಲ್ಲೂಕು.	ಜೋಡೀ ರಾಮಪುರ. ನಂಜನಗೂಡು ತಾಲ್ಲೂಕು.
ದೇಪೂರು. ಹಳೇಬಾಲು. ಮಾದನಹಳ್ಳಿ. ಮಾದವಳ್ಳಿ. ಕಲ್ಲಹಳ್ಳಿ.	ದೇಪೂರು ಜಹಗೀರ್. ಮೈಸೂರು ತಾಲ್ಲೂಕು.	ನಂಜನಗೂಡು ತಾಲ್ಲೂಕು.

ಪಂಡಿತಹಳ್ಳಿ.
ಬಾಚಹಳ್ಳಿ.
ಕಿರಗಸೂರು.
ಬೊಪ್ಪಗೌಡನಪುರ.
ಮುಟ್ಟನಹಳ್ಳಿ.
ಹಳದಾಸನಹಳ್ಳಿ.
ಕೊಡಗಹಳ್ಳಿ.
ಹೊಂಕರಹಳ್ಳಿ.
ನಂಜರಾಜನಪುರ.
ವಾಸುಂವಳ್ಳಿ ಮಲ್ಲನಾಥಪುರ.
ಸಿರಮಲ್ಲಿ.
ಕೆಪ್ಪೇಪುರ.
ಬಸವನಹಳ್ಳಿ.
ಸುರಕಹಳ್ಳಿ.
ತಣಿಕಹಳ್ಳಿ.
ಕಗ್ಗಳ.
ಸರಗೂರು.
ಸೋಮನಹಳ್ಳಿ.
ದೊಡ್ಡಬುಹಳ್ಳಿ.
ಹುಲ್ಲಂಬಳ್ಳಿ.
ಮೆರಳಹಳ್ಳಿ.
ಹಣವಾಡಿ.
ಚಿಕ್ಕ ಅಬ್ಬಾಗಿಲು.
ಒಳಗೆರೆ.
ತೆಂಕಹಳ್ಳಿ.
ಮಲಗಳ್ಳಿ.
ತಿಗಡಹಳ್ಳಿ.
ಕದಬಹಳ್ಳಿ.
ಹಣಕೊಳ (ಜೋಡಿ.)
ಕುಂದೂರು (ಇನಾಂ)
ಪುರಿಗಾಲಿ (ಡಿಟ್ಟೋ.)
ಬಳಕವಾಡಿ (ಡಿಟ್ಟೋ.)
ದಾಸನದೊಡ್ಡಿ.
ಹೊಸಹಳ್ಳಿ.
ಕಗ್ಗಲೀಪುರ.

} ಪುರಿಗಾಲದಹೋಬಳಿ. ತಲಕಾಡು ತಾಲ್ಲೂಕು. — ಪುರಿಗಾಲಹೋಬಳಿ. ಮಳವಳ್ಳಿ ತಾಲ್ಲೂಕು.

ಕಿತ್ತೂರು. (ಇನಾಂಗ್ರಾಮ.) ಗುಂಡ್ಲುಪೇಟೆ ತಾಲ್ಲೂಕು. ಹೆಗ್ಗಡದೇವನಕೋಟೆ ತಾಲ್ಲೂಕು.

ನಂ. 248. ತಾರೀಖು 6ನೇ ಶಪ್ಟಂಬರ 1876.

ಮೈಸೂರು ಸವಾರ್ ಫೌಜಿನ ಅಡ್ಜುಟ್ಯಾಂಟ ಕೆಪ್ಟನ್ ಮೊರಾಂಟೆಯವರು ಮೇಜರ ಸ್ಟ್ಯುವರ್ಟ್ಯವರಿಂದ ಚೀಫ್ ಕಮ್ಮಿಷನರವರ ಮಿಲಿಟೇರಿ ಅಸಿಸ್ಟೆಂಟ ಆಫಿಸ ಚಾರ್ಜನ್ನು ವಹಿಸಿದರು.

ನಂ. 249. ತಾರೀಖು 7ನೇ ಅಕ್ಟೋಬರ 1876.

ಇಂಡ್ಯ ವಾಲಂಟಿಯರ್ ಫೌಜಿನ ರಿಗ್ಯುಲೇಷನ 5ನೇ ಸೆಕ್ಷನ್ನಿನ 62ನೇ ಕಲಂ ಅನುಸರಿಸಿ, ಬೆಂಗಳೂರು ರೈಫಲ್ ವಾಲಂಟಿಯರ ಕೋರಿನ ಲೆಪ್ಟಿನೆಂಟ ಮಕ್ಕಾಳಿ ಹೇಸಿ ಯವರಿಗೆ 1876ನೇ ಇಸವಿ ಅಕ್ಟೋಬರ ಗುರ್ರೇ ಲಗಾಯತು ವೊಂದು ವರುಷದ ರಜಾ ಕೊಡಲ್ಪಟ್ಟಿರುತ್ತೆ.

ಮಿ ಲ ಟೇ ರಿ ಇ ಲಾ ಖಾ .

ನಂ. 250. ತಾರೀಖು 7ನೇ ಅಕ್ಟೋಬರ್ 1876.

ಯಿದರಡಿಬರುವ ಬಹಲಿಗಳು ಇಂಡ್ಯಗವರ್ನಮೆಂಟಿನವರ ಮಂಜೂರಾತಿಗೆ ವೊಳಪಡಿಸಿ ಮಾಡಲ್ಪಟ್ಟಿವೆ.

ಮೈಸೂರು ಟವ್ನ ಮಾಜಿಸ್ಟ್ರೇಟ್ ಕರ್ನಲ್ ರೆಂಟ್ಲ್ಯವರು, ಫರಲೋ ರಜಾದ ಮೇಲೆ ವಿಲಾಯಿತಿಗೆ ಹೋದ ಮೇಜರ್ ಸ್ಟುವರ್ಟ್ ಯವರಿಗೆ ಬದಲಾಗಿ ಚೀಫ್ ಕಮ್ಮಿಷನ್ನರವರ ಮಿಲಟೇರಿ ಅಸಿಸ್ಟೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ರೋಲ್ B 3ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮಿಸ್ಟರ್ ಅಬ್ದುಲ್‌ಖಾದರ್ ಯವರು ಕರ್ನಲ್ ರೆಂಟ್ಲ್ಯವರಿಗೆ ಬದಲಾಗಿ ಮೈಸೂರು ಟವ್ನ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ನಂ. 251. ತಾರೀಖು 12ನೇ ಅಕ್ಟೋಬರ್ 1876.

ಕರ್ನಲ್‌ರೆಂಟ್ಲ್ಯವರು ಚೀಫ್ ಕಮ್ಮಿಷನರ್ ಯವರ ಮಿಲಟೇರಿ ಅಸಿಸ್ಟೆಂಟ್ ಆಫೀಸ್ ಚಾರ್ಜನ್ನು ಕೆಪ್ಟನ್ ಮೊರಾಂಟ್ ಯವರಿಂದ, 1876ನೇ ಇಸವಿ ಅಕ್ಟೋಬರ್ 10ನೇ ಮಧ್ಯಾಹ್ನಾತ್ಪೂರ್ವ ತೆಗದುಕೊಂಡರು.

"ಬಮೋಜೀಬ್ ಹುಕುಂ,"

T. Clarke,

Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜ ನ ರ ಲ್ .

ಇಸ್ತಿಹಾರ್ ನಾಮೆ.

ನಂ. 8. ತಾರೀಖು 15ನೇ ಶಪ್ಟಂಬರ್ 1876.

ಈ ಕೆಳಗೆ ಬರುವ ಮ್ಯುನಿಸಿಪಲ್ ಬೈಲಾ ನಿಬಂಧನೆಯು ವೀರರಾಜೇಂದ್ರ ಪೇಟೆಯಲ್ಲಿ ಚಾಲ್ತೀ ಇಸವಿಯಲ್ಲಿ ಮಾತ್ರ ಜಾರೀಯಲ್ಲಿರುವ ಹಾಗೆ ಇದನ್ನು ಚೀಫ್ ಕಮ್ಮಿಷನ್ನರ್ ಸಾಹೇಬರವರು ಮಂಜೂರು ಮಾಡಿರುತ್ತಾರೆ.

ಮ್ಯುನಿಸಿಪಲ್ ಸರಹದ್ದಿನ ವಳಕ್ಕೆ ವಿಕ್ರಯಕ್ಕಾಗಿ ತರಲ್ಪಡುವ ಪ್ರತಿ ಯೆತ್ತಿಗೂ, ಆಕಳಿಗೂ, ಯಾ ಎಮ್ಮೆಕೋಣಕ್ಕೂ ವೊಂದು ಆಣೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

"ಬಮೋಜೀಬ್ ಹುಕುಂ,"

T. Clarke,

Offg. Secretary.

ಇಂಡ್ಯಗವರ್ನಮೆಂಟಿನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆನ್ ಇಲಾಖೆ.

ಜ ನ ರ ಲ್ .

ತಾರೀಖು 29ನೇ ಶಪ್ಟಂಬರ್ 1876.

ನಂ. 2110 G.—ಮೈಸೂರು ಮಹಾರಾಜರವರ ಗಾರ್ಡಿಯನ್‌ರಾದ ಕರ್ನಲ್ ಮಾಲಿಸನ್‌ಯವರ ನೌಕರಿಯು 1876ನೇ ಶಪ್ಟಂಬರ್ 6ನೇ ಮೊದಲ್ಗೊಂಡು ಲಗಾಯತ್ ಮಿಲಟೇರಿ ಇಲಾಖೆಯವರ ಅಧೀನ ಪಡಿಸಲ್ಪಟ್ಟಿರುತ್ತೆ.

T. H. Thornton,

Secy. to the Govt. of India.

388

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 14, ಸನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮಿಷ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 13ನೇ ಅಕ್ಟೋಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಷ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಪ್ಲೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪೆ. ಅ. ೫೨	ಗೋಪಾಲೈಯ ವಗೈರೆ ..	ಪುಜನೀ ಮರುಳೈಯ ವಗೈರೆ ..	೧೯ನೇ ಅಕ್ಟೋಬರ್.
ಸ್ಪೆ. ಅ. ೫೩	ಪುಮ್ಮಾಜಿ ..	ಸುಬ್ಬಣ್ಣಾ ವಗೈರೆ ..	ಡಿಟೋ
ಪ್ಲೂಟೆ ಅ. ೧೧	ಪುಟ್ಟಚನ್ನಮ್ಮ ವಗೈರೆ ..	ನಂಜಮ್ಮ ..	ಡಿಟೋ
ಕ್ರಿ. ಅ. ೫೪	ಕೈದೀ ಚವುಡಾ ..	.. ..	ಡಿಟೋ
ಡಿ॥ ೬೨.	ಕೈದೀ ರುಮ್ಮಿ ..	.. ..	ಡಿಟೋ
ಸ್ಪೆ. ಅ. ೪೯	ಚರಂತಪ್ಪ ..	ಚನ್ನವೀರಪ್ಪಾ ವಗೈರೆ ..	೨೪ನೇ ಡಿಟೋ
ಸ್ಪೆ. ಅ. ೫೮	ರಾಮಣ್ಣಾ ..	ಜವರನಾಯಕ ವಗೈರೆ ..	ಡಿಟೋ
ಪ್ಲೂಟ್. ಸ್ಪೆ. ಅ. ೧೧	ಕಾಶೀಪತ್ಯೈಯ ..	ಮುನಿಯಪ್ಪ ವಗೈರೆ ..	ಡಿಟೋ
ಕ್ರಿ. ಪಿಟೀಷನ್ ೨೪	ಗರುಡಾಚಾರಿ ..	.. ..	ಡಿಟೋ
ಸ್ಪೆ. ಅ. ೬೧	ಬಸವೇಗೌಡ ..	ಶಿದ್ದೇಗೌಡ ..	೨೮ನೇ ಡಿಟೋ
ಸ್ಪೆ. ಅ. ೬೨	ಕೆ. ಪುಟ್ಟೇಗೌಡ ..	ಟಿ. ಪುಟ್ಟೇಗೌಡ ..	ಡಿಟೋ
ಕೊ. ಸ್ಪೆ. ಅ. ೧೧	ಮೋದೈಯ ..	ಮಾದೈಯ ವಗೈರೆ ..	೩೧ನೇ ಡಿಟೋ
ಪ್ಲೂಟೆ ಸ್ಪೆ. ಅ. ೧೦	ವೆಂಕಟರಾಜೇಅರಸು ..	ಸುಬ್ಬಶೆಟ್ಟಿ ..	೨ನೇ ನವೆಂಬರ್
ಪ್ಲೂಟೆ ಸ್ಪೆ. ಅ. ೧೧	ಶೀತಮ್ಮ ..	ಲಿಂಗೇಗೌಡ ..	ಡಿಟೋ
ಸ್ಪೆ. ಅ. ೬೪	ಕಪನೀಪತ್ಯೈಯ ..	ನಂಜಮ್ಮ ..	೩ನೇ ಡಿಟೋ
ಸ್ಪೆ. ಅ. ೬೩	ಮೊ॥ ಮರಗಲರ್ ವಗೈರೆ ..	ಗಂಗಾಧರಶೆಟ್ಟಿ ..	೧೧ನೇ ಡಿಟೋ
ಸ್ಪೆ. ಅ. ೬೫	ಚಿಕ್ಕ ಹೊನ್ನೇಗೌಡ ..	ಲಕ್ಷ್ಮೈಯ ವಗೈರೆ ..	೧೪ನೇ ಡಿಟೋ
ಸ್ಪೆ. ಅ. ೬೬	ಶ್ರೀನಿವಾಸೈಯ ..	ಆಳಶಿಂಗ್ರೈಯ ..	ಡಿಟೋ

J. D. GORDON, *Judl. Commr.*

ಪೋಲೀಸ್ ಇಲಾಖಾ.

ತಾರೀಖು 10ನೇ ಅಕ್ಟೋಬರ್ 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರ್ ಲವಯ್ಯನವರಿಗೆ ಕಳೆದ ತಿಂಗಳು 29ನೇ ತಾರೀಖು ಲಗಾಯತು 51 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತೆ.

J. D. Gordon,
Inspector General of Police.

ಇನಾಂ ಇಲಾಖಾ.

ನಂ. 6. ತಾರೀಖು 3ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಯಿರುವ ಇನಾಂಗಳ ಸಲುವಾಗಿಯ ವಿಚಾರಣೆಯು ಸದರೀ ತಾಲ್ಲೂಕು ಕಸಬೇಯಲ್ಲಿ ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆಸ್ಟರ್ ಶ್ರೀನಿವಾಸೈಯ್ಯಂಗಾರಿಂದ ನಡಿಸಲ್ಪಟ್ಟು 1876ನೇ ನವಂಬರ 1ನೇ ಮುರ್ಕ್ಕಂನಲ್ಲಿ ಷುರು ಮಾಡಲ್ಪಡುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಯಿನಾಂಗಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ, ರೂಬರೂ ಯಾ ತಮ್ಮ ಮುತಾಲೀಕರ ಮೂಲಕ ಹಾಜರಾಗಿ ತಮ್ಮತಮ್ಮ ಹಕ್ಕುದಾರೀಗಳನ್ನು ಸ್ಥಾಪಿಸಿ ತಮ್ಮಲ್ಲಿರುವ ಸನ್ನದುಗಳು ವ ಯಿತರ ದಸ್ತಾವೇಜುಗಳು ಯಿವುಗಳನ್ನು ಹಾಜರ್‌ಮಾಡಬೇಕೆಂದು ನಿಯಮಿಸಲ್ಪಡುತ್ತಾರೆ, ಹಾಗೆ ಮಾಡದೆ ತಪ್ಪಿದ ಪಕ್ಷಕ್ಕೆ ಅವರ ಯಿನಾಂಗಳು ಪ್ರಥಮತಃ ಜಫ್ತೀಮಾಡಲ್ಪಟ್ಟು ತರುವಾಯ ಕೇವಟೀಗೆ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

R. A. Cole,
Supt. of Inam Settlements.

ಪಬ್ಲಿಕ್ ವರ್ಕ್ಸ್ ಇಲಾಖಾ.

ತಾರೀಖು 6ನೇ ಅಕ್ಟೋಬರ್ 1876.

ಹಾಸನ ಕಡೂರು ಡಿವೀಜನ್ ಸಬ್ ಓವರಸಿಯರ್ ನರಸಿಂಗಮೊದಲ್ಯಾರ್ರಿಗೆ 1876ನೇ ಇಸವಿ ಜುಲೈ 13ನೇ ಮುರ್ಕ್ಕಂ ಇಸ್ತಿಹಾರ್‌ನಲ್ಲಿ ಕೊಡಲ್ಪಟ್ಟ ಯರಡು ತಿಂಗಳ ರಜಾ 1876ನೇ ಶಪ್ಟಂಬರ್ 19ನೇ ತಾರೀಖು ವರಿಗೂ ವಿಸ್ತರಿಸಲ್ಪಟ್ಟಿರುತ್ತೆ.

C. Bowen, *Captain*, R. E.,
Offg. Under-Secy., R. and B. Branch.

ತಾರೀಖು 3ನೇ ಅಕ್ಟೋಬರ್ 1876.

ಕೊಪ್ಪದ ಡಿವೀಜನ್ ಯಗ್ಜಿಕ್ಯೂಟಿವ್ ಇಂಜಿನಿಯರ್ ಆಫಿಸ್ ಹೆಡ್ ಕ್ಲರ್ಕ ಪೇಲಿ ಗೋವಿಂದರಾಯರಿಗೆ, ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

H. Groves,
Exec. Engr., Koppa Division.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಶಿವಮೊಗ್ಗಾ,	16ನೇ	ಅಕ್ಟೋಬರ್	1876.	ಹೆಚ್ಚು ಕಡಮೆ 200 ಟನ್‌ಗಳ ವಜನಿ.
ಸಾಗರ,	25ನೇ	,,	,,	
ಹುಣಸೂರು,	4ನೇ	ನವಂಬರ್	1876	ಹೆಚ್ಚು ಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಣ,	8ನೇ	,,	,,	
ಬೆಂಗಳೂರು,	1ನೇ	ಡಿಶಂಬರ್	,,	ಹೆಚ್ಚು ಕಡಮೆ 100 ಟನ್‌ಗಳು.
ಫ್ರೆಜರಪೇಟೆ	18ನೇ	,,	,,	80 ,,

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮರ್ಕ್ವಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿಯ ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯುಬಗೆ ಡಿಪಾಜಿಟ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮರ್ಕ್ವಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮರ್ಕ್ವಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತುಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ್, ಪೌಂಡ್, ಹಂಡ್ರೆಡ ವೆಯಿಟ್ ಟನ್‌ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. van Someren, *Captain,*
Conservator of Forests, Mysore & Coorg.

ಬೆಂಗಳೂರು ಡಿಸ್ಟ್ರಿಕ್ಟ್ಟು.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲಿಗಳು ಶಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879 80,—1880-81, ಮತ್ತು 1881-82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೈಲ್ 1ನೇ ಮರ್ಕ್ವಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಿಡ್ ದರಖಾಸ್ತು ಬಾಬ್ತಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮರ್ಕ್ವಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಿಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀನೋಟ್ಸಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್ ಮೆಂಟಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥ

ವಾ ಒಟ್ಟು ಕಂಟ್ರಾಕ್ಟು ಮೊಬಲಗ ಪೈಕೀ 60 ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ಆಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೈಲ್ 1ನೇ ಮುಕ್ಕಾಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮುಕ್ಕಾಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮುಕ್ಕಾಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯವಿಲ್ಲದೆಯೇ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

L. Ricketts,
Offg. Dy. Commr.

KOLAR DISTRICT.

Notice of an application by Asvattha narnaiya for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ್ ಡೆ॥ ಕಮಿಷ್ನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಲಮನೇರೀ ತಾಲ್ಲೂಕು ಬೈರಡ್ಡಿಹಳ್ಳೀಯಲ್ಲಿರುವ ಕೊತ್ತ ವಾಕರಾಮೈಯನ ಮಗ ಅಶ್ವಥ ನಾರಣೈಯು ನೆಂಬುವನು ಪಾತೀ ಪಟ್ಟ ಯಾಲಗಿರಿ ವೆಂಕಟರಾಮೈಯ ನೆಂಬುವನ ಮಕ್ಕಳು ಮೈನರಾಗಿರುವದ್ದರಿಂದ ಅವರ ಸಂರಕ್ಷಣೆಗೂ ಅವರ ಜಿಂದಗೀ ಸಂರಕ್ಷಣೆಗೂ ತಾನೇ ಮುಖ್ಯವಾರಿಸ್‌ದಾರನಾದ್ದರಿಂದ ತನಿಗೆ ಗಾರಡಿಯನ್ ಸರಟಿಫಿಕೇಟ್ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜಿಯು ನವಂಬರ 20ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾದ್ದರಿಂದ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆಯಿದ್ದಾಗ್ಯೂ ಅಂಥಾವರೆಲ್ಲಾ ಆ ತಾರೀಖು ದಿವಿ 10 ಘಂಟೆಗೆ ಕೋರ್ಟುರೂಬರೂ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದಾಗಿರುತ್ತೆ.

ತಾರೀಖು 9ನೇ ಮಾಹೇ ಅಕ್ಟೋಬರ್ ಸ್ರ 1876ನೇ ಇಸವೀ ಮೊಕ್ಕಾಂ ಕೋಲಾರ.

Notice of an application by Ajjappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಕ್ಕಬಳ್ಳಾಪುರ ತಾಲ್ಲೂಕು ಸುದ್ದಿ ಹಳ್ಳೀಲಿರುವ ಕುರಬ ಚಿಕ್ಕ ಅಜ್ಜಪ್ಪನೆಂಬವನು ಪಾತೀಪಟ್ಟ ತನ್ನ ತಂದೆ ಚಿಕ್ಕ ಅಪ್ಪಯ್ಯನೆಂಬವನ ಲೇವಾದೇವೀ ಬಾಬತು 300 ರೂಪಾಯಿಗಳು ವಸೂಲ್ಮಾಡಿಕೊಳ್ಳುವದಕ್ಕೆ ಸ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ ಸರ್ಟಿಫಿಕೇಟ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜೀಯು ನವೆಂಬರ 20ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾದರಿಂದ ಇದರಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಅಂತಾವರೆಲ್ಲಾ ಆ ತಾರೀಖು ದಿವಿ 10 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಸ್ಥಿರಪಡಿಸಿ ಕೊಳ್ಳತಕ್ಕದ್ದಾಗಿದೆ.

ಬತಾರೀಖು ನೇ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ಕೋಲಾರ.

P. N. Purnaiya,
Fcr. Dy. Commr.

Notice cancelling the certificates granted to the undermentioned individuals as they failed to render accounts within the time allowed.

ಸ್ನ 1860ನೇ ಇಸವಿ 27ನೇ ನಂಬರ್ ಆಕ್ಟು ಪ್ರಕಾರ ಸರ್ಟಿಫಿಕೇಟ್ ಪಡದುಯಿದ್ದ ಇದರಕೆಳಗೆ ಹೆಸರು ನಮೂದಾಗುವ ಜನರು ಸ್ನ 1870ನೇ ಇಸವಿ ಕೋರ್ಟಫೀಸ್ ಆಕ್ಟು 1ನೇ ಷೆಡ್ಯೂಲ್ 11ನೇ ಸೆಕ್ಷನ್ಗೆ ಶೇರಿಸಿರುವ ನೋಟೀಸ್ ಪ್ರಕಾರ ಹುಕುಂ ಮಾಡಲ್ಪಟ್ಟ ವಾಯಿದೆ ಮೀರಿದಾಗ್ಯೂ ಲೆಖವನ್ನು ವಪ್ಪಿಸುವದಕ್ಕೆ ತಪ್ಪಿ ಹೋಗಿರುವ ಕಾರಣ ಇವರಿಗೆ ಕೊಡಲ್ಪಟ್ಟಿದ್ದ ವಾರಸ ಸರ್ಟಿಫಿಕೇಟನ್ನು ರದ್ದುಮಾಡಲ್ಪಟ್ಟಿರುತ್ತೆ.

ತಾಲ್ಲೂಕು	ಗ್ರಾಮದ ಹೆಸರು	ಸರ್ಟಿಫಿಕೇಟ್ ಪಡದುಕೊಂಡವನ ಹೆಸರು	ಸರ್ಟಿಫಿಕೇಟ್ ನಂಬರು ಮತ್ತು ಸಾಲ್ ಮಾಹೆ ತಾರೀಖು
ಕೋಲಾರ	ಮುದ್ದೇರಿ	ಮುನೇಗೌಡ	70ನೇ ಇಸವಿ ಡಿಸೆಂಬರ್ ತಾರೀಖು 2ಲ್ಲು 16ನೇ ನಂಬರ್.
ಡಿಟೋ	ಕಸಬಾ ಕೋಲಾರ	ಸುಬ್ಬರಾವ್	69ನೇ ಇಸವೀ ಅಕ್ಟೋಬರ್ 26ನೇ ಮುರ್ಕ್ಕಂ 12ನೇ ನಂಬರ್.
ಜೇತಮಂಗಲ	ಐರಿಗ	ಯಳಮ್ಮ	69ನೇ ಇ॥ ನವಂಬರ್ 10ಲ್ಲು 14ನೇ ನಂ.
ಗುಡಿಬಂಡೆ	ಗುಡಿಬಂಡೆ	ಶೀತಮ್ಮ	69-11-10ಲ್ಲು 2ನೇ ನಂಬರ್.
ಗುಡಿಬಂಡೆ	ಗುಡಿಬಂಡೆ	ಖಬ್ಬಣದ ಶೀನಪ್ಪಾ	69ನೇ ಇಸವಿ ಫೆಬ್ರುವರಿ 17ಲ್ಲು 3ನೇ ನಂ.
ಡಿಟೋ	ಹಂಪಸಂದ್ರ	ಬತ್ತಲ ನಂಜುಂಡಪ್ಪಾ	68ನೇ ಇಸವಿ ಏಪ್ರಿಲ್ 22ಲ್ಲು.
ಗೋರೀಬಿದನೂರು	ಮುದಿಗೆರೇಲಿರುವ ಜೇರಿಗೇ ಪ್ಯಾಟೆ	ಬ್ರಹ್ಮೈಯ, ವಂಶಣ್ಣಾ	69ನೇ ಅಕ್ಟೋಬರ್ 17ಲ್ಲು 10ನೇ ನಂ.
ಡಿಟೋ	ಡಿಟೋ	ಬ್ರಹ್ಮೈಯ	70ನೇ ಅಕ್ಟೋಬರ್ 17ಲ್ಲು 9ನೇ ನಂಬರ್
ಚಿಕ್ಕಬಳ್ಳಾಪುರ	ಯಿನುಮುಂಚೇನಹಳ್ಳಿ	ನರಸಿಂಹಾಚಾರಿ	68ನೇ ಇಸವಿ ನವಂಬರ್ 17ಲ್ಲು 5ನೇ ನಂ
ಡಿಟೋ	ಕಸಬಾ ಚಿಕ್ಕಬಳ್ಳಾಪುರ	ಜಾಲಾರಿ ನರಸಿಂಹೈಯ	70ನೇ ನವಂಬರ್ 23ಲ್ಲು 14ನೇ ನಂ.
ಡಿಟೋ	ಡಿಟೋ	ಶ್ರೀಗಾಕುಲ ನಾರಣೈಯ	70ನೇ ಅಕ್ಟೋಬರ್ 26ಲ್ಲು 11ನೇ ನಂ.
ಡಿಟೋ	ಡಿಟೋ	ಸಾಂಬಾವಧಾನಿ	69ನೇ ಶಪಟಂಬರ್ 29ಲ್ಲು 9ನೇ ನಂಬರ್
ಮಾಲೂರು	ಮಾಸ್ತೀ	ನರಸಿಂಹಾಚಾರಿ	70ನೇ ಜನವರೀ 10ಲ್ಲು 1ನೇ ನಂಬರ್
ಶ್ರೀನಿವಾಸಪುರ	ಚಿಂತಾಮಣಿ	ಕಂಚಿ ಅಪ್ಪೈಯ, ರಾಮೈಯ, ಲಕ್ಷ್ಮೈಯ	71ನೇ ಇಸವಿ ಮಾರ್ಚೀ 11ರಲ್ಲು
ಡಿಟೋ	ಕಮತಂಪಲ್ಲಿ	ವಿಲ್ಲೋಜಿಮಾನೆ	71ನೇ ಇಸವಿ ಶಪಟಂಬರ್ 28ಲ್ಲು
ಡಿಟೋ	ವೆಗಳಪಲ್ಲಿ	ಹನುಮಂತರೆಡ್ಡಿ	71ನೇ ಇಸವಿ ಅಕ್ಟೋಬರ್ 20ಲ್ಲು
ಡಿಟೋ	ಮುರಗಮಲೆ	ಭೋಗ್ಗರಂ ವೆಂಕಟಸುಬ್ಬೈಯ	72ನೇ ಆಗಸ್ಟ್ 15ಲ್ಲು 16ನೇ ನಂಬರ್
ಚಿಕ್ಕಬಳ್ಳಾಪುರ	ಕಸಬಾ ಚಿಕ್ಕಬಳ್ಳಾಪುರ	ವಾಸುದೇವ ಪಂಡಿತ	71ನೇ ಅಕ್ಟೋಬರ್ 25ಲ್ಲು 19ನೇ ನಂ.
ಡಿಟೋ	ಡಿಟೋ	ವೋಡುಬಿಲ್ಲೆ ಯಿಮಾಂಸಾಬಿ	72ನೇ ಇಸವಿ ಅಕ್ಟೋಬರ್ 30ಲ್ಲು
ಡಿಟೋ	ಡಿಟೋ	ಬಳ್ಳೇ ಅಪ್ಪಣ್ಣ	72ನೇ ಅಕ್ಟೋಬರ್ 28ಲ್ಲು 23ನೇ ನಂ.
ಡಿಟೋ	ಸೂಲಕುಂಟೆ	ಕೋಮಟಿ ಸೂರ್ಯೈಯ	71ನೇ ಜೂನ್ 9ಲ್ಲು 12ನೇ ನಂಬರ್
ಮುಳಬಾಗಲು	ಹೆಬ್ಬಣಿ	ನಾರಣಾಚಾರಿ	71ನೇ ಮಾರ್ಚಿ 13ಲ್ಲು 17ನೇ ನಂಬರ್
ಡಿಟೋ	ಕೊತ್ತಮಂಗಲ	ಚಿನ್ನಸಾಮೈಯ	73ನೇ ಮಾರ್ಚಿ 11ಲ್ಲು 23ನೇ ನಂಬರ್
ಗುಡಿಬಂಡೆ	ಸೋಮೇನಹಳ್ಳಿ	ಪಾಪೈಯ	71ನೇ ಜುಲೈ 28ಲ್ಲು 18ನೇ ನಂಬರ್
ಡಿಟೋ	ಸೋಮೇಶ್ವರ	ಪಲ್ಯಂ ವೆಂಕಟರಮಣೈಯ	70ನೇ ಏಪ್ರಿಲ್ 12ಲ್ಲು 3ನೇ ನಂಬರ್
ಮಾಲೂರು	ತ್ಯಾಕಲ್ಲು	ನಾರಣಭಟ್ಟ	71ನೇ ಅಕ್ಟೋಬರ್ 20ರಲ್ಲು
ಡಿಟೋ	ಮಾಸ್ತಿ	ಕಿಜ್ಜೈಯ	72ನೇ ಆಗಸ್ಟ್ 20ರಲ್ಲು 25ನೇ ನಂಬರ್
ಡಿಟೋ	ಕುಡಿಯನೂರು	ಬಲಸಾ ವೆಂಕಟೇಶೈಯ	72ನೇ ಅಕ್ಟೋಬರ್ 21ರಲ್ಲು 20ನೇ ನಂ.
ಜೇತಮಂಗಲ	ಜೇತಮಂಗಲ	ಕವಲಿಗಿ ರಂಗಾಚಾರಿ	73ನೇ ಜನವರೀ 24ರಲ್ಲು 27ನೇ ನಂ.
ಗುಮ್ಮನಾಯ್ಕನಪಾಳ್ಯ	ಚಿಕ್ಕಪಾಪೈಯಗಾರಿ ಪಲ್ಲಿ	ವೆಂಗಟಪ್ಪಾ	72ನೇ ಅಕ್ಟೋಬರ್ 15ರಲ್ಲು 21ನೇ ನಂ.
ಶಿಡ್ಲಘಟ್ಟ	ಶಿಡ್ಲಘಟ್ಟ	ಪಾಗೆ ದೇವೀರಮ್ಮ	73ನೇ ಫೆಬ್ರುವರಿ 5ರಲ್ಲು 28ನೇ ನಂಬರ್
ಗೋರಿಬಿದನೂರು	ಮುದಿಗೆರೆ	ಪಾಪಣ್ಣಾ	72ನೇ ಆಗಸ್ಟ್ 31ರಲ್ಲು 12ನೇ ನಂಬರ್
ಶಿಡ್ಲಘಟ್ಟ	ನಂದನ ಹೊಸಹಳ್ಳಿ	ಸುಬ್ಬೈಯ	70ನೇ ಅಕ್ಟೋಬರ್ 6ರಲ್ಲು 7ನೇ ನಂ.
ಡಿಟೋ	ದಿಬ್ಬೂರಹಳ್ಳಿ	ಸೊಣ್ಣಕ್ಕ	69ನೇ ಶಪ್ಟಂಬರ್ 25ರಲ್ಲು 8ನೇ ನಂ.
ಡಿಟೋ	ಮುಂಗಾನಹಳ್ಳಿ	ಶೀತಾರಾಮೈಯ	69ನೇ ನವಂಬರ್ 20ರಲ್ಲು 16ನೇ ನಂ.
ಗುಮ್ಮನಾಯ್ಕನಪಾಳ್ಯ	ಮಲಗಲ್ಲು	ಲಕ್ಷ್ಮಮ್ಮ	69ನೇ ಶಪ್ಟಂಬರ್ 6ರಲ್ಲು 4ನೇ ನಂಬರ್
ಡಿಟೋ	ಡಿಟೋ	ಹುರಳಿಮಲ್ಲಪ್ಪಾ	70ನೇ ಅಕ್ಟೋಬರ್ 31ರಲ್ಲು 13ನೇ ನಂ.
ಚಿಕ್ಕಬಳ್ಳಾಪುರ	ಮಂಚೇನಹಳ್ಳಿ	ತೆಲಗುಬಣಜಿಗ ರಾಯಪ್ಪ	72ನೇ ಶಪ್ಟಂಬರ್ 19ರಲ್ಲು

B. KRISHNAIENGAR, *Dy. Commr.*

MYSORE DISTRICT.

Notice of an application by Madamma for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ್ ಡಿ॥ ಕೆ॥ ಕೋರ್ಟಿನಿಂದ.

1876ನೇ ಇಸವಿ ಸಿವಿಲ್ ಸೂಟ್ ಮಿಸಲೇನಿಯಸ್ ನಂಬರ್ 68.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತಿಯಾದ ತನ್ನ ಗಂಡ ನೀರಮನೆ ಪುಟ್ಟಣ್ಣನಿಗೆ ಬರಬೇಕಾದ ಮೈಸೂರ್ ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟು ಸರ್ 1875ನೇ ಇಸವೀ ಸ್ಮಾಲ್‌ಕಾಜ್ 201ನೇ ನಂಬರ್ ಡಿಕ್ರೀ ಮೊಬಲಗು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರ್ ಹಳೇ ಅಗ್ರಹಾರದ ದೀವಟ ಬೀದಿಯಲ್ಲಿ ಯಿರುವ ಡಿಟೋ ನೀರಮನೆ ಪುಟ್ಟಣ್ಣನ ಹೆಂಡತಿ ಮಾದಮ್ಮ ನೆಂಬುವಳು ಕೊಟ್ಟು ಯಿರತಕ್ಕ ಅರ್ಜಿಯನ್ನು ಅಕ್ಟೋಬರ್ ತಿಂಗಳು 26ನೇ ತಾರೀಖಿನ ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದರಿಂದ ಇದರ ಮೇಲೆ ತಕರಾರ್ ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರ್‌ಗಳನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

ತಾರೀಖು 4ನೇ ಅಕ್ಟೋಬರ್ ಸರ್ 1876ನೇ ಇಸವೀ ಮೊಕ್ಕಾಂ ಮೈಸೂರು.

C. J. PEARSE,
Dy. Commr.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಚನ್ನಗಿರಿಯಿಂದ ಶಿವಮೊಗ್ಗಾ ಜೆಯಿಲ್‌ಗೆ ಪೋಲಿಸ್‌ನವರ ಪಹರೇ ಮೇಲೆ ತೆಗದುಕೊಂಡು ಹೋಗುತ್ತಿರುವ ಸಮಯದಲ್ಲಿ ಪರಾರಿಯಾದ ಖೈದಿ ಹೆಂಗಸಿನ ಚಹರೆ ಪಟ್ಟಿ.

ಹೆಸರು ರಂಗಿ—ಜಾತಿ ಬಡಿಗಿಯವಳು—ವೇಶ್ಯಾವೃತ್ತಿಯಲ್ಲಿ ಬೆಳಿಸಲ್ಪಟ್ಟವಳು—ವಾಸಸ್ಥಳ ಗೊತ್ತಿಲ್ಲ—ತಪ್ಪಿತ ಮನೇ ಇಕ್ಕೇಬಿದ್ದದ್ದು—ಶಿಕ್ಷೆ ಯರಡು ವರುಷಗಳ ಕಠಿಣಖೈದು—ವಯಸ್ಸು ಸುಮಾರು 25 ವರುಷ—ಎತ್ತರ ನಾಲ್ಕು ಅಡಿ ನಾಲ್ಕು ಅಂಗುಲ—ಯಾರಿಂದ ಶಿಕ್ಷೆ ವಿಧಿಸಲ್ಪಟ್ಟದ್ದು ಸಾಗರ ಸಬ್ ಡಿ॥ 1ನೇ ಕ್ಲಾಸ್ ಮೇಜಿಸ್ಟ್ರೇಟರಿಂದ.

ಮುಖ್ಯವಾದ ಗುರುತುಗಳು, ಕೆಂಪುಬಣ್ಣ ದಪ್ಪವಾದ ಶರೀರ.

MAHOMED ALI,
For Offg. Dy. Commr.

Notice of an application by Hanumi for a certificate under Act XXVII of 1860.

ಶಿವಮೊಗ್ಗಾ ಡಿ॥ ಡಿ॥ ಕೆ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತನ್ನ ಗಂಡ ರಂಗನು ಫೌತಿಆಗಿ ಯಿರುವದರಿಂದ ಅವನಿಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 50 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ ಸರಟಫಿಕೇಟ್ ಕೊಡಿಸಬೇಕಾಗಿ ಹೊನ್ನಾಳಿ ತಾಲ್ಲೂಕು ಸಾಸಿವೆಹಳ್ಳಿ ಮಾಗಣಿ ಹುಣಸಗಲದಲ್ಲಿ ಯಿರುವ ಹನುಮಿ ಯಂಬವಳು ಅಪ್ಲಿಕೇಷರ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ನವಂಬರ್ 2ನೇ ತಾರೀಖಿನ ದಿನ ಹಿಯರಿಂಗ್ ನಿಶ್ಚಯಿಸಿ ಯಿದೆ ತಕರಾರು ವುಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿ ಕೊಳ್ಳತಕ್ಕದ್ದಿದೆ.

ತಾರೀಖು 2ನೇ ಅಕ್ಟೋಬರ್ ಸರ್ 1876ನೇ ಇಸವಿ ಮೊಕ್ಕಾಂ ಶಿವಮೊಗ್ಗಾ.

C. S. BLAIR,
Offg. Dy. Commr.

COORG.

Notice of an application by Channamma for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟ. ಕೋರ್ಟಿನಿಂದ.

ಸ 1876ನೇ ಇಸವಿ ಸಿವಿಲ್ ನಾನಾವಿಧ ನಂಬರ 13.

ಸರ್ವೇಜನರಿಗೂ ತಿಳಿಯಪಡಿಸುವದೇನಂದರೆ,—ಕೊಡ್ಲೀ ಹೋಬಳಿ ಹುಲುಕೋಡು ಗ್ರಾಮದಲ್ಲಿ ಯಿರುವ ಶಿವಾಚಾರದ ಚೆನ್ನಮ್ಮ ನೆಂಬವಳು ಫಾತೀ ತನ್ನ ಗಂಡ ಚಿಕ್ಕಣ್ಣಗೆ ಹೊರಗಿನಿಂದ ಬರತಕ್ಕ 525 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ಸ 1860ನೇ ಇಸವೀ 27ನೇ ಆಕ್ಟುಮೇರೆ ಬಾಧ್ಯತೇ ಸರ್ಟಿಫಿಕೇಟ ಕೊಡಿಸಿಕೊಡಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೆ 1876ನೇ ಇಸವೀ ನವಂಬರ ತಾರೀಖು 6ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಂನಲ್ಲಿ ಹಿಯರಿಂಗ್ ಆಗುವದ್ದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರ್ರು ಯಿದ್ದರೆ ಸದರೀ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸಬಹುದು.

ತಾರೀಖು 3ನೇ ಅಕ್ಟೋಬರ 1876ನೇ ಇಸವಿ.

Notice of an application by Mallappa for a certificate under Act XXVII of 1860.

ಸ 1876ನೇ ಇಸವೀ ಸಿವಿಲ್ ನಾನಾವಿಧ ನಂಬರ 141.

ಸರ್ವೇಜನರಿಗೂ ತಿಳಿಯಪಡಿಸುವದೇನಂದರೆ,—ನಂಜರಾಯಿಪಟ್ಣ ತಾಲ್ಲೂಕು ಯಡವನಾಡು ಹರಗದ ಗ್ರಾಮದಲ್ಲಿ ಯಿರುವ ಜಮ್ಮಾದ ಕೊಡಗರ ದೊಡ್ಡಮನೇ ಬಸವೇಗೌಡರ ಮಗ ಮಲ್ಲಪ್ಪನೆಂಬುವನು ಫಾತೀ ತನ್ನ ಅಣ್ಣ ಮಾಸ್ತಿಯಗೆ ಹೊರಗಿನಿಂದ ಬರತಕ್ಕ ಸಾಲ 500 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ಸ 1860ನೇ ಇಸವಿ 27ನೇ ಆಕ್ಟುಮೇರೆ ಬಾಧ್ಯತೆ ಸರ್ಟಿಫಿಕೇಟ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೆ ಸ 1876ನೇ ಇಸವೀ ನವಂಬರ ತಾರೀಖು 8ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಂನಲ್ಲಿ ಹಿಯರಿಂಗ್ ಆಗುವದ್ದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರ್ರು ಯಿದ್ದರೆ, ಸದರೀ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸಬಹುದು.

ತಾರೀಖು 5ನೇ ಅಕ್ಟೋಬರ 1876ನೇ ಇಸವಿ.

E. Shaw,
Offg. Supt.

ಸ 1876ನೇ ಇಸವಿ ಶಪ್ಟಂಬರ ತಿಂಗಳ ಕಾಲಸ್ಥಿತೀ ರಿಪ್ಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳಲ್ಲಿ ಮಳೆ ಬೀಳದ ಸಬಬು ಡಿಸ್ಟ್ರಿಕ್ಟಾಮುಳೆ ಬಹಳ ಕಷ್ಟಪ್ರಾಪ್ತವಾಗಿಯಿಧೆ ಕೊಂಚ ಮಳೆ ಮಾತ್ರ ವೊಂದೊಂದು ಕಡೆ ಬಿತ್ತು 83 ದೊಡ್ಡ 232 ಸಣ್ಣ ಕೆರೆಗಳಿಗೆ ಮಾತ್ರ ಕೊಂಚ ನೀರು ಬಂತು.

ಬೆಳೆ.—ಬೆಳೆಗಳಿಗೆ ಮಳೆ ಯಿಲ್ಲದ ಸಬಬು ಬಹಳ ಲುಕ್ಸಾನ ಸಂಭವಿಸಿತು ಫಸಲು ಬಹಳವಾಗಿ ಬಿಸಲುನಿಂದ ಸುಟ್ಟುಹೊಯಿತು ಮಿಕ್ಕಿದ್ದು ನೀರುಯಿಲ್ಲದೆ ವೊಣಗಿ ಹೋಗುತ್ತಾಯಿಧೆ ಆದ್ದರಿಂದ ಈ ವರುಷದ ಬೆಳೆ ಅಷ್ಟೇನು ಧೈರ್ಯವುಂಟುಮಾಡತಕ್ಕದ್ದಾಗಿಯಿಲ್ಲ. ಹುರಳಿ, ಉದ್ದು, ಕಾರಾಮಣಿ ಹಜ್ಜೆಳ್ಳು ಯಿವು ಪೇರಾವಾದವು ಯಳ್ಳು. ಜೋಳ ನಾಟುರಾಗಿ ಯಿವು ಕಟಾವಾದವು

ನಿರ್ಖು.—ಆಹಾರ ಜಿನಿಸಿಗಳ ನಿರ್ಖುಗಳು ಬಹಳವಾಗಿ ಚಡಾವಾಗಿಧೆ ಕೆಲವುಕಡೆಗಳಲ್ಲಿ ಅಂಗಡಿಗಳಲ್ಲಿ ಜಿನಿಸಿಗಳೇ ಸಾಕಾದಷ್ಟು ಯಿರುವದಿಲ್ಲಾ.

ಆರೋಗ್ಯ.—ಸಾಧಾರಣವಾಗಿ ವೊಳ್ಳೇದು, ಡಿಸ್ಟ್ರಿಕ್ಟಿನ ಕೆಲವು ಕಡೆಗಳಲ್ಲಿ ಛಳೀಜ್ವರ ಕಾಣಿಸಿಕ್ಕೊಂಡಿರುತ್ತೆ. ಬೆಂಗಳೂರು ವ ಆನೆಕಲ್ಲು ತಾಲ್ಲೂಕುಗಳಲ್ಲಿ ಉಕಾಲ್‌ಜುಲಾಬ ಉಪದ್ರ ಸಹಾ ಕೊಂಚ ತಗಲಿಧೆ.

ಜನನಾವು,—446 ಮಂದಿ ಸತ್ತರು. ಆಗಸ್ಟು ತಿಂಗಳಲ್ಲಿ 486 ಮಂದಿ ಸತ್ತರು.

ಜಾನವರ್,—ಕಾಲ್ನಡೆಗಳ ಪೈಕೀ ಮರ್ರೇ ಯಂಬ ಗೋಮಾರಿ ಉಪದ್ರದಿಂದ ದೊಡ್ಡಬಳ್ಳಾಪುರ ತಾಲ್ಲೂಕ ನಲ್ಲಿ 165 ಯಿತರ ರೋಗಗಳಿಂದ 1,717 ಅಡವೀ ಮೃಗಗಳಿಂದ ಕೊಲ್ಲಲ್ಪಟ್ಟವು, 108, ಜುಮ್ಲಾ 1,990 ಕಾಲ್ನಡೆಗಳು ಸತ್ತವು. ಆಗಸ್ಟ್ ತಿಂಗಳಲ್ಲಿ 1,751 ಕಾಲ್ನಡೆಗಳು ಸತ್ತವು.

ಜಮೀನ್,—2073—0—9 ಪೈ ಕಂದಾಯವುಳ್ಳ ಜಮೀನುಗಳು ಸಾಗುವಳೀಬಗ್ಗೆ ಈ ತಿಂಗಳಲ್ಲಿ ತೆಗೆದುಕೊಳ್ಳಲ್ಪಟ್ಟಿತು.

L. RICKETTS,
Offg. Dy. Commr.

ಕೋಲಾರ ಡಿಸ್ಟ್ರಿಕ್ಟ್.

ಮಳೆ—ಶಪಟಂಬರ್ ತಿಂಗಳಲ್ಲಿ ಆದ ಸರಾಸರಿ ಮಳೆ 14 ಅಂಗುಲ 34¼ ಸೆಂಟಿಗಳು.

ಹವಾ—ಸರ್ವತ್ರ ಉಷ್ಣವಾಗಿಯೂ ಮಳೆ ಇಲ್ಲದೆಯೂ ಇದೆ.

ಜಮೀನ್‌ಗಳು—ಸದರೀ ತಿಂಗಳಲ್ಲಿ 1797—1—5 ರೂಪಾಯಿಗಳ ಕಂದಾಯ ಉಳ್ಳ ಜಮೀನುಗಳು ಸಾಗುವಳೀ ಬಗ್ಯೆ ತೆಗೆದುಕೊಳ್ಳಲ್ಪಟ್ಟವು. ರಾಜೀನಾಮೆಗಳು ಯಾವವು ಬಂದಿರುವದಿಲ್ಲವು.

ಫಸಲ್—ಹುರಳಿ, ಎರಡನೇ ತರದ ಯೆಳ್ಳು ಬಿತ್ತನವಾದವು, ಸಜ್ಜೆ, ಅವ್ವಲ್ ತರದ ಎಳ್ಳು, ಜೋಳ, ವ ರಾಗಿ ಇವುಗಳು ಕಟಾವಾದವು. ಮಳೆ ಇಲ್ಲದೆ ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ಫಸಲ್‌ಗಳು ಒಣಗುತ್ತಿವೆ, ಮಳೆ ಬಿದ್ದ ಸ್ಥಳಗಳಲ್ಲಿ ಫಸಲ್‌ಗಳು ಅಭಿವೃದ್ಧಿ ಯಾಗುತಿವೆ.

ಜನಾರೋಗ್ಯ—ಸಾಮಾನ್ಯವಾಗಿ ಚನ್ನಾಗಿಯಿದೆ ಜ್ವರೋಪದ್ರವ ಮಾತ್ರ ಆಗಸ್ಟು ತಿಂಗಳಿಗಿಂತ ಸ್ವಲ್ಪಕಡಮೆ ಯಾದಾಗ್ಯೂ ಅದು ವ್ಯಾಪಿಸಿ ಇರುವದು ಶಿವಾಯಿ ಸಾಮಾನ್ಯವಾಗಿ ಚನ್ನಾಗಿಯಿದೆ. ಉಖಾಲ್ ಜುಲಾಬ್ ಬಹಳ ಹೆಚ್ಚಿಯಿದೆ ಹಿಂದಿನ ತಿಂಗಳಿಗಿಂತ 48 ಮಂದಿ ಜಾಸ್ತೀಯಾಗಿ ಹೋಗಿರುತ್ತಾರೆ, ಅಥವಾ ಇತರಕಾರಣಗಳಿಂದ ಈ ತಿಂಗಳಲ್ಲಿ 58 ಮಂದಿ ಹಿಂದಿನ ತಿಂಗಳಲ್ಲಿ 10 ಮಂದಿ ಹೋಗಿರುತ್ತಾರೆ. ಯಿದರ ತಪಶೀಲ್.

	ಆಗಸ್ಟು	ಶಪಟಂಬರ್.		ಆಗಸ್ಟು.	ಶಪಟಂಬರ್.
ಜ್ವರದಿಂದ	334	287	ಆಕಸ್ಮಿಕ ವ ಘಾಯ ವಗೈರೆ	10	9
ಹೊಟ್ಟೆಸುಗ್ಗಿನಿಂದ	29	36	ಇತರರೋಗಗಳು	159	144
ಸಿಡುಬಿನಿಂದ	8	14			

ಶಪ್ಟಂಬರ್ ತಿಂಗಳಿಗೆ 414 ಜನನಗಳಾದವು, ಆಗಸ್ಟಿಗಿಂತ 4 ಕಡಮೆ.

ದನಗಳು,—ಆಗಸ್ಟು ತಿಂಗಳಿಗಿಂತ ಶಪಟಂಬರ್‌ನಲ್ಲಿ ಬಹಳ ದನಗಳು ಹೋದವು ಶಪಟಂಬರ್‌ನಲ್ಲಿ 2496 ಆ ಹಿಂದಿನ ತಿಂಗಳಲ್ಲಿ 2229 ಕಾಲ್ನಡೆ ಹೋಯಿತು.

	ಆಗಸ್ಟು.	ಶಪ್ಟಂಬರ್.		ಆಗಸ್ಟು	ಶಪ್ಟಂಬರ್.
ಆಕಳು ಯೆತ್ತು	677	794	ಕುದುರೆಗಳು	13	27
ಯೆಮ್ಮೇಕೋಣಗಳು	215	337	ಕತ್ತೆಗಳು	28	56
ಕುರಿ ಮೇಕೆಗಳು	1296	1282			

ದಾರಣೆವಾಸಿ,—ಹೆಚ್ಚು ತಗ್ಗುತಿವೆ.

B. KRISHNAIENGAR,
Dy. Commr.

ತುಮಕೂರು ಡಿಸ್ಟ್ರಿಕ್ಟ್.

ಮಳೆ,—ಹೆಡ್ ಕ್ವಾರಟರಿನಲ್ಲಿ 2 ಇಂಚ್ಸ್ 78 ಸೆಂಟಸ್ ಮಳೆ ಅಳೆಯಲ್ಪಟ್ಟಿತು.

ಬೆಳೆ,—ಈ ತಿಂಗಳಲ್ಲಿ ಹರಳು, ಯೆಳ್ಳು, ಹುರಳಿ ಸಾವೆ, ಅವರೆ ಮೆಣಸಿನಕಾಯಿ, ರಾಗಿ ಯಿವು ಪೇರಾವಾದವು. ಈ ತಿಂಗಳಲ್ಲಿ ಬಹಳ ದಿವಸಗಳ ಪರಿಯಂತ್ರ ಮಳೆ ಯಿಲ್ಲದ ಸಬಬ್ ಖುಷ್ಕೀ ಬೆಳೆಗಳು ಸರ್ವತ್ರ ಪೋಣಗಿದವು. ಆದರೆ ಹಿಂದಲಾಗಿ ಬಿದ್ದ ಮಳೆಯಿಂದ ಕೊಂಚ ಅಭಿವೃದ್ಧಿ ಆಗಲಿಕ್ಕೆ ಕಾರಣ ವುಂಟಾಯಿತು.

ತರೀ, ಫಸಲ್ ತೋಟದ ಫಸಲ್‌ಗಳು ವ ಗನ್ನಾ ಫಸಲ್ ಯಿವು ಸಾಧಾರಣವಾಗಿದೆ, ಅಡಿಕೆ ಜೋಳ ಯಿವು ಈ ತಿಂಗಳಲ್ಲಿ ಕಟಾವಾದವು.

ಆರೋಗ್ಯ,—ಜನಾರೋಗ್ಯ ವೊಳ್ಳೇದಾಗಿ ಯಿತ್ತು.

ಕಾಲ್ನಡೆಗಳು,—ಬಹಳವಾಗಿ ಸತ್ತು ಹೋದಹಾಗೆ ರಿಪೋರ್ಟು ಬಂತು, ಈ ತಿಂಗಳಲ್ಲಿ 11400 ಸತ್ತು ಹೋದವು ಹಿಂದಿನ ತಿಂಗಳಲ್ಲಿ 7853 ಸತ್ತವು.

ಜಮೀನ್,—1471-4-11 ಪೈ ಕಂದಾಯವುಳ್ಳ ಜಮೀನ್ ಹೊಸದಾಗಿ ಸಾಗುವಳಿ ಬಗ್ಗೆ ತೆಗದುಕ್ಕೊಳ್ಳಲ್ಪಟ್ಟಿತು. ಮುಖ್ಯವಾಗಿ ಕಡಬ, ಕುಣಿಗಲು, ಮದ್ದಗಿರಿ ವ ತುಮಕೂರು ಈ ತಾಲ್ಲೂಕುಗಳಲ್ಲಿ ತೆಗದುಕ್ಕೊಳ್ಳಲ್ಪಟ್ಟಿತು.

ನಿರ್ಕು,—ಈ ತಿಂಗಳಲ್ಲಿ ನಿರ್ಕುಗಳು ಜಡಾವಾದವು ಆದರೆ ಆಬ್ಬೈರು ಭಾಗದಲ್ಲಿ ಯಿಳೀತು.

E. S. LUDLOW,
Offg. Dy. Commr.

ಮೈಸೂರು ಡಿಸ್ಟ್ರಿಕ್ಟು.

ಮಳೆ—ಹೆಚ್ಚು ಕಡಮೆ ದರೋಬಸ್ತು ತಾಲ್ಲೂಕುಗಳಲ್ಲಿಯೂ ಮಳೆ ಬಿತ್ತು ಮೈಸೂರಲ್ಲಿ 2ಯಿಂಚ್ 72 ಸೆಂಟ್ಸ್ ಮಳೆ ಬಿದ್ದಂತೆ ಅಳೆಯಲ್ಪಟ್ಟಿರುತ್ತೆ.

ಬೆಳೆ,—ಚನ್ನಾಗಿದೆ ಈ ತಿಂಗಳಲ್ಲಿ ಉದ್ದು ಹೆಸರು, ಹುರಳಿ, ಯಿವು ಪೈರಾವಾದವು.

ಆರೋಗ್ಯ—ಸಾಧಾರಣವಾಗಿ ವಳ್ಳೇದು, ದರೋಬಸ್ತು ಕಾರಣಗಳಿಂದ 424 ಮಂದಿ ಸತ್ತರು ಯಿದರಲ್ಲಿ ಉಕಾಲ್‌ಜುಲಾಬ್ ನಿಂದ ಸತ್ತ 24 ಮಂದಿ ಸೇರಿರುತ್ತಾರೆ.

ಜಾನವರ.-ಮೈಸೂರು ಅಷ್ಟಗ್ರಾಮ ಮಳವಳ್ಳಿ ತಾಲ್ಲೂಕುಗಳಲ್ಲಿ ಗೋಮಾರಿ ರೋಗವು ವ್ಯಾಪಿಸಿತ್ತು ಯಿದರಿಂದ 211 ಕಾಲ್ನಡೆಗಳು ಸತ್ತವು. ಕುಲ್ಲು 1884 ಸತ್ತವು.

ನಿರ್ಕು.-ಈ ತಿಂಗಳಲ್ಲಿ ನಿರ್ಕುಗಳು ಜಡಾವಾಗಿವೆ.

C. J. PEARSE
Dy Commr.

ಕೊಡಗು ಡಿಸ್ಟ್ರಿಕ್ಟು.

ತರಿ ಜಮೀನು—ಕಾರ್ತಿಕ ಫಸಲ್ ಚನ್ನಾಗಿಯಿದೆ ವೈಶಾಖೀ ಫಸಲಿಗಾಗಿ ಬಿಟ್ಟು ಹುಯುವ ಕೆಲಸ ನಡೆಯುತಿವೆ.

ಖುಷ್ಕೀ ಜಮೀನು—ರಾಗಿ ಕಟಾವ್ ಕೆಲಸ ಷುರುವಾಯಿತು. ಯಾಲಕ್ಕೀ ಕಾಯಿ ಕೀಳುವ ಕೆಲಸ ಷುರುವಾಯಿತು ಈ ಸಲದ ಫಸಲ್ ಹಿಂದಿನ ಸಂವತ್ಸರಕ್ಕಿಂತ ಕಡಮೆ ಯಾಯಿತು ಈಚಿಗೆ ಯೆಂಟು ಹತ್ತು ವರುಷಗಳಿಂದಲೂ ಇಲಾಚಿ ಮಣಕ್ಕೆ 80 ರೂಪಾಯಿಗಳ ಲಾಗಾಯಿತು 30 ರೂಪಾಯಿಗಳ ವರಿಗೆ ಯಿಳಿದು ಹೋಯಿತು.

ಕಾಫಿ—ಕಾಫೀ ತೋಟಗಳ ಸ್ಥಿತಿ ಚನ್ನಾಗಿ ಯಿದೆ. ಪೂರ್ವವೇ ತಿಳಿಯಬಂದ ಪ್ರಕಾರ ಫಸಲ್ ಸ್ವಲ್ಪವಾಗುವದೆಂತಲೂ ಕೆಟ್ಟು ಹೋಗುವದೆಂತಲೂ ಕಾಣುತ್ತೆ, ಮೈಸೂರು ಮತ್ತು ಮಲಬಾರ್ ಈ ಕಡೆಗಳಿಂದ ಕೂಲೀ ಜನಗಳು ಬಹಳವಾಗಿ ದೊರಕುತ್ತಾರೆ.

ಹುರಳಿ—ಈ ಬೆಳೆ ಚನ್ನಾಗಿರುವದಾಗಿ ತಿಳಿಯಬರುತ್ತೆ.

ಜನನಾವು—ಈ ಸೀಮೆಯಲ್ಲಿ ಈ ತಿಂಗಳಲ್ಲಿ 328 ಮಂದಿ ಸತ್ತರು ಸಾಲ್ ಗುಜಸ್ತ ಇದೇ ತಿಂಗಳಲಿ 384 ಮಂದಿ ಸತ್ತರು ಹ್ಯಾಗೆಂದರೆ.

ಅತಿಸಾರದಿಂದ	..	..	25
ಜ್ವರದಿಂದ	..	..	287
ಆಕಸ್ಮಿಕ	..	..	3
ಅಡವಿ ಮೃಗಗಳಿಂದ	..	..	2
ಇತರ ರೋಗಗಳಿಂದ	..	..	11
		ಜುಮ್ಲಾ	328

ಮಡಿಕೇರಿತಾಲ್ಲೂಕು		..	57
ಪಡಿನಾಲ್ಕುನಾಡು	..	..	41
ಯೆಡೆನಾಲ್ಕುನಾಡು	..	..	31
ಕಿಗ್ಗಟ್ಟುನಾಡು	..	..	54
ನಂಜರಾಜಪಟ್ಣ	..	..	75
ಯಿಳುಸಾವಿರ ಸೀಮೆ	..	..	49
ಷಹರಗಳು			
ಮಹದೇವಪೇಟೆ	..	..	12
ವೀರರಾಜೇಂದ್ರಪೇಟೆ	..	..	9
		ಜುಮ್ಲಾ	328

ಈಪೈಕಿ 149 ಮಂದಿ ಗಂಡಸರು, 113 ಹೆಂಗಸರು, 66 ಹುಡುಗರು ಪೈಕಿ ಜಾತಿ ವಿವರ, 13 ಕ್ರೀಸ್ತರು, ಕೊಡಗರು 35, ಹಿಂದುಗಳು 253 ಮಹಮ್ಮದೀಯರು 18 ಯಿತರ ಜಾತಿಯವರು 9 ಜುಮ್ಲಾ 328.

ಜಾನವರ್—ಈ ತಿಂಗಳಲ್ಲ 219 ಕಾಲ್ನಡಿಗೆಗಳು ಸತ್ತವು, ಸಾಲ್ ಗುದಸ್ತ ಇದೇ ತಿಂಗಳಲ್ಲಿ 662 ಕಾಲ್ನಡೆಗಳು ಸತ್ತು ಹೋದವು.

ವಿವರ—ಹೋರಿಗಳು 57, ಹಸುಗಳ 46, ಕರುಗಳು 37, ಕೋಣಗಳು 35, ಯಮ್ಮೆಗಳು 30, ಯಮ್ಮೆ ಕರುಗಳು 14 ಜಮ್ಲಾ 219.

ನಿರ್ರು—ಯಥಾಪ್ರಕಾರ ವಿರುತ್ತೆ.

ಮಡಿಕೇರಿಯಲ್ಲಿ 1876ನೇ ಇಸವಿ ಶಪ್ಟಂಬರ್ ತಿಂಗಳಲ್ಲಿ 6 ಇಂಚ್ 92 ಸೆಂಟಿಗಳ ಮಳೆ ಬಿತ್ತು, ಇದುವರಿಗೂ ಕುಲ್ಲು ಮಳೆ 104 ಇಂಚ್ಸ್ 41 ಸೆಂಟ್ಸ್.

ಸೋಮವಾರ ಪೇಟೆಯಲ್ಲಿ ಶಪ್ಟಂಬರ್ ತಿಂಗಳೊಳಗೆ 2 ಇಂಚ್ 45 ಸೆಂಟ್ಸ್ ಮಳೆ ಬಿತ್ತು ಇದುವರಿಗೂ ಕುಲ್ಲು ಮಳೆ 96 ಇಂಚ್‌ಗಳು 34 ಸೆಂಟ್ಸ್.

E. SHAW,
Offg. Supt.

MYSORE DISTRICT.

Notice of an application by Muddanna for a certificate under Act XXVII of 1860.

ಮೈಸೂರು ಡಿ|| ಡಿ|| ಕಮ್ಮಿಷನರವರ ಕೋರ್ಟಿನಿಂದ.

1876ನೇ ಇಸವಿ ಸಿವಿಲ್ ಪೂಟ ಮಿ|| ನಂ. 69.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ' ಫವತೀಯಾದ ತನ್ನ ತಂದೆ ದೊಡ್ಡ ಮಲ್ಲಣ್ಣನಿಗೆ ಬರಬೇಕಾದ 30,000 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಿನ ಪ್ರಕಾರ ಸರಟಿಫಿಕೇಟ ಆಗಬೇಕೆಂದು ಮೈಸೂರು ಹೊಸ ಹಗ್ರಾರದಲ್ಲಿ ಇರುವ ಮುದ್ದಣ್ಣ ಯೆಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಈ ಮಾಹೆ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Nanjundaiya for a certificate under Act XXVII of 1860.

1876ನೇ ಇಸವೀ ಶಿವಲ್ ಮಿಸಲೇನಿಯಸ್ ನಂಬರ್ 70.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತಿಯಾದ ತನ್ನ ಹಕ್ಕಿ ರಂಗಪ್ಪನವರಿಗೆ ಬರಬೇಕಾದ 200 ರೂಪಾಯಿಗಳನ್ನು ವಸೂಲ್‌ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಆಗಬೇಕೆಂದು ಮೈಸೂರು ಬಸವನ ಮಹಲೆದಲ್ಲಿರುವ ನಂಜುಂಡೈಯ್ಯನು ಕೊಟ್ಟು ಯಿರುತಕ್ಕ ಅರ್ಜಿಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದಾ ಯಿದರಮೇಲೆ ತಕರಾರ್ ವುಳ್ಳವರು ಆತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದು.

Notice of an application by Parvatamma for a certificate under Act XXVII of 1860.

ಸನ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 71.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಅಜ್ಜ ಭದ್ರಮ್ಮನಿಗೆ ಬರಬೇಕಾದ 450 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ ಸದರೀ ಭದ್ರಮ್ಮನ ಮೊಮ್ಮಗನಾದ ಪುಟ್ಟಬಸವನು ಮೈನರಾದ್ದರಿಂದ

ಇವನ ಸೋದರತ್ತೆಯಾದ ಮೈಸೂರ್ ಕಿಲ್ಲೆದಲ್ಲಿರುವ ಕರೀಕಲ್ಲು ತೊಟ್ಟಿ ಪಾರ್ವತಮ್ಮನೆಂಬವಳು ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಕೊಟ್ಟಿರತಕ್ಕ ಅರ್ಜಿಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರ ಮೇಲೆ ತಕರಾರ್ ಉಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದಿದೆ.

ತಾರೀಖು 3ನೇ ಅಕ್ಟೋಬರ್ 1876ನೇ ಇಸವಿ ಮೊ|| ಮೈಸೂರು.

C. J. PEARSE,
Dy. Commr.

HASSAN DISTRICT.

Notice of an application by Gundappa for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆ|| ಕ|| ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಚನ್ನರಾಯಪಟ್ಣ ತಾಲ್ಲೂಕು ಕೊರಟಿಗೆರೆಯಲ್ಲಿ ಯಿರುವ ಗುಂಡಪ್ಪ ನೆಂಬವನು ಫಾತೀ ಆದ ತನ್ನ ತಮ್ಮ ಅಂಣಪ್ಪನ ಸಾಲಾ 200 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟ್ ಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತಾ ಅರ್ಜೀ ಕೊಟ್ಟು ಯಿರುವದ್ದರಿಂದ ಸದರೀ ಅರ್ಜಿ ಫೈಸಲ್‌ಬಗ್ಯೆ ರ್ಸ ಮಜಕೂರು ಅಕ್ಟೋಬರ್ 25ನೇ ತಾರೀಖಿನ್ನ ನಿಷ್ಕರ್ಷೆ ಮಾಡಿ ಯಿರುವದ್ದರಿಂದಾ ತಕರಾರು ಯಿರತಕ್ಕವರೆಲ್ಲಾ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳತಕ್ಕದ್ದು ಯಿದೆ.

Notice of an application by G· Ramsetti for a certificate under Act XXVII of 1860.

ಇದರಿಂದ ತಿಳಿಯಪಡಿಸುವದೇನಂದರೆ,—ಹಾರೆನಹಳ್ಳಿ ಕಸಬೆಯಲ್ಲಿ ಯಿರುವ ಗಂಡಶಿ ರಾಮಶೆಟ್ಟಿ ಯೆಂಬವನು ಫಾತೀ ಆದ ತನ್ನ ಅಣ್ಣ ಿಜ್ಜಶೆಟ್ಟಿ ಸಾಲಾ 900 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 60ನೇ ಇಸವೀ 27ನೇ ಆಕ್ಟ್ ಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತಾ ಕೊಟ್ಟ ಅರ್ಜೀ ಫೈಸಲ್ ಬಗ್ಯೆ ರ್ಸ ಮಜಕೂರು ಅಕ್ಟೋಬರ್ 25ನೇ ತಾರೀಕನ್ನ ನಿಷ್ಕರ್ಷೆ ಮಾಡಿರುವದ್ದರಿಂದಾ ತಕರಾರು ಮಾಡತಕ್ಕವರೆಲ್ಲಾ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳತಕ್ಕದ್ದು ಯಿರುತ್ತೆ.

2ನೇ ಅಕ್ಟೋಬರ್ ರ್ಸ 1876ನೇ ಇಸವಿ.

H. E. MOTTET,
Dy. Commr.

ಅಮೃತ ಮಹಲ್.

ದನಗಳ ಮುಖ್ಯವಾದ, ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಯೆ ತಕ್ಕ ಕೆಲವು ಹೋರಿಗಳು, ಹಸುವುಗಳು, ಕರುವುಗಳು, ಸಣ್ಣ ಯೆತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ್ 26ನೇ ಮಂಗಳವಾರ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರೆನ್ನು ಕೇಳಿ ತಪಶೀಲ್ ತಿಳಿದುಕೊಳ್ಳಬಹುದು.

ಮು—ವಿ—50 ಜೊತೆ ಯೆತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. MCINROY, *Major,*
Sub-Asstt. Commissary Genl.,
In charge AmrutMahal, by Mysore.

ಕರೆನ್ಸೀ ನೋಟುಗಳು.

ಇದರಡಿ ನಮೂದಿಸಲ್ಪಡುವ ಕರೆನ್ಸಿ ನೋಟುಗಳ ಅರ್ಧ ಭಾಗಗಳು ಕುಣಿಗಲನಿಂದ ಬೆಂಗಳೂರಿಗೆ ಟಪಾಲ್ ದ್ವಾರ ರವಾನೆ ಆಗುವಲ್ಲಿ ಹೋಗಿರುತ್ತವೆ.

ನಂಬರ.	ಸರ್ಕಲ್.	ಮೊಬಲಗ.	ಹಕ್ಕುದಾರನ ಹೆಸರು.
$\frac{B}{50}$ 14029	ಮದ್ರಾಸ	100	ಬೆಂಗಳೂರು ನಗರ್ತಪೇಟೆಯಲ್ಲಿರುವ ಜವಳೀ ವರ್ತಕ ಮಂಗಳಗಿರಿ ಪೇರೈಯಶೆಟ್ಟಿ
$\frac{B}{44}$ 64251	ಡಿಟ್ಟೋ	100	
$\frac{B}{44}$ 26975	ಡಿಟ್ಟೋ	100	
$\frac{B}{44}$ 22176	ಡಿಟ್ಟೋ	100	
$\frac{B}{35}$ 88386	ಡಿಟ್ಟೋ	20	
$\frac{B}{42}$ 39527	ಡಿಟ್ಟೋ	20	

ಯಿದರಡಿ ನಮೂದಿಸಲ್ಪಡುವ ಕರೆನ್ಸಿನೋಟು ಹೋಗಿರುತ್ತೆ.

ನಂಬರ.	ಸರ್ಕಲ್.	ಮೊಬಲಗ.	ಹಕ್ಕುದಾರನ ಹೆಸರು.
$\frac{B}{44}$ 78677	ಮದ್ರಾಸ	100	ಬೆಂಗಳೂರಲ್ಲಿರುವ ಚೀಫ್ ಕಮ್ಮಿಷನ್ನರವರ ಖಜಾನೆ ಬಕ್ಷೀರು ಮೆ॥ ಶೇತುರಾಯರು.

Mysore Government Press, Bangalore—1876.

2100

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಶ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 14, ಸ್ ೧ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಸನ್ 1871ನೇ ಇಸವಿಯ ಲ್ಯಾಂಡ್ ಇಂಪ್ರೂವ್ಮೆಂಟ್‌ಯಾನೆ ಜಮೀನ್ ಅಭಿವೃದ್ಧಿಯ ಆಕ್ಟನ್ನು ತಿದ್ದುಪಡೀ ಮಾಡುವ ಬಗ್ಗೆ ಹುಟ್ಟಿದ ಮುಸುವಿದಾ ಆಕ್ಟು.

———:0:———

1871ನೇ ಇಸವಿಯ ಲ್ಯಾಂಡ್ ಇಂಪ್ರೂವ್ಮೆಂಟ್ ಆಕ್ಟುಯಾನೆ ಜಮೀನ್ ಅಭಿವೃದ್ಧಿಯ ಆಕ್ಟಿನ ಕೆಲವು ನಿಬಂಧನೆಗಳ ಅಮಲ್ ವಿಷಯದಲ್ಲಿ ಸಂದೇಹಗಳು ವುಂಟಾಗಿರುವದರಿಂದ ಅಂತಾ ಸಂದೇಹಗಳನ್ನು ನಿವರ್ತಿ ಮಾಡುವ ಉದ್ದೇಶದೊಡನೆ ಜಿಜ್ಞ ಆಕ್ಟನ್ನು ತಿದ್ದುಪಡಿ ಮಾಡುವದು ಯುಕ್ತವಾಗಿರೋಣದರಿಂದ ನಿರ್ಣಯಿಸಲ್ಪಡುವದೇನಂದರೆ.

ಪೀಠಿಕೆ.

ಸ್ಥಳಿಕ ವ್ಯಾಪ್ತಿ. ಈ ಆಕ್ಟು ಬ್ರಿಟಿಷ್ ಇಂಡ್ಯದ ಸರ್ವತ್ರ ವ್ಯಾಪಿಸುತ್ತದೆ.

ಕಲ್ಪನೆ. ಯಿದು 1871ನೇ ಇಸವಿಯ ಸದರೀ ಜಮೀನ್ ಅಭಿವೃದ್ಧಿ ಆಕ್ಟಿನೊಂದಿಗೆ ಓದಲ್ಪಟ್ಟು ಅದರ ವೊಂದು ಭಾಗವಾಗಿ ಅಂಗೀಕರಿಸಲ್ಪಡತಕ್ಕದ್ದು.

ಷುರು. ಮತ್ತು ಯಿದು 1871ನೇ ಇಸವಿ ಶಪ್ಟಂಬರ್ 28ನೇ ತಾರೀಖಿನಲ್ಲಿ ಜಾರೀಗೆ ಬಂದಂತೆ ಯೆಣಿಸಲ್ಪಡತಕ್ಕದ್ದು—ಯಾತಕ್ಕಂದರೆ ಸದರೀ ತಾರೀಖಿನಲ್ಲಿ ಜಿಜ್ಞ ಆಕ್ಟು ಜಾರೀಗೆ ತರಲ್ಪಟ್ಟಿತು.

1871ನೇ ಇಸವಿಯ 26ನೇ ನಂ ಆಕ್ಟಿನ 15ನೇ ಸೆಕ್ಷನ್ ತಿದ್ದುಪಾಡು. ಜಿಜ್ಞ ಆಕ್ಟಿನ 15ನೇ ಸೆಕ್ಷನ್ ರದ್ದು ಮಾಡಲ್ಪಟ್ಟಿರುತ್ತೆ, ಮತ್ತು ಅದಕ್ಕೆ ಬದಲಾಗಿ ಯಿದರ ಕೆಳಗೆ ಬರುವ ಸೆಕ್ಷನ್ ಯೇರ್ಪಡಿಸಲ್ಪಡ ತಕ್ಕದ್ದು.

"15. ಈ ಆಕ್ಟು ಪ್ರಕಾರ ಅಡ್ವಾನಸ್ ಕೊಡಲ್ಪಟ್ಟ ದರೋಬಸ್ತು ವೊಬಲಗಗಳೂ ಅವು ಬಾಕೀ ಆದಾಗ ಈ ಕೆಳಗೆ ನಮೂದಿಸಲ್ಪಡುವ ವಿಶಿಷ್ಟ ವಿಧಗಳಿಂದಲಾಗಲಿ, ಅಪ್ಪೈಕಿ ಯಾವ ವಿಧದಿಂದಲಾಗಲಿ, ವಸೂಲ್ಮಾಡಲ್ಪಡ ತಕ್ಕದ್ದು.

(*a*). ಹಣ ತೆಗೆದುಕ್ಕೊಂಡವನಿಂದ, ಸದರೀ ವೊಬಲಗ್ ಜಮೀನ್ ಕಂದಾಯದ ಬಾಕೀಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

401

(*b.*) ಜಾಮೀನ್ದಾರ ಯಾವನಾದರೂ ಯಿದ್ದರೆ ಆತನಿಂದ, ಸದರೀ ಮೊಬಲಗ್ ಜಮೀನ್ ಕಂದಾಯದ ಬಾಕಿಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(*c.*) ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಿಂದ, ಸದರೀ ಮೊಬಲಗ್ ಅಂತಾ ಜಮೀನಿಗಾಗಿ ಸಲ್ಲಬೇಕಾದ ಕಂದಾಯದ ಬಾಕೀ ಮೊಬಲಗಾಗಿದ್ದರೆ ಹ್ಯಾಂಗೋ ಹಾಂಗೆ,

(*d.*) ಯಿತರ ಖಾತರು ಯೇನಾದರೂ ಯಿದ್ದರೆ, ಅಂತಾ ಖಾತರು ದಸ್ತಾವೇಜಿನ ಷರತ್ತುಗಳ ಪ್ರಕಾರ ಅಂತಾ ಖಾತರು ಆಡಗಿಸಿಕ್ಕೊಂಡಿರುವ ಸ್ವತ್ತಿನಿಂದ,—
ಪರಂತು,

(*e.*) ಹಣ ತೆಗೆದುಕೊಂಡವನು ಜಮೀನ್ದಾರನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಸಾಗುವಳೀದಾರ ವುಂಟಾಗಿರತಕ್ಕ ಸ್ವಂತ ಯಾ ಸಾಗುವಳೀ ಹಕ್ಕು ಆಡ್ವಾನ್ಸ ತೆಗೆದುಕ್ಕೊಂಡ ಮೊಬಲಗಿಗೆ ಸಾಗುವಳೀದಾರನು ಅಂತಾ ಹಕ್ಕನ್ನು ಯಿತರ ಖಾತರಾಗಿ ಮಾಡಿಕೊಟ್ಟಿದ್ದರೇನೇ ಹೊರತು ಅಂತಾ ಆಡ್ವಾನ್ಸ ಮೊಬಲಗ್ ಬರಮಾಡಿಕೊಳ್ಳುವದಕ್ಕೋಸ್ಕರ ಹರಾಜು ಆಗಲಿಕ್ಕೆ ಗುರಿಯಾಗಿರ ತಕ್ಕದ್ದಿಲ್ಲಾ.

(*f.*) ಹಣ ತೆಗೆದುಕ್ಕೊಂಡವನು 7ನೇ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ಸಾಗುವಳೀದಾರ ನಂತಾವನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಜಮೀನ್ದಾರನಿಗೆ ಯಿರತಕ್ಕ ಹಕ್ಕುದಾರಿಯು ಆಡ್ವಾನ್ಸ ಕೊಟ್ಟ ಮೊಬಲಗ್ ಬರಮಾಡಿಕೊಳ್ಳುವದಕ್ಕೋಸ್ಕರ ಹರಾಜುಆಗಲಿಕ್ಕೆ ಗುರಿಯಾಗಿರಕ್ಕದ್ದಿಲ್ಲಾ.

(*g.*) ಮತ್ತು ಆಡ್ವಾನ್ಸ ಕೊಟ್ಟಿದ್ದ ಮೊಬಲಗು, ಹಣ ತೆಗೆದುಕ್ಕೊಂಡವನ ಯಾ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನ ದೇಣೇ ಸಮಾಧಾನಕ್ಕಾಗಿ ಜಾಮೀನ್ದಾರನಿಂದಲಾಗಲಿ ಆತನ ಸ್ವತ್ತಿನ ಮೇಲಾಗಲಿ, ವಸೂಲ್ ಮಾಡಿಕೊಳ್ಳಲ್ಪಟ್ಟರೆ, ಹಣ ತೆಗೆದುಕ್ಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನ್ ಮೇಲೂ ಆಡ್ವಾನ್ಸ ಕೊಟ್ಟ ಮೊಬಲಗು ಬರಬೇಕಾದಾಗ ಸರಕಾರದವರಿಗೆ ಯಾವ ದಾವೆಗಳು ವ ಪರಿಹಾರಗಳು ವುಂಟಾಗಿದ್ದವ್ರೋ ಅದೇ ದಾವೆಗಳೂ ಪರಿಹಾರಗಳೂ ಹಣ ತೆಗೆದುಕ್ಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನ್ ಮೇಲೂ ಸದರೀ ಜಾಮೀನ್ದಾರಗೆ ಉಂಟಾಗಿರ ತಕ್ಕದ್ದು.

ಉದ್ದೇಶ ಕಾರಣಗಳ ವಿವರಣೆ.

(1871ನೇ ಇಸವಿಯ 26ನೇ) ಲ್ಯಾಂಡ್ ಇಂಪ್ರೂವ್ ಮೆಂಟ್ಯಾನೆ ಜಮೀನ್ ಅಭಿವೃದ್ಧಿಯ ಆಕ್ಟಿನ 14ನೇ ಸೆಕ್ಷನ್ ವಿಧಿಸುವದೇನಂದರೆ.—ಸದರೀ ಆಕ್ಟು ಅನುಸರಿಸಿ ಆಡ್ವಾನ್ಸ ಕೊಡುವಂತಾ ಕಲೆಕ್ಟರಿಂದ ಕೊಡಲ್ಪಡುವ ಪ್ರತಿ ಸರಟಿಫಿಕೇಟಿನಲ್ಲೂ, ಅಡ್ವಾನ್ಸ ಮೊಬಲಗ್ ಅಭಿವೃದ್ಧಿ ಮಾಡತಕ್ಕ ಜಮೀನ್ ಯಿರುವ ಜಾಗಾ, ವಿಸ್ತೀರ್ಣ, ಚತುರ್ಸರಹದ್ದುಗಳು ಮತ್ತು ಅಭಿವೃದ್ಧಿಯಾಗತಕ್ಕ ಜಮೀನ್ ಅಲ್ಲದೆ ಯಿತರವಾದ ಜಾಮೀನ್ (ಯಾವದಾದರೂ ಯಿದ್ದಲ್ಲಿ) ಅಂತಾದ್ದರ ಸ್ವರೂಪ, ಮತ್ತು ಮೊಬಲಗ್ ಯಿಂತಾವುಗಳನ್ನು ವಿವರಿಸತಕ್ಕದ್ದು, ಎಂಬದು. ಬಳಿಕ 15ನೇ ಸೆಕ್ಷನ್ ವಿಧಿಸುವದೇನಂದರೆ,—ಹಾಗೆ ವಿವರಿಸಲ್ಪಟ್ಟ ಮೊಬಲಗ್ ಯಾರಿಗೆ ಆಡ್ವಾನ್ಸ ಕೊಡಲ್ಪಟ್ಟಿತೋ ಅಂತಾ ಮನುಷ್ಯನಿಂದಲಾಗಲಿ "ಮೊಬಲಗ್ ಪಾವತೀ ಮಾಡುವಬಗ್ಗೆ ಜಾಮೀನಾದ ಯಾವ ಮನುಷ್ಯನಿಂದಾಗಲಿ, ಅಡ್ವಾನ್ಸ ಕೊಡಲ್ಪಟ್ಟ ಮನುಷ್ಯನಿಂದ ಯಾ ಅವನ ಜಾಮೀನ್ದಾರನಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದೆಂಬದು."

15ನೇ ಸೆಕ್ಷನಿನ ಉಳಿದ ಭಾಗವು ಈ ಕೆಳಗೆ ಬರುವ ಪ್ರಕಾರ ಇರುತ್ತೆ.

“ಅಂತಾ ಯಾವ ಮೊಬಲಗಾಗಲಿ ಆ ಮೇರೆ ವಸೂಲಾಗದೆ ಇದ್ದರೆ ಅದು ಸದರೀ ಸರಟಿಫಿಕೇಟಿನಲ್ಲಿ ವಿವರಿಸಲ್ಪಟ್ಟ ಜಮೀನ್‌ಬಗ್ಯೆ ಸಲ್ಲತಕ್ಕ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದು,

“ಪರಂತು, ಅಡ್ವಾನ್ಸ್ ಕೊಡಲ್ಪಟ್ಟ ಮನುಷ್ಯ ಜಮೀನ್‌ದಾರನಾಗಿ ಅಥವಾ, ಜಮೀನ್‌ದಾರನ ಅನುಮತಿಯಿಲ್ಲದೆ ಜಮೀನ್ ಸಂಬಂಧವನ್ನು ಪರಭಾರೇಮಾಡಲಿಕ್ಕೆ ಬಾಧ್ಯತೆಯುಳ್ಳ ಸಾಗುವಳೀದಾರನಾಗಿದ್ದರೆಹೊರತು ಅನ್ಯಥಾ ಅಂತಾ ಜಮೀನ್‌ದಾರನಲ್ಲದ ಯಾ ಸಾಗುವಳೀದಾರನಲ್ಲದ, ಯಿತರ ಯಾವ ಮನುಷ್ಯನ ಸದರೀ ಜಮೀನ್ ಸಂಬಂಧವೂ ಈಸೆಕ್ಷನ್ ಅನುಸರಿಸಿ ಮಾರಲ್ಪಡತಕ್ಕದ್ದಲ್ಲವು.

ಈ ಕ್ಲಾಜ್ ಮೇಲೆ ಎರಡಂಶಗಳು ವಿಚಾರಣೀಯಗಳಾಗಿರುತ್ತವೆ, ಮೊದಲನೇದು—ಗವರ್ನಮೆಂಟಿನವರು ಕೊಡುವ ಅಡ್ವಾನ್ಸ್ ಮೊಬಲಗ್, ಯಿತರ ದರೋಬಸ್ತು ಖರ್ಚುಗಳಿಗಿಂತ ಅಭಿವೃದ್ಧಿ ಮಾಡತಕ್ಕ ಜಮೀನಿನ ಬಾಬತು ಮೊದಲನೇ ಖರ್ಚಾಗಿರುತದೆಯೇ? ಈ ಖರ್ಚುಗಳು ಕಾಲದ ವಿಷಯದಲ್ಲಿ ಪೂರ್ವ ಭಾವಿಯಾದ್ದೆ ಅಲ್ಲವೆ? ಎರಡನೇದು “ಸದರೀಸರಟಿಫಿಕೇಟಿನಲ್ಲಿ ವಿವರಿಸೋಣಾದ ಜಮೀನ್‌ಯೆಂಬ ಮಾತು ಜಾಮೀನ್ ತರೀಕ್ ಕೊಡಬಹುದಾದ ಯಾವ ಜಮೀನನ್ನಾಗಲಿ ಅಡಗಿಸಿಕ್ಕೊಂಡಿರುತ್ತದೆಯೋ ಥ್ಯಾಗೆ? ಎಂಬವು.

ಈ ಸಂದೇಹಗಳನ್ನು ನಿವೃತ್ತಿ ಮಾಡುವದೇ ಪ್ರಕೃತ ಮುಸವಿದಾ ಆಕ್ಟಿನ ಉದ್ದೇಶವಾಗಿರುತ್ತೆ. ಸದರೀ ಆಕ್ಟು ಯಾವ ಆಧಾರಗಳ ಮೇಲೆ ಕಲ್ಪಿಸಲ್ಪಟ್ಟಿತೋ ಅಂತಾ ಆಧಾರಗಳೆಂದು ನಂಬಲ್ಪಟ್ಟಿರುವಂತಾವುಗಳ ಪ್ರಕಾರ, ಮತ್ತು ಯಿದುವರಿಗೆ ದರೋಬಸ್ತು ಮುಬಾದಲೇಗಳೂ ನಿಸ್ಸಂಶಯವಾದ ಯಾವಅಭಿಪ್ರಾಯದಿಂದ ಯಿದುವರಿಗೆ ಕೊಡಲ್ಪಟ್ಟಿತೋ, ತೆಗೆದುಕ್ಕೊಳ್ಳಲ್ಪಟ್ಟಿತೋ ವ ವಸೂಲ್ ಮಾಡಿಕ್ಕೊಳ್ಳಲ್ಪಟ್ಟಿತೋ ಅಂತಾ ಅಭಿಪ್ರಾಯ ಪ್ರಕಾರವೂ, ಸದರೀ ಬಿಲ್ ಅಂತಾ ಸಂಶಯ ನಿವೃತ್ತಿಯನ್ನು ಮಾಡುತ್ತಿದೆ ಅದು ಹ್ಯಾಗಂದರೆ—ಗವರ್ನಮೆಂಟಿನಿಂದ ಸಲ್ಲುವ ಅಡ್ವಾನ್ಸಗಳು, ಅಂತಾ ಜಮೀನ್‌ನಲ್ಲಿ ಆಗತಕ್ಕ ದರೋಬಸ್ತು ಯಿತರ ಖರ್ಚುಗಳು ಮತ್ತು ಸಂಬಂಧಗಳು, ಯಿವುಗಳಿಗಿಂತ ಅಭಿವೃದ್ಧಿ ಮಾಡತಕ್ಕ ಜಮೀನ್ ಮೇಲೆ ತಗಲುವ ಖರ್ಚಾಗಿರತಕ್ಕದ್ದು, ಮತ್ತು ಜಾಮೀನ್ ಬಗ್ಯೆ ಯಿತರ ಜಮೀನ್ ಕೊಡಲ್ಪಟ್ಟ ಪಕ್ಷಕ್ಕೆ ಗವರ್ನಮೆಂಟಿನಿಂದ ಸಂದ ಅಡ್ವಾನ್ಸ್, ಸ್ವಂತ ಮನುಷ್ಯನಿಂದ ಸಾಧಾರಣ ಅಡ್ವಾನ್ಸಾಗಿದ್ದರೆ ಹ್ಯಾಗೋ ಹಾಗೆಯೇ ಯಿತರಖರ್ಚುಗಳ ತರೀಕ್ ಯೆಣಿಸಲ್ಪಡತಕ್ಕದ್ದು.

ಸದರೀ ಕ್ಲಾಜಿನ ಖಂಡಿತವಾದ ಅರ್ಥ ವಿಚಾರದಮೇಲೆ ಮುಖ್ಯಸ್ಥನ ಮೇಲಣ ಪರಿಹಾರಗಳೆಲ್ಲ ನಿವರ್ತಗಳಾಗುವದಕ್ಕೆ ಮುಂದಾಗಿ ಜಾಮೀನ್‌ದಾರನು ದಾವಾಮಾಡಲ್ಪಡತಕ್ಕದ್ದೆಂದು ಇನ್ನೊಂದು ಬಗೆಯಾಗಿಚರ್ಚಿಸಲ್ಪಡಬಹುದು. ಅದು ನ್ಯಾಯವಲ್ಲವು, ಮತ್ತು ಹಾಗೆ ಉದ್ದೇಶಿಸಲ್ಪಡಲೂ ಯಿಲ್ಲವು. ಆದ್ದರಿಂದ ಈ ಯಂಶದಲ್ಲಿಯಿರತಕ್ಕ ಸಂಶಯಗಳನ್ನು ನಿವರ್ತಿಮಾಡುವದಕ್ಕೂ, ಮುಖ್ಯಸ್ಥನು ಮತ್ತು ಜಾಮೀನ್‌ದಾರನು ಯಿವರುಗಳ ಮೇಲೆ ಯಿರತಕ್ಕ ಪರಿಹಾರವು ಮಾಮೂಲ್ ಸ್ಥಿತಿಯಲ್ಲಿರುತ್ತೆಂದು ಸ್ಪಷ್ಟಪಡಿಸುವದಕ್ಕೂ ಈ ಸಂದರ್ಭವನ್ನು ಅವಲಂಬಸಲಾಯಿತು.

ಸಿಂಲಾ, ತಾರೀಖು 28ನೇ ಆಗಸ್ಟು 1876.

A. HOBHOUSE.

Mysore Government Press, Bangalore—1876.

ಮೈಸೂರ ಗೆಜೆಟ್.

ನಂ. 42 ಸರ್ಕಾರದಿಂದ ಘಾಯಿಷ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಅಕ್ಟೋಬರ ತಾ॥ 21, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರಿ ನಾಮೆಗಳು, ಇಂಡ್ಯ ಗವರ್ರಮೆಂಟನವರ ಇಸ್ತಿಹಾರ್ ನಾಮೆಗಳು.	267—270
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು; ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ ಕಂಟ್ರೋಲರು, ಪಬ್ಲಿಕ ವರ್ಕ್ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷವರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. ..	489—499
3ನೇ ಭಾಗ—ಇಂಡ್ಯ ಗವರ್ರಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	39— 41
4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ—ಖುಲಾಸೇಯಾದ ಖೈದಿಗಳ ಜಹರಿ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 206. ತಾರೀಖು 2ನೇ ಶಪ್ಟಂಬರ 1876.

ಬೆಂಗಳೂರು ಲಷ್ಕರ ಮ್ಯುನಿಸಿಪಾಲಿಟಿ ಬಗ್ಯಾಗಿ ಏರ್ಪಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮ್ಮಿಷನರವರಿಂದ ಮಂಜೂರು ಮಾಡಲ್ಪಟ್ಟ ಸರ್ವರಿಗೂ ತಿಳಿಯುವ ಬಗ್ಯೆ ಘಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಷ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಚದರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ಒಂದು ಹಂಗಾಮೀ ಚಪ್ಪರವನ್ನು ಕಟ್ಟಿಸುವ ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಚದರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಚಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದಸ್ತೇಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 219.

ತಾರೀಖು 18ನೇ ಶಪ್ಟಂಬರ 1876.

ಬೆಂಗಳೂರು ಷಹರ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜಾರೀಯಾಗತಕ್ಕ ಬಗ್ಯೆ, ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಮಂಜೂರ್ ಮಾಡಲ್ಪಟ್ಟವೆ:-

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದಫನ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾಫಿನ್‌ಯಾನೆ ಚಟ್ಟದ ಯಾ ಮುರ್ದೆಯು ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದಫನ ಮಾಡಕೂಡದು, ಯಾ ದಫನ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದಫನ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದಫನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ; ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟ ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲನ ಭೂಮಿಯೊಳಗಾಗಲಿ; ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜಲನ ಮಾಡುವಲ್ಲಿ ಯಾ ಮಾಡಿಸುವಲ್ಲಿ ಅದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚೆಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29.—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜಲನ ಭೂಮಿಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜಲನ ಭೂಮಿಗೆ ಬಂದ ಆರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜಲನ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದರ್ಖ ಯಾ ಜರ್ಲ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ ಜರ್ಲ ಯಾ ದರ್ಖ ಭೂಮಿಗಳ ಟ್ರಸ್ಟೀಗಳಾಗಲಿ ಅಥವಾ ಅವುಗಳ ಚಾರ್ಜವುಳ್ಳ ಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಖ ಭೂಮಿಗಳಿಗಾಗಲಿ ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿಕ್ಕೆ ಉಪೇಕ್ಷಿಸುವ ಪ್ರತಿ ದಿನಕ್ಕೂ ಯೆರಡು ರೂಪಾಯಿಗಳಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 230.　　　ತಾರೀಖು 22ನೇ ಸೆಪ್ಟಂಬರ್ 1876.

ಸ೯ 1869ನೇ ಇಸವಿ ಯೇಪ್ರೆಲ್ 30ನೇ ಮುರ್ಸ್ಕಂ 83ನೇ ನಂಬರ್ ಬಾಬತು ಇಂಡ್ಯಾ ಗವರ್ನಮೆಂಟ್ ಫಾರಿನ್ ಇಲಾಖೆಯವರ ಇಸ್ತಿಹಾರ್ನಾಮೆ ದೆಸೇಯಿಂದ ಮೈಸೂರು ಸೀಮೆಗೆ ಜಾರೀ ಮಾಡಲ್ಪಟ್ಟ 1868ನೇ ಇಸವಿ ಮುಂಬೈ ಆಕ್ಟಿನ 17ನೇ ಸೆಕ್ಷನ್ 2ನೇ ರೂಲ್ ನಿಬಂಧನೆಗಳನುಸಾರವಾಗಿ "ಮಿನಿಮಂಯೇರಿಯು" ಅಂದರೆ ಕಮ್ಮಿ ಬೀಜವರಿಯು ಈ ಕೆಳಗೆ ನಮೂದಿಸಲ್ಪಟ್ಟಿರುವ ಪ್ರಕಾರ ನಿಷ್ಕರ್ಷೆ ಮಾಡಲ್ಪಟ್ಟಿರುತ್ತೆ. ಸಿವಿಲ್ ಕೋರ್ಟಿನ, ವೊಂದು ಡಿಕ್ರಿ ಅಮಲ್‌ಜಾರೀ ಮಾಡುವಲ್ಲಿ ಸದರೀ ಮೇರೆ ಗೊತ್ತಾದ ಬೀಜವರಿ ಗಿಂತ ಕಮ್ಮಿಯಾಗಿ ವೊಂದು ಸರ್ವೆ ನಂಬರ್ ಜಮೀನಿಗೆ ಸಬ್ ಡಿವಿಜನ್ ಅಂದರೆ ವೊಳಭಾಗವು ಮಾಡಲ್ಪಡಕೂಡದು.

	ಯಕರೆ	ಗುಂಟೆ		ಯಕರೆ	ಗುಂಟೆ		ಯಕರೆ	ಗುಂಟೆ
ಖುಷ್ಕೀ ಜಮೀನು	3	0	ತರೀ ಜಮೀನು	0	20	ಬಾಗಾಯಿತು ಜಮೀನ	0	10

ನಂ. 252.　　　ತಾರೀಖು 13ನೇ ಅಕ್ಟೋಬರ್ 1876.

ಇನಾಂ ಯಿಲಾಖಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಸೈಯದ್ ನಸೀರುದ್ದೀನ ಯವರಿಗೆ 1876ನೇ ಆಗಸ್ಟು 21ನೇ ಮುರ್ಸ್ಕಂ 190ನೇ ನಂಬರ್ ಇಸ್ತಿಹಾರನಾಮೆಯಿಂದ ಮಂಜೂರಾದ ರಜಾಕ್ಕಿಂತಲೂ ಜಾಸ್ತೀಯಾಗಿ ಯೆರಡು ವಾರಗಳ ಪ್ರಿವಿಲೀಜ್‌ರಜಾ ಮಂಜೂರಾಗಿರುತ್ತೆ.

ನಂ. 253.　　　ತಾರೀಖು 16ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟು ನಂಬರ್ 3ನೇ ಸರ್ಕಲ್ ಮುನಸಿಫ್ ಮೆ|| ಲಾರೆನ್ಸ್ ಯವರಿಗೆ 1876ನೇ ಶೆಪ್ಟಂಬರ್ 15ನೇ ಮುರ್ಸ್ಕಂ 222ನೇ ನಂ. ಇಸ್ತಿಹಾರ್ ನಾಮೆಯಿಂದ ಮಂಜೂರಾದ ರಜಾಕ್ಕೆ ಜಾಸ್ತೀಯಾಗಿ ಒಂದು ತಿಂಗಳ ಪ್ರಿವಿಲಿಜ್ ರಜಾ ಮಂಜೂರಾಗಿರುತ್ತೆ.

ನಂ. 254.　　　ತಾರೀಖು 17ನೇ ಅಕ್ಟೋಬರ್ 1876.

ಚಿತ್ರದುರ್ಗದ ತಾಲ್ಲೂಕು ಶಿರಸ್ತೇದಾರ್ ಸೀನಪ್ಪನವರು 1875ನೇ ಅಕ್ಟೋಬರ್ 12ನೇ ಮುರ್ಸ್ಕಂ ಲಗಾಯತು 27ನೇ ಮುರ್ಸ್ಕಂ ವರಿಗೆ ದೊಡ್ಡೇರಿ ತಾಲ್ಲೂಕು 5ನೇ ಕ್ಲಾಸ್ ಅಮಲ್‌ದಾರರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡಿದರು.

ನಂ. 255.　　　ತಾರೀಖು 19ನೇ ಅಕ್ಟೋಬರ್ 1876.

ಕಣಕುಪ್ಪೆ ಅಮಲ್‌ದಾರ್ ವೆಂಕಟಾಚಲಂ ಮೊದಲ್ಯಾರ್ರಿಗೆ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯಿತು 10 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹರಿಹರ ಪೇಷ್ಕಾರ್ ಲಾಜರ್ಸ್ ಡುಮಿಂಗೋ ಯವರು ಸದರೀ ವೆಂಕಟಾಚಲ ಮೊದಲ್ಯಾರ್ರ ಗೈರ್ ಹಾಜರೀಯಲ್ಲಿ ಕಣಕುಪ್ಪೆ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಕೆಲಸ ನೋಡುವಂತೆ ಆಕ್ಟಿಂಗ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 256. ತಾರೀಖು 19ನೇ ಶಪ್ಟಂಬರ 1876.

ಬೇಲೂರು ತಾಲ್ಲೂಕು ಅಮಲ್‌ದಾರ್ ಅಬ್ದುಲ್‌ಖಾದರ್ ಯವರಿಗೆ 1876ನೇ ಇಸವಿ ಅಕ್ಟೋಬರು 6ನೇ ತಾರೀಖು ಲಗಾಯತು 10 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 257. ತಾರೀಖು 19ನೇ ಅಕ್ಟೋಬರ 1876.

ಇದರಡಿ ಬರುವ ಬಡತೀಗಳು ಸರ್ 1876ನೇ ಇಸವಿ ಅಕ್ಟೋಬರು ಗುರ್‍ರೇ ತಾರೀಕ ಲಗಾಯತು ಮಂಜೂರ್ಮಾಡಲ್ಪಟ್ಟಿರುತ್ತವೆ.

2ನೇ ಕ್ಲಾಸ ಮುನಸೀಫ್ ಮುದ್ದುಕೃಷ್ಣ ನಾಯಕರು 1ನೇ ಕ್ಲಾಸಿಗೆ ಬಡತೀ ಮಾಡಲ್ಪಟ್ಟಿರುತಾರೆ.

3ನೇ ಕ್ಲಾಸ ಮುನಸೀಫ್ ವ ಶಿವಮೊಗ್ಗಾ ಡಿಸ್ಟ್ರಿಕ್ಟ ಆಫೀಷಿಯೇಟಿಂಗ್ ಪೋಲೀಸ ಅಸಿಸ್ಟೆಂಟ್ ಕಮ್ಮಿಷನರ್ ಮಹಮದಲ್ಲಿ ಯವರು 2ನೇ ಕ್ಲಾಸಿಗೆ ಬಡತೀ ಮಾಡಲ್ಪಟ್ಟಿರುತ್ತಾರೆ.

ನಂ. 258. ತಾರೀಖು 20ನೇ ಅಕ್ಟೋಬರ್ 1876.

ಪೊಲಿಟಿಕಲ್ ಯೇಜೆಂಟ್ ವ ಘನವನ್ನು ಹೊಂದಿದ ಮೈಸೂರು ಮಹಾರಾಜ ರಾಜಾ ಸಾಹೇಬರವರ ಟ್ಯೂಟರಾದ ಕೆಪ್ಟರ್ ವಿಲ್‌ಸರ್ ಯವರಿಗೆ ಸಿವಿಲ್ ಲೀವ್ ಕೋಡ್ 21ನೇ ಸೆಕ್ಷರ್ ಅನುಸರಿಸಿ 1876ನೇ ಇಸವಿ ಅಕ್ಟೋಬರು 20ನೇ ಮಾರ್ಕುಂ ಲಗಾಯಿತು ಅಥವಾ ಅವರು ಯಾವ ಲಗಾಯಿತು ಉಪಯೋಗಿಸಿಕ್ಕೊಳ್ಳುತ್ತಾರೋ ಆ ಲಗಾಯಿತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೇಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ ವರಕ್ಸ್.

ತಾರೀಖು 17ನೇ ಅಕ್ಟೋಬರ್ 1876.

ತುಮಕೂರು ಡಿವಿಜರ್ ಸಬ್ ಓವರಸಿಯರ್ ಮಿ॥ ಜಿಬ್ಸ್‌ಯವರಿಗೆ ಕಳೆದ ಜೂರ್ 14ನೇ ಮಾರ್ಕುಮಿನ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ಮೂರು ತಿಂಗಳ್‌ಸೀಕ್ ರಜಾ ಸಿವಿಲ್ ಲೀವ್‌ಕೋಡಿನ F ಸಪ್ಲಿಮೆಂಟ 9ನೇ ಸೆಕ್ಷರ್ ಅನುಸರಿಸಿ 1877ನೇ ಪಿಬ್ರವರೀ 7ನೇ ಮಾರ್ಕುಂ ವಿನುಹೂ ಹೆಚ್ಚಿಸಲ್ಪಟ್ಟಿದೆ.

"ಬಮೋಜೇಬ್ ಹುಕ್ಕುಂ,"

C. BOWEN, *Captain*, R. E.,
Offg. Under-Secy., R. & B. Branch.

407

ಮೈಸೂರ ಗೆಜೆಟ್.

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 21, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 20ನೇ ಅಕ್ಟೋಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೪೯	ಚರಂತಪ್ಪ ..	ಚನ್ನವೀರಪ್ಪಾ ವಗ್ಯೆರೆ ..	೨೪ನೇ ಅಕ್ಟೋಬರ್
ಸ್ಪಿ. ಅ. ೫೮	ರಾಮಣ್ಣ ..	ಜವರನಾಯಕ ವಗ್ಯೆರೆ ..	ಡಿಟೋ
ಫ್ರೂಟ್. ಸ್ಪಿ. ಅ. ೧೧	ಕಾಳೇಪತ್ಯೆಯ ..	ಮುನಿಯಪ್ಪ ವಗ್ಯೆರೆ ..	ಡಿಟೋ
ಕ್ರಿ. ಪಿಟೀಷನ್ ೨೩	ಗರುಡಾಚಾರಿ ..	.. ..	ಡಿಟೋ
ಸ್ಪಿ. ಅ. ೬೧	ಬಸವೇಗೌಡ ..	ಶಿದ್ದೇಗೌಡ ..	೨೮ನೇ ಡಿಟೋ
ಡಿ॥ ೬೨.	ಕೆ. ಪುಟ್ಟೇಗೌಡ ..	ಟಿ. ಪುಟ್ಟೇಗೌಡ ..	ಡಿಟೋ
ಕೊ. ಸ್ಪಿ. ಅ. ೧೧	ಮೋದ್ಯೆಯ ..	ಮಾದ್ಯೆಯ ವಗ್ಯೆರೆ ..	೩೧ನೇ ಡಿಟೋ
ಫ್ರೂಟ್ ಸ್ಪಿ. ಅ. ೧೦	ವೆಂಕಟರಾಜೇಅರಸು ..	ಸುಬ್ಬಶೆಟ್ಟಿ ..	೨ನೇ ನವೆಂಬರ್
ಫ್ರೂಟ್ ಸ್ಪಿ. ಅ. ೧೨	ಶೀತಮ್ಮ ..	ಲಿಂಗೇಗೌಡ ..	ಡಿಟೋ
ಸ್ಪಿ. ಅ. ೬೪	ಕಪನೀಪತ್ಯೆಯ ..	ನಂಜಮ್ಮ ..	೫ನೇ ಡಿಟೋ
ಸ್ಪಿ. ಅ. ೫೩	ಪುಮ್ಮಾಜಿ ..	ಸುಬ್ಬಣ್ಣಾ ವಗ್ಯೆರೆ ..	ಡಿಟೋ
ಸ್ಪಿ. ಅ. ೬೩	ಮೆ॥ ಮರಗಲರ್ ವಗ್ಯೆರೆ ..	ಗಂಗಾಧರಶೆಟ್ಟಿ ..	೧೧ನೇ ಡಿಟೋ
ಸ್ಪಿ. ಅ. ೬೫	ಚಿಕ್ಕ ಹೊನ್ನೇಗೌಡ ..	ಲಕ್ಷ್ಮೆಯ ವಗ್ಯೆರೆ ..	೧೪ನೇ ಡಿಟೋ
ಸ್ಪಿ. ಅ. ೬೬	ಶ್ರೀನಿವಾಸ್ಯೆಯ ..	ಅಳಶಿಂಗ್ರಯ ..	ಡಿಟೋ

ಮೈಸೂರು ಮತ್ತು ಕೊಡಗು ಶೀಮೆಗಳ ಜುಡಿಷಲ್ ಕಮ್ಮಿಷನ್ನರವರು, ಸರ್ 1873ನೇ ಇಸವಿ 10ನೇ ನಂಬರ್ ಆಕ್ಟ 7ನೇ ಸೆಕ್ಷರ್ಷ ಅನುಸರಿಸಿ ಈ ಕೆಳಗೆ ನಮೂದಿಸಿ ಯಿರುವ ಪ್ರಕಾರ ಪ್ರಮಾಣ ವಚನಗಳ ನಿಬಂಧನೆಗಳನ್ನ ಷರ್ಪಡಿಸಿ ಯಿರುತ್ತಾರೆ.

ಪ್ರಮಾಣ ಮಾಡಿಸಲ್ಪಡತಕ್ಕ ಕ್ರಿಸ್ಟಿಯರ್ ಸಾಕ್ಷಿ ಯಿಂಟರ್ ಪ್ರಟರ್ ಯಾ ಜೂರರ್ ತನ್ನ ಕೈಯಲ್ಲಿ ಬೈಬಿಲ್ ಬುಕ್ಕನ್ನ ತೆಗದುಕ್ಕೊಂಡು "ಹಾಗೆಯೇ ದೇವರು ನನಿಗೆ ಸಹಾಯ ಮಾಡಲಿ" ಯೆಂದು ನುಡಿಯುತ್ತಾ ಆ ಬುಕ್ಕಿಗೆ ಮುದ್ದಿಡತಕ್ಕದ್ದು.

ಇತರ ಸಂದರ್ಭಗಳಲ್ಲಿ, 8ನೇ ಸೆಕ್ಷರ್ಷ ಪ್ರಕಾರ ಪ್ರಮಾಣ ಮಾಡಿಸಲ್ಪಡತಕ್ಕ ಕಕ್ಷಿಗಾರ ಯಾ ಸಾಕ್ಷಿಯು ತಾನು ಮನಃ ಪೂರ್ತಿಯಾಗಿ ಬದ್ಧನಾಗುತ್ತೇನೆಂದು ಎಣಿಸತಕ್ಕ ಪ್ರಮಾಣದ ಮೇರಿಗೆ ಪ್ರಮಾಣ ಮಾಡಿಸಲ್ಪಡತಕ್ಕದ್ದು.

(1.) ಪ್ರತಿ ಸಾಕ್ಷಿಯವನಿಗೆ.

ಪ್ರಮಾಣ ಮಾಡಿಸತಕ್ಕ ರೀತಿ.

ಈಗ ಕೋರ್ಟು ರೂಬರೂ ಈ ಮೊಕದ್ದಮಾ ಸಂಗತಿಯನ್ನ ಕುರಿತು ನೀನು ಕೊಡುವ ಸಾಕ್ಷ್ಯವು ನಿಶ್ಚಯವಾದ್ದಾಗಿ ಯಿರತಕ್ಕದ್ದು, ಯಲ್ಲಾ ನಿಶ್ಚಯವಾಗಿ ಯಿರತಕ್ಕದ್ದು. ನಿಶ್ಚಯ ವಿಲ್ಲದೆ ಬೇರೆ ಯಿರಕೂಡದು.

ಹಾಗೆಯೇ ದೇವರು ನಿನಿಗೆ ಸಹಾಯ ಮಾಡಲಿ.

ಪ್ರಮಾಣ ಮಾಡತಕ್ಕ ರೀತಿ.

ನಾನು ಯೇನು ಹೇಳುತ್ತೇನೋ ಅದು ನಿಶ್ಚಯವು, ಯಲ್ಲಾ ನಿಶ್ಚಯವು, ನಿಶ್ಚಯವಲ್ಲದೆ ಮತ್ತೆ ಬೇರೆ ಯಿಲ್ಲವೆಂದು ಸರ್ವ ಚೈತನಾದ ಭಗವಂತನ ಸಾನ್ನಿಧ್ಯದಲ್ಲಿ ಸತ್ಯವಾಗಿ ಹೇಳುತ್ತೇನೆ.

(2.) ಪ್ರತಿ ಯಿಂಟರ್ ಪ್ರಿಟರಿಗೆ.

(ಕೋರ್ಟು ಯಿಂಟರ ಪ್ರಿಟರ ವಿನಹಾಯಿಸಿ.)

ಪ್ರಮಾಣ ಮಾಡಿಸತಕ್ಕ ರೀತಿ.

ಕೋರ್ಟು ರೂಬರೂ ಸಾಕ್ಷಿಗಳಿಗೆ ಹಾಕಿದ ಸವಾಲುಗಳನ್ನು ಅವರು ಕೊಟ್ಟ ಸಾಕ್ಷ್ಯವನ್ನು ನಿನ್ನ ತಿಳುವಳಿಕೆ ಮತ್ತು ಚಾತುರ್ಯತೆಗೆ ಕೂಡಿದ ಮಟ್ಟಿಗೂ ಸರಿಯಾಗಿಯೂ ನಿಜವಾಗಿಯು ತರ್ಜುಮೆ ಮಾಡಿ ತಿಳಿಸತಕ್ಕದ್ದು.

ಹಾಗೆಯೇ ದೇವರು ನಿನಿಗೆ ಸಹಾಯ ಮಾಡಲಿ.

ಪ್ರಮಾಣ ಮಾಡತಕ್ಕ ರೀತಿ.

ಕೋರ್ಟು ರೂಬರೂ ಸಾಕ್ಷಿಗಳಿಗೆ ಹಾಕಿದ ಸವಾಲುಗಳನ್ನು ಅದಕ್ಕೆ ಅವರು ಕೊಡತಕ್ಕ ಜವಾಬುಗಳನ್ನು ಸಹಾ ನನ್ನ ತಿಳುವಳಿಕೆ ಮತ್ತು ಚಾತುರ್ಯತೆಗೆ ಕೂಡಿದ ಮಟ್ಟಿಗೂ ಸರಿಯಾಗಿಯೂ ನಿಜವಾಗಿಯೂ ತರ್ಜುಮೆ ಮಾಡಿ ತಿಳಿಸುತ್ತೇನೆಂದು ಸರ್ವ ಚೈತನ್ಯನಾಥ ಭಗವಂತನ ಸಾನ್ನಿಧ್ಯದಲ್ಲಿ ಪ್ರಮಾಣವಾಗಿ ಹೇಳುತ್ತೇನೆ.

(3) ಜೂರರಿಗೆ.

ಪ್ರಮಾಣ ಮಾಡಿಸತಕ್ಕ ರೀತಿ.

ಈ ಮೊಕದ್ದಮೆಯಲ್ಲಿ ಜೂರರಿಗೆ ತಿಳಿಸಲ್ಪಟ್ಟ ಅಂಶಗಳನ್ನು ನೀನು ನ್ಯಾಯವಾಗಿಯೂ ನಿಜವಾಗಿಯೂ ವಿಚಾರಿಸಿ ತೀರ್ಮಾನಿಸತಕ್ಕದ್ದಲ್ಲದೆ ರುಜುವಾತ ಅನುಸರಿಸಿ ನಿಜವಾದ ತೀರ್ಪನ್ನು ಕೊಡತಕ್ಕದ್ದು.

"ಹಾಗೆಯೇ ದೇವರು ನಿನಿಗೆ ಸಹಾಯ ಮಾಡಲಿ."

ಪ್ರಮಾಣ ಮಾಡತಕ್ಕ ರೀತಿ.

ಈ ಮೊಕದ್ದಮೆಯಲ್ಲಿ ಜೂರರಿಗೆ ತಿಳಿಸಲ್ಪಟ್ಟ ಅಂಶಗಳನ್ನು ನ್ಯಾಯವಾಗಿಯೂ ನಿಜವಾಗಿಯೂ ವಿಚಾರಿಸಿ ತೀರ್ಮಾನಿಸುವದಲ್ಲದೆ ರುಜುವಾತ ಅನುಸರಿಸಿ ನಿಜವಾದ ತೀರ್ಪನ್ನು ಕೊಡುತ್ತೇನೆಂದು ಸರ್ವ ಚೈತನ್ಯನಾದ ಭಗವಂತನ ಸಾನ್ನಿಧ್ಯದಲ್ಲಿ ಸತ್ಯವಾಗಿ ಹೇಳುತ್ತೇನೆ.

J. D. GORDON, *Judl. Commr.*

409

ಇನಾಂ ಇಲಾಖಾ.

ನಂ. 6. ತಾರೀಖು 3ನೇ ಅಕ್ಟೋಬರ 1876.

ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲೂಕಿನಲ್ಲಿ ಯಿರುವ ಇನಾಂಗಳ ಸಲುವಳಿಯ ವಿಚಾರಣೆಯು ಸದರೀ ತಾಲ್ಲೂಕ ಕಚೇರಿಯಲ್ಲಿ ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಶ್ರೀನಿವಾಸೈಯಂಗಾರಿಂದ ನಡಿಸಲ್ಪಟ್ಟು 1876ನೇ ನವಂಬರ 1ನೇ ಮರ್ಸ್ಕಂನಲ್ಲಿ ಷುರು ಮಾಡಲ್ಪಡುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಯಿನಾಂಗಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ, ರೂಬರೂ ಯಾ ತಮ್ಮ ಮುತಾಲೀಕರ ಮೂಲಕ ಹಾಜರಾಗಿ ತಮ್ಮ ತಮ್ಮ ಹಕ್ಕುದಾರೀಗಳನ್ನು ಸ್ಥಾಪಿಸಿ ತಮ್ಮಲ್ಲಿರುವ ಸನ್ನದ್‌ಗಳು ವ ಯಿತರ ದಸಾವೇಜುಗಳು ಯಿವುಗಳನ್ನು ಹಾಜರ್‌ಮಾಡಬೇಕೆಂದು ನಿಯಮಿಸಲ್ಪಡುತ್ತಾರೆ, ಹಾಗೆ ಮಾಡದೆ ತಪ್ಪಿದ ಪಕ್ಷಕ್ಕೆ ಅವರ ಯಿನಾಂಗಳು ಪ್ರಥಮತಃ ಜಫ್ತಿಮಾಡಲ್ಪಟ್ಟು ತರುವಾಯ ಶೀವಟೀಗೆ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ನಂ. 7. ತಾರೀಖು 6ನೇ ಅಕ್ಟೋಬರ 1876.

ಇನಾಂ ದಾಖ್ರಿಗೆ ಯಿದರಿಂದ ತಿಳಿಸಲ್ಪಡುವದೇನಂದರೆ—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕುಗಳಲ್ಲಿರುವ ಇನಾಮತಿಗಳಿಗಾಗಿ 950 ಅಡ್ ಯಿಂಟರಿಂ ಸರ್ಟಫಿಕೇಟ್‌ಗಳು ಬಟವಾಡೇ ಬಗ್ಯೆ 1876ನೇ ಅಕ್ಟೋಬರ 6ನೇ ಮರ್ಸುಂನಲ್ಲಿ ಬೆಂಗಳೂರು ಕೋಲಾರ, ತುಮಕೂರು ವ ಕಡೂರು ಈ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಕಳುಹಿಸಲ್ಪಟ್ಟವು.

ಹೊಸಕೋಟೆ, ದೇವನಹಳ್ಳಿ, ನೆಲಮಂಗಲ, ಬೆಂಗಳೂರು, ಗೋರೀಬಿದನೂರು, ಶ್ರೀನಿವಾಸಪುರ, ಅಂಬಾಜಿದುರ್ಗ, ಮುಳಬಾಗಿಲ್, ಗುಮ್ಮನಾಯಿಕನಪಾಳ್ಯ, ಶಿಡ್ಲಘಟ್ಟ, ಬೇತಮಂಗಲ, ಚಿಕ್ಕಬಳ್ಳಾಪುರ, ಕೋಲಾರ, ಕೊರಟಿಗೆರೆ, ವ ಕೊಪ್ಪ,

ಅವರುಗಳು ಸದರೀ ಪ್ರಕಾರ ಮೇಲೆ ಕಂಡ ತಾಲ್ಲೂಕು ಅಲ್‌ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ತಲಪಿದ ಮೇಲೆ ಏರ್ಜ ಸೆರ್‌ಟಿಫಿಕೇಟ್‌ಗಳನ್ನು ತೆಗದುಕೊಳ್ಳುವ ಬಗ್ಯೆ ಹಾಜರ್ ಆಗತಕ್ಕದ್ದು. ಅಂತಾ ನೋಟಿಸ್‌ಗಳನ್ನು ವಿಳಂಬ ಮಾಡದೆ ಕೊಡತಕ್ಕದ್ದೆಂದು ಸದರೀ ಅಮಲ್‌ದಾರ್ರುಗಳಿಗೆ ಹುಕುಂ ಆಗಿರುತ್ತೆ.

R. A. Cole,
Supt. of Inam Settlements.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಸಾಗರ್,	25ನೇ	ಅಕ್ಟೋಬರ	1876.	ಹೆಚ್ಚುಕಡಮೆ 200 ಟನ್‌ಗಳ ವಜನಿ.
ಹುಣಸೂರು,	4ನೇ	ನವಂಬರ	1876	ಹೆಚ್ಚುಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಣ,	8ನೇ	”	”	
ಬೆಂಗಳೂರು,	1ನೇ	ಡಿಶಂಬರ	”	ಹೆಚ್ಚುಕಡಮೆ 100 ಟನ್‌ಗಳು.
ಫ್ರೆಜರ್‌ಪೇಟೆ	18ನೇ	”	”	80 ”

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ 28ನೇ ಮರ್ಸುಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯ ಹರಾಜ್‌ಗಳು ನವಂಬರ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ

ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಶೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮರ್ಕ್ಹಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮರ್ಕ್ಹಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತುಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದಹಾಗೆ, ಖಂಡಿ, ಮಣ, ಸೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟೌನ್ಸ್, ಪೌಂಡ್, ಹಂಡ್ರೆಡ್ ವೆಯಿಟ್‌ ಗಳ ಮೇರ ತೂಕ ಮಾಡಿಕೊಡಲ್ಪಡುವದು.

G. J. van Someren, *Captain*,
Conservator of Forests, Mysore & Coorg.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲಿಗಳು ಶಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879 80,—1880-81, ಮತ್ತು 1881-82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರಿಲ್ 1ನೇ ಮರ್ಕ್ಹಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಡ್ ದರಖಾಸ್ತು ಪಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮರ್ಕ್ಹಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀ ನೋಟುಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟುಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60 ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ಆಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಗುವುದು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟನೊಳಗೆ 1877ನೇ ಏಪ್ರಿಲ್ 1ನೇ ಮರ್ಕ್ಹಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮರ್ಕ್ಹಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮರ್ಕ್ಹಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನ್‌ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯ ಯಿಲ್ಲದೆಯೇ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನ‌ಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

ಬೆಂಗಳೂರು ವಾಟರ್ ಸಪ್ಲೈ ಬಾಬತು ನೀರು ಬರತಕ್ಕ ಮತ್ತು ಇದರಡಿ ಕಾಣಿಸಲ್ಪಟ್ಟ ಮೇರೆ ಲಾಟುಗಳಾಗಿ ವಿಂಗಡಿಸೋಣಾದ ಜಮೀನ್‌ನಲ್ಲಿ ಬೆಳೆಯುವ ಹುಲ್ಲನ್ನು ಮೇಯಿಸುವ ಬಾಧ್ಯತೆಯು, ಬೆಂಗಳೂರು ಸರವೀನ್ ಕಚೇರಿಯಲ್ಲಿ ಮಾಹೆ ಮಜಕೂರು 30ನೇ ಮರ್ಕ್ಹಂ ಮಧ್ಯಾಹ್ನ 12 ಘಂಟೆಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1ನೇ ಲಾಟ್	ಬೀಜವರಿ	350	ಎಕ್ರೇಗಳು	4ನೇ ಲಾಟ್	ಬೀಜವರಿ	295	ಎಕ್ರೇಗಳು
2ನೇ ಡಿಟ್ಟೋ	„	240	ಡಿಟ್ಟೋ	5ನೇ ಡಿಟ್ಟೋ	„	325	ಡಿಟ್ಟೋ
3ನೇ ಡಿಟ್ಟೋ	„	290	[illegible]				

ಹರಾಜು ನಿಬಂಧನೆಯು ಇತರ ತಪಸೀಲ್‌ಗಳು ಸರವೀನ್‌ನರನ್ನು ಕೇಳಿ ತಿಳಿದುಕೊಳ್ಳತಕ್ಕದ್ದು.

L. Ricketts,
Offg. Dy. Commr.

KOLAR DISTRICT.

Notice of an application by Syed Abbás for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶ್ರೀನಿವಾಸಪುರ ತಾಲ್ಲೂಕು ಯಲ್‌ದೂರಲ್ಲಿರುವ ಸೈಯದ್ ಅಬ್ಬಾಸ ಯಂಬವನು ಫೌತೀಪಟ್ಟ ತನ್ನ ತಂದೆ ಸೈಯದ್ ಮುಸ್ತಫಾ ಸಾಹೆಬ ಯಂಬವನ ಬಾಬತು ಲೇವಾದೇವೀ ಮೊಬಲಗು 500 ರೂಪಾಯಿಗಳು ವಸೂಲ್ ಮಾಡಿಕ್ಕೊಳ್ಳತಕ್ಕ ಬಗ್ಯೆ ಸ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜಿಯು ನವಂಬರ್ 30ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾದ ಕಾರಣ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆಯಿದ್ದಾಗ್ಯೂ ಅಂತಾವರೆಲ್ಲ ಆ ತಾರೀಖು ದಿವಿ 10 ಘಂಟೆಗೆ ಕೋರ್ಟುರೂಬರೂ ಹಾಜರಾಗಿ ಸ್ಥಿರಪಡಿಸಿ ಕೊಳ್ಳತಕ್ಕದ್ದಾಗಿ ಯಿರುತ್ತೆ.

ಬತಾರೀಖು 12ನೇ ಮಾಹೆ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಕೋಲಾರ.

P. N. Purnaiya,
For. Dy. Commr.

TUMKUR DISTRICT.

Notice of an application by Byimanna for a certificate under Act XXVII of 1860.

ತುಮಕೂರು ಡಿ॥ ಡೆ॥ ಕಮ್ಮಿಷನರ ಕೋರ್ಟಿನಿಂದಾ.

ಯಿದರಿಂದಾ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ.—ಕೊರಟಗೆರೆ ತಾಲ್ಲೂಕು ಕಸಬಾ ಕೊರಟಗೆರೆ ಗ್ರಾಮದ ವಾಸಸ್ಥನಾಗಿದ್ದ ಫೌವತೀ ಯಾದ ಲಾಡ್ರ ಸುಬ್ಬಣ್ಣ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 1,000 ರೂಪಾಯಿಗಳು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರಟಿಫಿಕೇಟ ಅಪೇಕ್ಷಿಸಿ, ಯಿವನ ತಮ್ಮ ಭೀಮಣ್ಣ ಯಂಬುವನು ದಾಖಲ್ ಮಾಡಿ ಯಿರುವ ಅರ್ಜಿಯನ್ನು 1876ನೇ ಯಿಸವಿ ನವಂಬರ್ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇನಾದ್ದರಿಂದ, ಯಿದಕ್ಕೆ ತಕರಾರ್ ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟುರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

Notice of an application by Linganna for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಲಗೊಣ ಗ್ರಾಮದ ವಾಸಸ್ಥನಾಗಿ ಯಿದ್ದ ಫೌತೀಯಾದ ಕಬ್ಬಿಣದ ಬಸಪ್ಪಾ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 500 ರೂಪಾಯಿಗಳು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಅಪೇಕ್ಷಿಸಿ, ಯಿವನ ಮಗ ಲಿಂಗಣ್ಣಾ ಯಂಬುವನು ದಾಖಲ್‌ಮಾಡಿ ಯಿರುವ ಅರ್ಜಿಯನ್ನು 1876ನೇ ಇಸವಿ ನವಂಬರ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇನಾದ್ದರಿಂದ ಯಿದಕ್ಕೆ ತಕರಾರು ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟುರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 12ನೇ ಮಾಹೆ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ನೆಲಿಹಾಳ ತಾಲ್ಲೂಕು ತುಮಕೂರ್.

E. S. Ludlow,
Offg. Dy. Commr.

MYSORE DISTRICT.

Notice of an application by Madamma for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ ಡೆ॥ ಕ॥ ಕೋರ್ಟನಿಂದ.

1876ನೇ ಇಸವಿ ಶಿವಿಲ್ ಫ್ಲಾಟ ಮಿಸಲೇನಿಯಸ್ ನಂಬರ 68.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿ ಸುವದೇನಂದರೆ,—ಫೌತೀಯಾದ ತನ್ನ ಗಂಡ ನೀರಮನೆ ಪುಟ್ಟಣ್ಣನಿಗೆಬರಬೇಕಾದ ಮೈಸೂರ ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ ಕಮ್ಮಿಷನರವರ ಕೋರ್ಟು ಸ 1875ನೇ ಇಸವೀ ಸ್ಮಾಲ್‌ಕಾಜ್

201ನೇ ನಂಬರ್ ಡಿಕ್ರೀ ಮೊಬಲಗು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರ್ ಹಳೇ ಅಗ್ರಹಾರದ ದೀವಟ ಬೀದಿಯಲ್ಲಿ ಯಿರುವ ಡಿಟೋ ನೀರವುನೆ ಪುಟ್ಟಣ್ಣನ ಹೆಂಡತಿ ಮಾದಮ್ಮ ನೆಂಬುವಳು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ್ ತಿಂಗಳು 26ನೇ ತಾರೀಖಿನ ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದರಿಂದ ಇದರ ಮೇಲೆ ತಕರಾರ್ ವುಳ್ಳವರು ಆ ತಾರಿಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರ್‌ಗಳನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

ತಾರೀಖು 4ನೇ ಅಕ್ಟೋಬರ್ ಸರ್ 1876ನೇ ಇಸವೀ ಮೊಕ್ಕಾಂ ಮೈಸೂರು.

Notice of an application by Muddanna for a certificate under Act XXVII of 1860.

1876ನೇ ಇಸವಿ ಸಿವಿಲ್ ಫೂಟ ಮಿ॥ ನಂ· 69.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸ.ವದೇನಂದರೆ' ಫವತೀಯಾದ ತನ್ನ ತಂದೆ ದೊಡ್ಡ ಮಲ್ಲಣ್ಣನಿಗೆ ಬರಬೇಕಾದ 30,000 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಿನ ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ಹೊಸ ಅಗ್ರಹಾರದಲ್ಲಿ ಇರುವ ಮುದ್ದಣ್ಣ ಯೆಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಈ ಮಾಹೆ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರಿಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Nanjundaiya for a certificate under Act XXVII of 1860.

1876ನೇ ಇಸವೀ ಸಿವಲ್ ಮಿಸಲೇನಿಯಸ್ ನಂಬರ್ 70.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತಿಯಾದ ತನ್ನ ಹಕ್ಕಿ ರಂಗಪ್ಪನವರಿಗೆ ಬರಬೇಕಾದ 200 ರೂಪಾಯಿಗಳನ್ನು ವಸೂಲ್‌ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ಬಸವರ ಮಹಲಿದಲ್ಲಿರುವ ನಂಜುಂಡೈಯ್ಯನು ಕೊಟ್ಟು ಯಿರುತಕ್ಕ ಅರ್ಜಿಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದಾ ಯಿದರಮೇಲೆ ತಕರಾರ್ ವುಳ್ಳವರು ಆತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕದ್ದು.

Notice of an application by Parvatamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 71.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಅಜ್ಜ ಭದ್ರಮ್ಮನಿಗೆ ಬರಬೇಕಾದ 450 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ ಸದರೀ ಭದಮ್ಮನ ಮೊಮ್ಮಗನಾದ ಪುಟ್ಟಬಸವನು ಮೈನರಾದ್ದರಿಂದ ಇವನ ಸೋದರತ್ತೆಯಾದ ಮೈಸೂರ್ ಕಿಲ್ಲೆದಲ್ಲಿರುವ ಕರೀಕಲ್ಲು ತೊಟ್ಟಿ ಪಾರ್ವತಮ್ಮನೆಂಬವಳು ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಫಿಕೇಟ್ ಆಗಬೇಕೆಂದು ಕೊಟ್ಟಿರತಕ್ಕ ಅರ್ಜಿಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರ ಮೇಲೆ ತಕರಾರ್ ಉಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದಿದೆ.

ತಾರೀಖು 3ನೇ ಅಕ್ಟೋಬರ್ 1876ನೇ ಇಸವಿ ಮೊ॥ ಮೈಸೂರು.

C. J. PEARSE,
Dy. Commr.

SHIMOGA DISTRICT.

Notice of an application by Ha[illegible]i for a certificate under Act XXVII of 1860.

ಶಿವಮೊಗ್ಗಾ ಡಿ॥ ಡಿ॥ ಕ॥ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತನ್ನಗಂಡ ರಂಗನು ಫೌತೀಆಗಿ ಯಿರುವದರಿಂದ ಅವನಿಗೆ ಹೊರಗಿನಿಂದ ಬರತಕ್ಕ ಲೇವಾದೇವಿ ಸಾಲದ ಬಾಬತು 50 ರೂಪಾಯಿ ವಸೂಲ್ ಮಾಡಿಕ್ಕೊಳ್ಳುವದಕ್ಕೆ ತನ್ನ ಹೆಸರಿಗೆ ಸರಟಫಿ

ಕೇಟ ಕೊಡಿಸಬೇಕಾಗಿ ಹೊನ್ನಾಳಿ ತಾಲ್ಲೂಕು ಸಾಸಿವೆಹಳ್ಳಿ ಮಾಗಣಿ ಹುಣಸಗಲದಲ್ಲಿ ಯಿರುವ ಹನುಮಿ ಯಂಬವಳು ಅಪ್ಲಿಕೇಷನ್ ಕೊಟ್ಟ ಸಂಗತಿ ವಿಚಾರಣೆಗೆ ಬರುವ ನವಂಬರ 2ನೇ ತಾರೀಖಿನ ದಿನ ಹಿಯರಿಂಗ್ ನಿಶ್ಚಯಿಸಿ ಯಿದೆ ತಕರಾರು ವುಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿ ಕೊಳ್ಳತಕ್ಕದ್ದಿದೆ.

ತಾರೀಖು 2ನೇ ಅಕ್ಟೋಬರ್ ಸರ್ 1876ನೇ ಇಸವಿ ಮೊಕಾಂ ಶಿವಮೊಗ್ಗ.

C. S. Blair,
Offg. Dy. Commr.

KADUR DISTRICT.

Notice calling upon one Dvaraki Nayak to present himself before the Sub-Registrar of Chikmagalur, and receive back a certain document presented by him for registration.

ಕಡೂರು ಡಿಸ್ಟ್ರಿಕ್ಟ ರಿಜಿಸ್ಟ್ರಾರವರ ಆಫಿಸಿನಿಂದ.

ಡಿಸ್ಟ್ರಿಕ್ಟುಮಜಕೂರು ಚಿಕ್ಕಮಗಳೂರು ತಾಲ್ಲೂಕು ಕಸಬಾ ದೇವರಾಯ ಪೇಟೆಯಲ್ಲಿ ಇರುವ ಪಾಲ್ಮಂದ ಜಗನ್ನಾಥ ರಾಯಗೆ ಚಿಕ್ಕಮಗಳೂರು ಕೋಟೆಯಲ್ಲಿ ಯಿರುವ ತಾಲ್ಲೂಕು ಲೇಟ ದಫೇದಾರ ಚನ್ನ ನಾಯಕನ ಮಗ ದ್ವಾರಕೀ ನಾಯಕನು ತನ್ನ ಬಾಬತು ಚಿಕ್ಕಮಗಳೂರು ಕೋಟೆಯಲ್ಲಿ ಇರುವ ಹೆಂಚಿನ ಮನೆಯನ್ನು 50 ರೂಪಾಯಿಗೆ ಶುದ್ಧ ಖರೀದಿಗೆ ಕೊಟ್ಟು ಸರ್ 1874ನೇ ಯಿಸವಿ ಅಗೋಸ್ಟು ತಾರೀಖು 31ರಲ್ಲು ಬರಿಕೊಟ್ಟ ಖಾಫಾ ದಸ್ತಾವೇಜು ಸದರೀ ದ್ವಾರಕೀ ಇಂದ ಸರ್ 1874ನೇ ಯಿಸವೀ ಶಪ್ಟಂಬರು ತಾರೀಖು 5ರಲ್ಲು ರಿಜಿಸ್ಟ್ರೇಷನ್ ಬಗ್ಯೆ ಚಿಕ್ಕಮಗಳೂರು ಸಬ್‌ರಿಜಿಸ್ಟ್ರಾರ ಆಫಿಸಿನಲ್ಲಿ ಹಾಜರಾಗಿ ಸದರೀ ಆಫಿಸ Iನೇ ರಿಜಿಸ್ಟರ್ ಬುಕ್ಕಿನಲ್ಲಿ ಸರ್ 1874—75ನೇ ಯಿಸವಿ ನಂಬರು 111ಕ್ಕೆ ರಿಜಿಸ್ಟರಾದ್ದು ವಾಪ್ಸಪಡಿಯುವ ಬಗ್ಯೆ ಸದರೀ ದ್ವಾರಕೀಗೆ ವಾಯಿದೆ ನೀ ನೋಟಿಸ್ ಜಾರೀ ಆಗಿ ಆವಾಯಿದೆ ಗುಜರಾಗಿ ಬಹಳದಿವಸವಾದಾಗ್ಯೂ ಅದ್ಯಾಪಿ ಹಾಜರಾಗದೆ 2 ವರುಷದ ಕಾಲ ಕಳೆದು ಇರುವಂತೆ ಚಿಕ್ಕಮಗಳೂರು ಸಬ್ ರಿಜಿಸ್ಟ್ರಾರ ನಂಬರು 131ನೇ ಇತ್ತಿಲ್ಲೆ ತಪ್ಪಿರುವದರಿಂದ ಸದರೀ ದ್ವಾರಕೀಯೇ ಆಗಲಿ ಅಥವಾ ಅವನಕಡೆ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನೇ ಆಗಲಿ ಈ ತಾರೀಖು ಲಗಾಯಿತು ಯರಡು ತಿಂಗಳವಳಗಾಗಿ ಚಿಕ್ಕಮಗಳೂರು ಸಬ್ ರಿಜಿಸ್ಟ್ರಾರ ಮುಂದೆ ಬರದುಕೊಟ್ಟರಶೀತಿನಿಸೀ ಹಾಜರಾಗಿ ಅರ್ಜಿ ದಸ್ತಾವೇಜು ವಾಪಸ್ ಪಡಿಯಬೇಕು. ಆಮೇರೆ ತೆಗೆದುಕೊಳ್ಳದಿದ್ದರೆ ರಿಜಿಸ್ಟ್ರೇಷನ್ ಆಕ್ಟು 83ನೇ ಸೆಕ್ಷನ್ ಅನುಸರಿಸಿ ಸದರೀ ತಮಸೂಕನ್ನು ನಾಶಪಡಿಸಲಾದೀತು. ವಾಯಿದೇನಂತರ ಬರುವ ಫಿರಿಯಾದ ಅಂಗೀಕರಿಸೋಣಾಗಲಿಕ್ಕೆ ಇಲ್ಲಾ.

ಕಡೂರು ಡಿ॥ ರಿಜಿಸ್ಟ್ರಾರ ಆಫೀಸ ತಾರೀಖು 12ನೇ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

P. Krishna Rao,
Registrar.

Notice of an application by Rangamma for a certificate under Act XXVII of 1860.

ಕಡೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಬೆಂಗಳೂರು ರಾಮಸ್ವಾಮಿ ಮೇಸ್ತ್ರಿ ಹೆಂಡತಿ ರಂಗಮ್ಮನು ಪಾತೀಪಟ್ಟ. ತನ್ನ ಗಂಡನು ತರೀಕೆರೆ ತಾಲ್ಲೂಕಿನಲ್ಲಿ ಕಾಮಗಾರಿ ಕಂಟ್ರಾಕ್ಟು ವಗೈರೆ ಮಾಡುತಾ ಯಿದ್ದು ಅಲ್ಲಿ ಕೆಲವು ಲೇವಾದೇವಿ ನಡಸಿರುವ ಸಂಬಂಧ ಬರಬೇಕಾದ ರೂಪಾಯಿ 50 ವಸೂಲ್ಮಾಡಿ ಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ತನ್ನ ಹೆಸರಿಗೆ ಸರಟಿಕೇಟ ಆಗಬೇಕೆಂದು ಮಿಸಲೇನಿಯಸ್ ಕೇಸ್ ನಂ. 10, 1876ಕ್ಕೆ ದಾಖಲ್ಮಾಡಿದ ಅರ್ಜಿಯು ಯಿದೇ ಇಸವಿ ನವಂಬರ 13ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದು ನಿಶ್ಚಯಿಸಿ ಯಿರುವದ್ದರಿಂದ ಯಿದರ ಮೇಲೆ ತಕರಾರುದಾರು ಯಾರಾದರೂ ಯಿದ್ದರೆ ಆಕಾಲಕ್ಕೆ ಸರಿಯಾಗಿ ಈ ಕೋರ್ಟು ಮುಂದೆ ಹಾಜರ ಯಿದ್ದು ವ್ಯವಹರಿಸಬೇಕಾಗಿ ಯಿದೆ.

ಬತಾರೀಖು 12ನೇ ಅಕ್ಟೋಬರ್ ಸರ್ 1876ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

P. Krishna Rao,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು ಡೆ॥ ಕ॥ ಕೋರ್ಟಿ ನಿ.ದ.

ತಾರೀಖು 14ನೇ ಆಕ್ಟೋಬರ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟು ಚಿತ್ರದುರ್ಗ, ದಾವಣಗೆರೆ, ದೊಡ್ಡೇರಿ, ಬೂದಿಹಾಳ್, ಹೊಸದುರ್ಗ ಈ ತಾಲ್ಲೂಕುಗಳ ಶೇಂದೀ ಇಜಾರೇದಾರ ಪುಟ್ಟೂರ ವೆಂಕಟ್ಟಯ್ಯನು ಖಿಸ್ತಿನ ಹಣವನ್ನು ಕ್ಲುಪ್ತವಾದ ವಾಯಿದೆಗೆ ಸರಿಯಾಗಿ ಪಾವತೀ ಮಾಡದೆ ತಪ್ಪಿಹೋದ ಮೂಲಕ ಇಜಾರೇ ಷರತ್ತುಗಳಿಗೆ ತಪ್ಪಿರುತ್ತಾನಾದ್ದರಿಂದ ಸದರೀ ತಾಲ್ಲೂಕುಗಳ ಶೇಂದಿ ಇಜಾರೇಯು ಬಾಕೀ ಇರುವ ಕಾಲಕ್ಕೆ ಅಂದರೆ ಸ್ 1876ನೇ ಇಸವಿ ಆಕ್ಟೋಬರ ಗುರ್ರೆ ಲಗಾಯತು 1878ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ 1½ ವರುಷಕ್ಕೆ ತಾಲ್ಲೂಕುವಾರಾಗಿ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಯೆದುರಾಗಿ ಸ್ 1876ನೇ ಇಸವಿ ನವಂಬರ 1ನೇ ತಾರೀಖು ಬುಧವಾರ ಹಗಲು 11 ಘಂಟೆಗೆ ಚಿತ್ರದುರ್ಗದಲ್ಲಿ ಚೀಫ ಕಮ್ಮಿಷನರ ಸಾಹೆಬರವರ ಶೆಪ್ಟಂಬರ 15ನೇ ಮುರ್ಕುಂ ನಂ. 5894—122ನೇ ಪ್ರೊಸಿಡಿಂಗ್ಸು ಅನುಸರಿಸಿ ಪುನಹಾ ಹರಾಜು ಮಾಡಲ್ಪಡುತ್ತೆ.

ಹರಾಜು ನಿಬಂಧನೆಗಳಂದರೆ.

1. ಯಾವ ಚಡದರಖಾಸ್ತುದಾರನಿಗೆ ಸವಾಲ್ ಅಂಗೀಕರಿಸಲ್ಪಡುತ್ತೋ ಅವನು ಕೂಡ್ಲೆ ಯೆರಡು ತಿಂಗಳ ಖಿಸ್ತು ಮೊಬಲಗು ಅದರ ಲೋಕಲ್‌ಸೆಸ್ ಸಹಾ ನಗದಾಗಿ ಪಾವತೀ ಮಾಡಬೇಕು ಸದರೀ ಮೊಬಲಗು ಅನಾಮತ್. ಇಡಲ್ಪಟ್ಟು ಆಖೈರ ಯೆರಡು ಖಿಸ್ತುಗಳಾದ 1878ನೇ ಇಸವಿ ಫಿಬ್ರವರಿ ಮಾರ್ಚಿ ತಿಂಗಳಿಗೆ ಜಮೆ ಕಟ್ಟಿಕೊಳ್ಳಲ್ಪಡುತ್ತೆ.

2. ಇಜಾರೇ ಷರತ್ತುಗಳಂತೆ ಇಜಾರೇ ದಾರನು ಸರಿಯಾಗಿ ನಡದುಕೊಳ್ಳುವಬಗ್ಯೆ ಖಾತರಗೋಸ್ಕರ ಲಾಯಕ್ ಜಾಮೀನನ್ನು ಬಾಬ್ ಸುಫರ್ದು ಆಗುವದಕ್ಕೆ ಮುಂಚಿತವಾಗಿ ಹಾಜರ ಮಾಡಬೇಕು.

3. ದರಖಾಸ್ತು ಮಂಜೂರಾದ ಕೂಡ್ಲೆ ಸರಿಯಾದ ಛಾಪಾಕಾಗದ್ದ ಮೇಲೆ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ರೂಬರೂ ಇಜಾರೇ ಮುಚ್ಚಲಿಕೆ ಬರದು ಕೊಡಬೇಕು.

4. ಇಜಾರೇ ದಾರನು ಹಾಜರ ಮಾಡುವ ಜಾಮೀನ್‌ದಾರನು ಮೈಸೂರ ರಿಯಾಸತ್ತಿನಲ್ಲಿ ಇಜಾರೇ ಮೊಬಲಗಿಗೆ ಸರಿಯಾದ ಕಿಮ್ಮತ್ತುವುಳ್ಳ ಜಿಂದಗೀ ವುಳ್ಳಾದವನಾಗಿಯೂ ಮತ್ತು ಆಬಗ್ಯೆ ಅಂಥಾ ಜಾಮೀನ್‌ದಾರನು ವಾಸ ಮಾಡುವ ತಾಲ್ಲೂಕು ಅಮಿಲರಿಂದ ಕ್ರಮವಾಗಿ ಸರ್ಟಿಫಿಕೇಟ ಆದರನೇ ಹೊರ್ತು ಜಾಮೀನ್ ಮಂಜೂರ್ಮಾಡುವದಿಲ್ಲ.

5. ಪ್ರತಿ ತಿಂಗಳ ಖಿಸ್ತು ಆಯಾ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಆಯಾ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡಲ್ಪಡಬೇಕು ಅದಕ್ಕೆ ತಪ್ಪಿದಲ್ಲಿ ಪಾವತೀ ತಾರೀಖಿನ ವರಿವಿಗೂ ಬಾಕೀ ಆಗುವ ಮೊಬಲಗಿಗೆ ದರ ರೂಪಾಯಿ 1ಕ್ಕೆ ರೋಜ್ 1ಕ್ಕೆ ½ ಪೈ ಯಂತೆ ಬಡ್ಡಿ ದಾಖಲ್ ಮಾಡಲ್ಪಡುವದು.

6. ಖಿಸ್ತು ಬಾಕೀ ಮೊಬಲಗು ಮತ್ತು ಬಡ್ಡಿ ಸಹಾ ವಂದು ತಿಂಗಳಿಗಿಂತಲೂ ಹೆಚ್ಚಾದ ಕಾಲದವರಿಗೂ ಪಾವತೀ ಆಗದೆ ಬಾಕೀ ನಿಂತಿರುವ ಪಕ್ಷಕ್ಕೆ ಇಜಾರೇಯು ಪುನಹಾ ಹರಾಜು ಮಾಡಲ್ಪಡುತ್ತೆ, ಅಥವಾ ಯುಕ್ತ ತೋರುವ ಮತ್ಯಾವ ರೀತಿ ಯಿಂದಲಾದರೂ ವಿಲೇವಾರೀ ಮಾಡಲ್ಪಡುತ್ತೆ ಆಮೇರಿಗೆ ಮಾಡಲ್ಪಡುವದ್ದರಿಂದ ಸರ್ಕಾರಕ್ಕೆ ಸಂಭವಿಸುವ ಲುಕ್ಸಾನಿಗೆ ಇಜಾರೇದಾರನ್ನ ಗುರಿ ಮಾಡಲ್ಪಡುವದಲ್ಲದ ಅವನ ಚರ ಸ್ಥಿರ ಆಸ್ತಿ ಮತ್ತು ಜಾಮೀನ್‌ದಾರನ ಚರ ಸ್ಥಿರ ಆಸ್ತಿ ಹರಾಜಿನಿಂದ ಲುಕ್ಸಾನ್ ಮೊಬಲಗು ಭರ್ತೀ ಮಾಡಿಕೊಳ್ಳಲ್ಪಡುತ್ತೆ.

7. ಚಡದರಖಾಸ್ತುದಾರನು ಹರಾಜು ತಾರೀಖಿನಲ್ಲಿ ಮೇಲಿನ 1—2—3ನೇ ಕಲಂನಲ್ಲಿ ನಮೂದಾಗುವ ಷರತ್ತುಗಳಂತೆ ನಡದುಕೊಳ್ಳದೆ ತಪ್ಪುವ ಪಕ್ಷದಲ್ಲಿ ಬಾಬ್ ಪುನಹಾ ಹರಾಜು ಮಾಡಲ್ಪಟ್ಟು ಲುಕ್ಸಾನಿಗೆ ಅವನು ಗುರಿಮಾಡಲ್ಪಡುತ್ತಾನೆ.

8. ಬಾಬ್ ಸುಫರ್ದು ಆಗುವ ತಾರೀಖಿನ ವರಿಗೆ ಅಮಾನೀಯಲ್ಲಿ ರೂಢಿಸಲ್ಪಟ್ಟಿರುವ ಮೊಬಲಗು ಇಜಾರೇ ಮೊಬಲಗಿನಿಂದ ವಜಾ ಮಾಡಲ್ಪಟ್ಟೀತು.

9. ಹರಾಜಿನಲ್ಲಿ ಬಾಬ್ ಪಡಿಯುವನು ಮಂಜೂರಾದ ತನ್ನ ದರಖಾಸ್ತಿನ ಮೊಬಲಗಿನ ಮ್ಯಾಲೆ ರೂಪಾಯಿ 1ಕ್ಕೆ ವಂದಾಣೆಯಂತೆ ಲೋಕಲ್‌ಸೆಸ್ ಕೊಡುವದಕ್ಕೆ ಬದ್ಧನಾಗಿರುತ್ತಾನೆ.

10. ಕೆರೆಗಳ ಮತ್ತು ನಾಲೆಗಳ ಬಾಜುಗಳಲ್ಲಿ ನೀರು ಹರಿಯುವದಕ್ಕೆ ಹರಕತ್ತಾಗಿಯೂ ಮತ್ತು ಅವುಗಳ ದಡಗಳಲ್ಲಿ ತಿರುಗಾಡುವದಕ್ಕೆ ಹರಕತ್ತಾಗಿಯೂ ಏಡವು ಪೋಳೆ ವುಂಟುಮಾಡುವ ಕಾರಣವಾಗುವಂತೆ ಬೆಳದಿರುವ ಶೇಂದಿ ಗಿಡಗಳನ್ನ ಕಡಿಸಿ ಬಿಡುವ ಯುಖ್ತಿಯಾರೀ ಸರಾಕರದವರು ವುಳಸಿಕೊಂಡಿರುತ್ತಾರೆ.

ತಾರೀಖು 14ನೇ ಅಕ್ಟೋಬರ 1876ನೇ ಇಸವಿ.

E. ARMSTRONG,
Dy. Commr.

COORG.

ತಾರೀಖು 6ನೇ ಸೆಪ್ಟಂಬರ್ 1576.

ಮಡಿಕೆರೆ ತಾಲ್ಲೂಕು ಮಡಿಕೆರೆ ಹಲೇರಿ ನಾಡ್‌ನಲ್ಲಿರುವ ನೀರುಕೊಲ್ಲಿ ಮೊಟ್ಟೆ ಎಸ್ಟೇಟ ಬಾಬತು ಪೂರ್ವವೇ ಕೆ ಶೇಷಯ್ಯಂಗಾರ್ರ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಟೈಟಲ್‌ಡೀಡ್.

ನೀರುಕೊಲ್ಲಿ ಮೊಟ್ಟೆ ಎಸ್ಟೇಟ್ 13·41 ಎಕರೆ.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸುವದೇನಂದರೆ,—ಮೇಲೆ ಕಂಡ ಎಸ್ಟೇಟ್ ಸರಕಾರದ ಬಾಕೀಗೋಸ್ಕರ 1870ನೇ ಇಸವಿ ಏಪ್ರೆಲ್ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜಿನಲ್ಲಿ ಯಾಲಂ ಹಾಕಲ್ಪಡುತ್ತೆ. ಸದರೀ ಎಸ್ಟೇಟ ಪಾರ್ಟ ಮಂಟ್ಲ ಟೈಟಲ್ ಡೀಡನ್ನ 1864ನೇ ಇಸವಿ 13ನೇ ಶಪ್ಟಂಬರ್ ಚೀಫ್ ಕಮ್ಮಿಷನರ ನಂಬರ್ 11, ಸೂಪರ್ರಿಟೆಂಡೆಂಟರ ನಂಬರ್ 11, ಈ ಬಾಬತು ಎಸ್ಟೇಟ ಪಿ. ವಿ. ರಂಗಾಚಾರಿ ಯವರಿಂದ ಕರೀದಿಗೆ ತೆಗದುಕೊಂಡು ಯಿದ್ದಬಾಬತು ಯಿದರಿಂದ ರದ್ದುಮಾಡಲ್ಪಟ್ಟು ಯಿರುತ್ತೆ.

E. SHAW,
Offg. Supt.

ಸರ್ 1876ನೇ ಇಸವಿ ಶಪ್ಟಂಬರ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಕಡೂರು ಡಿಸ್ಟ್ರಿಕ್ಟು.

ಮಳೆ,—ಯಲ್ಲಾ ತಾಲ್ಲೂಕುಗಳಲ್ಲಿಯೂ ಕೊಂಚವಾಗಿ ತುಂಪರುಮಳೆ ಬಿತ್ತು, ಆದರೆ ಕೆರೆಗಳಿಗೆ ನೀರು ಬರುವದಕ್ಕೆ ಸಾಕಾಗ್ವಾಗಿಯೂ ಯಿರಲಿಲ್ಲ ಬೆಳೆಯಲ್ಲಿರುವ ಫಸಲುಗಳಿಗೆ ವುಪಯೋಗವಾಗುವಹಾಗೂ ಯಿರಲಿಲ್ಲ.

ಈ ತಿಂಗಳಲ್ಲಿಯೂ, ಹಿಂದಿನ ತಿಂಗಳಲ್ಲಿಯೂ ಸರ್ 1875ನೇ ಇಸವೀ ಶಪ್ಟಂಬರ್ ತಿಂಗಳಲ್ಲಿಯೂ ಬಿದ್ದಮಳೆಯು ಈ ಕೆಳಗೆ ನಮೂದಿಸಿರುತ್ತದೆ.

ಸರ್ 1876ನೇ ಆಗಸ್ಟು ತಿಂಗಳಲ್ಲಿ	..	ಇಂಚ್ಸ್ 1 ಸೆಂಟ್ಸ್	65
ಡಿಟೋ ಶಪ್ಟಂಬರ್	..	1	6
ಸರ್ 1875 ನೇ ಡಿಟೋ	..	0	78½

ಪೇರಾವಾದ ಬೀಜ,—ಧನಿಯ, ಕುಸುಮೆ, ಹುರಳಿ, ಕುರಾಸಾನಿ, ಯಿವು ತರೀಕೆರೇ ತಾಲ್ಲೂಕಿನಲ್ಲಿ ಪೇರಾವಾಗಿರುತವೆ. ಲಕ್ಕುವಳ್ಳಿ ವ ಕೊಪ್ಪ ತಾಲ್ಲೂಕುಗಳಲ್ಲಿ ಭತ್ತ ನಾಟ್ಟವಾಗಿರುತ್ತದೆ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನ, ಹುರಳಿ ಪೇರಾವಾಗಿರುತವೆ, ಬಾಣಾವಾರ ತಾಲ್ಲೂಕಿನಲ್ಲಿ ಹುರಳಿ, ಕುರಾಸಾನಿ, ಬರಗು ಪೇರಾವಾಗಿರುತವೆ.

ಫಸಲ್ ಸ್ಥಿತಿ,—ತರೀಕೆರೆ ತಾಲ್ಲೂ ನಲ್ಲಿ ರಾಗಿ, ಅವರೆ, ಜೋಳ ಮುಂತಾದ ಫಸಲು ಸ್ವಲ್ಪ ಚನ್ನಾಗಿವೆ. ಲಕ್ಕುವಳ್ಳಿ ತಾಲ್ಲೂಕಿನಲ್ಲಿ ಗನ್ನವೂ ಬೂಂದು ಸುಮಾರಾಗಿ ಚನ್ನಾಗಿರುತವೆ. ಆದರೆ, ಲಕ್ಕುವಳ್ಳಿ ಕಸಬಾದಲ್ಲಿ ಸುಪಾರಿ ಫಸಲಿಗೆ ಕೊಳೇರೋಗ ತಗಲಿರುತ್ತೆ. ಭತ್ತದ ಫಸಲಿಗೆ ಮಳೆ ಬೇಕಾಗಿರುತ್ತದೆ. ಕೊಪ್ಪತಾಲ್ಲೂಕಿನಲ್ಲಿ ಯಾಲಕ್ಕಿ, ಭತ್ತ ಈ ಫಸಲು ಚನ್ನಾಗಿರುತ್ತವೆ, ಆದರೆ, ಈ ತಾಲ್ಲೂಕಿನ ಯೆಲ್ಲಾ ಕಡೆಗಳಲ್ಲೂ ಸುಪಾರೀ ಫಸಲಿಗೆ ಕೊಳೇರೋಗ ತಗಲಿರುತ್ತೆ. ಚಿಕ್ಕಮಗಳೂರು ವ ಬಾಣಾವಾರ ತಾಲ್ಲೂಕುಗಳಲ್ಲಿ ಯಲ್ಲಾ ಫಸಲೂ ಮಳೆಯಿಲ್ಲದೆ ವಣಗುವದಾಗಿ ರಿಪೋರ್ಟಾಗಿರುತ್ತದೆ.

ಕಟಾವಿನ ಫಸಲು,—ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗಿಡ್ಡರಾಗಿ, ಎಳ್ಳು, ಜೋಳ, ಬಾಣಾವಾರ ತಾಲ್ಲೂಕಿನಲ್ಲಿ ಜೋಳ, ಬರಗು, ಗನ್ನ ಕಟಾವಾದವು.

ಜನಾರೋಗ್ಯ,—ಡಿಸ್ಟ್ರಿಕ್ಟು ಮುಳೆ ಆರೋಗ್ಯ ಚನ್ನಾಗಿರಲಿಲ್ಲ. ಕೊಪ್ಪತಾಲ್ಲೂಕಿನಲ್ಲಿ ಜ್ವರ ವ ಛಳೀಜ್ವರ ವ್ಯಾಪಿಸಿರುತ್ತೆ. ಡಿಸ್ಟ್ರಿಕ್ಟು ಮುಳೆ ಮೈದಾನ ಪ್ರದೇಶಗಳಲ್ಲಿ ಬಡಜನರಿಗೆ ಜೀವನಕ್ಕೆ ಸಂಪಾದಿಸಿಕೊಳ್ಳುವದೇ ಬಹಳ ಪ್ರಯಾಸವಾಗಿರುತ್ತೆ. 13,543 ರೂಪಾಯಿಗಳ ಮರಹಮ್ಮತ್ ಕಾಮಗಾರೀ ನಡಿಯುತ್ತಾಯಿದೆ. ಸದರೀ ಕೆಲಸದಲ್ಲಿ 1,800 ಜನ ಸುಮಾರು ಕೆಲಸ ಮಾಡುತ್ತಾರೆ.

ಈ ತಿಂಗಳಲ್ಲಿ ಯಲ್ಲಾ ಕಾರಣಗಳಿಂದಲೂ 246, ಹಿಂದಿನ ತಿಂಗಳಲ್ಲಿ 243, ಸರ್ 1875ನೇ ಶಪ್ಟಂಬರ್‌ನಲ್ಲಿ 313 ಮಂದಿ ಸತ್ತಿರುತ್ತಾರೆ.

ಜಾ್ವರ್,—ಲಕ್ಕುವಳ್ಳಿ, ಕೊಪ್ಪ, ಚಿಕ್ಕಮಗಳೂರು, ತಾಲ್ಲೂಕುಗಳಲ್ಲಿ ಗೋಮಾರಿರೋಗ ಯಾನೆ ದೊಡ್ಡರೋಗ ವ್ಯಾಪಿಸಿರುತ್ತೆ. ತರೀಕೆರೆ, ಚಿಕ್ಕಮಗಳೂರು, ಬಾಣಾವಾರ ಈ ತಾಲ್ಲೂಕುಗಳಲ್ಲಿ ಮೇವು ನೀರು ಯಿಲ್ಲ. ದನಗಳಿಗೆ ಬಹಳ ತೊಂದರೆ ವುಂಟು ಗಿರುತ ದೆ.

ಈ ತಿಂಗಳಲ್ಲಿ ಯಲ್ಲ ಕಾರಣಗಳಿಂದಲೂ ಯೇಕೋನು 2,409 ಕಾಲ್ನಡೆ ಸತ್ತವು, ಹಿಂದಿನತಿಂಗಳಲ್ಲಿ 4,395 ಸತ್ತವು, ಸ್ಗ 1875ನೇ ಶಪ್ಟಂಬರನಲ್ಲಿ 1,079 ಸತ್ತವು.

P. Krishna Rao,
Dy. Commr.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಹವಾ,—ಈ ತಿಂಗಳ ಆಖೈರ್ ಭಾಗದೊಳಗೆ ಡಿಸ್ಟ್ರಿಕ್ಟಿನ ಎಲ್ಲ ಪ್ರದೇಶಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಳೆ ಬಿದ್ದಿರುತ್ತೆ. ಪ್ರತಿ ಕಸಬಾ ಹೆಡ್ ಕ್ವಾರ್ಟರ್‌ಗಳಲ್ಲಿ ಆಳತ್ತದ ತಪಸೀಲ್ ಈ ಕೆಳಗೆ ತೋರಿಸಲ್ಪಟ್ಟಿರುತ್ತೆ:—

		ಇಂ.	ಸೆಂ.			ಇಂ.	ಸೆಂ.
ಚಿತ್ರದುರ್ಗ	..	0	90	ಹಿರಿಯೂರು	..	1	0
ದಾವಣಗೆರೆ	..	2	40	ಬೂದಿಹಾಳ್	..	0	86
ಕಣಕುಪ್ಪ	..	0	25	ಹೊಸದುರ್ಗ	..	1	95
ದೊಡ್ಡೇರಿ	..	0	70	ಪಾವಗಡ	..	2	60

ದಿನಗಳು ಮೋಡವಾಗಿಯೂ ಮತ್ತು ಶೆಖೆಯಾಗಿಯೂ ಯಿದ್ದವು. ನೈರುತ್ಯ ದಿಕ್ಕಿನ ಘಾಳಿಯು ಬೀಸುತ್ತಿತ್ತು.

ಬೆಳೆ,—ಚಿತ್ರದುರ್ಗ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಹುರಳಿ, ಕುರಾಸಾನಿ, ಸಾವೆ, ನವಣೆ ಪೇರಾವಾದವು. ಅನೇಕ ಪ್ರದೇಶಗಳಲ್ಲಿ ಬೆಳೆಗಳು ಒಣಗಿ ಹೋಗಿರುವದಾಗಿಯೂ ಮತ್ತು ಕೆಲವು ಕಡೆ ಒಣಗುವ ಸ್ಥಿತಿಯಲ್ಲಿರುವ ಹಾಗೂ ರಿಪೋರ್ಟಾಗಿರುತ್ತೆ. ಕಪಿಲೆ ಭಾವಿಗಳು ಮತ್ತು ಕಟ್ಟೆಗಳು ಇವುಗಳ ಕೆಳಗೆ ಬಿತ್ತಿದ್ದ ಫಸಲ್‌ಗಳು ಕಟಾವಾದವು. ಡಿಸ್ಟ್ರಿಕ್ಟಿ ಮುಳೆ 33 ದೊಡ್ಡ ಮತ್ತು 50 ಚಿಕ್ಕ ಕೆರೆಗಳಿಗೆ 15 ದಿವಸದ ಲಗಾಯತು 5 ತಿಂಗಳ ನೀರು ಬಂದಿರುತ್ತೆ. 772—4—0 ರೂಪಾಯಿಗಳು ಕಂದಾಯವುಳ್ಳ ಜಮೀನ್ ಸಾಗುವಳೀ ಬಗ್ಯೆ ತೆಗದುಕೊಳ್ಳಲ್ಪಟ್ಟವು.

ಆರೋಗ್ಯ,—ಜನಾರೋಗ್ಯ ಸಾಧಾರಣವಾಗಿತ್ತು. ನಾನಾವಿಧವಾದ ರೋಗಗಳಿಂದ 428 ಮಂದಿ ಮೃತಪಟ್ಟರು, ಕಳೆದ ತಿಂಗಳಲ್ಲಿ 518 ಮಂದೀ ಹೋದರು.

ಕಾಲ್ನಡೆ,—ಕಾಲ್ನಡೆಗಳ ಸ್ಥಿತಿಯು ಯಥಾಪ್ರಕಾರ ಯಿದೆ. ಮೇವಿನ ದುರ್ಭಿಕ್ಷ ಬಹಳವಾಗಿರುತ್ತೆ, ರೋಗಗಳಿಂದಲೂ ಮತ್ತು ಮೇವಿಲ್ಲದೆಯೂ 8,015 ಹೋದವು.

ನಿರಖು,—ಜಿನಸಿಯ ದಾರಣೆಯು ಕ್ಷಾಮಕಾಲದ ದಾರಣೆಗೆ ತ್ವರಿತವಾಗಿ ಚಡಾವಾಗುತಲಿದೆ.

E. Armstrong,
Dy. Commr.

ಅಮೃತ ಮಹಲ್.

ದನಗಳ ಮುಖ್ಯವಾದ ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಯೆ ತಕ್ಕ ಕೆಲವು ಹೋರಿಗಳು, ಹಸುವುಗಳು, ಕರುವುಗಳು, ಸಣ್ಣ ಯೆತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ್ 26ನೇ ಮುಕ್ಕಾಂ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರನ್ನು ಕೇಳಿ ತಪಶೀಲ್ ತಿಳಿದುಕೊಳ್ಳಬಹುದು.

ಮು—ಏ—50 ಜೊತೆ ಯೆತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. MCINROY, *Major*,
Sub-Asstt. Commissary Genl.,
In charge Amrut Mahal, by Mysore.

ಕರ್ರೆನ್ಸೀ ನೋಟ್‍ಗಳು.

ಇದರಡಿ ನಮೂದಿಸಲ್ಪಡುವ ಕರ್ರೆನ್ಸಿ ನೋಟುಗಳ ಅರ್ಧ ಭಾಗಗಳು ಕುಣಿಗಲನಿಂದ ಬೆಂಗಳೂರಿಗೆ ಟಪಾಲ್ ದ್ವಾರ ರವಾನೆ ಆಗುವಲ್ಲಿ ಹೋಗಿರುತ್ತವೆ.

ನಂಬರ.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
$\frac{B}{50}$ 14029	ಮದ್ರಾಸ್	100	ಬೆಂಗಳೂರು ನಗರ್ತಪೇಟೆಯಲ್ಲಿರುವ ಜವಳೀ ವರ್ತಕ ಮಂಗಲಗಿರಿ ಪೇರ್ರ್ಯಶೆಟ್ಟಿ
$\frac{B}{44}$ 64251	ಡಿಟೋ	100	
$\frac{B}{44}$ 26975	ಡಿಟೋ	100	
$\frac{B}{44}$ 22176	ಡಿಟೋ	100	
$\frac{B}{35}$ 88386	ಡಿಟೋ	20	
$\frac{B}{42}$ 39527	ಡಿಟೋ	20	

ಯಿದರಡಿ ನಮೂದಿಸಲ್ಪಡುವ ಕರ್ರೆನ್ಸೀನೋಟು ಹೋಗಿರುತ್ತೆ.

ನಂಬರ.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
$\frac{B}{44}$ 78677	ಮದ್ರಾಸ್	100	ಬೆಂಗಳೂರಲ್ಲಿರುವ ಚೀಫ್ ಕಮ್ಮಿಷನರವರ ಖಜಾನೆ ಬಕ್ಷೀರು ಮ॥ ಶೇ ತುರಾಯುರು.

MYSORE GOVERNMENT PRESS, BANGALORE—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 21, ಸ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಸ 1871ನೇ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್‌ಯಾನೆ ಜಮೀನ್ ಅಭಿವೃದ್ಧಿಯ ಆಕ್ಟನ್ನು ತಿದ್ದುಪಡೀ ಮಾಡುವ ಬಗ್ಯೆ ಹುಟ್ಟಿದ ಮಸುವಿದಾ ಆಕ್ಟು.

——:0:——

ಪೀಠಿಕೆ.

1871ನೇ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟುಯಾನೆ ಜಮೀನ್ ಅಭಿವೃದ್ಧಿಯ ಆಕ್ಟಿನ್ ಕೆಲವು ನಿಬಂಧನೆಗಳ ಅಮಲ್ ವಿಷಯದಲ್ಲಿ ಸಂದೇಹಗಳು ವುಂಟಾಗಿರುವದರಿಂದ ಅಂತಾ ಸಂದೇಹಗಳನ್ನು ನಿವರ್ತಿ ಮಾಡುವ ಉದ್ದೇಶದೊಡನೆ ಐರ್ಜ ಆಕ್ಟನ್ನು ತಿದ್ದುಪಡಿ ಮಾಡುವದು ಯುಕ್ತವಾಗಿರೋಣದರಿಂದ ನಿರ್ಣಯಿಸಲ್ಪಡುವದೇನಂದರೆ.

ಸ್ಥಳೀಕ ವ್ಯಾಪ್ತಿ.

ಈ ಆಕ್ಟು ಬ್ರಿಟಿಷ್ ಇಂಡ್ಯದ ಸರ್ವತ್ರ ವ್ಯಾಪಿಸುತ್ತದೆ.

ಕಲ್ಪನೆ.

ಯಿದು 1871ನೇ ಇಸವಿಯ ಸದರೀ ಜಮೀನ್ ಅಭಿವೃದ್ಧಿ ಆಕ್ಟಿನೊಂದಿಗೆ ಓದಲ್ಪಟ್ಟು ಅದರ ವೊಂದು ಭಾಗವಾಗಿ ಅಂಗೀಕರಿಸಲ್ಪಡತಕ್ಕದ್ದು.

ಷುರು.

ಮತ್ತು ಯಿದು 1871ನೇ ಇಸವಿ ಶಪ್ಟಂಬರ್ 28ನೇ ತಾರೀಖಿನಲ್ಲಿ ಜಾರೀಗೆ ಬಂದಂತೆ ಯೆಣಿಸಲ್ಪಡತಕ್ಕದ್ದು—ಯಾತಕ್ಕಂದರೆ ಸದರೀ ತಾರೀಖಿನಲ್ಲಿ ಐರ್ಜ ಆಕ್ಟು ಜಾರೀಗೆ ತರಲ್ಪಟ್ಟಿತು.

1871ನೇ ಇಸವಿಯ 26ನೇ ನಂ ಆಕ್ಟಿನ 15ನೇ ಸೆಕ್ಷರ್ಷ ತಿದ್ದುಪಾಡು.

ಐರ್ಜ ಆಕ್ಟಿನ 15ನೇ ಸೆಕ್ಷರ್ಷ ರದ್ದು ಮಾಡಲ್ಪಟ್ಟಿರುತ್ತೆ, ಮತ್ತು ಅದಕ್ಕೆ ಬದಲಾಗಿ ಯಿದರ ಕೆಳಗೆ ಬರುವ ಸೆಕ್ಷರ್ಷ ಯೇರ್ಪಡಿಸಲ್ಪಡ ತಕ್ಕದ್ದು.

"15. ಈ ಆಕ್ಟು ಪ್ರಕಾರ ಅಡ್ವಾನಸ್ ಕೊಡಲ್ಪಟ್ಟ ದರೋಬಸ್ತು ಮೊಬಲಗ್‌ಗಳೂ ಅವು ಬಾಕೀ ಆದಾಗ ಈ ಕೆಳಗೆ ನಮೂದಿಸಲ್ಪಡುವ ವಿಶಿಷ್ಟ ವಿಧಗಳಿಂದಲಾಗಲಿ, ಆಪೈಕಿ ಯಾವ ವಿಧದಿಂದಲಾಗಲಿ, ವಸೂಲ್ಮಾಡಲ್ಪಡ ತಕ್ಕದ್ದು.

(a.) ಹಣ ತೆಗದುಕೊಂಡವನಿಂದ, ಸದರೀ ಮೊಬಲಗ್ ಜಮೀನ್ ಕಂದಾಯದ ಬಾಕೀಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(*b.*) ಜಾಮೀನ್ದಾರ ಯಾವನಾದರೂ ಯಿದ್ದರೆ ಆತನಿಂದ, ಸದರೀ ಮೊಬಲಗ್ ಜಮೀನ್ ಕಂದಾಯದ ಬಾಕಿಯಾಗಿದ್ದು ಆತನಿಂದ ಬರಬೇಕಾಗಿದ್ದರೆ ಹ್ಯಾಂಗೊ ಹಾಂಗೆ,

(*c.*) ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಿಂದ, ಸದರೀ ಮೊಬಲಗ್ ಅಂತಾ ಜಮೀನಿಗಾಗಿ ಸಲ್ಲಬೇಕಾದ ಕಂದಾಯದ ಬಾಕೀ ಮೊಬಲಗಾಗಿದ್ದರೆ ಹ್ಯಾಂಗೋ ಹಾಂಗೆ,

(*d.*) ಯಿತರ ಖಾತರು ಯೆನಾದರೂ ಯಿದ್ದರೆ, ಅಂತಾ ಖಾತರು ದಸ್ತಾವೇಜಿನ ಷರತ್ತುಗಳ ಪ್ರಕಾರ ಅಂತಾ ಖಾತರು ಆಡಗಿಸಿಕ್ಕೊಂಡಿರುವ ಸ್ವತ್ತಿನಿಂದ,—
ಪರಂತು,

(*e.*) ಹಣ ತೆಗದುಕೊಂಡವನು ಜಮೀನ್ದಾರನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಸಾಗುವಳೀದಾರ ವುಂಟಾಗಿರತಕ್ಕ ಸ್ವಂತ ಯಾ ಸಾಗುವಳೀ ಹಕ್ಕು ಆಡ್ವಾನ್ಸ್ ತೆಗದುಕ್ಕೊಂಡ ಮೊಬಲಗಿಗೆ ಸಾಗುವಳೀದಾರನು ಅಂತಾ ಹಕ್ಕನ್ನು ಯಿತರ ಖಾತರಾಗಿ ಮಾಡಿಕೊಟ್ಟಿದ್ದರೇನೇ ಹೊರತು ಅಂತಾ ಆಡ್ವಾನ್ಸ್ ಮೊಬಲಗ್ ಬರಮಾಡಿ ಕೊಳ್ಳುವದಕ್ಕೋಸ್ಕರ ಹರಾಜ್ ಆಗಲಿಕ್ಕೆ ಗುರಿಯಾಗಿರ ತಕ್ಕದ್ದಿಲ್ಲಾ.

(*f.*) ಹಣ ತೆಗದುಕ್ಕೊಂಡವನು 7ನೇ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ಸಾಗುವಳೀದಾರ ನಂತಾವನಾಗಿದ್ದರೆ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನಲ್ಲಿ ಜಮೀನ್ದಾರನಿಗೆ ಯಿರತಕ್ಕ ಹಕ್ಕುದಾರಿಯು ಆಡ್ವಾನ್ಸ್ ಕೊಟ್ಟ ಮೊಬಲಗ್ ಬರಮಾಡಿ ಕೊಳ್ಳುವದಕ್ಕೋಸ್ಕರ ಹರಾಜಾಗಲಿಕ್ಕೆ ಗುರಿಯಾಗಿರಕ್ಕದ್ದಿಲ್ಲಾ.

(*g.*) ಮತ್ತು ಆಡ್ವಾನ್ಸ್ ಕೊಟ್ಟಿದ್ದ ಮೊಬಲಗು, ಹಣ ತೆಗದುಕ್ಕೊಂಡವನ ಯಾ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನಿನ ದೇಣೇ ಸಮಾಧಾನಕ್ಕಾಗಿ ಜಾಮೀನ್ದಾರನಿಂದಲಾಗಲಿ ಆತನ ಸ್ವತ್ತಿನ ಮೇಲಾಗಲಿ, ವಸೂಲ್ ಮಾಡಿಕೊಳ್ಳಲ್ಪಟ್ಟರೆ, ಹಣ ತೆಗದುಕ್ಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನ್ ಮೇಲೂ ಆಡ್ವಾನ್ಸ್ ಕೊಟ್ಟ ಮೊಬಲಗು ಬರಬೇಕಾದಾಗ ಸರಕಾರದವರಿಗೆ ಯಾವ ದಾವೆಗಳು ವ ಪರಿಹಾರಗಳು ವುಂಟಾಗಿದ್ದವೋ ಅದೇ ದಾವೆಗಳೂ ಪರಿಹಾರಗಳೂ ಹಣ ತೆಗದುಕ್ಕೊಂಡವನ ಮೇಲೂ ಅಭಿವೃದ್ಧಿ ಆಗತಕ್ಕದ್ದಾಗಿರುವ ಜಮೀನ್ ಮೇಲೂ ಸದರೀ ಜಾಮೀನ್ದಾರಗೆ ಉಂಟಾಗಿರ ತಕ್ಕದ್ದು.

ಉದ್ದೇಶ ಕಾರಣಗಳ ವಿವರಣೆ.

(1871ನೇ ಇಸವಿಯ 26ನೇ) ಲ್ಯಾಂಡ್ ಇಂಪ್ರೂವ್ ಮೆಂಟ್ಯಾನೆ ಜಮೀನ್ ಅಭಿವೃದ್ಧಿಯ ಆಕ್ಟಿನ 14ನೇ ಸೆಕ್ಷನ್ ವಿಧಿಸುವದೇನಂದರೆ.—ಸದರೀ ಆಕ್ಟು ಆನುಸರಿಸಿ ಆಡ್ವಾನ್ಸ್ ಕೊಡುವಂತಾ ಕಲೆಕ್ಟರಿಂದ ಕೊಡಲ್ಪಡುವ ಪ್ರತಿ ಸರಟಿಫಿಕೇಟಿನಲ್ಲೂ, ಅಡ್ವಾನ್ಸ್ ಮೊಬಲಗ್ ಅಭಿವೃದ್ಧಿ ಮಾಡತಕ್ಕ ಜಮೀನ್ ಯಿರುವ ಜಾಗಾ, ವಿಸ್ತೀರ್ಣ, ಚತುರ್ಗಡಿಗಳು ಮತ್ತು ಅಭಿವೃದ್ಧಿಯಾಗತಕ್ಕ ಜಮೀನ್ ಅಲ್ಲದೆ ಯಿತರವಾದ ಜಾಮೀನ್ (ಯಾವದಾದರೂ ಯಿದ್ದಲ್ಲಿ) ಅಂತಾದ್ದರ ಸ್ವರೂಪ, ಮತ್ತು ಮೊಬಲಗ್ ಯಿಂತಾವುಗಳನ್ನು ವಿವರಿಸತಕ್ಕದ್ದು, ಎಂಬದು. ಬಳಿಕ 15ನೇ ಸೆಕ್ಷನ್ ವಿಧಿಸುವದೇನಂದರೆ,—ಹಾಗೆ ವಿವರಿಸಲ್ಪಟ್ಟ ಮೊಬಲಗ್ ಯಾರಿಗೆ ಆಡ್ವಾನ್ಸ್ ಕೊಡಲ್ಪಟ್ಟಿತೋ ಅಂತಾ ಮನುಷ್ಯನಿಂದಲಾಗಲಿ "ಮೊಬಲಗ್ ಪಾವತೀ ಮಾಡುವಬಗ್ಯೆ ಜಾಮೀನಾದ ಯಾವ ಮನುಷ್ಯನಿಂದಾಗಲಿ, ಅಡ್ವಾನ್ಸ್ ಕೊಡಲ್ಪಟ್ಟ ಮನುಷ್ಯನಿಂದ ಯಾ ಅವನ ಜಾಮೀನ್ದಾರನಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದೆಂಬದು."

15ನೇ ಸೆಕ್ಷನಿನ ಉಳಿದ ಭಾಗವು ಈ ಕೆಳಗೆ ಬರುವ ಪ್ರಕಾರ ಇರುತ್ತೆ.

"ಅಂತಾ ಯಾವ ಮೊಬಲಗಾಗಲಿ ಆ ಮೇರೆ ವಸೂಲಾಗದೆ ಇದ್ದರೆ ಅದು ಸದರೀ ಸರ್ಟಫಿಕೇಟನಲ್ಲಿ ವಿವರಿಸಲ್ಪಟ್ಟ ಜಮೀನಬಗ್ಯೆ ಸಲ್ಲತಕ್ಕ ಕಂದಾಯದ ಬಾಕೀಯಾಗಿದ್ದರೆ ಹ್ಯಾಗೋ ಹಾಗೆ ವಸೂಲ್ ಮಾಡಲ್ಪಡತಕ್ಕದ್ದು,

"ಪರಂತು, ಅಡ್ವಾನ್ಸ ಕೊಡಲ್ಪಟ್ಟ ಮನುಷ್ಯ ಜಮೀನದಾರನಾಗಿ ಅಥವಾ, ಜಮೀನದಾರನ ಅನುಮತಿಯಿಲ್ಲದೆ ಜಮೀನ ಸಂಬಂಧವನ್ನು ಪರಭಾರೇಮಾಡಲಿಕ್ಕೆ ಬಾಧ್ಯತೆಯುಳ್ಳ ಸಾಗುವಳೀದಾರನಾಗಿದ್ದರೆಹೊರತು ಅನ್ಯಥಾ ಅಂತಾ ಜಮೀನದಾರನಲ್ಲದ ಯಾ ಸಾಗುವಳೀದಾರನಲ್ಲದ, ಯಿತರ ಯಾವ ಮನುಷ್ಯನ ಸದರೀ ಜಮೀನ ಸಂಬಂಧವೂ ಈಸೆಕ್ಷನ ಅನುಸರಿಸಿ ಮಾರಲ್ಪಡತಕ್ಕದ್ದಲ್ಲವು.

ಈ ಕ್ಲಾಜ ಮೇಲೆ ಎರಡಂಶಗಳು ವಿಚಾರಣೀಯಗಳಾಗಿರುತ್ತವೆ, ಮೊದಲನೇದು—ಗವರ್ನಮೆಂಟಿನವರು ಕೊಡುವ ಅಡ್ವಾನ್ಸ ಮೊಬಲಗ, ಯಿತರ ದರೋಬಸ್ತು ಖರ್ಚುಗಳಗಿಂತ ಅಭಿವೃದ್ಧಿ ಮಾಡತಕ್ಕ ಜಮೀನಿನ ಬಾಬತು ಮೊದಲನೇ ಖರ್ಚಾಗಿರುತದೆಯೋ? ಈ ಖರ್ಚುಗಳು ಕಾಲದ ವಿಷಯದಲ್ಲಿ ಪೂರ್ವ ಭಾವಿಯಾದ್ದೆ ಅಲ್ಲವೆ? ಎರಡನೇದು "ಸದರೀಸರ್ಟಿಫಿಕೇಟನಲ್ಲಿ ವಿವರಿಸೋಣಾದ ಜಮೀನಯೆಂಬ ಮಾತು ಜಾಮೀನ ತರೀಕ ಕೊಡಬಹುದಾದ ಯಾವ ಜಮೀನನ್ನಾಗಲಿ ಅಡಗಿಸಿಕ್ಕೊಂಡಿರುತ್ತದೆಯೋ ಹ್ಯಾಗೆ? ಎಂಬವು.

ಈ ಸಂದೇಹಗಳನ್ನು ನಿವೃತ್ತಿ ಮಾಡುವದೇ ಪ್ರಕೃತ ಮುಸವಿದಾ ಆಕ್ಟಿನ ಉದ್ದೇಶವಾಗಿರುತ್ತೆ. ಸದರೀ ಆಕ್ಟು ಯಾವ ಆಧಾರಗಳ ಮೇಲೆ ಕಲ್ಪಿಸಲ್ಪಟ್ಟಿತೋ ಅಂತಾ ಆಧಾರಗಳಿಂದು ನಂಬಲ್ಪಟ್ಟಿರುವಂತಾವುಗಳ ಪ್ರಕಾರ, ಮತ್ತು ಯಿದುವರಿಗೆ ದರೋಬಸ್ತು ಮುಬಾದಲೇಗಳೂ ನಿಸ್ಸಂಶಯವಾದ ಯಾವಅಭಿಪ್ರಾಯದಿಂದ ಯಿದುವರಿಗೆ ಕೊಡಲ್ಪಟ್ಟಿತೋ, ತೆಗೆದುಕ್ಕೊಳ್ಳಲ್ಪಟ್ಟಿತೋ ವ ವಸೂಲ್ ಮಾಡಿಕ್ಕೊಳ್ಳಲ್ಪಟ್ಟಿತೋ ಅಂತಾ ಅಭಿಪ್ರಾಯ ಪ್ರಕಾರವೂ, ಸದರೀ ಬಿಲ್ ಅಂತಾ ಸಂಶಯ ನಿವೃತ್ತಿಯನ್ನು ಮಾಡುತ್ತಿದೆ ಅದು ಹ್ಯಾಗಂದರೆ—ಗವರ್ನಮೆಂಟಿನಿಂದ ಸಲ್ಲುವ ಅಡ್ವಾನ್ಸಗಳು, ಅಂತಾ ಜಮೀನನಲ್ಲಿ ಆಗತಕ್ಕ ದರೋಬಸ್ತು ಯಿತರ ಖರ್ಚುಗಳು ಮತ್ತು ಸಂಬಂಧಗಳು, ಯಿವುಗಳಗಿಂತ ಅಭಿವೃದ್ಧಿ ಮಾಡತಕ್ಕ ಜಮೀನ ಮೇಲೆ ತಗಲುವ ಖರ್ಚಾಗಿರತಕ್ಕದ್ದು, ಮತ್ತು ಜಾಮೀನ ಬಗ್ಯೆ ಯಿತರ ಜಮೀನ ಕೊಡಲ್ಪಟ್ಟ ಪಕ್ಷಕ್ಕೆ ಗವರ್ನಮೆಂಟಿನಿಂದ ಸಂದ ಅಡ್ವಾನ್ಸ, ಸ್ವಂತ ಮನುಷ್ಯನಿಂದ ಸಾಧಾರಣ ಅಡ್ವಾನ್ಸಾಗಿದ್ದರೆ ಹ್ಯಾಗೋ ಹಾಗೆಯೇ ಯಿತರಖರ್ಚುಗಳ ತರೀಕ ಯೆಣಿಸಲ್ಪಡತಕ್ಕದ್ದು.

ಸದರೀ ಕ್ಲಾಜಿನ ಖಂಡಿತವಾದ ಅರ್ಥ ವಿಚಾರದಮೇಲೆ ಮುಖ್ಯಸ್ಥನ ಮೇಲಣ ಪರಿಹಾರಗಳೆಲ್ಲ ನಿವರ್ತಗಳಾಗುವದಕ್ಕೆ ಮುಂದಾಗಿ ಜಾಮೀನದಾರನು ದಾವಾಮಾಡಲ್ಪಡತಕ್ಕದ್ದೆಂದು ಇನ್ನೊಂದು ಬಗೆಯಾಗಿಚರ್ಚಿಸಲ್ಪಡಬಹುದು. ಅದು ನ್ಯಾಯವಲ್ಲವು, ಮತ್ತು ಹಾಗೆ ಉದ್ದೇಶಿಸಲ್ಪಡಲೂ ಯಿಲ್ಲವು. ಆದ್ದರಿಂದ ಈ ಯಂಶದಲ್ಲಿಯಿರತಕ್ಕ ಸಂಶಯಗಳನ್ನು ನಿವರ್ತಿಮಾಡುವದಕ್ಕೂ, ಮುಖ್ಯಸ್ಥನು ಮತ್ತು ಜಾಮೀನದಾರನು ಯಿವರುಗಳ ಮೇಲೆ ಯಿರತಕ್ಕ ಪರಿಹಾರವು ಮಾಮೂಲ್ ಸ್ಥಿತಿಯಲ್ಲಿರುತ್ತೆಂದು ಸ್ಪಷ್ಟಪಡಿಸುವದಕ್ಕೂ ಈ ಸಂದರ್ಭವನ್ನು ಅವಲಂಬಿಸಲಾಯಿತು.

ಸಿಂಲಾ, ತಾರೀಖು 28ನೇ ಆಗಸ್ಟು 1876.

A. HOBHOUSE.

Mysore Government Press, Bangalore—1876.

421

ಮೈಸೂರ ಗೆಜೆಟ್.

ನಂ. 43 ಸರ್ಕಾರದಿಂದ ಘಾಯಿಷ್ ಆದ್ದು. ಸ॥ 1876.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 28, ಸ॥ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನ್ಮೆಂಟಿನವರ ಇಸ್ತಿಹಾರ್ ನಾಮೆಗಳು.	271—274
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತಿ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಶ್ರೀಸ್ಟಾಫಿಸ್ ನೋಟಿಸ್‌ಗಳು.	501—516
3ನೇ ಭಾಗ—ಇಂಡ್ಯ ಗವರ್ನ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಜಪರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 260. ತಾರೀಖು 26ನೇ ಅಕ್ಟೋಬರ್ 1876.

ಚೀಫ್ ಕಮ್ಮಿಷನ್ನರವರು ಅಪ್ಪಣೆ ಕೊಡಿಸುವದೇನಂದರೆ ದುರ್ಭಿಕ್ಷ[illegible]ಪ್ರಾಪ್ತವಾದ ಸಬಬು ಮತ್ತು ನಿರಕ್‌ಗಳು ಜಡಾವಾಗಿರುವದ್ದರಿಂದಲೂ, ಮಾಹೇ ಯಾನಾ 10 ರೂಪಾಇಗೆ ಮೀರದ ತಲಬ[illegible] ದರೋಬಸ್ತು ಸರಕಾರ ನೌಕರರಿಗೆ 1876ನೇ ಇಸವಿ ಅಕ್ಟೋಬರ್ ತಿಂಗಳಿಗೆ ತಲಬು ಬಟವಾಡೆ ಆಗುವಲ್ಲಿಯೂ ಮತ್ತು ಆಚೆ ಯರಡು ತಿಂಗಳ ವರಿಗೂ ತಿಂಗಳು ವೊಂದಕ್ಕೆ ವೊಂದು ರೂಪಾಯಿ ಪ್ರಕಾರ ಮಾಹೇ ಯಾನಾ ಕೊಡಲ್ಪಡತಕ್ಕದ್ದು.

2. ಈ ಹುಕ್ಕುಂ ಅಂಚೆ ವ ಅರಮನೆ ಇಲಾಖೆಯವರಿಗೆ ಲಗಾವಾಗಿರುವದಿಲ್ಲ.
3. ಈ ಹಣವು ಮಾಮೂಲ್ ತಲಬುದಾರ್, ಬರಾವರ್ದುಗಳಲ್ಲಿ ದಾಖಲ್ಮಾಡತಕ್ಕದ್ದು.

ನಂ. 261. ತಾರೀಖು 25ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟು ಆಫಿಸಿಯೇಟಿಂಗ್ ಪೊಲೀಸ್ ಅ|| ಕಮಿಷನರ್ ಮೆ|| ವೆಂಕಟವರದಯ್ಯಂಗಾರು 1872ನೇ ಇಸವಿಯ Xನೇ ನಂಬರ್ ಕ್ರಿಮಿನಲ್ ಪ್ರೊಸಿಡ್ಯೂರ್ ಆಕ್ಟಿನ 19ನೇ ಸೆಕ್ಷನ್ ಅನ್ವಯ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 262. ತಾರೀಖು 25ನೇ ಅಕ್ಟೋಬರ್ 1876.

ಅಸಿಸ್ಟೆಂಟ್ ಕಮಿಷನರ್ ಮೆ|| ಮಹಂಮದ್ ಅಲ್ಲೀಯವರು ಮೆ|| ಅಬ್ದುಲ್ ಖಾಧರ್ ಯವರಿಂದ 1876ನೇ ಅಕ್ಟೋಬರ್ 11ನೇ ಮುರ್ಕುಂ ಮಧ್ಯಾಹ್ನಾತ್ಪರ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಚಾರ್ಜನ್ನು ವಹಿಸಿದರು.

ನಂ. 263. ತಾರೀಖು 26ನೇ ಅಕ್ಟೋಬರ್ 1876.

ಇದರಡಿ ಬರುವ ವರ್ಗಾವರ್ಗಿಗಳು ಮಂಜೂರಾಗಿವೆ.

ಕವಲೇದುರ್ಗ ತಲ್ಲೂಕು ಅಮಲ್ದಾರ್ ತಿರುಮಲಾಚಾರ್ರು ಕೊಪ್ಪ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ಕೊಪ್ಪ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ರಾಮಚಂದ್ರರಾಯರು ಕವಲೇದುರ್ಗ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 264. ತಾರೀಖು 26ನೇ ಅಕ್ಟೋಬರ್ 1876.

6ನೇ ಗ್ರೇಡ್ ಅ|| ಕಮಿಷನರ್ ಮೆ|| ಶ್ರೀನಿವಾಸಯ್ಯಂಗಾರು ಇನಾಂ ಯಿಲಾಖೆಗೆ ಮೊಕರರ್ ಮಾಡಲ್ಪಟ್ಟು 1876ನೇ ಅಕ್ಟೋಬರ್ 19ನೇ ಮುರ್ಕುಂನಲ್ಲಿ ಬೆಂಗಳೂರಿಗೆ ತಲಪಿದ ಸಂಗತಿಯನ್ನು ರಿಪೋರ್ಟು ಮಾಡಿಯಿರುತ್ತಾರೆ.

ನಂ. 265. ತಾರೀಖು 26ನೇ ಅಕ್ಟೋಬರ್ 1876.

ಆಫಿಷಿಯೇಟಿಂಗ್ ಅ|| ಕಮಿಷನರ್ ಮೆ|| ಮಾದಯ್ಯನವರು 1876ನೇ ಅಕ್ಟೋಬರ್ 10ನೇ ಮುರ್ಕುಂನಲ್ಲಿ ಮೆ|| ಕೃಷ್ಣಸಾಮಿಮೊದಲಿಯಾರ್ರಿಂದ ತುಮಕೂರು ಡಿಸ್ಟ್ರಿಕ್ಟು ಟ್ರೆಜರಿ ವ ಜೇಯಿಲ್ ಚಾರ್ಜನ್ನು ವಹಿಸಿಯಿರುತ್ತಾರೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. ... ತಾರೀಖು 25ನೇ ಅಕ್ಟೋಬರ್ 187...

ಚೀಫ್ ಕಮಿಷನರ್ ಸಾಹೇಬರವರು ಅಪ್ಪಣೆ ಕೊಡಿಸುವದೇನಂದರೆ ಸನ್ 1...ನೇ ಇಸವಿ ಜುಲೈ 10ನೇ ಮುರ್ಕುಂ 6ನೇ ನಂಬರ್ ಚೀಫ್ ಕಮಿಷನರವರ ಇಸ್ತಿಹಾರ್ ದಸೇಯಿಂದ ಮಜಾರ್ಮಾಡಲ್ಪಟ್ಟ ಮಡಿಕೇರಿ ಮುನಿಸಿಪಲ್ ಬೈಲಾನಿಬಂಧನೆಗಳ ಪೈಕಿ 35ನೇ ನಂಬರ್ ಬೈಲಾನಿಬಂಧನೆಯ ಅಮಲ್ ಮತ್ತೊಂದುಹುಕ್ಕುಂಕೊಡುವ ಪರಿಯಂತ ಮನ್ನಾ ಆಗತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಇಂಡ್ಯಗವರ್ನಮೆಂಟಿನವರಪರಿಂದ ಹೊರಟಿರುವ ಇಸ್ತಿಹಾರನಾಮೆಗಳು.

ಫಾರಿನ್ ಇಲಾಖಾ.

ಇಸ್ತಿಹಾರ್ ನಾಮೆ.

ಜನರಲ್.

ತಾರೀಖು 11ನೇ ಅಕ್ಟೋಬರ್ 1876.

ನಂ. 2206. G. ಬಹಲ್—ಮೈಸೂರು ಟರ್ವ ಮಾಜಿಸ್ಟ್ರೇಟ್ ಕರ್ನಲ್‌ರೆಂಟರ್ಯುವರು, ಫರಲೊ ರಜಾದ ಮೇಲೆ ಯಿರುವ ಮೇಜರ್ ಸ್ಟುವರ್ಟ್ ಯುವರಿಗೆ ಬದಲಾಗಿ, ಚಾರ್ಜ ತೆಗೆದುಕೊಂಡ ಲಗಾಯಿತು ಮೈಸೂರು ಚೀಫ್ ಕಮ್ಮಿಷನರವರ ಮಿಲಟೇರಿ.ಅಸಿಸ್ಟೆಂಟೆ ಕೆಲಸವನ್ನು ಆಕ್ಟಿಂಗ್ ತರೀಕ ನೋಡತಕ್ಕದ್ದು.

3ನೇ ಗ್ರೇಡ್ ಅಸಿಸ್ಟೆಂಟೆ ಕಮ್ಮಿಷನ್ನರ್ ಅಬ್ದುಲ್ ಖಾದರ್‌ಯುವರು, ಕರ್ನಲ್‌ರೆಂಟರ್ ಯುವರಿಗೆ ಬದಲಾಗಿ, ಚಾಜರ್ಜ ತೆಗೆದುಕೊಂಡ ತಾರೀಖು ಲಗಾಯಿತು ಮೈಸೂರು ಟರ್ವ ಮೇಜಸ್ಟ್ರೇಟ್ ಕೆಲಸವನ್ನು ಆಕ್ಟಿಂಗ್ ತರೀಕ ನೋಡತಕ್ಕದ್ದು.

T. H. THORNTON,
Offg. Secy. to the Govt. of India.

ಪಬ್ಲಿಕ್ ವರ್ಕ್ಸ್,

ತಾರೀಖು 9ನೇ ಅಕ್ಟೋಬರ್ 1876.

ನಂ. 411. ಇಂಜಿನಿಯರ್ ಅಪ್ರೆಂಟಿಸ್ ಮಿಸ್ಟರ್ ವಾಸುದೇವ್ ಹರಿಕರ್ಶ್ವಿಯುವರನ್ನು ಸನ 1876ನೇ ಇಸವಿ ಶಪ್ಟಂಬರ್ 5ನೇ ತಾರೀಖು ಲಗಾಯಿತು 3ನೇ ಗ್ರೇಡ್ ಅಸಿಸ್ಟೆಂಟೆ ಇಂಜಿನಿಯರ್ ಹೊದೇಗೆ ಮೈಸೂರು ಚೀಫ್ ಕಮ್ಮಿಷನ್ನರವರು ಮಾಡಿದ ಬಡತಿಯು ಕಾಯಂ ಮಾಡ...

W. A. CROMMELIN, *Major—Genl.*, R. E.,
Offg. Secy. to the Govt. of India.

ಹೋಂ ಡಿಪಾರ್ಟಮೆಂಟ್.

ಇಸ್ತಿಹಾರ್ ನಾಮೆ,

ಪಬ್ಲಿಕ್ ವರಕ್ಸ್.

ಸಿಂಲಾ ತಾರೀಖು 16ನೇ ಅಕ್ಟೋಬರ್ 1876.

ನಂ. 1607.—ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್ ಸಾಹೇಬರವರು ಇದರಿಂದ ತಿಳಿಸುವದೇನಂದರೆ,—ಗವರ್ನರ್ ಜನರಲ್ ಸಾಹೇಬರವರು ಇಂಡ್ಯ ದೇಶದ ಕೆಲವು ಪ್ರದೇಶಗಳಿಗೆ ತಮ್ಮ ಸಂಗಡ ಮಂತ್ರಾಲೋಚಕರಿಲ್ಲದೆಯೇ ಹೋಗಿ

ನೋಡಿ ಬರಬೇಕಾದದ್ದು ಆವಶ್ಯಕವಾಗಿರುತ್ತೆ. ಇಂಡಿಯನ್ ಕೌನ್ಸಲ್ಸ್ ಆಕ್ಟಿನ 6ನೇ ಸೆಕ್ಷನಿನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ನಡಿಸುವದರಲ್ಲಿ ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್‌ಯವರು, ಹಾಗೆ ಪರಸ್ಥಳಕ್ಕೆ ಹೋದ ಕಾಲದಲ್ಲಿ ಮೇಜರ್ ಜನರಲ್, ದಿ ಆನರೆಬಿಲ್ ಸರ್ ಹೆಚ್ ಡಬ್ಲ್ಯೂ ನಾರ್ಮನ್ ಕೆ. ಸಿ. ಬಿ. ಯವರನ್ನು ಸದರೀ ಕೌನ್ಸಲ್ಲಿನ ಪ್ರೆಸಿಡೆಂಟರಾಗಿ ಇದರಿಂದ ನಿಯಮಿಸುತ್ತಾರೆ, ಮತ್ತು ಹಾಗೆ ಪರಸ್ಥಳ ಹೋದಾಗ ಸದರೀ ಮಂತ್ರಾಲೋಚಕ ಸಭೆ ಸೇರುವ ಸಮಯಗಳಲ್ಲಿ ಗವರ್ನರ್ ಜನರಲ್ಲವರು ನಡಿಸತಕ್ಕ ಅಧಿಕಾರಗಳು, ಯಾವ ಕಾನೂನ್ ಯಾ ಹುಕ್ಕುಂ ನಾಮೆಯನ್ನಾಗಲಿ ವಿಕ್ಟೋರಿಯ 67ನೇ ಚಾಪ್ಟರ್, 24 ವ 25ನೇ ಪ್ರಕರಣಗಳಲ್ಲಿ ವಿಧಿಸಲ್ಪಟ್ಟ ಮೇರೆ ಅಂಗೀಕರಿಸುವದು, ಯಾ ತಮ್ಮ ಅಂಗೀಕಾರವನ್ನು ವಾಪಸ್ ತೆಗದುಕೊಳ್ಳುವದು, ಅಥವಾ ಮಹಾರಾಣೀಯವರ ತಾತ್ಪರ್ಯಕ್ಕಾಗಿ ಉಳಿಸುವದು ಯಿಂತಾದ್ದು ಹೊರತು. ಅನ್ಯಥಾ ಸದರೀ ಮೇಜರ್ ಜನರಲ್ ದಿ ಆನರೆಬಿಲ್ ಸರ್ ಹೆಚ್ ಡಬ್ಲ್ಯೂ ನಾರ್ಮನ್ ಯವರಿಗೆ ಕೊಡಲ್ಪಡತಕ್ಕದು; ಮತ್ತು ಗವರ್ನರ್ ಜನರಲ್ಲವರು, ಮಂತ್ರಾಲೋಚಕ ಸಭೆಯೊಳಗಣ ಸದರೀ ಗವರ್ನರ್ ಜನರಲ್‌ಯವರಿಂದ ನಡಿಸಲ್ಪಡಬಹುದಾದ ಅಧಿಕಾರಗಳ ಪೈಕೀ ನ್ಯಾಯ ನಿಬಂಧನೆಗಳನ್ನು ಕಲ್ಪಿಸುವ ಅಧಿಕಾರಗಳು ಹೊರತು ಮಿಕ್ಕ ವಿಷಯವನ್ನಾಗಲಿ ಯಾವದನ್ನಾಗಲಿ, ಸದರೀ ಗವರ್ನರ್ ಜನರಲ್ಲವರು ಅದನ್ನು ನಡಿಸುವದು ಆವಶ್ಯಕವೆಂದು ಯೆಣಿಸುವ ಪ್ರತಿ ಸಂಗತಿಯಲ್ಲಿಯೂ ನಡಿಸುವಂತೆ ಸದರೀ ಬಗ್ಯೇನೇ ಮಾಡಲ್ಪಟ್ಟ ಈ ಹುಕ್ಕುಂನಿಂದ ಅಧಿಕಾರಕೊಡಲ್ಪಟ್ಟಿರುತ್ತಾರೆ.

ಮಂತ್ರಾಲೋಚಕ ಸಭೆಯೊಳಗಣ, ಘನವನ್ನು ಹೊಂದಿದ ಇಂಡ್ಯ ಗವರ್ನರ್ ಜನರಲ್ ಸಾಹೆಬರವರ್ತ

"ಬಮೋಜೀಬ್ ಹುಕ್ಕುಂ,"

ARTHUR HOWELL,
Offg. Secy. to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 28, ಸಣ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 27ನೇ ಅಕ್ಟೋಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೬೧	ಬಸವೇಗೌಡ ..	ಶಿದ್ದೇಗೌಡ ..	೨೮ನೇಅಕ್ಟೋಬರ್
ಸಿ. ಅ. ೬೨	೩. ಪುಟ್ಟೇಗೌಡ ..	ಟ. ಪುಟ್ಟೇಗೌಡ ..	ಡಿಟೋ
ಕ್ರಿ. ಅ. ೫೯	ಕೈದಿ ಕುಂಟೂ ವಗೈರೆ ..	.. ..	ಡಿಟ್ಟೋ.
ಕೊ. ಸ್ಪಿ. ಅ. ೧೧	ಮೋದೈಯ ..	ಮಾದೈಯ ವಗೈರೆ ..	೩೧ನೇ ಅಕ್ಟೋಬರ್,
ಕೊ. ಸ್ಪಿ. ಅ. ೧೮	ಶಿವೈಯ ..	.. ..	ಡಿಟೋ
ಕೊ. ಸ್ಪಿ. ಅ.	ಜೊಮ್ಮಾ ..	.. ..	ಡಿಟೋ
ಫೂಟ್ ಸ್ಪಿ. ಅ. ೧೦	ವೇಂಕಟರಾಜೇಅರಸು ..	ಸುಬ್ಬಶೆಟ್ಟಿ ..	೨ನೇ ನವಂಬರ್
ಫೂಟ್. ಸ್ಪಿ. ಅ. ೧೨	ಶೀತಮ್ಮ ..	ಲಿಂಗೇಗೌಡ ..	ಡಿಟೋ
ಕ್ರಿ. ಅ. ೫೮	ಈರೋಬಾ ..	.. ..	ಡಿಟೋ
ಕ್ರಿ. ಅ.	ಮಹಂಮದ್ ವಸಮ್ಮಾ ..	.. ..	೬ನೇ ನವಂಬರು
ಸ್ಪಿ. ಅ. ೫೩	ಪುಮ್ಮಾಜಿ ..	ಸುಬ್ಬಣ್ಣಾ ವಗೈರೆ ..	೮ನೇ ನವಂಬರು
ಸ್ಪಿ. ಅ. ೬೪	ಕಪನೀಪತ್ಯೆಯ ..	ನಂಜಮ್ಮ ..	ಡಿಟೋ
ಸ್ಪಿ. ಅ. ೬೩	ಮೆ॥ ಮರಗಲರ್ ವಗೈರೆ ..	ಗಂಗಾಧರಶೆಟ್ಟಿ ..	೧೧ನೇ ನವಂಬರು
ಸ್ಪಿ. ಅ. ೬೫	ಚಿಕ್ಕ ಹೊನ್ನೇಗೌಡ ..	ಲಕ್ಷ್ಮೈಯ ವಗೈರೆ ..	೧೪ನೇ ನವಂಬರು
ಸ್ಪಿ. ಅ. ೬೬	ಶ್ರೀನಿವಾಸೈಯ ..	ಅಳಶಿಂಗ್ರೈಯ ..	ಡಿಟೋ
ಸ್ಪಿ. ಅ. ೬೭	ವೆಂಕಟರಮಣೈಯ ..	ತಂಮೈಯ ವಗೈರೆ ..	೨೧ನೇ ನವಂಬರ್

J. D. Gordon,
Judl. Commr.

ಇನಾಂ ಇಲಾಖಾ.

ರ್ಷ 1876ನೇ ಇಸವೀ ಶಪ್ಟಂಬರ್ 30ನೇ ಮುಕ್ಕಾಮಿಗೆ ಆಖೈರಾಗುವ ಶೀ ಮಾಹೇಯಲ್ಲಿ ಸರ್ಕಾರಣವಾಗಿ ರದ್ದು ಮಾಡಲ್ಪಟ್ಟ ಟೈಟಲ್ ಡೀಡ್‌ಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಎ.	ಬೀಜವರಿ. ಖ. ಕೊ. ಪ.	ಕಂದಾಯ. ರೂ. ಆ. ಪೈ.	ಜೋಡೀ. ರೂ. ಆ. ಪೈ.	ಜೋಡೀ ಶೇರಿ ದಕ್ವಿಟರೆಂಟ್. ರೂ. ಆ. ಪೈ.	ಮುಜರಾಇ ಮೊಬಲಗ್. ರೂ.ಆ.ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ಮುಲ್ಕೀ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಬೇತಮಂಗಲ	ಜೋಡೀಜಂಗಮನಹಳ್ಳಿ	ಬೇತಮಂಗಲದ ಸಂಪಂಗಿರಾಮಯ್ಯ	ಬ್ರಹ್ಮಾದಾಯ	..	0 0 11½	0 5 0	0	0 2 0	0	36584-2008	ಇನಾಂದಾರರು ಒಂದು ವರುಷದೊಳಗಾಗಿ ಟೈಟಲ್ ಡೀಡ್‌ಗಳನ್ನು ತೆಗದುಕೊಳ್ಳಲಿಕ್ಕೆ ತಪ್ಪಿದ್ದರಿಂದ	ನಂಬರು 251 ತಾರೀಖು 10ನೇ ಜುಲೈ 1876.
ಡಿಟೋ	ಹುಣಕೊಂಡ	ಮಾದಮುತ್ತನಹಳ್ಳಿ ನಾರಣಪ್ಪಾ, ನೀಲಕಂಠಪ್ಪಾ	ಡಿಟೋ	..	0 14 7	17 11 4	10 7 7	14 0 0	0	36280-2078		
ಮುಳಬಾಗಲ್	ಕೆರೆಸಾಮಂಗಲ	ನಂಗಲೀರಘೋತ್ತಮಾಚಾರಿ	ಡಿಟೋ	..	0 4 0	3 3 3	0	1 8 0	0	33689	ಕ್ವಿಟರೆಂಟ್ ಪಾವತೀ ಮಾಡದ ಸಬಬ್ ಕೋಲಾರ ಡಿ|| ಡೆಪ್ಯೂಟಿ ಕಮ್ಮಿಷನರವರು ಇನಾಂ ಸರಕಾರಕ್ಕೆ ಸೇರಿಸಿಕೊಂಡರು	ನಂಬರ್ 293 ತಾರೀಖು 19ನೇ ಜುಲೈ 1876.
ಹೊಸಕೋಟೆ	ಜೋಡೀಗುಲಗುಟ್ಟಹಳ್ಳಿ	ಕಲ್ಲುಕುಂಟೆ ರಾಮಾಚಾರಿ ಮಗ 1 ಟಿ. ಕೃಷ್ಣಮಾಚಾರಿ, 2 ಡಿ|| ಶ್ರೀನಿವಾಸಾಚಾರಿ ಮಗ ಕೃಷ್ಣಮಾಚಾರಿ	ಡಿಟೋ	..	0	116 15 2	67 6 9	74 0 0	0	33153	ಈ ಇನಾಂಗಳಿಗೆ ಬದಲಾಗಿ ಹೊಸ ಜಮೀನುಗಳು ಕೊಡಲ್ಪಟ್ಟವು	ನಂಬರ್ 292 ತಾರೀಖು 19ನೇ ಜುಲೈ 1876.
ಶ್ರೀನಿವಾಸಪುರ	ನಗದೇಪಲ್ಲಿ	ಶ್ರೀನಿವಾಸಪುರದಬಾಲಜೋಯಿಸ 2 ಸೀತಾರಾಮ ಶಾಸ್ತ್ರಿ)	ಡಿಟೋ	..	0 5 0	4 1 2	0	2 0 0	0	30021	ಡಿಟೋ	ನಂಬರು 288 ತಾರೀಖು 19-7-76.
ಚಿಕ್ಕಬಳ್ಳಾಪುರ	ಕಳವಾರ	ಬೆಂಗಳೂರಿಂದ ಬಳ್ಳಾರಿಗೆ ಹೋಗುವ ರಸ್ತೆಯಲ್ಲಿ ಹಾರೋಬಂಡೇಬಳಿ ಹಾಕಿಯಿರುವ 113 ಮರಗಳುಳ್ಳ ಗುಂಡು ತೋಪಿನ ತತ್ಕಾಲದ ವಿಚಾರಣೆಕರ್ತರು	ಧರ್ಮಾದಾಯ	..	4 10 0	26 2 11	13 1 6	13 2 0	0	31483	ಇದಕ್ಕೆ ಬದಲಾಗಿ ಬೇರೆ ಒಂದು ಹೊಸ ಜಮೀನ್ ಕೊಡೋಣಾಯಿತು	ನಂಬರು 287 ತಾರೀಖು 19ನೇ ಜುಲೈ 1876.

ಚಿಕ್ಕಬಳ್ಳಾಪುರ	ಮುಜರಾಯಿ	ಚಿಕ್ಕಬಳ್ಳಾಪುರದ ಅಣ್ಣಯ್ಯಾಚಾರಿ	ಬ್ರಾಹ್ಮಾದಾಯ	..	0	0	0	0	7 8 0	11	ಮೊಬಲಗ್ ಜೀವಮಾನದ ವರಿಗೆ ಸಲ್ಲತಕ್ಕದ್ದಾಗಿ ಇನಾಂದಾರ ಮೃತಪಟ್ಟದ್ದರಿಂದ	ನಂಬರು 479 ತಾರೀಖು 27ನೇ ಶಪ್ಟಂಬರ್ 1876.
ಗುಮ್ಮನಾಯ್ಕನಪಾ||	ಬಾಗೇಪಲ್ಲಿ	ಬಾಗೇಪಲ್ಲಿ ಶ್ರೀನಿವಾಸಾಚಾರ್	ಡಿಟೋ	1·23	0	8 0 0	0	4 0 0	0	439		ನಂಬರು 286 ತಾರೀಖು 19ನೇ ಜುಲೈ 1876.
ಡಿಟೋ	ಬೀಳೂರ	ಚಿಕ್ಕಬಳ್ಳಾಪುರದ ವೆಂಕಟಾಚಾರ್ ಮತ್ತು ಎರಡುಮಂದಿ	ಡಿಟೋ	·20	0	2 2 11	0	1 0 0	0	865	ರಾಜೀನಾಮೆ ಕೊಟ್ಟದ್ದು	ನಂಬರ್ 357 ತಾರೀಖು 4ನೇ ಆಗಸ್ಟು 1876.
ಡಿಟೋ	ಬಿಳ್ಳೂರು	ಬಿಳ್ಳೂರುವೀರಭದ್ರಪ್ಪ	ಸರಾಪ್	·31	0	3 3 3	1 12 0	1 12 0	0	258		
ಚಿನ್ನಗಿರಿ	ಭೈರನಹಳ್ಳಿ	ಕೃಷ್ಣರಾಜಾಚಾರಿ	ಬ್ರಹ್ಮಾದಾಯ	2·48	0	2 5 10	1 1 0	1 4 0	0	387		ನಂಬರ್ 463,22ನೇ ಶಪ್ಟಂಬರ್ 1876.
ಕೋಲಾರ	ಕಲ್ಲಹಳ್ಳಿ	ಮಡಿವಾಳ ನಾರಣಪ್ಪ ಬೇರೆ ಇಬ್ಬರು	ಡಿಟೋ	..	0 6 12¼	9 1 9	0	4 8 0	0	31234	ಡಿಟೋ.	ನಂ. 462 ತಾ||22ನೇ ಶಪ್ಟಂಬರ್ 1876.
ಮಾಲೂರು	ಮಾಸ್ತಿ	ಮುನಿವೆಂಕಟ	ಡಿಟೋ	1·38	0	5 0 0	0	2 8 0	0	1406		ನಂ. 459 ತಾ||22ನೇ ಶಪ್ಟಂಬರ್ 1876.
ಹೊನ್ನಾಳಿ	ಕೋಡಿಕೊಪ್ಪ	ತತ್ಕಾಲಕ್ಕೆ ನ್ಯಾಯಮತಿಯಲ್ಲಿ ಹನುಮಂತದೇವರ ದೇವಸ್ಥಾನದ ವಿಚಾರಣೆ ಕರ್ತರು	ದೇವಾದಾಯ	·75	0	1 14 3	1 2 2	1 2 0	0	271		ನಂಬರ್ 466 ತಾರೀಖು 22ನೇ ಶಪ್ಟಂಬರ್ 1876.
ಸೊರಬ	ದೊರವಹಳ್ಳಿ	ಆನವಟ್ಟಿ ಸ್ವಾಮಿರಾವ್	ಬ್ರಹ್ಮಾದಾಯ	..	0	45 6 0	15 9 6	30 0 0	0	37291-45	ಕಂದಾಯವನ್ನೂ ಕ್ವಿಟ್ ರೆಂಟನ್ನೂ ತಗ್ಗಿಸಿ ನಂಬರ್ 2ನೇ ನಮೂನೆಇಂದ ಹೊಸ ಕ್ಎಸ್ಟ್ರಾಕ್ಟು ಕೊಡಲ್ಪಟ್ಟಿರುತ್ತೆ.	ನಂಬರ್ 461 ತಾರೀಖು 22ನೇ ಶಪ್ಟಂಬರ್ 1876.

ನಂ. 7. ತಾರೀಖು 6ನೇ ಅಕ್ಟೋಬರ್ 1876.

ಇನಾಂ ದಾರ್ರಿಗೆ ಯಿದರಿಂದ ತಿಳಿಸಲ್ಪಡುವದೇನಂದರೆ—ಈ ಪಾರ್ಶ್ವನಲ್ಲಿ ಕಂಡ ತಾಲ್ಲೂಕುಗಳಲ್ಲಿರುವ ಇನಾಮತಿಗಳಿಗಾಗಿ 950 ಆಡ್ ಯಿಂಟರಿಂ ಸರ್ಟಿಫಿಕೇಟ್‌ಗಳು ಬಟವಾಡೇ ಬಗ್ಗೆ 1876ನೇ ಅಕ್ಟೋಬರ್ 6ನೇ ಮಾರ್ಕುಂಸಲ್ಲಿ ಬಂಗಳೂರು ಕೋಲಾರ, ತುಮಕೂರು ವ ಕಡೂರು ಈ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಕಳುಹಿಸಲ್ಪಟ್ಟವು.

ಹೊಸಕೋಟೆ, ದೇವನಹಳ್ಳಿ, ನೆಲಮಂಗಲ, ಬಂಗಳೂರು, ಗೋರೀಬಿದನೂರು, ಶ್ರೀನಿವಾಸಪುರ, ಅಂಬಾಜಿದುರ್ಗ, ಮುಳಬಾಗಿಲ್, ಗುಮ್ಮನಾಯಿಕನಪಾಳ್ಯ, ಶಿಡ್ಲಘಟ್ಟ, ಬೇತಮಂಗಲ, ಚಿಕ್ಕಬಳ್ಳಾಪುರ, ಕೋಲಾರ, ಕೊರಟಗೆರೆ, ವ ಕೊಪ್ಪ.

ಅವರುಗಳು ಸದರೀ ಪ್ರಕಾರ ಮೇಲೆ ಕಂಡ ತಾಲ್ಲೂಕು ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸಗಳು ತಲಪಿದ ಮೇಲೆ ಐರ್ಜ ಸೆರ್ಟಿಫಿಕೇಟಗಳನ್ನು ತೆಗೆದುಕೊಳ್ಳುವ ಬಗ್ಗೆ ಹಾಜರ್ ಆಗತಕ್ಕದ್ದು. ಅಂತಾ ನೋಟಿಸ್‌ಗಳನ್ನು ವಿಳಂಬ ಮಾಡದೆ ಕೊಡತಕ್ಕದ್ದೆಂದು ಸದರೀ ಅಮಲ್ದಾರ್ರುಗಳಿಗೆ ಹುಕುಂ ಆಗಿರುತ್ತೆ.

ನಂ. 9. ತಾರೀಖು 25ನೇ ಅಕ್ಟೋಬರ್ 1876.

ಬಂಗಳೂರು ಡಿಸ್ಟ್ರಿಕ್ಟು ಕಾನಖಾನಹಳ್ಳಿ ತಾಲ್ಲೂಕಿನಲ್ಲಿ ಯಿರುವ ಇನಾಂಗಳ ಸಲುವಳಿ ವಿಚಾರಣೆಯೂ ಇನಾಂ ಸೆಟಲ್ ಮೆಂಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿಸ್ಟರ್ ಸೈಯದ್ ನಸೀರುದ್ದೀನಯವರಿಂದ ಹಾರೋಹಳ್ಳಿಯಲ್ಲಿ ನಡಿಸಲ್ಪಟ್ಟು 1876ನೇ ನವಂಬರ್ 15ನೇ ಮಾರ್ಕುಂನೊಳಗೆ ಷುರುವಾಗುವದು.

2. ಸದರೀ ತಾಲ್ಲೂಕಿನಲ್ಲಿರುವ ಇನಾಂಗಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ ರೂಬರೂ ಯಾ ತಮ್ಮ ಮುತಾಲ್ಲೀಕರ ಮೂಲಕ ಹಾಜರಾಗಿ ತಮ್ಮ ತಮ್ಮ ಹಕ್ಕು ದಾರೀಗಳನ್ನು ಕುರಿತು ವ್ಯವಹರಿಸಿಕೊಳ್ಳುವದಕ್ಕೂ ತಮ್ಮ ವಶದಲ್ಲಿರುವ ಸನ್ನದುಗಳು ವ ಯಿತರ ದಸ್ತಾವೇಜುಗಳನ್ನು ಹಾಜರ್ ಮಾಡಲಿಕ್ಕೂ ಯಿದರಿಂದ ತಾಕೀದ್ ಮಾಡಲ್ಪಟ್ಟಿರುತ್ತಾರೆ ಹಾಗೆ ಮಾಡದೆ ಯಿದ್ದ ಪಕ್ಷಕ್ಕೆ ಪ್ರಥಮತಃ ಇನಾಂಗಳು ಜಪ್ತೀಕೆಳಗೆ ಇರಲ್ಪಟ್ಟು ತರುವಾಯ ಬಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

ನಂ. 10. ತಾರೀಖು 25ನೇ ಅಕ್ಟೋಬರ್ 1876.

ಸರ್ 1876ನೇ ಅಕ್ಟೋಬರ್ 7ನೇ ಮಾರ್ಕುಂ ಮೈಸೂರು ಗೆಜೆಟ 2ನೇ ಭಾಗದ 92ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ, ಮಾಹೇ ಮಜಕೂರ್ 3ನೇ ಮಾರ್ಕುಂ 6ನೇ ನಂಬರ್ ಯಿಸ್ತಿಹಾರ್ ನಾಮೇಯುಯಿದರಿಂದ ರದ್ದು ಮಾಡಲ್ಪಟ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನ ಇನಾಂವಿಚಾರಣೆ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಮನಾಮಾಡಿಯಿರುತ್ತೆ.

R. A. Cole,
Supt. of Inam Settlements.

ಪೋಲೀಸ್ ಇಲಾಖಾ.

ತಾರೀಖು 24ನೇ ಅಕ್ಟೋಬರ್ 1876.

ಹಾಸನ ಡಿಸ್ಟ್ರಿಕ್ಟು ಸಬ್ ಇನ್ಸ್‌ಪೆಕ್ಟರ್ ರಂಗಯ್ಯಂಗಾರ್ರಿಗೆ ಮಾಹೇ ಮಜಕೂರು 10ನೇ ಮಾರ್ಕುಂ ಲಗಾಯತು ಕೊಡಲ್ಪಟ್ಟ ವೊಂದು ತಿಂಗಳ ಪ್ರಿವಿಲೇಜ್ ರಜಾವನ್ನು ಅವರು ಮಾಹೇ ಮಜಕೂರು 4ನೇ ತಾರೀಖು ಲಗಾಯತು ಉಪಯೋಗಿಸಿ ಕ್ಕೊಂಡು 19ನೇ ತಾರೀಖಿನಲ್ಲಿ ಕೆಲಸದಮೇಲೆ ಮರಳಿ ಹಾಜರಾದ್ದರಿಂದ ರಜಾ ಪೈಕೀ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

"ಹುಕ್ಕುಂ ಬಮೋಜೀಬ್,"
E. D. Gompertz,
Dy. Inspr. General of Police.

ಫಿನಾ೯ಷಿಯಲ್ ಇಲಾಖಾ.

ಶ್ಯಾನುಭೋಗ ವ ಪಟೇಲರ ತಲಬು ಬಗ್ಯೆ ಬಿಲ್ಲುಗಳು.

ನಂ. ತಾರೀಖು 23ನೇ ಅಕ್ಟೋಬರ್ 1876. ಸರ್ಕ್ಯುಲರ್ ನಂಬರ್ 1293.

ಡಿಪ್ಯುಟಿಕಮ್ಮಿಷನರ್ ಟ್ರೆಜರಿ ಆಫಿಸರ್ ವ ಅಮಲ್‌ದಾರ್ ಯಿವರುಗಳಿಗೆ ಸ೯ 1876ನೇ ಇಸವಿ ಶಪ್ಟಂಬರು 22ನೇ ತಾರೀಕ್ 6118—189ನೇ ನಂಬರ್ ಚೀಫ್ ಕಮ್ಮಿಷನರವರ ಪ್ರೊಸೀಡಿಂಗ್ಸ್ 10ನೇ ಕಲಂ ಅನುಸರಿಸಿ ಮೈಸೂರು ಶೀಮೆಯ ಡಿಪ್ಯುಟಿ ಅಕೌಂಟಂಟ್ ಜನರಲ್ ಯವರು ಡಿಸ್ಟ್ರಿಕ್ಟುಗಳ ಡಿಪ್ಯುಟಿ ಕಮ್ಮಿಷನರ್‌ಗಳನ್ನು ಕೇಳಿಕ್ಕೊಳ್ಳುವ ದೇನಂದರೆ- ಶ್ಯಾನುಭೋಗ ಪಟೇಲರಿಗೆ ಪ್ರತಿ ತಾಲ್ಲೂಕಿನಲ್ಲಿ ಸರಕಾರದಿಂದ ಅವರಿಗೆ ಸಲ್ಲತಕ್ಕ ತಲಬು ಬಗ್ಯೆ ತಪಶೀಲ್ ವಾರಾಗಿರುವ ವೊಂದು ಪಟ್ಟಿಯನ್ನು, ಅದರಲ್ಲಿ ಚೀಫ್ ಕಮ್ಮಿಷನರವರ ಸಾಂಕ್‌ಷ೯ ತಾರೀಕ್ ನಮೂದಿಸಿ, ಶ್ಯಾನುಭೋಗರಪಟ್ಟಿ ಸೀ ಮಾಹೇ ಪ್ರಕಾರವೂ ಪಟೇಲರ ಪಟ್ಟಿ ಸಾಲೀಯಾನಾ ಪ್ರಕಾರವೂ ಮುಂದಾಗಿ ತನಿಖೀ ಆಗತಕ್ಕ ಬಗ್ಯೆ ನಮ್ಮಲ್ಲಿಗೆ ಕಳುಹಿಸಿಕೊಡಬೇಕು.

ಈ ಪಟ್ಟಿಗಳು ತಾಲ್ಲೂಕು ಸಿಬ್ಬಂದೀ ಪಟ್ಟಿಯ ನಮೂನೇ ಪ್ರಕಾರ ತಯಾರ್ಮಾಡಲ್ಪಟ್ಟು "ಅವುಗಳ ಸಿರ್‌ನಾಮೆಯಲ್ಲಿ ಗ್ರಾಮ ನಾಕರರ ತಲಬುಗಳ ಪಟ್ಟಿ,, ಯಂಬದಾಗಿ ಬರಿಯಲ್ಪಡತಕ್ಕದ್ದು, ಮತ್ತು "ಆಯದ ರಿವಾಜು ಲುಕ್ಸಾನ್ ಬಗ್ಯೆ ಕಂಪೆನ್‌ಸೇಷ೯ ಯಾನೇ ಈಡು ಮೊಬಲಗ್" ಯಂಬ ಹೆಡ್ಡಿಗೆ ಯಿದುವರಿಗೂ ಖರ್ಚು ಬರಿಯಲ್ಪಡುತ್ತಿರುವದಕ್ಕೆ ಬದಲಾಗಿ ಖಜಾನೇ ಲೆಖಗಳಲ್ಲಿ "ಗ್ರಾಮ ನವಕರರ ತಲಬು" ಯಂಬ ಹೆಡ್ಡಿಗೆ ಖರ್ಚು ಬರಿಯಲ್ಪಡತಕ್ಕದ್ದು.

H. Hudson,
Ly. Acctt. General in Myscré.

ಪಬ್ಲಿಕ್ ವರ್ಕ್‌ಸ್ ಇಲಾಖಾ.

ತಾರೀಖು 19ನೇ ಅಕ್ಟೋಬರ್ 1876.

ಹೇಮಾವತಿ ಡಿವಿಜ೯ ಚಾನಲ್ ಡಿಸ್ಟ್ರಿಕ್ಟಿಗೆ ಸೇರಿದ ಸಬ್ ಸರ್ವೆಯರ್ ಬೆಂಜಮಿನ್ ನಾಯಿಡು ಯವರಿಗೆ ಅವರು ಉಪಯೋಗಿಸಿಕ್ಕೊಳ್ಳುವ ತಾರೀಕ್ ಲಗಾಯಿತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 19ನೇ ಅಕ್ಟೋಬರ್ 1876.

ಕಾವೇರಿ ಡಿವಿಜ೯ ಚಾನಲ್ ಕ೯ಸರ್ವೆ೯ಸಿಗೆ ಸೇರಿದ ಸಬ್ ಓವರ್‌ಸೀರ್ ರಾಮರಾಯರು 1876ನೇ ಯಿಸವಿ ಮೇ 5ನೇ ತಾರೀಕ್ ಲಗಾಯಿತು ಜೂ೯ 28ನೇ ತಾರೀಖುವರಿಗೆ ಬಗರ್ ತಲಬು ರಜಾ ಕೊಡಲ್ಪಟ್ಟಿದ್ದರು.

W. Chrystie, *Major*, R. E.,
Suptg. Engr. for Irrigation.

ತಾರೀಖು 21ನೇ ಅಕ್ಟೋಬರ್ 1876.

ಕೊಡಗು ಡಿವಿಜ೯ ಸಬ್ ಓವರ್‌ಶೀರ್ ಶ್ರೀನಿವಾಸ್ಯೆಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಕ್ ಲಗಾಯಿತು ಹನ್ನೆರಡು ದಿನಗಳ ಪ್ರಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

C. Bowen, *Captain*, R. E.,
Offg. Suptg. Engr. R. and B. Branch.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಹುಣಸೂರು,	4ನೇ	ನವಂಬರ್	1876	ಹೆಚ್ಚು ಕಡಮೆ 560 ಟ೯ಗಳ ವಜನಿ.
ಶ್ರೀರಂಗಪಟ್ಣ,	8ನೇ	,,	,,	
ಬೆಂಗಳೂರು,	1ನೇ	ಡಿಶಂಬರ್	,,	ಹೆಚ್ಚು ಕಡಮೆ 100 ಟ೯ಗಳು.
ಫ್ರೇಜರ್‌ಪೇಟೆ	18ನೇ	,,	,,	80 ,,

ಹರಾಜ್ ನಿಬಂಧನೆ—ಹರಾಜ್ ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರು ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗನ್ನು ಹರಾಜ್ ತಾರೀಖು ಮೊದಲು 90 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮುಕ್ಕಾಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋರೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋರೀಗಳಲ್ಲಿ ಯು ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋರೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟಿ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋರೀಯಬಗೆ ಡಿಪಾಜಿಟ ಸಲ್ಲಪೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ಕಾಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಪೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮುಕ್ಕಾಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಪೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ್, ಪೌಂಡ್, ಹಂಡ್ರೆಡ್ ವೆಯಿಟ್ ಟುಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain*,
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ತಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879—80,—1880–81, ಮತ್ತು 1881–82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೈಲ್ 1ನೇ ಮುಕ್ಕಾಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಡ್ ದರಖಾಸ್ತು ದಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮುಕ್ಕಾಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀ ನೋಟುಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್ ಮೆಂಟುಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60 ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ಆಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟನೊಳಗೆ 1877ನೇ ಏಪ್ರೈಲ್ 1ನೇ ಮುಕ್ಕಾಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮುಕ್ಕಾಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮುಕ್ಕಾಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನ್‌ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯವಿಲ್ಲದೆಯೇ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

ಬೆಂಗಳೂರು ವಾಟರ ಸಪ್ಲೈ ಬಾಬತು ನೀರು ಬರತಕ್ಕ ಮತ್ತು ಇದರಡಿ ಕಾಣಿಸಲ್ಪಟ್ಟ ಮೇರೆ ಲಾಟುಗಳಾಗಿ ವಿಂಗಡಿಸೋಣಾದ ಜಮೀನಿನಲ್ಲಿ ಬೆಳೆಯುವ ಹುಲ್ಲನ್ನು ಮೇಯಿಸುವ ಬಾಧ್ಯತೆಯು, ಬೆಂಗಳೂರು ಸರವೇರ್ನ ಕಚ್ಚೇರಿಯಲ್ಲಿ ಮಾಹೆ ಮಜಕೂರು 30ನೇ ಮುಕ್ಕಾಂ ಮಧ್ಯಾನ್ಹ 12 ಘಂಟೆಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1ನೇ ಲಾಟ	ಬೀಜವರಿ	350	ಎಕ್ರೇಗಳು	4ನೇ ಲಾಟ	ಬೀಜವರಿ	295	ಎಕ್ರೇಗಳು
2ನೇ ಡಿಟ್ಟೋ	,,	240	ಡಿಟ್ಟೋ	5ನೇ ಡಿಟ್ಟೋ	,,	325	ಡಿಟ್ಟೋ
3ನೇ ಡಿಟ್ಟೋ	,,	290	ಡಿಟ್ಟೋ				

ಹರಾಜು ನಿಬಂಧನೆಯು ಇತರ ತಪಸೀಲುಗಳು ಸರವೇರ್ನರನ್ನು ಕೇಳಿ ತಿಳಿದುಕೊಳ್ಳತಕ್ಕದ್ದು.

Notice of an application by Siddappa for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮೀಷನರವರ ಕೋರ್ಟಿನಿಂದ.

ಸನ 1876ನೇ ಯಿಸವಿ ಶಿವಿಲ್ ಮಿಸಿಲೇನಿಯಸ್ ನಂಬರ 76.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ದೊಡ್ಡಬಳ್ಳಾಪುರದ ತಾಲ್ಲೂಕು ಹನಿಯೂರು ಗ್ರಾಮದಲ್ಲಿ ಯಿರುವ ಶಿದ್ದಪ್ಪ ನೆಂಬವನು ತನ್ನ ತಂದೆ ದೊಡ್ಡಮಾರೇಗೌಡನ ಲೇಣೆ 654 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ ಸನ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ನವಂಬರು ತಿಂಗಳು 13ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ಬತಾರೀಖು 13ನೇ ಮಾಹೇ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ಬೆಂಗಳೂರು.

Notice of an application by Thirthagiraiya for a certificate under Act XXVII of 1860.

ಸನ 1876ನೇ ಇಸವಿ ಸಿವಿಲ್ ಮಿಸಲೆನಿಯಸ್ ನಂಬರ 79.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಚಿಕ್ಕಪ್ಯಾಟೆಯಲ್ಲಿ ಯಿರುವ ತೀರ್ಥಗಿರ್ಯೆಯನುತನ್ನ ಷಡ್ಡಕರಾದ ಆ|| ಕ|| B. ತಲುಲೆ ಕೃಷ್ಣೈಯನವರ ಲೇಣೆ 5 16—2—1 ಪೈಯನ್ನು ಬರಮಾಡಿಕೊಳ್ಳತಕ್ಕ ಬಗ್ಯೆ ಸನ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ನವಂಬರು ತಿಂಗಳು 14ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 15ನೇ ಮಾಹೇ ಅಕ್ಟೋಬರ 1876ನೇ ಇಸವಿ.

Notice of an application by Kannasami for a certificate under Act XXVII of 1860.

1876ನೇ ಇಸವಿ ಶಿವಿಲ್ ಘೂಟ ಮಿಸಲೇನಿಯಸ್ ನಂಬರ 80.

ಯಿದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ನಗರತ ಪ್ಯಾಟೆಯಲ್ಲಿಯಿರುವ ಘಾವತೀ ಅವಲಕ್ಕಿ ನರಸಿಂಹೈಯನ ಮೊಂಮಗ ಕನ್ನಸಾಮಿಯು ತನ್ನ ಅಜ್ಜ ನರಸಿಂಹೈಯನ ಲೇಣೆ 2000 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ ಸನ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ನವಂಬರು ತಿಂಗಳು 21ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice of an application by Dasa Naik for a certificate under Act XXVII of 1860.

ಸನ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ 77.

ಯಿದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಕಮಾಡಿ ದೇವಣ್ಣನ ಪ್ಯಾಟೆಯಲ್ಲಿ ಯಿರುವ ಧಾಸನಾಯಕನು ತನ್ನ ತಂದೆ ಹನುಮಂತನಾಯಕನ ಲೇಣೆ 900 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ ಸನ 1860ನೇ ಇಸವಿ

27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ನವಂಬರು ತಿಂಗಳು 22ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice of an application by Balaiya for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 81.

ಯಿದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,— ಮಾಗಡಿ ತಾಲ್ಲೂಕು ತಿರುಮಲೆಯಲ್ಲಿ ಯಿರುವ ಬಾಲೈಯನು ತನ್ನ ತಂದೆ ವೆಂಕಟಕೃಷ್ಣೈಯನ ಲೇಣೆ 500 ರೂಪಾಯಿ ಬರವಾಡಿಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ನವಂಬರು ತಿಂಗಳು 20ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 20ನೇ ಮಾಹೇ ಅಕ್ಟೋಬರ 1876ನೇ ಇಸವಿ.

L. RICKETTS,
Offg. Dy. Commr.

KOLAR DISTRICT.

Notice of sale of lac contract for 5 years.

ಕೋಲಾರ ಡಿಸ್ಟ್ರಿಕ್ಟ ಡೆ|| ಕಮ್ಮಿಷನರವರ ಕಚ್ಚೇರಿಯಿಂದ.

ಯಿದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧವಾಗಿ ತಿಳಿಯಪಡಿಸುವದೇನಂಧರೆ,—3 ಸಾಲಿಗೋಸ್ಕರ ಗುತ್ತಿಗೆ ಕೊಟ್ಟಿದ್ದ ಡಿಸ್ಟ್ರಿಕ್ಟ ಮಜಕೂರು ಅರಗಿನ ಯಿಜಾರೆಯು 1877ನೇ ಇಸವಿ ಮಾರ್ಚಿ 31ಕ್ಕೆ ಪೂರೈಸುತ್ತೆ.

ಮುಂದೆ 5 ವರುಷದ ಗುತ್ತಿಗೆ ಕೊಡತಕ್ಕದ್ದೆಂದು ಚೀಫ್ ಕಮ್ಮಿಷನರ್ ಸಾಹೆಬರವರು ಮಾಹೇ ಗುಜಸ್ತಾ ಶಪ್ಟಂಬರು 29ನೇ ಮರ್ಕುಂ 6429—111ನೇ ನಂಬರ್ ಆರ್ಡರ್ ಮಾಡಿಯಿದ್ದಾರಾದ್ದರಿಂದ ಐಯಿಂದ ಸಾಲ್ ಲಾಗಾಯಿತು ಅಂದರೆ ಸರ್ 1877ನೇ ಇಸವೀ ಏಪ್ರಲ್ ಗುರ್ರೇಲಾಗಾಯಿತು 1882ನೇ ಯಿಸವೀ ಮಾರ್ಚಿ ಆಖೈರುವರಿಗೆ ಡಿಸ್ಟ್ರಿಕ್ಟಿನುಳೆ ಪಂಚಸಾಲ ವಟ್ಟು ಯಿಜಾರೆ ಕೊಡಲ್ಪಡುತ್ತೆ.

ಈ ಬಾಬಿನ ಯಿಜಾರೆ ಮಾಡುವದಕ್ಕೆ ಮನಸ್ಸುವುಳ್ಳಂಥಾವರು ಮೇಲೆ ಕಂಡ 5ಸಾಲ್ ಗುತ್ತಿಗೆ ಸಾಲ್‌ವಾರ್ ಮೊಬಲಗು ನಮೂದುನಿಂದ ದರಖಾಸ್ತು ಬರದು ಮೊಹರುಮಾಡಿ ಲಕ್ಕೋಟೆ ಮೇಲೆ ಫಲಾಣೆಯವನ ಅರಗಿನ ಇಜಾರೇ ದರಖಾಸ್ತು ಯೆಂದು ಸ್ಪಷ್ಟವಾಗಿ ತಿಳಿಯುವಂತೆ ಬರದು 1877ನೇ ಇಸವಿ ಮಾರ್ಚಿ ಗುರ್ರೇವಳಗಾಗಿ ಡಿಸ್ಟ್ರಿಕ್ಟ ಆಫೀಸಿಗೆ ಕಳುಹಿಸಬೇಕು ಈ ಪ್ರಕಾರ ಬರದ ದರಖಾಸ್ತುಗಳನ್ನ ಅದೇ ಮಾರ್ಚಿ 5ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟ ಕಚೇರಿಯಲ್ಲಿ ನಮ್ಮ ರೂಬರೂ ವಡದು ನೋಡಿ ಜಡದರಖಾಸು ಮಂಜೂರು ಮಾಡುವದೇ ಆಗಲಿ ಪೋಟಾಪೋಟೀಯಿಂದ ಫೈಸಲ್ ಮಾಡುವದೇ ಆಗಲಿ ಡಿಪ್ಯುಟಿ ಕಮ್ಮಿಷನರ ಸಾಹೇಬರವರಿಗೆ ಯುಕ್ತ ಕಂಡುಬಂದಂತೆ ಹುಕುಂ ಮಾಡುತ್ತಾರೆ.

ಸರ್ವೇಸಟಲ್‌ಮೆಂಟ ಆದ ತಾಲ್ಲೂಕುಗಳ ಯಿಜಾರೇ ಮೊಬಲಗಿನ ಮ್ಯಾಲೆ ರೂಪಾಯಿ 1ಕ್ಕೆ 1ಆಣೆ ಮೇರಿಗೂ ಸಟಲ್ ಆಗದೆ ಯಿರುವ ತಾಲ್ಲೂಕುಗಳ ಯಿಜಾರೇ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಅರ್ಧಾಣೆ ಮ್ಯಾರಿಗೂ ಲೋಕಲ್ ಶೆಸ್ ಕೊಡಬೇಕು.

ಮಂಜೂರು ಮಾಡಲ್ಪಟ್ಟ ದರಖಾಸ್ತುದಾರನು ತಕ್ಷಣ 2ಖಿಸ್ತಿನ ಹಣ ಠೇವಣೀ ಯಿಡಬೇಕು ಬಾಕೀ ಖಿಸ್ತುಗಳ ಮೊಬಲಗಿಗೆ ಮಾತಬರ್ ಜಾಮೀನಿ ಕೊಡಬೇಕು ಯಿದಕ್ಕೆ ತಪ್ಪಿದರೆ ದುಸರಾ ಹರಾಜು ಮಾಡಲ್ಪಟ್ಟೀತು ಅದರಲ್ಲಿ ಲುಕ್ಸಾನ್ ಬಂದರೆ ಆ ಲುಕ್ಸಾನಿಗೆ ಠೇವಣೀ ಮತ್ತು ಜಾಮೀನಿ ಕೊಡದೆ ತಪ್ಪಿದವನಿಂದ ವಸೂಲ್ ಮಾಡಲಾಧೀತು.

ಯಿಜಾರೇ ಮೊಬಲಗ್ಯೆ ತಕ್ಕಷ್ಟು ಸ್ಟಾಂಪಿನಲ್ಲಿ ದಸ್ತೂರು ಅನುಸರಿಸಿ ತಪ್ಶೀಲ್‌ವಾರು ಮುಚ್ಚಳಿಕೆ ಬರದುಕೊಡಬೇಕು ಮುಚ್ಚಳಿಕೆ ಷರತ್‌ಪ್ರಕಾರ ಖಿಸ್ತಿನ ಹಣ ಆಯಾ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಪಾವತೀ ಮಾಡಬೇಕು ತಪ್ಪಿದರೆ ರೋಜೀನಾ ರೂಪಾಯಿ 1ಕ್ಕೆ ಅರ್ಧಕಾಸಿನ ಮ್ಯಾರಿಗೆ ಬಡ್ಡಿ ವಸೂಲ್ ಮಾಡಲಾಧೀತು ಅಥವಾ ಪುನಃ ಹರಾಜು ಹಾಕಿ ಅದರಿಂದ ವುಂಟಾಗುವ ಲುಕ್ಸಾನಿಗೆ ಗುರಿ ಮಾಡಲಾಧೀತು.

ಚಾಲ್ತಿ ಇಸವಿ ಅಂದರೆ 1876—77ನೇ ಇಸವಿ ಯಿಜಾರೇ ಮೊಬಲಗು 612—12—0.

ಬತಾರೀಖು 12ನೇ ಮಾಹೆ ಅಕ್ಟೋಬರ ಸರ್ 1876ನೇ ಇಸವಿ ಮೊಕ್ಕಾಂ ಕೋಲಾರ.

B. KRISHNAIENGAR,
Dy. Commr.

TUMKUR DISTRICT.

Notice of an application by Bhimanna for a certificate under Act XXVII of 1860.

ತುಮಕೂರು ಡಿ|| ಡೆ|| ಕಮಿಷ್ನರ ಕೋರ್ಟಿನಿಂದಾ.

ಯಿದರಿಂದಾ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ.—ಕೊರಟಗೆರೆ ತಾಲ್ಲೂಕು ಕಸಬಾ ಕೊರಟಗೆರೆ ಗ್ರಾಮದ ವಾಸಸ್ಥನಾಗಿದ್ದ ಫೌವತೀ ಯಾದ ಲಾಡ್ರ ಸುಬ್ಬಂಣ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 1,000 ರೂಪಾಯಿಗಳು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರಟಫಿಕೇಟ ಅಪೇಕ್ಷಿಶಿ, ಯಿವನ ತಮ್ಮ ಭೀಮಣ್ಣಾ ಯಂಬುವನು ದಾಖಲ್ ಮಾಡಿ ಯಿರುವ ಅರ್ಜಿಯನ್ನು 1876ನೇ ಯಿಸವಿ ನವಂಬರ್ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

Notice of an application by Linganna for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಲಗೊಣ ಗ್ರಾಮದ ವಾಸಸ್ಥನಾಗಿ ಯಿದ್ದ ಫೌತೀಯಾದ ಕಬ್ಬಿಣದ ಬಸಪ್ಪಾ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 500 ರೂಪಾಯಿಗಳು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಅಪೇಕ್ಷಿಸಿ, ಯಿವನ ಮಗ ಲಿಂಗಣ್ಣಾ ಯಂಬುವನು ದಾಖಲ್ ಮಾಡಿ ಯಿರುವ ಅರ್ಜಿಯನ್ನು 1876ನೇ ಇಸವಿ ನವಂಬರ್ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 12ನೇ ಮಾಹೆ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ನೆಲಿಹಾಲ್ ತಾಲ್ಲೂಕು ತುಮಕೂರ್.

E. S. LUDLOW,
Offg. Dy. Commr.

MYSORE DISTRICT.

Notice of an application by Madamma for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ್ ಡೆ|| ಕ|| ಕೋರ್ಟಿನಿಂದ.

1876ನೇ ಇಸವಿ ಶಿವಿಲ್ ಫ್ರೂಟೆ ಮಿಸಲೇನಿಯಸ್ ನಂಬರ್ 68.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಗಂಡ ನೀರಮನೆ ಪುಟ್ಟಂಣನಿಗೆ ಬರಬೇಕಾದ ಮೈಸೂರ್ ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ ಕಮಿಷ್ನರವರ ಕೋರ್ಟು ಸ‍ನ 1875ನೇ ಇಸವೀ ಸ್ಮಾಲ್‌ಕಾಜ್ 201ನೇ ನಂಬರ್ ಡಿಕ್ರೀ ಮೊಬಲಗು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಫಿಕೇಟ ಆಗ ಬೇಕೆಂದು ಮೈಸೂರ್ ಹಳೇ ಅಗ್ರಹಾರದ ದೀವಟ ಬೀದಿಯಲ್ಲಿ ಯಿರುವ ಡಿಟೋ ನೀರಮನೆ ಪುಟ್ಟಂಣನ ಹೆಂಡತಿ ಮಾದಮ್ಮ ನೆಂಬುವಳು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ್ ತಿಂಗಳು 26ನೇ ತಾರೀಖಿನ ದಿವಿ 11 ಘಂಟೆಗೆ, ಹಿಯರಿಂಗ್ ಮಾಡುವದರಿಂದ ಇದರ ಮೇಲೆ ತಕರಾರ್ ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರ್‌ಗಳನ್ನು ಸ್ಥಿರಪಡಿಶಿ ಕೊಳ್ಳತಕ್ಕದ್ದಿಫೆ.

ತಾರೀಖು 4ನೇ ಅಕ್ಟೋಬರ್ ಸ‍ನ 1876ನೇ ಇಸವೀ ಮೊಕ್ಕಾಂ ಮೈಸೂರು.

Notice of an application by Muddanna for a certificate under Act XXVII of 1860.

1876ನೇ ಇಸವಿ ಸಿವಿಲ್ ಫ್ರೂಟೆ ಮಿ|| ನಂ· 69.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ' ಫವತೀಯಾದ ತನ್ನ ತಂದೆ ದೊಡ್ಡ ಮಲ್ಲಂಣನಿಗೆ ಬರಬೇಕಾದ 30,000 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಿನ ಪ್ರಕಾರ ಸರಟಫಿಕೇಟ ಆಗಬೇಕೆಂದು ಮೈಸೂರು ಹೊಸ ಅಗ್ರಾರದಲ್ಲಿ ಇರುವ ಮುದ್ದಂಣ ಯಿಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಈ ಮಾಹೆ ತಾರೀಖು

26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Nanjundaiya for a certificate under Act XXVII of 1860.

1876ನೇ ಇಸವೀ ಶಿವಲ್ ಮಿಸಲೇನಿಯಸ್ ನಂಬರ್ 70.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಘೌತಿಯಾದ ತನ್ನ ಹಕ್ಕಿ ರಂಗಪ್ಪನವರಿಗೆ ಬರಪೇಕಾದ 200 ರೂಪಾಯಿಗಳನ್ನು ವಸೂಲ್‌ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ ಆಗಪೇಕೆಂದು ಮೈಸೂರು ಬಸವನ ಮಹಲೆದಲ್ಲಿರುವ ನಂಜುಂಡೈಯ್ಯನು ಕೊಟ್ಟು ಯಿರುತಕ್ಕ ಅರ್ಜಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ಧರಿಂದಾ ಯಿದರಮೇಲೆ ತಕರಾರ್ ವುಳ್ಳವರು ಆತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೊರ್ಟು ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕದ್ದು.

Notice of an application by Parvatamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 71.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘೌತೀಯಾದ ತನ್ನ ಅಜ್ಜ ಭದ್ರಮ್ಮನಿಗೆ ಬರಪೇಕಾದ 450 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ ಸದರೀ ಭದಮ್ಮನ ಮೊಮ್ಮಗನಾದ ಪುಟ್ಟಬಸವನು ಮೈನರಾದ್ದರಿಂದ ಇವನ ಸೋದರತ್ತೆಯಾದ ಮೈಸೂರ್ ಕಿಲ್ಲೆದಲ್ಲಿರುವ ಕರೀಕಲ್ಲು ತೊಟ್ಟಿ ಪಾರ್ವತಮ್ಮನೆಂಬವಳು ತನ್ನ ಹೆಸರ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಫಿಕೇಟ್ ಆಗಬೇಕೆಂದು ಕೊಟ್ಟಿರತಕ್ಕ ಅರ್ಜಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರ ಮೇಲೆ ತಕರಾರ್ ಉಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದಿದೆ.

ತಾರೀಖು 3ನೇ ಅಕ್ಟೋಬರ್ 1876ನೇ ಇಸವಿ ಮೊ॥ ಮೈಸೂರು.

Notice of an application by Siddamma for a certificate under Act XXVII of 1860.

ಸರ್ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ॥ 72.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘೌತೀಯಾದ ತನ್ನ ಗಂಡ ಜೋರೇಗೌಡ ನೆಂಬುವನಿಗೆ ಬರಬೇಕಾದ 1,000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್‌ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಮೈಸೂರು ತಾಲ್ಲೂಕು ನವಾ ಷಹರ್ ಹೋಬಳಿ ನಾಗನಹಳ್ಳಿ ಗ್ರಾಮದಲ್ಲಿ ಯಿರುವ ಶಿದ್ದಮ್ಮ ನೆಂಬವಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ತಿಂಗಳು 7ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುತ್ತೆಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Lingamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಪೂಟಿ ಮಿಸಲೇನಿಯಸ್ ನಂಬರ್ 73.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘೌತೀಯಾದ ತನ್ನ ಮಗ ಚಲುವನೆಂಬುವನಿಗೆ ಬರಪೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್‌ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಗಂಜಾಮದಲ್ಲಿ ಯಿರುವ ವಕ್ಕಲಿಗರ ಲಿಂಗಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ಮಾಹೆ ತಾರೀಖು 7 ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Bettalingegauda for a certificate under Act XXVII of 1860.

ಸನ 1876ನೇ ಇಸವಿ ಶಿವಿಲ್ ಘೂಟಿ ಮಿಸಲೇನಿಯಸ್ ನಂ॥ 74.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ತಮ್ಮ ಚನ್ನೇಗೌಡನಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ, 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಗುಂಡ್ಲು ಕಸಬಾದಲ್ಲಿ ಯಿರುವ ಬೆಟ್ಟಲಿಂಗೇಗೌಡ ನೆಂಬವನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವೆಂಬರ ತಿಂಗಳು 7ನೇ ತಾರೀಖಿನಲ್ಲಿ ಹಿಯರಿಂಗ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿಧೆ.

Notice of an application by Arthegaudana Linganna for a certificate under Act XXVII of 1860.

ಸನ 1876ನೇ ಇಸವೀ ಸಿವಿಲ್ ಪೂಟಿ ಮಿಸಲೇನಿಯಸ್ ನಂ॥ 75.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತಿಯಾದ ತನ್ನ ಅಣ್ಣ ಅರ್ಕೇಗೌಡನ ದ್ಯಾವಣ್ಣ ನೆಂಬುವನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಶ್ರೀರಂಗಪಟ್ಟಣದಲ್ಲಿ ಯಿರುವ ಅರ್ಕೇಗೌಡನ ಲಿಂಗಣ್ಣನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವೆಂಬರ ಮಾಹೇ ತಾರೀಖು 7 ರಲ್ಲು ಹಿಯರಿಂಗ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 12ನೇ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ಮೈಸೂರು.

C. J. PEARSE,
Dy. Commr.

NAGAR DIVISION.

ನಂ. ತಾರೀಖು 19ನೇ ಅಕ್ಟೋಬರ 1876.

ನಗರಡಿವಿಜನ ಕಮ್ಮಿಷನ್ನರ ಕಚ್ಚೇರಿ ಹೆಡ್ ಅಕ್ಕೌಂಟೆಂಟ ರಾಮಚಂದ್ರರಾಯರು, ಬಡತೀ ಹೊಂದಿದ ಮೇಸ್ಟರ ಶ್ರೀನಿವಾಸೈಯಂಗಾರ್ರವರಿಗೆ ಬದಲಾಗಿ ನಗರಡಿವಿಜನ ರೆವಿನ್ಯೂ ಶಿರಸ್ತೇದಾರರಾಗಿ ಮೊಕರರ.

ಕಮ್ಮಿಷನ್ನರ ಕಚ್ಚೇರಿ ಮರಮ್ಮತ್ ಕ್ಲರ್ಕ ನಾರಾಯಣರಾಯರು ನಗರಡಿವಿಜನ ಹೆಡ್ ಅಕ್ಕೌಂಟೆಂಟರಾಗಿ ಅಜಮಾಯಿಷೀ ತರೀಕ್ ಮೊಕರರ.

ಚಿತ್ರದುರ್ಗ ಡಿಸ್ಟ್ರಿಕ್ಟು ಮರಮ್ಮತ್ ಕ್ಲರ್ಕ ರಂಗಸಾಮೈಯಂಗಾರು ಕಮ್ಮಿಷನ್ನರ ಆಫಿಸ ಮರಮ್ಮತ್ ಕ್ಲರ್ಕ ಕೆಲಸಕ್ಕೆ ಅಜಮಾಯಿಷೀ ತರೀಕ್ ಮೊಕರರ.

ಶಿವಮೊಗ್ಗಾ ಡಿಸ್ಟ್ರಿಕ್ಟು ಮರಮ್ಮತ್ ಕ್ಲರ್ಕ ವೀರರಾಘವಲುನಾಯಕರು ಚಿತ್ರದುರ್ಗ ಡಿಸ್ಟ್ರಿಕ್ಟು ಮರಮ್ಮತ್ ಕ್ಲರ್ಕ ಕೆಲಸಕ್ಕೆ ಅಜಮಾಯಿಷೀ ತರೀಕ್ ಮೊಕರರ.

ನಗರ ರೇಂಜ್ ಅಸಿಸ್ಟೆಂಟ ಇಂಜಿನಿಯರ ಆಫಿಸ ಹೆಡ್ ಕ್ಲರ್ಕ ಶ್ರೀನಿವಾಸರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟು ಮರಮ್ಮತ್ ಕೆಲಸಕ್ಕೆ ಅಜಮಾಯಿಷೀ ತರೀಕ್ ಮೊಕರರ.

ಕಡೂರು ಡಿಸ್ಟ್ರಿಕ್ಟು ರೆವಿನ್ಯೂ ಶಿರಸ್ತೇದಾರ ರಾಮಪ್ರಸಾದಯವರು ನಗರಡಿವಿಜನ ಕಮ್ಮಿಷನ್ನರ ಕಚ್ಚೇರಿ ರೆವಿನ್ಯೂ ಹೆಡ್ ಮುನಷೀ ಕೆಲಸಕ್ಕೆ ಅಜಮಾಯಿಷೀ ತರೀಕ್ ಮೊಕರರ.

ಕಮ್ಮಿಷನ್ನರ ಕಚ್ಚೇರಿ ರೆವಿನ್ಯೂ ಹೆಡ್ ಮುನಷೀ ಕೃಷ್ಣರಾಯರು ಕಡೂರು ಡಿಸ್ಟ್ರಿಕ್ಟು ರೆವಿನ್ಯೂ ಶಿರಸ್ತೇದಾರ ಕೆಲಸಕ್ಕೆ ಮೊಕರರ.

J. A. CAMPBELL,
Commissioner.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಚನ್ನಗಿರಿ ತಾಲ್ಲೂಕು ಡಿಸ್ಟ್ರಿಕ್ಟ ಫಂಡ ಮೇಸ್ತ್ರಿ ಕೇಶವೈಯನವರು ತಮ್ಮ ಜಿಮ್ಮೆಯಲ್ಲಿರುವ ಕಾಮಗಾರಿಗಳ ಮೇಲ್ವಿಚಾರಣೆಯಲ್ಲಿ ಅಜಾಗ್ರತೆ ತೋರಿಸಿದ ಸಬಬ್ 25 ರೂಪಾಯಿ ತಲಬಿನಿಂದ ದರ ಮಾಹಾ 20 ರೂಪಾಯಿ ತಲಬಿಗೆ ಕಂಪರಾ ಮಾಡಲ್ಪಟ್ಟಿರುತ್ತಾರೆ.

C. SOOB RAO,
For Offg. Dy. Commr.

KADUR DISTRICT.

Notice calling upon one Dvaraki Naik to present himself before the Sub-Registrar of Chikmagalur, and receive back a certain document presented by him for registration.

ಕಡೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರವರ ಆಫಿಸಿನಿಂದ.

ಡಿಸ್ಟ್ರಿಕ್ಟುಮಜಕೂರು ಚಿಕ್ಕಮಗಳೂರು ತಾಲ್ಲೂಕು ಕಸಬಾ ದೇವರಾಯ ಪೇಟೆಯಲ್ಲಿ ಇರುವ ಪಾಲಮಂಡ ಜಗಂನಾಥ ರಾಯಗೆ ಚಿಕ್ಕಮಗಳೂರು ಕೋಟೆಯಲ್ಲಿ ಯಿರುವ ತಾಲ್ಲೂಕು ಲೇಟ ದಫೇದಾರ್ ಚನ್ನ ನಾಯಕನ ಮಗ ದ್ವಾರಕೀ ನಾಯಕನು ತನ್ನ ಬಾಬತು ಚಿಕ್ಕಮಗಳೂರು ಕೋಟೆಯಲ್ಲಿ ಇರುವ ಹೆಂಚಿನ ಮನೆಯನ್ನು 50 ರೂಪಾಯಿಗೆ ಶುದ್ಧ ಖರೀದಿಗೆ ಕೊಟ್ಟು ಸರ್ 1874ನೇ ಯಿಸವಿ ಅಗೋಸ್ಟು ತಾರೀಖು 31ರಲ್ಲು ಬರಿಸಿಕೊಟ್ಟ ಖಾಫಾ ದಸ್ತೈವಜು ಸದರೀ ದ್ವಾರಕೀ ಇಂದ ಸರ್1874ನೇ ಯಿಸವೀ ಶಪ್ಟಂಬರು ತಾರೀಖು 5ರಲ್ಲು ರಿಜಿಸ್ಟ್ರೇಷರ್ ಬಗ್ಯೆ ಚಿಕ್ಕಮಗಳೂರು ಸಬರಿಜಿಸ್ಟ್ರಾರ ಆಫಿಸಿನಲ್ಲಿ ಹಾಜರಾಗಿ ಸದರೀ ಆಫಿಸ್ Iನೇ ರಿಜಿಸ್ಟರ್ ಬುಕ್ಕಿನಲ್ಲಿ ಸರ್1874—75ನೇ ಯಿಸವಿ ನಂಬರು 111ಕ್ಕೆ ರಿಜಿಸ್ಟರಾದ್ದು ವಾಪ್ಸಪಡಿಯುವ ಬಗ್ಯೆ ಸದರೀ ದ್ವಾರಕೀಗೆ ವಾಯಿದೆ ನೀ ನೋಟಿಸ ಜಾರೀ ಆಗಿ ಆವಾಯಿದೆ ಗುಜರಾಗಿ ಬಹಳದಿವಸವಾದಾಗ್ಯೂ ಅದ್ಯಾಪಿ ಹಾಜರಾಗದೆ 2 ವರುಷದ ಕಾಲ ಕಳದು ಇರುವಂತೆ ಚಿಕ್ಕಮಗಳೂರು ಸಬ ರಿಜಿಸ್ಟ್ರಾರ ನಂಬರು 131ನೇ ಇತ್ತಿಲ್ಲೆ ತಲ್ಪಿರುವದರಿಂದ ಸದರೀ ದ್ವಾರಕೀಯೇ ಆಗಲಿ ಅಥವಾ ಅವನಕಡೆ ಕ್ರಮವಾಗಿ ಅಧಿಕಾರ ಹೊಂದಿದ್ದ ಮುಖ್ತ್ಯಾರೀಕನೇ ಆಗಲಿ ಈ ತಾರೀಖು ಲಗಾಯಿತು ಯರಡು ತಿಂಗಳವಳಗಾಗಿ ಚಿಕ್ಕಮಗಳೂರು ಸಬ ರಿಜಿಸ್ಟ್ರಾರ ಮುಂದೆ ಬರದುಕೊಟ್ಟ ರಶೀತಿನಿಸೀ ಹಾಜರಾಗಿ ಜಿರ್ಜ ದಸ್ತೈವಜು ವಾಪಸ ಪಡಿಯಬೇಕು. ಆಮೇಲೆ ತೆಗದುಕೊಳ್ಳದಿದ್ದರೆ ರಿಜಿಸ್ಟ್ರೇಷರ್ ಆಕ್ಟು 83ನೇ ಸೆಕ್ಷರ್ ಅನುಸರಿಸಿ ಸದರೀ ತಮಸೂಕನ್ನು ನಾಶಪಡಿಸಲಾದೀತು. ವಾಯಿದೇನಂತರ ಬರುವ ಫಿರಿಯಾದ ಅಂಗೀಕರಿಸೋಣಾಗಲಿಕ್ಕೆ ಇಲ್ಲ.

ಕಡೂರು ಡಿ|| ರಿಜಿಸ್ಟ್ರಾರ ಆಫೀಸ್ ತಾರೀಖು 12ನೇ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

P. KRISHNA RAO,
Registrar.

Notice of an application by Rangamma for a certificate under Act XXVII of 1860.

ಕಡೂರು ಡಿ|| ಡಿ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಬೆಂಗಳೂರು ರಾಮಸ್ವಾಮಿ ಮೇಸ್ತ್ರಿ ಹೆಂಡತಿ ರಂಗಮ್ಮನು ಪಾತೀಪಟ್ಟ ತನ್ನ ಗಂಡನು ತರೀಕೆರೆ ತಾಲ್ಲೂಕಿನಲ್ಲಿ ಕಾಮಗಾರಿ ಕಂಟ್ರಾಕ್ಟು ವಗೈರೆ ಮಾಡುತಾ ಯಿದ್ದು ಅಲ್ಲಿ ಕೆಲವು ಲೇವಾದೇವಿ ನಡಸಿರುವ ಸಂಬಂಧ ಬರಬೇಕಾದ ರೂಪಾಯಿ 50 ವಸೂಲಮಾಡಿ ಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ತನ್ನ ಹೆಸರಿಗೆ ಸರಟಿಫಿಕೇಟ ಆಗಬೇಕೆಂದು ಮಿಸಲೇನಿಯಸ್ ಕೇಸ್ ನಂ. 10, 1876ಕ್ಕೆ ದಾಖಲ್ಮಾಡಿದ ಅರ್ಜಿಯು ಯಿದೇ ಇಸವಿ ನವಂಬರ 13ನೇ ತಾರೀಖಿನಲ್ಲಿ ಹಿಯರಿಂಗ ಮಾಡುವದು ನಿಶ್ಚಯಿಸಿ ಯಿರುವದ್ದರಿಂದ ಯಿದರ ಮೇಲೆ ತಕರಾರುದಾರ್ರು ಯಾರಾದರೂ ಯಿದ್ದರೆ ಆಕಾಲಕ್ಕೆ ಸರಿಯಾಗಿ ಈ ಕೋರ್ಟು ಮುಂದೆ ಹಾಜರ ಯಿದ್ದು ವ್ಯವಹರಿಸಬೇಕಾಗಿ ಯಿದೆ.

ಬತಾರೀಖು 12ನೇ ಅಕ್ಟೋಬರ ಸರ್ 1876ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

List of property stolen in the house of one Devegauda, Lakkuvalli Taluk, on the night of the 30th September 1876.

ಲಕ್ಕುವಳ್ಳಿ ತಾಲ್ಲೂಕು ಶಿರವಾಶಿ ಮಾಗಣಿ ಶಿರವಾಸಿ ಗ್ರಾಮದಲ್ಲಿರುವ ಗುಡುಸಮನೆ ದೇವೇಗವಡನ ಮನೆಯಲ್ಲಿ ಸರ್1876ನೇ ಇಸವಿ ಶಪ್ಟಂಬರು ತಾರೀಖು 30ನೇ ಶನಿವಾರದ ರಾತ್ರಿ 12 ಘಂಟೆ ಹೊತ್ತಿನಲ್ಲಿ ಕಳ್ಳರು ಮನೆವಳಗಿನ ಬಾಗಿಲು ತೆಗದು ವಳಗೆ ಹೊಕ್ಕು ತೆಗದುಕೊಂಡು ಹೋದ ಮಾಲು ತಪಸೀಲ ಪಟ್ಟಿ ಮುಂದೈ ಬರಸಿರುವದು.

ಮರದ ಸಂದೂಕದಲ್ಲಿದ್ದದ್ದು.

ಚಿನ್ನದ ತವಾಜಿ 1ಕ್ಕೆ 12 ವರಹಾತೂಕ ..	66	0
ತಗಡಿನ ಭಂಗಾರ 20 ವರಹಾ ತೂಕಕ್ಕೆ ..	110	0
ವರಹಾ ಬಣ್ಣದ ಬಾಬತು ಚಿನ್ನದ ಗಟ್ಟಿ 1ಕ್ಕೆ 22⅓ ವರಹಾ ತೂಕ	101	0
ಚಿನ್ನದಸರಿಗೆ ರವೆಗಳು 3ಕ್ಕೆ ಸಹಾ 6 ವರಹಾ ತೂಕ	30	0
ಚಿನ್ನದ ರಾಜಾರುಪಾಯಿ ಮಾದ್ರಿ 1ಕ್ಕೆ 3¼ವರಹಾ ತೂಕ	45	0
ವರಹಾ 9ಕ್ಕೆ	40	9
ಹೊನ್ನು 2ಕ್ಕೆ	4	8
ಹೊನ್ನು ತೂಕದ ಗಟ್ಟಿ 1ಕ್ಕೆ ..	4	8
ಚಿನ್ನದ ಹಣ 2ಕ್ಕೆ	1	0
ಚಿನ್ನದ ಬಾಬತು ಪುತ್ರಾಜಿನಾಟದ ವಾಲೆ ಜೊತೆ 1ಕ್ಕೆ 7 ವರಹಾ ತೂಕ	36	0
ಅಚಿನವಾಲೆ ಜೊತೆ 1ಕ್ಕೆ 5–6 ವರಹಾತೂಕವೊ ಗೊತ್ತಿಲ್ಲ ವಂದು ವಾಲೆ ಅರಗು ಕಾಣುತ್ತಿತ್ತು ಬುಡದಲ್ಲಿ ಹುವ್ವು ಹಚ್ಚಿ ಯಿರುತ್ತದೆ ..	27	0
ಚಿನ್ನದ ಚವರಿಕಟ್ಟು 1ಕ್ಕೆ 6ವರಹಾ ತೂಕ ಚೊಕ್ಕ ಭಂಗಾರ	27	0
ಚೊಕ್ಕ ಚಿನ್ನದ ಜಟ್ಟಿಮುರು ಜೊತೆ 2ಕ್ಕೆ 2 ವರಹಾ ತೂಕ	11	0
ಹಳೆವಂಟಿ ಜೊತೆ 1ಕ್ಕೆ 3ವರಹಾ ತೂಕ ಯಿದಕ್ಕೆ ಹಾಕಿರುವ ಮುತ್ತುಗಳ ಪೈಕಿ ವೊಂದೊಂದು ಪಡದು ಯಿರುತ್ತೆ ..	18	0
ಪಚ್ಚೆತಾಳಿ 3 ಚಿಂನದ ಪ್ರಥಮೆ ಯಿತ್ತು ಹೊರಗಡೆ ಬೆಳ್ಳಿಗುಂಡು ಯಿರುತ್ತೆ ಅರಗು ತುಂಬಿ ಯಿದೆ	5	0
ಜೋಡೆಳೆ ಗುಂಡಿನಸರ 1ಕ್ಕೆ ಗುಂಡುಗಳು 80 ಯಿದೆ ವರಹಾ ಬಣ್ಣ	45	0
ವರಹಬಣ್ಣದ ಚಿನ್ನದ ಗೋಲು ಜೊತೆ 1ಕ್ಕೆ 1½ ವರಹಾ ತೂಕ	6	12
ಡಿಟೋ ಬಾಬತು ಚಿನ್ನದ ಚೂರು 3ಕ್ಕೆ ..	13	8
ಜೋಡೆಳೆ ವಂಕಿ ಭಂಗಾರದ ಬಾಬತು 1ಕ್ಕೆ 20 ವರಹಾ ತೂಕ ಚೊಕ್ಕ	110	0
ಚಿನ್ನದ ಅಡ್ಡಿಕೆಸರ 1ಕ್ಕೆ ಗೆಜ್ಜೆ ಸುತ್ತಿರುತ್ತೆ 16 ವರಹಾ ತೂಕ	80	0
ಬೆಳ್ಳಿ ರಾಜಾ ರುಪಾಯಿಗಳು ಸದರೀ ಸಂದೂಕದಲ್ಲಿ ಯಿದ್ದದ್ದು	17	0
ರಾಜಾಅರ್ಧರೂಪಾಯಿ 4ಕ್ಕೆ ..	2	0
ಕುಂಫಣಿ ಅರ್ಧರೂಪಾಯಿ 2ಕ್ಕೆ ..	1	0
ಗಿಡ್ಡ ಕುಂಫಣಿ ಅರ್ಧರೂಪಾಯಿ 2ಕ್ಕೆ ..	1	0
ಹುಕುಂಫಣಿ ಅರ್ಧರೂಪಾಯಿ 4ಕ್ಕೆ ..	2	0
ಚಾಲ್ತಿ ಪಾವಲಿ 2ಕ್ಕೆ	0	8
ದೊಡ್ಡಾಣಿಗಳು 4ಕ್ಕೆ	0	8
ಚಿಕ್ಕ ಆಣಿಗಳು 3ಕ್ಕೆ	0	3
ಬೆಳ್ಳಿಬಾಬತು ಗಟ್ಟಿ 1ಕ್ಕೆ ಸುಮಾರು 1 ಶೇರು	24	0
ಬುಗಡಿಗೆ ಸುತ್ತುವ ಮುತ್ತಿನಸರ 2ಕ್ಕೆ 100 ಮುತ್ತುಗಳು ಯಿತ್ತು	12	0
ಪದಕದ ಮೇಲುಭಾಗಕ್ಕೆ ಹಾಕತಕ್ಕ ನೀಲದ ಮಣಿ 7 ವಂದು ಬೆರಳುದಪ್ಪ ಅರ್ಧ ಅಂಗ್ಲ ಯಿರಬಹುದು	10	0
ವಂಟಿ ಕೆಂಪುಹರಳು 3ಕ್ಕೆ ..	12	0
ವುಂಗರಕ್ಕೆ ಹಾಕುವ ಗೋಮೇಧಿಕ 1 ಪಚ್ಚೆ 1ಕ್ಕೆ ಸಹಾ	20	0
ದೊಡ್ಡಹವಳ 4ಕ್ಕೆ ..	10	0
ಕಾಡ್ತಿ ಸಣ್ಣಚೀಲ 1ಕ್ಕೆ ..	0	1
ಮೇಲೆ ನಮೂದಾದ ಮುತ್ತುಗಳು ಹರಳು ಕೂಡಾ ಯಿಟ್ಟಿದ್ದ ಚೀಲ 1ಕ್ಕೆ	0	1
ಈ 2ಚೀಲ ರಾಜಾರೂಪಾಯಿ ಕೂಡಾ ಹಾಕಿದ ಕೇಪಿನ ಚೀಲ 1ಕ್ಕೆ	0	1
ನಗದು ರೂಪಾಯಿಗಳು ಮರದ ಸಂದೂಕದಲ್ಲಿ ತ್ತಾನಾರಿನ ಚೀಲದಲ್ಲಿ ಯಿಟ್ಟಿದ್ದು ..	26	0
ಹೊಸದಾಗಿ ಮಾಡಿಸಿದ ಸರಪಣಿ 1ಕ್ಕೆ ಕರಡಿಗೆ ಹಾಕೋದು ಚೋಟುದ್ದ ಯಿದೆ	0	8
ಸಣ್ಣ ದೊಸ್ತಾನಲ್ಲಿದ್ದ ಚಿಂನದ ಚಳತುಂಬು ಜೊತೆ 2ಕ್ಕೆ ವರಹಾ ಬಣ್ಣ 2ವರಹಾ ತೂಕ ಮುತ್ತು ಸುತ್ತಿದೆ ಚಿಂನದ ಗುಂಡು ಚಿಂನದ ತಗಡು ಚೂರು ಕೂಡಾ 2ವರಹಾ ತೂಕ	36	8
ಬೆಳ್ಳಿಬಾಬತು 5ಗೇರಿನ ಹಿಂಬಳೆ 1ಕ್ಕೆ	6	0
ಬೆಳ್ಳಿ ಮುಂಗೈ ಸರಪಣಿ ಜೋಡೆಳೆ ಬಾಬತು 1ಕ್ಕೆ	8	0
ಪಾಡಗ ಜೊತೆ 1ಕ್ಕೆ ತೂಕ ಬಣ್ಣ ಸಹಾ ಗೊತ್ತಿಲ್ಲ	20	0
ಹವಳದ ಕೈಕಟ್ಟು 1ಕ್ಕೆ ಅಡಿಕೆ ಹಾಕಿರುತ್ತೆ	6	0
ಸುತ್ತು ಕಾಲುಂಗ್ರ ಜೊತೆ 1ಕ್ಕೆ	3	0
ಮಿಂಚುಜೊತೆ 1ಕ್ಕೆ ರೂಪಾಯಿತೂಕ ಅದದ್ದು 2	1	0
ನಗದು ರೂಪಾಯಿಗಳು ..	300	0
ಕರಡಿಗೆ 1 ಸರಪಣಿ 1 ತಾಯಿತಿ 2 ಬೀಗದಕೈ 2 ಸಹಾ ದಾರಿಯಿಂದ ಪೋಣಿಸಿದೆ ..	25	0
ಮರೆಗಲ್ಲು 1ಕ್ಕೆ	0	2
ಕಾಗುಬಟ್ಟೆ ಹಸುರು ಕೆಂಪುವರ್ಣದ ಬಾ|| ಬನಾತಿ ನಚೀಲ 1ಕ್ಕೆ ..	0	2
ಸೊಂಟದ ಪಟ್ಟಿ ಬೆಳ್ಳಿಬಾಬತು 1ಕ್ಕೆ	12	0
ಜುಮ್ಲಾ	1361	2

P. KRISHNA RAO,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆ॥ ಕ॥ ಕೋರ್ಟಿನಿಂದ.

ತಾರೀಖು 14ನೇ ಅಕ್ಟೋಬರ್ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟ್ ಚಿತ್ರದುರ್ಗ, ದಾವಣಗೆರೆ, ದೊಡ್ಡೇರಿ, ಬೂದಿಹಾಳ್, ಹೊಸದುರ್ಗ ಈ ತಾಲ್ಲೂಕುಗಳ ಶೇಂದೀ ಇಜಾರೇದಾರ ಪುಟ್ಟೂರ ವೆಂಕಟ್ಟಯ್ಯನು ಖಿಸ್ತಿನ ಹಣವನ್ನ ಕ್ಲುಪ್ತವಾದ ವಾಯಿದೆಗೆ ಸರಿಯಾಗಿ ಪಾವತೀ ಮಾಡದೆ ತಪ್ಪಿಹೋದ ಮೂಲಕ ಇಜಾರೇ ಷರತ್ತುಗಳಿಗೆ ತಪ್ಪಿರುತ್ತಾನಾದ್ದರಿಂದ ಸದರೀ ತಾಲ್ಲೂಕುಗಳ ಶೇಂದಿ ಇಜಾರೇಯು ಬಾಕೀ ಇರುವ ಕಾಲಕ್ಕೆ ಅಂದರೆ ಸನ್ 1876ನೇ ಇಸವಿ ಅಕ್ಟೋಬರ್ ಗುರ್‍ರೇ ಲಗಾಯತು 1878ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ 1½ ವರುಷಕ್ಕೆ ತಾಲ್ಲೂಕುವಾರಾಗಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಯೆದುರಾಗಿ ಸನ್ 1876ನೇ ಇಸವಿ ನವಂಬರ್ 1ನೇ ತಾರೀಖು ಬುಧವಾರ ಹಗಲು 11 ಘಂಟೆಗೆ ಚಿತ್ರದುರ್ಗದಲ್ಲಿ ಚೀಪ್ ಕಮ್ಮಿಷನರ ಸಾಹೇಬರವರ ಶಪ್ಟಂಬರ್ 15ನೇ ಮರ್ಕುಂ ನಂ. 5894—122ನೇ ಪ್ರೊಸಿಡಿಂಗ್ಸ್ ಅನುಸರಿಸಿ ಪುನಹಾ ಹರಾಜು ಮಾಡಲ್ಪಡುತ್ತೆ.

ಹರಾಜು ನಿಬಂಧನೆಗಳಂದರೆ.

1. ಯಾವ ಚಡದರಖಾಸ್ತುದಾರನಿಗೆ ಸವಾಲ್ ಅಂಗೀಕರಿಸಲ್ಪಡುತ್ತೋ ಅವನು ಕೂಡ್ಲೆ ಯರಡು ತಿಂಗಳ ಖಿಸ್ತು ಮೊಬಲಗು ಆದರ ಲೋಕಲ್‌ಶೆಸ್ ಸಹಾ ನಗದಾಗಿ ಪಾವತೀ ಮಾಡಬೇಕು ಸದರೀ ಮೊಬಲಗು ಅಮಾನತ್ ಇಡಲ್ಪಟ್ಟು ಆಖೈರ್ ಯರಡು ಖಿಸ್ತುಗಳಾದ 1878ನೇ ಇಸವಿ ಫೆಬ್ರುವರಿ ಮಾರ್ಚಿ ತಿಂಗಳಿಗೆ ಜಮೆ ಕಟ್ಟಿಕೊಳ್ಳಲ್ಪಡುತ್ತೆ.

2. ಇಜಾರೇ ಷರತ್‌ಗಳಂತೆ ಇಜಾರೇ ದಾರನು ಸರಿಯಾಗಿ ನಡದುಕೊಳ್ಳುವಬಗ್ಯೆ ಖಾತರ್‌ಗೋಸ್ಕರ ಲಾಯಕ್ ಜಾಮೀನನ್ನು ಬಾಬ್ ಸುಫರ್ದು ಆಗುವದಕ್ಕೆ ಮುಂಚಿತವಾಗಿ ಹಾಜರ್ ಮಾಡಬೇಕು.

3. ದರಖಾಸ್ತು ಮಂಜೂರಾದ ಕೂಡ್ಲೆ ಸರಿಯಾದ ಛಾಪಾಕಾಗದ್ದ ಮೇಲೆ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ರೂಬರೂ ಇಜಾರೇ ಮುಚ್ಚಳಿಕೆ ಬರದು ಕೊಡಬೇಕು.

4. ಇಜಾರೇ ದಾರನು ಹಾಜರ್ ಮಾಡುವ ಜಾಮೀನ್‌ದಾರನು ಮೈಸೂರ ರಿಯಾಸತ್ತಿನಲ್ಲಿ ಇಜಾರೇ ಮೊಬಲಗಿಗೆ ಸರಿಯಾದ ಕಿಮ್ಮತುವುಳ್ಳ ಜಿಂದಗೀ ವುಂಟಾದವನಾಗಿಯೂ ಮತ್ತು ಆಬಗ್ಯೆ ಅಂಥಾ ಜಾಮೀನ್‌ದಾರನು ವಾಸ ಮಾಡುವ ತಾಲ್ಲೂಕು ಅಮಿಲರಿಂದ ಕ್ರಮವಾಗಿ ಸರ್ಟಿಫಿಕೇಟ್ ಆದರನೇ ಹೊರ್ತು ಜಾಮೀನ್ ಮಂಜೂರ್ ಮಾಡುವದಿಲ್ಲ.

5. ಪ್ರತಿ ತಿಂಗಳ ಖಿಸ್ತು ಆಯಾ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಆಯಾ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡಲ್ಪಡಬೇಕು ಅದಕ್ಕೆ ತಪ್ಪಿದಲ್ಲಿ ಪಾವತೀ ತಾರೀಖಿನ ವರಿವಿಗೂ ಬಾಕೀ ಆಗುವ ಮೊಬಲಗಿಗೆ ದರ ರೂಪಾಯಿ 1ಕ್ಕೆ ರೋಜ್ 1ಕ್ಕೆ ½ ಪೈ ಯಂತೆ ಬಡ್ಡಿ ದಾಖಲ್ ಮಾಡಲ್ಪಡುವದು.

6. ಖಿಸ್ತು ಬಾಕೀ ಮೊಬಲಗು ಮತ್ತು ಬಡ್ಡಿ ಸಹಾ ವಂದು ತಿಂಗಳಿಗಿಂತಲೂ ಹೆಚ್ಚಾದ ಕಾಲದವರಿಗೂ ಪಾವತೀ ಆಗದೆ ಬಾಕೀ ನಿಂತಿರುವ ಪಕ್ಷಕ್ಕೆ ಇಜಾರೇಯು ಪುನಹಾ ಹರಾಜು ಮಾಡಲ್ಪಡುತ್ತೆ, ಅಥವಾ ಯುಕ್ತ ತೋರುವ ಮತ್ಯಾವ ರೀತಿ ಯಿಂದಲಾದರೂ ವಿಲೇವಾರೀ ಮಾಡಲ್ಪಡುತ್ತೆ ಆಮೇರಿಗೆ ಮಾಡಲ್ಪಡುವದ್ದರಿಂದ ಸರ್ಕಾರಕ್ಕೆ ಸಂಭವಿಸುವ ಲುಕ್ಸಾನಿಗೆ ಇಜಾರೇದಾರನ್ನ ಗುರಿಮಾಡಲ್ಪಡುವದಲ್ಲದ ಅವನ ಚರ ಸ್ಥಿರ ಆಸ್ಥಿ ಮತ್ತು ಜಾಮೀನ್‌ದಾರನ ಚರ ಸ್ಥಿರ ಆಸ್ಥಿ ಹರಾಜಿನಿಂದ ಲುಕ್ಸಾನ್ ಮೊಬಲಗು ಭರ್ತೀ ಮಾಡಿಕೊಳ್ಳಲ್ಪಡುತ್ತೆ.

7. ಚಡದರಖಾಸ್ತುದಾರನು ಹರಾಜು ತಾರೀಖಿನಲ್ಲಿ ಮೇಲಿನ 1—2—3ನೇ ಕಲಂನಲ್ಲಿ ನಮೂದಾಗುವ ಷರತ್ತುಗಳಂತೆ ನಡದುಕೊಳ್ಳದೆ ತಪ್ಪುವ ಪಕ್ಷದಲ್ಲಿ ಬಾಬ್ ಪುನಹಾ ಹರಾಜು ಮಾಡಲ್ಪಟ್ಟು ಲುಕ್ಸಾನಿಗೆ ಅವನು ಗುರಿಮಾಡಲ್ಪಡುತ್ತಾನೆ.

8. ಬಾಬ್ ಸುಫರ್ದು ಆಗುವ ತಾರೀಖಿನ ವರಿಗೆ ಅಮಾನೀಯಲ್ಲಿ ರೂಡಿಸಲ್ಪಟ್ಟಿರುವ ಮೊಬಲಗು ಇಜಾರೇ ಮೊಬಲಗಿನಿಂದ ವಜಾ ಮಾಡಲ್ಪಟ್ಟೀತು.

9. ಹರಾಜಿನಲ್ಲಿ ಬಾಬ್ ಪಡಿಯುವನು ಮಂಜೂರಾದ ತನ್ನ ದರಖಾಸ್ತಿನ ಮೊಬಲಗಿನ ಮ್ಯಾಲೆ ರೂಪಾಯಿ 1ಕ್ಕೆ ವಂದಾಣೆಯಂತೆ ಲೋಕಲ್‌ಸೆಸ್ ಕೊಡುವದಕ್ಕೆ ಬದ್ಧನಾಗಿರುತ್ತಾನೆ.

10. ಕೆರೆಗಳ ಮತ್ತು ನಾಲೆಗಳ ಬಾಜುಗಳಲ್ಲಿ ನೀರು ಹರಿಯುವದಕ್ಕೆ ಹರಕತ್ತಾಗಿಯೂ ಮತ್ತು ಅವುಗಳ ದಡಗಳಲ್ಲಿ ತಿರುಗಾಡುವದಕ್ಕೆ ಹರಕತ್ತಾಗಿಯೂ ವಡವು ಮೋಳೆ ವುಂಟುಮಾಡುವ ಕಾರಣವಾಗುವಂತೆ ಬೆಳದಿರುವ ಶೇಂದಿ ಗಿಡಗಳನ್ನ ಕಡಿಸಿ ಬಿಡುವ ಯಖ್ತಿಯಾರೀ ಸರ್ಕಾರದವರು ವುಳಸಿಕೊಂಡಿರುತ್ತಾರೆ.

ತಾರೀಖು 14ನೇ ಅಕ್ಟೋಬರ್ 1876ನೇ ಇಸವಿ.

E. Armstrong,
Dy. Commr.

ಸ೯ 1876ನೇ ಇಸವಿ ಶಪ್ಟಂಬರ ತಿಂಗಳ ಕಾಲಸ್ಥಿತೀ ರಿಪೋರ್ಟ.

ಹಾಸನ ಡಿಸ್ಟ್ರಿಕ್ಟು.

ಹವಾ—ವಿಶದವಾಗಿಯೂ, ಆಗಾಗ್ಯೆ ಸ್ವಲ್ಪ ಸ್ವಲ್ಪ ಮಳೆಯೂ, ಗುಡುಗು ಮಿಂಚು ಸಹಿತವಾಗಿ ಹಾಸನದಲ್ಲಿಯೂ ಆಜೂಬಾಜೂ ತಾಲ್ಲೂಕುಗಳಲ್ಲಿಯೂ, ಸದರೀ ತಿಂಗಳು 28ನೇ ಮುಕ್ಕಾಂನಲ್ಲಿ ಬಲವಾಗಿಯೇ ಬಿತ್ತು. ಡಿಸ್ಟ್ರಿಕ್ಟಿನ ಮಳೆ ಈ ಕೆಳಗೆ, ಹಿಂದಿನ ಯೆರಡು ವರುಷಗಳ ತಪಶೀಲ್ ಮೊಕ್ಕಾಬಿಲೇ ನಿಸೀ ವಿವರಿಸಲ್ಪಟ್ಟಿರುತ್ತೆ, ಹ್ಯಾಗಂದರೆ.—

ಸ್ಥಳಗಳು.		ಮಳೆ ಬಿದ್ದದ್ದು.					
		1876ನೇ ಶಪ್ಟಂಬರ		1875ನೇ ಶಪ್ಟಂಬರ		1874 ಶಪ್ಟಂಬರ	
		ಇಂ.	ಸೆಂ.	ಇಂ.	ಸೆಂ.	ಇಂ.	ಸೆಂ.
ಹಾಸನ	ಇಂಜೆನೀಯರ್ ಆಳತೆ	2	36	3	25½	5	61¼
	ಇಂಜೆನೀಯರ್ ಆಫಿಸ್ ಪಾಗ್‌ಸರ್ ಆಳತೆ	2	39	3	40	5	58½
	ಅಬ್‌ಸರವೇಟರಿ ಡಿಸ್ಪೆನ್ಸೇರಿ	3	37	3	18	5	18
	ತಾಲ್ಲೂಕು ಕಚ್ಚೇರಿ	2	45	3	14	1	88½
ಮಂಜರಾಬಾದ್	..	3	29½	7	10	4	76
ಅರಕಲ್‌ಗೂಡ್	..	1	18	0	90	0	20
ಅತ್ತಿಗುಪ್ಪೆ	..	4	15	3	0	3	40
ಬೇಲೂರು	..	0	0	2	84	4	5
ಚನ್ನರಾಯಪಟ್ಣ	..	1	20	0	37	1	80
ನಾಗಮಂಗಲ	..	2	97½	4	76	5	90
ಹಾರನಹಳ್ಳಿ	..	2	10	1	20	5	79
ನರಸೀಪುರ	..	2	54	2	0	1	12

ಸದರೀ ತಿಂಗಳಲ್ಲಿ ಆದ ಮಳೆಯಿಂದ ಡಿಸ್ಟ್ರಿಕ್ಟಿನ ಕೆರೆಗಳಿಗೆ 15 ದಿನಗಳ ಲಗಾಯತು 3 ತಿಂಗಳ ವಂಗೆ ಆಗುವಷ್ಟು ನೀರು ಬಂದಿರುತ್ತೆ.

ಜಮೀನುಗಳು—442—11—3 ಕಂದಾಯವುಳ್ಳ ಜಮೀನುಗಳು ಸಾಗುವಳೀಗೆ ತೆಗದುಕೊಳ್ಳಲ್ಪಟ್ಟಿತು. 226—11—6 ರೂಪಾಯಿಗಳ ದರಖಾಸ್ತುಗಳು ಹಾಸನದ ತಾಲ್ಲೂಕಿನಲ್ಲಿ ಬಂದಿವೆ. ಹಾರನಹಳ್ಳೀ ತಾಲ್ಲೂಕಿನಲ್ಲಿ ಜಮೀನಿಗೆ ದರಖಾಸ್ತುಗಳು ಯಾವದೂ ಬಂದಿರುವದಿಲ್ಲವು.

ಫಸಲ್—ಹಾಸನ, ಅರಕಲ್‌ಗೂಡು, ಬೇಲೂರು, ನಾಗಮಂಗಲ, ಹಾರನಹಳ್ಳಿ ಈ ತಾಲ್ಲೂಕುಗಳೊಳಗೆ ಹುರಳಿ ಬಿತ್ತನಹಾಯಿತು. ಹಾಸನ, ಬೇಲೂರು, ಅರಕಲ್‌ಗೂಡು ತಾಲ್ಲೂಕುಗಳಲ್ಲಿ ಗಿಡ್ಡರಾಗಿ ಕಟಾವಾಯಿತು. ಅರಕಲ್ ಗೂಡಿನಲ್ಲಿ ಚೆನ್ನಲ್ ಹೊಳೇ ನೀರಿನ ಆಸರೆಯುಳ್ಳ ಭತ್ತ ಫಸಲ್ ಚೆನ್ನಾಗಿದೆ. ಚನ್ನರಾಯಪಟ್ಣ, ನಾಗಮಂಗಲ, ನರಸೀಪುರ ಈ ತಾಲ್ಲೂಕುಗಳೊಳಗೆ ಬೆಳೆಯಲ್ಲಿರುವ ಫಸಲಗಳು ವಣಗುತಿತ್ತು ಸದರೀ ತಿಂಗಳ ಆಖೈರ್ ಭಾಗದಲ್ಲಿ ಬಿದ್ದ ಮಳೆಯ ದೆಸೆಯಿಂದ ಮರಳಿ ತಲೆ ಯತ್ತಿಕೊಂಡವು. ಇನ್ನು ಮಳೆ ಬೇಕಾಗಿಯಿದೆ. ಹಾಸನ, ಮಂಜರಾಬಾದ್, ಬೇಲೂರು ಈ ತಾಲ್ಲೂಕುಗಳಲ್ಲಿ ಇರುವ ಫಸಲ್‌ಗಳು ಮಳೆ ಇಲ್ಲದೆ ವಣಗುತಿವೆ.

ಧಾರಣೆವಾಸಿ—ಯಲ್ಲ ಜಿನಿಸೀಗಳ ಧಾರಣೆಯೂ ಹೆಚ್ಚಿದವು, ವರ್ತಕರು ಆನಾಜು ತಡದು ಇಟ್ಟುಕೊಂಡು ಸ್ವಲ್ಪವಾಗಿ ಮಾರಲಿಕ್ಕೆ ಇಟ್ಟಿರುತ್ತಾರೆ, ಕಾಲಸ್ಥಿತಿ ರಿಪೋರ್ಟಗಳಲ್ಲಿ ತೋರಿಸಲ್ಪಟ್ಟ ಧಾರಣೆ ಆಲೂರು ಸಂತೆಯ ಧಾರಣೆಯಾಗಿರುತ್ತೆ. ಈ ಸಂತೆಯಿಂದ ಡಿಸ್ಟ್ರಿಕ್ಟಿನ ಇತರ ಸಂತೆಗಳಿಗೆ ಜಿನಸೀ ಸರಬರಾಯಿ ಆಗುತ್ತಿರುತ್ತೆ. ತೋರಿಸಲ್ಪಟ್ಟ ಧಾರಣೆಗೆ ವರ್ತಕರು ಖರೀದೀನೂ ಡಿ ಬಡ್ಡಿ ಬಂಡೀ ಬಾಡಿಗೆ, ಲಾಭ ವಗೈರೇ ಲೆಕ್ಕಾಚಾರ ಮಾಡಿ ಮಾರುತ್ತಾರೆ ತಾವು ಜಿನಿಸೀ ತೆಗದುಕೊಂಡು ಹೋಗಿ ವ್ಯಾಪಾರ ಮಾಡುವ ಸ್ಥಳ ದೂರ ವಿದ್ದಷ್ಟು ಧಾರಣೆ ಚಡಾಯಿಸುತ್ತಾರೆ. ಇವರಲ್ಲಿ ಕಂಡ ಧಾರಣೆಯಿಂದ ವರ್ತಕರಿಗೆ ಮಾತ್ರ ಪ್ರಯೋಜನ ವುಂಟು, ಹೀಗೆ ರೂಪಾಯಿಗೆ 9 ಶೇರು ಮಾರುತಿರುವ ಅಕ್ಕಿ 7 ಅಥವಾ 8 ಶೇರು ಪ್ರಕಾರ ಹಾಸನದಲ್ಲಿ ಮಾರುತ್ತಾರೆ ಆಲೂರು ಸಂತೆಗೂ ಹಾಸನಕ್ಕೂ 8 ಮೈಲುಗಳ ಫಾಸಲೆಗಿಂತ ಹೆಚ್ಚಿಲ್ಲ. ಹಿರೇಶಾವೆ, ಹಾರನಹಳ್ಳಿ ಈ ಸ್ಥಳಗಳಲ್ಲಿ ರೂಪಾಯಿಗೆ 5 ಶೇರು ಮಾರುತ್ತಾರೆ. ತತ್ಕಾಲದಲ್ಲಿ ಈ ಡಿಸ್ಟ್ರಿಕ್ಟನೊಳಗೆ ವ್ಯಾಪಿಸಿ ಇರುವ ದುರ್ಭಿಕ್ಷ ಸ್ಥಿತಿಯನ್ನು ಹಿಂದಿನ ಯರಡು ವರುಷಗಳ ಮೊಕ್ಕಾಬಿಲೆಯಿಂದ ತಿಳಿದುಕೊಳ್ಳಬಹುದು.

ಜಿನಿಸೀ		76ನೇ ಶಪ್ಟಂಬರ	75 ಶ.	74 ಶ.	ಜಿನಿಸೀ		1876ನೇ ಶಪ್ಟಂಬರ	75 ಶ.	74 ಶ.
ಅವ್ವಲ್‌ತರದ ಅಕ್ಕಿ ರೂ 1ಕ್ಕೆ	..	9	14½	14¾	ರಾಗಿ ರೂಪಾಯಿ 1ಕ್ಕೆ	..	20	30	37½
ದುಯ್ಯಂ ಡಿಟೋ	..	11	16	16	ಹುರಳಿ ಡಿಟೋ	..	10	18	16

ಆರೋಗ್ಯ—ಸಾಮಾನ್ಯತಃ ಡಿಸ್ಟ್ರಿಕ್ಟು ಆರೋಗ್ಯ ಸ್ಥಿತಿಯಲ್ಲಿಯೇ ಇದೆ. ಹಾಸನ, ಅತ್ತಿಕುಪ್ಪ, ಚನ್ನರಾಯಪಟ್ಣ, ಹಾರನಹಳ್ಳಿ ಈ ತಾಲ್ಲೂಕುಗಳಲ್ಲಿ ಖೈ ಜುಲಾಬ್ ಮಾತ್ರ ವ್ಯಾಪಿಸಿರುತ್ತೆ. ಡಿಸ್ಟ್ರಿಕ್ಟ್ ಮುಳೆ ಈ ತಿಂಗಳಲ್ಲಿ ಈ ಕೆಳಗೆ ವಿವರಿಸಿರುವ ಮೇರೆ 339 ಮಂದಿ ಮೃತಪಟ್ಟರು, ಹಿಂದಿನ ತಿಂಗಳಲ್ಲಿ 410 ಮಂದಿ ಸತ್ತರು.

ಖೈ ಜುಲಾಬ್ ನಿಂದ ..	27	ಹೊಟ್ಟೇ ಸುಗ್ಗಿನಿಂದ	33
ಸಿಡುಬಿನಿಂದ ..	1	ಇತರ ಕಾರಣಗಳಿಂದ	87
ಜ್ವರದಿಂದ ..	191	ಜುಮ್ಲಾ	339

ಜನನಗಳು—192 ಜನನಗಳಾದವು. (104 ಗಂಡುಸರು, 88 ಹೆಂಗಸರು) ಹಿಂದಿನ ತಿಂಗಳಲ್ಲಿ 182 ಜನನಗಳಾದವು.

ಜಾನವರ್—ಮೇವು ನೀರು ಇಲ್ಲದೇ ಇದ್ದದ್ದರಿಂದ ಕಾಲ್ನಡಿ ಬಹಳವಾಗಿ ಸತ್ತು ಹೋದವು. 7464 ಕಾಲ್ನಡೆ ಸತ್ತವು. ಹಿಂದಿನ ತಿಂಗಳಲ್ಲಿ 5274 ಸತ್ತವು. ಹಾರನಹಳ್ಳಿ ತಾಲ್ಲೂಕಿನಲ್ಲಿ ವಿಶೇಷ ಸಂಖ್ಯೆ ಅಂದರೆ 4696 ಸತ್ತವು. ಈ ಸ್ಥಳದಲ್ಲಿ ಈಗಲೂ ಬಹಳ ತೊಂದರೆ ಉಂಟಾಗಿರುತ್ತದೆ, ಅತ್ತಿಕುಪ್ಪ ತಾಲ್ಲೂಕಿನಲ್ಲಿ ಕಾಲು ಬಾಯಿ ಜ್ವರ ಕೊಂಚ ಮಟ್ಟಿಗೆ ವ್ಯಾಪಿಸಿರುತ್ತದೆ.

A. SRINIVASAIENGAR,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಸನ 1876ನೇ ಇಸವಿ ಶಪ್ಟಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಮಳೆ.—ಈ ಕಾಲದ ಬೆಳೆ ಅನುಕೂಲವಾಗಿ ಯಿಲ್ಲಾ ಶಿವಮೊಗ್ಗಾ ಷಹರಿನಲ್ಲಿಯೂ ತಾಲ್ಲೂಕುಗಳ ಹೆಡ್‌ಕ್ವಾರ್ಟರ್‌ಗಳಲ್ಲಿಯೂ ಬಿದ್ದ ಮಳೆ ಈ ಕೆಳಗೆ ವಿವರಿಸಲ್ಪಡುತ್ತೆ.

	ಇಂಚ್ಸ್.	ಸೆಂಟ್ಸ್.		ಇಂ.	ಸೆಂ.
ಶಿವಮೊಗ್ಗಾ ಷಹರಿನಲ್ಲಿ ..	2	43½	ಸೊರಬ ..	1	85
ಚನ್ನಗಿರಿ ..	1	31	ಸಾಗರ ..	2	80
ಹೊನ್ನಾಳಿ ..	0	60	ನಗರ ..	8	5¼
ಶಿಕಾರಿಪುರ ..	1	25	ಕವಲೇದುರ್ಗ ..	3	50

ಬೆಳೆ.—ಮಲ್ನಾಡಿನಲ್ಲಿ ಭತ್ತದ ಬೆಳೆ ಚನ್ನಾಗಿರುವದಾಗಿಯೂ ಮೈದಾನ ಪ್ರದೇಶಗಳಲ್ಲಿ ಶುದ್ಧಾಂಗವಾಗಿ ಒಣಗಿ ಹೊದ್ದಾಗಿಯೂ ತಿಳಿಯಬರುತ್ತೆ.

ಖುಷ್ಕಿ ಫಸಲ್‌ಗಳ ಪೈಕಿ ಮೈದಾನ ತಾಲ್ಲೂಕುಗಳಲ್ಲಿ ಕೆಲವು ಒಣಗಿಹೋದವು ಯಿತರ ಫಸಲ್‌ಳು ಸಹ ಕೊಂಚದಿನಗಳಲ್ಲಿ ಮಳೆ ಬೀಳದಿದ್ದರೆ ಒಣಗಿ ಹೋಗಿಬಿಡುವಹಾಗೆ ಯಿಧೆ ಮಲನಾಡು ತಾಲ್ಲೂಕುಗಳಲ್ಲಿ ಅಡಿಕೆ ಉಳುತಿಧಾರೆ.

ಆರೋಗ್ಯ.—ಚನ್ನಗಿರಿ, ಸೊರಬ, ಸಾಗರ ಈ ತಾಲ್ಲೂಕುಗಳಲ್ಲಿ ಉಕಾಲ್‌ಜುಲಾಬು ಉಪದ್ರವವು ಸೂಕ್ಷ್ಮವಾಗಿ ಪುನಃ ಕಾಣಿಸಿಕೊಂಡಿರುತ್ತೆ. ಈ ತಿಂಗಳಲ್ಲಿ ಈ ಉಪದ್ರವದಿಂದ ಮೃತಪಟ್ಟವರ ತಪಸೀಲ್ ಯಿದರಡಿ ನಮೂದಿಸಲ್ಪಡುತ್ತೆ.

	ಗಂಡುಸರು	ಹೆಂಗಸುರು.	ಕುಲ್ಲು.		ಗಂಡುಸರು	ಹೆಂಗಸುರು.	ಕುಲ್ಲು.
ಚನ್ನಗಿರಿ .	6	8	14	ಸಾಗರ ..	10	7	17
ಸೊರಬ ..	31	47	78	ಜುಮ್ಲಾ.	47	62	109

ಇತರ ಕಾರಣಗಳಿಂದ 442 ಮಂದಿ ಸತ್ತರು ಈ ಪೈಕಿ ಅರ್ಧಪಾಲಿಗೆ ಹೆಚ್ಚಾಗಿ ಜ್ವರದಿಂದ ಸತ್ತರು ದರೋಬಸ್ತು ಕಾರಣಗಳಿಂದ ಸತ್ತವರ ಸಂಖ್ಯೆಯನ್ನು ಹಿಂದಿನ ತಿಂಗಳ ಸತ್ತವರ ಸಂಖ್ಯೆಗೆ ತಾಳೇ ಹಾಕುವಲ್ಲಿ ಈ ತಿಂಗಳಲ್ಲಿ 87 ಸಾವು ಕಮ್ಮಿಯಾಗಿರುತ್ತೆ.

ಜಾನವರ್.—ಕಾಲ್ನಡೆಗಳ ಸಾವು ಕಳೆದ ತಿಂಗಳಲ್ಲಿ ಆದಷ್ಟು ಈ ತಿಂಗಳಲ್ಲಿ ಆಗಲಿಲ್ಲವು ಹಿಂದಿನ ತಿಂಗಳಲ್ಲಿ 3667 ಕಾಲ್ನಡೆಗಳು ಸತ್ತವು ಈ ತಿಂಗಳಲ್ಲಿ 1123 ಸತ್ತವು.

ನಿರ್ಕು.—ಡಿಸ್ಟ್ರಿಕ್ಟು ಸರ್ವತ್ರ ಜೆನಿಸೀ ನಿರ್ಕು ಜಡಾವಾಗುತ್ತಾ ಯಿಧೆ.

MAHOMED HUSEN BINTURI,
For Offg. Dy. Commr.

MYSORE GOVERNMENT PRESS, BANGALORE—1876.

2441

ಮೈಸೂರ ಗೆಜೆಟ್.

ನಂ. 44 ಸರ್ಕಾರದಿಂದ ಫ್ರಾಯಿಷ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ನವಂಬರ ತಾ|| 4, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ ನಾಮೆಗಳು.	275—280
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ ಕಂಟ್ರೋಲರು, ಪಬ್ಲಿಕ್ ವರ್ಕಿಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿವಿಜನ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು. ..	517—530
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	131—137

1ನೇ ಭಾಗ.

———

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

———

ಜನರಲ್.

———

ಇಸ್ತಿಹಾರ್ ನಾಮೆಗಳು.

ನಂ. 259. ತಾರೀಖು 26ನೇ ಅಕ್ಟೋಬರ 1876.

ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್‌ಕಮ್ಮಿಷನರವರಿಂದ ಅಂಗೀಕರಿಸಲ್ಪಟ್ಟು ಮಂಜೂರಾಗಿರುವದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

$\frac{2}{6}$ ಜನರಲ್ ಪೆರೇಡ್ ಗ್ರೌಂಡ್ ಎಂಬ ಕವಾಯತ್ ದಿಣ್ಣಿಗೆ ಅಂಚಿನಲ್ಲಿ ಮಾತ್ರ ಯೇರ್ಪಟ್ಟಿರುವ ಕುದುರೇ ದಾರಿಯಲ್ಲಿ ಕುದುರೇಗಳನ್ನು ಸವಾರಿಗೆ ಯಾ ಬಂಡಿಗೆ ಪಳಗಿಸಲ್ಪಡಕೂಡದು. ಸದರೀ ಮಾರ್ಗದಲ್ಲಿ ಅತಿ ರಭಸವಾಗಿ ಸವಾರೀ ಮಾಡಕೂಡದು.

ಈ ಬೈಲಾ ನಿಬಂಧನೆಗೆ ತಪ್ಪುವಂತಾ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಹಾಗೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ನಡಿಸಲ್ಪಡತಕ್ಕ ಪ್ರತಿ ತಪ್ಪಿತಕ್ಕೂ, ಐದು ರೂಪಾಯಿಯ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

$\frac{3}{1}$ ಯಾವ ಮನೆಯಲ್ಲಿ ಉಖಾಲ್ ಜಾಲಾಬುಗಲಿ, ಶಿಡಬಾಗಲಿ: ಕಾಣಿಸಿಕೊಳ್ಳುತ್ತದೋ ಆ ಮನೆಯ ಯಜಮಾನನು ಮ್ಯುನಿಸಿಪೆಲ್ ಕಮ್ಮಿಷನರ್ ಪ್ರೆಸಿಡೆಂಟರಿಗಾಗಲಿ, ಅತ್ಯಂತ ಸಮೀಪದಲ್ಲಿರುವ ಪೊಲೀಸ್ ಸ್ಟೇಷನಿಗಾಗಲಿ, ಜನಗಳ ಆರೋಗ್ಯದ ಬಗ್ಗೆಯೂ, ರೋಗವನ್ನು ಮಟ್ಟುಪಡಿಸುವಬಗ್ಗೆಯೂ, ತಕ್ಕ ಕ್ರಮಗಳನ್ನು ಏರ್ಪಡಿಸುವದಕ್ಕೋಸ್ಕರವೂ ಸದರೀ ಸಂಗತಿಯನ್ನು ಕುರಿತು ಕೂಡ್ಲೆ ರಿಪೋರ್ಟು ಮಾಡತಕ್ಕದ್ದೆಂದು ತಾಕೀದು ಮಾಡಲ್ಪಡುತ್ತಾರೆ.

ಈ ಬೈಲಾ ನಿಬಂಧನೆಯ ಷರತ್ತುಗಳನ್ನು ಜಾರೀಮಾಡುವದರೊಳಗೆ, ಕೆಲವು ಸಂಗತಿಗಳಲ್ಲಿ ರೋಗಗತಗಲಿದ ಮನುಷ್ಯನನ್ನು ಒಂದು ಆಸ್ಪತ್ರಿಗೆ ಒಯ್ಯುವದು ಜರೂರೆಂದು ಪ್ರಾಯಶಃ ಎಣಿಸಲ್ಪಡಬಹುದು, ಆದರೆ ಅಂತಾ ಮನೆಗಳೊಳಗೆ ರೋಗಗತಗಲಿದವರನ್ನು ಪ್ರತ್ಯೇಕಪಡಿಸುವದಕ್ಕೆ ತಕ್ಕಹಾಗೆ ಸ್ಥಳಾನುಕೂಲವಿದ್ದರೆ ಅಥವಾ ರೋಗಿಯನ್ನು ಪ್ರತ್ಯೇಕ ಖೋಲೀಯಲ್ಲಿಡುವದಕ್ಕೆ ಯುಕ್ತಗಳಾದ ಯೇರ್ಪಾಡುಗಳು ಮಾಡಬಹುದಾಗಿದ್ದರೆ ಅಂತಾ ಮನೆಗಳೊಳಗೆ ಸದರೀ ಕ್ರಮವು ಸುತರಾಂ ನಡಿಸಬೇಕಾದ್ದಿಲ್ಲವು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ ಮತ್ತು ಅಂತಾ ಉಲ್ಲಂಘನೆ ನಡಿಸಲ್ಪಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗಳ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ನಂ. 260. ತಾರೀಖು 26ನೇ ಅಕ್ಟೋಬರ 1876.

ಚೀಫ್ ಕಮ್ಮಿಷನ್ನರವರು ಅಪ್ಪಣೆ ಕೊಡಿಸುವದೇನಂದರೆ ದುರ್ಭಿಕ್ಷ ಪ್ರಾಪ್ತವಾದ ಸಬಬು ಮತ್ತು ನಿರಕ್‌ಗಳು ಜಡಾವಾಗಿರುವದ್ದರಿಂದಲೂ, ಮಾಹೇ ಯಾನಾ 10 ರೂಪಾಯಿಗೆ ಮೀರದ ತಲಬು ಉಳ್ಳ ದರೋಬಸ್ತು ಸರಕಾರ ನೌಕರರಿಗೆ 1876ನೇ ಇಸವಿ ಅಕ್ಟೋಬರ್ ತಿಂಗಳಿಗೆ ತಲಬು ಬಟವಾಡೆ ಆಗುವಲ್ಲಿಯೂ ಮತ್ತು ಆಜೆ ಯಿರಡು ತಿಂಗಳ ವರಿಗೂ ತಿಂಗಳು ಒಂದಕ್ಕೆ ಒಂದು ರೂಪಾಯಿ ಪ್ರಕಾರ ಮಾಹೇ ಯಾನಾ ಕೊಡಲ್ಪಡತಕ್ಕದ್ದು.

2. ಈ ಹುಕ್ಕುಂ ಅಂಚೆ ವ ಅರಮನೆ ಇಲಾಖೆಯವರಿಗೆ ಲಗಾವಾಗಿರುವದಿಲ್ಲ.

3. ಈ ಹಣವು ಮಾಮೂಲ್ ತಲಬುದಾರ್ ಬರಾವರ್ದುಗಳಲ್ಲಿ ದಾಖಲ್ಮಾಡತಕ್ಕದ್ದು.

ನಂ. 268. ತಾರೀಖು 2ನೇ ನವೆಂಬರ 1876.

ಹಾಲಿ ಕಾಲಸ್ಥಿತಿ ವಿದ್ಯಮಾನಗಳಿಂದ ಅವಸ್ಯಕವೆಂದು ತಿಳಿಯಬಂದ ಪ್ರಕಾರ ಜನಗಳಿಗೆ ಕಷ್ಟ ನಿವಾರಣಾರ್ಥವಾದ ಉಪಾಯವನ್ನಾಗಿ ಚೀಫ್ ಕಮ್ಮಿಷನ್ನರ್ ಸಾಹೇಬರವರು ಚಾಲತಿ ಇಸವಿಯ ಸರಕಾರ ತೆರಿಗೆಗಳ ವಿಷಯದಲ್ಲಿ ಇದರಡಿ ಬರುವ ತಿದ್ದುಪಾಡುಗಳನ್ನು ವಿಧಿಸಿರುತ್ತಾರೆ. ಸದರೀ ತಿದ್ದುಪಾಡುಗಳು ಡಿವಿಜನ್ ಕಮ್ಮಿಷನ್ನರ್‌ಗಳ ಹುಕ್ಕುಂ ಅನುಸರಿಸಿ ಡಿಸ್ಟ್ರಿಕ್ಟ್‌ಗಳ ಡಿಪ್ಯುಟಿ ಕಮ್ಮಿಷನ್ನರ್‌ಗಳಿಂದ ಜಾರೀಗೆತರಲ್ಪಡತಕ್ಕದ್ದು.

1. ಜಮೀನ್ ಕಂದಾಯದ ಕಿಸ್ತುಗಳು ಸಾಲ್‌ಗುದಸ್ತೆಯಂತೆ ನಾಲ್ಕು ಕಿಸ್ತುಗಳಿಗೆ ಬದಲಾಗಿ ಏಳು ಕಿಸ್ತುಗಳಾಗಿ ಮಾಡಲ್ಪಟ್ಟು ಈ ಕೆಳಗೆ ಕಾಣುವ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು.

ಡಿಸೆಂಬರು ಆಣೆಗಳು 2—ಜನವರಿ 3—ಫೆಬ್ರುವರಿ 3—ಮಾರ್ಚಿ 2—ಏಪ್ರೆಲ್ 2—ಮೇ 2—ಜೂನ್ 2

ವಿನಾಯಿತಿ—ಈ ರಿಯಾಯತಿ ನಗರ ವ ಅಷ್ಟಗ್ರಾಮ ಡಿವಿಜನ್‌ಗಳ ವ ಬ್ಲನ್ನಡು ತಾಲ್ಲೂಕುಗಳಿಗೆ ಲಗಾವಾಗಿರುವದಿಲ್ಲ.

2. ಜಮೀನ್ ಕಂದಾಯ ಮೊಹತರ್ಫಾ ವಗೈರೆಗಳ ದರೋಬಸ್ತು ಬಾಕಿಗಳ ಮೇಲೆ ರೂಪಾಯಿ ಒಂದಕ್ಕೆ ದಿನ ಒಂದಕ್ಕೆ ಅರ್ಧಕಾಸಿನಮೇರೆ ಬಡ್ಡಿ ಕಟ್ಟಲ್ಪಡತಕ್ಕ ಬಗ್ಗೆ ವಿಧಿಸಿದ ಹುಕುಂ ಅಮಲ್ ಚಾಲತಿ ಇಸವಿಯಲ್ಲಿ ಮನ್ನಾ ಮಾಡಲ್ಪಟ್ಟಿದೆ.

3. ಈ ಬರದಿಂದ ಬಹಳವಾಗಿ ಯಾವ ತಾಲ್ಲೂಕುಗಳು ಯಾ ತಾಲ್ಲೂಕುಗಳ ಪೈಕಿ ಯಾವ ಪ್ರದೇಶಗಳು ಬಾಧಿಸಲ್ಪಟ್ಟಿರುತ್ತೋ ಅಂತಾ ತಾಲ್ಲೂಕುಗಳ ಯಾ ತಾಲ್ಲೂಕುಗಳ ಪ್ರದೇಶಗಳೊಳಗೆ ಈ ಸಾಲಿನಲ್ಲಿ ಹುಲ್ಲು ಬನ್ನಿ ಹರಾಜು ನಡಿಸಲ್ಪಡುವದಿಲ್ಲಾ ಕಮ್ಮಿಷನ್ನರುಗಳು ತಮ್ಮ ತಮ್ಮ ಡಿವಿಜನುಗಳಲ್ಲಿ ಈ ಹುಕ್ಕುಂ ಅನುಸರಿಸಿ, ಹುಲ್ಲು ಬನ್ನಿ ಹರಾಜಿನಿಂದ ಸಂಪೂರ್ಣವಾಗಿ ವಿನಾಯಿಸಲ್ಪಡುವ ಜಮೀನುಗಳ ವಿಸ್ತೀರ್ಣಗಳನ್ನು ಪ್ರಸಿದ್ಧಪಡಿಸತಕ್ಕದ್ದು

ನಂ. 269. ತಾರೀಖು 3ನೇ ನವಂಬರ 1876.

ಚೀಫ್ ಕಮ್ಮಿಷನರವರು ಅಪ್ಪಣೇಕೊಡಿಸುವದೇನಂದರೆ, ಸ್ 1866ನೇ ಇಸವೀ ಆಗಸ್ಟು 3ನೇ ಮುಕ್ಕಾಂ 2,000–13ನೇ ನಂಬರ ಬಾಬತು ಈ ಕೆಳಗೆ ಬರುವ ಸರ್ಕ್ಯುಲರ ಹುಕ್ಕುಂ ಪುನಃ ಪ್ರಕಟಸಲ್ಪಟ್ಟು ಯಿದಕ್ಕೆ ಈ ಮೈಸೂರು ಸರ್ಕಾರದ ದರೊಬಸ್ತು ತಾಲ್ಲೂಕು ವ ತಾಪೇದಾರೀ ಉದ್ಯೋಗಸ್ಥರೂ ನಿಗೇ ಕೊಡತಕ್ಕದ್ದು.

ನಂದೀದುರ್ಗ ಅಷ್ಟಗ್ರಾಮ ನಗರ್ಡಿವಿಜನುಗಳ ಮತ್ತು ಕೊಡಗು ಶೀಮೆಯ ಸೂಪರಿಂಟೆಂಡೆಂಟಗಳಿಗೆ.

ನಂ. 2000—ರೆವಿನ್ಯೂ ನಂ, 13. ತಾರೀಖು 3ನೇ ಆಗಸ್ಟು 1866.

ದುರ್ಭಿಕ್ಷ ಕಾಲದಲ್ಲಿಯೂ, ಕ್ಷಾಮ ಸಂಭವಿಸುವದಾಗಿರುವ ಸಮಯದಲ್ಲಿಯೂ ಕಾರ್ಭಾರ್ ನಡಿಸುವಂಥಾ ಸಿವಿಲ್ ಆಫಿಸರಗಳು ಮಾಡಬೇಕಾದ ಕಾರ್ಯಗಳನ್ನು ವಿಧಿಸುವ ತಾತ್ಪರ್ಯದೊಡನೆ ಸ್ 1822ನೇ ಇಸವಿಯಲ್ಲಿ ಸರ್ ಥಾಮಸ್ ಮನ್ರೋ ಸಾಹೇಬರವರ ಗವರ್ನಮೆಂಟನಿಂದ ಕೊಡಲ್ಪಟ್ಟ ಇದರಲ್ಲಿ ಮಲಫೂಸ್ ಆಗಿರುವ ಸರ್ಕ್ಯುಲರ್ ಹುಕ್ಕುಂಗಳ ನಕಲನ್ನು ನಿಮಗೆ ಕಳುಹಿಸತಕ್ಕ ಅಂಶದಲ್ಲಿ ತಿಳಿಸುವಂತೆ ನನಗೆ ಕಮ್ಮಿಷನರವರ ಅಪ್ಪಣೇ ಆಗಿರುವದೇನಂದರೆ, ಅದಕ್ಕೆ ಸಮಾನವಾಗಿ ಸಂಭವಿಸಿ ಇರುವ ಈಗಿನ ವಿದ್ಯಮಾನದಲ್ಲಿ ಈ ಸೀಮೆಯೊಳಗೆ ಕಾರ್ಭಾರೀ ಅಧಿಕಾರವನ್ನು ವಹಿಸಿ ಇರುವ ಯಾವ ಆಫೀಸರರಾದರೂ ಧಾನ್ಯಗಳ ಅರಜ್ ಬಾಜಾರ್ ನಿರಖಿನ ವಿಷಯದಲ್ಲಿ ಯಾಗಲಿ ಅವು ಧಾರಾಳವಾಗಿ ರಫ್ತಾಗತಕ್ಕ ವಿಷಯದಲ್ಲಿಯಾಗಲಿ ಎಷ್ಟು ಮಾತ್ರವೂ ಸಂಬಂಧಿಸ ಕೂಡದೆಂದು ಅಗತ್ಯವಾಗಿ ಆಜ್ಞಾಪಿಸುತ್ತಾರೆ. ಹಾಗೆ ಸಂಬಂಧಿಸೋಣದರಿಂದ ವ್ಯಾಪಾರಸ್ಥರಿಗೂ ರೈತರಿಗೂ ನಡೆಯುವ ವ್ಯವಸ್ಥೆಗಳನ್ನೆಲ್ಲ ಸ್ವೇಚ್ಛೆಯಾಗಿ ಹೊಡದು ಹಾಕುವದೇ ಅವಶ್ಯಕವಾದ ಫಲವಾಗಿರುತ್ತದೆ. ಮತ್ತು ಇಂಥಾ ಕ್ರಮಗಳ ದೆಶೆಯಿಂದ ಉಂಟಾಗುವ ಫಲವನ್ನು ಮುಂದಾಗಿ ತಿಳಿಯುವದು ಅಸಾಧ್ಯವಾಗಿರುತ್ತದೆಂದು ಅಪ್ಪಣೇ ಕೊಡುತ್ತಾರೆ.

2. ಕಮ್ಮಿಷನರವರು ಆಜ್ಞಾಪಿಸುವದೇನಂದರೆ, ನಿಮ್ಮ ಕೆಳಗೆ ಇರುವ ಯಾವ ಯೂರೋಪಿಯನ್ ಅಥವಾ ನೇಟಿವ್ ಆಫಿಸರರ ಕಾರ್ಯಗಳೂ, ಅಭಿಪ್ರಾಯಗಳೂ ಈ ವಿಷಯದಲ್ಲಿ ಸದರೀ ಹುಕ್ಕುಂಗಳಿಗೆ ಬಿನ್ನಿಸಿ ಇರುವದಾಗಿ ನಿಮಗೆ ತಿಳಿಯ ಬರುವವೋ ಅಂಥಾ ಆಫಿಸರಗಳಿಗೆ ಈ ಹುಕುಂಗಳನ್ನು ಸ್ಪಷ್ಟವಾದ ರೀತಿಯಲ್ಲಿ ತಿಳಿಸತಕ್ಕದ್ದು. ಅವರು ನಡೆದುಕೊಳ್ಳತಕ್ಕ ಬಗ್ಯೆ ಈಗ ವಿಧಿಸಲ್ಪಟ್ಟ ಹುಕುಂಗಳನ್ನು ಅವರು ಖಂಡಿತವಾಗಿ ಅನುಸರಿಸತಕ್ಕದ್ದು, ಅತ್ಯಂತಾವಶ್ಯಕವೆಂದು ಅವರಿಗೆ ತಾಕೀತ್ ಮಾಡಬೇಕು.

ಜುಡೀಷಲ್ ಇಲಾಖಾ ಸರ್ಕ್ಯುಲರ್ ನಂ. 274.

1ನೇ. ಒಬ್ಬ ಅಸಿಸ್ಟೆಂಟ್ ಮೇಜಸ್ಟ್ರೇಟರವರು ಈಚಿಗೆ ಬಂದು ಇಸ್ತಿಹಾರ್ನಾಮೆಯನ್ನು ಕೊಟ್ಟು ವಾಡಿಕೆ ಮೇರೆ ಜಿನಸೀ ವರ್ತಕರು ಅಂಗಡಿಗಳಲ್ಲಿ ವಿಸ್ತಾರವಾಗಿ ಧಾನ್ಯ ಇಟ್ಟು ಮಾರತಕ್ಕದ್ದು. ಹಾಗೆ ಮಾರದಿದ್ದರೆ ಕಠಿಣವಾದ ಸಿಕ್ಷೆ ಯುಂಟಾಗುವದೆಂದು ತಾಕೀದ್ ಮಾಡಿದರೆಂತಲೂ ಧಾನ್ಯದ ಧಾರಣೆ ಜಾಸ್ತಿ ಮಾಡಿದ ಬಗ್ಯೂ ಜಾಸ್ತೀ ಮಾಡುವಂತೆ ಇರಾದೇ ಉಂಟಾಗಿದ್ದ ಬಗ್ಯೂ ಅದೇ ಜಿಲ್ಲಾ ಕ್ರಿಮಿನಲ್ ಜಡ್ಜಿಯವರು ಆ ಜನಗಳಿಗೆ ಭಾರೀ ಜುರ್ಮಾನೆಯನ್ನೂ ಕೈದನ್ನೂ ವಿಧಿಸಿದರಂತಲೂ ಮಂತ್ರಾಲೋಚಕ ಸಭೆಯೊಳಗಣ ಘನವನ್ನು ಹೊಂದಿದ ಗವರ್ನರವರ ಜಾಹಿರಾತಿಗೆ ಬಂದಿರುವ ಸಬಬ್ ಅಂಥಾ ಸಂಗತಿಯ ಅಕ್ರಮವನ್ನೂ ಅಯುಕ್ತತೆಯನ್ನೂ ನಿಮಗೆ ಸೂಚಿಸುವಂತೆ ಅಪ್ಪಣೆ ಆಗಿ ಇರುತ್ತದೆ.

2ನೇ. ಧಾರಾಳವಾಗಿ ವ್ಯಾಪಾರ ನಡಿಯುವದರಿಂದ ಸರಿಯಾಗಿಯೂ, ತ್ವರೆಯಿಂದಲೂ ಬೇಕಾದ ಜಿನಸಿ ವೊದಗುವದಕ್ಕೂ, ವೈರು ಯಿಡತಕ್ಕದ್ದರ ಲಾಗುವಡು ವಿಳುವಂತೆ ಖರೀದೀ ಬರುವದಕ್ಕೂ ಅನುಕೂಲಿಸುತ್ತದೆ. ಹ್ಯಾಗಂದರೆ ಆ ವಿಷಯದಲ್ಲಿ ವುಂಟಾಗುವ ಖಂಡಿತಕ್ಕೂ ತ್ವರೆಗೂ ಸಮಾನವಾಗಿ ಕೇವಲ ವಿವೇಕದಿಂದ ನಡಿಸಲ್ಪಡುವ ಸರ್ಕಾರ್ ಅಧಿಕಾರದಲ್ಲಿ ಉಂಟಾಗಲಾರದೆಂದು ಜಗತ್ಪ್ರಸಿದ್ಧವಾಗಿದೆ. ಜಿನಸೀ ಬರುವದಕ್ಕೂ ಧಾರಣೆವಾಸಿಗೂ ನಿಮಿತ್ತಗಳಾದ ಸಂಗತಿಗಳು ಸ್ಥಿರವಿಲ್ಲದೆ ಯಿರುವ ಹಾಗೆಲ್ಲಾ ಅವುಗಳು ಚಂಚಲಗಳಾಗಿರಬೇಕಾಗುತ್ತವೆ. ಆದರೆ ಮಾರತಕ್ಕವರು ಕೊಳ್ಳತಕ್ಕವರು ಧಾರಾಳವಾಗಿ ಪೋಟಾ ಪೋಟಿ ಮಾಡುವದರಲ್ಲಿ ಆಯಾ ಕಾಲದವರಿಗೆ ಸದರೀ ಸಂಗತಿಗಳಿಗೆ ಅನುಗುಣವಾದ ಸ್ಥಿತಿಗೆ ನಿಲ್ಲುತ್ತದೆ. ಜಿನಸೀ ಬರತಕ್ಕದ್ದನ್ನು ವೃದ್ಧಿ ಪಡಿಸುವದಕ್ಕಾಗಲಿ ಧಾರಣೆಯನ್ನು ತಗ್ಗಿಸುವದಕ್ಕಾಗಲಿ ಅಧಿಕಾರವನ್ನು ಪ್ರಯೋಗಿಸ ಕೂಡದೆಂಬ ಸಾಮಾನ್ಯವಾದ ನಿಬಂಧನೆಗೆ ದುರ್ಭಿಕ್ಷವು ಅಪವಾದವಾಗುವದಲ್ಲವು. ಬೆಳೆ ಸ್ವಲ್ಪವಾದರೆ ಜಿನಸೀ ಬರುವದು ಸ್ವಲ್ಪವಾಗಿಯೂ ಧಾರಣೆ ಚಡಾವಾಗಿಯೂ ಆಗುತ್ತದೆ. ಹಾಗಿಲ್ಲದಿದ

ಕೆ ಸಂವತ್ಸರದ ವರಿಗೆ ಮತ್ಯಾವ ಉಪಾಯದಿಂದಲೂ ಕಾಲಕ್ಷೇಪವಾಗುವದಿಲ್ಲವು. ಬೆಳೆಯಿಡುವ ಬಗ್ಯೆ, ರಫ್ತು ಮಾಡತಕ್ಕ ಬಗ್ಯೆ, ಜಾಸ್ತಿಯಾಗಿ ಹಿಡಿಯುವ ಖರ್ಚು ಯೇಳುವಂತೆ ಧಾರಣೆ ಕೂಡ ಹೆಚ್ಚ ಬೇಕಾಗಿರುತ್ತದೆ, ಜಿನಸೀ ವ್ಯಾಪಾರಸ್ಥರಲ್ಲಿಯೇ ಪೋಟಾಪೋಟಿ ವುಂಟಾಗಿ ಧಾರಣೆ ನ್ಯಾಯವಾದ ಸ್ಥಿತಿಗೆ ಬರುವದಾದ್ದರಿಂದಲೂ, ಸಾಮಾನ್ಯವಾಗಿ ತಮ್ಮ ಪ್ರಯೋಜನ ಆ ಸಂವತ್ಸರದೊಳಗೆ, ಖರ್ಚಾಗುವ ಬಗ್ಯೆ ಯಿರುವ ಧಾನ್ಯ ಯೆಲ್ಲವನ್ನೂ ತರುವಂತೆ ಪ್ರೇರಿಸಲ್ಪಡುವರಾದ್ದರಿಂದಲೂ, ಧಾರಣೆ ಹೆಚ್ಚುವದರಿಂದ ಅಥವಾ ಜಿನಸಿ ಕಡಮೆಯಾಗುವದರಿಂದ ಭಯವೇನೂ ಯಿಲ್ಲವು.

3ನೇ. ಆದ್ದರಿಂದ ಜನಗಳು ದೊಂಬಿ ಮಾಡದೆ ವಳ್ಳೇ ಬಹಿರಂಗವಾಗಿಯೂ, ಧಾರಾಳವಾಗಿಯೂ, ವ್ಯಾಪಾರ ನಡೆಯತಕ್ಕ ವಿಷಯದಲ್ಲಿ ಯಿರುವ ಯೆಲ್ಲಾ ಆಟಂಕವನ್ನೂ ತೊಲಗಿಸಿ ಬಂದೋಬಸ್ತು ಪಡಿಸತಕ್ಕದ್ದೇ ಮೇಜಸ್ಟ್ರೇಟರು ಮಾಡಬೇಕಾದ ಮುಖ್ಯಕಾರ್ಯವಾಗಿರುತ್ತದೆ. ಮಾರದೇ ಯಿರುವದಕ್ಕೋಸ್ಕರವಾಗಲಿ ಬಹಳ ತುಟ್ಟಿಯಾಗಿ ಮಾರುವದಕ್ಕೋಸ್ಕರವಾಗಲಿ ವ್ಯಾಪಾರಸ್ಥರನ್ನು ಸಿಕ್ಷಿಸೋಣವು ಅನ್ಯಾಯವಾದ ಕಾರ್ಯವಾಗಿರುವದು ಶಿವಾಯಿ ಅವರುಗಳ ಪ್ರಯೋಜನವನ್ನೂ ಅವರು ತಿಳಿಯುವದಕ್ಕಿಂತ ಚನ್ನಾಗಿ ತಿಳಿಯುವದು ನಟನವಾಗುತ್ತೆ.

4ನೇ. ಮೇಲೆ ವಿವರಿಸಲ್ಪಟ್ಟ ನ್ಯಾಯಗಳಿಂದ ಯಾವಾಗ್ಯೂ ನೀವು ಕ್ರಮವಾಗಿ ನಡಿಯುವಿರೆಂದು ಮಂತ್ರಾಲೋಚಕ ಸಭೆಯೊಳಗಣ ಗವರ್ನರವರು ಕೋರುತ್ತಾರೆ.

ಫೋರ್ಟ್ ಸೆಂಟ್ ಜಾರ್ಜ್, 12ನೇ ಜುಲೈ ಸನ್ 1822ನೇ ಇಸವಿ.

ನಂ. 270. ತಾರೀಖು 30ನೇ ಅಕ್ಟೋಬರ್ 1876.

ಪೊಲೀಸ್ ಡಿಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಮೇಜರ್ ಗ್ರಾಂಪರಸ್ಟ ಯವರು ತಮ್ಮ ಆಫಿಸ ಚಾರ್ಜನ್ನು 1876ನೇ ಇಸವೀ ಅಕ್ಟೋಬರ್ 22ನೇ ಮರ್ಕಂ ಮಧ್ಯಾನ್ಹಾತ್ಪರ ಪುನಶ್ಚ ವಹಿಸಿದರು.

ನಂ. 271. ತಾರೀಖು 31ನೇ ಅಕ್ಟೋಬರ್ 1876.

ಸರ್ಜನ್ ಮೇಜರ್ ಹೆಂಡರಸನ್ ಯವರು ಬೆಂಗಳೂರು ಸೆಂಟ್ರಲ್ ಜೆಯಿಲ್ ಚಾರ್ಜನ್ನು ಕೆಪ್ಟನ್ ಮಕ್ಕೆಂಜಿಯವರಿಂದ 1876ನೇ ಇಸವಿ ಅಕ್ಟೋಬರ್ 22ನೇ ಮರ್ಕುಂ ಮಧ್ಯಾನ್ಹಕ್ಕೆ ಪೂರ್ವ ಪುನಶ್ಚ ವಹಿಸಿದರು.

"ಬಮೋಜಿಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರು ದುರ್ಭಿಕ್ಷ ನಿವಾರಣದ ಫಂಡ್.

ತಾರೀಖು 2ನೇ ನವಂಬರ್ 1876.

ಮೈಸೂರು ವ ಕೊಡಗು ಸೀಮೆಗಳ ಚೀಫ್ ಕಮ್ಮಿಷನರವರಿಂದ ಕೊಡಲ್ಪಟ್ಟ ನೋಟಿಸ ಅನುಸರಿಸಿ 1876ನೇ ನವಂಬರ್ 2ನೇ ಮರ್ಕುಂನಲ್ಲಿ ಬೆಂಗಳೂರೊಳಗೆ ಒಂದು ಸಭೆ ಸೇರಿ ಅವರಲ್ಲಿ ಈ ಕೆಳಗೆ ಬರುವ ನಿರ್ಣಯವು ಸರ್ವರಿಂದಲೂ ಐಕಮತ್ಯದೊಡನೆ ನೆಲಗೊಳಿಸಲ್ಪಟ್ಟಿರುತ್ತೆ.

ನಿರ್ಣಯ 1.—ತತ್ಕಾಲದಲ್ಲಿ ಪ್ರಾಪ್ತವಾಗಿ ಯಿರುವ ಮತ್ತು ಉತ್ತರೋತ್ತರ ನಿರೀಕ್ಷಿಸಲ್ಪಟ್ಟ ದುರ್ಭಿಕ್ಷದ ಬಾಧೆ ಪರಿಹಾರಾರ್ಥವಾಗಿ ಸಹಾಯ ಮಾಡುವಂತೆ ಕೂಡ್ಲೆ ಜನಗಳನ್ನು ಕೇಳತಕ್ಕದ್ದೆಂದು ಮೆಸ್ಟರ್ ಸಿ. ಬಿ. ಸಾಂಡರ್ಸ್ ಸಿ. ಬಿ. ಯವರು ತಿಳಿಸಿದರು. ಇದು ಮೇಜರ್ ಜನರಲ್ ಎಲ್ ಮರಿಸ್ಟ, ಸಿ. ಬಿ. ಯವರಿಂದ ಅನುಮೋದಿಸಲ್ಪಟ್ಟಿತು.

ನಿರ್ಣಯ 2.—ಈ ಕೆಳಗೆ ನಮೂದಿಸುವ ದೊಡ್ಡ ಮನುಷ್ಯರು ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಅಧಿಕಾರನೀ ಬೆಂಗಳೂರಲ್ಲಿ ಜನರಲ್ ಕಮ್ಮಿಟಿ ಯೆಂಬ ಒಟ್ಟು ಸಮಾಜ ಸೇರತಕ್ಕದ್ದು, ಸಬ್ ಸ್ಕ್ರಿಪ್ಷನ್‌ಗಳ ವಸೂಲಿ, ದುರ್ಭಿಕ್ಷ ನಿವಾರಣ ಮಾಡತಕ್ಕ ಕ್ರಮವನ್ನು ಕಲ್ಪಿಸುವಣ, ವಸೂಲಾದ ದುರ್ಭಿಕ್ಷ ನಿವಾರಕ ದ್ರವ್ಯದ ವಿನಿಯೋಗವನ್ನು ಸಾಮಾನ್ಯತಃ ಮೇಲ್ ವಿಚಾ

ರಣೆ ಮಾಡುವಣ, ಈ ಬಗ್ಗೇ ಕ್ಷಾಮ ನಿವರ್ತಕ ಮುಖ್ಯ ಸಭಾ ಯೊಂದು ಕರೆಯಲ್ಪಡತಕ್ಕದ್ದು ಎಂಬದಾಗಿ ಮಿಸ್ಟರ್ ಗಾರ್ಡನ್, ಸಿ. ಎಸ್. ಐ. ಯವರಿಂದ ತಿಳಿಸಲ್ಪಟ್ಟು ಮಿಸ್ಟರ್ ಎಬ್ರಹಾಂ ಯವರಿಂದ ಅನುಮೋದಿಸಲ್ಪಟ್ಟಿತು.

ನಿರ್ಣಯ 3.—ಬೆಂಗಳೂರು ಲಷ್ಕರ್ ವ ಪೇಟೆ ಯಿವುಗಳಲ್ಲಿ ಕೆಲವು ಅನುಕೂಲಗಳಾದ ಸ್ಥಳಗಳೊಳಗೆ ಕ್ಷಾಮ ನಿವಾರಕ ಕೆಲಸಗಳನ್ನು ನೆರವೇರಿಸುವದಕ್ಕೋಸ್ಕರ, ಮುಖ್ಯ ಸಭೆಯ ಹುಕ್ಕುಂ ವ ನಡವಳಿತ ಯಿವುಗಳಿಗೆ ಒಳಪಟ್ಟು ಒಂದು ಎಗ್ಜಿಕ್ಯೂಟಿವ್ ಕಮ್ಮಿಟಿ ಯೇರ್ಪಡಿಸಲ್ಪಡತಕ್ಕದ್ದು ಎಂದು ಮಿಸ್ಟರ್ ಹೇಸ್ ಸೀನಿಯರ್ ಯವರಿಂದ ತಿಳಿಸಲ್ಪಟ್ಟು ಮಿಸ್ಟರ್ ಅರಥೂನ್ ಯವರಿಂದ ಪೋಷಿಸಲ್ಪಟ್ಟಿತು.

ನಿರ್ಣಯ 4.—ಡಿಸ್ಟ್ರಿಕ್ಟು ವ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿ ಬದಸ್ತೂರ್ ಎಗ್ಜಿಕ್ಯೂಟಿವ್ ಕಮ್ಮಿಟಿ ಯೇರ್ಪಾಡಿನ ಬಗ್ಗೆ ಮುಖ್ಯ ಕಮ್ಮಿಟಿಯವರು ಡಿವಿಜನ್ ಕಮ್ಮಿಷನರ್‌ಗಳೊಂದಿಗೆ ಕಾಗದ ಪತ್ರಗಳು ನಡಿಸತಕ್ಕದ್ದೆಂದು ಮಿಸ್ಟರ್ ತಂಬುಶೆಟ್ಟರು ತಿಳಿಸಿದ್ದಕ್ಕೆ ಕಾಜಿ ಸೈಯದ್ ಅಬ್ದುಲ್ಲಾ ಷರೀಫ್ ಯವರು ಪೋಷಿಸಿದರು.

ನಿರ್ಣಯ 5.—ಯಿದಿಗಡಿ ನಮೂದಿಸಲ್ಪಡುವ ದೊಡ್ಡಮನಷ್ಯರು ಕ್ಷಾಮನಿವಾರಕ ಮುಖ್ಯ ಸಮಾಜದ, ಪ್ರೆಸಿಡೆಂಟರಾಗಿಯೂ, ಟ್ರೆಜರರಾಗಿಯೂ, ಜಾಯಿಂಟ್ ಸೆಕರಟರಿಗಳಾಗಿಯೂ, ಯಿರತಕ್ಕ ವಿಷಯದಲ್ಲಿ ಕೋರಲ್ಪಡತಕ್ಕದ್ದೆಂದು ರೆವರೆಂಡ್ ಪಿಗ್ಗಾಟ್ ಜೇಂಸ್ ಯವರು ತಿಳಿಸಿದ್ದಕ್ಕೆ ಲೆಫ್ಟಿನೆಂಟ್ ಕರ್ನಲ್ ಬೇಲ್ ಯವರು ಅನುಮೋದಿಸಿದರು.

ಮೆ|| ಗಾರ್ಡನ್ ಸಿ. ಎಸ್. ಐ. ಯವರು ಪ್ರೆಸಿಡೆಂಟ್.	ಮೆ|| ತಂಬುಶೆಟ್ಟಿಯವರು.	ಹಾನರೆರಿ ಜಾಇಂಟ್ ಸೆಕರಟೆರಿಗಳು.
ಮೆ|| ಹಡರ್ಸನ್ ಯವರು ಹಾನರೆರಿ ಟ್ರೆಜರರ್.	ಮೆ|| ಮಾಧವರಾಯರು.	

ದುರ್ಭಿಕ್ಷ ನಿವಾರಣದ ಮುಖ್ಯ ಸಮಾಜದ ಮೆಂಬರಗಳು.

ಮಿಸ್ಟರ್ ಗಾರ್ಡನ್, C. S. I. ಯವರು
,, ರಿಕ್ಕೆಟ್ಸಯವರು.
ಡಾಕ್ಟರ್ ಹೆಂಡರ್ಸನ್ M. D. ಯವರು.
,, ಆರ್ C. B. ಯವರು.
ಕರ್ನಲ್ R. ಬೇಸನ್ ಯವರು.
ರೆವರೆಂಡ್ ಪೋಪ್ D. D. ಯವರು.
ಲೆಫ್ಟಿನೆಂಟ್ ಕರ್ನಲ್ ಆರಬುತ್‌ನಟಯವರು.
ಮಿಸ್ಟರ್ ಹಡ್ಸನ್ ಯವರು.
ರೆವರೆಂಡ್ ಲಿಸ್ಟನ್ ಯವರು.
,, ಜೇಂಸ್‌ಯವರು.
ಮಿಸ್ಟರ್ ಗೋವಿಂದಶೆಟ್ಟಿ ರಾಯಬಹದೂರ್ ಯವರು.
,, ಸಭಾಪತಿ ಮೊದಲ್ಯಾರವರು.
ಕರ್ನಲ್ ವಾಲೇಸ್ C. B. ಯವರು.
ರೆವರೆಂಡ್ ಪೋಲ್ಕಸ್‌ಯವರು.
ಮೇಜರ್ ಗಾಂಪರ್ಟ್ಸ್ ಯವರು.
,, ಲಿಂಡ್ಸೆಯವರು.
,, ಕ್ಲಾರ್ಕ್ ಯವರು.
ರೆವರೆಂಡ್ ಫಾದರ್ ಕೀವೂಟೆಯವರು.
,, ಲೆಫೆಬ್ರಿಯವರು.
ಕರ್ನಲ್ ಪ್ರೆಂಡರ್ ಗ್ಯಾಸ್ಟ್ V. C. R. E. ಯವರು.
ಮಿಸ್ಟರ್ ಅಬ್ರಹಾಂಯವರು.
ರೆವರೆಂಡ್ ಹಾಡ್ಸನ್ ಯವರು.
ಮೆ|| ಲೆನಾರ್ಡ್ ಯವರು.
,, ನಾರಾಯಣಸಾಮಿ ಮೊದಲ್ಯಾರ್ರವರು.
,, ಯೆಕಾಂಬರ ಸಾಹುಜಿಯವರು.
,, ಯಲಿಮಲ್ಲಪ್ಪಶೆಟ್ಟಿಯವರು.
,, ಲೇಸಿಯವರು.
,, ದೊಡ್ಡ ಹೇಸ್‌ಯವರು.
ರೆವರೆಂಡ್ ಸಿಮ್ಸನ್‌ಯವರು.
ರೆವರೆಂಡ್ ವಿಲಿಯಂಸ್ ಯವರು.
ಮಿಸ್ಟರ್ ತಂಬುಶೆಟ್ಟಿಯವರು.
,, ಆನಂದರಾಯರವರು.
,, ರಾಸ್‌ಯವರು.
,, ಇ. ಪೆಕೇರಾಯವರು.
ಮಿಸ್ಟರ್ ಹೇಮಾಜಿರಾವ್ ಯವರು.
,, ಮಾಧವರಾವ್ ಯವರು.
ಕೇಪ್ಟನ್ ರಾಸ್ ಕಾಂಪರ್ನ R. E. ಯವರು.
ಮೇಜರ್ ಯಿವಿಂಗ್‌ಯವರು.
ಮೆ|| ಚಾರ್ಲ್ಸ್‌ಯವರು.
,, ಕೋಟಿ ಮಹಮುದ್ ಹುಸೇನ್ ಯವರು.
,, ಮಹಮುದ್ ಕಾಸಿಂಖಾಂಯವರು.
,, ಗೋಪಾಲ್‌ದಾಸ್‌ಯವರು.
,, ಶೇತೂರಾವ್ ಯವರು.
,, ಯ. ಶ್ರೀನಿವಾಸಾಚಾರ್ಯರು.
,, ಬಡೇ ಮಹಮುದ್ ಸಾಹೆಬರು.
,, ಮುತ್ತುಸಾಮಿ ಶೆಟ್ಟಿಯವರು.
,, ಕೃಷ್ಣೈಯಂಗಾರ್ರವರು.
,, ವರದೈಯಂಗಾರ್ರವರು.
,, ಅಬ್ದುಲ್ ಖಾದೂಸ್‌ಯವರು.
ಕರ್ನಲ್ ಬೆಲ್‌ಯವರು.
ರೆವರೆಂಡ್ ಡಿ, ಕೆರೋಜೆನೆಟಯವರು.
ಡಿಟೋ ಕ್ಲೀನರ್ ಯವರು.
ಮೆ|| ಅರಥೂನ್ ಯವರು.
,, ಜಯಿಲ್ಸ್‌ಯವರು.
,, ಫಿಟ್ಜ್‌ಜರಲ್ಡ್ ಯವರು.
,, ದೊಡ್ಡಿ ವೆಂಕಟಸ್ವಾಮಿಶೆಟ್ಟಿಯವರು.
,, ಮಂಡಿ ಮರಿಯಣ್ಣನವರು.
ಲೆ ಕರ್ನಲ್ C. A. ಬೇಸನ್ ಯವರು.
ಮೆ|| ಹ್ಯುಯಬೆರ್ಸನ್ ಯವರು.

ಪಬ್ಲಿಕ್ ವರಿಕ್ಸ್,

ನಂ. 50. ತಾರೀಖು 31ನೇ ಅಕ್ಟೋಬರ್ 1876.

4ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜನೀಯರ್ ಮೆಸ್ಟರ್ ಲಿನಾಂ ಯವರು ಪಬ್ಲಿಕ್ ವರಿಕ್ಸ್ ಕೋಡ್ 2ನೇ ಚಾಪ್ಟರ್ 4ನೇ ಸೆಕ್ಷನ್ 22ನೇ ಕಲಂನಲ್ಲಿ ವಿಧಿಸಲ್ಪಟ್ಟಿರುವ ರೀತ್ಯಾ ಕನ್ನಡಭಾಷೆಯಲ್ಲಿ ಡಿಪಾರ್ಟ್‌ಮೆಂಟಲ್ ಸ್ಟ್ಯಾಂಡರ್ಡ್ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾದರು.

W. R. JOHNSON, *Lieut.-Col.*,
Offg. Secretary, P. W. D.

ಇಂಡ್ಯಗವರ್ನಮೆಂಟಿನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇಸ್ತಿಹಾರ್ ನಾಮೆ.

ಜ ನ ರ ಲ್ .

ಫಾರಿನ್ ಇಲಾಖಾ.

ತಾರೀಖು 20ನೇ ಅಕ್ಟೋಬರ್ 1876.

ನಂ. 2676 G. ಕಲ್ಯಾಣ ಸುಂದರಂ ಚಟ್ಟಿಯವರು ತಮ್ಮ ಉದ್ಯೋಗ ಅಂದರೆ ವೈಸೂರು ಕಮ್ಮಿಷನ್ನಲ್ಲಿ 6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರ್ ಕೆಲಸಕ್ಕೆ 1876ನೇ ಇಸವಿ ಅಕ್ಟೋಬರ್ ಗುರ್ರೇ ತಾರೀಖು ಲಗಾಯತು ರಾಜೀನಾಮೆ ಕೊಡಲಿಕ್ಕೆ ಅಪ್ಪಣೇ ಕೊಡಲ್ಪಟ್ಟಿರುತ್ತಾರೆ.

F. HENVEY,
For Offg. Secy. to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ॥ 4, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಜೇರೀಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 3ನೇ ನವಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ಯಾದಿಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಕ್ರಿ. ಅ. ೬೩	ಬಸವಲಿಂಗ್ಯೆಯ ..	.. ..	೬ನೇ ನವಂಬರು
ಕ್ರಿ. ಪಿಟಿಷನ್ ೩	ಮಹಂಮದ್ ವುಸಮಾನ್ ..	.. ..	ಡಿಟೋ
ಸ್ಪಿ. ಅ. ೫೩	ವುಮ್ಮಾಜಿ ..	ಸುಬ್ಬಣ್ಣಾ ..	೩ನೇ ನವಂಬರು
ಸ್ಪಿ. ಅ. ೬೪	ಕಪನೀಪತ್ಯೆಯ ..	ನಂಜಮ್ಮ ..	ಡಿಟೋ
ಕೊ. ಸ್ಪಿ. ಅ. ೧೧	ಮೋದ್ಯೆಯ ..	ಮಾದ್ಯೆಯ ವಗ್ಯೆರೆ ..	ಡಿಟೋ
ಸ್ಪಿ. ಅ. ೬೩	ಮೆ॥ ಮರಗಲರ್ ವಗ್ಯೆರೆ ..	ಗಂಗಾಧರಶೆಟ್ಟಿ ..	೧೧ನೇ ನವಂಬರು
ಸ್ಪಿ. ಅ. ೬೫	ಚಿಕ್ಕ ಹೊನ್ನೇಗೌಡ ..	ಲಕ್ಷ್ಮೈಯ ವಗ್ಯೆರೆ ..	೧೪ನೇ ನವಂಬರು
ಸ್ಪಿ. ಅ. ೬೬	ಶ್ರೀನಿವಾಸ್ಯೆಯ ..	ಅಳಿಂಗ್ರ್ಯೆಯ ..	ಡಿಟೋ
ಸ್ಪಿ. ಅ. ೬೨	ವೆಂಕಟರಮಣ್ಯೆಯ ..	ತಂಮ್ಯೆಯ ವಗ್ಯೆರೆ ..	೨೧ನೇ ನವಂಬರ್
ಸ್ಪಿ. ಅ. ೬೯	ವೆಂಕಟರಮಣಪ್ಪಾ ವಗ್ಯೆರೇ ..	ಡಾಕ್ಟರ್ ಅರ್‌ಸಾಹೆಬರು ವಗ್ಯೆರೆ ..	ಡಿಟೋ
ಕ್ರಿ. ಅ. ೨೦	ಜಾಗಲೂರಾ ..	..	ಡಿಟೋ
ಸ್ಪಿ. ಅ. ೨೦	ನೀಲಕಂಠದೇವರು ..	ಸಿದ್ದಲಿಂಗದೇವರು ..	೨೫ನೇ ನವಂಬರ್
ಸ್ಪಿ. ಅ. ೨೧	ಕರಿಗೌಡಾ ..	ಜೊಮ್ಮಕ್ಕಾ ವಗ್ಯೆರೆ ..	ಡಿಟೋ
ಸ್ಪಿ. ಅ. ೬೭	ನಾಚಾ ..	ಶಿದ್ದಲಿಂಗಪ್ಪ ವಗ್ಯೆರೆ ..	೨೭ನೇ ನವಂಬರ್
ಕೊ. ಸ್ಪಿ. ಅ. ೧೪	ಹೆನರಿಮೇನ್ ..	ಸುಬ್ಬಾ ವಗ್ಯೆರ ..	ಡಿಟೋ

J. D. GORDON, *Judl. Commr.*

ಪೊಲೀಸ್ ಇಲಾಖಾ.

ತಾರೀಖು 31ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರ್ ಷೇಕ್ ವುಮ್ಮರ್ ಯವರಿಗೆ ಮಾಹೇ ಮಜಕೂರು 25ನೇ ತಾರೀಖು ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಹುಕ್ಕುಂ ಬಮೋಜೀಬ್,"
E. D. GOMPERTZ,
Dy. Inspr. General of Police.

ಇನಾಂ ಇಲಾಖಾ.

ಸನ್ 1876ನೇ ಇಸವೀ ಶಪ್ಟಂಬರ್ 30ನೇ ಮರ್ಕ್ಕುಮಿಗೆ ಆಖೈರಾಗುವ ಶೀ ಮಾಹೇಯಲ್ಲಿ ಸರ್ಕಾರಣವಾಗಿ ರದ್ದು ಮಾಡಲ್ಪಟ್ಟ ಟೈಟಲ್ ಡೀಡಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು	ಇನಾಮಿನ ತರಹಾ.	ತಪಸೀಲ್. ಎ.	ಬೀಜವರಿ. ಖ. ಕೊ. ಪ.	ಕಂದಾಯ. ರೂ. ಆ. ಪೈ.	ಜೋಡೀ. ರೂ. ಆ. ಪೈ.	ಜೋಡೀ ಕ್ವಿಟ್ರೆಂಟ್. ರೂ. ಆ. ಪೈ.	ಮುಜರಾಯಿ ಮೊಬಲಗ್. ರೂ.ಆ.ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ಮುಲ್ಕೀ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಬೇತಮಂಗಲ	ಜೋಡೀಜಂಗಮನಹಳ್ಳಿ	ಬೇತಮಂಗಲದ ಸಂಪಂಗಿರಾಮಯ್ಯ	ಬ್ರಹ್ಮಾದಾಯ	..	0 0 11½	0 5 0	0	0 2 0	0	36584-2008	ಇನಾಂದಾರರು ಒಂದು ವರುಷದೊಳಗಾಗಿ ಟೈಟಲ್ ಡೀಡಗಳನ್ನು ತೆಗೆದುಕೊಳ್ಳಕ್ಕೆ ತಪ್ಪಿದ್ದರಿಂದ	ನಂಬರು 251 ತಾರೀಖು 10ನೇ ಜುಲೈ 1876.
ಡಿಟ್ಟೋ	ಹುಣಕೊಂಡ	ಮಾದಮುತ್ತನಹಳ್ಳಿ ನಾರಣಪ್ಪ, ನೀಲಕಂಠಪ್ಪ	ಡಿಟ್ಟೋ	..	0 14 7	17 11 4	10 7 7	14 0 0	0	36280-2078		
ಮುಳಬಾಗಲ್	ಕೆರೆಸಾಮಂಗಲ	ಸಂಗಲೀರಘೋತ್ತಮಾಚಾರಿ	ಡಿಟ್ಟೋ	..	0 4 0	3 3 3	0	1 8 0	0	33689	ಕ್ವಿಟ್ರೆಂಟ್ ಪಾವತೀ ಮಾಡದ ಸಬಬ್ ಕೋಲಾರ ಡಿ|| ಡೆಪ್ಯುಟಿ ಕಮಿಷನರವರು ಇನಾಂ ಸರಕಾರಕ್ಕೆ ಸೇರಿಸಿಕೊಂಡರು	ನಂಬರ್ 293 ತಾರೀಖು 19ನೇ ಜುಲೈ 1876.
ಹೊಸಕೋಟೆ	ಜೋಡೀಗುಲಗುಟ್ಟಹಳ್ಳಿ	ಕಲ್ಲುಕುಂಟೆ ರಾಮಾಚಾರಿ ಮಗ 1 ಟಿ. ಕೃಷ್ಣಮಾಚಾರಿ, 2 ಡಿ|| ಶ್ರೀನಿವಾಸಾಚಾರಿ ಮಗ ಕೃಷ್ಣಮಾಚಾರಿ	ಡಿಟ್ಟೋ	..	0	116 15 2	67 6 9	74 0 0	0	33153	ಈ ಇನಾಂಗಳಿಗೆ ಬದಲಾಗಿ ಹೊಸ ಜಮೀನುಗಳು ಕೊಡಲ್ಪಟ್ಟವು	ನಂಬರ್ 292 ತಾರೀಖು 19ನೇ ಜುಲೈ 1876.
ಶ್ರೀನಿವಾಸಪುರ	ನಗದೇನಹಳ್ಳಿ	ಶ್ರೀನಿವಾಸಪುರದ ಬಾಳಜೋಯಿಸ 2 ಸೀತಾರಾಮ ಶಾಸ್ತ್ರಿ	ಡಿಟ್ಟೋ	..	0 5 0	4 1 2	0	2 0 0	0	30021	ಡಿಟ್ಟೋ	ನಂಬರು 288 ತಾರೀಖು 19-7-76.
ಚಿಕ್ಕಬಳ್ಳಾಪುರ	ಕಳವಾರ	ಬೆಂಗಳೂರಿಂದ ಬಳ್ಳಾರಿಗೆ ಹೋಗುವ ರಸ್ತೆಯಲ್ಲಿ ಹಾರೋಬಂಡೇಬಳಿ ಹಾಕಿಯಿರುವ 113 ಮರಗಳುಳ್ಳ ಗುಂಡುತೋಪಿನ ತತ್ಕಾಲದ ವಿಚಾರಣೆಕರ್ತರು	ಧರ್ಮಾದಾಯ	..	4 10 0	26 2 11	13 1 6	13 2 0	0	31483	ಇದಕ್ಕೆ ಬದಲಾಗಿ ಬೇರೆ ಒಂದು ಹೊಸ ಜಮೀನ್ ಕೊಡೋಣಾಯಿತು	ನಂಬರು 287 ತಾರೀಖು 19ನೇ ಜುಲೈ 1876.

449

ಚಿಕ ಬಳ್ಳಾಪುರ	ಮುಜರಾಯಿ	ಚಿಕ್ಕಬಳ್ಳಾಪುರದ ಅಣ್ಣಯ್ಯಾಚಾರಿ	ಬ್ರಾಹ್ಮಾದಾಯ	..	0	0	0	0	7 8 0	11	ವೊಬಲಗ ಜೀವಮಾನದ ವರೆಗೆ ಸಲ್ಲತಕ್ಕದ್ದಾಗಿ ಇನಾಂದಾರ ಮೃತಪಟ್ಟದ್ದರಿಂದ	ನಂಬರು 479 ತಾರೀಖು 27ನೇ ಶಪ್ಟಂಬರ 1876.
ಗುಮ್ಮನಾಯ್ಕನಪಾ||	ಬಾಗೇಪಲ್ಲಿ	ಬಾಗೇಪಲ್ಲಿ ಶ್ರೀನಿವಾಸಾಚಾರ್	ಡಿಟ್ಟೋ	1·23	0	8 0 0	0	4 0 0	0	439		ನಂಬರು 286 ತಾರೀಖು 19ನೇ ಜುಲೈ 1876.
ಡಿಟ್ಟೋ	ಚೇಳೂರ	ಚಿಕ್ಕಬಳ್ಳಾಪುರದ ವೇಂಕಟಾಚಾರ್ ಮತ್ತು ಎರಡುಮಂದಿ	ಡಿಟ್ಟೋ	·20	0	2 2 11	0	1 0 0	0	865	ರಾಜೀನಾಮೆ ಕೊಟ್ಟದ್ದು	ನಂಬರ್ 357 ತಾರೀಖು 4ನೇ ಆಗಸ್ಟು 1876.
ಡಿಟ್ಟೋ	ಬಿಳ್ಳೂರು	ಬಿಳ್ಳೂರುವೀರಭದ್ರಪ್ಪ	ಸರಾಪ್	·31	0	3 3 3	1 12 0	1 12 0	0	258		
ಚನ್ನಗಿರಿ	ಭೈರನಹಳ್ಳಿ	ಕೃಷ್ಣರಾಜಾಚಾರಿ	ಬ್ರಹ್ಮಾದಾಯ	2·48	0	2 5 10	1 1 0	1 4 0	0	387		ನಂಬರ್ 463,22ನೇ ಶಪ್ಟಂಬರ್ 1876.
ಕೋಲಾರ	ಕಲ್ಲಹಳ್ಳಿ	ಮಡಿಬಾಳ್ ನಾರಣಪ್ಪ ಜೇರೆ ಇಬ್ಬರು	ಡಿಟ್ಟೋ	..	0 6 12¼	9 1 9	0	4 8 0	0	31234	ಡಿಟ್ಟೋ.	ನಂ. 462 ತಾ||22ನೇ ಶಪ್ಟಂಬರ್ 1876.
ಮಾಲೂರು	ಮಾಸ್ತಿ	ಮುನಿವೆಂಕಟ	ಡಿಟ್ಟೋ	1·38	0	5 0 0	0	2 8 0	0	1406		ನಂ. 459 ತಾ||22ನೇ ಶಪ್ಟಂಬರ್ 1876.
ಹೊನ್ನಾಳಿ	ಕೋಡಿಕೊಪ್ಪ	ತತ್ಕಾಲಕ್ಕೆ ನ್ಯಾಯಮತಿಯಲ್ಲಿ ಹನುಮಂತದೇವರ ದೇವಸ್ಥಾನದ ವಿಚಾರಣೆ ಕರ್ತರು	ದೇವಾದಾಯ	·75	0	1 14 3	1 2 2	1 2 0	0	271		ನಂಬರ್ 466 ತಾರೀಖು 22ನೇ ಶಪ್ಟಂಬರ್ 1876.
ಸೊರಬ	ದೊರವಹಳ್ಳಿ	ಆನವಟ್ಟಿ ಸ್ವಾಮಿರಾವ್	ಬ್ರಹ್ಮಾದಾಯ	..	0	45 6 0	15 9 6	30 0 0	0	37291-45	ಕಂದಾಯವನ್ನೂ ಕ್ವಿಟ ರೆಂಟನ್ನೂ ತಗ್ಗಿಸಿ ನಂಬರ್ 2ನೇ ನಮೂನೆಇಂದ ಹೊಸ ಕವಿಸ್ಟ್ರಾಕ್ಟು ಕೊಡಲ್ಪಟ್ಟಿರುತ್ತೆ.	ನಂಬರ್ 461 ತಾರೀಖು 22ನೇ ಶಪ್ಟಂಬರ್ 1876.

ನಂ. 7. ತಾರೀಖು 6ನೇ ಅಕ್ಟೋಬರ್ 1876.

ಇನಾಂ ದಾರ್ರಿಗೆ ಯಿದರಿಂದ ತಿಳಿಸಲ್ಪಡುವದೇನಂದರೆ—ಈ ಮಾರ್ಜಿನಲ್ಲಿ ಕಂಡ ತಾಲ್ಲೂಕುಗಳಲ್ಲಿರುವ ಇನಾಮತಿಗಳಿಗಾಗಿ 950 ಅಡ್ ಯಿಂಟರಿಂ ಸರ್ಟಿಫಿಕೇಟಗಳು ಬಟವಾಡೇ ಬಗ್ಯೆ 1876ನೇ ಅಕ್ಟೋಬರ್ 6ನೇ ಮಾರ್ಕ್ಕಂನಲ್ಲಿ ಬೆಂಗಳೂರು ಕೋಲಾರ, ತುಮಕೂರು ವ ಕಡೂರು ಈ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರಗಳಿಗೆ ಕಳುಹಿಸಲ್ಪಟ್ಟವೆ.

ಹೊಸಕೋಟೆ, ದೇವನಹಳ್ಳಿ, ನೆಲಮಂಗಲ, ಬೆಂಗಳೂರು, ಗೋರೀಬಿದನೂರು, ಶ್ರೀನಿವಾಸಪುರ, ಅಂಬಾಜಿದುರ್ಗ, ಮುಳಬಾಗಿಲ್, ಗುಮ್ಮನಾಯಿಕನಪಾಳ್ಯ, ಶಿಡ್ಲಘಟ್ಟ, ಬೇತಮಂಗಲ, ಚಿಕ್ಕಬಳ್ಳಾಪುರ, ಕೋಲಾರ, ಕೊರಟಿಗೆರೆ, ವ ಕೊಪ್ಪ.

ಅವರುಗಳು ಸದರೀ ಪ್ರಕಾರ ಮೇಲೆ ಕಂಡ ತಾಲ್ಲೂಕು ಅಲ್‌ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸಗಳು ತಲಪಿದ ಮೇಲೆ ಐರ್ಜ ಸರ್ಟಿಫಿಕೇಟಗಳನ್ನು ತೆಗದುಕೊಳ್ಳುವ ಬಗ್ಯೆ ಹಾಜರ್ ಆಗತಕ್ಕದ್ದು. ಅಂತಾ ನೋಟಿಸಗಳನ್ನು ವಿಳಂಬ ಮಾಡದೆ ಕೊಡತಕ್ಕದ್ದೆಂದು ಸದರೀ ಅಮಲ್‌ದಾರ್ರುಗಳಿಗೆ ಹುಕುಂ ಆಗಿರುತ್ತೆ.

ನಂ. 9. ತಾರೀಖು 25ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟು ಕಾರ್ಖಾನಹಳ್ಳಿ ತಾಲ್ಲೂಕುನಲ್ಲಿ ಯಿರುವ ಇನಾಂಗಳ ಸಲುವಳಿ ವಿಚಾರಣೆಯೂ ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿಸ್ಟರ್ ಸೈಯದ್ ನಸೀರುದ್ದೀನಯವರಿಂದ ಹಾರೋಹಳ್ಳಿಯಲ್ಲಿ ನಡಿಸಲ್ಪಟ್ಟು 1876ನೇ ನವಂಬರ್ 15ನೇ ಮಾರ್ಕ್ಕಂನೊಳಗೆ ಷುರುವಾಗುವದು.

2. ಸದರೀ ತಾಲ್ಲೂಕಿನಲ್ಲಿರುವ ಇನಾಂಗಳೊಳಗೆ ಸಂಬಂಧಪಟ್ಟ ದರೋಬಸ್ತು ಜನಗಳೂ ರೂಬರೂ ಯಾ ತಮ್ಮ ಮುಖ್ತಾರ್‌ಕರ ಮೂಲಕ ಹಾಜರಾಗಿ ತಮ್ಮ ತಮ್ಮ ಹಕ್ಕು ದಾರೀಗಳನ್ನು ಕುರಿತು ವ್ಯವಹರಿಸಿಕ್ಕೊಳ್ಳುವದಕ್ಕೂ ತಮ್ಮವಶದಲ್ಲಿರುವ ಸನ್ನದುಗಳು ವ ಯಿತರ ದಸ್ತಾವೇಜಗಳನ್ನು ಹಾಜರ್ ಮಾಡಲಿಕ್ಕೂ ಯಿದರಿಂದ ತಾಕೀದ್ ಮಾಡಲ್ಪಟ್ಟಿರುತ್ತಾರೆ ಹಾಗೆ ಮಾಡದೆ ಯಿದ್ದ ಪಕ್ಷಕ್ಕೆ ಪ್ರಥಮತಃ ಇನಾಂಗಳು ಜಪ್ತೀಕೆಳಗೆ ತರಲ್ಪಟ್ಟು ತರುವಾಯ ಆಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

ನಂ. 10. ತಾರೀಖು 25ನೇ ಅಕ್ಟೋಬರ್ 1876.

ಸರ್ 1876ನೇ ಅಕ್ಟೋಬರ್ 7ನೇ ಮಾರ್ಕ್ಕಂ ಮೈಸೂರು ಗೆಜೆಟ್ 2ನೇ ಭಾಗದ 92ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ ಮಾಹೇ ಮಜಕೂರ್ 3ನೇ ಮಾರ್ಕ್ಕಂ 6ನೇ ನಂಬರ್ ಯಿಸ್ತಿಹಾರ್ ನಾಮೇಯುಯಿದರಿಂದ ರದ್ದು ಮಾಡಲ್ಪಟ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನ ಇನಾಂವಿಚಾರಣೆ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಮನಾವಾಡಿಯಿರುತ್ತೆ.

R. A. COLE,
Supt. of Inam Settlements.

ಪಬ್ಲಿಕ್ ವರ್ಕ್ಸ ಇಲಾಖಾ.

ತಾರೀಖು 31ನೇ ಅಕ್ಟೋಬರ್ 1876.

ರೈಫಲ್ ಬಟ್ ಭೂಮಿಯಿಂದ ಸುಬೇದಾರ್ರ ಛತ್ರಕ್ಕೆ ಹೋಗುವ ಬಳ್ಳಾರಿ ರಸ್ತೆ $2\frac{1}{4}$ ಮೈಲಗಳಿಂದ $3\frac{1}{2}$ ಮೈಲಿಗಳ ವರಿಗೆ ಈ ಮಧ್ಯ ಭಾಗವು ಒಡೆಯಲ್ಪಟ್ಟು ಬೆಂಗಳೂರು ವಾಟರ ಸಪ್ಲೈ ಕಾಮಗಾರಿಗಳಿಗೆ ಬೇಕಾಗಿರುವದರಿಂದ ಭಂಡಿಗಳು ತಿರಗಲಿಕ್ಕೆ ಬಂದ್ ಮಾಡಲ್ಪಟ್ಟಿರುತ್ತೆ.

W. HENDERSON,
Exec. Engr., Bangalore Water-Supply.

ರಿಜಿಸ್ಟ್ರೇಷನ್ ಇಲಾಖಾ.

ಸನ್ 1876—77ನೇ ಇಸವಿ ಸರ್ಕ್ಯುಲರ್ ಮೆಮೊರಾಂಡಂ ನಂಬರು 4.

ತಾರೀಖು 27ನೇ ಅಕ್ಟೋಬರ್ 1876.

ಮೈಸೂರು ವ ಕೊಡಗು ಸೀಮೆಗಳಲ್ಲಿರುವ ರಿಜಿಸ್ಟ್ರಾರ್ ವ ಸಬ್ ರಿಜಿಸ್ಟ್ರಾರ್‌ಗಳಿಗೆ.

ತಾಲ್ಲೂಕು ಕಸಬೇಗಳಿಗೆ ಅನಾನುಕೂಲವಾದಷ್ಟು ದೂರದಲ್ಲಿರುವ ಗ್ರಾಮಗಳಲ್ಲಿ ವಾಸಮಾಡುವ ರೈತರುಗಳಿಗೂ, ಯಿತರರಿಗೂ, ಯಿನ್ನೂ ಜಾಸ್ತಿಯಾಗಿ ಸುಲಭಗಳನ್ನು ಉಂಟುಮಾಡುವ ಉದ್ದೇಶದಿಂದ, ಸಬ್ ರಿಜಿಸ್ಟ್ರಾರ್‌ಗಳು ಸರ್ಕ್ಯುಟಿನಲ್ಲಿರುವಾಗ್ಯೆ ರಿಜಿಸ್ಟ್ರೇಷನ್ ಬಗ್ಯೆ ತಮಗೆ ಹಾಜರ್ಮಾಡಲ್ಪಡುವ ದಸ್ತಾವೇಜುಗಳನ್ನು ಅವುಗಳಮೇಲೆ ಹಾಜರ್ಮಾಡಿದ ತಾರೀಕ್ ದಸ್ತಾವೇಜು ಬರದು ಕೊಟ್ಟವರ ಗುರ್ತುಗಳನ್ನು ಮಂದಟ್ಟು ಮಾಡಿಕೊಂಡ ಅಂಶ, ದಸ್ತಾವೇಜ್ ಬರದುಕೊಟ್ಟದ್ದು ಉಂಟೆಂದು ಒಪ್ಪಿಕೊಂಡ ಅಂಶ, ಮತ್ತು ದಸ್ತಾವೇಜು ಹಾಜರ್ಮಾಡುವ ಕಾಲದಲ್ಲಿ ತಿಳಿಯಪಡಿಸ ಬೇಕಾದ ಯಿನ್ನು ಯಿತರ ಆವಶ್ಯಕವಾದ ಸಂಗತಿಗಳು ಯಿವುಗಳನ್ನು ರಿಕಾರ್ಡು ಮಾಡಿ ತೆಗದುಕೊಳ್ಳಲಿಕ್ಕೆ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಯವರು ಅವರಿಗೆ (ಸಬ್ ರಿಜಿಸ್ಟ್ರಾರ್‌ಗಳಿಗೆ) ಇದರಿಂದ ಅಧಿಕಾರ ಕೊಡುತ್ತಾರೆ. ಸದರೀ ದಸ್ತಾವೇಜು ಮೇಲೆ ಹೇಳಲ್ಪಟ್ಟ ಅಂಶಗಳೆಲ್ಲಾ ಕ್ರಮವಾಗಿ ರಿಕಾರ್ಡು ಮಾಡಲ್ಪಟ್ಟು ಸಬ್ ರಿಜಿಸ್ಟ್ರಾರ್ ಯಿಂದಲು, ಅದಕ್ಕೆ ಸಂಬಂಧಪಟ್ಟ ಜನಗಳಿಂದಲು, ಮಮೂಲ್ ಮೇರೆ ರುಜು ಮಾಡಲ್ಪಟ್ಟ ಬಳಿಕ ಸರಿಯಾದ ರಿಜಿಸ್ಟರ್‌ನಲ್ಲಿ ರಿಜಿಸ್ಟರ್ಮಾಡತಕ್ಕ ಬಗ್ಯೆ ತಾಲ್ಲೂಕು ಕಚ್ಚೇರಿಗೆ ಕಳಿಹಿಸಲ್ಪಡತಕ್ಕದ್ದು. ಮತ್ತು ಸಬ್ ರಿಜಿಸ್ಟ್ರಾರ್ ಯವರು ಕಸಬೇಗೆ ವಾಪಸ್‌ಬಂದ ಬಳಿಕ ಅವರು ರುಜುಮಾಡಿ ರಿಜಿಸ್ಟರ್ ಪೂರೈಸತಕ್ಕದ್ದು. ದಸ್ತಾವೇಜು ಹಾಜರ್ಮಾಡಿದವನು ತಾನೇ ಆ ದಸ್ತಾವೇಜನ್ನು ತರಿಸಿಕೊಳ್ಳುವದಕ್ಕಾಗಲಿ ಒಬ್ಬ ಭತ್ತಾ ಜವಾನನ ದ್ವಾರಾ ತನಗೆ ವಾಪಸು ಬರಮಾಡಿಕೊಳ್ಳುವದಕ್ಕಾಗಲಿ, ಯೇರ್ಪಾಡುಮಾಡಿಕೊಳ್ಳಬೇಕು.

H. HUDSON,
Inspector General of Registration.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಹುಣಸೂರು,	4ನೇ ನವೆಂಬರ್	1876	ಹೆಚ್ಚು ಕಡಮೆ 560 ಟನ್‌ಗಳ ವಜನಿ.
ಶ್ರೀರಂಗಪಟ್ಣ,	8ನೇ ,,	,,	
ಬೆಂಗಳೂರು,	1ನೇ ಡಿಶೆಂಬರ್	,,	ಹೆಚ್ಚುಕಡಮೆ 100 ಟನ್‌ಗಳು.
ಫ್ರೇಜರ್‌ಪೇಟೆ	18ನೇ ,,	,,	80 ,,

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವೆಂಬರ್ 28ನೇ ಮುರ್ಕಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯಾ ಹರಾಜ್‌ಗಳು ನವೆಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವವು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವೆಂಬರು 11ನೇ ಮುರ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮುರ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತುಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ್, ಪೌಂಡ್, ಹಂಡ್ರೆಡ್ ವೆಯಿಟ್ ಟನ್‌ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ತಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879 80,—1880-81, ಮತ್ತು 1881-82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರಲ್ 1ನೇ ಮರ್ಸ್ಕುಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಿಡ ದರಖಾಸ್ತು ಪಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮರ್ಸ್ಕುಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಿಡ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀ ನೋಟಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ, ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60 ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ಆಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರಲ್ 1ನೇ ಮರ್ಸ್ಕುಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮರ್ಸ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮರ್ಸ್ಕುಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ ಯಿಟ್ಟ ಮೊಬಲಗಿಗೆ ನಿಸಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನ್ಕರವಾಗಿ ಡಿಪಾಜಿಟ ಮೊಬಲಗಿನ ನಿಮಿತ್ಯವಿಲ್ಲದೆಯೇ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ ಮೊಬಲಗ್ ಗವರರ್ಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

Notice of an application from Venkoba Rao to be appointed a guardian to the minor sons of the deceased Tirumalachari.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಸ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 82.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಮಾಗಡೀ ತಾಲ್ಲೂಕು ಸೋಲೂರು ಹೋಬಳಿ ಠೀಕದಾರಿಯಲ್ಲಿಯಿದ್ದು ಮಳೂರಲ್ಲಿ ಮೃತಪಟ್ಟ ತಿರುಮಲಾಚಾರಿ ಯಂಬವನ ಆಸ್ತಿಗೆಲ್ಲಾ ಕ್ಲೊಸ್ಪೇಟೆಯಲ್ಲಿರುವ ಫಾರೆಸ್ಟು ಇಲಾಖಾ ಮಣೇಗಾರ ವೆಂಕೋಬರಾಯ ನೆಂಬವನ್ನ ಐರ್ಜ ತಿರುಮಲಾಚಾರಿಯ ಇಬ್ಬರು ಮೈನರ್ ಗಂಡುಮಕ್ಕಳು ದೊಡ್ಡವರಾಗುವ ವರಿಗೂ ಗಾರ್ಡಿಯನ್ನಾಗಿ ನೇಮಿಸಬೇಕೆಂನು ಕ್ಲೋಸ್ಪೇಟೆ ತಾಲ್ಲೂಕು ಅಮಿಲ್ದಾರು 20—7—76ನೇ ಮರಕುಂ 510ನೇ ನಂಬರ್ ರಿಪೋರ್ಟು ಮಾಡಿರುತಾರಾಗಿ ಈಕೇಸನ್ನು ಚಾಲ್ತೀ ಇಸವಿ ನವಂಬರ್ ತಿಂಗಳು 28ನೇ ತಾರೀಖು ದಿವಿ 12 ಘಂಟೆಗೆ ಪೋಸ್ಟು ಮಾಡಿರುತ್ತೆ. ಈ ವಿಷಯದಲ್ಲಿ ಆಕ್ಷೇಪಿಸತಕ್ಕವರು ಯಾರಾದರೂ ಯಿದ್ದರೆ ಡಿಟೋ ತಾರೀಖಿನಲ್ಲಿ ಸದರೀ ಟೈಮಿನಲ್ಲಿ ಈ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ಬತಾರೀಖು 28ನೇ ಅಕ್ಟೋಬರ್ 1876ನೇ ಇಸವಿ.

L. RICKETTS,
Offg. Dy. Commr.

KOLAR DISTRICT.

Notice of sale of Lac Contract for 5 years.

ಕೋಲಾರ ಡಿಸ್ಟ್ರಿಕ್ಟ ಡೆ|| ಕಮ್ಮಿಷನರವರ ಕಚ್ಚೇರಿಯಿಂದ.

ಯಿದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧವಾಗಿ ತಿಳಿಯಪಡಿಸುವದೇನಂದರೆ,—3 ಸಾಲಿಗೋಸ್ಕರ ಗುತ್ತಿಗೆ ಕೊಟ್ಟದ್ದ ಡಿಸ್ಟ್ರಿಕ್ಟ ಮಜಕೂರು ಅರಗಿನ ಯಿಜಾರೆಯು 1877ನೇ ಇಸವಿ ಮಾರ್ಚಿ 31ಕ್ಕೆ ಪೂರೈಸುತ್ತೆ.

ಮುಂದೆ 5 ವರುಷದ ಗುತ್ತಿಗೆ ಕೊಡತಕ್ಕದ್ದೆಂದು ಚೀಫ್ ಕಮ್ಮಿಷನರ್ ಸಾಹೆಬರವರು ಮಾಹೇ ಗುಜಸ್ತಾ ಶಪ್ಟಂಬರು 29ನೇ ಮರ್ಕೂಂ 6429—111ನೇ ನಂಬರ್ ಆರ್ಡರ್ ಮಾಡಿಯಿದ್ದಾರಾದ್ದರಿಂದ ಐಯಿಂದ ಸ್ಸಾಲ್ ಲಾಗಾಯಿತು ಅಂದರೆ ಸರ್ 1877ನೇ ಇಸವೀ ಏಪ್ರಲ್ ಗುರ್ರೇಲಾಗಾಯಿತು 1882ನೇ ಯಿಸವೀ ಮಾರ್ಚಿ ಆಖೈರುವರಿಗೆ ಡಿಸ್ಟ್ರಿಕ್ಟಾಮುಳೆ ಪಂಚಸಾಲ ವಟ್ಟು ಯಿಜಾರೆ ಕೊಡಲ್ಪಡುತ್ತೆ.

ಈ ಬಾಬಿನ ಯಿಜಾರೆ ಮಾಡುವದಕ್ಕೆ ಮನಸ್ಸುವುಳ್ಳಂಥಾವರು ಮೇಲೆ ಕಂಡ 5ಸಾಲ್ ಗುತ್ತಿಗೆ ಸಾಲ್‌ವಾರ್ ಮೊಬಲಗು ನಮೂದುನಿಂದ ದರಖಾಸ್ತು ಬರದು ಮೊಹರುಮಾಡಿ ಲಕ್ಕೋಟೆ ಮೇಲೆ ಫಲಾಣೆಯವನ ಅರಗಿನ ಇಜಾರೇ ದರಖಾಸ್ತು ಯೆಂದು ಸ್ಪಷ್ಟವಾಗಿ ತಿಳಿಯುವಂತೆ ಬರದು 1877ನೇ ಇಸವಿ ಮಾರ್ಚಿ ಗುರ್ರೇವಳಗಾಗಿ ಡಿಸ್ಟ್ರಿಕ್ಟ ಆಫೀಸಿಗೆ ಕಳುಹಿಸಬೇಕು ಈ ಪ್ರಕಾರ ಬರದ ದರಖಾಸ್ತುಗಳನ್ನು ಅದೇ ಮಾರ್ಚಿ 5ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟ ಕಚೇರಿಯಲ್ಲಿ ನಮ್ಮ ರೂಬರೂ ವಡದು ನೋಡಿ ಚಡದರಖಾಸ್ತು ಮಂಜೂರು ಮಾಡುವದೇ ಆಗಲಿ ಪೋಟಾಪೋಟೀಯಿಂದ ಫೈಸಲ್ ಮಾಡುವದೇ ಆಗಲಿ ಡಿಪ್ಯುಟಿ ಕಮ್ಮಿಷನರ ಸಾಹೇಬರವರಿಗೆ ಯುಕ್ತ ಕಂಡುಬಂದಂತೆ ಹುಕುಂ ಮಾಡುತ್ತಾರೆ.

ಸರ್ವೇಸಟಲ್‌ಮೆಂಟ ಆದ ತಾಲ್ಲೂಕುಗಳ ಯಿಜಾರೇ ಮೊಬಲಗಿನ ಮ್ಯಾಲೆ ರೂಪಾಯಿ 1ಕ್ಕೆ 1ಆಣೆ ಮೇರಿಗೂ ಸಟಲ್ ಆಗದೆ ಯಿರುವ ತಾಲ್ಲೂಕುಗಳ ಯಿಜಾರೇ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಅರ್ಧಾಣೆ ಮ್ಯಾರಿಗೂ ಲೋಕಲ್ ಶೆಸ್ ಕೊಡಬೇಕು.

ಮಂಜೂರು ಮಾಡಲ್ಪಟ್ಟ ದರಖಾಸ್ತುದಾರನು ತಕ್ಷಣ 2ಖಿಸ್ತಿನ ಹಣ ಶೇವಣೀ ಯಿಡಬೇಕು ಬಾಕೀ ಖಿಸ್ತುಗಳ ಮೊಬಲಗಿಗೆ ಮಾತಬರ್ ಜಾಮೀನಿ ಕೊಡಬೇಕು ಯಿದಕ್ಕೆ ತಪ್ಪಿದರೆ ದುಸರಾ ಹರಾಜು ಮಾಡಲ್ಪಟ್ಟೀತು ಆದರಲ್ಲಿ ಲುಕ್ಸಾನ್ ಬಂದರೆ ಆ ಲುಕ್ಸಾನಿಗೆ ಶೇವಣೀ ಮತ್ತು ಜಾಮೀನಿ ಕೊಡದೆ ತಪ್ಪಿದವನಿಂದ ವಸೂಲ್ ಮಾಡಲಾಧೀತು.

ಯಿಜಾರೇ ಮೊಬಲಗ್ಯೆ ತಕ್ಕಷ್ಟು ಸ್ಟ್ಯಾಂಪಿನಲ್ಲಿ ದಸ್ತೂರು ಅನುಸರಿಸಿ ತಫ್ಸೀಲ್‌ವಾರು ಮುಚ್ಚಲಿಕೆ ಬರದುಕೊಡಬೇಕು ಮುಚ್ಚಲಿಕೆ ಷರತ್‌ಪ್ರಕಾರ ಖಿಸ್ತಿನ ಹಣ ಆಯಾ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಪಾವತೀ ಮಾಡಬೇಕು ತಪ್ಪಿದರೆ ರೋಜೀನಾ ರೂಪಾಯಿ 1ಕ್ಕೆ ಅರ್ಧಕಾಶಿನ ಮ್ಯಾರಿಗೆ ಬಡ್ಡಿ ವಸೂಲ್ ಮಾಡಲಾಧೀತು ಅಥವಾ ಪುನಃ ಹರಾಜು ಹಾಕಿ ಅದರಿಂದ ವುಂಟಾಗುವ ಲುಕ್ಸಾನಿಗೆ ಗುರಿ ಮಾಡಲಾಧೀತು.

ಚಾಲ್ತಿ ಇಸವಿ ಅಂದರೆ 1876—77ನೇ ಇಸವಿ ಯಿಜಾರೇ ಮೊಬಲಗು 612—12—0.

ಬತಾರೀಖು 12ನೇ ಮಾಹೆ ಆಕ್ಟೋಬರ್ ಸರ್ 1876ನೇ ಇಸವಿ ಮೊಕ್ಕಾಂ ಕೋಲಾರ.

B. KRISHNAIENGAR,
Dy. Commr.

TUMKUR. DISTRICT.

Notice of an application by Bhimanna for a certificate under Act XXVII of 1860.

ತುಮಕೂರು ಡಿ|| ಡೆ|| ಕಮ್ಮಿಷನರ್ ಕೋರ್ಟಿನಿಂದಾ.

ಯಿದರಿಂದಾ ಸಮಸ್ತಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ.—ಕೊರಟಗೆರೆ ತಾಲ್ಲೂಕು ಕಸಬಾ ಕೊರಟಗೆರೆ ಗ್ರಾಮದ ವಾಸಸ್ಥನಾಗಿದ್ದ ಘಾವತೀ ಯಾದ ಲಾಡ್ರ ಸುಬ್ಬಣ್ಣ ಯಂಬುವನಿಗೆ ಯಿತರರ ಯಿಂದ ಬರಬೇಕಾಗಿ ಯಿರುವ 1,000 ರೂಪಾಯಿಗಳು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರಟಫಿಕೇಟಅಪೇಕ್ಷಿಶಿ, ಯಿವನ ತಮ್ಮ ಭೀಮಣ್ಣ ಯಂಬುವನು ದಾಖಲ್ ಮಾಡಿ ಯಿರುವ ಅರ್ಜಿಯನ್ನು 1876ನೇ ಯಿಸವಿ ನವಂಬರ್ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಯಿದಕ್ಕೆ ತಕರಾರ್ ಮಾಡುರ‍್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತೆ.

Notice of an application by Linganna for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಲಗೊಣ ಗ್ರಾಮದ ವಾಸಸ್ಥನಾಗಿ ಯಿದ್ದ ಫೌತೀಯಾದ ಕಬ್ಬಿಣದ ಬಸಪ್ಪಾ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 500 ರೂಪಾಯಿಗಳು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಏಕ್ಟು ಪ್ರಕಾರ ಸರಟಿಫಿಕೇಟ ಅಪೇಕ್ಷಿಸಿ, ಯಿವನ ಮಗ ಲಿಂಗಣ್ಣಾ ಯಂಬುವನು ದಾಖಲ್‌ಮಾಡಿ ಯಿರುವ ಅರ್ಜಿಯನ್ನು 1876ನೇ ಇಸವಿ ನವಂಬರ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 12ನೇ ಮಾಹೆ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ನೆಲಿಹಾಲ್ ತಾಲ್ಲೂಕು ತುಮಕೂರ.

E. S. LUDLOW,
Offg. Dy. Commr.

MYSORE DISTRICT.

Notice of an application by Muddanna for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ್ ಡೆ॥ ಕ॥ ಕೋರ್ಟಿನಿಂದ.

1876ನೇ ಇಸವಿ ಸಿವಿಲ್ ಫೂಟ ಮಿ॥ ನಂ॰ 69.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ' ಫವತೀಯಾದ ತನ್ನ ತಂದೆ ದೊಡ್ಡ ಮಲ್ಲಂಣನಿಗೆ ಬರಬೇಕಾದ 30,000 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಿನ ಪ್ರಕಾರ ಸರಟಿಫಿಕೇಟ ಆಗಬೇಕೆಂದು ಮೈಸೂರು ಹೊಸ ಹಗ್ರಾರದಲ್ಲಿ ಇರುವ ಮುದ್ದಂಣ ಯಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಈ ಮಾಹೆ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Nanjundaiya for a certificate under Act XXVII of 1860.

1876ನೇ ಇಸವೀ ಶಿವಲ್ ಮಿಸಲೇನಿಯಸ್ ನಂಬರ 70.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತಿಯಾದ ತನ್ನ ಹಕ್ಕಿ ರಂಗಪ್ಪನವರಿಗೆ ಬರಬೇಕಾದ 200 ರೂಪಾಯಿಗಳನ್ನು ವಸೂಲ್‌ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಆಗಬೇಕೆಂದು ಮೈಸೂರು ಬಸವನ ಮಹಲಿದಲ್ಲಿರುವ ನಂಜುಂಡೈಯ್ಯನು ಕೊಟ್ಟು ಯಿರುತಕ್ಕ ಅರ್ಜಿಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದಾ ಯಿದರಮೇಲೆ ತಕರಾರ್ ವುಳ್ಳವರು ಆತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೊರ್ಟು ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕದ್ದು.

Notice of an application by Parvatamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ 71.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಅಜ್ಜ ಭದ್ರಮ್ಮನಿಗೆ ಬರಬೇಕಾದ 450 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ ಸದರೀ ಭದಮ್ಮನ ಮೊಮ್ಮಗನಾದ ಪುಟ್ಟಬಸವನು ಮೈನರಾದ್ದರಿಂದ ಇವನ ಸೋದರತ್ತೆಯಾದ ಮೈಸೂರ್ ಕಿಲ್ಲೆದಲ್ಲಿರುವ ಕದೀಕಲ್ಲು ತೊಟ್ಟಿ ಪಾರ್ವತಮ್ಮನೆಂಬವಳು ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಕೊಟ್ಟಿರತಕ್ಕ ಅರ್ಜಿಯನ್ನ ಈ ಮಾಹೇ ತಾರೀಖು 26ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರ ಮೇಲೆ ತಕರಾರ್ ಉಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದಿದೆ.

ತಾರೀಖು 3ನೇ ಅಕ್ಟೋಬರ 1876ನೇ ಇಸವಿ ಮೊ॥ ಮೈಸೂರು.

Notice of an application by Siddamma for a certificate under Act XXVII of 1860.

ಸರ್ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ॥ 72.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ಜೋರೇಗೌಡ ನೆಂಬುವನಿಗೆ ಬರಬೇಕಾದ 1,000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಮೈಸೂರು ತಾಲ್ಲೂಕು ನವಾ ಷಹರ್ ಹೋಬಳಿ ನಾಗನಹಳ್ಳಿ ಗ್ರಾಮದಲ್ಲಿ ಯಿರುವ ಶಿದ್ದಮ್ಮ ನೆಂಬವಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ತಿಂಗಳು 7ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುತ್ತೆಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Lingamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಫೂಟಿ ಮಿಸಲೇನಿಯಸ್ ನಂಬರ್ 73.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಮಗ ಚಲುವನೆಂಬುವನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಗಂಜಾಮದಲ್ಲಿ ಯಿರುವ ವಕ್ಕಲಿಗರ ಲಿಂಗಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ಮಾಹೆ ತಾರೀಖು 7 ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿಧೆ.

Notice of an application by Bettalingagauda for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಫೂಟಿ ಮಿಸಲೇನಿಯಸ್ ನಂ॥ 74.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ತಮ್ಮ ಚನ್ನೇಗೌಡನಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಗುಂಡ್ಲು ಕಸಬಾದಲ್ಲಿ ಯಿರುವ ಬೆಟ್ಟಲಿಂಗೇಗೌಡ ನೆಂಬವನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವಂಬರ್ ತಿಂಗಳು 7ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿಕೊಳ್ಳತಕ್ಕದ್ದಿಧೆ.

Notice of an application by Artegaudana Linganna for a certificate under Act XXVII of 1860.

ಸರ್ 1876ನೇ ಇಸವೀ ಸಿವಿಲ್ ಪೂಟಿ ಮಿಸಲೇನಿಯಸ್ ನಂ॥ 75.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತಿಯಾದ ತನ್ನ ಅಂಣ ಅರ್ತೇಗೌಡನ ದ್ಯಾವಂಣ ನೆಂಬುವನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಶ್ರೀರಂಗಪಟ್ಟಣದಲ್ಲಿ ಯಿರುವ ಅರ್ತೇಗೌಡನ ಲಿಂಗಂಣನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವಂಬರ್ ಮಾಹೇ ತಾರೀಖು 7 ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 12ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Lakkamma for a certificate under Act XXVII of 1860.

ಸರ್ 1876ನೇ ಯಿಸವಿ ಶಿವಿಲ್ ಫೂಟಿ ಮಿಸಿಲೇನಿಯಸ್ ನಂಬರ್ 76.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ಆಲಂಣನಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೆಕೆಂದು ಮೈಸೂರಲ್ಲಿರುವ ಲಕ್ಕಂಮನು ಕೊಟ್ಟಿರತಕ್ಕ ಅರ್ಜಿಯನ್ನು ನವಂಬರ್ ಮಾಹೇ ತಾರೀಖು 21ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿಕೊಳ್ಳತಕ್ಕದ್ದಿಧೆ.

Notice of an application by Sidde Gauda for a certificate under Act XXVII of 1860.

1876ನೇ ಇಸವಿ ಸಿವಿಲ್ ಫ್ರೂಟ್ ಮಿಸಲೇನಿಯಸ್ ನಂಬರ್ 77.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ಚಿಕ್ಕ ಸಿದ್ದೇಗೌಡನಿಗೆ ಬರಬೇಕಾದ(1,000) ರೂಪಾಯಿಗಳನ್ನು ವಸೂಲ ಮಾಡಿಕೊಳ್ಳುವದಕ್ಕೆ ಸದರೀ ಯವನ ದತ್ತು ಮಗನಾದ ತನ್ನ ತಮ್ಮ ಸಂಜಪ್ಪಾ ಯಂಬುವನು 12 ವರುಷದ ಹುಡುಗನಾದ್ದರಿಂದ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟಿಪ್ರಕಾರ ಸರ್ಟಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ನವಾಷಹರ್ ಹೋಬಳಿ ನಾಗನಹಳ್ಳೀಲಿ ಯಿರುವ ಸಿದ್ದೇಗೌಡ ನೆಂಬುವನು ಕೊಟ್ಟು ಯಿರತಕ್ಕ ಅರ್ಜಿಯನ್ನು ನವಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Mariyaana and another for a certificate under Act XXVII of 1860.

ಸರ್ 1876ನೇ ಇಸವಿ ಸಿವಿಲ್ ಫ್ರೂಟ್ಮಿಸಲೆನಿಯಸ್ ನಂಬರ್ 78.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ಛತ್ರದ ಮರಿಯಣ್ಣನಿಗೆ ಬರಬೇಕಾದ 950 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಿಪ್ರಕಾರ ಸರ್ಟಫಿಕೇಟ್ ಆಗಬೇಕೆಂದು ಸದರೀ ಯವನ ಚಿಕ್ಕಪ್ಪನಾದ ಅಷ್ಟಗ್ರಾಮದ ತಾಲ್ಲೂಕು ಗಂಜಾಂದಲ್ಲಿ ಯಿರುವ ಅಂತಪ್ಪ 1 ಮಾವನಾದ ಮರಿಯಣ್ಣ 1 ಈ 2 ಜನಗಳು ಕೊಟ್ಟಿರತಕ್ಕ ಅರ್ಜಿಯನ್ನು ನವಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Gopalaiengar for a certificate under Act XXVII of 1860

ಸರ್ 1876ನೇ ಇಸವಿ ಸಿವಿಲ್ ಫ್ರೂಟ್ ಮಿಸಲೇನಿಯಸ್ ನಂಬರ್ 79.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ಕೃಷ್ಣೈಯಂಗಾರ್ರಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಸದರೀಯವನ ದತ್ತುಮಗನಾದ ಶ್ರೀನಿವಾಸೈಯಂಗಾರಿಯು ಗಾರ್ಡಿಯನ್, ಯಡತೊರೇ ತಾಲ್ಲೂಕು ತಿಪ್ಪೂರಲ್ಲಿರುವ ಗೋಪಾಲೈಯಂಗಾರಿ ಯಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನ ನವಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ಮಾಹೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Ramachar for a certificate under Act XXVII of 1860.

1876ನೇ ಇಸವಿ ಸಿವಿಲ್ ಫ್ರುಟ್ ಮಿಸಲೇನಿಯಸ್ ನಂಬರ್ 80.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ಮಾನಮುಡಿ ಶ್ರೀನಿವಾಸಾಚಾರ್ರಿಗೆ ಬರಬೇಕಾದ 1250 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ಕತ್ತಡೀ ವಾಪುರದ ಅಗ್ರಹಾರದಲ್ಲಿ ಯಿರುವ ಮಾನಮುಡಿ ರಾಮಾಚಾರೀ ಯಂಬುವನು ಕೊಟ್ಟಿರತಕ್ಕ ಅರ್ಜೀಯನ್ನ ನವಂಬರ್ ಮಾಹೆ ತಾರೀಖು 21ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Virabhadraiya for a certificate under Act XXVII of 1860.

1876ನೇ ಇಸವಿ ಸಿವಿಲ್ ಫ್ರೂಟ್ ಮಿಸಲೇನಿಯಸ್ ನಂ. 81.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಚನ್ನಪ್ಪ ನೆಂಬುವನಿಗ ಬರಬೇಕಾದ 400 ರೂಪಾಯಿಗಳನ್ನು ವಸೂಲ್ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂ

ದು ಅರಕಲಗೂಡು ತಾಲ್ಲೂಕು ಹನಸೋಗೆ ಹೋಬಳಿ ಹಾಸ್ಯದ ಗ್ರಾಮದಲ್ಲಿ ಯಿರುವ ವೀರಭದ್ರೈಯನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವಂಬರ ತಾರೀಖು 22ರಲ್ಲು ಹಿಯರಿಂಗ್ ಮಾಡುತ್ತೀಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 25ನೇ ಅಕ್ಟೋಬರ 1876ನೇ ಇಸವಿ ಮೊಕ್ಕಾಂ ಮೈಸೂರು.

C. J. PEARSE,
Dy. Commr.

HASSAN DISTRICT.

Notice inviting heirs of the deceased Jogi, Coffee Planter, for the purpose of receiving the patta.

ಹಾಸನ ಡಿಸ್ಟ್ರಿಕ್ಟ ಡೆ॥ ಕ॥ ಕೋರ್ಟಿನಿಂದ.

ಲೇಟ ಮಹಾರಾಜನದುರ್ಗ ಹಾಲೀ ಮಂಜರಾಬಾದ ತಾಲ್ಲೂಕಿಗೆ ಶೇರಿದ ಕಸಬಾ ಬ್ಯಾಳು ಗ್ರಾಮದಲ್ಲಿ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಹಿತ್ತಲಿಗೆ ಪಟ್ಟೇದಾರನಾಗಿ ಯಿದ್ದ ಬಲಗೈ ಜೋಗಿ ಯಂಬವ ಫಾತೀ ಆಗಿರುವ ಹಾಗೂ ಅವನ ಹೆಸರಿನ ಸನ 1861ನೇ ಇಸವಿ ಡಿಶಂಬರ 16ನೇ ತಾರೀಖಿನ ಬಾಬತು 9462-29ನೇ ನಂಬರ ವುಳ್ಳ ಕಾಫೀ ಪಟ್ಟೇಯು ಚೀಫ ಕಮ್ಮಿಷನ್ನರ ಸಾಹೇಬರವರ ಕೌಂಟರ ಸೈನಿಸೀ ಬಂದಿರುವದನ್ನ ಬಟವಾಡೆ ಮಾಡುವದಕ್ಕೆ ಅವನಿಗೆ ಮುಖ್ಯವಾರಸುದಾರ್‍ರು ವಗೈರೇ ಯಾರೂ ಯಿಲ್ಲವೆಂದು ವಗೈರೆ ಆ ತಾಲ್ಲೂಕು ಅಮಿಲ್ದಾರರು ಜಾಹಿರ ಮಾಡಿರತಕ್ಕ ರಿಪೋರ್ಟು ಮುಂತಾದ ನಡವಳಿಕೆಗಳು ಫಸ್ಟ ಅ॥ ಕಮ್ಮಿಷನರವರ ಕಚ್ಚೇರಿ ದ್ವಾರಾ ಯಿಲ್ಲಿಗೆ ಬಂದಿರುತ್ತೀಯಾಗಿ ಇದರಿಂದ ತಿಳಿಯಪಡಿಸುವದೇನಂದರೆ.

ಸದರೀ ಪಟ್ಟೇದಾರನಿಗೆ ಮುಖ್ಯವಾರಸುದಾರರಾದವರೇ ಆಗಲಿ ಸದರೀ ಪಟ್ಟೇಯಲ್ಲಿ ಕಂಡ ಸ್ವತ್ತನ್ನ ಹೊಂದುವದಕ್ಕೆ ಕ್ರಮವಾದ ದಸ್ತೈವಜು ಮುಂತಾದ್ದರ ಮೂಲಕ ಅರ್ಹತೆಯನ್ನು ಸಂಪಾದಿಸಿಕೊಂಡಿರುವವರೇ ಆಗಲಿ ಯಿದ್ದದ್ದಾದರೆ ಅಂತಾವರು ಈ ನೋಟಿಸ ತಾರೀಖು ಲಗಾಯತು 1½ ತಿಂಗಳ ವಳಗಾಗಿ ತಾಲ್ಲೂಕು ಅಮಿಲ್ದಾರರಲ್ಲಿ ಹಾಜರಾಗಿ ತಮ್ಮ ಬಾಧ್ಯತೆಯನ್ನು ಅವರಿಗೆ ತೋರಿಸಿ ಕ್ರಮ ಪ್ರಕಾರ ಪಟ್ಟೇಯನ್ನು ಹೊಂದಬಹುದು

ಈ ನಿಬಂಧನೆಗೆ ತಪ್ಪಿದರೆ ಸದರೀ ಸ್ವತ್ತು ಬೇವಾರಿಸಿಗೆ ದಾಖಲಾಗಿ ಸದರೀ ಪಟ್ಟೇದಾರನ ಹೆಸರು ಪಟ್ಟೇಯಿಂದ ವಜಾ ಆಗಿ ಅದರಲ್ಲಿ ಕಂಡ ಹಿತ್ತಲ ಪ್ರದೇಶ ಗವರ್ನಮೆಂಟಿನವರ ವಶವಾಗುತ್ತೆ. ಆ ಬಳಿಕ ಯಿದಕ್ಕಾಗಿ ಫಿರಿಯಾದು ತಂದದ್ದಾದರೆ ಅದನ್ನ ಅಂಗೀಕರಿಸತಕ್ಕದ್ದಿಲ್ಲ ತಿಳಿಯುವದು

ಜೋಗೀಮನೆ ಮುಂದಣ ಹಿತ್ತಲಬಾಳ್ಳು ಕಸಬಾ ಗ್ರಾಮಕ್ಕೆ ಶೇರಿದ್ದು.

ಯಿದರ ಚಕ್ಕಬಂದಿ.

ಪೂರ್ವಕ್ಕೆ—ಪುಟ್ಟನ ಹಿತ್ತಲ.	ಪಶ್ಚಮಕ್ಕೆ—ಹೊಲಗೇರೀ ಪೋಣಿ.
ದಕ್ಷಿಣಕ್ಕೆ—ಹೊಲಗೇರಿ ಸದರೀಯುವನ ಮನೆ.	ವುತ್ತರಕ್ಕೆ—ಪೋಣಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಮ 20, ದಕ್ಷಿಣೋತ್ತರ 10, ಸಲಿಗಜ 200, ಎಕರೆ 0 ರೋಡ 0 ಪೋಲ 6 ಗಜ 18½.

Notice of sale of Coffee Jungle attached to the Hassan Taluk on the 30th November 1876.

ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—ಹಾಸನದ ತಾಲ್ಲೂಕು ಚಿಕ್ಕಣಗಾಲ ಹೋಬಳಿ ಕಲ್ಲಹಳ್ಳಿ ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗಲ್ಪಡುವ ಜಮೀನಿನ ಹಿಡುವಳೀಯನ್ನು ಕಾಫೀ ಸಾಗುವಳಿಗೋಸ್ಕರ ಟೆಂಪರೇರಿಯಾಗಿ ಮುಂದೆ ಯೇರ್ಪಾಡು ಆಗುವ ನಿಬಂಧನೆಗೆ ವಳಪಡತಕ್ಕದ್ದೆಂಬ ಷರತ್ತಿನ ಮೇಲೆ ಇದೇ ಇಸವೀ ನವಂಬರು ತಾರೀಖು 30ನೇ ದಿವಸ ಹಗಲು 11 ಘಂಟೆ ಲಾಗಾಯಿತು 2 ಘಂಟೆ ವರಿಗೂ ಅದೇ ಸ್ಥಳದಲ್ಲಿ ಹರಾಜ ಕೂಗಿಸಲ್ಪಡುತ್ತೆ ಇಚ್ಛೆವುಳ್ಳ ಜನರು ಆಕಾಲದಲ್ಲಿ ಥಡವರಖಾಸ್ತು ಮಾಡಿ ಪಡೆಯಬಹುದು.

ಹರಾಜ ಮಾಡಿಸುವ ಆಫೀಸರು ಆಕಾಲದಲ್ಲಿ ಕೂಡಿದ ಜನರಿಗೆ ಹರಾಜು ನಿಬಂಧನೆಯನ್ನ ಕುರಿತು ರೂಬರೂ ತಿಳಿಸ್ಯಾರು.

ಮತ್ತು ಸದರೀ ಜಮೀನನ್ನು ತೆಗದುಕೊಳ್ಳುವದಕ್ಕೆ ಅಪೇಕ್ಷೆ ಇರತಕ್ಕವರು ನವಂಬರ ತಾರೀಖು 25ರ ವರಿಗೂ ನಮ್ಮ ಆಫೀಸಿನ ಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು. ಆದರೆ ಅಂಥಾ ದರಖಾಸ್ತುದಾರರು ಹರಾಜು ಕಾಲದಲ್ಲಿ ಆಸ್ಥಳದಲ್ಲಿ ಹಾಜರು ಯಿರಬೇಕು. ತಪ್ಪಿದರೆ ಅಂಥಾವರ ದರಖಾಸ್ತನ್ನ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡೆಪ್ಯುಟಿ ಕಮ್ಮಿಷನ್ನರವರನ್ನ ಹೊಂದಿರುತ್ತೆ, ತಿಳಿಯುವದು.

ಮನೆಗೆ ಪೂರ್ವದಿಕ್ಕಿನ ಹಿತ್ತಲ್ ಪ್ರದೇಶ ಆದರ ಚಕ್ಕುಬಂದೀ

ಪೂರ್ವಕ್ಕೆ—ಯಿದೇ ಹಿತ್ತಲ್ ಬೇಲಿ ಆಚಿಗೆ ಯಳಗನಹಳ್ಳಿ ಸಾಗುವಳೀ ಜಮಿಾನು

ದಕ್ಷಿಣಕ್ಕೆ—ಅಜ್ಜೇಗವುಡನ ಕಣದ ಹಿತ್ತಲ್‌ಬೇಲಿ

ಪಶ್ಚಿಮಕ್ಕೆ—ಮನೆ.

ವುತ್ತರಕ್ಕೆ—ಅಜ್ಜೇಗವುಡ ನಕಾಫೀ ದರಖಾಸ್ತು ಹಿತ್ತಲ್ ಬೇಲಿ

ಈ ಮಧ್ಯೆ ಅಳತೆ.

ಪೂರ್ವ ಪಶ್ಚಿಮ 70, ದಕ್ಷಿಣೋತ್ತರ 30, ಸಲೆ 2,100ಕ್ಕೆ ಯಕರೆ 0, ರೋಡ್ 1, ಪೋಲ್ 29, ಗಜ $12\frac{3}{4}$,

---

Notice of sale of a Coffee Jungle attached to the Hassan Taluk on the 29th November 1876.

ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ, ಹಾಸನ ತಾ॥ ಚಿಕ್ಕಣಗಾಲ್ ಹೋಬಳಿ ಕಲ್ಲಹಳ್ಳಿ ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗಲ್ಪಡುವ ಜಮಿಾನುಗಳ ಹಿಡುವಳಿಯನ್ನು ಕಾಫೀ ಸಾಗುವಳಿಗೋಸ್ಕರ ಟೆಂಪರೇರಿಯಾಗಿ ಮುಂದೆ ಯೇರ್ಪಾಡು ಆಗುವ ನಿಬಂಧನೆಗೆ ವಳಪಡತಕ್ಕದೆಂಬ ಷರತ್ತಿನ ಮೇಲೆ ಇದೇ ಇಸವಿ ನವಂಬರ್ ತಾರೀಖು 29ನೇ ದಿವಸ ಹಗಲು 11 ಘಂಟೆ ಲಗಾಯಿತು 4 ಘಂಟೆ ವರಿಗೆ ಅದೇ ಸ್ಥಳದಲ್ಲಿ ಹರಾಜು ಹಾಕಿಸಲ್ಪಡುತ್ತೆ. ಇಷ್ಟವುಳ್ಳ ಜನರು ಆಗ ಛಡದರಖಾಸ್ತುಮಾಡಿ ಪಡೆಯ ಬಹುದು.

ಹರಾಜು ಮಾಡಿಸುವ ಆಫಿಸರು ಆ ಕಾಲದಲ್ಲಿ ಕೂಡಿದ ಜನರಿಗೆ ಹರಾಜು ನಿಬಂಧನೆಯನ್ನು ಕುರಿತು ರೂಬರೂ ತಿಳಿಸ್ಯಾರು.

ಮತ್ತು ಸದರೀ ಜಮಿಾನುಗಳನ್ನು ತೆಗದುಕೊಳ್ಳುವದಕ್ಕೆ ಅಪೇಕ್ಷೆ ಇರತಕ್ಕವರು ನವಂಬರ್ ತಾರೀಖು 24ರ ವರಿಗೂ ನಮ್ಮ ಅಫಿಸಿನ ಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು, ಆದರೆ ಅಂಥಾ ದರಖಾಸ್ತುದಾರು) ಹರಾಜು ಕಾಲದಲ್ಲಿ ಆ ಸ್ಥಳದಲ್ಲಿ ಹಾಜರು ಇರಬೇಕು ತಪ್ಪಿದರೆ ಅಂಥಾವರ ದರಖಾಸ್ತನ್ನು ತಿರಸ್ಕರಿಸುವ ಅಥವಾ ಮಂಜೂರ್ಮಾಡತಕ್ಕ ಅಧಿಕಾರವು ಡಿಪ್ಯುಟಿ ಕಮಿಷನರವರನ್ನು ಹೊಂದಿ ಇರುತ್ತೆ ತಿಳಿಯುವದು.

1ನೇ ಹಿತ್ತಲ್ ಪ್ರದೇಶ ಚಕ್ಕುಬಂದೀ

ಪೂರ್ವಕ್ಕೆ—ಕಲ್ಯಾಣಗವುಡನ ಬಾಳೇ ಹಿತ್ತಲ್ ಬೇಲಿ

ದಕ್ಷಿಣಕ್ಕೆ—ನಂಜೇಗವುಡನ ಹಿತ್ತಲ್ ಮತ್ತು ಹೊಲಗೇರಿಗೆ ತಿರಗುವದಾರಿ

ಪಶ್ಚಿಮಕ್ಕೆ—ಹೊಲಗೇರಿ ಮತ್ತು ರಾಕ್ಷಸನ ಬೇಲಿ

ವುತ್ತರಕ್ಕೆ—ಬಸವೇಗವುಡನ ಹಿತ್ತಲ್ ರಾಕ್ಷಸನ ಬೇಲೀ

ಈ ಮಧ್ಯೆ ಅಳತೆ.

ಪೂರ್ವ ಪಶ್ಚಿಮ ಗಜ 50, ದಕ್ಷಿಣೋತ್ತರ 63, ಸಲೆ 3150—ಯಕರೆ 0, ರೋಡ್ 2, ಪೋಲ್ 24, ಗಜ 4.

2ನೇ ಹಿತ್ತಲ್ ಪ್ರದೇಶ ಇದರಚಕ್ಕುಬಂದಿ

ಪೂರ್ವಕ್ಕೆ—ದನ ವೋಣಿ

ದಕ್ಷಿಣಕ್ಕೆ—ದನ ತಿರುಗುವ ವೋಣಿ

ಪಶ್ಚಿಮಕ್ಕೆ—ಇದೇ ಹಿತ್ತಲ್ ಬೇಲಿ ಆಚೆಗೆ ಮೈದಾ೯ ಜಾಗಾ ತಿಪ್ಪೆಗುಂಡಿ

ಉತ್ತರಕ್ಕೆ ಇದೇ ಹಿತ್ತಲ್ ಬೇಲಿ ಮತ್ತು ಭೂಮಿ ದೇವಸ್ಥಾನ.

ಈ ಮಧ್ಯೆ ಅಳತೆ.

ಪೂರ್ವ ಪಶ್ಚಿಮ ಗಜ 90, ದಕ್ಷಿಣೋತ್ತರ 52, ಸಲೆ 4680ಕ್ಕೆ ಯಕರೆ 0, ರೋಡ್ 3, ಪೋಲ್ 34, ಗಜ $21\frac{1}{2}$.

Notice regarding applications for coffee lands.

ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಹುಲುಗತ್ತೂರು ಗ್ರಾಮಕ್ಕೆ ಶೇರಿದ ದೇವರ ವುಡ್ಡೇ ಯಂಬುವದರ ಚಕ್ಕುಬಂದಿ.

ಪೂರ್ವಕ್ಕೆ—ಹೊಲಗೇರಿ ಅಡೆಗದ್ದೆ ಬೈಲು ಅಂಚುಗೆರೇ ಯಂಬ ಅಗಳು ಯತ್ತರ ಯಿರತಕದ್ದು.

ದಕ್ಷಿಣಕ್ಕೆ—ಪಾಂಡರ ಕಲ್ಲು ಯಂಬ ದಿಂಣೆ ಮೈದಾ೯.

ಪಶ್ಚಿಮಕ್ಕೆ—ಪಾಂಡರ ಕಲ್ಲು ಯಂಬ ದಿಣ್ಣೆ ಮೈದಾ೯.

ವುತ್ತರಕ್ಕೆ—ಪೂರ್ವದಿಕಿನ ಚಕ್ಕುಬಂದಿಗೆ ಶೇರಿದ ಗದ್ದೆಗೆರೆ

ಈ ಮಧ್ಯೆ ಪೂರ್ವ ಪಶ್ಚಿಮ 185, ದಕ್ಷಣೋತ್ತರ 175, ಸಲಿ ಗಜಗಳು 32,375ಕ್ಕೆ ಎಕರೆ 6, ರೋಡ್ 2 ಪೋಲ್ 30 ಗಜ 7½ ವುಳ್ಳದ್ದು.

ಈ ಭೂಮಿಯನ್ನು ತನಿಗೆ ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ವುಚ್ಚಂಗಿಗ್ರಾಮದ ಹುಲ್ಲುವನೆ ಕಾಳಪ್ಪ ನೆಂಬವನು 89ನೇ ದರಖಾಸ್ತು ಮಾಡಿರುತ್ತಾನಾಗಿ ಇದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಸದರೀ ಜಂಗಲನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕುದಾರೀಯನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸು ತಾರೀಖು ಲಗಾಯತು 1 ತಿಂಗಳ ವಳಗಾಗಿ ಡಿಸ್ಟ್ರಿಕ್ಟು ಮಜಕೂರ್ ಕಾಫೀ ಯಿರ್ಚಾರ್ಜ ಫ|| ಅ|| ಕಮ್ಮಿಷನ್ನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾ೯ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದರೆ ಅದು ಮಂಜೂರಾಗಲರಿಯದು.

ಹಾಸನದ ತಾಲ್ಲೂಕು ಪಾಳ್ಯದ ಹೋಬಳಿ ಪಟ್ಟಹಳ್ಳಿ ಗ್ರಾಮಕ್ಕೆ ಶೇರಿದ ಕಾಡುದುರ್ಗದ ಬರೀಕಾಡು.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಗೌಜಲ ಬೋರೆ, ಯಿದು ದುರ್ಗದ ವುತ್ತರ ಈಶಾನ್ಯದ ಮೂಲೆಯಾಗಿಧೆ.

ದಕ್ಷಣಕ್ಕೆ—ದುರ್ಗದ ಕಲ್ಲುಪಟ್ಟಿ.

ಪಶ್ಚಿಮಕ್ಕೆ—ಪಾಳು ಶೇದೋಬಾವಿ ಯಿದು ಪಾಳು ನಿವೇಶನದಲ್ಲಿ ಯಿಧೆ.

ಉತ್ತರಕ್ಕೆ—ರೈತರ ಗದ್ದೆ ಸಾಗುವಳೀ ಜಮೀನ್.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 440, ದಕ್ಷಣೋತ್ತರ 158, ಸಲಿ 69,520ಕ್ಕೆ ಎಕರೆ 14, ರೋಡ್ 1, ಪೋಲ್ 18, ಗಜ 5½, ವುಳ್ಳದ್ದು.

ಇದನ್ನು ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಪಟ್ಟಹಳ್ಳಿ ಗ್ರಾಮದ ಈ ರಭದ್ರೇಗೌಡ ನೆಂಬವ 57ನೇ ದರಖಾಸ್ತು ಮಾಡಿ ಯಿದ್ದಾನಾಗಿ ಯಿದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದು ಯೇನಂದರೆ,

ಸದರೀ ಜಮೀನನ್ನು ಕಾಫಿ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ, ಅಥವಾ ಹಕ್ಕುದಾರಿಯನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ, ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಗಾಯತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫಿ ಯಿರ್ಚಾರ್ಜ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾ೯ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರ್ಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಹಾಸನದ ತಾಲ್ಲೂಕು ಪಾಳ್ಯದಹೋಬಳಿ ನಲ್ಲೂರು ಗ್ರಾಮಕ್ಕೆ ಶೇರಿದ ಮಲ್ಲೇದೇವರ ಗುಡಿಗೆ ಉತ್ತರ ದಕ್ಷಿಣ ಯಿರುವ ಪಾಳು ಜಮೀನಿನ ಚಕ್ಕುಬಂದಿ.

ಪೂರ್ವಕ್ಕೆ—ದೊಡ್ಡ ಅಗಳು.

ದಕ್ಷಿಣಕ್ಕೆ—ಊರುಬಾಗಿಲ ಪೋಣೀ ಕಲ್ಲುಕಟ್ಟೆ ಗುಡ್ಡೆ.

ಪಶ್ಚಿಮಕ್ಕೆ—ನಂಜೇಗೌಡ ಚನ್ನಾಚಾರಿ ಯಿವರ ಹಿತ್ತಲ್ ಬೇಲಿ ಸುಗ್ಗಿಕಟ್ಟೆ ಪಾಳೀ ಸಹಾ.

ವುತ್ತರಕ್ಕೆ—ಗುಂಡುತೋಪಿನ ಅಗಳು.

ಈ ಮಧ್ಯೆ ಅಳತೆ	ಪೂರ್ವ ಪ||	ದಕ್ಷಣೋತ್ರ
ಅಳತೆ 1ಕ್ಕೆ	60	35
		ಸಲಿ 2,100
ಅಳತೆ 1ಕ್ಕೆ	47	100
		4,700
.. ..		6,800
ಪೈಕೀ ವಜಾ ದೇವಸ್ಥಾನ ಯಿರತಕ್ಕ ಪರಿಸ್ತೀರಣ.	20	15
		300
.. ..		6500

ಜಾತಾಬಾಕಿ.

ಕ್ಕೆ—ಎಕರೆ 1, ರೋಡ್ 0, ಪೋಲ್ 21, ಗಜಾ 24¾,

ಈ ಮೇಲೆಕಂಡ ಭೂಮಿಯನ್ನು ತಮಗೆ ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ನಲ್ಲೂರು ಗ್ರಾಮದ ಶಿವಲಿಂಗೈಯನ ಮಗ ನಂಜೈಯು ಮುದ್ದನಾಯಕನಹಳ್ಳಿ ಪುರದ ಮಲ್ಲೈಯನಮಗ ವೀರೈಯು ಸಹಾ 59ನೇ ದರಖಾಸ್ತು ಮಾಡಿರುತ್ತಾರಾಗಿ ಯಿದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಸದರೀ ಜಮೀನನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ, ಅಥವಾ ಹಕ್ಕುದಾರಿಯನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ, ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಗಾಯತು 1 ತಿಂಗಳ ವಳಗಾಗಿ ಡಿಸ್ಟ್ರಿಕ್ಟು ಮಜಕೂರು ಕಾಫೀ ಯಿನ್‌ಛಾರ್ಜ್ ಫಸ್ಟ್ ಅಸಿಸ್ಟೆಂಟ್ ಕಮಿಷನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರ್ಯಾದನ್ನು ತಂದದ್ದಾದರೆ ಅದು ಮಂಜೂರಾಗಲರಿಯದು.

ಬತಾರೀಖು 24ನೇ ಮಾಹೆ ಅಕ್ಟೋಬರ್ ಸರ್ 1876ನೇ ಇಸವಿ ಮೊಕ್ಕಾಂ ಹಾಸನ.

H. E. MOTTET,
Dy. Commr.

KADUR DISTRICT.

Notice calling upon one Dvaraki Nyaik to present himself before the Sub-Registrar of Chikmagalur, and receive back a certain document presented by him for registration.

ಕಡೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರವರ ಆಫಿಸಿನಿಂದ.

ಡಿಸ್ಟ್ರಿಕ್ಟುಮಜಕೂರು ಚಿಕ್ಕಮುಗಳೂರು ತಾಲ್ಲೂಕು ಕಸಬಾ ದೇವರಾಯ ಪೇಟೆಯಲ್ಲಿ ಇರುವ ಪಾಲ್‌ಮಂದ ಜಗಂನಾಥರಾಯಗೆ ಚಿಕ್ಕಮುಗಳೂರು ಕೋಟೆಯಲ್ಲಿ ಯಿರುವ ತಾಲ್ಲೂಕು ಲೇಟ್ ದಫೇದಾರ್ ಚನ್ನನಾಯಕನ ಮಗ ದ್ವಾರಕೀ ನಾಯಕನು ತನ್ನ ಬಾಬತು ಚಿಕ್ಕಮುಗಳೂರು ಕೋಟೆಯಲ್ಲಿ ಇರುವ ಹೆಂಚಿನ ಮನೆಯನ್ನು 50 ರೂಪಾಯಿಗೆ ಶುದ್ಧ ಖರೀದಿಗೆ ಕೊಟ್ಟು ಸರ್ 1874ನೇ ಯಿಸವಿ ಅಗೋಸ್ಟು ತಾರೀಖು 31ರಲ್ಲು ಬರಿಸಿಕೊಟ್ಟ ಖಾಫಾ ದಸ್ತೈವಜು ಸದರೀ ದ್ವಾರಕೀ ಇಂದ ಸರ್ 1874ನೇ ಯಿಸವೀ ಶಪ್ಟಂಬರು ತಾರೀಖು 5ರಲ್ಲು ರಿಜಿಸ್ಟ್ರೇಷನ್ ಬಗ್ಯೆ ಚಿಕ್ಕಮುಗಳೂರು ಸಬ್‌ರಿಜಿಸ್ಟ್ರಾರ ಆಫಿಸಿನಲ್ಲಿ ಹಾಜರಾಗಿ ಸದರೀ ಆಫಿಸ್ Iನೇ ರಿಜಿಸ್ಟರ್ ಬುಕ್ಕಿನಲ್ಲಿ ಸರ್ 1874—75ನೇ ಯಿಸವಿ ನಂಬರು 111ಕ್ಕೆ ರಿಜಿಸ್ಟರಾದ್ದು ವಾಪ್ಸುಪಡಿಯುವ ಬಗ್ಯೆ ಸದರೀ ದ್ವಾರಕೀಗೆ ವಾಯಿದೆ ನೀ ನೋಟಿಸ್ ಜಾರೀ ಆಗಿ ಆ ವಾಯಿದೆ ಗುಜರಾಗಿ ಬಹಳದಿವಸವಾದಾಗ್ಯೂ ಅದ್ಯಾಪಿ ಹಾಜರಾಗದೆ 2 ವರುಷದ ಕಾಲ ಕಳದು ಇರುವಂತೆ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ನಂಬರು 131ನೇ ಇತ್ತಿಲ್ಲೆ ತಲ್ಪಿರುವದರಿಂದ ಸದರೀ ದ್ವಾರಕೀಯೇ ಆಗಲಿ ಅಥವಾ ಅವನಕಡೆ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾಲೀಕನೇ ಆಗಲಿ ಈ ತಾರೀಖು ಲಗಾಯಿತು ಯೆರಡು ತಿಂಗಳ ವಳಗಾಗಿ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ಮುಂದೆ ಬರದುಕೊಟ್ಟರೀತಿನಿಸೀ ಹಾಜರಾಗಿ ಐರ್ಜ ದಸ್ತೈವಜು ವಾಪಸ್ ಪಡಿಯಬೇಕು. ಆಮೇರೆ ತೆಗದುಕೊಳ್ಳದಿದ್ದರೆ ರಿಜಿಸ್ಟ್ರೇಷನ್ ಆಕ್ಟು 83ನೇ ಸೆಕಷನ್ ಅನುಸರಿಸಿ ಸದರೀ ತಮಸೂಕನ್ನು ನಾಶಪಡಿಸಲಾಧೀತು. ವಾಯಿದೇನಂತರ ಬರುವ ಫಿರಿಯಾದ್ ಅಂಗೀಕರಿಸೋಣಾಗಲಿಕ್ಕೆ ಇಲ್ಲಾ.

ಕಡೂರು ಡಿ|| ರಿಜಿಸ್ಟ್ರಾರ ಆಫೀಸ್ ತಾರೀಖು 12ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಚಿಕ್ಕಮುಗಳೂರು.

P. KRISHNA RAO,
Registrar.

ಕರ್ರೆನ್ಸೀ ನೋಟಗಳು.

ಬೆಂಗಳೂರಿಂದ ತರೀಕೆರೆಗೆ ಅಂಚೆ ದ್ವಾರಾ ರವಾನೇ ಆಗುವಲ್ಲಿ ಯಿದರಡಿ ನಮೂದಿಸಲ್ಪಡುವ ಕರ್ರೆನ್ಸೀ ನೋಟುಗಳು ಹೋಗಿವೆ.

ನಂ.	ಸರ್ಕಲ್	ಮೊಬಲಗ್	ಹಕ್ಕುದಾರ
$\frac{B}{50}$ 06769	ಮದ್ರಾಸ್	100	ಬೆಂಗಳೂರಲ್ಲಿ ಪಾಳ್ಯಗಾರ ಯೇಜಂಟ್ ಶರೀಕೆರೆ ರಂಗರಾವ್.
$\frac{B}{38}$ 84421	ಡಿಟೋ	100	
$\frac{B}{44}$ 16809	ಡಿಟೋ	100	
$\frac{B}{43}$ 68207	ಡಿಟೋ	50	
$\frac{B}{24}$ 34905	ಡಿಟೋ	50	

Mysore Government Press, Bangalore—1876.

ಯಾವ ಜೈಲ್‌ನಿಂದ ಖುಲಾಸೇ ಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ ಅದನ್ನು, ವಿಧಿಸಿದ ತಾರೀಖು ಮತ್ತು ಯಾವತ ಕಸೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಬೆಂಗಳೂರು.	8255	ಚೀಲೂರಿಗ, ಉಪ್ಪಾರ, ಕೂಲಿ, ಚಿಕ್ಕಬಳ್ಳಾಪುರ.	ಹುಬ್ಬಿನನಡುವೆ ಪ್ರಕಟವಾಗಿ ಕಾಣುವ ಎರಡು ಚಿಕ್ಕ ಘಾಯದ ಕಲೆಗಳು, ಬಲತೋಳಿನ ಮೇಲೆ ಹಚ್ಚೆ ಗುರುತು, ಎತ್ತರ 5-4.	ನರಸಿಹ್ಮ, ಚಿಕ್ಕಬಳ್ಳಾಪುರ.	ಇಪ್ಪತ್ತೈದು ತಿಂಗಳು ಕಠಿಣಸಜಾ, 4ನೇ ಆಗಸ್ಟ್ 1874, ಮನೆಗೆ ಕನ್ನಾ ಹಾಕಿದ್ದು ಮತ್ತು ಕಳಳು, ಕೋಲಾರ್ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್‌ಡಿವಿಜರ್ನ ಕೋರ್ಟು.	4ನೇ ಸಪ್ಟಂಬರ 1876.	ಇಲ್ಲ.		
	8256	ಚನ್ನ, ವಕ್ಕಲ್, ಕೂಲಿ, ಶಿಡ್ಲಘಟ್ಟ.	ತಲೇ ಮೇಲ್‌ಭಾಗದ ಚರ್ಮದಮೇಲೆ ಅನೇಕ ಮಚ್ಚೆಗಳು, ಯಡಮೊಣಕೈ ಮೇಲೆ ಒಂದು ಗುಂಡಾದ ಘಾಯದಕಲೆ, ಎತ್ತರ 5—1.	ನಂಜ, ಶಿಡ್ಲಘಟ್ಟ.	ಡಿಟೋ	ಡಿಟೋ	ಡಿಟೋ		
	5117	ರಾಮಶೆಟ್ಟಿ, ಕೋಮಟಿ, ವ್ಯಾಪಾರಸ್ತ, ಚಿಕ್ಕಬಳ್ಳಾಪುರ.	ಅಗಲವಾದಹಣೆ, ಉದ್ದವಾದ ಮೂಗು, ತುಂಬಾ ಕೂದಲುಉಳ್ಳ ಎದೆ, ಬಲಗೈ ಮೇಲೆ ಮತ್ತು ಹಿಂದೆ ಮಚ್ಚೆಗಳು, ಎತ್ತರ 5—0.	ಕಿಚ್ಚೈಯ, ಚಿಕ್ಕಬಳ್ಳಾಪುರ.	7 ವರುಷಗಳು ಡಿಟೋ. 6ನೇ ಸಪ್ಟಂಬರ್ 1869. ಕಳವಿಗಾಗಿ ನಿಷಾ ಮುದ್ದನ್ನು ತಿನ್ನಿಸಿದ್ದು, ಮತ್ತು ಕಳಲು ಸೊತ್ತನ್ನು ತೆಗದುಕೊಂಡದ್ದು. ಮೊ॥ ನಂ. 6, ನಂದೀದುರ್ಗ ಡಿವಿಜರ್ನ ಸೆಷನ್ಸ್ ಕೋರ್ಟು.	6ನೇ ಡಿಟೋ	ಡಿಟೋ		
	5118	ಬಸವ, ಶಿವಾಚಾರ, ಪೂಜಾರಿ, ಶಿಡ್ಲಘಟ್ಟ.	ಎತ್ತರ 5—5.	ಮಲ್ಲಪ್ಪ, ಶಿಡ್ಲಘಟ್ಟ.	ಡಿಟೋ ಕಳವಿಗಾಗಿ ನಿಷಾಮುದ್ದನ್ನು ತಿನ್ನಿಸಿದ್ದು ಡಿಟೋ.	ಡಿಟೋ	ಡಿಟೋ		

1461

ಯಾವಜೈಲಿನಿಂದ ಖುಲಾಸೇಮಾಡಲ್ಪಟ್ಟದ್ದು.	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ರಿಂಟೆಂಡೆಂಟ್‌ರವರದಸ್ತಖತ್.
1	2	3	4	5	6	7	8	9	10
ಬೆಂಗಳೂರು.	8487	ಕರಿಯ, ಜೇಡರ್, ಜಿರಾಯತ್, ಚಿಕ್ಕನಾಯಕನಹಳ್ಳಿ.	ಸಣ್ಣ ಮುಖ, ಯಡಹುಬ್ಬಿನ ಮೇಲೆ ಘಾಯದ ಕಲೆ, ಎತ್ತರ 5—3.	ತಿಮ್ಮ, ಚಿಕ್ಕನಾಯಕನಹಳ್ಳಿ.	18 ತಿಂಗಳು ಕಠಿಣ, ಕೈದ್ 9ನೇ ಮಾರ್ಚಿ 1875, ಕಳವಿಗಾಗಿ ಕನ್ನಾ ಹಾಕಿದ್ದು, ಮೊ॥ ನಂ. 2, ಸಂದೀದುರ್ಗಡಿವಿಜನ್ ಸೆಷನ್ಸ್ ಕೋರ್ಟು.	9ನೇ ಶಪ್ಟಂಬರ್ 1876.	ಇಲ್ಲ.		
	8488	ಕುಂಬಿ, ಕೋಮಟಿ, ವ್ಯಾಪಾರಸ್ತ, ಡಿಟೋ.	ದೊಡ್ಡಮುಖ, ಯಡದವಡೆಯ ಮೂಲೇ ಕೆಳಗೆ ಅಂಡಾಕಾರವಾದ ಘಾಯದ ಕಲೆ, ಎತ್ತರ 5—5½.	ನರಸಿಹ್ಮ, ಡಿಟೋ.	ಡಿಟೋ ಡಿಟೋ, ಕಳವು ಸೊತ್ತನ್ನು ತೆಗದುಕೊಂಡದ್ದು. ಡಿಟೋ	ಡಿಟೋ	ಡಿಟೋ		
	8704	ಮುಹಮ್ಮದ ಸರ್ವಾರ್ ಮುಸಲ್ಮಾನ್ ವ್ಯಾಪಾರಸ್ಥ ಲಷ್ಕರ್.	ಉದ್ದಾನೆ ಖೂಬ್ ಸೂರತಿ ಮನುಷ್ಯ ಬಹಳ ಕೆಂಪಗಿದ್ದಾನೆ. ಕೆನ್ನೇ ಮೇಲೆ ಮಚ್ಚೆ ಹುಬ್ಬಿನ ಮಧ್ಯಕ್ಕೆ ಸಮೀಪದಲ್ಲಿ ಹಣೇ ಮೇಲೆ ಮಚ್ಚೆ, ಎತ್ತರ 5—6.	ಷೇಕ್ ಖುರ್ಷ, ಲಷ್ಕರ್.	15 ವರುಷದ ಕಠಿಣ ಖೈದು 1875ನೇ ಶಪ್ಟಂಬರ್ 15—13 ಮನೆಗೆ ಕನ್ನಾ ಹಾಕಿದ್ದು ಕಳವು ಮೊಕದ್ದಮ ನಂಬರ್; 533 ಷಹರ್ ವ ಕಂಟೋನ್ಮೆಂಟ್ ಮಾಜಿಸ್ಟ್ರೇಟರ ಕೋರ್ಟು.	13ನೇ ಶಪ್ಟಂಬರ್ 1876.	ಏಳುಸಲ.		
	9104	ಜೋಸಫ್, ಕ್ರಿಸ್ತಿಯನ್, ಕುಸಿನಿ, ಲಷ್ಕರ್.	ಯಣೆಗೆಂಪು ಬಣ್ಣ, ಸಣ್ಣತರದ ಮನುಷ್ಯ, ತುಟಿಯ ಒಳಭಾಗ ಸ್ವಲ್ಪ ಕೆಂಪಗೆ ಇದೆ. ಯೆಡಗೈ ಮುಂಭಾಗಕ್ಕೆ ದುಂಡು ಮಚ್ಚೆ, ಯಡಮುಂಗೈಯ ಮುಂದುಗಡೆ ಹಚ್ಚೇ ಗುರುತು ಬಲತೊಡೆಯ ಸಂದಿಯಲ್ಲಿ ಒಂದು ಮಚ್ಚೆ ಕೆಳಹೊಟ್ಟೆಯ ಮೇಲೆ ಹೊಕ್ಕಳ ಕೆಳಗೆ ಅಡ್ಡನೆ ಗುರುತುಗಳು ಉಂಗುಟದ ಬದುಡಲ್ಲಿ ಸ್ವಲ್ಪವಾಗಿ ಕಾಣುವ ಮಚ್ಚೆ ಡಿಅ 4—9.	ಸೊಂತಪ್ಪ, ಲಷ್ಕರ್.	ಮೂರು ತಿಂಗಳು ಡಿಟೋ 13ನೇ ಜೂನ್ 1876 ಕಳವು ಮೊ॥ ನಂಬರ್ 271 ಬೆಂಗಳೂರು ತಾಲ್ಲೂಕು 2ನೇ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟು.	ಡಿಟೋ	ಇಲ್ಲ.		

9218	ಕೆಂಪಿ, ಒಕ್ಕಲಿಗ ಜಾತಿ ಮಜೂರಿಯವಳು, ಬೆಂಗಳೂರು.	ಹಣೆಯ ಮಧ್ಯದಲ್ಲಿ ಹಚ್ಚೆಯೂ, ಮುಖದ ಮೇಲೆ ಅನೇಕ ಸಣ್ಣ ನರಹುಲಿಗಳು, ಮೈ ಮೇಲೂ ಕೈಕಾಲುಗಳ ಮೇಲೂ ವಿವರ್ಣಗಳಾದ ಮಚ್ಚೆಗಳು.	ದ್ದಪ್ಪ, ಬೆಂಗಳೂರು.	10 ದಿನಗಳ ಕ॥ ಸ॥ 2 ರೂಪಾಯಿಗಳ ಜರ್ಮಾನೆ ಕೊಡದಿದ್ದರೆ ಜಾಸ್ತೀಯಾಗಿ 5 ದಿನಗಳ ಖೈದು 4ನೇ ಶಪಟಂಬರ್ 1876 ಕಳವು ಮೊ॥ ನಂ॥ 435, ಬೆಂಗಳೂರು ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟು.	14ನೇ ಡಿಟೋ	ಇಲ್ಲ.	ಜುರ್ಮಾನೇ ವಸೂಲ್.
9109	ಆಗ್ರಾ, ಹೊಲೆಯ, ಕೂಲಿ, ಬೆಂಗಳೂರು.	ಎಣೆಗೆಂಪು, ಭುಜ ಎತ್ತರವಾಗಿ ಯಿದೆ ದಪ್ಪತುಟಿ, ಅಗಲಬಾಯಿ, ಕೊನೆಮೂಗು ದಪ್ಪನಾಗಿಯೂ ಅಗಲವಾಗಿಯೂ ಯಿದೆ ಕೆಳತುಟಿಯ ಮೇಲೆ ಘಾಯದ ಗುರುತು, ಬಲಗೈ ಮೇಲೆ ಅರವದಲ್ಲಿ ಅಮ್ಮೋನಿರಾಮಿ ಕಲ್ಲಮ್ಮಲ್ಯಾಜರ್ ಯಂತ ಗುರುತಿದೆ ಇಂಗ್ಲಿಷ್‌ನಲ್ಲಿ ಸಿ. ಪಿ. ಆರ್‌ಯಂತ ಯಿದೆ ಬಲಭುಜದ ಮೇಲೆ ಇವನ ಹೆಸರು ಆಗ್ರಾ ಎಂಬದು ಹಚ್ಚೇಯಲ್ಲಿ ಹಾಕಿ ಯಿದೆ ಹುವ್ವಿನ ಗುರುತು ಸಹ ಬಲಗೈ ಮೇಲೆ ಹಾಕಿ ಯಿದೆ ಎತ್ತರ 5—6.	ವೀರಾಸಾಮಿ, ಬೆಂಗಳೂರು.	3 ತಿಂಗಳ ಕಠಿಣಖೈದ್ 19ನೇ ಜೂನ್ 1876 ಕಳವು ಮೊಕದ್ದಮಾ ನಂ. 354 ಷಹರ್ ವ ಕಂಟೋನ್ಮೆಂಟ್ ಮಾಜಿಸ್ಟ್ರೇಟರ ಕೋರ್ಟು.	19ನೇ ಶಪ್ಟಂಬರ್ 1876.	ಡಿಟೋ.	
9206	ತಿಮ್ಮ, ಬೇಡರ್ ಕೂಲಿ, ದೇವನಹಳ್ಳಿ.	ಗಡ್ಡದ ಚರ್ಮ ವಿವರ್ಣವಾಗಿದೆ ಯಡಗೈ ಒಂದಂಗುಲ ಕೆಳಭಾಗಕ್ಕೆ ಸಣ್ಣ ನರಹುಲಿ, ಬಲಗಾಲಿನ ಗುಳ್ಳದ ಹತ್ತಿರ ಮುಂದುಗಡೆ ದೊಡ್ಡ ಮಚ್ಚೆ ಎತ್ತರ 5.	ಬೀಡ, ದೇವನಹಳ್ಳಿ.	ಒಂದು ತಿಂಗಳ ಡಿಟೋ 24ನೇ ಅಗಸ್ಟು 1876 ಕನ್ನಚೋರೀ ಕೇಸ್ ನಂ. 457. 2ನೇ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ಬೆಂಗಳೂರು ಡಿ॥	23ನೇ ಡಿಟೋ	ಡಿಟೋ.	24ನೇ ಮುಂ ಆದಿತ್ಯವಾರದ ಸಬಬ್.
2748	ಚಿನ್ನಸಾಮಿ, ಹೊಲೆಯ, ಚೋರಿಲಷ್ಕರ್.	ಅಗಲಮುಖ, ಕೆಳಗಿನ ತುಟೀದಪ್ಪ, ಮುಖದ ಮೇಲೆ ಕಳೇ ಇರುವದಿಲ್ಲ, ಬಾಇ ಕೊಂಚ ಅಗಲವಾಗಿಯೂ ಸುಮಾರಾಗಿ ಸೊಟ್ಟಗೂ ಇದೆ, ಬಲಮುಂಗೈ ಮೇಲೆ ಎರಡು ಹಚ್ಚೇ ಹುವ್ವಗಳು, ಮತ್ತು ಯಡಮುಂಗೈ ಮೇಲೆ ಒಂದು ಇರುತ್ತೆ. ಎತ್ತರ 5—3.	ಮುನಿಸಾಮಿ, ಲಷ್ಕರ್.	ಹತ್ತು ವರುಷಗಳು ಕಠಿಣಸಜಾ, 2ನೇ ಅಕ್ಟೋಬರ್ 1866, ಮನೆಗೆ ಕನ್ನಾ ಹಾದ್ದು ಮತ್ತು ಕಳವು, ಮೊಕದ್ದಮಾ ನಂ. 1, ನಂದೀದುರ್ಗ ಡಿವಿಜನ್ ಸೆಷನ್ಸ್ ಕೋರ್ಟು.	2ನೇ ಅಕ್ಟೋಬರ್ 1876.	ಆರಾವರ್ತಿ.	

ಬೆಂಗಳೂರು.

462

[illegible]	ಕೈದಿಯ ಪಟ್ಟಿಯ ನಂಬರು	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಬಿಡುಗಡೆ ತಾರೀಖು.	[illegible]	ಷರಾ.	[illegible]
1	2	3	4	5	6	7	8	9	10
ಬೆಂಗಳೂರು.	9128	ಮುನಿಯ, ಹೊಲೆಯ, ಹಾಡಿಕೆಗಾರ, ಆನೆಕಲ್.	ಅಗಲಮುಖ, ಮೂಗಿನ ಯದುರಿಗೆ ಯಡಗಡೆ ಒಂದು ಮಚ್ಚೆ, ಬಲಗಿವಿಯ ಮುಂದೆ ಸೊಟ್ಟವಾಗಿರುವ ಬಿಳೀಮಚ್ಚೆ, ಹೊಕ್ಕಳ ಕೆಳಗೆ ಬಿಲ್ಲಿನಹಾಗೆ ಬಗ್ಗಿರುವ ಒಂದು ಸುಟ್ಟಕಲೆ, ಯಡತೊಡೇ ಮುಂದೆ ಮಧ್ಯದಲ್ಲಿ ಒಂದು ಘಾಯದಕಲೆ, ಎತ್ತರ 5—4½.	ತಿಮ್ಮರಾಯ, ಆನೇಕಲ್.	ಮೂರು ತಿಂಗಳು ಕ॥ ಸ॥ 3ನೇ ಜುಲೈ 1876, ಕಳವು, ಮೊಕದ್ದಮಾ ನಂ. 9, ಬೆಂಗಳೂರು, ಡಿಸ್ಟ್ರಿಕ್ಟು ಫಸ್ಟಅ॥ ಕಮ್ಮಿಷನರ.	3ನೇಅಕ್ಟೋಬರ 1876.	ಇಲ್ಲ.		
	9129	ಅಲ್ಲಾಳಿಗ ಉರಫ್ ಗುಲ್ಲಿಗ, ಹೊಲೆಯ, ಜಿರಾಇತ್ ಆನೆಕಲ್.	ಅಗಲಮುಖ, ಗಡ್ಡ ಮೊನೆಯಾಗಿದೆ, ಕಣ್ಣು ಹುಬ್ಬುಗಳ ನಡುವೆ ಮೂರು ಸುಟ್ಟಕಲೆ, ಯಡಕುತ್ತಿಗೆ ಮೊಳೆಯ ಯರಡು ಅಂಗುಲಗಳ ಕೆಳಗೆ ಒಂದುಮಚ್ಚೆ, ಯಡಭುಜದ ರೆಕ್ಕೆಯ ಕೆಳಗೆ ಒಂದು ಬೊಬ್ಬೆ, ಬಲತೊಡೆಯ ಹಿಂದೆ ಎರಡು ಘಾಯದ ಕಲೆಗಳು, ಎತ್ತರ 5—2.	ಮುನಿಯ, ಆನೆಕಲ್.	ಡಿಟೋ.	ಡಿಟೋ.	ಡಿಟೋ.		
	9002	ಮುತ್ತಿ, ಹೊಲೆಯ, ಕೋರ್ಟ್‌ವರ್ಕ್, ಲಷ್ಕರ್.	ಶಾಂತವಾದ ಮುಖಭಾವ, ಬಲಗಣ್ಣಿನ ಹುಬ್ಬಿನ ಮೇಲೆ ಘಾಯದಕಲೆ, ಬಲತೋಳಿನ ಹಿಂದೆ ಘಾಯದಕಲೆ, ಎತ್ತರ 5—3.	ತೋಟಪ್ಪ, ಲಷ್ಕರ್.	ಆರುತಿಂಗಳು ಕಠಿಣಸಜಾ, 4ನೇ ಏಪ್ರೆಲ್ 1876, ಕಳವು, ಮೊಕದ್ದಮಾ ನಂ. 213, ಲಷ್ಕರ್ ಸಬ್ ಮಾಜಿಸ್ಟ್ರೇಟರ ಕೋರ್ಟು.	4ನೇ ಡಿಟೋ.	ಡಿಟೋ.		
	8921	ಜೋರೇಲಿಂಗ, ಗಂಗಡಿಕಾರ್, ಜಿರಾಇತ್, ನಾಗಮಂಗಲ.	ಮುಖದಮೇಲೆ ಅಲ್ಲಲ್ಲಿ ಸಿಡುಬಿನಕಲೆ, ಅಲಗಮುಖ, ಕಿವಿಗಳ ಕೆಳಭಾಗ ಮೇಲೆ ಯತ್ತಿಕೊಂಡಿರುತ್ತೆ. ಬಲಮುಣಿಕಟ್ಟಿನ ಸಮೀಪ	ಕಾಡ, ನಾಗಮಂಗಲ.	ಎರಡು ವರುಷವೂ ಒಂದು ತಿಂಗಳು ಕಠಿಣಸಜಾ, ೮ನೇ ಶಪ್ಟಂಬರ 1874, ಮೊಕದ್ದಮಾ ನಂ. 224,	7ನೇ ಡಿಟೋ.	ಒಂದಾವರ್ತಿ.	8ನೇ ಭಾನುವಾರ ಪ್ರಯುಕ್ತ.	

			ಒಂದು ಕರೇಮಚ್ಚೆ, ಯಡಹೆಬ್ಬೆಟ್ಟಿನ ಉಗುರು ಹುಳತಿರುತ್ತೆ, ಎತ್ತರ 5—4.		66, ಷಹರ್ ಮಾಜಿಸ್ಟ್ರೇಟ್ ಮತ್ತು ಮೈಸೂರು ಡೆಪ್ಯುಟಿ ಕಮಿಷನರ್ ಕೋರ್ಟು, ಕಳವು, ಮತ್ತು ತಪ್ಪಿಸಿಕೊಂಡದ್ದು.			
ಬೆಂಗಳೂರು.	8729	ಅಬ್ದುಲ್‌ಖಾದರ್, ಮುಸಲ್ಮಾನ, ನೌಕರ್, ಸೇಲಂ.	ಕೊಂಚ ಕಾಹಿಲೆಯಾಗಿ ಕಾಣುತ್ತಾನೆ, ಕೀರಧ್ವನಿ, ಕುತ್ತಿಗೆಯ ಬುಡದಲ್ಲಿ ಮಚ್ಚೆ. ಎತ್ತರ 5–2.	ಷೇಕಮಿರ್, ಸೇಲಂ,	ಒಂದು ವರುಷ 7ನೇ ಅಕ್ಟೋಬರ್ 1875. ಮನೆಗೆ ಕನ್ನಾ ಹಾಕಿದ್ದು ಮತ್ತು ಕಳವು, ಮೊಕದ್ದಮಾ ನಂ. 611, ಷಹರ್ ವ ಲಷ್ಕರ್ ಮಾಜಿಸ್ಟ್ರೇಟರ ಕೋರ್ಟು.	7ನೇ ಅಕ್ಟೋಬರ್ 1876.		
ತುಮಕೂರು.	949	ಕರಿಯ, ಮಾದಿಗರು, ಧಾರವಾಡ ತಾಲ್ಲೂಕು ಬಂಕಾಪುರ ಕೂಲಿ.	ಕಪ್ಪುವರ್ಣ, ಗಿಡ್ಡವಾದ ಆಳು 5—0 ಯಡಭುಜದ ಮೇಲ್‌ಭಾಗದಲ್ಲಿ ಅವರೇಕಾಳಗಲ ಹುಣಿನಕಲೆ, 2 ಯಿದೆ.	ತಾಯಿ ಸೂಳೆ ಬಸವಿ, ಧಾರವಾಡದ ತಾಲ್ಲೂಕು ಬಂಕಾಪುರ.	457—380ನೇ ಸೆಕ್ಷನ್ 1874ನೇ ಇಸವಿ ಅಕ್ಟೋಬರ್ ತಾರೀಖು 3 ರಲಗಾಯತು 2 ವರುಷ ಕಠಿಣಸಜಾ,	1876ನೇ ಇಸವಿ ಅಕ್ಟೋಬರ್ ತಾರೀಖು 3.	ಯಿರಲಿಲ್ಲ.	
ಶಿವಮೊಗ್ಗ.	4144	ಖಾದರಬೀ ಮುಸಲ್ಮಾನ ಖಾಸಗೀ ನವಕರೀ, ಶಿವಮೊಗ್ಗಾ.	ವರ್ಣ ಮತ್ತು ಕಣ್ಣು ಸಹ ಕಪಿಲ ಬೆಂನ್ನಿನ ಅರಗಿನ ಮೇಲೆ ಅಡ್ಡವಾಗಿರುವ ವಂದು ಕಲೆ ಬಲಕಾಲಿನ ಹೊರಗಡೆಯಲ್ಲಿ ವಂದು ಚನ್ನಾಗಿ ಕಾಣುವ ಕಲೆ ವಯಸ್ಸು 28 ಉದ್ದ ಅಡಿ 4 ಅಂಗುಲ 9.	ಸೈದಬುಡ್ಡನ್, ಶಿವಮೊಗ್ಗಾ;	ಶಿವಮೊಗ್ಗಾ, ಥರ್ಡ್‌ಕ್ಲಾಸ್ ಮಾಜಿಸ್ಟ್ರೇಟರು ಚಾಲ್ತೀ ಇಸವಿ ಕೇಸ್ ನಂಬರ್ 140ನೇ ಮೊಕದ್ದಮೆಯಲ್ಲಿ ಜುಲೈ ತಾರೀಖು 8ರಲ್ಲು ಕಳವಿನ ತಪ್ಪಿತಕ್ಕಾಗಿ 1 ತಿಂಗಳು ಕಠಿಣಕೈದು 10 ರೂಪಾಯಿ ಜುರ್ಮಾನೆ ಕೊಡದಿದ್ದರೆ ಬದಸ್ತೂರು 7 ದಿವಸ ಕೈದು.	ಖುಲಾಸಾತಾರೀಖು 15ನೇ ಆಗಸ್ಟು.		
	3626	ಗರೀಬಷಾ ಮುಸಲ್ಮಾನ ಭಿಕ್ಷಾಟಣೆಕೊಪ್ಪದವಾಸಸ್ಥ.	ಕರ್ರಗೆ ತೆಳ್ಳಗೆ ಯಿದ್ದ ಮುದಕ ಕಣ್ಣು ಕಪಿಲ ಯಡಕೋಳಿನ ಹಿಂಭಾಗದಲ್ಲಿ ದುಂಡಗೆತಿರುವಿದಂತೆ 1 ಕಲೆ, ಯಡತೊಡೆಯ ಹಿಂಭಾಗದಲ್ಲಿ ಸೊಂಟದ ಕೀಲು ಸುಮಾರು 7 ಅಂಗುಲದಕೆಳಗೆ ವಂದು ದುಂಡಾದ ಕಲೆ. ವಯಸ್ಸು 62 ಉನ್ನತಅಡಿ 5 ಅಂಗುಲ 7.	ಮದಾರಷಾ, ಕೊಪ್ಪ	ಚಿತ್ರದುರ್ಗದ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು 74ನೇ ಇಸವಿ ಕೇಸ್ ನಂಬರು 23ನೇ ಮೊಕದ್ದಮೆಯಲ್ಲಿ ಖೋಟಾನಾಣ್ಯ ಚಲಾವಣೆಗೋಸ್ಕರ 2 ವರುಷ ಕಠಿಣ ಕೈದು, 74ನೇ ಇಸವಿ ಆಗಸ್ಟು ತಾರೀಖು 17ರಲ್ಲು ವಿಧಿಸಿದ್ದಾರೆ.	ಖುಲಾಸಾತಾ॥ 17ನೇಆಗಸ್ಟು.		

J. S. F. MACKENZIE,
Offg. Supt., Central Jail.

C. MADAIYA,
Offr. in Chargeof Jail.

464

ಯಾವ ಜಿಲ್ಲೆಯಿಂದ ಬಂದನೋ ಆ ಜಿಲ್ಲೆ.	ಜೈಲ್ ರಿಜಿಸ್ಟರಿನ ನಂಬರು.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ,ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಬಿಡುಗಡೆ ತಾರೀಖು.	ಜೈಲಿಗೆ ಬರುವ ಮುಂಚೆ ಇದ್ದ ಜೈಲು.	ಷರಾ.	ಜೈಲ್ ಸೂಪರಿಂಟೆಂಡೆಂಟರ ಸಹಿ.
1	2	3	4	5	6	7	8	9	10
ಚಿಮೊಗ್ಗಾ.	4149	ವೆಂಕಟೀ ಕೊರ್ಮರ್, ಕೂಲಿ ಹೊನ್ನಾಳ್ಳಿ ತಾಲ್ಲೂಕು ಕೊರ್ಚಗೊಂಡನಹಳ್ಳಿ	ಕಣ್ಣು ಮತ್ತು ವರ್ಣ, ಕಪಿಲಾ ಕಣ್ಣಿನ ಹುಬ್ಬಿನ ನಡುವೆ. ? ಈ ರೂಪವಾದ ವಂದು ಹಚ್ಚೆಯ ಗುರ್ತು, ತೋಳಿನ ಮುಂಭಾಗದಲ್ಲಿಯೂ, ತೋಳಿನಮೇಲೆಯೂ, ಮತ್ತು ಯಡ ಮುಂಗೈಯ ಬಲಗಡೆಯಲ್ಲಿಯೂ, ಬದಸ್ತೂರು,—2 ಕಾಲಿನ ಹಜ್ಜೇ ಹರಡಿನ ಮೇಲೆ ಪ್ರೇಳಮುಖದಲ್ಲಿ ಬದಸ್ತೂರು, ಹಚ್ಚೆ ಗುತುರ್ ವುಂಟು,	ನರಸುಂವ್ವಾ,	ಹೊಂನಾಳಿ ತಾಲ್ಲೂಕು 3ನೇ ಕ್ಲಾಸ್ ಮೇಜಿಸ್ಟ್ರೇಟರು ಚಾಲ್ತೀ ಇಸವಿ ಕೇಸ್ ನಂಬರು 72ನೇ ಮೊಕದ್ದಮೇಯಲ್ಲಿ ಕಳವಿಗಾಗಿ ಜುಲೈ 10 ರಲ್ಲಿ 1 ತಿಂಗಳು ಕಠಿಣಕೈದು ಮತ್ತು 35 ರೂಪಾಯಿ ಜುರುಮಾನೆ ಕೊಡದಿದ್ದರೆ ಬದಸ್ತೂರು 7 ದಿನ ಕಠಿಣಕೈದು ವಿಧಿಸಿದ್ದಾರೆ.	ಖುಲಾಸಾತಾರೀಖು 17ನೇ ಆಗಸ್ಟು.		1 ದಫಾ.	P. H. Benson, M. B., *Superintendent of Jail.*
	3121	ಆಗಸರ ಶಿದ್ದಾ, ಅಗಸಾ, ಅಗಸರ ಕೂಲಿ, ಹೊನ್ನಾಳಿ ತಾಲ್ಲೂಕು ರೇವನಗೆರೆ.	ವರ್ನಕರ್‍ರಿಗೆ, ಕಣ್ಣುಕಪಿಲಾ, ಯದೆಯ ಬಲಗಡೆಕೆಳಗೆ 1 ದೊಡ್ಡ ಕಲೆ, ಹೊಟ್ಟೆ ಮೇಲೆ ಅಂನದ ಚೀಲದಬಳಿ 3ಸುಟ್ಟಕಲೆಗಳು, 2 ತೊಡೆಯ ವಳಗಡೆ ಭಾಗದಲ್ಲಿ ನರಗಳು ವುಬ್ಬಿದಹಾಗೆ ಯಾ ಬಾತುಕೊಂಡಹಾಗೆ ಕಾಣುತ್ತಿಧೆ. ವಯಸ್ಸು 27 ಅಡಿ 5 ಅಂಗುಲ 4.	ಕೆಂಚಪ್ಪಾ, ರೇವನಕೆರೆ,	ನಗರಡಿವಿಜನ್ ಕಮ್ಮಿಷನರ್ ಮತ್ತು ಶರ್ಪ ಜಡ್ಜಿರು 73ನೇ ಇಸವಿ ಕೇಸ್ ನಂಬರ್ 63ನೇ ಮತ್ತು 70ನೇ ಮೊಕದ್ದಮೇಗಳಲ್ಲಿ ದರೋಡೆಗಾಗಿ 3 ವರುಷ ವಂದು ದಿವಸ ಸಜಾ, 100 ರೂಪಾಯಿ ಜುರುಮಾನಾ ಕೊಡದಿದ್ದರೆ ಬದಸ್ತೂರು ವಂದು ವರುಷ ಜಾಸ್ತಿ ಕೈದು ಈ ಪ್ರಕಾರ 73ನೇ ಇಸವಿ ಫೆಬ್ರುವರೀ ತಾರೀಖು 22ರಲ್ಲು ವಿಧಿಸಿದ್ದಾರೆ.	22ನೇ ಆಗಸ್ಟುಖುಲಾಸಾ		ಜುರ್ಮಾನೇ ಪೈಕೀ ರೂಪಾಯಿ50—7—9 ವಸೂಲ್ ಬಂದಿಧೆ	
	4190	ನೆಲವಾಡ, ವಡ್ಡರ್, ಕೂಲಿ, ಶಿಕಾರಿಪುರ ತಾಲ್ಲೂಕು ಶೆಟ್ಟೀಹಳ್ಳಿ,	ಕಣ್ಣು ಮತ್ತು ವರ್ನ, ಸ್ವಲ್ಪ ಕಪಿಲಾ, ಬಲಕಿವಿಯ ಮೇಲೆ 1 ಕಲೆ, ಮೂಗಿನ ಮಧ್ಯದ ದಿಂಡಿನಲ್ಲಿ ಯದ್ದಂತಾ ವಂದು ಸಂಣ ಮಚ್ಚಾ, ಬಲತೊಡೆಯ ಮುಂಭಾಗದಲ್ಲಿ ಚ	ತಿಂಮಾ, ಶಿಕಾರೀಪುರ ತಾಲ್ಲೂಕು ಶಟ್ಟಹಳ್ಳಿ,	ಶಿಕಾರೀಪುರ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರು ಜುಲೈ ತಾರೀಖು 25ರಲ್ಲು ಕಳವಿಗಾಗಿ 1 ತಿಂಗಳು ಕಠಿಣಕೈದು ಸಜಾ, ವಿಧಿಸಿದ್ದಾ	25ನೇ ಆಗಸ್ಟುಖುಲಾಸಾ			

966

ಶಿವಮೊಗ್ಗ.			ನ್ನಾಗಿ ಕಾಣುವ ಕಲೆ, ವಯಸ್ಸು 43 ಉನ್ನತ ಅಡಿ 5 ಅಂಗುಲ 9.		ರೆ ಚಾಲ್ತಿ ಇಸವಿ ಕೇಸ್ ನಂಬರ 31ನೇ ಮೊಕದ್ದಮಾ.			
ಕೊಡಗು.	678	ಮೇದು, ಕವಾಡಿಜಾತಿ, ರಹೀಯತ್, ಕೊಡಗು ಯಡೆನಾಲ್ಕು ನಾಡು.	ಬಲಗಡೆ ಹುಬ್ಬಿಗೆ ಹತ್ರವಾಗಿ ಹಣೇ ಮೇಲೆ ಉದ್ದವಾದ ಬಂದು ಕಲೆಯು, ಯಡಗಡೆ ಕೆನ್ನೇ ಕೆಳಗೆ 1 ಕಲೆಯು, ಯಡದ ಕಂಕಳದ ಬಳಿ ಸಂಣದೊಂದು ಕಪ್ಪು ಗುರ್ತು ಸಹಾ ಯಿಥೆ. ಯಡದಕೈಯಿ ಮುಂಡಿ ಮೇಲೆ 1 ಕಲೆಯು, ಬಲಪಾರ್ಶ್ವ ಹೊಟ್ಟೆ ಮೇಲೆ ಬಟ್ಟವಾಗಿ 1 ಸುಟ್ಟಕಲೆಯು, ಬಲದ ತೊಡೆ ವಳಪಾರ್ಶ್ವ ದೊಡ್ಡದೊಂದು ಕಲೆಯು, ಸದರೀ ತೊಡೇ ಮೇಲೆ ದೂರದೂರವಾಗಿ ಸಣ್ಣಸಂಣ ಬಟ್ಟಕಲೆಗಳು, ತುಂಬವಾಗಿ ಸಹಾ ಯಿಥೆ. ಮತ್ತು ಬಲಕಾಲ್ ಪಿರ್ಡಿನಲ್ಲು ನರಗಳು ದೊಡ್ಡದಾಗಿ ಯಿಥೆ. ಯಡಕಾಲ್ ಪಿರ್ಡಿಕಂಡದ ಮೇಲೆ ಸಂಣಸಂಣ ಕಲೆಗಳು ತುಂಬಾ ಯಿಥೆ. ಯಣೆಗೆಂಪುವರ್ಣ, 5 ಅಡಿ 10 ಅಂಗುಲ ಯತ್ರವಾಗಿ ಯಿದ್ದಾನೆ.	ಅಂಬು.	ಕಳವುಮಾಡಿದ್ದಕ್ಕೋಸ್ಕರ ಕೊಡಗು ಫ॥ ಅ॥ ಸೂಪರ್‌ಟೆಂಡೆಂಟ ಸಾಹೆಬರವರ ಸರ್ 1875ನೇ ಇಸವಿ ಕ್ರಿಮಿನಾಲ್ ಕೇಸ್ ನಂಬರ 53ರ ಫೈಸಲ್ ಮೇರೆ ಸರ್ 1875ನೇ ಇಸವಿ ಮಾರ್ಚಿ ತಾರೀಖು 27 ರಿಂದ 18 ತಿಂಗಳು ಕಠಿಣ ಖೈದು.	27ನೇ ಶಪ್ಟಂಬರ 1876ನೇ ಇಸವಿ.	ಇಲ್ಲ.	E. SHAW, *Supt. of Jail.*
	718	ನಂಜ, ಅಗಸರಜಾತಿ, ಕೂಲೀ ಕಸಬ್, ಕುಣಿಗಲ್ ತಾಲ್ಲೂಕು ವಾಸಸ್ಥಳ.	ಯರಡುಕೈ ತೋಳಿನಲ್ಲು ಬಂದೊಂದು ಶಿಡುಬು ಚುಚ್ಚಿದ ಕಲೆಗಳು ಯಿಥೆ. ಯಡದ ಮೊಲೆಗೊಂಡೇ ಬಳಿ ಯರಡು ಕಲೆಗಳು ಯಿಥೆ. ಬಲಕೈಯಿ ತೋಳಿನಲ್ಲಿ ಹಸುರು ಚುಚ್ಚಿಯಿಥೆ. ಯಡದ ತೊಡೆಯ ಹೊರಭಾಗದಲ್ಲಿ 1 ಕಲೆ ಯಿಥೆ. ಯಣೆಗೆಂಪುವರ್ಣ, 5 ಅಡಿ 6 ಇಂಚು ಎತ್ರ ಯಿದ್ದಾನೆ.	ನಂಜಾ.	ಇಂಡ್ಯನ್ ಪೆನಲ್‌ಕೋಡ್ 430ನೇ ಕಲಂ ಮೇರೆ ಕೆಡಕು ಮಾಡಿದಕ್ಕೋಸ್ಕರ ಕೊಡಗು ಸೆ॥ ಅ॥ ಸೂಪರ್‌ಟೆಂಡೆಂಟ ಸಾಹೆಬರವರ ಸರ್ 1875ನೇ ಇಸವಿ ಕ್ರಿ. ಕೇಸ್ ನಂ. 34 ರ ಫೈಸಲ್ ಮೇರೆ 6 ತಿಂಗಳು ಕಠಿಣ ಖೈದು ಮತ್ತು 200 ರೂಪಾಯಿ ಜುರ್ಮಾನೆ ಕೊಡದಿದ್ದರೆ ಹೆಚ್ಚಿಗೆ 6 ತಿಂಗಳು ಕಠಿಣಕೈದು ಸಹ 1875ನೇ ಇಸವಿ ಶಪ್ಟಂಬರ್ ತಾರೀಖು 21ರ ಲಗಾಯತುನಿಂದಾ.	21ನೇ ಶಪ್ಟಂಬರ 1876ನೇ ಇಸವಿಯಲ್ಲು.	ಡಿಟ್ಟೋ.	

MYSORE GOVERNMENT PRESS, BANGALORE—1876.

468

ಮೈಸೂರ ಗೆಜೆಟ್.

ನಂ. 45 ಸರ್ಕಾರದಿಂದ ಛಾಯಿಸ್ಪಲ್ಪಟ್ಟದ್ದು. ಸ್ 1876.

ಬೆಂಗಳೂರು, ಶನಿವಾರ, ನವಂಬರ ತಾ॥ 11, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯಾ ಗವರ್ರ್ಮೆಂಟಿನವರ ಇಸ್ತಿಹಾರ ನಾಮೆಗಳು.	281—287
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಡೆಪ್ಯುಟ ಅಕೌಂಟೆಂಟ್ ಜನರಲ್ಲವರು, ಮಣಿ ಆರಡರ ಕಂಟ್ರೋಲರು, ಪಬ್ಲಿಕ ವರಕ್ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರವೇಟರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟ ಕಮ್ಮಿಷನರುಗಳು, ಪೊಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು. ..	531—543
3ನೇ ಭಾಗ—ಇಂಡ್ಯಾ ಗವರ್ರ್ಮೆಂಟಿನ ಮಂತ್ರಾಲೋಚಕ ಸಭೆಯವರ ಅಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.— ..	
ಸಪ್ಲಿಮೆಂಟ ಕ್ಷಾಮ ನಿವಾರಕ ಸಮಾಜದಲ್ಲಿ ಚೀಫ್ ಕಮ್ಮಿಷನರವರ ಪ್ರಸಂಗ	45—48

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 259. ತಾರೀಖು 26ನೇ ಅಕ್ಟೋಬರ 1876.

ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್‌ಕಮ್ಮಿಷನರವರಿಂದ ಅಂಗೀಕರಿಸಲ್ಪಟ್ಟು ಮಂಜೂರಾಗಿರುವದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ

2. ಜನರಲ್ ಪೆರೇಡ್ ಗ್ರೌಂಡ್ ಎಂಬು ಕವಾಯತ್ ದಿಣ್ಣಿಗೆ ಅಂಚಿನಲ್ಲಿ ಮಾತ್ರ ಯೇರ್ಪಟ್ಟಿರುವ ಕುದುರೇ ದಾರಿಯಲ್ಲಿ ಕುದುರೇಗಳನ್ನು ಸವಾರಿಗೆ ಯಾ ಬಂಡಿಗೆ ಪಳಗಿಸಲ್ಪಡಕೂಡದು. ಸದರೀ ಮಾರ್ಗದಲ್ಲಿ ಅತಿ ರಭಸವಾಗಿ ಸವಾರೀ ಮಾಡಕೂಡದು.

ಈ ಬೈಲಾ ನಿಬಂಧನೆಗೆ ತಪ್ಪುವಂತಾ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಹಾಗೆ ತಪ್ಪು ಸಾಪಿಸಲ್ಪಟ್ಟಮೇಲೆ ನಡಿಸಲ್ಪಡತಕ್ಕ ಪ್ರತಿ ತಪ್ಪಿತಕ್ಕೂ, ಐದು ರೂಪಾಯಿಯ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

3. ಯಾವ ಮನೆಯಲ್ಲಿ ಉಖಾಲ್ ಜುಲಾಬಾಗಲಿ, ಶಿಡುಬಾಗಲಿ; ಕಾಣಿಸಿಕೊಳ್ಳುತ್ತದೋ ಆ ಮನೆಯ ಯಜಮಾನನು ಮ್ಯುನಿಸಿಪೆಲ್ ಕಮ್ಮಿಷನರ್ ಪ್ರೆಸೀಡೆಂಟರಿಗಾಗಲಿ, ಅತ್ಯಂತ ಸಮೀಪದಲ್ಲಿರುವ ಪೊಲೀಸ್ ಸ್ಟೇಷನಿಗಾಗಲಿ, ಜನಗಳ ಆರೋಗ್ಯದ ಬಗ್ಗೆ, ರೋಗವನ್ನು ಮಟ್ಟುಪಡಿಸುವಬಗ್ಯೆ, ತಕ್ಕ ಕ್ರಮಗಳನ್ನು ಏರ್ಪಡಿಸುವದಕ್ಕೋಸ್ಕರವೂ ಸದರೀ ಸಂಗತಿಯನ್ನು ಕುರಿತು ಕೂಡ್ಲೆ ರಿಪೋರ್ಟು ಮಾಡತಕ್ಕದ್ದೆಂದು ತಾಕೀದು ಮಾಡಲ್ಪಡುತ್ತಾರೆ.

ಈ ಬೈಲಾ ನಿಬಂಧನೆಯ ಷರತ್ತುಗಳನ್ನು ಜಾರೀಮಾಡುವದರೊಳಗೆ, ಕೆಲವು ಸಂಗತಿಗಳಲ್ಲಿ ರೋಗತಗಲಿದ ಮನುಷ್ಯನನ್ನು ಒಂದು ಆಸ್‌ಪತ್ರಿಗೆ ಒಯ್ಯುವದು ಜರೂರೆಂದು ಪ್ರಾಯಶಃ ಎಣಿಸಲ್ಪಡಬಹುದು, ಆದರೆ ಅಂತಾ ಮನೆಗಳೊಳಗೆ ರೋಗತಗಲಿದವರನ್ನು ಪ್ರತ್ಯೇಕಪಡಿಸುವದಕ್ಕೆ ತಕ್ಕ ಹಾಗೆ ಸ್ಥಳಾನುಕೂಲವಿದ್ದರೆ ಅಥವಾ ರೋಗಿಯನ್ನು ಪ್ರತ್ಯೇಕ ಖೋಲೀಯಲ್ಲಿಡುವದಕ್ಕೆ ಯುಕ್ತಗಳಾದ ಯೇರ್ಪಾಡುಗಳು ಮಾಡಬಹುದಾಗಿದ್ದರೆ ಅಂತಾ ಮನೆಗಳೊಳಗೆ ಸದರೀ ಕ್ರಮವು ಸುತರಾಂ ನಡಿಸಬೇಕಾದ್ದಿಲ್ಲವು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ ಮತ್ತು ಅಂತಾ ಉಲ್ಲಂಘನೆ ನಡಿಸಲ್ಪಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗಳ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ನಂ. 268. ತಾರೀಖು 2ನೇ ನವಂಬರ 1876.

ಹಾಲಿ ಕಾಲಸ್ಥಿತಿ ವಿದ್ಯಮಾನಗಳಿಂದ ಅವಶ್ಯಕವೆಂದು ತಿಳಿಯಬಂದ ಪ್ರಕಾರ ಜನಗಳಿಗೆ ಕಷ್ಟ ನಿವಾರಣಾರ್ಥವಾದ ಉಪಾಯವನ್ನಾಗಿ ಚೀಫ್ ಕಮ್ಮಿಷನ್ನರ್ ಸಾಹೇಬರವರು ಚಾಲತಿ ಇಸವಿಯ ಸರಕಾರ ತೆರಿಗೆಗಳ ವಿಷಯದಲ್ಲಿ ಇದರಡಿ ಬರುವ ತಿದ್ದುಪಾಡುಗಳನ್ನು ವಿಧಿಸಿರುತ್ತಾರೆ. ಸದರೀ ತಿದ್ದುಪಾಡುಗಳು ಡಿವಿಜನ್ ಕಮ್ಮಿಷನ್ನರ್‌ಗಳ ಹುಕ್ಕುಂ ಅನುಸರಿಸಿ ಡಿಸ್ಟ್ರಿಕ್ಟ್‌ಗಳ ಡಿಪ್ಯುಟಿ ಕಮ್ಮಿಷನ್ನರ್‌ಗಳಿಂದ ಜಾರೀಗೆತರಲ್ಪಡತಕ್ಕದ್ದು.

1. ಜಮೀನ್ ಕಂದಾಯದ ಖಿಸ್ತುಗಳು ಸಾಲ್‌ಗುದಸ್ತೆಯಂತೆ ನಾಲ್ಕು ಖಿಸ್ತುಗಳಿಗೆ ಬದಲಾಗಿ ಏಳು ಖಿಸುಗಳಾಗಿ ಮಾಡಲ್ಪಟ್ಟು ಈ ಕೆಳಗೆ ಕಾಣುವ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು.

ಡಿಸಂಬರು ಆಣೆಗಳು 2—ಜನವರಿ 3—ಫೆಬ್ರುವರಿ 3—ಮಾರ್ಚಿ 2—ಏಪ್ರಿಲ್ 2—ಮೇ 2—ಜೂನ್ 2

ವಿನಾಯಿತಿ—ಈ ರಿಯಾಯತಿ ನಗರ ವ ಅಷ್ಟಗ್ರಾಮಡಿವಿಜನ್‌ಗಳ ಮಲ್ನಾಡು ತಾಲ್ಲೂಕುಗಳಿಗೆ ಲಗಾವಾಗಿರುವದಿಲ್ಲ.

2. ಜಮೀನ್ ಕಂದಾಯ ಮೊಹತರ್ಫಾ ವಗೈರೆಗಳ ದರೋಬಸ್ತು ಬಾಕಿಗಳ ಮೇಲೆ ರೂಪಾಯಿ ಒಂದಕ್ಕೆ ದಿನ ಒಂದಕ್ಕೆ ಅರ್ಧಕಾಸಿನಮೇರೆ ಬಡ್ಡಿ ಕಟ್ಟಲ್ಪಡತಕ್ಕ ಬಗ್ಯೆ ವಿಧಿಸುವ ಹುಕುಂ ಅಮಲ್ ಚಾಲತಿ ಇಸವಿಯಲ್ಲಿ ಮನ್ನಾಮಾಡಲ್ಪಟ್ಟಿದೆ.

3. ಈ ಬರದಿಂದ ಬಹಳವಾಗಿ ಯಾವ ತಾಲ್ಲೂಕುಗಳು ಯಾ ತಾಲ್ಲೂಕುಗಳ ಪೈಕಿ ಯಾವ ಪ್ರದೇಶಗಳು ಬಾಧಿಸಲ್ಪಟ್ಟಿರತ್ತೋ ಅಂತಾ ತಾಲ್ಲೂಕುಗಳ ಯಾ ತಾಲ್ಲೂಕುಗಳ ಪ್ರದೇಶಗಳೊಳಗೆ ಈ ಸಾಲಿನಲ್ಲಿ ಹುಲ್ಲು ಬನ್ನಿ ಹರಾಜು ನಡಿಸಲ್ಪಡುವದಿಲ್ಲ ಕಮ್ಮಿಷನ್ನರ್‌ಗಳು ತಮ್ಮ ತಮ್ಮ ಡಿವಿಜನ್‌ಗಳಲ್ಲಿ ಈ ಹುಕ್ಕುಂ ಅನುಸರಿಸಿ, ಹುಲ್ಲು ಬನ್ನಿ ಹರಾಜಿನಿಂದ ಸಂಪೂರ್ಣವಾಗಿ ವಿನಾಯಿಸಲ್ಪಡುವ ಜಮೀನ್‌ಗಳ ವಿಸ್ತೀರ್ಣಗಳನ್ನು ಪ್ರಸಿದ್ಧಪಡಿಸತಕ್ಕದ್ದು.

ನಂ. 274. ತಾರೀಖು 4ನೇ ನವಂಬರ 1876.

ಮೈಸೂರು ಶೀಮೆಯಲ್ಲಿ ಸರ್ಕಾರ್ ರಸ್ತೆಗಳು, ಶೇತುವೆಗಳು, ಇವುಗಳ ಮೇಲೆ ಸುಂಕ ವಸೂಲ್ ಮಾಡುವಬಗ್ಯೆ ಈ ಕೆಳಗೆಬರುವ ರೂಲ್ಸ್ ಇಂಡ್ಯೆ ಗವರ್ನಮೆಂಟನವರ ಅಪ್ಪಣೆಯಪ್ರಕಾರ ಇದರಡಿ ಬರುವ ನಿಬಂಧನೆಗಳಿಗೆ ಒಳಪಟ್ಟು ಅನುಸರಿಸಲ್ಪಡುವದು.

1. ಈ ರೂಲ್ಸಿಗೆ ಸೇರಿಸೋಣಾದ ಪಟ್ಟಿಯಲ್ಲಿ ಅಡಗಿರುವ ದರಗಳು, ಹಾಲೀ ನಡೆಯುತ್ತಿರುವ ದರೋಬಸ್ತು ಗುತ್ತಾಗಳ ವಾಯಿದೆ ಪೂರೈಸಿದ ಬಳಿಕ ಘಾಟೀ ರಸ್ತೆಗಳು, ಶೇತುವೆಗಳು, ಇವುಗಳ ಮೇಲೆ ವಸೂಲಾಗತಕ್ಕ ಸುಂಕಗಳ ವಿಷಯದಲ್ಲಿ ಜಾರೀಗೆ ಬರತಕ್ಕದ್ದು.

2. 11ನೇ ರೂಲ್ ನಿಬಂಧನೆಗಳನ್ನು ಅನುಸರಿಸಿ 24 ಘುಂಟೆಗಳ ಯಾವ ದಿನದಲ್ಲಾಗಲಿ, ಒಂದೇ ಜಾನ್ವರ್ ಯಾ ಬಂಡಿ ವಗೈರೇಮೇಲೆ ಒಂದು ತೀರ್ವೆಗಿಂತ ಹೆಚ್ಚಾಗಿ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

ಮೈಸೂರು ಶೀಮೆಯಲ್ಲಿರುವ ಸರ್ಕಾರೀ ರಸ್ತೆಗಳು ವ ಶೇತುವೆಗಳು ಇವುಗಳಮೇಲೆ ಸುಂಕ ವಸೂಲ್ ಮಾಡುವ ಬಗ್ಯೆ ಮಾಡಲ್ಪಟ್ಟ ನಿಬಂಧನೆಗಳು.

ಮೈಸೂರು ಶೀಮೆಯಲ್ಲಿರುವ ರಸ್ತೆಗಳು, ಶೇತುವೆಗಳು, ಇವುಗಳಮೇಲೆ ಸುಂಕ ವಸೂಲ್ ಮಾಡತಕ್ಕದ್ದನ್ನು ವಿಧಿಸುವದು ಆವಶ್ಯಕವಾಗಿರುವದರಿಂದ ಸದರೀ ಉದ್ದೇಶವೊಡನೆ ಈ ಕೆಳಗೆ ಬರುವ ನಿಬಂಧನೆಗಳು, ಮಂತ್ರಾಲೋಚಕ ಸಭೆಯೊಳಗಣ, ಘನ ವನ್ನು ಹೊಂದಿದ ವೈಸರಾಯಿ ವ ಗವರ್ನ್ಮರ್ ಜನರಲ್ಲವರಿಂದ ಮಂಜೂರ್ಮಾಡಲ್ಪಟ್ಟಿವೆ.

1. ಯಾವ ರಸ್ತೆಗಳಮೇಲೆ, ಮತ್ತು ಯಾವ ಸ್ಥಳಗಳಲ್ಲಿ ಸುಂಕಗಳು ತೆಗದುಕೊಳ್ಳತಕ್ಕದ್ದೋ ಅದನ್ನು ಮೈಸೂರು ಚೀಫ್ ಕಮ್ಮಿಷನರವರು ಆಗಿಂದಾಗ್ಯೆ ತಿಳಿಸಬಹುದು, ಮತ್ತು ಯಾವ ರಸ್ತೆಗಳಮೇಲೆ ಅಂತಾ ಸುಂಕಗಳು ವಸೂಲಾಗತಕ್ಕದ್ದೆಂದು ತಿಳಿಸ ಲ್ಪಟ್ಟಿರುತ್ತೋ ಆ ರಸ್ತೆಗಳಮೇಲೆ ಸುಂಕ ವಸೂಲಿಯನ್ನು ಮೌಕೂಫ್ ಮಾಡಬಹುದು, ಮತ್ತು ಈ ಸೆಕ್ಷನಿನ ನಿಬಂಧನೆಯ ನ್ನು ಜಾರೀ ಮಾಡುವಬಗ್ಯೆ ಯಾವ ಸುಂಕದ ಕಟ್ಟೆಯನ್ನಾಗಲಿ ಕಟ್ಟಿಸಲಿಕ್ಕೆ ಯಾ ತೆಗದು ಹಾಕಲಿಕ್ಕೆ ಅಪ್ಪಣೆ ಕೊಡಬಹುದು.

2. ಮೈಸೂರು ಸರ್ಕಾರದ ಖರ್ಚಿನಿಂದ ಕಟ್ಟಲ್ಪಟ್ಟಿರುವ ಯಾ ಯಿನ್ನುಮೇಲೆ ಕಟ್ಟಲ್ಪಡುವ ಮೈಸೂರು ಶೀಮೆಯೊಳಗಣ ಯಾವದಾದರೂ ರಸ್ತೆ ಯಾ ಶೇತುವೆ ಯಿಂತಾದ್ದರಮೇಲೆ ಇದಕ್ಕೆ ಸೇರಿಸಲ್ಪಟ್ಟಿರುವ ಷೆಡ್ಯೂಲ್‌ನಲ್ಲಿ ಕಂಡ ದರಕ್ಕೆ ಮೀರದ ದರ ವುಳ್ಳ ಸುಂಕವನ್ನು ಮೈಸೂರು ಚೀಫ್ ಕಮ್ಮಿಷನರವರು ವಸೂಲ್ ಮಾಡಿಸಬಹುದು.

3. ಅಂತಾ ಯಾವ ಸುಂಕ ಯಾ ಮೊಬಲಗಾಗಲಿ, ಕೊಡಲ್ಪಡದೇ ಇದ್ದ ಪಕ್ಷಕ್ಕೆ ಅದನ್ನು ವಸೂಲ್ ಮಾಡುವಬಗ್ಯೆ ಮೊಕ ರರಾದ ಆಫಿಸರ್‌ಗಳು, ಸುಂಕ ತೆರತಕ್ಕ ಯಾವದಾದರೂ ಬಂಡಿಗಳು, ಯಾ ಜಾನ್ವರ್‌ಗಳು, ಅಥವಾ ಅವುಗಳ ಬೋಜೇ ಪೈಕಿ ಸುಂಕ ದ ಮೊಬಲಗಿಗೆ ತಕ್ಕಷ್ಟು ತಡದು ಹಿಡಿಯತಕ್ಕದ್ದು.

4. ಇದರಮೇಲಣ ಸೆಕ್ಷನ್‌ನಲ್ಲಿ ಕಂಡ ಮೇರೆ ಸ್ವತ್ತು ಹಿಡಿಯಲ್ಪಟ್ಟ ಬಳಿಕ 24 ಘಂಟೆಗಳ ಹೊತ್ತು ಯಾವ ಸುಂಕವಾ ಗಲಿ ತೀರಿಸಲ್ಪಡದೆಯಿದ್ದರೆ, ಭಾನುವಾರ ಅಥವಾ ಸೇರಿದಹಾಗೆ ಬರುವ ಯಾವದಾದರೂ ರಜಾದಿನ ಇಂತಾದ್ದು ಶಿವಾಯಿ ಇಪ್ಪತ್ತು ನಾಲ್ಕು ಘಂಟೆಯ ಕಾಲ ನೋಟಿಸ್ ಕೊಟ್ಟಮೇಲೆ, ಸುಂಕದ ಮೊಬಲಗ್ ಸಲ್ಲುವಬಗ್ಯೆ, ಹಾಗೆ ಸುಂಕ ವಸೂಲಾಗದೆ ಯಿರುವಣ, ಸ್ವತ್ತು ತಡೆಯುವಣ, ವ ಹರಾಜ್ ಮಾಡುವಣ, ಇವುಗಳಿಗಾಗಿ ಹಿಡಿಯುವ ಖರ್ಚಿಗಾಗಿಯೂ ಸುಂಕದ ವಸೂಲೀ ಕೆಲಸದ ಮೇ ಲ್ವಿಚಾರಣೆಗೋಸ್ಕರ ನಿಯಮಿಸಲ್ಪಟ್ಟ ಆಫಿಸರನ ಅಪ್ಪಣೆಯಿಂದ ಸದರೀ ಸ್ವತ್ತು ಹರಾಜ್ ಮಾಡಲ್ಪಡತಕ್ಕದ್ದು. ಸದರೀಆಫಿಸರ್ ಅಂತಾ ಮೊಬಲಗಿನಲ್ಲಿ ಬಾಕೀ ಯೇನಾದರೂ ಉಳಿದಿದ್ದರೆ ಅದನ್ನು ಮಾಲ್‌ದಾರ ಕೇಳಿದಲ್ಲಿ ವಾಪಸ್ ಕೊಡಿಸಿ ಬಿಡತಕ್ಕದ್ದು. ಪರಂತು ಹರಾಜ್ ಷುರುವಾಗುವದಕ್ಕೆ ಮುಂದೆ ಯಾವಾಗಲಾಗಲಿ ಆದ ದರೋಬಸ್ತು ಖರ್ಚು ಮತ್ತು ಸಲ್ಲತಕ್ಕ ಸುಂಕದ ದುಗ ಣೀ ಮೊಬಲಗ್ ಸಹಿತ ಕೊಡುವದಾಗಿ ಖಾಯಿಷ್ ಮಾಡಿದರೆ ಕೂಡ್ಲೆ, ತಡದಿರುವ ಸ್ವತ್ತನ್ನು ಸ್ವಂತಗಾರರಿಗೆ ಒಪ್ಪಿಸಿಬಿಡತಕ್ಕದ್ದು.

5. ಫೌಜುಗಳು, ಮಿಲಿಟೇರಿಸಾಮಾನುಗಳು, ಯಾ ಫೌಜಿನ ಆಯುಧಗಳು ವಗೈರೇ ಪದಾರ್ಥಗಳು ಯಾ ಕೆಲಸದ ಮೇಲೆ ಹೋಗುವ ಪೋಲೀಸ್ ಆಫಿಸರ್‌ಗಳು, ಅಥವಾ ಅವರ ವಶದಲ್ಲಿರುವ ಯಾವನಾದರೂ ಮನುಷ್ಯ ಯಾ ಸ್ವತ್ತು, ಯಾವ ಸ್ವತ್ತಾಗಲಿ ಪ್ರಾಮಾಣಿಕವಾಗಿ ಗವರ್ನಮೆಂಟಿನವರಿಗೆ ಸಂಬಂಧಿಸಿದ್ದಾಗಿ, ಅದು ಯಾವ ಇಲಾಖೆಗೆ ಸೇರಿದ್ದೋ ಆ ಇಲಾಖೆಯ ಮೊಖ್ತೇಸರ ರಿಂದ ಒಂದು ಸರ್ಟಿಫಿಕೇಟಿಹಾಜರ್ ಮಾಡುವದ್ದರಿಂದ, ಏರ್ಪಟ್ಟ ಯಾವದಾದರೂ ಸ್ವತ್ತು, ಇವುಗಳು ಸಾಗಿಸುವ ಬಗ್ಯೆ ಸುಂಕ ವಸೂಲ್ ಮಾಡಲ್ಪಡಕೂಡದು.

6. ಸುಂಕದ ವಸೂಲೀಯು, ಚೀಫ್‌ಕಮ್ಮಿಷನರವರಿಂದ ಮೊಕರರ್ ಮಾಡಲ್ಪಡುವ ಜನಗಳ ವಿಚಾರಣೆಗೆ ಕೊಡಲ್ಪಡ ಬಹುದು, ಅಥವಾ ಗವರ್ನಮೆಂಟ್ ಆಫಿಸರ್‌ಗಳಿಂದ ಮಾಡಲ್ಪಡಬಹುದು, ಮತ್ತು ಈ ಬಗ್ಯೆ ಮೊಕರರ್ ಆಗಿರುವ ದರೋಬಸ್ತು ಜ ನಗಳೂ ಜಮಿನ್ಹಾ ಕಂದಾಯ ವಸೂಲೀ ವಿಷಯದಲ್ಲಿ ನೇಮಿಸಲ್ಪಟ್ಟದ್ದರೆ ಯಾವ ಜವಾಬ್‌ದಾರೀಗೆ ಗುರಿಯಾಗಿರುವರೋ ಅದೇ ಜವಾ ಬ್‌ದಾರಿಗೆ ಗುರಿಯಾಗತಕ್ಕದ್ದು.

ದರೋಬಸ್ತು ಸುಂಕದಕಟ್ಟೆಗಳಲ್ಲಿ ಯಾಗಲಿ ಆ ಪೈಕಿ ಯಾವದರಲ್ಲಾಗಲಿ ಸುಂಕ ವಸೂಲಿ ಯ ಹಕ್ಕುದಾರೀಯನ್ನು ತಮಗೆ ಯುಕ್ತತೋರುವ ಷರತ್ತಿನೀ ಹರಾಜ್ ಮೂಲಕ ವಿಕ್ರಯಿಸುವಂತೆ ಸಹ ಚೀಫ್‌ಕಮ್ಮಿಷನರವರು ಹುಕ್ಕುಂ ಮಾಡ ಬಹುದು.

7. ಸುಂಕ ವಸೂಲೀದಾರನಾಗಿ ಕ್ರಮ ಪ್ರಕಾರ ನೊಕರರಾಗದೆ, ಯಾವ ಪಬ್ಲಿಕರಸ್ತೆಯಲ್ಲಾಗಲಿ ಸೇತುವೆಯ ಮೇಲಾಗಲೀ ಯಾವ ಸುಂಕವನ್ನಾದರೂ ಹಾಕುವ ಯಾ ಕೊಡಹೇಳಿ ಕೇಳುವ ಅಥವಾ ಹಾಗೆ ಕ್ರಮಪ್ರಕಾರ ನೇಮಿಸಲ್ಪಟ್ಟ ಷೆಡ್ಯೂಲ್‌ನಲ್ಲಿ ವಿವರಿಸೋಣಾದ ದರಗಳಿಗಿಂತ ಜಾಸ್ತಿಯಾಗಿ ಕೊಡಹೇಳಿ ಕೇಳುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ 200 ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಯಾ 6 ಕ್ಯಾಲಂಡರ್ ತಿಂಗಳಿಗೆ ಮೀರದ ಕಾಲದಪರ್ಯಂತ ಸಾಧಾರಣ ಯಾ ಕಠಿಣ ಖೈದಿಗೆ ಗುರಿಯಾಗತಕ್ಕದ್ದು.

8. ಈ ರೂಲ್ಸ್ ಅನುಸರಿಸಿ ಯಾವ ಸುಂಕದ ಬಾಗಿಲಲ್ಲಿ ಯಾ ಸ್ಥಳದಲ್ಲಿ ವಸೂಲಾಗತಕ್ಕದ್ದೆಂದು ನೇಮಿಸಲ್ಪಟ್ಟ ಸುಂಕಗಳ ಒಂದು ಪಟ್ಟಿಯು ಸುಂಕ ಕೊಡುವದಕ್ಕೆ ನಿರಾಕರಿಸುವ ಬಗ್ಯೆ ವಿಧಿಸುವ ಜುರ್ಮಾನೆಗಳ ಪಟ್ಟಿ ಸಹಿತವಾಗಿ ಇಂಗ್ಲಿಷನಲ್ಲಿಯೂ ಸ್ಥಳದ ಭಾಷೆಯೊಳಗೂ ಸ್ಪಷ್ಟವಾಗಿ ಬರೆಯಿಸಿ ಅಂತಾ ಬಾಗಿಲು ಯಾ ಸ್ಟೇಷನ್ ಬಳಿ ಪ್ರಸಿದ್ಧವಾದ ಸ್ಥಳದಲ್ಲಿ ಚಿಕಟಾಯಿಸತಕ್ಕದ್ದು.

ಅಂತಾ ಪಟ್ಟಿಯನ್ನು ಕ್ರಮವಾದ ಮತ್ತು ಚನ್ನಾಗಿ ತಿಳಿಯುವಂತಾ ಸ್ಥಿತಿಯಲ್ಲಿ ಇಡುವದು ಅಂತಾ ಬಾಗಿಲ ಯಾ ಸ್ಥಳದ ಚಾರ್ಜಿನಲ್ಲಿರುವ ಮನುಷ್ಯನ ಕೆಲಸವಾಗಿ ಇರತಕ್ಕದ್ದು.

9. ಈ ಸುಂಕದಿಂದ ಹುಟ್ಟುವಹೇಯಾದ್ದರಲ್ಲಿ ಖರ್ಚು ಜಾತಾ ಉಳಿದ ಮೊಬಲಗು ಈ ಮೈಸೂರು ಸೀಮೆಯೊಳಗಿರುವ ರಸ್ತೆಗಳು, ಸೇತುವೆಗಳು, ಇವುಗಳ ಕಟ್ಟುವಣ, ರಿಪೇರಿ, ಸಂರಕ್ಷಣೆ, ಈ ಬಗ್ಯೇನೇ ವಿನಿಯೋಗಿಸಲ್ಪಡತಕ್ಕದ್ದು.

10. ಯಾವ ಸುಂಕದ ಕಟ್ಟೆಯನ್ನಾಗಲಿ, ಅದಕ್ಕೆ ಕ್ಲುಪ್ತವಾದ ಶೀರ್ವೆ ತೆರದೆ ಮೋಸದಿಂದ ಯಾ ಬಲಾತ್ಕಾರದಿಂದ ದಾಟಿ ಹೋಗುವ ಅಥವಾ, ಸುಂಕದ ವಸೂಲೀದಾರನು ತನ್ನ ಕೆಲಸವನ್ನು ನಿರ್ವಹಿಸುವಲ್ಲಿ ಅವನನ್ನು ಹರಕತ್ತು ಮಾಡುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ, ಮೂರು ತಿಂಗಳಿಗೆ ಮೀರದ ಒಂದು ವಾಯಿದೇ ಪರ್ಯಂತ ಸಾಧಾರಣ ಯಾ ಕಠಿಣ ಖೈದಿಗಾಗಲಿ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೇಗಾಗಲಿ, ಗುರಿಯಾಗತಕ್ಕದ್ದು.

11. ಮೈಸೂರು ಸೀಮೆಯೊಳಗೆ ಸುಂಕ ಹಾಕುವದನ್ನು ಕ್ರಮಪಡಿಸಲಿಕ್ಕೆ ತಮಗೆ ಜರೂರೆಂದು ತೋರುವ ಹೆಚ್ಚಿಗೆ ಹುಕುಮನ್ನು ಆಗಿಂದಾಗ್ಯೆ ಕೊಡುವದಕ್ಕೆ ಚೀಫ್‌ಕಮಿಷನರವರು ಅಧಿಕಾರಕೊಡಲ್ಪಟ್ಟಿರುತ್ತಾರೆ. ಪರಂತು ಅಂತಾ ಹುಕ್ಕುಂಗಳು ಈ ರೂಲ್ಸಿನ ನಿಬಂಧನೆಗಳಿಗೆ ವಿರುದ್ಧಗಳಾಗಿರತಕ್ಕದ್ದಲ್ಲವು.

ಷೆಡ್ಯೂಲ್.

	ರೂ.	ಅ.	ಪೈ.
ನಾಲ್ಕು ಚಕ್ರಗಳ ಪ್ರತಿ ಬಂಡಿಗೂ	2	0	0
ಎರಡು ಚಕ್ರಗಳ ಪ್ರತಿ ಬಂಡಿಗೂ ..	1	0	0
ಪ್ರತಿ ಎಕ್ಕಾವಿಗೂ	0	4	0
ಕವರ್ಮಾಗಳುಳ್ಳ ಹ್ಯಾಕರಿಯೆಂಬ ಪ್ರತಿ ಬಂಡಿಗೂ	0	2	0
ಎಂಟೆತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು ಕತ್ತೆಗಳು ಯಾ ಹೇಸರ ಕತ್ತೆಗಳು ಕಟ್ಟಿದ ಕವರ್ಮಾ ಇಲ್ಲದ ಪ್ರತಿ ಚಕರಾಬಂಡಿ ಮತ್ತು ಹ್ಯಾಕರಿ ಇವುಗಳಿಗೆ ಭರ್ತಿಯಾಗಿದ್ದರೆ ..	1	8	0
ಡಿಟೋ—ಭರ್ತಿಯಾಗದೇ ಇದ್ದರೆ	0	8	0
ಆರು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು ಯಾ ಹೇಸರ ಕತ್ತೆಗಳು, ಕಟ್ಟಿದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರೀಬಂಡಿ ಇದಕ್ಕೆ ಭರ್ತಿಯಾಗಿದ್ದರೆ	0	12	0
ಡಿಟೋ—ಭರ್ತೀಯಿಲ್ಲದೆ ಇದ್ದರೆ	0	6	0
ನಾಲ್ಕು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಯಾ ಹೇಸರ ಕತ್ತೆಗಳು ಇವುಗಳು ಕಟ್ಟಿದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರೀ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ ..	0	8	0
ಡಿಟೋ—ಭರ್ತಿಯಾಗದೆ ಇದ್ದರೆ	0	4	0
ಎರಡು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರ ಕತ್ತೆಗಳು ಕಟ್ಟಿದ ಚಕಡಾಬಂಡಿ ಮತ್ತು ಹ್ಯಾಕರೀ ಬಂಡಿ ಭರ್ತೀಯಾಗಿದ್ದರೆ	0	4	0
ಡಿಟೋ ಭರ್ತಿಯಾಗದೇ ಇದ್ದರೆ	0	2	0
ಕೋಣಗಳು ಯಾ ಎತ್ತುಗಳು ಹೊರೇಹಾಕಿ ಇರತಕ್ಕವು ಪ್ರತಿ ರಾಸಿಗೂ	0	1	0
ಡಿಟೋ—ಹೊರೇ ಆಕದೆ ಇದ್ದರೆ	0	0	6

	ರೂ.	ಆ.	ಪೈ.
ಪ್ರತಿ ಆನೆಗೂ	1	8	0
ಪ್ರತಿ ಒಂಟೆಗೂ ಹೊರೇಹಾಕಿದ್ದರೆ	0	8	0
ಡಿಟ್ಟೋ—ಹೊರೇ ಹಾಕದೇಇದ್ದರೆ	0	4	0
ಪ್ರತಿ ಕುದುರೆಗೂ, ಹೊರೇ ಹಾಕಿದ್ದರೆ ಯಾಸವಾರೀಯಾಗಿದ್ದರೆ	0	1	6
ಡಿಟ್ಟೋ—ಹೊರೇ ಹಾಕದೆ ಯಾ ಖಾಲೀ ತೆಗದುಕೊಂಡು ಹೋಗುವದಕ್ಕೆ ..	0	0	9
ಪ್ರತಿ ತಟ್ಟು ಯಾ ಹೇಸರ ಕತ್ತೆ ಹೊರೆ ಹಾಕಿದ್ದರೆ ಯಾ ಸವಾರಿಯಾಗಿದ್ದರೆ ..	0	0	9
ಡಿಟ್ಟೋ—ಹೊರೆಹಾಕದೆ ಯಾ ಖಾಲೀ ತೆಗದುಕೊಂಡು ಹೋಗುತಿದ್ದರೆ ..	0	0	6
ಪ್ರತಿ ಕತ್ತೆಗೆ ಹೊರೆಹಾಕಿದ್ದರೆ ಯಾ ಸವಾರೀಯಾಗಿದ್ದರೆ	0	0	6
ಡಿಟ್ಟೋ—ಹೊರೆಹಾಕದೆ ಸುಮ್ಮನೆ ತೆಗದುಕೊಂಡು ಹೋಗುತಿದ್ದರೆ	0	0	3
ಪ್ರತಿ ಕುರಿ, ಯಾ ಮೇಕೆ, ಯಾ ಹಂದಿಗೆ	0	0	1
ಪ್ರತಿ ಪಾಲಖೀ, ಡೋಲಿ, ತೊಟ್ಟು, ಯಾ ಟಾಂಜಾ ಇಂತಾ ಎಂಟು ಮಂದಿ ಬೋಯಿಗಳುಳ್ಳವಕ್ಕೆ ..	1	0	0
ಡಿಟ್ಟೋ—6 ಮಂದಿ ಬೋಯಿಗಳುಳ್ಳದ್ದಕ್ಕೆ	0	12	0
ಡಿಟ್ಟೋ—4 ಮಂದಿ ಬೋಯಿಗಳುಳ್ಳದ್ದಕ್ಕೆ	0	8	0
ಡಿಟ್ಟೋ—ಇಬ್ಬರು ಬೋಯಿಗಳುಳ್ಳದ್ದಕ್ಕೆ	0	4	0
ಪೈದಲ್ ಹೋಗುವ ಪ್ರತಿ ಮನುಷ್ಯನಿಗೂ	0	0	3

ಮು—.ವಿ—.ಯಾವ ಬಂಡಿಗೆ ಸುಂಕ ತೆಗದುಕೊಳ್ಳಲ್ಪಡುತ್ತೋ ಅದಕ್ಕೆ ಕಟ್ಟಿರುವ ಜಾನವರಗಳಿಗೂ ಸುಂಕ ಹಾಕಲ್ಪಡಲಾರದು.

ನಂ. 275. ತಾರೀಖು 7ನೇ ನವಂಬರ 1876.

ಸ 1876ನೇ ಅಕ್ಟೋಬರ 26ನೇ ಮುಕ್ಕಾಂ 260ನೇ ನಂಬರ ಇಸ್ತಿಹಾರನಾಮೆ ಅನುಸರಿಸಿ ಚೀಫ್ ಕಮ್ಮಿಷನರವರು ಅಪ್ಪಣೇ ಕೊಡಿಸುವದೇನಂದರೆ,—ಮಾಹೇ ಯಾನಾ 10 ರೂಪಾಯಿಗಳು ಮತ್ತು ಅದಕ್ಕೆ ಕಮ್ಮಿಯಾಗಿ ತಲಬ್ ತೆಗದುಕೊಳ್ಳುವ ಕಾಯಂ ಲವಾಜಮೆಗೆ ಸೇರಿದ ಗವರ್ನ ನೌಕರರಿಗೆ ಮೂರು ತಿಂಗಳ ಪರ್ಯಂತ 1 ರೂಪಾಯಿ ಜಾಸ್ತೀ ಲೌನ್ಸ ಕೊಡತಕ್ಕದ್ದೆಂದು ಆದ ಹುಕ್ಕುಂ, 15 ರೂಪಾಯಿ ಮತ್ತು ಅದಕ್ಕೆ ಕಡಿಮೆಯಾದ ತಲಬ್ ಉಳ್ಳ ದರೋಬಸ್ತು ಸರ್ಕಾರ ನೌಕರರಿಗೂ ವಿಸ್ತರಿಸಲ್ಪಟ್ಟಿದೆ. ಈ ಹುಕ್ಕುಂ ಈ ನವಂಬರ ಗುರ್ರೇ ಲಾಗಾಯಿತು ಜಾರೀಗೆ ಬಂದು ನವಂಬರ ತಿಂಗಳ ಬರಾವರ್ದಿನಲ್ಲಿ ದಾಖಲಾಗಿ ಬಟವಾಡೇಯಾಗತಕ್ಕದ್ದು.

ನಂ. 278. ತಾರೀಖು 4ನೇ ನವಂಬರ 1876.

ಅಸಿಸ್ಟೆಂಟ ಕಮಿಷನ್ನರ ಮೆಸ್ಟರ ಅಬ್ದುಲ್ ಖಾದರ ಯವರು ಮೈಸೂರು ಟವರ್ನ ಮೇಜಸ್ಟ್ರೇಟ ವ ಸಿವಿಲ್ ಪೆನ್ಷನ ಪೇಮಾಸ್ಟರ ಆಫೀಸಗಳ ಚಾರ್ಜನ್ನು 1876ನೇ ಅಕ್ಟೋಬರ 17ನೇ ಮುಕ್ಕಾಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕೊಂಡರು.

2. ಅಸಿಸ್ಟೆಂಟ ಕಮ್ಮಿಷನ್ನರ ಮೆಸ್ಟರ ಕೃಷ್ಣಮೂರ್ತಿಯವರು ಮೈಸೂರು ಟವರ್ನ ಮೇಜಸ್ಟ್ರೇಟ ವ ಸಿವಿಲ್ ಪೆನ್ಷನ ಪೇ ಮೇಸ್ಟರ ಕೆಲಸಗಳನ್ನು 1876ನೇ ಇಸವಿ ಅಕ್ಟೋಬರ 6ನೇ ತಾರೀಖು ಲಗಾಯುತು 16ನೇ ತಾರೀಖು ವರಿಗೂ ಆಕ್ಟಿಂಗ ತರೀಕ ನೋಡಿದರು.

ನಂ. 279. ತಾರೀಖು 6ನೇ ನವಂಬರ 1876.

ಹಾಸನಡಿಸ್ಟ್ರಿಕ್ಟ ಅಸಿಸ್ಟೆಂಟ ಕಮ್ಮಿಷನರ ಮೆ|| ನರಸಿಹ್ಮಯ್ಯಂಗಾರ್ರಿಗೆ 1876ನೇ ಅಕ್ಟೋಬರ 2ನೇ ಮುಕ್ಕಾಂ ಲಗಾಯತ್ 15 ದಿನಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

"ಬನೋಜೇಬ್ ಹುಕ್ಕುಂ,"

T. CLARKE,
Offg. Secretary.

B

ಪಬ್ಲಿಕ್ ವರಕ್ಸ್.

ನಂ. 51.

ತಾರೀಖು 4ನೇ ನವಂಬರ್ 1876.

ಅಸಿಸ್ಟೆಂಟ್ ಇಂಜನಿಯರ್ ಲೆಪ್ನೆಂಟ್ ಬ್ರೂಕ್ಸ್‌ಯವರನ್ನು ರೋಡ್ಸ್ ವ ಬಿಲ್ಡಿಂಗ್ಸ್ ಬ್ರಾಂಚ್ ಬೆಂಗಳೂರು ಕೋಲಾರ ಡಿವಿಜನ್ನಿಂದ ಇರಿಗೇಷನ್ ಬ್ರಾಂಚ್ ಹೇಮಾವತೀ ಡಿವಿಜನ್ನಿಗೆ ಹಂಗಾಮೀಯಾಗಿ ವರ್ಗಾಯಿಸಿರುತ್ತೆ

2. ಈ ವರ್ಗಾವರ್ಗಿಯು ಸರ್ಕಾರ ಪ್ರಯೋಜನಕ್ಕಾಗಿ ಮಾಡಲ್ಪಟ್ಟಿತು.

W. R. JOHNSON, *Lieut.-Col.*,
Offg. Secretary, P. W. D.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 10.

ತಾರೀಖು 8ನೇ ನವಂಬರ್ 1876.

ಇಂಡ್ಯ ಗವರ್ನಮೆಂಟ್ ಹೋಂ ಇಲಾಖಾ ಸಿಕ್ರೆಟೇರಿಯವರಿಂದ ಬಂದ 1876ನೇ ಇಸವಿ ಅಕ್ಟೋಬರ್ 21ನೇ ಮುರ್ಕುಂ 1129ನೇ ನಂಬರ್ ಲೆಟರಿನಲ್ಲಿ ತಿಳಿಸಲ್ಪಟ್ಟ ಅಪ್ಪಣೇ ಅನುಸರಿಸಿ, 1875ನೇ ಇಸವಿ ಫಿಬ್ರವರಿ 20ನೇ ಮುರ್ಕುಂ ಮೈಸೂರು ಗೆಜೆಟ 57ನೇ ಪುಟದಲ್ಲಿ ಫಾಯಿಷ್ ಮಾಡಲ್ಪಟ್ಟ ರೂಲಸ್ಸನ್ನು ರದ್ದುಪಡಿಸಿ ಹುಟ್ಟದ ಯಿದರಡಿ ಬರುವ ರೂಲಸ್ ಸರ್ವರಿಗೂ ತಿಳಿಯತಕ್ಕ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಕೊಡಗು ಸೀಮೆಯಲ್ಲಿ ದೇವರ ಕಾಡುಗಳ ಕಾಪಾಡುವಿಕೆ ಬಗ್ಯೆ ಯಿನ್ನು ಅಧಿಕವಾದ ವಿಚಾರಣೆ ಬಗ್ಯೆ ಉಂಟಾದ ರೂಲಸ್.

1. ಇದರಿಂದ ತಿಳಿಸಲ್ಪಡುವದೇನಂದರೆ,—ಕೊಡಗು ಸೀಮೆಯಲ್ಲಿ ದೇವರ ಕಾಡುಗಳಿಗೆ ಯಾವ ಬಗ್ಯಾಗಿ ಕಂದಾಯ ತಪ್ಪಿಸಲ್ಪಟ್ಟಿರುತ್ತೋ ಅಂತಾ ಬಗ್ಯೇನೆ ಅವುಗಳು ಖಂಡಿತವಾಗಿ ಉಪಯೋಗಿಸಲ್ಪಡದ ಪಕ್ಷಕ್ಕೆ ಅವುಗಳಿಗೆ ಐಯಿಂದ ಪೂರಾ ಕಂದಾಯ ದಾಖಲ್ಮಾಡಲ್ಪಡುವದು.

2. ಸರಕಾರದಿಂದ ಕೊಡಲ್ಪಟ್ಟು ವ ಕಂದಾಯ ಕಟ್ಟಲ್ಪಟ್ಟ ಅಂತಾ ದೇವರ ಕಾಡುಗಳು ಯಾ ಅವುಗಳ ಭಾಗಗಳು ಯಾರಿಗೆ ಕೊಡಲ್ಪಟ್ಟಿರುತ್ತೋ ಅಂತಾವರು ಅವುಗಳನ್ನು ಯಿರಿಸಿಕೊಳ್ಳುವದಕ್ಕೆ ಅಪ್ಪಣೇ ಕೊಡಲ್ಪಡುವರು, ಪರಂತು ಅಂತಾ ಹಿಡುವಳೀದಾರ್ರಿಂದ ವಾಸ್ತವವಾಗಿ ಅನುಭವಿಸಲ್ಪಡುವ ಬೀಜವರಿಯು ಯಷ್ಟು ಏಕರೆಯಾಗಿ ಕೊಡಲ್ಪಟ್ಟವೋ ಅದಕ್ಕಿಂತಲು ಜಾಸ್ತೀಯಾಗಿರಕೂಡದು.

3. ಅಂತಾ ಸನ್ನದುಗಳ ಪ್ರಕಾರ ಅನುಭವಿಸಲ್ಪಡುವ ಬೀಜವರಿಯು, ಕೊಡಲ್ಪಟ್ಟ ಬೀಜವರಿಗಿಂತಲು, ಹೆಚ್ಚಾಗಿರುವಂತೆ ಸರ್ವೇಯಲ್ಲಿ ಕಾಣಬಂದ ಪಕ್ಷದಲ್ಲಿ ಜಾಸ್ತೀ ಬೀಜವರಿಯು ಸರಕಾರದವರ ಇಛ್ಛಾನುಸಾರ ದೇವರಕಾಡಿಗೆ ವಾಪಸು ಸೇರಿಸಲ್ಪಡುವದು. ಅಥವಾ ಪೂರಾ ಕಂದಾಯ ಕಟ್ಟಲ್ಪಡುವದು.

4. ಯಾವ ಸಂಗತಿಗಳಲ್ಲಿ ದೇವರ ಕಾಡುಗಳು ಅಥವಾ ಅವುಗಳ ಪೈಕಿ ಯಾವ ಭಾಗಗಳು ಸರಕಾರದ ಅಪ್ಪಣೆ ಇಲ್ಲದೆ ವ್ಯವಸಾಯ ಮಾಡಲ್ಪಟ್ಟಿರುತ್ತವೋ ಅಂತಾ ಸಂಗತಿಗಳಲ್ಲಿ ಅವುಗಳ ಹಿಡುವಳಿದಾರ್ರುಗಳು ಅವುಗಳನ್ನು ಈ ಇಸ್ತಿಹಾರ್ ತಾರೀಕಿಲಗಾಯಿತು 3 ವರುಷಗಳ ಪರಿಯಂತ ವ್ಯವಸಾಯ ಮಾಡತಕ್ಕ ಬಗ್ಯೆ ಅಪ್ಪಣೆ ಕೊಡಲ್ಪಡತಕ್ಕದ್ದು. ಆ ಬಳಿಕ ಅಂತಾ ಹಿಡುವಳಿದಾರ್ರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಂಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದರಲ್ಲಿ ಬಂದೀತು.

ದೇವರ ಕಾಡುಗಳು ಯಾ ಅವುಗಳ ಭಾಗಗಳು ಸರಕಾರ ಅಪ್ಪಣೆಯಿಂದ ವ್ಯವಸಾಯ ಮಾಡಲ್ಪಟ್ಟು ಆದರೆ ಅವುಗಳಿಗೆ ಕಂದಾಯ ಕೊಡಲ್ಪಡದೆ ಇರುವ ಸಂಗತಿಗಳಲ್ಲಿ ಅವುಗಳ ಹಿಡುವಳಿದಾರ್ರುಗಳು ಈ ಇಸ್ತಿಹಾರ್‌ನಾಮಾ ತಾರೀಕ್ ಲಗಾಯಿತು 3 ವರುಷಗಳಪರಿಯಂತ ಅವುಗಳನ್ನು ಸಾಗುವಳಿ ಮಾಡಿಕೊಳ್ಳುವಂತೆ ಅಪ್ಪಣೆ ಕೊಡಲ್ಪಡತಕ್ಕದ್ದು ಆ ಬಳಿಕ ಅಂತಾ ಹಿಡುವಳಿದಾರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಂಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದರಲ್ಲಿ ಬಂದೀತು.

5. ದೇವರು ಕಾಡುಗಳ ಹದ್ದಿನೊಳಗೆ ಮರಗಳು ಕಡಿಯಲ್ಪಡುವದು, ಕೊಂಬೆ ಕತ್ತರಿಸಲ್ಪಡುವದು ಪೊತ್ತಾಗಿರುವ ರಂಬೆಗಳು ವಿರಳಪಡಿಸುವದು ಮೇಲರಂಬೆ ಕಡಿಯಲ್ಪಡುವದು ಅಥವಾ ಮರಗಳು ಸುಡುವದು ಇವು ಖಂಡಿತವಾಗಿ ನಿಷೇಧಿಸಲ್ಪಟ್ಟಿರುತ್ತೆ.

6. ಚೌಬೀನೆಯಾಗಲಿ, ಮರವಾಗಲಿ ರಂಬೆಗಳಾಗಲಿ ಹುಲ್ಲು ಆಗಲಿ ಇನ್ಯಾವ ಇತರ ಬೆಳೆಯಾಗಲಿ ಯಾವ ನೆವದಮೇಲಾದರೂ ದೇವರಕಾಡಿನಿಂದ ಸಾಗಿಸಲ್ಪಡಕೂಡದು.

7. ದರೋಬಸ್ತು ದೇವರ ಕಾಡುಗಳು ಸರ್ವೇ ಮಾಡಲ್ಪಟ್ಟು ನಿಷಾನೆ ಹಾಕಲ್ಪಡುವದು ಮತ್ತು ಬಳಿಕ ಗ್ರಾಮದ ಪಟೇಲನ ಖುದ್ದು ಸ್ವಾಧೀನದಲ್ಲಿಡಲ್ಪಡುವದು, ಪಟೇಲನು ಅವುಗಳ ಕಾಪಾಡುವಿಕೆ ವಿಷಯದಲ್ಲಿ ಪ್ರಥಮತಃ ಜವಾಬದಾರನಾಗಿರುವದಲ್ಲದೆ ತನ್ನ ತಿಳುವಳಿಕೆಗೆ ಬರುವ ಈ ರೂಲ್‌ಸಿನ ಯಾವ ಉಲ್ಲಂಘನೆಯನ್ನಾದರೂ ನಾಡಿನ ಪಾರಪತ್ತೇಗಾರ್ರಿಗೆ ಕೂಡ್ಲೇ ರಿಪೋರ್ಟು ಮಾಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಇಂಡ್ಯಾ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರಿನ್ ಇಲಾಖಾ.

ಇಸ್ತಿಹಾರ್ ನಾಮೆ.

ಜನರಲ್.

ತಾರೀಖು 27ನೇ ಅಕ್ಟೋಬರ್ 1876 ಮೊಕ್ಕಾಂ ಸಿಂಲ್ಲಾ

ನಂ. 2325 G—ಬಹಲ್ ಡಿ—ನರಸಿಂಗರಾಯರು ಚಾರ್ಜಿ ತೆಗದುಕೊಳ್ಳುವ ತಾರೀಕ್ ಲಾಗಾಯಿತು ರಾಜೀನಾಮೆಕೊಟ್ಟ ಕಲ್ಯಾಣ ಸುಂದರಂ ಶೆಟ್ಟರವರಿಗೆ ಬದಲಾಗಿ ಮೈಸೂರು ಕಮ್ಮಿಷನ್ನಲ್ಲಿ 6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿರತಕ್ಕದ್ದು.

F. HENVEY,
For Offg. Secy. to the Govt. of India.

ತಾರೀಖು 24ನೇ ಅಕ್ಟೋಬರು 1876 ಮೊಕ್ಕಾಂ ಸಿಂಲ್ಲಾ.

ಮೈಸೂರು 2ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಮ॥ ವಿಲ್ಮರ್‌ಯವರು ತಮ್ಮ ಉದ್ಯೋಗಕ್ಕೆ ಅವರ ಖಾಯಿಷ್ ಪ್ರಕಾರ ತಮ್ಮ ಕೆಲಸದ ಚಾರ್ಜು ಕೊಡುವ ತಾರೀಖು ಲಗಾಯಿತು ರಾಜೀನಾಮೆ ಕೊಡತಕ್ಕದ್ದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

W. A. CROMMELIN, *Major-Genl. R. E.*
Offg. Secy. to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ॥ 11, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 10ನೇ ನವಂಬರ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಸ್ಪೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ಯಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೬೩	ಮೆ॥ ಮರಗಲರ್ ವಗೈರೆ ..	ಗಂಗಾಧರಶೆಟ್ಟಿ ..	೧೧ನೇ ನವೆಂಬರು
ಸ್ಪಿ. ಅ. ೬೪	ಚಿಕ್ಕ ಹೊನ್ನೇಗೌಡ ..	ಲಕ್ಷ್ಮೈಯ ವಗೈರೆ ..	೧೩ನೇ ನವಂಬರು
ಸ್ಪಿ. ಅ. ೬೬	ಶ್ರೀನಿವಾಸೈಯ ..	ಆಳಶಿಂಗ್ರೈಯ ..	ಡಿಟೋ
ಸ್ಪಿ. ಅ. ೬೮	ಕಪನೀಪತ್ಯೈಯ ..	ನಂಜಮ್ಮ ..	೧೬ನೇ ಡಿಟೋ
ಸ್ಪಿ. ಅ. ೬೨	ವೆಂಕಟರಮಣೈಯ ..	ತಂಮೈಯ ವಗೈರೆ ..	೨೧ನೇ ನವಂಬರ್
ಸ್ಪಿ. ಅ. ೬೯	ವೇಂಕಟರಮಣಪ್ಪಾ ವಗೈರೇ ..	ಡಾಕ್ಟರ್ ಆರ್‌ಸಾಹೆಬರು ವಗೈರೆ ..	ಡಿಟೋ
ಕ್ರಿ. ಅ. ೨೦	ಕ್ರೈದೀ ಜಾಗಲೂರ ..	.. ..	ಡಿಟೋ
ಸ್ಪಿ. ಅ. ೫೩	ಪ್ರಮ್ಮಾಜಿ ..	ಸುಬ್ಬಣ್ಣಾ ವಗೈರೆ ..	೨೩ನೇ ಡಿಟೋ
ಸ್ಪಿ. ಅ. ೨೦	ನೀಲಕಂಠದೇವರು ..	ಸಿದ್ದಲಿಂಗದೇವರು ..	೨೫ನೇ ನವಂಬರ್
ಸ್ಪಿ. ಅ. ೨೧	ಕರಿಗೌಡಾ ..	ಜೊಮ್ಮಕ್ಕಾ ವಗೈರೆ ..	ಡಿಟೋ
ಸ್ಪಿ. ಅ. ೬೭	ನಾಚಾ ..	ಶಿದ್ದಲಿಂಗಪ್ಪ ವಗೈರೆ ..	೨೭ನೇ ನವಂಬರ್
ಕೊ. ಸ್ಪಿ. ಅ. ೧೮	ಹೆನರಿಮೆರ್ ..	ಸುಬ್ಬಾ ವಗೈರೆ ..	ಡಿಟೋ
ಸ್ಪಿ. ಅ. ೨೨	ವಸ್ತಾದ ಮುನಿಯಾಜಟ್ಟಿ ..	ಕೃಷ್ಣಾಚಾರ್ರು ..	೩೦ನೇ ನವಂಬರು
ಸ್ಪಿ. ಅ. ೨೩	ಸಿಂಗಿ ..	ಕಾಡಸಿದ್ದ ವಗೈರೆ ..	ಡಿಟೋ
ಸ್ಪಿ. ಅ. ೨೪	ವೆಂಕಟಸುಬ್ಬೈಯ ..	ವೆಂಕಟಮ್ಮ ..	೪ನೇ ಡಿಶಂಬರ್
ಸ್ಪಿ. ಅ. ೨೬	ಸುಬ್ಬಾಭಟ್ಟ ..	ಶೇಷಭಟ್ಟ ..	ಡಿಟೋ
ಸ್ಪಿ. ಅ. ೨೮	ರಾಮಗಿರಿ ಮಹೇಶಗಿರಿ ಗೋಸಾಯಿ ..	ವೆಂಕಟಗಿರಿ ಗೋಸಾಯಿ ..	೬ನೇ ಡಿಶಂಬರ್

J. D. GORDON, *Judl. Commr.*

ಇನಾಂ ಇಲಾಖೆ.

ಸನ್ 1876ನೇ ಇಸವೀ ಶಪ್ಟಂಬರ್ 30ನೇ ವರ್ರ್ಕುಮಿಗೆ ಆಖ್ಯೆರಾಗುವ ಶೀ ಮಾಹೇಯಲ್ಲಿ ಸಕಾರಣವಾಗಿ ರದ್ದು ಮಾಡಲ್ಪಟ್ಟ ಟೈಟಲ್ ಡೀಡ್‍ಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಎ.	ತಪಸೀಲ್. ಬೀಜವರಿ. ಖ. ಕೊ. ಪ.	ತಪಸೀಲ್. ಕಂದಾಯ. ರೂ. ಆ. ಪೈ.	ತಪಸೀಲ್. ಜೋಡೀ. ರೂ. ಆ. ಪೈ.	ತಪಸೀಲ್. ಜೋಡೀ ಶೇರಿ ದಕ್ವಿಟರೆಂಟ್. ರೂ. ಆ. ಪೈ.	ಮುಜರಾಇ ಮೊಬಲಗ್. ರೂ.ಆ.ಪೈ.	ಟೈಟಲ್ ಡೀಡ್ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ಮುಲ್ಕೀ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಚೇತಮಂಗಲ	ಜೋಡೀಜಂಗಮನಹಳ್ಳಿ	ಚೇತಮಂಗಲದ ಸಂಪಂಗಿರಾಮಯ್ಯ	ಬ್ರಹ್ಮಾದಾಯ	..	0 0 11½	0 5 0	0	0 2 0	0	36584-2008	ಇನಾಂದಾರರು ಒಂದು ವರುಷದೊಳಗಾಗಿ ಟೈಟಲ್ ಡೀಡ್‍ಗಳನ್ನು ತೆಗದುಕೊಳ್ಳಲಿಕ್ಕೆ ತಪ್ಪಿದ್ದರಿಂದ	ನಂಬರು 251 ತಾರೀಖು 10ನೇ ಜುಲೈ 1876.
ಡಿಟೋ	ಹುಣಕೊಂಡ	ಮಾದಮುತ್ತನಹಳ್ಳಿ ನಾರಣಪ್ಪ, ನೀಲಕಂಠಪ್ಪ	ಡಿಟೋ	..	0 14 7	17 11 4	10 7 7	14 0 0	0	36280-2078		
ಮುಳಬಾಗಲ್	ಕೆರೆಸಾಮಂಗಲ	ನಂಗಲೀರಘೋತ್ತಮಾಚಾರಿ	ಡಿಟೋ	..	0 4 0	3 3 3	0	1 8 0	0	33689	ಕ್ವಿಟರೆಂಟ - ಪಾವತೀ ಮಾಡದ ಸಬಬ್‍ಕೋಲಾರ ಡಿ॥ ಡೆಪ್ಯುಟಿ ಕಮ್ಮಿಷನರವರು ಇನಾಂ ಸರಕಾರಕ್ಕೆ ಸೇರಿಸಿಕೊಂಡರು	ನಂಬರ್ 293 ತಾರೀಖು 19ನೇ ಜುಲೈ 1876.
ಹೊಸಕೋಟೆ	ಜೋಡೀಗುಲಗುಟ್ಟಹಳ್ಳಿ,	ಕಲ್ಲುಕುಂಟೆ ರಾಮಾಚಾರಿ ಮಗ 1 ಟಿ. ಕೃಷ್ಣಮಾಚಾರಿ, 2 ಡಿ॥ ಶ್ರೀನಿವಾಸಾಚಾರಿ ಮಗಕೃಷ್ಣಮಾಚಾರಿ	ಡಿಟೋ	..	0	116 15 2	67 6 9	74 0 0	0	33153	ಈ ಇನಾಂಗಳಿಗೆ ಬದಲಾಗಿ ಹೊಸ ಜಮೀನುಗಳು ಕೊಡಲ್ಪಟ್ಟವು	ನಂಬರ್ 292 ತಾರೀಖು 19ನೇ ಜುಲೈ 1876.
ಶ್ರೀನಿವಾಸಪುರ	ನಗದೇಪಲ್ಲಿ	ಶ್ರೀನಿವಾಸಪುರದಬಾಲಜೋಯಿಸ 2 ಸೀತಾರಾಮ ಶಾಸ್ತ್ರಿ)	ಡಿಟೋ	..	0 5 0	4 1 2	0	2 0 0	0	30021	ಡಿಟೋ	ನಂಬರು 288 ತಾರೀಖು 19-7-76.
ಚಿಕ್ಕಬಳ್ಳಾಪುರ	ಕಳವಾರ	ಬೆಂಗಳೂರಿಂದ ಬಳ್ಳಾರಿಗೆ ಹೋಗುವ ರಸ್ತೆಯಲ್ಲಿ ಹಾರೋಬಂಡೇಬಳಿ ಹಾಕಿಯಿರುವ 113 ಮರಗಳುಳ್ಳ ಗುಂಡು ತೋಪಿನ ತತ್ಕಾಲದ ವಿಚಾರಣೆಕರ್ತರು	ಧರ್ಮಾದಾಯ	..	4 10 0	26 2 11	13 1 6	13 2 0	0	31483	ಇದಕ್ಕೆ ಬದಲಾಗಿ ಬೇರೆ ಒಂದು ಹೊಸ ಜಮೀನ್ ಕೊಡೋಣಾಯಿತು	ನಂಬರು 287 ತಾರೀಖು 19ನೇ ಜುಲೈ 1876.

ಚಿಕ್ಕಬಳ್ಳಾಪುರ	ಮುಜರಾಯಿ	ಚಿಕ್ಕಬಳ್ಳಾಪುರದ ಅಣ್ಣಯ್ಯಾಚಾರಿ	ಬ್ರಾಹ್ಮಾದಾಯ	..	0.	0	0	0	7 8 0	11	ಮೊಬಲಗ್ ಜೀವವಾನದ ವರೆಗೆ ಸಲ್ಲತಕ್ಕದ್ದಾಗಿ ಇನಾಂದಾರ ಮೃತಪಟ್ಟದ್ದರಿಂದ	ನಂಬರು 479 ತಾರೀಖು 27ನೇ ಶಪ್ಟಂಬರ್ 1876.
ಗುಮ್ಮನಾಯ್ಕನಪಾ||	ಬಾಗೇಪಲ್ಲಿ	ಬಾಗೇಪಲ್ಲಿ ಶ್ರೀನಿವಾಸಾಚಾರ್	ಡಿಟೋ	1·23	0	8 0 0	0	4 0 0	0	439		ನಂಬರು 286 ತಾರೀಖು 19ನೇ ಜುಲೈ 1876.
ಡಿಟೋ	ಬೀಳೂರ	ಚಿಕ್ಕಬಳ್ಳಾಪುರದ ವೆಂಕಟಾಚಾರ್ ಮತ್ತು ಎರಡುಮಂದಿ	ಡಿಟೋ	·20	0	2 2 11	0	1 0 0	0	865	ರಾಜೀನಾಮೆ ಕೊಟ್ಟದ್ದು	ನಂಬರ್ 357 ತಾರೀಖು 4ನೇ ಆಗಸ್ಟು 1876.
ಡಿಟೋ	ಬಿಳ್ಳೂರು	ಬಿಳ್ಳೂರುವೀರಭದ್ರಪ್ಪ	ಸರಾಪ್	·31	0	3 3 3	1 12 0	1 12 0	0	258		
ಚನ್ನಗಿರಿ	ಭೈರನಹಳ್ಳಿ	ಕೃಷ್ಣರಾಜಾಚಾರಿ	ಬ್ರಹ್ಮಾದಾಯ	2·48	0	2 5 10	1 1 0	1 4 0	0	387		ನಂಬರ್ 463,22ನೇ ಶಪ್ಟಂಬರ್ 1876.
ಕೋಲಾರ	ಕಲ್ಲಪಳ್ಳಿ	ವಡಿಬಾಳ ನಾರಣಪ್ಪ ಶಿರೆ ಇಬ್ಬರು	ಡಿಟೋ	..	0 6 12¼	9 1 9	0	4 8 0	0	31234	ಡಿಟೋ.	ನಂ. 462 ತಾ||22ನೇ ಶಪ್ಟಂಬರ್ 1876.
ಮಾಲೂರು	ಮಾಸ್ತಿ	ಮುನಿವೆಂಕಟ	ಡಿಟೋ	1·38	0	5 0 0	0	2 8 0	0	1406		ನಂ. 459 ತಾ||22ನೇ ಶಪ್ಟಂಬರ್ 1876.
ಹೊನ್ನಾಳಿ	ಕೋಡಿಕೊಪ್ಪ	ತತ್ಕಾಲಕ್ಕೆ ನ್ಯಾಯಮತಿಯಲ್ಲಿ ಹನುಮಂತದೇವರ ದೇವಸ್ಥಾನದ ವಿಚಾರಣೆ ಕರ್ತರು	ದೇವಾದಾಯ	·75	0	1 14 3	1 2 2	1 2 0	0	271		ನಂಬರ್ 466 ತಾರೀಖು 22ನೇ ಶಪ್ಟಂಬರ್ 1876.
ಸೊರಬ	ದೊರವಹಳ್ಳಿ	ಆನಪಟ್ಟಿ ಸ್ವಾಮಿರಾವ್	ಬ್ರಹ್ಮಾದಾಯ	..	0	45 6 0	15 9 6	30 0 0	0	37291-45	ಕಂದಾಯವನ್ನೂ ಕ್ವಿಟರೆಂಟನ್ನೂ ತಗ್ಗಿಸಿ ನಂಬರ್ 2ನೇ ನಮೂನೆಇಂದ ಹೊಸ ಇನಸ್ಟ್ರುಕ್ಷನ್ ಕೊಡಲ್ಪಟ್ಟಿರುತ್ತೆ.	ನಂಬರ್ 461 ತಾರೀಖು 22ನೇ ಶಪ್ಟಂಬರ್ 1876.

ನಂ. 9. ತಾರೀಖು 25ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟು ಕಾನಖಾನಹಳ್ಳಿ ತಾಲ್ಲೂಕಿನಲ್ಲಿ ಯಿರುವ ಇನಾಂಗಳ ಸಲುವಳಿ ವಿಚಾರಣೆಯೂ ಇನಾಂ ಸೆಟಲ್ ಮೆಂಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿಸ್ಟರ್ ಸೈಯದ್ ನಸೀರುದ್ದೀನಯವರಿಂದ ಹಾರೋಹಳ್ಳಿಯಲ್ಲಿ ನಡಿಸಲ್ಪಟ್ಟು 1876ನೇ ನವೆಂಬರ್ 15ನೇ ಮಾರ್ಚ್ಚಿನೊಳಗೆ ಷುರುವಾಗುವದು.

2. ಸದರೀ ತಾಲ್ಲೂಕಿನಲ್ಲಿರುವ ಇನಾಂಗಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ ರೂಬರೂ ಯಾ ತಮ್ಮ ಮುತಾಲೀಕರ ಮೂಲಕ ಹಾಜರಾಗಿ ತಮ್ಮ ತಮ್ಮ ಹಕ್ಕುದಾರೀಗಳನ್ನು ಕುರಿತು ವ್ಯವಹರಿಸಿಕ್ಕೊಳ್ಳುವದಕ್ಕೂ ತಮ್ಮ ವಶದಲ್ಲಿರುವ ಸನ್ನದುಗಳು ವ ಯಿತರ ದಸ್ತಾವೇಜುಗಳನ್ನು ಹಾಜರ್ ಮಾಡಲಿಕ್ಕೂ ಯಿದರಿಂದ ತಾಕೀದ್ ಮಾಡಲ್ಪಟ್ಟಿರುತ್ತಾರೆ ಹಾಗೆ ಮಾಡದೆ ಯಿದ್ದ ಪಕ್ಷಕ್ಕೆ ಪ್ರಥಮತಃ ಇನಾಂಗಳು ಜಪ್ತೀಕೆಳಗೆ ಶರಲ್ಪಟ್ಟು ತರುವಾಯು ಆಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

ನಂ. 10. ತಾರೀಖು 25ನೇ ಅಕ್ಟೋಬರ್ 1876.

ಸ್ 1876ನೇ ಅಕ್ಟೋಬರ್ 7ನೇ ಮಾರ್ಚ್ಚಿ ಮೈಸೂರು ಗೆಜೆಟ್ 2ನೇ ಭಾಗದ 92ನೇ ಪುಟದಲ್ಲಿ ಪ್ರಕಟಸಲ್ಪಟ್ಟ ಮಾಹೇ ಮಜಕೂರ್ 3ನೇ ಮಾರ್ಚ್ಚಿ 6ನೇ ನಂಬರ್ ಯಿಸ್ತಿಹಾರ್ ನಾಮೇಯುಯಿದರಿಂದ ರದ್ದು ಮಾಡಲ್ಪಟ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನ ಇನಾಂವಿಚಾರಣೆ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಮನಾಮಾಡಿಯಿರುತ್ತೆ.

Registration of such service inams in the Kankanhalli Taluk as were alienated before the promulgation of the Chief Commissioner's Circular dated 11th September 1835, the alienee not performing the service for which inam was originally granted.

ಮೈಸೂರು ಶೀಮೆಯ ಇನಾಂ ಸೆಟಲ್ಮೆಂಟ್ ಆಫಿಸಿನಿಂದ.

ಇದರಿಂದ ಕಾನಖಾನಹಳ್ಳಿ ತಾಲ್ಲೂಕು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚೀಫ್ ಕಮ್ಮಿಷನರ್ ಸಾಹೇಬರವರ 1876ನೇ ಇಸವಿ ಅಕ್ಟೋಬರ್ 17ನೇ ತಾರೀಖಿನ 7037—216ನೇ ನಂಬರ್ ಪ್ರೊಸೀಡಿಂಗಸಿನ 1ನೇ ಪ್ಯಾರಾ ಹುಕ್ಕುಂಗಳ ಪ್ರಕಾರ ಶ್ಯಾನುಭೋಗ, ತಳವಾರ, ನೀರಗಂಟಿ, ತೋಟಿ, ಮುಂತಾದ ಸರಕಾರ ನೌಕರರ ಇನಾಂಗಳು ಈ ಡಿಪಾರ್ಟ್ ಮೆಂಟಿನಿಂದ ಯಿನ್ನು ಮೇಲೆ ರಿಜಿಸ್ಟರ್ ಮಾಡಲ್ಪಡುವದಿಲ್ಲ.

2. ಆದರೆ ಸದರೀ ನೌಕರರ ಇನಾಂಗಳ ಪೈಕೀ ಯಾವ ಇನಾಂಗಳಾದರೂ 1835ನೇ ಇಸವಿ ಶಪ್ಟಂಬರ್ 11ನೇ ತಾರೀಖಿನ ಚೀಫ್ ಕಮ್ಮಿಷನ್ನರ ಸಾಹೇಬರವರ ಸರ್ಕ್ಯುಲರ್ ಹುಕ್ಕುಮಿಗೆ ಪೂರ್ವವೇ ಪರಾಧೀನವಾಗಿ ಅಂಥಾವುಗಳನ್ನು ಹಾಲೀ ಅನುಭವಿಸುವವರು ನೌಕರೀ ಮಾಡದೇ ಇದ್ದ ಪಕ್ಷದಲ್ಲಿ ಅವುಮಾತ್ರ ಚೀಫ್ ಕಮ್ಮಿಷನ್ನರ ಸಾಹೇಬರವರ ಪ್ರೊಸೀಡಿಂಗಸಿನ 2ನೇ ಪ್ಯಾರಾ ಹುಕ್ಕುಂ ಪ್ರಕಾರ ಈ ಡಿಪಾರ್ಟ್ ಮೆಂಟನಲ್ಲಿ ವಿಚಾರಣೆ ಮಾಡಲ್ಪಟ್ಟು ಅನುಭವದಾರರಿಗೆ ½ ಕ್ವಿಟರೆಂಟ್ ಮೇಲೆ ಕಾಯಂ ಮಾಡಲ್ಪಡುತ್ತಾವಾದ್ದರಿಂದ ಯಿಂಥಾ ಇನಾಂದಾರರು ಈ ತಾಲ್ಲೂಕು ಇನಾಂ ವಿಚಾರಣೆ ಮಾಡುವ ಅಸಿಸ್ಟೆಂಟರಲ್ಲಿ ದಸ್ತೈವಜುಗಳು ವಗೈರೇ ಸಹಿತ ಹಾಜರಾಗಿ ಸ್ಟೇಟಮೆಂಟ್‌ಗಳು ದಾಖಲ್ಮಾಡಿ ಫೈಸಲ್ಪಡಿಯತಕ್ಕದೆಂದುನ್ನೂ,

ಆಪ್ರಕಾರ ವಿಚಾರಣೆ ಕಾಲದಲ್ಲಿ ಮತ್ತು ತಾಲ್ಲೂಕು ವಿಚಾರಣೆ ಕಾಲದಲ್ಲಿ ಸಹಾ ಫೈಸಲ್ಪಡಿಯದಿದ್ದರೆ ಪುತ್ತರೋತ್ತರ ಯಾವಾಗಲು ಅವರ ದಾವೆ ಅಂಗೀಕರಿಸಲ್ಪಡಲಾರದೆಂದುನ್ನೂ ಇದರಿಂದ ಸಮಸ್ತರಿಗೂ ತಿಳಿಯಪಡಿಸಿ ಯಿದೆ.

ಇನಾಂ ಸೆಟಲ್ಮೆಂಟ್ ಆಫಿಸ್ ಬೆಂಗಳೂರು, ತಾರೀಖು 28—10—76.

R. A. COLE,
Supt. of Inam Settlements.

ಸರ್ವೆ ವ ಸೆಟಲ್ಮೆಂಟ್ ಇಲಾಖಾ.

ತಾರೀಖು 31ನೇ ಅಕ್ಟೋಬರ್ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಲೆಫಟಿನೆಂಟ್ ಮೆಸಿಂಟೈರ್‌ಯವರು 1876ನೇ ಇಸವಿ ಅಕ್ಟೋಬರು 7ನೇ ಮಾರ್ಚ್ಚಿ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಆದೇಶಾಲ್ ಮಾಹೇ 5ನೇ ಮಾರ್ಚ್ಚಿ 241ನೇ ನಂಬರ್ ಚೀಫ್ ಕಮ್ಮಿಷನರ್ ಇಸ್ತಿಹಾರಿನಿಂದ ಕೊಡಲ್ಪಟ್ಟ 15 ದಿನಗಳ ಪ್ರಿವಿಲೀಜ್ ರಜಾದಮೇಲೆ 1876ನೇ ಇಸವಿ ಅಕ್ಟೋಬರು 10ರಲ್ಲು ಹೋಗಿ ಅದೇ ತಿಂಗಳು 24ನೇ ತಾರೀಖಿನಲ್ಲಿ ವಾಪಸು ಬಂದರು.

W. C. ANDERSON,
Survey and Settlement Commr.

ಫಿನಾನ್ಷಿಯಲ್ ಇಲಾಖಾ.

ಸ್ಟೇಟ ಫಾರೆಸ್ಟು ಹುಟ್ಟುವಳಿಯನ್ನು ಕುರಿತು ಫಾರೆಸ್ಟು ಆಫಿಸರಗಳ ಅಡ್ವೈಸಗಳು ತಾಲ್ಲೂಕು ಶಿ. ಲೆಖ್ಖಗಳಿಗೆ ಜಂಟಸಲ್ಪಡತಕ್ಕ ವಿಷಯ.

ತಾರೀಖು 3ನೇ ನವಂಬರ 1876. ಸರ್ಕ್ಯೂಲರ ನಂಬರ 1096.

ಡಿಸ್ಟ್ರಿಕ್ಟು ಟ್ರೇಜರಿಗಳ ಆಫಿಸರಗಳಿಗೆ.

ತಮ್ಮತಮ್ಮ ಡಿಸ್ಟ್ರಿಕ್ಟಿನಲ್ಲಿರತಕ್ಕ ಅಮಲ್ದಾರ್ರುಗಳು ಅವರುಗಳಿಗೆ ಫಾರೆಸ್ಟು ಆಫಿಸರಗಳಿಂದ ಕಳುಹಿಸಲ್ಪಡತಕ್ಕ ಸ್ಟೇಟ ಫಾರೆಸ್ಟು ಹುಟ್ಟುವಳೀ ಬಾಬತು ಅಡ್ವೈಸಗಳನ್ನು ಸದರೀ ಹುಟ್ಟುವಳಿ ಮೊಬಲಗ ಜಮೇ ಕಟ್ಟಲ್ಪಡುವ ತಾಲ್ಲೂಕು ಶಿ. ಲೆಖ್ಖಕ್ಕೆ ತಪ್ಪದೆ ಜಂಟಸತಕ್ಕದ್ದೆಂದು ಅವರುಗಳಿಗೆ ಅಪ್ಪಣೆ ಕೊಡತಕ್ಕ ಬಗ್ಗೆ ಡೆಪ್ಯುಟಿ ಅಕೌಂಟೆಂಟ ಜನರಲ ಯವರು ಡಿಸ್ಟ್ರಿಕ್ಟು ಟ್ರೇಜರಿ ಆಫಿಸರಗಳನ್ನು ಕೋರುತ್ತಾರೆ.

H. Hudson,
Dy. Acctt. General in Mysore.

ರಿಜಿಸ್ಟ್ರೇಷನ ಇಲಾಖಾ.

ಸಬರಿಜಿಸ್ಟ್ರಾರವರ ಗುಮಾಸ್ತೇಗಳಿಗೆ ರುಸುಂ.

1876—77ನೇ ಇಸವಿಯ 5ನೇನಂಬರ ಸರ್ಕ್ಯೂಲರ.

ಮೈಸೂರು ಶೀಮೆಯ ಡಿಸ್ಟ್ರಿಕ್ಟು ರಿಜಿಸ್ಟ್ರಾರಗಳಿಗೆ:—ಮೈಸೂರು ಶೀಮೆಯಲ್ಲಿರುವ ಸಬ ರಿಜಿಸ್ಟ್ರೀಆಫಿಸಗಳ ಗುಮಾಸ್ತೇಗಳಿಗೆ ಸಲ್ಲತಕ್ಕ ರಿಮ್ಯುನಿರೇಷನ (ಯಾನೆ ರುಸುಂ) ವಿಷಯದಲ್ಲಿ (1874ನೇ ಜೂನ 6ನೇ ಮರ್ತು ಮಿನ ಮೈಸೂರು ಗೆಜೆಟನಲ್ಲಿ ಪ್ರಾಯಿಷಾದ) 1874—75ನೇ ಇಸವಿ 1ನೇ ನಂಬರ ಉಳ್ಳ ಈ ಆಫಿಸಿನ ಸರ್ಕ್ಯೂಲರನ್ನು ಕುರಿತು ರಿಜಿಸ್ಟ್ರೇಷನ ಇನಸ್ಪೆಕ್ಟರ ಜನರಲಿಯವರು ಚೀಫ ಕಮ್ಮಿಷನರವರ ಮಂಜೂರಾತೀ ನಿಶೀ ಪ್ರಕಟಿಸುವದೇನಂದರೆ—1876ನೇ ಅಕ್ಟೋಬರ ಗುರ್ರೇತಾರೀಕ ಲಗಾಯತು ಇದರಡಿ ಕಂಡ ತಾಲ್ಲೂಕುಗಳ ಸಬ ರಿಜಿಸ್ಟ್ರಾರಗಳು, ತಾವು ತೆಗದುಕೊಳ್ಳುವ ಸೇಕಡಾ 40ರ ಬಾಬತು ಕಮ್ಮಿಷನನಲ್ಲಿ ತಮ್ಮ ಗುಮಾಸ್ತೆಗಳಿಗೆ ಈ ಕೆಳಗೆ ಕಂಡ ಲೋನಸಗಳನ್ನು ಕೊಡತಕ್ಕದ್ದು. ಕಮ್ಮಿಷನ ಮೊಬಲಗ ಮಾಹೇಯಾನಾ 10ರ [illegible]ಯಿಗಳಿಗೆ ಮೀರದೇ ಯಿರುವ ಯಿತರ ದರೋಬಸ್ತು ಆಫಿಸಗಳೊಳಗೂ ಸದರೀ ವಿಷ್ಯಮೊಬಲಗೂ ಗುಮಾಸ್ತೇಗೆಕೊಡಲ್ಪಡತಕ್ಕ[illegible]ಂದು ಚೀಫ ಕಮ್ಮಿಷನರವರು ನಿಯಮಿಸುತ್ತಾರೆ. ಯಾವ ತಿಂಗಳಲ್ಲಿಯಾಗಲಿ, ಕಮ್ಮಿಷನ ಮೊಬಲಗ ಮಂಜೂರಾದ ಲೋನಸಿಗೆ ಕ[illegible]ಮ್ಮೀ ಬಿದ್ದರೆ ಹಾಗೆ ಕಡಮೆಯಾದ ಭಾಗವು, ಆತರುವಾಯದ ಮಾಹೆಗಳಲ್ಲಿ ವಸೂಲಾದ ಕಮ್ಮಿಷನನಿಂದ ಭರ್ತೀಮಾಡತಕ್ಕದ್ದು.

ಡಿಸ್ಟ್ರಿಕ್ಟು	ತಾಲ್ಲೂಕು	ಮಾಹೇವಾರೀ ಲೋನ್ಸ, ರೂ.
ಮೈಸೂರು	ಯೆಡತೊರೆ	20
	ತಲಕಾಡು	20
	ಹುಣಸೂರು	10
ತುಮಕೂರು	ತುಮಕೂರು	10
	ಸೀರಾ	10
ಕೋಲಾರ	ಚಿಕ್ಕಬಳ್ಳಾಪುರ	12
	ಕೋಲಾರ	10
ಹಾಸನ.	ಮಂಜರಾಬಾದ	10
	ಅರಕಲಗೂಡ	10
	ಅತ್ತಿಗುಪ್ಪೆ	12
	ಬೇಲೂರು	10
ಕಡೂರು	ಚಿಕ್ಕಮಗಳೂರು	20ರ ಪ್ರಕಾರ 10ರ ಪ್ರಕಾರ
	ಕೊಪ್ಪ	15
	ತರೀಕೆರೆ	10
	ಲಕ್ಕುವಳ್ಳಿ	10
ಶಿವಮೊಗ್ಗಾ	ಶಿವಮೊಗ್ಗಾ	10
	ಕವಲೇದುರ್ಗ	12

H. Hudson,
Inspector General of Registration.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಬೆಂಗಳೂರು,	1ನೇ ಡಿಶಂಬರ್	,,	ಹೆಚ್ಚು ಕಡಮೆ 100	ಟನ್‌ಗಳು.
ಫ್ರೇಜರ್‌ಪೇಟೆ	18ನೇ ,,	,,	80	,,

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮುರ್ಕುಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿಯು ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದ್ದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುರ್ಕುಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರುವರಿ 6ನೇ ಮುರ್ಕುಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು; ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತ[illegible]ಗುವದಕ್ಕೆ ಬದಲಾಗಿ ಟನ್ಸ್, ಪಾಂಡ್, ಹಂಡ್ರೆಡ್ ವೆಯಿಟ್ ಟನ್‌ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ಶಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879 80,—1880–81, ಮತ್ತು 1881–82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೆಲ್ 1ನೇ ಮುರ್ಕುಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ಡಿಸ್ಟ್ರಿಕ್ಟು ವಾರಾಗಿ ಚಡ್ ದರಖಾಸ್ತು ದಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮುರ್ಕುಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರ್ರೆನ್ಸೀ ನೋಟ್‌ಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್ ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60 ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಶ್ಚ ಹರಾಜ್ ಹಾಕಲ್ಪಟ್ಟು ಆಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮರ್ಕುಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮರ್ಕುಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು, ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನ್‌ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯವಿಲ್ಲದೆಯೇ ಪುನಶ್ಚ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

L. RICKETTS,
Offg. Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ಸಕಲಜನಗಳಿಗೂ ತಿಳಿಯುವಬಗ್ಯೆ ಇದರಿಂದ ತಿಳಿಸಲ್ಪಡುವದೇನಂದರೆ,—ಫಾರೆಸ್ಟು ಯಿಲಾಖೆಗೆ ಸೇರಿಶಿದ ಜಂಗ್ಲೀಗಳು ಶಿವಾಯಿ ತುಮಕೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78—1878—79—1879-80 1880—81 ಮತ್ತು 1881—82ನೇ ಇಸವಿಗಳಿಗೆ ಅಂದರೆ 1877ನೇ ಏಪ್ರೆಲ್ 1ನೇ ಮರ್ಕುಂ ಲಗಾಯಿತು 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಜಡದರಖಾಸ್ತುದಾರ್ರಿಗೆ ಹರಾಜು ಮೂಲಕ 1877ನೇ ಮಾರ್ಚಿ 15ನೇ ಮರ್ಕುಂ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದುವರುಷಗಳ ವರಿಗೆ ಆಯಾ ವರುಷದ ಜಡದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ಮೇಲೆ ಕರೆನ್ಸಿ ನೋಟುಗಳು ಯಾ ನಗದು ಹಣ 6 ಖಿಸ್ತುಗಳಿಗೆ ಯಾ ಮಾಹೇವಾರೀ ಯಿನ್‌ಸ್ಟಾಲ್ ಮೆಂಟಿಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲಿಯಾನಾ ದರಖಾಸ್ತು ಮೊಬಲಗು ಪೈಕೀ ಹನ್ನೆರಡರಲ್ಲಿ ವೊಂದು ಹಿಸ್ಸೆಗೆ ಅಥವಾ ವೊಟ್ಟು ಕಂಟ್ರಾಕ್ಟು ಮೊಬಲಗು ಪೈಕೀ 60 ರಲ್ಲಿ ವಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಶ್ಚ ಹರಾಜು ಹಾಕಲ್ಪಟ್ಟು ಆ ಮೂಲಕ ಸರಕಾರಕ್ಕೆ ಬರುವ ಲುಕ್ಸಾನಿಗೆ ಅವನನ್ನು ಗುರೀ ಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮರ್ಕುಂನಲ್ಲಿ ಪ್ರವೇಶಿಸಿ ತನ್ನ ಮೊದಲನೆ ಮಾಹೇವಾರೀ ಖಿಸ್ತುಗಳು 1877ನೇ ಮೇ 15ನೇ ಮರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು, ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳು 15ನೇ ಮರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗು ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ ಲೋಕಲ್‌ಸೆಸ್ಸು, ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಅಡ್ಡೀ ವುಂಟಾದರೆ ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯವಿಲ್ಲದೆಯೆ ಪುನಶ್ಚ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

ತಾರೀಖು ನೇ 1876.

E. S. LUDLOW,
Offg. Dy. Commr.

MYSORE DISTRICT.

Notice of an application by Siddamma for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ್ ಡಿ|| ಕ|| ಕೋರ್ಟಿನಿಂದ.

ಸರ್ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ|| 72.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ಬೋರೇಗೌಡ ನೆಂಬುವನಿಗೆ ಬರಬೇಕಾದ 1,000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಮೈಸೂರು ತಾಲ್ಲೂಕು ನವಾ ಷಹರ್ ಹೋಬಳಿ ನಾಗನಹಳ್ಳಿ ಗ್ರಾಮದಲ್ಲಿ ಯಿರುವ ಶಿದ್ದಮ್ಮ ನೆಂಬವಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ತಿಂಗಳು 7ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುತ್ತೆಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Lingamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಪೂಟಿ ಮಿಸಲೇನಿಯಸ್ ನಂಬರ್ 73.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಮಗ ಚಲುವನೆಂಬುವನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಗಂಜಾಮದಲ್ಲಿ ಯಿರುವ ವಕ್ಕಲಿಗರ ಲಿಂಗಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ಮಾಹೇ ತಾರೀಖು 7 ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿಧೆ.

Notice of an application by Bettalingegauda for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಪೂಟಿ ಮಿಸಲೇನಿಯಸ್ ನಂ|| 74.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ತಮ್ಮ ಚನ್ನೇಗೌಡನಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಗುಂಡ್ಲು ಕಸಬಾದಲ್ಲಿ ಯಿರುವ ಬೆಟ್ಟಲಿಂಗೇಗೌಡ ನೆಂಬವನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವಂಬರ್ ತಿಂಗಳು 7ನೇ ತಾರಿಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿಧೆ.

Notice of an application by Artegaudana Linganna for a certificate under Act XXVII of 1860.

ಸರ್ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ|| 75.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತಿಯಾದ ತನ್ನ ಅಂಣ ಅರ್ತೇಗೌಡನ ದ್ಯಾವಂಣ ನೆಂಬುವನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಶ್ರೀರಂಗಪಟ್ಣದಲ್ಲಿ ಯಿರುವ ಅರ್ತೇಗೌಡನ ಲಿಂಗಂಣನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವಂಬರ್ ಮಾಹೇ ತಾರೀಖು 7 ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 12ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Lakkamma for a certificate under Act XXVII of 1860.

ಸರ್ 1876ನೇ ಯಿಸವಿ ಶಿವಿಲ್ ಪೂಟಿ ಮಿಸಿಲೇನಿಯಸ್ ನಂಬರ್ 76.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ಆಲಂಣನಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಮೈಸೂ

ರಲ್ಲಿರುವ ಲಕ್ಕಂಮನು ಕೊಟ್ಟಿರತಕ್ಕ ಅರ್ಜಿಯನ್ನು ನವಂಬರ್ ಮಾಹೇ ತಾರೀಖು 21ರಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Sidde Gauda for a certificate under Act XXVII of 1860.

1876ನೇ ಇಸವಿ ಶಿವಿಲ್ ಫೂಟ್ ಮಿಸಲೇನಿಯಸ್ ನಂಬರ್ 77.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ಚಿಕ್ಕ ಸಿದ್ದೇಗೌಡನಿಗೆ ಬರಬೇಕಾದ(1,000) ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ ಸದರೀ ಯವನ ದತ್ತು ಮಗನಾದ ತನ್ನ ತಮ್ಮ ನಂಜಪ್ಪಾ ಯಂಬುವನು 12 ವರುಷದ ಹುಡುಗನಾದ್ದರಿಂದ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ನವಾಷಹರ್ ಹೋಬಳಿ ನಾಗನಹಳ್ಳೀಲಿ ಯಿರುವ ಶಿದ್ದೇಗೌಡ ನೆಂಬುವನು ಕೊಟ್ಟು ಯಿರತಕ್ಕ ಅರ್ಜಿಯನ್ನು ನವಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Mariyanna and another for a certificate under Act XXVII of 1860.

ಸ್ಗ 1876ನೇ ಇಸವಿ ಸಿವಿಲ್ ಫೂಟ್ ಮಿಸಲೇನಿಯಸ್ ನಂಬರ್ 78.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ಛತ್ತದ ಮರಿಯಂಣನಿಗೆ ಬರಬೇಕಾದ 950 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಸದರೀ ಯವನ ಚಿಕ್ಕಪ್ಪನಾದ ಅಷ್ಟಗ್ರಾಮದ ತಾಲ್ಲೂಕು ಗಂಜಾಂದಲ್ಲಿ ಯಿರುವ ಅಂತಪ್ಪ 1 ಮಾವನಾದ ಮರಿಯಂಣ 1 ಈ 2 ಜನಗಳು ಕೊಟ್ಟಿರತಕ್ಕ ಅರ್ಜಿಯನ್ನ ನವಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ. ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Gopalaiengar for a certificate under Act XXVII of 1860.

ಸ್ಗ 1876ನೇ ಇಸವಿ ಶಿವಿಲ್ ಪೂಟ್ ಮಿಸಲೇನಿಯಸ್ ನಂಬರ್ 79.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ತಂದೆ ಕೃಷ್ಣೈಯಂಗಾರ್ರಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಸದರೀಯವನ ದತ್ತುಮಗನಾದ ಶ್ರೀನಿವಾಸೈಯಂಗಾರಿಯು ಗಾರ್ಡಿಯನ್, ಯಡತೊರೇ ತಾಲ್ಲೂಕು ತಿಪ್ಪೂರಲ್ಲಿರುವ ಗೋಪಾಲೈಯಂಗಾರಿ ಯಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನ ನವಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ಮಾಹೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Ramachar for a certificate under Act XXVII of 1860.

1876ನೇ ಇಸವಿ ಸಿವಿಲ್ ಫುಟ್ ಮಿಸಲೇನಿಯಸ್ ನಂಬರ್ 80.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ಮಾನಮುಡಿ ಶ್ರೀನಿವಾಸಾಚಾರ್ರಿಗೆ ಬರಬೇಕಾದ 1250 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ಕತ್ತರೀಪಾಪುರದ ಅಗ್ರಹಾರದಲ್ಲಿ ಯಿರುವ ಮಾನಮುಡಿ ರಾಮಾಚಾರೀ ಯಂಬುವನು ಕೊಟ್ಟಿರತಕ್ಕ ಅರ್ಜೀಯನ್ನ ನವಂಬರ್ ಮಾಹೆ ತಾರೀಖು 21ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Virabhadraiya for a certificate under Act XXVII of 1860.

1876ನೇ ಇಸವಿ ಸಿವಿಲ್ ಫ್ರೂಪ್ ಮಿಸಲೇನಿಯಸ್ ನಂ. 81.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಅಂಣ ಚನ್ನಪ್ಪನೆಂಬುವನಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಅರಕಲಗೂಡು ತಾಲ್ಲೂಕು ಹನಸೋಗೆ ಹೋಬಳಿ ಹಾಡ್ಯದ ಗ್ರಾಮದಲ್ಲಿ ಯಿರುವ ವೀರಭದ್ರೈಯನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವಂಬರ್ ತಾರೀಖು 22ರಲ್ಲು ಹಿಯರಿಂಗ್ ಮಾಡುತ್ತೇಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 25ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice inviting parties to receive back sums remaining at their credit in the Mandya Munsiff's Court.

ಮೈಸೂರು ಡಿಸ್ಟ್ರಿಕ್ಟು ನಂಬರ 4ನೇ ಮಂಡ್ಯ ಸಬ್ ಡಿವೀಜನ್ ಮುನಸೀಫ್ ಕೋರ್ಟಿನಿಂದ.

ಸರ್ 1875ನೇ ಇಸವೀಲಿ ಈ ಕೋರ್ಟಿಗೆ ಕಕ್ಷಿಗಾರ್ರಿಂದ ಹಾಜರಾದ ಸಾಕ್ಷಿ ಭತ್ಯದ ಮೊಬಲಗು ಪೈಕೀ ಖರ್ಚಾದ್ದು ಜಾತಾ ಬಾಕೀ ಪಾವತೀಯಾಗದೆ ಅಮಾನತ್ತು ಕೋರ್ಟಿನಲ್ಲಿ ಇರುವ ಕೆಳಗಿನ ಪಟ್ಟೀಲಿ ಕಂಡ ಮೊಬಲಗನ್ನ ಹಾಜರ್ ಮಾಡಿದ ಕಕ್ಷಿಗಾರರು ಈ ಇಸ್ತಿಹಾರ್ ಪ್ರಸಿದ್ಧಮಾಡಲ್ಪಟ್ಟ 1876ನೇ ಇಸವಿ ನವಂಬರ್ ತಿಂಗಳು 4ನೇ ತಾರೀಖು ಲಗಾಯತು ಯರಡು ತಿಂಗಳು ವಾಯಿದೆಯಲ್ಲಿ ಈ ಕೋರ್ಟು ರೂಬರೂ ಹಾಜರಾಗಿ ವಾಪಸ್ ಪಡಿಯಬೇಕು. ಹಾಗೆ ಪಡಿಯದೆ ತಪ್ಪಿದರೆ ಐವಜು ಮೊಬಲಗು ಸರಕಾರಕ್ಕೆ (ಬೇವಾರಸ್ ಮೊಬಲಗಾಗಿ ಯೆಣಿಸಿ) ಸೇರಿಸಿಕ್ಕೊಳ್ಳಲ್ಪಡುತ್ತೆ.

ಮೊಬಲಗು ಜಮಾ ಆದ ತಾರೀಖು.	ನಗದಿ ಬುಕ್ಕಿನ ಜಂಜರ್ ನಂಬರ್.	ಮೊಕದ್ದಮಾ ನಂಬರ್.	ಮೊಬಲಗು. ರೂಪಾಯಿ	ಮೊಬಲಗು. ಆಣೆ.	ಹಾಜರ್ ಮಾಡಿದವರ ಮತ್ತು ವಾಪಸ್ ಪಡಿಯಬೇಕಾದವರ ಹೆಸರು.
16ನೇ ಜೂನ್ 1875.	312	ಸ್ಮಾ. 75	0	8	ವಾದಿ ವೀರೈಯ.
19ನೇ ಆಗಸ್ಟು ಡಿಟೋ	417	ರಿ. 311	0	12	ವಾದಿ ಹೊಂಬಾಳೇಗೌಡ.
15ನೇ ಅಕ್ಟೋಬರ್ ,,	563	ಮಿ. 40	2	8	ಶ್ರೀಕಂಠೈಯ.
21ನೇ ಡಿಟೋ ,,	613	ರಿ. 473	0	8	ವಾದಿ ತಿಂಮೇಗೌಡ.
22ನೇ ಡಿಟೋ ,,	627	ಸ್ಮಾ. 145	0	8	ವಾದಿ ವೆಂಕಟಪ್ಪ.
16ನೇ ಡಿಸಂಬರ್ ,,	865	ಸ್ಮಾ. 191	1	0	ಮುತ್ತಿಗೆರೆ ಪುಟ್ಟಸಾಮಿ.
		ಜುಮ್ಲಾ	5	12	

ತಾರೀಖು 23ನೇ ಅಕ್ಟೋಬರ್ 1876ನೇ ಇಸವೀ ಮೊಕ್ಕಾಂ ಅತ್ತಿಕುಪ್ಪೆ.

C. J. PEARSE,
Dy. Commr.

HASSAN DISTRICT.

Notice of an application by Sidlingappa for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆ॥ ಕ॥ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಶಾಲಾವಾರದ ಪುರದ ಗ್ರಾಮದಲ್ಲಿರುವ ಸಿದ್ದಲಿಂಗಪ್ಪ ನೆಂಬವನು ತನ್ನ ದೊಡ್ಡಪ್ಪ ಶಿದ್ದಲಿಂಗಪ್ಪನ ಸಾಲಾ 1,000 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆ ಸರಟಿಫಿಕೇಟ್ ಕೊಡಿಸಬೇಕೆಂತಾ ಕೊಟ್ಟ ಅರ್ಜಿ ಫೈಸಲ್ ಬಗ್ಗೆ ಸರ್ ಮಜಕೂರ್ ನವಂಬರ್ 24ನೇ ತಾರೀಖನ್ನ ನಿಷರ್ಷೆಮಾಡಿ ಯಿರುವದ್ದರಿಂದ ತಕರಾರು ಇರತಕ್ಕವರೆಲ್ಲ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ ಮಾಡಿಕ್ಕೊಳ್ಳಬೇಕು.

26-10-76.

Notice of application for Coffee land in the Arkalgúd Taluk.

ಅರಕಲಗೂಡು ತಾಲ್ಲೂಕು ಪೊರಿನಾಥಪುರದ ಹೋಬಳಿ ಹನುಮನಹಳ್ಳಿ ಗ್ರಾಮಕ್ಕೆ ಸೇರಿದ ಅವದೆಪಟ್ಟದ ವುತ್ತರ ಪಾರ್ಶ್ವದ ಜಮೀನ್ ಚಕ್ಕಬಂದಿ.

ಪೂರ್ವಕ್ಕೆ—ತಾರೀ ಕಣವೆಬಾಗಿಲ್ ದಾರಿ.

ದಕ್ಷಿಣಕ್ಕೆ—ದೊಡ್ಡ ಬಯಲ್ ಯಂಬ ಮೈದಾನ್ ಉದಿವುರದ ಸಂಣ ಮರಟ ಸವು.

ಪಶ್ಚಿಮಕ್ಕೆ—ಹುಲಿಕಲ್ಲು ಯಂಬ ಹೆಗ್ಗುರ್ತಾದ ವಂದು ಭಂಡೆ ಅವರೇಪಟ್ಟದ ನೆತ್ತಿಗಂಣಿನ ಸವು.

ವುತ್ತರಕ್ಕೆ—ಗೇರುಮರದ ಬಯಲ್ ಜೊಬ್ಬಿನ ಕೆಲ್ಲರೆ ಸವುದ ಪೂರ್ವಭಾಗದ ಕರಿಕಲ್ಲು ಮರಟ.

ಈ ಮಧ್ಯೆ ಯಿರತಕ್ಕ ಪೂರ್ವ ಪಶ್ಚಿಮ 270, ದಕ್ಷಿಣೋತ್ತರ 270, ಸಲಿಗಜ 72900ಕ್ಕೆ ಯಕರೆ 15, ರೋಡ್ 0 ಪೋಲ್ 9 ಗಜ $27\frac{3}{4}$ ವುಳ್ಳದ್ದು.

ಈ ಜಮೀನನ್ನು ತನಿಗೆ ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಹನುಮನಹಳ್ಳಿ ಗ್ರಾಮದ ಪುಟ್ಟೇಗೌಡನ ಮಗ ರಂಗೇಗೌಡ ನೆಂಬವನು 159ನೇ ದರಖಾಸ್ತು ಮಾಡಿ ಯಿದ್ದಾನಾಗಿ ಯಿದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲೆ ಕಂಡ ಜಮೀನನ್ನು ಕಾಫಿ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕು ವಗೈರೇ ಕುರಿತು ವ್ಯಾಜ್ಯ ಮಾಡತಕ್ಕವರೇ ಆಗಲಿ ಯಿದ್ದದ್ದಾದರೆ ಅಂಥಾವರು ಈ ನೋಟೀಸ್ ತಾರೀಖು ಲಗಾಯತು ಬಂದು ತಿಂಗಳು ವಳಗಾಗಿ ಡಿಸ್ಟ್ರಿಕ್ಟು ಮಜಕೂರ್ ಕಾಫಿ ಇನ್‌ಚಾರ್ಜ್ ಘ|| ಅ|| ಕಮ್ಮಿಷನರವರ ಮುಂದೆ ಹಾಜರಾಗಿ ಕ್ರಮ ಪ್ರಕಾರ ಬಯಾನ್ ಮಾಡಿ ಕೊಳ್ಳಬಹುದು. ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರ್ ಆಗಲರಿಯದು.

Notice of application by Siddegauda for a duplicate coffee grant.

ಸಮಸ್ತರಿಗೂ ಇದರಿಂದ ತಿಳಿಯ ಪಡಿಸುವದೇನಂದರೆ,—ಹೊೞ ಮಂಜರಾಬಾದ್ ತಾಲ್ಲೂಕು ಮುತ್ತಿಗೆ ಹೋಬಳಿ ಹೊನ್ನವಳಿ ಹೆಂಮಿಗೆ ಗ್ರಾಮಕ್ಕೆ ಸೇರಿದ್ದ ಈ ಕೆಳಗೆ ನಮೂದಾಗಲ್ಪಡುವ ಪ್ರದೇಶಕ್ಕೆ ಸರ್ 1863ನೇ ಇಸವಿ ಏಪ್ರೆಲ್ ತಾರೀಖು 18ರಲ್ಲು ದೀವರ ಜಾತಿ ಸಿದ್ದೇಗೌಡ ನೆಂಬವನ ಹೆಸರಿಗೆ ಡಿಸ್ಟ್ರಿಕ್ಟ್ ರಿಜಿಸ್ಟರ್ 3ನೇ ನಂಬರ್ ಕಾಫಿ ಪಟ್ಟೇಯನ್ನು ಕೊಡಲ್ಪಟ್ಟು ಯಿದದ್ದು ಯಲ್ಲೋ ಗೈರ್ವಿಲೆ ಆಗಿ ಹೋಗಿರುತೆಂತಲೂ ಅದಕ್ಕೆ ಬದಲಾಗಿ ಡ್ಯೂಪ್ಲಿಕೇಟ್ ಕೊಡಿಸಬೇಕೆಂದು ಸದರೀ ಪಟ್ಟೆದಾರ ಕೇಳಿಕೊಂಡು ಯಿದ್ದಾನೆ.

ಆ ಪ್ರಕಾರ ನಡಸಿಕೊಡುವಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರು ಯಾರಾದರೂ ಯಿದ್ದರೆ ಈ ನೋಟೀಸ್ ತಾರೀಖು ಲಗಾಯತು $1\frac{1}{2}$ ತಿಂಗಳು ವಳಗಾಗಿ ಡಿಸ್ಟ್ರಿಕ್ಟು ಮಜಕೂರ್ ಕಾಫಿ ಇನ್‌ಚಾರ್ಜ್ ಘ|| ಅ|| ಕಮ್ಮಿಷನರವರ ಮುಂದೆ ಅಂಥಾವರು ಹಾಜರಾಗಿ ಕ್ರಮ ಪ್ರಕಾರ ಬಯಾನ್‌ಮಾಡಿ ಕೊಳ್ಳಬಹುದು, ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಗ್ರಾಮದ ವುದ್ವೆ ಪೈಕಿ ತಾಕು 1ಕ್ಕೆ.

ಯಿದರ ಚಕ್ಕಬಂದಿ.

ಪೂರ್ವಕ್ಕೆ—ಬಂಜರು ಗಿಡಕಟ್ಟು ಸ್ಥಳ ನಂದಿಮರ 2.

ದಕ್ಷಿಣಕ್ಕೆ—ಬಂಜರು ಗಿಡಕಟ್ಟು ಹರಿಗಾಡು ಸ್ಥಳ.

ಪಶ್ಚಿಮಕ್ಕೆ—ಚನ್ನೇಗೌಡನ ತೋಟದಬೇಲಿ ಗೊದ್ದನಮರ.

ಉತ್ತರಕ್ಕೆ—ಹರಿಗಾಡು ಬಂಜರು ಸ್ಥಳ.

ಈ ಮಧ್ಯೆ ಯಿರತಕ್ಕದ್ದು ಎಕರೆ 2 ರೋಡ್ 1 ಪೋಲ್ 39 ಗಜ $5\frac{1}{4}$.

Notice of application by one Biri for a duplicate coffee grant.

ಸಮಸ್ತರಿಗೂ ಇದರಿಂದ ತಿಳಿಯಪಡಿಸುವದು ಯೇನಂದರೆ,—ಮಂಜರಾಬಾದು ತಾಲ್ಲೂಕು ಬೈಕೆರೆ ಹೋಬಳಿ ಹೆಬ್ಬಸಾಲೆ ಗ್ರಾಮಕ್ಕೆ ಸೇರಿದ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಹಿತ್ತಲ್ ಪ್ರದೇಶಕ್ಕೆ ಸರ್ 1863ನೇ ಇಸವೀ ಮಾರ್ಚಿ ತಾರೀಖು 4ರಲ್ಲು ಬಲಗೈ ಬೊಜ್ಜನೆಂಬವನ ಹೆಸರಿಗೆ ಡಿಸ್ಟ್ರಿಕ್ಟು ರಿಜಿಸ್ಟರ್ 38ನೇ ನಂಬರ್ ಕಾಫೀ ಪಟ್ಟೆಯನ್ನು ಕೊಟ್ಟು ಯಿದ್ದಹಾಗೂ ಅವ ಹಾಲೀ ಫೌತೀ ಆಗಿರುವದ್ದರಿಂದ ಆ ಪಟ್ಟೇದಾರನ ಮಗಳು ಬೀರೀ ಯಂಬವಳು ಆ ಬಾಬತು ಕಾಫೀ ಪಟ್ಟೆ ಯಲ್ಲೋ ಹೋಯಿತೊ ಗೊತ್ತಿಲ್ಲಾ ಡ್ಯುಪ್ಲಿಕೇಟ ಕೊಡಿಸಬೇಕೆಂದು ಕೇಳಿಕೊಳ್ಳುತ್ತಾಳೆ ಆ ಪ್ರಕಾರ ಡ್ಯುಪ್ಲಿಕೇಟನ್ನು ಬರಸಿ ಸದರೀ ಬೀರೀ ಹೆಸರಿಗೆ ಟ್ರಾನ್ಸ್‌ಫರ್ ಮಾ

ಟಿಕ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರು ಯಾರಾದರು ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಗಾಯತು 1½ ತಿಂಗಳು ವಳಗಾಗಿ ಡಿಸ್ಟ್ರಿಕ್ಟು ಮಜಕೂರು ಕಾಫೀ ಇಂಚಾರ್ಜ್ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳಬಹುದು. ಈ ನಿಬಂಧನೆಗೆ ತಪ್ಪಿ ಬಳಿಕ ಸದರೀ ವಿಷಯದಲ್ಲಿ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲಾರಿಯದು.

ನಂಬರು 64ನೇ ಮನೇಬಳಿ ಹಿತ್ತಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಹೊಸಬನ ಹಿತ್ತಲ್.
ದಕ್ಷಿಣಕ್ಕೆ—ತಿಪ್ಪನ ಹಿರಿಯನ ಹಿತ್ತಲ್ ಚಪಟಮರ.
ಪಶ್ಚಮಕ್ಕೆ—ಕಸಬರಿ ಮರ.
ಉತ್ತರಕ್ಕೆ—ಸಣ್ಣೇಗೌಡನ ಹಿತ್ತಲ್.

ಎಕರೆ 1 ರೋಡ್ 1 ಪೋಲ್ 12 ಗಜಾ 27.

Notice inviting heirs of the deceased Ganga, a Coffee Planter in the Manjarabad Taluk.

ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸುವದು ಯೇನಂದರೆ,—ಮಂಜರಾಬಾದು ತಾಲ್ಲೂಕು ಬೈಕೆರೆ ಹೋಬಳಿ ಹೆಬ್ಬಗೊಡೆ ಗ್ರಾಮದಲ್ಲಿ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಹಿತ್ತಲ್ ಪ್ರದೇಶಕ್ಕೆ ಸರ್ 1863ನೇ ಇಸವೀ ಮಾರ್ಚಿ ತಾರೀಖು 4ರಲ್ಲು ಬಲಗೈ ಗಂಗನೆಂಬವನ ಹೆಸರಿಗೆ 6342–40ನೇ ನಂಬರುಗಳುಳ್ಳ ಕಾಫೀ ಪಟ್ಟೆ ಕೊಡಲ್ಪಟ್ಟು ಯಿರುತ್ತದೆ. ಹಾಲಿ ಆ ಪಟ್ಟೇದಾರನು ಫೌತೀ ಹೊಂದಿ ಮುಖ್ಯ ವಾರಸ್‌ದಾರು ಯಾರು ಯಿಲ್ಲವಾದ್ದರಿಂದ ಆ ಬಾಬತು ಪಟ್ಟೆಯ ಪ್ರದೇಶವು ಸರಕಾರಕ್ಕೆ ದಾಖಲಾಗಲೂ ಲಾಯಖ್ ಆಗಿ ಯಿರುತ್ತದೆ.

ಸದರೀ ಪಟ್ಟೇದಾರನಿಗೆ ಮುಖ್ಯ ವಾರಸ್‌ದಾರಾದವರು ಯಾರಾದರು ಯೆಲ್ಲಿಯಾದರು ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಗಾಯತು 1½ ತಿಂಗಳು ವಳಗಾಗಿ ಡಿಸ್ಟ್ರಿಕ್ಟು ಮಜಕೂರು ಕಾಫೀ ಇಂಚಾರ್ಜ್ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ ಹಾಜರಾಗಿ ಸದರೀ ಸ್ವತ್ತನ್ನು ಹೊಂದುವದಕ್ಕೆ ಯಿರತಕ್ಕ ತಮ್ಮ ಬಾಧ್ಯತೆಯನ್ನು ಅವರಲ್ಲಿ ಕ್ರಮಪ್ರಕಾರ ಸ್ಥಿರಪಡಿಸಿಕೊಡಬಹುದು. ಈ ನಿಬಂಧನೆಗೆ ತಪ್ಪಿ ಬಳಿಕ ಯಿದರ ವಿಷಯದಲ್ಲಿ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲಾರಿಯದು.

ನಂಬರು 65ನೇ ಮನೇಬಳಿ ಹಿತ್ತಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಬಸರೀಮರ.
ದಕ್ಷಿಣಕ್ಕೆ—ಹೊಸಬನ ಹಿತ್ತಲ್.
ಪಶ್ಚಮಕ್ಕೆ—ಹಲಸಿನಮರ.
ಉತ್ತರಕ್ಕೆ—ಹಿರಿಯನ ಸಂದು ಬೇಲಿ.

ಎಕರೆ 0 ರೋಡ್ 1 ಪೋಲ್ 4 ಗಜ 13.

ಬತಾರೀಖು 28ನೇ ಮಾಹೆ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಹಾಸನಾ.

H. E. Mottet,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 3ನೇ ನವಂಬರ್ 1876.

ಇದರಿಂದ ಸರ್ವರಿಗೂ ತಿಳಿಯತಕ್ಕ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕಳೆದ ಅನೇಕ ತಿಂಗಳ ವರೆಗೂ ಬಹಳವಾಗಿ ದನಗಳು ಸತ್ತು ಹೋದ ಸಬಬ್ ಪ್ರಯಾಣಸ್ತರು ಯಿದುವರಿಗೆ ಕೊಡುತ್ತಾ ಯಿದ್ದ ಸ್ವಲ್ಪ ಕಾಲದೊಳಗಾಗಿ ಮಾರ್ಗದಲ್ಲಿ ಉದ್ರಕ್ಕೂ ಟಪ್ಪಾಲ್ ಯತ್ತುಗಳನ್ನು ವದಗಿಸುವದಕ್ಕೆ ಸ್ಥಳದ ಅಧಿಕಾರಿಗಳಿಗೆ ಕೇವಲ ಅಸಾಧ್ಯವಾಗಿರುವಂತೆ ಕಾಣಬರುತ್ತೆ. ಜನಗಳ ನಿರೀಕ್ಷಣೆ ಭಂಗವಾಗದಂತೆ ಯಿರುವ ಬಗ್ಯೆ ಖಯಿಂದ ಯತ್ತಿನ ಟಪ್ಪಾಲ್ ಅವಶ್ಯಕ ವಿರುವರು ಅಧಮಪಕ್ಷ ಪೂರಾ 6 ದಿನಗಳ ನೋಟೀಸ್ ಕೊಡಬೇಕೆಂದು ಯಿದರಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

E. Armstrong,
Dy. Commr.

COORG.

Notice of an application by Nanjegauda for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟ್ ಕೋರ್ಟಿನಿಂದ.

ಸನ್ 1876ನೇ ಇಸವೀ ಬಾಬತು ಶಿವಿಲ್ ನಾನಾವಿಧ ನಂಬರ್ 15.

ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ,—ಕಗ್ಗೋಡ್ಲುನಾಡು ಮದೇ ಗ್ರಾಮದಲ್ಲಿ ಯಿರುವ ಶಿವಾಚಾರದ ನಂಜೇಗೌಡನೆಂಬುವನು ಫಾತೀ ತನ್ನ ಅಣ್ಣ ದೊಡ್ಡಯ್ಯನಿಗೆ ಹೊರಗಿನಿಂದ ಬರತಕ್ಕ ಸಾಲ 200 ರೂಪಾಯಿ ವಸೂಲ್ಮಾಡಿ ಕೊಳ್ಳುವದಕ್ಕೆ ಸನ್ 1860ನೇ ಇಸವೀ 27ನೇ ಆಕ್ಟು ಮೇರೆ ಬಾಧ್ಯತೆ ಸರಟಫಿಕೇಟ್ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೆ 1876ನೇ ಇಸವೀ ಡಿಶಂಬರ್ ತಾರೀಖು 4ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಮಿನಲ್ಲಿ ಹಿಯರಿಂಗ್ ಆಗುವದರಿಂದ ಇದಕ್ಕೆ ಯಾರಾದರೂ ಹಕ್ಕುದಾರರು ಯಿದ್ದರೆ ಆ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸ ಬಹುದು.

ತಾರೀಖು 1ನೇ ನವಂಬರ್ 1876ನೇ ಇಸವೀ.

E. SHAW,
Offg. Supt.

ಕರೆನ್ಸೀ ನೋಟುಗಳು.

ಬೆಂಗಳೂರಿಂದ ತರೀಕೆರೆಗೆ ಅಂಚೇ ದ್ವಾರಾ ರವಾನೇ ಆಗುವಲ್ಲಿ ಯಿದರಡಿ ನಮೂದಿಸಲ್ಪಡುವ ಕರೆನ್ಸೀ ನೋಟುಗಳು ಹೋಗಿವೆ.

ನಂ.	ಸರ್ಕಲ್	ಮೊಬಲಗ್	ಹಕ್ಕುದಾರ
$\frac{B}{50}$ 06769	ಮದ್ರಾಸ್	100	ಬೆಂಗಳೂರಲ್ಲಿ ಪಾಳ್ಯಗಾರ, ಯೇಜಂಟ್ ತರೀಕೆರೆ ರಂಗರಾವ್.
$\frac{B}{38}$ 84421	ಡಿಟೋ	100	
$\frac{B}{44}$ 16809	ಡಿಟೋ	100	
$\frac{B}{43}$ 68207	ಡಿಟೋ	50	
$\frac{B}{34}$ 34905	ಡಿಟೋ	50	

Mysore Government Press, Bangalore—1876.

ಮೈಸೂರ ಗೆಜೆಟ್.

ಉಪ ಪತ್ರಿಕೆ.

ನಂ 45. ಸರ್ಕಾರದಿಂದ ಪಬ್ಲಿಷ್ ಆದದ್ದು. 1876.

ಬೆಂಗಳೂರು, ಶನಿವಾರ, ನವಂಬರ್ ತಾ॥ 11, ಸ್ನೆ 1876.

ಹಾಲೀ ಪ್ರಾಪ್ತವಾಗಿರುವ ಕಷ್ಟವನ್ನು ತಗ್ಗಿಸುವ ಬಗ್ಯಾಗಿ ಆಚರಿಸಲ್ಪಡತಕ್ಕ ಕ್ಷಾಮನಿವಾರಕ ಕ್ರಮಗಳನ್ನು ಕುರಿತು 1876ನೇ ಇಸವಿ ನವಂಬರ್ ಗುರ್ನೇ ತಾರೀಖಿನಲ್ಲಿ ಬೆಂಗಳೂರೊಳಗೆ ಸೇರಿದ ಸಭೆಯಲ್ಲಿ ಚೀಪ್ ಕಮ್ಮಿಷನರವರಿಂದ ಮಾಡಲ್ಪಟ್ಟಪ್ರಸಂಗ.

———

ಮೇಜರ್ ಜನರಲ್ ಯಲ್‌ಮರಸ್ಟ್ ಸಾಹೇಬ್ ಮತ್ತು ದೊಡ್ಡ ಮನುಷ್ಯರಗಳಿರಾ,—

ಮೈಸೂರು ಸಂಸ್ಥಾನದ ಬಾಲರಾದ ನ್ಯಾಯ ಸಮ್ಮತಿಯಾದ ಮಹಾರಾಜರಾಜಾಸಾಹೇಬ್ ಬಹದರವರ ತರಪು ಈ ಸ್ವಾರಸ್ಯವಾದ ಮುಖ್ಯವಾದ ಮತ್ತು ಸಾಧಾರಣವಾಗಿ ಅಭಿವೃದ್ಧಿ ಸ್ಥಿತಿಯಲ್ಲಿ ಇರತಕ್ಕ ಶೀಮೆಯ ಕೆಲಸಕಾರ್ಯಗಳನ್ನು ನಡಿಸುವ ಜವಾಬುದಾರಿಯನ್ನು ನನ್ನ ಹುದ್ದೆ ಅಧಿಕಾರದಿಂದ ನಾನು ವಹಿಸಿ ಇರುತ್ತೆನೆಯಾಗಿ ಈ ಸಮಯವೆಂದರೆ ನಮ್ಮ ಬಾಗಲುಗಳಲ್ಲಿ ನಿಜವಾದ ಬರಗಾಲ ಇಲ್ಲದಿದ್ದಾಗ್ಯೂ ಈಗ ವಿಸ್ತರಿಸಿ ಇರುವ ದುರ್ಭಿಕ್ಷದ ಮತ್ತು ಹೆಚ್ಚು ಬೆಲೆಗಳದೆಶೆಯಿಂದ ವುಂಟಾಗಿರುವ ಕಷ್ಟವನ್ನು ನಿವಾರಣೆ ಮಾಡುವದಕ್ಕೆ ಅನುಕೂಲವಾದ ಮತ್ತು ಪ್ರಯೋಜನಕರವಾದ ಯೇರ್ಪಾಡುಗಳಿಗೆ ತಕ್ಕ ವುಪಾಯಗಳನ್ನು ಕಲ್ಪಿಸುವದರಲ್ಲಿಯು, ಮತ್ತು ಅವುಗಳನ್ನ ಆಚರಣೆಯಲ್ಲಿ ತರುವದರಲ್ಲಿಯೂ ಜವಾಬುದಾರೀ ಅಧಿಕಾರಸ್ಥರಿಗೆ ತಮ್ಮ ಆಲೋಚನೆಗಳು ಹೇಳುವದರಿಂದಲೂ ಮತ್ತು ಸಹಾಯ ಮಾಡುವದರಿಂದಲೂ ಮತ್ತು ಧಾರಾಳವಾದ ಚಂದಾಗಳು ಹಾಕುವದ್ದರಿಂದಲೂ ಪ್ರೋತ್ಸಾಹ ಮಾಡಬಹುದೆಂಬದಾಗಿ ಈ ಪ್ರಾಬಲ್ಯವಾದ ಯಲ್ಲಾ ತರಗತಿಯ ಪ್ರಜೆಗಳ ಸಂಘವನ್ನು ಶೇರಿಸತಕ್ಕದ್ದು ನನಿಗೆ ಬದ್ಧವಾದ ಕೆಲಸವೆಂದು ನಾನು ಯೆಣಿಸಿ ಇರುತ್ತೆನೆ.

2. ಈಗೆ ಪ್ರಾಪ್ತವಾಗಿರುವ ಕ್ಷಾಮದ ಮುಖ್ಯವಾದ ಸ್ವರೂಪವನ್ನು ಮತ್ತು ಕಾರಣಗಳನ್ನು ಈಗ ದಯಮಾಡಿ ಬಂದು ಸಭೆ ಶೇರಿಯಿರುವ ದೊಡ್ಡ ಮನುಷ್ಯರಿಗೆ ನಾನು ಹೇಳಬೇಕಾದ ಅವಶ್ಯಕವೇ ಇಲ್ಲಾ, ಆದರೆ ದೂರ ದೇಶದಲ್ಲಿ ಇರತಕ್ಕ ಮತ್ತು ಈ ವಿಷಯವಾಗಿ ಸರಕಾರ ಮೂಲಕವಾಗಿಯು ಇತರ ಮೂಲಕವಾಗಿಯು ಸಮಾಚಾರ ತಿಳಿಯುವದಕ್ಕೆ ಇಲ್ಲದೆಯಿರುವ ಈಗ ನಮ್ಮ ಸಭೆಯಲ್ಲಿ ಇರುವ ಜನಗಳ ಮತ್ತು ಕ್ಷಾಮವನ್ನು ತಿಳಿದು ಅದರಿಂದಾ ಬಹಳವಾಗಿ ತೊಂದರೆ ಪಡುವದರ ಚಿಹ್ನೆ ಮತ್ತು ದಾಖಲೆಯನ್ನು ನೋಡಿ ಕರುಣೆಯನ್ನು ತೋರಿಸದೆ ಇರಲಾರದಂತಾ ಇವರುಗಳ ತಿಳುವಳಿಕೆ ಬಗ್ಯೆ ಮತ್ತು ಪ್ರಯೋಜನಕ್ಕೋಸ್ಕರವಾಗಿಯು ಈಗ ಯರಡು ಸಂವತ್ಸರಗಳಿಂದ ಕಾಲ ಕೆಟ್ಟು ಮಳೆಯು ವಿಶೇಷವಾಗಿ ಬಾರದೆ ಮತ್ತು ಅಕ್ಕಿ ರಾಗಿ ಹುರಳಿ ಮತ್ತು ಅವರೆ ಮುಂತಾದ ಇತರ ಧಾನ್ಯಗಳನ್ನು ಬೆಳೆಯುವದಕ್ಕೆ ಮುಖ್ಯಕಾರಣವಾಗಿಯು ಮತ್ತು ನಮ್ಮ ಕೆರೆಗಳಿಗೆ ದಂಡಿಯಾಗಿ ನೀರು ಬಂದು ತುಂಬುತೆಂದು ನಿರೀಕ್ಷಿಸುವ ಮಳೆಯು ಈಗಿನವರಿಗೂ ಬಾರದೆ ಈಗ ವುಂಟಾಗಿರುವ ಕ್ಷಾಮವನ್ನು ಮೇಲೆ ಹೇಳಿದಯಲ್ಲಾ ಜನಗಳಿಗೂ ತಿಳಿಯಪಡಿಸುವದು ಚನ್ನಾಗಿಯಿಧೆ. ನಿಮ್ಮಗಳಿಗೆಲ್ಲಾ ತಿಳದಂತೆಯೇ ಸಾಧಾರಣವಾಗಿ ಮಳೆ ಬೀಳುವದಕ್ಕೆ ಅಗ್ಟೋಬರು ತಿಂಗಳು ಆದಿಭಾಗ ಅಥವಾ ಮಧ್ಯಭಾಗದಲ್ಲಿ ಷುರು ಆಗುತದೆ, ಆದರೆ ಈಸಲ ಇದುವರಿವಿಗೂ ಮಳೆ ಯಚಿನ್ನೆ ಇಲ್ಲದ ನಮ್ಮಗಳ ಕೋರಿಕೆಗಳೆಲ್ಲಾ ನಿಶ್ಚಯವಾಗಿ ಮಲಿನವಾಗಿಧೆ, ನಾವುಗಳು ಪುಣ್ಯಶಾಲಿಗಳಾದರೆ ಈ ತಿಂಗಳಲ್ಲಿ ಮಳೆ ಬಂಧರೂ ಬರಬಹುದು ಅದರಿಂದ ಮುಂ

ದಿನಬೆಳೆ ಬರುವವರಿಗೂ ಕುಗ್ಗಿ ಹೋಗಿ ಇರುವ ರೈತರ ಮನಸ್ಸಿಗೆ ಸ್ವಲ್ಪಧೈರ್ಯ ವುಂಟಾಗಿ ನೀರಿಗೂ ಅತಿಕ್ಷಾಮ ಬಾರದಂತೆ ದೇವರು ತಪ್ಪಿಸಬೇಕು. ಈ ಸೀಮೆಯಲ್ಲಿ ಬಡಜನಗಳು ತಮ್ಮ ಜೀವನವನ್ನು ಕಾಪಾಡುತೆಂದು ನಂಬಿಕೊಂಡು ಇರುವ ಮುಖ್ಯ ಆಹಾರವಾದ ರಾಗಿಯು ಈ ವರುಷ ಸರಿಯಾಗಿ ಫಸಲು ಆಗದೆ ಯಲ್ಲಾ ನಾಶವಾಯಿತು. ದೇವರದಯದಿಂದ ಕೆಲವು ಹೋಬಳಿಗಳಲ್ಲಿ ವಿನಾ ಇಂನೆಲ್ಲಾ ಕಡೆಯಲ್ಲಿಯೂ 4 ಆಣೆ ಹುಟ್ಟುವಳೀಗಿಂತಾ ಜಾಸ್ತಿಯಿಲ್ಲಾ.

3. ಈ ಸ್ಥಿತಿಯಲ್ಲಿ ಅಕ್ಕಿಯು ರೂಪಾಯಿ 1ಕ್ಕೆ $6\frac{1}{2}$ ಲಾಗಾಯಿತು $6\frac{3}{4}$ ಶೇರುವರಿಗು ರಾಗಿ ರೂಪಾಯಿ 1ಕ್ಕೆ $9\frac{3}{4}$ರ ಲಾಗಾಯಿತು $10\frac{1}{4}$ ಶೇರಿನವರಿಗೂ ಮಾರುವದು ಬೆಳೆ ಆಗಿಯಿರುವ ಕೆಲವು ಮಲನಾಡು ತಾಲ್ಲೂಕು ವಿನಹ ಈ ಸೀಮೆಯ ಎಲ್ಲಾ ಕಡೆಯಲ್ಲಿಯೂ ಸಾಧಾರಣವಾಗಿ ಬಹಳ ಜನ ರೈತರೂ ಮತ್ತು ಇತರ ಬಡಜನಗಳೂ ಶ್ರಮ ಪಡುತ್ತಾ ಅರಗತಕ್ಕಂತಾ ಮತ್ತು ಸಂತ್ರುಪ್ತಿಯಾಚತಮ್ಮ ಆಹಾರಗಳನ್ನು ಸಂಪಾದಿಸಿ ಕೊಳ್ಳುವದಕ್ಕೆ ಬಹಳ ಶ್ರಮ ಪಡುತ್ತಾರೆಯಿ ಯಂಬುವದಕ್ಕೆ ಸಂಶಯವೇ ಇಲ್ಲಾ. ಸಾಧಾರಣವಾಗಿ ಬಡಜನಗಳಲ್ಲಿ ಅನೇಕರು ಬಹಳ ತೀಕ್ಷಣದಿಂದಾ ರಕ್ತ ಭೇದಿ ಚಿನ್ಹೆಗಳಿಗೆ ಕಾರಣವಾದ ಕತ್ತಾಳೆ ಗೆಡ್ಡೆಗಳನ್ನು ಮತ್ತು ಅಷ್ಟು ಅಸಹ್ಯವಲ್ಲದ ಪದಾರ್ಥಗಳಾದ ಹಳೇ ಕೆರೆ ಅಂಗಳದಲ್ಲಿ ಬೆಳೆಯುವಂತಾ ಆವಲ್ ಗೆಡ್ಡೆಯು ಮತ್ತು ಗೊಟ್ಟೆ ಗೆಡ್ಡೆಯು ಮತ್ತು ಕಾಡು ಗೆಣಸುಗಳನ್ನು ತಿಂದು ಅಸಾಖ್ಯವಾದ ಬಾಳುವಿಕೆಯನ್ನು ಹೊರಯುವದು ಸಂದೇಹವಿಲ್ಲದೆ ನಿಶ್ಚಯವಾದ್ದಾಗಿಧೆ.

4. ತಾತ್ಕಾಲದಲ್ಲಿ ಸಂಭವಿಸಿ ಇರುವ ಕಷ್ಟವನ್ನು ತಗ್ಗಿಸುವದಕ್ಕೆ ತಕ್ಕ ಯೇರ್ಪಾಡುಗಳನ್ನ ಕೂಡ್ಲೆ ಮಾಡತಕ್ಕದ್ದು ಆವಶ್ಯಕವಾದ್ದಾಗಿ ಇಧೆಯಂದು ನಾನು ಯಣಿಸುತ್ತೇನೆ ಇದಕ್ಕೋಸ್ಕರ ಇಂಥಾಕಾಲಗಳಲ್ಲಿ ಕಷ್ಟಪಡುವಂಥಾವರ ಶ್ರಮವನ್ನ ನಿವಾರಣೆ ಮಾಡುವಂಥಾದಕ್ಕೆ ಅರ್ಹವಾದ ಯರಡು ಮುಖ್ಯವಾದ ವಿಧಗಳು ಇವೇ. ಮೊದಲನೇದು ಮರಂಮ್ಮತ್ ಕೆಲಸಗಳಮೇಲು ಅಥವಾ ಕ್ಷಾಮ ನಿವಾರಣೆ ಕಾಮಗಾರಿಗಳೆನ್ನಿಸಿ ಕೊಳ್ಳುವದರಮೇಲಾಗಲಿ ಶಕ್ತರಾದ ಗಂಡಸರು ಹೆಂಗಸರು ಮತ್ತು ಹುಡುಗರನ್ನು ಇಟ್ಟು ಅವರ ಕೂಲಿಗಳನ್ನು ದ್ರವ್ಯ ಅಥವಾ ಧಾನ್ಯದ ಮೂಲ್ಕವಾಗಿಯಾದರು ಅವರಿಗೆ ಯಾವದು ಅನುಕೂಲವೋ ಅಂಥಾ ದರ ಮೂಲಕವಾಗಿ ಪಾವತೀ ಮಾಡತಕ್ಕದ್ದು. ಯೆರಡನೇದು—ಸಂಪೂರ್ತಿಯಾಗಿ ವುಚಿತವಾಗಿಯಾಗಲಿ ಅಥವಾ ಕೆಲವು ಭಾಗ ವುಚಿತವಾಗಿಯಾಗಲಿ ಕ್ಷಾಮ ನಿವಾರಣೆಗೋಸ್ಕರ ಸಹಾಯ ಮಾಡತಕ್ಕದ್ದು. ಇವುಗಳಲ್ಲಿ ಮೊದಲನೇದು ಜೀವನಕ್ಕೆ ಸರಿಯಾದ ಕೆಲಸಗಳನ್ನು ಕಲ್ಪಿಸುವದು. ಸರಕಾರದವರನ್ನ ಹೊಂದಿ ಇಧೆ, ಯರಡನೇವಿಷಯದಲ್ಲಿ ಸಂದೇಹವಿಲ್ಲದೆ ಧರ್ಮಿಷ್ಟರಾದ ಜನಗಳ ಮತ್ತು ಸರಕಾರದವರ ಪ್ರೋತ್ಸಾಹವೂ ಅವಶ್ಯಕವಾಗಿರುತ್ತೆ.

5. ಮಳೆಯಿಲ್ಲದೆ ತೊಂದರೆ ಪಡುವ ಸ್ಥಳಗಳಲ್ಲಿ ಇರತಕ್ಕ ಶಕ್ತಿವಂತರಾದ ಮತ್ತು ಜೀವನಕ್ಕೆ ಇಲ್ಲದೆ ಶ್ರಮಪಡುವ ಬಡಜನಗಳಿಗೆ ಕೂಲೀಮಾಡುವದಕ್ಕೆ ಕೆಲಸವನ್ನು ವಿಶೇಷವಾಗಿ ಕೊಡುವರೀತ್ಯಾ ಮರಂಮ್ಮತ್ ಇಲಾಖೆಯವರು ನಮ್ಮ ಹುಕ್ಕುಂಮೇರಿಗೆ ಮುಂಚಿತವಾಗಿಯೇ ತಕ್ಕ ಯೇರ್ಪಾಡುಗಳನ್ನು ಮಾಡಿ ಇರುತ್ತಾರೆ. ಮತ್ತು ಕ್ಷಾಮವಿಲ್ಲದೆ ಇರತಕ್ಕಂಥಾ ಸ್ಥಳಗಳಲ್ಲಿ ಗಚ್ಚು ಮತ್ತು ಇತರ ಕಾಮಗಾರಿಗಳು ನಡೆಯಬೇಕಾದ್ದೆಲ್ಲಾ ಒಳ್ಳೇ ಅನುಕೂಲಕಾಲಗಳಲ್ಲಿ ಮಾಡಿಸುವದಕ್ಕೋಸ್ಕರ ನಿಲ್ಲಿಸಿ ಇಧೆ.

6. ಬೆಂಗಳೂರಲ್ಲಿ ನೀರು ಸರಬರಾಯಿಗೋಸ್ಕರ ಮಾಡುವ ಕಾಮಗಾರೀಯಲ್ಲಿ 1800 ಜನಗಳಿಗಿಂತ ಜಾಸ್ತೀಯಾಗಿ ಕೂಲಿಗಳನ್ನು ಇಟ್ಟು ಕೆಲಸವು ಬಹಳ ಜೋರಾಗಿ ನಡೆಯುತ್ತ ಇಧೆ, ಈ ಕೆಲಸದ ಮೇಲೆ ಇದ್ದಂಥಾ ಸಾಪರಸ್ ಅಂಡ್ ಮಯನರಸ್ ಯಂಬ ಶಿಪಾಯಿಗಳನ್ನು ತಪ್ಪಿಸಿ ಇರುತ್ತೆ. ಅವರ ಬದಲಾಗಿ ಬೆಂಗಳೂರಲ್ಲಿ ಮತ್ತು ದಂಡಿನಲ್ಲಿ ಇರತಕ್ಕ ಶಕ್ತವಂತರಾದ ಕೂಲಿಗಳಿಂದಾ ಭರ್ತಿ ಮಾಡಲ್ಪಡುವದು ಆ ರೀತಿಯಾಗಿ ಕೂಲಿಗಳನ್ನ ಭರ್ತಿ ಮಾಡತಕ್ಕಂಥಾದ್ದು ಸಾಕಾಗಿ ಇರುತ್ತೆಯೋ ಇಲ್ಲವೋ ಯಂಬುವದು ಮುಂದೆ ತಿಳಿಯಬೇಕು.

7. ಮೈಸೂರಲ್ಲಿ ನೀರ ಸರಬರಾಯಿ ಕಾಮಗಾರಿಯು ಗವರ್ನಮೆಂಟಿನಿಂದ ಸರಿಯಾಗಿ ತಹಲ್ ವರಿಗೂ ಮಂಜೂರಾಗದೆ ಇದ್ದಾಗ್ಯೂ ಸದರಹು ಪಟ್ಟಣದಲ್ಲಿಯೂ ಮತ್ತು ಆಜು ಬಾಜುನಲ್ಲಿಯೂ ಇರತಕ್ಕ ಕೇವಲ ಬಡವರಿಗೆ ತಕ್ಕ ಕೆಲಸ ಕೊಡುವದಕ್ಕೋಸ್ಕರ ಸದರಹೂ ಕಾಮಗಾರಿಯನ್ನು ನನ್ನ ಜವಾಬ್‌ದಾರೀ ಮೇಲೆ ತಕ್ಷಣವೇ ಷುರು ಮಾಡಲ್ಪಡುವದು ಮತ್ತು ಚಾಮುಂಡೀ ಬೆಟ್ಟದ ಮೇಲಕ್ಕೆ ರಸ್ತೆ ಈಗ ಮಾಡುತ್ತಾ ಇದ್ದಾರಾದ್ದರಿಂ ಶಕ್ತಿವಂತರಾದ ಅನೇಕ ಜನಗಳಿಗೂ ಕೆಲಸ ದೊರಿಯುತ್ತೆ.

8. ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಧಾರಾಳವಾಗಿ ಕ್ಷಾಮ ನಿವಾರಣೆಗೋಸ್ಕರ ದ್ರವ್ಯ ಮೂಲಕವಾಗಿ ಸಹಾಯ ಮಾಡಲ್ಪಟ್ಟು ಇರುತ್ತೆ, ಅಲ್ಲಿ ಕೆರೆಗಳ ರಿಪೇರಿಯು ಮತ್ತು ಹೊಸದಾಗಿ ಯರಡು ಸೀರೀಸ್ ಕೆರೆಗಳನ್ನು ಕಟ್ಟುವದಕ್ಕೂ ಕ್ಷಣವೇ ಷುರು ಮಾಡಲ್ಪಡುವದು, ಕಾಡುಗೋಡಿಯಲ್ಲಿ ಮತ್ತೊಂದು ದೊಡ್ಡ ಹೊಸಕೆರೆ ಕಾಮಗಾರೀ ಮೊದಲೇ ಷುರುವಾಗಿ ಈಗ ವಿಶೇಷವಾಗಿ ಕೆಲಸ ನಡೆಯುತ್ತಾ ಇದೆ, ಮತ್ತು ಹಾಸನ ಡಿಸ್ಟ್ರಿಕ್ಟಿನಲ್ಲಿ ಇರ್ರಿಗೇಷನ್ ಇಲಾಖೆಯವರು ಮತ್ತೊಂದು ಸಾಲ್ ಕೆರೆಗಳನ್ನ ರಿಪೇರಿ ಮಾಡಲು ಹುಕ್ಕುಂ ಹೊಂದಿ ಇರುತ್ತಾರೆ.

9. ಘಾಟು ಮಾರ್ಗಗಳಲ್ಲಿ ಯಲ್ಲಾ ಆಜುಬಾಜು ಗ್ರಾಮಗಳಲ್ಲಿ ಇರತಕ್ಕ ಜೀವನಕ್ಕೆ ಇಲ್ಲದೆ ಸಂಕಟ ಪಡುವ ಜನಗಳನ್ನು ಮತ್ತು ಕೂಲಿ ಮಾಡುತ್ತೇನೆಂದು ಬರುವ ಜನಗಳನ್ನು ರಸ್ತೆ ರಿಪೇರಿ ಮತ್ತು ಹೊಸದಾಗಿ ಮಾಡುವದಕ್ಕೋಸ್ಕರ ಕಲ್ಲಗು

ಳನ್ನು ಜವಾಯಿಸಿ ಒಡೆದು ಜಲ್ಲಿ ಮಾಡುವ ಕೆಲಸದಲ್ಲಿ ಇಡುವ ಹಾಗೆ ಆಯಾ ಯಗ್ಸಿಕ್ಯೂಟಿವ್ ಇಂಜನಿಯರ ಸಾಹೇಬರುಗಳು ಹುಕ್ಕುಂ ಹೊಂದಿ ಇದ್ದಾರೆ, ಮತ್ತು ಈ ಶೀಮೆಯ ಅನೇಕ ಸ್ಥಳಗಳಲ್ಲಿ ಜನಗಳಿಗೆ ವಿಸ್ತಾರವಾಗಿ ಕೆಲಸಗಳು ದೊರೆಯುವ ಹಾಗೆ ಸಮುದಾಯವಾಗಿ ಯೇರ್ಪಡಿಸಿ ಇರುತ್ತೆ.

10. ಶಿದ್ದಾಪುರಕ್ಕೂ ಮಡಿಕೇರಿಗೂ ಹಾಕುವ ರಸ್ತೆ ಕಾಮಗಾರೀ ಷುರು ಮಾಡಲು 23250 ರೂಪಾಯಿಗಳಿಗೆ ಮಂಜೂರು ಮಾಡಿ ಇರುವದಾಗಿ ಈಗ ತಾನೇ ಗವರ್ನಮೆಂಟಿನವರಿಂದ ತಂತೀ ಸಮಾಚಾರವು ನನ್ನಿಗೆ ತಲಪಿ ಇರುತ್ತೆ. ಸದರಹೂ ಕಾಮಗಾರೀಯಿಂದಾ ಕೊಡಗು ದೇಶದ ಕಾಫೀ ತೋಟಗಳಲ್ಲಿಯೂ ಮತ್ತು ಮರಮ್ಮತ್ತು ಕೆಲಸಗಳಲ್ಲಿಯು ಕೂಲಿ ಮಾಡಲು ಮೈಸೂರಿಂದ ಹೋಗಿ ಇರುವ ಅನೇಕರಿಗೆ ಕೆಲಸ ದೊರಿಯುವದು.

11. ಈ ದೇಶದ ಅನೇಕ ಪ್ರದೇಶಗಳಲ್ಲಿ ಕ್ಷಾಮನಿವಾರಣೆ ಕಾಮಗಾರಿಗಳಿಗೋಸ್ಕರ ನನ್ನ ಅಪೇಕ್ಷೆ ಮೇರೆ ಮತ್ತೊಂದು ಲಕ್ಷ ರೂಪಾಯಿಗಳನ್ನು ನನ್ನ ಯೆಕ್ತ್ಯಾರಿಯಲ್ಲಿ ಇಂಡ್ಯಾ ಗವರ್ನಮೆಂಟಿನವರು ಸ್ವಲ್ಪ ದಿವಸಕ್ಕೆ ಮುಂಚೆ ಇಟ್ಟು ಇರುತ್ತಾರೆ, ಮತ್ತು ಸಮಯ ಬಿದ್ದ ಹಾಗೆಲ್ಲಾ ಡಿಸ್ಟ್ರಿಕ್ಟ ಆಫಿಸರುಗಳ ಮೂಲಕವಾಗಿ ತಾಲ್ಲೂಕು ಜಾಗೆಗಳಲ್ಲಿ ಕ್ಷಾಮ ನಿವಾರಣೆ ಕಾಮಗಾರೀಗಳ ಮೇಲೆ ಯುಕ್ತ ತೋರಿದಂತೆ ವಿನಿಯೋಗ ಮಾಡುವದಕ್ಕೋಸ್ಕರ ಕಮಿಷನರುಗಳಿಗೆ ಐವಜುಗಳು ಪಾವತೀ ಮಾಡಲ್ಪಡುವದು.

12. ಬೆಂಗಳೂರಲ್ಲಿ ಮಾತ್ರವೇ ಮರಮ್ಮತ್ ಹುದ್ದೇದಾರ್ರ ಅಧಿಕಾರದಲ್ಲಿ ಈ ಊರಿಗೆ ನೀರು ಸರಬರಾಯಿ ಮಾಡುವದಕ್ಕೋಸ್ಕರ ನಡೆಯುವ ಕಾಮಗಾರಿಯು ಮತ್ತು ಇತರ ಕಾಮಗಾರಿಗಳಲ್ಲದೆ ಮ್ಯುನಿಸಿಪಲ್‌ನವರು ಈ ಸ್ಥಳದ ಶಕ್ತಿವುಳ್ಳ ಬಡಜನರಿಗೆ ಸಂಪೂರ್ತಿಯಾಗಿಯೂ ಮತ್ತು ತಕ್ಕ ಸಹಾಯ ಉಂಟಾಗತಕ್ಕದ್ದಕ್ಕೆ ಯಾವಹಿ ಸರಿಯಾಗಿ ಇರುತ್ತೆಂದು ತಿಳಿಯಬರುತ್ತೋ ಅಂಥಾ ಕ್ಷಾಮ ನಿವಾರಣೆ ಕಾಮಗಾರಿಗಳನ್ನ ನಮ್ಮ ಅಪ್ಪಣೆಗೆ ವೊಳಪಟ್ಟು ಷುರು ಮಾಡಲು 10,000 ರೂಪಾಯಿಗಳು ಅವರ ಯೆಕ್ತ್ಯಾರಿಯಲ್ಲಿ ಇಡಲ್ಪಟ್ಟು ಇದೆ.

13. ಆದಾಗ್ಯೂ ವುದ್ಯುಕ್ತಪಟ್ಟು ಇರುವ ಕೆಲಸಗಳನ್ನು ಬಂದೋಬಸ್ತಾಗಿ ಮಾಡುವದಕ್ಕೆ ಬಹಳ ಜಾಗರೂಕತೆಯನ್ನು ಮತ್ತು ವಿಚಾರಣೆಯನ್ನು ತೆಗದುಕೊಂಡು ಪೋಲಾಗದಂತೆ ನಡಸಬೇಕು ಮತ್ತು ಕೆಲಸಕ್ಕೆ ನೇಮಿಸಲ್ಪಡುವ ಕೂಲಿಗಾರರು ತಮ್ಮ ಕೂಲಿಗೆ ಸರಿಯಾಗಿ ಅನ್ಯಾಯವಿಲ್ಲದೆ ಕೆಲಸ ಮಾಡುತ್ತಾರೆಂಬುವದನ್ನು ಚೆನ್ನಾಗಿ ಮೇಲುವಿಚಾರಣೆ ಮಾಡತಕ್ಕದ್ದು ಹಾಗಿಲ್ಲದೆ ಇದ್ದರೆ ಕೂಲಿದರವನ್ನು ಜಾಸ್ತಿಮಾಡುವದರಿಂದಲು ಮತ್ತು ಅವರ ಕೆಲಸಗಳನ್ನ ಕಮ್ಮೀ ಮಾಡುವದರಿಂದಲು ಹೊರಗಿನ ಡಿಸ್ಟ್ರಿಕ್ಟ್ಟುಗಳಿಂದ ಘಟ್ಟುಮುಟ್ಟಾದ ಜನಗಳು ಮತ್ತು ಇತರ ದೊಡ್ಡಗುಂಪುಗಳು ಬೆಂಗಳೂರಿಗೆ ಬಂದು ಜಮಾಯಿಸುವದಕ್ಕೆ ರಹಾ ವುಂಟಾಗಿ ಈ ಗ ಪೋಲಾಗದೆ ನಡಿಯತಕ್ಕಂಥಾ ಕಾಮಗಾರಿಗಳಿಗು ಮತ್ತು ಜನಗಳ ಆರೋಗ್ಯಸ್ಥಿತಿಗೂ ಹಾನಿ ವುಂಟಾಗುತ್ತದೆ.

14. ಕ್ಷಾಮ ವುಪಶಮನಕ್ಕೆ ಯೆರಡನೇಕ್ರಮ ವೇನೆಂದರೆ ಸಂಪೂರ್ತಿಯಾಗಿ ವುಚಿತವಾಗಿ ಯಾ ಸ್ವಲ್ಪಭಾಗ ವುಚಿತವಾಗಿ ಸಹಾಯ ಮಾಡತಕ್ಕದ್ದನ್ನ ಈ ದಿವಸ ತಮ್ಮಗಳ ಮನಸ್ಸಿಗೆ ತೆಗದುಕೊಳ್ಳಬೇಕೆಂದು ನಾನು ಮುಖ್ಯಗಾಗಿ ಕೋರುತ್ತೇನೆ ಯಾತಕ್ಕಂದರೆ ಸದರಹೂ ಕ್ಷಾಮ ವುಪಶಮನಕ್ರಮವು ಯಲ್ಲಾತರಗತಿಯ ಪ್ರಜೆಗಳ ಮನಃಪೂರ್ವಕವಾದ ಸಹಾಯವು ಮತ್ತು ಧಾರಾಳವಾದ ಚಂದಾಗಳು ಯಿಲ್ಲದೆ ಶುಭಕರವಾದ ಫಲವುಂಟಾಗುತ್ತೆಂಬ ದೃಷ್ಟಿ ಮೇಲೆ ಯೇರ್ಪಡಿಸಿ ನಡಸಲು ಸರಕಾರದವರಿಗೆ ಶುದ್ಧಾಂಗವಾಗಿ ಅಸಾಧ್ಯವಾಗಿರುತ್ತೆ ಸರಕಾರದ ಮೇಲ್ಪಟ್ಟ ಅಧಿಕಾರಿಗಳ ಸಂಬಂಧದೊಡನೆ ಅವರ ಸಮುದಾಯವಾದ ಹುಕುಂಗಳಂತೆ ಈ ತರಹಾದ ಕ್ಷಾಮ ನಿವಾರಣೆ ಕ್ರಮವು ಲೋಕಲ್ ಕಮಟೀಯವರ ಮೂಲಕವಾಗಿಯೂ ಮತ್ತು ಅವರುಗಳಿಂದಾ ಜಾರಿಯಲ್ಲಿ ತರಬೇಕೆನ್ನುವದೂ ಸ್ಪಷ್ಟವಾಗಿದೆ.

15. ಕಮಟೀಯವರ ಮುಖ್ಯವಾದ ಕಾರ್ಯಗಳ ಪೈಕೀ ಚಂದಾ ವಸೂಲ್ ಮಾಡುವದುಶಿವಾಯಿ ವಯಸ್ಸಿನಿಂದಾಗಲಿ, ಅಥವಾ ಅಶಕ್ತತೆಗಳಿಂದಲಾಗಲಿ ಅಥವಾ ಯಿತರ ಕಾರಣಗಳಿಂದಲಾಗಲಿ ಕೆಲಸ ಮಾಡುವದಕ್ಕೆ ಕೈಲಾಗದೇ ಯಿರುವಂಥಾ ತಮಾಂ ಜನಗಳಿಗೆ ವುಚಿತವಾಗಿ ಕ್ಷಾಮನಿವಾರಣೆಗೆ ಸಹಾಯ ಪಡಿಸುವದು ಸೂಕ್ಷ್ಮವಾದ ಕೆಲಸ ಅಂದರೆ, ರಾಟೆ ನೇಯಿಗೆ ವಗೈರೇ ಕೆಲಸಗಳು ಮಾಡತಕ್ಕದ್ದಕ್ಕೆ ಶಕ್ತಿವುಳ್ಳವರಿಗೆ ಅವರಗಳ ಮನೆಗಳಲ್ಲಿಯೇ ಆಗಲಿ ಯಾ ಮನೆಗಳ ಸಮೀಪದಲ್ಲಿಯೇ ಆಗಲಿ ಕೆಲಸ ಹೊಂದಿಸಿ ಕೊಡತಕ್ಕದ್ದು. ಜಾತಿ ಪದ್ಧತಿ ಮೇರೆ ಕೂಲೀ ಮಾಡತಕ್ಕದ್ದಕ್ಕೆ ಬಾಧಕವಾಗಿ ಇರುವ ಹೆಂಗ[illegible] ಮತ್ತು ಜನಗಳ ಕಷ್ಟನಿವಾರಣೆಗೆ ತಮ್ಮ ಅನುಭವದ ಮೇರೆ ತಕ್ಕ ಯೇರ್ಪಾಡು ಮಾಡತಕ್ಕದ್ದು. ಕೆಲವು ಷರತ್ತುಗಳ ಮೇಲೆ ಧಾನ್ಯವನ್ನ ಬಿಕರೀ ಮಾಡತಕ್ಕದ್ದು. ಮತ್ತು ಯಲ್ಲಿದು ಸ್ಥಿತಿ ಸಮುದಾಯವಾಗಿದ್ದಿಯೋ ಅಲ್ಲಿ ಗ್ರಾಮಗಳ ಕಷ್ಟನಿವಾರಣೆ ಕ್ರಮವನ್ನು ಯೇರ್ಪಡಿಸತಕ್ಕದ್ದು ಮುಖ್ಯ ಕಾರ್ಯವಾಗಿರುತ್ತೆ. ಅನೇಕ ಪ್ರಜೆಗಳು ತಮ್ಮ ಮನೆಗಳನ್ನ ಬಿಟ್ಟು ಗುಂಪಾಗಿ ಹೊರಗೆ ಹೊರಡುವದರಿಂದ ಶಾನೆ ಅಪಾಯಕ್ಕೆ ಕಾರಣ ವಾಗುತ್ತೆಂಬ ಅಂಶದಿಂದಾ ಆಯಾಯ ಗ್ರಾಮಗಳಲ್ಲಿ ಕ್ಷಾಮನಿವಾರಣೆ ಕ್ರಮದ ಆವಶ್ಯಕತೆ ವುಂಟಾಗುತ್ತೆ.

16. ಈರೀತಿಯಾದ ಸಂದರ್ಭಗಳಲ್ಲಿ ನಡವಳಿಕೆಗೋಸ್ಕರ ಸರಕಾರದವರಿಂದ ಕೊಡಲ್ಪಟ್ಟಿರುವ ಸಮುದಾಯವಾದ ಹುಕುಂಗಳಂತೆ ಖಂಡಿತವಾಗಿ ಜಾರಿ ಮಾಡುವದರಿಂದ ಅನಾನುಕೂಲ ಉಂಟಾಗದಂತೆ ಅಕಸ್ಮಾತ್ತಾಗಿ ಕ್ಷುದ್ಬಾಧೆಯಿಂದ ಮರಣ ಸಂಭವಿ

ಸುವದನ್ನ ತಪ್ಪಿಸುವದಕ್ಕೆ ತಮ್ಮ ಮಟ್ಟಿಗೆ ತಾವೇ ಜವಾಬುದಾರಿ ವಹಿಸಿಕೊಂಡು ತಮ್ಮಗಳ ಜವಾಬುದಾರಿಮೇಲು ಮತ್ತು ತಮಗೆ ಯುಕ್ತ ತೋರಿದಂತೆ ತಾಮಸ ಪಡದೆ ಅವರಗಳ ಅನುಕೂಲತೆಗೂ ಮತ್ತು ಯಕ್ತ್ಯಾರಿಗೂ ಮೊಳಪಟ್ಟ ಪ್ರಯತ್ನ ಯಾ ಯೇರ್ಪಾಡನ್ನ ಮಾಡಬೇಕೆಂದು, ಮೊಕರರ್ ಮಾಡಲ್ಪಡುವ ಕ್ಷಾಮ ನಿವಾರಣೆ ಕಮಟಿಯಾನೆ ಸಂಘದವರಿಗೂ ಮತ್ತು ಯಲ್ಲಾ ಸರಕಾರದ ಉದ್ಯೋಗಸ್ತರಿಗೂ ನಾನು ಒತ್ತಿ ಹೇಳುತ್ತೇನೆ.

17. ಹಾಲಿ ಹಾಜರು ಇರುವ ಎಲ್ಲಾ ಜನಗಳು ಧಾರಾಳವಾದ ಸಹಾಯವು ಮತ್ತು ಚಂದಾಗಳು ಕೊಡಬೇಕೆಂನುವದಾಗಿ ಸಂಕ್ಷೇಪವಾಗಿ ಬೇಡಿಕೊಳ್ಳುತ್ತೇನೆ, ಬೆಂಗಳೂರಲ್ಲಿ ಇರತಕ್ಕ ಯಲ್ಲಾ ಪ್ರಜೆಗಳಂದರೆ ಇರೋಪಿಯರ್ಸು ಮತ್ತು ನೇಟೀವ್‌ಗಳನ್ನ ದ್ರವ್ಯ ಸಹಾಯ ಮಾಡಬೇಕೆಂದು ಬೇಡಿಕೊಳ್ಳ ಬಹುದು.

18. ಕಳದ ತಿಂಗಳಲ್ಲಿ ಈ ಕ್ಷಾಮಕ್ಕೋಸ್ಕರ ಛಂದಾ ಹಣವನ್ನು ಜಮಾಯಿಸಿದ್ದು ವಿನಹಾ ಬೆಂಗಳೂರಲ್ಲಿಯೂ ಮತು ದಂಡಿನಲ್ಲಿಯೂ ಎರಡು ಸಮೂಹ ಶೇರಿ ಇನ್ನು ಹಣ ಜಮಾಯಿಸಿ ವೈತ್ಯಾಸವಾದ ಯೇರ್ಪಾಡುಗಳಿಂದ ಕ್ಷಾಮದಿಂದಾ ಸಂಕಟೆ ಪಡುವ ಜನಗಳಿಗೆ ಧರ್ಮವನ್ನು ಮಾಡುತ್ತಲಿದ್ದಾರೆ. ಈ ಜನಗಳು ಸೆಂಟ್ರಲ್ ಕಮಟೀಯವರೊಂದಿಗೆ ಶೇರತಕ್ಕಂಥಾದ್ದು ನನಿಗೆ ಚನ್ನಾಗಿ ತೋರುತ್ತೆ. ಸದರಹು ಸೆಂಟ್ರಲ್ ಕಮಟಿಯು ಈ ದಿವಸವೇ ಕ್ರಮವಾಗಿ ಯೇರ್ಪಾಡು ಮಾಡಲ್ಪಡುವದೆಂದು ನಂಬುತ್ತೇನೆ.

19. ಜನಗಳ ಕ್ಷೇಮಚಿಂತಕರಾದ ಜ್ಞಾನಿಗಳಾದ ಮತ್ತು ಉದಾರ ಗುಣವುಳ್ಳ ಬೆಂಗಳೂರಲ್ಲಿ ಇರತಕ್ಕ ದೊಡ್ಡ ಮನುಷ್ಯರ ಸಮೂಹವು ಹಿಂದೆ ಅನೇಕಾವರ್ತಿ ಕ್ಷಾಮಕಾಲಗಳಲ್ಲಿ ಅಂದರೆ ತಮ್ಮ ದಯೆಯನ್ನು ಹೊಂದಿದಂತಾ ಅನ್ಯದೇಶಸ್ತರಾದ ಲಾಂಕೆಷಯರ್ ದೇಶದಲ್ಲಿ ಜನಗಳು ತೊಂದರೆ ಪಡುತ್ತಿರುವಾಗಲು ಮತ್ತು ಮಚ್ಛಲೀ ಬಂದರ್‌ನಲ್ಲಿ ಸಮುದ್ರ ವೃಕ್ಕಿ ಜನಗಳು ನಷ್ಟಪಟ್ಟು ತೊಂದರೆ ಪಡುತ್ತಿರುವಾಗಲು ಮತ್ತು ಬಂಗಾಳಾ ದೇಶದಲ್ಲಿ ಕ್ಷಾಮ ಬಂದು ಅನೇಕ ಜನಗಳು ಮೃತಪಟ್ಟು ಸಂಕಟ ಪಡುತ್ತಿರುವಾಗಲು ಅಥವಾ ತಮ್ಮ ಸ್ವದೇಶೀಯ್ಯರಾಗಿ ಮತ್ತು ತಮ್ಮ ಪಟ್ಲವಾಸಿಗಳಾಗಿ ಈ ಮೈಸೂರು ಶೀಮೆಯಲ್ಲಿ ಸ್ರ 1866ನೇ ಇಸವಿಯಲ್ಲಿ ಕ್ಷಾಮ ಪ್ರಾಪ್ತವಾಗಿದ್ದ ಕಾಲದಲ್ಲಿ ಈ ಜನಗಳು ಸಂಕಟವನ್ನು ಅನುಭವಿಸುತ್ತಿರುವಾಗ ತಮ್ಮ ಧರ್ಮ್ಸ ಸಹಾಯವನ್ನು ಕೋರಿದ್ದರ ಮೇಲೆ ದ್ರವ್ಯ ಮೊತ್ತಾಶಿ ಮಾಡಿದ ವುದಾರವನ್ನು ನೋಡಿ ಈಗ ತದ್ವತ್ತಾಗಿ ಈ ಕ್ಷಾಮಕಾಲದಲ್ಲಿ ದಿನಸಿಗಳ ಕ್ರಯ ಬಹಳ ಜಡಾವಾಗಿಯು ಮತ್ತು ದೊರಯದೇನೂ ಸಂಕಟ ಪಡುವ ಜನಗಳಿಗೆ ಧಾರಾಳವಾಗಿ ಸರಿಯಾದ ಧರ್ಮ ಮಾಡುವದರಲ್ಲಿ ಹಿಮ್ಮೆಟ್ಟ್ಯಾರೆಂದು ನಾನು ಸ್ವಲ್ಪವಾದರೂ ಸಂದೇಹ ಪಟ್ಟದ್ದೇ ಆದರೆ ನಾನು ತಮ್ಮಗಳಿಗೆ ಸರಿಯಾದ ಮರಿಯಾದೆ ಮಾಡಲಿಲ್ಲವೆಂದು ನಿಶ್ಚಯವಾಗಿ ನಂಬುತ್ತೇನೆ.

20. ನಮ್ಮ ಅನುಕೂಲ ಮತ್ತು ಸಮಯಗಳನ್ನ ಅನುಸರಿಸಿ ಇಂಥಾ ಕಷ್ಟಕಾಲದಲ್ಲಿ ಸಹಾಯ ಮಾಡುವಂಥಾ ವುದಾರತ್ವ ವುಂಟಾಗಿರುವದು ಯಲ್ಲರಿಗೂ ಸಮನಾದ ಕೆಲಸವಾಗಿಧೆ. ಸದರೀ ಕೆಲಸವು ಇತರ ನೇಟೀವ್ ಸಮೂಹಗಳಿಗಿಂತ ವಿಶೇಷವಾಗಿ ಧಾನ್ಯದಲ್ಲಿ ವ್ಯಾಪಾರ ಮಾಡುವಂಥಾವರಗಳ ಕೆಲಸವಾಗಿಧೆ. ಅವರು ಬೆಂಗಳೂರಿಗೆ ಕಳದ ಕೆಲವು ವಾರಗಳಿಂದಾ ಪ್ರತಿದಿನವು ರೈಲ್ ಮೂಲಕ (800) ರಿಂದಾ (1,000) ಟನ್ ತೂಕ ವುಳ್ಳಷ್ಟು ಧಾನ್ಯಗಳು ಮತ್ತು ಇತರ ದಿನಸುಗಳನ್ನು ಬೆಂಗಳೂರಿಗೆ ತರಸುವದರಲ್ಲಿ ಸಾಹಸಕರವಾದ್ದಾಗಿ ಅಲ್ಲದೆ ಸ್ವದೇಶಾಭಿಮಾನವು ವ್ಯಕ್ತಪಡುವದಿಲ್ಲಾ ಹೆಚ್ಚು ಧಾರಣೆಗಳಿಂದ ಸಂದೇಹವಿಲ್ಲದೆ ಬಹಳ ನಫೆಯನ್ನು ಹೊಂದಿ ಇರುತ್ತಾರೆ.

21. ಕಷ್ಟನಿವಾರಣೆಗೆ ಸಹಾಯ ಮಾಡಬೇಕೆಂದು ಈ ಕೆಳಗೆ ಹೇಳುವ ಮೊದಲನೆಯ ನಿರ್ಣಯವನ್ನ ತಿಳಿಶಿ ನನ್ನ ಪ್ರಸಂಗವನ್ನು ಮುಕ್ತಾಯ ಮಾಡುತ್ತೇನೆ. ಅದು ಯಾವದಂದರೆ,—ಈಗ ವಿಸ್ತರಿಶಿ ಯಿರುವ ಮತ್ತು ಮುಂದೆ ಪ್ರಾಪ್ತವಾಗುವಂಥಾ ಕಷ್ಟನಿವಾರಣೆಗೋಸ್ಕರ ಸಹಾಯ ಮಾಡಬೇಕೆಂದು ಕೂಡ್ಲೆಯೇ ಜನಗಳನ್ನ ಬೇಡಿಕೊಳ್ಳುವದು.

22. ಸ್ರ 1866ನೇ ಇಸವಿಯ ಕ್ಷಾಮಕಾಲದಲ್ಲಿ ಗವರ್ನಮೆಂಟಿನವರ ಷಾಂಗರ್ಷ ಪಡದು ಮಾಮೂಲಾಗಿರುವ ಪ್ರಕಾರ ಈಗಲೂ ಜನಗಳಿಂದ ಶೇರಿಸಲ್ಪಡುವ ಚಂದಾ ಹಣಕ್ಕೆ ಸರಿಯಾದ ಮೊತ್ತವನ್ನು ಗವರ್ನಮೆಂಟ್ ಖಜಾನೆಯಿಂದ ಕೊಡಬೇಕೆಂಬ ನನ್ನ ಇಷ್ಟವನ್ನು ನಾನು ಕೂತುಕೊಳ್ಳುವದಕ್ಕಿಂತ ಮುಂಚೆಯೇ ತಿಳಿಸುತ್ತೇನೆ.

(Translated by B. Ramaswami, Residency Sheristedar, Chief Commissioner's Office.)

Mysore Government Press, Bangalore—1876.

492

ಮೈಸೂರ ಗೆಜೆಟ್.

ನಂ. 46 ಸರ್ಕಾರದಿಂದ ಪ್ರಾಯಿಸ್ಟ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ನವಂಬರ ತಾ॥ 18, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	289—296
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರಡರ ಕಂಟ್ರೋಲರು, ಪಬ್ಲಿಕ್ ವರಕ್ಸ್ ಆಫಿಸರಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. ..	545—559
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.—	

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

1ನೇ ಭಾಗ.

ನಂ. 259. ತಾರೀಖು 26ನೇ ಅಕ್ಟೋಬರ್ 1876.

ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್‌ಕಮ್ಮಿಷನರವರಿಂದ ಅಂಗೀಕರಿಸಲ್ಪಟ್ಟು ಮಂಜೂರಾಗಿರುವದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತವೆ.

$\frac{2}{26}$ ಜನರಲ್ ಪೆರೇಡ್ ಗ್ರೌಂಡ್ ಎಂಬ ಕವಾಯತ್ ದಿಣ್ಣೆಗೆ ಅಂಚಿನಲ್ಲಿ ಮಾತ್ರ ಯೇರ್ಪಟ್ಟಿರುವ ಕುದುರೇ ದಾರೀಯಲ್ಲಿ ಕುದುರೇಗಳನ್ನೂ ಸವಾರಿಗೆ ಯಾ ಬಂಡಿಗೆ ಪಳಗಿಸಲ್ಪಡಕೂಡದು. ಸದರೀ ಮಾರ್ಗದಲ್ಲಿ ಅತಿ ರಭಸವಾಗಿ ಸವಾರೀ ಮಾಡಕೂಡದು.

ಈ ಬೈಲಾ ನಿಬಂಧನೆಗೆ ತಪ್ಪುವಂತಾ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಹಾಗೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ನಡಿಸಲ್ಪಡತಕ್ಕ ಪ್ರತಿ ತಪ್ಪಿತಕ್ಕೂ, ಐದು ರೂಪಾಯಿಯ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

$\frac{3}{51}$ ಯಾವ ಮನೆಯಲ್ಲಿ ಉಬಾಲ್ ಜುಲಾಬಾಗಲಿ, ಸಿಡುಬಾಗಲಿ: ಕಾಣಿಸಿಕೊಳ್ಳುತ್ತದೋ ಆ ಮನೆಯ ಯಜಮಾನನು ಮ್ಯುನಿಸಿಪಲ್ ಕಮ್ಮಿಷನರ್ ಪ್ರೆಸೀಡೆಂಟರಿಗಾಗಲಿ, ಅತ್ಯಂತ ಸಮೀಪದಲ್ಲಿರುವ ಪೋಲೀಸ್ ಸ್ಟೇಷನಿಗಾಗಲಿ, ಜನಗಳ ಆರೋಗ್ಯದ ಬಗ್ಯೆ, ರೋಗವನ್ನು ಮಟ್ಟುಪಡಿಸುವಬಗ್ಯೆ, ತಕ್ಕ ಕ್ರಮಗಳನ್ನು ಏರ್ಪಡಿಸುವದಕ್ಕೋಸ್ಕರವೂ ಸದರೀ ಸಂಗತಿಯನ್ನು ಕುರಿತು ಕೂಡ್ಲೆ ರಿಪೋರ್ಟು ಮಾಡತಕ್ಕದ್ದೆಂದು ತಾಕೀದು ಮಾಡಲ್ಪಡುತ್ತಾರೆ.

ಈ ಬೈಲಾ ನಿಬಂಧನೆಯ ಷರತ್ತುಗಳನ್ನು ಜಾರೀಮಾಡುವದರೊಳಗೆ, ಕೆಲವು ಸಂಗತಿಗಳಲ್ಲಿ ರೋಗತಗಲಿದ ಮನುಷ್ಯನನ್ನು ಒಂದು ಆಸ್ಪತ್ರಿಗೆ ಒಯ್ಯುವದು ಜರೂರೆಂದು ಪ್ರಾಯಶಃ ಎಣಿಸಲ್ಪಡಬಹುದು, ಆದರೆ ಅಂತಾ ಮನೆಗಳೊಳಗೆ ರೋಗತಗಲಿದವರನ್ನು ಪ್ರತ್ಯೇಕಪಡಿಸುವದಕ್ಕೆ ತಕ್ಕಹಾಗೆ ಸ್ಥಳಾನುಕೂಲವಿದ್ದರೆ ಅಥವಾ ರೋಗಿಯನ್ನು ಪ್ರತ್ಯೇಕ ಖೋಲೀಯಲ್ಲಿಡುವದಕ್ಕೆ ಯುಕ್ತಗಳಾದ ಯೇರ್ಪಾಡುಗಳು ಮಾಡಬಹುದಾಗಿದ್ದರೆ ಅಂತಾ ಮನೆಗಳೊಳಗೆ ಸದರೀ ಕ್ರಮವು ಸುತರಾಂ ನಡಿಸಬೇಕಾದ್ದಿಲ್ಲವು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ ಮತ್ತು ಅಂತಾ ಉಲ್ಲಂಘನೆ ನಡಿಸಲ್ಪಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗಳ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ನಂ. 268. ತಾರೀಖು 2ನೇ ನವಂಬರ್ 1876.

ಹಾಲಿ ಕಾಲಸ್ಥಿತಿ ವಿದ್ಯಮಾನಗಳಿಂದ ಆವಶ್ಯಕವೆಂದು ತಿಳಿಯಬಂದ ಪ್ರಕಾರ ಜನಗಳಿಗೆ ಕಷ್ಟ ನಿವಾರಣಾರ್ಥವಾದ ಉಪಾಯವನ್ನಾಗಿ ಚೀಫ್ ಕಮ್ಮಿಷನ್ನರ್ ಸಾಹೇಬರವರು ಚಾಲತಿ ಇಸವಿಯ ಸರಕಾರ ತೆರಿಗೆಗಳ ವಿಷಯದಲ್ಲಿ ಇದರಡಿ ಬರುವ ತಿದ್ದುಪಾಡುಗಳನ್ನು ವಿಧಿಸಿರುತ್ತಾರೆ. ಸದರೀ ತಿದ್ದುಪಾಡುಗಳು ಡಿವಿಜನ್ ಕಮ್ಮಿಷನ್ನರ್‌ಗಳ ಹುಕ್ಕುಂ ಅನುಸರಿಸಿ ಡಿಸ್ಟ್ರಿಕ್ಟ್‌ಗಳ ಡಿಪ್ಯುಟಿ ಕಮ್ಮಿಷನ್ನರ್‌ಗಳಿಂದ ಜಾರೀಗೆ ತರಲ್ಪಡತಕ್ಕವು.

1. ಜಮೀನ್ ಕಂದಾಯದ ಕಿಸ್ತುಗಳು ಸಾಲ್‌ಗುದಸ್ತೆಯಂತೆ ನಾಲ್ಕು ಕಿಸ್ತುಗಳಿಗೆ ಬದಲಾಗಿ ಏಳು ಕಿಸ್ತುಗಳಾಗಿ ಮಾಡಲ್ಪಟ್ಟು ಈ ಕೆಳಗೆ ಕಾಣುವ ಪ್ರಕಾರ ಗೊತ್ತು ಮಾಡಲ್ಪಡತಕ್ಕವು.

ಡಿಸೆಂಬರು ಆಣೆಗಳು 2—ಜನವರಿ 3—ಫೆಬ್ರುವರಿ 3—ಮಾರ್ಚಿ 2—ಏಪ್ರೆಲ್ 2—ಮೇ 2—ಜೂನ್ 2

ವಿನಯಿತಿ—ಈ ರಿಯಾಯತಿ ನಗರ ವ ಅಷ್ಟಗ್ರಾಮ ಡಿವಿಜನ್‌ಗಳ ಮಲ್ನಾಡು ತಾಲ್ಲೂಕುಗಳಿಗೆ ಲಗಾವಾಗಿರುವದಿಲ್ಲ.

2. ಜಮೀನ್ ಕಂದಾಯ ಮೊಹತರ್ಫಾ ವಗೈರೆಗಳ ದರೋಬಸ್ತು ಬಾಕಿಗಳ ಮೇಲೆ ರೂಪಾಯಿ ಒಂದಕ್ಕೆ ದಿನ ಒಂದಕ್ಕೆ ಅರ್ಧಕಾಸಿನಮೇರೆ ಬಡ್ಡಿ ಕಟ್ಟಲ್ಪಡತಕ್ಕ ಬಗ್ಯೆ ವಿಧಿಸುವ ಹುಕುಂ ಅಮಲ್ ಚಾಲತಿ ಇಸವಿಯಲ್ಲಿ ಮನ್ನಾ ಮಾಡಲ್ಪಟ್ಟಿದೆ.

3. ಈ ಬರದಿಂದ ಬಹಳವಾಗಿ ಯಾವ ತಾಲ್ಲೂಕುಗಳು ಯಾ ತಾಲ್ಲೂಕುಗಳ ಪೈಕಿ ಯಾವ ಪ್ರದೇಶಗಳು ಬಾಧಿಸಲ್ಪಟ್ಟಿರತ್ತೋ ಅಂತಾ ತಾಲ್ಲೂಕುಗಳ ಯಾ ತಾಲ್ಲೂಕುಗಳ ಪ್ರದೇಶಗಳೊಳಗೆ ಈ ಸಾಲಿನಲ್ಲಿ ಹುಲ್ಲು ಬನ್ನಿ ಹರಾಜು ನಡಿಸಲ್ಪಡುವದಿಲ್ಲ ಕಮ್ಮಿಷನ್ನರ್‌ಗಳು ತಮ್ಮ ತಮ್ಮ ಡಿವಿಜನ್‌ಗಳಲ್ಲಿ ಈ ಹುಕ್ಕುಂ ಅನುಸರಿಸಿ, ಹುಲ್ಲು ಬನ್ನಿ ಹರಾಜಿನಿಂದ ಸಂಪೂರ್ಣವಾಗಿ ವಿನಾಯಿಸಲ್ಪಡುವ ಜಮೀನುಗಳ ವಿಸ್ತೀರ್ಣಗಳನ್ನು ಪ್ರಸಿದ್ಧಪಡಿಸತಕ್ಕದ್ದು.

ನಂ. 274. ತಾರೀಖು 4ನೇ ನವಂಬರ್ 1876.

ಮೈಸೂರು ಸೀಮೆಯಲ್ಲಿ ಸರ್ಕಾರ್ ರಸ್ತೆಗಳು, ಸೇತುವೆಗಳು, ಇವುಗಳ ಮೇಲೆ ಸುಂಕ ವಸೂಲ್ ಮಾಡುವಬಗ್ಯೆ ಈ ಕೆಳಗೆಬರುವ ರೂಲ್ಸ್ ಇಂಡ್ಯ ಗವರ್ನಮೆಂಟಿನವರ ಅಪ್ಪಣೆಯಪ್ರಕಾರ ಇದರಡಿ ಬರುವ ನಿಬಂಧನೆಗಳಿಗೆ ಒಳಪಟ್ಟು ಅನುಸರಿಸಲ್ಪಡುವದು.

1. ಈ ರೂಲ್ಸಿಗೆ ಸೇರಿಸೋಣಾದ ಪಟ್ಟಿಯಲ್ಲಿ ಅಡಗಿರುವ ದರಗಳು, ಹಾಲೀ ನಡೆಯುತ್ತಿರುವ ದರೋಬಸ್ತು ಗುತ್ತಾಗಳ ವಾಯಿದೆ ಪೂರೈಸಿದ ಬಳಿಕ ಘಾಟೀ ರಸ್ತೆಗಳು, ಸೇತುವೆಗಳು, ಇವುಗಳ ಮೇಲೆ ವಸೂಲಾಗತಕ್ಕ ಸುಂಕಗಳ ವಿಷಯದಲ್ಲಿ ಜಾರೀಗೆ ಬರತಕ್ಕದ್ದು.

2. 11ನೇ ರೂಲ್ ನಿಬಂಧನೆಗಳನ್ನು ಅನುಸರಿಸಿ 24 ಘಂಟೆಗಳ ಯಾವ ದಿನದಲ್ಲಾಗಲಿ, ಒಂದೇ ಜಾನವರ್ ಯಾ ಬಂಡಿ ವಗೈರೇಮೇಲೆ ಒಂದು ತೀರ್ವೆಗಿಂತ ಹೆಚ್ಚಾಗಿ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

ಮೈಸೂರು ಶೀಮೆಯಲ್ಲಿರುವ ಸರ್ಕಾರೀ ರಸ್ತೆಗಳು ವ ಶೇತುವೆಗಳು ಇವುಗಳಮೇಲೆ ಸುಂಕ ವಸೂಲ್ ಮಾಡುವ ಬಗ್ಯೆ ಮಾಡಲ್ಪಟ್ಟ ನಿಬಂಧನೆಗಳು.

ಮೈಸೂರು ಶೀಮೆಯಲ್ಲಿರುವ ರಸ್ತೆಗಳು, ಶೇತುವೆಗಳು, ಇವುಗಳಮೇಲೆ ಸುಂಕ ವಸೂಲ್ ಮಾಡತಕ್ಕದ್ದನ್ನು ವಿಧಿಸುವದು ಅವಶ್ಯಕವಾಗಿರುವದರಿಂದ ಸದರೀ ಉದ್ದೇಶದೊಡನೆ ಈ ಕೆಳಗೆ ಬರುವ ನಿಬಂಧನೆಗಳು, ಮಂತ್ರಾಲೋಚಕ ಸಭೆಯೊಳಗಣ, ಘನ ವನ್ನು ಹೊಂದಿದ ವೈಸರಾಯಿ ವ ಗವರ್ನರ್ ಜನರಲ್ಲವರಿಂದ ಮಂಜೂರ್ಮಾಡಲ್ಪಟ್ಟಿವೆ.

1. ಯಾವ ರಸ್ತೆಗಳಮೇಲೆ, ಮತ್ತು ಯಾವ ಸ್ಥಳಗಳಲ್ಲಿ ಸುಂಕಗಳು ತೆಗದುಕ್ಕೊಳ್ಳತಕ್ಕದ್ದೋ ಅದನ್ನು ಮೈಸೂರು ಚೀಫ್ ಕಮ್ಮಿಷನರವರು ಆಗಿಂದಾಗ್ಯೆ ತಿಳಿಸಬಹುದು, ಮತ್ತು ಯಾವ ರಸ್ತೆಗಳಮೇಲೆ ಅಂತಾ ಸುಂಕಗಳು ವಸೂಲಾಗತಕ್ಕದ್ದೆಂದು ತಿಳಿಸ ಲ್ಪಟ್ಟಿರುತ್ತೋ ಆ ರಸ್ತೆಗಳಮೇಲೆ ಸುಂಕ ವಸೂಲಿಯನ್ನು ಮೌಕೂಪ್ ಮಾಡಬಹುದು, ಮತ್ತು ಈ ಸೆಕ್ಷನಿನ ನಿಬಂಧನೆಯ ನ್ನು ಜಾರೀ ಮಾಡುವಬಗ್ಯೆ ಯಾವ ಸುಂಕದ ಕಟ್ಟೆಯನ್ನಾಗಲಿ ಕಟ್ಟಿಸಲಿಕ್ಕೆ ಯಾ ತೆಗದು ಹಾಕಲಿಕ್ಕೆ ಅಪ್ಪಣೆ ಕೊಡಬಹುದು.

2. ಮೈಸೂರು ಸರ್ಕಾರದ ಖರ್ಚಿನಿಂದ ಕಟ್ಟಲ್ಪಟ್ಟಿರುವ ಯಾ ಯಿನ್ನುಮೇಲೆ ಕಟ್ಟಲ್ಪಡುವ ಮೈಸೂರು ಶೀಮೆಯೊಳಗಣ ಯಾವದಾದರೂ ರಸ್ತೆ ಯಾ ಶೇತುವೆ ಯಿಂತಾದ್ದರಮೇಲೆ ಇದಕ್ಕೆ ಸೇರಿಸಲ್ಪಟ್ಟಿರುವ ಷೆಡ್ಯೂಲ್‌ನಲ್ಲಿ ಕಂಡ ದರಕ್ಕೆ ಮೀರದ ದರ ವುಳ್ಳ ಸುಂಕವನ್ನು ಮೈಸೂರು ಚೀಪ್ ಕಮ್ಮಿಷನರವರು ವಸೂಲ್ ಮಾಡಿಸಬಹುದು.

3. ಅಂತಾ ಯಾವ ಸುಂಕ ಯಾ ಮೊಬಲಗಾಗಲಿ, ಕೊಡಲ್ಪಡದೇ ಇದ್ದ ಪಕ್ಷಕ್ಕೆ ಅದನ್ನು ವಸೂಲ್ ಮಾಡುವಬಗ್ಯೆ ನೊಕ ರರಾದ ಆಫಿಸರ್‌ಗಳು, ಸುಂಕ ತೆರತಕ್ಕ ಯಾವದಾದರೂ ಬಂಡಿಗಳು, ಯಾ ಜಾನವರ್‌ಗಳು, ಅಥವಾ ಅವುಗಳ ಬೋಜೇ ಪೈಕಿ ಸುಂಕ ದ ಮೊಬಲಗಿಗೆ ತಕ್ಕಷ್ಟು ತಡದು ಹಿಡಿಯತಕ್ಕದ್ದು.

4. ಇದರಮೇಲಣ ಸೆಕ್ಷನಲ್ಲಿ ಕಂಡ ಮೇರೆ ಸ್ವತ್ತು ಹಿಡಿಯಲ್ಪಟ್ಟ ಬಳಿಕ 24 ಘಂಟೆಗಳ ಹೊತ್ತು ಯಾವ ಸುಂಕವಾ ಗಲಿ ತೀರಿಸಲ್ಪಡದೆಯಿದ್ದರೆ, ಭಾನುವಾರ ಅಥವಾ ಸೇರಿದಹಾಗೆ ಬರುವ ಯಾವದಾದರೂ ರಜಾದಿನ ಇಂತಾದ್ದು ಶಿವಾಯಿ ಇಪ್ಪತ್ತು ನಾಲ್ಕು ಘಂಟೆಯ ಕಾಲ ನೋಟಿಸ್ ಕೊಟ್ಟಮೇಲೆ, ಸುಂಕದ ಮೊಬಲಗ್ ಸಲ್ಲುವಬಗ್ಯೆ, ಹಾಗೆ ಸುಂಕ ವಸೂಲಾಗದೆ ಯಿರುವಣ, ಸ್ವತ್ತು ತಡೆಯುವಣ, ವ ಹರಾಜ್ ಮಾಡುವಣ, ಇವುಗಳಿಗಾಗಿ ಹಿಡಿಯುವ ಖರ್ಚಿಗಾಗಿಯೂ ಸುಂಕದ ವಸೂಲೀ ಕೆಲಸದ ಮೇ ಲ್ವಿಚಾರಣೆಗೋಸ್ಕರ ನಿಯಮಿಸಲ್ಪಟ್ಟ ಆಫಿಸರನ ಅಪ್ಪಣೆಯಿಂದ ಸದರೀ ಸ್ವತ್ತು ಹರಾಜ್ ಮಾಡಲ್ಪಡತಕ್ಕದ್ದು. ಸದರೀಆಫಿಸರ್ ಅಂತಾ ಮೊಬಲಗ್‌ನಲ್ಲಿ ಬಾಕೀ ಯೇನಾದರೂ ಉಳಿದಿದ್ದರೆ ಅದನ್ನು ಮಾಲ್‌ದಾರ ಕೇಳಿದಲ್ಲಿ ವಾಪಸ್ ಕೊಡಿಸಿ ಬಿಡತಕ್ಕದ್ದು. ಪರಂತು ಹರಾಜ್ ಷುರುವಾಗುವದಕ್ಕೆ ಮುಂದೆ ಯಾವಾಗಲಾಗಲಿ ಆದ ದರೋಬಸ್ತು ಖರ್ಚು ಮತ್ತು ಸಲ್ಲತಕ್ಕ ಸುಂಕದ ದುಗ ಣೀ ಮೊಬಲಗ್ ಸಹಿತ ಕೊಡುವದಾಗಿ ಖಾಯಿಷ್ ಮಾಡಿದರೆ ಕೂಡ್ಲೆ, ತಡದಿರುವ ಸ್ವತ್ತನ್ನು ಸ್ವಂತಗಾರಗೆ ಒಪ್ಪಿಸಿಬಿಡತಕ್ಕದ್ದು.

5. ಫಾಜುಗಳು, ಮಿಲಿಟೇರಿಸಾಮಾನುಗಳು, ಯಾ ಫಾಜಿನ ಆಯುಧಗಳು ವಗೈರೇ ಪದಾರ್ಥಗಳು ಯಾ ಕೆಲಸದ ಮೇಲೆ ಹೋಗುವ ಪೋಲೀಸ್ ಆಫಿಸರ್‌ಗಳು, ಅಥವಾ ಅವರ ವಶದಲ್ಲಿರುವ ಯಾವನಾದರೂ ಮನುಷ್ಯ ಯಾ ಸ್ವತ್ತು, ಯಾವ ಸ್ವತ್ತಾಗಲಿ ಪ್ರಮಾಣಿಕವಾಗಿ ಗವರ್ನಮೆಂಟಿನವರಿಗೆ ಸಂಬಂಧಿಸಿದ್ದಾಗಿ, ಅದು ಯಾವ ಇಲಾಖೆಗೆ ಸೇರಿದ್ದೋ ಆ ಇಲಾಖೆಯ ಮೊಖ್ತೇಸರ ರಿಂದ ಒಂದು ಸೆರ್ಟಿಫಿಕೇಟಿಹಾಜರ್ ಮಾಡುವದ್ದರಿಂದ, ಏರ್ಪಟ್ಟ ಯಾವದಾದರೂ ಸ್ವತ್ತು, ಇವುಗಳು ಸಾಗಿಸುವ ಬಗ್ಯೆ ಸುಂಕ ವಸೂಲ್ ಮಾಡಲ್ಪಡಕೂಡದು.

6. ಸುಂಕದ ವಸೂಲೀಯು, ಚೀಪ್‌ಕಮ್ಮಿಷನರವರಿಂದ ನೊಕರರ್ ಮಾಡಲ್ಪಡುವ ಜನಗಳ ವಿಚಾರಣೆಗೆ ಕೊಡಲ್ಪಡ ಬಹುದು, ಅಥವಾ ಗವರ್ನಮೆಂಟ್ ಆಫಿಸರ್‌ಗಳಿಂದ ಮಾಡಲ್ಪಡಬಹುದು, ಮತ್ತು ಈ ಬಗ್ಯೆ ನೊಕರರ್ ಆಗಿರುವ ದರೋಬಸ್ತು ಜ ನಗಳೂ ಜಮೀನ್ ಕಂದಾಯ ವಸೂಲೀ ವಿಷಯದಲ್ಲಿ ನೇಮಿಸಲ್ಪಟ್ಟದ್ದರೆ ಯಾವ ಜವಾಬ್‌ದಾರೀಗೆ ಗುರಿಯಾಗಿರುವರೋ ಅದೇ ಜವಾ ಬ್‌ದಾರಗೆ ಗುರಿಯಾಗತಕ್ಕದ್ದು.

ದರೋಬಸ್ತು ಸುಂಕದಕಟ್ಟೆಗಳಲ್ಲಿ ಯಾಗಲಿ ಆ ಪೈಕಿ ಯಾವದರಲ್ಲಾಗಲಿ ಸುಂಕ ವಸೂಲಿ ಯ ಹಕ್ಕುದಾರೀಯನ್ನು ತಮಗೆ ಯುಕ್ತತೋರುವ ಷರತ್ತಿನೀ ಹರಾಜ್ ಮೂಲಕ ವಿಕ್ರಯಿಸುವಂತೆ ಸಹ ಚೀಪ್‌ಕಮ್ಮಿಷನರವರು ಹುಕ್ಕುಂ ಮಾಡ ಬಹುದು.

7. ಸುಂಕ ವಸೂಲೀದಾರನಾಗಿ ಕ್ರಮ ಪ್ರಕಾರ ನೊಕರರಾಗದೆ, ಯಾವ ಪಬ್ಲಿಕ್ ರಸ್ತೆಯಲ್ಲಾಗಲಿ ಸೇತುವೆಯ ಮೇಲಾಗಲೀ ಯಾವ ಸುಂಕವನ್ನಾದರೂ ಹಾಕುವ ಯಾ ಕೊಡಹೇಳಿ ಕೇಳುವ ಅಥವಾ ಹಾಗೆ ಕ್ರಮುಪ್ರಕಾರ ನೇಮಿಸಲ್ಪಟ್ಟ ಷೆಡ್ಯೂಲ್‌ನಲ್ಲಿ ವಿವರಿಸೋಣಾದ ದರಗಳಿಗಿಂತ ಜಾಸ್ತಿಯಾಗಿ ಕೊಡಹೇಳಿ ಕೇಳುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ 200 ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಯಾ 6 ಕ್ಯಾಲೆಂಡರ್ ತಿಂಗಳಿಗೆ ಮೀರದ ಕಾಲದಪರ್ಯಂತ ಸಾಧಾರಣ ಯಾ ಕಠಿಣ ಕೈದಿಗೆ ಗುರಿಯಾಗತಕ್ಕದ್ದು.

8. ಈ ರೂಲ್ಸ್ ಅನುಸರಿಸಿ ಯಾವ ಸುಂಕದ ಬಾಗಿಲಲ್ಲಿ ಯಾ ಸ್ಥಳದಲ್ಲಿ ವಸೂಲಾಗತಕ್ಕದ್ದೆಂದು ನೇಮಿಸಲ್ಪಟ್ಟ ಸುಂಕಗಳ ಒಂದು ಪಟ್ಟಿಯು ಸುಂಕ ಕೊಡುವದಕ್ಕೆ ನಿರಾಕರಿಸುವ ಬಗ್ಯೆ ವಿಧಿಸುವ ಜುರ್ಮಾನೆಗಳ ಪಟ್ಟಿ ಸಹಿತವಾಗಿ ಇಂಗ್ಲಿಷಿನಲ್ಲಿಯೂ ಸ್ಥಳದ ಭಾಷೆಯೊಳಗೂ ಸ್ಪಷ್ಟವಾಗಿ ಬರೆಯಿಸಿ ಅಂತಾ ಬಾಗಿಲು ಯಾ ಸ್ಟೇಷನ್ ಬಳಿ ಪ್ರಸಿದ್ಧವಾದ ಸ್ಥಳದಲ್ಲಿ ಚಿಕಟಾಯಿಸತಕ್ಕದ್ದು.

ಅಂತಾ ಪಟ್ಟಿಯನ್ನು ಕ್ರಮವಾದ ಮತ್ತು ಚನ್ನಾಗಿ ತಿಳಿಯುವಂತಾ ಸ್ಥಿತಿಯಲ್ಲಿ ಇಡುವದು ಅಂತಾ ಬಾಗಿಲ ಯಾ ಸ್ಥಳದ ಚಾರ್ಜಿನಲ್ಲಿರುವ ಮನುಷ್ಯನ ಕೆಲಸವಾಗಿ ಇರತಕ್ಕದ್ದು.

9. ಈ ಸುಂಕದಿಂದ ಹುಟ್ಟುವಹೇಯಾದ್ದರಲ್ಲಿ ಖರ್ಚು ಜಾತಾ ಉಳಿದ ಮೊಬಲಗು ಈ ಮೈಸೂರು ಸೀಮೆಯೊಳಗಿರುವ ರಸ್ತೆಗಳು, ಸೇತುವೆಗಳು, ಇವುಗಳ ಕಟ್ಟುವಣ, ರಿಪೇರಿ, ಸಂರಕ್ಷಣೆ, ಈ ಬಗ್ಯೇನೇ ವಿನಿಯೋಗಿಸಲ್ಪಡತಕ್ಕದ್ದು.

10. ಯಾವ ಸುಂಕದ ಕಟ್ಟೆಯನ್ನಾಗಲಿ, ಅದಕ್ಕೆ ಕ್ಲುಪ್ತವಾದ ಶೀರ್ವೆ ತೆರದೆ ಮೋಸದಿಂದ ಯಾ ಬಲಾತ್ಕಾರದಿಂದ ದಾಟಿ ಹೋಗುವ ಅಥವಾ, ಸುಂಕದ ವಸೂಲೀದಾರನು ತನ್ನ ಕೆಲಸವನ್ನು ನಿರ್ವಹಿಸುವಲ್ಲಿ ಅವನನ್ನು ಹರಕತ್ತು ಮಾಡುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ, ಮೂರು ತಿಂಗಳಿಗೆ ಮೀರದ ಒಂದು ವಾಯಿದೇ ಪರ್ಯಂತ ಸಾಧಾರಣ ಯಾ ಕಠಿಣ ಕೈದಿಗಾಗಲಿ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೇಗಾಗಲಿ, ಗುರಿಯಾಗತಕ್ಕದ್ದು.

11. ಮೈಸೂರು ಸೀಮೆಯೊಳಗೆ ಸುಂಕ ಹಾಕುವದನ್ನು ಕ್ರಮಪಡಿಸಲಿಕ್ಕೆ ತಮಗೆ ಜರೂರೆಂದು ತೋರುವ ಹೆಚ್ಚಿಗೆ ಹುಕುಮನ್ನು ಆಗಿಂದಾಗ್ಯೆ ಕೊಡುವದಕ್ಕೆ ಚೀಫ್‌ಕಮಿಷನರವರು ಅಧಿಕಾರಕೊಡಲ್ಪಟ್ಟಿರುತ್ತಾರೆ. ಪರಂತು ಅಂತಾ ಹುಕುಂಗಳು ಈ ರೂಲ್ಸಿನ ನಿಬಂಧನೆಗಳಿಗೆ ವಿರುದ್ಧಗಳಾಗಿರತಕ್ಕದ್ದಲ್ಲವು.

ಷೆಡ್ಯೂಲ್.

	ರೂ.	ಆ.	ಪೈ.
ನಾಲ್ಕು ಚಕ್ರಗಳ ಪ್ರತಿ ಬಂಡಿಗೂ	2	0	0
ಎರಡು ಚಕ್ರಗಳ ಪ್ರತಿ ಬಂಡಿಗೂ	1	0	0
ಪ್ರತಿ ಎಕ್ಕಾ ವಿಗೂ	0	4	0
ಕವರ್ಗಳುಳ್ಳ ಹ್ಯಾಕರಿಯೆಂಬ ಪ್ರತಿ ಬಂಡಿಗೂ	0	2	0
ಎಂಟೆತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು ಕತ್ತೆಗಳು ಯಾ ಹೇಸರ ಕತ್ತೆಗಳು ಕಟ್ಟಿದ ಕವರ್ ಇಲ್ಲದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರಿ ಇವುಗಳಿಗೆ ಭರ್ತಿಯಾಗಿದ್ದರೆ ..	1	8	0
ಡಿಟ್ಟೋ—ಭರ್ತಿಯಾಗದೇ ಇದ್ದರೆ	0	8	0
ಆರು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು ಯಾ ಹೇಸರ ಕತ್ತೆಗಳು, ಕಟ್ಟಿದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರಿ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ	0	12	0
ಡಿಟ್ಟೋ—ಭರ್ತಿಯಿಲ್ಲದೆ ಇದ್ದರೆ	0	6	0
ನಾಲ್ಕು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಯಾ ಹೇಸರ ಕತ್ತೆಗಳು ಇವುಗಳು ಕಟ್ಟಿದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರೀ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ ..	0	8	0
ಡಿಟ್ಟೋ—ಭರ್ತಿಯಾಗದೆ ಇದ್ದರೆ	0	4	0
ಎರಡು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರ ಕತ್ತೆಗಳು ಕಟ್ಟಿದ ಚಕಡಾಬಂಡಿ ಮತ್ತು ಹ್ಯಾಕರೀ ಬಂಡಿ ಭರ್ತಿಯಾಗಿದ್ದರೆ	0	4	0
ಡಿಟ್ಟೋ ಭರ್ತಿಯಾಗದೇ ಇದ್ದರೆ	0	2	0
ಕೋಣಗಳು ಯಾ ಎತ್ತುಗಳು ಹೊರೇಹಾಕಿ ಇರತಕ್ಕವು ಪ್ರತಿ ರಾಸಿಗೂ	0	1	0

	ರೂ.	ಆ.	ಪೈ.
ಡಿಟೋ—ಹೊರೇ ಹಾಕದೆ ಇದ್ದರೆ	0	0	6
ಪ್ರತಿ ಆನೆಗೂ	1	8	0
ಪ್ರತಿ ಒಂಟೆಗೂ ಹೊರೇಹಾಕಿದ್ದರೆ	0	8	0
ಡಿಟೋ—ಹೊರೇ ಹಾಕದೇಇದ್ದರೆ	0	4	0
ಪ್ರತಿ ಕುದುರೆಗೂ, ಹೊರೇ ಹಾಕಿದ್ದರೆ ಯಾಸವಾರೀಯಾಗಿದ್ದರೆ	0	1	6
ಡಿಟೋ—ಹೊರೇ ಹಾಕದೆ ಯಾ ಖಾಲೀ ತೆಗದುಕ್ಕೊಂಡು ಹೋಗುವದಕ್ಕೆ ..	0	0	9
ಪ್ರತಿ ತಟ್ಟು ಯಾ ಹೇಸರ ಕತ್ತೆ ಹೊರೆ ಹಾಕಿದ್ದರೆ ಯಾ ಸವಾರೀಯಾಗಿದ್ದರೆ ..	0	0	9
ಡಿಟೋ—ಹೊರೆಹಾಕದೆ ಯಾ ಖಾಲೀ ತೆಗದುಕೊಂಡು ಹೋಗುತ್ತಿದ್ದರೆ ..	0	0	6
ಪ್ರತಿ ಕತ್ತೆಗೆ ಹೊರೆಹಾಕಿದ್ದರೆ ಯಾ ಸವಾರೀಯಾಗಿದ್ದರೆ	0	0	6
ಡಿಟೋ—ಹೊರೆಹಾಕದೆ ಸುಮ್ಮನೆ ತೆಗದುಕ್ಕೊಂಡು ಹೋಗುತ್ತಿದ್ದರೆ	0	0	3
ಪ್ರತಿ ಕುರಿ ಯಾ ಮೇಕೆ, ಯಾ ಹಂದಿಗೆ	0	0	1
ಪ್ರತಿ ಪಾಲಖೀ, ಡೋಲಿ, ತೊಟ್ಲು, ಯಾ ಟಾಂಜಾನ್ ಇಂತಾ ಎಂಟು ಮಂದಿ ಬೋಯಿಗಳುಳ್ಳವಕ್ಕೆ ..	1	0	0
ಡಿಟೋ—6 ಮಂದಿ ಬೋಯಿಗಳುಳ್ಳದ್ದಕ್ಕೆ	0	12	0
ಡಿಟೋ—4 ಮಂದಿ ಬೋಯಿಗಳುಳ್ಳದ್ದಕ್ಕೆ	0	8	0
ಡಿಟೋ—ಇಬ್ಬರು ಬೋಯಿಗಳುಳ್ಳದ್ದಕ್ಕೆ	0	4	0
ಪೈದಲ್ ಹೋಗುವ ಪ್ರತಿ ಮನುಷ್ಯನಿಗೂ	0	0	3

ಮು—.ವಿ—.ಯಾವ ಬಂಡಿಗೆ ಸುಂಕ ತೆಗದುಕೊಳ್ಳಲ್ಪಡುತ್ತೋ ಅದಕ್ಕೆ ಕಟ್ಟಿರುವ ಜಾನವರ್‌ಗಳಿಗೂ ಸುಂಕ ಹಾಕಲ್ಪಡಲಾರದು.

ನಂ. 275. ತಾರೀಖು 7ನೇ ನವಂಬರ್ 1876.

ಸರ್ 1876ನೇ ಅಕ್ಟೋಬರ್ 26ನೇ ಮರ್ಕೂಂ 260ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ ಚೀಫ್ ಕಮ್ಮಿಷನರವರು ಅಪ್ಪಣೇ ಕೊಡಿಸುವದೇನಂದರೆ,—ಮಾಹೇ ಯಾನಾ 10 ರೂಪಾಯಿಗಳು ಮತ್ತು ಅದಕ್ಕೆ ಕಮ್ಮಿಯಾಗಿ ತಲಬ್ ತೆಗದುಕೊಳ್ಳುವ ಕಾಯಂ ಲವಾಜಮೆಗೆ ಸೇರಿದ ಗವರ್ನಮೆಂಟ್ ನ ಕರರಿಗೆ ಮೂರು ತಿಂಗಳ ಪರ್ಯಂತ 1 ರೂಪಾಯಿ ಜಾಸ್ತೀ ಲೋನ್ ಕೊಡತಕ್ಕದ್ದೆಂದು ಆದ ಹುಕ್ಕುಂ, 15 ರೂಪಾಯಿ ಮತ್ತು ಅದಕ್ಕೆ ಕಡಮೆಯಾದ ತಲಬ್ ಉಳ್ಳ ದರೋಬಸ್ತು ಸರ್ಕಾರ್ ನೌಕರರಿಗೂ ವಿಸ್ತರಿಸಲ್ಪಟ್ಟಿದೆ. ಈ ಹುಕ್ಕುಂ ಈ ನವಂಬರ್ ಗುರ್ರೇ ಲಾಗಾಯಿತು ಜಾರೀಗೆ ಬಂದು ನವಂಬರ್ ತಿಂಗಳ ಬರಾವರ್ದಿನಲ್ಲಿ ದಾಖಲಾಗಿ ಬಟವಾಡೇಯಾಗತಕ್ಕದ್ದು.

ನಂ 283. ತಾರೀಖು 10ನೇ ನವಂಬರ್ 1876.

ನಾಗಮಂಗಲ ತಾಲ್ಲೂಕು ಅಮಲ್‌ದಾರ್ ವೆಂಕಟರಂಗೈಯ್ಯಂಗಾರ್ರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಗಾಯತು ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಾಗಮಂಗಲ ತಾಲ್ಲೂಕು ಶಿರಸ್ತೇದಾರ್ ವೆಂಕಟರಾಮೈಯನವರು ಐರ್ಜ ವೆಂಕಟರಂಗೈಯಂಗಾರ್ರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 284. ತಾರೀಖು 13ನೇ ನವಂಬರ್ 1876.

ಕೊಪ್ಪ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ತಿರುಮಲಾಚಾರ್ರು ತುಮಕೂರು ಡಿಸ್ಟ್ರಿಕ್ಟು ಕುಣಿಗಲ್ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್.

ಕುಣಿಗಲ್ ತಾಲ್ಲೂಕು ಹಂಗಾಮಿ ಚಾರ್ಜಿನಲ್ಲಿರುವ 3ನೇ ಗ್ರೇಡ್ ಅಮಲ್‌ದಾರ್ ಕೃಷ್ಣಯ್ಯಂಗಾರ್ರು ತಮ್ಮ ಉದ್ಯೋಗ ಅಂದರೆ ಕಡೂರು ಡಿಸ್ಟ್ರಿಕ್ಟು ಕೊಪ್ಪ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸಕ್ಕೆ ವಾಪಸು ಹೋಗತಕ್ಕದ್ದು.

ನಂ. 285. ತಾರೀಖು 13ನೇ ನವಂಬರ 1876.

ಹಾಸನ ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ ಮೆಸ್ತರ ವಿಜಯೀಂದ್ರ ರಾಯರು, ವಿಶೇಷವಾದ ಮತ್ತು ಹಂಗಾಮಿ ಯೇರ್ಪಾಡಿನೋ ಪ್ರಾದಿಯಲ್ಲಿ ಫರ್ಸ್ಟ್ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳೂ 1872ನೇ ಇಸವೀ 10ನೇ ಆಕ್ಟು ಕ್ರಿಮಿನಲ್ ಪ್ರೋಸೀಡ್ಯೂರ್‌ಕೋಡ್ 27 (a) ಸೆಕ್ಷನ್ 2 ವ 5ನೇ ಕ್ಲಾಜ್‌ಗಳಲ್ಲಿ ನಮೂದಿಸಲ್ಪಟ್ಟ ಜಾಸ್ತೀ ಅಧಿಕಾರಗಳೂ ಕೊಡಲ್ಪಟ್ಟಿರುತ್ತಾರೆ.

ನಂ. 286. ತಾರೀಖು 14ನೇ ನವಂಬರ 1876.

ಹಾಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ ಮೆಸ್ತರ ನರಸಿಂಹಯ್ಯಂಗಾರ್ರಿಗೆ ಹಂಗಾಮಿ ತರೀಕ್ 1872ನೇ ಇಸವಿಯ 10ನೇ ನಂಬರ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 27ನೇ (a) ಸೆಕ್ಷನ್ 2 ವ 5ನೇ ಕ್ಲಾಜ್‌ಗಳಲ್ಲಿ ಕಂಡ ಜಾಸ್ತೀ ಅಧಿಕಾರಗಳು ನಿಶೀ 1ನೇ ಕ್ಲಾಸ್ ಮೊಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟವೆ.

ನಂ. 287. ತಾರೀಖು 15ನೇ ನವಂಬರ 1876.

ಮೆಸ್ತರ ಗ್ಯಾರಟ್ ಸಾಹೇಬರವರು, ಕೆಪ್ಟನ್ ಮೆಕ್ಕೆಂಜಿ ಸಾಹೇಬರವರ ಗೈರ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಮೈಸೂರು ಮ್ಯೂಜಿಯಂ ಸೂಪರಿಂಟೆಂಡೆಂಟ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ನೊಕರರ್ ಮಾಡಲ್ಪಟ್ಟು 1876ನೇ ನವಂಬರ 14ನೇ ಮಾರ್ಹುಂನಲ್ಲಿ ಕೆಲಸದ ಚಾರ್ಜ್ ತೆಗದುಕೊಂಡಿರುತ್ತಾರೆ.

ನಂ. 288. ತಾರೀಖು 15ನೇ ನವಂಬರ 1876.

ಮೈಸೂರು ರೆವಿನ್ಯೂ ಸರ್ವೆ ಅ॥ ಸೂಪರಿಂಟೆಂಡೆಂಟ್ ಮೆ॥ ಬೆತಂ ಯವರಿಗೆ 1876ನೇ ಆಗಸ್ಟ್ 28ನೇ ಮಾರ್ಹು 197ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ 1876ನೇ ಅಕ್ಟೋಬರ 6ನೇ ಮಾರ್ಹುಂ ಲಗಾಯತ್ 8ನೇ ಮಾರ್ಹುಂವರಿಗೆ 3ದಿನಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ನಂ. 289. ತಾರೀಖು 15ನೇ ನವಂಬರ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಬಾರ್ಕರ ಯವರಿಗೆ 1876ನೇ ಶಪ್ಟಂಬರ 4ನೇ ಮಾರ್ಹುಂ 209ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ 1876ನೇ ಅಕ್ಟೋಬರ 6ನೇ ಮಾರ್ಹುಂ ಲಗಾಯತ್ 8ನೇ ಮಾರ್ಹುಂವರಿಗೆ 3 ದಿನಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ನಂ. 290. ತಾರೀಖು 15ನೇ ನವಂಬರ 1876.

6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ ಮೆ॥ ನರಸಿಂಗರಾಯರು ಚೀಫ್ ಕಮ್ಮಿಷನರವರ ಕಚೇರಿಯಲ್ಲಿ ಕೆಲಸ ನೋಡತಕ್ಕದ್ದು.

"ಹುಕ್ಹುಂ ಬಮೋಜೀಬ್."

T. Clarke,
Offg. Secretary.

ಮಿಲಿಟೇರಿ.

ನಂ. 292. ತಾರೀಖು 1[?]ನೇ ನವಂಬರ 1876.

ಮೈಸೂರು ಸವಾರ ಇಲಾಖಾ ಅಡ್ಜುಟೆಂಟ್ ಕೇಪ್ಟನ್ ಮೊರೆಂಟ್ ಯವರು 1876ನೇ ಇಸವಿ ಅಕ್ಟೋಬರ 2ನೇ ತಾರೀಖು ಲಗಾಯತ್ 9ನೇ ತಾರೀಖು ವರಿಗೂ ಚೀಫ್ ಕಮ್ಮಿಷನರ ಮಿಲಿಟೇರಿ ಅಸಿಸ್ಟೆಂಟ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡಿದರು.

"ಬಮೋಜೀಬ್ ಹುಕ್ಹುಂ."

T. Clarke,
Offg. Secretary.

ಕೊಡಗು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ನಂ. 10. ತಾರೀಖು 8ನೇ ನವಂಬರ್ 1876.

ಇಂಡ್ಯ ಗವರ್ನಮೆಂಟ್ ಹೋಂ ಇಲಾಖಾ ಸಿಕ್ರಿಟೇರಿಯವರಿಂದ ಬಂದ 1876ನೇ ಇಸವಿ ಅಕ್ಟೋಬರ್ 21ನೇ ಮುಕ್ಕಾಂ 1129ನೇ ನಂಬರ್ ಲೆಟರಿನಲ್ಲಿ ತಿಳಿಸಲ್ಪಟ್ಟ ಅಪ್ಪಣೇ ಅನುಸರಿಸಿ, 1875ನೇ ಇಸವಿ ಫಿಬ್ರವರಿ 20ನೇ ಮುಕ್ಕಾಂ ಮೈಸೂರು ಗೆಜೆಟ್ 57ನೇ ಪುಟದಲ್ಲಿ ಫಾಯಿಷ್ ಮಾಡಲ್ಪಟ್ಟ ರೂಲಸ್ನ್ನು ರದ್ದುಪಡಿಸಿ ಹುಟ್ಟಿದ ಯಿದರಡಿ ಬರುವ ರೂಲಸ್ ಸರ್ವರಿಗೂ ತಿಳಿಯತಕ್ಕ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಕೊಡಗು ಸೀಮೆಯಲ್ಲಿ ದೇವರ ಕಾಡುಗಳ ಕಾಪಾಡುವಿಕೆ ಬಗ್ಯೆಯಿನ್ನು ಅಧಿಕವಾದ ವಿಚಾರಣೆ ಬಗ್ಯೆ ಉಂಟಾದ ರೂಲಸ್.

---

1. ಇದರಿಂದ ತಿಳಿಸಲ್ಪಡುವದೇನಂದರೆ,—ಕೊಡಗು ಸೀಮೆಯಲ್ಲಿ ದೇವರ ಕಾಡುಗಳಿಗೆ ಯಾವ ಬಗ್ಯಾಗಿ ಕಂದಾಯ ತಪ್ಪಿಸಲ್ಪಟ್ಟಿರುತ್ತೋ ಅಂತಾ ಬಗ್ಯೇನೆ ಅವುಗಳು ಖಂಡಿತವಾಗಿ ಉಪಯೋಗಿಸಲ್ಪಡದ ಪಕ್ಷಕ್ಕೆ ಅವುಗಳಿಗೆ ಐಯಿಂದ ಪೂರಾ ಕಂದಾಯ ದಾಖಲ್ಮಾಡಲ್ಪಡುವದು.

2. ಸರಕಾರದಿಂದ ಕೊಡಲ್ಪಟ್ಟು ವ ಕಂದಾಯ ಕಟ್ಟಲ್ಪಟ್ಟ ಅಂತಾ ದೇವರ ಕಾಡುಗಳು ಯಾ ಅವುಗಳ ಭಾಗಗಳು ಯಾರಿಗೆ ಕೊಡಲ್ಪಟ್ಟಿರುತ್ತೋ ಅಂತಾವರು ಅವುಗಳನ್ನು ಯಿರಿಸಿಕೊಳ್ಳುವದಕ್ಕೆ ಅಪ್ಪಣೇ ಕೊಡಲ್ಪಡುವರು, ಪರಂತು ಅಂತಾ ಹಿಡುವಳೀದಾರ್ರಿಂದ ವಾಸ್ತವ್ಯವಾಗಿ ಅನುಭವಿಸಲ್ಪಡುವ ಬೀಜವರಿಯು ಯಷ್ಟು ಎಕರೆಯಾಗಿ ಕೊಡಲ್ಪಟ್ಟವೋ ಅದಕ್ಕಿಂತಲೂ ಜಾಸ್ತೀಯಾಗಿರಕೂಡದು.

3. ಅಂತಾ ಸನ್ನದುಗಳ ಪ್ರಕಾರ ಅನುಭವಿಸಲ್ಪಡುವ ಬೀಜವರಿಯು, ಕೊಡಲ್ಪಟ್ಟ ಬೀಜವರಿಗಿಂತಲೂ, ಹೆಚ್ಚಾಗಿರುವಂತೆ ಸರ್ವೆಯಲ್ಲಿ ಕಾಣಬಂದ ಪಕ್ಷದಲ್ಲಿ ಜಾಸ್ತೀ ಬೀಜವರಿಯು ಸರಕಾರದವರ ಇಛ್ಛಾನುಸಾರ ದೇವರಕಾಡಿಗೆ ವಾಪಸು ಸೇರಿಸಲ್ಪಡುವದು. ಅಥವಾ ಪೂರಾ ಕಂದಾಯ ಕಟ್ಟಲ್ಪಡುವದು.

4. ಯಾವ ಸಂಗತಿಗಳಲ್ಲಿ ದೇವರ ಕಾಡುಗಳು ಅಥವಾ ಅವುಗಳ ಪೈಕಿ ಯಾವ ಭಾಗಗಳು ಸರಕಾರದ ಅಪ್ಪಣೆ ಇಲ್ಲದೆ ವ್ಯವಸಾಯ ಮಾಡಲ್ಪಟ್ಟಿರುತ್ತವೋ ಅಂತಾ ಸಂಗತಿಗಳಲ್ಲಿ ಅವುಗಳ ಹಿಡುವಳೀದಾರ್ರುಗಳು ಅವುಗಳನ್ನು ಈ ಇಸ್ತಿಹಾರ್ ತಾರೀಖು ಲಗಾಯತು 3 ವರುಷಗಳ ಪರಿಯಂತ ವ್ಯವಸಾಯ ಮಾಡತಕ್ಕ ಬಗ್ಯೆ ಅಪ್ಪಣೆ ಕೊಡಲ್ಪಡತಕ್ಕದ್ದು. ಆ ಬಳಿಕ ಅಂತಾ ಹಿಡುವಳೀದಾರ್ರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಂಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದರಲ್ಲಿ ಬಂದೀತು.

ದೇವರ ಕಾಡುಗಳು ಯಾ ಅವುಗಳ ಭಾಗಗಳು ಸರಕಾರ ಅಪ್ಪಣೆಯಿಂದ ವ್ಯವಸಾಯ ಮಾಡಲ್ಪಟ್ಟು ಆದರೆ ಅವುಗಳಿಗೆ ಕಂದಾಯ ಕೊಡಲ್ಪಡದೆ ಇರುವ ಸಂಗತಿಗಳಲ್ಲಿ ಅವುಗಳ ಹಿಡುವಳೀದಾರ್ರುಗಳು ಈ ಇಸ್ತಿಹಾರ್‌ನಾಮಾ ತಾರೀಖು ಲಗಾಯತು 3 ವರುಷಗಳಪರಿಯಂತ ಅವುಗಳನ್ನು ಸಾಗುವಳೀ ಮಾಡಿಕೊಳ್ಳುವಂತೆ ಅಪ್ಪಣೆ ಕೊಡಲ್ಪಡತಕ್ಕದ್ದು ಆ ಬಳಿಕ ಅಂತಾ ಹಿಡುವಳೀದಾರ್ರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಂಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದರಲ್ಲಿ ಬಂದೀತು.

5. ದೇವರ ಕಾಡುಗಳ ಹದ್ದಿನೊಳಗೆ ಮರಗಳು ಕಡಿಯಲ್ಪಡುವದು, ಕೊಂಬೆ ಕತ್ತರಿಸಲ್ಪಡುವದು ಪೊತ್ತಾಗಿರುವ ರಂಬೆಗಳು ವಿರಳಪಡಿಸುವದು ಮೇಲರಂಬೆ ಕಡಿಯಲ್ಪಡುವದು ಅಥವಾ ಮರಗಳು ಸುಡುವದು ಇವು ಖಂಡಿತವಾಗಿ ನಿಷೇಧಿಸಲ್ಪಟ್ಟಿರುತ್ತೆ.

6. ಚೌಬೀನೆಯಾಗಲಿ, ಮರವಾಗಲಿ ರಂಬೆಗಳಾಗಲಿ ಹುಲ್ಲು ಆಗಲಿ ಇನ್ಯಾವ ಇತರ ಬೆಳೆಯಾಗಲಿ ಯಾವ ನೆವದಮೇಲಾದರೂ ದೇವರಕಾಡಿನಿಂದ ಸಾಗಿಸಲ್ಪಡಕೂಡದು.

7. ದರೋಬಸ್ತು ದೇವರ ಕಾಡುಗಳು ಸರ್ವೇ ಮಾಡಲ್ಪಟ್ಟು ನಿಷಾನೆ ಹಾಕಲ್ಪಡುವದು ಮತ್ತು ಬಳಿಕ ಗ್ರಾಮದ ಪಟೇಲನ ಖುದ್ದು ಸ್ವಾಧೀನದಲ್ಲಿಡಲ್ಪಡುವದು, ಪಟೇಲನು ಅವುಗಳ ಕಾಪಾಡುವಿಕೆ ವಿಷಯದಲ್ಲಿ ಪ್ರಥಮತಃ ಜವಾಬದಾರನಾಗಿರುವದಲ್ಲದೆ ತನ್ನ ತಿಳುವಳಿಕೆಗೆ ಬರುವ ಈ ರೂಲ್ಸಿನ ಯಾವ ಉಲ್ಲಂಘನೆಯುನ್ನಾದರೂ ನಾಡಿನ ಪಾರಪತ್ತೇಗಾರ್ರಿಗೆ ಕೂಡ್ಲೇ ರಿಪೋರ್ಟು ಮಾಡತಕ್ಕದ್ದು.

ನಂ. 11. ತಾರೀಖು 16ನೇ ನವೆಂಬರ್ 1876.

ಹಾಲೀ ಪ್ರಬಲಿಸಿ ಯಿರುವ ನಿರಕ್ ಚಡಾವ್ ಪ್ರಯುಕ್ತವಾಗಿ, ಹದಿನೈದು ರೂಪಾಯಿಗಳು ವ ಅದಕ್ಕೆ ಕಮಿಯಾದ ತಲಬ್ ತೆಗದುಕೊಳ್ಳುತ್ತಿರುವ ಕಾಯಿಂಲವಾಜಮೆಗೆ ಸೇರಿದ ದರೋಬಸ್ತು ಸರ್ಕಾರ್ ನೌಕರರಿಗೂ ನವೆಂಬರ್ ಡಿಸೆಂಬರ್ ಈ ಮಾಹೇಗಳ ಬಗೆ ತಲಬ್ ಬಟವಾಡೆಕಾಲದಲ್ಲಿ ಮಾಹೇಯಾನಾ ಒಂದು ರೂಪಾಯಿ ಜಾಸ್ತೀ ರುಸುಂ ಕೊಡತಕ್ಕದೆಂದು ಫೈಸಲ್ ಮಾಡಲ್ಪಡಬೇಕೆಂಬದಾಗಿ ಚೀಫ್ ಕಮ್ಮೀಷನರವರು ಅಪ್ಪಣೇ ಕೊಡುತ್ತಾರೆ.

2. ಸಾಧಾರಣ ಬರಾವರ್ದಿಗಳಲ್ಲಿ ಮೊಬಲಗ್ ಸಂದದ್ದು ದಾಖಲ್ ಮಾಡಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವೆಂಬರ್ ತಾ॥ 18, ಸ್ಸ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಜೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮಿಷ್ಯನರ ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 17ನೇ ನವಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಷ್ಯನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಸ್ಪೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪೆ. ಅ. ೬೬	ಶ್ರೀನಿವಾಸೈಯ ..	ಅಳಶಿಂಗ್ರೈಯ ..	೨೧ನೇ ನವಂಬರ
ಸ್ಪೆ. ಅ. ೬೩	ವೆಂಕಟರಮಣೈಯ ..	ತಿಂಮೈಯ ವಗ್ಯೆರೆ ..	ಡಿಟೋ
ಸ್ಪೆ. ಅ. ೬೯	ವೇಂಕಟರಮಣಪ್ಪಾ ವಗ್ಯೆರೇ ..	ಡಾಕ್ಟರ್ ಆರ್‌ಸಾಹೆಬರು ವಗ್ಯೆರೆ ..	ಡಿಟೋ
ಕ್ರಿ. ಅ. ೨೦	ಕೈದೀ ಜಾಗಲೂರ ..	..	ಡಿಟೋ
ಸ್ಪೆ. ಅ. ೪೩	ಪುಮ್ಮಾಜಿ ..	ಸುಬ್ಬಣ್ಣಾ ವಗ್ಯೆರ ..	೨೨ನೇ ಡಿಟೋ
ಸ್ಪೆ. ಅ. ೨೦	ನೀಲಕಂಠದೇವರು ..	ಸಿದ್ಧಲಿಂಗದೇವರು ..	೨೫ನೇ ಡಿಟೋ
ಸ್ಪೆ. ಅ. ೨೧	ಕರ್ರಿಗೌಡಾ ..	ಜೊಮ್ಮಕ್ಕಾ ವಗ್ಯೆರೆ ..	ಡಿಟೋ
ಸ್ಪೆ. ಅ. ೬೮	ನಾಚಾ ..	ಶಿದ್ಧಲಿಂಗಪ್ಪ ವಗ್ಯೆರೆ ..	೨೮ನೇ ಡಿಟೋ
ಕೊ. ಸ್ಪೆ. ಅ ೧೪	ಮೆ॥ ಹೆನರಿವರ್ತ್ ..	ಸುಬ್ಬಾ ವಗ್ಯೆರೆ ..	ಡಿಟೋ
ಕ್ರಿ. ಅ. ೨೭	ಕೈದಿ ಹನುಮಂತ ವಗ್ಯೆರೆ ..	..	ಡಿಟೋ
ಸ್ಪೆ. ಅ. ೨೭	ಮುನಿಯಾಜಟ್ಟ ..	ಕೃಷ್ಣಾಚಾರ್ರು ..	೩೦ನೇ ಡಿಟೋ
ಸ್ಪೆ. ಅ. ೨೩	ಸಿಂಗಿ ..	ಕಾಡಸಿದ್ದ ವಗ್ಯೆರೆ ..	ಡಿಟೋ
ಸ್ಪೆ. ಅ. ೨೫	ವೆಂಕಟಸುಬ್ಬೈಯ ..	ವೆಂಕಟಮ್ಮ ..	೫ನೇ ಡಿಸಂಬರ
ಸ್ಪೆ. ಅ. ೬೬	ಸುಬ್ಬಾಭಟ್ಟ ..	ಶೇಷಭಟ್ಟ ..	ಡಿಟೋ
ಸ್ಪೆ. ಅ. ೨೪	ರಾಮಗಿರಿ ಮಹೇಶಗಿರಿ ಗೋಸಾಯಿ ..	ವೆಂಕಟಗಿರಿ ಗೋಸಾಯಿ ..	೬ನೇ ಡಿಟೋ
ಸ್ಪೆ. ಅ. ೨೨	ಫೈಲಖ್ಖಾಖಾ ..	ಶೇಷಶೆಟ್ಟಿ ವಗ್ಯೆರೆ ..	ಡಿಟೋ
ಸ್ಪೆ. ಅ. ೨೮	ನಾಡಿಗ ಶ್ಯಾಮಣ್ಣ ..	ಕೇಪ್ಟನ್ ವೆಸ್ಸಾಮರ್ಸ ..	೧೨ನೇ ಡಿಟೋ
ಸ್ಪೆ. ಅ. ೨೯	ಲಿಂಗಣ್ಣಾ ..	ನಂಜೇಗೌಡ. ..	೧೪ನೇ ಡಿಟೋ
ಸ್ಪೂಟ್ ಸ್ಪೆ. ಅ. ೧೩	ಪುಟ್ಟಣ್ಣಾ ..	ಚೆನ್ನಪ್ಪಾ ..	ಡಿಟೋ

J. D. GORDON, *Judl. Commr.*

2 A

ಇನಾಂ ಇಲಾಖಾ.

Registration of such service inams in the Kankanballi Taluk as were alienated before the promulgation of the Chief Commissioner's Circular dated 11th September 1835, the alienee not performing the service for which inam was originally granted.

ಮೈಸೂರು ಶೀಮೆಯ ಇನಾಂ ಸೆಟಲ್ಮೆಂಟ ಆಫಿಸಿನಿಂದ.

ಇದರಿಂದ ಕಾನಖಾನಹಳ್ಳಿ ತಾಲ್ಲೂಕು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚೀಪ್ ಕಮ್ಮಿಷನರ ಸಾಹೆಬರವರ 1876ನೇ ಇಸವಿ ಅಕ್ಟೋಬರ 17ನೇ ತಾರೀಖಿನ 7037—216ನೇ ನಂಬರ ಪ್ರೊಸೀಡಿಂಗಸಿನ 1ನೇ ಪ್ಯಾರಾ ಹುಕ್ಕುಂಗಳ ಪ್ರಕಾರ ಶ್ಯಾನುಭೋಗ, ತಳವಾರ, ನೀರಗಂಟಿ, ತೋಟಿ, ಮುಂತಾದ ಸರಕಾರ ನೌಕರರ ಇನಾಂಗಳು ಈ ಡಿಪಾರ್ಟ ಮೆಂಟನಿಂದ ಯಿನ್ನು ಮೇಲೆ ರಿಜಿಸ್ಟರ ಮಾಡಲ್ಪಡುವದಿಲ್ಲ.

2. ಆದರೆ ಸದರೀ ನೌಕರರ ಇನಾಂಗಳ ಪೈಕೀ ಯಾವ ಇನಾಂಗಳಾದರೂ 1835ನೇ ಇಸವಿ ಶಪ್ಟಂಬರ 11ನೇ ತಾರೀಖಿನ ಚೀಪ್ ಕಮ್ಮಿಷನರ ಸಾಹೆಬರವರ ಸರ್ಕ್ಯುಲರ ಹುಕ್ಕುಮಿಗೆ ಪೂರ್ವವೇ ಪರಾಧೀನವಾಗಿ ಅಂಥಾವುಗಳನ್ನು ಹಾಲೀ ಅನುಭವಿಸುವವರು ನೌಕರೀ ಮಾಡವೇ ಇದ್ದ ಪಕ್ಷದಲ್ಲಿ ಅವುಮಾತ್ರ ಚೀಪ್ ಕಮ್ಮಿಷನರ ಸಾಹೆಬರವರ ಪ್ರೊಸೀಡಿಂಗಸಿನ 2ನೇ ಪ್ಯಾರಾ ಹುಕ್ಕುಂ ಪ್ರಕಾರ ಈ ಡಿಪಾರ್ಟ ಮೆಂಟನಲ್ಲಿ ವಿಚಾರಣೆ ಮಾಡಲ್ಪಟ್ಟು ಅನುಭವದಾರರಿಗೆ ಕ್ವಿಟ್‌ರೆಂಟ ಮೇಲೆ ಖಾಯಂ ಮಾಡಲ್ಪಡುತ್ತವಾದ್ದರಿಂದ ಯಿಂಥಾ ಇನಾಂದಾರರು ಈ ತಾಲ್ಲೂಕು ಇನಾಂ ವಿಚಾರಣೆ ಮಾಡುವ ಅಸಿಸ್ಟೆಂಟರಲ್ಲಿ ದಸ್ತೈವಜುಗಳು ವಗೈರೇ ಸಹಿತ ಹಾಜರಾಗಿ ಸ್ಟೇಟಮೆಂಟಗಳು ದಾಖಲ್ಮಾಡಿ ಫೈಸಲ್ಪಡಿಯತಕ್ಕದ್ದೆಂದುನ್ನೂ,

ಆಪ್ರಕಾರ ಇನಾಂ ವಿಚಾರಣೆ ಕಾಲದಲ್ಲಿ ಮತ್ತು ತಾಲ್ಲೂಕು ವಿಚಾರಣೆ ಕಾಲದಲ್ಲಿ ಸಹ ಫೈಸಲ್ಪಡಿಯದಿದ್ದರೆ ವುತ್ತರೋತ್ತರ ಯಾವಾಗಲೂ ಅವರ ದಾವೇ ಅಂಗೀಕರಿಸಲ್ಪಡಲಾರದೆಂದುನ್ನೂ ಇದರಿಂದ ಸಮಸ್ತರಿಗೂ ತಿಳಿಯಪಡಿಸಿ ಯಿದೆ.

ಇನಾಂ ಸೆಟಲ್ಮೆಂಟ ಆಫಿಸ್, ಬೆಂಗಳೂರು, ಜತಾರೀಖು 28—10—76.

R. A. Cole,
Supt. of Inam Settlements.

ಫಾರೆಸ್ಟ ಇಲಾಖಾ.

ಇಸ್ತಿಹಾರ.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ವುಡ್ಡಿದ ಸಾಲೀಯಾನಾ ಹರಾಜಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಬೆಂಗಳೂರು,	1ನೇ ಡಿಶಂಬರ	,,	ಹೆಚ್ಚುಕಡಮೆ 100 ಟನ್‌ಗಳು.
ಫ್ರೇಜರಪೇಟೆ	18ನೇ ,,	,,	80 ,,

ಹರಾಜ ನಿಬಂಧನೆ—ಹರಾಜ ಮೊಬಲಗ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀ ಮೊಬಲಗನ್ನು ಹರಾಜ ತಾರೀಖು ಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ಂಂಗಳೂ 1874ನೇ ನವಂಬರ 28ನೇ ಮುರ್ಕಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆನಿಪಾನ್ ಕೋಠೀಗಳಲ್ಲಿ ಯಿ ಹರಾಜಗಳು ನವಂಬರ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ ಮೊಬಲಗ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಳಿ ಡಿಪಾಜಿಟ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುರ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜಗಳ ಬಾಬತು ಪೂರಾಮೊಬಲಗ 1877ನೇ ಇಸವೀ ಫೆಬ್ರುವರಿ 6ನೇ ಮುರ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕನಾಗುವದಕ್ಕೆ ಬದಲಾಗಿ ಟೊನ್ಸ, ಘಾಂಡ, ಹಂಡ್ರೆಡ ವಯಿಟ ಟರ್ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

Notice of an application by Gurusami Modaliar for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರರವರ ಕೋರ್ಟನಿಂದ.

ಸನ 1876ನೇ ಇಸವಿ ಶಿವಿಲ ಮಿಸಲೇನಿಯಸ ನಂಬರ 78.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಕಂಟೋನಮೆಂಟನಲ್ಲಿ ಯಿರುವ ಆರಕಾಟ ಗುರುಸಾಮಿ ಮೊದಲ್ಯಾರನು ತನ್ನ ಚಿಕ್ಕಪ್ಪ ಆರಕಾಟ ಮುನಿಸಾಮಿ ಮೊದಲ್ಯಾರ್ರ ಲೇಣೆ 6,500 ರೂಪಾಯಿ ಬರವಾಡಿಕೊಳ್ಳತಕ್ಕ ಬಗ್ಯೆ ಸನ 1860ನೇ ಇಸವಿ 27ನೇ ಆಕ್ಟ ಪ್ರಕಾರ ಸರ್ಟಿಫಿಕೆಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ಡಿಸೆಂಬರ ತಿಂಗಳು 1ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟನಲ್ಲಿ ವಿಮರ್ಸೆ ಆಗಲ್ಪಡುತ್ತೆಯಾಗಿ ಆ ಮೊಬಲಗ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಡಬಹುದು.

ಜತಾರೀಖು 4ನೇ ಮಾಹೇ ನವಂಬರ 1876ನೇ ಇಸವಿ ಮೊಕ್ಕಾಂ ನೆಲಮಂಗಲ.

L. RICKETTS,
Offg. Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ಸಕಲಜನಗಳಿಗೂ ತಿಳಿಯುವಬಗ್ಯೆ ಇದರಿಂದ ತಿಳಿಸಲ್ಪಡುವದೇನಂದರೆ,—ಫಾರೆಸ್ಟು ಯಿಲಾಖೆಗೆ ಸೇರಿಶಿದ ಜಂಗ್ಲೀಗಳು ಶಿವಾಯಿ ತುಮಕೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಆರಗಿನ ಕಂಟ್ರಾಕ್ಟು 1877—78—1878—79—1879-80 1880—81 ಮತ್ತು 1881—82ನೇ ಇಸವಿಗಳಿಗೆ ಅಂದರೆ 1877ನೇ ಏಪ್ರೆಲ 1ನೇ ಮುರ್ಕ್ಕಾಂ ಲಗಾಯಿತು 1882ನೇ ಮಾರ್ಚ 31ರ ವರಿಗೆ ತಾಲ್ಲೂಕು ವಾರಾಗಿ ಚಡದರಖಾಸ್ತುದಾರ್ರಿಗೆ ಹರಾಜು ಮೂಲಕ 1877ನೇ ಮಾರ್ಚಿ 15ನೇ ಮುರ್ಕ್ಕಾಂ 12 ಘಂಟೆಕೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದುವರುಷಗಳ ವರಿಗೆ ಆಯಾ ವರುಷದ ಚಡದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ಮೇಲೆ ಕರೆನ್ಸಿ ನೋಟುಗಳು ಯಾ ನಗದು ಹಣ 6 ಖಿಸ್ತುಗಳಿಗೆ ಯಾ ಮಾಹೇವಾರೀ ಯಿನ್‌ಸ್ಟಾಲ ಮೆಂಟಿಗೆಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲಿಯಾನಾ ದರಖಾಸ್ತು ಮೊಬಲಗು ಪೈಕೀ ಹನ್ನೆರಡರಲ್ಲಿ ವೊಂದು ಹಿಸ್ಸೆಗೆ ಅಥವಾ ವೊಟ್ಟು ಕಂಟ್ರಾಕ್ಟು ಮೊಬಲಗು ಪೈಕೀ 60 ರಲ್ಲಿ ವಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಗೆ ಭಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜು ಹಾಕಲ್ಪಟ್ಟು ಆ ಮೂಲಕ ಸರಕಾರಕ್ಕೆ ಬರುವ ಲುಕ್ಸಾನಿಗೆ ಅವನನ್ನು ಗುರೀ ಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ 1ನೇ ಮುರ್ಕ್ಕಾಂನಲ್ಲಿ ಪ್ರವೇಶಿಸಿ ತನ್ನ ಮೊದಲನೆ ಮಾಹೇವಾರೀ ಖಿಸ್ತುಗಳು 1877ನೇ ಮೇ 15ನೇ ಮುರ್ಕ್ಕಾಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳು 15ನೇ ಮುರ್ಕ್ಕಾಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ ಯಿಟ್ಟ ಮೊಬಲಗಿಗೆ ನಿಸಬತ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ ಮೊಬಲಗು ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ ಲೋಕಲಸೆಸ್ಸು, ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಅಡ್ಡೀ ವುಂಟಾದರೆ ಸದರೀ ಕಂಟ್ರಾಕ್ಟು ರದ್ದುಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಡಿಪಾಜಿಟ ಮೊಬಲಗಿನ ನಿಮಿತ್ಯವಿಲ್ಲ ದೆಯೆ ಪುನಃ ಹರಾಜ ಹಾಕಲ್ಪಡುವದು. ಸದರೀ ಡಿಪಾಜಿಟ ಮೊಬಲಗು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

ತಾರೀಖು ನೇ 1876.

E. S. Ludlow,
Offg. Dy. Commr.

ಸರ್ 1876ನೇ ಇಸವಿ ನವಂಬರ ತಾರೀಖು 8 ಶಿವಿಲ್ ಮಿಸಲೇನಿಯಸ್ ನಂಬರ್ 24.

ಸರ್ 1876ನೇ ಇಸವೀ ಏಪ್ರಿಲ್ 18ನೇ ತಾರೀಖಿನಲ್ಲಿ ಫಾತೀ ಆದ ತುಮಕೂರು ತಾಲ್ಲೂಕು ಕೆಸರಮಡು ಜಾಗೀರಿ ಗ್ರಾಮದ ಮೊಖ್ತೇಸರ ಸೈದ್ ಖಾದರ ಷಾಖಾ ಖಾದ್ರಿಸಾಬಿಯಿಂದ ಅದೇಗ್ರಾಮದಲ್ಲಿರುವ ನಸೀರುದ್ದೀನ ಹುಸೇನಿಯುಲ್ ಖಾದ್ರಿ ಯಂಬುವನಿಗೆ ಬರದುಕೊಟ್ಟ ಉಯಿಲನ್ನ ಸ್ಥಿರಪಡಿಸಿ ಪ್ರೊಬೇಟ ಯಾನೇ ಅಧಿಕಾರ ಪತ್ರಿಕೆಯನ್ನ ಕೊಡಬೇಕೆಂದು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಕೋರ್ಟಿಗೆ ಅರ್ಜೀ ಕೊಟ್ಟು ಯಿರುತಾನಾಗಿ ಯಿದರ ವಿಮರ್ಶೇ ಬಗ್ಯೆ ಬರುವ ಡಿಶಂಬರ ತಿಂಗಳು 11ನೇ ತಾರೀಖಿಗೆ ಹಿಯರಿಂಗ ಗೊತ್ತುಮಾಡಿರುತ್ತೆ ತಕರಾರುದಾರು ಯಾರಾದರೂ ಯಿದ್ದಲ್ಲಿ ಆ ತಾರೀಖಿಗೆ ಸರಿಯಾಗಿ ನಮ್ಮ ಕೋರ್ಟು ರೂಬರೂ ಹಾಜರಾಗಬೇಕೆಂದು ಯಿದರಿಂದ ತಿಳಿಯಪಡಿಸಿದೆ.

T. E. Woodcock,
For Offg. Dy. Commr.

MYSORE DISTRICT.

Notice of an application by Lakkamma for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ ಡೆ|| ಕ|| ಕೋರ್ಟಿನಿಂದ.

ಸರ್ 1876ನೇ ಯಿಸವಿ ಶಿವಿಲ್ ಫ್ರೂಟ ಮಿಸಿಲೇನಿಯಸ್ ನಂಬರ 76.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಗಂಡ ಆಲಂಣನಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಫಿಕೇಟ ಆಗಬೇಕೆಂದು ಮೈಸೂರಲ್ಲಿರುವ ಲಕ್ಕಂಮನು ಕೊಟ್ಟತಕ್ಕ ಅರ್ಜಿಯನ್ನು ನವಂಬರ ಮಾಹೇ ತಾರೀಖು 21ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Sidde Gauda for a certificate under Act XXVII of 1860.

1876ನೇ ಇಸವಿ ಶಿವಿಲ್ ಫ್ರೂಟ ಮಿಸಲೇನಿಯಸ್ ನಂಬರ 77.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ಚಿಕ್ಕ ಸಿದ್ದೇಗೌಡನಿಗೆ ಬರಬೇಕಾದ(1,000) ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ ಸದರೀ ಯವನ ದತ್ತುಮಗನಾದ ತನ್ನ ತಮ್ಮ ನಂಜಪ್ಪಾ ಯಂಬುವನು 12 ವರುಷದ ಹುಡುಗನಾದ್ದರಿಂದ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ನವಾಷಹರ ಹೋಬಳಿ ಸಾಗನಹಳ್ಳಿಲಿ ಯಿರುವ ಸಿದ್ದೇಗೌಡ ನೆಂಬುವನು ಕೊಟ್ಟು ಯಿರತಕ್ಕ ಅರ್ಜಿಯನ್ನು ನವಂಬರ ಮಾಹೇ ತಾರೀಖು 14ರಲ್ಲು ಹಿಯರಿಂಗ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Mariyanna and another for a certificate under Act XXVII of 1860.

ಸರ್ 1876ನೇ ಇಸವಿ ಸಿವಿಲ್ ಫ್ರೂಟಮಿಸಲನಿಯಸ್ ನಂಬರ 78.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ಛತ್ತದ ಮರಿಯಂಣನಿಗೆ ಬರಬೇಕಾದ 950 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಫಿಕೇಟ ಆಗಬೇಕೆಂದು ಸದ-

ರೀ ಯವನ ಚಿಕ್ಕಪ್ಪನಾದ ಅಪ್ಪೈಗ್ರಾಮದ ತಾಲ್ಲೂಕು ಗಂಜಾಂದಲ್ಲಿ ಯಿರುವ ಅಂತಪ್ಪ 1 ಮಾವನಾದ ಮರಿಯಂಣ 1 ಈ 2 ಜನಗಳು ಕೊಟ್ಟಿರತಕ್ಕ ಅರ್ಜಿಯನ್ನು ನವೆಂಬರ್ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Gopalaiengar for a certificate under Act XXVII of 1860.

ಸ್ನ 1876ನೇ ಇಸವಿ ಶಿವಿಲ್ ಪೂಟ ಮಿಸಲೇನಿಯಸ್ ನಂಬರ್ 79.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—ಪಾತೀಯಾದ ತನ್ನ ತಂದೆ ಕೃಷ್ಣೈಯಂಗಾರ್ರಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಸದರೀಯವನ ದತ್ತುಮಗನಾದ ಶ್ರೀನಿವಾಸೈಯಂಗಾರಿಯು ಗಾರ್ಡಿಯನ್, ಯಡತೊರೇ ತಾಲ್ಲೂಕು ತಿಪ್ಪೂರಲ್ಲಿರುವ ಗೋಪಾಲೈಯಂಗಾರಿ ಯಂಬುವನು ಕೊಟ್ಟಿ ಯಿರತಕ್ಕ ಅರ್ಜೀಯನ್ನ ನವೆಂಬರ ಮಾಹೇ ತಾರೀಖು 14ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ಮಾಹೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Ramachar for a certificate under Act XXVII of 1860.

1876ನೇ ಇಸವಿ ಸಿವಿಲ್ ಫುಟ ಮಿಸಲೇನಿಯಸ್ ನಂಬರ 80.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ಮಾನಮುಡಿ ಶ್ರೀನಿವಾಸಾಚಾರ್ರಿಗೆ ಬರಬೇಕಾದ 1250 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ಕಸ್ಬಾ ಡೀ ವಾಪುರದ ಅಗ್ರಹಾರದಲ್ಲಿ ಯಿರುವ ಮಾನಮುಡಿ ರಾಮಾಚಾರೀ ಯಂಬುವನು ಕೊಟ್ಟಿರತಕ್ಕ ಅರ್ಜೀಯನ್ನ ನವೆಂಬರ್ ಮಾಹೆ ತಾರೀಖು 21ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Virabhadraiya for a certificate under Act XXVII of 1860.

1876ನೇ ಇಸವಿ ಸಿವಿಲ್ ಫೂಟ ಮಿಸಲೇನಿಯಸ್ ನಂ. 81.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಚನ್ನಪ್ಪ ನೆಂಬುವನಿಗೆ ಬರಬೇಕಾದ 400 ರೂಪಾಯಿಗಳನ್ನು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಅರಕಲಗೂಡು ತಾಲ್ಲೂಕು ಹನಸೋಗೆ ಹೋಬಳಿ ಹಾಡ್ಯದ ಗ್ರಾಮದಲ್ಲಿ ಯಿರುವ ವೀರಭದ್ರೈಯನು ಕೊಟ್ಟು ಯಿರತಕ್ಕ ಅರ್ಜಿಯನ್ನ ನವೆಂಬರ್ ತಾರೀಖು 22ರಲ್ಲು ಹಿಯರಿಂಗ್ ಮಾಡುತ್ತೀಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 25ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice inviting parties to receive back sums remaining at their credit in the Mandya Munsiff's Court.

ಮೈಸೂರು ಡಿಸ್ಟ್ರಿಕ್ಟು ನಂಬರ 4ನೇ ಮಂಡ್ಯ ಸಬ್ ಡಿವಿಜನ್ ಮುನಸೀಫ್ ಕೋರ್ಟಿನಿಂದ.

ಸನ್ 1875ನೇ ಇಸವೀಲಿ ಈ ಕೋರ್ಟಿಗೆ ಕಕ್ಷಿಗಾರ್ರಿಂದ ಹಾಜರಾದ ಸಾಕ್ಷಿ ಭತ್ಯದ ಮೊಬಲಗು ಪೈಕೀ ಖರ್ಚಾಗದ್ದು ಜಾತಾ ಬಾಕೀ ಪಾವತೀಯಾಗದೆ ಅಮಾನತ್ತು ಕೋರ್ಟಿನಲ್ಲಿ ಇರುವ ಕೆಳಗಿನ ಪಟ್ಟೀಲಿ ಕಂಡ ಮೊಬಲಗನ್ನ ಹಾಜರ್ ಮಾಡಿದ ಕಕ್ಷಿಗಾರರು ಈ ಇಸ್ತಿಹಾರ್ ಪ್ರಸಿದ್ಧಮಾಡಲ್ಪಟ್ಟ 1876ನೇ ಇಸವಿ ನವೆಂಬರ್ ತಿಂಗಳು 4ನೇ ತಾರೀಖು ಲಗಾಯತು ಯರಡು ತಿಂಗಳು ವಾಯಿದೆಯಲ್ಲಿ ಈ ಕೋರ್ಟು ರೂಬರೂ ಹಾಜರಾಗಿ ವಾಪಸ್ ಪಡಿಯಬೇಕು. ಹಾಗೆ ಪಡಿಯದೆ ತಪ್ಪಿದರೆ ಜಿರ್ಜ ಮೊಬಲಗು ಸರಕಾರಕ್ಕೆ (ಬೇವಾರಸ ಮೊಬಲಗಾಗಿ ಯಣಿಸಿ) ಸೇರಿಸಿಕೊಳ್ಳಲ್ಪಡುತ್ತೆ.

ಮೊಬಲಗು ಜಮಾ ಆದ ತಾರೀಖು.	ನಗದಿ ಬುಕ್ಕಿನ ಜಂಜರ್ ನಂಬರ್.	ಮೊಕದ್ದಮೆ ನಂಬರ್.	ಮೊಬಲಗು. ರೂಪಾಯಿ	ಮೊಬಲಗು. ಅಣೆ.	ಹಾಜರ್ ಮಾಡಿಷವರ ಮತ್ತು ವಾಪಸ್ ಪಡಿಯ ಬೇಕಾದವರ ಹೆಸರು.
16ನೇ ಜೂನ್ 1875.	312	ಸ್ಮಾ. 75	0	8	ವಾದಿ ವೀರೈಯ.
19ನೇ ಆಗಸ್ಟು ಡಿಟೋ	417	ರಿ. 311	0	12	ವಾದಿ ಹೊಂಬಾಳೇಗೌಡ.
15ನೇ ಅಕ್ಟೋಬರ್ ,,	563	ಮಿ. 40	2	8	ಶ್ರೀಕಂಠೈಯ.
21ನೇ ಡಿಟೋ ,,	613	ರಿ. 473	0	8	ವಾದಿ ತಿಂಮೇಗೌಡ.
22ನೇ ಡಿಟೋ ,,	627	ಸ್ಮಾ. 145	0	8.	ವಾದಿ ವೆಂಕಟಪ್ಪ.
16ನೇ ಡಿಶಂಬರ್ ,,	865	ಸ್ಮಾ. 191	1	0	ಮುತ್ತಿಗೆರೆ ಪುಟ್ಟಸ್ವಾಮಿ.
		ಜುಮ್ಲಾ	5	12	

ತಾರೀಖು 23ನೇ ಅಕ್ಟೋಬರ್ 1876ನೇ ಇಸವೀ ಮೊಕ್ಕಾಂ ಅತ್ತಿಕುಪ್ಪೆ.

Notice of an application by Krishnaiengar for a certificate under Act XXVII of 1860.

1876ನೇ ಇಸವಿ ಸಿವಿಲ್ ಫೂಟ ಮಿ॥ ನಂ. 83.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ಅಣ್ಣನಾದ ತಿಮ್ಮಪ್ಪೈಯಂಗಾರ್ರಿಗೆ ಬರ ಬೇಕಾದ 1000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಮೈಸೂರು ಕೃಷ್ಣ ವಿಲಾಸದ ಅಗ್ರಹಾರದಲ್ಲಿಯಿರುವ ವೀ ಕೃಷ್ಣಯಂಗಾರ್ ಯೆಂಬುವನು ಕೊಟ್ಟಿರತಕ್ಕ ಅರ್ಜೀ ಯನ್ನು ನವೆಂಬರ್ ಮಾಹೇ ತಾರೀಖು 22ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿ ಕೊಳ್ಳತಕ್ಕದ್ದಿದೆ.

ತಾರೀಖು 30ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Niranjana Dáslala and two others for a certificate under Act XXVII of 1860.

1876ನೇ ಇಸವೀ ಸಿವಿಲ್ ಫೂಟ ಮಿಸಲೇನಿಯಸ್ ನಂಬರ್ 84.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಪಾತೀಯಾದ ಲೇಕರಾಜಾಲಾಲಾ 1 ದೀನಾನಾಥಲಾಲಾ 1 ಬಾಲ ಮುಕುಂದ ದಾಸ್‌ಲಾಲಾ ಈ 3 ಜನಗಳಿಗೆ ಬರಬೇಕಾದ 2,000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇ ಸವೀ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಮೈಸೂರು ಬಸವನ ಮೊಹಲ್ಲೇದಲ್ಲಿರುವ ಸದರೀ ಯ.ವರ ಮಕ್ಕಳಾದ ನಿರಂಜನ ದಾಸ್‌ಲಾಲಾ 1 ಸುಬ್ರಹ್ಮಣ್ಯಲಾಲಾ 1 ರಾಜಾರಾಮಲಾಲಾ 1 ಈ 3 ಜನವೂ ಕೊಟ್ಟಿರತಕ್ಕ ಅರ್ಜೀಯನ್ನ ನವಂಬರ್ ಮಾ ಹೇ 22ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿ ಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಕೊಳ್ಳತಕ್ಕದ್ದಿದೆ.

Notice of an application by Honne Gauda for a certificate under Act XXVII of 1860.

ಸರ್ 1876ನೇ ಇಸವಿ ಸಿವಿಲ್ ಫೂಟ ಮಿಸಲೇನಿಯಸ್ ನಂಬರ್ 85.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ಅಣ್ಣ ಮಾಯಿಗನಿಗೆ ಬರಬೇಕಾದ 75 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಶ್ರೀರಂಗಪಟ್ಟಣದಲ್ಲಿರುವ ಕುರುಬರ ಜಾತಿ ಹೊನ್ನೇಗೌಡನ ಮಗ ಹೊನ್ನೇಗೌಡನು ಕೊಟ್ಟಿರತಕ್ಕ ಅರ್ಜೀ ಯನ್ನ ನವಂಬರ್ ಮಾಹೇ ತಾರೀಖು 22ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾನ್ನು ಸ್ಥಿರಪಡಿಶಿ ಕೊಳ್ಳತಕ್ಕದ್ದಿದೆ.

ತಾರೀಖು 31ನೇ ಅಕ್ಟೋಬರ್ 1876ನೇ ಇಸವೀ ಮೊಕ್ಕಾಂ ಮೈಸೂರು.

C. J. PEARSE,
Dy. Commr.

HASSAN DISTRICT.

Notice of an application by Hanumanta Setti for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ ಡೆ|| ಕ|| ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಅರೆಹಳ್ಳಿ ಹೋಬಳಿ ಹುನುಗನಹಳ್ಳಿಲಿರುವ ಹನುಮಂತಶೆಟ್ಟಿ ಯೆಂಬವನು ಘಾತೀ ಆದ ತನ್ನ ತಮ್ಮ ತಿಮ್ಮಶೆಟ್ಟಿ ಹೆಸರಿನಲ್ಲಿರತಕ್ಕ ಸಾಲಾ 1,000 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟಿನ ಮೇರೆ ಸರ್ಟಿಫಿಕೇಟಿ ಕೊಡಿಸಬೇಕೆಂತಾ ಕೊಟ್ಟ ಅರ್ಜೀ ಫೈಸಲ್‌ಬಗ್ಗೆ ಸಗ ಮಜಕೂರು ನವಂಬರ 30ನೇ ತಾರೀಕನ್ನು ನಿಷ್ಕರ್ಷೆ ಮಾಡಿ ಯಿರುವದ್ದರಿಂದ ತಕರಾರು ಯಿರತಕ್ಕವರೆಲ್ಲಾ ಮೇಲೆ ಕಂಡ ತಾರೀಖು ಹಗಲು 10 ಘಂಟೆಗೆ ಈ ಕೋರ್ಟಿಗೆ ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳತಕ್ಕದ್ದು ಯಿರುತ್ತೆ.

Notice of an application by Jannaiengar for a certificate under Act XXVII of 1860.

ಇದರಿಂದ ತಿಳಿಯಪಡಿಸುವದೇನಂದರೆ,—ಬೇಲೂರು ಕಸಬೆಯಲ್ಲಿ ಯಿರುವ ಜಂನೈಯಂಗಾರಿ ಯೆಂಬವನು ಘಾತೀ ಆದ ತನ್ನ ತಮ್ಮ ಕಲ್ಲಹಳ್ಳಿ ಕೇಶವಾಚಾರಿ ಬಾಬತು ಸಾಲಾ 500 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 60ನೇ ಇಸವೀ 27ನೇ ಆಕ್ಟ ಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತಾ ಕೊಟ್ಟ ಅರ್ಜೀ ಫೈಸಲ್‌ಬಗ್ಗೆ ಸಗ ಮಜಕೂರ್ ನವಂಬರ್ 30ನೇ ತಾರೀಖನ್ನ ನಿಷ್ಕರ್ಷೆ ಮಾಡಿ ಯಿರುವದ್ದರಿಂದ ತಕರಾರು ಯಿರತಕ್ಕವರೆಲ್ಲಾ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟಿಗೆ ರೂಬರೂ ಹಾಜರಾಗಿ ಜಾಹಿರ್ಮಾಡಿಕೊಳ್ಳಬೇಕು.

12—10—76.

Notice of destruction of Criminal records of the late Maharajdurga Taluk.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಲೇಟ್ ಮಹರಾಜನದುರ್ಗದ ತಾಲ್ಲೂಕಿನ 1862ನೇ ಇಸವೀ ಲಗಾಯಿತು 1870ನೇ ಇಸವೀ ವರಿಗೆ ಜುಡಿಷಿಯಲ್ ರಿಕಾರ್ಡಿನಲ್ಲಿರುವ ಕ್ರಿಮಿನಲ್ ಬಾಬಿನ ಕಾಗದಗಳನ್ನು 1867ನೇ ಇಸವೀ ಆಗಸ್ಟ 31ನೇ ತಾರೀಖಿನ ಮೈಸೂರ ಗೆಜೆಟ 460ನೇ ಪಾನಿನಲ್ಲಿ ಪ್ರಸಿದ್ಧಪಡಿಸಿರುವ ಜುಡಿಷಲ್ ಕಮ್ಮಿಷನರ್ ಸಾಹೇಬರವರಿಂದ ಯೇರ್ಪಡಿಸಲ್ಪಟ್ಟ ರಿಕಾರ್ಡು ನಾಶನ ಸಂಬಂಧವಾದ ರೂಲ್ಸಿನ ಮೇರೆ 1877ನೇ ಇಸವೀ ಜನವರೀ 15ನೇ ತಾರೀಖಿನಲ್ಲಿ ಹಾಸನ ಮೊಕ್ಕಾಂನಲ್ಲಿ ನಾಶನಪಡಿಸುವದರಲ್ಲಿ ಬರುತ್ತದೆಯಾಗಿ ದಸ್ತೈವಜುಗಳನ್ನು ಹಾಜರ್ಮಾಡಿ ಯಿದಕ್ಕೆ ಕಕ್ಷಿಗಾರ್ರು ವಾಪಸ್ ಪಡೆಯಬೇಕೆಂಬ ಯಿಚ್ಛೆ ವುಳ್ಳವರಾಗಿ ಯಿದ್ದಲ್ಲಿ ಮೇಲ್ಕಂಡ ತಾರೀಖಿನ ವಳಗೆ ಹಾಸನ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರವರ ಕೋರ್ಟಿಗೆ ಹಾಜರಾಗಿ ತೆಗದುಕೊಳ್ಳಬಹುದು.

ಬತಾರೀಖು 4ನೇ ನವೆಂಬರ್ 1876ನೇ ಇಸವೀ ಮೊಕ್ಕಾಂ ಹಾಸನಾ.

Notice of applications for lands for Coffee cultivation.

ಸಮಸ್ತರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ ಬೇಲೂರುತಾಲ್ಲೂಕು ಅರೆಹಳ್ಳಿ ಹೋಬಳಿ ಕಾನಹಳ್ಳಿ ಗ್ರಾಮಕ್ಕೆ ಶೇರಿದ ಈಕೆಳಗೆ ನಮೂದಾಗಲ್ಪಡುವ ಕಾಫೀಸಾಗುವಳಿಗೆ ಯೋಗ್ಯವಾದ ಜಂಗಲ್ ಭೂಮಿಯ ಹಿಡುವಳಿಯನ್ನು ಕಾಫೀಸಾಗುವಳಿಗೋಸ್ಕರ ಟೆಂಪರರಿಯಾಗಿ ಮುಂದೆ ಯೇರ್ಪಾಡಾಗುವ ನಿಬಂಧನೆಗೆ ವಳಪಡತಕ್ಕದ್ದೆಂಬ ಷರತ್ತಿನ ಮೇಲೆ ಬರುವ ಡಿಶಂಬರು ತಾರೀಖು 11ನೇ ಹಗಲು 11 ಘಂಟೆಲಾಗಾಯಿತು 4 ಘಂಟೆವರಿಗೂ ಅದೇಸ್ಥಳದಲ್ಲಿ ಹರಾಜು ಕೂಗಿಸಲ್ಪಡುತ್ತೆ. ಯಿಚ್ಛೆಯುಳ್ಳ ಜನರು ಆಕಾಲದಲ್ಲಿ ಛಡ ದರಖಾಸ್ತು ಮಾಡಿ ಪಡಿಯ ಬಹುದು.

ಹರಾಜಿನ ಷರತ್ತುಗಳನ್ನು ಹರಾಜು ಮಾಡಿಸುವ ಆಫಿಸರ್ ಆಕಾಲದಲ್ಲಿ ಕೂಡಿದ ಜನರಿಗೆ ರೂಬರೂ ತಿಳಿಸ್ಯಾರು.

ಮೇಲ್ಕಂಡ ಜಂಗಲನ್ನು ತೆಗದುಕೊಳ್ಳುವದಕ್ಕೆ ಖಾಯಿಷ್ ಯಿರತಕ್ಕವರು ತಮ್ಮ ತಮ್ಮ ಅಪೇಕ್ಷೆ ಯಿರುವಷ್ಟು ಮೊಗು ನಮೂದಿಸಿ ಡಿಶಂಬರು ತಾರೀಖು 5ರ ವರಿಗೂ ನಮ್ಮ ಕಚ್ಚೇರಿ ಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು.

ಆದರೆ ದರಖಾಸ್ತು ಬರದುಕೊಂಡಂತಾವರು ಹರಾಜು ಕಾಲದಲ್ಲಿ ಆಸ್ಥಳದಲ್ಲಿ ಹಾಜರು ಯಿರಬೇಕು. ತಪ್ಪಿದರೆ ಅಂ[illegible] ರಖಾಸ್ತು ಮಂಜೂರ್ಮಾಡತಕ್ಕ ಅಥವಾ ತಿರಸ್ಕರಿಸತಕ್ಕ ಅಧಿಕಾರವು ಡಿಪ್ಯುಟಿ ಕಮ್ಮಿಷನರವರನ್ನ ಹೊಂದಿರುತ್ತೆ ತಿಳಿ[illegible]

ಹೊಲಗೇರಿಹಿತ್ತಲ್ ಪ್ರದೇಶ

ಚಕ್ಕುಬಂದಿ.

ಪೂರ್ವಕ್ಕೆ ಸರಕಾರದ ಬಂಜರು ಗದ್ದೆ,

ದಕ್ಷಣಕ್ಕೆ ವುಂಟಳಗೋಡು ಹೊಲಗೇರಿ ವತ್ತು ಮಾರೀಗುಡಿ ಮತ್ತು ಈಗ್ರಾಮದ ಮಾರೀಗುಡಿ

ಪಶ್ಚಿಮಕ್ಕೆ ಕಾಳೀವೆಂಕಟಪ್ಪನವರ ಜೋಂದು ಹಿತ್ತಲ್ ಅಗಳು,

ವುತ್ತರಕ್ಕೆ ನಂಜೇಗವುಡನ ಕಣಾ ಮತ್ತು ಸರಕಾರದಬಂಜರು ಜೆಟ್ಟಗದ್ದೆ ವುಕ್ಕಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ ಗಜಾ 215 ದಕ್ಷಿಣೋತ್ತರ ಗಜಾ 161 ಸಲೆಗಜಗಳು 34615ಕ್ಕೆ ಯಕರೆ 7 ರೋಡ್ 0 ಪೋಲ್ 24 ಗಜಾ 9.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಚಿಕ್ಕಹೆತ್ತೂರು ಗ್ರಾಮಕ್ಕೆ ಶೇರಿದ ವಡ್ಡನಗದ್ದೆ ತೋಟ ಯಂಬುವ ಜಂಗಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಬಿಸಲೇಗೆ ಹೋಗುವ ದೊಡ್ಡರಸ್ತೆ.

ದಕ್ಷಿಣಕ್ಕೆ ಹರಾರಿದಿಣೆಕಲ್ಲು ಕಟ್ಟೆ ಸಹಾ ಯಿಧೆ ಯಿದರ ಅರಗಿನಲ್ಲಿ ದನ ತಿರುಗುವ ದಾರಿಯು ಯಿಧೆ.

ಪಶ್ಚಿಮಕ್ಕೆ ವಡ್ಡನಗದ್ದೆಗೆ ತಿರುಗುವ ದಾರಿ ಅಂದರೆ ದನಗಳು ತಿರುಗುವದು.

ವುತ್ತರಕ್ಕೆ ತೋಪು ಅಂದರೆ ಬಿಸಲೇಗೆ ಹೋಗುವ ದೊಡ್ಡರಸ್ತೆ ಪಶ್ಚಿಮದಿಕ್ಕಿನ ಸಾಲ್ಮರಗಳು ಯಿವೆ ಸಾಲ್ಮರದ ಅರುಗು ದಿಣ್ಣೆಯು ಯಿದೆ.

ಈ ಮಧ್ಯೆ ಯಿರತಕ್ಕ ಜಮೀನ ಅಳತೆ ಪೂರ್ವ ಪಶ್ಚಿಮ 14 ದಕ್ಷಿಣೋತ್ತರ 100 ಸಲೆಗಜಗಳು 1400ಕ್ಕೆ ಯಕರೆ 0 ರೋಡ್ 1 ಪೋಲ್ 6 ಗಜಾ 8½ ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಚಿಕ್ಕಹೆತ್ತೂರು ಪಟೇಲ್ ಅಣ್ಣೇಗವುಡನೆಂಬವನು 90ನೇ ನಂಬರ ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವಾ ಹಕ್ಕುದಾರೀಯನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ ತಾರೀಖು ಲಾಗಾಯಿತು ಒಂದು ತಿಂಗಳು ವಳಗಾಗಿ ಡಿ॥ ಮ॥ ಕಾಫೀಇನಚಾರ್ಜ ಫಷ್ಟು ಅ॥ ಕ॥ ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲಾರಿಯದು.

ಮಂಜರಾಬಾದು ತಾಲ್ಲೂಕು ಬಿಸಲೇ ಹೋಬಳಿ ಅರೆಗದ್ದೆ ಗ್ರಾಮಕ್ಕೆ ಶೇರಿದ ವಾಟೆಕತ್ತಲ್ ವುಜ್ಜೆ ಯಂಬುವದು.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಅತ್ತಿಹಳ್ಳಿಯಿಂದ ಹೊಂಗಡಹಳ್ಳಕ್ಕೆ ಹೋಗುವ ದಾರಿ ಮತ್ತು ಮರಕನ ಕುರಾವು

ದಕ್ಷಿಣಕ್ಕೆ ಸುಬ್ಬೇಗವುಡ ವಗೈರೇರ ಪಟ್ಟೇ ವಾಟೆಕತ್ತಲ್ ಗದ್ದೆ.

ಪಶ್ಚಿಮಕ್ಕೆ ಮಕ್ಕಿಬರೆ ಕೋಲು ಯಂಬ ದಿಣ್ಣೆ.

ವುತ್ತರಕ್ಕೆ ಮಾಸ್ತಿಕಲ್ಲು ದಿಣ್ಣೆ ಹೆತ್ತೂರಿಂದ ಹೊಂಗಡ ಹಳ್ಳಕ್ಕೆ ಹೋಗುವ ದಾರಿ.

ಈ ಮಧ್ಯೆ ಯಿರತಕ್ಕ ಜಮೀನ ಅಳತೆ ಪೂರ್ವಪಶ್ಚಿಮ 189 ದಕ್ಷಿಣೋತ್ತರ 140 ಸಲೆಗಜಗಳು 26460ಕ್ಕೆ ಯಕರೆ 5 ರೋಡ್ 1 ಪೋಲ್ 34 ಗಜ 21 ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಅರೆಗದ್ದೆ ಗ್ರಾಮದಲ್ಲಿರುವ ಕೊಂತನಮನೆ ಪುಟ್ಟೇಗವುಡನ ಮಗ ...ಬ್ಬೇಗವುಡ ನೆಂಬವನು 125ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂ ...ಸಿದ್ಧಪಡಿಸುವದೇನಂದರೆ.

...ಜಂಗಲನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆಯುಳ್ಳವರಾಗಲಿ ಅಥವಾ ಹಕ್ಕುದಾರಿಯನ್ನು ಕುರಿ... ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ ತಾರೀಖು ಲಾಗಾಯಿ ಒಂದು ತಿಂಗಳು ವಳಗಾಗಿ ...ಯಿನಚಾರ್ಜ ಫಷ್ಟು ಅ॥ ಕ॥ ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ ಮಾಡಿಕೊಳ್ಳಬಹುದು.

...ಬಂಧನೆಗೆ ತಪ್ಪಿ ಬಳಿಕ ಈ ವಿಷಯದಲ್ಲಿ ಫಿರ್ಯಾದು ತಂದದ್ದಾದರೆ ಅದು ಮಂಜೂರು ಆಗಲಾರಿಯದು ತಿಳಿಯುವದು.

ಮಂಜರಾಬಾದು ತಾಲ್ಲೂಕು ಯಸಳೂರು ಹೋಬಳಿ ಹೊಳಲಿಪುರದ ಗ್ರಾಮಕ್ಕೆ ಶೇರಿದ ದೊಡ್ಡ ಅಗಳತಿ ತುಂಡು ಯಂಬ ಜಮೀನ್ಹ.

ಯಿದರ ಚಕ್ಕು ಬಂದಿ.

ಪೂರ್ವಕ್ಕೆ ಮಾರನಹಳ್ಳಿ ಕೆಂಚನ ಮನೆ.

ದಕ್ಷಿಣಕ್ಕೆ ಗಿಡ್ಡೇಗೌಡನ ಹೊಲ.

ಪಶ್ಚಿಮಕ್ಕೆ ಬಾಳೇಕೆರೆ ಪುಟ್ಟೇಗೌಡನ ತೋಟ.

ಉತ್ತರಕ್ಕೆ ಅಂಣೇಗೌಡನ ಪುದ್ದಿ ಹೊಲ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 100 ದಕ್ಷಿಣೋತ್ತರ 88. ಸಲಿಗೆಜಗಳು 8800ಕ್ಕೆ ಯಕರೆ 1 ರೋಡ್ 3 ಪೋಲ್ 10 ಗಜಾ 27¾.

ಯಿದನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಹೊಳೂರು ಗ್ರಾಮದ ಲಿಂಗೇಗೌಡನ ಮಗ ತಮ್ಮೇಗೌಡ ನೆಂಬವನು 149ನೇ ನಂಬರ್ ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವ ದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವಾ ಹಕ್ಕು ದಾರೀಯನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯತು ಒಂದು ತಿಂಗಳು ಒಳಗಾಗಿ ಡಿ|| ಮ|| ಕಾಫೀಯಿರ್ಚಾರ್ಜ್ ಫಸ್ಟ್ ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯರ್ಾ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದನ್ನು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಪ್ರಕೆರೆ ಹೋಬಳಿ ಹಾಲೇ ಬೇಲೂರು ಗ್ರಾಮಕ್ಕೆ ಶೇರಿದ ಮೊಗಿಯುವಕೆರೆ ಮೇಲಿನ ಪುಣ್ಯೆಯಂಬುವದು.

ಯಿದರ ಚಕ್ಕು ಬಂದಿ.

ಪೂರ್ವಕ್ಕೆ ತಮ್ಮೇಗೌಡನ ಪುಟ್ಟೇಗೌಡನ ಹಿತ್ತಲ್ ಮತ್ತು ಅಡ್ಡಗಳತೆ.

ದಕ್ಷಿಣಕ್ಕೆ ಪುಟ್ಟೇಗೌಡನ ಕಾಫೀತೋಟದ ಅಗಳು.

ಪಶ್ಚಿಮಕ್ಕೆ ಮೊಗಿಯುವ ಕೆರೆ.

ಉತ್ತರಕ್ಕೆ ದಿಣ್ಣೆ ಅಡೆರಾಕ್ಷಸನ ಬೇಲಿ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ 120 ದಕ್ಷಿಣೋತ್ತರ ಸರಾಸರಿ 37 ಸಲಿಗೆಜಗಳು 4440ಕ್ಕೆ ಯಕರೆ 0 ರೋಡ್ 3 ಪೋಲ್ 26 ಗಜಾ 23½ ವುಳ್ಳದ್ದು.

ಯಿದನ್ನ ಕಾಫೀಸಾಗುವಳಿಗೆ ಕೊಡಿಸಬೇಕೆಂದು ಹಾಲೀ ಬೇಲೂರು ಅಗಸಾಲಿ ರಾಮಾಚಾರಿ ಯಂಬವ 76ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕು ದಾರೀಯನ್ನ ಕುರಿತು ವ್ಯಾಜ್ಯಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ ತಾರೀಖು ಲಾಗಾಯತ್ತು ಒಂದು ತಿಂಗಳುವಳಗಾಗಿ ಡಿ|| ಮ|| ಕಾಫೀ ಇರ್ಚಾರ್ಜ್ ಫಸ್ಟ್ ಅ. ಕ. ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯರ್ಾ ಮಾಡಿಕೊಳ್ಳಬದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಬಿಸಲೇ ಹೋಬ ಹೆಂಟಿಬೈಲ್ ಗ್ರಾಮಕ್ಕೆ ಶೇರಿದ ಕರಿಯನ ಕುಮರಿಯೆಂಬ ಜಂಗಲ್.

ಚಕ್ಕುಬಂದಿ.

ಪೂರ್ವಕ್ಕೆ ಯರಗಹಳ್ಳಿಗ್ರಾಮದಿಂದ ಅತ್ತಿಹಳ್ಳಿ ಹೊಲಗೇರಿಗೆ ದನಗಳು ತಿರುಗುವ ದಾರಿ.

ದಕ್ಷಿಣಕ್ಕೆ ಅತ್ತಿಹಳ್ಳಿಯಿಂದ ಹೆಂಟಿಬೈಲ್‌ಗದ್ದೆಗೆ ಹೋಗುವ ದಾರಿ,

ಪಶ್ಚಿಮಕ್ಕೆ ಅತ್ತಿಹಳ್ಳಿ ಶಿದ್ದೇಗವುಡನ ಪಟ್ಟೆ ಹೆಂಟಿಬೈಲ್ ಗದ್ದೆ.

ಉತ್ತರಕ್ಕೆ ಅತ್ತಿಹಳ್ಳಿಯಿಂದ ಬಿಚಮನೆ ಕೊಪ್ಪಕ್ಕೆ ಹೋಗುವ ದಾರಿ.

ಈ ಮಧ್ಯೆ ಪೂರ್ವಪಶ್ಚಿಮ ಗಜ 160 ದಕ್ಷಿಣೋತ್ತರ 92 ಗಜ ಸಲಗಜಗಳು 14720ಕ್ಕೆ ಎಕರೆ 3 ರೋಡ್ 0 ಪೋಲ್ 6 ಗಜಾ $18\frac{1}{2}$ ವುಳ್ಳದ್ದು.

ಈ ಮೇಲ್ಕಂಡ ಜಮೀನನ್ನು ತನಿಗೆ ಕಾಫೀಸಾಗುವಳಿಗೆ ಕೊಡಿಸಬೇಕೆಂದು ಯರಗಹಳ್ಳಿ ಗ್ರಾಮದ ದೊಡ್ಡ ಸುಬ್ಬೇಗವುಡನ ಮಗ ನಿಂಗೇಗೌಡನೆಂಬವನು 126ನೇ ದರಖಾಸ್ತು ಮಾಡಿ ಯಿದ್ದಾನಾಗಿ ಆದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಸದರೀ ಜಂಗಲನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೇಮಾಡತಕ್ಕವರಾಗಲಿ ಅಥವಾ ಹಕ್ಕುದಾರಿಯನ್ನು ಕುರಿತು ವ್ಯಾಜ್ಯಮಾಡತಕ್ಕವರೇಆಗಲಿ ಯಿದ್ದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯತು ಮಂದು ತಿಂಗಳುವಳಗಾಗಿ ಡಿ|| ಮ|| ಕಾಫೀ ಯಿನ್‌ಚಾರ್ಜ್‌ಫಸ್ಟ್ ಅ|| ಕ|| ರವರಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾ೯ ಮಾಡಿಕೊಳ್ಳತಕ್ಕದ್ದು.

ಈ ನಿಬಂಧನೆಗೆ ತಪ್ಪಿ ಬಳಿಕ ಈವಿಷಯದಲ್ಲಿ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಬತಾರೀಖು ನೇ ಮಾಹೇ ಅಗಟಂಬರು ಸ್ ೯ 1876ನೇ ಇಸವಿ ಮೊಕ್ಕಾಂ ಹಾಸನ.

ಸೈ೯ ತಾರೀಖು 4ನೇ ನವಂಬರು.

H. E. Mottet,
Dy. Commr.

KADUR DISTRICT.

Notice of an application by Gúdlappa for a certificate under Act XXVII of 1860.

ಕಡೂರು ಡಿಸ್ಟ್ರಿಕ್ ಡೆ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತಜನರಿಗೂ ಪ್ರಸಿದ್ಧಪಡಿಸುವದೇನಂದರೆ,—ಲಕ್ಕವಳ್ಳಿ ತಾಲ್ಲೂಕು ಲಕ್ಕವಳ್ಳಿ ಕಸಬಾದಲ್ಲಿ ಯಿರುವ ಸಿವಾಚ್ಯಾರ ಸುಗ್ಗಪ್ಪನಮಗ ಗಡ್ಲಪ್ಪನು ಪ್ರಾತೀಪಟ್ಟ ತನ್ನ ತಂದೆ ಸುಗ್ಗಪ್ಪನಿಗೆ ಬರತಕ್ಕ 500 ರೂಪಾಯಿಗಳು ವಸೂಲ್ ಮಾಡಿಕೊಳ್ಳತಕ್ಕಬಗ್ಗೆ ಸ್ ೯ 1860ನೇ ಇಸವೀ 27ನೇ ಆಕ್ಟ್‌ಪ್ರಕಾರ ತನ್ನ ಹೆಸರಿಗೆ ಸರ್ಟಫಿಕೇಟ್ ಮಾಡಿಸಬೇಕೆಂದು ಈ ಕೋರ್ಟಿಗೆ ದಾಖಲ್‌ಮಾಡಿ ಯಿರುವ ಅರ್ಜೀಯು ಫೈಸಲ್ ಬಗ್ಗೆ ಬರುವ ಡಿಸೆಂಬರ್ ತಿಂಗಳ 9ನೇ ತಾರೀಖಿನಲ್ಲಿ ನಿಶ್ಚೈಸಿರುವದ್ದರಿಂದ ಈ ಬಗ್ಗೆ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳತಕ್ಕದ್ದು.

ತಾರೀಖು 2—11—1876ನೇ ಇಸವೀ ಮೊಕ್ಕಾಂ ಚಿಕ್ಕಮಗಳೂರು.

Proclamation under Section 171 of the Criminal Procedure Code for the attendance of one Kaveri, Jail Peon.

ಕ್ರಿ. ಪ್ರೊ. ಕೋಡ್ 171ನೇ ಸೆಕ್‌ಷನ ಪ್ರಕಾರ.

ಚಿಕ್ಕಮಗಳೂರು ತಾಲ್ಲೂಕು ದೇವರಾಯಪೇಟೆ ವಾಸಸ್ಥನಾದ ಜೈಲ್ ಜವಾನ ಕಾವೇರೀ ಯಂಬವನು ಇಂಡ್ಯನ್ ಪೆನಲ್‌ಕೋಡ್ 507ನೇ ಸೆಕ್‌ಷನ್‌ಪ್ರಕಾರ ಶಿಕ್ಷೆಯಾಗತಕ್ಕ ತಕ್ಶೀರ್ ಮಾಡಿ ಯಿರುವದಾಗಿ ನಮ್ಮ ಮುಂದೆ ಫಿರಿಯಾದು ಆಗಿ ಅದರ ಮೇಲೆ ಕೊಡಲ್ಪಟ್ಟ ದಸ್ತಗಿರೀ ವಾರಂಟಿಗೆ ಸದರೀ ಕಾವೇರಿಯು ಸಿಕ್ಕಲಿಲ್ಲ ವೆಂಬದಾಗಿ ರಿಟರ್ನ ಆಗಿ ಬಂದ ಸದರೀ ವಾರಂಟು ಜಾರೀಯಾಗದರೀತಿ ಮರೆಯಾಗಿರುವದಾಗಿಯೂ ಫರಾರೀಯಾಗಿರುವದಾಗಿ ನಮ್ಮಗೆ ತೃಪ್ತಿಕರವಾಗಿ ತಿಳದುಬಂದು ಯಿರುವದ್ದರಿಂದ ಸದರೀ ಕಾವೇರೀ ಯಂಬವನು ಈ ತಾರೀಖು ಲಗಾಯತು 30 ದಿವಸಗಳ ವಳಗೆ ಸದರೀ ಫಿರಿಯಾದಿಗೆ ಜವಾಬ್ ಕೊಡುವದಕ್ಕೆ ನಮ್ಮ ಕೋರ್ಟು ರೂಬರೂ ಹಾಜರು ಆಗತಕ್ಕದ್ದೆಂದು ಈ ಯಿಸ್ತಿಹಾರ್ ಮೂಲಕ ವಿಧಿಸಿಧೆ.

ತಾರೀಖು 4ನೇ ನವಂಬರ್ 1876ನೇ ಇಸವೀ ಮೊಕ್ಕಾಂ ಚಿಕ್ಕಮಗಳೂರು.

Notice of sale of occupied lands.

1. ಇದರಿಂದ ತಿಳಿಸಲ್ಪಡುವದೇನಂದರೆ—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವನಿಂದ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಫ್ತಾದ ಈ ಕೆಳಗೆ ಕಂಡ ಜಮೀನ್‌ಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನಿನ ದರೋಬಸ್ತು ಹಕ್ಕುದಾರಿಗಳೂ; ಕಡೂರು ಡಿಸ್ಟ್ರಿಕ್ಟು ಲಕ್ಕವಳ್ಳೀ ತಾಲ್ಲೂಕು ಕುಂಬತ್ತಿ ಗ್ರಾಮದಲ್ಲಿ ಚಾಲ್ತೀ ಇ...0ನೇ ಯಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಕೆಳಗೆ ಕಾಣಿಸುವ ಗ್ರಾಮದಲ್ಲಿ ಹಿಡುವಳೀ ಸಮೀ...ಡುವದು. ಸದರೀ ಹಕ್ಕುಗಳ ವಿಸಿಷ್ಟಾಂಶಗಳೊಡನೆ ಜಮೀನ್‌ಗಳು ಚಡದರಖಾಸ್ತುದಾರಿಗೆ ವಿಕ್ರಯಿಸಲ್ಪಡುವದು.

510

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವಿ ಪೂರಾ ಆಗಲಿ (ಉಳಿದ ಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜ ಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೇಯಲ್ಲಿ ತಫ್ಸೀಲ್ವಾರ್. ತೋರಿಸಲ್ಪಟ್ಟ ಪ್ರಕಾರ 51–11–9 ರೂಪಾಯಿ ಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತವೆ.

ಯಾವ ಸಂವತ್ಸರದ ಬಾಬತು 1875—76ನೇ.

ತಾಲ್ಲೂಕು	ಗ್ರಾಮ.	ಕಂದಾಯಕೊಡಲಿಕ್ಕೆ ತಪ್ಪಿದವನ ಹೆಸರು.	ಜಮೀನ್ ತರಿಯೋ ಖುಷ್ಕಿಯೊ ಯಾ ಬಾಗಾಯಿತೆ ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ॥ ಕಟ್ಟೋಗಳು ಯಾವದಾದರೂ ಯಿರುತ್ತವೆಯೆ.	ಜಮೀನ್. ನಂಬರ್.	ಜಮೀನ್. ಹೆಸರು	ಅಂದಾಜ್ ಬೀಜವರಿ.			ಕಂದಾಯ ರೂ.	ಆ.	ಪೈ.	ಸಾಲ್ ಮಜಕೂರಿಗೆ ಕ್ರಯದಾರನಿಂದ ಸಲ್ಲತಕ್ಕ (ಬಾಕೀ ಹವಾಯಿ) ಹೊಬಲಿಗಟ್ಟು
ಲಕ್ಕವಳ್ಳಿ.	ಆಡವಳಿ ಮಾಗಣಿ ತೂಬಿತ್ತಿ ಗ್ರಾಮ.	ಜೈ ಭೀಮಾಚಾರಿ.	ತರೀ ಜಮೀನು.	6	ಗೊರಸಿನ ಗದ್ದೆ	1	10	0	3	6	5	
				7	ಕ್ಯಾದಿಗೆ ಗದೆ	1	10	0	3	6	5	
				8	ಹೊಗೆಕಿಂಡಾಗ	1	0	0	2	4	4	
				9	ಬೆಳಲ್ಲಿ ಮಕಿ	1	0	0	1	14	3	
				10	ಕೆರೆ ತಗ್ಗು	1	0	0	2	4	4	
				12	ಬಳೆ ಹಿತ್ತಲ್	2	10	0	5	10	9	
				24	ಯಟಿಹಳ್ಳಿ	1	0	0	2	4	4	
				25	ಮಾವಿನ ಮರದ ಗದ್ದೆ	2	0	0	4	8	7	
				13	ಕೊಂಡರಹಾಳೆ	2	0	0	4	11	8	
				15	ಡಿಟೋ.	1	0	0	2	5	10	
				19	ಬೆಟ್ಟೆಪುರನತರಿ	3	0	0	7	1	5	
				20	ನೆಲ್ಲಿಮರದಗದ್ದೆ	2	0	0	4	11	8	
						19	10	0	44	10	0	

ಹರಾಜ್ ಆಗತಕ್ಕ ವಾಯಿದೆ ತಾರೀಖು 30—11—76.

P. Krishna Rao,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟ್.

ತಾರೀಖು 3ನೇ ನವಂಬರ್ 1876.

ಇದರಿಂದ ಸಕಲರಿಗೂ ತಿಳಿಯತಕ್ಕ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕಳದ ಅನೇಕ ತಿಂಗಳ ವರಿಗೂ ಬಹಳವಾಗಿ ದನಗಳು ಸತ್ತು ಹೋದ ಸಬಬ್ ಪ್ರಯಾಣಸ್ತರು ಯಿದುವರಿಗೆ ಕೊಡುತ್ತಾ ಯಿದ್ದ ಸ್ವಲ್ಪ ಕಾಲದೊಳಗಾಗಿ ಮಾರ್ಗದಲ್ಲಿ ಉದ್ದಕ್ಕೂ ಟಪ್ಪಾಲ್ ಯತ್ತುಗಳನ್ನು ವದಗಿಸುವದಕ್ಕೆ ಸ್ಥಳದ ಅಧಿಕಾರಿಗಳಿಗೆ ಕೇವಲ ಅಸಾಧ್ಯವಾಗಿರುವಂತೆ ಕಾಣಾ ಬರುತ್ತೆ. ಜನಗಳ ನಿರಿಕ್ಷಣೆ ಭಂಗವಾಗದಂತೆ ಯಿರುವ ಬಗ್ಯೆ ಇಯಿಂದ ಯತ್ತಿನ ಟಪ್ಪಾಲ್ ಅವಶ್ಯಕ ವಿರುವರು ಅಧವಾಪಕ್ಷ ಪೂರಾ 6 ದಿನಗಳ ನೋಟೀಸ್ ಕೊಡಬೇಕೆಂದು ಯಿದರಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

E. Armstrong,
Dy. Commr.

COORG.

Notice of an application by Kappaiya for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟ್ ಕೋರ್ಟಿನಿಂದ.

ಸರ್ 1876ನೇ ಇಸವೀ ಬಾಬತು ಶಿವಿಲ್ ನಾನಾವಿಧ ನಂಬರ್ 16.

ಸರ್ವೇಜನರಿಗೂ ತಿಳಿಯಪಡಿಸುವದೇನಂದರೆ—ಎಳುಸಾವಿರ ಶೀಮೆ ತಾಲ್ಲೂಕು ಪೈಕೀ ಕೊಡ್ಲಿಪೇಟೆಯಲ್ಲಿ ಯಿರುವ ಶಿವಾಚಾರ ದ ಕಪ್ಪೈಯ ನೆಂಬವನು ಫೌತೀ ತನ್ನ ತಂದೆ ಕಲ್ಲಡ್ಳಿ ಕರಿಬಸಪ್ಪಗೆ ಹೊರಗಿನಿಂದ ಬರತಕ್ಕ 6000 ರೂಪಾಯಿ ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರಟಿಫಿಕೇಟ್ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೆ ಸರ್ 1876ನೇ ಇಸವಿ ಡಿಸೆಂಬರ್ ತಾರೀಖು 13ನೇ ದಿನ ಹಗಲು 11 ಗಂಟೆಗೆ ಈ ಕೋರ್ಟು ಮೊಕ್ಕಾಂನಲ್ಲಿ ಹಿಯರಿಂಗ್ ಆಗುವದ್ದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರು ಯಿದ್ದರೆ ಸದರೀ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸಬಹುದು.

ತಾರೀಖು 8ನೇ ನವಂಬರ್ 1876ನೇ ಇಸವೀ ಮೊಕ್ಕಾಂ ಜಂಬೂರು.

E. SHAW,
Offg. Supt.

ಸರ್ 1876ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಸದರೀ ತಿಂಗಳ ಆದಿಭಾಗದಲ್ಲಿ ಡಿಸ್ಟ್ರಿಕ್ಟಿನ ಕೆಲವು ಕಡೆಗಳೊಳಗೆ ಯರಡು ಮಳೆ ಯಾಯಿತು, ಯಿಷ್ಟೇ ಹೊರತು ಮಿಕ್ಕ ಕಡೆಗಳಲ್ಲೆಲ್ಲ ಶುದ್ಧಾಂಗ ಮಳೆ ಆಗಲಿಲ್ಲ ಕೆರೆಗಳು ಒಣಗಿ ಹೋಗಿ ಅಥವಾ ನೀರು ಕಡಮೆಯಾಗಿ ಹೋಗಿ ನೀರಿನ ದೌರ್ಲಭ್ಯವು ದಿನ ದಿನವೂ ಹೆಚ್ಚುತಿರುವದರಿಂದ ಬಹಳ ಭಯಕ್ಕೆ ಕಾರಣವಾಗಿ ಯಿದೆ.

ಫಸಲುಗಳು.—ಫಸಲುಗಳು ಬಹಳ ಮಟ್ಟಿಗೆ ನಷ್ಟವಾಗಿ ಹೋದವು. ಅಲ್ಪವಾಗಿ ಉಳಿದಿರುವ ಫಸಲ್ ಸಾಧಾರಣವಾಗಿ ಆಗತಕ್ಕದ್ದರಲ್ಲಿ ಬಹಳ ಸ್ವಲ್ಪವಾಗಿ ಆಗುವದೆಂದು ನಿರೀಕ್ಷಿಸಲ್ಪಡುತ್ತೆ. ಜೋಳ, ಉರಳಗಡ್ಡೆ, ವಗೈರೇ ಪೈರಾದವು, ರಾಗಿ, ನಾಟಿರಾಗಿ, ಸಾಮೇ, ಭತ್ತ ಯಿವು ಕೊಂಚ ಮಹಸೂಲ್ ಕಾಣಬಂತು.

ಧಾರಣೆ.—ಧಾರಣೆ ಬಹಳ ಚಡಾಯಿಸಿ ಯಿದೆ. ಇದರಿಂದ ಬಡಜನಗಳಿಗೆ ಬಹಳ ಸಂಕಟ ವುಂಟಾಗಿ ಯಿದೆ. ಅವರುಗಳ ಪೈಕೀ ಅನೇಕರು ಹೊಟ್ಟೆಗಿಲ್ಲದೆ ಅನಾರೋಗ್ಯಕರಗಳಾದ ಸೊಪ್ಪುಗಳು, ಬೇರುಗಳು ತಿಂದು ಅಜನಗಳಿಗೆ ಆಮಶಂಕೆ ಮುಂತಾದ ರೋಗಗಳು ಹುಟ್ಟಿ ಯಿರುತವೆ.

ಆರೋಗ್ಯ.—ಸಾಮಾನ್ಯತಃ ಚನ್ನಾಗಿಯೇ ಯಿದೆ ಡಿಸ್ಟ್ರಿಕ್ಟು ಪೈಕೀ ಕೆಲವು ಪ್ರದೇಶಗಳಲ್ಲಿ ಚಳಿಜ್ವರ ಕೋಲೆಸ್ಪೇಟೆ, ಆನೇಕಲ್ಲು ಬೆಂಗಳೂರು ಈ ತಾಲ್ಲೂಕುಗಳೊಳಗೆ ಉಖಾಲ್ ಜಲಾ ಸಹಾ ಕಾಣಿಸಿಕೊಂಡಿದೆ.

ಜನಮರಣ.—ಸದರೀ ತಿಂಗಳಲ್ಲಿ 413 ಮಂದಿ ಹೋದರು. ಶೆಪ್ಟಂಬರ್‌ನಲ್ಲಿ 446 ಮಂದಿ ಹೋದರು.

ದನಗಳು.—ದನಗಳ ಪೈಕೀ ಬಹಳವಾಗಿ ಅಂದರೆ 2690 ಕಾಲ್ನಡೆ ಹೋದವು: ಕಳೆದ ಶೆಪ್ಟಂಬರ್‌ನಲ್ಲಿ 1990, ಆಗಸ್ಟಿನಲ್ಲಿ 1751 ಈ ಮೇರೆ ಮೇವು ಸಾಲದ್ದರಿಂದ ಹೋದವು.

ಗೋಮಾರೀ ರೋಗದಿಂದ ..	500	ಕಾಡು ಮೃಗಗಳಿಂದ ಕೊಲ್ಲಲ್ಪಟ್ಟವು ..	100
ಯಿತರ ರೋಗಗಳಿಂದ ..	2290	ಕುಲ್	2690

ಜಮಾಬಂದುಗಳು.—ಜಮೀನ್ 978—10—10 ರೂಪಾಯಿಗಳ ಕಂದಾಯ ಪುಳ್ಳ ಜಮೀನ್ ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು.

L. RICKETTS,
Offg. Dy. Commr.

ಕೋಲಾರ ಡಿಸ್ಟ್ರಿಕ್ಟು.

ಮಳೆ.—ಅಕ್ಟೋಬರ್ ತಿಂಗಳಲ್ಲಿ ಸರಾಸರಿ 34½ ಸೆಂಟ್ಸ್ ಮಳೆ ಬಿತ್ತು. ಶೆಪ್ಟಂಬರ್ ತಿಂಗಳಲ್ಲಿ 43½ ಸೆಂಟ್ಸ್ ಮಳೆ ಬಿತ್ತು. ಈ ತಿಂಗಳಲ್ಲಿ ಹವ ಹಿಂದಿನ ತಿಂಗಳಿಗಿಂತಲೂ ಕೆಟ್ಟದ್ದಾಗಿತ್ತು. ಮಳೆ ಬಹಳ ಕೊಂಚವಾಗಿಯೂ ಅಕಾಲವಾಗಿಯೂ ಬಿದ್ದದ್ದರಿಂದ ರಾಗಿ ಮತ್ತು ಭತ್ತದ ಫಸಲುಗಳು ಸ್ವಲ್ಪ ಹೆಚ್ಚು ಕಡಿಮೆ ಸಂಪೂರ್ತಿಯಾಗಿ ಕೆಟ್ಟು ಹೋಯಿತು.

ಈ ತಿಂಗಳಲ್ಲಿ 1380-10-3 ರೂಪಾಯಿಗಳ ಕಂದಾಯ ಬಾಳುವ ಜಮೀನು ಹೊಸದಾಗಿ ಸಾಗುವಳಿಗೆ ತೆಗದುಕ್ಕೊಳ್ಳಲ್ಪಟ್ಟಿತು ಯಾವ ಜಮೀನಿಗೂ ರಾಜೀನಾಮೆ ಕೊಡಲ್ಪಟ್ಟಿರುವದಿಲ್ಲ.

ಫಸಲು—ಕಡ್ಲೆ ಮತ್ತು ಜೋಳ ಪೇರಾವಾದವು. ರಾಗಿ ಮತ್ತು ಭತ್ತ ಕೊಂಚಮಟ್ಟಿಗೆ ಕಟಾವಾಗಿರುತ್ತೆ.

ಭಾವಿಗಳಿಂದ ನೀರು ಹರಿಯುವ ಜಮೀನುಗಳಲ್ಲಿರುವ ಫಸಲುಗಳು ವಿನಾ ಕಡಿಮೆ ಬೆಳೆಯಲ್ಲಿರುವ ಯಲ್ಲ ಫಸಲುಗಳೂ ವಣಗಿ ಹೋದವು.

ಜನಾರೋಗ್ಯ—ಆರೋಗ್ಯ ಸಾಧಾರಣವಾಗಿ ಚನ್ನಾಗಿತ್ತು. ಶಪ್ಟಂಬರ ತಿಂಗಳಿಗಿಂತಲೂ ಕಮ್ಮಿಯಾದಾಗ್ಯೂ ಜ್ವರ ಮತ್ತು ಖೈ ಜುಲಾಬ್ ಮಾತ್ರ ವ್ಯಾಪಿಸಿತ್ತು. ಖೈ ಜುಲಾಬಿನಿಂದ 18 ಮಂದಿ ಸತ್ತರು. ಹಿಂದಿನ ತಿಂಗಳಲ್ಲಿ 48 ಇತರ ಕಾರಣಗಳಿಂದ ಸತ್ತವರ ಸಂಖ್ಯೆ ಹ್ಯಾಗಂದರೆ.

	ಶಪಟಂಬರನಲ್ಲಿ.	ಅಕ್ಟೋಬರನಲ್ಲಿ		ಶಪಟಂಬರನಲ್ಲಿ.	ಅಕ್ಟೋಬರನಲ್ಲಿ
ಜ್ವರದಿಂದ	287	239	ಆಕಸ್ಮಿಕ ವ ಘಾಯಪಟ್ಟದ್ದರಿಂದ	9	18
ಹೊಟ್ಟೆಸುಗ್ಗಿನಿಂದ	36	39	ಇತರರೋಗಗಳಿಂದ	144	149
ಸಿಡುಬಿನಿಂದ	14	11			

ಅಕ್ಟೋಬರ್ ತಿಂಗಳಲ್ಲಿ ಯೇಕೋನು 386 ಜನನವಾದವು.

ಕಾಲ್ನಡೆ—ಜಾನವರಿನ ಪೈಕಿ ಈ ತಿಂಗಳಲ್ಲಿ ಹಿಂದಿನ ತಿಂಗಳಿಗಿಂತಲೂ ಬಹಳ ಹೆಚ್ಚಾಗಿ ಮೃತಪಟ್ಟವು. ಹ್ಯಾಗಂದರೆ 3448 ಹಿಂದಿನ ತಿಂಗಳಲ್ಲ 2496 ವಿವರ.

	ಶಪ್ಟಂಬರ.	ಅಕ್ಟೋಬರ		ಶಪ್ಟಂಬರ.	ಅಕ್ಟೋಬರ
ಆಕಳುಗಳು ವ ಯೆತ್ತುಗಳು	794	1418	ಕುದುರೆಗಳು	27	8
ಯೆಮ್ಮೆಕೋಣಗಳು	337	430	ಕತ್ತೆಗಳು	56	27
ಕುರಿ ವ ಮೇಕೆಗಳು	1282	1565	ಜುಮ್ಲಾ	2496	3448

ನಿರಖು—ಧಾರಣೆವಾಸಿಗಳು ದಿನೇದಿನೇ ಚಡಾವಾಗುತ್ತಾಯಿವೆ.

B. KRISHNAIENGAR,
Dy. Commr.

ತುಮಕೂರು ಡಿಸ್ಟ್ರಿಕ್ಟು.

ಮಳೆ,—ಈ ತಿಂಗಳೊಳಗೆ ಬಹಳ ಕೊಂಚ ಮಳೆ ಬಿದ್ದಿರುತ್ತೆ. 24 ಸೆಂಟ್ಸ ಮಾತ್ರ ಬಿದ್ದಂತೆ ಹೆಡ್ ಕ್ವಾರ್ಟರಗಳಲ್ಲಿ ಅಳೆಯಲ್ಪಟ್ಟಿರುತ್ತೆ.

ಬೆಳೆ,—ಈ ತಿಂಗಳೊಳಗೆ ಯಾವದೂ ಪೇರಾವಾಗಲಿಲ್ಲ. ಖುಷ್ಕಿ ಫಸಲ್‌ಗಳ ಪೈಕೀ ರಾಗಿಯೂ, ಕುಣಿಗಲ್, ಕಡಬ, ತುಮಕೂರು ತಾಲ್ಲೂಕುಗಳ ಕೆಲವು ಸ್ಥಳಗಳಲ್ಲಿ ಹೊರ್ತಾ ಕಡಮೇ ಕಡೆಯಲ್ಲಾ ಶುದ್ಧಾಂಗವಾಗಿ ಹೋದವು. ತರೀಫಸಲ್ ಚನ್ನಾಗಿರಲಿಲ್ಲ.

ಆರೋಗ್ಯ,—ಚನ್ನಾಗಿರಲಿಲ್ಲ, ಮದ್ದಗಿರಿ, ಕುಣಿಗಲ್, ಹೊನ್ನವಳ್ಳೀ ತಾಲ್ಲೂಕುಗಳಲ್ಲಿ ಕೆಲವರಿಗೆ ಖೈಜುಲಾಬ್ ತಗಲಿತು 30 ಮಂದಿ ಹೋದಂತೆ ರಿಪೋರ್ಟಾಗಿರುತ್ತೆ. ಜಾನವರ್‌ಗಳ ಸಾವು ಬಹಳವಾಗಿ ಅಂದರೆ 16618 ಹೋದವು. ಹಿಂದಿನ ತಿಂಗಳಲ್ಲಿ 11,400 ಹೋದವು.

ಜಮೀನ್,—ಈ ತಿಂಗಳೊಳಗೆ ಹೊನ್ನವಳ್ಳೀ ವಿನಾ ಮಿಕ್ಕ ದರೋಬಸ್ತು ತಾಲ್ಲೂಕುಗಳಲ್ಲಿ 1161-0-9 ರೂಪಾಯಿಗಳು ಕಂದಾಯುವುಳ್ಳ ಜಮೀನ್ ಸಾಗುವಳೀಬಗ್ಯೆ ಹೊಸದಾಗಿ ತೆಗದುಕೊಳ್ಳಲ್ಪಟ್ಟಿತು.

ಧಾರಣೆ,—ಈ ತಿಂಗಳೊಳಗೆ ಧಾರಣೆಗಳು ಚಡಾವಾಗಿರುತ್ತೆ.

E. S. LUDLOW,
Offg. Dy. Commr.

ಮೈಸೂರು ಡಿಸ್ಟ್ರಿಕ್ಟು.

ಮಳೆ,—ಮೈಸೂರಲ್ಲಿ ಮೂರು ದಿವಸಗಳಲ್ಲಿ ಅಂದರೆ, 2-5 ಮತ್ತು 18ನೇ ತಾರೀಖುಗಳಲ್ಲಿ 2 ಅಂಗುಲ 15 ಸೆಂಟ್ಸ ಮಳೆ ಬಿದ್ದಿರುತ್ತೆ. ಮುಂದೆ ಇನ್ನೂ ಬಹಳ ಆವಶ್ಯಕವಾಗಿರುತ್ತೆ.

ಬೆಳೆ,—ನೀರಿಲ್ಲದೆ ಶಮಾಂ ಖುಷ್ಕೀಫಸಲ್‌ಗಳು ಬಣಗುತ್ತಿವೆ. ತರೀಫಸಲ್ ಹ್ಯಾಗಾದರೂ ಸ್ವಲ್ಪ ಅನುಕೂಲವಾಗಿರುತ್ತೆ. ಈ ತಿಂಗಳೊಳಗೆ ಗುಂಡ್ಲುಪೇಟೆ, ತಲಕಾಡು ತಾಲ್ಲೂಕುಗಳ ಕೆಲವು ಪ್ರದೇಶಗಳಲ್ಲಿ ಕಡ್ಲೆ, ಮತ್ತು ಅರಳೆ, ಪೇರಾವಾದವು.

ಆರೋಗ್ಯ,—ಜನಾರೋಗ್ಯವು ಯಲ್ಲಾಕಡೆ ಚನ್ನಾಗಿತ್ತು. ಖೈಜಾಲಾಬಿನಿಂದ ಮೃತಪಟ್ಟ 71 ಶೇರಿ 544 ಮಂಧಿ ಹೋದರು.

ಕಾಲ್ನಡೆ,—ಗೋಮಾರೀ ರೋಗದಿಂದ 588, ಯಿತರ ಕಾರಣಗಳಿಂದ 2,328 ಕಾಲ್ನಡೆಗಳು ಹೋದವು. ಸಾಧಾರಣವಾಗಿ ಮೇವಿಲ್ಲ.

ನಿರಖು,—ಜಿನಸಿಗಳ ದುರ್ಭಿಕ್ಷವು ಸಾಧಾರಣವಾಗಿತ್ತು. ಈ ತಿಂಗಳೊಳಗೆ ಧಾರಣೆಗಳು ಬಹಳ ಚಡಾವಾಯಿತು.

C. J. PEARSE,
Dy. Commr.

ಚಿತ್ರದುರ್ಗ ಡಿಸ್ಟ್ರಿಕ್ಟು.

ಮಳೆ,—ಡಿಸ್ಟ್ರಿಕ್ಟು ಮುಳೆ ಐದು ತಾಲ್ಲೂಕುಗಳಲ್ಲಿ ಕೊಂಚೆ ಮಳೆ ಬಿದ್ದಿರುತ್ತೆ. ಪ್ರತಿ ಕಸಬಾ ಹೆಡ್‌ಕ್ವಾರ್ಟರ್‌ನಲ್ಲಿಯೂ ಈ ಕೆಳಗೆ ಬರುವ ಮೇರೆ ಮಳೆ ಬಿದ್ದ ಹಾಗೆ ಅಳೆಯಲ್ಪಟ್ಟಿರುತ್ತೆ.

ಜಗಳೂರು	..	20 ಸೆಂಟ್ಸ್.	ಹೊಸದುರ್ಗ	..	2	95 ಸೆಂಟ್ಸ್.
ಹಿರಿಯೂರು	..	20 ಸೆಂಟ್ಸ್.	ಪಾವಗಡ	..	0	10 ಸೆಂಟ್ಸ್.
ಹುಳಿಯಾರ್	..	20 ಸೆಂಟ್ಸ್.				

ಹಗಲು ಬಹಳ ಶಖೆಯಾಗಿತ್ತು.

ಫಸಲು,—ಜಾಗು ಪ್ರದೇಶಗಳಲ್ಲಿ ಬಿತ್ತಲ್ಪಟ್ಟವುಗಳು ಶಿವಾಯಿ ಕಡಿಮೆ ಯಲ್ಲಾ ಖುಷ್ಕೀ ಫಸಲುಗಳು ವಣಗಿ ಹೋದವು, ಕಪಿಲೇ ಭಾವಿಗಳ ಕೆಳಗೂ ಕಟ್ಟೆಗಳ ಕೆಳಗೂ ಬೆಳೆದ್ದ ಜವಿರಿ, ವ ರಾಗೀಫಸಲ್‌ಗಳು ಕಟಾವಾದವು, ಕೆಲವು ಭಾಗಗಳಲ್ಲಿ ನಾಲ್ಕರಲ್ಲಿ ವೊಂದು ಭಾಗ ಫಸಲು ಯಿತರ ಸ್ಥಳಗಳಲ್ಲಿ ಅರ್ಧ ಫಸಲು ಆಗಿರುತ್ತದೆ. ಗನ್ನ ಕಟಾವಾಗಿ ಆಲೆ ಆಡಲ್ಪಟ್ಟಿತೆ. ಕೆರೆಗಳಲ್ಲಿ ನೀರು ಯಿಲ್ಲದೆ ಅನೇಕ ತೋಟಗಳಲ್ಲಿ ಅಡಿಕೇಮರಗಳು ವಣಗಿ ಹೋದವು. 403—1—2 ರೂಪಾಯಿಗಳ ಕಂದಾಯ ಬಾಳುವ ಜಮೀನು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟಿರುತ್ತೆ.

ಆರೋಗ್ಯ,—ಕೆಲವು ಪ್ರತ್ಯೇಕಿಸಲ್ಪಟ್ಟ ಸ್ಥಳಗಳಲ್ಲಿ ಖೈಜಾಲಾಬ್ ವ್ಯಾಪಿಸಿರುವದು ಶಿವಾಯಿ ಡಿಸ್ಟ್ರಿಕ್ಟು ಮುಳೆ ಜನಾರೋಗ್ಯ ಸಾಧಾರಣವಾಗಿ ಚನ್ನಾಗಿಯೇ ಯಿತ್ತು. ಯಿದರಿಂದಲು ಯಿತರ ಕಾರಣಗಳಿಂದಲೂ 615 ಸತ್ತಹಾಗೂ, ಹಿಂದಿನ ತಿಂಗಳಲ್ಲಿ 428 ಮಂದಿ ಸತ್ತಹಾಗೂ, ರಿಪೋರ್ಟಾಗಿರುತ್ತೆ.

ಕಾಲ್ನಡೆ,—ಜಾನುವಾರಿನ ಸ್ಥಿತಿ ಯೆಂದಿಗಿಂತಲೂ ಹೆಚ್ಚಾಗಿ ಕೆಟ್ಟು ಹೋಗಿರುತ್ತೆ. ಮೇವು ಯಿಲ್ಲದೆಯೂ, ರೋಗಗಳಿಂದಲೂ 11,579 ಸತ್ತವು.

ನಿರಖು,—ಜಿನಸಿಗಳ ಧಾರಣೆವಾಸಿಯು ಕ್ಷಾಮಕಾಲದ ಧಾರಣೆವಾಸಿಗಳ ವರಿವಿಗೂ ಚಡಾವಾದವು.

E. ARMSTRONG,
Dy. Comm

ಕೊಡಗು ಡಿಸ್ಟ್ರಿಕ್ಟು.

ತರೀಜಮೀನ್—ಕಾರ್ತೀಕ ಫಸಲು ಮಳೆ ಯಿಲ್ಲದೆ ವಣಗಿ ಹೋಗುತ್ತಿದೆ. ಈ ತಿಂಗಳ (ಅಂದರೆ ನವಂಬರ ತಿಂಗಳ) ಮಧ್ಯದಲ್ಲಿ ಯಾದರೂ ಕೆಲವು ಮಳೆ ಬಾರದೆ ಹೋದರೆ ಸರ್ವತ್ರ ಮಳೆ ಕೆಟ್ಟು ಹೋಗುವದೆಂದು ಹೆದರುತ್ತಾರೆ ಉತ್ತರ ಕೊಡಗಿನಲ್ಲಿ ವೈಶಾಖೀ ಫಸಲ್ ಪೇರಾವ್ ಆಗುತ್ತಿದೆ.

ಖುಷ್ಕೀಫಸಲ್‌ರಾಗಿ—ರಾಗೀ ಕುಯಿಲಾಗಿ ರೇಖೇ ಆಗಿರುತ್ತೆ.

ಇಲಾಚಿ—ಏಲಕ್ಕಿ ಕೀಳುವ ಕೆಲಸ ನಡೆಯುತ್ತಿದೆ.

ಹುರಳಿ—ಹುರುಳೀ ಫಸಲ್ ಒಣಗಿ ಹೋಯಿತು.

ಕಾಫೀ—ಕಾಫೀ ಕೀಳುವ ಕೆಲಸ ಷುರುವಾಯಿತು ಕೆಲವು ಪ್ಲಾಂಟೇಷರ್‌ಗಳಲ್ಲಿ ಹೊಸದಾಗಿ ನಾಟಲ್ಪಟ್ಟ ಗಿಡಗಳಿಗೆ ಮಳೆ ಯಿಲ್ಲದೆ ಬಾಡಿ ಹೋಗುತಿವೆ. ಮಜಾರೀದಾರು ಬಹಳ ಮಂದಿ ದೊರೆಯುತ್ತಲಿದ್ದಾರೆ.

514

ಜನಮರಣ—ಈ ಶೀಮೆಯ ಪ್ರಜೇಗಳ ಪೈಕಿ 204 ಮಂದಿ ಹೋದರು; ಕಳೆದ ಇಸವಿ ಇದೇ ತಿಂಗಳಲ್ಲಿ 312 ಮಂದಿ ಹೋದರು, ಇದರ ತಪಶೀಲ್,

ಅತಿಸಾರದಿಂದ	9	ಮಡಿಕೇರಿ ತಾಲ್ಲೂಕು	32	ಷಹರ್‌ಗಳು	
ಜ್ವರದಿಂದ	187	ಪಡಿನಾಲ್ಕು ನಾಡು	39	ಮಹದೇವಪೇಟೆ ..	.. 9
ಆಕಸ್ಮಿಕ	2	ಯಡೆನಾಲ್ಕು ನಾಡು	30	ವೀರರಾಜೇಂದ್ರಪೇಟೆ ..	.. 11
ಆತ್ಮಹತ್ಯ	1	ಕಿಗ್ಗಟ್ಟುನಾಡು	12	ಕುಲ್	.. 204
ಇತರರೋಗಗಳು	5	ನಂಜರಾಜಪಟ್ಣ	40		
ಕುಲ್	204	ಯೆಳುಸಾವಿರ ಸೀಮೆ	31		

ಸದರೀ ಸಂಖ್ಯೆ ಪೈಕಿ 86 ಮಂದಿ ಗಂಡುಸರು 79 ಮಂದಿ ಹೆಂಗುಸರು, 39 ಮಂದಿ ಮಕ್ಕಳು ಇವರುಗಳ ಜಾತಿಗಳು ಕ್ರಿಸ್ತಿಯರು 4, ಕೊಡಗರು 22, ಹಿಂದು 156, ಮಹಮ್ಮದೀಯರು 19, ಇತರ ಜಾತೀಯರು 3, ಕುಲ್ 204,

ದನಗಳು—ದನಗಳ ಪೈಕಿ 247 ಕಾಲ್ನಡಿ ಕಳೆದ ಇಸಿವಿ ಇದೇ ತಿಂಗಳಲ್ಲಿ 381 ಕಾಲ್ನಡೆಗಳು ಹೋಗಿರುತ್ತೆ. ಯಿವುಗಳ ತಪಶೀಲ್. ಎತ್ತುಗಳು 66, ಆಕಳು 48, ಕರುಗಳು 50, ಕೋಣಗಳು 27, ಎಮ್ಮೆಗಳು 35, ಕರುಗಳು 21, ಕುಲ್ 247

ಧಾರಣೆ—ಜಡಾವಿನಲ್ಲಿಯೇ ಇಧೆ ಷ್ಷಿಪ್ರದಲ್ಲಿ ಮಳೆ ಬಾರದೆ ಇದ್ದರೆ ಇನ್ನೂ ಹೆಚ್ಚುವದು ಕುಲ್ ಮಳೆ 106 ಅಂಗುಲವೂ 2 ಇಂಚ್ ಬಿದ್ದಿದೆ.

E. SHAW,
Offg. Supt.

ಕರ್ರೆನ್ಸೀ ನೋಟಗಳು.

ಬೆಂಗಳೂರಿಂದ ತರೀಕೆರೆಗೆ ಅಂಚೇ ದ್ವಾರಾ ರವಾನೇ ಆಗುವಲ್ಲಿ ಯಿದರಡಿ ನಮೂದಿಸಲ್ಪಡುವ ಕರ್ರೆನ್ಸೀ ನೋಟುಗಳು ಹೋಗಿವೆ.

ನಂ.	ಸರ್ಕಿಲ್	ಮೊಬಲಗ	ಹಕ್ಕುದಾರ
$\frac{B}{50}$ 06769	ಮದ್ರಾಸ	100	ಬೆಂಗಳೂರಲ್ಲಿ ಪಾಳ್ಯಗಾರ ಯೇಜಂಟ ತರೀಕೆರೆ ರಂಗರಾವ್.
$\frac{B}{38}$ 84421	ಡಿಟೋ	100	
$\frac{B}{44}$ 18809	ಡಿಟೋ	100	
$\frac{B}{43}$ 68207	ಡಿಟೋ	50	
$\frac{B}{74}$ 34905	ಡಿಟೋ	50	

Mysore Government Press, Bangalore—1876.

515

ಮೈಸೂರ ಗೆಜೆಟ್.

ನಂ. 47 ಸರ್ಕಾರದಿಂದ ಪ್ರಾಯಿಸ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ನವಂಬರ ತಾ|| 25, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	297—304
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.	561—573
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	9—. 13

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

1ನೇ ಭಾಗ.

ನಂ. 259. ತಾರೀಖು 26ನೇ ಅಕ್ಟೋಬರ್ 1876.

ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್‌ಕಮ್ಮಿಷನರವರಿಂದ ಅಂಗೀಕರಿಸಲ್ಪಟ್ಟು ಮಂಜೂರಾಗಿರುವದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತವೆ.

2/26 ಜನರಲ್ ಪೆರೇಡ್ ಗ್ರೌಂಡ್ ಎಂಬ ಕವಾಯತ್ ದಿಣ್ಣಿಗೆ ಅಂಚಿನಲ್ಲಿ ಮಾತ್ರ ಯೇರ್ಪಟ್ಟಿರುವ ಕುದುರೇ ದಾರೀಯಲ್ಲಿ ಕುದುರೇಗಳನ್ನು ಸವಾರಿಗೆ ಯಾ ಬಂಡಿಗೆ ಪಳಗಿಸಲ್ಪಡಕೂಡದು. ಸದರೀ ಮಾರ್ಗದಲ್ಲಿ ಅತಿ ರಭಸವಾಗಿ ಸವಾರೀ ಮಾಡಕೂಡದು.

ಈ ಬೈಲಾ ನಿಬಂಧನೆಗೆ ತಪ್ಪುವಂತಾ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಹಾಗೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ನಡಿಸಲ್ಪಡತಕ್ಕ ಪ್ರತಿ ತಪ್ಪಿತಕ್ಕೂ, ಐದು ರೂಪಾಯಿಯ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

$\frac{3}{51}$ ಯಾವ ಮನೆಯಲ್ಲಿ ಉಖಾಲ್ ಜುಲಾಬಾಗಲಿ, ಶಿಡುಬಾಗಲಿ: ಕಾಣಿಸಿಕೊಳ್ಳುತ್ತದೋ ಆ ಮನೆಯ ಯಜಮಾನನು ಮ್ಯುನಿಸಿಪೆಲ್ ಕಮ್ಮಿಷನರ್ ಪ್ರೆಸೀಡೆಂಟರಿಗಾಗಲಿ, ಅತ್ಯಂತ ಸಮೀಪದಲ್ಲಿರುವ ಪೊಲೀಸ್ ಸ್ಟೇಷನಿಗಾಗಲಿ, ಜನಗಳ ಆರೋಗ್ಯದ ಬಗ್ಯೂ, ರೋಗವನ್ನು ಮಟ್ಟುಪಡಿಸುವಬಗ್ಯೂ, ತಕ್ಕ ಕ್ರಮಗಳನ್ನು ಏರ್ಪಡಿಸುವದಕ್ಕೋಸ್ಕರವೂ ಸದರೀ ಸಂಗತಿಯನ್ನು ಕುರಿತು ಕೂಡ್ಲೆ ರಿಪೋರ್ಟು ಮಾಡತಕ್ಕದ್ದೆಂದು ತಾಕೀದು ಮಾಡಲ್ಪಡುತ್ತಾರೆ.

ಈ ಬೈಲಾ ನಿಬಂಧನೆಯ ಷರತ್ತುಗಳನ್ನು ಜಾರೀಮಾಡುವದರೊಳಗೆ, ಕೆಲವು ಸಂಗತಿಗಳಲ್ಲಿ ರೋಗತಗಲಿದ ಮನುಷ್ಯನನ್ನು ಒಂದು ಆಸ್ಪತ್ರಿಗೆ ಒಯ್ಯುವದು ಜರೂರೆಂದು ಪ್ರಾಯಶಃ ಎಣಿಸಲ್ಪಡಬಹುದು, ಆದರೆ ಅಂತಾ ಮನೆಗಳೊಳಗೆ ರೋಗತಗಲಿದವರನ್ನು ಪ್ರತ್ಯೇಕಪಡಿಸುವದಕ್ಕೆ ತಕ್ಕ ಹಾಗೆ ಸ್ಥಳಾನುಕೂಲವಿದ್ದರೆ ಅಥವಾ ರೋಗಿಯನ್ನು ಪ್ರತ್ಯೇಕ ಖೋಲೀಯಲ್ಲಿಡುವದಕ್ಕೆ ಯುಕ್ತಗಳಾದ ಯೇರ್ಪಾಡುಗಳು ಮಾಡಬಹುದಾಗಿದ್ದರೆ ಅಂತಾ ಮನೆಗಳೊಳಗೆ ಸದರೀ ಕ್ರಮವು ಸುತರಾಂ ನಡಿಸಬೇಕಾದ್ದಿಲ್ಲವು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ ಮತ್ತು ಅಂತಾ ಉಲ್ಲಂಘನೆ ನಡಿಸಲ್ಪಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗಳ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ನಂ. 274. ತಾರೀಖು 4ನೇ ನವಂಬರ 1876.

ಮೈಸೂರು ಶೀಮೆಯಲ್ಲಿ ಸರ್ಕಾರ್ ರಸ್ತೆಗಳು, ಶೇತುವೆಗಳು, ಇವುಗಳ ಮೇಲೆ ಸುಂಕ ವಸೂಲ್ ಮಾಡುವಬಗ್ಯೆ ಈ ಕೆಳಗೆಬರುವ ರೂಲ್ಸ್ ಇಂಡ್ಯ ಗವರ್ನಮೆಂಟಿನವರ ಅಪ್ಪಣೆಯಪ್ರಕಾರ ಇದರಡಿ ಬರುವ ನಿಬಂಧನೆಗಳಿಗೆ ಒಳಪಟ್ಟು ಅನುಸರಿಸಲ್ಪಡುವದು.

1. ಈ ರೂಲ್ಸಿಗೆ ಸೇರಿಸೋಣಾದ ಪಟ್ಟಿಯಲ್ಲಿ ಅಡಗಿರುವ ದರಗಳು, ಹಾಲೀ ನಡೆಯುತ್ತಿರುವ ದರೋಬಸ್ತು ಗುತ್ತಾಗಳ ವಾಯಿದೆ ಪೂರೈಸಿದ ಬಳಿಕ ಫಾಟೀ ರಸ್ತೆಗಳು, ಶೇತುವೆಗಳು, ಇವುಗಳ ಮೇಲೆ ವಸೂಲಾಗತಕ್ಕ ಸುಂಕಗಳ ವಿಷಯದಲ್ಲಿ ಜಾರೀಗೆ ಬರತಕ್ಕದ್ದು.

2. 11ನೇ ರೂಲ್ ನಿಬಂಧನೆಗಳನ್ನು ಅನುಸರಿಸಿ 24 ಘುಂಟೆಗಳ ಯಾವ ದಿನದಲ್ಲಾಗಲಿ, ಒಂದೇ ಜಾನವರ್ ಯಾ ಬಂಡಿ ವಗೈರೇಮೇಲೆ ಒಂದು ತೀರ್ವೆಗಿಂತ ಹೆಚ್ಚಾಗಿ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

ಮೈಸೂರು ಶೀಮೆಯಲ್ಲಿರುವ ಸರ್ಕಾರೀ ರಸ್ತೆಗಳು ವ ಶೇತುವೆಗಳು ಇವುಗಳಮೇಲೆ ಸುಂಕ ವಸೂಲ್ ಮಾಡುವ ಬಗ್ಯೆ ಮಾಡಲ್ಪಟ್ಟ ನಿಬಂಧನೆಗಳು.

ಮೈಸೂರು ಶೀಮೆಯಲ್ಲಿರುವ ರಸ್ತೆಗಳು, ಶೇತುವೆಗಳು, ಇವುಗಳಮೇಲೆ ಸುಂಕ ವಸೂಲ್ ಮಾಡತಕ್ಕದ್ದನ್ನು ವಿಧಿಸುವದು ಅವಶ್ಯಕವಾಗಿರುವದರಿಂದ ಸದರೀ ಉದ್ದೇಶದೊಡನೆ ಈ ಕೆಳಗೆ ಬರುವ ನಿಬಂಧನೆಗಳು, ಮಂತ್ರಾಲೋಚಕ ಸಭೆಯೊಳಗಣ, ಘನವನ್ನು ಹೊಂದಿದ ವೈಸರಾಯಿ ವ ಗವರ್ನರ್ ಜನರಲ್ಲವರಿಂದ ಮಂಜೂರ್ಮಾಡಲ್ಪಟ್ಟವೆ.

1. ಯಾವ ರಸ್ತೆಗಳಮೇಲೆ, ಮತ್ತು ಯಾವ ಸ್ಥಳಗಳಲ್ಲಿ ಸುಂಕಗಳು ತೆಗದುಕೊಳ್ಳತಕ್ಕದ್ದೋ ಅದನ್ನು ಮೈಸೂರು ಚೀಫ್ ಕಮ್ಮಿಷನರವರು ಆಗಿಂದಾಗ್ಯೆ ತಿಳಿಸಬಹುದು. ಮತ್ತು ಯಾವ ರಸ್ತೆಗಳಮೇಲೆ ಅಂತಾ ಸುಂಕಗಳು ವಸೂಲಾಗತಕ್ಕದ್ದೆಂದು ತಿಳಿಸಲ್ಪಟ್ಟಿರುತ್ತೋ ಆ ರಸ್ತೆಗಳಮೇಲೆ ಸುಂಕ ವಸೂಲಿಯನ್ನು ಮೌಕೂಫ್ ಮಾಡಬಹುದು, ಮತ್ತು ಈ ಸೆಕ್ಷನಿನ ನಿಬಂಧನೆಯನ್ನು ಜಾರೀ ಮಾಡುವಬಗ್ಯೆ ಯಾವ ಸುಂಕದ ಕಟ್ಟೆಯನ್ನಾಗಲಿ ಕಟ್ಟಸಲಿಕ್ಕೆ ಯಾ ತೆಗದು ಹಾಕಲಿಕ್ಕೆ ಅಪ್ಪಣೆ ಕೊಡಬಹುದು.

2. ಮೈಸೂರು ಸರ್ಕಾರದ ಖರ್ಚಿನಿಂದ ಕಟ್ಟಲ್ಪಟ್ಟಿರುವ ಯಾ ಯಿನ್ನುಮೇಲೆ ಕಟ್ಟಲ್ಪಡುವ ಮೈಸೂರು ಶೀಮೆಯೊಳಗಣ ಯಾವದಾದರೂ ರಸ್ತೆ ಯಾ ಶೇತುವೆ ಯಿಂತಾದ್ದರಮೇಲೆ ಇದಕ್ಕೆ ಸೇರಿಸಲ್ಪಟ್ಟಿರುವ ಷೆಡ್ಯೂಲ್‌ನಲ್ಲಿ ಕಂಡ ದರಕ್ಕೆ ಮೀರದ ದರವುಳ್ಳ ಸುಂಕವನ್ನು ಮೈಸೂರು ಚೀಫ್ ಕಮ್ಮಿಷನರವರು ವಸೂಲ್ ಮಾಡಿಸಬಹುದು.

3. ಅಂತಾ ಯಾವ ಸುಂಕ ಯಾ ಮೊಬಲಗಾಗಲಿ, ಕೊಡಲ್ಪಡದೇ ಇದ್ದಪಕ್ಷಕ್ಕೆ ಅದನ್ನು ವಸೂಲ್ ಮಾಡುವಬಗ್ಯೆ ಮೊಕರರಾದ ಆಫಿಸರ್‌ಗಳು, ಸುಂಕ ತೆರತಕ್ಕ ಯಾವದಾದರೂ ಬಂಡಿಗಳು, ಯಾ ಜಾನವರ್‌ಗಳು, ಅಥವಾ ಅವುಗಳ ಬೋಜೇ ಪೈಕಿ ಸುಂಕದ ಮೊಬಲಗಿಗೆ ತಕ್ಕಷ್ಟು ತಡದು ಹಿಡಿಯತಕ್ಕದ್ದು.

517

4. ಇದರಮೇಲಣ ಸೆಕ್ಷನನಲ್ಲಿ ಕಂಡ ಮೇರೆ ಸ್ವತ್ತು ಹಿಡಿಯಲ್ಪಟ್ಟ ಬಳಿಕ 24 ಘಂಟೆಗಳ ಹೊತ್ತು ಯಾವ ಸುಂಕವಾಗಲಿ ತೀರಿಸಲ್ಪಡದೆಯಿದ್ದರೆ, ಭಾನುವಾರ ಅಥವಾ ಸೇರಿದಹಾಗೆ ಬರುವ ಯಾವದಾದರೂ ರಜಾದಿನ ಇಂತಾದ್ದು ಶಿವಾಯಿ ಇಪ್ಪತ್ತುನಾಲ್ಕು ಘಂಟೆಯ ಕಾಲ ನೋಟಿಸ್ ಕೊಟ್ಟಮೇಲೆ, ಸುಂಕದ ಮೊಬಲಗ್ ಸಲ್ಲುವಬಗ್ಯೂ, ಹಾಗೆ ಸುಂಕ ವಸೂಲಾಗದೆ ಯಿರುವಣ, ಸ್ವತ್ತು ತಡೆಯುವಣ, ವ ಹರಾಜ್ ಮಾಡುವಣ, ಇವುಗಳಿಗಾಗಿ ಹಿಡಿಯುವ ಖರ್ಚಿಗಾಗಿಯೂ ಸುಂಕದ ವಸೂಲೀ ಕೆಲಸದ ಮೇಲ್ವಿಚಾರಣೆಗೋಸ್ಕರ ನಿಯಮಿಸಲ್ಪಟ್ಟ ಅಫಿಸರನ ಅಪ್ಪಣೆಯಿಂದ ಸದರೀ ಸ್ವತ್ತು ಹರಾಜ್ ಮಾಡಲ್ಪಡತಕ್ಕದ್ದು. ಸದರೀಆಫಿಸರ್ ಅಂತಾ ಮೊಬಲಗನಲ್ಲಿ ಬಾಕೀ ಯೇನಾದರೂ ಉಳಿದಿದ್ದರೆ ಅದನ್ನು ಮಾಲ್‌ದಾರ ಕೇಳಿದಲ್ಲಿ ವಾಪಸ್ ಕೊಡಿಸಿ ಬಿಡತಕ್ಕದ್ದು. ಪರಂತು ಹರಾಜ್ ಷುರುವಾಗುವದಕ್ಕೆ ಮುಂದೆ ಯಾವಾಗಲಾಗಲಿ ಆದ ದರೋಬಸ್ತು ಖರ್ಚು ಮತ್ತು ಸಲ್ಲತಕ್ಕ ಸುಂಕದ ದುಗಣೀ ಮೊಬಲಗ್ ಸಹಿತ ಕೊಡುವದಾಗಿ ಖಾಯಿಷ್ ಮಾಡಿದರೆ ಕೂಡ್ಲೆ, ತಡೆದಿರುವ ಸ್ವತ್ತನ್ನು ಸ್ವಾಂತಗಾರಗೆ ಒಪ್ಪಿಸಿಬಿಡತಕ್ಕದ್ದು.

5. ಫೌಜುಗಳು, ಮಿಲಿಟೇರಿಸಾಮಾನುಗಳು, ಯಾ ಫೌಜಿನ ಆಯುಧಗಳು ವಗೈರೇ ಪದಾರ್ಥಗಳು ಯಾ ಕೆಲಸದ ಮೇಲೆ ಹೋಗುವ ಪೋಲೀಸ್ ಆಫಿಸರ್‌ಗಳು, ಅಥವಾ ಅವರ ವಶದಲ್ಲಿರುವ ಯಾವನಾದರೂ. ಮನುಷ್ಯ ಯಾ ಸ್ವತ್ತು, ಯಾವ ಸ್ವತ್ತಾಗಲಿ ಪ್ರಾಮಾಣಿಕವಾಗಿ ಗವರ್ನಮೆಂಟಿನವರಿಗೆ ಸಂಬಂಧಿಸಿದ್ದಾಗಿ, ಅದು ಯಾವ ಇಲಾಖೆಗೆ ಸೇರಿದ್ದೋ ಆ ಇಲಾಖೆಯ ಮೊಖ್ತೇಸರರಿಂದ ಒಂದು ಸೆರ್ಟಿಫಿಕೇಟ್‌ಹಾಜರ್ ಮಾಡುವದ್ದರಿಂದ, ಏರ್ಪಟ್ಟ ಯಾವದಾದರೂ ಸ್ವತ್ತು, ಇವುಗಳು ಸಾಗಿಸುವ ಬಗ್ಯೆ ಸುಂಕ ವಸೂಲ್ ಮಾಡಲ್ಪಡಕೂಡದು.

6. ಸುಂಕದ ವಸೂಲೀಯು, ಚೀಫ್‌ಕಮ್ಮಿಷನರವರಿಂದ ಮೊಕರರ್ ಮಾಡಲ್ಪಡುವ ಜನಗಳ ವಿಚಾರಣೆಗೆ ಕೊಡಲ್ಪಡಬಹುದು, ಅಥವಾ ಗವರ್ನಮೆಂಟ ಆಫಿಸರ್‌ಗಳಿಂದ ಮಾಡಲ್ಪಡಬಹುದು, ಮತ್ತು ಈ ಬಗ್ಯೆ ಮೊಕರರ್ ಆಗಿರುವ ದರೋಬಸ್ತು ಜನಗಳೂ ಜಮೀನ್ ಕಂದಾಯ ವಸೂಲೀ ವಿಷಯದಲ್ಲಿ ನೇಮಿಸಲ್ಪಟ್ಟದ್ದರೆ ಯಾವ ಜವಾಬ್‌ದಾರೀಗೆ ಗುರಿಯಾಗಿರುವರೋ ಅದೇ ಜವಾಬ್‌ದಾರಗೆ ಗುರಿಯಾಗತಕ್ಕದ್ದು.

ದರೋಬಸ್ತು ಸುಂಕದಕಟ್ಟೆಗಳಲ್ಲಿ ಯಾಗಲಿ ಆ ಪೈಕಿ ಯಾವದರಲ್ಲಾಗಲಿ ಸುಂಕ ವಸೂಲಿ ಯ ಹಕ್ಕುದಾರೀಯನ್ನು ತಮಗೆ ಯುಕ್ತತೋರುವ ಷರತ್ತಿನೀ ಹರಾಜ್ ಮೂಲಕ ವಿಕ್ರಯಿಸುವಂತೆ ಸಹ ಚೀಫ್‌ಕಮ್ಮಿಷನರವರು ಹುಕ್ಕುಂ ಮಾಡ ಬಹುದು.

7. ಸುಂಕ ವಸೂಲೀದಾರನಾಗಿ ಕ್ರಮ ಪ್ರಕಾರ ಮೊಕರರಾಗದೆ, ಯಾವ ಪಬ್ಲಿಕರಸ್ತೆಯಲ್ಲಾಗಲಿ ಸೇತುವೆಯ ಮೇಲಾಗಲೀ ಯಾವ ಸುಂಕವನ್ನಾದರೂ ಹಾಕುವ ಯಾ ಕೊಡಹೇಳಿ ಕೇಳುವ ಅಥವಾ ಹಾಗೆ ಕ್ರಮಪ್ರಕಾರ ನೇಮಿಸಲ್ಪಟ್ಟ ಷೆಡ್ಯೂಲ್‌ನಲ್ಲಿ ವಿವರಿಸೋಣಾದ ದರಗಳಿಗಿಂತ ಜಾಸ್ತೀಯಾಗಿ ಕೊಡಹೇಳಿ ಕೇಳುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ 200 ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಯಾ 6 ಕ್ಯಾಲಂಡರ್ ತಿಂಗಳಿಗೆ ಮೀರದ ಕಾಲದಪರ್ಯಂತ ಸಾಧಾರಣ ಯಾ ಕಠಿಣ ಖೈದಿಗೆ ಗುರಿಯಾಗತಕ್ಕದ್ದು.

8. ಈ ರೂಲ್ಸ್ ಅನುಸರಿಸಿ ಯಾವ ಸುಂಕದ ಬಾಗಿಲಲ್ಲಿ ಯಾ ಸ್ಥಳದಲ್ಲಿ ವಸೂಲಾಗತಕ್ಕದ್ದೆಂದು ನೇಮಿಸಲ್ಪಟ್ಟ ಸುಂಕಗಳ ಒಂದು ಪಟ್ಟಿಯು ಸುಂಕ ಕೊಡುವದಕ್ಕೆ ನಿರಾಕರಿಸುವ ಬಗ್ಯೆ ವಿಧಿಸುವ ಜುರ್ಮಾನೆಗಳ ಪಟ್ಟಿ ಸಹಿತವಾಗಿ ಇಂಗ್ಲಿಷ್‌ನಲ್ಲಿಯೂ ಸ್ಥಳದ ಭಾಷೆಯೊಳಗೂ ಸ್ಪಷ್ಟವಾಗಿ ಬರೆಯಿಸಿ ಅಂತಾ ಬಾಗಿಲು ಯಾ ಸ್ಟೇಷನ ಬಳಿ ಪ್ರಸಿದ್ಧವಾದ ಸ್ಥಳದಲ್ಲಿ ಚಿಕಟಾಯಿಸತಕ್ಕದ್ದು.

ಅಂತಾ ಪಟ್ಟಿಯನ್ನು ಕ್ರಮವಾದ ಮತ್ತು ಚನ್ನಾಗಿ ತಿಳಿಯುವಂತಾ ಸ್ಥಿತಿಯಲ್ಲಿ ಇಡುವದು ಅಂತಾ ಬಾಗಿಲ ಯಾ ಸ್ಥಳದ ಚಾರ್ಜಿನಲ್ಲಿರುವ ಮನುಷ್ಯನ ಕೆಲಸವಾಗಿ ಇರತಕ್ಕದ್ದು.

9. ಈ ಸುಂಕದಿಂದ ಹುಟ್ಟುವಹೇಯಾದ್ದರಲ್ಲಿ ಖರ್ಚು ಜಾತಾ ಉಳಿದ ಮೊಬಲಗು ಈ ಮೈಸೂರು ಸೀಮೆಯೊಳಗಿರುವ ರಸ್ತೆಗಳು, ಸೇತುವೆಗಳು, ಇವುಗಳ ಕಟ್ಟುವಣ, ರಿಪೇರಿ, ಸಂರಕ್ಷಣೆ, ಈ ಬಗ್ಯೇನೇ ವಿನಿಯೋಗಿಸಲ್ಪಡತಕ್ಕದ್ದು.

10. ಯಾವ ಸುಂಕದ ಕಟ್ಟೆಯನ್ನಾಗಲಿ, ಅದಕ್ಕೆ ಕ್ಲುಪ್ತವಾದ ತೀರ್ವೆ ತೆರದೆ ಮೋಸದಿಂದ ಯಾ ಬಲಾತ್ಕಾರದಿಂದ ದಾಟಿ ಹೋಗುವ ಅಥವಾ, ಸುಂಕದ ವಸೂಲೀದಾರನು ತನ್ನ ಕೆಲಸವನ್ನು ನಿರ್ವಹಿಸುವಲ್ಲಿ ಅವನನ್ನು ಹರಕತ್ತು ಮಾಡುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ, ಮೂರು ತಿಂಗಳಿಗೆ ಮೀರದ ಒಂದು ವಾಯಿದೇ ಪರ್ಯಂತ ಸಾಧಾರಣ ಯಾ ಕಠಿಣ ಖೈದಿಗಾಗಲಿ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೇಗಾಗಲಿ, ಗುರಿಯಾಗತಕ್ಕದ್ದು.

11. ಮೈಸೂರು ಸೀಮೆಯೊಳಗೆ ಸುಂಕ ಹಾಕುವದನ್ನು ಕ್ರಮಪಡಿಸಲಿಕ್ಕೆ ತಮಗೆ ಜರೂರೆಂದು ತೋರುವ ಹೆಚ್ಚಿಗೆ ಹುಕುಮನ್ನು ಆಗಿಂದಾಗ್ಯೆ ಕೊಡುವದಕ್ಕೆ ಚೀಫ್‌ಕಮ್ಮಿಷನರವರು ಅಧಿಕಾರಕೊಡಲ್ಪಟ್ಟಿರುತ್ತಾರೆ. ಪರಂತು ಅಂತಾ ಹುಕ್ಕುಂಗಳು ಈ ರೂಲ್ಸಿನ ನಿಬಂಧನೆಗಳಿಗೆ ವಿರುದ್ಧಗಳಾಗಿರತಕ್ಕದ್ದಲ್ಲವು.

———

ಷೆಡ್ಯೂಲ್.

	ರೂ.	ಆ.	ಪೈ.
ನಾಲ್ಕು ಚಕ್ರಗಳ ಪ್ರತಿ ಬಂಡಿಗೂ	2	0	0
ಎರಡು ಚಕ್ರಗಳ ಪ್ರತಿ ಬಂಡಿಗೂ	1	0	0
ಪ್ರತಿ ಎಕ್ಕಾವಿಗೂ	0	4	0
ಕವರ್ನಾಗಳುಳ್ಳ ಹ್ಯಾಕರಿಯೆಂಬ ಪ್ರತಿ ಬಂಡಿಗೂ	0	2	0
ಎಂಟೆತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು ಕತ್ತೆಗಳು ಯಾ ಹೇಸರ ಕತ್ತೆಗಳು ಕಟ್ಟಿದ ಕವರ್ನಾ ಇಲ್ಲದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರಿ ಇವುಗಳಿಗೆ ಭರ್ತಿಯಾಗಿದ್ದರೆ ..	1	8	0
ಡಿಟ್ಟೋ—ಭರ್ತಿಯಾಗದೇ ಇದ್ದರೆ	0	8	0
ಆರು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು ಯಾ ಹೇಸರ ಕತ್ತೆಗಳು, ಕಟ್ಟಿದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರೀಬಂಡಿ ಇದಕ್ಕೆ ಭರ್ತಿಯಾಗಿದ್ದರೆ	0	12	0
ಡಿಟ್ಟೋ—ಭರ್ತೀಯಿಲ್ಲದೆ ಇದ್ದರೆ	0	6	0
ನಾಲ್ಕು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಯಾ ಹೇಸರ ಕತ್ತೆಗಳು ಇವುಗಳು ಕಟ್ಟಿದ ಪ್ರತಿ ಚಕಡಾಬಂಡಿ ಮತ್ತು ಹ್ಯಾಕರೀ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ ..	0	8	0
ಡಿಟ್ಟೋ—ಭರ್ತಿಯಾಗದೆ ಇದ್ದರೆ	0	4	0
ಎರಡು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರ ಕತ್ತೆಗಳು ಕಟ್ಟಿದ ಚಕಡಾಬಂಡಿ ಮತ್ತು ಹ್ಯಾಕರೀ ಬಂಡಿ ಭರ್ತೀಯಾಗಿದ್ದರೆ	0	4	0
ಡಿಟ್ಟೋ ಭರ್ತಿಯಾಗದೇ ಇದ್ದರೆ	0	2	0
ಕೋಣಗಳು ಯಾ ಎತ್ತುಗಳು ಹೋರೇಹಾಕಿ ಇರತಕ್ಕವು ಪ್ರತಿ ರಾಸಿಗೂ	0	1	0
ಡಿಟ್ಟೋ—ಹೋರೇ ಹಾಕದೆ ಇದ್ದರೆ	0	0	6
ಪ್ರತಿ ಆನೆಗೂ	1	8	0
ಪ್ರತಿ ಒಂಟೆಗೂ ಹೋರೇಹಾಕಿದ್ದರೆ	0	8	0
ಡಿಟ್ಟೋ—ಹೋರೇ ಹಾಕದೇಇದ್ದರೆ	0	4	0
ಪ್ರತಿ ಕುದುರೆಗೂ, ಹೋರೇ ಹಾಕಿದ್ದರೆ ಯಾಸವಾರೀಯಾಗಿದ್ದರೆ ..	0	1	6
ಡಿಟ್ಟೋ—ಹೋರೇ ಹಾಕದೆ ಯಾ ಖಾಲೀ ತೆಗದುಕೊಂಡು ಹೋಗುವದಕ್ಕೆ ..	0	0	9
ಪ್ರತಿ ತಟ್ಟು ಯಾ ಹೇಸರ ಕತ್ತೆ ಹೋರೆ ಹಾಕಿದ್ದರೆ ಯಾ ಸವಾರೀಯಾಗಿದ್ದರೆ ..	0	0	9
ಡಿಟ್ಟೋ—ಹೋರೆಹಾಕದೆ ಯಾ ಖಾಲೀ ತೆಗದುಕೊಂಡು ಹೋಗುತ್ತಿದ್ದರೆ ..	0	0	6
ಪ್ರತಿ ಕತ್ತೆಗೆ ಹೊರೆಹಾಕಿದ್ದರೆ ಯಾ ಸವಾರೀಯಾಗಿದ್ದರೆ.	0	0	6
ಡಿಟ್ಟೋ—ಹೊರೆಹಾಕದೆ ಸುಮ್ಮನೆ ತೆಗದುಕೊಂಡು ಹೋಗುತ್ತಿದ್ದರೆ	0	0	3
ಪ್ರತಿ ಕುರಿ ಯಾ ಮೇಕೆ, ಯಾ ಹಂದಿಗೆ	0	0	1
ಪ್ರತಿ ಪಾಲಖೀ, ಡೋಲಿ, ತೊಟ್ಲು, ಯಾ ಟಾಂಜಾ ಇಂತಾ ಎಂಟು ಮಂದಿ ಬೋಯಿಗಳುಳ್ಳವಕ್ಕೆ ..	1	0	0
ಡಿಟ್ಟೋ—6 ಮಂದಿ ಬೋಯಿಗಳುಳ್ಳದ್ದಕ್ಕೆ	0	12	0
ಡಿಟ್ಟೋ—4 ಮಂದಿ ಬೋಯಿಗಳುಳ್ಳದ್ದಕ್ಕೆ	0	8	0
ಡಿಟ್ಟೋ—ಇಬ್ಬರು ಬೋಯಿಗಳುಳ್ಳದ್ದಕ್ಕೆ	0	4	0
ಪೈದಲ್ ಹೋಗುವ ಪ್ರತಿ ಮನುಷ್ಯನಿಗೂ	0	0	3

ನು—.ಬಿ—.ಯಾವ ಬಂಡಿಗೆ ಸುಂಕ ತೆಗದುಕೊಳ್ಳಲ್ಪಡುತ್ತೋ ಅದಕ್ಕೆ ಕಟ್ಟಿರುವ ಜಾನವರ್‌ಗಳಿಗೂ ಸುಂಕ ಹಾಕಲ್ಪಡಲಾರದು.

ನಂ. 275. ತಾರೀಖು 7ನೇ ನವಂಬರ 1876.

ಸ್ತ 1876ನೇ ಅಕ್ಟೋಬರ 26ನೇ ಮುಕ್ಕಾಂ 260ನೇ ನಂಬರ ಇಸ್ತಿಹಾರನಾಮೆ ಅನುಸರಿಸಿ ಚೀಫ್ ಕಮ್ಮಿಷನರವರು ಆ ಪ್ಪಣೇ ಕೊಡಿಸುವದೇನಂದರೆ,—ಮಾಹೇ.ಯಾನಾ 10 ರೂಪಾಯಿಗಳು ಮತ್ತು ಅದಕ್ಕೆ ಕಮ್ಮಿಯಾಗಿ ತಲಬ್ ತೆಗದುಕೊಳ್ಳುವ ಕಾಯಂ ಲವಾಜಮೆಗೆ ಸೇರಿದ ಗವರ್ನಮೆಂಟ ನೌಕರರಿಗೆ ಮೂರು ತಿಂಗಳ ಪರ್ಯಂತ 1 ರೂಪಾಯಿ ಜಾಸ್ತೀ ಲ್ಯಾನ್ಸ ಕೊಡತಕ್ಕದ್ದೆಂದು ಆದ ಹುಕ್ಕುಂ, 15 ರೂಪಾಯಿ ಮತ್ತು ಅದಕ್ಕೆ ಕಡಮೆಯಾದ ತಲಬ್ ಉಳ್ಳ ದರೋಬಸ್ತು ಸರ್ಕಾರ ನೌಕರರಿಗೂ ವಿಸರಿಸಲ್ಪಟ್ಟಿದೆ. ಈ ಹುಕ್ಕುಂ ಈ ನವಂಬರ ಗುರ್ರೇ ಲಾಗಾಯಿತು ಜಾರೀಗೆ ಬಂದು ನವೆಂಬರ ತಿಂಗಳ ಬರಾವರ್ದಿನಲ್ಲಿ ದಾಖಲಾಗಿ ಬಟವಾಡೇಯಾಗತಕ್ಕದ್ದು.

ನಂ 293. ತಾರೀಖು 21ನೇ ನವಂಬರ 1876.

1870ನೇ ಇಸವಿ 10ನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಯಿದರಿಂದ ತಿಳಿಸಲ್ಪಡುವದೇನಂದರೆ,— ಇದರಡಿ ವಿವರಿಸಲ್ಪಟ್ಟ ಹಾಸನ ಕಸಬೇಯಲ್ಲಿರುವ ಬಂದು ತಾಕು ಜಮೀನ್ ಸರ್ಕಾರ್ ಕೆಲಸಕ್ಕೋಸ್ಕರ ಅಂದರೆ, ಸ್ಥಳದಅಭಿವೃದಿ ಬಗ್ಗೆ ಮ್ಯುನಿಸಿಪಾಲಿಟಿ ಯವರಿಗೆ ಬೇಕಾಗಿರುತ್ತೆ. ರಹಿಮಾನ್‌ಖಾನ್ ಎಂಬ ಒಬ್ಬನು ಸದರೀ ತಾಕಿಗೆ ಬಾಧ್ಯತೆ ತಂದಿರುವ ಸಬಬ್ ಅದರ ಕಡಗಟ್ಟು ನಕ್ಷೆಯನ್ನು ಹಾಸನ ಡಿಸ್ಟ್ರಿಕ್ಟು ಡಿ|| ಕಮ್ಮಿಷನರ ಆಫೀಸಿನಲ್ಲಿ ಕೇಳಿ ನೋಡಿಕೊಳ್ಳ ಬಹುದು. 92ನೇ ನಂಬರ್ ಬಾಬತು ಬಂದು ತಾಕು 1–7–13 ವಿಸ್ತೀರ್ಣ ಏರುತ್ತೆ. ಇದರ ಕಂದಾಯ 2·67 ಯಿರುತ್ತೆ. ಈ ಜಮೀನ್ ಬಾಬತು ಪಟ್ಟೇದಾರರು ಅಮೀರ್ ಸಾಹೆಬ್ ವ ದಸ್ತಗೀರ್ ಸಾಹೆಬ್, ಇದರ ಖರೀದೀದಾರ್ ರಹಿಮಾನ್‌ಖಾನ್.

ಯಿದರ ಚತುರ್ಸಡಿ.

ಉತ್ತರಕ್ಕೆ—ಹಾಸನ ತಿಮ್ಮ ವಗೈರೇರ ಹೊಲಗಳು ಮತ್ತು ಫಾರೆಸ್ಟುಡಿಪೋ.
ಪೂರ್ವಕ್ಕೆ—ಮಹಾನಾಮಿ ಮಟ್ಟಸಕ್ಕೊ, ಹಳೇ ಬೀಡಿಗೂ ಹೋಗುವ ರಸ್ತೆ.
ದಕ್ಷಿಣಕ್ಕೆ—ಮ್ಯುನಿಸಿಪೆಲ್ ಭೂಮಿ ಮತ್ತು ಹೊಸಲೈನಿಂದ ಬಂಗ್ಲೆಗಳಿಗೆ ಹೋಗುವ ರಸ್ತೆ.
ಪಶ್ಚಮಕ್ಕೆ—ರಾಮಸ್ವಾಮಿ ಐಯ್ಯರ್‌ಯವರ ಮನೆಗೆ ಪೂರ್ವಕ್ಕೆ ಯಿರುವ ಬಂದು ಮ್ಯುನಿಸಿಪೆಲ್ ಪೋಣಿ.

ನಂ. 294. ತಾರೀಖು 17ನೇ ನವಂಬರ 1876.

ಶಿವಮೊಗ್ಗಾ ಡಿಸ್ಟ್ರಿಕ್ಟು ಸ್ಪೆಷಲ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಟರ್ ಕನ್ನಿಂಗ್‌ಹ್ಯಾಂ ಯವರಿಗೆ ಹಂಗಾಮೀ ತರೀಕ್ ವ ವಿಶೇಷ ಸಂಗತಿಯಾಗಿ, 1872ನೇ ಇಸವಿ 10ನೇ ನಂಬರ ಆಕ್ಟು ಅನುಸರಿಸಿ ಫಸ್ಟು ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರಗಳು ಕಡೂರ ಡಿಸ್ಟ್ರಿಕ್ಟಿನಲ್ಲಿ ಚಲಾಯಿಸಲ್ಪಡತಕ್ಕ ಬಗ್ಗೆ ಕೊಡಲ್ಪಟ್ಟಿವೆ.

ನಂ. 295. ತಾರೀಖು 18ನೇ ನವಂಬರ 1876.

ಬೆಂಗಳೂರು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟಿನ ಸಿರಸ್ತೇದಾರ್ ಸಿ. ವೆಂಕಟರಾಯರು ಅಜಮಾಯಿಷೀ ತರೀಕ್ 3ನೇ ಕ್ಲಾಸ್ ಮುನಸೀಫರಾಗಿ ನೌಕರರ.

ನಂ. 296. ತಾರೀಖು 18ನೇ ನವಂಬರ 1876.

ಇದರಡಿ ಬರುವ ಮುನಸೀಫರ ಬಡತೀಗಳು ವ ವರ್ಗಾವರ್ಗಿಗಳು ಮಂಜೂರಾಗಿವೆ.

ಕೋಲಾರ ಸಬ್ ಡಿವಿಜನ್ 2ನೇ ಕ್ಲಾಸ್ ಮುನಸೀಫ್ ಕುಪ್ಪಸಾಮಿ ಮೊದಲ್ಯಾರು.	1ನೇ ಕ್ಲಾಸ್ ಮುನಸೀಫರಾಗಿರ ತಕ್ಕದ್ದು.
ನಂಜನಗೂಡು ಸಬ್ ಡಿವಿಜನ್ 3ನೇ ಕ್ಲಾಸ್ ಮುನಸೀಫ್ ರಘುನಾಥರಾಯರು.	2ನೇ ಕ್ಲಾಸ್ ಮುನಸೀಫರಾಗಿರತಕ್ಕದ್ದು.

	ಯೆಲ್ಲಿಂದ	ಯಲ್ಲಿಗೆ
ಮುದ್ದುಕೃಷ್ಣನಾಯಡು	ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನ್.	ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ಸಬ್ ಡಿವಿಜನ್.
ಮೆಸ್ಟರ್ ಕ್ರೇನ್	ಹಾಸನ ಡಿಸ್ಟ್ರಿಕ್ಟು ಹಾಸನ ಸಬ್ ಡಿವಿಜನ್.	ಕೋಲಾರ ಡಿ|| ಚಿಕ್ಕಬಳ್ಳಾಪುರ ಸಬ್ ಡಿವಿಜನ್.
ನಾಮಕಲರಾವ್	ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ಸಬ್ ಡಿವಿಜನ್.	ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ಸಬ್ ಡಿವಿಜನ್.
ರಾಮಸ್ವಾಮಿಐಯರ್	ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ಸಬ್ ಡಿವಿಜನ್.	ಕಡೂರು ಡಿಸ್ಟ್ರಿಕ್ಟು ಕಡೂರುಸಬ್ ಡಿವಿಜನ್.
ರಘುನಾಥರಾವ್	ಮೈಸೂರ ಡಿಸ್ಟ್ರಿಕ್ಟು ನಂಜನಗೂಡು ಸಬ್ ಡಿವಿಜನ್.	ಹಾಸನ ಡಿಸ್ಟ್ರಿಕ್ಟು ಹಾಸನ ಸಬ್ ಡಿವಿಜನ್.

ರಂಗಸಾಮಿ ಐಯರ	ಮೈಸೂರು ಡಿಸ್ಟ್ರಿಕ್ಟು ಮಂಡ್ಯದ ಸಬ್ ಡಿವಿಜನ್,	ಮೈಸೂರು ಡಿಸ್ಟ್ರಿಕ್ಟು ನಂಜನಗೂಡು ಸಬ್ ಡಿವಿಜನ್.
ಪೊನ್ನರಂಗಂಮೊದಲ್ಯಾರು	ಹಾಸನ ಡಿಸ್ಟ್ರಿಕ್ಟು ಆಲೂರು ಸಬ್ ಡಿವಿಜನ್.	ಮೈಸೂರು ಡಿಸ್ಟ್ರಿಕ್ಟು ಮಂಡ್ಯದ ಸಬ್ ಡಿವಿಜನ್.
ಸಿ. ವೆಂಕಟರಾವ್	(ಅಜಮಾಯಿಷೀ ಮೇಲೆ, ನವಮುಲಾಜಂ)	ಹಾಸನ ಡಿ|| ಆಲೂರು ಸಬ್ ಡಿವಿಜನ್.

ನಂ. 297. ತಾರೀಖು 18ನೇ ನವಂಬರ 1876.

ಶಿವಮೊಗ್ಗ ಡಿಸ್ಟ್ರಿಕ್ಟು ಆಫಿಸ್ ಜುಡಿಶಿಯಲ್ ಸಿರಸ್ತೇದಾರ್ ಪು. ವೆಂಕಟರಾಯರು, ಅನಂತಪುರ ಸಬ್ ಡಿವಿಜನ್ ಕಾಯಂ ಮುನಸೀಫರು ರಜಾದ ಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ 1876ನೇ ಇಸವಿ ಮೇ 18ನೇ ಮಾರ್ಹುಂ ಲಗಾಯತ್ 23ನೇ ಮಾರ್ಹುಂ ವರೆಗೆ ಅನಂತಪುರ ಸಬ್ ಡಿವಿಜನ್ ಮುನಸೀಫರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡಿದರು.

ನಂ. 298. ತಾರೀಖು 20ನೇ ನವಂಬರ 1876.

ಕೋಲಾರ ಅಮಲ್ದಾರ್ ವೆಂಕಟರಾಯರಿಗೆ 1872ನೇ ಇಸವಿ 10ನೇ ನಂಬರ ಆಕ್ಟು 19ನೇ ಸೆಕ್ಷನ ಅರ್ಥರೀತ್ಯಾ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ನಂ. 299. ತಾರೀಖು 21ನೇ ನವಂಬರ 1876.

ನಗರ ಡಿವಿಜನ್ನಿಂದ ಹೋಗಿಯಿದ್ದ ಇದರಡಿ ಬರುವ ಕ್ಯಾಂಡಿಡೇಟ್ ಯಾನೆ ಉಮೇದ್ವಾರರು ಅಮಲ್ದಾರುಗಳಿಗೆ ವಿಧಿಸಲ್ಪಟ್ಟ, ಕಳೆದ ಆಗಸ್ಟು ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ, ತೇರ್ಗಡೆಯಾದರು.

ತಿರುಮಲಾಚಾರ್ ಚಿತ್ರದುರ್ಗ ಡಿ|| ಜುಡಿಷಲ್ ಶಿರಸ್ತೇದಾರ್.
ನಾಗೇಶರಾವ್, ಚನ್ನಗಿರೀ ತಾಲ್ಲೂಕು ಶಿರಸ್ತೇದಾರ್
ಪಂಚನಾಥರಾವ್ ದಾವಣಗೆರೆ ತಾಲ್ಲೂಕು ಅಮಲ್ದಾರ್.
ರಾಘವೇಂದ್ರರಾವ್ ಚಿತ್ರದುರ್ಗ ಡಿಸ್ಟ್ರಿಕ್ಟು ರೆವಿನ್ಯೂ ಶಿರಸ್ತೇದಾರ್.
ಕೇಶವ ಐಯ್ಯಂಗಾರ್, ನಗರ ತಾಲ್ಲೂಕು ಶಿರಸ್ತೇದಾರ್.
ಲಿಂಗಪ್ಪ ಸಾಗರ ಸಬ್ ಡಿವಿಜನ್ ಅ|| ಕ|| ಕೋರ್ಟಿ ನಾಯಬ್ ಶಿರಸ್ತೇದಾರ್.
ಕೃಷ್ಣರಾವ್ ನಗರ ಡಿವಿಜನ್ ರೆವಿನ್ಯೂ ಹೆಡ್ ಮುನಷಿ.
ನರಸಿಂಗರಾವ್ ಚಾಣಾವಾರ ತಾ|| ಅಮಲ್ದಾರ್.

2. ಈ ಕೆಳಗೆ ನಮೂದಿಸಲ್ಪಡುವ ಪೋಲೀಸ್ ಸಬ್ ಇನ್ಸ್ಪೆಕ್ಟರಗಳು ಅಮಲ್ದಾರ್ ಪರೀಕ್ಷೆಯ ಪೈಕಿ ಜುಡಿಷಲ್ ಭಾಗದಲ್ಲಿ ಮಾತ್ರ ತೇರ್ಗಡೆಯಾದರು.

ಸಿ. ಶೇಷಾದ್ರಿ ಐಯ್ಯಂಗಾರ್.
ಸಿ. ನಾರಾಯಣರಾವ್.
ಸೂರನಾರಣಪ್ಪ.

ನಂ. 300. ತಾರೀಖು 23ನೇ ನವಂಬರ 1876.

ಹಾಸನ ಡಿಸ್ಟ್ರಿಕ್ಟು 3ನೇ ಕ್ಲಾಸ್ ಅಫಿಷಿಯೇಟಿಂಗ್ ಡಿಪ್ಯುಟಿಕಮ್ಮಿಷನರ ಮೇಜರ ಮೊಟೆಟ್ ಯವರಿಗೆ, ಅವರಿಂದ ಕೆಲ್ಸ ಮಾಲ್ಕಬೀಯವರು ಚಾರ್ಜುತೆಗದುಕೊಳ್ಳುವ ತಾರೀಕ್ ಲಗಾಯತ್ ವೊಂದು ತಿಂಗಳ ಸಬ್ ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತೆ.

ನಂ. 301. ತಾರೀಖು 25ನೇ ನವಂಬರ 1876.

ಆಸಿಸ್ಟೆಂಟ್ ಕಮ್ಮಿಷನರ ಮೆಸ್ಟರ ಪೂರ್ಣೈಯನವರಿಗೆ 1872ನೇ ಇಸವಿ 10ನೇ ನಂಬರ ಆಕ್ಟಿನ 27 (a) ಸೆಕ್ಷನ 6ನೇ ಕ್ಲಾಸ್ ಅನುಸರಿಸಿ ಪೂರ್ತಾಗಿ ದರಿಯಾಫ್ತು ಮಾಡತಕ್ಕ ಅಧಿಕಾರವು ಹಂಗಾಮೀ ತರೀಕ್ ಕೊಡಲ್ಪಟ್ಟಿರುತ್ತೆ.

"ಬಮೋಜಿಬ್ ಹುಕುಂ,"
T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಜನರಲ್.

ಇಸ್ತಿಹಾರನಾಮೆ.

ನಂ. 10. ತಾರೀಖು 8ನೇ ನವಂಬರ 1876.

ಇಂಡ್ಯಾ ಗವರ್ನಮೆಂಟ ಹೋಂ ಇಲಾಖಾ ಸಿಕ್ರೇಟೇರಿಯವರಿಂದ ಬಂದ 1876ನೇ ಇಸವಿ ಅಕ್ಟೋಬರ 21ನೇ ಮುಕ್ಕಾಂ 1129ನೇ ನಂಬರ ಲೆಟರಿನಲ್ಲಿ ತಿಳಿಸಲ್ಪಟ್ಟ ಅಪ್ಪಣೇ ಅನುಸರಿಸಿ, 1875ನೇ ಇಸವಿ ಫಿಬ್ರುವರಿ 20ನೇ ಮುಕ್ಕಾಂ ಮೈಸೂರು ಗೆಜೆಟ 57ನೇ ಪುಟದಲ್ಲಿ ಫಾಯಿಷ ಮಾಡಲ್ಪಟ್ಟ ರೂಲಸನ್ನು ರದ್ದುಪಡಿಸಿ ಹುಟ್ಟದ ಯಿಪರಡಿ ಬರುವ ರೂಲಸ ಸರ್ವರಿಗೂ ತಿಳಿಯತಕ್ಕ ಬಗ್ಯೆ ಫಾಯಿಷ ಮಾಡಲ್ಪಟ್ಟಿರುತ್ತೆ.

ಕೊಡಗು ಸೀಮೆಯಲ್ಲಿ ದೇವರ ಕಾಡುಗಳ ಕಾಪಾಡುವಿಕೆ ಬಗ್ಯೆ ಯಿನ್ನು ಅಧಿಕವಾದ ವಿಚಾರಣೆ ಬಗ್ಯೆ ಉಂಟಾದ ರೂಲಸ.

---

1. ಇದರಿಂದ ತಿಳಿಸಲ್ಪಡುವದೇನಂದರೆ,—ಕೊಡಗು ಸೀಮೆಯಲ್ಲಿ ದೇವರ ಕಾಡುಗಳಿಗೆ ಯಾವ ಬಗ್ಯಾಗಿ ಕಂದಾಯ ತಪ್ಪಿಸಲ್ಪಟ್ಟಿರುತ್ತೋ ಅಂತಾ ಬಗ್ಯೇನೆ ಅವುಗಳು ಖಂಡಿತವಾಗಿ ಉಪಯೋಗಿಸಲ್ಪಡದ ಪಕ್ಷಕ್ಕೆ ಅವುಗಳಿಗೆ ಐಯಿಂದ ಪೂರಾ ಕಂದಾಯ ದಾಖಲ್ಮಾಡಲ್ಪಡೂದು.

2. ಸರಕಾರದಿಂದ ಕೊಡಲ್ಪಟ್ಟ ವ ಕಂದಾಯ ಕಟ್ಟಲ್ಪಟ್ಟ ಅಂತಾ ದೇವರ ಕಾಡುಗಳು ಯಾ ಅವುಗಳ ಭಾಗಗಳು ಯಾರಿಗೆ ಕೊಡಲ್ಪಟ್ಟಿರುತ್ತೋ ಅಂತವರು ಅವುಗಳನ್ನು ಯಿಟ್ಟಿಕೊಳ್ಳುವದಕ್ಕೆ ಅಪ್ಪಣೇ ಕೊಡಲ್ಪಡುತರು, ಪರಂತು ಅಂತಾ ಹಿಡುವಳೀದಾರ್ರಿಂದ ವಾಸ್ತವ್ಯವಾಗಿ ಅನುಭವಿಸಲ್ಪಡುವ ಬೀಜವರಿಯು ಯಷ್ಟು ವಿಕರೆಯಾಗಿ ಕೊಡಲ್ಪಟ್ಟಿದ್ದೋ ಅದಕ್ಕಿಂತಲೂ ಜಾಸ್ತೀಯಾಗಿರಕೂಡದು

3. ಅಂತಾ ಸನ್ನದುಗಳ ಪ್ರಕಾರ ಅನುಭವಿಸಲ್ಪಡುವ ಬೀಜವರಿಯು, ಕೊಡಲ್ಪಟ್ಟ ಬೀಜವರಿಗಿಂತಲೂ, ಹೆಚ್ಚಾಗಿರುವಂತೆ ಸರ್ವೆಯಲ್ಲಿ ಕಾಣಬಂದ ಪಕ್ಷದಲ್ಲಿ ಜಾಸ್ತೀ ಬೀಜವರಿಯು ಸರಕಾರದವರ ಇಚ್ಛಾನುಸಾರ ದೇವರಕಾಡಿಗೆ ವಾಪಸು ಸೇರಿಸಲ್ಪಡುವದು. ಅಥವಾ ಪೂರಾ ಕಂದಾಯ ಕಟ್ಟಲ್ಪಡುವದು.

4. ಯಾವ ಸಂಗತಿಗಳಲ್ಲಿ ದೇವರ ಕಾಡುಗಳು ಅಥವಾ ಅವುಗಳ ಪೈಕಿ ಯಾವ ಭಾಗಗಳು ಸರಕಾರದ ಅಪ್ಪಣೆ ಇಲ್ಲದೆ ವ್ಯವಸಾಯ ಮಾಡಲ್ಪಟ್ಟಿರುತವೋ ಅಂತಾ ಸಂಗತಿಗಳಲ್ಲಿ ಅವುಗಳ ಹಿಡುವಳೀದಾರ್ರುಗಳು ಅವುಗಳನ್ನು ಈ ಇಸ್ತಿಹಾರ ತಾರೀಖುಲಗಾಯತು 3 ವರುಷಗಳ ಪರಿಯಂತ ವ್ಯವಸಾಯ ಮಾಡತಕ್ಕ ಬಗ್ಯೆ ಅಪ್ಪಣೆ ಕೊಡಲ್ಪಡತಕ್ಕದ್ದು. ಆ ಬಳಿಕ ಅಂತಾ ಹಿಡುವಳೀದಾರ್ರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಂಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದರಲ್ಲಿ ಬಂದೀತು.

ದೇವರ ಕಾಡುಗಳು ಯಾ ಅವುಗಳ ಭಾಗಗಳು ಸರಕಾರ ಅಪ್ಪಣೆಯಿಂದ ವ್ಯವಸಾಯ ಮಾಡಲ್ಪಟ್ಟು, ಆದರೆ ಅವುಗಳಿಗೆ ಕಂದಾಯ ಕೊಡಲ್ಪಡದೆ ಇರುವ ಸಂಗತಿಗಳಲ್ಲಿ ಅವುಗಳ ಹಿಡುವಳೀದಾರ್ರುಗಳು ಈ ಇಸ್ತಿಹಾರನಾಮಾ ತಾರೀಖು ಲಗಾಯತು 3 ವರುಷಗಳಪರಿಯಂತ ಅವುಗಳನ್ನು ಸಾಗುವಳೀ ಮಾಡಿಕೊಳ್ಳುವಂತೆ ಅಪ್ಪಣೆ ಕೊಡಲ್ಪಡತಕ್ಕದ್ದು ಆ ಬಳಿಕ ಅಂತಾ ಹಿಡುವಳೀದಾರ್ರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಂಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದರಲ್ಲಿ ಬಂದೀತು.

5. ದೇವರ ಕಾಡುಗಳ ಹದ್ದಿನೊಳಗೆ ಮರಗಳು ಕಡಿಯಲ್ಪಡುವದು, ಕೊಂಬೆ ಕತ್ತರಿಸಲ್ಪಡುವದು ಪೊತ್ತಾಗಿರುವ ರಂಬೆಗಳು ವಿರಳವಡಿಸುವದು ಮೇಲರಂಬೆ ಕಡಿಯಲ್ಪಡುವದು ಅಥವಾ ಮರಗಳು ಸುಡುವದು ಇವು ಖಂಡಿತವಾಗಿ ನಿಷೇಧಿಸಲ್ಪಟ್ಟಿರುತ್ತೆ.

6. ಜಾಬೀನೆಯಾಗಲಿ, ಮರವಾಗಲಿ ರಂಬೆಗಳಾಗಲಿ ಹುಲ್ಲು ಆಗಲಿ ಇನ್ಯಾವ ಇತರ ವಸ್ತೆಯಾಗಲಿ ಯಾವ ನೆವದಮೇಲಾದರೂ ದೇವರಕಾಡಿನಿಂದ ಸಾಗಿಸಲ್ಪಡಕೂಡದು.

7. ದರೋಬಸ್ತು ದೇವರ ಕಾಡುಗಳು ಸರ್ವೇ ಮಾಡಲ್ಪಟ್ಟು, ನಿಷಾನೆ ಹಾಕಲ್ಪಡುವದು ಮತ್ತು ಆಯಾ ಗ್ರಾಮದ ಪಟೇಲನ ಖುದ್ದು ಸ್ವಾಧೀನದಲ್ಲಿಡಲ್ಪಡುವವು, ಪಟೇಲನು ಅವುಗಳ ಕಾಪಾಡುವಿಕೆ ವಿಷಯದಲ್ಲಿ ಪ್ರಥಮತಃ ಜವಾಬದಾರನಾಗಿರುವದಲ್ಲದೆ ತನ್ನ ತಿಳುವಳಿಕೆಗೆ ಬರುವ ಈ ರೂಲ್ಸಿನ ಯಾವ ಉಲ್ಲಂಘನೆಯನ್ನಾದರೂ ನಾಡಿನ ಪಾರಪತ್ತೇಗಾರರಿಗೆ ಕೂಡ್ಲೇ ರಿಪೋರ್ಟು ಮಾಡತಕ್ಕದ್ದು.

ನಂ. 11. ತಾರೀಖು 16ನೇ ನವಂಬರ್ 1876.

ಹಾಲೀ ಪ್ರಬಲಿಸಿಯಿರುವ ನಿರಕ್ ಚಡಾವ್ ಪ್ರಯುಕ್ತವಾಗಿ, ಹದಿನೈದು ರೂಪಾಯಿಗಳು ವ ಅದಕ್ಕೆ ಕಮ್ಮಿಯಾದ ತಲಬ್ ತೆಗೆದುಕೊಳ್ಳುತ್ತಿರುವ ಕಾಯಂಲವಾಜಮೆಗೆ ಸೇರಿದ ದರೋಬಸ್ತು ಸರ್ಕಾರ್ ನೌಕರರಿಗೂ ನವಂಬರ್ ಡಿಸಂಬರ್ ಈ ಮಾಹೇಗಳ ಬಗ್ಗೆ ತಲಬ್ ಬಟವಾಡೆಕಾಲದಲ್ಲಿ ಮಾಹೇಯಾನಾ ಒಂದು ರೂಪಾಯಿ ಜಾಸ್ತೀ ರುಸುಂ ಕೊಡತಕ್ಕದ್ದೆಂದು ಫಾಯಿಷ್ ಮಾಡಲ್ಪಡಬೇಕೆಂಬದಾಗಿ ಚೀಫ್ ಕಮಿಷನರವರು ಅಪ್ಪಣೆ ಕೊಡುತ್ತಾರೆ.

2. ಸಾಧಾರಣ ಖರಾವರ್ದಿಗಳಲ್ಲಿ ಮೊಬಲಗ್ ಸಂದದ್ದು ದಾಖಲ್ ಮಾಡಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಸಿ ಆದ್ದು.

ಬೆಂಗಳೂರು, ಶನಿವಾರ, ನವಂಬರ ತಾ॥ 25, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ ವಗೈರೇರಿಂದ ಕೊಡೋಣ್ಣಾದ ಇಸ್ತಿಹಾರಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರಗಳು.

ತಾರೀಖು 24ನೇ ನವಂಬರ 1876.

ಮೈಸೂರು ಥೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ ವ ಕ್ರಿಮಿನಲ್ ಅಪ್ಪೀಲಗಳು ಮತ್ತು ಫ್ಲೂಟ್ ಅರ್ಜಿಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರಹೆಸರು.		ಪ್ರತಿವಾದಿಗಳ ಹೆಸರು.		ಹಿಯರಿಂಗ್ ತಾರೀಖು.
ಸ್ಪಿ. ಅ. ೨೦	ನೀಲಕಂತದೇವರು	..	ಸಿದ್ದಲಿಂಗದೇವರು	..	೨೫ನೇ ನವಂಬರ
ಸ್ಪಿ. ಅ. ೨೧	ಕರಿಗೌಡಾ	..	ಜೂಮ್ಮಕ್ಕಾ ವಗೈರೆ	..	ಡಿಟೋ
ಸ್ಪಿ. ಅ. ೬೮	ನಾಚಾ	..	ಸಿದ್ದಲಿಂಗಪ್ಪ ವಗೈರೆ	..	೨೮ನೇ ಡಿಟೋ
ಕೊ. ಸ್ಪಿ. ಅ ೧೪	ಮೆ॥ ಹೆನರಿಮೆರ್	..	ಸುಬ್ಬಾ ವಗೈರೆ	..	ಡಿಟೋ
ಕ್ರಿ. ಅ. ೨೭, ೨೩	ಕೈದಿ, ಹನುಮಂತ ವಗೈರೆ	..	..	..	ಡಿಟೋ
ಸ್ಪಿ. ಅ. ೨೭	ಮುನಿಯಾಜಟ್ಟಿ	..	ಕೃಷ್ಣಾಚಾರಿ	..	೩೦ನೇ ಡಿಟೋ
ಸ್ಪಿ. ಅ. ೨೩	ಸಿಂಗಿ	..	ಕಾಡಸಿದ್ದ ವಗೈರೆ	..	ಡಿಟೋ
ಸ್ಪಿ. ಅ. ೬೨	ವೆಂಕಟರಮಣ್ಯೆಯ	..	ತಂಮ್ಮೈಯ ವಗೈರೆ	..	೫ನೇ ಡಿಸಂಬರ್
ಸ್ಪಿ. ಅ. ೨೫	ವೆಂಕಟಸುಬ್ಬೈಯ	..	ವೆಂಕಟಮ್ಮ	..	ಡಿಟೋ
ಸ್ಪಿ. ಅ. ೨೬	ಸುಬ್ಬಾಭಟ್ಟ	..	ಶೇಷಭಟ್ಟ	..	ಡಿಟೋ
ಕ್ರಿ. ಅ. ೨೪	ಕೈದೀ ಜನಾರ್ದನ	..	..	..	ಡಿಟೋ
ಸ್ಪಿ. ಅ. ೨೪	ರಾಮಗಿರಿ ಮಹೇಶಗಿರಿ ಗೋಸಾಯಿ	..	ವೆಂಕಟಗಿರಿ ಗೋಸಾಯಿ	..	೬ನೇ ಡಿಟೋ
ಸ್ಪಿ. ಅ. ೨೨	ಷೈಲರ್ಖಾ	..	ಶೇಷಶೆಟ್ಟಿ ವಗೈರೆ	..	ಡಿಟೋ
ಸ್ಪಿ. ಅ. ೬೯	ವೇಂಕಟರಮಣಪ್ಪಾ ವಗೈರೇ	..	ಡಾಕ್ಟರ್ ಅರ್ಸಾಹೆಬರು ವಗೈರೆ	..	೧೨ನೇ ಡಿಟೋ
ಸ್ಪಿ. ಅ. ೨೮	ನಾಡಿಗ ಶ್ಯಾಮಣ್ಣ	..	ಕೇಪ್ಟನ್ ವೆಸ್ಟಾಮರ್	..	ಡಿಟೋ
ಸ್ಪಿ. ಅ. ೮೦	ನರಸಿಹ್ಮಯ್ಯಾ ವಗೈರ	..	ಸುಬ್ಬರಾಯ ವಗೈರೆ	..	ಡಿಟೋ
ಸ್ಪಿ. ಅ. ೨೯	ಲಿಂಗಣ್ಣಾ	..	ನಂಜೇಗೌಡ	..	೧೪ನೇ ಡಿಟೋ
ಫ್ಲೂಟ್ ಸ್ಪಿ: ಅ. ೧೩	ಪುಟ್ಟಣ್ಣಾ	..	ಚನ್ನಪ್ಪಾ	..	ಡಿಟೋ
ಕೊ. ಸ್ಪಿ. ಅ. ೧೫	ನಂಜುಂಡೈಯ	..	ಮಲ್ಲಶೆಟ್ಟಿ	..	ಡಿಟೋ
ಸ್ಪಿ. ಅ. ೮೧.	ಮುರಗಪ್ಪ ವಗೈರೆ	..	ಜಡಿಯಪ್ಪಾ	..	೧೯ನೇ ಡಿಟೋ

J. D. GORDON, *Judl. Commr.*

ಇನಾಂ ಇಲಾಖಾ.

Registration of such service inams in the Kankanhalli Taluk as were alienated before the promulgation of the Chief Commissioner's Circular dated 11th September 1835, the alienee not performing the service for which inam was originally granted.

ಮೈಸೂರು ಶೀಮೆಯ ಇನಾಂ ಸೆಟಲ್ಮೆಂಟ್ ಆಫಿಸಿನಿಂದ.

ಇದರಿಂದ ಕಾನಕಾನಹಳ್ಳಿ ತಾಲ್ಲೂಕು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚೀಫ್ ಕಮಿಷನರ್ ಸಾಹೇಬರವರ 1876ನೇ ಇಸವಿ ಆಕ್ಟೋಬರ್ 17ನೇ ತಾರೀಖಿನ 7037—216ನೇ ನಂಬರ್ ಪ್ರೊಸೀಡಿಂಗಸಿನ 1ನೇ ಪ್ಯಾರಾ ಹುಕ್ಕುಂಗಳ ಪ್ರಕಾರ ಭ್ಯಾನುಭೋಗ, ತಳವಾರ, ನೀರಗಂಟಿ, ತೋಟಿ, ಮುಂತಾದ ಸರಕಾರ ನೌಕರರ ಇನಾಂಗಳು ಈ ಡಿಪಾರ್ಟ ಮೆಂಟಿನಿಂದ ಯಿನ್ನು ಮೇಲೆ ರಿಜಿಸ್ಟರ್ ಮಾಡಲ್ಪಡುವದಿಲ್ಲ.

2. ಆದರೆ ಸದರೀ ನೌಕರರ ಇನಾಂಗಳ ಪೈಕೀ ಯಾವ ಇನಾಂಗಳಾದರೂ 1835ನೇ ಇಸವಿ ಶೆಪ್ಟಂಬರ್ 11ನೇ ತಾರೀಖಿನ ಚೀಫ್ ಕಮಿಷನರ್ ಸಾಹೇಬರವರ ಸರ್ಕ್ಯುಲರ್ ಹುಕ್ಕುಮಿಗೆ ಪೂರ್ವವೇ ಪರಾಧೀನವಾಗಿ ಅಂಥಾವುಗಳನ್ನು ಹಾಲೀ ಅನುಭವಿಸುವವರು ನೌಕರೀ ಮಾಡದೇ ಇದ್ದ ಪಕ್ಷದಲ್ಲಿ ಅವುಮಾತ್ರ ಚೀಫ್ ಕಮಿಷನರ್ ಸಾಹೇಬರವರ ಪ್ರೊಸೀಡಿಂಗಸಿನ 2ನೇ ಪ್ಯಾರಾ ಹುಕ್ಕುಂ ಪ್ರಕಾರ ಈ ಡಿಪಾರ್ಟ ಮೆಂಟಿನಲ್ಲಿ ವಿಚಾರಣೆ ಮಾಡಲ್ಪಟ್ಟು ಅನುಭವದಾರರಿಗೆ ⅛ ಕ್ವಿಟರೆಂಟ್ ಮೇಲೆ ಖಾಯಂ ಮಾಡಲ್ಪಡುತ್ತಾವಾದ್ದರಿಂದ ಯಿಂಥಾ ಇನಾಂದಾರರು ಈ ತಾಲ್ಲೂಕು ಇನಾಂ ವಿಚಾರಣೆ ಮಾಡುವ ಅಸಿಸ್ಟೆಂಟರಲ್ಲಿ ದಸ್ತೈವಜುಗಳು ವಗೈರೇ ಸಹಿತ ಹಾಜರಾಗಿ ಸ್ಟೇಟಮೆಂಟುಗಳು ದಾಖಲ್ಮಾಡಿ ಫೈಸಲ್ಪಡಿಯತಕ್ಕದ್ದೆಂದುನ್ನೂ,

ಅಪ್ರಕಾರ ಇನಾಂ ವಿಚಾರಣೆ ಕಾಲದಲ್ಲಿ ಮತ್ತು ತಾಲ್ಲೂಕು ವಿಚಾರಣೆ ಕಾಲದಲ್ಲಿ ನಹ ಫೈಸಲ್ಪಡಿಯದಿದ್ದರೆ ಪುತ್ರಪೌತ್ರರ ಯಾವಾಗಲೂ ಅವರ ದಾವೇ ಅಂಗೀಕರಿಸಲ್ಪಡಲಾರದೆಂದುನ್ನೂ ಇದರಿಂದ ಸಮಸ್ತರಿಗೂ ತಿಳಿಯಪಡಿಸಿ ಯಿದೆ.

ಇನಾಂ ಸೆಟಲ್ಮೆಂಟ್ ಆಫಿಸ್, ಬೆಂಗಳೂರು, ಜತಾರೀಖು 28—10—76.

R. A. COLE,
Supt. of Inam Settlements.

ಫಾರೆಸ್ಟು ಇಲಾಖಾ.

ಇಸ್ತಿಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂವಲಮರದ ಸಾಲೀಯಾನಾ ಹರಾಜ್‍ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಬೆಂಗಳೂರು,	1ನೇ ಡಿಶಂಬರ	„	ಹೆಚ್ಚು ಕಡಮೆ 100 ಟನ್ನುಗಳು.
ಫ್ರೇಜರಪೇಟೆ	18ನೇ „	„	80 „

ಹರಾಜ್ ನಿಬಂಧನೆ—ಹರಾಜ್ ಮೊಬಲಗ ಪೈಕೀ ನೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‍ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮರ್ತುಂ 47ನೇ ನಂಬರು ಮೈಸೂರು ಗಜೆಟಿನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಅನಪಾನ್ ಕೋಠೀಗಳಲ್ಲಿ ಯು ಹರಾಜ್‍ಗಳು ನವಂಬರ 8ಕ್ಕೆ ಖೈದುಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ನೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ ಮೊಬಲಗ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಳಿಗೆ ಡಿಪಾಜಿಟ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮರ್ತುಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‍ಗಳ ಬಾಬತು ಪೂರಾಮೊಬಲಗ 1877ನೇ ಇಸವೀ ಫೆಬ್ರವರಿ 6ನೇ ಮರ್ತುಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತುಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಟನ್ಸ್, ಪಾಂಡ್, ಹಂಡ್ರೆಡ್ ವಯಿಟ್ ಟಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನಿಂದ.

ತಾರೀಖು 14ನೇ ನವಂಬರ್ 1876.

ಇದರಿಂದ ತಿಳಿಯಪಡಿಸುವದೇನಂದರೆ,—ಹಳೆ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ಅಂಶದಲ್ಲಿ ವುಂಟಾಗಿರುವ ರೂಲ್ಸ್ ಅನುಸಾರವಾಗಿ 1870ನೇ ಇಸವಿ ಜನವರೀ ಗುರ್ರೇ ಲಗಾಯತು ಅದೇ ಇಸವಿ ಡಿಶಂಬರ್ 31ನೇ ತಾರೀಖು ವರಿಗೆ ಅರಿಜನಾಲ್ ಸ್ಮಾಲ್‌ಕಾಜ್ ಅಮಲ್‌ಜಾರೀ ಯಿತರ ಮಿಸಲೇನಿಯಸ್ ಮೊಕದ್ದಮೆಗಳಲ್ಲಿ ವ ನಡವಳಿತಗಳಲ್ಲಿ ಕಕ್ಷಿಗಾರರಿಂದ ದಾಖಲ್ ಮಾಡಲ್ಪಟ್ಟ ದರೋಬಸ್ತು ದಸ್ತೈವಜುಗಳು, ಸಾಧನಗಳು, ಲೆಖ್ಖಗಳು, ಯಿತರ ಕಾಗದಗಳು 1877ನೇ ಇಸವಿ ಮಾರ್ಚಿ 31ನೇ ತಾರೀಖಿನಲ್ಲಿ ನಾಶ ಮಾಡಲ್ಪಡುವವು.

ಮೇಲೆ ತಿಳಿಸಲ್ಪಟ್ಟ ಮೊಕದ್ದಮೆಗಳಲ್ಲಿ ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತೈವಜುಗಳನ್ನಾಗಲಿ ವಾಪಸ್ ತೆಗದುಕೊಳ್ಳತಕ್ಕ ಖಾಯಿಷ್ ವುಳ್ಳ ಕಕ್ಷಿಗಾರರು ಮೇಲೆ ನಮೂದಿಸಲ್ಪಟ್ಟ ತಾರೀಖಿಗೆ ಮಾತ್ರವೇ ಕೋರ್ಟು ದಿನಗಳಲ್ಲಿ ಮಧ್ಯಾಹ್ನ 11 ಘಂಟೆ ಲಗಾಯ್ತು 4 ಘಂಟೆ ವಳಗಾಗಿ ಕೋರ್ಟಿಗೆ ತಿಳಿ ಪಡಿಸತಕ್ಕದ್ದು.

J. LACEY, B. L.,
Judicial Assistant Commissioner.

KOLAR DISTRICT.

Notice of an application by Suryanarnappa for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ್ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶ್ರೀನಿ[illegible]ಪುರದಲ್ಲಿರುವ ಭೈರವುಂಗಲದ ಶೇಷಪ್ಪನ ಮಗ ಸೂ ರ್ಯನಾರಣಪ್ಪ ನೆಂಬವನು ಘಾಶೀಪಟ್ಟ ತನ್ನ ತಂದೆ ಹೆಸರಿನ ಲೇವಾದೇ[illegible]ತು 00 ರೂಪಾಯಿಗಳು ವಸೂಲ್‌ಮಾಡಿ ಕೊಳ್ಳುವಾ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ವಾರಸ ಸ[illegible]ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜೀ ಯು ಡಿಶಂಬರ್ 20ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತೆಯಾಗಿ ಯಿದರ[illegible]ಯೂಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ದಿವಿ 11 ಘಂಟೆಗೆ ಕೋರ್ಟು ಯಿರುವ ಸ್ಥಳ[illegible]ಬಂದು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು 17ನೇ ನವಂಬರ್ 1876ನೇ ಇಸವಿ ಮೊಕ್ಕಾಂ ಕೋಲಾರ.

P. N. PURNAIYA,
For Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟ್.

ಸಕಲಜನಗಳಿಗೂ ತಿಳಿಯುವಬಗ್ಯೆ ಇದರಿಂದ ತಿಳಿಸಲ್ಪಡುವದೇನಂದರೆ,—ಫಾರೆಸ್ಟು ಯಿಲಾಖೆಗೆ ಸೇರಿಶಿದ ಜಂಗ್ಲಿಗಳ ಶಿವಾಯಿ ತುಮಕೂರು ಡಿಸ್ಟ್ರಿಕ್ಟ್ ಜಂಗ್ಲಿಗಳ ಬಾಬತು ಆರಗಿನ ಕಂಟ್ರಾಕ್ಟ 1877—78—1878—79—1879—80 1880—81 ಮತ್ತು 1881—82ನೇ ಇಸವಿಗಳಿಗೆ ಅಂದರೆ 1877ನೇ ಏಪ್ರೆಲ್ 1ನೇ ಮುಕ್ಕಾಂ ಲಗಾಯಿತು 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಡದರಖಾಸ್ತು ಶರ್ತಿಗೆ ಹರಾಜು ಮೂಲಕ 1877ನೇ ಮಾರ್ಚಿ 15ನೇ ಮುಕ್ಕಾಂ 12 ಘಂ ಟೆಗೆ ತುಮಕೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದುವರುಷಗಳ ವರಿಗೆ ಆಯಾ ವರುಷದ ಚಡದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ಮೇಲೆ ಕರ್ರೆಸಿ ನೋಟುಗಳು ಯಾ ನಗದು ಹಣ 6 ಖಿಸ್ತುಗಳಿಗೆ ಯಾ ಮಾಹೇವಾರೀ ಯಿನ್ಸ್ಟಾಲ್ ಮೆಂಟಿಗೆಗೆ ಸಮನಾದ ಡಿಪಾಜಿಟ್ಟನ್ನು ಹಾಜರ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲಿಯಾನಾ ದರಖಾಸ್ತು ಮೊಬಲಗು ಪೈಕೀ ಹನ್ನೆರಡರಲ್ಲಿ ವೊಂದು ಹಿಸ್ಸೆಗೆ ಅಥವಾ ವೊಟ್ಟು ಕಂಟ್ರಾಕ್ಟು ಮೊಬಲಗು ಪೈಕೀ 60 ರಲ್ಲಿ ವಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜು ಹಾಕಲ್ಪಟ್ಟು ಆ ಮೂಲಕ ಸರಕಾರಕ್ಕೆ ಬರುವ ಲುಕ್ಸಾನಿಗೆ ಅವನನ್ನು ಗುರೀ ಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೈಲ್ 1ನೇ ಮುಕ್ಕಾಂನಲ್ಲಿ ಪ್ರವೇಶಿಸಿ ತನ್ನ ಮೊದಲನೆ ಮಾಹೇವಾರೀ ಖಿಸ್ತುಗಳು 1877ನೇ ಏಪ್ರೈಲ್ 15ನೇ ಮುಕ್ಕಾಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳು 15ನೇ ಮುಕ್ಕಾಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ ಮೊಬಲಗು ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳಮೇಲೆ ಲೋಕಲ್‌ಸೆಸ್ಸು, ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಅಡ್ಡೀ ವುಂಟಾದರೆ ಸದರೀ ಕಂಟ್ರಾಕ್ಟು ರದ್ದುಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಡಿಪಾಜಿಟ ಮೊಬಲಗಿನ ನಿಮಿತ್ಯವಿಲ್ಲದೆಯೆ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ ಮೊಬಲಗು ಗವರ್ನಮೆಂಟಗೆ ಸೇರಿಸಿಕೊಳ್ಳಲ್ಪಡುವದು.

ತಾರೀಖು 21ನೇ ಅಕ್ಟೋಬರ 1876.

E. S. LUDLOW,
Offg. Dy. Commr.

ಸರ್ 1876ನೇ ಇಸವಿ ನವಂಬರ ತಾರೀಖು 8 ಶಿವಿಲ್ ಮಿಸಲೇನಿಯಸ್ ನಂಬರ 24.

ಸರ್ 1876ನೇ ಇಸವೀ ಏಪ್ರೈಲ್ ನೇ ತಾರೀಖಿನಲ್ಲಿ ಪಾತೀ ಆದ ತುಮಕೂರು ತಾಲ್ಲೂಕು ಕೆಸರಮಡು ಜಾಗೀರ್ ಗ್ರಾಮದ ಮೊಖ್ತೇಸರ ಸೈದ್ ಖಾದರ್ ಪಾಷಾ ಖಾದ್ರಿಸಾಹೇಬಿಯಿಂದ ಅದೇಗ್ರಾಮದಲ್ಲಿರುವ ನಸೀರುದ್ದೀನ್ ಹುಸೇನಿಯುಲ್ ಖಾದ್ರಿ ಯಂಬುವನಿಗೆ ಬರದುಕೊಟ್ಟ ಉಯಿಲನ್ನು ಸ್ಥಿರಪಿಸಿ ಸರ್ಟೀಫಿಕೇಟ ಯಾನೇ ಅಧಿಕಾರ ಪತ್ರಿಕೆಯನ್ನ ಕೊಡಬೇಕೆಂದು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಕೋರ್ಟಿಗೆ ಅರ್ಜೀ ಕೊಟ್ಟು ಯಿರುತಾನಾಗಿ ಯಿದರ ವಿಮರ್ಶೇ ಬಗ್ಯೆ ಬರುವ ಡಿಶೆಂಬರ್ ತಿಂಗಳು 11ನೇ ತಾರೀಖಿಗೆ ಹಿಯರಿಂಗ್ ಮಾಡಿರುತ್ತೆ ತಕರಾರುದಾರ್ರು ಯಾರಾದರೂ ಯಿದ್ದಲ್ಲಿ ಆ ತಾರೀಖಿಗೆ ಸರಿಯಾಗಿ ನಮ್ಮ ಕೋರ್ಟು ರೂಬರೂ ಹಾಜರಾಗಬೇಕಾದ್ದರಿಂದ ತಿಳಿಯಪಡಿಸಿದೆ.

T. E. WOODCOCK,
For Offg. Dy. Commr.

MYSORE DISTRICT.

Notice inviting parties to receive back sums remaining at their credit in the Mandya Munsiff's Court.

ಮೈಸೂರು ಡಿಸ್ಟ್ರಿಕ್ಟು ನಂಬರ 4ನೇ ಮಂಡ್ಯ ಸಬ ಡಿವಿಜನ್ ಮುನಸೀಫ್ ಕೋರ್ಟಿನಿಂದ.

ಸರ್ 1875ನೇ ಇಸವೀಲಿ ಈ ಕೋರ್ಟಿಗೆ ಕಕ್ಷಿಗಾರ್ರಿಂದ ಹಾಜರಾದ ಸಾಕ್ಷಿ ಭತ್ಯದ ಮೊಬಲಗು ಪೈಕೀ ಖರ್ಚಾದದ್ದು ಜಾತಾ ಬಾಕೀ ಪಾವತೀಯಾಗದೆ ಅಮಾನತ್ತು ಕೋರ್ಟಿನಲ್ಲಿ ಇರುವ ಕೆಳಗಿನ ಪಟ್ಟೀಲಿ ಕಂಡ ಮೊಬಲಗನ್ನ ಹಾಜರ ಮಾಡಿದ ಕಕ್ಷಿಗಾರರು ಈ ಇಸ್ತಿಹಾರ ಪ್ರಸಿದ್ಧಮಾಡಲ್ಪಟ್ಟ 1876ನೇ ಇಸವಿ ನವೆಂಬರ ತಿಂಗಳು 4ನೇ ತಾರೀಖು ಲಗಾಯತು ಯರಡು ತಿಂಗಳು ಮಾಯಿದೆಯಲ್ಲಿ ಈ ಕೋರ್ಟು ರೂಬರೂ ಹಾಜರಾಗಿ ವಾಪಸ್ ಪಡಿಯಬೇಕು. ಹಾಗೆ ಪಡಿಯದೆ ತಪ್ಪಿದರೆ ಜರ್ಜ ಮೊಬಲಗು ಸರಕಾರಕ್ಕೆ (ಬೇವಾರಸ ಮೊಬಲಗಾಗಿ ಯೆಣಿಸಿ) ಸೇರಿಸಿಕ್ಕೊಳ್ಳಲ್ಪಡುತ್ತೆ.

ಮೊಬಲಗು ಜಮಾ ಆದ ತಾರೀಖು.	ನಗದಿ ಬುಕ್ಕಿನ ಜಂಜರ್ ನಂಬರ್.	ಮೊಕದ್ದಮಾ ನಂಬರ್.	ಮೊಬಲಗು. ರೂಪಾಯಿ	ಆಣೆ.	ಹಾಜರ್ ಮಾಡಿದವರ ಮತ್ತು ವಾಪಸ್ ಪಡಿಯ ಬೇಕಾದವರ ಹೆಸರು.
16ನೇ ಜೂನ್ 1875.	312	ಸ್ಮಾ. 75	0	8	ವಾದಿ ವೀರೈಯ.
19ನೇ ಆಗಸ್ಟು ಡಿಟೋ	417	ರಿ. 311	0	12	ವಾದಿ ಹೊಂಬಾಳೇಗೌಡ.
15ನೇ ಅಕ್ಟೋಬರ್ ,,	563	ಮಿ. 40	2	8	ಶ್ರೀಕಂಠೈಯ.
21ನೇ ಡಿಟೋ ,,	613	ರಿ. 473	0	8	ವಾದಿ ತಿಂಮೇಗೌಡ.
22ನೇ ಡಿಟೋ ,,	627	ಸ್ಮಾ. 145	0	8	ವಾದಿ ವೆಂಕಟಪ್ಪಾ.
16ನೇ ಡಿಶಂಬರ್ ,,	865	ಸ್ಮಾ. 191	1	0	ಮುತ್ತೆಗೆರೆ ಪುಟ್ಟಸಾಮಿ.
		ಜುಮ್ಲಾ	5	12	

ತಾರೀಖು 23ನೇ ಅಕ್ಟೋಬರ್ 1876ನೇ ಇಸವೀ ಮೊಕ್ಕಾಂ ಅತ್ತಿಕುಪ್ಪಾ.

Notice of an application by Krishnaiengar for a certificate under Act XXVII of 1860.

1876ನೇ ಇಸವಿ ಸಿವಿಲ್ ಫೂಟ ಮಿ॥ ನಂ. 83.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ಅಣ್ಣನಾದ ತಿಮ್ಮಪ್ಪೈಯಂಗಾರ್ರಿಗೆ ಬರಬೇಕಾದ 1000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಆಗಪೇಕೆಂದು ಮೈಸೂರು ಕೃಷ್ಣ ವಿಲಾಸದ ಅಗ್ರಹಾರದಲ್ಲಿಯಿರುವ ವೀ ಕೃಷ್ಣಯಂಗಾರ್ ಯೆಂಬುವನು ಕೊಟ್ಟಿರತಕ್ಕ ಅರ್ಜೀಯನ್ನು ನವಂಬರ್ ಮಾಹೇ ತಾರಿಖು 22ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿ ಕೊಳ್ಳತಕ್ಕದ್ದಿಥೆ.

ತಾರೀಖು 30ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Niranjana Dáslala and two others for a certificate under Act XXVII of 1860.

1876ನೇ ಇಸವೀ ಸಿವಿಲ್ ಫೂಟ ಮಿಸಲೇನಿಯಸ್ ನಂಬರ್ 84.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಪಾತೀಯಾದ ಲೀಕರಾಜಾಲಾಲಾ 1 ದೀನಾನಾಥಲಾಲಾ 1 ಬಾಲ ಮುಕುಂದ ದಾಸ್‌ಲಾಲಾ ಈ 3 ಜನಗಳಿಗೆ ಬರಪೇಕಾದ 2,000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟ ಪ್ರಕಾರ ಸರಟಫಿಕೇಟ ಆಗಬೇಕೆಂದು ಮೈಸೂರು ಬಸವನ ಮೊಹಲೇದಲ್ಲಿರುವ ಸದರೀ ಯವರ ಮಕ್ಕಳಾದ ನಿರಂಜನ ದಾಸ್‌ಲಾಲಾ 1 ಸುಬ್ರಹ್ಮಣ್ಯಲಾಲಾ 1 ರಾಜಾರಾಮುಲಾಲಾ 1 ಈ 3 ಜನವೂ ಕೊಟ್ಟಿರತಕ್ಕ ಅರ್ಜೀಯನ್ನ ನವಂಬರ್ ಮಾಹೇ 22ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿಕೊಳ್ಳತಕ್ಕದ್ದಿಥೆ.

Notice of an application by Honne Gauda for a certificate under Act XXVII of 1860.

ಸ್ 1876ನೇ ಇಸವಿ ಸಿವಿಲ್ ಫೂಟ ಮಿಸಲೇನಿಯಸ್ ನಂಬರ್ 85.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ಅಣ್ಣ ಮಾಯಿಗನಿಗೆ ಬರಬೇಕಾದ 75 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟ ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಶ್ರೀರಂಗಪಟ್ಟಣದಲ್ಲಿರುವ ಕುರುಬರ ಜಾತಿ ಹೊನ್ನೇಗೌಡನ ಮಗ ಹೊನ್ನೇಗೌಡನು ಕೊಟ್ಟಿರತಕ್ಕ ಅರ್ಜೀಯನ್ನ ನವಂಬರ್ ಮಾಹೇ ತಾರೀಖು 22ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾನ್ನು ಸ್ಥಿರಪಡಿಶಿ ಕೊಳ್ಳತಕ್ಕದ್ದಿಥೆ.

ತಾರೀಖು 31ನೇ ಅಕ್ಟೋಬರ್ 1876ನೇ ಇಸವೀ ಮೊಕ್ಕಾಂ ಮೈಸೂರು.

Notice of an application by Channabasavaiya for a certificate under Act XXVII of 1860.

ಸ್ ೞ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ॥ 86.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಂದೆ ದೊಡ್ಡೆಗೌಡನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ತಾಲ್ಲೂಕು ವರಕೋಡು ಹೋಬಳಿ ಚನ್ನಹಳ್ಳಿ ಗ್ರಾಮದಲ್ಲಿರುವ ಚನ್ನಬಸವೈಯನು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೆ ತಾರೀಖು 5ಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರ್ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Sheshamma for a certificate under Act XXVII of 1860.

ಸ್ ೞ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ॥ 87.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಗಂಡ ನರಸಮ್ಮೈಯನಿಗೆ ಬರಬೇಕಾದ 150 ರೂಪಾಯಿಗಳನ್ನು ವಸೂಲ್‌ಮಾಡಿ ಕೊಳ್ಳುವದಕ್ಕೆ ತನ್ನ ತಂದೆಯಾದ ಮತ್ತು ಗಾರ್ಡಿಯರ್ ಆದ ಶೇಷೈಯನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ತಲಕಾಡು ತಾಲ್ಲೂಕು ತಾಯೂರ ಹೋಬಳಿ ಗೆಣಗನೂರು ಗ್ರಾಮದಲ್ಲಿರುವ ಶೇಷಮ್ಮ ನೆಂಬವಳು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ ತಾರೀಖು 5ಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರ್ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Kempi for a certificate under Act XXVII of 1860.

ಸ್ ೞ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂಬರ್ 88.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಗಂಡ ಮಾದನಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ತಲಕಾಡು ತಾಲ್ಲೂಕು ನರೀಪುರದ ಹೋಬಳಿ ಕೊತ್ತಗಾಲದ ಗ್ರಾಮದಲ್ಲಿರುವ ಕೆಂಪಿ ಯೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ 5ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರ್ ರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮಾಹೆ ನವಂಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

C. J. PEARSE,
Dy. Commr.

HASSAN DISTRICT.

Notice of applications for jungles for coffee cultivation.

ಹಾಸನ ಡಿಸ್ಟ್ರಿಕ್ಟ್ ಡೆ॥ ಕ॥ ಕಚ್ಚೇರಿಯಿಂದ.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಮರ್ಜನ ಹಳ್ಳಿಗ್ರಾಮಕ್ಕೆ ಸೇರಿದ ಹುಳಿಮರದ ಹಿತ್ತಲೆಂಬ ಅನಾದಿ ಬಂಜರು ಜಮಾ.

ಯಿದರ ಚಕಕ್ಕುಬಂದಿ.

ಪೂರ್ವಕ್ಕೆ ಮೇಲ್ಗಡೆ ತಿಟ್ಟದ ದಿಣ್ಣೆ.
ದಕ್ಷಿಣಕ್ಕೆ ಹಲಸಿನಮರಾ ದಿಂಣೆ.
ಪಶ್ಚಿಮಕ್ಕೆ ದಿಂಣೆ.
ವುತ್ತರಕ್ಕೆ ಬರ್ಸ್‌ಫೋರ್ಡ್ ಸಾ॥ ರವರ ಕಾಫೀ ತೋಟದಬಳಿ ಹೊಂದು ದಾರಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 84 ದಕ್ಷಿಣೋತ್ತರ 74 ಸಲಿಗಜ 6216ಕ್ಕೆ ಯಕರೆ 1 ರೋಡ್ 1 ಪೋಲ್ 5 ಗಜ $14\frac{3}{4}$ ವುಳ್ಳದ್ದು.

ಈ ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಮರ್ಜನಹಳ್ಳಿ ಗ್ರಾಮದ ಬೋಂಮೇಗೌಡನ ದ್ಯಾವೇ ಗೌಡ ನೆಂಬವನು 153ನೇ ನಂಬರು ದರಖಾಸ್ತು ಮಾಡಿದ್ದಾನಾಗಿ ಅದಕ್ಕೆ ಬಾಧ್ಯ ಪಟ್ಟು ಯಿರುವ ಸರ್ವರಿಗೂ ಇದರಿಂದ ಪ್ರಸಿದ್ಧ ಪಡಿಸುವದೇನಂದರೆ.

ಈ ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆಯುಳ್ಳವರಾಗಲಿ ಅಥವಾ ಅವರ ಹಕ್ಕುದಾರಿಯನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಗಾಯತು ವಂದು ತಿಂಗಳ ವಳಗಾಗಿ ಡಿ|| ಮ|| ಕಾಫೀ ಇರ್ಚಾರ್ಜ್ ಫಸ್ಟ್ ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಯಡಕೆರೇ ಗ್ರಾಮಕ್ಕೆ ಶೇರಿದ ದುರ್ಗದ ಗದ್ದೆ ತಲೆಕಟ್ಟಿನ ಬಂಜರ್ ಪ್ರದೇಶ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ದರಖಾಸ್ತುದಾರನ ದುರ್ಗದ ಗದ್ದೆ ವತ್ತು.
ದಕ್ಷಿಣಕ್ಕೆ ದುರ್ಗದ ಗದ್ದೆ ಕಾವಲಿ ಮತ್ತು ಬಾಂದಿನ ಕಾಲ್ವೆ.
ಪಶ್ಚಿಮಕ್ಕೆ ಕೋಣಬನ ಹಳ್ಳಿ ಗದ್ದೆ ವತ್ತು.
ವುತ್ತರಕ್ಕೆ ಅತ್ತಿಗನಹಳ್ಳಿ ಯಡಕೆರೆಗ್ರಾಮಕ್ಕೆ ಸಹ ಸರಹದ್ದು ಬಾಂದು ಹಾಕಿರುವ ಸಂದು ಹೆಸವನ ಸ್ತೋಟ ಕೋಣಬನಹಳ್ಳಿಗೆ ಹೋಗುವ ದಾರಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 91 ದಕ್ಷಿಣೋತ್ತರ 78 ಸಲೆಗಜ 7098ಕ್ಕೆ ಯಕರೆ 1 ರೋಡ್ 1 ಪೋಲ್ 34 ಗಜ 19½ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಯಡಕೆರೆ ಗ್ರಾಮದ ಮರಿದೇವೇ ಗವುಡ ನೆಂಬವನು 81ನೇ ನಂ. ದರಖಾಸ್ತು ಮಾಡಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯಿತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫೀಇರ್ಚಾರ್ಜ ಫಸ್ಟು ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳತಕ್ಕದ್ದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ತಾಲ್ಲೂಕು ಅರಕಲ್‍ಗೂಡು ಸ್ಸಂಮತು ಪೋನಾಥಪುರದ ಹೋಬಳಿ ಬಿಳಗರವಳ್ಳಿಗ್ರಾಮಕ್ಕೆ ಶೇರಿದ ಐದು ಹಣವಿನ ಮರಟಿ ನೆತ್ತಿಕಣ್ಣು ಮೈದಾನವೆಂಬ ಜಮೀನು.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಕಲ್ಲರೆ.
ಪಶ್ಚಿಮಕ್ಕೆ ಯಿದೆಮರಟಿ ಬಾಂದು.
ದಕ್ಷಿಣಕ್ಕೆ ಚುಂಚೇಗೌಡನ ದರಖಾಸ್ತು ಕಲ್ಲು ಸಹಾ.
ವುತ್ತರಕ್ಕೆ ಯಿದೇ ಮರಟಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 80 ದಕ್ಷಿಣೋತ್ತರ 80 ಸಲೆಗಜ 6400ಕ್ಕೆ ಯಕರೆ 1 ರೋಡ್ 1 ಪೋಲ್ 11 ಗಜ 17। ವುಳ್ಳದ್ದು.

ಈ ಜಮೀನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಗಂಜಿಗೆರೆ ಗ್ರಾಮದ ಬಾಳೇ ಗವುಡನ ಮಗ ತಿರಮಲೇಗವುಡ ನೆಂಬವನು 189ನೇ ನಂಬರು ದರಖಾಸ್ತುಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನ ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆವುಳ್ಳವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯಿತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫೀ ಯಿರ್ಛಾರ್ಜ ಫಸ್ಟು ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳಬಹುದು.

ಈ ನಿಬಂಧನೆ ತಪ್ಪಿ ಬಳಿಕ ಫಿರ್ಯಾದು ತಂದದ್ದಾದರೆ ಅದು ಮಂಜೂರು ಆಗಲರಿಯದು.

ಹಾಸನ ತಾಲ್ಲೂಕು ಸಾಲ್ಗಾದ ಹೋಬಳಿ ಹಾಚಗೋಡನ ಹಳ್ಳಿ ಗ್ರಾಮಕ್ಕೆ ಶೇರಿದ ಮೇಲಿನ ಹಿತ್ತಲ್ ಯೆಂಬ ಜಮೀನ್.

ಯಿದರ ಚಕ್ಕುಬಂದಿ.

ಗುರುಸಾಂತೈಯನ ಹಿತ್ತಲಿಗೆ ಪಶ್ಚಿಮ.
ಪರುವತೈಯನ ಹಿತ್ತಲಿಗೆ ದಕ್ಷಿಣಾ.
ಮಣ್ಣು ಅಗೆಯುವ ಗುಂಡಿಗೆ ಪೂರ್ವ.
ದನವಿನ ಪೋಣಿಗೆ ವುತ್ತರ.

ಈ ಮಧ್ಯೆ ಯಿರತಕ್ಕ ಜಮೀನ್ ಅಳತೆ ಪೂರ್ವ ಪಶ್ಚಿಮ ಗಜ 84, ದಕ್ಷಿಣೋತ್ತರ ಗಜ 62 ಸಲಿಗಜ 5208ಕ್ಕೆ ಯಕರೆ 1 ರೋಡ್ 0 ಪೋಲ್ 12 ಗಜಾ 5 ವುಳ್ಳದ್ದು.

ಈಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಹಾಕಗೋಡನಹಳ್ಳಿ ದ್ಯಾವೇಗೌಡ ನೆಂಬವನು 205ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.—

ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫೀಯಿರ್ಚಾರ್ಜ್ ಫಸ್ಟ್ ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯರ್ಾ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಹಾಸನದ ತಾಲ್ಲೂಕು ಪಾಳ್ಯದ ಹೋಬಳಿ ಮಾರನಾಯಕನ ಹಳ್ಳಿ ಗ್ರಾಮಕ್ಕೆ ಶೇರಿದ ಜಾಡಗೇರಿ ತೆಂಡು ಪುಡ್ವೆ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಶಿದ್ದೇಗೌಡನ ಸಾಗುವಳಿ ಕುಷ್ಕಿ ಬಳಲು ಹೊಲ.	ಪಶ್ಚಮಕ್ಕೆ ಬಾಹುದ್ದೀರ್ ಸಾಹೆಬನ ತೋಟದ ಚಿರಂಡಿ.
ದಕ್ಷಿಣಕ್ಕೆ ಗೋಣೀಮರದ ಗದ್ದೆ ವಂತಿ ಬಳಲ್ ಹೊಲ.	ವುತ್ತರಕ್ಕೆ ಈರಪ್ಪ ವಗ್ಯೆರೇರ ಹಿತ್ತಲ್ ಹೊಲ.

ಈ ಮಧ್ಯೆ ಅಳತೆ ಪೂರ್ವಪಶ್ಚಮ 160 ದಕ್ಷಿಣೋತರ ಸರಾಸರಿ 55 ಸಲಿಗಜಗಳು 14300ಕ್ಕೆ ಯಕರೆ 2 ರೋಡ್ 3 ಪೋಲ್ 31 ಗಜಾ $13\frac{1}{4}$ ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಮಲ್ಲೀನಹಳ್ಳಿ ಗ್ರಾಮದ ಚನ್ನಮಲ್ಲೇಗೌಡನ ಮಗ ಶಿದ್ದೇಗೌಡ ನೆಂಬವನು 155ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫೀ ಇರ್ಚಾರ್ಜ್ ಫಸ್ಟ್ ಅ. ಕ. ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯರ್ಾ ಮಾಡಿಕೊಳ್ಳಬಹುದು.

ಈ ನಿಬಂಧನೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಅತ್ತಿಗನ ಹಳ್ಳಿಗ್ರಾಮಕ್ಕೆ ಶೇರಿಪ ಬಸವನದಿಂಬ ಯಂಬ ಜಮೀನ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಹಳೇದನ ದಾರಿ ಸಣ್ಣ ಅಗಳು.	ಪಶ್ಚಿಮಕ್ಕೆ ಸದಾ ಜಾಗಾದ ನೆತ್ತೀಬಸವನ ದಿಂಣೆ.
ದಕ್ಷಿಣಕ್ಕೆ ದಿಂಣೆ.	ವುತ್ತರಕ್ಕೆ ಅತ್ತಿಗನ ಹಳ್ಳಿಯಿಂದ ಹೆತ್ತೂರಿಗೆ ಹೋಗುವ ದಾರಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಮ 72 ದಕ್ಷಿಣೋತ್ತರ 246 ಸಲಿಗಜಗಳು 17712ಕ್ಕೆ ಯಕರೆ 3 ರೋಡ್ 2 ಪೋಲ್ 25 ಗಜಾ $15\frac{3}{4}$ ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಬೇಕೆಂದು ಅತ್ತಿಗನಹಳ್ಳಿ ಗ್ರಾಮದ ಪುಟ್ಟೇಗೌಡನ ಮಗ ಬಸವೇಗೌಡನೆಂಬವನು 83ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯಿತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫಿ ಯಿರ್ಚಾರ್ಜ್ ಫಸ್ಟ್ ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯರ್ಾ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದನ್ನ ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಮೇಲಿನ ಮಾಚನಹಳ್ಳಿ ಗ್ರಾಮಕ್ಕೆ ಶೇರಿದ ಅನಾದಿ ಬಂಜರು ಹಳುಗುಮರಿ ಯಂಬ ಬಂಜರು ವುಡ್ವೆ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಈ ಗ್ರಾಮದ ದೊಡ್ಡ ಹಳ್ಳಾ	ಪಶ್ಚಮಕ್ಕೆ ದಿಂಣೆ.
ದಕ್ಷಿಣಕ್ಕೆ ಬ್ರಹ್ಮದೇವರ ಬನಾ.	ಉತ್ತರಕ್ಕೆ ಬಸವನ ಕಟ್ಟೆ ದಿಂಣೆ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 260 ದಕ್ಷಿಣೋತ್ತರ 100 ಸಲಿಗೆಜಗಳು 26000ಕ್ಕೆ ಯಕರೆ 5 ರೋಡ್ 1 ಪೋಲ್ 19 ಗಜಾ $15\frac{1}{4}$ ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಹರಗರಹಳ್ಳಿ ಗ್ರಾಮದಲ್ಲಿರುವ ಶಿದ್ದೇಗೌಡನ ಮಗ ಅಂಣೇಗೌಡನೆಂಬವನು 10ನೇ ನಂಬರು ದರಖಾಸ್ತುಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ,

ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೇಮಾಡತಕ್ಕವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯಮಾಡತಕ್ಕವರಾಗಲಿ ಯಾರಾದರೂ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖುಲಾಗಾಯಿತು ವಂದುತಿಂಗಳು ವಳಗಾಗಿ ಡಿ|| ಮ|| ಕಾಫೀ ಇನ್‌ಚಾರ್ಜ್ ಫಸ್ಟ್ ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಅತ್ತಿಗನಹಳ್ಳಿಗ್ರಾಮಕ್ಕೆ ಶೇರಿದ ಹಿರಿಗದ್ದೆ ಗೊಳ್ಳ್ಯಯಂಬ ಜಮೀನಿನ.

ಚಕುಬಂದಿ.

ಪೂರ್ವಕ್ಕೆ ಬಸವೇಗವುಡನ ಪಟ್ಟೇ ಹಿರಿಗದ್ದೆ.	ಪಶ್ಚಿಮಕ್ಕೆ ದಿಂಣೆ.
ದಕ್ಷಿಣಕ್ಕೆ ಗರಕಲ್ಲು ದಿಂಣೆ ನೆತ್ತಿ.	ವುತ್ತರಕ್ಕೆ ಕಾಲ್ವೆಅಂದರೆ ದೊಡ್ಡದಾಗಿ ನೀರು ಹರಿಯುವ ಹಳ್ಳ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ 200 ದಕ್ಷಿಣೋತ್ತರ 85 ಸಲಿಗೆಜಗಳು 17000ಕ್ಕೆ ಯಕರೆ 3 ರೋಡ್ 2 ಪೋಲ್ 1 ಗಜಾ $29\frac{3}{4}$ ವುಳ್ಳದ್ದು.

ಈ ಜಮೀನನ್ನು ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಅತ್ತಿಗನಹಳ್ಳಿಯಲ್ಲಿರುವ ಯಸಳೂರು ಪ್ಯಾಟೆ ಜಮಾಲ್‌ಸಾಬಿಯಂಬವನು 82ನೇ ನಂಬರ್ ದರಖಾಸ್ತು ಮಾಡಿಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖು ಲಾಗಾಯಿತು ವಂದು ತಿಂಗಳು ವಳಗಾಗಿ ಡಿ|| ಮ|| ಕಾಫೀ ಇನ್‌ಚಾರ್ಜ್ ಫಸ್ಟ್ ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜರಾಬಾದು ತಾಲ್ಲೂಕು ಹೆತ್ತೂರು ಹೋಬಳಿ ಅತ್ತಿಗನ ಹಳ್ಳಿ ಗ್ರಾಮಕ್ಕೆ ಶೇರಿದ ಕಣಾರಹಳ್ಳಿ ತೋಟದ ಜಮೀನ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ದೊಡ್ಡನಹಳ್ಳಿಯಿಂದ ಹೆತ್ತೂರಿಗೆ ಹೋಗುವದಾರಿ.	ಪಶ್ಚಿಮಕ್ಕೆ ರಾಗಿಪುರದದಿಂಣೆ.
ದಕ್ಷಿಣಕ್ಕೆ ರಾಗಿ ಪುರದ ದಿಂಣೆ.	ವುತ್ತರಕ್ಕೆ ಡಿಟೋ

ಈ ಮಧ್ಯೆ ಅಳತೆ ಪೂರ್ವಪಶ್ಚಿಮ 125 ದಕ್ಷಿಣೊತ್ತರ 250 ಸಲಿಗೆಜಗಳು 31250ಕ್ಕೆ ಯಕರೆ 6 ರೋಡ್ 1 ಪೋಲ್ 33 ಗಜಾ $1\frac{3}{4}$ ವುಳ್ಳದ್ದು.

ಈ ಜಮೀನನ್ನು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಅತ್ತಿಗನಹಳ್ಳಿ ಗ್ರಾಮದಲ್ಲಿರುವ ಮುಹಂಮದ್ ವಸ್ತಾರೇ ಹುಶೇನ್‌ಸಾಬಿ ನಬೀಸಾಬಿ ಸಹಾ 2ನೇ ನಂಬರು ದರಖಾಸ್ತು ಮಾಡಿದ್ದಾರಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ಹಕ್ಕನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಇದ್ದದ್ದಾದರೆ ಅಂಥಾವರು ಈ ನೋಟಿಸ್ ತಾರೀಖುಲಾಗಾಯಿತು ವೆಂದು ತಿಂಗಳು ವಳಗಾಗಿ ಡಿ|| ಮ|| ಕಾಫೀ ಇನ್‌ಚಾರ್ಜ್ ಫಸ್ಟ್ ಅ. ಕ. ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನ್ ಮಾಡಿಕೊಳ್ಳ ಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲಾಯದು.

ಬತಾರೀಖು 15ನೇ ಮಾಹೆ ನವೆಂಬರು ಸ್ನ 1876ನೇ ಇಸವಿ ಮೊಕ್ಕಾಂ ಹಾಸನ.

H. E. MOTTET,
Dy. Commr.

2 c.

KADUR DISTRICT.

Notice of sale of occupied lands.

ಕಡೂರು ಡಿಸ್ಟ್ರಿಕ್ ಡೆ॥ ಕಮಿಶ್ನರವರ ಕೋರ್ಟಿನಿಂದ:

1. ಇದರಿಂದ ತಿಳಿಸಲ್ಪಡುವದೇನಂದರೆ—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿಸುವವನಿಂದ ಸಲ್ಲತಕ್ಕ ಜಮೀನ್ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಫ್ತಾದ ಈ ಕೆಳಗೆ ಕಂಡ ಜಮೀನ್‌ಗಳಲ್ಲಿ ಹಾಲೀ ರಿಜಿಸ್ಟರಾದ ಜಮೀನ್ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ್ ಲಕ್ಕುವಳ್ಳೀ ತಾಲ್ಲೂಕು ಕುಂಬತ್ತಿ ಗ್ರಾಮದಲ್ಲಿ ಚಾಲ್ತೀ ಇಸವೀ ನವಂಬರ 30ನೇ ಯಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಕೆಳಗೆ ಕಾಣಿಸುವ ಗ್ರಾಮದಲ್ಲಿ ಹಿಡುವಳೀ ಸಮೀಪ ಹರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಸಿಷ್ಟಾಂಶಗಳೊಡನೆ ಜಮೀನ್‌ಗಳು ಜಡದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನುಗಳಿಗೆ 1876ನೇ ಇಸವಿ ಪೂರಾ ಆಗಲಿ (ಉಳಿದ ಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೇಯಲ್ಲಿ ತಫ್ಸೀಲ್‌ವಾರ್ ತೋರಿಸಲ್ಪಟ್ಟ ಪ್ರಕಾರ 51–11–9 ರೂಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತವೆ.

ಯಾವ ಸಂವತ್ಸರದ ಬಾಬತು 1875—76ನೇ.

ತಾಲ್ಲೂಕು	ಗ್ರಾಮ.	ಕಂದಾಯಕೊಡಲಿಕ್ಕೆ ತಪ್ಪಿದವನ ಹೆಸರು.	ಜಮೀನ್ ತರಿಯೋ ಖುಷ್ಕಿಯೆ ಯಾ ಬಾಗಾಯಿತೆ ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ॥ ಕಟ್ಟಡಗಳು ಯಾವದಾದರೂ ಯಿರುತ್ತವೆಯೆ.	ಜಮೀನ್.		ಅಂದಾಜ್ ಬೀಜವರಿ.			ಕಂದಾಯ			ಸರ್ಕಾರಕ್ಕೆ ಬರತಕ್ಕ ಬಾಕಿ (ಮೊಬಲಗು)
				ನಂಬರ್.	ಹೆಸರು				ರೂ.	ಆ.	ಪೈ.	
ಲಕ್ಕವಳ್ಳಿ	ಆಡವಳಿ ಮಾಗಣಿ ತೂಬಿತ್ತಿ ಗ್ರಾಮ.	ಜೈ ಭೀಮಾಚಾರಿ.	ತರೀ ಜಮೀನು.	6	ಗೊರಸಿನ ಗದ್ದೆ	1	10	0	3	6	5	
				7	ಕ್ಯಾದಿಗೆ ಗದೆ	1	10	0	3	6	5	
				8	ಹೊಗೆಕಿಂಡಾಗ	1	0	0	2	4	4	
				9	ಬೆಳಲ್ಲಿ ಮಕ್ಕಿ	1	0	0	1	14	3	
				10	ಕೆರೆ ತಗ್ಗು	1	0	0	2	4	4	
				12	ಬಳೆ ಹಿತ್ತಲ್	2	10	0	5	10	9	
				24	ಯಟಿಹಳ್ಳಿ	1	0	0	2	4	4	
				25	ಮಾವಿನ ಮರದ ಗದ್ದೆ	2	0	0	4	8	7	
				13	ಕೊಂಡರಹಾಳ್ಳಿ	2	0	0	4	11	8	
				15	ಡಿಟೋ	1	0	0	2	5	10	
				19	ಬೆಟ್ಟಪುರನತರಿ	3	0	0	7	1	5	
				20	ನೆಲ್ಲಿಮರದಗದ್ದೆ	2	0	0	4	11	8	
						19	10	0	44	10	0	

ಹರಾಜ್ ಆಗತಕ್ಕ ವಾಯಿದೆ ತಾರೀಖು 30—11—76.

Notice of an application by Gúdlappa for a certificate under Act XXVII of 1860.

ಇದರಿಂದ ಸಮಸ್ತ ಜನರಿಗೂ ಪ್ರಸಿದ್ಧಪಡಿಸುವದೇನಂದರೆ,—ಲಕ್ಕವಳ್ಳಿ ತಾಲ್ಲೂಕು ಲಕ್ಕವಳ್ಳಿ ಕಸಬಾದಲ್ಲಿ ಯಿರುವ ಸಿವಾಚಾರ ಸುಗ್ಗಪ್ಪನಮಗ ಗಡ್ಲಪ್ಪನು ಪಾತೀಪಟ್ಟ ತನ್ನ ತಂದೆ ಸುಗ್ಗಪ್ಪನಿಗೆ ಬರತಕ್ಕ 500 ರೂಪಾಯಿಗಳು ವಸೂಲ್ ಮಾಡಿಕೊಳ್ಳತಕ್ಕಬಗ್ಯೆ ಸರ್ 1860ನೇ ಇಸವೀ 27ನೇ ಆಕ್ಟ್ ಪ್ರಕಾರ ತನ್ನ ಹೆಸರಿಗೆ ಸರ್ಟಿಫಿಕೇಟ್ ಮಾಡಿಸಬೇಕೆಂದು ಈ ಕೋರ್ಟಿಗೆ ದಾಖಲ್‌ಮಾಡಿ ಯಿರುವ ಅರ್ಜೀಯು ಫೈಸಲ್ ಬಗ್ಯೆ ಬರುವ ಡಿಸಂಬರ್ ತಿಂಗಳ 9ನೇ ತಾರೀಖಿನಲ್ಲಿ ನಿಶ್ಚೈಸಿರುವದ್ದರಿಂದ ಈ ಬಗ್ಯೆ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟಿನ ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳತಕ್ಕದ್ದು.

ತಾರೀಖು 2—11—1876ನೇ ಇಸವೀ ಮೊಕ್ಕಾಂ ಚಿಕ್ಕಮಗಳೂರು.

Proclamation under Section 171 of the Criminal Procedure Code for the attendance of one Kaveri JailPeon.

ಕ್ರಿ. ಪ್ರೊ. ಕೋಡ 171ನೇ ಸೆಕ್ಷನ್ ಪ್ರಕಾರ.

ಚಿಕ್ಕಮಗಳೂರು ತಾಲ್ಲೂಕು ದೇವರಾಯಪೇಟೆ ವಾಸಸ್ಥನಾದ ಜೈಲ್ ಜವಾನ ಕಾವೇರೀ ಯಂಬವನು ಇಂಡ್ಯನ್ ಪೆನಲ್‌ಕೊಡ 507ನೇ ಸೆಕ್ಷನ್‌ಪ್ರಕಾರ ಶೀಕ್ಷೆಯಾಗತಕ್ಕ ತಕ್ಸೀರ್ ಮಾಡಿ ಯಿರುವದಾಗಿ ನಮ್ಮ ಮುಂದೆ ಫಿರಿಯಾದು ಆಗಿ ಅದರ ಮೇಲೆ ಕೊಡಲ್ಪಟ್ಟ ದಸ್ತಗಿರೀ ವಾರಂಟಿಗೆ ಸದರೀ ಕಾವೇರಿಯು ಸಿಕ್ಕಲಿಲ್ಲ ವೆಂಬದಾಗಿ ರಿಟರ್ನ ಆಗಿ ಬಂದ ಸದರೀ ವಾರಂಟು ಜಾರೀಯಾಗದರೀತಿ ಮರೆಯಾಗಿರುವದಾಗಿಯೂ ಫರಾರೀಯಾಗಿರುವದಾಗಿ ನಮ್ಮಗೆ ತೃಪ್ತಿಕರವಾಗಿ ತಿಳದುಬಂದು ಯಿರುವದ್ದರಿಂದ ಸದರೀ ಕಾವೇರೀ ಯಂಬವನು ಈ ತಾರೀಖು ಲಗಾಯತು 30 ದಿವಸಗಳ ವಳಗೆ ಸದರೀ ಫಿರಿಯಾದಿಗೆ ಜವಾಬ್ ಕೊಡುವದಕ್ಕೆ ನಮ್ಮ ಕೋರ್ಟು ರೂಬರೂ ಹಾಜರು ಆಗತಕ್ಕದ್ದೆಂದು ಈ ಯಿಸ್ತಿಹಾರ್ ಮೂಲಕ ವಿಧಿಸಿಧೆ.

ತಾರೀಖು 4ನೇ ನವಂಬರ್ 1876ನೇ ಇಸವೀ ಮೊಕ್ಕಾಂ ಚಿಕ್ಕಮಗಳೂರು.

Notice of an application by Shama rao for a certificate under Act XXVII of 1860.

ಸ್ನ 1876ನೇ ಇಸವಿ ಮಿಸಲೇನಿಯಸ್ ಕೇಸ್ ನಂ॥ 12.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಸಖರಾಯಪಟ್ಣದಲ್ಲಿ ಯಿರುವ ಚಿತ್ತೂರು ಕೃಷ್ಣರಾವ್, ವುರಫ್ ರಾಮರಾಯನ ಮಗ ನರಸಿಂಗರಾವ್ ವುರಫ್ ಶ್ಯಾಮರಾಯನು ಫೌತೀಪಟ್ಟ ತನ್ನ ತಂದೆಗೆ ಬರತಕ್ಕ 400 ರೂಪಾಯಿಗಳನ್ನು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ಸರಟಿಫಿಕೇಟ್ ಕೊಡಿಸಬೇಕೆಂದು ಈ ಕೋರ್ಟಿಗೆ ದಾಖಲ್ ಮಾಡಿರುವ ಅರ್ಜಿಯನ್ನು ಫೈಸಲ್ ಬಗ್ಯೆ ಬರುವ ಡಿಸೆಂಬರ್ ತಿಂಗಳು ತಾರೀಖು 16ಲ್ಲಿ ಹಿಯರಿಂಗ್ ಯಿಟ್ಟು ಯಿರುವದ್ದರಿಂದ ಈಬಗ್ಯೆ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸ ತಕ್ಕದ್ದು

ತಾರೀಖು 8ನೇ ನವಂಬರ್ 1876ನೇ ಇಸವಿ ಮೊಕ್ಕಾಂ ಕಳಸಾಪುರ.

P. Krishna Rao,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 3ನೇ ನವಂಬರ್ 1876.

ಇದರಿಂದ ಸಕಲರಿಗೂ ತಿಳಿಯತಕ್ಕ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕಳದ ಅನೇಕ ತಿಂಗಳ ವರಿಗೂ ಬಹಳವಾಗಿ ದನಗಳು ಸತ್ತು ಹೋದ ಸಬಬ್ ಪ್ರಯಾಣಸ್ತರು ಯಿದುವರಿಗೆ ಕೊಡುತ್ತಾ ಯಿದ್ದ ಸ್ವಲ್ಪ ಕಾಲದೊಳಗಾಗಿ ಮಾರ್ಗದಲ್ಲಿ ಉಪ್ಪಕ್ಕೂ ಟಪ್ಪಾಲ್ ಯತ್ತುಗಳನ್ನು ವದಗಿಸುವದಕ್ಕೆ ಸ್ಥಳದ ಅಧಿಕಾರಿಗಳಿಗೆ ಕೇವಲ ಅಸಾಧ್ಯವಾಗಿರುವಂತೆ ಕಾಣಬರುತ್ತೆ. ಜನಗಳ ನಿರಿಕ್ಷಣೆ ಭಂಗವಾಗದಂತೆ ಯಿರುವ ಬಗ್ಯೆ ಇಯಿಂದ ಯತ್ತಿನ ಟಪ್ಪಾಲ್ ಅವಶ್ಯಕ ವಿರುವರು ಅಧಮಪಕ್ಷ ಪೂರಾ 6 ದಿನಗಳ ನೋಟೀಸ್ ಕೊಡಬೇಕೆಂದು ಯಿದರಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

E. Armstrong,
Dy. Commr.

ಸ್ನ 1876ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಹಾಸನ ಡಿಸ್ಟ್ರಿಕ್ಟು.

ಹವಾ.—ಕಳೆದ ವರುಷ ವಿನಾ ಯಾವಾಗ್ಯೂ ಈ ಕಾಲದಲ್ಲಿ ಹವಾ ಯಾವ ಸ್ಥಿತಿಯಲ್ಲಿರುತ್ತೋ ಆ ಸ್ಥಿತಿಯಲ್ಲಿಲ್ಲದೆ ಮಳೆ ಯಿಲ್ಲದೆಯೂ ಶಖೆ ಬಹಳ ಹೆಚ್ಚಾಗಿಯೂ ಯಿತ್ತು. ಈ ವಿಷಯಗಳಲ್ಲಿ ಕಳೆದ ವರುಷಕ್ಕಿಂತಲೂ ಈ ತಿಂಗಳು ಬಹಳ ಕೆಟ್ಟು ಹೋಗಿರುವದಾಗಿ ರಿಪೋರ್ಟಾಗಿರುತ್ತೆ. ಈ ತಿಂಗಳಲ್ಲಿಯೂ ಕಳೆದ ಎರಡು ಇಸವಿಗಳ ಇದೇ ತಿಂಗಳುಗಳಲ್ಲಿಯೂ ಬಿದ್ದ ಮಳೆ ಈ ಕೆಳಗೆ ಕಂಡ ತಖ್ತೇ ಯಿಂದಲೆ ತಿಳಿಯಬರುತ್ತೆ.

ಸ್ಥಳಗಳು.		ಮಳೆ ಬಿದ್ದದ್ದು.					
		ಅಕ್ಟೋಬರ್ 1876.		ಅಕ್ಟೋಬರ್ 1875.		ಅಕ್ಟೋಬರ್ 1874.	
		ಇಂ.	ಸೆಂ.	ಇಂ.	ಸೆಂ.	ಇಂ.	ಸೆಂ.
ಹಾಸನ	ಇಂಜನೀರ್ ಆಫೀಸ್. ಯಗ್ಸಿಕ್ಯೂಟಿವ್ ಇಂಜನೀಯರ್ಅಳತೆ	0	23	1	87	7	15
	ಇಂಜನೀರ್ ಆಫೀಸ್. ಪಾರ್ಗಿರ್ಸನ್ ಅಳತೆ	0	22	1	92	7	$24\frac{1}{2}$
	ಡಿಸ್ಪೆನ್ಸರೀ ಅಬ್ಸರ್ವೇಟರಿಯಲ್ಲಿ	0	23	1	52	6	24
	ತಾಲ್ಲೂಕು ಕಚೇರಿಯಲ್ಲಿ	0	36	ನಂಬತಕ್ಕದ್ದಲ್ಲ.			
ಮಂಜರಾಬಾದ್ (ಸಕಲೇಶಪುರ) ..		0	50	5	15	6	29
ಅರಕಲಗೂಡು ..		0	10	3	85	5	80
ಅತ್ತಿಕುಪ್ಪ ..		0	70	2	65	7	0
ಬೇಲೂರು ..		0	0	1	80	9	50
ಚನ್ನರಾಯಪಟ್ಣ ..		0	10	2	60	6	50
ನಾಗಮಂಗಲ ..		0	70	2	70	9	50
ಹಾರನಹಳ್ಳಿ ..		0	0	2	$47\frac{1}{2}$	6	92
ನರಸೀಪುರ ..		0	8	3	38	4	84

ಕೆರೆ,—ನರಸೀಪುರ ತಾಲ್ಲೂ ನಲ್ಲಿ ಮಟ್ಟಿಗೆ ಕೆಲವು ಕೆರೆಗಳಲ್ಲಿ ಮೂರು ತಿಂಗಳು ನೀರು ಯಿರಬಹುದಾಗಿ ಅಂದಾಜ್ ಹಾಕಲ್ಪಟ್ಟಿರುತ್ತೆ, ಕಡಮೇಕಡೆ ನಾನಾವಿಧವಾಗಿ 8 ದಿವಸ ಮೊದಲ್ಗೊಂಡು ಎರಡು ತಿಂಗಳುಗಳ ನೀರು ಇರುತ್ತೆ.

ಜಮೀನ್,—ಈ ತಿಂಗಳೊಳಗೆ 587—4—2 ರೂಪಾಯಿಗಳು ಕಂದಾಯವುಳ್ಳ ಜಮೀನ್‌ಗಳಿಗೆ ದರಖಾಸ್ತು ಬಂದವು, ಹಾರನಹಳ್ಳಿ ತಾಲ್ಲೂಕಿನಲ್ಲಿ ದರಖಾಸ್ತು ಮಾಡಿದ ಜಮೀನ್‌ಗಳಿಗೆ ಕಂದಾಯದ ಮೊಬಲಗು ಬಹಳ ಜಾಸ್ತಿಯಾಗಿರುತ್ತೆ, ಹ್ಯಾಗಂದರೆ 205—12—10 ರೂ.

ಬೆಳೆ.—ನಾಲೆಗಳ ಕೆಳಗೆ ಮಾತ್ರ ಇರುವ ನೆಲ್ಲುಪೈರುಯು ಇದ್ದಮಟ್ಟಿಗೆ ಒಳ್ಳೇಸ್ಥಿತಿಯಲ್ಲಿ ಇದೆ, ಕಡಮೆ ಯಿತರ ಎಲ್ಲ ಬೆಳೆಗಳು ಪ್ರತಿ ತಾಲ್ಲೂಕಿನಲ್ಲಿಯೂ ಹೋಗಿರುತ್ತೆ, ಅಥವಾ ಒಣಗುತಿವೆ, ಬೇಲೂರು ತಾಲ್ಲೂಕಿನಲ್ಲಿ ಹುರಳಿ ಬಿತ್ತಲ್ಪಟ್ಟಿತು, ಅದೇತಾಲ್ಲೂಕಿನಲ್ಲಿ ಗಿಡ್ಡರಾಗಿ ಫಸಲು ಕೊಂಚವಾಗಿ ಕಟಾವಾಗಿರುತ್ತೆ. ಈ ತಿಂಗಳೊಳಗೆ ಚನ್ನರಾಯಪಟ್ಣ ತಾಲ್ಲೂಕಿನಲ್ಲಿ ಗನ್ನಾ ಮತ್ತು ಅಡಿಕೆ ಹಾರ್‍ನಹಳ್ಳಿ ತಾಲ್ಲೂಕಿನಲ್ಲಿ ಜೋಳ ಮತ್ತು ಮೆಣಶಿನಕಾಯಿ ಸಹ ಕಯ್ಯಲಾಯಿತು.

ಧಾರಣೆ.—ಈ ಕೆಳಗಿನ ತಖ್ತೆಯಲ್ಲಿ ಕಂಡಪ್ರಕಾರ ಆಲೂರು ಮಾರ್ಕೆಟ್‌ನಲ್ಲಿ ಜಿನಸೀಗಳ ಧಾರಣೆವಾಸಿಯು ಹಿಂದಿನ ತಿಂಗಳಿಂದ ಈ ಚಿಗೆ ಬಹಳ ಚಡಾಇಶಿತು, ಮತ್ತು 1874—75ನೇ ಇಸವಿಗಳ ಅಕ್ಟೋಬರ್ ತಿಂಗಳಲ್ಲಿ ಮಾರುತ್ತಿದ್ದ ಧಾರಣೆವಾಸಿಗೂ ಈ ತಿಂಗಳಲ್ಲಿ ಮಾರುವ ಧಾರಣೆವಾಸಿಗೂ ತಾಳೇ ಬೀಳುವದಿಲ್ಲ.

ಜಿನಸೀಗಳು.	ರೂಪಾಯಿ ಬಂದಕ್ಕೆ.			
	ಸೆಪ್ಟಂಬರ್ 1876.	ಅಕ್ಟೋಬರ್ 1876.	ಅಕ್ಟೋಬರ್ 1875.	ಅಕ್ಟೋಬರ್ 1874.
ಅವ್ವಲ್‌ತರಹಾ ಅಕ್ಕಿ	9 ಶೇರು.	$4\frac{1}{2}$ ಶೇರು.	12 ಶೇರು.	$14\frac{3}{4}$ ಶೇರು.
ದುಯ್ಯಂ ಡಿಟೋ	11 ಡಿಟೋ	5 ಡಿಟೋ	13 ಡಿಟೋ	$16\frac{3}{4}$ ಡಿಟೋ
ರಾಗಿ	20 ಡಿಟೋ	8 ಡಿಟೋ	28 ಡಿಟೋ	$37\frac{1}{2}$ ಡಿಟೋ
ಹುರಳಿ	10 ಡಿಟೋ	6 ಡಿಟೋ	$21\frac{1}{2}$ ಡಿಟೋ	16 ಡಿಟೋ

ಆರೋಗ್ಯ.—ಡಿಸ್ಟ್ರಿಕ್ಟಿನ ಜನಾರೋಗ್ಯವು ಸಾಧಾರಣವಾಗಿತ್ತು. ರಿಪೋರ್ಟಾದ ಸಾವಿನ ಸಂಖ್ಯೆಯು ಹಿಂದಿನ ತಿಂಗಳಂತೆ ಇರುತ್ತೆ, ಹ್ಯಾಗಂದರೆ, ಈ ಕೆಳಗಿನ ತಖ್ತೆಯಲ್ಲಿ ಕಂಡಮೇರಿಗೆ 339. ಕಳೆದ ವರುಷದಲ್ಲಿ 731 ಮಂದಿ ಹೋಗಿರುತಾರೆ.

	ಸೆಪ್ಟಂಬರ್ 1876.	ಅಕ್ಟೋಬರ್ 1876.	ಅಕ್ಟೋಬರ್ 1875.
ಖೈಜುಲಾಬಿನಿಂದ	27	55	284
ಶಿಡುಬಿನಿಂದ	1	3	6
ಜ್ವರದಿಂದ	191	168	288
ಹೊಟ್ಟೇನೋವಿನಿಂದ	33	39	32
ಇತರಕಾರಣಗಳಿಂದ	87	74	121
ಜುಮ್ಲಾ	339	339	731

ಜನನ.—ಈ ತಿಂಗಳೊಳಗೆ ರಿಪೋರ್ಟು ಮಾಡಲ್ಪಟ್ಟ ಜನನವಾದ ಸಂಖ್ಯೆಯು 140, (ಗಂಡುಸರು 76 ಹೆಂಗಸರು 64) ಹಿಂದಿನ ತಿಂಗಳಲ್ಲಿ 192.

ಕಾಲ್ನಡೆ.—ಕಾಲ್ನಡೆಗಳ ಪೈಕೀ ಮುಖ್ಯವಾಗಿ ಮೇವಿಲ್ಲದೆ ಬಹಳ ಹೋದವು, ಹ್ಯಾಗಂದರೆ, 3,828, ಆ ಹಿಂದಿನ ತಿಂಗಳಲ್ಲಿ 2,894, ಸರ್ 1875ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ 2,911 ಹೋದವು.

V. N. Narasimaiengar,
For Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಡಿಸ್ಟ್ರಿಕ್ಟಾ ಮುಳೆ ಸ್ವಲ್ಪವಾಗಿ ಮಳೇ ಬಿದ್ದಿರುತ್ತೆ, ಶಿವಮೊಗ್ಗ ಕಸಬೆಯಲ್ಲಿಯೂ ಮತ್ತು ತಾಲ್ಲೂಕುಗಳಲ್ಲಿಯೂ ಈ ಕಳಗೆ ಕಂಡಂತೆ ಮಳೇ ಅಳೆಯಲ್ಪಟ್ಟಿರುತ್ತೆ,—

		ಇಂಚಸ್.	ಸೆಂಟಸ್.			ಇಂ.	ಸೆಂ.
ಶಿವಮೊಗ್ಗಾ	..	0	78¾	ಸೊರಬ	..	0	76½
ಚನ್ನಗಿರಿ	..	0	10	ಸಾಗರ	..	1.	0
ಹೊನ್ನಾಳಿ	..	0	40	ನಗರ	..	0	48¾
ಶಿಕಾರಿಪುರ	..	0	60	ಕವಲೇದುರ್ಗ	..	3	30

ಬೆಳೆ.—ಈ ತಿಂಗಳೊಳಗೆ ಕೆರೆಗಳಿಗೆ ನೀರು ಬಂದಿರುವದಿಲ್ಲ. ಚೆನ್ನಗಿರಿ, ಹೊನ್ನಾಳಿ ಮತ್ತು ಶಿವಮೊಗ್ಗಾ ತಾಲ್ಲೂಕಿನ ಪ್ರದೇಶಗಳಲ್ಲಿ ರಾಗಿ, ಮತ್ತು ಜೋಳ ಕಟಾವಾದವು. ಮಲ್ನಾಡಿನಲ್ಲಿ ತರೀ ಫಸಲ್ ಒಳ್ಳೇ ಸ್ಥಿತಿಯಲ್ಲಿ ಯಿದೆ.

ಆರೋಗ್ಯ.—ಈ ತಿಂಗಳೊಳಗೆ 29 ಮಂದಿಗೂ ಆ ಹಿಂದಿನ ತಿಂಗಳೊಳಗೆ 109 ಮಂದಿಗೂ ಕೈಜುಲಾಬ್ ವ್ಯಾಪಿಸಿತ್ತು. ಇತರೆ ಕಾರಣಗಳಿಂದಲೂ ಖೈಜುಲಾಬ್ ಸೇರಿ 465 ಮಂದಿ ಹೋದರು, ಇದು ಕಳೆದ ತಿಂಗಳಿಗಿಂತಲೂ 86 ಕಮ್ಮಿ. ರಿಜಿಸ್ಟರಾದ ಕುಲ್ ಜನನ ಸಂಖ್ಯೆ 412 ಎಲ್ಲಾ ಕಾರಣಗಳಿಂದಲೂ 1,013 ಕಾಲ್ನಡೆಗಳು ಹೋಗಿರುತವೆ.

ನಿರಖು.—ಜಿನಸೀಗಳ ದಾರಣೆಯು ದಿನ ದಿನವೂ ಚಡಾವಾಗುತ್ತಲಿದೆ,

Mahomed Husen Binturi,
For Offg. Dy. Commr.

ಯಿದರಡಿ ನಮೂದಿಸಲ್ಪಡುವ ನೋಟುಗಳ ತುಕಡೆಗಳು ಹೋಗಿವೆ.

ನಂಬರು.	ಸರ್ಕಲ್	ಮೊಬಲಗ್	ಹಕ್ಕುದಾರ
B/39 59593 ಬಲಭಾಗ	ಮದ್ರಾಸ್	5–0–0	ಬೆಂಗಳೂರು ಡಿಸ್ಟ್ರಿಕ್ಟು ಪೋಲೀಸ್‌ಗೆ ಸೇರಿದ ಕೋರ್ಟ್ ಇನ್ಸ್‌ಪೆಕ್ಟರ್ ಬಿ. ಶ್ರೀನಿವಾಸ್ಯೆಯಂಗಾರ್ರು.
B/39 59590 ಯಡಭಾಗ	ಡಿಟೋ	5–0–0	

Mysore Government Press, Bangalore—1876.

536

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವೆಂಬರ್ ತಾ॥ 25, ಸ್ಸೆ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖೆ ಕೊಡಲ್ಪಡುತ್ತೆ.

4ನೇ ಭಾಗ.

ಜಿಲ್ಲರೆ ವಿಷಯಗಳು.

ಪಾಪಾಸು ಕಳ್ಳಿಯಾ ನಾಗದಾಳೆ ಮುಳ್ಳು ಯಲೆಗಳ[illegible]ಳಿಗೆ ಮೇವಿಗಾಗಿ ಉಪಯೋಗಿಸುವಿಕೆ.

ಮೈಸೂರು ಚೀಪ್‌ಕಮ್ಮಿಷನ್ನರ್‌ಯವರು ಜನರಲ್ ಇಲಾಖೆಯಲ್ಲಿ ನಡಿಸಿದ ನಡವಳಿತಗಳು,
ತಾರೀಕ್ 8ನೇ ನವಂಬರ್ 1876.

ಮೆಸರ್ಸ್ ಹಾರ್ವಿ ಮತ್ತು ಸಭಾಪತಿಯುವರಿಂದ—ಮೈಸೂರು ಚೀಪ್‌ಕಮ್ಮಿಷನ್ನರ್ ಸಾಹೆಬರವರಿಗೆ.
ತಾರೀಕ್, ಬಳ್ಳಾರಿ, 3ನೇ ನವಂಬರ್ 1876.

ದುರ್ಭಿಕ್ಷ ವ್ಯಾಪಿಸಿರತಕ್ಕ ಡಿಸ್ಟ್ರಿಕ್ಟುಗಳಲ್ಲೆಲ್ಲಾ ದನಗಳಿಗೆ ಮೇವಿಗಾಗಿ (Prickly Pear) ಪಾಪಾಸುಕಳ್ಳಿಯಾ ನಾಗದಾಳೆಮುಳ್ಳು ಎಂಬದನ್ನ ಉಪಯೋಗಿಸುವದನ್ನು ಕುರಿತು ಮದ್ರಾಸ್ ರೆವಿನ್ಯೂ ಬೋರ್ಡ್ಸು ಫಸ್ಟಮೆಂಬರ ಮೇಸ್ಟರ G. ತಾರ್ರ್ಕಹಿಲ್‌ಯುವರಿಗೆ ನಮಗಳಿಂದ ಬರಿಯಲ್ಪಟ್ಟ ಲೆಟರಿನ ನಕ್ಕಲ್ ಮತ್ತು ಅದರಲ್ಲಿ ನಮೂದಿಸಲ್ಪಟ್ಟ ಆಯುಧಗಳ ಮಾದ್ರಿಗಳನ್ನು ಇದರ ಸಂಗಡ ಕಳಿಹಿಸಿರುತ್ತೇವೆ, ಮತ್ತು ಈ ವರುಷ ವಿಸ್ತಾರವಾಗಿ ವ್ಯಾಪಕಗೊಂಡ ದುರ್ಭಿಕ್ಷದದೆಶೆಯಿಂದ ಉಂಟಾಗಿರತಕ್ಕ ಕಷ್ಟವನ್ನು ಕೆಲವು ಮಟ್ಟಿಗೆ ಪರಿಹರಿಸುವ ಬಗ್ಯೆ ಸರಕಾರ ನೌಕರರ ಪ್ರಯತ್ನಗಳಿಗೆ ಅವು ಉಪಯೋಗವಾಗಿರುವದೆಂದು ಕೋರುತ್ತೇವೆ.

ಮೆಸರ್ಸ್ ಹಾರ್ವಿ ಮತ್ತು ಸಭಾಪತಿಯುವರಿಂದ—ಬಳ್ಳಾರಿಯಲ್ಲಿ ಸರಕಾರದ ವಿಶೇಷ ಕೆಲಸದಮೇಲೆ ಇರತಕ್ಕ
ರೆವಿನ್ಯೂ ಬೋರ್ಡ್ಸು ಪಸ್ಟಮೆಂಬರ G ತಾರ್ರ್ಕಹಿಲ್ ಯಸ್ಕ್ವಾಯರ ಯುವರಿಗೆ.
ತಾರೀಕ 2ನೇ, ಬಳ್ಳಾರಿ, ನವಂಬರ್ 1876.

ಇದರಡಿ ನಮೂದಿಸಲ್ಪಡುವ ಸಲಹೆಗಳನ್ನು ತಮ್ಮ ಜಾಹೀರಾತಿಗೆ ತರಲು ಬೇಡುತ್ತೇವೆ ಮತ್ತು ಅವು ತಮ್ಮ ಮಂಜೂರಾತಿಗೆ ಅರ್ಹವಾಗುವದೆಂದು ನಂಬುತ್ತೇವೆ.

ಪ್ರೆಸೀಡೆಂಸಿಯೊಳಗೆಲ್ಲಾ ಮುಖ್ಯವಾಗಿ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ವ್ಯಾಪಿಸಿರುವ ದುರ್ಭಿಕ್ಷನಿಮಿತ್ತ ರೈತರು ಮುಖ್ಯವಾಗಿ ನಂಬಿಕೊಂಡಿರುವ ಅನೇಕ ದನಗಳು ಹೊಟ್ಟೆಗೆಯಿಲ್ಲದೆ ಸಾಯುತ್ತಿವೆಯೆಂಬದಾಗಿ ತಿಳಿಯುಬರುವದಲ್ಲದೆ ಅವುಗಳ ಚರ್ಮದ ಬೆಲೆಗಿಂತಲೂ ಕಮ್ಮಿಯಾಗಿ ಅತ್ಯಲ್ಪಬೆಲೆಗಳಿಗೆ ಖಸೈನವರಿಗೆ ಮಾರಲ್ಪಡುತ್ತಿವೆ. ನಮ್ಮ ಕೈಲಾದ ಮಟ್ಟಿಗೂ ಈ ಕಷ್ಟವನ್ನು ಪರಿಹಾರಮಾಡತಕ್ಕಬಗ್ಯೆ ನಾವು ಮಾಡುವಂಥಾದ್ದನ್ನು ರೈತರು ಅವಲಂಬಿಸಬೇಕಾದ ಆವಶ್ಯಕತೆಯನ್ನ ಅವರಿಗೆ ಚನ್ನಾಗಿ ತಿಳಿಯುವಂತೆ ಮಾಡುವ ಬಗ್ಯೆ ನಮ್ಮ ಸ್ವಂತ 25 ದನಗಳನ್ನು (Prickly Pear) ಪಾಪಾಸುಕಳ್ಳಿ ಯಾ ನಾಗದಾಳಿಮುಳ್ಳಿನ ಯಲೆಗಳು ಹಾಕಿ ಮೇಯಿಸುವ ಪದ್ಧತಿಯನ್ನು ಅನುಸರಿಸಿರುತ್ತೇವೆ. ಈ ರೀತಿಯಾಗಿ ದನಗಳನ್ನು ಮೇಯಿಸುವಂತಾದ್ದು ಸರಕಾರಿಯಾಗಿ ಮತ್ತು ಬೇರೆವಿಧವಾಗಿ ತಿಳಿಸಲ್ಪಟ್ಟಿದ್ದಾಗ್ಯೂ ರೈತರು ಹಾಂಗೆ ಸುಲಭವಾಗಿ ಮಾಡಲು ಸರಿಯಾದ ಆಯುಧಗಳಿಲ್ಲದವರಾಗಿ ಅದರ ವಿಶೇಷವಾದ ತೊಂದರೆ ಮತ್ತು ಅನಾನುಕೂಲದನಿಮಿತ್ತ ಆ ಕ್ರಮವನ್ನು ಅನುಸರಿಸಲಿಲ್ಲಾ. ಈ ಪ್ರಯಾಸವನ್ನು ಈ ಆಯುಧಗಳ ದೆಶೇಯಿಂದ ನಾವು ಸಾಧಿಸಿರುತ್ತೇವೆ, ಮತ್ತು ಆ ಆಯುಧಗಳ ಮಾದ್ರಿಗಳನ್ನು ತಾವು ನೋಡತಕ್ಕಬಗ್ಯೆ ಇದರ ಸಂಗಡ ಕಳಿಹಿಸಿರುತ್ತೇವೆ. ಯಾವವಂದರೆ ಯಲೆಯನ್ನು ಹಿಡಿಯಲಿಕ್ಕೆ ಇಕ್ಕಳಗಳ ಜೊತೆ 1 ಮುಳ್ಳುಗಳನ್ನು ತೆಗದು ಹಾಕಲಿಕ್ಕೆ ಚಿಮುಟಾಗಳ ಜೊತೆ 1 ಯಲೆಯನ್ನು ಕತ್ತರಿಸಿಕೊಳ್ಳಲಿಕ್ಕೆ ಒಂದು ಚಾಕು. ಮೇಲೆ ವಿವರಿಸಲ್ಪಟ್ಟ ಪ್ರಕಾರ ಯಲೆಗಳನ್ನು ಜಮಾಯಿಸಿದ ಬಳಿಕ ಪ್ರತಿ ಯಲೆಯನ್ನು ಬೆರಳುಗಳಿಗೆ ಜಖಂ ಉಂಟಾಗದಂತೆ ಬುರುಸುನಿಂದಲಾಗಲಿ, ಗೋಣೀಪಟ್ಟೆ ತುಕಡೆಯಿಂದಲಾಗಲಿ, ಜೋಳದಕಡ್ಡಿ ಬುಡದಕಡೆಯಿಂದಲಾಗಲಿ, ನೀರಿನಲ್ಲಿ ತೊಳೆಯತಕ್ಕದ್ದು ಮತ್ತು ಅದರ ಬೊಂಕೆಗೆ ತಗಿಲಿಕೊಂಡಿರುವ ವಿಶಿಷ್ಟಮುಳ್ಳುಗಳನ್ನು ತೆಗದು ಹಾಕತಕ್ಕದ್ದು ಸಹಾ ಆವಶ್ಯಕವಾಗಿರುತ್ತದೆ.

ದನಗಳು ಈ ಮೇವನ್ನು ತಿನ್ನಲಿಕ್ಕೆ ಶು... 3—4 ದಿವಸಗಳವರಿಗೂ ಯಲೆಯನ್ನು ಮಡಿಸಿ ಅಥವಾ ತುಂಡುಗಳು ಮಾಡಿ ಅವುಗಳ ಬಾಯಿಗಳಲ್ಲಿಟ್ಟು ...ಮೂಲಕ ಕಲಿಸತಕ್ಕದ್ದು ಆವಶ್ಯಕವಾಗಿರುತ್ತೆ. ಆ ಬಳಿಕ ಅವು ಆ ಮೇವನ್ನು ಬೇಯಿಸಿದಹುರಳಿಯಂತೆ ಅತ್ಯಾಪೇಕ್ಷೆಯಿಂದ ತಿನ್ನುತ್ತವೆ. ಈ ಸುಲಭಮಾರ್ಗದಿಂದ ನಮ್ಮ ವಿಶಿಷ್ಟದನಗಳನ್ನು ಈಗ ಒಳ್ಳೇಸ್ಥಿತಿಯಲ್ಲಿಟ್ಟುಕೊಂಡಿರುತ್ತೇವೆ. ಎತ್ತುಗಳಿಗೂ, ಕರಿಯುವ ಹಸುಗಳಿಗೂ ಎಮ್ಮೆಗಳಿಗೂ ಸಹಾ ಈ ಮೇವು ಹಸೀಜೋಳದಕಡ್ಡಿ ಯಷ್ಟು ಒಳ್ಳೇದಾಗಿಯ್ಯೂ ಮತ್ತು ಪುಷ್ಟಿಕರವಾಗಿಯೂ ಇರುವಂತೆ ನಮ್ಮ ಅನುಭವಕ್ಕೆ ಬಂದಿರುತ್ತೆ.

ಕಳದ ಶುಕ್ರವಾರ 200 ಎತ್ತುಗಳಿಗಿಂತಲೂ ಹೆಚ್ಚಾಗಿ ಪೇಟೆಗೆ ಬಿಕರೀಬಗ್ಯೆ ಬಂದಿರಲು ಅಲ್ಲಿಗೆ ನಮ್ಮ ಎತ್ತುಗಳ ಪೈಕಿ ಒಂದು ಜೊತೆಯನ್ನು ಒಂದು ಗ್ರೋಡೆಯಲ್ಲಿ ಈ ಮೇವು ಸಹಾ ಕಳುಹಿಸಿ, ಅಲ್ಲಿ ಅವುಗಳಿಗೆ ಆ ಮೇವು ತಿನ್ನಲಿಕ್ಕೆ ಹಾಕಿ ಅದೇಕಾಲದಲ್ಲಿ ಅವುಗಳ ಮಾಲೀಕರಿಗೆ ಈ ಕ್ರಮವನ್ನು ಮತ್ತು ಆ ಬಗ್ಯೆ ಬೇಕಾದ ಆಯುಧಗಳನ್ನು ತೋರಿಸಿ ಅವುಗಳನ್ನು ಬಹಳ ಅಲ್ಪ ಖರೀದಿಯಾದ 2 ಆಣೆಗಳಿಗೆ ಮಾರುವೆನೆಂದು ಅವರಿಗೆ ಹೇಳುತ್ತಾ ಈ ಪ್ರಕಾರ ಮಾಡುವ ಪರ್ಯಂತ್ರ, ಈ ಕ್ರಮದ ಪ್ರಯೋಜನಗಳನ್ನು ಬದಲಾವಣಿಯನ್ನು ಸಹಿಸದ ರೈತರುಗಳಿಗೆ ಚನ್ನಾಗಿ ತಿಳಿ ಪ್ಹೇಳುವದಕ್ಕೆ ನಾವು ಬಹಳ ಪ್ರಯಾಸಪಟ್ಟೆವು. ಇದರ ವಿಶೇಷವಾದ ಫಲವೇನಂದರೆ, ಅನೇಕರೈತರು ಈ ಕ್ರಮವನ್ನು ಅವಲಂಬಿಸುವದಾಗಿ ನಿಶ್ಚೈಸಿಕೊಂಡು ಅವರ ದನಗಳನ್ನು ಮನೆಗೆ ತೆಗದುಕೊಂಡು ಹೋದರು. ಬಳ್ಳಾರಿ ಷಹರನಲ್ಲಿ ಅನೇಕ ರೈತರು ಇತರರು ನಮ್ಮ ಕ್ರಮವನ್ನು ಅವಲಂಬಿಸಿ ಆಯುಧಗಳನ್ನು ನಮ್ಮಿಂದ ಕ್ರಯಕ್ಕೆ ತೆಗದುಕೊಂಡರು.

ಎತ್ತುಗಳೇ ರೈತರಿಗೆ ಮುಖ್ಯ ಜೀವನಾಧಾರ ಎಂಬ ಅಂಶವು ಮತ್ತು ಅವುಗಳ ದೆಶೇಯಿಂದ ರೈತರು ತಮ್ಮ ಜೀವನವನ್ನು ಸಂಪಾದಿಸಿಕೊಳ್ಳುವ ಬಗ್ಯೆ ಮತ್ತು ಸರಕಾರಕ್ಕೆ ಅವರು ತೆರಬೇಕಾದ ಕಂದಾಯವನ್ನು ಸಂಪಾದಿಸಿಕೊಳ್ಳುವ ಬಗ್ಯೆ ಅವುಗಳೇ ಕಾರಣವಾಗಿರುತ್ತೆಂಬ ಅಂಶವು ನಾವು ತಿಳಿಸಬೇಕಾದ ಜರೂರಿಲ್ಲವು. ಹೊಗೆಬಂಡಿ ಅದ್ಯಾಪಿ ಪ್ರವರ್ತಿಸದ ಸ್ಥಳಗಳಲ್ಲಿ ದೇಶದ ವ್ಯಾಪಾರವೆಲ್ಲಾ ನಡಿಸಲ್ಪಡುವ ಬಗ್ಯೆ ದನಗಳು ಮುಖ್ಯ ಸಾಧನಗಳಾಗಿಯೂ ಇವೆ. ಇತ್ಯಾದಿ ಸಂಗತಿಗಳಿಂದ ಈ ವುಪಯೋಗವಾದ ಜಾನವರಗಳು ಮೇವಿಲ್ಲದೆ ಸಾಯುದಂತೆ ಯಷ್ಟು ಖ

ಖರ್ಚು ತಗಲಿದಾಗ್ಯೂ ಅವುಗಳನ್ನು ಕಾಪಾಡುವ ಬಗ್ಗೆ ಕೂಡ್ಲೆ ಕ್ರಮಗಳನ್ನು ಸರಕಾರದವರು ತೆಗೆದುಕೊಳ್ಳದೇ ಹೋದಲ್ಲಿ ಅದು ಅವರಿಗೆ ಕೇವಲ ಅನೀತಿಯಾಗಿರುವದು. ಯಾತಕಂದರೆ ಕಡೇಯಲ್ಲಿ ಸರಕಾರಕ್ಕೂ, ಮಾಲೀಕರಿಗೂ, ವರ್ತಕರಿಗೂ ಮತ್ತು ಎಲ್ಲರಿಗೂ ಸಂಭವಿಸುವ ನಷ್ಟವು ಅಪಾರವಾಗಿರುವದು.

ಆದಕಾರಣ ನಾವು ತಿಳಿಸುವದೇನಂದರೆ, ತಾಸಿಲ್‌ದಾರುಗಳು ಡಿಪ್ಯುಟಿ ತಾಸಿಲ್‌ದಾರುಗಳು ಇರುವ ಯಲ್ಲ ಸ್ಥಳಗಳಲ್ಲಿಯೂ ಕೊಟ್ಟಿಗೆಗಳನ್ನು ಕಟ್ಟಿಸಿ ಅಥವಾ ನೆರಳಾದ ಸ್ಥಳಗಳಾಗಲಿ ಏರ್ಪಡಿಸಿ ದನಗಳನ್ನು ಕಾಪಾಡಲಿಕ್ಕೆ ಅಶಕ್ತರಾಗಿರತಕ್ಕವರೆಲ್ಲರ ದನಗಳನ್ನು ಅ ಸ್ಥಳದಲ್ಲಿ ಜಮಾಯಿಸಿಕೊಂಡು, ದುರ್ಭಿಕ್ಷಕ್ಕೆ ಕಾಮಗಾರಿಗಳ ಮೇಲೆ ನೌಕರರಾಗಿರುವ ಕೂಲಿ ಜನಗಳ ಪೈಕಿ ನಿಷ್ಪ್ರಯೋಜನವಾದ ಜನಗಳನ್ನು ಪ್ಪಾಪಾಸುಕಳ್ಳಿ ಯಾ ನಾಗದಾಳಿ ಮುಳ್ಳು ತಂದು ಜಮಾಯಿಸಲಿಕ್ಕೂ, ತಂದು ಸೇರಿದಂತಾ ಎಲ್ಲಾದನಗಳನ್ನು ಸದರೀ ಪಾಪಾಸುಕಳ್ಳಿ ಎಲೆಹಾಕಿ ಮೇಯಿಸಲಿಕ್ಕೂ ಪ್ರತ್ಯೇಕವಾಗಿ ನೇಮಿಸತಕ್ಕದ್ದು. ನಮ್ಮ ಅನುಭವದರೀತ್ಯ ಒಬ್ಬ ಕೂಲಿಯವ ಎರಡು ಎತ್ತುಗಳನ್ನು ಮೇಯಿಸಲಿಕ್ಕೆ ಸಾಕಾದಷ್ಟು ಜಮಾಯಿಸಬಲ್ಲನು. ಅನ್ಯಥಾ ಸತ್ತುಹೋಗುವ ದನಗಳು ಈ ರೀತಿಯಾಗಿ ಸಕಲರ ಪ್ರಯೋಜನಾರ್ಥವಾಗಿ ರಕ್ಷಿಸಲ್ಪಡುವವೆಂದು ನಾವು ಖಂಡಿತವಾಗಿ ತಿಳಿಯುತ್ತೇವೆ.

ಯತ್ತುಗಳನ್ನು ಮೇಯಿಸಲಿಕ್ಕೆ ಅಸಮರ್ಥರಾಗಿರುವರೆಲ್ಲರ ಯತ್ತುಗಳು ಈ ಕೊಟ್ಟಿಗೆಗಳಲ್ಲಿ ಬರಮಾಡಿಕೊಳ್ಳಲ್ಪಡುವವೆಂದುನ್ನೂ ಮತ್ತು ಮಳೆ ಬೀಳುವ ವರಿಗೂ, ಅವರು ಅವುಗಳಿಗೆ ಮೇವು ಸಂಪಾದಿಸಿಕೊಳ್ಳಲಿಕ್ಕೆ ಸಮರ್ಥರಾಗುವ ವರಿಗೂ ಮೇಲೆ ಹೇಳಲ್ಪಟ್ಟ ಪ್ರಕಾರ ಅವುಗಳ ನಿಗೇವಾನಿ ತೆಗದುಕೊಳ್ಳಲ್ಪಡುತ್ತೆಂದುನ್ನೂ ಧರೋಬಸ್ತು ಗ್ರಾಮಗಳಿಗೂ ನೊಟೀಸ್‌ಗಳು ಕಳುಹಿಸಲ್ಪಡ ಬಹುದು.

ಈ ಸುಲಭವಾದ ಮತ್ತು ಬಹಳ ಜುಜುವಿ ಖರ್ಚು ತಗಲುವ ಉಪಾಯದಿಂದ (ಹ್ಯಾಗಾದರು ಕೂಲಿ ಜನಗಳಿಗೆ ಕೆಲಸ ಕೊಟ್ಟು ಅವರಿಗೆ ಕೂಲಿ ಕೊಡಬೇಕಾಗಿರುತ್ತಷ್ಟೆ) ಸರಕಾರಕ್ಕೆ ಮುಖ್ಯವಾಗಿ ದ್ರವ್ಯ ವಿಷಯದ ಲ್ಲಿ ಸಹಾಯಕರಾದ ರೈತರ ಸ್ವತ್ತು ಕಾಪಾಡಲ್ಪಡ ಬಹುದು.

ಈ ಕ್ರಮವು ಯಾವ ವಿಧದಲ್ಲಾದರು ಅಸಾಧ್ಯವಾದ್ದೆಂಬದಾಗಿ ಆಲೋಚಿಸಲ್ಪಟ್ಟರೆ ನಮ್ಮ ಕೆಲಸಗಳು ಯೇರ್ಜಸಿಗಳು ಯೇರ್ಪಡಿಸಲ್ಪಟಿರುವ ಬಳ್ಳಾರಿ ಆದವಾನಿ ತಾಡಪತ್ರಿ ಈ ಸ್ಥಳಗಳಲ್ಲಿ ಈ ಕೆಲಸವನ್ನು ನಡಿಸೆಲು ನಾವು ವಹಿಸುವದಕ್ಕೆ ಸಿದ್ಧವಾಗಿಧೆವೆ. ಪರಂತು ಸರಕಾರದವರು ಸಾಕಾದಷ್ಟು ಕೂಲಿ ಜನಗಳನ್ನು ಅಂದರೆ ಪ್ರತಿ ಜೊತೆ ಯತ್ತಿಗೂ ವೊಬ್ಬ ಕೂಲಿಯವನ ಪ್ರಕಾರ ಆವಶ್ಯಕವಿದ್ದಲ್ಲಿ ಸರಕಾರ ಉದ್ಯೋಗಸ್ಥರ ಮೇಲ್ವಿಚಾರಣೆಗೆ ವೊಳಪಟ್ಟು ನಮಿಗೆ ಕೊಡಬೇಕಾಗುತ್ತೆ.

ರೈತನಿಗೆ ಯತ್ತುಗಳು ಹೋದಲ್ಲಿ ತನ್ನ ಪೂರ್ವದ ಸ್ಥಿತಿಯನ್ನು ಹೊಂದಲಿಕ್ಕೆ ಅವನಿಗೆ ಅನೇಕ ವರುಷಗಳು ಹಿಡಿಯುವದು.

ವೊಂದು ದಿವಸ ಸಹಾ ಬಹಳ ವಿಶೇಷವಾದ್ದರಿಂದ ಈ ಸಲಹೇಗೆ ತಾವು ಕ್ಷಿಪ್ರವಾಗಿ ನಿಗೆಕೊಡುವಿರಿ ಯಂಬದಾಗಿ ನಾವು ನಂಬುತ್ತೇವೆ.

ತಾಜಾಕಲಂ—ಮೇಲೆ ನಮೂದಿಸಲ್ಪಟ್ಟ ಸಲಹೆಯು ಬಳ್ಳಾರಿ ಡಿಸ್ಟ್ರಿಕ್ಟಿಗೆ ಲಗಾವಾಗಿರುವದ್ದಲ್ಲದೆ ಪ್ರಸಿಡೆನ್ಸಿಯೊಳಗೆಲ್ಲಾ ನೆಲಗೊಂಡಿರುವ ದುರ್ಭಿಕ್ಷವ್ಯಾಪ್ತವಾದ ಸ್ಥಳಗಳಿಗೆ ಸಹಾ ಲಗಾವಾಗಿರುತ್ತೆಂದು ಯೆಣಿಸಲ್ಪಡಬೇಕು.

ನಂಬರು 7883 ಜನರಲ್ 139 ತಾರೀಖು, ಬೆಂಗಳೂರು, 8ನೇ ನವಂಬರ 1876.

ಹುಕ್ಕುಂ—ಮೇಲೆ ರಿಕಾರ್ಡು ಮಾಡಲ್ಪಟ್ಟ ಅವರ ಲೆಟರಿಗಾಗಿ ಮೆಸರ್ಸ್‌ಹಾರ್ವಿ ಮತ್ತು ಸಭಾಪತಿಯವರಿಗೆ ಚೀಫ್ ಕಮ್ಮಿಷನರವರು ವಂದನೆಗಳು ಮಾಡುತ್ತಾರೆ. ಸದರೀ ಲೆಟರಿನಲ್ಲಿ, ಪಾಪಾಸುಕಳ್ಳಿ ಯಾ ನಾಗದಾಳೆಮುಳ್ಳುಯೆಲೆಗಳು ದನಗಳಿಗೆ ಮೇವಾಗಿ ಉಪಯೋಗಿಸಲ್ಪಡುವದರ ಪ್ರಯೋಜನಾಂಶಗಳಿಗೂ ಮತ್ತು ಸದರೀ ಪ್ರಕಾರ

ಅಜಮಾಯಿಸಲ್ಪಟ್ಟದ್ದನ್ನು ತತ್ಕಾಲದಲ್ಲಿ ಸಹಜವಾಗಿ ಜಾರೀಗೆ ತರುವದರ ಸಾಧಕಾಂಶಗಳಿಗೂ, ನಿಗೆ ಕೊಡಬೇಕೆಂದು ಕೋರಲಾಗಿರುತ್ತೆ.

2. ಚೀಪ್ ಕಮ್ಮಿಷನರವರು ಅಪೇಕ್ಷಿಸುವದೇನಂದರೆ ಯಾವ ಡಿಸ್ಟ್ರಿಕ್ಟುಗಳಲ್ಲಿ ಪಾಪಾಸುಕಳ್ಳಿಯು ಬೆಳಯುತದೋ ಅಂತಾ ದರೋ ಬಸ್ತು ಡಿಸ್ಟ್ರಿಕ್ಟುಗಳ ಡಿಪ್ಯುಟಿ ಕಮ್ಮಿಷನ್ನರ್‌ಗಳು ಸದರೀ ಸಲಹೇಗಳನ್ನು ಸಾಧ್ಯವಾದ ಮಟ್ಟಿಗೆ ಅವಲಂಬಿಸಿ ಮೇವು ಯಿಲ್ಲದ ಗ್ರಾಮಗಳಿಂದ ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಿಗೆ ತರಲ್ಪಡುವ ದರೋಬಸ್ತು ದನಗಳನ್ನು ಬರಮಾಡಿಕ್ಕೊಂಡು ಅವುಗಳಿಗೆ ಈ ವಿಧವಾದ ಮೇವು ಕೊಡತಕ್ಕ ಬಗ್ಯೆ ಯೇರ್ಪಾಡುಗಳು ಮಾಡತಕ್ಕ ವಿಷಯದಲ್ಲಿ ಕ್ರಮಗಳನ್ನು ನಡಿಸತಕ್ಕದ್ದು.

3. ಮೇಲೆ ತಿಳಿಸಲ್ಪಟ್ಟ ಆಯುಧಗಳ 50 ಜೊತೆಗಳು ತಯಾರ್ಮಾಡಲ್ಪಡತಕ್ಕ ಬಗ್ಯೆ ಹುಕ್ಕುಂ ಕೊಡಲ್ಪಟ್ಟು ಅವುಗಳು ಡಿಸ್ಟ್ರಿಕ್ಟುಗಳಿಗೆ ಹಂಚಲ್ಪಡತಕ್ಕದ್ದು. ಆದರೆ ಈ ಆಯುಧಗಳು ಬರುವವರಿಗೂ ನಿರೀಕ್ಷಿಸಬೇಕಾದ್ದಿಲ್ಲವು ಮತ್ತು ಮೇಲೆ ವಿವರಿಸಲ್ಪಟ್ಟ ಪ್ರಕಾರ ಈ ಕ್ರಮವು ಬಹಳ ಸುಲಭವಾದ್ದರಿಂದ ಅವುಗಳು ಯಿಲ್ಲದೇನೆ ಕೆಲಸ ಆರಂಭಿಸಲಿಕ್ಕೆ ನಿಸ್ಸಂದೇಹವಾಗಿ ಸಾಧ್ಯವಾಗಿರುವದು.

4. ಈಚಿಗೆ ಬಂದ ಕಾಗದದಲ್ಲಿ, ಪೊಂದು ಹಿಡಿ ತವಡು, ರುಬ್ಬಿದ ಹುರಳಿ, ಕಡಲೆ, ಜೋಳ ಅಥವಾ ಯಾವ ವಿಧವಾದ ಕಾಯಿ ಧಾನ್ಯ ಇದನ್ನು ಹಾಕಿದಲ್ಲಿ ಈ ಮೇವು ಇನ್ನು ಹೆಚ್ಚಾದ ರುಚಿವುಳ್ಳದ್ದಾಗಿ ಆಗುತ್ತೆಂದು ಮೆಸರ್ಸ್ ಹಾರ್ವಿ ವ ಸಭಾಪತಿಯವರು ತಿಳಿಸುತ್ತಾರೆ.

ಟಸಾರ್ ರೇಷ್ಮೆಹುಳುವಿನ ವಿವರಣೆಯ ನೋಟಿಸ್.

ಈಚಿಗೆ ಕೆಲವು ವರುಷಗಳಿಂದ, ರೇಷ್ಮೆಹುಳುಗಳನ್ನು ಬೆಳೆಯಿಸುವದು, ಕೇವಲ ಅಸಾಧ್ಯವಲ್ಲದಿದ್ದಾಗ್ಯೂ, ಬಹಳ ಪ್ರಯಾಸವಾಗಿರುವದರಿಂದ ಅಂತಾ ರೇಷ್ಮೆಹುಳುಗಳಿಗೆ ಬದಲಾಗಿ ಟಸಾರ್‌ಹುಳುವಿನಿಂದ ಆಗುವ ರೇಷ್ಮೆಯು ಉಪಯುಕ್ತವಾದ ಕೆಲಸವನ್ನಾಗಿ ಅಭಿವೃದ್ಧಿಪಡಿಸಬಹುದೇ ಎಂದು ನಿಶ್ಚಯಿಸುವದಕ್ಕೋಸ್ಕರ, ಯಾವ ಸ್ಥಳದಲ್ಲಿ ಟಸಾರ್‌ಹುಳು ಸಿಕ್ಕುತದೋ ಅಂತಾ ಸ್ಥಳಗಳನ್ನೂ, ಪ್ರಾಯಶಃ ದೊರೆಯಬಹುದಾಗಿರುವ ಪರಿಮಾಣವನ್ನೂ, ಮತ್ತು ಈ ವಿಷಯದಲ್ಲಿ ಪ್ರಯೋಜಕಗಳಾದ ಇತರ ತಪಶೀಲ್‌ಗಳನ್ನೂ, ಕುರಿತು ವಿಚಾರಿಸುವಂತೆ ಇಂಡ್ಯಾಗವರ್ನ‌ಮೆಂಟಿನವರು ಅಪ್ಪಣೆ ಕೊಟ್ಟಿರುತ್ತಾರೆ.

ಟಸಾರ್‌ಹುಳುವೆಂಬದು ಸಾಧಾರಣವಾಗಿ ಜಂಗಲೀಗಳಲ್ಲಿ ಕಾಣಬರುತವೆ. ಇವುಗಳು ಎಲಚಿ, ನಾಯಿಬೇಲ, ಹೆದರಣಿ ವಗೈರೇ ಮರಗಳ ಯೆಳೇ ಕುಡಿಗಳನ್ನು ತಿಂದು ಬದುಕುತವೆ, ಸದರೀ ಮರಗಳ ಚಿಗುರುಗಳೇ ಅವುಗಳಿಗೆ ಸಹಜವಾದ ಆಹಾರವಾಗಿರುತ್ತೆ. ಟಸಾರ್ ಕಂಬಳೀಹುಳುಗಳನ್ನಾಗಲಿ ಇತರ ಹುಳು ಮತ್ತು ಕಕ್ಕೂನ್ ಎಂಬ ಗೂಡುಗಳು ಇವುಗಳನ್ನಾಗಲಿ, ಹುಡುಕತಕ್ಕ ಬಗ್ಯೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಡಿಪ್ಯುಟಿ ಕಮ್ಮಿಷನರ್‌ಗಳಿಗೆ ಚೀಪ್‌ಕಮ್ಮಿಷನರವರಿಂದ ಹುಕ್ಕುಂ ಬಂದಿರುತ್ತೆ. ಮತ್ತು ಈ ಉದ್ದೇಶಕ್ಕೆ ಸಹಾಯಕವಾಗಿ ಇದರಡಿ ಬರುವ ವಿವರಣೆ ತಿಳಿಸಲ್ಪಟ್ಟಿರುತ್ತೆ.

ಷುಮಾರ್ ಮೇ ಆಖೈರ್‌ನಲ್ಲಿಯೋ ಜೂನ್ ಷುರುನೊಳಗೋ ಈ ಗೂಡುಗಳಿಂದ ಮಾತ್ ಎಂಬ ರೆಕ್ಕೇಹುಳು ಹುಟ್ಟಿ ಮೊಟ್ಟೇ ಇಡುತ್ತದೆ. ಇದನ್ನು ನೋಡಿದರೆ ಮರಗಳ ಎಲೆಗಳಲ್ಲಿ ಚಪ್ಪಟೆಯಾದ ಸಣ್ಣ ಜೋಳದಕಾಳು ಹರಡಿದಂತೆ ಇರುತ್ತವೆ. ಕೆಲವು ದಿನಗಳ ತೆರುವಾಯ ಕಪ್ಪಗೆ ಇರುವ ಒಂದು ಸಣ್ಣ ಹುಳು ಹೊರಡುತದೆ. ಇದಕ್ಕೆ ಎಲೆಯೇ ಆಹಾರವಾಗಿ ಅತಿತ್ವರೆಯಾಗಿ ಬೆಳೆದು ಮೊದಲು ಹಳದೀಯಾಗಿ ಕಪ್ಪು ಗೋಲ್‌ಗಳು ಮತ್ತು ಚುಕ್ಕೆಗಳು ಉಂಟಾಗುತವೆ. ತರುವಾಯ ಹಸರು ಬಣ್ಣಕ್ಕೆ ತಿರಿಗಿ ಅದರ ಮೈಮೇಲೆ ಸೊಗಸಾದ ಸಣ್ಣವಾಗಿ, ಊದಾಬಣ್ಣ, ಬಂಗಾರಬಣ್ಣ ಮತ್ತು ಸ್ವಲ್ಪ ಕೆಂಪುಬಣ್ಣವುಳ್ಳ ಚುಕ್ಕೆಗಳು ಹುಟ್ಟುತವೆ, ಇದು ಶಿಥಾಯಿ

ಕೆಲವುವೇಳೆ ಅದರ ಪಕ್ಕದಲ್ಲಿ ಬೆಳ್ಳಿಯಬಣ್ಣದಂತೆ ಇರುವ ಮೂರು ನಾಲ್ಕು ಚುಕ್ಕೆಗಳುಂಟಾಗುತವೆ, ಇದು ಮನುಷ್ಯನ ಬೆಟ್ಟಿನಷ್ಟು ದಪ್ಪ ಬೆಳೆಯುವತನಕ ಈ ಸ್ಥಿತಿಯಲ್ಲಿದ್ದು ತರುವಾಯ ಎರಡು ಮೂರು ಎಲೆಗಳನ್ನು ಸೆಳಕೊಂಡು ತನಗೆ ವಾಸಮಾಡಲಿಕ್ಕೆ ಒಂದು ಗೂಡನ್ನು ಕಲ್ಪಿಸಿಕೊಳ್ಳುತದೆ, ಆ ಗೂಡು, ಅರಳೆಯಂತೆ ಎಲ್ಲ ಕೆಲಸಕ್ಕೂ ಉಪಯೋಗಿಸುವಷ್ಟು ಬಲವಾದ ಬೇರೆ ಬೇರೆಯಾದ ದಾರಗಳಿಂದ ಮಾಡಲ್ಪಟ್ಟಿರುತದೆ. ಈ ಹುಳು ವರುಷಕ್ಕೆರಡುಸಲ ಗೂಡುಗಟ್ಟುತದೆ. ಮೇ, ಜೂನ್, ಜುಲೈ ತಿಂಗಳಲ್ಲಿ ರೆಕ್ಕೆ ಹುಳುಗಳು ಮೊದಲು ಹೊರಗೆ ಬರುತದೆ ತರುವಾಯ ಕಂಬಳೀಹುಳ ಐವತ್ತು ದಿನಗಳು ಬದಿಕಿ ಇದ್ದು ಗೂಡುಗಳನ್ನು ಕಟ್ಟುತವೆ. ಈ ಗೂಡುಗಳಿಂದ ಆಗಸ್ಟ್, ಶಪಟಂಬರ್, ಅಕ್ಟೋಬರ್ ತಿಂಗಳಲ್ಲಿ ರೆಕ್ಕೆ ಹುಳುಗಳು ಹೊರಗೆ ಬರುತವೆ. ಮತ್ತು ಕಂಬಳಿ ಹುಳುಗಳೂ, ಅಕ್ಟೋಬರ್, ನವಂಬರ್, ಡಿಶಂಬರ್ ತಿಂಗಳಲ್ಲಿ ಮರಳಿ ಗೂಡುಗಳನ್ನು ಕಟ್ಟುತವೆ. ಆಗ ಚಳಿಕಾಲ, ಅನಂತರ ಬೇಸಿಗೆಕಾಲ ಬರುವದರಿಂದ ಒಳಗಿರುವ ಹುಳುಗಳು ಮಳೆಕಾಲದವರಿಗೆ ನಿಶ್ಚಲವಾಗಿ ಇರುತವೆ. ಆಗ ಎಲೆಗಳು ಎಳೇದಾಗಿಯೂ ಚನ್ನಾಗಿಯೂ ಇರುವದರಿಂದ ಹುಳುಗಳಿಗೆ ಆಹಾರಕ್ಕೆ ಉಪಯೋಗಿಸುತವೆ ಎಲ್ಲ ಬಗೆ ಗೂಡುಗಳು, ಅಂದರೆ ಹೊಸವಾಗಿ ಇರತಕ್ಕವು ಭಾರವಾಗಿಯೂ ಛಿದ್ರವಿಲ್ಲದೆಯೂ ಇರುವಣ, ಮತ್ತು ಹಳೇದು ಒಡದುಹೋದದ್ದು, ಮಷ್ಟುವುಳ್ಳದ್ದು, ಭಾರವಿಲ್ಲದ್ದು, ಕಚ್ಚುಗಳು ಇರುವದು ಕತ್ತರಿಸಿಇರುವದು, ಇವುಗಳೆಲ್ಲ ಉಪಯೋಗಕ್ಕೆ ಬರುತ್ತೆ ಪರಂತು ಈ ಪೈಕಿ ಮೊದಲನೇ ತರದ್ದು ಅತ್ಯಂತ ಉಪಯೋಗಿಸತಕ್ಕದ್ದಾಗಿರುತ್ತೆ.

ಮಳೆಕಾಲದಲ್ಲಿ, ಕಂಬಳೀಹುಳುಗಳು ಅನೇಕ ಮೇಲೆ ಕಂಡ ಮರಗಳಮೇಲೂ, ಈ ಮಾರ್ಜಿನಲ್ಲಿ ಕಂಡ ಮರಗಳಮೇಲೂ ಮೇಯುತಿರುತವೆ. ಎರಡು ತಿಂಗಳ ಕಾಲದಲ್ಲಿ ಗೂಡುಗಳನ್ನು ಎಲ್ಲಿ ಹುಡಕತಕ್ಕದ್ದೋ ಅದನ್ನು ತಿಳದುಕೊಳ್ಳುವ ಬಗ್ಯೆ ಜನಗಳು ಅವುಗಳನ್ನು ಕಂಡು[illegible]ದ್ದು. ಮೇಲೆ ಕಂಡ ಜಾತಿಯಮರಗಳು ತಮ್ಮ ತಮ್ಮ ಮನೆ[illegible]ಯಿದ್ದ ಪಕ್ಷಕ್ಕೆ ಆ ಮರಗಳಲ್ಲಿ ಕಂಬಳೀ

ಮತ್ತಿ, ಯಲಚಿ, ಕುರಂಡ, ತೆಲ್ಲಬಾ [illegible]

ಹುಳುಗಳು ಅಂಟಿಕೊಂಡಿರತಕ್ಕ ಕಡ್ಡಿಗಳನ್ನು ಕತ್ತರಿಸಿ ತಂದು [illegible]ಮರಗಳಿಗೆ ಕಟ್ಟತಕ್ಕದ್ದು. (ಯಾತಕ್ಕಂದರೆ ಕಂಬಳೀ ಹುಳುಗಳು ಬಹಳ ನಾಜೂಕಾದ್ದರಿಂದ ಅವುಗಳನ್ನು [illegible]ಟ್ಟುವದಕ್ಕಾಗದು) ಆಗ ಈ ಕಂಬಳೀಹುಳುಗಳು ತನ್ನಿಚ್ಛೆಯಾಗಿ ಮೇಲಕ್ಕೆ ಹತ್ತಿ ಹೋಗುವದು ಸ್ವಲ್ಪ[illegible]ದ ತರುವಾಯ ತಮ್ಮ ತಮ್ಮ ಗೂಡುಗಳನ್ನು ಕಟ್ಟುತ್ತವೆ. ಹೀಗೆ ಸ್ವಲ್ಪಕಾಲದ ತರುವಾಯ ಈ ಕಂಬಳೀಹುಳುಗಳನ್ನು ಎಲ್ಲಿ ನೋಡಿದಾಗ್ಯೂ ಫಲವಿಲ್ಲವೆಂದು ಜನಗಳು ತಿಳದುಕೊಂಡಾರು, ಮತ್ತು ಗೂಡುಗಳನ್ನು ಸುಲಭವಾಗಿ ಕಂಡಾರು. ಕಂಬಳೀಹುಳುಗಳು ತಿನ್ನುವಲ್ಲಿ ಒಂದೊಂದು ಎಲೆಯಾಗಿ ತಿಂದು ಹಾಕಿ ಕಡ್ಡಿಗಳನ್ನು ಮಾತ್ರ ಉಳಿಸುತ್ತವೆ. ಈ ಹುಳುಗಳು ವಿಶೇಷ ಹರಿದಾಡುವದಿಲ್ಲವಾಗಿ ಇವುಗಳ ಪಿಚಿಗೆಗಳು ನೆಲದಮೇಲೆ ತುಂಬಾ [illegible]ರಿ ಇರುತವೆ. ಆ ಪಿಚಿಕೆಗಳು ಕಣಿಗೆ ಕುರಿ ಪಿಚಿಗೆಗಳಷ್ಟು ಜಮಾಇಸುತವೆ ಪರಂತು ಬಹಳ ಮುರುಸಾಗಿ[illegible] ಹೆಚ್ಚಾಗಿ ಗೀರುಬಿದ್ದು ಇರುತ್ತೆ. ಜನಗಳು ಇದರಗೂಡುಗಳನ್ನು ಕಂಡರೆ ಬಹಳ ನಾಜೂಕಾಗಿ ಮ[illegible] ಈಚಿಗೆ ತೆಗದು ಕೊಳ್ಳತಕ್ಕದ್ದು. ಇವುಗಳಪೈಕೀ ಚನ್ನಾಗಿಯೂ ಭಾರವಾಗಿಯೂ ಇರತಕ್ಕವುಗಳನ್ನೆಲ್ಲ [illegible]ಳಿಗೂ ಅಳಲೆಗಳಿಗೂ ಶಿಕ್ಕದಂತೆ ದಾರಕ್ಕೆ ಕಟ್ಟಿಹಾಕಿ ದೂಲಕ್ಕೆ ತಗಲಹಾಕತಕ್ಕದ್ದು. ಸಾಧ್ಯವಾದರೆ ಇರು[illegible]ಗಳಿಗೆ ಶಿಕ್ಕದಂತೆಯೂ ನೋಡಿಕೊಳ್ಳತಕ್ಕದ್ದು. ಯಾತಕ್ಕಂದರೆ ಇವುಗಳು ಹುಳುಗಳನ್ನು ತಿಂದು ಹಾಕುತ್ತ[illegible]

2. ತಾಲ್ಲೂಕು ಅಮಲ್ದಾರ್ರುಗಳು ಮೇಲೆ ಕಂಡ ಸಂಗತಿಗಳನ್ನು ತಾಲ್ಲೂಕಿನಲ್ಲಿ ಇರತಕ್ಕ ದರೋಬಸ್ತು ಜನಗಳಿಗೂ ವಿವರಿಸಿ ಮುಂಬೈಯಲ್ಲಿ ಕೇವಲ ಅನುಕೂಲವಾಗಿಯೂ ಲಾಭಕರವಾಗಿಯೂ ಕಾಣ ಬಂದ ಈ ಅಜಮಾಇಷೀಯನ್ನು ಮಾಡುವಂತೆ ಅವರುಗಳನ್ನು ಪ್ರೇರಿಸತಕ್ಕದ್ದು.

T. Clarke,
Offg. Secretary.

541.

ಮೈಸೂರ ಗೆಜೆಟ್.

48 ಸರ್ಕಾರದಿಂದ ಛಾಯಿಸಿ ಆದ್ದು. ಸ 1876.

ಬೆಂಗಳೂರು, ಶನಿವಾರ, ಡಿಶಂಬರ ತಾ|| 2, ಸ 1876

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ... ಗವರ್ನಮೆಂಟನವರ ಇಸ್ತಿಹಾರ ನಾಮೆಗಳು. .. .. ಪುಟ 305—311

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಟರು, ಡೆಪ್ಯುಟ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿವಿಜನ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟ ಕಮ್ಮಿಷನರುಗಳು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. .. 575—583

3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ. .. .. .. 139—153

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

1ನೇ ಭಾಗ.

ನಂ. 259. ತಾರೀಖು 26ನೇ ಅಕ್ಟೋಬರ 1876.

ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್‌ಕಮ್ಮಿಷನರವರಿಂದ ಅಂಗೀಕರಿಸಲ್ಪಟ್ಟು ಮಂಜೂರಾಗಿರುವದರಿಂದ ಸಕಲ ಜನರಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

$\frac{2}{26}$ ಜನರಲ್ ಪೆರೇಡ್ ಗ್ರೌಂಡ್ ಎಂಬ ಕವಾಯತ್ ದಿಣ್ಣಿಗೆ ಅಂಚಿನಲ್ಲಿ ಮಾತ್ರ ಯೇರ್ಪಟ್ಟಿರುವ ಕುದುರೇ ದಾರೀಯಲ್ಲಿ ಕುದುರೇಗಳನ್ನು ಸವಾರಿಗೆ ಯಾ ಬಂಡಿಗೆ ಪಳಗಿಸಲ್ಪಡಕೂಡದು. ಸದರೀ ಮಾರ್ಗದಲ್ಲಿ ಅತಿ ರಭಸವಾಗಿ ಸವಾರೀ ಮಾಡಕೂಡದು.

ಈ ಬೈಲಾ ನಿಬಂಧನೆಗೆ ತಪ್ಪುವಂತಾ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ...ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಹಾಗೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ನಡಿಸಲ್ಪಡತಕ್ಕ ಪ್ರತಿ ತಪ್ಪಿತಕ್ಕೂ, ...ರೂಪಾಯಿಯು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

$\frac{3}{51}$. ಯಾವ ಮನೆಯಲ್ಲಿ ಉಖಾಲ್ ಜುಲಾಬುಗಲಿ, ಶಿಡುಬಾಗಲಿ: ಕಾಣಿಸಿಕೊಳ್ಳುತ್ತದೋ ಆ ಮನೆಯ ಯಜಮಾನನು ಮ್ಯುನಿಸಿಪೆಲ್ ಕಮ್ಮಿಷನರ್ ಪ್ರೆಸೀಡೆಂಟರಿಗಾಗಲಿ, ಅತ್ಯಂತ ಸಮೀಪದಲ್ಲಿರುವ ಪೋಲೀಸ್ ಸ್ಟೇಷನಿಗಾಗಲಿ, ಜನಗಳ ಆರೋಗ್ಯದ ಬಗ್ಯೂ, ರೋಗವನ್ನು ಮಟ್ಟುಪಡಿಸುವಬಗ್ಯೂ, ತಕ್ಕ ಕ್ರಮಗಳನ್ನು ಏರ್ಪಡಿಸುವದಕ್ಕೋಸ್ಕರವೂ ಸದರೀ ಸಂಗತಿಯನ್ನು ಕುರಿತು ಕೂಡ್ಲೆ ರಿಪೋರ್ಟು ಮಾಡತಕ್ಕದ್ದೆಂದು ತಾಕೀದು ಮಾಡಲ್ಪಡುತ್ತಾರೆ.

ಈ ಬೈಲಾ ನಿಬಂಧನೆಯ ಷರತ್ತುಗಳನ್ನು ಜಾರೀಮಾಡುವದರೊಳಗೆ, ಕೆಲವು ಸಂಗತಿಗಳಲ್ಲಿ ರೋಗತಗಲಿದ ಮನುಷ್ಯನನ್ನು ಒಂದು ಆಸ್ಪತ್ರಿಗೆ ಒಯ್ಯುವದು ಜರೂರೆಂದು ಪ್ರಾಯಶಃ ಎಣಿಸಲ್ಪಡಬಹುದು, ಆದರೆ ಅಂತಾ ಮನೆಗಳೊಳಗೆ ರೋಗತಗಲಿದವರನ್ನು ಪ್ರತ್ಯೇಕಪಡಿಸುವದಕ್ಕೆ ತಕ್ಕಹಾಗೆ ಸ್ಥಳಾನುಕೂಲವಿದ್ದರೆ ಅಥವಾ ರೋಗಿಯನ್ನು ಪ್ರತ್ಯೇಕ ಖೋಲೀಯಲ್ಲಿಡುವದಕ್ಕೆ ಯುಕ್ತಗಳಾದ ಯೇರ್ಪಾಡುಗಳು ಮಾಡಬಹುದಾಗಿದ್ದರೆ ಅಂತಾ ಮನೆಗಳೊಳಗೆ ಸದರೀ ಕ್ರಮವು ಸುತರಾಂ ನಡಿಸಬೇಕಾದ್ದಿಲ್ಲವು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಇಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ ಮತ್ತು ಅಂತಾ ಉಲ್ಲಂಘನೆ ನಡಿಸಲ್ಪಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗಳ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ನಂ. 293. ತಾರೀಖು 21ನೇ ನವಂಬರ್ 1876.

1870ನೇ ಇಸವಿ 10ನೇ ಲ್ಯಾಂಡ್ ಅಕ್ವಿಜೆಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಯಿದರಿಂದ ತಿಳಿಸಲ್ಪಡುವದೇನಂದರೆ,— ಇದರಡಿ ವಿವರಿಸಲ್ಪಟ್ಟ ಹಾಸನ ಕಸಬೇಯಲ್ಲಿರುವ ಒಂದು ತಾಕು ಜಮೀನು ಸರ್ಕಾರ್ ಕೆಲಸಕ್ಕೋಸ್ಕರ ಅಂದರೆ ಸ್ಥಳದ ಅಭಿವೃದ್ಧಿ ಬಗ್ಯೆ ಮ್ಯುನಿಸಿಪಾಲಿಟಿ ಯವರಿಗೆ ಬೇಕಾಗಿರುತ್ತೆ. ರಹಿಮಾನ್‌ಖಾನ್ ಎಂಬ ಒಬ್ಬನು ಸದರೀ ತಾಕಿಗೆ ಬಾಧ್ಯತೆ ತಂದಿರುವ ಸಬಬ್ ಅದರ ಕಡಗಟ್ಟು ನಕ್ಷೆಯನ್ನು ಹಾಸನ ಡಿಸ್ಟ್ರಿಕ್ಟ್ ಡಿ|| ಕಮ್ಮಿಷನರ ಆಫೀಸಿನಲ್ಲಿ ಕೇಳಿ ನೋಡಿಕೊಳ್ಳ ಬಹುದು. 926ನೇ ನಂಬರ್ ಬಾಬತು ಒಂದು ತಾಕು 1–7–13 ವಿಸ್ತೀರ್ಣ ಏರುತ್ತೆ. ಇದರ ಕಂದಾಯ 2·67 ಯಿರುತ್ತೆ. ಈ ಜಮೀನು ಬಾಬತು ಪಟ್ಟೇದಾರರು ಅಮೀರ್ ಸಾಹೇಬ್ ವ ದಸ್ತಗೀರ್ ಸಾಹೇಬ್, ಇದರ ಖರೀದೀದಾರ್ ರಹಿಮಾನ್‌ಖಾನ್.

ಯಿದರ ಚತುರ್ಸೀಮೆ.

ಉತ್ತರಕ್ಕೆ—ಹಾಸನ ತಿಮ್ಮ ವಗೈರೇರ ಹೊಲಗಳು ಮತ್ತು ಫಾರೆಸ್ಟುಡಿಪೊ.
ಪೂರ್ವಕ್ಕೆ—ಮಹಾನವಮಿ ಮಂಟಪಕ್ಕೂ, ಹಳ್ಳೇಬೀಡಿಗೂ ಹೋಗುವ ರಸ್ತೆ.
ದಕ್ಷಿಣಕ್ಕೆ—ಮ್ಯುನಿಸಿಪೆಲ್ ಭೂಮಿ ಮತ್ತು ಹೊಸಲ್ಯಾನಿಂದ ಬಂಗ್ಲೆಗಳಿಗೆ ಹೋಗುವ ರಸ್ತೆ.
ಪಶ್ಚಮಕ್ಕೆ—ರಾವಸ್ವಾಮಿ ಐಯ್ಯರಿಯುವರ ಮನೆಗೆ ಪೂರ್ವಕ್ಕೆ ಯಿರುವ ಒಂದು ಮ್ಯುನಿಸಿಪೆಲ್ ಪೋಣಿ.

ನಂ. 302. ತಾರೀಖು 24ನೇ ನವಂಬರ್ 1876.

ಇದರಡಿ ನಮೂದಿಸಲ್ಪಡುವ ಉದ್ಯೋಗಸ್ಥರು 1876ನೇ ಇಸವಿ ಆಗಸ್ಟು ತಿಂಗಳಲ್ಲಿ ನಡಿಸಲ್ಪಟ್ಟ ಮುನಸೀಫ ಪರೀಕ್ಷೆಯಲ್ಲಿ ತೇರ್ಗಡೆ ಯಾದರು.

ವರದರಾಜೈಯಂಗಾರ್—ಜುಡಿಶಿಯಲ್ ಕಮ್ಮಿಷನ್ನರ್ ಕಚ್ಚೇರಿ ಕ್ಲರ್ಕ್.
ಲಕ್ಷ್ಮಣರಾವ್—ಮೈಸೂರು ಡಿಪ್ಯುಟಿ ಕಮ್ಮಿಷನ್ನರ್ ಕಚ್ಚೇರಿ ಜುಡಿಷಿಯಲ್ ಸಿರಸ್ತೇದಾರ್.

ನಂ... ತಾರೀಖು 27ನೇ ನವಂಬರ್ 1876.

...ಕು ಅಮಲ್ದಾರ್ ಮೇಸ್ಟರ್ ವಾಟರ್ಸ್‌ಯವರಿಗೆ ಮೆಡಿಕಲ್ ಸರ್ಟಿಫಿಕೇಟಿ ಮೇಲೆ ಯರಡು ತಿಂಗಳ ...

... ಐರ್ಜ ಮೇಸ್ಟರ್ ವಾಟರ್ಸ್‌ಯವರ ಗೈರ್ ಹಾಜರಿಯಲ್ಲಿ ಅಥವಾ ಮ... ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್

ನಂ. 304. ತಾರೀಖು 28ನೇ ನವಂಬರ್ 1876.

2ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಕೇಪ್ಟನ್ ಮ್ಯಾಕ್ಷಬಿಯವರು ಹಾಸನ ಡಿಸ್ಟ್ರಿಕ್ಟು 3ನೇ ಕ್ಲಾಸ್ ಆಕ್ಟಿಂಗ್ ಡಿಪ್ಯುಟಿ ಕಮ್ಮಿಷನರಾಗಿ ಹಂಗಾಮಿ ತರೀಕ್ ಮೊಕರರ್ರಾಮಾಡಲ್ಪಟ್ಟಿರುವದಲ್ಲದೆ 1872ನೇ ಇಸವಿ 10ನೇ ನಂಬರ್ ಆಕ್ಟಿನ 35ನೇ ಸೆಕ್ಷನ್ ಪ್ರಕಾರ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಅಧಿಕಾರಗಳೂ ಮತ್ತು ಅದೇ ಆಕ್ಟಿನ 36ನೇ ಸೆಕ್ಷನ್‌ನಲ್ಲಿ ವಿವರಿಸಲ್ಪಟ್ಟ ಜಾಸ್ತೀ ಅಧಿಕಾರಗಳೂ ಅವರು ಹಾಸನ ಡಿಸ್ಟ್ರಿಕ್ಟ್ ಚಾರ್ಜಿನಲ್ಲಿರುವ ಕಾಲದಲ್ಲಿ ಚಲಾಯಿಸುವಬಗ್ಯೆ ಅವರಿಗೆ ಕೊಡಲ್ಪಟ್ಟಿರುತ್ತೆ.

ನಂ. 305. ತಾರೀಖು 29ನೇ ನವಂಬರ್ 1876.

ಯಿದರಡಿ ನಮೂದಿಸಲ್ಪಡುವ ಹಂಗಾಮಿ ವರ್ಗಾವರ್ಗಿಯು ವ ಬಹಲ್ ಸಹ ಮಾಡಲ್ಪಟ್ಟವೆ.

ಕೋಲಾರಡಿಸ್ಟ್ರಿಕ್ಟು ಪೋಲಿಸ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ರಾಮೈಯ್ಯ ನಾಯಿಕರು ತುಮಕೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರಾಗಿರತಕ್ಕದ್ದು. ಕೂಡ್ಲೇ ಆ ಕೆಲಸದಮೇಲೆ ಹಾಜರಾಗತಕ್ಕದ್ದು.

ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕು ಅಮಲ್‌ದಾರ್ ಪಂಚನಾತರಾಯರು ಕೋಲಾರ ಡಿಸ್ಟ್ರಿಕ್ಟು ಪೋಲಿಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್‌ತರೀಕ್ ಕೆಲಸನೋಡತಕ್ಕದ್ದು.

ನಂ. 306. ತಾರೀಖು 30ನೇ ನವಂಬರ್ 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಜುಡಿಷಿಯಲ್ ಅ|| ಕಮ್ಮಿಷನರ್ ಮೆ|| ವೆಂಕಟವರದೈಯಂಗಾರ್ ಎಂ. ಎಲ್. ಯವರು, ಡಿಹಲೀಯಲ್ಲಿ ನಡೆಯತಕ್ಕ ಯಿಂಪೀರಿಯಲ್ ಅಸ್ಸೆಂಬ್ಲೀಜ್ ಎಂಬ ರಾಜಸಭೆಗೆ ಮೆ|| ಕೃಷ್ಣಯ್ಯಂಗಾರ್ರವರು ಹೋಗಿ ಯಿರುವ ಕಾಲದಲ್ಲಿ ಅವರ ಕೋಲಾರ ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್‌ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟು, ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಕೇಸುಗಳನ್ನು ನಿರ್ವಹಿಸುವಲ್ಲಿ ಸದರೀ ಯವರಿಗೆ 1872ನೇ ಇಸವಿಯ 10ನೇ ನಂಬರ್ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 19ನೇ ಸೆಕ್ಷನ್ ಆರ್ಥರೀತ್ಯಾ 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವು, ಅದೇ ಅಕ್ಟು 36ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡತಕ್ಕ ಜಾಸ್ತೀ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತವೆ.

ನಂ. 307. ತಾರೀಖು ನೇ30 ನವಂಬರ್ 1876.

ಇಂಡ್ಯಾ ಗವರರ್ಮೆಂಟ್ ಮಂಜೂರಾತಿಗೆ ಪ್ರೊಳಪಡಿಸಿ ಫಸ್ಟ್‌ಕ್ಲಾಸ್ ಮುನಸೀಪ್ ನರಹರಿರಾಯರು B. ರೋಲ್ 6ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್‌ತರೀಕ್ ಮೊಕರರ್ರಾಮಾಡಲ್ಪಟ್ಟು ಈ ಸೀಮೆಯ ಸಿವಿಲ್ ಪ್ರೊಸಿಡ್ಯೂರ್ ರೂಲಸ್ 6ನೇ ಸೆಕ್ಷನ್ ಅನುಸರಿಸಿ ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಮಿಸ್ಟರ್ ವೆಂಕಟವರದೈಯಂಗಾರ್ರು ಬೇರೇ ಕೆಲಸದಮೇಲೆ ಗೈರ್‌ಹಾಜರ್ ಯಿರುವ ಕಾಲದಲ್ಲಿ ಮೆ|| ನರಹರಿರಾಯರು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

"ಬಮೋಜೀಬ್ ಹುಕುಂ,"

T. Clarke,
Offg. Secretary.

ಮಿ ಲ ಟರಿ ಇ ಲಾ ಖಾ .

ನಂ. 308. ತಾರೀಖು 28ನೇ ನವಂಬರ್ 1876.

ಮೈಸೂರು ಸವಾರ್ ಇಲಾಖಾ ಅಡ್ಜುಟೆಂಟ್ ಕೆಪ್ಟನ್ ಮೊರಾಂಟ್‌ಯವರು, ಸರಕಾರ ವಿಶೇಷ ಕೆಲಸದಮೇಲೆ ಯಿರತಕ್ಕ ಕರ್ನಲ್ ಶಂಟ್‌ಯವರ ಗೈರ್ ಹಾಜರಿಯಲ್ಲಿ ತಮ್ಮಸ್ವಂತ ಕೆಲಸಕ್ಕೆ ಜಾಸ್ತಿಯಾಗಿ ಚೀಫ್ ಕಮ್ಮಿಷನರವರ ಮಿಲಿಟರಿ ಅಸಿಸ್ಟೆಂಟ್ ಕೆಲಸವನ್ನು 1876ನೇ ಇಸವಿ ನವಂಬರ್ 24ನೇ ತಾರೀಖು ಲಗಾಯಿತು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್.

"ಹುಕ್ಕುಂ ಬಮೋಜೀಬ್,"

T. Clarke,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರನಾಮೆ.

ನಂ. 12. ತಾರೀಖು 18ನೇ ನವಂಬರ್ 1876.

ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಒಳಪಟ್ಟು ಸನ್ 1877ನೇ ಇಸವೀ ಏಪ್ರೈಲ್ ಗುರ್ರೆ ತಾರೀಖು ಲಗಾಯತು 1880ನೇ ಮಾರ್ಚಿ 31ನೇ ಮರ್ರುವರಿಗೆ ಕೊಡಗು ಸೀಮೆಯಲ್ಲಿ ಷರಾಬ್ ತಯಾರೀ ವ ಬಿಕ್ರೀ ಈ ವಿಷಯಗಳ ಸಂಪೂರ್ಣಸ್ವಾತಂತ್ರ್ಯವನ್ನು ಪಡೆಯುವ ಬಗ್ಗೆ ಇದರಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ. ಸದರೀ ಸ್ವಾತಂತ್ರ್ಯದಲ್ಲಿ ಸೇರಿದ, ಯಾ ಯೂರೋಪಿಯನ್ ವೈನ್‌ಗಳು ವ ಸ್ಪಿರಿಟ್ ಸಾರಾಯಿಗಳು, ಯಾ ಬಿಯರ್‌ಗಳು ಯಿವುಗಳ ಬಿಕ್ರಿ ಯಾ ಬಿಯರ್‌ಗಳ ತಯಾರಿ ಯಿಂತಾವು ಅಡಗಿರುವದಿಲ್ಲವು.

II. ದರಖಾಸ್ತುದಾರರುಗಳು ತಮಿಗೆ ಮೇಲೆ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯ ಕೊಡಲ್ಪಟ್ಟಲ್ಲಿ ಅವರು ಸರಕಾರಕ್ಕೆ ಗ್ಯಾರೆಂಟಿ ಯಾ ಭರವಸೆ ಕೊಡುವ ಮಿನಿಮಂ ಯಾನೆ ಕಮ್ಮಿ ಹುಟ್ಟುವಳಿಯನ್ನು ದರಖಾಸ್ತಿನಲ್ಲಿ ತಿಳಿಯಪಡಿಸತಕ್ಕದ್ದಲ್ಲದೆ ತಮ್ಮ ಒಡಂಬಡಿಕೆಯನ್ನು ನೆರವೇರಿಸತಕ್ಕ ಬಗ್ಗೆ ತಾವು ಕೊಡಲು ಸಿದ್ಧವಾಗಿರುವ ಜಾಮೀನ್ ಸಹ ತಿಳಿಸತಕ್ಕದ್ದು.

III. ಪ್ರತಿ ದರಖಾಸ್ತಿನ ಸಂಗಡ 1000 ರೂಪಾಯಿ ನಗದಾಗಲಿ ಗವರ್ನಮೆಂಟ್ ಸಿಕ್ಯುರಿಟಿಗಳ ಮೂಲಕವಾಗಲಿ ಠೇವಣಿ ಕಳುಹಿಸಬೇಕಲ್ಲದೆ ಸದರೀ ದರಖಾಸ್ತನ್ನು ವೊಂದು ಲಿಫಾಫೆಯಲ್ಲಿ ಬಂದು ಮಾಡಿ ಅದರ ಮೇಲೆ "ಅರಕ ಸಾರಾಯಿಯನ್ನು ಮಾಡುವ ಬಗ್ಗೆಯೂ ಬಿಕರಿ ಮಾಡುವ ಬಗ್ಗೆಯೂ ಸಂಪೂರ್ಣವಾದ ಸ್ವಾತಂತ್ರ್ಯಕ್ಕೋಸ್ಕರ ಮಾಡಲ್ಪಟ್ಟ ದರಖಾಸ್ತು" ಯೆಂಬದಾಗಿ ಬರದು ಅದನ್ನು ಕೊಡಗು ಸೂಪರಿಂಟೆಂಡೆಂಟರವರಿಗೆ 1877ನೇ ಇಸವಿ ಜನವರೀ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖು ತರುವಾಯ ಬರುವ ಯಾವ ದರಖಾಸ್ತಾಗಲಿ ಅಂಗೀಕರಿಸಲ್ಪಡುವದಿಲ್ಲ. ದರಖಾಸ್ತುಗಳನ್ನು ಸೂಪರಿಂಟೆಂಡೆಂಟರವರು ತಮ್ಮ ಆಫೀಸಿನಲ್ಲಿ 1877ನೇ ಜನವರೀ 16ನೇ ತಾರೀಖಿನ ದಿವಿ 12 ಘಂಟೆಗೆ ಆಕಾಲದಲ್ಲಿ ಹಾಜರಿರುವದಕ್ಕೆ ಅಪೇಕ್ಷಿಸುವರೆಲ್ಲರ ರುಬರೂ ಖುಲ್ಲಾ ಮಾಡುವರು. ದರಖಾಸ್ತುಗಳ ಆಖೈರು ವ್ಯವಸ್ಥೆ ಚೀಫ್ ಕಮ್ಮಿಷನರವರನ್ನು ಹೊಂದಿದ್ದಾಗಿರುತ್ತಾದ್ದರಿಂದ ಅವರು ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲಿಕ್ಕೆ ಅಥವಾ ಸರಿಯಾದ ಮೊಬಲಗಿಗೆ ಸವಾಲ್‌ಗಳು ಮಾಡಲ್ಪಡದ ಪಕ್ಷದಲ್ಲಿ ದರೋಬಸ್ತು ದರಖಾಸ್ತುಗಳನ್ನೂ ತಿರಸ್ಕರಿಸಲಿಕ್ಕೂ ಪೂರಾ ಅಧಿಕಾರವನ್ನು ತಮಿಗೆ ಯಿಟ್ಟುಕೊಂಡಿರುತ್ತಾರೆ. ಚೀಫ್ ಕಮ್ಮಿಷನರವರು ಮಾಡುವ ಯಿತ್ಯರ್ಥವು 1877ನೇ ಇಸವಿ ಫೆಬ್ರುವರಿ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪ್ರಸಿದ್ಧಪಡಿಸಲ್ಪಡುವದಲ್ಲದೆ ಸದರೀ ತಾರೀಖಿನಲ್ಲಿ ಸೂಪರಿಂಟೆಂಡೆಂಟರವರ ಮೂಲಕ ತಿಳಿಸಲ್ಪಡುವದು, ಬಳಿಕ ಮಂಜೂರಾಗದ ದರಖಾಸ್ತುದಾರರುಗಳಿಗೆ ಅವರ ಅರ್ಜಿಗಳಮೇಲೆ ಠೇವಣಿಗಳು ವಾಪಸ್ ಮಾಡಲ್ಪಡುವವು.

IV. ಯಾರ ದರಖಾಸ್ತು ಅಂಗೀಕರಿಸಲ್ಪಡುವದೋ ಆ ಮನುಷ್ಯನು ತನಿಗೆ ಚೀಫ್ ಕಮ್ಮಿಷನರವರ ನಿರ್ಣಯವನ್ನು ತಿಳಿಯಪಡಿಸಿದ ಹತ್ತು ದಿನಗಳೊಳಗಾಗಿ ಮಂಜೂರಾದ ದರಖಾಸ್ತು ಮೊಬಲಗ್ ಪೈಕಿ ನಾಲ್ಕರಲ್ಲಿ ವೊಂದು ಭಾಗಕ್ಕೆ ದರಖಾಸ್ತು ಕಾಲದಲ್ಲಿಟ್ಟ 1000 ರೂಪಾಯಿ ಠೇವಣೀ ಶಾಮೀಲ್ ಸಹಯಾದ ಮೊಬಲಗನ್ನು ನಗದಾಗಲಿ, ಸೂಪರಿಂಟೆಂಡೆಂಟರವರಿಗೆ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಸಿಕ್ಯೂರಿಟಿಗಳ ಮೂಲಕವಾಗಲಿ ಕೊಡಗು ಸೂಪರಿಂಟೆಂಡೆಂಟರಲ್ಲಿ ಠೇವಣೀ ಯಿಡತಕ್ಕದ್ದು. ಅವನು ಹಾಗೆ ಮಾಡಲಿಕ್ಕೆ ತಪ್ಪಿದರೆ ಪೂರ್ವದಲ್ಲಿ ಯಿಡಲ್ಪಟ್ಟ ಠೇವಣೀಯನ್ನು ದಂಡದೋಪಾದಿಯಲ್ಲಿ ಕಳಕೊಳ್ಳುವನು ಮತ್ತು ಅವನ ದರಖಾಸ್ತನ್ನು ಅಂಗೀಕರಿಸಿ ಚೀಫ್ ಕಮ್ಮಿಷನರವರು ಮಾಡಿದ ನಿಷ್ಕರ್ಷೆಯು ರದ್ದು ಮಾಡಲ್ಪಡುವದು.

V. ಮೇಲೆ ವಿವರಿಸೋಣಾದ ಪ್ರಕಾರ ಠೇವಣೀ ಯಿಟ್ಟಲ್ಲಿ ಯಾರ ದರಖಾಸ್ತು ಮತ್ತು ಕಡೇ ಠೇವಣೀ ಅಂಗೀಕರಿಸಲ್ಪಟ್ಟಿರುತ್ತೋ ಆ ಮನುಷ್ಯನು ಈ ಕೆಳಗ ನಮೂದಿಸಲ್ಪಟ್ಟ ಷರತ್ತುಗಳಿಗೆ ಸರಿಯಾಗಿ ನಡೆಯಲಿಕ್ಕೆ ಬದ್ಧನಾಗಿ ವೊಂದು ವೊಡಂಬಡಿಕೆಯನ್ನು ಸರಿಯಾದ ಛಾಪಾ ಕಾಗದದಲ್ಲಿ ಬರದುಕೊಡತಕ್ಕದ್ದು. ಮತ್ತು ಅವನು ಸದರೀ ವೊಡಂಬಡಿಕೆಗೆ ರುಜು ಮಾಡತಕ್ಕದ್ದೆಂದು ತಿಳಿಸಲ್ಪಟ್ಟ 5 ದಿನಗಳೊಳಗಾಗಿ ರುಜು ಮಾಡಲಿಕ್ಕೆ ತಪ್ಪಿದರೂ ಅಥವಾ ನಿರಾಕರಿಸಿದರೂ ಮೊದಲು ಯಿಟ್ಟ ದರೋಬಸ್ತು ಠೇವಣೀಗಳನ್ನೂ ದಂಡದೋಪಾದಿಯಲ್ಲಿ ಕಳಕೊಳ್ಳುವನು, ಮತ್ತು ಸಂಪೂರ್ಣವಾದ ಸ್ವಾತಂತ್ರ್ಯವು ಚೀಫ್ ಕಮ್ಮಿಷನರವರು ಯಾವ ಮೇರಿಗೆ ನಿಶ್ಚಯಿಸುವರೋ ಆ ಮೇರೆ ಅನ್ಯಥಾ ಪರಭಾರೆ ಮಾಡಲ್ಪಡುವದು.

VI. ವೊಡಂಬಡಿಕೆ ಬರದುಕೊಡಲ್ಪಡುತ್ತಾಲೆ ಸೂಪರ್ರಿಟೆಂಡೆಂಟರವರು ಯಾರ ದರಖಾಸ್ತು ಅಂಗೀಕರಿಸಲ್ಪಟ್ಟಿರುತ್ತೋ ಮತ್ತು ಯಾವನು ಕೇವಣೀಗಳನ್ನು ಕೊಟ್ಟು ವೊಡಂಬಡಿಕೆ ಬರದುಕೊಟ್ಟಿರುತ್ತಾನೋ ಆ ಮನುಷ್ಯನಿಗೆ ಈ ಇಸ್ತಿಹಾರಿನ ವೊದಲನೇ ಕ್ಲಾಜಿನಲ್ಲಿ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಈ ಕೆಳಗೆ ಕಂಡ ಷರತ್ತುಗಳಿಗೆ ವೊಳಪಡಿಸಿ ಕೊಟ್ಟು ವೊಂದು ಲೈಸೆನ್ಸ್ ಕೊಡತಕ್ಕದ್ದು.

ಷರತ್ತುಗಳು.

(1) ಲೈಸೆನ್ಸದಾರನಿಂದ ಕೊಡಲ್ಪಟ್ಟ ಸ್ಪಿರಿಟ್‌ಗಳ ಪ್ರತಿ *ಇಂಪೀರಿಯಲ್ ಗ್ಯಾಲನ್ ಮೇಲೆ, ಯಿದರಡಿ ನಮೂದಿಸಲ್ಪಡುವ ತೀರ್ವೆಯು ಕೊಡಲ್ಪಡತಕ್ಕದ್ದು.

ಪ್ರೂವ್ ಸ್ಪಿರಿಟ—ರೂಪಾಯಿ 3—3—10 ಗ್ಯಾಲನ್ ವೊಂದಕ್ಕೆ.

19. ಬಿಲೋ ಪ್ರೂಫ್—ರೂ—2—10—0 ಗ್ಯಾಲನ್ ವೊಂದಕ್ಕೆ.

(2.) ಈ ತೀರ್ವೆಯು ಯಾವ ತಿಂಗಳಲ್ಲಿ ಸಾರಾಯಿ ಕೊಡಲ್ಪಡುತ್ತೋ ಆ ಮಾರನೇ ತಿಂಗಳಿನ 5ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಕೊಡಗು ಖಜಾನೇಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಮತ್ತು ಆ ತಾರೀಖಿನಲ್ಲಿ ಬಾಕೀ ನಿಲ್ಲಿಸಿಕೊಂಡ ದರೋಬಸ್ತು ಮೊಬಲಗ್ ಮೇಲೆ ಸಾಲ್ 1ಕ್ಕೆ ಶೇಕಡಾ 6 ರೂಪಾಯಿ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂತಾ ಬಾಕೀ ಮೊಬಲಗು ಅದು ಯಾವ ತಿಂಗಳಲ್ಲಿ ಸಲ್ಲಬೇಕಾಗಿರುತ್ತೋ ಆ ತಿಂಗಳು ಕಳೆದನಂತರ ಸಲ್ಲದೇ ನಿಂತರೆ, ಲ್ಯಾಂಡ್ ರೆವಿನ್ಯೂ ಬಾಕೀ ವಸೂಲೀ ಬಗ್ಯೆ ಹಾಲೀ ಜಾರೀಯಲ್ಲಿರುವ ರೂಲ್ಸನಿಂದ ನಿಬಂಧಿಸಲ್ಪಟ್ಟಿರುವ ಮೇರೆ ಲೈಸೆನ್ಸದಾರನ ಜಿಂದಗಿ ಜಫ್ತೀ ಹರಾಜಿನಿಂದ ವಸೂಲಾಗತಕ್ಕದ್ದಾಗಿರುತ್ತೆ. ಲೈಸೆನ್ಸದಾರ ಭರವಸೆ ಕೊಟ್ಟಿರುವ ಸಾಲೀಯಾನಾ ಹುಟ್ಟುವಳಿ ಮೊಬಲಗು 12 ಮಾಹೇವಾರೀ ಪಾಯಿದೆಗಳಾಗಿ ಸದರೀ ಟ್ರೆಜರೀಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು, ಕರಾರ್ ಮಾಡಿಕೊಂಡಿರುವ ಮೊಬಲಗಿನ ಪೈಕಿ ಮಾಹೇವಾರೀ ಪಾಯಿದೇ ಮೊಬಲಗಿಗೆ ಜಾಸ್ತೀಯಾಗಿ ಷರಾಬ್ ವೊಂದು ತಿಂಗಳಲ್ಲಿ ಕೊಡಲ್ಪಟ್ಟ ಪಕ್ಷಕ್ಕೆ ಹಾಗೆ ಜಾಸ್ತೀಯಾಗಿ ಕೊಡಲ್ಪಟ್ಟ ಪ್ರತಿ ಗ್ಯಾಲನ್ನಿಗೂ ಲೈಸೆನ್ಸದಾರನು ಸಾಯರ್ ತೀರ್ವೆಯೂ ಕೊಡತಕ್ಕದ್ದು. ಕಡಮೆಯಾಗಿ ಷರಾಬ್ ಕೊಡಲ್ಪಟ್ಟ ತಿಂಗಳುಗಳಲ್ಲಿ ಲೈಸೆನ್ಸದಾರನು ಮಾಹೇವಾರೀ ಕರಾರ್ ಮೊಬಲಗಿಗಿಂತ ಜಾಸ್ತೀಯಾಗಿ ಕೊಟ್ಟಿದ್ದರೆ ಅದನ್ನು ಪಯೋಗಿಸಿಕ್ಕೊಳ್ಳುವ ಬಾಧ್ಯತೆಯನ್ನು ಹೊಂದತಕ್ಕದ್ದಲ್ಲದೆ ಪ್ರತಿ ಸಂವತ್ಸರ ಆಖೈರಿನಲ್ಲಿ ಒಟ್ಟು ಬಾಕೀ ತೇಲಿಸತಕ್ಕದ್ದು. ಆಗ ಲೈಸೆನ್ಸದಾರನು ಗವರ್ನಮೆಂಟಿಗೆ ವೊಡಂಬಡಿಕೆ ಮಾಡಿಕೊಂಡ ಮಿನಿಮಂ ಮೊಬಲಗುನಿಂದ ಯಷ್ಟು ಗ್ಯಾಲನ್‌ಗಳ ಮೇಲೆ ತೀರ್ವೆ ಸಾಕಾಗಿರುತ್ತೋ ಅಷ್ಟು ಗ್ಯಾಲನ್‌ಗಳ ಸಂಖ್ಯೆಗೆ ಜಾಸ್ತೀಯಾಗಿ ಒಂದು ಸಂವತ್ಸರದಲ್ಲಿ ಕೊಡಲ್ಪಟ್ಟ ಗ್ಯಾಲನ್‌ಗಳ ಸಂಖ್ಯೆಗೆ ತೀರ್ವೆಯನ್ನು ತೆರತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಕಾಲಗಳ ಪೈಕೀ ಯಾವ ಕಾಲದಲ್ಲಾಗಲಿ ಕೊಡತಕ್ಕ ತೀರ್ವೆ ಮೊಬಲಗ್‌ಗಳು ಮೇಲೆ ಕಂಡ ದಾಮಾಷಾಯಿ ಗಿಂತಲೂ ಕಮ್ಮೀ ಬಿದ್ದಲ್ಲಿ ಕಮ್ಮೀಬಿದ್ದ ಮೊಬಲಗ್ ಕೂಡ್ಲೇ ಭರ್ತೀಮಾಡಲ್ಪಡತಕ್ಕದ್ದು. ಮತ್ತು ಕೊಡಬೇಕಾದ ಅಂತಾ ಪ್ರತಿ ಮೊಬಲಗ್ ಬಾಕೀ ಆದಾಗ ಮೊಬಲಗನ್ನು ಪಾವತೀ ಮಾಡಲಿಕ್ಕೆ ತಪ್ಪಿದ ಪಕ್ಷದಲ್ಲಿ ಹಾಗೆ ಆಗುವ ಬಾಕೀ ಮೊಬಲಗಿಗೆ ಸಾಲ್ 1ಕ್ಕೆ ಶೇಕಡಾ 6 ರೂಪಾಯಿ ಪ್ರಕಾರ ಬಡ್ಡೀ ಕಟ್ಟಲ್ಪಡತಕ್ಕದ್ದು. ಮೊಬಲಗ್ ಪಾವತೀ ಮಾಡಲಿಕ್ಕೆ ಮತ್ತು ತಪ್ಪುವ ಪಕ್ಷದಲ್ಲಿ ಡಿಸ್ಟಿಲ್‌ದಾರನ ಲೈಸೆನ್ಸ್ ರದ್ದಾಗುತ್ತೆಂದು ಪ್ರಸಿದ್ಧವಾಗಿ ತಿಳಿಸಲಿಕ್ಕೂ, ಮತ್ತು ನಿಂತಿರುವ ವಿಶಿಷ್ಟಾ ಬಾಕಿಯನ್ನೂ, ಡಿಪಾಜಿಟ್ ಯಿಟ್ಟಿರತಕ್ಕ ಮೊಬಲಗಗಳನ್ನು ಸರ್ಕಾರಕ್ಕೆ ಸೇರಿಸಿ ಕೊಳ್ಳುವ ಮೂಲಕ ಮತ್ತು ಆವಶ್ಯಕವಿದ್ದಲ್ಲಿ ಲ್ಯಾಂಡ್ ರೆವಿನ್ಯೂ ವಸೂಲೀ ಬಗ್ಯೆ ಹಾಲೀ ಜಾರೀಲಿರುವ ರೂಲ್ಸ ಪ್ರಕಾರ ಸರಕಾರದ ಹಣ ಕೊಡದೆ ತಪ್ಪಿದವನ ಜಿಂದಗಿ ಜಫ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳತಕ್ಕ ಬಗ್ಯೆ ಕ್ರಮವನ್ನು ವಹಿಸಲಿಕ್ಕೂ, ಚೀಫ್ ಕಮ್ಮಿಷನರವರ ಅಪ್ಪಣೇನಿಸಿ ಸೂಪರ್ರಿಟೆಂಡೆಂಟರವರ ಯಖ್ತ್ಯಾರಿಯಲ್ಲಿರತಕ್ಕದ್ದು.

(3.) ಡಿಸ್ಟಿಲ್‌ದಾರನು ಫ್ರೆಜರ್‌ಪೇಟೆಯಲ್ಲಿರುವ ಸದರ್ ಡಿಸ್ಟಿಲೇರಿಯ ಆವರಣದೊಳಗಾಗಲಿ, ಸೂಪರ್ರಿಟೆಂಡೆಂಟರವರಿಂದ ಮಂಜೂರ್ಮಾಡಲ್ಪಡುವ ಮತ್ಯಾವ ಇತರ ಸ್ಥಳದಲ್ಲಾಗಲಿ ಆರಕ್ ಸಾರಾಯಿಯನ್ನು ತಯಾರ್ಮಾಡುವಂತೆ ಮತ್ತು ಸೂಪರ್ರಿಟೆಂಡೆಂಟರವರಿಂದ ಗೊತ್ತು ಮಾಡಲ್ಪಡುವ ಸ್ಥಳಗಳಲ್ಲಿ ಒಟ್ಟು ಬಿಕರೀ ಡಿಪೋಗಳನ್ನು ಏರ್ಪಡಿಸುವಂತೆ ನೇಮಿಸಲ್ಪಡತಕ್ಕದ್ದು. ಡಿಸ್ಟಿಲೇರಿಯು ಮತ್ತು ಡಿಪೋಗಳು ಸೂಪರ್ರಿಟೆಂಡೆಂಟರವರಾಗಲಿ, ಆ ಬಗ್ಯೆ ಅವರಿಂದ ಕಳುಹಿಸಲ್ಪಡತಕ್ಕ ಯಾವ ತಾಬೇದಾರಿ ಉದ್ಯೋಗಸ್ಥನಾಗಲಿ ಹೋಗಿ ನೋಡಲಿಕ್ಕೆ ಯಲ್ಲ ಕಾಲಗಳಲ್ಲಿಯೂ, ಖುಲ್ಲಾ ಇರತಕ್ಕದ್ದು. ಚೀಫ್‌ಕಮ್ಮಿಷನರವರು ಆವಶ್ಯಕವೆಂದೆಣಿಸುವ ಪೊಲೀಸ್ ಪಹರೆಗಳು ಮತ್ತು ಆಳತೆಸಿಬ್ಬಂದಿ ಇವುಗಳಿಗಾಗಿ ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು, ಮಾಹೇಯಾನಾ ಪ್ರತಿ ತಿಂಗಳ ಗುರ್ರೇತಾರೀಖಿನಲ್ಲಿ 153 ರೂಪಾಯಿಗಳನ್ನು ಖಜಾನೇಯಲ್ಲಿ ಪಾವತೀಮಾಡತಕ್ಕದ್ದು. ಡಿಸ್ಟಿಲ್‌ದಾರನು ಮತ್ತು ನಿಯಮಿಸಲ್ಪಡತಕ್ಕದ್ದೇನಂದರೆ, ಸದರೀಯವನು ಡಿಸ್ಟಿಲೇರಿಕಟ್ಟಡವನ್ನು ಉಪಯೋಗಿಸುವ ಬಗ್ಯೆ ಮಾಹೇಯಾನಾ ಸರ್ಕಾರಕ್ಕೆ 25 ರೂಪಾಯಿಗಳನ್ನು ಕೊಡತಕ್ಕದ್ದಲ್ಲದೆ ಹಾಲೀ ಇರತಕ್ಕ ಡಿಸ್ಟಿಲ್‌ದಾರನಿಗೆ, ಡಿಸ್ಟಿಲೇರಿ ಆವರಣದೊಳಗೆ, ಬೆಲ್ಲ, ತುಮ್ಮಿಚಕ್ಕೆ ಮುಂತಾದ್ದು ದಾ

---

* ಕೊಡಗಿನಲ್ಲಿ ಇಂಪಿರಿಯಲ್ ಗ್ಯಾಲನ್ ವೊಂದಕ್ಕೆ 5 ಶೀಷೆಗಳು.

ಸ್ತಾರ್ ಇಡುವ ಬಗ್ಯೆ ಅವರು ಕಟ್ಟ ಇರುವ ಕೋಠೀಗಳಿಗಾಗಿ ವೊಕರರಾಗುವ ಈ ಷು ವೊಬಲಗ್ ಸಹ ಕೊಡತಕ್ಕದ್ದು. ಯಾವ ಆರಕ್ ಸಾರಾಯಿಆಗಲಿ ಆಳಿಯುವಬಗ್ಯಾ ಪರೀಕ್ಷಿಸುವಬಗ್ಯಾ ವೊಕರರ್ರಾಡಲ್ಪಟ್ಟಿರುವ ಉದ್ಯೋಗಸ್ಥನಿಂದ ಅಳೆಯಲ್ಪಟ್ಟು ಪರೀಕ್ಷಿಸಲ್ಪಟ್ಟ ಹೊರ್ತು ಡಿಸ್ಟಿಲೇರಿಯ ಆಚೆ ತೆಗದುಕೊಂಡು ಹೋಗಲ್ಪಡಕೂಡದು.

(4.) ಸ್ಪಿರಿಟ್‌ಗಳನ್ನು ಕೊಡುವ ವಿಷಯದಲ್ಲಿ, ಇದರಡಿ ಬರು ನಿಬಂಧನೆಗಳು ಆಚರಿಸಲ್ಪಡತಕ್ಕವು.

(*a*.) ಯಾವ ಸ್ಪಿರಿಟ್ಟಾಗಲಿ, 19 ಡಿಗ್ರಿ ಅಂಡರ್‌ಪ್ರೂಫಿಗೆ ಹೆಚ್ಚಾದ ಬಲವುಳ್ಳದ್ದಾಗಿ ಸಾಧಾರಣವಾಗಿ ಕೊಡಲ್ಪಡಕೂಡದು. ಆದರೆ ಮೇಲೆ ನಮೂದಿಸಲ್ಪಟ್ಟ ಬಲಕಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಕೊಡಲು ಡಿಸ್ಟಿಲ್‌ದಾರನು ಅಪೇಕ್ಷಿಸಿದರೆ ಹಾಂಗೆ ಕೊಡಲ್ಪಟ್ಟ ಸ್ಪಿರಿಟ್, ಪ್ರೂಫಿಗಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಇರಕೂಡದು.

(*b*.) 19 ಡಿಗ್ರಿ ಅಂ॥ ಪ್ರೂಫಿಗೆ ಮೇಲ್ಪಟ್ಟ ಬಲವುಳ್ಳದ್ದಾಗಿ ಕೊಡಲ್ಪಡುವ ದರೋಬಸ್ತು ಸಾರಾಯಿಗೂ ಪ್ರೂಪ್‌ಮೇಲೆ ವಿಧಿಸಲ್ಪಟ್ಟಿರುವ ತೀರ್ವೆ ಕಟ್ಟಲ್ಪಡತಕ್ಕದ್ದು.

(*c*.) 19 ಡಿಗ್ರಿ ಅಂ॥ ಪ್ರೂಫಿಗೆ ಕಡಮೆಯಾಗಿ ಇರುವ ಯಾವ ಸ್ಪಿರಿಟ್ಟಾಗಲಿ, ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು.

(5.) ಬಟ್ಟೀ ಇಳಿಸುವಲ್ಲಿ ಉಪಯೋಗಿಸಲ್ಪಡುವ ಪದಾರ್ಥಗಳು ಸೂಪರಿಂಟೆಂಡೆಂಟರವರಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮತ್ತು ಅವು ಅತ್ಯುತ್ತಮವಾಗಿರತಕ್ಕದ್ದು. ಬಟ್ಟೀ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳೂ ಉಪಯೋಗಿಸಲ್ಪಡಕೂಡದು, ಅಥವಾ ಸಾರಾಯಿ ತಯಾರಾದ ಬಳಿಕಲೂ ಅದರಲ್ಲಿ ಹಾಕಲ್ಪಡಕೂಡದು.

(6.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ತನ್ನ ಜಮಾಖರ್ಚುಗಳಿಗೂ, ತಯಾರ್ರಾದಲ್ಪಟ್ಟ, ಕೊಡಲ್ಪಟ್ಟ, ಮತ್ತು ಪ್ರತಿ ಡಿಸ್ಟಿಲೇರಿ ವ ಡಿಪೋಯಲ್ಲಿ ತೆಗದುಕೊಳ್ಳಲ್ಪಟ್ಟ ಸ್ಪಿರಿಟ್‌ಗಳ ತೇದಾದ್ ವ ಬಲ ಇವುಗಳಿಗೂ, ಕರಾರ್ ವಾಕು ಲೆಖ್ಖಗಳನ್ನು ಇಡತಕ್ಕದ್ದಲ್ಲದೆ ಸೂಪರಿಂಟೆಂಡೆಂಟರಾಗಲಿ, ಅವರು ತನಿಖೀಬಗ್ಯೆ ಕಳುಹಿಸುವ ಯಾವ ತಾಪೇದಾರರಾಗಲಿ, ಆ ಲೆಖ್ಖಗಳನ್ನು ತನಖೀ ಮಾಡುವ ಬಗ್ಯೆ ಹಾಜರ್ ಮಾಡಬೇಕೆಂದು ತಿಳಿಸಿದಾಗೆಲ್ಲ ಹಾಜರ್ರಾಡತಕ್ಕದ್ದು.

(7.) ಡಿಸ್ಟಿಲ್‌ದಾರನು ವೊಂದು ತಿಂಗಳಿಗೆ ಬೇಕಾದ ಸಾರಾಯಿಯನ್ನು ಯಾವಾಗಲೂ ದಾಸ್ತಾನ್ ಯಿಟ್ಟುಕೊಂಡಿರುವ ಬಗ್ಯೆ ಬದ್ಧನಾಗಿರತಕ್ಕದ್ದು. ಈ ಪ್ರಕಾರ 1877ನೇ ಇಸವಿ ಏಪ್ರೈಲ್ ಗುರ್ರೇತಾರೀಖಿನಲ್ಲಿ ಯಿಟ್ಟುಕೊಂಡಿರತಕ್ಕ ಬಗ್ಯೆ ಆ ತಾರೀಖಿಗೆ ವೊದಲೇ ಬಟ್ಟೀ ಯಿಳಿಸಲು ಷುರೂ ಮಾಡುವದಕ್ಕೆ ಅವನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಪರಂತು ಹಾಂಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ 1877ನೇ ಇಸವೀ ಏಪ್ರೈಲ್ ಗುರ್ರೇ ತಾರೀಖಿಗೆ ಪೂರ್ವ ಮಾರಲ್ಪಡಕೂಡದು. ಅಥವಾ ಲೈಸೆನ್ಸ್‌ದಾರನ ವ ಆತನ ನೌಕರರ ಸ್ವಾಧೀನದಿಂದ ಆಚೆ ಹೋಗಕೂಡದು

(8.) ಡಿಸ್ಟಿಲ್‌ದಾರನು ದರೋಬಸ್ತು ಕಸಬೆಗಳಲ್ಲಿಯೂ, ಮತ್ತು ದೊಡ್ಡ ದೊಡ್ಡ ಷಹರ್‌ಗಳಲ್ಲಿಯೂ, ವೊಟ್ಟು ಬಿಕರೀ ಅಂಗಡಿಗಳನ್ನು ಯಿಟುಕೊಳ್ಳತಕ್ಕ ಬಗ್ಗೆ ಆತನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಸದರೀ ಕಸಬಾ ಷಹರ್‌ಗಳ ವೊಂದು ಪಟ್ಟಿಯು, ಅರ್ಜೀ ಬರದುಕೊಂಡರೆ ಕೊಡಲ್ಪಡುತ್ತೆ.

(9.) ದರೋಬಸ್ತು ಚಿಲ್ಲರೇ ಬಿಕರೀದಾರುಗಳೂ ಸ್ಪಿರಿಟ್‌ಗಳನ್ನು ಕ್ಲುಪ್ತಪಡಿಸಲ್ಪಟ್ಟ ಕ್ರಯಕ್ಕೆ ಮತ್ತು ಈ ಕೆಳಗೆ 14ನೇ ಕ್ಲಾಜ್‌ನಲ್ಲಿ ನಮೂದಿಸಲ್ಪಟ್ಟ ಬಲಗಳುಳ್ಳದ್ದಾಗಿ ಮಾರುತ್ತಿರಲಿಕ್ಕೂ ಮತ್ತು ಯಾವ ವೊಟ್ಟು ಬಿಕರೀ ಅಂಗಡಿಯಿಂದ ಅವರು ತಮ್ಮ ಸಾರಾಯಿಯನ್ನು ಪಡೆಯತಕ್ಕದ್ದೆಂದು ಅವರಿಗೆ ಡಿಸ್ಟಿಲ್‌ದಾರನಿಂದ ತಿಳಿಸಲ್ಪಟ್ಟಿರುತ್ತೋ ಅಂತಾ ವೊಟ್ಟು ಬಿಕರೀ ಅಂಗಡಿಯಿಂದ ಪಡೆಯುತ್ತಾ ಬರಲಿಕ್ಕು ಕರಾರ್ ಬರೆದುಕೊಡತಕ್ಕದ್ದೆಂತಲೂ ಅವರ ಅಂಗಡಿಗಳಲ್ಲಿ ಯಾವ ಅಕ್ರಮಗಳೂ ನಡೆಯದೆ ಯಿರತಕ್ಕದ್ದನ್ನು ನೋಡತಕ್ಕ ಬಗ್ಯೆ ಡಿಸ್ಟಿಲ್‌ದಾರನಿಗಾಗಲಿ, ಆತನ ಮುತಾಲೀಕನಿಗಾಗಲಿ, ಅವರ ಅಂಗಡಿಗಳಿಗೆ ಧಾರಾಳವಾಗಿ ಹೋಗುವದಕ್ಕೆ ಆಸ್ಪದ ಕೊಡತಕ್ಕದ್ದೆಂತಲೂ ಸಹಾ ತಾಕೀದ್ ಮಾಡಲ್ಪಡತಕ್ಕದ್ದು ಮತ್ತು ಸದರೀ ಚಿಲ್ಲರೇ ಬಿಕರೀದಾರುಗಳು ತಮ್ಮಿಂದ ದಿನವಹಿ ತರಲ್ಪಟ್ಟ ಸಾರಾಯಿ ಯ ತೇದಾದ್ ವ ಬಲ ಯಿವುಗಳಿಗೂ, ಮತ್ತು ಅದಕ್ಕೆ ಕಟ್ಟಲ್ಪಟ್ಟ ಖರೀದಿಗೂ ಲೆಖ್ಖಗಳನ್ನು ಯಿಡತಕ್ಕದ್ದಲ್ಲದೆ ಡಿಸ್ಟಿಲ್‌ದಾರನಾಗಲಿ, ಆತನ ಮುತಾಲೀಕನಾಗಲಿ, ಸದರೀ ಲೆಖ್ಖಗಳನ್ನು ತನಖೀ ಮಾಡಲಿಕ್ಕೆ ಅಧಿಕಾರ ಹೊಂದಿರುವ ಯಾವ ಗವರ್ನ್‌ಮೆಂಟ್ ಉದ್ಯೋಗಸ್ಥನಾಗಲಿ, ಅಪೇಕ್ಷಿಸಿದಾಗ ಅವರ ಲೆಖ್ಖಗಳನ್ನು ಅವರುಗಳು ನೋಡಲಿಕ್ಕೆ ಹಾಜರ್ರಾಡತಕ್ಕದ್ದು.

(10.) ಕೊಡಗಿನಲ್ಲಿರುವ ಚಿಲ್ಲರೇ ಬಿಕರೀ ಅಂಗಡಿಗಳ ಬಗ್ಯೆ ಮಾಮೂಲ್ ಲೈಸೆನ್ಸ್‌ಗಳು ಸೂಪ್ರಿಂಟೆಂಡೆಂಟರಿಂದ ಕೊಡಲ್ಪಡತಕ್ಕವು.

(11.) ಸಾರಾಯಿಗೆ ಸಾಟಿಯಾಗಿ ಯಾ ಬತ್ತೆಯಾಗಿ ಧಾನ್ಯವಾಗಲಿ, ವಸ್ತುಗಳಾಗಲಿ, ಆಭರಣಗಳಾಗಲಿ, ವುಡುವ ಬಟ್ಟೆಗಳಾಗಲಿ, ಯಿತರ ಮಾಲ್ ಆಗಲಿ, ತೆಗದುಕೊಳ್ಳಕೂಡದು. ಲೈಸೆನ್ಸ್ ಹೊಂದಿದ ಡಿಸ್ಟಿಲ್‌ಧಾರನು ಡಿಸ್ಟಿಲೇರಿಯಲ್ಲಾಗಲಿ, ವೊಟ್ಟು ಬಿಕರೀ ಅಂಗಡಿಗಳಲ್ಲಾಗಲಿ, ಸಾರಾಯಿಯನ್ನು ಚಿಲ್ಲರೆಯಾಗಿ ಮಾರಕೂಡದು.

(12.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ಡಿಸ್ಟಿಲೇರಿಗಳನ್ನು ಯಾ ವೊಟ್ಟು ಬಿಕರೀ ಅಂಗಡಿಗಳನ್ನು ಯಾ ಡಿಪೋಗಳನ್ನು ಮೇಲ್‌ವಿಚಾರಣೆ ಮಾಡತಕ್ಕ ಬಗ್ಯೆ ತಾನು ನೌಕರಿಗೆ ಯಿಟ್ಟುಕೊಳ್ಳತಕ್ಕ ಪ್ರತಿ ಮನುಷ್ಯನೂ, ಹಾಂಗೆ ನೌಕರಿ ಪಡೆಯುವದಕ್ಕೆ ಮುಂದೆ, ಮೇಲೆ ನಮೂದಿಸಲ್ಪಟ್ಟ ಷರತ್ತುಗಳಿಗೆ ಅನುಗುಣವಾಗಿರುವ ಕರಾರು ಬರದುಕೊಡುವಂತೆ ಮಾಡಿಸತಕ್ಕದು, ಮತ್ತು ಅಂತಾ ಕರಾರುಗಳನ್ನು 1877ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯಿತು ವೊಂದು ತಿಂಗಳೊಳಗಾಗಿ ಸೂಪರಿಂಟೆಂಡೆಂಟ್ ರವರಲ್ಲಿ ಡಿಪಾಜಿಟ್ ಇಡತಕ್ಕದ್ದು. ಯಿದಲ್ಲದೆ ಲೈಸೆನ್ಸ್‌ದಾರನು, ಆರೆಕ್‌ಸಾರಾಯಿ ತಯಾರ್‌ಮಾಡುವ ಬಗ್ಯೆ, ತೆಗದುಕೊಂಡು ಹೋಗುವ ಬಗ್ಯೆ, ಬಿಕರೀ ಮಾಡುವಬಗ್ಯೆ, ತನ್ನಿಂದ ಇಡಲ್ಪಟ್ಟ ದರೋಬಸ್ತು ಜನಗಳು ತಾವು ತಾವು ಬರದುಕೊಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳ ಪ್ರಕಾರ ಖಂಡಿತವಾಗಿ ನಡಿಯತಕ್ಕ ಬಗ್ಯೆ ಸರ್ವಪ್ರಯತ್ನವೂ ಮಾಡತಕ್ಕದ್ದು ಆ ನಿಬಂಧನೆಗಳನ್ನು ಉಲ್ಲಂಘನೆ ಮಾಡಿದ್ದಾಗಿ ತನ್ನ ತಿಳುವಳಿಕೆಗೆ ಬಂದರೆ, ಆ ತಕಸೀರಿಗೆ ವಿಧಿಸಲ್ಪಟ್ಟಿರುವ ದಂಡನೆಯನ್ನು ಕೊಡತಕ್ಕ ಬಗ್ಯೆ ಆಸಂಗತಿಯನ್ನು ಸೂಪರಿಂಟೆಂಡೆಂಟ್‌ರವರ ಜಾಹೀರಾತಿಗೆ ತರತಕ್ಕದ್ದು; ಮತ್ತು ಆತಕಸೀರ್‌ವಂದನನ್ನು ನವಕರಿಯಿಂದ ಬರತರ್ಫ್ ಸಹಾ ಮಾಡತಕ್ಕದ್ದು.

(13.) "ಡಿಸ್ಟಿಲ್‌ದಾರನು ಚೀಫ್ ಕಮ್ಮಿಷ"ನ್ನರವರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಯಾವಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯತಕ್ಕದ್ದೆಂದು ತಾಕೀದ್ ಮಾಡಲ್ಪಡತಕ್ಕದ್ದು, ಮತ್ತು ಸಾರಾಯಿ ತಯಾರ್‌ಮಾಡುವ ಬಗ್ಯೆ ತೆಗದುಕೊಂಡು ಹೋಗುವ ಬಗ್ಯೆ ಯಾ ಬಿಕರೀ ಮಾಡುವ ಬಗ್ಯೆ ತಾನು ನವಕರೀ ಯಿಟ್ಟುಕೊಂಡಿರುವ ಮನುಷ್ಯರು ಸಹ ಸದರೀ ನಿಬಂಧನೆಗಳಿಗೆ ಅನುಗುಣವಾಗಿ ನಡಿಯುವಂತೆ ಮಾಡಿಸತಕ್ಕದ್ದು.

(14.) ವೊಟ್ಟು ಬಿಕರೀ ವ ಚಿಲ್ಲರೆ ಅಂಗಡಿಗಳಲ್ಲಿ (ಮಿಶ್ರಮಾಡದೆ ವ ತೆಳುವು ಮಾಡದೆ) ಬಿಕರೀ ಮಾಡತಕ್ಕ ಸಾರಾಯಿಯ ನಿರ್ಕುಗಳು ಈ ಕೆಳಗೆ ಬರುವ ಪಟ್ಟೀ ಪ್ರಕಾರ ಯಿರತಕ್ಕದ್ದು.

ಸ್ಥಳ.		ಪ್ರೂಫ್.		19ಡಿಗ್ರಿ ಅಂಡರ್ ಪ್ರೂಫ್.	
		ಪ್ರತಿ ಗ್ಯಾಲನ್‌ಗೆ.	ಪ್ರತಿ ಡ್ರಾಂಗೆ.	ಪ್ರತಿ ಗ್ಯಾಲನ್‌ಗೆ.	ಪ್ರತಿ ಡ್ರಾಂಗೆ.
ಷಹರ್	ಒಟ್ಟು ಬಿಕ್ರಿ	4-10-0	..	3—12—0	
	ಚಿಲ್ಲರೇ ಬಿಕ್ರಿ			3—15—4	0-1-7
ಗಾವ್‌ಗಾನೆಗಳು	ಒಟ್ಟು ಬಿಕ್ರಿ	4-10-0	..	3—12—0	
	ಚಿಲ್ಲರೇ ಬಿಕ್ರಿ			4— 2—8	0-1-8

(15.) ಲೈಸೆನ್ಸು ಹೊಂದಿದ ಡಿಸ್ಟಿಲೇರಿ ದಾರನಿಂದ ಅಥವಾ ಅವನ ಮುದ್ದತ್ತಿನಮೇಲೆ ಅಂತರಂಗವಾದ ಅವನ ಸಂಬಂಧದ ದೆಶೆಯಿಂದ ಷರಾಬ್ ತಯಾರಿ ಯಾ ಸಾಗಿಸೋಣ ಯಾ ಪುರೊಖ್ತು ಇಂತಾದ್ದರಲ್ಲಿ ಆತನಿಂದ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯರಿಂದಲಾಗಲಿ ಈ ಷರತ್ತು ಬಂದಿಗಳಿಗೆ ಮನಃಪೂರ್ವಕವಾದ ವುಲ್ಲಂಘನವೇನಾದರೂ ನಡಿಸಲ್ಪಟ್ಟ ಪಕ್ಷಕ್ಕೆ ಸೂಪರಿಂಟೆಂಡೆಂಟ್ ರವರು ಚೀಫ್ ಕಮ್ಮಿಷನ್ನರವರ ಮಂಜೂರಾತಿ ನಿಶಿ ಡಿಪಾಜಿಟ್‌ವೊಬಲಗು ಸರಕಾರಕ್ಕೆ ಶೇರಿಹೋಗಿರುತ್ತೆಂದು ತಿಳಿಸಲಿಕ್ಕೂ ಲೈಸೆನ್ಸ್ ರದ್ದು ಮಾಡಲಿಕ್ಕೂ ಮತ್ತು ರದ್ದಾದ ಲೈಸೆನ್ಸ್ ಹಿಡುಳೀದಾರನಿಗೆ ಲುಕ್ಸಾನುಕರವಾಗಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪುನಃ ಹರಾಜ್ ಹಾಕುವದಕ್ಕಾಗಲಿ ಸರಕಾರದ ವಿಚಾರಣೆ ಕೆಳಗೆ ತೆಗದುಕೊಳ್ಳುವದಕ್ಕಾಗಲಿ ಅಧಿಕಾರ ಪಡದಿರುತ್ತಾರೆ. ಮತ್ತು ಯಾವಸಂಗತಿವಳಗೂ ಜಮೀನು ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀಯಿರುವ ರೂಲ್ಸ್ ಅನುಸರಿಸಿ ಬಾಕೀ ವಸೂಲು ಮಾಡಲ್ಪಡತಕ್ಕದ್ದು.

VII. ಫ್ರೇಜರ್‌ಪೇಟೆ ಡಿಸ್ಟಿಲೇರಿಯಿಂದ ಕಳೆದ 5ಸಂವತ್ಸರಗಳ ವಳಗೆ ತಯಾರಾಗಿ ಕೊಡಲ್ಪಟ್ಟ ಸಾರಾಯಿಯ ಸಾಲಿಯಾನ ಸರಾಸರೀ ತೇದಾದ್ ಈಕೆಳಗೆ ತೋರಿಸಲ್ಪಡುತ್ತೆ.

		ಗ್ಯಾಲನ್‌ಗಳು.	
1871—72	..	69, 309	..
1872—73	..	70, 056	..
1873—74	..	58, 375	..
1874—75	..	54, 867	..
1875—76	..	58, 345	..

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

548

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 2, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 1ನೇ ಡಿಶಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಪ್ರೂಪ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪ್ರಿ. ಅ. ೩೨	ವಸ್ತಾದಿ ಮುನಿಯಾಜಟ್ಟಿ ..	ಕೃಷ್ಣಾಚಾರಿ ..	೨ನೇ ಡಿಶಂಬರ್
ಸ್ಪ್ರಿ. ಅ. ೬೬	ವೆಂಕಟರಮಣೈಯ ..	ತಂಮೈಯ ವಗೈರೆ ..	೫ನೇ ಡಿಟೋ
ಸ್ಪ್ರಿ. ಅ. ೩೫	ವೆಂಕಟಸುಬ್ಬೈಯ ..	ವೆಂಕಟಮ್ಮ ..	ಡಿಟೋ
ಸ್ಪ್ರಿ. ಅ. ೩೬	ಸುಬ್ಬಾಭಟ್ಟ ..	ಶೇಷಭಟ್ಟ ..	ಡಿಟೋ
ಸ್ಪ್ರಿ. ಅ. ೩೪	ಕೈದೀ ಜನಾರ್ದನ ..	..	ಡಿಟೋ
ಕ್ರಿ. ಅ. ೩೪	ರಾಮಗಿರಿ ಮಹೇಶಗಿರಿ ಗೋಸಾಯಿ ..	ವೆಂಕಟಗಿರಿ ಗೋಸಾಯಿ ..	೬ನೇ ಡಿಟೋ
ಸ್ಪ್ರಿ. ಅ. ೩೩	ಫೈಲರ್ವಾಖಾ ..	ಶೇಷಶೆಟ್ಟಿ ವಗೈರೆ ..	ಡಿಟೋ
ಸ್ಪ್ರಿ. ಅ. ೮೨	ಹನುಮಂತರಾವ್ ..	ಕುಪ್ಪಮ್ಮ ವಗೈರೆ ..	ಡಿಟೋ
ಕ್ರಿ. ಅ. ೬೬	ಕೈದಿ, ರಾಯಪ್ಪ ..	..	ಡಿಟೋ
ಕ್ರಿ. ಪಿಟಿಷನ್ ೪೬	ಕೈದಿ, ತಂಮೈಯ ..	..	ಡಿಟೋ
ಸ್ಪ್ರಿ. ಅ. ೬೯	ವೆಂಕಟರಮಣಪ್ಪಾ ವಗೈರೆ ..	ಡಾಕ್ಟರ್ ಆರ್‌ಸಾಹೆಬರು ವಗೈರೆ ..	೧೨ನೇ ಡಿಟೋ
ಸ್ಪ್ರಿ. ಅ. ೩೮	ನಾಡಿಗ ಶ್ಯಾಮಂಣ ..	ಕೇಪ್ಟನ್ ವೆನ್‌ಸಾಮರ್ನ ..	ಡಿಟೋ
ಸ್ಪ್ರಿ. ಅ. ೮೦	ನರಸಿಹ್ಮಯ್ಯ ವಗೈರ ..	ಸುಬ್ಬರಾಯ ವಗೈರೆ ..	ಡಿಟೋ
ಸ್ಪ್ರಿ. ಅ. ೩೯	ಲಿಂಗಣ್ಣಾ ..	ನಂಜೇಗೌಡ ..	೧೪ನೇ ಡಿಟೋ
ಫ್ರೂಪ್ ಸ್ಪ್ರಿ. ಅ. ೧೪	ಪುಟ್ಟಣ್ಣಾ ..	ಚನ್ನಪ್ಪಾ ..	ಡಿಟೋ
ಕೊ. ಸ್ಪ್ರಿ. ಅ. ೧೫	ನಂಜುಂಡೈಯ ..	ಮಲ್ಲಶೆಟ್ಟಿ ..	ಡಿಟೋ
ಸ್ಪ್ರಿ. ಅ. ೮೧	ಮುರಗಪ್ಪ ವಗೈರೆ ..	ಜಡಿಯಪ್ಪಾ ..	೧೯ನೇ ಡಿಟೋ
ಕೊ. ಅ. ೨ ರ॥ ನಂ. ೪	ಕಾಶೀಬಾಯಿ ವಗೈರೆ ..	ಅಬ್ದುಲ್ ಖಾದರ್ ಸಾಹೆಬ್ ..	ಡಿಟೋ.

J. D. GORDON, *Judl. Commr.*

ಫಿನಾನ್ಶಿಯಲ್ ಇಲಾಖಾ.

ತಾರೀಕ್ 22ನೇ ನವಂಬರು 1876 ಸರ್ಕ್ಯುಲರ್ ನಂಬರು 1298.

ಟ್ರೆಜರಿ ಆಫೀಸರಗಳಿಗೆ,

1876ನೇ ಇಸವಿ ಆಕ್ಟೋಬರು 26ನೇ ಮರ್ಸ್ಕಂ 260ನೇ ನಂಬರು.
1876ನೇ ಇಸವಿ ಸಪ್ಟಂಬರು 7ನೇ ಮರ್ಸ್ಕಂ 275ನೇ ನಂಬರು.

ಈಗ ಪ್ರಾಪ್ತವಾಗಿರುವ ದುರ್ಭಿಕ್ಷ ಪ್ರಯುಕ್ತ ಚೀಫ್ ಕಮ್ಮಿಷನ್ನರ್ ಸಾಹೇಬರವರಿಂದ ಮಂಜೂರ್ಮಾಡಲ್ಪಟ್ಟ ಮಾಹೆ 1ಕ್ಕೆ ಒಂದು ರೂಪಾಯಿನ ಜಾಸ್ತೀ ಅಲೌವೆನ್ಸ್ ಕೊಡಲು ಅಮಲ್ದಾರ್ರುಗಳು ನಿರಾಕರಿಸಿರುತ್ತಾರೆಂದು ತಮ್ಮ ಇಲಾಖೆಯ ಅನೇಕ ನವುಕರ ಮಾನೇರು ತಮಿಗೆ ಫಿರ್ಯಾದು ಬರದುಕೊಂಡಿರುವದಾಗಿ ಸರಕಾರ ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರವರು ತಿಳಿಯಪಡಿಸಿರುವದ್ದರಿಂದ ಮೈಸೂರು ಸೀಮೆಯ ಡಿಪ್ಯುಟಿ ಅಕೌಂಟೆಂಟ್ ಜನರಲ್ಯವರು ಕೋರುವದೇನಂದರೆ. ಸರಕಾರ ವಿದ್ಯಾಭ್ಯಾಸದ ಇಲಾಖಾ ಕಾಯಂಸಿಬ್ಬಂದಿಗಳಿಗೆ ದಾಖಲಾದ ಮತ್ತು ಮಾಹೇಯಾನಾ 15 ರೂಪಾಯಿಗಳಿಗೆ ಮೀರದ ತಲಬುವುಳ್ಳ ದರೋಬಸ್ತು ನವುಕರ ಮಾನೇರುಗಳಿಗೂ ಈ ಮಾರ್ಜಿನ್ನಲ್ಲಿ ಕಾಣಿಸಲ್ಪಡುವ ಚೀಫ್ ಕಮ್ಮಿಷನ್ನರ್ ಸಾಹೇಬರವರ ಇಸ್ತಿಹಾರಿನಲ್ಲಿ ಮಂಜೂರ್ಮಾಡಲ್ಪಟ್ಟ ಅಲೌವೆನ್ಸ್ ಮಾಹೇ ಒಂದಕ್ಕೆ ಒಂದು ರೂಪಾಯಿ ಮೇರೆ ಡಿಸ್ಟ್ರಿಕ್ಟು ವ ತಾಲ್ಲೂಕು ಟ್ರೆಜರೀ ಆಫಿಸರಗಳು ಬಟವಾಡೆ ಮಾಡತಕ್ಕದು.

ಈ ಅಲೌವೆನ್ಸ್ ಮೊಬಲಗ್ ಶಿಬ್ಬಂದಿ ಬರಾವದು ಬಿಲ್ಲಗಳ ಅಡೀಯಲ್ಲಿ "——ನೌಕರ ಮಾನೇರುಗಳಿಗೆ ವೊಂದು ರೂಪಾಯಿ ಪ್ರಕಾರ ದುರ್ಭಿಕ್ಷ ಕಾಲದ ಭತ್ಯೆ" ಯಂಬದಾಗಿ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು.

H. HUDSON,
Dy. Acctt. General in Mysore.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟಿ ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟನಿಂದ.

ತಾರೀಖು 14ನೇ ನವಂಬರ್ 1876.

ಇದರಿಂದ ತಿಳಿಯಪಡಿಸುವದೇನಂದರೆ,—ಹಳೆ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ಅಂಶದಲ್ಲಿ ವುಂಟಾಗಿರುವ ರೂಲ್ಸ್ ಅನುಸಾರವಾಗಿ 1870ನೇ ಇಸವಿ ಜನವರೀ ಗುರ್ರೇ ಲಗಾಯತು ಅದೇ ಇಸವಿ ಡಿಶಂಬರ್ 31ನೇ ತಾರೀಖು ವರಿಗೆ ಅರಿಜನಾಲ್ ಸ್ಮಾಲ್ಕಾಜ್ ಅಮಲ್ಜಾರೀ ಯಿತರ ಮಿಸಲೇನಿಯಸ್ ಮೊಕದ್ದಮೆಗಳಲ್ಲಿ ವ ನಡವಳಿತಗಳಲ್ಲಿ ಕಕ್ಷಿಗಾರರಿಂದ ದಾಖಲ್ ಮಾಡಲ್ಪಟ್ಟ ದರೋಬಸ್ತು ದಸ್ತೈವಜುಗಳು, ಸಾಧನಗಳು, ಲೆಖ್ಖಗಳು, ಯಿತರ ಕಾಗದಗಳು—1877ನೇ ಇಸವಿ ಮಾರ್ಚಿ 31ನೇ ತಾರೀಖಿನಲ್ಲಿ ನಾಶ ಮಾಡಲ್ಪಡುವವು.

ಮೇಲೆ ತಿಳಿಸಲ್ಪಟ್ಟ ಮೊಕದ್ದಮೆಗಳಲ್ಲಿ ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತೈವಜುಗಳನ್ನಾಗಲಿ ವಾಪಸ್ ತೆಗದುಕೊಳ್ಳತಕ್ಕ ಖಾಯಿಷ್ ವುಳ್ಳ ಕಕ್ಷಿಗಾರ್ರು ಮೇಲೆ ನಮೂದಿಸಲ್ಪಟ್ಟ ತಾರೀಖಿಗೆ ಮಾತ್ರವೇ ಕೋರ್ಟು ದಿನಗಳಲ್ಲಿ ಮಧ್ಯಾನ್ಹ 11 ಘಂಟೇ ಲಗಾಯತು 4 ಘಂಟೆ ವಳಗಾಗಿ ಕೋರ್ಟಗೆ ತಿಳಿ ಪಡಿಸತಕ್ಕದ್ದು.

J. LACEY, B. L.,
Judicial Assistant Commissioner.

Notice of an application by Virnarjaiya for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ ಡೆಪ್ಯುಟಿ ಕಮ್ಮಿಷನರವರ ಕೋರ್ಟನಿಂದ.

ಸರ್ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ 83.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮಾಗಡೀ ತಾಲ್ಲೂಕು ತಾವರೆಕೆರೆ ಹೋಬಳಿ ಪೈಕಿ ಕಾಯಂಗುತ್ತಾ ಯಲಚಿಗುಪ್ಪೆ ಗ್ರಾಮದಲ್ಲಿ ಯಿರುವ ವೀರನಂಜೈಯನು ತನ್ನ ತಂದೆ ಚನ್ನಬಸವೇಗೌಡನ ಲೇಣೆ 500 ರೂಪಾಯಿಗಳನ್ನ ಬರೆ ಮಾಡಿಕೊಳ್ಳತಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೆ

ಸನ 1876ನೇ ಇಸವಿ ಡಿಶಂಬರ ತಿಂಗಳ, 8ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 14ನೇ ಮಾಹೆ ನವಂಬರ 1876ನೇ ಇಸವಿ.

Notice of an application by Ramanna for a certificate under Act XXVII of 1860.

1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ 84.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಮನೆವಾರ್ತೆ ಪೇಟೇಯಲ್ಲಿ ಯಿರುವ ಕುರುವಿನ ಚಿಕ್ಕ ಗುಡಪ್ಪನ ಮಗ ರಾಮಣ್ಣನು ತನ್ನ ತನ್ನ ಮರಿಯಪ್ಪನ ಲೇಣೆ 500 ರೂಪಾಯಿಗಳನ್ನ ಬರಮಾಡಿಕೊಳ್ಳತಕ್ಕ ಬಗ್ಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಶನ 1876ನೇ ಇಸವಿ ಡಿಶಂಬರ ತಿಂಗಳು 18ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕುವಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

Notice of an application by Timmarayappa for a certificate under Act XXVII of 1860.

1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 85.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ದೊಡ್ಡ ಬಳ್ಳಾಪುರ ತಾಲ್ಲೂಕು ಸರ್ವಮಾನ್ಯ ಹನಿಯೂರು ಗ್ರಾಮದಲ್ಲಿ ಯಿರುವ ತಿಮ್ಮರಾಯಪ್ಪನು ತನ್ನ ತಂದೆ ದೊಡ ಮರೇಗೌಡನ ಲೇಣೆ 800 ರೂಪಾಯಿಗಳನ್ನ ಬರಮಾಡಿಕೊಳ್ಳತಕ್ಕ ಬಗ್ಗೆ ಸನ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಶನ 1876ನೇ ಇಸವಿ ಡಿಶಂಬರ ತಿಂಗಳು 14ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕುವಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

ಬತಾರೀಖು 15ನೇ ಮಾಹೆ ನವಂಬರ 1876ನೇ ಇಸವೀ ಮೊಕ್ಕಾಂ ಬೆಂಗಳೂರು.

L. RICKETTS,
Offg. Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ಸಕಲಜನಗಳಿಗೂ ತಿಳಿಯುವಬಗ್ಗೆ ಇದರಿಂದ ತಿಳಿಸಲ್ಪಡುವದೇನಂದರೆ,—ಫಾರೆಸ್ಟು ಯಿಲಾಖೆಗೆ ಸೇರಿಶಿದ ಜಂಗ್ಲೀಗಳು ಶಿವಾಯಿ ತುಮಕೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಆರಗಿನ ಕಂಟ್ರಾಕ್ಟು 1877—78—1878—79—1879-80 1880—81 ಮತ್ತು 1881—82ನೇ ಇಸವಿಗಳಿಗೆ ಅಂದರೆ 1877ನೇ ಏಪ್ರೆಲ್ 1ನೇ ಮರ್ಕುಂ ಲಗಾಯಿತು 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಡದರಖಾಸ್ತುದಾರ್ರಿಗೆ ಹರಾಜು ಮೂಲಕ 1877ನೇ ಮಾರ್ಚಿ 15ನೇ ಮರ್ಕುಂ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದುವರುಷಗಳ ವರಿಗೆ ಆಯಾ ವರುಷದ ಚಡದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ಮೇಲೆ ಕರ್ರೆನ್ಸಿ ನೋಟುಗಳು ಯಾ ನಗದು ಹಣ 6 ಖಿಸ್ತುಗಳಿಗೆ ಯಾ ಮಾಹೇವಾರೀ ಯಿನ್ಸ್ಟಾಲ್ ಮೇಂಟುಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲಿಯಾನಾ ದರಖಾಸ್ತು ಮೊಬಲಗು ಪೈಕೀ ಹನ್ನೆರಡರಲ್ಲಿ ವೊಂದು ಹಿಸ್ಸೆಗೆ ಅಥವಾ ವೊಟ್ಟು ಕಂಟ್ರಾಕ್ಟು ಮೊಬಲಗು ಪೈಕೀ 60 ರಲ್ಲಿ ವೊಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೇ ಪುನಃ ಹರಾಜು ಹಾಕಲ್ಪಟ್ಟು ಆ ಮೂಲಕ ಸರಕಾರಕ್ಕೆ ಬರುವ ಲುಕ್ಸಾನಿಗೆ ಅವನನ್ನು ಗುರೀ ಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮರ್ಕುಂನಲ್ಲಿ ಪ್ರವೇಶಿಸಿ ತನ್ನ ಮೊದಲನೆ ಮಾಹೇವಾರೀ ಖಿಸ್ತುಗಳು 1877ನೇ ಮೇ 15ನೇ ಮರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು, ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳು 15ನೇ ಮರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ ಯಿಟ್ಟ ಮೊಬಲಗಿಗೆ ನಿಸಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ ಮೊಬಲಗು ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳಮೇಲೆ ಲೋಕಲ್‌ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಅಡ್ಡೀ ವುಂಟಾದರೆ ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಡಿಪಾಜಿಟ ಮೊಬಲಗಿನ ನಿಮಿತ್ಯವಿಲ್ಲದೆಯೆ ಪುನಹ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ ಮೊಬಲಗು ಗವರ್ನಮೆಂಟಗೆ ಸೇರಿಸಿಕೊಳ್ಳಲ್ಪಡುವದು.

ತಾರೀಖು 21ನೇ ಅಕ್ಟೋಬರ್ 1876.

E. S. LUDLOW,
Offg. Dy. Commr.

ಸರ್ 1876ನೇ ಇಸವಿ ನವಂಬರ್ ತಾರೀಖು 8 ಶಿವಿಲ್ ಮಿಸಲೇನಿಯಸ್ ನಂಬರ್ 24.

ಸರ್ 1876ನೇ ಇಸವೀ ಏಪ್ರೈಲ್ 18ನೇ ತಾರೀಖಿನಲ್ಲಿ ಪಾತೀ ಆದ ತುಮಕೂರು ತಾಲ್ಲೂಕು ಕೆಸರಮಡು ಜಾಗೀರ್ ಗ್ರಾಮದ ಮೊಖ್ತೇಸರ ಸೈದ್ ಖಾದರ್ ಪಾಷಾ ಖಾದ್ರಿಸಾಬಿಯಿಂದ ಅದೇಗ್ರಾಮದಲ್ಲಿರುವ ನಸೀರುದ್ದೀನ್ ಹುಸೇನಿಯುಲ್ ಖಾದ್ರಿ ಯಂಬುವನಿಗೆ ಬರದುಕೊಟ್ಟ ಉಯಿಲನ್ನ ಸ್ಥಿರಪಡಿಸಿ ಪ್ರೊಬೇಟ ಯಾನೇ ಅಧಿಕಾರ ಪತ್ರಿಕೆಯನ್ನ ಕೊಡಬೇಕೆಂದು ತುಮುಕೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಕೋರ್ಟಗೆ ಅರ್ಜೀ ಕೊಟ್ಟು ಯಿರುತಾನಾಗಿ ಯಿದರ ವಿಮರ್ಶೆ ಬಗ್ಯೆ ಬರುವ ಡಿಶಂಬರ್ ತಿಂಗಳು 11ನೇ ತಾರೀಖಿಗೆ ಹಿಯರಿಂಗ ಗೊತ್ತುಮಾಡಿರುತ್ತೆ ತಕರಾರುದಾರ್ರು ಯಾರಾದರೂ ಯಿದ್ದಲ್ಲ ಆ ತಾರೀಖಿಗೆ ಸರಿಯಾಗಿ ನಮ್ಮ ಕೋರ್ಟಿಗೆ ರೂಬರೂ ಹಾಜರಾಗಬೇಕೆಂದು ಯಿದರಿಂದ ತಿಳಿಯಪಡಿಸಿದೆ.

T. E. WOODCOCK,
For Offg. Dy. Commr.

MYSORE DISTRICT.

Notice of an application by Krishnaiengar for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ ಡೆ॥ ಕ॥ ಕೋರ್ಟನಿಂದ.

1876ನೇ ಇಸವಿ ಸಿವಿಲ್ ಫೂಟ ಮಿ॥ ನಂ. 83.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ಅಣ್ಣನಾದ ತಿಮ್ಮಪ್ಪೈಯ್ಯಂಗಾರ್ರಿಗೆ ಬರಬೇಕಾದ 1000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಮೈಸೂರು ಕೃಷ್ಣ ವಿಲಾಸದ ಅಗ್ರಹಾರದಲ್ಲಿಯಿರುವ ವೀ ಕೃಷ್ಣಯ್ಯಂಗಾರ್ ಯೆಂಬುವನು ಕೊಟ್ಟಿರತಕ್ಕ ಅರ್ಜಿಯನ್ನು ನವಂಬರ್ ಮಾಹೇ ತಾರೀಖು 22ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿ ಕೊಳ್ಳತಕ್ಕದ್ದಿದೆ.

ತಾರೀಖು 30ನೇ ಅಕ್ಟೋಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Niranjana Dáslala and two others for a certificate under Act XXVII of 1860.

1876ನೇ ಇಸವೀ ಸಿವಿಲ್ ಫೂಟ ಮಿಸಲೇನಿಯಸ್ ನಂಬರ್ 84.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಪಾತೀಯಾದ ಲೇಕರಾಜಾಲಾಲಾ 1 ದೀನಾನಾಥಲಾಲಾ 1 ಬಾಲಮುಕುಂದ ದಾಸಲಾಲಾ ಈ 3 ಜನಗಳಿಗೆ ಬರಬೇಕಾದ 2,000 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟ ಪ್ರಕಾರ ಸರಟಫಿಕೇಟ ಆಗಬೇಕೆಂದು ಮೈಸೂರು ಬಸವನ ಮೊಹಲೇದಲ್ಲಿರುವ ಸದರೀ ಯವರ ಮಕ್ಕಳಾದ ನಿರಂಜನ ದಾಸಲಾಲಾ 1 ಸುಬ್ರಹ್ಮಣ್ಯಲಾಲಾ 1 ರಾಜಾರಾಮಲಾಲಾ 1 ಈ 3 ಜನವೂ ಕೊಟ್ಟಿರತಕ್ಕ ಅರ್ಜೀಯನ್ನ ನವಂಬರ್ ಮಾಹೇ 22ನೇ ತಾರೀಖಿನಲ್ಲಿ ಹಿಯರಿಂಗ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಶಿಕೊಳ್ಳತಕ್ಕದ್ದಿದೆ.

Notice of an application by Honne Gauda for a certificate under Act XXVII of 1860.

ಸಗ 1876ನೇ ಇಸವಿ ಸಿವಿಲ್ ಫೂಟೆ ಮಿಸಲೇನಿಯಸ್ ನಂಬರ್ 85.

ಇದರಿಂದ ಸ್ಲಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಅಣ್ಣ ಮಾಯಿಗನಿಗೆ ಬರಬೇಕಾದ 75. ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಅಕ್ಟ ಪ್ರಕಾರ ಸರ್ಟಫಿಕೇಟ ಆಗಬೇಕೆಂದು ಅಷ್ಟಗ್ರಾಮ ತಾಲ್ಲೂಕು ಶ್ರೀರಂಗಪಟ್ಣದಲ್ಲಿರುವ ಕುರುಬರ ಜಾತಿ ಹೊನ್ನೇಗೌಡನ ಮಗ ಹೊನ್ನೇಗೌಡನು ಕೊಟ್ಟರತಕ್ಕ ಅರ್ಜೀಯನ್ನ ನವಂಬರ್ ಮಾಹೇ ತಾರೀಖು 22ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

ತಾರೀಖು 31ನೇ ಅಕ್ಟೋಬರ್ 1876ನೇ ಇಸವೀ ಮೊಕ್ಕಾಂ ಮೈಸೂರು.

Notice of an application by Channabasavaiya for a certificate under Act XXVII of 1860.

ಸಗ 1876ನೇ ಇಸವೀ ಶಿವಿಲ್ ಫೂಟೆ ಮಿಸಲೇನಿಯಸ್ ನಂ॥ 86.

ಇದರಿಂದ ಸಮುಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ತಂದೆ ದೊಡ್ಡೆಗೌಡನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ ಆಗಬೇಕೆಂದು ಮೈಸೂರು ತಾಲ್ಲೂಕು ವರಕೋಡು ಹೋಬಳಿ ಚನ್ನಹಳ್ಳಿ ಗ್ರಾಮದಲ್ಲಿರುವ ಚನ್ನಬಸವೈಯನು ಕೊಟ್ಟರತಕ್ಕ ಅರ್ಜೀಯನ್ನ ಡಿಶಂಬರ್ ಮಾಹೆ ತಾರೀಖು 5ಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೊಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Sheshamma for a certificate under Act XXVII of 1860.

ಸಗ 1876ನೇ ಇಸವೀ ಶಿವಿಲ್ ಫೂಟೆ ಮಿಸಲೇನಿಯಸ್ ನಂ॥ 87.

ಇದರಿಂದ ಸಮುಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ನರಸಹ್ಮೈಯನಿಗೆ ಬರಬೇಕಾದ 150 ರೂಪಾಯಿಗಳನ್ನು ವಸೂಲ್ಮಾಡಿ ಕೊಳ್ಳುವದಕ್ಕೆ ತನ್ನ ತಂದೆಯಾದ ಮತ್ತು ಗಾರ್ಡಿಯನ್ ಆದ ಶೇಷೈಯನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ ಆಗಬೇಕೆಂದು ತಲಕಾಡು ತಾಲ್ಲೂಕು ತಾಯೂರ ಹೋಬಳಿ ಗಾಗನೂರು ಗ್ರಾಮದಲ್ಲಿರುವ ಶೇಷಮ್ಮ ನೆಂಬವಳು ಕೊಟ್ಟರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ ತಾರೀಖು 5ಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Kempi for a certificate under Act XXVII of 1860.

ಸಗ 1876ನೇ ಇಸವೀ ಶಿವಿಲ್ ಫೂಟೆ ಮಿಸಲೇನಿಯಸ್ ನಂಬರ್ 88.

ಇದರಿಂದ ಸಮುಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ಮಾದನಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ ಆಗಬೇಕೆಂಧು ತಲಕಾಡು ತಾಲ್ಲೂಕು ನರಸೀಪುರದ ಹೋಬಳಿ ಕೊತ್ತಾಗಾಲದ ಗ್ರಾಮದಲ್ಲಿರುವ ಕೆಂಪಿ ಯೆಂಬುವಳು ಕೊಟ್ಟರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ 5ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮಾಹೆ ನವೆಂಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Dod Hutcha for a certificate under Act XXVII of 1860.

ಸಗ 1876ನೇ ಇಸವಿ ಶಿವಿಲ್ ಫೂಟೆ ಮಿಸಲೇನಿಯಸ್ ನಂ. 89.

ಇದರಿಂದ ಸಮುಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಘಾತೀಯಾದ ತನ್ನ ತಮ್ಮ ಚಿಕ್ಕ ಹುಚ್ಚನಿಗೆ ಬರಬೇಕಾದ 350 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಫಿಕೇಟ ಆಗಬೇಕೆಂದು

553

ಅಪ್ಪಗ್ರಾ... ತಾಲ್ಲೂಕು ಪಾಲಹಳ್ಳಿ ಕಸಬೇಯಲ್ಲಿರುವ ದೊಡ್ಡ ಹುಚ್ಚ ನೆಂಬುವನು ಕೊಟ್ಟಿರತಕ್ಕ ಅರ್ಜಿಯನ್ನು ಡಿಸೆಂಬರ್ ಮಾಹೇ ತಾರೀಖು 12ರಲ್ಲು ಹಿಯರಿಂಗ್ ಮಾಡುವದರಿಂದ ಇದರಮೇಲೆ ತಕರಾರು ವುಳ್ಳವರ್ರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕದಿದೆ.

Notice of an application by Pavadi Gauda for a certificate under Act XXVII of 1860.

1876ನೇ ಇಸವಿ ಶಿವಿಲ್ ಫ್ಲೂಟೆ ಮಿಸಲೇನಿಯಸ್ ನಂಬರ್ 90.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತೀಯಾದ ತನ್ನ ತಂದೆ ಬಸವೇಗೌಡನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟಿ ಆಗಬೇಕೆಂದು ಅಪ್ಪಗ್ರಾಮದ ತಾಲ್ಲೂಕು ಬೆಳಗುಳದ ಹೋಬಳಿ ಪೈಕಿ ಕಾರೇಪುರದ ಗ್ರಾಮದಲ್ಲಿ ಯಿರುವ ಪವಾಡಿಗವುಡನೆಂಬುವನು ಕೊಟ್ಟಿರತಕ್ಕ ಅರ್ಜಿಯನ್ನು ಡಿಸೆಂಬರ್ ಮಾಹೆ ತಾರೀಖು 12ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕದಿಧೆ.

Notice of an application by Amrutamma for a certificate under Act XXVII of 1860.

ಸನ 1876ನೇ ಇಸವಿ ಸಿವಿಲ್ ಫ್ಲೂಟೆಮಿಸಲೇನಿಯಸ್ ನಂಬರ್ 91.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತೀಯಾದ ತನ್ನ ಗಂಡ ರಾಮಲಿಂಗ ಮೊದಲಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟಿ ಆಗಬೇಕೆಂದು ಅಪ್ಪಗ್ರಾಮದ ತಾಲ್ಲೂಕು ಗಂಜಾಂದಲ್ಲಿ ಯಿರುವ ಅಮೃತಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನು ಡಿಶಂಬರ್ ಮಾಹೆ ತಾರೀಖು 12ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಅ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕದಿಧೆ.

ತಾರೀಖು 20ನೇ ಮಾಹೆ ನವಂಬರ್ 1876ನೇ ಇಸವಿ.

SHANMUGAVELU PILLE,
For Dy. Commr.

HASSAN DISTRICT.

Notice of an application by Narsanna for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ ಡೆ|| ಕ|| ಕಚ್ಚೇರಿಯಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಹಾಸನದಲ್ಲಿರುವ ಬಳ್ಳಾರಿ ಜಿಲ್ಲಾ ಅನಂತಪುರ ತಾಲ್ಲೂಕು ವೆಂಕಟಂಪಲ್ಲಿ ವಾಸಸ್ಥ ಯೆನುಮುಲ ನರಸಂಣನು ಫೌತೀ ಆದ ತನ್ನ ತಮ್ಮ ಯನಮುಲು ಈರಂಣ ನೆಂಬವನಿಗೆ ಬರತಕ್ಕ ಸಾಲಾ 1,0,000 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ 60ನೇ ಇಸವಿ 27ನೇ ಅಕ್ಟುಮೇರೆ ಸರ್ಟಿಫಿಕೇಟಿ ಕೊಡಿಸಬೇಕೆಂತ ಕೊಟ್ಟ ಅರ್ಜಿ ಫೈಸಲಬಗ್ಯೆ ಸನ ಮಜಕೂರು ಡಿಸೆಂಬರ್ 21ನೇ ತಾರೀಖಿನಲ್ಲಿ ನಿಷ್ಕರ್ಷ ಮಾಡಿಯಿರುತ್ತೆ ತಕರಾರು ಯಿರತಕ್ಕವರಲ್ಲ ಮೇಲೆಕಂಡ ತಾರೀಖು ಹಗಲು 10 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ ಮಾಡಿಕ್ಕೊಳ್ಳಬೇಕು.

ತಾರೀಖು 15—11—76.

Notices of applications for land for coffee cultivation.

ಮಂಜರಾಬಾದು ತಾಲ್ಲೂಕು ಯಸಳೂರು ಹೋಬಳಿ ಹೆರೂರುಗ್ರಾಮಕ್ಕೆ ಸೇರಿದ ಗೌಡನಕೆರೆಬಳಿಯಲ್ಲಿ ಇರುವ 1 ಮಾವಿನ ಮರದ ಹನಾಲಿ.

ಯಿದರ ಚಕ್ಕು ಬಂದಿ.

ಪೂರ್ವಕ್ಕೆ ಮಟವತ್ತಿನ ದನ ದಾರಿಯಿಂದು ದರಖಾಸ್ತಿನಲ್ಲಿರುತ್ತೆ, ಇದು ಚಿಕೋಣದಹತ್ರನ ಕಲ್ಲುಮರಟ ಮತ್ತು ಹೆರೂರು ಗ್ರಾಮದ ದನಗಳು ಲಿಟ್ಟಕ್ಕೆ ಹೋಗುವ ದಾರಿಯಾಗಿರುತ್ತೆ.

ಪಶ್ಚಿಮಕ್ಕೆ ಗೌಡನ ಕೆರೇ ಹಡ್ಲು.

ದಕ್ಷಿಣಕ್ಕೆ ದಿಂಣೆ ಎಂಬದು ಕೆರೇದಿಂಣೆಯಂದು ಕರೆಯುತ್ತಾರೆ.

ವುತ್ತರದಿಂಣೆ ಯಂಬದು ಕೆರೆದಿಂಣೆಯೆಂದು ಕರೆಯುತ್ತಾರೆ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮಗಜ 56 ದಕ್ಷಿಣೋತ್ತರ ಗಜ 78 ಸಲೆಗಜ 4368 ಎಕರೆ 0 ರೋಡ್ 3 ಪೋಲ್ 23 ಗಜಾ 12 ಜಮೀನು ಬಂಜರಿದೆ.

ಮಾವಿನಮರದ ಹನಾಲ್ ವತ್ತಿಕು ವರಿಯುಂಬದು.

ಯಿದರ ಚಕ್ಕುಬಂದಿ.

ಪೂರ್ವಕ್ಕೆ ಪಾಟಿಯವರು ತಿರುಗುವ ದಾರಿಯುಂದರೆ ಹೆರೂರು ನಾಗನಹಳ್ಳಿ ಜನಗಳು ಉಂಮಡಿಮಲೆಗೆ ತಿರುಗುವದಾರಿ.

ಪಶ್ಚಿಮ ದಿಂಣೆಯುಂದರೆ ಕೆರೆದಿಂಣೆ.

ದಕ್ಷಿಣಕ್ಕೂ ಸದರೀಮೇರಿಗೆ ಕೆರೆದಿಂಣೆ.

ವುತ್ತರಕ್ಕೂ ಸದರೀಮೇರಿಗೆ ಕೆರೆದಿಂಣೆ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 70 ದಕ್ಷಿಣೋತ್ತರ ಗಜ 32 ಸಲೆಗಜ 2240 ಯಕರೆ 0 ರೋಡ್ 1 ಪೋಲ್ 34 ಗಜ 1½

ಈ ಮೇಲ್ಕಂಡ ಜಮೀನುಗಳನ್ನು ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಹೆರೂರುಗ್ರಾಮದಲ್ಲಿರುವ ಪರವೆಗೌಡನ ಮಗ ಬಸವೇಗೌಡನೆಂಬವನು 202ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ:

ಮೇಲ್ಕಂಡ ಜಮೀನುಗಳನ್ನು ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಮಾಡತಕ್ಕವರಾಗಲಿ ಅಥವಾ ತಮ್ಮ ಹಕ್ಕನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ ತಾರೀಖು ಲಾಗಾಯಿತು ಒಂದು ತಿಂಗಳು ವಳಗಾಗಿ ಡಿ|| ಮ|| ಅ|| ಕ|| ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯ್ರಾ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದನ್ನು ತಂದದ್ದಾದರೆ ಅದು ಮಂಜೂರಾಗಲರಿಯದು.

ಮಂಜಿರಾಬಾದ ತಾಲ್ಲೂಕು ಯಸಳೂರು ಹೋಬಳಿ ಹೆರೂರು ಗ್ರಾಮಕ್ಕೆ ಸೇರಿದ ಕೆರೆಬಳಿಯಲ್ಲೂ ಯಿರುವ ಮಾದೇಶ್ವರನ ಪರಾವು ಮಾಡುವ ಹನಾಲ್ ಯೆಂಬ ವೃಷ್ಟಿ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಗೌಡನಕೆರೆ.

ದಕ್ಷಿಣಕ್ಕೆ—ದಿಂಣೆಯುಂದರೆ ಗೌಡನ ಕೆರೆಬಳಿ ದಿಂಣೆ.

ಉತ್ತರಕ್ಕೆ—ದಿಂಣೆ ಯಂದರೆ ಗೌಡನ ಕೆರೆಬಳಿ ದಿಂಣೆ.

ಪಶ್ಚಿಮಕ್ಕೆ—ದನದದಾರಿಯುಂದರೆ ಹೆರೂರು ಗ್ರಾಮದ ದನ ಮೇಯುವದಕ್ಕೆ ಬೆಟ್ಟಕ್ಕೆ ಹೋಗುವ ದಾರಿ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ ಗಜ 130 ದಕ್ಷಿಣೋತ್ತರ ಗಜ 53 ಸಲೆಗಜ 6890 ಯಕರೆ 1 ರೋಡ್ 1 ಪೋಲ್ 27 $3\frac{1}{4}$.

2ನೇ ಗವುಡನಕೆರೆ ಬಳಿಯಲ್ಲಿರುವ ಅಕ್ಕಿವಾರದ ಹನಾಲ್ ಯಿದರ ಚವುತರ್ಫಿ.

ಪೂರ್ವಕ್ಕೆ—ದಿಂಣೆಯುಂದರೆ ಗವುಡನ ಕೆರೆಬಳಿ ದಿಂಣೆ.

ದಕ್ಷಿಣಕ್ಕೆ—ನೀರು ಹರಿಯುವ ಹಳ್ಳ.

ಪಶ್ಚಿಮಕ್ಕೆ—ಕಲ್ಲುಮರಟ್ಟಿ ದಾರಿ ಯನ್ನುವದು ಹಳ್ಳ್ಯಂಗಿಯಿಂದ ಹೊಸಕೋಟೆಗೆ ಹೋಗುವ ಕಾಲುದಾರಿ.

ಉತ್ತರಕ್ಕೆ—ಗವುಡನ ಹಡ್ಲು.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮಗಜ 39 ದಕ್ಷಿಣೋತ್ತರ 157 ಸಲೆಗಜ 6123 ಯಕರೆ 1 ರೋಡ್ 1 ಪೋಲ್ 2 ಗಜಾ 12½ ವುಳ್ಳದ್ದು.

ಈ ಮೇಲ್ಕಂಡ ಜಮೀನುಗಳು ಕಾಫೀಸಾಗುವಳಿಗೆ ಕೊಡಿಸಬೇಕೆಂದು ಹೆರೂರು ಗ್ರಾಮದಲ್ಲಿರುವ ಸೋಮೇಗೌಡನಮಗ ಮಂಜೇಗೌಡ ನೆಂಬವನು 201ನೇ ನಂಬರು ದರಖಾಸ್ತು ಮಾಡಿ ಯಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಜಮೀನುಗಳನ್ನು ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವಾ ತಮ್ಮ ಹಕ್ಕನ್ನ ಕುರಿತು ವ್ಯಾಜ್ಯಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟಿಸ ತಾರೀಖು ಲಾಗಾಯತು ಒಂದು ತಿಂಗಳು ವಳಗಾಗಿ ಡಿ|| ಮ|| ಫಸ್ಟ್ ಅ. ಕ. ರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯ್ರಾ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

ಖತಾರೀಖು 24ನೇ ನವಂಬರು ಸರ್ 1876ನೇ ಇಸವಿ ಮೊಕ್ಕಾಂ ಹಾಸನ.

H. E. MOTTET,
Dy. Commr.

KADUR DISTRICT.

Notice of an application by Shama Rao for a certificate under Act XXVII of 1860.

ಕಡೂರು ಡಿಸ್ಟ್ರಿಕ್ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಮಿಸಲೇನಿಯಸ್ ಕೇಸ್ ನಂ॥ 12.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕ ಮುಗಳೂರು ತಾಲ್ಲೂಕು ಸಖರಾಯಪಟ್ಣದಲ್ಲಿ ಯಿರುವ ಚಿತ್ತೂರು ಕೃಷ್ಣರಾವ್, ವುರ್ಫ ರಾಮರಾಯನ ಮಗ ನರಸಿಂಗರಾವ್ ವುರ್ಫ್ ಶ್ಯಾಮರಾಯನು ಫೌತೀಪಟ್ಟ ತನ್ನ ತಂದೆಗೆ ಬರತಕ್ಕ 400 ರೂಪಾಯಿಗಳನ್ನು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ಸರಟಫಿಕೇಟ್ ಕೊಡಿಸಬೇಕೆಂದು ಈ ಕೋರ್ಟಿಗೆ ದಾಖಲ್ ಮಾಡಿರುವ ಅರ್ಜಿಯನ್ನು ಫೈಸಲ್ ಬಗ್ಯೆ ಬರುವ ಡಿಸಂಬರ ತಿಂಗಳು ತಾರೀಖು 16ಲ್ಲಿ ಹಿಯರಿಂಗ್ ಯಿಟ್ಟು ಯಿರುವದ್ದರಿಂದ ಈಬಗ್ಯೆ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟಿನ ರೂಬರೂ ಹಾಜರಾಗಿ ವ್ಯವಹರಿಸ ತಕ್ಕದ್ದು

ತಾರೀಖು 8ನೇ ನವಂಬರ 1876ನೇ ಇಸವಿ ಮೊಕ್ಕಾಂ ಕಳಸಾಪುರ.

P. Krishna Rao,
Dy. Commr.

COORG.

Notice of an application by Subbaiya for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟ್ಟರ ಕೋರ್ಟಿನಿಂದ.

ಸರ್ 1876ನೇ ಇಸವೀ ಬಾಬತು ಶಿವಿಲ್ ನಾನಾವಿಧ ನಂಬರ 17.

ನಂಜರಾಯಪಟ್ಣ ತಾಲ್ಲೂಕು ಯಡವನಾಡು ಹರಗದ ಗ್ರಾಮದಲ್ಲಿರುವ ಕೊಡಗರ ದೊಡ್ಡಮನೆ ಸುಬ್ಬೈಯನು ಘಾತಿ ತಂದೆ ಮಲ್ಲಪ್ಪಗೆ ಹೊರಗಿನಿಂದ ಬರತಕ್ಕ ಸಾಲ 500 ರೂಪಾಯಿ ವಸೂಲ್‌ಮಾಡಿ ಕೊಳ್ಳುವದಕ್ಕೆ ಸರ್ 1860ನೇ ಇಸವಿ ಆಕ್ಟು ಮೇರೆ ಬಾಧ್ಯತೆ ಸರ್ಟಫಿಕೇಟ್ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮ ಸರ್ 1876ನೇ ಇಸವೀ ಡಿ ತಾರೀಖು 20ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಂನಲ್ಲಿ ಹಿಯರಿಂಗ್ ಆಗುವದ್ದರಿಂದ ಇದಕ್ಕೆ ಯಾರಾದ ಕ್ಕುದಾರರು ಯಿದ್ದರೆ ಸದರೀ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸ ಬಹುದು.

ತಾರೀಖು 18ನೇ ನವಂಬರ 1876ನೇ ಇಸವಿ.

E. Shaw,
Offg. Supt.

ಸರ್ 1876ನೇ ಇಸವಿ ಅಕ್ಟೋಬರ ತಿಂಗಳ ಕಾಲಸ್ಥಿತೀ ರಿಪೋರ್ಟು.

ಕಡೂರು ಡಿಸ್ಟ್ರಿಕ್ಟು.

ಮಳೆ.—ಎಲ್ಲ ತಾಲ್ಲೂಕುಗಳಲ್ಲಿಯೂ ಕೊಂಚವಾಗಿ ಮಳೆ ಬಿದ್ದಿರುತ್ತೆ, ಆದರೆ ಕೆರೆಗಳಿಗೆ ನೀರು ಬರುವಷ್ಟು ಅಥವಾ ಬೆಳೆಗಳಿಗೆ ಮುಖ್ಯವಾಗಿ ಉಪಯೋಗವಾಗುವಷ್ಟು ಬಂದಿರುವದಿಲ್ಲ, ಈ ತಿಂಗಳಲ್ಲಿಯೂ ಕಳೆದ ತಿಂಗಳಲ್ಲಿಯೂ ಮತ್ತು 1875ನೇ ಅಕ್ಟೋಬರ ತಿಂಗಳಲ್ಲಿಯೂ ಈ ಕೆಳಗೆ ಕಂಡಂತೆ ಮಳೆ ಬಂದಿರುತ್ತೆ:—

	ಇಂ.	ಸೆಂ.		ಇಂ.	ಸೆಂ.
ಶಪ್ಟಂಬರ 1876 ..	1	6	ಅಕ್ಟೋಬರ 1875 ..	2	15
ಅಕ್ಟೋಬರ ಡಿಟೋ ..	0	70			

ಬೀಜ.—ತರೀಕೆರೆ ತಾಲ್ಲೂಕಿನಲ್ಲಿ ಹುರಳಿ, ಚಿಕ್ಕ ಮಗಳೂರು ತಾಲ್ಲೂಕಿನಲ್ಲಿ ಕಡ್ಲೆ ಬೇರಾವಾದವು.

ಬೆಳೆ.—ತರೀಕೆರೆ, ಬ್ಯಾಣಾವಾರ ಮತ್ತು ಚಿಕ್ಕ ಮಗಳೂರು ತಾಲ್ಲೂಕುಗಳಲ್ಲಿ ರಾಗಿ ವಗೈರೇ ಶೀಘ್ರವಾಗಿ ಬಣಗುತ್ತಿವೆ, ಮೊದಲನೆ ತಾಲ್ಲೂಕಿನಲ್ಲಿ ಜೋಳದ ಫಸಲ್ ಕಟಾವಾಯಿತು. ಮರಳಿ ಬಹಳ ಚನ್ನಾಗಿದೆ, ಲಕ್ಕುವಳ್ಳಿ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ದಿನ್ನೇಮೇಲಿರತಕ್ಕ ನೆಲ್ಲು ಬಣಗುತ್ತಿದೆ, ಮತ್ತು ತಗ್ಗಿನಲ್ಲಿರತಕ್ಕವು ಕಾಲಕ್ಕೆ ಸರಿಯಾದ ಮಳೆ ಬಾರದ್ದರಿಂದ ಬಹಳ ಚನ್ನಾಗಿಲ್ಲ ಚಿಕ್ಕ ಮಗಳೂರು ತಾಲ್ಲೂಕಿನಲ್ಲಿ ಕೆಲವು ಗಿಡ್ಡ ರಾಗಿ, ಮರಹರ್ಳ್ಯ ಮತ್ತು ಗೋಧಿ ಕಟಾವಾದವು.

ಜನಾರೋಗ್ಯ.—ಡಿಸ್ಟ್ರಿಕ್ಟಿನ ಆರೋಗ್ಯವು ವ್ಯತ್ಯಾಸವಾಗಿದೆ. ಚಿಕ್ಕ ಮಗಳೂರು, ಕೊಪ್ಪ, ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ ಜ್ವರ ಮತ್ತು ಚಳಿಜ್ವರ ವ್ಯಾಪಿಸಿದೆ. ತರೀಕೆರೆಯಲ್ಲಿ ಒಂದು ಗ್ರಾಮದಲ್ಲಿಯೂ ಮತ್ತು ಬಾಣಾವಾರದ ಎರಡು ಗ್ರಾಮಗಳಲ್ಲಿಯೂ ಖೈಜುಲಾಬ್ ಕಾಣಿಸಿಕೊಂಡಿತ್ತು. ಡಿಸ್ಟ್ರಿಕ್ಟಿನ ಮೈದಾನ ಪ್ರದೇಶಗಳಲ್ಲಿ ಬಡಜನಗಳು ಜೀವನಕ್ಕೆ ಸಂಪಾದಿಸಿಕೊಳ್ಳುವದಕ್ಕೆ ಬಹಳ ಕಷ್ಟ ಪಡುತ್ತಾರೆ ಕಷ್ಟವನ್ನ ನಿವಾರಣೆ ಮಾಡುವದಕ್ಕಾಗಿ ಸರ್ಕಾರ ಪ್ರಯತ್ನವು ಮಾಡಲ್ಪಡುತ್ತಾಯಿದೆ.

ಮರಣ.—ಎಲ್ಲ ಕಾರಣಗಳಿಂದಲೂ ಕುಲ್ 213 ಮಂದಿ ಹೋದ್ದಾಗಿ ರಿಪೋರ್ಟಾಗಿರುತ್ತೆ, ಆ ಹಿಂದಿನ ತಿಂಗಳಲ್ಲಿ 246 ಮತ್ತು 1875ನೇ ಅಕ್ಟೋಬರ ತಿಂಗಳಲ್ಲಿ 286 ಮಂದಿ ಹೋಗಿರುತ್ತಾರೆ.

ಕಾಲ್ನಡೆ.—ಗೋಮಾರೀ ರೋಗದ "ದೊಡ್ಡ ರೋಗ" ಮತ್ತು "ಕಾಲುಬಾಯಿಜ್ವರ" ಉಪದ್ರವಗಳು ಚಿಕ್ಕ ಮಗಳೂರು ಮತ್ತು ಬಾಣಾವಾರ ತಾಲ್ಲೂಕುಗಳಲ್ಲಿ ವ್ಯಾಪಿಸಿದ್ದವು, ಚಿಕ್ಕ ಮಗಳೂರು, ತರೀಕೆರೆ, ಬಾಣಾವಾರ ಈ ಪ್ರದೇಶಗಳಲ್ಲಿ ದನಗಳಿಗೆ ಮೇವು ನೀರಿಲ್ಲದೆ ಬಹಳ ಕ್ಷಾಮವಾಗಿದೆ, ಈ ಕಾರಣದಿಂದಲೂ ಅನೇಕ ಜಾನವರಗಳು ಹೋದವು. ಎಲ್ಲ ಕಾರಣಗಳಿಂದಲೂ ಕುಲ್ 1,381 ಕಾಲ್ನಡೆಗಳು ಹೋದವು. ಆ ಹಿಂದಿನ ತಿಂಗಳಲ್ಲಿ 2,409 ಮತ್ತು 1875ನೇ ಅಕ್ಟೋಬರ ತಿಂಗಳಲ್ಲಿ 1,490 ಹೋದವು.

P. KRISHNA RAO,
Dy. Commr.

ಕರೆನ್ಸೀ ನೋಟುಗಳು.

ಯಿದರಡಿ ನಮೂದಿಸಲ್ಪಡುವ ನೋಟುಗಳ ತುಕಡೆಗಳು ಹೋಗಿವೆ.

ನಂಬರು.	ಸರ್ಕಲ್	ಮೊಬಲಗ	ಹಕ್ಕುದಾರ
B/39 59593 ಬಲಭಾಗ	ಮದ್ರಾಸ್	5-0-0	ಬೆಂಗಳೂರು ಡಿಸ್ಟ್ರಿಕ್ಟು ಪೋಲೀಸ್ಗೆ ಸೇರಿದ ಕೋರ್ಟು ಇನ್ಸ್‌ಪೆಕ್ಟರ ಬಿ. ಶ್ರೀನಿವಾಸೈಯಂಗಾರ್ರು.
B/39 59590 ಯಡಭಾಗ	ಡಿಟೋ	5-0-0	

ಗೆಜ 2

PRIVATE ADVERTISEMENT.

ಸ್ವಂತ ಪ್ರಕಟಣೆ.

ಬೆಂಗಳೂರು ಟರ್ವ ಬ್ಯಾಂಕ (ಲಿಮಿಟೆಡ) ಆಫೀಸಿನಿಂದ.

ಸರ್ 1876ನೇ ಇಸವಿ ಅಕ್ಟೋಬರ ಆಖೈರಿಗೆ ಪೂರೈಸಿದ ಪಂಚ ಮಾಹೇ ಭಗೆ ಲೆಖ್ಖ ನೋಡುವ ಬಗ್ಯೆ ಚಾಲ್ತಿ ಮಾಹೆ 10ನೇ ತಾರೀಖು ಭಾನುವಾರ ಪ್ರಾತಃಕಾಲ ಏಳು ಘಂಟೆಗೆ ಬ್ಯಾಂಕ ಹೌಸಿನಲ್ಲಿ ಭಾಗಸ್ಥರು ಸಭೆಸೇರಬೇಕೆಂದು ಸೂಚಿಸಿಯಿದೆ.

ತಾರೀಖು 1ನೇ ಡಿಶಂಬರ ಸರ್ 1876ನೇ ಇಸವಿ ಬೆಂಗಳೂರು.

"ಬಮೋಜೀಬ ಹುಕ್ಕುಂ,"

ಡಿ. ಭೀಮರಾವ್.

ಏಜಂಟ.

MYSORE GOVERNMENT PRESS, BANGALORE—1876.

ಭಾರೀ ತಕಸೀರಗಳಿಗೋಸ್ಕರ ಖೈದ ಮಾಡಲ್ಪಟ್ಟು ಸಜಾ ವಾಯಿದೇ ಪೂರೈಸಿದ ಬಳಿಕ ಖುಲಾಸೇ ಮಾಡಲ್ಪಟ್ಟ ಜನಗಳ ಚಹರೇ ಪಟ್ಟಿ.

ಯಾವ ಜೈಲ್‌ನಿಂದ ಖುಲಾಸೇವಮಾಡಲ್ಪಟ್ಟದ್ದು.	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ ಅದನ್ನು ವಿಧಿಸಿದ ತಾರೀಖು ಮತ್ತು ಯಾವತ ಕಸೀರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟುದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ಇಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಬೆಂಗಳೂರು.	7755	ಫರೀದಬೇಗ್, ಮುಸಲ್ಮಾರ್, ವ್ಯಾಪಾರಸ್ಥ, ನೆಲವಂಗಲ.	ತಲೇಬಲಗಡೆಮಚ್ಚೆ, ಯಡಮೊಳಕೈಸ್ವಲ್ಪ ಸೊಟ್ಟೆಯಾಗಿದೆ. ಎತ್ತರ 5—2.	ಲಾಲ್‌ಬೇಗ್, ನೆಲವಂಗಲ.	3 ವರುಷಗಳ ಸಾಧಾಣಖೈದು, ತಾ॥ 9ನೇ ಅಕ್ಟೋಬರ್ 1873 ಜಾಮೀನ್ ಕೊಡದೇಹೋದ್ದರಿಂದ ಕೇಸ್ ನಂ॥ ಬೆಂಗಳೂರು ಡಿಸ್ಟ್ರಿಕ್ಟ್ 1ನೇ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು.	9ನೇ ಅಕ್ಟೋಬರ್ 1876.	ಎರಡಾವರ್ತಿ.		
	9183	ಅಂತೋನಿ, ಕ್ರಿಸ್ತಿಯನ್, ಮೇಟ್ರಿ ನೆಲವಂಗಲ.	ಮೈಚರ್ಮ ಸುಕ್ಕುಬಿದ್ದಿದೆ. ಉಭಯಕೆನ್ನೇ ಮೂಳೇಮೇಲೆ, ಒಂದು ಕರೀಮಚ್ಚೆ, ಯರಡು ಹುಬ್ಬಿನನಡುವೆ, ಹಚ್ಚೇಚುಕ್ಕೆ. ಯಡದ ಮುಂಗೈಮೇಲೆ, ಅರವಲಿಪಿಯಲ್ಲಿ ಅಂತೋನಿಯೆಂಬಮಾತು ಹಚ್ಚೇಗುರ್ತಿನಿಂದ ಹಾಕಿದೆ. ಬಲಭುಜದಮೇಲೆ ಬಂದು ದೊಡ್ಡ ಹುವ್ವಿನ ಆಕಾರವಾದ ಹಚ್ಚೇಗುರುತು, ಬಲದಮುಂಗೈಮೇಲೆ, ಬಂದು ದೊಡ್ಡತಿಕಡಿ ಮತ್ತೊಂದು ಸಣ್ಣತಿಕಡಿ ಹಚ್ಚೇಹಾಕಿರತಕ್ಕದ್ದು. ಎತ್ತರ 5—4.	ಅಂತೋನಿ, ನೆಲವಂಗಲ.	2 ತಿಂಗಳ ಕಠಿಣಖೈದ. 10ನೇ ಆಗಸ್ಟು 1876. ಕಳವು ಕೇಸ್ ನಂ॥ 479 ಕಂಟೋನ್ಮೆಂಟ ಮಾಜಿಸ್ಟ್ರೇಟ್ ಕೋರ್ಟು.	10ನೇ ಡಿಟೋ	ಇಲ್ಲ.		

ಯಾವಜೈಲಿನಿಂದಖುಲಾಸೇಮಾಡಲ್ಪಟ್ಟದ್ದು.	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇವೀಲ್ ಜಹರ.	ತಂದೇಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ,ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫೆ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರದಸ್ತಖತ್.
1	2	3	4	5	6	7	8	9	10
ಬೆಂಗಳೂರು.	9141	ರಾಮಾನುಜಯ್ಯಂಗಾರ್, ಬ್ರಾಹ್ಮಣ, ಅಡಿಗೆಯವ, ಬೆಂಗಳೂರು.	ಸ್ವಲ್ಪ ಎಣೆಗೆಂಪು, ಚಪ್ಪಡಿಮೂಗು ದಪ್ಪತುಟಿಗಳು, ಮೇಲ್ಭಾಗದ ಮುಂದಗಡೆ ಹಲ್ಲುಗಳು ಪರೇಬಿಟ್ಟು ಹೋಗಿಇವೆ. ಮುಖದಮೇಲೆ ಸ್ವಲ್ಪವಾಗಿ ದೇವೀಕಲೆಇದೆ. ಬೆನ್ನಿನಮೇಲೆ ಅನೇಕ ಹುಣ ನ ಮಚ್ಚೆಗಳುಇವೆ, ಮೈಯಿಲ್ಲಾ ಮೇಹರೋಗದ ಹುಣ್ಣುಗಳಿವೆ, ಯೆಡಗೈಹೊರಗಡೆ ಅಂಡಾಕಾರದ ದೊಡ್ಡಮಚ್ಚೆ, ಎತ್ತರ 5-4.	ನರಸಿಹ್ಮಾಚಾರ್. ಬೆಂಗಳೂರು.	3 ತಿಂಗಳ ಕಠಿಣಖೈದ್. ತಾ॥ 11ನೇ ಜುಲೈ 1876 ಕಳವುಮಾಲ್ ತೆಗದುಕೊಂಡದ್ದು. ಮೊ॥ ನಂ॥ 400 ಕಂಟೋನ್ಮೆಂಟ್ ಮಾಜಿಸ್ಟ್ರೇಟ್ ಕೋರ್ಟು.	ತಾ॥ 11ನೇ ಅಕ್ಟೋಬರ್ 1876.	ಇಲ್ಲ.		
	9028	ಬಾಪೂಸಾಹೇಬ್, ಮುಸಲ್ಮಾನ್, ವರ್ತಕ ವಾಣೆಂಬಾಡಿ,	ಅಗಲಾಸೇ ಮುಖ, ಯೆಡಗೆನ್ನೇಮೇಲೆ ಕೊಂಚಕಪಾದ ಮಚ್ಚೆ,ಯೆಡತೊಡೇ ಮೇಲೆ ಮಚ್ಚೆಗಳು. ಎತ್ತರ 5—6¼.	ಬಾಹುದ್ದೀನ್, ವಾಣೆಂಬಾಡಿ.	6 ತಿಂಗಳ ಡಿಟ್ಟೋ ತಾ॥ 12ನೇ ಏಪ್ರೆಲ್ 1876 ಕಳವು ಕೇಸ್ ನಂ॥ 207 ಕಂಟೋನ್ಮೆಂಟ್ ಮಾಜಿಸ್ಟ್ರೇಟ್ ಕೋರ್ಟು.	12ನೇ ಡಿಟ್ಟೋ	ಡಿಟ್ಟೋ		
	9031	ಮುಕುಂದು, ಬಣಜಿಗ, ಜವಾನ, ಕಂಟೋನ್ಮೆಂಟ್,	ದಪ್ಪನೆ ಹುಬ್ಬುಗಳು, ಸಾಧುವಾದ ಮುಖರಸ ಯೆರಡು ಹೆಬ್ಬೆಟ್ಟುಗಳ ಬುಡದಲ್ಲಿ ಹಚ್ಚೆಗುರುತು, ಎತ್ತರ 5—2½.	ಕುಪ್ಪಸಾಮಿ ನಾಯಡು, ಲಷ್ಕರ್.	6 ತಿಂಗಳ ಕಠಿಣಖೈದ್ ತಾ॥ 12ನೇ ಏಪ್ರೆಲ್ 1876.	12ನೇ ಡಿಟ್ಟೋ	ಡಿಟ್ಟೋ		
	9318	ಮುಂಚಿ, ಹೊಲೆಯ, ಕೂಲಿ, ಲಷ್ಕರ್.	ಬಲಗಡೇ ಕೊರಳುಬಳಿ ಯೆದೆಯಮೇಲೆ ಒಂದು ಸಣ್ಣ ನರಹುಲಿ, ಎಡಗಾಲಿನ ಹೆಬ್ಬೆಟ್ಟಿನಕಳಗಡೆಗೆ ಬಗ್ಗಿಯಿದೆ. ಕಿರುಬೆರಳು ಹೋಗಿ ಬುಡದಲ್ಲಿ ಸೊಟ್ಟೆಯಾದ ಗುರುತು ಸಹಿತವಾಗಿದೆ, ಎತ್ತರ 4 ಅಡಿ 6 ಅಂ॥	ಈರಪ್ಪ, ಲಷ್ಕರ್.	2 ದಿನಗಳು ಸಾಧಾರಣಖೈದ್.ತಾ॥ 11ನೇ ಅ॥ 1876 ಕಳವು ಕೇಸ್ ನಂ॥ 75 ಬೆಂಗಳೂರು ತಾಲ್ಲೂಕು 3ನೇ ಕ್ಲಾಸ್ ಕೋರ್ಟು.	13ನೇ ಡಿಟ್ಟೋ	ಡಿಟ್ಟೋ		

558

ಬೆಂಗಳೂರು.

6398	ರಂಗಯ್ಯ ವಸ್ಯೆರೆ, ಸಾತಾನಿ, ವೈದ್ಯ ವೃ ಸೂರು.	ಚಪ್ಪರವಾದ ಮುಖಭಾವ, ಶಾವಲವರ್ಣ, ಯೆಡಪದವೊಳಕ್ಕೆ ಹೊರಭಾಗದಲ್ಲಿ ಒಂದು ಸಣ್ಣ ನರಹುಲಿ, ಎತ್ತರ 5—5.	ಶ್ರೀನಿವಾಸಯ್ಯ ವೈಸೂರು.	5 ವರುಷಗಳ ಕಠಿಣಶಿಕ್ಷೆದು, ತಾ|| 14ನೇ ಅಕ್ಟೋಬರ್ 1876 ಡಕಾಯಿತಿ ಕೇಸ್ ನಂ|| ನಂದೀದುರ್ಗ ಡಿವಿಜನ್ ಸೆಷನ್ಸ್ ಕೋರ್ಟು.	14ನೇ ಅಕ್ಟೋಬರ್.	ಇಲ್ಲ.	
6399	ಹುಚ್ಚೂಮಿಯ್ಯಾ, ಮುಸಲ್ಮಾನ್, ಕೋಚ್‌ವ್ಯಾನ್, ಮೈಸೂರು.	ಅಗಲಾನೇಬಾಯಿ, ಹಲ್ಲುಗಳು ಸ್ವಲ್ಪ ಹೊರಟಿದೆ; ಎಡಕಣ್ಣಿನ ಹೊರಭಾಗಕ್ಕೆ ಒಂದು ಮಚ್ಚೆ, ಎತ್ತರ 5—2	ಷೇಕ್ ಮದಾರ್. ಡಿಟೋ.	ಡಿಟೋ.	ಡಿಟೋ	ಡಿಟೋ	
6402	ಅಪ್ಪಾಸಾಮಿ, ಹೊಲೆಯ, ಕುಶಿನಿ, ಲಷ್ಕರ್.	ಕೆಳತುಟೀಮೇಲೆ ತೊನ್ನು, ಯರಡು ಮೊಂಗೈ ಒಳಭಾಗಕ್ಕೆ ಹಚ್ಚೆಗುರುತು, ಎತ್ತರ 5—6.	ಫ್ರಾನ್ಸಿಸ್ ಕಂಟೋನ್ಮೆಂಟ್.	5 ವರುಷಗಳ ಡಿಟೋ, ಕನ್ನಚೋರಿ, ಡಿಟೋ.	ಡಿಟೋ	ಎರಡಾವರ್ತಿ.	
6403	ರಾಜು, ಡಿಟೋ.	ಮೋಟಾಗಿಯೂ, ದಪ್ಪನಾಗಿಯೂ, ಯಿರುವ ಮೂಗು, ಬಲಗೈಮೇಲೆ ಚೇಳಿನ ಆಕಾರವಾದ ಹಚ್ಚೆಗುರುತು, ಯೆರಡು ತೊಡೆಗಳ ಹೊರಕಡೆಗೆ ಒಂದು ದೊಡ್ಡಮಚ್ಚೆ, ಎತ್ತರ 5–2	ಚಿನ್ನಯ್ಯ ಲಷ್ಕರ್.	ಡಿಟೋ.	ಡಿಟೋ	ಇಲ್ಲ.	
8333	ಮಿಸ್ಸಿಗ, ಬ್ಯಾಡರ. ದನವೋಯಿಸುವ, ಗುಮ್ಮನಾಯಕನ ಪಾಳ್ಯ.	ದಪ್ಪನೆಹುಬ್ಬು, ದೊಡ್ಡಹಲ್ಲುಗಳು, ಬಾಯಿಯ ಯೆಡಕೆನ್ನೆಯ ಕೆಳಗಡೆ ಒಂದು ಸಣ್ಣ ನರಹುಲಿ, ಎತ್ತರ 5.	ಚನ್ನರಾಯ, ಗುಮ್ಮನಾಯಕನ ಪಾಳ್ಯ.	2½ ಸಂವತ್ಸರಗಳ ಡಿಟೋ ತಾ|| 15ನೇ ಅಕ್ಟೋಬರ್ 1874 ಜಂಕೀಯಿಂದ ಕೆಡಕುಮಾಡಿದ್ದು, ಡಿಟೋ ಕೋರ್ಟ್.	ಡಿಟೋ	ಡಿಟೋ	15ನೇ ತಾ|| ಭಾನುವಾರವಾದ್ದರಿಂದ.
7771	ನಬೀಖಾ, ಮುಸಲ್ಮಾನ್, ಜಿರಾಯತ್‌ದಾರ್. ಕ್ಲೋಸ್‌ಪೇಟೆ.	ಬಲಗಣ್ಣಿನ ಮೇಲ್‌ಗಡೆ ಹಣೆಯಲ್ಲಿ ಒಂದು ಮಚ್ಚೆ, ಯೆಡಗಡೆ ಸೊಂಟದಮೇಲೆ ಹೊರಪಾರ್ಶ್ವಕ್ಕೆ ಒಂದುಮಚ್ಚೆ, ಹೊಕ್ಕಳ ಮೇಲ್ಭಾಗಕ್ಕೆ ಹೊಟ್ಟೆಯಮೇಲೆ ಒಂದು ಸುಟ್ಟಕಲೆ, ಎತ್ತರ 5–7.	ಇನಾಯಿತ್‌ಖಾ, ಕ್ಲೋಸ್‌ಪೇಟೆ.	3 ವರುಷಗಳ ಕಠಿಣಶಿಕ್ಷೆ. ತಾ|| 8ನೇ ಅಕ್ಟೋಬರ್ 1873 ಕಳವು ನಂದೀದುರ್ಗ ಡಿವಿಜನ್ ಸೆಷನ್ಸ್ ಕೋರ್ಟು.	18ನೇ ಡಿಟೋ	ಒಂದಾವರ್ತಿ.	

558

ಯಾವಜೈಲ್‌ನಿಂದ ಖುಲಾಸೇಮಾಡಲ್ಪಟ್ಟದ್ದು.	ಜೈಲ್ ರಿಜಿಸ್ತರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರದಸ್ತಖತ್.
1.	2	3	4	5	6	7	8	9	10
ಬೆಂಗಳೂರು.	9046	ದೀನಾಜಿ, ಹೊಲೆಯ ಕೋಲ್‌ವರ್ಕ್; ಲಷ್ಕರ್.	ಎಣೆಗೆಂಪುಬಣ್ಣ, ಕಣ್ಣುಗಳು ಕಪ್ಪು ದಪ್ಪನೇ ಹುಬ್ಬುಗಳು, ದಪ್ಪನೇ ತುಟಿಗಳು, ಸಮಹಲ್ಲು, ಎಡಗಿವಿಯ ಕೆಳಭಾಗಕ್ಕೆ ಮಚ್ಚೆ, ಎಡದವಡೆಯ ಮೇಲೆ ಮತ್ತೊಂದು ಮಚ್ಚೆ, ಯೆಡಗಡೆ ಕೆನ್ನೆಯ ಮೂಳೆಯ ಮೇಲೆ ಕಪ್ಪಿನ ದುಂಡುಮಚ್ಚೆ, ಬಲಗಿವಿಯ ಮುಂದುಗಡೆ ಯೆರಡು ಸುಟ್ಟಕಲೆಗಳು, ಬಲದವಡೆಯ ಮೂಳೆಯ ಮೇಲೆ ಸಣ್ಣದಾದ ಒಂದು ಸುಟ್ಟಕಲೆ, ಭುಜದ ಕೆಳಗೆಡೆ ಬಲಭುಜದ ಮೇಲೆ ಒಂದು ಕರೇ ನರಹುಲಿ, ಹೊಟ್ಟೆಯ ಹಳ್ಳದಮೇಲೆ ಮೂರು ಸಣ್ಣ ನರಹುಲಿಗಳು ಯೆಡಗಡೆ ಹಿಂಭಾಗದಲ್ಲಿ ಮಚ್ಚೆ, ಬಲಗಡೆ ಡಿಟ್ಟೋ ಒಂದು ನರಹುಲಿ, ಎತ್ತರ 5—2.	ಜಲ್ಲಪ್ಪ್, ಲಷ್ಕರ್.	6 ತಿಂಗಳ ಕಠಿಣಖೈದ್ ತಾರೀಖು 27ನೇ ಏಪ್ರಿಲ್ 1876. ಕಳವು, ಮೊ॥ ನಂ. 26 ಬೆಂಗಳೂರು ತಾಲ್ಲೂಕು.	ತಾ॥ 27ನೇ ಅಕ್ಟೋಬರು 1876.	ಒಂದಾವರ್ತಿ.		
	8765	ಮಹಮ್ಮದಲ್ಲಿ, ಮುಸಲ್‌ವರ್ಕ್, ವ್ಯಾಪಾರಸ್ಥ ಲಷ್ಕರ್.	ಎಣೆಗೆಂಪುವರ್ಣ, ಬಲಹುಬ್ಬಿನ ಮೇಲೆ ಒಂದು ಸಣ್ಣ ನರಹುಲಿ, ಬಲಭುಜದ ಹತ್ತಿರ ಒಂದು ಸಣ್ಣನರಹುಲಿ, ಎತ್ತರ 5—1.	ಮೊಹಬ್ದೀನ್‌ಖಾನ್, ಲಷ್ಕರ್.	1 ವರುಷ ಕಠಿಣಖೈದ್ 29ನೇ ಅಕ್ಟೋಬರ್ 1875. ಕನ್ನ ಚೋರಿ ಮೊಕದ್ದಮಾ ನಂ. 665, ಷಹರ್ ವ ಲಷ್ಕರ್ ಮಾಜಿಸ್ಟ್ರೇಟ್.	ತಾ॥ 28ನೇ ಡಿಟ್ಟೋ.	ಇಲ್ಲ.	29ನೇ ತಾರೀಖು ಭಾನುವಾರದ ಸಬಬ್.	
	9210	ಹೆನರಿ, ಹೊಲೆಯ ಹುಡುಗ ಲಷ್ಕರ್.	ಎಡಗೈಮೇಲೆ ಚನ್ನಾಗಿ ಗುರುತಾಗಿಯೂ, ದದ್ದಾಗಿಯೂ, ಕಂಕುಳಕೆಳಗೆ ಎಡಗೈ ಮೇಲೆ ಯಿರುವ ಒಂದುಮಚ್ಚೆ, ಕತ್ತಿನ ಎಡಗಡೆ ಮುಂಭಾಗಕ್ಕೆ ಮೇಲೆ ಮುಕ್ಕಾಲಂಗುಲದಷ್ಟು ಉದ್ದನಾದ ಮಚ್ಚೆ, ಮೇಲ್ ತುಟಿ ದಪ್ಪನಾಗಿಯೂ, ಹೊರಟುಕೊಂಡು ಯಿರುತ್ತೆ.	ತಾಯಿ ದೇವಮ್ಮ, ಲಷ್ಕರ್.	2 ತಿಂಗಳ ಕಠಿಣಖೈದ್ ಡಿಟ್ಟೋ 28 ಆಗಸ್ಟು 1876. ಕಳವು, ಮೊಕದ್ದಮಾ ನಂ. 509, ಡಿಟ್ಟೋ.	ಡಿಟ್ಟೋ	ಡಿಟ್ಟೋ		

142

೬೬೦

9381	ಕೆಂಪಿ, ಹೊಲೆಯಳು ಕೂಲಿ, ಬೆಂಗಳೂರು.	ಎತ್ತರ 5 ಅಡಿ.	ದಾಸಪ್ಪ, ಬೆಂಗಳೂರು.	ಎರಡು ತಿಂಗಳ ಸಾಧಾರಣ ಖೈದ ತಾರೀಖು 23ನೇ ಅಕ್ಟೋಬರ್ 1876, ಕೆಡಕು ಕೇಸ ನಂ. 504, ಬೆಂಗಳೂರು ಅಮಲ್ದಾರ್ರ ಕೋರ್ಟು	ತಾ॥ 25ನೇ ಅಕ್ಟೋಬರು 1876.	ಇಲ್ಲ.
5205	ಜಿ. ಮುನಿಯ, ವಡ್ಡರು ಕೂಲಿ, ಬೆಂಗಳೂರು.	ಹಣೆಯ ಮಧ್ಯದಲ್ಲಿ ರೇಖೆಯಹಾಗೆ ಯಿರುವ ಮಚ್ಚೆ, ಮೂಗಿನ ಸೊಳ್ಳೆಗಳು ಅಗಲವಾಗಿದೆ. ಯೆಡಗಡೆ ಸೊಂಟದ ಕೀಲಲ್ಲಿಯೂ ಮೇಲ್ಗಡೆಯೂ ಯರಡು ಸೊಟ್ಟೆಯಾಗಿರುವ ಮಚ್ಚೆಗಳು, ಯೆಡತೊಡೆಯ ಹೊರಗಿನ ಪಾರ್ಶ್ವದಲ್ಲಿ ಮಿಂಚುತಿರುವ ಬಂದುಮಚ್ಚೆ, ಎತ್ತರ 5—4.	ತಿರುಮಲಿಗ, ಬೆಂಗಳೂರು.	7 ವರುಷಗಳ ಕಠಿಣ ಖೈದ ತಾ 25ನೇ ಅಕ್ಟೋಬರ್ 1869, ಡಕಾಯಿತಿ, ಕೇಸ್ ನಂ. 1, ನಂದೀದುರ್ಗ ಡಿ॥ ಸೆಷನ್ ಕೋರ್ಟು.	ತಾ॥ 26ನೇ ಡಿಟೋ.	ಒಂದಾವರ್ತಿ.
5206	ಲಕ್ಷ್ಮ, ಡಿಟೋ.	ಕೆಳತುಟಿಯ ಮೇಲೆ ತೊನ್ನು ಹಿಡಿದಿದೆ ಬಲಭುಜದ ಮೇಲ್ ಭಾಗಕ್ಕೆ ಬಂದು ಮಚ್ಚೆ, 5—8.	ವೀರಣ್ಣಬೊಮ್ಮಿ, ಡಿಟೋ.	ಡಿಟೋ.	ಡಿಟೋ.	ಡಿಟೋ.
5207	ಮುನಿಯ, ಡಿಟೋ ಬೆಂಗಳೂರು.	ಮುಖದಮೇಲೆ ದೇವೀಕಲೆ ಯಿದೆ, ಕೆಳತುಟಿ ಬೆಳ್ಳಗೆಯಿದೆ. ಬಲಮೊಣಕೈ ಮೇಲ್ ಭಾಗಕ್ಕೆ ಬಂದು ನರಹುಲಿ, ಬಲಭುಜದ ಮೇಲೆ ಬಂದುಮಚ್ಚೆ, ಯೆಡಗಡೇ ಸೊಂಟದಮೇಲೆ ಯೆರಡು ಮಚ್ಚೆಗಳು, ಎತ್ತರ 5—8.	ತಿಮ್ಮ, ಡಿಟೋ.	ಡಿಟೋ.	ಡಿಟೋ.	ಡಿಟೋ.
5208	ಪಿಲ್ಲಿಗಾ, ಬೆಸ್ತರವ ಸುಣ್ಣ ಮಾರುವದು ಡಿಟೋ.	ಮೇಲಿನ ಹಲ್ಲುಗಳ ಮಧ್ಯೆ ಸಂದು ಬಿದ್ದಿದೆ. ಯೆದೆಯ ಮೇಲೆ ಕೆಲವು ಜೆಂಕಿ ಸುಟ್ಟ ಗುರುತು ಎತ್ತರ 5—6.	ಎಲ್ಲಪ್ಪ, ಡಿಟೋ.	ಡಿಟೋ.	ಡಿಟೋ.	ಡಿಟೋ.

ಯಾವ ಜೈಲಿನಿಂದ ಖುಲಾಸೆ ಮಾಡಲ್ಪಟ್ಟದು.	ಜೈಲಿ ರಿಜಿಸ್ಟರನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫಾ ಜೈಲಿನಲ್ಲಿ ಧ್ದದ್ದು.	ಷರಾ.	ಜೈಲ್ ಸೂಪರ್ರಿಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಬೆಂಗಳೂರು.	5209	ಗುರುವ, ಕುರುಬರವ ಸುಣ್ಣ ಮಾರುವವ ಬೆಂಗಳೂರು.	ಕತ್ತಿನಕೆಳಗಿನ ಬಲಗಡೆ ಮೂಳೆಯ ಮೇಲ್ ಭಾಗಕ್ಕೆ ಒಂದು ನರಹುಲಿ, ಮುಂಗತ್ತಿನ ಚರ್ಮ ಸುಕ್ಕು ಬಿದ್ದಿದೆ. ಹಿಂಗತ್ತಿನ ಮೇಲ್ ಭಾಗಕ್ಕೆ ಒಂದುಮಚ್ಚೆ, ಯೆರಡು ಭುಜದ ಮೇಲ್ ಭಾಗಕ್ಕೆ ಮಧ್ಯೆ ಯರಡು ಮಚ್ಚೆಗಳು, ಬಲಭುಜದ ಮೇಲ್ ಭಾಗದಲ್ಲಿ ಒಂದು ನರಹುಲಿ, ಎತ್ತರ 5—4.	ನಾಗಪ್ಪ, ಬೆಂಗಳೂರು.	7 ವರುಷಗಳ ಕಠಿಣಖೈದ ತಾರೀಖು 25ನೇ ಅಕ್ಟೋಬರ್ 1869, ಕೇಸ್ ನಂ. 1, ನಂದೀದುರ್ಗ ಡಿವೀಜನ್ ಕೋರ್ಟು.	ತಾ॥ 26ನೇ ಅಕ್ಟೋಬರು 1876.	ಒಂದುಸಲ.		
	5210	ಪೆದ್ದಿಗ, ತೆಲಗರವ ಹುವ್ವಾಡಿಗ, ಜಂಗಂಕೋಟೆ.	ಯೆಡಗಡೆ ಕೆನ್ನೆಯ ಮೇಲೆ ಮೂಗಿನ ಸೊಳ್ಳೇಹತ್ತಿರ ಒಂದು ನರಹುಲಿ, ಯಡಗೈ ಹೆಬ್ಬೆಟ್ಟಿನ ಬುಡದಲ್ಲಿ ಹುವ್ವಿನ ಆಕಾರದ ಹಚ್ಚೇಗುರುತು, ಮತ್ತು ಚುಕ್ಕೆಗಳು, ಬಲಗೈ ಮಣಿಕಟ್ಟಿನ ಹತ್ತರ ಹೊಳೆಯುತ್ತಿರುವ ಕೆಲವು ಮಚ್ಚೆಗಳು, ಹಿಂಭಾಗದಲ್ಲಿ ಕೆಳಗಡಗೆ ಬೆತ್ತದ ಪೆಟ್ಟಿನಿಂದ ಗುರುತುಗಳು ಎತ್ತರ 5—2½.	ನರಸಮ್ಮ, ಜಂಗಂಕೋಟೆ.	ಡಿಟೋ.	ಡಿಟೋ.	ಡಿಟೋ.		
	8760	ಚೌಡಿಗ, ಬೇಡರವ ತೋಟಮಾಡುವವ ದೇವನಹಳ್ಳಿ.	ಉದ್ದನೇ ಬಲವಾದ ಆಳು, ಎಡಭುಜದ ಮೇಲೆ ಮಚ್ಚೆ, ಬಲತೊಡೆಯ ಮುಂಭಾಗಕ್ಕೆ ಕಪ್ಪಾದ ಮಚ್ಚೆ, ಎತ್ತರ 6 ಅಡಿ.	ಮರಿಗ, ದೇವನಹಳ್ಳಿ.	1 ಸಂವತ್ಸರ ಡಿಟೋ ತಾರೀಖು 25ನೇ ಅಕ್ಟೋಬರ್ 1875, ಕಳವು, ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್.	27ನೇ ಡಿಟೋ.	ಇಲ್ಲ.		

144

ಬೆಂಗಳೂರು.	9045	ಚೆನ್ನಯ್ಯ, ಹೊಲೆಯ, ಮೇಟ ಕಂಟೋನ್ಮೆಂಟ್.	ಎಣೆಗೆಂಪುವರ್ಣ, ಕಣ್ಣುಗಳು ಕಪ್ಪು ಕೆಂಪು ಮಿಶ್ರವಾದ ಬಣ್ಣ, ಹಲ್ಲುಗಳು ಬಿಳುಪು, ಸಮನಾಗಿವೆ ಹಣೆಯಮಧ್ಯದಲ್ಲಿ ಜೆಂಕೀ ಸುಟ್ಟಮಚ್ಚೆ, ಬಲಗಡೇ ಕಪಾಲದಮೇಲೆ ಬದಸ್ತೂರ್‌ಕಲೆ, ಮುಂಗತ್ತಿನ ಮೇಲೆ ಬಲಕಡೆಗೆ ಸಣ್ಣಮಚ್ಚೆ, ಹೊಟ್ಟೆಯ ಬಲಭಾಗಕ್ಕೆ ಉದ್ದವಾದ ಮಚ್ಚೆ, ಯೆಡಗಡೇ ಪಿರ್ರೀಮೇಲೆ ಒಂದು ಮಚ್ಚೆ, ಬಲಗಡೇ ಪಿರ್ರೀಮೇಲೆ ಯರಡು ಗುರುತುಗಳು ಎತ್ತರ 5—5.	ಚೌಡಪ್ಪ, ಕಂಟೋನ್ಮೆಂಟ್.	6 ತಿಂಗಳು ಡಿಟೋ ತಾರೀಖು 27ನೇ ಏಪ್ರಿಲ್ 1876, ಕಳವು, ಕೇಸ್ ನಂ. 236, ಷಹರ್ ವ ಕಂಟೋನ್ಮೆಂಟ್.	27ನೇ ಅಕ್ಟೋಬರ್.	ಇಲ್ಲ.		J. S. F. Mackenzie, *Offg. Supt., Central Jail.*
ಕೋಲಾರ	1258	ಮುಂದಲಿಗಾ, ಬೇಡರ್, ಜಿರಾಯತು, ಈ ಚಗಾನಪಲ್ಲಿ ತಾಲ್ಲೂಕು ಮಾಲೂರು.	ಆಡಿ 5 ಅಂಗುಲ 6 ಶಾಮಲವರ್ಣ, ವುದ್ದಮುಖ, ಯ್ಡಗೈ ಮೊಳಕೈ ಮೇಲೆ ಘಾಯದ ಮಚ್ಚೆ ಯಿಧೆ.	ಚನ್ನಿಗಾ, ಈ ಚಗಾನಪಲ್ಲಿ ತಾಲ್ಲೂಕು ಮಾಲೂರು.	ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಕೋರ್ಟು ಸರ್ಗುದಸ್ತಾ ಕ್ರಿಮಿನಲ 23ನೇ ನಂಬರ್ ಮೊಕದ್ದಮೆಯಲ್ಲಿ 1875ನೇ ಇಸವಿ ಅಕ್ಟೋಬರ್ 4ನೇ ತಾರೀಖಿನಲ್ಲಿ 379ನೇ ಸೆಕ್ಷನ್‌ಪ್ರಕಾರ ಕಳವು ತಕಸೀರಿಗಾಗಿ 1 ವರುಷ ರಿಗರಸ್.	4ನೇಅಕ್ಟೋಬರ್ 1876ನೇ ಇಸವಿ.	ಡಿಟೋ.		
	1259	ಭಂಗಿಗಾಡು, ಬಲಗೈ, ಜಿರಾಯತು, ನಮ್ಮಗಾನಹಳ್ಳಿ ತಾಲ್ಲೂಕು ಮಾಲೂರು.	5–2 ಕಪ್ಪುಬಣ್ಣ, ಗುಂಡುಮುಖ, ದೇಪೀಕಲಮೆ ಮುಖದಮೇಲೆ ತುಂಬಾ ಯಿಧೆ.	ಮುನಿಗಾ, ನಮ್ಮಗಾನಪಲ್ಲಿ ತಾಲ್ಲೂಕು ಮಾಲೂರು.	ಡಿಟೋ.	ಡಿಟೋ.	ಡಿಟೋ.		
	1593	ಹೆಂಗಸು ಲಕ್ಷ್ಮಿ, ಕುರುಬರ್, ಕೂಲಿ, ನೆಕ್ಕುಂದಿ ತಾಲ್ಲೂಕು ಶ್ರೀನಿವಾಸಪುರ.	4½—0 ಶಾಮಲವರ್ಣ, ಗುಂಡುಮುಖ, ಬಲಗಾಲು ಕುಂಟು.	ಕೆಂಪಣ್ಣಾ, ನೆಕ್ಕುಂದಿ ತಾಲ್ಲೂಕು ಶ್ರೀನಿವಾಸಪುರ.	ಚಿಂತಾಮಣೀ ಸಬ್ ಮಾಜಿಸ್ಟ್ರೇಟ್ ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 77ನೇ ನಂಬರ್ ಮೊಕದ್ದಮೇಲಿ 379ನೇ ಸೆಕ್ಷನ್ ಪ್ರಕಾರ ಕಳವು ತಕಸೀರಿಗಾಗಿ 76ನೇ ಇಸವಿ ಶಪ್ಟಂಬರ್ 4ನೇ ತಾರೀಖಿನಲ್ಲಿ 1 ತಿಂಗಳು ಶಿಂಪಲ್.ಸಜಾ,	ಡಿಟೋ.	ಡಿಟೋ.		

ಯಾವ ಜೈಲ್‌ನಿಂದ ಖುಲಾಸೇ ಮಾಡಲ್ಪಟ್ಟದ್ದು	ಜೈಲ್ ರಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಜಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿ ಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಲ್‌ನಲ್ಲಿ ದ್ದದ್ದು.	ಷರಾ.	ಜೈಲ್ ಸೂಪರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಕೋಲಾರ	1642	ಹೆಂಗಸು ಶೀತಿ, ಬೇಡರ್, ಕೂಲಿ, ಕೂರಿಗೆಪಲ್ಲಿ ತಾಲ್ಲೂಕು ಶ್ರೀನಿವಾಸಪುರ.	5—0 ಶಾಮಲವರ್ಣ, ಗುಂಡುಮುಖ, ಹಣೇ ಮೇಲೆ ಹಸರು ಹಚ್ಚೇಗುರ್ತು ಯಿದೆ.	ನಲ್ಲ, ಕೂರಿಗೆಪಲ್ಲಿ ತಾಲ್ಲೂಕು ಶ್ರೀನಿವಾಸಪುರ.	ಚಿಂತಾಮಣೀ ಸಬ್ ಮಾಜಿಸ್ಟ್ರೇಟ್ ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 83ನೇ ನಂ. ಮೊಕದ್ದಮೇಲಿ 76ನೇ ಇಸವಿ ಶಪ್ಟಂಬರ್ 21ನೇ ತಾರೀಖಿನಲ್ಲಿ 379ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 15 ದಿವಸ ಶಿಂಪಲ್ ಸಜಾ,	6ನೇ ಅಕ್ಟೋಬರು ಸರ್ 1876ನೇ ಇಸವಿ.	ಇಲ್ಲ.		
	1637	ಗಂಗ, ಬಲಗೈ, ಕೂಲಿ, ಬಾಗತ್ತೂರು ತಾಲ್ಲೂಕು ಶ್ರೀನಿವಾಸಪುರ.	5—3 ಶಾಮಲವರ್ಣ, ಗುಂಡುಮುಖ, ಬಲಗಡೇ ಮೊಣಕಾಲು ಮೇಲೆ ಘಾಯದ ಗುರ್ತು ಯಿದೆ.	ಹನುಮಂತಗಾ, ಬಾಗತ್ತೂರು ತಾಲ್ಲೂಕು ಶ್ರೀನಿವಾಸಪುರ.	ಶ್ರೀನಿವಾಸಪುರ ತಾಲ್ಲೂಕು ಕೋರ್ಟು ಚಾಲ್ತೀ ಇಸವೀ ಕ್ರಿಮಿನಲ್ 137ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷನ್ ಪ್ರಕಾರ ಕಳವು ತಕಸೀರಿಗಾಗಿ 76ನೇ ಇಸವಿ ಶಪ್ಟಂಬರ್ 18ನೇ ತಾರೀಖಿನಲ್ಲಿ 20 ದಿವಸ ಸಜಾ, ರಿಗರ್ಸ್.	7ನೇ ಡಿಟೋ.	ಡಿಟೋ.		
	1638	ಸೌದಪ್ಪ, ವಕ್ಕಲಿಗ, ಜಿರಾಯತು, ಬಾಗತ್ತೂರು ತಾಲ್ಲೂಕು ಶ್ರೀನಿವಾಸಪುರ.	5—7 ಕೆಂಪುಬಣ್ಣ ವೃದ್ಧಮುಖ, ಯಡಗಡೇ ಮೊಣಕಾಲ್ ಮೇಲೆ ಘಾಯದ ಗುರ್ತು ಯಿದೆ.	ಕೃಷ್ಣಪ್ಪ, ಬಾಗತ್ತೂರು ತಾಲ್ಲೂಕು ಶ್ರೀನಿವಾಸಪುರ.	ಶ್ರೀನಿವಾಸಪುರ ತಾಲ್ಲೂಕು ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 137ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷನ್ ಪ್ರಕಾರ ಕಳವು ತಕಸೀರಿಗಾಗಿ 76ನೇ ಇಸವಿ ಶಪ್ಟಂಬರ್ 18ನೇ ತಾರೀಖಿನಲ್ಲಿ 20 ದಿವಸ ರಿಗರ್ಸ್.	ಡಿಟೋ.	ಡಿಟೋ.		
	1639	ಈರಪ್ಪ, ವಕ್ಕಲಿಗ, ಜಿರಾಯತು, ಬಾಗತ್ತೂರು ತಾಲ್ಲೂಕು ಶ್ರೀನಿವಾಸಪುರ.	5—5 ಕೆಂಪುಬಣ್ಣ ಗುಂಡು ಮುಖ, ದೇವೀಕಲಮೆ ಮುಖದಮೇಲೆ ಯಿದೆ.	ಸೌದಪ್ಪ, ಬಾಗತ್ತೂರು ತಾಲ್ಲೂಕು ಶ್ರೀನಿವಾಸಪುರ.	ಡಿಟೋ.	ಡಿಟೋ.	ಡಿಟೋ.		

1643	ಬೂಟಾರಿಗ, ಯಡಗೈ, ಜಿರಾಯತು, ಮಡಬಹಳ್ಳಿ ತಾಲ್ಲೂಕು ಶಿಡ್ಲಘಟ್ಟ.	ಅಡಿ 5 ಅಂಗುಲ 5, ಶಾಮಲವರ್ಣ, ವೃದ್ಧಮುಖ, ಬಲಮೊಣಕಾಲುಕೆಳಗೆ ಹುಣಿನ ಮಚೆ ಯಿಧೆ.	ಕದರಿಗ, ಮಡಬಹಳ್ಳಿ, ತಾಲ್ಲೂಕು ಶಿಡ್ಲಘಟ್ಟ.	ಶಿಡ್ಲಘಟ್ಟ ತಾಲ್ಲೂಕು ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 83ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷನ್‌ಪ್ರಕಾರ ಕಳವಿಗಾಗಿ 76ನೇ ಇಸವಿ ಶಪ್ಟಂಬರ್ 20ನೇ ತಾರೀಖಿನಲ್ಲಿ 20 ದಿವಸ ರಿಗರ್ಸ.	10ನೇ ಅಕ್ಟೋಬರ್ 1876ನೇ ಇಸವಿ.	ಇಲ್ಲ.	
1597	ಬಡ್ಡುಗ, ಅಗಸರ್, ಕೂಲಿ, ವೆಲಗಲಬುರ್ರೆ, ತಾಲ್ಲೂಕು ಕೋಲಾರ.	5—5 ಕಪ್ಪುಬಣ್ಣ, ವೃದ್ಧಮುಖ, ಬಲಗಡೆ ಕಾಲು ಹೆಜ್ಜೇಮೇಲೆ ಘಾಯದ ಗುರ್ತು ಯಿಧೆ.	ವೆಂಗಟಿಗ, ವೆಲಗಲಬುರ್ರೆ, ತಾಲ್ಲೂಕು ಕೋಲಾರ.	ಕೋಲಾರ ತಾಲ್ಲೂಕು ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 98ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷನ್‌ಪ್ರಕಾರ ಕಳವಿಗಾಗಿ 76ನೇ ಇಸವಿ ಶಪ್ಟಂಬರ್ 11ನೇ ತಾರೀಖಿನಲ್ಲಿ 30 ದಿವಸ ರಿಗರಸ.	11ನೇ ಡಿಟೋ	ಡಿಟೋ	
1604	ಹೆಂಗಸು ತಿಮ್ಮಿ, ಗೊಲ್ಲರ್, ಭಿಕ್ಷಾ ಹಿಂದೂಪುರ ಹರ್ಮೇಜಿಸ್ಟ್ರೀ ಶೀಮೆ.	5—2½ ಕಪ್ಪುಬಣ್ಣ, ವೃದ್ಧಮುಖ, ದೇವೀಕಲಮೆ ಮುಂದಮೇಲೆ ಯಿಧೆ.	ನಂಜ, ಹಿಂದೂಪುರ ಹರ್ಮಾಜಿಸ್ಟ್ರೀ ಶೀಮೆ.	ಮುಳಬಾಗಲು ತಾಲ್ಲೂಕು ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 174ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷನ್‌ಪ್ರಕಾರ ಕಳವಿಗಾಗಿ 76ನೇ ಇಸವಿ ಶಪ್ಟಂಬರ್ 13ನೇ ತಾರೀಖಿನಲ್ಲಿ ವಂದು ತಿಂಗಳು ಶಿಂಪಲ್.	13ನೇ ಡಿಟೋ	ಡಿಟೋ	
1525	ಯಲ್ಲುಗಾ, ವಡ್ಡರ್, ಜಿರಾಯಿತು, ಪಾರಶಗಾನಪಲ್ಲಿ ತಾಲ್ಲೂಕು ಕೋಲಾರ.	5—4 ಕಪ್ಪುಬಣ್ಣ, ವೃದ್ಧಮುಖ, ಹಣೇಮೇಲೆ ಬಲಗಡೆ ಘಾಯದ ಗುರ್ತು ಯಿಧೆ.	ಗುರುವಾ, ಪಾರಶಗಾನಪಲ್ಲಿ ತಾಲ್ಲೂಕು ಕೋಲಾರ.	ಕೋಲಾರ [illegible] ಅ॥ ಕಮ್ಮಿಷನರವರ ಕೋರ್ಟು ಚಾಲ್ತಿ ಇಸವಿ ಕ್ರಿಮಿನಲ್ 88ನೇ ನಂಬರ್ ಮೊಕದ್ದಮೆಯಲ್ಲಿ 380ನೇ ಸೆಕ್ಷನ್ ಪ್ರಕಾರ ಕಳವಿಗಾಗಿ 76ನೇ ಇಸವಿ ಜುಲೈ 15ನೇ ತಾರೀಖಿನಲ್ಲಿ 3 ತಿಂಗಳು ರಿಗರ್ಸ.	15ನೇ ಡಿಟೋ	ಡಿಟೋ	

ಯಾವ ಜಿಲ್ಲೆಯಿಂದ ಬಂದದ್ದು [illegible]	ಜೈಲ್ ರಿಜಿಸ್ಟರ್ ನಂಬರ್	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾ[illegible]ಸ್ಥಳ.	[illegible], ಮತ್ತಾ ವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಜಹರ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಬಿಡುಗಡೆ ತಾರೀಖು.	ಯಿದಕ್ಕೆ ಮುಂಚೆ ಸಜಾ ಹೊಂದಿದ್ದರೆ	ಷರಾ.	[illegible]
1	2	3	4	5	6	7	8	9	10
	1460	ಪುಟ್ಟಪ್ಪ, ಸುಂಣಗಾರ ಸುಂಣಗಾರಕೆಲಸ, ಕಸಬಾ ಕೋಲಾರ.	5—10 ಕಪ್ಪುಬಣ್ಣಾ, ಪ್ರದಮುಖ, ದೇವೀಕಲಮೆ ಯಿಧೆ. ಹೊಟ್ಟೆಮೇಲೆ ಬರೇಗುರ್ತು ಯಿಧೆ.	ಹುಚ್ಚಣ್ಣಾ, ಕಸಬಾ ಕೋಲಾರ.	ಡಿಟೋ ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 67ನೇ ನಂಬರ್ ಮೊಕದ್ದಮೆಯಲ್ಲಿ 457—380ನೇ ಸೆಕ್ಷರ್ಷಪ್ರಕಾರ ಕಳವಿಗಾಗಿ 76ನೇ ಇಸವಿ ಮೇ 16ನೇ ತಾರೀಖಿನಲ್ಲಿ 5 ತಿಂಗಳು ರಿಗರ್ಸ್.	1[illegible] ಅಕ್ಟೋಬರ್ 1876ನೇ ಇಸವಿ.	ಇಲ್ಲ.		
	1636	ವೆಂಕಟದಾಸರಿ, ಜೇಡರ್, ಮರಕೆಲಸ, ಚಿಂತಾಮಣಿ ಕಸಬಾ.	5—7 ಕೆಂಪುಬಣ್ಣಾ, ಗುಂಡುಮುಖ, ಹಣೇಮೇಲೆ ದೇವೀಕಲವೆ ಯಿಧೆ.	ನಾಗ, ಚಿಂತಾಮಣಿ ಕಸಬಾ.	ಶ್ರೀನಿವಾಸಪುರ ತಾಲ್ಲೂಕು ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 135ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷರ್ಷಪ್ರಕಾರ ಕಳವಿಗಾಗಿ 76ನೇ ಇಸವಿ ಶಪಂಬರ್ 16ನೇ ತಾರೀಖಿನಲ್ಲಿ 1 ತಿಂಗಳು ರಿಗರ್ಸ್.	ಡಿಟೋ	ಡಿಟೋ		
ಕೋಲಾರ.	1417	ಕದರಿ ವೆಂಕಟಿಗ, ಗೊಲ್ಲರ್, ಕೂಲಿ, ಚದಂ ಹರ್ಮೇಜಸ್ಟ್ರೀ ಮ.	ಅಡಿ 5 ಅಂಗುಲ 7 ಕಪ್ಪುಬಣ್ಣಾ, ದಪ್ಪಮೂಗು, ವೃದ್ಧಮುಖ, ಯಡಗಡೆ ಮೊಣಕಾಲುಮೇಲೆ ಹುಂಣಿನಮಚ್ಚೆ ಯಿಧೆ.	ಸುಬ್ಬಣ್ಣ, ಚದಂಹರ್ಮಾಜಿಸ್ಟ್ರೀ ಶೀಮ.	ಕೋಲಾರ ಡಿ॥ ಡೆ॥ ಕಮ್ಮಿಷನರವರ ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 6ನೇ ನಂಬರ್ ಮೊಕದ್ದಮೆಯಲ್ಲಿ 379ನೇ ಸೆಕ್ಷರ್ಷ ಪ್ರಕಾರ ಕಳವಿಗಾಗಿ 7(ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ 6 ತಿಂಗಳು ರಿಗರ್ಸ್.	21ನೇ ಡಿಟೋ	ಡಿಟೋ		
	1418	ಯರ್ರಗಾನಮುನಿಗ, ಯಡಗೈ ಜಿರಾಯಿತು ಕುರುಬೂರು ತಾಲ್ಲೂಕು ಕೋಲಾರ.	5—4 ಕಪ್ಪುಬಣ್ಣ, ವೃದ್ಧಮುಖ, ದೇವೀಕಲಮೆ ಯಿದೆ, ಯಡಗಡೆ ಮೊಣಕಾಲುಮೇಲೆ ಹುಂಣಿನವ ಚ್ಚೆ ಯಿಧೆ.	ಚಿನ್ನಯರ್ರಗ, ಕುರುಬೂರು ತಾಲ್ಲೂಕು ಕೋಲಾರ.	ಕೋಲಾರ ಡಿ॥ ಸೆ॥ ಅ॥ ಕಮ್ಮಿಷನರವರ ಕೋರ್ಟು ಚಾಲ್ತೀ ಇಸವಿ ಕ್ರಿಮಿನಲ್ 52ನೇ ನಂಬರ್ ಮೊಕದ್ದಮೆಯಲ್ಲಿ 457—380ನೇ ಸೆಕ್ಷರ್ಷಪ್ರಕಾರ ಕಳವಿಗಾಗಿ 76ನೇ ಇಸವಿ ಏಪ್ರೆಲ್ 22ನೇ ತಾರೀಖಿನಲ್ಲಿ 6 ತಿಂಗಳು ರಿಗರ್ಸ್.	21ನೇ ಡಿಟೋ	ಡಿಟೋ		

565

P. N. PURNAIYA,
Officer in charge of Jail.

ತುಮಕೂರು.	1002	ಕೆಂಪ, ಮಾದಿಗರು ಶಿರಾ ತಾಲ್ಲೂಕು ಕಳ್ಳಂಬೆಳ್ಳ, ಕೂಲಿ.	ಯೋಣಿಕೆಂಪು, ಗಿಡ್ಡಾಳು ಹಣೆಮೇಲೆ ಅರ್ಧ ಅಂಗುಲ ವುದ್ದಾ ಹುಂಣು ಯಿದ್ದ ಕಲೆಯಿದೆ ಅಡಿ 5-4.	ಕರಿಯ, ಸಿರಾ ತಾಲ್ಲೂಕು ಕಳ್ಳಂಬೆಳ್ಳ	457ನೇ ಸೆಕ್ಷನ್ ಪ್ರಕಾರ ಸನ 1875ನೇ ಅಕ್ಟೋಬರ್ ತಾ॥ 23ರ ರ ಲಗಾಯತು ವಂದು ವರುಷ ಕಠಿಣ ಸಜಾ.	23ನೇ ಅಕ್ಟೋಬರ್ 1876ನೇ ಇಸವಿ.	ಇ:.	V. KRISHNASAMI, *Officer in charge of Jail.*
ಕಡೂರು.	45	ಬಸವ, ಬ್ಯಾಡರ್ ಜಿರಾಯಿತು.	ವಳ್ಳೇ ಯವ್ವನವಾದ ಆಳು, ಕೂದಲು ಕಪ್ಪು, ಶಾಮವರ್ನ, ಮುಖದಮೇಲೆ ಶಿಡಬಿನ ಕಲೆಯಿದೆ. ಮೂಗಿನಮೇಲೆ 2 ಆಣೆ ಅಗಲ ಮಚ್ಚೆ ಯಿಧೆ. ಯಡಗಡೆ ಮೊಳಕಾಲ ವಳಗೆ ವಂದು ಮಚ್ಚೆ ಯಿಧೆ. 5 ಅಡಿ 5 ಇಂಚ್.	ಹನುಮ, ತರೀಕೆರೆ.	ಕಳವುಮಾಡಿದ್ದಕ್ಕಾಗಿ ಒಂದು ತಿಂಗಳು ಕಠಿಣಸಜಾ, ಶಿವಾಯಿ 2 ರೂಪಾಯಿ ಜುರ್ಮಾನೆ ಕೊಡದೆ ತಪ್ಪಿದರೆ ಪುನಹ 4 ದಿವಸ ಅದೇ ತರಹ 3—6—76.	7-7-76.	..	B. SRINIVASAIENGAR, *Officer in charge of Jail.*
	69	ಗವಿಯ, ಬೆಸ್ತರವ, ಕೂಲಿ,	ತೆಳ್ಳನೇಆಳು, ಕಪ್ಪುವರ್ನ, ಕೂದಲು ಕಪ್ಪು, ಯಡಗಡೆ ತೋಳಿನ ಮೇಲೆ 2 ಆಣೆ ಅಗಲ ಘಾಯದ ಗುರ್ತುಯಿಧೆ. 5 ಅಡಿ 3 ಇಂಚ್.	ದಾಸ, ತರೀಕೆರೆ ತಾಲ್ಲೂಕುಗಡಿಹಳ್ಳಿ.	ಕಳವುಮಾಡಿದ್ದಕ್ಕೆ 1 ತಿಂಗಳು ಕಠಿಣಸಜಾ, 1 ರೂಪಾಯಿ ಜುರ್ಮಾನೆ ಕೊಡದೆ ತಪ್ಪಿದರೆ 7 ದಿವಸ ಅದೇ ತರಹ 14—7 76.	21-8-76.	..	
	70	ಕೀರಳ, ಲಂಬಾಣಿ, ಕೂಲಿ,	ತೆಳ್ಳನೇಆಳು, ಕಪ್ಪುವರ್ನ, ಬಲಗಡೆ ತೊಡೇಹಿಂದೆ 3 ದುಂಡಾದ ಘಾಯವಿದೆ. ಯದೆ ಮೂಳೇಮೇಲೆ 1 ಸಣ್ಣ ಕಪ್ಪಾದ ಮಚ್ಚೆ ಯಿಧೆ. 5—8.	ಚಿಕ್ಕ, ಡಿಟೋ.	ಡಿಟೋ	21-8-76.	..	
	22	ಚನ್ನ, ವಕ್ಕಲಿಗ, ಜಿರಾಯಿತು,	ತೆಳ್ಳನೇಆಳು, ಕಪ್ಪುವರ್ನ, ಬಲಗಡೆ ಮೊಳಕಾಲುಹಿಂದೆ 1 ದುಂಡಾದ ಘಾಯವಿಧೆ. ಬಟ್ಟಮುಖ, ಹುಚ್ಚನಹಾಗೆ ನೋಟ 5—4½.	ಸಟ್ಟೋಜಿ, ಚಿಕ್ಕಮಗಳೂರು ತಾಲ್ಲೂಕು ಗೊಲ್ಲಹಳ್ಳಿ.	ಕಳವುಮಾಡಿದಕ್ಕಾಗಿ 6 ತಿಂಗಳು ಕಠಿಣಸಜಾ, 14—3 76.	14-9-76.	..	
	74	ರಂಗ, ಅಗಸರ್ ಕೂಲಿ,	ಕುಳ್ಳನಾದ ಆಳು, ಕಪ್ಪುವರ್ನ, ಕೂದಲು ಕಪ್ಪಗೆ ಯಿಧೆ. ಬಲಗಡೆ ಭುಜದ ಮೇಲೆ	ಲಿಂಗ, ಬಳ್ಳಾರಿಜಿಲ್ಲ ಹರಪನಹಳ್ಳಿ.	ಕಳವುಮಾಡಿದ್ದಕ್ಕಾಗಿ 30 ದಿವಸ ಕಠಿಣಸಜಾ, 18–8–1876.	17-9-76	..	

ಯಾವ ಜಿಲ್ಲೆಯಿಂದ ಬಂದನು ಹಾಜರಾದದ್ದು.	ಜೈಲಿನ ರಿಜಿಸ್ಟರಿನ ಟಿಕೆಟ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖುಮತ್ತು ಯಾವ ತಕಸೀರಿಗೋಸ್ಕರ.	ಬಿಡುಗಡೆ ತಾರೀಖು.	ಹಿಂದೆ ಸಜಾ ಆಗಿದ್ದರೆ ಎಷ್ಟು ದಫೆ.	ಷರಾ.	ಜೈಲು ಸುಪರಿಂಟೆಂಡೆಂಟರ ದಸ್ತಖತು.
1	2	3	4	5	6	7	8	9	10
ಕಡೂರು.			ದಪ್ಪನಾದ ಕಲೆ ಯಿಧೆ. ಬಲಗಡೆ ಕುತ್ತಿಗೆ ಮೇಲೆ ವಂದು ದೊಡ್ಡದಾದ ಘಾಯವಿಧೆ.						
	942	ವೆಂಗಟ, ಯಾನೆ ಯಂಗಟ, ತೆಲುಗ, ಕೂಲಿ, ನಗರದ ತಾಲ್ಲೂಕು.	ಬಲಗಡೆ ಕುತ್ತಿಗೆಮೇಲೆ 1 ಕಲೆಯು, ಸದರೀ ಪಾರ್ಶ್ವ ಯದೆಮೇಲೆ 1 ಅದರಕೆಳಗಡೆ 2 ಕಲೆಗಳು ಸಹಯಿವೆ. ಯಡದ ಮೊಣಕೈಯಲ್ಲು ದೂರದೂರ ಕಲೆಗಳು ಯಿವೆ. ಬಲಪಾರ್ಶ್ವ ಹೊರಗಡೆ ಸೊಂಟದಲ್ಲು 3 ಮುಖ್ಯವಾದ ಕಲೆಗಳು ಯಿವೆ. ಬಲದ ತೊಡೆಮೇಲೆ 2 ಕಲೆಗಳು, ಯಡದ ಕಾಲ್ಮಿರ್ಗಿಕಂಡದಲ್ಲು 2 ಕಲೆಗಳು ಸಹಯಿವೆ. ಕಪ್ಪುವರ್ಣ, 5 ಅಡಿ 3 ಯಿಂಚು ಎತ್ತರಯಿದ್ದಾನೆ.	ತಿಮ್ಮ,	ಕ್ರಿಮಿನಲ್ ಪ್ರೊ॥ ಕೋಡ್ 38ನೇ ಛಾಪ್ಟರ್ ಮೇರೆ ಕಟ್ಟ ಜೀವನಗಾರನಾಗಿದ್ದದ್ದಕ್ಕೋಸ್ಕರ ಕೊಡಗು ಫ॥ ಅ॥ ಸೂಪರಿಂಟೆಂಡೆಂಟ್ ಸಾಹೆಬರವರ ಸರ್ 1876ನೇ ಇಸವಿ ಕ್ರಿಮಿನಲ್ ನಂಬರ್ 6ರ ಫೈಸಲ್ ಮೇರೆ 50 ರೂಪಾಯಿಗೆ ವಳ್ಳೇನಡತೆ ಜಾಮಿರ್ಗಿ ಕೊಡದೆ ತಪ್ಪಿದ ಕಾರಣ ಸರ್ 1876ನೇ ಇಸವಿ ಮೇ ತಾರೀಖು 6ರಿಂದ 6 ತಿಂಗಳು ಕಠಿಣ ಖೈದು.	6ನೇ ನವಂಬರ್ 1876ನೇ ಇಸವಿ.	2 ದಫಾ ಸಜಾ ಆಗಿಧೆ.		
	943	ಮುನಿಯ. ಯಾನೇ ಹನುಮ, ಉಪ್ಪಾರ, ಕೂಲಿ. ನಗರದ ತಾಲ್ಲೂಕು.	ಯರಡು ಪಾರ್ಶ್ವ ಕೊನೆಮೊಲೆಯಲ್ಲಿ, ಸೋಡಿನ ಕಲೆಗಳುಯಿವೆ. ಬಲಗಡೆ ಕುತ್ತಿಗೆ ಮೇಲೆ 1 ಕಲೆಯಿದೆ. ಯಡಗಡೆ ಕುತ್ತಿಗಬಳಿ 2 ಸದರೀ ಕುತ್ತಿಗೆ ಮೂಳೆಬಳಿ 1 ಕಲೆ ಸಹಯಿಧೆ. ಬಲದ ತೊಡೆ ಹಿಂದುಗಡೆ 5 ಕಲೆಗಳು ಸದರೀ ಮಂಡಿಕಾಲಲ್ಲು ಸಂಣದೊಂದು ಕಲೆಸಹ ಯಿಧೆ. ಕಪ್ಪುವರ್ಣ, 5 ಅಡಿ 2 ಯಿಂಚು ಎತ್ತರ.	ತಿಮ್ಮ,	ಡಿಟ್ಟೋ.	ಡಿಟ್ಟೋ.	1 ದಫಾ ಸಜಾ ಆಗಿಧೆ.		

ಕೊಡಗು.

944	ಯಂಗಟ, ಉಪ್ಪಾರ ಕೂಲಿ, ನಗರದ ತಾಲ್ಲೂಕು.	ಯಡದ ಕೆನ್ನೆಮೇಲೆ 1 ಕಪ್ಪುಮಚ್ಚೆಯಿದೆ. ಸದರೀ ಹೆಗಲುಮೇಲೆ 1 ಕಪ್ಪುಮಚ್ಚೆ ಯಿದೆ. ಬಲದ ಮೊಲೆಬಳಿ 1 ಉದ್ದವಾದ ಕಲೆಯು, ಮತ್ತೊಂದು ಸಣ್ಣಕಲೆಸಹ ಯಿಧೆ. ಬಲಗಡೆ ಯದೇಲಿ 4 ಕಪ್ಪುಮಚ್ಚೆಗಳು ಮತ್ತು ಕಲೆಗಳು ಸಹಯಿಧೆ. ಯಡದ ಮೊಲೇಮೇಲೆ ದೊಡ್ಡದೊಂದು ಕಲೆಯು. ಬಲದ ಕೈಕಟ್ಟು ಮೊಳೆಮೇಲೆ ಮತ್ತು ಯರಡು ಮುಂಗೈಲಿ ಸಹ ಕಪ್ಪುಹಚ್ಚೆ ಚುಚ್ಚಿ ಯಿಧೆ. ಬಲದಕಾಲ್ ಮಂಡಿಮೇಲೆ 1 ಕಲೆಯು. ಸದರೀ ಮುಂಗಾಲಲ್ಲು 2 ಕಲೆಗಳು. ಯಡದತೊಡೆ ಹಿಂದುಗಡೆ 1 ಕಲೆಸಹ ಇದೆ. ಯಣೆಕೆಂಪು ವರ್ನ. 4 ಅಡಿ 8 ಯಿಂಚು ಎತ್ತರ ಯಿದ್ದಾನೆ.	ಮುನಿಯ.	ಡಿಟೋ.	ಡಿಟೋ.	ಇಲ್ಲ.		
945	ಭೀಮಿ, ಉಪ್ಪಾರ ಕೂಲಿ, ನಗರದ ತಾಲ್ಲೂಕು.	ನಡುಹಣೆಮೇಲೆ ಯಡದ ಕೈಯಿ ಕಟ್ಟು ಮೊಳೆಮೇಲೆ ಮತ್ತು 2 ಮುಂಗೈಲಿ ಸಹ ಕಪ್ಪುಹಚ್ಚೆ ಚುಚ್ಚಿಯಿಧೆ. ಬಲದ ಮೊಲೆಬಳಿ ಸಣ್ಣದೊಂದು ಕಪ್ಪುಮಚ್ಚೆಯಿಧೆ. ಹೊಟ್ಟೆಹೊಕ್ಕಳದಿಂದ ಕೆಳಗೆ 1 ಸಣ್ಣಕಪ್ಪುಮಚ್ಚೆಯು ಮತ್ತೊಂದು ಕಲೆಸಹಯಿಧೆ. ಯರಡು ಕಾಲ್ಮಂಡಿಮೇಲೆಯೂ ಮತ್ತು ಮುಂಗಾಲಲ್ಲು ಸಹ ನಾನಾವಿಧ ಹುಣ್ಣಿನ ಕಲೆಗಳುಯಿವೆ. ಯಣೆಕೆಂಪುವರ್ಣ 5 ಅಡಿ ಎತ್ತರ.	ಹನುಮ.	ಡಿಟೋ.	ಡಿಟೋ.	ಇಲ್ಲ.		

ಯಾವಜೈಲ್‌ನಿಂದಖುಲಾಸೇಮಾಡಲ್ಪಟ್ಟದ್ದು	ಜೈಲ್ ರಿಜಿಸ್ಟರಿನಲ್ಲಿ ಜನರಲ್ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಜಹರ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕ್ಕೇರಿಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟುದಫೆ ಜೈಲ್‌ನಲ್ಲಿದ್ದದ್ದು.	ಷರಾ.	ಜೈಲ್ ಸೂಪರ್ರಿಂಟೆಂಡೆಂಟರವರ ದಸ್ತಖತ್.
1	2	3	4	5	6	7	8	9	10
ಕೊಡಗು.	946	ಕೇಚಿ, ತೆಲುಗ, ಕೂಲಿ, ನಗರದ ತಾಲ್ಲೂಕು.	ನಡುಹಣೆಮೇಲೆ ಬಲದ ದವಡೇಮೇಲೆ ಗಡ್ಡಮಂಡಿಗೇಲಿ ಸಹ ಕಪ್ಪುಹಚ್ಚೆ ಚುಚ್ಚಿಧೆ, 2 ಕನ್ನೇಯಲ್ಲು ಸೊಡಿನ ಕಲೆಗಳುಯಿಧೆ. ಬಲದ ಕುತ್ತಿಗೆ ಗುಂಡಿಬಳಿ 1 ಹಿಂದುಗಡೆ ಬೆನ್ನುಮೇಲೆ 1 ಸಹ ಸಣ್ಣ ಕಪ್ಪುಮಚ್ಚೆಗಳುಯಿಧೆ. 2 ಕೆನ್ನೇಮೇಲೆಯೂ ಕಪ್ಪುಹಚ್ಚೆ ಚುಚ್ಚಿ ಇಧೆ, ಯಡದಕಾಲ್ ಮಂಡೀಮೇಲೆ 1 ಸದರೀ ತೊಡೇ ವಳಪಾರ್ಶ್ವದಲ್ಲು 1 ಕಲೆ ಸಹ ಯಿಧೆ, ಯಣೆಕೆಂಪು ವರ್ಣ 4 ಫೂಟ್ 7½ ಇಂಚು ಎತ್ತರ.	ಗೊತ್ತಿಲ್ಲ.	ಕ್ರಿಮಿನಲ್ ಪ್ರೊ॥ ಕೋಡ್ 388ನೇ ಚಾಪ್ಟರ್ ಮೇರೆ ಶೆಟ್ಟಿ ಜೀವನಗಾರನಾಗಿದ್ದದ್ದಕ್ಕೋಸ್ಕರ ಕೊಡಗು ಫ॥ ಅ॥ ಸೂಪರ್ರಿಂಟೆಂಡೆಂಟ್ ಸಾಹೆಬರವರ ಸರ್ 1876ನೇ ಇಸವಿ ಕ್ರಿಮಿನಲ್ ನಂಬರ್ (೮) ಫೈಸಲ್ ಮೇರೆ 50 ರೂಪಾಯಿಗೆ ವಳ್ಳೇನಡತೆ ಜಾಮೀನ್ ಕೊಡದೆ ತಪ್ಪಿದ ಕಾರಣ ಸರ್ 1876ನೇ ಇಸವಿ ಮೇ ತಾರೀಖು (೮)ರಿಂದ 6 ತಿಂಗಳು ಕಠಿಣ ಖೈದು.	ಡಿಟೋ.	ಇಲ್ಲ.		
	947	ಸಣ್ಣಯಂಗಟ, ತೆಲುಗ, ಕೂಲಿ, ನಗರದ ತಾಲ್ಲೂಕು.	ನಡುಹಣೇಮೇಲೆ ಬಲದ ದವಡೇಮೇಲೆ ಗಡ್ಡಮಂಡಿಗೆಬಳೀಲಿ ಮತ್ತು ಬಲದ ಮುಂಗೈಲಿ 4 ಜಾಗದಲ್ಲು ಸಹ ಕಪ್ಪುಹಚ್ಚೆಗಳು ಚುಚ್ಚಿಯಿದೆ. ಯಡದ ದವಡೇಮೇಲೆ 1 ಕಲೆ ಯಿಧೆ. ಯಡದ ಮೊಲೇಬಳಿ 2 ಕಪ್ಪುಮಚ್ಚೆಗಳು ಸಣ್ಣದಾಗಿಧೆ. ಯಣೆಗೆಂಪುವರ್ಣ, 4 ಫೂಟ್ 9½ ಇಂಚ್ ಎತ್ತರ.	ತಿಮ್ಮ.	ಡಿಟೋ.	ಡಿಟೋ.	ಇಲ್ಲ.		
	769	ತೆಲುಗರ ಚಿನ್ನಪೈಯ, ವ್ಯಾಪಾರದ ಕಸಬು, ಕೊಡಗು, ವಿರರಾಜೇಂದ್ರಪೇಟೆ.	ಉಭಯಕಡೇ ಹಣೇ ಪೊಟ್ಟೆನಲ್ಲಿ ತೆಳ್ಳನೆ ಗಾಯಗಳು ಯಿವೆ. ಹಣೇಮೇಲೆ 4 ಗಾಯಗಳಿವೆ, ಯಡದ ಕುತ್ತಿಗೇ ಬಳಿಯಲ್ಲಿ 1 ಸಣ್ಣ ಮಚ್ಚೆಯಿದೆ. ಯಡದ ರೆಪ್ಪೆಯಲ್ಲು 1 ಗಾಯವಿದೆ. ಯಡ ಬೀಜದಮೇಲೆ 1 ಸಣ್ಣ ಮ	ಚಿನ್ನಶೆಟ್ಟಿ.	1 ವರುಷ ಕಠಿಣಖೈದು ಸರ್ 1875ನೇ ಇಸವಿ ಅಕ್ಟೋಬರ್ ತಾರೀಖು (೮)ರಿಂದಾ, ಮನೆಗೆ ಅತಿಕ್ರಮ ಪ್ರವೇಶಮಾಡಿದ್ದು, ಕೊಡಗು ಫ॥ ಅ॥ ಸೂಪರ್ರಿಂಟೆಂಡೆಂಟ್ ಕೋರ್ಟ್	1876ನೇ ಇಸವಿ ಅಕ್ಟೋಬರು ಮಾಹೇ 6ರಲ್ಲು ಖುಲಾಸ್.	ಇಲ್ಲ.		

ಕೊಡಗು.

		ಜ್ಜೆ ಯಿಗೆ ... ಬಲದತೊಡೇ ಹೊರಪಾರ್ಶ್ವದಲ್ಲು ಚನ್ನಾಗಿ ಕಾಣುವ 5 ಗುಮೆಗಳಿವೆ. ಯೆಡದ ಮುಂಗಾಲಿನಕಳಗೆ 1 ದೊಡ್ಡಗಾಯ ಚನ್ನಾಗಿ ಕಾಣುತ್ತೆ. ಕಪ್ಪುವರ್ಣ, ಎತ್ತರ 5 ಫೂಟ್ 3 ಯಿಂಚು.		1875ನೇ ಇಸವಿ ಬಾಬತು ಕೇಸ್ ನಂಬರು 129ರ ಫೈಸಲೆಮೇರೆ.			
842	ಜಟ್ಟಿ ಅಂಣಪ್ಪ, ಕಿಗ್ಗಟ್ಟುನಾಡು ತಾಲ್ಲೂಕು ರೈಯತ್, ಕಸಬು ಕೊಡಗು ಜಿಲ್ಲಾ.	ಮೊಖವೆಲ್ಲಾ ಸಿಡುಬಿನ ಕಲೆಇದೆ. ಬಲದ ಮಂಡೀಮೇಲೆ 3 ದೊಡ್ಡ ಗಾಯಿಗಳಿವೆ, ಬಲದ ಪಾದದಮೇಲೆ 1 ಗಾಯವಿದೆ. ಯೆಡದ ಮಂಡೀಮೇಲೆ 1 ಗಾಯವಿದೆ. ಯೆಣೆಕೆಂಪುವರ್ಣ, ಎತ್ತರ 5 ಫೂಟ್ 4 ಯಿಂಚು.	ವೈಕುಂಟೂ.	9 ತಿಂಗಳು ಕಾಣಖೈದು, ಸರ್ನ 1876ನೇ ಇಸವಿ ಜನವರೀ ತಾರೀಖು 5ರಿಂದಾ ಮನೇನುಗ್ಗಿ ಕಳವು ಮಾಡಿದ್ದು ಕೊಡಗು ಫ॥ ಅ॥ ಸೂಪರಿಟೆಂಡೆಂಟ್ ಕೋರ್ಟು 1876ನೇ ಇಸವಿ ಬಾಬತು ಕೇಸ್ ನಂಬರು 192ರ ಫೈಸಲೆಮೇರೆ.	1876ನೇ ಇಸವಿ ಅಕ್ಟೋಬರು ತಾರೀಖು 5ರಲ್ಲು ಖುಲಾಸ.	ಇಲ್ಲ.	
923	ರುದ್ರಪ್ಪ, ಅಕಸಾಲೆ, ನಿಡ್ಡದ ಹೋಬಳಿ ಕೊಡಗು ಡಿಸ್ಟ್ರಿಕ್ಟು.	ತಲೆಸ್ವಲ್ಪ ಬೊಟ್ಟೆಯಾಗಿದೆ, ತಲೆಹಿಂದೆ 3 ಗಾಯಗಳಿವೆ, ಯೆಡದ ಬುಜದಮೇಲೆ 1 ಕಲೆಇದೆ, ಯೆದೆತುಂಬ ರೋಮವಿದೆ, ಜನ್ನಿನಮೇಲೆ ಮಧ್ಯಪಾರ್ಶ್ವದಲ್ಲು ಚನ್ನಾಗಿ ಕಾಣುವ 2 ಕಲೆಗಳಿವೆ, ಯೆಡದ ತೋಳಿನ ವಳಗಡೆ 1 ಕಲೆಇದೆ, ಬಲದ ಮುಂಗಾಲಿನ ಮೇಲೆ 1 ಕಲೆಇದೆ, ಬಲದತೊಡೇವಳಗೆ ಕೆಳಗಡೆ 1 ಕಲೆಇದೆ, ಯೆಣೆಂಪುವರ್ಣ, ಎತ್ತರ 5 ಫೂಟ್ 4 ಯಿಂಚು.	ನಂಜಪ್ಪ.	6 ತಿಂಗಳು ಕಾಣಖೈದು, 1876ನೇ ಇಸವಿ ಏಪ್ರೆಲ್ ತಾರೀಖು 14ರಿಂದ ಚೋರೀಮಾಲ್ ತೆಗದುಕೊಂಡದ್ದು ಕೊಡಗು ಫ॥ ಅ॥ ಸೂಪರಿಂಟೆಂಡೆಂಟ್ ಕೋರ್ಟು 1876ನೇ ಇಸವಿ ಬಾಬತು ಕ್ರಿಮಿನಲ್ ಕೇಸ್ ನಂಬರು 48ರ ಫೈಸಲ್ಮೇರೆ.	14ನೇಅಕ್ಟೋಬರು1876ನೇ ಇಸವಿ.	ಇಲ್ಲ.	

J. S. Dill, M. D., *Supt.*

Mysore Government Press, Bangalore—1876.

572

ಮೈಸೂರ ಗೆಜೆಟ್.

ನಂ. 49 ಸರ್ಕಾರದಿಂದ ಛಾಯಿಸಿ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಡಿಶಂಬರ ತಾ|| 9, ಸ್ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	313—321
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್‌ಸರವೇಟರು, ಮ್ಯುನಿಸಿಪೆಲ್ ಬೋರ್ಡ್ಸ್ ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. ..	585—591
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 293. ತಾರೀಖು 21ನೇ ನವೆಂಬರ್ 1876.

1870ನೇ ಇಸವಿ 10ನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್‌ಷನ್ ಅನುಸರಿಸಿ ಯಿದರಿಂದ ತಿಳಿಸಲ್ಪಡುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಹಾಸನ ಕಸಬೇಯಲ್ಲಿರುವ ಬಂದು ತಾಕು ಜಮೀನ್ ಸರ್ಕಾರ್ ಕೆಲಸಕ್ಕೋಸ್ಕರ ಅಂದರೆ ಸ್ಥಳದ ಅಭಿವೃದ್ಧಿ ಬಗ್ಯೆ ಮ್ಯುನಿಸಿಪಾಲಿಟಿ ಯವರಿಗೆ ಬೇಕಾಗಿರುತ್ತೆ. ರಹಿಮಾನ್‌ಖಾನ್ ಎಂಬ ಬಬ್ಬನು ಸದರೀ ತಾಕಿಗೆ ಬಾಧ್ಯತೆ ತಂದಿರುವ ಸಬಬ್ ಅದರ ಕಡಗಟ್ಟು ನಕ್‌ಷೆಯನ್ನು ಹಾಸನ ಡಿಸ್ಟ್ರಿಕ್ಟ್ ಡಿ|| ಕಮ್ಮಿಷನರ ಆಫಿಸಿನಲ್ಲಿ ಕೇಳಿ ನೋಡಿಕೊಳ್ಳ ಬಹುದು. 926ನೇ ನಂಬರ ಬಾಬತು ಬಂದು ತಾಕು 1—7—13 ವಿಸ್ತೀರ್ಣ ಏರುತ್ತೆ. ಇದರ ಕಂದಾಯ 2·67 ಯಿರುತ್ತೆ. ಈ ಜಮೀನ್ ಬಾಬತು ಪಟ್ಟೇದಾರರು ಅಮೀರ್ ಸಾಹೆಬ್ ವ ದಸ್ತಗೀರ್ ಸಾಹೆಬ್, ಇದರ ಖರೀದೀದಾರ್ ರಹಿಮಾನ್‌ಖಾನ್.

ಯಿ... ಚತುರ್ಸೀಮೆ.

ಉತ್ತರಕ್ಕೆ—ಹಾಸನ ತಿಮ್ಮ ವಗೈರೇರ ಹೊ...ಳು ಮತ್ತು ಫಾರೆಸ್ಟುಡಿಪೊ.

ಪೂರ್ವಕ್ಕೆ—ಮಹಾನೌಮಿ ಮಟ್ಟಸಕ್ಕೂ, ಹಳೇ ಬೀಡಿಗೂ ಹೋಗುವ ರಸ್ತೆ.

ದಕ್ಷಿಣಕ್ಕೆ—ಮ್ಯುನಿಸಿಪಲ್ ಭೂಮಿ ಮತ್ತು ಹೊಸೆಲ್ಯೆನಿಂದ ಬಂಗ್ಲೆಗಳಿಗೆ ಹೋಗುವ ರಸ್ತೆ.

ಪಶ್ಚಿಮಕ್ಕೆ—ರಾಮಸ್ವಾಮಿ ಐಯ್ಯರ್‌ಯವರ ಮನೆಗೆ ಪೂರ್ವಕ್ಕೆ ಯಿರುವ ಬಂದು ಮ್ಯುನಿಸಿಪಲ್ ಪೋಣಿ.

ನಂ. 310. ತಾರೀಖು 1ನೇ ಡಿಶಂಬರ 1876.

ಮೈಸೂರು ಶಿವಿಲ್ ಸರ್ಜ್ಜನ್, ಸರ್ಜನ್ ಮೆಕ್ಗ್ಲಾರ್ ಯವರು, ದೆಹಲೀಪಟ್ಟಣಕ್ಕೆ ಚೀಪ್ ಕಮ್ಮಿಷನರ್ ಸಾಹೆಬರವರ ಸಂಗಡ ಸ್ಪೆಷಲ್ ಕೆಲಸದಮೇಲೆ ಹೋಗುವ ಮೇಜರ್ ಹೆಂಡರಸನ್ ಯವರ ಗೈರ್‌ಹಾಜರೀಯಲ್ಲಿ ಸೆಂಟ್ರೆಲ್ ಜೆಯಿಲ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್.

ಸರ್ಜ್ಜನ್, ಮೆಕ್ಗ್ಲಾರ್ ಯವರು, ಕೆಮಿಕಲ್ ಯಗ್ಜಾಮಿನರ್ ಕೆಲಸಗಳನ್ನೂ ನಿರ್ವಹಿಸುತ್ತಾ ಯಿರತಕ್ಕದ್ದು.

ನಂ. 312. ತಾರೀಕ್ 4ನೇ ಡಿಶಂಬರ 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಜುಡಿಷಿಯಲ್ ಅಸಿಸ್ಟೆಂಟ ಮೆಸ್ಟರ್ ನರಹರಿರಾಯರಿಗೆ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ ಅಧಿಕಾರಗಳೂ 1872ನೇ ಇಸವಿ 10ನೇ ಆಕ್ಟು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 27 (a) ಸೆಕ್ಷನ್ 2 ವ 5ನೇ ಕ್ಲಾಸ್‌ಗಳಲ್ಲಿ ನಮೂದಿಸಲ್ಪಟ್ಟ ಜಾಸ್ತೀ ಅಧಿಕಾರಗಳೂ ಹಂಗಾಮಿಯಾಗಿ ಕೊಡಲ್ಪಟ್ಟಿವೆ. ಮತ್ತು ಫಿರ್ಯಾದಿಗಳ ಯಾ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವತಃ ಬರದುಕೊಳ್ಳಲಿಕ್ಕೆ ಐರ್ನ ಆಕ್ಟಿನ 335ನೇ ಸೆಕ್ಷನ್ ನಿಯಮವನ್ನು ಅನುಸರಿಸಿ ಅಪ್ಪಣೆಕೊಡಲ್ಪಟ್ಟಿರುತ್ತೆ.

ನಂ. 313. ತಾರೀಖು 5ನೇ ಡಿಶಂಬರ 1876.

ಏಲೂರು ಅಮಲ್‌ದಾರ್ ಸೈಯದ್ ಅಬ್ದುಲ್ ಖಾದರ್‌ಯವರು ಮೈಸೂರು ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನ್ನರ್‌ಯವರ ತಾಬೇದಾರಿಯಲ್ಲಿ ಆಡಿಸ್ಟ್ರಿಕ್ಟಿನ ಫೇಸಾಯುದ ದನಗಳಿಗೆ ಮೇವು ವದಗಿಸುವ ಜಗ್ಯೆ ನಡಿಸಲ್ಪಡುವ ಸನ್ನಾಹಗಳನ್ನು ಕುರಿತ ವಿಶೇಷ ಕೆಲಸದಮೇಲೆ ಯಿರಿಸಲ್ಪಟ್ಟಿರುತ್ತಾರೆ.

ನಂ. 314. ತಾರೀಖು 5ನೇ ಡಿಶಂಬರ 1876.

ಯಿದರಡಿ ಬರುವ ಮುನಸೀಫರ ಬಡತಿಗಳು ವ ವರ್ಗಾ ವರ್ಗಿಗಳು ಮಂಜೂರಾಗಿವೆ.

ಬಡತೀಗಳು.

ಚಿಕ್ಕಬಳ್ಳಾಪುರ ಸಬ್ ಡಿವಿಜನ್ 2ನೇ ಕ್ಲಾಸ್ ಮುನಸೀಫ಼ ಮೆಸ್ಟರ್ ಕ್ರೀಸ್ ಯವರು, B ರೋಲ್ 6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರಾಗಿ ಆಕ್ಟಿಂಗ್‌ತರೀಕ್ ಮೊಕರರ್‌ಮಾಡಲ್ಪಟ್ಟ ನರಹರಿರಾಯರಿಗೆ ಬದಲಾಗಿ ಫಸ್ಟ್‌ಕ್ಲಾಸ್ ಮುನಸೀಫರಾಗಿರತಕ್ಕದ್ದು.

3ನೇ ಕ್ಲಾಸ್ ಮುನಸೀಫ್ ರಾಘವೇಂದ್ರರಾಯರು ಮೆ॥ ಕ್ರೀಸ್ ಯವರಿಗೆ ಬದಲಾಗಿ 2ನೇ ಕ್ಲಾಸ್ ಮುನಸೀಫರಾಗಿರತಕ್ಕದ್ದು.

ವರ್ಗಾವರ್ಗಿಗಳು.

ಬಿ. ತಿರುಮಲಾಚಾರ್ರು ಮೈಸೂರು ಡಿಸ್ಟ್ರಿಕ್ಟು ಮೈಸೂರು ಸಬ್‌ಡಿವಿಜನ್ನಿಂದ ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ಸಬ್ ಡಿವಿಜನ್ನಿಗೆ ವರ್ಗ.

ರಂಗಸಾಮೈಯಂಗಾರ್ರು ಮೈಸೂರು ಡಿಸ್ಟ್ರಿಕ್ಟು ನಂಜನಗೂಡು ಸಬ್ ಡಿವಿಜನ್ನಿಂದ ಮೈಸೂರು ಡಿಸ್ಟ್ರಿಕ್ಟು ಮೈಸೂರು ಸಬ್ ಡಿವಿಜನ್ನಿಗೆ ವರ್ಗ.

ನಂ. 315. ತಾರೀಖು 5ನೇ ಡಿಶಂಬರ 1876.

ನಗರ ಡಿವಿಜನ್ ಅಮಲ್‌ದಾರ್‌ಗಳ ಯಿದರಡಿ ನಮೂದಿಸಲ್ಪಡುವ ಬಹಲ್‌ಗಳು ಬಡತೀಗಳು ವ ಮೊಕರರ್‌ಗಳು 1876ನೇ ಇಸವಿ ನವಂಬರ್ ಗುರ್ರೇ ಲಗಾಯಿತು ಮಂಜೂರ್‌ಮಾಡಲ್ಪಟ್ಟಿವೆ.

ಬಹಲ್,—ಸೂಪರ್ ನ್ಯೂಮರೆ ಅಮಲ್‌ದಾರ್ ಸಾಲದಾನಹಾ ಯವರು 150 ರೂಪಾಯಿ ತಲಬು ನೀಳ 4ನೇ ಕ್ಲಾಸ್ ಅಮಲ್‌ದಾರ್ರಾಗಿರತಕ್ಕದ್ದು.

ಬಡತೀಗಳು,—200 ರೂಪಾಯಿ ತಲಬುಳ್ಳ 2ನೇ ಕ್ಲಾಸ್ ಅಮಲ್‌ದಾರ್ ವೇದಾಂತೈಯಂಗಾರ್ರು 250 ರೂಪಾಯಿ ತಲಬು ನೀಳ ಫಸ್ಟ್‌ಕ್ಲಾಸ್ ಅಮಲ್‌ದಾರ್ರಾಗಿರತಕ್ಕದ್ದು.

175 ರೂಪಾಯಿ ತಲಬುಳ್ಳ 3ನೇ ಕ್ಲಾಸ್ ಅಮಲ್‌ದಾರ್ ಮಹಮದ್ ತಾಯರ್ ಯವರು ವೇದಾಂತೈಯಂಗಾರ್ರಿಗೆ ಬದಲಾಗಿ 200 ರೂಪಾಯಿ ತಲಬುನೀಳ 2ನೇ ಕ್ಲಾಸ್ ಅಮಲ್‌ದಾರ್ರಾಗಿರತಕ್ಕದ್ದು.

150 ರೂಪಾಯಿ ತಲಬುಳ್ಳ 4ನೇ ಕ್ಲಾಸ್ ಅಮಲ್‌ದಾರ್ ಪಂಚನಾತರಾಯರು ಮಹಮದ್ ತಾಯರವರಿಗೆ ಬದಲಾಗಿ 175 ರೂಪಾಯಿ ತಲಬುನಿಸೀ 3ನೇ ಕ್ಲಾಸ್ ಅಮಲ್‌ದಾರ್ರಾಗಿರತಕ್ಕದ್ದು.

ನೊಕರರೂರೀಗಳು.

ಅಮಲ್‌ದಾರ್ರ ಹೆಸರು		ಯಾವತಾಲ್ಲೂಕಿಗೆ ನೊಕರರ.
250 ರೂಪಾಯಿ ತಲಬಿನ ಪೊಬ್ಬ ಫಸ್ಟ್‌ಕ್ಲಾಸ್ ಅಮಲ್‌ದಾರ್.		
ವೇದಾಂತೈಯಂಗಾರು	..	ಹೊನ್ನಾಳಿ.
200 ರೂಪಾಯಿ ತಲಬಿನ 5 ಯರಡನೇ ಕ್ಲಾಸ್ ಅಮಲ್‌ದಾರ್‌ಗಳು.		
ರಾಮೈಯ (ಕಾಯಿಲೆ ರಜಾದಮೇಲೆ ಇರುತ್ತಾರೆ)		ಬೂದಿಹಾಳ್.
ವೆಂಕಟರಮಣ್ಣೈಯ	..	ತರೀಕೆರೆ.
ನಾಗೇಶರಾವ್	..	ಶಿವಮೊಗ್ಗ.
ವೆಂಕಟಸುಬ್ಬೈಯ	..	ಚಿತ್ರದುರ್ಗ.
ಮಹಮ್ಮದ್ ತಾಯರ್	..	ಚನ್ನಗಿರಿ.
175 ರೂಪಾಯಿ ತಲಬಿನ 4 ಮೂರನೇ ಕ್ಲಾಸ್ ಅಮಲ್‌ದಾರ್‌ಗಳು		
ಶಾಮೈಯಂಗಾರು	..	ಪಾವಗಡ.
ಕೃಷ್ಣೈಯಂಗಾರು	..	ಕೊಪ್ಪ.
ಕುಪ್ಪಸಾಮಿ ನಾಯಿಕರು	..	ಹೊಸದುರ್ಗ.
ಪಂಚನಾತರಾವ್	..	ದಾವಣಗೆರೆ.
150 ರೂಪಾಯಿ ತಲಬಿನ 5 ನಾಲ್ಕನೆ ಕ್ಲಾಸ್ ಅಮಲ್‌ದಾರ್‌ಗಳು.		
ತಿರುಮಲರಾವ್	..	ಶಿಕಾರಿಪುರ.
ಗಂಗಾಧರರಾವ್		ನಗರ.
ಖಾದರ್ ಮೊಹದಿ‍ನ	..	ದೊಡ್ಡೇರಿ.
ವೆಂಕಟಾಚಲ ಮೊದಲ್ಯಾರ್	..	ಕಣಕುಪ್ಪಾ.
ಸಾಲ್‌ದಾ‍ಹಾ*	..	ಕೌಲೇದುರ್ಗ.
100 ರೂಪಾಯಿ ತಲಬಿನ 6 ಐದನೇ ಕ್ಲಾಸ್ ಅಮಲ್‌ದಾರ್‌ಗಳು.		
ಅಪ್ಪೂರಾವ್	..	ಚಿಕ್ಕಮುಗಳೂರು.
ಗುಂಡಪ್ಪ	..	ಸಾಗರ.
ನರಶಿಂಗರಾವ್	..	ಬಾಣಾವಾರ.
ರಾಮಸ್ವಾಮೈಯ	..	ಲಕ್ಕುವಳ್ಳಿ
ಗುರುರಾವ್	..	ಸೊರಬ
ಅಣ್ಣಾಜೈಯಂಗಾರು	..	ಹಿರಿಯೂರು

* ಸಾಲ್‌ದಾ‍ಹಾ ಯವರು, ಕಾಯಿಲೇ ರಜಾದ ಮೇಲೆ ರಾಮೈಯನವರು ಯಿರುವ ಕಾಲದಲ್ಲಿ ಬೂದಿಹಾಳ್ ತಾಲ್ಲೂಕು ಚಾರ್ಜಿನಲ್ಲಿಯೇ ಯಿರತಕ್ಕದ್ದು.

ನಂ. 316.　　ತಾರೀಖು 6ನೇ ಡಿಶಂಬರ್ 1876.

ಸ‍ನ 1872ನೇ ಇಸವೀ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 335ನೇ ಸೆಕ್ಷನ್ ಅನುಸರಿಸಿ, ಹಾಲೀ 2ನೇ ಕ್ಲಾಸ್ ಮಾಜಸ್ಟ್ರೇಟ್ ಅಧಿಕಾರಗಳು ಹಂಗಾಮೀಯಾಗಿ ಕೊಡಲ್ಪಟ್ಟ ಮತ್ತು ಇದರಡಿ ನಮೂದಿಸಲ್ಪಡುವ ಮುನಸೀಫರುಗಳು ಅಂತಾ ಅಧಿಕಾರಗಳನ್ನು ಚಲಾಯಿಸುವಲ್ಲಿ ಫಿರ್ಯಾದಿಗಳ ಯಾ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲೀಷ್ ಭಾಷೆಯಲ್ಲಿ ಸ್ವತಃ ತೆಗದುಕೊಳ್ಳತಕ್ಕ ಬಗ್ಯೆ ಚೀಫ್ ಕಮ್ಮಿಷನ್ನರ್ ಸಾಹೆಬರವರು ಅಪ್ಪಣೆ ಕೊಡಿಸುತ್ತಾರೆ.

ಬೆಂಗಳೂರು ಡಿಸ್ಟ್ರಿಕ್ಟು.

ಮೆ|| ಜೆ. ಲಾರೆನ್ಸ್
ಅಣ್ಣಾಜೀರಾವ್
ಬಿ. ತಿರುಮಲಾಚಾರ್

ಕೋಲಾರ ಡಿಸ್ಟ್ರಿಕ್ಟು.

ಕುಪ್ಪಸಾಮಿಮೊದಲ್ಯಾರ್
ಶ್ರೀನಿವಾಸೈಯಂಗಾರ್
ಮೆ|| ಕ್ರೆಸ್.

ತುಮಕೂರು ಡಿಸ್ಟ್ರಿಕ್ಟು.

ಸಾಲೊಮನ್.
ಕೃಷ್ಣಸ್ವಾಮೈಯಂಗಾರ್

ಮೈಸೂರು ಡಿಸ್ಟ್ರಿಕ್ಟು.

ರಂಗಸಾಮಿ ಐಯ್ಯಂಗಾರ್
ಟಿ. ರಾಘವೇಂದ್ರರಾವ್
ಪೊನ್ನರಂಗಂ ಮೊದಲ್ಯಾರ್

ಹಾಸನ ಡಿಸ್ಟ್ರಿಕ್ಟು.

ರಘುನಾಥರಾವ್

ಶಿವಮೊಗ್ಗ ಡಿಸ್ಟ್ರಿಕ್ಟು.

ಮುದ್ದಕೃಷ್ಣ ನಾಯಿಡು
ನಾಮುಕಲ್‌ರಾವ್
ಮಂಗಪತಿನಾಯಿಡು.

ಕಡೂರು ಡಿಸ್ಟ್ರಿಕ್ಟು.

ಟಿ. ವೆಂಕಟರಾವ್
ರಾಮಸ್ವಾಮಿ ಐಯರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಮೆ|| ಜೆ. ತಿ. ಯಸ್. ಲಾರೆನ್ಸ್
ಸಚ್ಚಿದಾನಂದಂಪಿಳ್ಳೆ
ಮಲ್ಲಹಾರಿರಾವ್

ನಂ. 317. ತಾರೀಖು 6ನೇ ಡಿಶಂಬರ್ 1876.

ದೆಹಲೀಯಲ್ಲಿ ನಡಿಯತಕ್ಕ ಯಿಂಪೀರಿಯಲ್ ಅಸ್ಸೆಂಬ್ಲೇಜ್ ಯೆಂಬ ರಾಜ ಸಭೆಗೆ ಮೆಸ್ಟರ್ ಕೃಷ್ಣಮೂರ್ತಿಯವರು ಹೋಗಿಯಿರುವ ಕಾಲದಲ್ಲಿ ಇನಾಂ ಇಲಾಖಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಟಿ. ಕಿಟ್ಟೋಯವರು ಮೈಸೂರು ಡಿಸ್ಟ್ರಿಕ್ಟು ನಂಜನಗೂಡು ಸಬ್ ಡಿವಿಜನ್ ಚಾರ್ಜ್ ತೆಗದು ಕೊಳ್ಳಲಿಕ್ಕೆ ಹಂಗಾಮಿಯಾಗಿ ಮೊಕರರ್ರು ಮಾಡಲ್ಪಟ್ಟು 1872ನೇ ಇಸವೀ 10ನೇ ಆಕ್ಟು ಕ್ರಿಮಿನಲ್ ಪ್ರೊಸೀಡ್ಯೂರ್‌ಕೋಡ್ 19 ವ 28ನೇ ಸೆಕ್ಷನ್‌ಗಳ ನಿಬಂಧನೆಗಳನುಸರಿಸಿ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು, ಡಿಸ್ಟ್ರಿಕ್ಟಿನ ವೊಂದು ಡಿವಿಜನ್ ಮಾಜಿಸ್ಟ್ರೇಟ್ ಅಧಿಕಾರಗಳು, ಮತ್ತು ಅದೇ ಆಕ್ಟು 29ನೇ ಸೆಕಷನ್ನಲ್ಲಿ ನಮೂದಿಸಲ್ಪಟ್ಟ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತಾರೆ.

ನಂ. 318. ತಾರೀಖು 7ನೇ ಡಿಶಂಬರ್ 1876.

ಮೈಸೂರು ವ ಕೊಡಗು ಚೀಫ್ ಕಮ್ಮಿಷನರ್ ಮೆಸ್ಟರ್ C. B. ಸಾಂಡರಸ್ C. B. ಸಾಹೇಬರವರು ರಾಜಸಭೆಗೆ ಬರಬೇಕೆಂಬದಾಗಿ ವೈಸ್‌ರಾಯಿ ಯವರಿಂದ ಕರಿಯಲ್ಪಟ್ಟ ಪ್ರಕಾರ ದೆಹಲೀಪಟ್ಟಣಕ್ಕೆ ಹೊರಡುವದರಲ್ಲಿರುವದರಿಂದ ಇಂಡ್ಯಾ ಗವರ್ನಮೆಂಟಿನವರ ಅಪ್ಪಣೇ ಅನುಸರಿಸಿ ಜುಡಿಷಿಯಲ್ ಕಮ್ಮಿಷನರ್ ಮೆಸ್ಟರ್ J. D. ಗಾರ್ಡನ್ C. S. I. ಸಾಹೇಬರವರು ಮೆಸ್ಟರ್ ಸಾಂಡರಸ್ ಸಾಹೇಬರವರ ಗೈರ್ ಹಾಜರೀಯಲ್ಲಿ ಅವರ ಉದ್ಯೋಗದ ಚಾರ್ಜನ್ನು ಹಂಗಾಮಿಯಾಗಿ ವಹಿಸುವರು.

ಸದರೀ ಏರ್ಪಾಡುಗಳ ನಿಮಿತ್ಯ ಯಿದರಡಿ ಬರುವ ಹಂಗಾಮೀ ಬದಲಿಗಳು ಮೆಸ್ಟರ್ ಸಾಂಡರಸ್ ಯವರು ಹೊರಡುವ ತಾರೀಖು ಲಗಾಯಿತು ಜಾರೀಯಲ್ಲಿ ಬರುವಂತೆ ಮಂಜೂರಾಗಿರುತ್ತೆ.

ನಂದೀದುರ್ಗ ಡಿವಿಜನ್ ಕಮ್ಮಿಷನರ್ ಕರ್ನಲ್ ಪರಸ್ ಸಾಹೇಬರು ಮೆಸ್ಟರ್ ಗಾರ್ಡನ್ C. S. I. ಯವರಿಗೆ ಬದಲಾಗಿ ಜುಡಿಷಿಯಲ್ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್‌ತರೀಕ್ ನೋಡತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ರಿಕ್ಕೆಟ್ಸ್ ಯವರು ನಂದೀದುರ್ಗ ಡಿವಿಜನ್ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್‌ತರೀಕ್ ನೋಡತಕ್ಕದ್ದು.

ಬೆಂಗಳೂರು ಸ್ಮಾಲ್‌ಕಾಜ್‌ಕೋರ್ಟು ಆಕ್ಟಿಂಗ್ ಜಡ್ಜಿ ಮೇಜರ್ ಲಿಂಡ್ಸೆಯವರು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್‌ತರೀಕ್ ನೋಡತಕ್ಕದ್ದು. ಮತ್ತು 1872ನೇ ಇಸವಿ 10ನೇ ಆಕ್ಟು 35ನೇ ಸೆಕ್ಷನ್ ಪ್ರಕಾರ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಅಧಿಕಾರಗಳೂ ಅದೇ ಆಕ್ಟು 36ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಜಾಸ್ತೀ ಅಧಿಕಾರಗಳೂ ಅವರು ಬೆಂಗಳೂರು ಡಿಸ್ಟ್ರಿಕ್ಟುಚಾರ್ಜಿನಲ್ಲಿರುವ ಕಾಲದಲ್ಲಿ ಚಲಾಯಿಸಲ್ಪಡತಕ್ಕ ಬಗ್ಯೆ ಅವರಿಗೆ ಕೊಡಲ್ಪಟ್ಟಿರುತ್ತೆ.

ನಂ. 319. ತಾರೀಖು 7ನೇ ಡಿಶಂಬರ್ 1876.

ಮೈಸೂರು ಪೆಂಷನ್ ಇಲಾಖಾ ಶಿರಸ್ತೇದಾರ್ ಶೇಷೈಯಂಗಾರ್ರು ಅಜಮಾಯಿಷಿತರೀಕ್ 3ನೇ ಕ್ಲಾಸ್ ಮುನಸೀಫರಾಗಿ ಮೊಕರರ್ರು ಮಾಡಲ್ಪಟ್ಟು ಮೈಸೂರು ಡಿಸ್ಟ್ರಿಕ್ಟು ನಂಜನಗೂಡು ಸಬ್ ಡಿವಿಜನ್‌ಗೆ ಹಾಕಲ್ಪಟ್ಟಿರುತ್ತಾರೆ.

"ಹುಕ್ಕುಂ ಬಮೋಜಿಬ್,"

T. Clarke,

Offg. Secretary.

ಆಫಿಷಿಯಲ್ ಮಿಮೋರಾಂಡಂ.

ತಾರೀಖು 7ನೇ ಡಿಸಂಬರು 1876.

ಘನವನ್ನು ಹೊಂದಿದ ಮಹಾರಾಜ ರಾಜುಸಾಹೇಬ್ ಬಹದೂರವರು ಮೈಸೂರಿಂದ ಬೆಂಗಳೂರಿಗೆ ಮಾಹೇ ಮಜಕೂರ್ 11ನೇ ಮುಕ್ಕಾಂ ಸೋಮವಾರ ಬೆಳಿಗ್ಯೆ ಸುಮಾರು 8ಘಂಟೆಗೆ ದಯಮಾಡುವರೆಂದು ವೃತ್ತಾಂತವು ಬಂದಿರುತ್ತೆ.

2. ಮಹಾರಾಜರವರ ಸವಾರೀ ಹಿಂಬಾಲಿಸಲಿಕ್ಕೆ ಪೇಟೆ ಹೊರಗೆ ಮೈಸೂರು ರಸ್ತೆಯಲ್ಲಿ ರಿಜಿಮೆಂಟಲ್ ಹೆಡ್‌ಕ್ವಾರಟರ್ ಆಫಿಸರ್‌ಗಳು ಮತ್ತು ಸವಾರ್ ಕುದುರೆಯ ವೊಂದು ರಿಸಾಲೆ ಸಹಾ ಲಾಂ ನಿಲ್ಲತಕ್ಕ ಬಗ್ಯೆ ಮಿಲಿಟೇರಿ ಅಸಿಸ್ಟೆಂಟ್‌ರವರು ಯೇರ್ಪಾಡು ಮಾಡತಕ್ಕದ್ದು.

3. ಮಹಾರಾಜರವರು ಪೇಟೆಯ ಬಾಗಲಲ್ಲಿ ನಂದೀದುರ್ಗ ಡಿವಿಜನ್ ಕಮ್ಮಿಷನ್ನರ್ ಯವರಿಂದಲು ಮತ್ತು ಚೀಫ್ ಕಮ್ಮಿಷನರ್ರವರ ಸಿಕ್ರೆಟೇರಿಯವರಿಂದಲೂ ಬರಮಾಡಿಕೊಳ್ಳಲ್ಪಡುವರಲ್ಲದೆ ಮಹಾರಾಜರವರ ಸವಾರಿಯು ಪೇಟೆ ಮಾರ್ಗವಾಗಿ ಗವರ್ನಮೆಂಟ್ ಹೌಸಿಗೆ ಉತ್ತರ ಬಾಗಿಲು ದ್ವಾರಾ ನಡಿಸಲ್ಪಡುವದು.

4. ಮಹಾರಾಜರವರು ಗವರ್ನಮೆಂಟ ಹೌಸಿನಲ್ಲಿ ಚೀಫ್ ಕಮ್ಮಿಷನ್ನರವರಿಂದಲೂ ಇಲಾಖಾ ಮೊಖ್ತೇಸರ್‌ಗಳಿಂದಲೂ ಬರಮಾಡಿಕೊಳ್ಳಲ್ಪಡುವರು ಮೈಸೂರು ಕಮ್ಮಿಷನಿನ ದರೋಬಸ್ತು ಆಫಿಸರ್‌ಗಳೂ ಮಹಾರಾಜರವರಿಗೆ ಮುಜರೇ ಮಾಡತಕ್ಕ ಬಗ್ಯೆ ಬೆಳಗಿನ 7½ ಘಂಟೆಗೆ ಗವರ್ನಮೆಂಟ ಹೌಸಿನಲ್ಲಿ ಹಾಜರಿರತಕ್ಕದ್ದು.

5. ಮಹಾರಾಜರವರು ದಯಮಾಡುವಲ್ಲಿ ಗವರ್ನಮೆಂಟ್ ಹಾಸ್ಸಿನಲ್ಲಿಯೂ ಅದೇ ದಿನ ಮಧ್ಯಾನ್ಹ 3 ಘಂಟೆಗೆ ದೆಹಲೀಪಟ್ಣಕ್ಕೆ ಖಾಸ ಸವಾರೀ ಹೊರಡುವಾಗ್ಯೆ ರೇಲ್ವೆ ಸ್ಟೇಷನ್ನಲ್ಲಿಯೂ ಗಾರ್ಡ ಆಫ್ ಹಾನರ್‌ಯಾನೆ ಮರ್‍ಯಾದೆ ಪ್ಹಾಜ್ ಲಾಂ ನಿಲ್ಲತಕ್ಕ ಬಗ್ಯೆ ಹುಕ್ಕುಂ ಕೊಡಬೇಕೆಂತ ಮೈಸೂರು ಡಿವಿಜನ್ ಮೇಜರ್ ಜನರಲ್ ಕಮಾಂಡಿಂಗ್ ಆಫಿಸರವರು ಕೋರಲ್ಪಡತಕ್ಕದ್ದು. ಮರ್ಯಾದಾರ್ಥವಾದ 21 ತೋಪುಗಳು ಉಭಯ ಕಾಲದಲ್ಲಿ ವುಡಾಯಿಸಲ್ಪಡತಕ್ಕದ್ದಲ್ಲದೆ ಚೀಫ್ ಕಮ್ಮಿಷನರವರು ಹೊರಡುವ ಕಾಲದಲ್ಲಿಯು 13 ತೋಪುಗಳು ಜಾಸ್ತಿಯಾಗಿ ವುಡಾಯಿಸಲ್ಪಡತಕ್ಕದ್ದು.

6. ಮಹಾರಾಜರವರು ಮೈಸೂರು ವ ಕೊಡಗು ಚೀಫ್ ಕಮ್ಮಿಷನರ್ ಮಿಸ್ಟರ್ C. B. ಸಾಂಡರ್ಸ್ C. B. ಯವರೊಡನೆ ಮಧ್ಯಾನ್ಹ 2 ಘಂಟೆ 40 ನಿಮಿಷಕ್ಕೆ ಗವರ್ನಮೆಂಟ ಹೌಸ ಬಿಡುವರು, ಮತ್ತು ಹರ್‌ಮೆಜಸ್ಟಿ 36ನೇ ನೇಟಿವ್ ಇನ್‌ಫಾಂಟ್ರಿಯ ಪ್ಲೇಸ್ ಆಫ್ ಆರಂಸ್‌ಯಾನೆ ಆಯುಧಗಳಿಟ್ಟಿರುವ ಸ್ಥಳದ ಮಾರ್ಗವಾಗಿ ರೇಲ್ವೆ ಸ್ಟೇಷನಿಗೆ ಅದರ ನಿರುಋತಿದಿಕ್ಕಿನ ಕಡೆ ಹೊರಟು ಸೇರುವರು.

7. ಈ ಸಮಯದಲ್ಲಿ ರೇಲ್ವೆ ಪ್ಲ್ಯಾಟ ಫಾರವಿುಗೆ ಮೈಸೂರು ಕಮ್ಮಿಷನ್ ಆಫಿಸರ್‌ಗಳು ಗ್ಯಾರಿಸನ್ ಆಫಿಸರ್‌ಗಳು ಈ ಆಫಿಸ್ನಿಂದ ಯಾರಿಗೆ ಟಿಕೆಟಗಳು ಕೊಡಲ್ಪಡುವವೋ ಅಂತಾ ಟಿಕೆಟ ಉಳ್ಳವರು ಯಿವರುಗಳು ಮಾತ್ರ ಬಿಡಲ್ಪಡುವರು.

"ಬಮೋಜಿಬ್ ಹುಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 18ನೇ ನವಂಬರ್ 1876.

ನಂ. 12.

ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಒಳಪಟ್ಟು ಸನ್ 1877ನೇ ಇಸವೀ ಏಪ್ರೈಲ್ ಗುರ್‍ರೇ ತಾರೀಖು ಲಗಾಯತು 1880ನೇ ಮಾರ್ಚಿ 31ನೇ ಮುದ್ದತ್ತುವರಿಗೆ ಕೊಡಗು ಸೀಮೆಯಲ್ಲಿ ಷರಾಬ್ ತಯಾರೀ ವ ಬಿಕ್ರೀ ಈ ವಿಷಯಗಳ ಸಂಪೂರ್ಣಸ್ವಾತಂತ್ರ್ಯವನ್ನು ಪಡೆಯುವ ಬಗ್ಯೆ ಇದರಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿ, ಯಾ ಯೂರೋಪಿಯನ್ ವೈನ್‌ಗಳು ವ ಸ್ಪಿರಿಟ ಸಾರಾಯಿಗಳು, ಯಾ ಬಿಯರ್‌ಗಳು ಯಿವುಗಳ ಬಿಕ್ರಿ ಯಾ ಬಿಯರ್‌ಗಳ ತಯಾರಿ ಯಿಂತಾವು ಅಡಗಿರುವದಿಲ್ಲವು.

II. ದರಖಾಸ್ತುದಾರುಗಳು ತಮಿಗೆ ಮೇಲೆ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯ ಕೊಡಲ್ಪಟ್ಟಲ್ಲಿ ಅವರು ಸರಕಾರಕ್ಕೆ ಗ್ಯಾರೆಂಟಿ ಯಾ ಭರವಸೆ ಕೊಡುವ ಮಿನಿಮಂ ಯಾನೆ ಕಮ್ಮಿ ಹುಟ್ಟುವಳಿಯನ್ನು ದರಖಾಸ್ತಿನಲ್ಲಿ ತಿಳಿಯಪಡಿಸತಕ್ಕದ್ದಲ್ಲದೆ ತಮ್ಮ ವೊಡಂಬಡಿಕೆಯನ್ನು ನೆರವೇರಿಸತಕ್ಕ ಬಗ್ಯೆ ತಾವು ಕೊಡಲು ಸಿದ್ಧವಾಗಿರುವ ಜಾಮೀನ್ ಸಹ ತಿಳಿಸತಕ್ಕದ್ದು.

III. ಪ್ರತಿ ದರಖಾಸ್ತಿನ ಸಂಗಡ 1000 ರೂಪಾಯಿ ನಗದಾಗಲಿ ಗವರ್ನಮೆಂಟ ಸಿಕ್ಯುರಿಟಿಗಳ ಮೂಲಕವಾಗಲಿ ಠೇವಣಿ ಕಳುಹಿಸಬೇಕಲ್ಲದೆ ಸದರೀ ದರಖಾಸ್ತನ್ನು ವೊಂದು ಲಿಫಾಫೇಯಲ್ಲಿ ಬಂದು ಮಾಡಿ ಅದರ ಮೇಲೆ "ಆರಕ್ ಸಾರಾಯಿಯನ್ನು ಮಾಡುವ ಬಗ್ಯೂ ಬಿಕರೀ ಮಾಡುವ ಬಗ್ಯೂ ಸಂಪೂರ್ಣವಾದ ಸ್ವಾತಂತ್ರ್ಯಕ್ಕೋಸ್ಕರ ಮಾಡಲ್ಪಟ್ಟ ದರಖಾಸ್ತು" ಯಂಬದಾಗಿ ಬರದು ಅದನ್ನು ಕೊಡಗು ಸೂಪರಿಂಟೆಂಡೆಂಟರವರಿಗೆ 1877ನೇ ಇಸವಿ ಜನವರೀ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖು ತರುವಾಯ ಬರುವ ಯಾವ ದರಖಾಸ್ತಾಗಲಿ ಅಂಗೀಕರಿಸಲ್ಪಡುವದಿಲ್ಲ. ದರಖಾಸ್ತುಗಳನ್ನು ಸೂಪರಿಂಟೆಂಡೆಂಟರವರು ತಮ್ಮ ಆಫಿಸಿನಲ್ಲಿ 1877ನೇ ಜನವರೀ 16ನೇ ತಾರೀಖಿನ ದಿವಿ 12 ಘಂಟೆಗೆ ಆಕಾಲದಲ್ಲಿ ಹಾಜರಿರುವದಕ್ಕೆ ಅಪೇಕ್ಷಿಸುವವರೆಲ್ಲರ ರುಬರೂ ಖುಲ್ಲಾ ಮಾಡುವರು. ದರಖಾಸ್ತುಗಳ ಆಖೈರು ವ್ಯವಸ್ಥೆ ಚೀಫ್ ಕಮ್ಮಿಷನರವರನ್ನು ಹೊಂದಿದ್ದಾಗಿರುತ್ತಾದ್ದರಿಂದ ಅವರು ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲಿಕ್ಕೆ ಅಥವಾ ಸರಿಯಾದ ಮೊಬಲಗಿಗೆ ಸವಾಲ್

ಗಳು ಮಾಡಲ್ಪಡದ ಪಕ್ಷದಲ್ಲಿ ದರೋಬಸ್ತು ದರಖಾಸ್ತುಗಳನ್ನೂ ತಿರಸ್ಕರಿಸಲಿಕ್ಕೂ ಪೂರಾ ಅಧಿಕಾರವನ್ನು ತಮಗೆ ವುಳಿಸಿಕ್ಕೊಂಡಿರುತ್ತಾರೆ. ಚೀಫ್ ಕಮ್ಮಿಷನರವರು ಮಾಡುವ ಯಿತ್ಯರ್ಥವು 1877ನೇ ಇಸವಿ ಫೆಬ್ರುವರಿ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪ್ರಸಿದ್ಧಪಡಿಸಲ್ಪಡುವದಲ್ಲದೆ ಸದರೀ ತಾರೀಖಿನಲ್ಲಿ ಸೂಪರಿಂಟೆಂಡೆಂಟರವರ ಮೂಲಕ ತಿಳಿಸಲ್ಪಡುವದು, ಬಳಿಕ ಮಂಜೂರಾಗದ ದರಖಾಸ್ತುದಾರ್ರುಗಳಿಗೆ ಅವರ ಅರ್ಜಿಗಳಮೇಲೆ ಠೇವಣಿಗಳು ವಾಪಸ್ ಮಾಡಲ್ಪಡುವವು.

IV. ಯಾರ ದರಖಾಸ್ತು ಅಂಗೀಕರಿಸಲ್ಪಡುವದೋ ಆ ಮನುಷ್ಯನು ತನಿಗೆ ಚೀಫ್ ಕಮ್ಮಿಷನರವರ ನಿರ್ಣಯವನ್ನು ತಿಳಿಯಪಡಿಸಿದ ಹತ್ತು ದಿನಗಳೊಳಗಾಗಿ ಮಂಜೂರಾದ ದರಖಾಸ್ತು ಮೊಬಲಗ್ ಪೈಕಿ ನಾಲ್ಕರಲ್ಲಿ ವೊಂದು ಭಾಗಕ್ಕೆ ದರಖಾಸ್ತುಕಾಲದಲ್ಲಿಟ್ಟ 1000 ರೂಪಾಯಿ ಠೇವಣೀ ಶಾಮೀಲ್ ಸೇರಿಯಾದ ಮೊಬಲಗನ್ನು ನಗದಾಗಲಿ, ಸೂಪರಿಂಟೆಂಡೆಂಟರವರಿಗೆ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಸಿಕ್ಯೂರಿಟಿಗಳ ಮೂಲಕವಾಗಲಿ ಕೊಡಗು ಸೂಪರಿಂಟೆಂಡೆಂಟರಲ್ಲಿ ಠೇವಣೀ ಯಿಡತಕ್ಕದ್ದು. ಅವನು ಹಾಂಗೆ ಮಾಡಲಿಕ್ಕೆ ತಪ್ಪಿದರೆ ಪೂರ್ವದಲ್ಲಿ ಯಿಡಲ್ಪಟ್ಟ ಠೇವಣೀಯನ್ನು ದಂಡದೋಪಾದಿಯಲ್ಲಿ ಕಳಕೊಳ್ಳುವನು ಮತ್ತು ಅವನ ದರಖಾಸ್ತನ್ನು ಅಂಗೀಕರಿಸಿ ಚೀಫ್ ಕಮ್ಮಿಷನರವರು ಮಾಡಿದ ನಿಷ್ಕರ್ಷೆಯು ರದ್ದು ಮಾಡಲ್ಪಡುವದು.

V. ಮೇಲೆ ವಿವರಿಸೋಣಾದ ಪ್ರಕಾರ ಠೇವಣೀ ಯಿಟ್ಟಲ್ಲಿ ಯಾರ ದರಖಾಸ್ತು ಮತ್ತು ಕಡೇ ಠೇವಣೀ ಅಂಗೀಕರಿಸಲ್ಪಟ್ಟಿರುತ್ತೋ ಆ ಮನುಷ್ಯನು ಈ ಕೆಳಗ ನಮೂದಿಸಲ್ಪಟ್ಟ ಷರತ್ತುಗಳಿಗೆ ಸರಿಯಾಗಿ ನಡೆಯಲಿಕ್ಕೆ ಬದ್ಧನಾಗಿ ವೊಂದು ವೊಡಂಬಡಿಕೆಯನ್ನು ಸರಿಯಾದ ಛಾಪಾ ಕಾಗದದಲ್ಲಿ ಬರದುಕೊಡತಕ್ಕದ್ದು. ಮತ್ತು ಅವನು ಸದರೀ ವೊಡಂಬಡಿಕೆಗೆ ರುಜು ಮಾಡತಕ್ಕದ್ದೆಂದು ತಿಳಿಸಲ್ಪಟ್ಟ 5 ದಿನಗಳೊಳಗಾಗಿ ರುಜು ಮಾಡಲಿಕ್ಕೆ ತಪ್ಪಿದರೂ ಅಥವಾ ನಿರಾಕರಿಸಿದರೂ ಮೊದಲು ಯಿಟ್ಟ ದರೋಬಸ್ತು ಠೇವಣೀಗಳನ್ನೂ ದಂಡದೋಪಾದಿಯಲ್ಲಿ ಕಳಕೊಳ್ಳುವನು, ಮತ್ತು ಸಂಪೂರ್ಣವಾದ ಸ್ವಾತಂತ್ರ್ಯವು ಚೀಫ್ ಕಮ್ಮಿಷನರವರು ಯಾವ ಮೇರಿಗೆ ನಿಶ್ಚಯಿಸುವರೋ ಆ ಮೇರೆ ಅನ್ಯಥಾ ಪರಭಾರೆ ಮಾಡಲ್ಪಡುವದು.

VI. ವೊಡಂಬಡಿಕೆ ಬರದುಕೊಡಲ್ಪಡುತ್ತಾಲೆ ಸೂಪರಿಂಟೆಂಡೆಂಟರವರು ಯಾರ ದರಖಾಸ್ತು ಅಂಗೀಕರಿಸಲ್ಪಟ್ಟಿರುತ್ತೋ ಮತ್ತು ಯಾವನು ಠೇವಣೀಗಳನ್ನು ಕೊಟ್ಟು ವೊಡಂಬಡಿಕೆ ಬರದುಕೊಟ್ಟಿರುತ್ತಾನೋ ಆ ಮನುಷ್ಯನಿಗೆ ಈ ಇಸ್ತಿಹಾರಿನ ಮೊದಲನೇ ಕ್ಲಾಜ್‌ನಲ್ಲಿ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಈ ಕೆಳಗೆ ಕಂಡ ಷರತ್ತುಗಳಿಗೆ ವೊಳಪಡಿಸಿ ಕೊಟ್ಟ ವೊಂದು ಲೈಸೆನ್ಸ್ ಕೊಡತಕ್ಕದ್ದು.

ಷರತ್ತುಗಳು.

(1) ಲೈಸೆನ್ಸದಾರನಿಂದ ಕೊಡಲ್ಪಟ್ಟ ಸ್ಪಿರಿಟ್‌ಗಳ ಪ್ರತಿ *ಇಂಪೀರಿಯಲ್ ಗ್ಯಾಲನ್ ಮೇಲೆ, ಯಿದರಡಿ ನಮೂದಿಸಲ್ಪಡುವ ತೀರ್ವೆಯು ಕೊಡಲ್ಪಡತಕ್ಕದ್ದು.

ಪ್ರೂಪ್ ಸ್ಪಿರಿಟ—ರೂಪಾಯಿ 3—3—10 ಗ್ಯಾಲನ್ ವೊಂದಕ್ಕೆ.

19. ಬಿಲೋ ಪ್ರೂಫ್—ರೂ—2—10—0 ಗ್ಯಾಲನ್ ವೊಂದಕ್ಕೆ.

(2.) ಈ ತೀರ್ವೆಯು ಯಾವ ತಿಂಗಳಲ್ಲಿ ಸಾರಾಯಿ ಕೊಡಲ್ಪಡುತ್ತೋ ಆ ಮಾರನೇ ತಿಂಗಳಿನ 5ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಕೊಡಗು ಖಜಾನೇಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಮತ್ತು ಆ ತಾರೀಖಿನಲ್ಲಿ ಬಾಕೀ ನಿಲ್ಲಿಸಿಕೊಂಡ ದರೋಬಸ್ತು ಮೊಬಲಗ್ ಮೇಲೆ ಸಾಲ್ 1ಕ್ಕೆ ಶೇಕಡಾ 6 ರೂಪಾಯಿ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂತಾ ಬಾಕೀ ಮೊಬಲಗು ಅದು ಯಾವ ತಿಂಗಳಲ್ಲಿ ಸಲ್ಲಬೇಕಾಗಿರುತ್ತೋ ಆ ತಿಂಗಳು ಕಳೆದನಂತರ ಸಲ್ಲದೇ ನಿಂತರೆ, ಲ್ಯಾಂಡ್ ರೆವಿನ್ಯೂ ಬಾಕೀ ವಸೂಲೀ ಬಗ್ಯೆ ಹಾಲೀ ಜಾರೀಯಲ್ಲಿರುವ ರೂಲ್ಸ್‌ನಿಂದ ನಿಬಂಧಿಸಲ್ಪಟ್ಟಿರುವ ಮೇರೆ ಲೈಸೆನ್ಸ್‌ದಾರನ ಜಿಂದಗಿ ಜಪ್ತೀ ಹರಾಜಿನಿಂದ ವಸೂಲಾಗತಕ್ಕದ್ದಾಗಿರುತೆ, ಲೈಸೆನ್ಸ್‌ದಾರ ಭರವಸೆ ಕೊಟ್ಟಿರುವ ಸಾಲೀಯಾನಾ ಹುಟ್ಟುವಳಿ ಮೊಬಲಗು 12 ಮಾಹೇವಾರೀ ವಾಯಿದೆಗಳಾಗಿ ಸದರೀ ಟ್ರೆಜರೀಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು, ಕರಾರ್ ಮಾಡಿಕೊಂಡಿರುವ ಮೊಬಲಗಿನ ಪೈಕಿ ಮಾಹೇವಾರೀ ವಾಯಿದೇ ಮೊಬಲಗಿಗೆ ಜಾಸ್ತೀಯಾಗಿ ಷರಾಬ್ ವೊಂದು ತಿಂಗಳಲ್ಲಿ ಕೊಡಲ್ಪಟ್ಟ ಪಕ್ಷಕ್ಕೆ ಹಾಗೆ ಜಾಸ್ತೀಯಾಗಿ ಕೊಡಲ್ಪಟ್ಟ ಪ್ರತಿ ಗ್ಯಾಲನ್ನಿಗೂ ಲೈಸೆನ್ಸ್‌ದಾರನು ಸಾಯರ್ ತೀರ್ವೆಯೂ ಕೊಡತಕ್ಕದ್ದು, ಕಡಮೆಯಾಗಿ ಷರಾಬ್ ಕೊಡಲ್ಪಟ್ಟ ತಿಂಗಳುಗಳಲ್ಲಿ ಲೈಸೆನ್ಸ್‌ದಾರನು ಮಾಹೇವಾರೀ ಕರಾರ್ ಮೊಬಲಗಿಗಿಂತ ಜಾಸ್ತೀಯಾಗಿ ಕೊಟ್ಟಿದ್ದರೆ ಅದನ್ನು ಪಯೋಗಿಸಿಕ್ಕೊಳ್ಳುವ ಬಾಧ್ಯತೆಯನ್ನು ಹೊಂದತಕ್ಕದ್ದಲ್ಲದೆ ಪ್ರತಿ ಸಂವತ್ಸರ ಆಖೈರಿನಲ್ಲಿ ಒಟ್ಟು ಬಾಕೀ ತೇಲಿಸತಕ್ಕದ್ದು. ಆಗ ಲೈಸೆನ್ಸ್‌ದಾರನು ಗವರ್ನಮೆಂಟಿಗೆ ವೊಡಂಬಡಿಕೆ ಮಾಡಿಕೊಂಡ ಮಿನಿಮಂ ಮೊಬಲಗುನಿಂದ ಯಷ್ಟು ಗ್ಯಾಲನ್‌ಗಳ ಮೇಲೆ ತೀರ್ವೇ ಸಾಕಾಗಿರುತ್ತೋ ಅಷ್ಟು ಗ್ಯಾಲನ್‌ಗಳ ಸಂಖ್ಯೆಗೆ

---

*ಕೊಡಗಿನಲ್ಲಿ ಇಂಪೀರಿಯಲ್ ಗ್ಯಾಲನ್ ವೊಂದಕ್ಕೆ 5 ಶೀಷೆಗಳು.

ಜಾಸ್ತೀಯಾಗಿ ಒಂದು ಸಂವತ್ಸರದಲ್ಲಿ ಕೊಡಲ್ಪಟ್ಟ ಗ್ಯಾಲನ್‌ಗಳ ಸಂಖ್ಯೆಗೆ ತೀರ್ವೆಯನ್ನು ತೆರತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಕಾಲಗಳ ಪೈಕೀ ಯಾವ ಕಾಲದಲ್ಲಾಗಲಿ ಕೊಡತಕ್ಕ ತೀರ್ವೇ ಮೊಬಲಗ್‌ಗಳು ಮೇಲೆ ಕಂಡ ದಾಮೂಷಾಯಿ ಗಿಂತಲೂ ಕಮ್ಮೀ ಬಿದ್ದಲ್ಲಿ ಕಮ್ಮೀಬಿದ್ದ ಮೊಬಲಗ್ ಕೂಡ್ಲೇ ಭರ್ತಿಮಾಡಲ್ಪಡತಕ್ಕದ್ದು. ಮತ್ತು ಕೊಡಬೇಕಾದ ಅಂತಾ ಪ್ರತಿ ಮೊಬಲಗ್ ಬಾಕೀ ಆದಾಗ ಆ ಮೊಬಲಗನ್ನು ಪಾವತೀ ಮಾಡಲಿಕ್ಕೆ ತಪ್ಪಿದ ಪಕ್ಷದಲ್ಲಿ ಹಾಂಗೆ ಆಗುವ ಬಾಕೀ ಮೊಬಲಗಿಗೆ ಸಾಲ್ 1ಕ್ಕೆ ಶೇಕಡಾ 6 ರೂಪಾಯಿ ಪ್ರಕಾರ ಬಡ್ಡೀ ಕಟ್ಟಲ್ಪಡತಕ್ಕದ್ದು. ಮೊಬಲಗ್ ಪಾವತೀ ಮಾಡಲಿಕ್ಕೆ ಮತ್ತು ತಪ್ಪುವ ಪಕ್ಷದಲ್ಲಿ ಡಿಸ್ಟಿಲ್‌ದಾರನ ಲೈಸೆನ್ಸ್ ರದ್ದಾಗಿರುತ್ತೆಂದು ಪ್ರಸಿದ್ಧವಾಗಿ ತಿಳಿಸಲಿಕ್ಕೂ, ಮತ್ತು ನಿಂತಿರುವ ಶಿಷ್ಠಾ ಬಾಕಿಯನ್ನೂ, ಡಿಪಾಜಿಟ್ ಯಿಟ್ಟಿರತಕ್ಕ ಮೊಬಲಗಗಳನ್ನು ಸರಕಾರಕ್ಕೆ ಸೇರಿಸಿ ಕೊಳ್ಳುವ ಮೂಲಕ ಮತ್ತು ಅವಶ್ಯಕವಿದ್ದಲ್ಲಿ ಲ್ಯಾಂಡ್ ರೆವಿನ್ಯೂ ವಸೂಲೀ ಬಗ್ಗೆ ಹಾಲೀ ಜಾರೀಲಿರುವ ರೂಲ್ಸ್ ಪ್ರಕಾರ ಸರಕಾರದ ಹಣ ಕೊಡದೆ ತಪ್ಪಿದವನ ಜಿಂದಗಿ ಜಫ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳತಕ್ಕ ಬಗ್ಯೆ ಕ್ರಮವನ್ನು ವಹಿಸಲಿಕ್ಕೂ, ಚೀಫ್ ಕಮ್ಮಿಷನರವರ ಅಪ್ಪಣೇನಿಸಿ ಸೂಪರ್ಇಂಟೆಂಡೆಂಟರವರ ಯಖ್ತ್ಯಾರಿಯಲ್ಲಿರತಕ್ಕದ್ದು.

(3.) ಡಿಸ್ಟಿಲ್‌ದಾರನು ಫ್ರೇಜರ್‌ಪೇಟೆಯಲ್ಲಿರುವ ಸದರ್ ಡಿಸ್ಟಿಲೇರಿಯ ಆವರಣದೊಳಗಾಗಲಿ, ಸೂಪರ್ಇಂಟೆಂಡೆಂಟರವರಿಂದ ಮಂಜೂರ್ಮಾಡಲ್ಪಡುವ ಮತ್ತಾವ ಇತರ ಸ್ಥಳದಲ್ಲಾಗಲಿ ಆರಕ್ ಸಾರಾಯಿಯನ್ನು ತಯಾರ್ಮಾಡುವಂತೆ ಮತ್ತು ಸೂಪರ್ಇಂಟೆಂಡೆಂಟರವರಿಂದ ಗೊತ್ತು ಮಾಡಲ್ಪಡುವ ಸ್ಥಳಗಳಲ್ಲಿ ಬಟ್ಟಿ ಚಿಕ್ಕೀ ಡಿಪೋಗಳನ್ನು ಏರ್ಪಡಿಸುವಂತೆ ನೇಮಿಸಲ್ಪಡತಕ್ಕದ್ದು. ಡಿಸ್ಟಿಲೇರಿಯು ಮತ್ತು ಡಿಪೋಗಳು ಸೂಪರ್ಇಂಟೆಂಡೆಂಟರವರಾಗಲಿ, ಆ ಬಗ್ಯೆ ಅವರಿಂದ ಕಳುಹಿಸಲ್ಪಡತಕ್ಕ ಯಾವ ತಾಬೇದಾರಿ ಉದ್ಯೋಗಸ್ಥನಾಗಲಿ ಹೋಗಿ ನೋಡಲಿಕ್ಕೆ ಯಲ್ಲ ಕಾಲಗಳಲ್ಲಿಯೂ, ಖುಲ್ಲಾ ಇರತಕ್ಕದ್ದು. ಚೀಫ್‌ಕಮ್ಮಿಷನರವರು ಆವಶ್ಯಕವೆಂದೆಣಿಸುವ ಪೊಲೀಸ್ ಪಹರೆಗಳು ಮತ್ತು ಆಳತಿಸಿಬ್ಬಂದಿ ಇವುಗಳಿಗಾಗಿ ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು, ಮಾಹೇಯಾನಾ ಪ್ರತಿ ತಿಂಗಳ ಗುರ್ರೇತಾರೀಖಿನಲ್ಲಿ 153 ರೂಪಾಯಿಗಳನ್ನು ಖಜಾನೇಯಲ್ಲಿ ಪಾವತೀಮಾಡತಕ್ಕದ್ದು. ಡಿಸ್ಟಿಲ್‌ದಾರನು ಮತ್ತು ನಿಯಮಿಸಲ್ಪಡತಕ್ಕದ್ದೇನಂದರೆ, ಸದರೀಯವನು ಡಿಸ್ಟಿಲೇರಿಕಟ್ಟಡವನ್ನು ಉಪಯೋಗಿಸುವ ಬಗ್ಯೆ ಮಾಹೇಯಾನಾ ಸರ್ಕಾರಕ್ಕೆ 25 ರೂಪಾಯಿಗಳನ್ನು ಕೊಡತಕ್ಕದ್ದಲ್ಲದೆ. ಹಾಲೀ ಇರತಕ್ಕ ಡಿಸ್ಟಿಲ್‌ದಾರ್ರಿಗೆ, ಡಿಸ್ಟಿಲೇರಿ ಆವರಣದೊಳಗೆ, ಬೆಲ್ಲ, ತುಮ್ಮೆಚಕ್ಕೆ ಮುಂತಾದ್ದು ದಾಸ್ತಾ ಇಡುವ ಬಗ್ಯೆ ಅವರು ಕಟ್ಟಿ ಇರುವ ಕೋಠಿಗಳಿಗಾಗಿ ಮೊಕರರಾಗುವ ಈ ಡು ಮೊಬಲಗ್ ಸಹ ಕೊಡತಕ್ಕದ್ದು. ಯಾವ ಆರಕ್ ಸಾರಾಯಿಆಗಲಿ ಅಳೆಯುವಬಗ್ಯೂ ಪರೀಕ್ಷಿಸುವಬಗ್ಯೂ ಮೊಕರರ್ಮಾಡಲ್ಪಟ್ಟಿರುವ ಉದ್ಯೋಗಸ್ಥನಿಂದ ಅಳೆಯಲ್ಪಟ್ಟು ಪರೀಕ್ಷಿಸಲ್ಪಟ್ಟ ಹೊರ್ತು ಡಿಸ್ಟಿಲೇರಿಯ ಆಚೆ ತೆಗದುಕೊಂಡು ಹೋಗಲ್ಪಡಕೂಡದು.

(4.) ಸ್ಪಿರಿಟ್‌ಗಳನ್ನು ಕೊಡುವ ವಿಷಯದಲ್ಲಿ, ಇದರಡಿ ಬರು ನಿಬಂಧನೆಗಳು ಆಚರಿಸಲ್ಪಡತಕ್ಕವು.

(*a.*) ಯಾವ ಸ್ಪಿರಿಟ್ಟಾಗಲಿ, 19 ಡಿಗ್ರಿ ಅಂಡರ್‌ಪ್ರೂಫಿಗೆ ಹೆಚ್ಚಾದ ಬಲವುಳ್ಳದ್ದಾಗಿ ಸಾಧಾರಣವಾಗಿ ಕೊಡಲ್ಪಡಕೂಡದು. ಆದರೆ ಮೇಲೆ ನಮೂದಿಸಲ್ಪಟ್ಟ ಬಲಕಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಕೊಡಲು ಡಿಸ್ಟಿಲ್‌ದಾರನು ಅಪೇಕ್ಷಿಸಿದರೆ ಹಾಂಗೆ. ಕೊಡಲ್ಪಟ್ಟ ಸ್ಪಿರಿಟ್, ಪ್ರೂಫಿಗಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಇರಕೂಡದು.

(*b.*) 19 ಡಿಗ್ರಿ ಅಂ॥ ಪ್ರೂಫಿಗೆ ಮೇಲ್ಪಟ್ಟ ಬಲವುಳ್ಳದ್ದಾಗಿ ಕೊಡಲ್ಪಡುವ ದಕೋಬಸ್ತು ಸಾರಾಯಿಗೂ ಪ್ರೂಫ್‌ಮೇಲೆ ವಿಧಿಸಲ್ಪಟ್ಟಿರುವ ತೀರ್ವೆ ಕಟ್ಟಲ್ಪಡತಕ್ಕದ್ದು.

(*c.*) 19 ಡಿಗ್ರಿ ಅಂ॥ ಪ್ರೂಫಿಗೆ ಕಡಮೆಯಾಗಿ ಇರುವ ಯಾವ ಸ್ಪಿರಿಟ್ಟಾಗಲಿ, ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು.

(5.) ಬಟ್ಟೀ ಇಳಿಸುವಲ್ಲಿ ಉಪಯೋಗಿಸಲ್ಪಡುವ ಪದಾರ್ಥಗಳು ಸೂಪರ್ಇಂಟೆಂಡೆಂಟರವರಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮತ್ತು ಅವು ಅತ್ಯುತ್ತಮವಾಗಿರತಕ್ಕದ್ದು. ಬಟ್ಟೀ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳೂ ಉಪಯೋಗಿಸಲ್ಪಡಕೂಡದು, ಅಥವಾ ಸಾರಾಯಿ ತಯಾರಾದ ಬಳಿಕಲೂ ಅದರಲ್ಲಿ ಹಾಕಲ್ಪಡಕೂಡದು.

(6.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ತನ್ನ ಜಮಾಖರ್ಚುಗಳಿಗೂ, ತಯಾರ್ಮಾದಲ್ಪಟ್ಟ, ಕೊಡಲ್ಪಟ್ಟ, ಮತ್ತು ಪ್ರತಿ ಡಿಸ್ಟಿಲೇರಿ ವ ಡಿಪೋಯಲ್ಲಿ ತೆಗದುಕೊಳ್ಳಲ್ಪಟ್ಟ ಸ್ಪಿರಿಟ್‌ಗಳ ತೇದಾದ್ ವ ಬಲ ಇವುಗಳಿಗೂ, ಕರಾರ್ ವಾಕಾ ಲೆಖ್ಖಗಳನ್ನು ಇಡತಕ್ಕದ್ದಲ್ಲದೆ ಸೂಪರ್ಇಂಟೆಂಡೆಂಟರಾಗಲಿ, ಅವರು ತನಿಖೀಬಗ್ಯೆ ಕಳುಹಿಸುವ ಯಾವ ತಾಬೇದಾರರಾಗಲಿ, ಆ ಲೆಖ್ಖಗಳನ್ನು ತನಖೀ ಮಾಡುವ ಬಗ್ಯೆ ಹಾಜರ್ ಮಾಡಬೇಕೆಂದು ತಿಳಿಸಿದಾಗೆಲ್ಲ ಹಾಜರ್ಮಾಡತಕ್ಕದ್ದು.

(7.) ಡಿಸ್ಟಿಲ್‌ದಾರನು ಒಂದು ತಿಂಗಳಿಗೆ ಬೇಕಾದ ಸಾರಾಯಿಯನ್ನು ಯಾವಾಗಲೂ ದಾಸ್ತಾ ಯಿಟ್ಟುಕೊಂಡಿರುವ ಬಗ್ಯೆ ಬದ್ಧನಾಗಿರತಕ್ಕದ್ದು. ಈ ಪ್ರಕಾರ 1877ನೇ ಇಸವಿ ಏಪ್ರೆಲ್ ಗುರ್ರೇತಾರೀಖಿನಲ್ಲಿ ಯಿಟ್ಟುಕೊಂಡಿರತಕ್ಕ ಬಗ್ಯೆ ಆ ತಾರೀಖಿಗೆ ಮೊದಲೇ ಬಟ್ಟೀ ಯಿಳಿಸಲು ಷುರೂ ಮಾಡುವದಕ್ಕೆ ಅವನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಪರಂತು ಹಾಂಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ 1877ನೇ ಇಸವೀ ಏಪ್ರೆಲ್ ಗುರ್ರೇ ತಾರೀಖಿಗೆ ಪೂರ್ವ ಮಾರಲ್ಪಡಕೂಡದು. ಅಥವಾ ಲೈಸೆನ್ಸ್‌ದಾರನ ವ ಆತನ ನೌಕರರ ಸ್ವಾಧೀನದಿಂದ ಆಚೆ ಹೋಗಕೂಡದು.

(8.) ಡಿಸ್ಟಿಲ್‌ದಾರನು ದರೋಬಸ್ತು ಕಸಬೆಗಳಲ್ಲಿಯೂ, ಮತ್ತು ದೊಡ್ಡ ದೊಡ್ಡ ಷಹರ್‌ಗಳಲ್ಲಿಯೂ, ವೊಟ್ಟು ಬಿಕರೀ ಅಂಗಡಿಗಳನ್ನು ಯಿಟ್ಟುಕೊಳ್ಳತಕ್ಕ ಬಗ್ಗೆ ಆತನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಸದರೀ ಕಸಬಾ ಷಹರ್‌ಗಳ ವೊಂದು ಪಟ್ಟಿಯು, ಜೇರಬರದುಕೊಂಡರೆ ಕೊಡಲ್ಪಡತ್ತೆ.

(9.) ದರೋಬಸ್ತು ಚಿಲ್ಲರೇ ಬಿಕರೀದಾರ್ರುಗಳೂ ಸ್ಪಿರಿಟ್‌ಗಳನ್ನು ಕ್ಲುಪ್ತಪಡಿಸಲ್ಪಟ್ಟ ಕ್ರಯಕ್ಕೆ ಮತ್ತು ಈ ಕೆಳಗೆ 14ನೇ ಕ್ಲಾಜ್‌ನಲ್ಲಿ ನಮೂದಿಸಲ್ಪಟ್ಟ ಬಲಗಳುಳ್ಳದ್ದಾಗಿ ಮಾರುತ್ತಿರಲಿಕ್ಕೂ ಮತ್ತು ಯಾವ ವೊಟ್ಟು ಬಿಕರೀ ಅಂಗಡಿಯಿಂದ ಅವರು ತಮ್ಮ ಸಾರಾಯಿಯನ್ನು ಪಡೆಯತಕ್ಕದ್ದೆಂದು ಅವರಿಗೆ ಡಿಸ್ಟಿಲ್‌ದಾರನಿಂದ ತಿಳಿಸಲ್ಪಟ್ಟಿರುತ್ತೋ ಅಂತಾ ವೊಟ್ಟು ಬಿಕರೀ ಅಂಗಡಿಯಿಂದ ಪಡೆಯುತ್ತಾ ಬರಲಿಕ್ಕು ಕರಾರ್ ಬರದುಕೊಡತಕ್ಕದ್ದೆಂತಲೂ ಅವರ ಅಂಗಡಿಗಳಲ್ಲಿ ಯಾವ ಅಕ್ರಮಗಳೂ ನಡೆಯದೆ ಯಿರತಕ್ಕದ್ದನ್ನು ನೋಡತಕ್ಕ ಬಗ್ಗೆ ಡಿಸ್ಟಿಲ್‌ದಾರನಿಗಾಗಲಿ, ಆತನ ಮುತಾಲೀಕನಿಗಾಗಲಿ, ಅವರ ಅಂಗಡಿಗಳಿಗೆ ಧಾರಾಳವಾಗಿ ಹೋಗುವದಕ್ಕೆ ಆಸ್ಪದ ಕೊಡತಕ್ಕದ್ದೆಂತಲೂ ಸಹಾ ತಾಕೀದ್ ಮಾಡಲ್ಪಡತಕ್ಕದ್ದು ಮತ್ತು ಸದರೀ ಚಿಲ್ಲರೇ ಬಿಕರೀದಾರ್ರುಗಳು ತಮ್ಮಿಂದ ದಿನವಹಿ ತರಲ್ಪಟ್ಟ ಸಾರಾಯಿಯ ತೇದಾದ್ ವ ಬಲ ಯಿವುಗಳಿಗೂ, ಮತ್ತು ಅದಕ್ಕೆ ಕಟ್ಟಲ್ಪಟ್ಟ ಖರೀದಿಗೂ ಲೆಖ್ಖಗಳನ್ನು ಯಿಡತಕ್ಕದ್ದಲ್ಲದೆ ಡಿಸ್ಟಿಲ್‌ದಾರನಾಗಲಿ, ಆತನ ಮುತಾಲೀಕನಾಗಲಿ, ಸದರೀ ಲೆಖ್ಖಗಳನ್ನು ತನಖೀ ಮಾಡಲಿಕ್ಕೆ ಅಧಿಕಾರ ಹೊಂದಿರುವ ಯಾವ ಗವರ್ನಮೆಂಟ್ ಉದ್ಯೋಗಸ್ಥನಾಗಲಿ, ಅಪೇಕ್ಷಿಸಿದಾಗ ಅವರ ಲೆಖ್ಖಗಳನ್ನು ಅವರುಗಳು ನೋಡಲಿಕ್ಕೆ ಹಾಜರ್ಮಾಡತಕ್ಕದ್ದು.

(10.) ಕೊಡಗಿನಲ್ಲಿರುವ ಚಿಲ್ಲರೇ ಬಿಕರೀ ಅಂಗಡಿಗಳ ಬಗ್ಗೆ ಮಾಮೂಲ್ ಲೈಸೆನ್ಸ್‌ಗಳು ಸೂಪ್ರಿಂಟೆಂಡೆಂಟರಿಂದ ಕೊಡಲ್ಪಡತಕ್ಕವು.

(11.) ಸಾರಾಯಿಗೆ ಸಾಟಿಯಾಗಿ ಯಾ ಬತ್ತೆಯಾಗಿ ಧಾನ್ಯವಾಗಲಿ, ವಸ್ತುಗಳಾಗಲಿ, ಆಭರಣಗಳಾಗಲಿ, ವುಡುವ ಬಟ್ಟೆಗಳಾಗಲಿ, ಯಿತರ ಮಾಲ್ ಆಗಲಿ, ತೆಗದುಕೊಳ್ಳಕೂಡದು. ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ಡಿಸ್ಟಿಲೇರಿಯಲ್ಲಾಗಲಿ, ವೊಟ್ಟು ಬಿಕರೀ ಅಂಗಡಿಗಳಲ್ಲಾಗಲಿ, ಸಾರಾಯಿಯನ್ನು ಚಿಲ್ಲರೆಯಾಗಿ ಮಾರಕೂಡದು.

(12.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ಡಿಸ್ಟಿಲೇರಿಗಳನ್ನು ಯಾ ವೊಟ್ಟು ಬಿಕರೀ ಅಂಗಡಿಗಳನ್ನು ಯಾ ಡಿಪೋಗಳನ್ನು ಮೇಲ್‌ವಿಚಾರಣೆ ಮಾಡತಕ್ಕ ಬಗ್ಗೆ ತಾನು ನೌಕರಿಗೆ ಯಿಟ್ಟುಕೊಳ್ಳತಕ್ಕ ಪ್ರತಿ ಮನುಷ್ಯನೂ, ಹಾಗೆ ನೌಕರಿ ಪಡೆಯುವದಕ್ಕೆ ಮುಂದೆ, ಮೇಲೆ ನಮೂದಿಸಲ್ಪಟ್ಟ ಷರತ್ತುಗಳಿಗೆ ಅನುಗುಣವಾಗಿರುವ ಕರಾರು ಬರದುಕೊಡುವಂತೆ ಮಾಡಿಸತಕ್ಕದ್ದು, ಮತ್ತು ಅಂತಾ ಕರಾರುಗಳನ್ನು 1877ನೇ ಇಸವಿ ಏಪ್ರಿಲ್ ಗುರ್ರೇ ಲಾಗಾಯಿತು ವೊಂದು ತಿಂಗಳೊಳಗಾಗಿ ಸೂಪರಿಂಟೆಂಡೆಂಟ್ ರವರಲ್ಲಿ ಡಿಪಾಜಿಟ್ ಇಡತಕ್ಕದ್ದು. ಯಿದಲ್ಲದೆ ಲೈಸೆನ್ಸ್‌ದಾರನು, ಅರೆಕ್‌ಸಾರಾಯಿ ತಯಾರ್ಮಾಡುವ ಬಗ್ಗೂ, ತೆಗದುಕೊಂಡು ಹೋಗುವ ಬಗ್ಗೂ, ಬಿಕರೀ ಮಾಡುವ ಬಗ್ಗೂ, ತನ್ನಿಂದ ಇಡಲ್ಪಟ್ಟ ದರೋಬಸ್ತು ಜನಗಳು ತಾವು ತಾವು ಬರದುಕೊಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳ ಪ್ರಕಾರ ಖಂಡಿತವಾಗಿ ನಡಿಯತಕ್ಕ ಬಗ್ಗೆ ಸರ್ವಪ್ರಯತ್ನವೂ ಮಾಡತಕ್ಕದ್ದು. ಆ ನಿಬಂಧನೆಗಳನ್ನು ಉಲ್ಲಂಘನೆ ಮಾಡಿದ್ದಾಗಿ ತನ್ನ ತಿಳುವಳಿಕೆಗೆ ಬಂದರೆ, ಆ ತಕಸೀರಿಗೆ ವಿಧಿಸಲ್ಪಟ್ಟಿರುವ ದಂಡನೆಯನ್ನು ಕೊಡತಕ್ಕ ಬಗ್ಗೆ ಆ ಸಂಗತಿಯನ್ನು ಸೂಪರಿಂಟೆಂಡೆಂಟ್‌ರವರ ಜಾಹೀರಾತಿಗೆ ತರತಕ್ಕದ್ದು, ಮತ್ತು ಆ ತಕಸೀರ್‌ವಂದನನ್ನು ನವಕರಿಯಿಂದ ಬರತರ್ಫ್ ಸಹಾ ಮಾಡತಕ್ಕದ್ದು.

(13.) "ಡಿಸ್ಟಿಲ್‌ದಾರನು ಚೀಫ್ ಕಮ್ಮಿಷನ್ನರವರಿಂದ ಆಗಿಂದಾಗ್ಗೆ ವಿಧಿಸಲ್ಪಡುವ ಯಾವಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯತಕ್ಕದ್ದೆಂದು ತಾಕೀದ್ ಮಾಡಲ್ಪಡತಕ್ಕದ್ದು, ಮತ್ತು ಸಾರಾಯಿ ತಯಾರ್ಮಾಡುವ ಬಗ್ಗೂ ತೆಗದುಕೊಂಡು ಹೋಗುವ ಬಗ್ಗೂ ಯಾ ಬಿಕರೀ ಮಾಡುವ ಬಗ್ಗೂ ತಾನು ನವಕರೀ ಯಿಟ್ಟುಕೊಂಡಿರುವ ಮನುಷ್ಯರು ಸಹ ಸದರೀ ನಿಬಂಧನೆಗಳಿಗೆ ಅನುಗುಣವಾಗಿ ನಡಿಯುವಂತೆ ಮಾಡಿಸತಕ್ಕದ್ದು.

(14.) ವೊಟ್ಟು ಬಿಕರೀ ವ ಚಿಲ್ಲರೆ ಅಂಗಡಿಗಳಲ್ಲಿ (ಮಿಶ್ರಮಾಡದೆ ವ ತೆಳುವು ಮಾಡದೆ) ಬಿಕರೀ ಮಾಡತಕ್ಕ ಸಾರಾಯಿಯ ನಿರ್ಖುಗಳು ಈ ಕೆಳಗೆ ಬರುವ ಪಟ್ಟೀ ಪ್ರಕಾರ ಯಿರತಕ್ಕದ್ದು.

ಸ್ಥಳ.		ಪ್ರೂಫ್.		19ಡಿಗ್ರಿ ಅಂಡರ್ ಪ್ರೂಫ್.	
		ಪ್ರತಿ ಗ್ಯಾಲನ್‌ಗೆ.	ಪ್ರತಿ ಡ್ರಾಂಗೆ.	ಪ್ರತಿ ಗ್ಯಾಲನ್‌ಗೆ.	ಪ್ರತಿ ಡ್ರಾಂಗೆ.
ಷಹರ್	ಒಟ್ಟು ಬಿಕ್ರಿ	4-10-0	..	3—12—0	
	ಚಿಲ್ಲರೇ ಬಿಕ್ರಿ			3—15—4	0-1-7
ಗಾವ್‌ಗಾನೆಗಳು	ಒಟ್ಟು ಬಿಕ್ರಿ	4-10-0	..	3—12—0	
	ಚಿಲ್ಲರೇ ಬಿಕ್ರಿ			4— 2—8	0-1-8

(15.) ಲೈಸೆನ್ಸು ಹೊಂದಿದ ಡಿಸ್ಟಿಲೇರಿ ದಾರನಿಂದ ಅಥವಾ ಅವನ ಮದ್ದತ್ತಿನಮೇಲೆ ಅಂತರಂಗವಾದ ಅವನ ಸಂಬಂಧದ ದೆಶೆಯಿಂದ ಷರಾಬ್ ತಯಾರಿ ಯಾ ಸಾಗಿಸೋಣ ಯಾ ಪುರೊಖ್ತು ಇಂತಾದ್ದರಲ್ಲಿ ಆತನಿಂದ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯರಿಂದಲಾಗಲಿ ಈ ಷರತ್ತು ಬಂದಿಗೆಗೆ ಮನಃಪೂರ್ವಕವಾದ ವುಲ್ಲಂಘನವೇನ್ನಾದರೂ ನಡಿಸಲ್ಪಟ್ಟ ಪಕ್ಷಕ್ಕೆ ಸೂಪರಿಂಟೆಂಡೆಂಟ್ ರವರು ಚೀಫ್ ಕಮ್ಮಿಷನ್ನರವರ ಮಂಜೂರಾತಿ ನಿಶಿ ಡಿಪಾಜಿಟ್‌ಮೊಬಲಗು ಸರಕಾರಕ್ಕೆ ಶೇರಿಹೋಗಿರುತ್ತೆಂದು ತಿಳಿಸಲಿಕ್ಕೂ ಲೈಸೆನ್ಸ್ ರದ್ದು ಮಾಡಲಿಕ್ಕೂ ಮತ್ತು ರದ್ದಾದ ಲೈಸೆನ್ಸ್ ಹಿಡುವಳಿದಾರನಿಗೆ ಲುಕ್ಸಾನುಕರವಾಗಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪುನಸ್ಹ ಹರಾಜು ಹಾಕುವದಕ್ಕಾಗಲಿ ಸರಕಾರದ ವಿಚಾರಣೆ ಕೆಳಗೆ ತೆಗದುಕೊಳ್ಳುವದಕ್ಕಾಗಲಿ ಅಧಿಕಾರ ಪಡದಿರುತ್ತಾರೆ: ಮತ್ತು ಯಾವಸಂಗತಿವಳಗೂ ಜಮೀನು ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀಯಿರುವ ರೂಲ್ಸ್ ಅನುಸರಿಸಿ ಬಾಕೀ ವಸೂಲು ಮಾಡಲ್ಪಡತಕ್ಕದ್ದು.

VII. ಫ್ರೇಜರ್‌ಪೇಟೆ ಡಿಸ್ಟಿಲೇರಿಯಿಂದ ಕಳೆದ 5ಸಂವತ್ಸರಗಳ ವಳಗೆ ತಯಾರಾಗಿ ಕೊಡಲ್ಪಟ್ಟ ಸಾರಾಯಿಯ ಸಾಲಿಯಾನ ಸರಾಸರೀ ತೇದಾದ್ ಈಕೆಳಗೆ ತೋರಿಸಲ್ಪಡುತ್ತೆ.

	ಗ್ಯಾಲನ್‌ಗಳು.
1871—72	69, 309 .. ..
1872—73	70, 056 .. ..
1873—74	58, 375 .. ..
1874—75	54, 867 .. ..
1875—76	58, 345 .. ..

ನಂ. 13. ತಾರೀಖು 5ನೇ ಡಿಶಂಬರ್ 1876.

ಈ ಕೆಳಗೆ ಬರುವ ಬೈಲಾಸಿಂಧನೆಯು ಚೀಫ್ ಕಮ್ಮಿಷನರವರಿಂದ ಸಮ್ಮತಿಸಲ್ಪಟ್ಟು ಮಂಜೂರ್ ಮಾಡಲ್ಪಟ್ಟು, ಸಕಲಜನಗಳಿಗೂ ತಿಳಿಯುವಬಗ್ಯೆಪ್ರಕಟಸಲ್ಪಡುತ್ತೆ.

92. ನೇ ಬೈಲಾ.—ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜನನ ಮರಣಗಳನ್ನ ರಿಜಿಸ್ಟರ್ ಮಾಡುವ ಬಗ್ಯೆ, ಈ ಕೆಳಗೆ ಕಂಡ 6 ಡಿವಿಜನ್‌ಗಳು ಮಡಿಕೇರಿ ಷಹರಿನಲ್ಲಿ ಕಲ್ಪಿಸಲ್ಪಟ್ಟಿವೆ. ಇಂತಾ ಪ್ರತಿ ಡಿವಿಜನ್ನಿಗೂ ಮ್ಯುನಿಸಿಪೆಲ್ ಬೋರ್ಡಿನವರು ಒಬ್ಬ ಮೆಂಬರನ್ನು ಮೊಕರರ್ ಮಾಡಿರುತ್ತಾರೆ. ಸದರೀ ಸರಹದ್ದುಗಳೊಳಗೆ ಸಂಭವಿಸುವ ಪ್ರತಿ ಜನನವನ್ನೂ, ಮರಣವನ್ನು, ತಿಳಿದುಕೊಂಡು ಬರೆದಿಡುವದು ಆವರ ಕೆಲಸವಾಗಿರತಕ್ಕದ್ದು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುವ ದರೋಬಸ್ತು ಜನಗಳೂ, ತಮ್ಮ ತಮ್ಮ ಡಿವಿಜನ್‌ಗಳ ಮೆಂಬರ್‌ಗಳಿಗೆ, ತಮ್ಮ ಕುಟುಂಬಗಳಲ್ಲಿ ಯಾ ಮನೆಗಳಲ್ಲಿ ಸಂಭವಿಸುವ ಜನನ ಮರಣಗಳನ್ನು 6 ದಿನಗಳೊಳಗಾಗಿ ರಿಪೋರ್ಟುಮಾಡತಕ್ಕದ್ದೆಂದು ತಾಕೀದ್ ಮಾಡಲ್ಪಟ್ಟಿದ್ದಾರೆ. ಯಾವ ಮನುಷ್ಯನಾಗಲಿ ಹಾಗೆ ಮಾಡುವದಕ್ಕೆ ತಪ್ಪಿದರೆ ಅವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿತಲ್ಪಟ್ಟು ಪ್ರತಿ ತಪ್ಪಿಕ್ಕೂ ಒಂದು ರೂಪಾಯಿ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬ್ರಾಹ್ಮಣ ಪೇಟೆ   ದೊಡ್ಡ ಬೀದಿ   ರಾಣೀ ಪೇಟೆ   ಬಾನೇ ಮೊಟ್ಟೆ   ಗೌಳೀ ಪೇಟೆ   ಗಾರೀ ಬೀದಿ.

ನಂ. 14. ತಾರೀಖು 5ನೇ ಡಿಶಂಬರ್ 1876.

"ಕೊಡಗು ಕೋರ್ಟು ಆಕ್ಟು" ಎಂಬ 1868ನೇ ಇಸವಿಯ 25ನೇ ಆಕ್ಟಿನ 4ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಈ ಕೆಳಗೆ ನಮೂದಿಸಲ್ಪಡುವ ಪಾರಪತ್ತೇಗಾರ್‌ಗಳು ತಮ್ಮ ತಮ್ಮ ನಾಡುಗಳಲ್ಲಿ, ಐವತ್ತು ರೂಪಾಯಿಗಳಿಗೆ ಮೀರದ ಮೊಬಲಗ್ ಉಳ್ಳ ದಾವೆಗಳಲ್ಲಿ ನಡಿಸಲ್ಪಡತಕ್ಕ ಶಿವಿಲ್ ಅಧಿಕಾರವು ಕೊಡಲ್ಪಟ್ಟಿರುತ್ತಾರೆ:—

ಎಡವನಾಡು ಪಾರುಪತ್ತೇಗಾರ್ ಮಂಡಪ್ಪಂಡ್ರ ನಂಜಪ್ಪ ನಂಜರಾಜಪಟ್ಟಣದ, ಪಾರಪತ್ತೇಗಾರ್ ಮರಿಯಂಡ ಪೂವೈಯ

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 9, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮಿಷ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 8ನೇ ಡಿಶಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮಿಷ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಸ್ಪೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾರ್‌ಗಳು ಮತ್ತು ಅರ್ಜೀದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪೆ. ಅ. ೬೯	ವೇಂಕಟರಮಣಪ್ಪಾ ವಗೈರೆ ..	ಡಾಕ್ಟರ್ ಆರ್‌ಸಾಹೆಬರು ವಗೈರೆ ..	೧೨ನೇ ಡಿಶಂಬರ್
ಸ್ಪೆ. ಅ. ೭೮	ನಾಡಿಗ ಶ್ಯಾಮಣ್ಣ ..	ಕ್ಯಾಪ್ಟನ್ ವಾನಸಾಮರನ್ ..	ಡಿಟೋ
ಸ್ಪೆ. ಅ. ೮೦	ನರಸಿಹ್ಮಯ್ಯಾ ವಗೈರೆ ..	ಸುಬ್ಬರಾಯ ವಗೈರೆ ..	ಡಿಟೋ
ಸ್ಪೆ. ಅ. ೭೯	ಲಿಂಗಣ್ಣಾ ..	ನಂಜೇಗೌಡ ..	೧೪ನೇ ಡಿಟೋ
ಸ್ಪೂಟ್ ಸ್ಪೆ. ಅ. ೧೩	ಪುಟ್ಟಣ್ಣಾ ..	ಚನ್ನಪ್ಪಾ ..	ಡಿಟೋ
ಕೊ. ಸ್ಪೆ. ಅ. ೧೫೪	ನಂಜುಂಡೈಯ ..	ಮಲ್ಲಶೆಟ್ಟಿ ..	ಡಿಟೋ
ಕ್ರಿ. ಪಿಟಿಷನ್ ೩೬	ಕೈದಿ, ತಂಮೈಯ ..	..	ಡಿಟೋ
ಸ್ಪೆ. ಅ. ೮೧	ಮುರಗಪ್ಪ ವಗೈರೆ ..	ಜಡಿಯಪ್ಪಾ ..	೧೯ನೇ ಡಿಟೋ
ಕೊ. ಅ. ೨೦॥ ನಂ. ೪	ಕಾಶೀಬಾಯಿ ವಗೈರೆ ..	ಅಬ್ದುಲ್‌ಖಾದರ್ ಸಾಹೆಬ್ ..	ಡಿಟೋ
ಸ್ಪೂಟ್ ಸ್ಪೆ. ಅ. ೧೪	ರಾಮಗಿರಿ ಮಹೇಶಗಿರಿ ಗೋಸಾಯಿ ..	ದೊಂತಲ್ ಶಿದ್ಧರಾಮಶೆಟ್ಟಿ ..	೨೧ನೇ ಡಿಟೋ
ಸ್ಪೆ. ಅ. ೮೩	ಸುಮತೀಂದ್ರ, ತೀರ್ಥಸ್ವಾಮಿ ..	ರಾಘವೇಂದ್ರ, ಭಾರತೀಸ್ವಾಮಿ ..	೨೪ನೇ ಜನವರೀ ೭೭

J. D. GORDON, *Judl. Commr.*

ಪೊಲೀಸ್ ಇಲಾಖಾ.

ತಾರೀಖು 11ನೇ ಡಿಸಂಬರ್ 1876.

ಬೆಂಗಳೂರು ಡಿಸ್ಟ್ರಿಕ್ಟ್ 3ನೇ ಗ್ರೇಡ್ ಇನ್ಸ್‌ಪೆಕ್ಟರ್ ಶ್ರೀನಿವಾಸೈಯಂಗಾರ್ರಿಗೆ ಸನ್ 1876ನೇ ಇಸವಿ ನವಂಬರು 26ನೇ ತಾರೀಖು ಲಗಾಯಿತು ಒಂದು ವಾರದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

J. D. GORDON,
Inspr. General of Police.

ಇನಾಂ ಇಲಾಖಾ.

ನಂ. 12. ತಾರೀಖು 5ನೇ ಡಿಶಂಬರ್ 1876.

ಹಾಸನ ಡಿಸ್ಟ್ರಿಕ್ಟು ಹಾಸನ ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಕಸಬಾ ಷಹರನಲ್ಲಿ ಇಂನಾ ಸೆಟಲ್ ಮೆಂಟುಗಳ ಅಸಿಸ್ಟೆಂಟ ಸೂಪರಿಂಟೆಂಡೆಂಟ ಮ॥ ಕಿಟ್ಸೋಯವರಿಂದ ನಡಿಸಲ್ಪಟ್ಟು 1877ನೇ ಫೆಬ್ರುವರೀ 15ನೇ ಮರ್ಕ್ಕಂನಲ್ಲಿ ಷುರುವಾಗುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಇನಾಂಗಳಿಗೆ ಸಂಬಧವುಳ್ಳ ದರ್ಖೋಜಸ್ತು ಜನಗಳೂ ರೂಬರೂ ಆಗಲಿ ತಮ್ಮ ಮುತಾಲೀಕರ ಮೂಲಕವಾಗಲಿ ಹಾಜರಾಗಿ ತಮ್ಮ ತಮ್ಮ ಬಾಧ್ಯತೆಗಳನ್ನು ಕುರಿತು ವ್ಯವಹರಿಸುವಂತೆಯೂ ತಮ್ಮಲ್ಲಿರುವ ಸನ್ನದ್ ಗಳನ್ನೂ ಯಿತರ ದಸ್ತಾವೇಜುಗಳನ್ನೂ ಹಾಜರ್ ಮಾಡುವಂತೆಯೂ ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ. ಹಾಗೆ ಮಾಡದೆ ಹೋದರೆ ಅವರುಗಳ ಇನಾಂಗಳು ಪ್ರಥಮತಃ ಜಪ್ತೀಕೆಳಗೆ ತರಲ್ಪಟ್ಟು ತರುವಾಯ ಆಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

R. A. COLE,
Supt. of Inam Settlements.

ಪಬ್ಲಿಕ್ ವರ್ಕ್ಸ್ ಇಲಾಖಾ.

ತಾರೀಖು 28ನೇ ನವಂಬರ್ 1876.

ಯುಗ್ಜಿಕ್ಯೂಟಿವ್ ಇಂಜನೀರ್ ಆಫೀಸ್ ಸ್ಟೋರ್ ಕೀಪರ್ ಬಿ. ವೆಂಕಟರಾಯರು ನಗರ್ ರೇಂಜ್ ಅ॥ ಇಂಜನೀರ್ ಆಫೀಸ್ ಹೆಡ್ ಕ್ಲರ್ಕರಾಗಿ ಬಡ್ತಿಯಾದ್ದರಿಂದ ಈ ಕೆಳಗೆ ಬರುವ ಬಹಲಗಳು ಮತ್ತು ಬಡೀಗಳು ಮಾಡಲ್ಪಟ್ಟು ಯಿರುತ್ತವೆ:—

1. ಶಿವಮೊಗ್ಗಾ ಡಿವೀಜನ್ ಯುಗ್ಜಿಕ್ಯೂಟಿವ್ ಇಂಜನಿರ್ ಆಫೀಸ್ ಮುನಷಿ ಹೆಚ್. ಭೀಮರಾಯರು ಇದೇ ಆಫೀಸ್ ಸ್ಟೋರ್ ಕೀಪರಾಗಿ ಅಜಮಾಇಷೀ ತರೀಕ್ ಮೊಕರರ್.

2. ನಂಬರ್ 1ನೇ ಸಬ್‌ಡಿವಿಜನ್ ರೈಟರ್ ಯಂ. ಕೃಷ್ಣರಾಯರು ಯುಗ್ಜಿಕ್ಯೂಟಿವ್ ಇಂಜನೀರ್ ಆಫೀಸನಲ್ಲಿ ಮುನಷೀಯಾಗಿ ಅಜಮಾಯಿಷೀ ತರೀಕ್ ಮೊಕರರ್.

3. ನಂಬರ್ 2ನೇ ಸಬ್‌ಡಿವೀಜನ್ ಮುತ್ಸದ್ದಿ ಟಿ. ಸುಬ್ಬರಾಯರು, ನಂಬರ್ 1ನೇ ಸಬ್‌ಡಿವೀಜನ್ ಆಫೀಸ್ ರೈಟರಾಗಿ ಅಜಮಾಯಿಷೀ ತರೀಕ್ ಮೊಕರರ್.

4. ಉಮೇದ್‌ವಾರ್ ಹೆಚ್. ಕೃಷ್ಣರಾಯರು ನಂ. 2ನೇ ಸಬ್‌ಡಿವೀಜನ್ ಮುತ್ಸದ್ದಿಯಾಗಿ ಅಜಮಾಯಿಷೀ ತರೀಕ್ ಮೊಕರರ್.

ಮೇಲೆಕಂಡ ಬಹಲಗಳು ಬಿ. ವೆಂಕಟರಾಯರು ಅ॥ ಇಂಜನೀರ್ಸ ಆಫೀಸಿನಲ್ಲಿ ಕೆಲಸದ ಮೇಲೆ ಹಾಜರಾಗಿ ರಿಪೋರ್ಟು ಮಾಡಿದ ತಾರೀಖು ಲಗಾಯಿತು ಜಾರೀಯಲ್ಲಿ ಬರತಕ್ಕದ್ದು.

A. STODDARD,
Exe. Engr., Shimoga Division.

ಫಾರೆಸ್ಟ್ ಇಲಾಖಾ.

ತಾರೀಖು 2ನೇ ಡಿಸಂಬರ್ 1876.

1873ನೇ ಇಸವಿ ನವಂಬರ್ 8ನೇ ಮರ್ಕ್ಕಂ ಮೈಸೂರು ಗೆಜೆಟ್ 2ನೇ ಭಾಗ 293ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ 1873ನೇ ಯಿಸವೀ ನವಂಬರ್ 3ನೇ ಮರ್ಕ್ಕಂ 2ನೇ ನಂಬರ್‌ವುಳ್ಳ ಈ ಆಫೀಸ್ ಯಿಸ್ತಿಹಾರ್‌ನಾಮೆಯನ್ನು ರದ್ದುಪಡಿಸಿ 1876ನೇ ಯಿಸವೀ ಡಿಸಂಬರ್ 15ನೇ ಮರ್ಕ್ಕಂ ಲಗಾಯತ್ ಮೈಸೂರುಸೀಮೆಯ ಗವರ್ನಮೆಂಟ ಕೋಠಿಗಳಲ್ಲಿ ಯಾವ ಚಿಲ್ಲರೆ ದರಕ್ಕೆ ಸಂದಲ್ ಮಾರಲ್ಪಡುತ್ತೋ ಅಂತಾ ದರಗಳ ಬಾಬತು ಈ ಕೆಳಗೆ ನಮೂದಿಸುವ, ಪರಿಷ್ಕರಿಸೋಣಾಹ ಪಟ್ಟಿಯು ಸಕಲಜನಗಳಿಗೂ ತಿಳಿಯುವ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಅವ್ವಲ್ ತರಹಾ	ಟನ್ 1ಕ್ಕೆ	ರೂಪಾಯಿ	900
ದುಯ್ಯಂತರಹಾ	,,	,,	870
ಸಿಯ್ಯಂ ತರಹಾ	,,	,,	850
ಚಾರಂ ತರಹಾ	,,	,,	760
ಪಾಂಜಂತರಹಾ	,,	,,	640
ಜಜ	,,	,,	550

ಅವ್ವಲ್ ತರಹಾ	ಟನ್ 1ಕ್ಕೆ	ರೂಪಾಯಿ	
ಜಜ ಪೋಕಲ್	,,	,,	450
ಬಗರ್ ಆದದ್	,,	,,	480
ಬುಕಣಿ	,,	,,	330
ಚಕ್ಕೇ ಪುಡಿ	,,	,,	150

2. ದರೋಬಸ್ತು ಅಪ್ಲಿಕೇಷನ್‌ಗಳೂ, ಫಾರಸ್ಟು ಡಿವಿಜನ್‌ಗಳ ಯಿನ್‌ಚಾರ್ಜ್ ಡೆಪ್ಯುಟಿ ಯಾ ಅ|| ಕನ್‌ಸರವೇಟರಗಳಿಗೆ ಬರೆದುಕೊಳ್ಳತಕ್ಕದ್ದು.

3. ಪ್ರತಿ ಕ್ಲಾಸಿನಲ್ಲಿಯೂ ಒಂದು ಟನ್‌ಗಿಂತ ಜಾಸ್ತೀಯಾದ ಮೊತ್ತಕ್ಕೆ ಬರುವ ಅಪ್ಲಿಕೇಷನ್‌ಗಳು ಅಂಗೀಕರಿಸಲ್ಪಡಲಾರದು.

4. ದರೋಬಸ್ತು ಚಿಲ್ಲರೆ ಬಿಕರೀಗೂ ನಗದೇ ಪಾವತೀ ಮಾಡಬೇಕು ಖರೀದೀ ಮಾಡಿದ ಸಂದಲನ್ನು ಕೂಡ್ಲೆ ಸಾಗಿಸಬೇಕು.

G. J. VAN SOMEREN, *Captain*,
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಹಳೆ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ಅಂಶದಲ್ಲಿ ಮುಂಚಿರುವ ರೂಲ್ಸ್ ಅನುಸಾರವಾಗಿ 1870ನೇ ಇಸವಿ ಜನವರೀ ಗುರ್ರೇ ಲಗಾಯತು ಅದೇ ಇಸವಿ ಡಿಶಂಬರ 31ನೇ ತಾರೀಖು ವರಿಗೆ ಒರಿಜನಾಲ್ ಸ್ಮಾಲ್‌ಕಾಜ್ ಅಮಲ್‌ಜಾರೀ ಯಿತರ ಮಿಸಲೇನಿಯಸ್ ಮೊಕದ್ದಮೆಗಳಲ್ಲಿ ವ ನಡವಳಿಕೆಗಳಲ್ಲಿ ಕಕ್ಷಿಗಾರರಿಂದ ದಾಖಲ್ ಮಾಡಲ್ಪಟ್ಟ ದರೋಬಸ್ತು ದಸ್ತೈವಜುಗಳು, ಸಾಧನಗಳು, ಲಿಖ್ಖಗಳು, ಯಿತರ ಕಾಗದಗಳು 1877ನೇ ಇಸವಿ ಮಾರ್ಚಿ 31ನೇ ತಾರೀಖಿನಲ್ಲಿ ನಾಶ ಮಾಡಲ್ಪಡುವವು.

ಮೇಲೆ ತಿಳಿಸಲ್ಪಟ್ಟ ಮೊಕದ್ದಮೆಗಳಲ್ಲಿ ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತೈವಜುಗಳನ್ನಾಗಲಿ ವಾಪಸ್ ತೆಗದುಕೊಳ್ಳತಕ್ಕ ಖಾಯಿಷ್ ವುಳ್ಳ ಕಕ್ಷಿಗಾರರು ಮೇಲೆ ನಮೂದಿಸಲ್ಪಟ್ಟ ತಾರೀಖಿಗೆ ಮಾತ್ರವೇ ಕೋರ್ಟು ದಿನಗಳಲ್ಲಿ ಮಧ್ಯಾಹ್ನ 11 ಘಂಟೇ ಲಗಾಯತು 4 ಘಂಟೆ ವಳಗಾಗಿ ಕೋರ್ಟಿಗೆ ತಿಳಿ ಪಡಿಸತಕ್ಕದ್ದು.

J. LACEY, B. L.,
Judicial Assistant Commissioner.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ಸಕಲಜನಗಳಿಗೂ ತಿಳಿಯುವಬಗ್ಗೆ. ಇದರಿಂದ ತಿಳಿಸಲ್ಪಡುವದೇನಂದರೆ,—ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ಶಿವಾಯಿ ತುಮಕೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78—1878—79—1879—80 1880—81 ಮತ್ತು 1881—82ನೇ ಇಸವಿಗಳಿಗೆ ಅಂದರೆ 1877ನೇ ಏಪ್ರೆಲ್ 1ನೇ ಮುರ್ಕುಂ ಲಗಾಯಿತು 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಡದರಖಾಸ್ತುದಾರ್ರಿಗೆ ಹರಾಜು ಮೂಲಕ 1877ನೇ ಮಾರ್ಚಿ 15ನೇ ಮುರ್ಕುಂ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದುವರುಷಗಳ ವರಿಗೆ ಆಯಾ ವರುಷದ ಚಡದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ಮೇಲೆ ಕರೆನ್ಸಿ ನೋಟುಗಳು ಯಾ ನಗದು ಹಣ 6 ಖಿಸ್ತುಗಳಿಗೆ ಯಾ ಮಾಹೇವಾರೀ ಯಿನ್‌ಸ್ಟಾಲ್ ಮೆಂಟಿಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲಿಯಾನಾ ದರಖಾಸ್ತು ಮೊಬಲಗು ಪೈಕೀ ಹನ್ನೆರಡರಲ್ಲಿ ವೊಂದು ಹಿಸ್ಸೆಗೆ ಅಥವಾ ವೊಟ್ಟು ಕಂಟ್ರಾಕ್ಟು ಮೊಬಲಗು ಪೈಕೀ 60 ರಲ್ಲಿ ವಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜು ಹಾಕಲ್ಪಟ್ಟು ಆ ಮೂಲಕ ಸರಕಾರಕ್ಕೆ ಬರುವ ಲುಕ್ಸಾನಿಗೆ ಅವನನ್ನು ಗುರೀ ಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮುರ್ಕುಂನಲ್ಲಿ ಪ್ರವೇಶಿಸಿ ತನ್ನ ಮೊದಲನೆ ಮಾಹೇವಾರೀ ಖಿಸ್ತುಗಳು 1877ನೇ ಮೇ 15ನೇ ಮುರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳು 15ನೇ ಮುರ್ಕುಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗು ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ ಲೋಕಲ್‌ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಅಡ್ಡೀ ವುಂಟಾದರೆ ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯವಿಲ್ಲದೆಯೆ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗು ಗವರ‍್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

ತಾರೀಖು 21ನೇ ಅಕ್ಟೋಬರ್ 1876.

E. S. LUDLOW,
Offg. Dy. Commr.

ASHTAGRAM DIVISION.

Notice of an application by Chikka Papanna for a certificate under Act XXVII of 1860.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮೈಸೂರಲ್ಲಿರುವ ವರ್ತಕ ಚಿಕ್ಕ ಪಾಪಣ್ಣನು ನೀಲಗಿರಿ ಮುದ್ದಂಣನ ಸುಮಾರು 50,000 ರೂಪಾಯಿ ಲೇಣೆ ಬರಮಾಡಿಕೊಳ್ಳತಕ್ಕ ಬಗ್ಯೆ ಸ‍ರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸ‍ರ್ 1876ನೇ ಇಸವಿ ಡಿಶಂಬರ್ 22ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಸದರೀ ಲೇಣೆಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice of an application by Muddappa for a certificate under Act XXVII of 1860.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮೈಸೂರಲ್ಲಿರುವ ಸಾಹುಕಾರ ಮುದ್ದಪ್ಪ ತಮ್ಮ ತಂದೆ ಸಾಹುಕಾರ ದೊಡ್ಡ ಮಲ್ಲಂಣನ 30,000 ರೂಪಾಯಿ ಲೇಣೆ ಬರಮಾಡಿಕೊಳ್ಳತಕ್ಕ ಬಗ್ಯೆ ಸ‍ರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸ‍ರ್ 1876ನೇ ಇಸವಿ ಡಿಶಂಬರ್ ತಿಂಗಳು 22ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆಯಾಗಲ್ಪಡುತ್ತೆಯಾಗಿ ಸದರೀ ಲೇಣೆಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ತಾರೀಖು 28ನೇ ಮಾಹೇ ನವಂಬರ್ 76ನೇ ಇಸವಿ.

A. C. HAY,
Commissioner.

MYSORE DISTRICT.

Notice of an application by Channabasavaiya for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟು ಡಿ॥ ಕ॥ ಕೋರ್ಟಿನಿಂದ.

ಸ‍ರ್ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ॥ 86.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ತಂದೆ ದೊಡ್ಡೆಗೌಡನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ಮೈಸೂರು ತಾಲ್ಲೂಕು ವರಕೋಡು ಹೋಬಳಿ ಚನ್ನಹಳ್ಳಿ ಗ್ರಾಮದಲ್ಲಿರುವ ಚನ್ನಬಸವೈಯನು ಕೊಟ್ಟಿರತಕ್ಕ ಅರ್ಜೀಯನ್ನ ಡಿಶಂಬರ್ ಮಾಹೆ ತಾರೀಖು 5ಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Sheshamma for a certificate under Act XXVII of 1860.

ಸ‍ರ್ 1876ನೇ ಇಸವೀ ಶಿವಿಲ್ ಪೂಟಿ ಮಿಸಲೇನಿಯಸ್ ನಂ॥ 87.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಯಾದ ತನ್ನ ಗಂಡ ನರಸಿಂಹೈಯನಿಗೆ ಬರಬೇಕಾದ 150 ರೂಪಾಯಿಗಳನ್ನು ವಸೂಲ್ ಮಾಡಿ ಕೊಳ್ಳುವದಕ್ಕೆ ತನ್ನ ತಂದೆಯಾದ ಮತ್ತು ಗಾರ್ಡಿಯನ್ ಆದ ಶೇಷೈಯನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ತಲಕಾಡು ತಾಲ್ಲೂಕು ಆಯೂರ ಹೋಬಳಿ ಗಣಗನೂರು ಗ್ರಾಮದಲ್ಲಿರುವ ಶೇಷಮ್ಮ ನೆಂಬವಳು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ ತಾರೀಖು 5ಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Kempi for a certificate under Act XXVII of 1860.

ಸನ್ 1876ನೇ ಇಸವೀ ಶಿವಿಲ್ ಪ್ರೂಟೆ ಮಿಸಲೇನಿಯಸ್ ನಂಬರ್ 88.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಗಂಡ ಮಾದನಿಗೆ ಬರಬೇಕಾದ 300 ರೂಪಾಯಿಗಳನ್ನು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ್ ಆಗಬೇಕೆಂದು ತಲಕಾಡು ತಾಲ್ಲೂಕು ನರಸೀಪುರದ ಹೋಬಳಿ ಕೊತ್ತಗಾಲದ ಗ್ರಾಮದಲ್ಲಿರುವ ಕೆಂಪಿ ಯೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ 5ನೇ ತಾರೀಖಿನಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರೂಬರೂಬ್ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮಾಹೆ ನವಂಬರ್ 1876ನೇ ಇಸವಿ ಮೊಕ್ಕಾಂ ಮೈಸೂರು.

Notice of an application by Dod Hutcha for a certificate under Act XXVII of 1860.

ಸನ್ 1876ನೇ ಇಸವಿ ಶಿವಿಲ್ ಪ್ರೂಟೆ ಮಿಸಲೇನಿಯಸ್ ನಂ. 89.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತೀಯಾದ ತನ್ನ ತಮ್ಮ ಚಿಕ್ಕ ಹುಚ್ಚನಿಗೆ ಬರಬೇಕಾದ 350 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಪಾಲಹಳ್ಳಿ ಕಸಬೇಯಲ್ಲಿರುವ ದೊಡ್ಡ ಹುಚ್ಚನೆಂಬುವನು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೇ ತಾರೀಖು 12ರಲ್ಲು ಹಿಯರಿಂಗ್ ಮಾಡುವದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದಿದೆ.

Notice of an application by Pavadi Gauda for a certificate under Act XXVII of 1860.

1876ನೇ ಇಸವಿ ಶಿವಿಲ್ ಪ್ರೂಟೆ ಮಿಸಲೇನಿಯಸ್ ನಂಬರ್ 90.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತೀಯಾದ ತನ್ನ ತಂದೆ ಜಸವೇಗೌಡನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಬಳಗುಳದ ಹೋಬಳಿ ಪೈಕೀ ಕಾರೇಪುರದ ಗ್ರಾಮದಲ್ಲಿ ಯಿರುವ ಪವಾಡಿಗವುಡನೆಂಬುವನು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೆ ತಾರೀಖು 12ರಲ್ಲು ಹಿಯರಿಂಗ್ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದಿಧೆ.

Notice of an application by Amrutamma for a certificate under Act XXVII of 1860.

ಸನ್ 1876ನೇ ಇಸವಿ ಶಿವಿಲ್ ಪ್ರೂಟೆಮಿಸಲೇನಿಯಸ್ ನಂಬರ್ 91.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತೀಯಾದ ತನ್ನ ಗಂಡ ರಾಮಲಿಂಗ ಮೊದಲಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಗಂಜಾಂದಲ್ಲಿ ಯಿರುವ ಅಮೃತಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜಿಯನ್ನ ಡಿಶಂಬರ್ ಮಾಹೆ ತಾರೀಖು 12ರಲ್ಲು ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟುರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದಿಧೆ.

ತಾರೀಖು 20ನೇ ಮಾಹೆ ನವಂಬರ್ 1876ನೇ ಇಸವಿ.

SHANMUGAVELU PILLE,
For Dy. Commr.

HASSAN DISTRICT.

Notice of an application by Subbashastri for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆ|| ಕ|| ಕಚ್ಚೇರಿಯಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಅತ್ತಿಕುಪ್ಪ ತಾಲ್ಲೂಕು ಕಿಕ್ಕೇರಿಯಲ್ಲಿ ಯಿರುವ ನರಶಿಹ್ಮಶಾಸ್ತ್ರಿ ಮಗ ಸುಬ್ಬಾಶಾಸ್ತ್ರಿ ಯಂಬವನು ಫಾತೀಆದ ತನ್ನ ಬೀಗ ಚನ್ನರಾಯಪಟ್ಣದಲ್ಲಿ ಯಿದ್ದು ಫೌತೀಆದ ಬ್ಯಾಟರಾಯನ ಸಾಲ 150 ರೂಪಾಯಿ ವಸೂಲ್

ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟ್ ಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತ ಕೊಟ್ಟ ಅರ್ಜಿ ಫೈಸಲ್‌ಬಗ್ಯೆ ಸನ್ ಮಜಕೂರ ಡಿಶಂಬರ 20ನೇ ತಾರೀಕನ್ನ ನಿಷ್ಕರ್ಷೆ ಮಾಡಿ ಯಿರುವದ್ದರಿಂದ ತಕರಾರು ಯಿರತಕ್ಕವರೆಲ್ಲ ಮೇಲೆ ಕಂಡ ತಾರೀಖು ಹಗಲು 10 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಜಾಹಿರ್ಮಾಡಿಕೊಳ್ಳಬೇಕು.

ತಾ|| 25—11—76.

Notice of an application for land for coffee cultivation.

ಮಂಜಿರಾಬಾದ್ ತಾಲ್ಲೂಕು ಹೆತ್ತೂರು ಹೋಬಳಿ ಕೊಣಬನಹಳ್ಳಿ ಗ್ರಾಮಕ್ಕೆ ಸೇರಿದ ಸಂಪಿಗೆಮಕಿ ಕುಮರಿ ಯಂಬ ಜಾಗಾ,

ಯಿದರ ಚಕ್ಕುಬಂದಿ.

ಪೂರ್ವಕ್ಕೆ ದರಖಾಸ್ತುದಾರನ ಪಟ್ಟೆ ಸಂಪಿಗೆಮಕಿ ಗದ್ದೆ.	ಪಶ್ಚಿಮಕ್ಕೆ ಊರಿಂದ ಹೊರಟಗೆ ಹೋಗುವ ದಾರಿ.
ದಕ್ಷಿಣಕ್ಕೆ ದರಖಾಸ್ತುದಾರನ ಕೊಟ್ಟಿಗೆ ಖಣಾ.	ಉತ್ತರಕ್ಕೆ ಹುಲಿಮಕ್ಕಿ ಕೆರೆ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 63 ದಕ್ಷಿಣೋತ್ತರ ಗಜ 75 ಸಲಿಗೆಜಗಳು 4725ಕ್ಕೆ ಎಕರೆ 0 ರೋಡ್ 3 ಪೋಲ್ 36 ಗಜ 6 ವುಳ್ಳದ್ದು.

ಯಿದನ್ನ ತನಗೆ ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಕೊಣಬನಹಳ್ಳಿ ಯಲ್ಲಿರುವ ಕರೀಗೌಡನಮಗ ಕೇಗೌಡನೆಂಬವನು 298ನೇ ನಂಬರ್ ದರಖಾಸ್ತು ಮಾಡಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ.

ಮೇಲ್ಕಂಡ ಪ್ರದೇಶವನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆವುಳ್ಳವರಾಗಲಿ ಅಥವಾ ಅದರ ಮೇಲೆ ಹಕ್ಕು ಯಾ ತಕರಾರನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟೀಸ್ ತಾರೀಖು ಲಗಾಯತು ಒಂದು ತಿಂಗಳು ವಳಗಾಗಿ ಡಿ|| ಮ|| ಕಾಫೀ ಇಂಚಾರ್ಜ ಫಸ್ಟ್ ಅ|| ಕಮ್ಮಿಷನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬಯಾನಮಾಡಿಕೊಳ್ಳ ಬಹುದು. ಈ ನಿಬಂಧನೆಗೆ ತಪ್ಪಿ ಬಳಿಕ ಫಿರ್ಯಾದು ತಂದದ್ದಾದರೆ ಅದು ಮಂಜೂರಾಗಲರಿಯದು.

Notice of sale of coffee jungles.

ಸಮಸ್ತ ಜನರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಮಂಜಿರಾಬಾದ್ ತಾಲ್ಲೂಕು ಕಸಬಾ ಹೋಬಳಿ ನಡಹಳ್ಳಿ ಗ್ರಾಮಕ್ಕೆ ಸೇರಿದ ಈ ಕೆಳಗೆ ನಮೂದಾಗಲ್ಪಡುವ ಜಂಗಲಿನ ಹಿಡುವಳಿಯನ್ನು ಕಾಫೀ ಸಾಗುವಳಿಗೋಸ್ಕರ ಟೆಂಪರರಿಯಾಗಿ ಮುಂದೆ ಯೆರ್ಪಡಾಗುವ ನಿಬಂಧನೆಗೆ ವಳಪಡತಕ್ಕದ್ದೆಂಬ ಷರತ್ತಿನ ಮೇಲೆ ಅದೇ ಸ್ಥಳದಲ್ಲಿ ಸನ್ 1877ನೇ ಇಸವಿ ಜನವರೀ ತಾರೀಖು 15ನೇ ಹಗಲು 11 ಘಂಟೆ ಲಗಾಯತು 4 ಘಂಟೆ ವರಿಗು ಹರಾಜು ಹಾಕಿಸಲ್ಪಡುತ್ತೆ. ಯಿಚ್ಛೆವುಳ್ಳ ಜನರು ಆ ಕಾಲದಲ್ಲಿ ಪೋಟಾಪೋಟಿ ಯಿಂದ ಚಡ ದರಖಾಸ್ತು ಮಾಡಿ ಪಡದುಕೊಳ್ಳಬಹುದು.

ಹರಾಜಿನ ಷರತ್ತುಗಳನ್ನು ಹರಾಜು ಮಾಡುವ ಆಫಿಸರ್ ಆಕಾಲದಲ್ಲಿ ಕೂಡಿದ ಜನರಿಗೆ ರೂಬರೂ ತಿಳಿಸ್ಯಾರು.

ಯಿದಕ್ಕಾಗಿ ಅಪೇಕ್ಷೆವುಳ್ಳವರು ಸದರೀ ಜನವರೀ ತಾರೀಖು 10ರ ವರಿಗು ನಮ್ಮ ಆಫಿಸಿನ ಹೆಸರಿಗೆ ದರಖಾಸ್ತುಗಳನ್ನ ಬರದುಕೊಳ್ಳುತ್ತಾ ಬರಬಹುದು, ಆದರೆ ಅಂಥಾ ದರಖಾಸ್ತುದಾರರು ಹರಾಜಿನ ಕಾಲದಲ್ಲಿ ಆ ಸ್ಥಳದಲ್ಲಿ ಹಾಜರು ಯಿರಬೇಕು, ತಪ್ಪಿದರೆ ಅಂಥಾವರ ದರಖಾಸ್ತನ್ನ ಮಂಜೂರ್ಮಾಡತಕ್ಕ ಅಥವಾ ತಿರಸ್ಕರಿಸತಕ್ಕ ಅಧಿಕಾರವು ಡಿಪ್ಯುಟಿ ಕಮ್ಮಿಷನ್ನರವರನ್ನ ಹೊಂದಿರುವದು.

ಪರ್ವಾ ಮಾಡೋ ಹಂದಲ್ ಯಂಬ ಜಂಗಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ನೀರುಕಾಲ್ವೆ.	ಪಶ್ಚಿಮಕ್ಕೆ—ಕಾಟೆತಳಾರ.
ದಕ್ಷಿಣಕ್ಕೆ—ಗುಡ್ಡಾ ಕಾಡುಮನೆ ಬಂಗ್ಲಾಕೆ ಗುರ್ಜನಹಳ್ಳಿ ಯಿಂದ ಹೋಗುವ ದಾರಿ.	ಉತ್ತರಕ್ಕೆ—ಹುಲ್ಲುಗುಡ್ಡ.

ಈ ಮಧ್ಯೆ ಪೂರ್ವಪಶ್ಚಿಮ ಗಜ 69 ದಕ್ಷಿಣೋತ್ತರ ಗಜ 40 ಸಲಿಗೆಜ 2760ಕ್ಕೆ ಎಕರೆ 0 ರೋಡ್ 2 ಪೋಲ್ 11 ಗಜ 17¼

ಬತಾರೀಖು 28ನೇ ಮಾಹೇ ನವಂಬರ 1876ನೇ ಇಸವಿ ಮೊಕ್ಕಾಂ ಹಾಸನ.

H. E. Mottet,
Dy. Commr.

KADUR DISTRICT.

Notice of an application by Mallappashetti for a certificate under Act XXVII of 1860.

ಕಡೂರು ಡಿಸ್ಟ್ರಿಕ್ ಡೆ|| ಕಮ್ಮಿಷನರವರ ಕೋರ್ಟನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಬಾಣಾವಾರ ತಾಲ್ಲೂಕು ಕಸಬ ಬಾಣಾವಾರದ ಪೇಟೆ ವಾಸಸ್ತ ಗಂಗಶೆಟ್ಟಿಮಗ ಮಲ್ಲಪ್ಪಶೆಟ್ಟಿಯು ಅದೇ ಬಾಣಾವಾರದ ಕಸಬೆಯಲ್ಲಿದ್ದು ಫಾತೀವಟ್ಟ ತನ್ನ ಚಿಕ್ಕತಂದೆ ತಂಮಂಣಶೆಟ್ಟಿಗೆ ಬರತಕ್ಕ ಸಾಲದ ಮೊಬಲಗು 500 ರೂಪಾಯಿ ವಸೂಲ್ ಮಾಡಿಕೊಡತಕ್ಕ ಬಗ್ಗೆ ಸನ್ 1860ನೇ ಇಸವಿ 27ನೇ ಆಕ್ಟುಪ್ರಕಾರ ತನ್ನ ಹೆಸರಿಗೆ ಸರ್ಟಿಫಿಕೇಟ ಕೊಡಿಸಿಕೊಡಬೇಕೆಂದು ಈ ಕೋರ್ಟಿಗೆ ದಾಖಲ್ ಮಾಡಿರುವ ಅರ್ಜಿಯು ಫೈಸಲಬಗ್ಗೆ ಬರುವ ಡಿಶಂಬರ ತಿಂಗಳು 30ನೇ ತಾರೀಖಿನಲ್ಲಿ ನಿಶ್ಚೈಸಿರುವದ್ದರಿಂದ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟುರೂಬರೂ ಹಾಜರಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು.

ತಾರೀಖು 29ನೇ ನವಂಬರ್ 1876ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

P. Krishna Rao,
Dy. Commr.

ಕರೆನ್ಸೀ ನೋಟಗಳು.

ಯಿದರಡಿ ನಮೂದಿಸಲ್ಪಡುವ ನೋಟುಗಳ ತುಕಡೆಗಳು ಹೋಗಿವೆ.

ನಂಬರು.	ಸರ್ಕಲ್	ಮೊಬಲಗ್	ಹಕ್ಕುದಾರ
B/39 59593 ಬಲಭಾಗ	ಮದ್ರಾಸ್	5–0–0	ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ್ಗೆ ಸೇರಿದ ಕೋರ್ಟು ಇನ್ಸ್ಪೆಕ್ಟರ ಬಿ. ಶ್ರೀನಿವಾಸ್ಯಯಂಗಾರ್ರು.
B/39 59590 ಯಡಭಾಗ	ಡಿಟೋ	5–0–0	

Mysore Government Press, Bangalore—1876.

588

ಮೈಸೂರ ಗೆಜೆಟ್.

ನಂ. 50 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 16, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ರ್ನಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 323—330

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. .. 593—604

3ನೇ ಭಾಗ—ಇಂಡ್ಯ ಗವರ್ರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆ ಪಟ್ಟಿ. .. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 320. ತಾರಿಖು 14ನೇ ಡಿಶಂಬರ್ 1876.

ಪೂರ್ವದಲ್ಲಿ ಕೊಟ್ಟ ಹುಕ್ಕುಂ ತಿದ್ದುಪಡಿಸಿ ಇಶಿರಿಂದ ಪ್ರಸಿದ್ಧಪಡಿಸುವದೇನಂದರೆ,—ಮೈಸೂರು ವ ಕೊಡಗು ಶೀಮೆಗಳಲ್ಲಿರುವ ಸರಕಾರ ಆಫಿಸ್‌ಗಳು ಕ್ರಿಸ್ಟ್‌ಮಸ್ ರಜಾ ದಿನಗಳ ಬಗ್ಯೆ ಹೊಸ ಸಂವತ್ಸರ ಮೊದಲನೇ ದಿನದ ಬಗ್ಯೆ, ಘನವನ್ನು ಹೊಂದಿದ ಮಹಾರಾಣೀಯವರು ಇಂಡ್ಯ ಚಕ್ರವರ್ತಿನಿಯೆಂಬ ಬಿರದನ್ನು ವಹಿಸಿದ ಗೌರವದ ಬಗ್ಯೆ, 1876ನೇ ಇಸವಿ ಡಿಶಂಬರ್ 25ನೇ ಮುಕ್ಕಾಂ ಸೋಮವಾರದ ಲಗಾಯತು 1877ನೇ ಇಸವಿ ಜನವರೀ 4ನೇ ಮುಕ್ಕಾಂ ಗುರುವಾರದ ವರಿಗೆ ಬರಖಾಸ್ತು ಮಾಡಲ್ಪಡುವವು.

2. ಮೈಸೂರು ಸೀಮೆಯ ಪ್ರಕೃತ ಸ್ಥಿತಿಯನ್ನು ನಿಗೆಯಲ್ಲಿ ತಂದು ಅಫಿಷಿಯೇಟಿಂಗ ಚೀಫ್ ಕಮ್ಮಿಷನರ ಸಾಹೇಬರವರು ಅಪ್ಪಣೆ ಕೊಡಿಸುವದೇನಂದರೆ,—ಮೇಲೆ ವಿಧಿಸಲ್ಪಟ್ಟ ಸಮುದಾಯವಾದ ರಜಾ ಇದರಡಿ ನಮೂದಿಸಲ್ಪಡುವ ಆಫಿಸರ್‌ಗಳು ತೆಗೆದುಕೊಳ್ಳಲಿಕ್ಕೆ ಆಗುವದಿಲ್ಲವು. ಯಾತಕ್ಕಂದರೆ ಅವರ ಕೆಲಸಗಳು ಅವರವರ ಉದ್ಯೋಗದಲ್ಲಿ ಅವರವರು ಯಿರಬೇಕಾದ ಆವಶ್ಯಕತೆಯನ್ನು ಉಂಟುಮಾಡಿರುತ್ತೆ. ಈ ಆಫಿಸರ್‌ಗಳ ವಿಷಯದಲ್ಲಿ ಕ್ರಿಸ್ಟ್‌ಮಸ್ ದಿನ ಹೊಸ ಸಂವತ್ಸರಾದಿ ಮಾತ್ರ ರಜಾಕೊಡಲ್ಪಟ್ಟಿದೆ.

ಡಿವಿಜನ ಕಮ್ಮಿಷನರ್‌ಗಳು.
ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನರ್‌ಗಳು.
ಪಬ್ಲಿಕ ವರ್ಕ್ಸ ಇಲಾಖಾ ಕಾರ್‌ಬಾರೀ ಆಫೀಸರ್‌ಗಳು.
ಜನರಲ ಡ್ಯೂಟಿಮೇಲೆ ಇರತಕ್ಕ ಅ॥ ಕಮ್ಮಿಷನರ್‌ಗಳು.
ಟ್ರೆಜರಿ ಅಥವಾ ಜೆಯಿಲ ಚಾರ್ಜಿನಲ್ಲಿರುವ ಜುಡಿಷಯಲ ಅಸಿಸ್ಟೆಂಟ ಕಮ್ಮಿಷನರ್‌ಗಳು.
ಪೊಲೀಸ್ ಆಫಿಸರ್‌ಗಳು,
ಮುನ್ಸಿಫರುಗಳು.
ತಾಲ್ಲೂಕು ಅಮಲ್‌ದಾರ್‌ಗಳು.

3. ಸದರೀ ರಜಾ ದಿನಗಳಲ್ಲಿ ಸರಕಾರ ಕೆಲಸಕ್ಕೆ ಯಷ್ಟುರ ಕಾಲ ಖಜಾನೆಗಳು ಖುಲ್ಲಾ ಯಿರತಕ್ಕ ಜರೂರಿರುತ್ತೊ ಅಷ್ಟರಕಾಲ ಖುಲ್ಲಾ ಯಿರುವ ಬಗ್ಯೆಡಿಪ್ಟಿ ಅಕ್ಕೌಂಟೆಂಟ ಜನರಲ್‌ಯವರು ಚೀಫ್ ಇಂಜಿನಿಯರ್ ವ ಡಿಸ್ಟ್ರಿಕ್ಟು ಆಫಿಸರ್‌ಗಳು ಯಿವರುಗಳೊಂದಿಗೆ ಕಾಗದಪತ್ರಗಳು ನಡಿಸಿ ಏರ್ಪಾಡು ಮಾಡತಕ್ಕದ್ದು.

4. ಸರಕಾರ ಕೆಲಸದ ಜರೂರೀಯಾತಿಗೆ ತಕ್ಕಂತೆ ಅವರವರ ಆಫಿಸ್ ತಾಪೇದಾರಿ ಉದ್ಯೋಗಸ್ತರು ಸಾಂಕ್ರಿವರ್ಷ ಆದ ರಜಾದಿನಗಳ ಪೈಕಿ ವೊಂದು ಭಾಗವನ್ನಾಗಲಿ ಸಂಪೂರ್ಣವಾಗಿಯಾಗಲಿ ಉಪಯೋಗಿಸಿಕೊಳ್ಳಲಿಕ್ಕೆ ಅವರಿಗೆ ಅಪ್ಪಣೆ ಕೊಡತಕ್ಕ ಅಂಶವು ಇಲಾಖೆಗಳ ಮೊಖ್ತೇಸರರ ಮತ್ತು ಡಿಸ್ಟ್ರಿಕ್ಟು ಆಫಿಸರರ ಯಕ್ತ್ಯಾರೀಯಲ್ಲಿರುತ್ತೆ.

ನಂ. 324. ತಾರೀಖು 8ನೇ ಡಿಸಂಬರ 1876.

ಅಸಿಸ್ಟೆಂಟ ಕಮ್ಮಿಷನರ್ ಮೆ॥ ಕೃಷ್ಣಯ್ಯಂಗಾರ್ರು ಬೆಂಗಳೂರು ಡಿಸ್ಟ್ರಿಕ್ಟು ಫಸ್ಟ್ ಅಸಿಸ್ಟೆಂಟ ಕಮ್ಮಿಷನರ್ ಕೋರ್ಟಿನ ಚಾರ್ಜನ್ನು ಕೆಪ್ಟನ್ ಮಾಲ್ಟಬಿಯವರಿಂದ 1876ನೇ ಇಸವಿ ನವಂಬರ 27ನೇ ಮಕ್ಕಾವಿನ ಮಧ್ಯಾನ್ಹಾತ್ಪರ ವಹಿಸಿದರು.

ನಂ. 325. ತಾರೀಖು 9ನೇ ಡಿಶಂಬರ 1876.

ಮೈಸೂರು ಷಹರ ಆಫಿಷಿಯೇಟಿಂಗ ಮಾಜಿಸ್ಟ್ರೇಟ ಮೆ॥ ಅಬ್ದುಲ್‌ಖಾದರ್‌ಯವರು (1872ನೇ ಇಸವೀ 10ನೇ ಆಕ್ಟಿಯಂಬ) ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ 27 (a) ಸೆಕ್ಷನಿನ ಈ ಕೆಳಗೆ ಕಂಡ ಕ್ಲಾಸ್‌ಗಳಲ್ಲಿ ವಿವರಿಸಿರುವ ಪ್ರಕಾರ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ, ಯಾವವಂದರೆ.

ಕ್ಲಾಸ್.

6. ಫೂಟಾಗಿ ವಿಚಾರಣೆ ಮಾಡಲಿಕ್ಕೆ ಅಧಿಕಾರ (ಸೆ॥ 222.)

8. ಗುಮ್ಮಾ ವ ಜೋರೀ ಸೊತ್ತನ್ನು ವಿಕ್ರಯಿಸಲಿಕ್ಕೆ ಅಧಿಕಾರ (ಸೆ॥ 417.)

9 ಅಟಕಾವ್ ವಗೈರೇ ನಿವರ್ತಿಗಾಗಿ ಹುಕ್ಕುಂ ಕೊಡಲಿಕ್ಕೆ ಅಧಿಕಾರ (ಸೆ॥ 518.)

10. ಹೇಸಿಗೆ ಬಾರ್‌ಬಾರ ನಡೆಯದೆ ನಿರೋಧಿಸುವಂತೆ ಹುಕ್ಕುಂ ಕೊಡುವಬಗ್ಯೆ ಅಧಿಕಾರ (ಸೆ॥ 519.)

11. ಸ್ಥಳದ ಹೇಸಿಗೆ ಸಂಗತಿಗಳಲ್ಲಿ ಹುಕ್ಕುಂ ವಗೈರೇ ಮಾಡಲಿಕ್ಕೆ ಅಧಿಕಾರ (ಸೆ॥ 521.)

ನಂ. 326. ತಾರೀಖು 9ನೇ ಡಿಶಂಬರ 1876.

ಪೆರಿಯಾಪಟ್ಣ ತಾಲ್ಲೂಕು ಅಮಲ್‌ದಾರ್ ರಾಮಣ್ಣನವರಿಗೆ $2\frac{1}{2}$ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಪೆರಿಯಾಪಟ್ಣ ತಾಲ್ಲೂಕು ಹೆಡ್ ಪೇಷ್ಕಾರ್ ಕುಪ್ಪುಸ್ವಾಮಿಶೆಟ್ಟಿಯವರು ರಾಮಣ್ಣನವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಸದರೀ ತಾಲ್ಲೂಕಿನ 5ನೇ ಗ್ರೇಡ ಅಮಲದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕಿ ಮೊಕರರ್.

ನಂ. 327.

ತಾರೀಖು 11ನೇ ಡಿಸಂಬರ್ 1876.

ಸನ್ 1876ನೇ ಇಸವಿ ನವಂಬರ್ 17ನೇ ಮುಕ್ಕಾಂ 294ನೇ ನಂಬರ್ ಬಾಬತು ಈ ಆಫಿಸ್ ಇಸ್ತಿಹಾರ್‌ನಾಮೆ ಪ್ರಕಾರ ಕಡೂರು ಡಿಸ್ಟ್ರಿಕ್ಟಿನಲ್ಲಿ ಜಲಾಯಿಸಲ್ಪಡತಕ್ಕ ಬಗ್ಯೆ ಹಂಗಾಮಿ ತರೀಕ್ ಕೊಡಲ್ಪಟ್ಟ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳಿಗೆ ಜಾಸ್ತಿಯಾಗಿ ಅದೇ ಡಿಸ್ಟ್ರಿಕ್ಟಿನಲ್ಲಿ ತಕಶೀರುಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳಲಿಕ್ಕೆ 1872ನೇ ಇಸವಿ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 27 (*a*) ಸೆಕ್ಷನ್ 3ನೇ ಕ್ಲಾಸ್ ನಿಬಂಧನೆಗಳನುಸರಿಸಿ ಸ್ಪೆಷಲ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕನಿಂಗ್‌ಹ್ಯಾಂ ಯವರಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ನಂ.. 328.

ತಾರೀಖು 12ನೇ ಡಿಸಂಬರ್ 1876.

ಬೆಂಗಳೂರು ಸ್ಮಾಲ್‌ಕಾಸ್ ಕೋರ್ಟಿನ ರಿಜಿಸ್ಟ್ರಾರ್ ಮಿ|| ಜೆನ್ನಿಂಗ್ಸ್‌ಯವರಿಗೆ 1865ನೇ ಇಸವಿಯ 11ನೇ ಆಕ್ಟಿನ 15ನೇ ಸೆಕ್ಷನ್ ಅನುಸರಿಸಿ ಮೆಜರ್ ಲಿಂಡ್‌ಸೆಯವರು ಬೆಂಗಳೂರು ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನ್ನರಾಗಿ ಕೆಲಸ ನೋಡುವಲ್ಲಿ ಸ್ಮಾಲ್‌ಕಾಜ್ ಕೋರ್ಟಿನ ಜಡ್ಜಿ ಅಧಿಕಾರವು ಹಂಗಾಮೀಯಾಗಿ ಕೊಡಲ್ಪಟ್ಟಿರುತಿದೆ.

ನಂ. 329.

ತಾರೀಖು 13ನೇ ಡಿಶಂಬರ್ 1876.

ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ್ ಮಿಸ್ಟರ್ ಪೂಡ್‌ಕಾಕ್ ಯವರಿಗೆ 1872ನೇ ಇಸವಿ 10ನೇ ಆಕ್ಟು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 27ನೇ ಸೆಕ್ಷನ್ (*a*) 6ನೇ ಕ್ಲಾಸ್ ಅನುಸರಿಸಿ ಫೂಟ್ ದರಿಯಾಪ್ತು ಮಾಡತಕ್ಕ ಅಧಿಕಾರ ಕೊಡಲ್ಪಟ್ಟಿರುತ್ತೆ.

ನಂ. 330.

ತಾರೀಖು 14ನೇ ಡಿಶಂಬರ್ 1876.

ಜ್ಯುಡಿಷಲ್ ಕಮ್ಮಿಷನರ್ ಮಿ|| ಗಾರ್ಡನ್ ಸಿ, ಎಸ್ ಐ ಸಾಹೇಬರವರು, 1876ನೇ ಡಿಸಂಬರ್ 11ನೇ ಮುಕ್ಕಾಂ ಮಧ್ಯಾನ್ಹಾತ್ಪರ ಮಿ|| ಸಾಂಡರ್ಸ್‌ಸಿ ಬಿ. ಯವರಿಂದ ಮೈಸೂರು ವ ಕೊಡಗು ಚೀಫ್ ಕಮ್ಮಿಷನರವರ ಆಫಿಸ್ ಚಾರ್ಜನ್ನು ವಹಿಸಿದರು.

ನಂದೀದುರ್ಗ ಡಿವಿಜನ್ ಕಮ್ಮಿಷನರಾದ ಕರ್ನಲ್ ಪರ್ಸ್‌ಸಾಹೇಬರವರು, 1876ನೇ ಡಿಶಂಬರ್ 11ನೇ ಮುಕ್ಕಾಂ ಮಧ್ಯಾನ್ಹಾತ್ಪರದ ಮಿ|| ಗಾರ್ಡನ್ ಸಿ. ಎಸ್. ಐ. ಸಾಹೇಬರವರಿಂದ, ಮೈಸೂರು ವ ಕೊಡಗು ಜುಡಿಷಲ್ ಕಮ್ಮಿಷನರವರ ಆಫೀಸ್ ಚಾರ್ಜನ್ನು ವಹಿಸಿ ಇರುತ್ತಾರೆ.

ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನ್ನರ್ ಮಿ|| ರಿಕ್ಕೆಟ್ಸ್‌ಯವರು, ನಂದೀದುರ್ಗ ಡಿವಿಜನ್ ಕಮ್ಮಿಷನರ್ ಆಫಿಸ್ ಚಾರ್ಜನ್ನು 1876ನೇ ಡಿಶಂಬರ್ 11ನೇ ಮುಕ್ಕಾಂ ಮಧ್ಯಾನ್ಹಾತ್ಪರ ಕರ್ನಲ್ ಪರ್ಸ್‌ಯವರಿಂದ ವಹಿಸಿ ಇರುತ್ತಾರೆ

ನಂ. 331.

ತಾರೀಖು 14ನೇ ಡಿಶಂಬರ್ 1876.

ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಕೆಪ್ಟನ್ ಮಾಲ್ಬಿಬಿ ಯವರು 1876ನೇ ನವಂಬರ್ 29ನೇ ಮುಕ್ಕಾಮಿನ ಮಧ್ಯಾನ್ಹಾತ್ಪರ ಮೇಜರ್ ಮೋಟೆಟಿ ಯವರಿಂದ, ಹಾಸನ ಡಿಸ್ಟ್ರಿಕ್ಟು, ವ ಟ್ರೆಜರೀ ಚಾರ್ಜನ್ನು ವಹಿಸಿದರು.

ನಂ. 333.

ತಾರೀಖು 14ನೇ ಡಿಶಂಬರ್ 1876.

6ನೇ ಗ್ರೇಡ್ ಅ|| ಕಮ್ಮಿಷನರ್ ಮಿ|| ಡಿ. ನರಸಿಂಗರಾಯರು 1876ನೇ ಡಿಶಂಬರ್ 4ನೇ ಮುಕ್ಕಾಂ ಪೂರ್ವಾನ್ಹದಲ್ಲಿ ಚೀಫ್ ಕಮ್ಮಿಷನರ್ ಯಿಲಾಖಾದಲ್ಲಿ ತಮ್ಮ ಕೆಲಸಗಳ ಚಾರ್ಜನ್ನು ವಹಿಸಿ ಯಿರುತ್ತಾರೆ.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಮಿಲಟೆರಿ ಇಲಾಖಾ.

ನಂ. 321. ತಾರೀಖು 12ನೇ ಡಿಶಂಬರ್ 1876.

ಮಿಲಿಟೇರಿ ಡಿಪಾರ್ಟಮೆಂಟ್॥
ಲೆಟರ್ಸ್ ನಂಬರ್ 1133—1186.
ತಾರೀಖು 24ನೇ ನವಂಬರ್ 1876.

ಹರ್ ಮೆಜಸ್ಟೀಯವರ ಫೌಜುಗಳ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟನವರು ಕೊಟ್ಟ ಹುಕ್ಕುಂ ಅನುಸರಿಸಿ ಚೀಫ್ ಕಮ್ಮಿಷನರವರು ಅಪ್ಪಣೇ ಕೊಡುವದೇನಂದರೆ.—ಬರುವ ಜನವರೀ 1ನೇ ತಾರೀಖಿನಲ್ಲಿ ಮೈಸೂರು ಸವಾರ್ ಬಾರ್ ಫೌಜುಗಳ ನಾನ್ ಕಮ್ಮಿಷನೆಡ್ ಆಫಿಸರ್‌ಗಳಿಗೂ, ಸೋಜರ್‌ಗಳಿಗೂ, ಮಹಾರಾಣಿಯವರು, ತಮ್ಮ ಖಿತಾಬ್‌ಗಳಿಗೆ ಹೆಚ್ಚಾಂಶವನ್ನು ವಹಿಸುವ ವಿಷಯವು ಪ್ರಕಟಪಡಿಸಲ್ಪಡುವ ಸಮಯದ ಜ್ಞಾಪಕಾರ್ಥವಾಗಿ, ಒಂದು ದಿನದ ತಲಬ್ ಇನಾಂ ಕೊಡಲ್ಪಡುವದು.

"ಬಮೋಜಿಬ್ ಹುಕ್ಕುಂ,"

T. Clarke,
Offg. Secretary

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡಲ್ಪಟ್ಟ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 12. ತಾರೀಖು 18ನೇ ನವಂಬರ್ 1876.

ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಒಳಪಟ್ಟು ಸನ್ 1877ನೇ ಇಸವೀ ಏಪ್ರಿಲ್ ಗುರ್ರೇ ತಾರೀಖು ಲಗಾಯತು 1880ನೇ ಮಾರ್ಚೀ 31ನೇ ಮಾರ್ಚಂವರಿಗೆ ಕೊಡಗು ಸೀಮೆಯಲ್ಲಿ ಷರಾಬ್ ತಯಾರೀ ವ ಬಿಕ್ರೀ ಈ ವಿಷಯಗಳ ಸಂಪೂರ್ಣಸ್ವಾತಂತ್ರ್ಯವನ್ನು ಪಡೆಯುವ ಬಗ್ಯೆ ಇದರಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿ, ಯಾ ಯೂರೋಪಿಯನ್ ವೈನ್‌ಗಳು ವ ಸ್ಪಿರಿಟ ಸಾರಾಯಿಗಳು, ಯಾ ಬಿಯರ್‌ಗಳು ಯಿವುಗಳ ಬಿಕ್ರಿ ಯಾ ಬಿಯರ್‌ಗಳ ತಯಾರಿ ಯಿಂತಾವು ಅಡಗಿರುವದಿಲ್ಲವು.

II. ದರಖಾಸ್ತುದಾರ್ರುಗಳು ತಮಿಗೆ ಮೇಲೆ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯ ಕೊಡಲ್ಪಟ್ಟಲ್ಲಿ ಅವರು ಸರಕಾರಕ್ಕೆ ಗ್ಯಾರೆಂಟಿ ಯಾ ಭರವಸೆ ಕೊಡುವ ಮಿನಿಮಂ ಯಾನೆ ಕಮ್ಮಿ ಹುಟ್ಟುವಳಿಯನ್ನು ದರಖಾಸ್ತಿನಲ್ಲಿ ತಿಳಿಯಪಡಿಸತಕ್ಕದ್ದಲ್ಲದೆ ತಮ್ಮ ಒಡಂಬಡಿಕೆಯನ್ನು ನೆರವೇರಿಸತಕ್ಕ ಬಗ್ಯೆ ತಾವು ಕೊಡಲು ಸಿದ್ಧವಾಗಿರುವ ಜಾಮೀನ್ ಸಹ ತಿಳಿಸತಕ್ಕದ್ದು.

III. ಪ್ರತಿ ದರಖಾಸ್ತಿನ ಸಂಗಡ 1000 ರೂಪಾಯಿ ನಗದಾಗಲಿ ಗವರ್ನಮೆಂಟ ಸಿಕ್ಯುರಿಟಿಗಳ ಮೂಲಕವಾಗಲಿ ಠೇವಣಿ ಕಳುಹಿಸಬೇಕಲ್ಲದೆ ಸದರೀ ದರಖಾಸ್ತನ್ನು ಒಂದು ಲಿಪಾಫೇಯಲ್ಲಿ ಬಂದು ಮಾಡಿ ಅದರ ಮೇಲೆ "ಆರಕ್ ಸಾರಾಯಿಯನ್ನು ಮಾಡುವ ಬಗ್ಯೂ ಬಿಕರೀ ಮಾಡುವ ಬಗ್ಯೂ ಸಂಪೂರ್ಣವಾದ ಸ್ವಾತಂತ್ರ್ಯಕ್ಕೋಸ್ಕರ ಮಾಡಲ್ಪಟ್ಟ ದರಖಾಸ್ತು" ಯೆಂಬದಾಗಿ ಬರದು ಅದನ್ನು ಕೊಡಗು ಸೂಪರಿಂಟೆಂಡೆಂಟರವರಿಗೆ 1877ನೇ ಇಸವಿ ಜನವರೀ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖು ತರುವಾಯ ಬರುವ ಯಾವ ದರಖಾಸ್ತಾಗಲಿ ಅಂಗೀಕರಿಸಲ್ಪಡುವದಿಲ್ಲ. ದರಖಾಸ್ತುಗಳನ್ನು ಸೂಪರಿಂಟೆಂಡೆಂಟರವರು ತಮ್ಮ ಆಫಿಸಿನಲ್ಲಿ 1877ನೇ ಜನವರೀ 16ನೇ ತಾರೀಖಿನ ದಿವಿ 12 ಘಂಟೆಗೆ ಆಕಾಲದಲ್ಲಿ ಹಾಜರಿರುವದಕ್ಕೆ ಅಪೇಕ್ಷಿಸುವರೆಲ್ಲರ ರುಬರೂ ಖುಲ್ಲಾ ಮಾಡುವರು. ದರಖಾಸ್ತುಗಳ ಅಖೈರು ವ್ಯವಸ್ಥೆ ಚೀಫ್ ಕಮ್ಮಿಷನರವರನ್ನು ಹೊಂದಿದ್ದಾಗಿರುತ್ತಾದ್ದರಿಂದ ಅವರು ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲಿಕ್ಕೆ ಅಥವಾ ಸರಿಯಾದ ಮೊಬಲಗಿಗೆ ಸವಾಲ್

ಗಳು ಮಾಡಲ್ಪಡದ ಪಕ್ಷದಲ್ಲಿ ದರೋಬಸ್ತು ದರಖಾಸ್ತುಗಳನ್ನೂ ತಿರಸ್ಕರಿಸಲಿಕ್ಕೂ ಪೂರಾ ಅಧಿಕಾರವನ್ನು ತಮಗೆ ವುಳಿಸಿಕ್ಕೊಂಡಿರುತ್ತಾರೆ. ಚೀಫ್ ಕಮ್ಮಿಷನರವರು ಮಾಡುವ ಯಿತ್ಯರ್ಥವು 1877ನೇ ಇಸವಿ ಫೆಬ್ರುವರಿ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪ್ರಸಿದ್ಧಪಡಿಸಲ್ಪಡತಕ್ಕದಲ್ಲವೆ ಸದರೀ ತಾರೀಖಿನಲ್ಲಿ ಸೂಪರಿಂಟೆಂಡೆಂಟರವರ ಮೂಲಕ ತಿಳಿಸಲ್ಪಡುವದು, ಬಳಿಕ ಮಂಜೂರಾಗದ ದರಖಾಸ್ತುದಾರ್ರುಗಳಿಗೆ ಅವರ ಅರ್ಜಿಗಳಮೇಲೆ ಠೇವಣಿಗಳು ವಾಪಸಿ ಮಾಡಲ್ಪಡುವವು.

IV. ಯಾರ ದರಖಾಸ್ತು ಅಂಗೀಕರಿಸಲ್ಪಡುವದೋ ಆ ಮನುಷ್ಯನು ತನಗೆ ಚೀಫ್ ಕಮ್ಮಿಷನರವರ ನಿರ್ಣಯವನ್ನು ತಿಳಿಯಪಡಿಸಿದ ಹತ್ತು ದಿನಗಳೊಳಗಾಗಿ ಮಂಜೂರಾದ ದರಖಾಸ್ತು ಮೊಬಲಗ್ ಪೈಕಿ ನಾಲ್ಕರಲ್ಲಿ ವೊಂದು ಭಾಗಕ್ಕೆ ದರಖಾಸ್ತು ಕಾಲದಲ್ಲಿಟ್ಟ 1000 ರೂಪಾಯಿ ಠೇವಣೀ ಶಾಮೀಲ್ ಸಹಾ ಯಾದ ಮೊಬಲಗನ್ನು ನಗದಾಗಲಿ, ಸೂಪರಿಂಟೆಂಡೆಂಟರವರಿಗೆ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಸಿಕ್ಯೂರಿಟಿಗಳ ಮೂಲಕವಾಗಲಿ ಕೊಡಗು ಸೂಪರಿಂಟೆಂಡೆಂಟರಲ್ಲಿ ಠೇವಣೀ ಯಿಡತಕ್ಕದ್ದು. ಅವನು ಹಾಗೆ ಮಾಡಲಿಕ್ಕೆ ತಪ್ಪಿದರೆ ಪೂರ್ವದಲ್ಲಿ ಯಿಡಲ್ಪಟ್ಟ ಠೇವಣೀಯನ್ನು ದಂಡದೋಪಾದಿಯಲ್ಲಿ ಕಳಕೊಳ್ಳುವನು ಮತ್ತು ಅವನ ದರಖಾಸ್ತನ್ನು ಅಂಗೀಕರಿಸಿ ಚೀಫ್ ಕಮ್ಮಿಷನರವರು ಮಾಡಿದ ನಿಷ್ಕರ್ಷೆಯು ರದ್ದು ಮಾಡಲ್ಪಡುವದು.

V. ಮೇಲೆ ವಿವರಿಸೋಣಾದ ಪ್ರಕಾರ ಠೇವಣೀ ಯಿಟ್ಟಲ್ಲಿ ಯಾರ ದರಖಾಸ್ತು ಮತ್ತು ಕಡೇ ಠೇವಣೀ ಅಂಗೀಕರಿಸಲ್ಪಟ್ಟಿರುತ್ತೋ ಆ ಮನುಷ್ಯನು ಈ ಕೆಳಗ ನಮೂದಿಸಲ್ಪಟ್ಟ ಷರತ್ತುಗಳಿಗೆ ಸರಿಯಾಗಿ ನಡೆಯಲಿಕ್ಕೆ ಬದ್ಧನಾಗಿ ವೊಂದು ವೊಡಂಬಡಿಕೆಯನ್ನು ಸರಿಯಾದ ಛಾಪಾ ಕಾಗದದಲ್ಲಿ ಬರದುಕೊಡತಕ್ಕದ್ದು. ಮತ್ತು ಅವನು ಸದರೀ ವೊಡಂಬಡಿಕೆಗೆ ರುಜು ಮಾಡತಕ್ಕದ್ದೆಂದು ತಿಳಿಸಲ್ಪಟ್ಟ 5 ದಿನಗಳೊಳಗಾಗಿ ರುಜು ಮಾಡಲಿಕ್ಕೆ ತಪ್ಪಿದರೂ ಅಥವಾ ನಿರಾಕರಿಸಿದರೂ ಮೊದಲು ಯಿಟ್ಟ ದರೋಬಸ್ತು ಠೇವಣೀಗಳನ್ನೂ ದಂಡದೋಪಾದಿಯಲ್ಲಿ ಕಳಕೊಳ್ಳುವನು, ಮತ್ತು ಸಂಪೂರ್ಣವಾದ ಸ್ವಾತಂತ್ರ್ಯವು ಚೀಫ್ ಕಮ್ಮಿಷನರವರು ಯಾವ ಮೇರಿಗೆ ನಿಶ್ಚಯಿಸುವರೋ ಆ ಮೇರೆ ಅನ್ಯಥಾ ಪರಭಾರೆ ಮಾಡಲ್ಪಡುವದು.

VI. ವೊಡಂಬಡಿಕೆ ಬರದುಕೊಡಲ್ಪಡುತ್ತಾಲೆ ಸೂಪರಿಂಟೆಂಡೆಂಟರವರು ಯಾರ ದರಖಾಸ್ತು ಅಂಗೀಕರಿಸಲ್ಪಟ್ಟಿರುತ್ತೋ ಮತ್ತು ಯಾವನು ಠೇವಣೀಗಳನ್ನು ಕೊಟ್ಟು ವೊಡಂಬಡಿಕೆ ಬರದುಕೊಟ್ಟಿರುತ್ತಾನೋ ಆ ಮನುಷ್ಯನಿಗೆ ಈ ಇಸ್ತಿಹಾರಿನ ಮೊದಲನೇ ಕ್ಲಾಜಿನಲ್ಲಿ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಈ ಕೆಳಗೆ ಕಂಡ ಷರತ್ತುಗಳಿಗೆ ವೊಳಪಡಿಸಿ ಕೊಟ್ಟ ವೊಂದು ಲೈಸೆನ್ಸ್ ಕೊಡತಕ್ಕದ್ದು.

ಷರತ್ತುಗಳು.

(1.) ಲೈಸೆನ್ಸದಾರನಿಂದ ಕೊಡಲ್ಪಟ್ಟ ಸ್ಪಿರಿಟ್‌ಗಳ ಪ್ರತಿ *ಇಂಪೀರಿಯಲ್ ಗ್ಯಾಲನ್ ಮೇಲೆ, ಯಿವರಡಿ ನಮೂದಿಸಲ್ಪಡುವ ತೀರ್ವೆಯು ಕೊಡಲ್ಪಡತಕ್ಕದ್ದು.

ಪ್ರೂವ್ ಸ್ಪಿರಿಟ್—ರೂಪಾಯಿ 3—2—10 ಗ್ಯಾಲನ್ ವೊಂದಕ್ಕೆ.

19. ಬಿಲೋ ಪ್ರೂಫ್—ರೂ—2—10—0 ಗ್ಯಾಲನ್ ವೊಂದಕ್ಕೆ.

(2.) ಈ ತೀರ್ವೆಯು ಯಾವ ತಿಂಗಳಲ್ಲಿ ಸಾರಾಯಿ ಕೊಡಲ್ಪಡುತ್ತೋ ಆ ಮಾರನೇ ತಿಂಗಳಿನ 5ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಕೊಡಗು ಖಜಾನೇಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಮತ್ತು ಆ ತಾರೀಖಿನಲ್ಲಿ ಬಾಕೀ ನಿಲ್ಲಿಸಿಕೊಂಡ ದರೋಬಸ್ತು ಮೊಬಲಗ್ ಮೇಲೆ ಸಾಲ್ 1ಕ್ಕೆ ಶೇಕಡಾ 6 ರೂಪಾಯಿ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂತಾ ಬಾಕೀ ಮೊಬಲಗು ಅದು ಯಾವ ತಿಂಗಳಲ್ಲಿ ಸಲ್ಲಬೇಕಾಗಿರುತ್ತೋ ಆ ತಿಂಗಳು ಕಳೆದನಂತರ ಸಲ್ಲದೇ ನಿಂತರೆ, ಲ್ಯಾಂಡ್ ರೆವಿನ್ಯೂ ಬಾಕೀ ವಸೂಲೀ ಬಗ್ಯೆ ಹಾಲೀ ಜಾರೀಯಲ್ಲಿರುವ ರೂಲ್ಸನಿಂದ ನಿಬಂಧಿಸಲ್ಪಟ್ಟಿರುವ ಮೇರೆ ಲೈಸೆನ್ಸದಾರನ ಜಿಂದಗಿ ಜಫ್ತೀ ಹರಾಜಿನಿಂದ ವಸೂಲಾಗತಕ್ಕದ್ದಾಗಿರುತ್ತೆ, ಲೈಸೆನ್ಸದಾರ ಭರವಸೆ ಕೊಟ್ಟಿರುವ ಸಾಲೀಯಾನಾ ಹುಟ್ಟುವಳಿ ಮೊಬಲಗು 12 ಮಾಸೇವಾರೀ ವಾಯಿದೆಗಳಾಗಿ ಸದರೀ ಟ್ರೆಜರೀಯಲ್ಲಿ ಪಾವತೀ ಮಾಡಲ್ಪಡತಕ್ಕದ್ದು, ಕರಾರ್ ಮಾಡಿಕೊಂಡಿರುವ ಮೊಬಲಗಿನ ಪೈಕಿ ಮಾಹೇವಾರೀ ವಾಯಿದೆ ಮೊಬಲಗಿಗೆ ಜಾಸ್ತೀಯಾಗಿ ಷರಾಬ್ ವೊಂದು ತಿಂಗಳಲ್ಲಿ ಕೊಡಲ್ಪಟ್ಟ ಪಕ್ಷಕ್ಕೆ ಹಾಗೆ ಜಾಸ್ತೀಯಾಗಿ ಕೊಡಲ್ಪಟ್ಟ ಪ್ರತಿ ಗ್ಯಾಲನ್ನಿಗೂ ಲೈಸೆನ್ಸದಾರನು ಸಾಯರ್ ತೀರ್ವೆಯೂ ಕೊಡತಕ್ಕದ್ದು, ಕಡಮೆಯಾಗಿ ಷರಾಬ್ ಕೊಡಲ್ಪಟ್ಟ ತಿಂಗಳುಗಳಲ್ಲಿ ಲೈಸೆನ್ಸದಾರನು ಮಾಹೇವಾರೀ ಕರಾರ್ ಮೊಬಲಗಿಗಿಂತ ಜಾಸ್ತೀಯಾಗಿ ಕೊಟ್ಟಿದ್ದರೆ ಅದನ್ನು ಪಯೋಗಿಸಿಕ್ಕೊಳ್ಳುವ ಬಾಧ್ಯತೆಯನ್ನು ಹೊಂದತಕ್ಕದ್ದಲ್ಲದೆ ಪ್ರತಿ ಸಂವತ್ಸರ ಆಖೈರಿನಲ್ಲಿ ಒಟ್ಟು ಬಾಕೀ ತೇಲಿಸತಕ್ಕದ್ದು. ಆಗ ಲೈಸೆನ್ಸದಾರನು ಗವರ್ನಮೆಂಟಿಗೆ ವೊಡಂಬಡಿಕೆ ಮಾಡಿಕೊಂಡ ಮಿನಿಮಂ ಮೊಬಲಗುನಿಂದ ಯಷ್ಟು ಗ್ಯಾಲನ್‌ಗಳ ಮೇಲೆ ತೀರ್ವೇ ಸಾಕಾಗಿರುತ್ತೋ ಅಷ್ಟು ಗ್ಯಾಲನ್‌ಗಳ ಸಂಖ್ಯೆಗೆ

* ಕೊಡಗಿನಲ್ಲಿ ಇಂಪೀರಿಯಲ್ ಗ್ಯಾಲನ್ ವೊಂದಕ್ಕೆ 5 ಶೀಷೆಗಳು.

ಜಾಸ್ತೀಯಾಗಿ ಒಂದು ಸಂವತ್ಸರದಲ್ಲಿ ಕೊಡಲ್ಪಟ್ಟ ಗ್ಯಾಲನ್‌ಗಳ ಸಂಖ್ಯೆಗೆ ಶೀರ್ವೆಯನ್ನು ತೆರತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಕಾಲಗಳ ಪೈಕೀ ಯಾವ ಕಾಲದಲ್ಲಾಗಲಿ ಕೊಡತಕ್ಕ ಶೀರ್ವೆ ಮೊಬಲಗ್‌ಗಳು ಮೇಲೆ ಕಂಡ ದಾಮಾಷಾಯಿ ಗಿಂತಲೂ ಕಮ್ಮೀ ಬಿದ್ದಲ್ಲಿ ಕಮ್ಮೀಬಿದ್ದ ಮೊಬಲಗ್ ಕೂಡ್ಲೇ ಭರ್ತಿಮಾಡಲ್ಪಡತಕ್ಕದ್ದು. ಮತ್ತು ಕೊಡತಕ್ಕ ಅಂತಾ ಪ್ರತಿ ಮೊಬಲಗ್ ಬಾಕೀ ಆದಾಗ ಆ ಮೊಬಲಗನ್ನು ಪಾವತೀ ಮಾಡಲಿಕ್ಕೆ ತಪ್ಪಿದ ಪಕ್ಷದಲ್ಲಿ ಹಾಂಗೆ ಆಗುವ ಬಾಕೀ ಮೊಬಲಗಿಗೆ ಸಾಲ್ 1ಕ್ಕೆ ಶೇಕಡಾ 6 ರೂಪಾಯಿ ಪ್ರಕಾರ ಬಡ್ಡೀ ಕಟ್ಟಲ್ಪಡತಕ್ಕದ್ದು. ಮೊಬಲಗ್ ಪಾವತೀ ಮಾಡಲಿಕ್ಕೆ ತಪ್ಪುವ ಪಕ್ಷದಲ್ಲಿ ಡಿಸ್ಟಿಲ್‌ದಾರನ ಲೈಸೆನ್ಸ್ ರದ್ದಾಗಿರುತ್ತದೆಂದು ಪ್ರಸಿದ್ಧವಾಗಿ ತಿಳಿಸಲಿಕ್ಕೂ, ಮತ್ತು ನಿಂತಿರುವ ವಿಶಿಷ್ಟಾ ಬಾಕಿಯನ್ನೂ, ಡಿಪಾಜಿಟ್ ಯಿಟ್ಟರತಕ್ಕ ಮೊಬಲಗಗಳನ್ನು ಸರಕಾರಕ್ಕೆ ಸೇರಿಸಿ ಕೊಳ್ಳುವ ಮೂಲಕ ಮತ್ತು ಆವಶ್ಯಕವಿದ್ದಲ್ಲಿ ಲ್ಯಾಂಡ್ ರವಿನ್ಯೂ ವಸೂಲೀ ಬಗ್ಯೆ ಹಾಲೀ ಜಾರೀಲಿರುವ ರೂಲ್ಸ್ ಪ್ರಕಾರ ಸರಕಾರದ ಹಣ ಕೊಡದೆ ತಪ್ಪಿದವನ ಜಿಂದಗಿ ಜಫ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳತಕ್ಕ ಬಗ್ಯೆ ಕ್ರಮವನ್ನು ವಹಿಸಲಿಕ್ಕೂ, ಚೀಫ್ ಕಮ್ಮಿಷನರವರ ಅಪ್ಪಣೇನಿಸಿ ಸೂಪರ್ರಿಟೆಂಡೆಂಟವರ ಯಕ್ತ್ಯಾರಿಯಲ್ಲಿರತಕ್ಕದ್ದು.

(3.) ಡಿಸ್ಟಿಲ್‌ದಾರನು ಫ್ರೆಜರ್‌ಪೇಟೆಯಲ್ಲಿರುವ ಸದರ್ ಡಿಸ್ಟಿಲೇರಿಯ ಆವರಣದೊಳಗಾಗಲಿ, ಸೂಪರ್ರಿಟೆಂಡೆಂಟರವರಿಂದ ಮಂಜೂರ್ಮಾಡಲ್ಪಡುವ ಮತ್ತ್ಯಾವ ಇತರ ಸ್ಥಳದಲ್ಲಾಗಲಿ ಆರಕ್ ಸಾರಾಯಿಯನ್ನು ತಯಾರ್ಮಾಡುವಂತೆ ಮತ್ತು ಸೂಪರ್ರಿಟೆಂಡೆಂಟರವರಿಂದ ಗೊತ್ತು ಮಾಡಲ್ಪಡುವ ಸ್ಥಳಗಳಲ್ಲಿ ಬಟ್ಟಿ ಇಳಕೇ ಡಿಪೋಗಳನ್ನು ಏರ್ಪಡಿಸುವಂತೆ ನೇಮಿಸಲ್ಪಡತಕ್ಕದ್ದು. ಡಿಸ್ಟಿಲೇರಿಯು ಮತ್ತು ಡಿಪೋಗಳು ಸೂಪರ್ರಿಟೆಂಡೆಂಟರವರಾಗಲಿ, ಆ ಬಗ್ಯೆ ಅವರಿಂದ ಕಳುಹಿಸಲ್ಪಡತಕ್ಕ ಯಾವ ತಾಪೇದಾರಿ ಉದ್ಯೋಗಸ್ಥನಾಗಲಿ ಹೋಗಿ ನೋಡಲಿಕ್ಕೆ ಯಲ್ಲಾ ಕಾಲಗಳಲ್ಲಿಯೂ, ಖುಲ್ಲಾ ಇರತಕ್ಕದ್ದು. ಚೀಫ್‌ಕಮ್ಮಿಷನರವರು ಆವಶ್ಯಕವೆಂದೆಣಿಸುವ ಪೊಲೀಸ್ ಪಹರೆಗಳು ಮತ್ತು ಆಳತಿಸಿಬ್ಬಂದಿ ಇವುಗಳಿಗಾಗಿ ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು, ಮಾಹೇಯಾನಾ ಪ್ರತಿ ತಿಂಗಳ ಗುರ್ರೇತಾರೀಖಿನಲ್ಲಿ 153 ರೂಪಾಯಿಗಳನ್ನು ಖಜಾನೇಯಲ್ಲಿ ಪಾವತೀಮಾಡತಕ್ಕದ್ದು. ಡಿಸ್ಟಿಲ್‌ದಾರನು ಮತ್ತು ನಿಯಮಿಸಲ್ಪಡತಕ್ಕದ್ದೇನಂದರೆ, ಸದರೀಯವನು ಡಿಸ್ಟಿಲೇರಿಕಟ್ಟಡವನ್ನು ಉಪಯೋಗಿಸುವ ಬಗ್ಯೆ ಮಾಹೇಯಾನಾ ಸರ್ಕಾರಕ್ಕೆ 25 ರೂಪಾಯಿಗಳನ್ನು ಕೊಡತಕ್ಕದ್ದಲ್ಲದೆ ಹಾಲೀ ಇರತಕ್ಕ ಡಿಸ್ಟಿಲ್‌ದಾರ್ರಿಗೆ, ಡಿಸ್ಟಿಲೇರಿ ಆವರಣದೊಳಗೆ, ಬೆಲ್ಲ, ತುಮ್ಮೆ ಇಳಕ್ಕೆ ಮುಂತಾದ್ದು ದಾಸ್ತಾನ್ ಇಡುವ ಬಗ್ಯೆ ಅವರು ಕಟ್ಟಿ ಇರುವ ಕೋಠಿ ಗಳಿಗಾಗಿ ಮೊಕರರಾಗುವ ಈ ಡು ಮೊಬಲಗ್ ಸಹ ಕೊಡತಕ್ಕದ್ದು. ಯಾವ ಆರಕ್ ಸಾರಾಯಿಯಾಗಲಿ ಅಳೆಯುವಬಗ್ಯೂ ಪರೀಕ್ಷಿಸುವಬಗ್ಯೂ ಮೊಕರರ್ಮಾಡಲ್ಪಟ್ಟಿರುವ ಉದ್ಯೋಗಸ್ಥನಿಂದ ಅಳೆಯಲ್ಪಟ್ಟು ಪರೀಕ್ಷಿಸಲ್ಪಟ್ಟ ಹೊರ್ತು ಡಿಸ್ಟಿಲೇರಿಯ ಆಚೆ ತೆಗೆದುಕೊಂಡು ಹೋಗಲ್ಪಡಕೂಡದು.

(4.) ಸ್ಪಿರಿಟ್‌ಗಳನ್ನು ಕೊಡುವ ವಿಷಯದಲ್ಲಿ, ಇದರಡಿ ಬರು ನಿಬಂಧನೆಗಳು ಆಚರಿಸಲ್ಪಡತಕ್ಕವು.

(a.) ಯಾವ ಸ್ಪಿರಿಟ್ಟಾಗಲಿ, 19 ಡಿಗ್ರಿ ಅಂಡರ್‌ಪ್ರೂಫಿಗೆ ಹೆಚ್ಚಾದ ಬಲವುಳ್ಳದ್ದಾಗಿ ಸಾಧಾರಣವಾಗಿ ಕೊಡಲ್ಪಡಕೂಡದು. ಆದರೆ ಮೇಲೆ ನಮೂದಿಸಲ್ಪಟ್ಟ ಬಲಕಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಕೊಡಲು ಡಿಸ್ಟಿಲ್‌ದಾರನು ಅಪೇಕ್ಷಿಸಿದರೆ ಹಾಂಗೆ ಕೊಡಲ್ಪಟ್ಟ ಸ್ಪಿರಿಟ್, ಪ್ರೂಫಿಗಿಂತಲೂ ಹೆಚ್ಚಾದ ಬಲವುಳ್ಳದ್ದಾಗಿ ಇರಕೂಡದು.

(b.) 19 ಡಿಗ್ರಿ ಅಂ॥ ಪ್ರೂಫಿಗೆ ಮೇಲ್ಪಟ್ಟ ಬಲವುಳ್ಳದ್ದಾಗಿ ಕೊಡಲ್ಪಡುವ ದರೋಬಸ್ತು ಸಾರಾಯಿಗೂ ಪ್ರೂಫ್‌ಮೇಲೆ ವಿಧಿಸಲ್ಪಟ್ಟಿರುವ ಶೀರ್ವೆ ಕಟ್ಟಲ್ಪಡತಕ್ಕದ್ದು.

(c.) 19 ಡಿಗ್ರಿ ಅಂ॥ ಪ್ರೂಫಿಗೆ ಕಡಮೆಯಾಗಿ ಇರುವ ಯಾವ ಸ್ಪಿರಿಟ್ಟಾಗಲಿ, ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು.

(5.) ಬಟ್ಟೀ ಇಳಿಸುವಲ್ಲಿ ಉಪಯೋಗಿಸಲ್ಪಡುವ ಪದಾರ್ಥಗಳು ಸೂಪರ್ರಿಟೆಂಡೆಂಟರವರಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮತ್ತು ಅವು ಅತ್ಯುತ್ತಮವಾಗಿರತಕ್ಕದ್ದು. ಬಟ್ಟೀ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳೂ ಉಪಯೋಗಿಸಲ್ಪಡಕೂಡದು, ಅಥವಾ ಸಾರಾಯಿ ತಯಾರಾದ ಬಳಿಕಲೂ ಅದರಲ್ಲಿ ಹಾಕಲ್ಪಡಕೂಡದು.

(6.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ತನ್ನ ಜಮಾಖರ್ಚುಗಳಿಗೂ, ತಯಾರ್ಮಾಡಲ್ಪಟ್ಟ, ಕೊಡಲ್ಪಟ್ಟ, ಮತ್ತು ಪ್ರತಿ ಡಿಸ್ಟಿಲೇರಿ ವ ಡಿಪೋಯಲ್ಲಿ ತೆಗೆದುಕೊಳ್ಳಲ್ಪಟ್ಟ ಸ್ಪಿರಿಟ್‌ಗಳ ತಾದಾದ್ ವ ಬಲ ಇವುಗಳಿಗೂ, ಕರಾರ್ ವಾಕಾ ಲೆಖ್ಖಗಳನ್ನು ಇಡತಕ್ಕದ್ದಲ್ಲದೆ ಸೂಪರ್ರಿಟೆಂಡೆಂಟರಾಗಲಿ, ಅವರು ತನಿಖೀಬಗ್ಯೆ ಕಳುಹಿಸುವ ಯಾವ ತಾಪೇದಾರರಾಗಲಿ, ಆ ಲೆಖ್ಖಗಳನ್ನು ತನಖೀ ಮಾಡುವ ಬಗ್ಯೆ ಹಾಜರ್ ಮಾಡಬೇಕೆಂದು ತಿಳಿಸಿದಾಗೆಲ್ಲ ಹಾಜರ್ಮಾಡತಕ್ಕದ್ದು.

(7.) ಡಿಸ್ಟಿಲ್‌ದಾರನು ಒಂದು ತಿಂಗಳಿಗೆ ಬೇಕಾದ ಸಾರಾಯಿಯನ್ನು ಯಾವಾಗಲೂ ದಾಸ್ತಾನ್ ಯಿಟ್ಟುಕೊಂಡಿರುವ ಬಗ್ಯೆ ಬದ್ಧನಾಗಿರತಕ್ಕದ್ದು. ಈ ಪ್ರಕಾರ 1877ನೇ ಇಸವಿ ಏಪ್ರೈಲ್ ಗುರ್ರೇತಾರೀಖಿನಲ್ಲಿ ಯಿಟ್ಟುಕೊಂಡಿರತಕ್ಕ ಬಗ್ಯೆ ಆ ತಾರೀಖಿಗೆ ಮೊದಲೇ ಬಟ್ಟೀ ಯಿಳಿಸಲು ಶುರೂ ಮಾಡುವದಕ್ಕೆ ಅವನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಪರಂತು ಹಾಂಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ 1877ನೇ ಇಸವೀ ಏಪ್ರೈಲ್ ಗುರ್ರೇ ತಾರೀಖಿಗೆ ಪೂರ್ವ ಮಾರಲ್ಪಡಕೂಡದು. ಅಥವಾ ಲೈಸೆನ್ಸ್‌ದಾರನ ವ ಆತನ ನೌಕರರ ಸ್ವಾಧೀನದಿಂದ ಆಚೆ ಹೋಗಕೂಡದು

(8.) ಡಿಸ್ಟಿಲ್‌ದಾರನು ದರೋಬಸ್ತು ಕಸಬೆಗಳಲ್ಲಿಯೂ, ಮತ್ತು ದೊಡ್ಡ ದೊಡ್ಡ ಷಹರ್‌ಗಳಲ್ಲಿಯೂ, ಮೊಟ್ಟು ಬಿಕರೀ ಅಂಗಡಿಗಳನ್ನು ಯಿಟ್ಟುಕೊಳ್ಳತಕ್ಕ ಬಗ್ಗೆ ಆತನಿಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಸದರೀ ಕಸಬಾ ಷಹರ್‌ಗಳ ಮೊಂದು ಪಟ್ಟಿಯು ಜೇಬರದುಕೊಂಡರೆ ಕೊಡಲ್ಪಡತ್ತೆ.

(9.) ದರೋಬಸ್ತು ಚಿಲ್ಲರೇ ಬಿಕರೀದಾರ್ರುಗಳೂ ಸ್ಪಿರಿಟ್‌ಗಳನ್ನು ಕ್ಲುಪ್ತಪಡಿಸಲ್ಪಟ್ಟ ಕ್ರಯಕ್ಕೆ ಮತ್ತು ಈ ಕೆಳಗೆ 14ನೇ ಕ್ಲಾಜ್‌ನಲ್ಲಿ ನಮೂದಿಸಲ್ಪಟ್ಟ ಬಲಗಳುಳ್ಳದ್ದಾಗಿ ಮಾರುತ್ತಿರಲಿಕ್ಕೂ ಮತ್ತು ಯಾವ ಮೊಟ್ಟು ಬಿಕರೀ ಅಂಗಡಿಯಿಂದ ಅವರು ತಮ್ಮ ಸಾರಾಯಿಯನ್ನು ಪಡೆಯತಕ್ಕದ್ದೆಂದು ಅವರಿಗೆ ಡಿಸ್ಟಿಲ್‌ದಾರನಿಂದ ತಿಳಿಸಲ್ಪಟ್ಟಿರುತ್ತೋ ಅಂತಾ ಮೊಟ್ಟು ಬಿಕರೀ ಅಂಗಡಿಯಿಂದ ಪಡೆಯುತ್ತಾ ಬರಲಿಕ್ಕು ಕರಾರ್ ಬರೆದುಕೊಡತಕ್ಕದ್ದೆಂತಲೂ ಅವರ ಅಂಗಡಿಗಳಲ್ಲಿ ಯಾವ ಅಕ್ರಮಗಳೂ ನಡೆಯದೆ ಯಿರತಕ್ಕದ್ದನ್ನು ನೋಡತಕ್ಕ ಬಗ್ಯೆ ಡಿಸ್ಟಿಲ್‌ದಾರನಿಗಾಗಲಿ, ಆತನ ಮುತಾಲೀಕನಿಗಾಗಲಿ, ಅವರ ಅಂಗಡಿಗಳಿಗೆ ಧಾರಾಳವಾಗಿ ಹೋಗುವದಕ್ಕೆ ಆಸ್ಪದ ಕೊಡತಕ್ಕದ್ದೆಂತಲೂ ಸಹಾ ತಾಕೀದ್ ಮಾಡಲ್ಪಡತಕ್ಕದ್ದು ಮತ್ತು ಸದರೀ ಚಿಲ್ಲರೇ ಬಿಕರೀದಾರ್ರುಗಳು ತಮ್ಮಿಂದ ದಿನವಹಿ ತರಲ್ಪಟ್ಟ ಸಾರಾಯಿಯ ತೇದಾದ್ ವ ಬಲ ಯಿವುಗಳಿಗೂ, ಮತ್ತು ಅದಕ್ಕೆ ಕಟ್ಟಲ್ಪಟ್ಟ ಖರೀದಿಗೂ ಲೆಖ್ಖಗಳನ್ನು ಯಿಡತಕ್ಕದ್ದಲ್ಲದೆ ಡಿಸ್ಟಿಲ್‌ದಾರನಾಗಲಿ, ಆತನ ಮುತಾಲೀಕನಾಗಲಿ, ಸದರೀ ಲೆಖ್ಖಗಳನ್ನು ತನಖೀ ಮಾಡಲಿಕ್ಕೆ ಅಧಿಕಾರ ಹೊಂದಿರುವ ಯಾವ ಗವರ್ನಮೆಂಟ್ ಉದ್ಯೋಗಸ್ಥನಾಗಲಿ, ಅಪೇಕ್ಷಿಸಿದಾಗ ಅವರ ಲೆಖ್ಖಗಳನ್ನು ಅವರುಗಳು ನೋಡಲಿಕ್ಕೆ ಹಾಜರ್ಮಾಡತಕ್ಕದ್ದು.

(10.) ಕೊಡಗಿನಲ್ಲಿರುವ ಚಿಲ್ಲರೇ ಬಿಕರೀ ಅಂಗಡಿಗಳ ಬಗ್ಯೆ ಮಾಮೂಲ್ ಲೈಸೆನ್ಸ್‌ಗಳು ಸೂಪ್ರಿಂಟೆಂಡೆಂಟರಿಂದ ಕೊಡಲ್ಪಡತಕ್ಕವು.

(11.) ಸಾರಾಯಿಗೆ ಸಾಟಿಯಾಗಿ ಯಾ ಒತ್ತೆಯಾಗಿ ಧಾನ್ಯವಾಗಲಿ, ವಸ್ತುಗಳಾಗಲಿ, ಆಭರಣಗಳಾಗಲಿ, ಉಡುವ ಬಟ್ಟೆಗಳಾಗಲಿ, ಯಿತರ ಮಾಲ್ ಆಗಲಿ, ತೆಗದುಕೊಳ್ಳಕೂಡದು. ಲೈಸೆನ್ಸ್ ಹೊಂದಿದ ಡಿಸ್ಟಿಲ್‌ಧಾರನು ಡಿಸ್ಟಿಲೇರಿಯಲ್ಲಾಗಲಿ, ಮೊಟ್ಟು ಬಿಕರೀ ಅಂಗಡಿಗಳಲ್ಲಾಗಲಿ, ಸಾರಾಯಿಯನ್ನು ಚಿಲ್ಲರೆಯಾಗಿ ಮಾರಕೂಡದು.

(12.) ಲೈಸೆನ್ಸ್ ಹೊಂದಿದ ಡಿಸ್ಟಿಲ್‌ದಾರನು ಡಿಸ್ಟಿಲೇರಿಗಳನ್ನು ಯಾ ಮೊಟ್ಟು ಬಿಕರೀ ಅಂಗಡಿಗಳನ್ನು ಯಾ ಡಿಪೋಗಳನ್ನು ಮೇಲ್‌ವಿಚಾರಣೆ ಮಾಡತಕ್ಕ ಬಗ್ಯೆ ತಾನು ನೌಕರಿಗೆ ಯಿಟ್ಟುಕೊಳ್ಳತಕ್ಕ ಪ್ರತಿ ಮನುಷ್ಯನೂ, ಹಾಂಗೆ ನೌಕರಿ ಪಡೆಯುವದಕ್ಕೆ ಮುಂದೆ; ಮೇಲೆ ನಮೂದಿಸಲ್ಪಟ್ಟ ಷರತ್ತುಗಳಿಗೆ ಅನುಗುಣವಾಗಿರುವ ಕರಾರು ಬರದುಕೊಡುವಂತೆ ಮಾಡಿಸತಕ್ಕದ್ದು, ಮತ್ತು ಅಂತಾ ಕರಾರುಗಳನ್ನು 1877ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯಿತು ಮೊಂದು ತಿಂಗಳೊಳಗಾಗಿ ಸೂಪರಿಂಟೆಂಡೆಂಟ್ ರವರಲ್ಲಿ ಡಿಪಾಜಿಟ್ ಇಡತಕ್ಕದ್ದು. ಯಿದಲ್ಲದೆ ಲೈಸೆನ್ಸ್‌ದಾರನು, ಆರೆಕ್‌ಸಾರಾಯಿ ತಯಾರ್ಮಾಡುವ ಬಗ್ಯೂ, ತೆಗದುಕೊಂಡು ಹೋಗುವ ಬಗ್ಯೂ, ಬಿಕರೀ ಮಾಡುವಬಗ್ಯೂ, ತನ್ನಿಂದ ಇಡಲ್ಪಟ್ಟ ದರೋಬಸ್ತು ಜನಗಳು ತಾವು ತಾವು ಬರದುಕೊಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳ ಪ್ರಕಾರ ಖಂಡಿತವಾಗಿ ನಡಿಯತಕ್ಕ ಬಗ್ಯೆ ಸರ್ವಪ್ರಯತ್ನವೂ ಮಾಡತಕ್ಕದ್ದು ಆ ನಿಬಂಧನೆಗಳನ್ನು ಉಲ್ಲಂಘನೆ ಮಾಡಿದ್ದಾಗಿ ತನ್ನ ತಿಳುವಳಿಕೆಗೆ ಬಂದರೆ, ಆ ತಕಸೀರಿಗೆ ವಿಧಿಸಲ್ಪಟ್ಟಿರುವ ದಂಡನೆಯನ್ನು ಕೊಡತಕ್ಕ ಬಗ್ಯೆ ಆಸಂಗತಿಯನ್ನು ಸೂಪರಿಂಟೆಂಡೆಂಟ್‌ರವರ ಜಾಹೀರಾತಿಗೆ ತರತಕ್ಕದ್ದು, ಮತ್ತು ಆತಕಸೀರ್‌ವಂದನನ್ನು ನವಕರಿಯಿಂದ ಬರತರ್ಫ್ ಸಹಾ ಮಾಡತಕ್ಕದ್ದು.

(13.) "ಡಿಸ್ಟಿಲ್‌ದಾರನು ಚೀಫ್ ಕಮ್ಮಿಷ"ನ್ನರವರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಯಾವಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯತಕ್ಕದ್ದೆಂದು ತಾಕೀದ್ ಮಾಡಲ್ಪಡತಕ್ಕದ್ದು, ಮತ್ತು ಸಾರಾಯಿ ತಯಾರ್ಮಾಡುವ ಬಗ್ಯೂ ತೆಗದುಕೊಂಡು ಹೋಗುವ ಬಗ್ಯೂ ಯಾ ಬಿಕರೀ ಮಾಡುವ ಬಗ್ಯೂ ತಾನು ನವಕರೀ ಯಿಟ್ಟುಕೊಂಡಿರುವ ಮನುಷ್ಯರು ಸಹ ಸದರೀ ನಿಬಂಧನೆಗಳಿಗೆ ಅನುಗುಣವಾಗಿ ನಡಿಯುವಂತೆ ಮಾಡಿಸತಕ್ಕದ್ದು.

(14.) ಮೊಟ್ಟು ಬಿಕರೀ ವ ಚಿಲ್ಲರೆ ಅಂಗಡಿಗಳಲ್ಲಿ (ಮಿಶ್ರಮಾಡದೆ ವ ತೆಳುವು ಮಾಡದೆ) ಬಿಕರೀ ಮಾಡತಕ್ಕ ಸಾರಾಯಿಯ ನಿರ್ರುಗಳು ಈ ಕೆಳಗೆ ಬರುವ ಪಟ್ಟೀ ಪ್ರಕಾರ ಯಿರತಕ್ಕದ್ದು.

ಸ್ಥಳ.		ಪ್ರೂಫ್.		19ಡಿಗ್ರಿ ಅಂಡರ್ ಪ್ರೂಫ್.	
		ಪ್ರತಿ ಗ್ಯಾಲನ್‌ಗೆ.	ಪ್ರತಿ ಡ್ರಾಂಗೆ.	ಪ್ರತಿ ಗ್ಯಾಲನ್‌ಗೆ.	ಪ್ರತಿ ಡ್ರಾಂಗೆ.
ಷಹರ್	ಒಟ್ಟು ಬಿಕ್ರಿ	4-10-0	..	3—12—0	
	ಚಿಲ್ಲರೇ ಬಿಕ್ರಿ			3—15—4	0-1-7
ಗಾವ್‌ಗಾನೆಗಳು	ಒಟ್ಟು ಬಿಕ್ರಿ	4-10-0	..	3—12—0	
	ಚಿಲ್ಲರೇ ಬಿಕ್ರಿ			4— 2—8	0-1-8

(15.) ಲೈಸೆನ್ಸು ಹೊಂದಿದ ಡಿಸ್ಟಿಲೇರಿ ದಾರನಿಂದ ಅಥವಾ ಅವನ ಮುದ್ದತ್ತಿನಮೇಲೆ ಅಂತರಂಗವಾದ ಅವನ ಸಂಬಂಧದ ದೆಶೆಯಿಂದ ಷರಾಬ್ ತಯಾರಿ ಯಾ ಸಾಗಿಸೋಣ ಯಾ ಪುರೊಬ್ತು ಇಂತಾದ್ದರಲ್ಲಿ ಆತನಿಂದ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯರಿಂದಲಾಗಲಿ ಈ ಷರತ್ತು ಬಂದಿಗಳಿಗೆ ಮನಃಪೂರ್ವಕವಾದ ವುಲ್ಲಂಘನವೇನಾದರೂ ನಡಿಸಲ್ಪಟ್ಟ ಪಕ್ಷಕ್ಕೆ ಸೂಪರಿಂಟೆಂಡೆಂಟ್ ರವರು ಚೀಫ್ ಕಮಿಷ್ನರವರ ಮಂಜೂರಾತಿ ಸಿಶಿ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಶೇರಿಹೋಗಿರುತ್ತೆಂದು ತಿಳಿಸಲಿಕ್ಕೂ ಲೈಸೆನ್ಸ್ ರದ್ದು ಮಾಡಲಿಕ್ಕೂ ಮತ್ತು ರದ್ದಾದ ಲೈಸೆನ್ಸ್ ಹಿಡುವಳೀದಾರನಿಗೆ ಲುಕ್ಸಾನುಕರವಾಗಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪುನಃ ಹರಾಜು ಹಾಕುವದಕ್ಕಾಗಲಿ ಸರಕಾರದ ವಿಚಾರಣೆ ಕೆಳಗೆ ತೆಗದುಕೊಳ್ಳುವದಕ್ಕಾಗಲಿ ಅಧಿಕಾರ ಪಡದಿರುತ್ತಾರೆ. ಮತ್ತು ಯಾವಸಂಗತಿವಳಗೂ ಜಮೀನು ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀಯಿರುವ ರೂಲ್ಸ್ ಅನುಸರಿಸಿ ಬಾಕೀ ವಸೂಲು ಮಾಡಲ್ಪಡತಕ್ಕದ್ದು.

VII. ಫ್ರೇಜರ್ ಪೇಟೆ ಡಿಸ್ಟಿಲೇರಿಯಿಂದ ಕಳೆದ 5 ಸಂವತ್ಸರಗಳ ವಳಗೆ ತಯಾರಾಗಿ ಕೊಡಲ್ಪಟ್ಟ ಸಾರಾಯಿಯ ಸಾಲಿಯಾನ ಸರಾಸರೀ ತೇಡಾದ್ ಈ ಕೆಳಗೆ ತೋರಿಸಲ್ಪಡುತ್ತೆ.

			ಗ್ಯಾಲನ್‌ಗಳು.		
1871—72	..	.	69, 309	..	..
1872—73	..	..	70, 056	..	..
1873—74	..	..	58, 375	..	..
1874—75	..	..	54, 867	..	..
1875—76	..	.	58, 345	..	..

ನಂ. 13. ತಾರೀಖು 5ನೇ ಡಿಶಂಬರ್ 1876.

ಈ ಕೆಳಗೆ ಬರುವ ಬೈಲಾನಿಂಭನೆಯು ಚೀಫ್ ಕಮಿಷನರವರಿಂದ ಸಮ್ಮತಿಸಲ್ಪಟ್ಟು ಮಂಜೂರ್ ಮಾಡಲ್ಪಟ್ಟು, ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಸಲ್ಪಡುತ್ತೆ.

92. ನೇ ಬೈಲಾ.—ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜನನ ಮರಣಗಳನ್ನು ರಿಜಿಸ್ಟರ್ ಮಾಡುವ ಬಗ್ಗೆ, ಈ ಕೆಳಗೆ ಕಂಡ 6 ಡಿವಿಜನ್‌ಗಳು ಮಡಿಕೇರಿ ಷಹರಿನಲ್ಲಿ ಕಲ್ಪಿಸಲ್ಪಟ್ಟಿವೆ. ಇಂತಾ ಪ್ರತಿ ಡಿವಿಜನ್ನಿಗೂ ಮ್ಯುನಿಸಿಪೆಲ್ ಬೋರ್ಡಿನವರು ಒಬ್ಬ ಮೆಂಬರನ್ನು ಮೊಕರರ್ ಮಾಡಿರುತ್ತಾರೆ. ಸದರೀ ಸರಹದ್ದುಗಳೊಳಗೆ ಸಂಭವಿಸುವ ಪ್ರತಿ ಜನನವನ್ನೂ, ಮರಣವನ್ನು, ತಿಳಿದುಕೊಂಡು ಬರೆದಿಡುವದು ಅವರ ಕೆಲಸವಾಗಿರತಕ್ಕದ್ದು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುವ ದರೋಬಸ್ತು ಜನಗಳೂ, ತಮ್ಮ ತಮ್ಮ ಡಿವಿಜನ್‌ಗಳ ಮೆಂಬರ್‌ಗಳಿಗೆ, ತಮ್ಮ ಕುಟುಂಬಗಳಲ್ಲಿ ಯಾ ಮನೆಗಳಲ್ಲಿ ಸಂಭವಿಸುವ ಜನನ ಮರಣಗಳನ್ನು 6 ದಿನಗಳೊಳಗಾಗಿ ರಿಪೋರ್ಟು ಮಾಡತಕ್ಕದ್ದೆಂದು ತಾಕೀದ್ ಮಾಡಲ್ಪಟ್ಟಿದ್ದಾರೆ. ಯಾವ ಮನುಷ್ಯನಾಗಲಿ ಹಾಗೆ ಮಾಡುವದಕ್ಕೆ ತಪ್ಪಿದರೆ ಅವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಪ್ರತಿ ತಪ್ಪಿತಕ್ಕೂ ಒಂದು ರೂಪಾಯಿ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬ್ರಾಹ್ಮಣ ಪೇಟೆ   ದೊಡ್ಡ ಬೀದಿ   ರಾಣೀ ಪೇಟೆ   ಬಾನೇ ಮೊಟ್ಟೆ   ಗೌಳೀ ಪೇಟೆ   ಗಾರೀ ಬೀದಿ.

ನಂ. 16. ತಾರೀಖು 14ನೇ ಡಿಶಂಬರ್ 1876.

1ನೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆ॥ ಮೊಗ್ರಾತ್‌ಯವರು, 1876ನೇ ನವಂಬರ್ 29ನೇ ಮಧ್ಯಾಹ್ನಾತ್ಪರ ಎರಡನೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ॥ ಜ. ಸುಬ್ಬಯ್ಯನವರ ದೆಸೆಯಿಂದ ಕೊಡಗು ಟ್ರೆಜರೀ ಚಾರ್ಜನ್ನು ಹಂಗಾಮೀ ತಬೀಕ್ ತೆಗದುಕೊಂಡರು.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಸಿ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 16, ಸರ್ಕ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರಗಳು.

ತಾರೀಖು 15ನೇ ಡಿಶಂಬರ್ 1876.

ಮೈಸೂರು ಥೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟೆ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ದಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಕ್ರಿ. ಅ. ೮೬-೮೭	ಕೈದಿ ಹನುಮಂತಾ ವಗೈರೆ	..	೧೬ನೇ ಡಿಶಂಬರ
ಕ್ರಿ. ಅ. ೮೮	ಕೈದಿ ಬಾಲಾ ವಗೈರೆ ..	..	ಡಿಟೋ
ಕ್ರಿ. ಅ. ೯೦	ಕೈದಿ ಬಿಕ್ಕಾ ವಗೈರೆ ..	..	ಡಿಟೋ
ಸ್ಪಿ. ಅ. ೨೧	ಮುರಗಪ್ಪ ವಗೈರೆ ..	ಜಡಿಯಪ್ಪಾ ..	೧೯ನೇ ಡಿಟೋ
ಸ್ಪಿ. ಅ. ೮೦	ನರಸಿಹ್ಮಯ್ಯ ವಗೈರೆ ..	ಸುಬ್ಬರಾಯ ವಗೈರೆ ..	ಡಿಟೋ
ಕೊ. ಅ. ರಿ. ಪಿ॥ ೨-೪	ಕಾಶೀಬಾಯಿ ವಗೈರೆ ..	ಅಬ್ದುಲ್ ಖಾದರ್ ಸಾಹೆಬ್ ..	ಡಿಟೋ
ಕ್ರಿ. ಅ. ೭೬	ಕೈದಿ ತಿಮ್ಮಗಾ ..	..	ಡಿಟೋ
ಕ್ರಿ. ಅ. ೭೫	ಕೈದಿ ಸೋಮನಾಯಕ್ ವಗೈರೆ ..	..	ಡಿಟೋ
ಕ್ರಿ. ಅ. ೮೨	ಕೈದಿ ದೊಮ್ಮ ವಗೈರೆ ..	..	ಡಿಟೋ
ಕ್ರಿ. ಅ. ೮೦	ಕೈದಿ ಶಿದ್ದೋಜಿ ..	..	ಡಿಟೋ
ಕ್ರಿ. ಅ. ೮೧	ಕೈದಿ ಬೋರಿ ವೆಂಕಟಾ ..	..	ಡಿಟೋ
ಫ್ರೂಟೆ ಸ್ಪಿ. ಅ. ೧೪	ರಾಮಗಿರಿ ಮಹೇಶಗಿರಿ ಗೋಸಾಯಿ ..	ದೊಂತಿ ಶಿದ್ದರಾಮಶೆಟ್ಟಿ ..	೨೧ನೇ ಡಿಟೋ
ಕ್ರಿ. ಅ. ೭೭	ಕೈದಿ ಚಂದಾ ವಗೈರೆ ..	..	ಡಿಟೋ
ಕ್ರಿ. ಅ. ೭೮	ಕೈದಿ ಸಂಣಪೂಜಾರಿ ವಗೈರೆ ..	..	ಡಿಟೋ
ಕ್ರಿ. ಅ. ೭೯	ಕೈದಿ ಗಿಡ್ಡಾ ವಗೈರೆ ..	..	ಡಿಟೋ
ಕ್ರಿ. ಅ. ೮೫	ಕೈದಿ ಮುರುಗಪ್ಪ ವಗೈರೆ ..	..	ಡಿಟೋ
ಕ್ರಿ ಅ. ೮೯	ಕೈದಿ ಚನ್ನಾ ವಗೈರೆ ..	..	ಡಿಟೋ
ರಿ. ನಂ. ೬.	ಸೂರಪ್ಪಾ ..	ಸುಬ್ಬಂಣಾ ..	ಡಿಟೋ
ಸ್ಪಿ ಅ. ೮೪	ಉಸ್ಮಾನ್‌ಸಾಬ್ ..	ಶೇಕ್‌ಮುಸ್ತಫಾಸಾಬ್ ..	೧೬ನೇಜನವರಿ೧೮೭೭
ಸ್ಪಿ. ಅ. ೭೮	ನಾಡಿಗ ಶಾಮಂಣಾ ..	ಕೆಪ್ಟನ್ ವಾನ್‌ಸಾಮರ್ನ ..	೮೭ನೇ ಜನವರೀ
ಕ್ರಿ. ಅ. ೮೪	ಕೈದಿ ಬೈರಗ ವಗೈರೆ ..	..	ಡಿಟೋ
ಕ್ರಿ. ಅ ೯೧-೯೨	ಕೈದಿ ವಡ್ಡರೀದ್ದಾ .	..	ಡಿಟೋ
ಸ್ಪಿ. ಅ. ೮೭	ಸುಮತೀಂದ್ರಸ್ವಾಮಿ ..	ರಾಘವೇಂದ್ರ ಭಾರತೀಸ್ವಾಮಿ ..	೨೫ನೇ ಜನವರೀ
ಕ್ರಿ. ಅ. ೯೪-೯೫	ಕೈದಿ ಸಂಜೀವ ವಗೈರೆ ..	..	ಡಿಟೋ
ಸ್ಪಿ. ಅ. ೬೯	ವೆಂಕಟರಮಣಪ್ಪಾ ವಗೈರೆ ..	ಡಾಕ್ಟರ್ ಆರ್‌ಸಾಹೆಬರು ವಗೈರೆ ..	೧ನೇ ಫಿಬ್ರವರೀ

J. L. Pearse, *Offg. Judl. Commr.*

ಪೊಲೀಸ್ ಇಲಾಖಾ.

ತಾರೀಖು 13ನೇ ಡಿಶಂಬರ 1876.

ತುಮಕೂರು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಆಫಿಸ ಇನ್ಸ್ಪೆಕ್ಟರ ತಿರುಮಲಾಚಾರ್ರಿಗೆ ಮಾಹೇ ಮಜಕೂರ 11ನೇ ತಾರೀಖು ಲಗಾಯತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

J. L. PEARSE,
Offg. Inspr. General of Police.

ರೆವಿನ್ಯೂ ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 8ನೇ ಡಿಶಂಬರ 1876.

ಮ॥ A. G. ಹಡ್ಸರ್ನ ಸಾಹೇಬರು, ಇಂಡ್ಯಾ ಗವರ್ನಮೆಂಟಿನಿಂದ ಮೈಸೂರು ಶೀಮೆಯ ಚೀಫ್ ಕಮ್ಮಿಷನರವರ ಸೆಕರಟೇರಿ ಯವರಿಗೆ ಬರೆಯಲ್ಪಟ್ಟ 1876ನೇ ನವೆಂಬರ 10ನೇ ಮುಕ್ಕಾಂ 878ನೇ ನಂಬರವುಳ್ಳ ಲೆಟರನಿಂದ ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಅಜಮಾಯಿಷೀ ತರೀಕ್ ಮೊಕರರ ಮಾಡಲ್ಪಟ್ಟು, 1876ನೇ ನವೆಂಬರ 23ನೇ ಮುಕ್ಕಾಂ ಪೂರ್ವಾಹ್ನದಲ್ಲಿ ಮೈಸೂರು ರೆವಿನ್ಯೂ ಸರ್ವೇ ಇಲಾಖೇಯಲ್ಲಿ ಸೇರಿದರು.

W. C. ANDERSON,
Survey and Settlement Commr.

ಇನಾಂ ಇಲಾಖಾ.

ನಂ. 12. ತಾರೀಖು 5ನೇ ಡಿಶಂಬರ 1876.

ಹಾಸನ ಡಿಸ್ಟ್ರಿಕ್ಟು ಹಾಸನ ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಕಸಬಾ ಷಹರನಲ್ಲಿ ಇನಾ ಸೆಟಲ್‌ಮೆಂಟಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ॥ ಕಟ್ಬ್ಯೋಯವರಿಂದ ನಡಿಸಲ್ಪಟ್ಟು 1877ನೇ ಫಿಬ್ರುವರೀ 15ನೇ ಮುಕ್ಕಾಂನಲ್ಲಿ ಷುರುವಾಗುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಇನಾಂಗಳಿಗೆ ಸಂಬಧವುಳ್ಳ ದರೋಬಸ್ತು ಜನಗಳೂ ರೂಬರೂ ಆಗಲಿ ತಮ್ಮ ಮುತಾಲೀಕರ ಮೂಲಕವಾಗಲಿ ಹಾಜರಾಗಿ ತಮ್ಮ ತಮ್ಮ ಬಾಧ್ಯತೆಗಳನ್ನು ಕುರಿತು ವ್ಯವಹರಿಸುವಂತೆಯೂ ತಮ್ಮಲ್ಲಿರುವ ಸನ್ನದಗಳನ್ನೂ ಯಿತರ ದಸ್ತಾವೇಜುಗಳನ್ನೂ ಹಾಜರ ಮಾಡುವಂತೆಯೂ ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ. ಹಾಗೆ ಮಾಡದೆ ಹೋದರೆ ಅವರುಗಳ ಇನಾಂಗಳು ಪ್ರಥಮತಃ ಜಫ್ತಿಕೆಳಗೆ ತರಲ್ಪಟ್ಟು ತರುವಾಯ ಆಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

R. A. COLE,
Supt. of Inam Settlements.

ಫಿನಾನ್ಷಿಯಲ್ ಇಲಾಖಾ.

ಪಬ್ಲಿಕ್ ಕಟ್ಟಡಗಳ ಬಾಬತು.

ಟ್ರೆಜರೀಗಳಲ್ಲಿ ಪಾವತೀಯಾದ ಬಾಡಿಗೆ ಮೊಬಲಗಗಳು.

ಸರ್ಕ್ಯುಲರ ನಂ.—1302, ತಾರೀಖು 5ನೇ ಡಿಶಂಬರ 1876.

ಡಿಸ್ಟ್ರಿಕ್ಟುಗಳ ಟ್ರೆಜರೀ ಆಫಿಸರಗಳಿಗೆ.

ಪಬ್ಲಿಕ ಬಿಲ್ಡಿಂಗ್ಸ ಯಾನೆ ಸರಕಾರ ಕಟ್ಟಡಗಳ ಬಾಡಿಗೆಗಳ ಠರಾವ ಯಾ ವಸೂಲೀಕೆಲಸಗಳು ಡಿಸ್ಟ್ರಿಕ್ಟಿನ ಎಗ್ಜಿಕ್ಯೂಟಿವ್ ಇಂಜನೀಯರವರಿಗೆ ಸೇರಿಯಿರುತ್ತೆ. ಸದರೀ ಎಗ್ಜಿಕ್ಯೂಟಿವ್ ಇಂಜನೀಯರ ಬಾಡಿಗೇ ಬಗ್ಯೆ ಜವಾಬದಾರರಾಗಿರತಕ್ಕದ್ದೆಂದು ಪಬ್ಲಿಕ ವರ್ಕ್ಸ ಅಕೌಂಟ್ಸ್ ಯಗ್ಜಾಮಿನರ ತಿಳಿಸಿದ್ದರಿಂದ ಡೆಪ್ಯುಟಿ ಅಕೌಂಟೆಂಟ್ ಜನರಲ್ ಯವರು ಕೋರುವದೇನಂದರೆ, ಅಂತಾ ಬಾಡಿಗೆ ಮೊಬಲಗ್ ಗಳನ್ನು ತೆಗದುಕೊಳ್ಳುವ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರಗಳು ಅಮಲ್‌ದಾರರು ಸದರೀ ಮೊಬಲಗ ಪಾವತೀ ಮಾಡಿದ ಮನುಷ್ಯನಿಗೆ ಈ ಕೆಳಗೆ ಕಂಡಪ್ರಕಾರ ರಸೀದೀ ಕೊಡತಕ್ಕದ್ದು.

————ಮಾಹೇ ಬಗ್ಯೆ————ನಿಂದ ವಾಸ ಮಾಡಲ್ಪಡುವ ಪಬ್ಲಿಕ್ ಕಟ್ಟದ ಬಾಡಿಗೇ ಬಾಬತು———— ರೂಪಾಯಿಗಳು——————ಮಾರೀಫತ್————ಎಗ್ಜಿಕ್ಯೂಟಿವ್ ಯಿಂಜನೀಯರವರಿಂದ ಬಂದಿರುತ್ತೆ.

ಬಾಡಿಗೇ ಮೊಬಲಗ್‌ಗಳು ಡಿಸ್ಟ್ರಿಕ್ಟು ಟ್ರೆಜರೀ ಲೆಕ್ಕಗಳಲ್ಲಿ, ಮಾಮೂಲ್ ತಪಶೀಲ್‌ನಿಃ "ಎಗ್ಜಿಕ್ಯೂಟಿವ್ ಇಂಜನೀಯರವರಿಂದ ಬಂದ ಮೊಬಲಗ್" ಯಂಬದಾಗಿ ಜಮೇ ಕಟ್ಟಲ್ಪಡತಕ್ಕದ್ದು.

H. HUDSON,
Dy. Acctt. Genl. in Mysore.

ಫಾರೆಸ್ಟ್ ಇಲಾಖಾ.

1873ನೇ ಇಸವೀ ನವಂಬರ್ 8ನೇ ಮುರ್ಕ್ಕಂ ಮೈಸೂರು ಗೆಜೆಟ್ 2ನೇ ಭಾಗ 293ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ 1873 ನೇ ಯಿಸವೀ ನವಂಬರ್ 3ನೇ ಮುರ್ಕ್ಕಂ 2ನೇ ನಂಬರ್‌ವುಳ್ಳ ಈ ಆಫಿಸ್ ಯಿಸ್ತಿಹಾರ್‌ನಾಮೆಯನ್ನು ರದ್ದುಪಡಿಸಿ 1876ನೇ ಯಿಸವೀ ಡಿಶಂಬರ್ 15ನೇ ಮುರ್ಕ್ಕಂ ಲಗಾಯತ್ ಮೈಸೂರುಶೀಮೆಯ ಗವರ್ನಮೆಂಟ್ ಕೋಠಿಗಳಲ್ಲಿ ಯಾವ ಚಿಲ್ಲರೆ ದರಕ್ಕೆ ಸಂದಲ್ ಮಾರಲ್ಪಡುತ್ತೋ ಅಂತಾ ದರಗಳ ಬಾಬತು ಈ ಕೆಳಗೆ ನಮೂದಿಸುವ, ಪರಿಷ್ಕರಿಸೋಣಾದ ಪಟ್ಟಿಯು ಸಕಲಜನಗಳಿಗೂ ತಿಳಿಯುವ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಅವ್ವಲ್ ತರಹಾ	ಟನ್ 1ಕ್ಕೆ	ರೂಪಾಯಿ	900
ದುಯ್ಯಂತರಹಾ	,,	,,	870
ಸಿಯ್ಯಂ ತರಹಾ	,,	,,	850
ಚಾರಂ ತರಹಾ	,,	,,	760
ಪಾಂಜಂತರಹಾ	,,	,,	640
ಜಡ	,,	,,	550
ಅವ್ವಲ್ ತರಹಾ	ಟನ್ 1ಕ್ಕೆ	ರೂಪಾಯಿ	
ಜಬ್ ಪೊಕಲ್	,,	,,	450
ಬಗರ್ ಅದದ್	,,	,,	480
ಬುಕಣಿ	,,	,,	330
ಚಕ್ಕೇ ಪುಡಿ	,,	,,	150

2 ದರೋಬಸ್ತು ಅಪ್ಲಿಕೇಷನ್‌ಗಳೂ, ಫಾರೆಸ್ಟು ಡಿವಿಜನ್‌ಗಳ ಯಿನ್‌ಚಾರ್ಜ್ ಡೆಪ್ಯುಟಿ ಯಾ ಅ|| ಕನ್‌ಸರ್‌ವೇಟರ್‌ಗಳಿಗೆ ಬರೆದುಕೊಳ್ಳತಕ್ಕದ್ದು.

3. ಪ್ರತಿ ಕ್ಲಾಸ್‌ನಲ್ಲಿಯೂ ಒಂದು ಟನ್‌ಗಿಂತ ಜಾಸ್ತೀಯಾದ ವೊತಕ್ಕೆ ಬರುವ ಅಪ್ಲಿಕೇಷನ್‌ಗಳು ಅಂಗೀಕರಿಸಲ್ಪಡಲಾರದು.

4. ದರೋಬಸ್ತು ಚಿಲ್ಲರೆ ಬಿಕರೀಗೂ ನಗದೇಪಾವತೀ ಮಾಡಬೇಕು ಖರೀದೀ ಮಾಡಿದ ಸಂದಲನ್ನು ಕೂಡ್ಲೆ ಸಾಗಿಸಬೇಕು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಆಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ತಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879-80, 1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೆಲ್ 1ನೇ ಮುರ್ಕ್ಕಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ಡಿಸ್ಟ್ರಿಕ್ಟು ವಾರಾಗಿ ಚಡ ದರಖಾಸ್ತು ದಾರ್‌ರಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮುರ್ಕ್ಕಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಡ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀ ನೋಟಿಗಳು ಯಾ ನಗದು ಹಣ ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಗುತ್ತದೆ.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೈಲ್ 1ನೇ ಮುಕ್ಕಾಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮುಕ್ತಾಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮುಕ್ಕಾಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ ಯಿಟ್ಟ ಮೊಬಲಗಿಗೆ ನಿಸಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಖ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನಕರವಾಗಿ ಡಿಪಾಜಿಟ ಮೊಬಲಗಿನ ನಿಮಿತ್ಯ ವಿಲ್ಲದೆಯೇ ಪುನಶ್ಚ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ ಮೊಬಲಗ್ ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

Notice of an application by Shama Rao for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಸರ್ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ 86.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಬಳೇಪೇಟೆಯಲ್ಲಿ ಯಿರುವ ಬಿ. ಶಾಮರಾವ್ ಮತ್ತು ಬಿ. ಶೇಷಗಿರಿರಾವ್ ಸಹ ಲೇಟ ಮೈಸೂರು ಸುಬ್ಬಣ್ಣನ ಲೇಣಿ 950 ರೂಪಾಯಿಗಳನ್ನು ಬರಮಾಡಿಕೊಳ್ಳತಕ್ಕ ಬಗ್ಯೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ಡಿಶಂಬರ ತಿಂಗಳು 20ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಡಬಹುದು.

Notice of an application by Gurumallamma for a certificate under Act XXVII of 1860.

ಸರ್ 1876ನೇ ಇಸವಿ ಸಿವಿಲ್ ಫೂಟ ಮಿಸಲೇನಿಯಸ್ ನಂಬರ 87.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಬಳ್ಳಾಪುರದ ಪೇಟೆಯಲ್ಲಿ ಯಿರುವ ಪಾತೀಪಟ್ಟಿ ಬಸಣ್ಣನ ಹೆಂಡತಿ ಗುರಮ್ಮನು ತನ್ನ ಗಂಡ ಬಸಣ್ಣನ ಲೇಣಿ 950 ರೂಪಾಯಿಗಳನ್ನು ಬರಮಾಡಿ ಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1876ನೇ ಇಸವಿ ಡಿಶಂಬರ ತಿಂಗಳು 21ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಡ ಬಹುದು.

ಬತಾರೀಖು 6ನೇ ಡಿಶಂಬರ 1876ನೇ ಇಸವಿ ಮೊಕ್ಕಾಂ ಬೆಂಗಳೂರು.

Notice of an application by Channabasappa for a certificate under Act XXVII of 1860.

ಸರ್ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ 89.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯಲ್ಲಿ ಯಿರುವ ಚನ್ನಬಸಪ್ಪನೆಂಬವನು ತನ್ನ ತಂದೆ ಚಿಕ್ಕವೀರಣ್ಣನ ಲೇಣಿ 500 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ 1877ನೇ ಇಸವಿ ಜನವರೀ ತಿಂಗಳು 9ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಡ ಬಹುದು.

ಬತಾರೀಖು 11ನೇ ಮಾಹೇ ಡಿಶಂಬರ 1876ನೇ ಇಸವಿ ಮೊಕ್ಕಾಂ ಬೆಂಗಳೂರು.

L. RICKETTS,
Offg. Dy. Commr.

KOLAR DISTRICT.

Notice of an application by Babamma for a certificate under Act XXVII of 1860.

ಕೋಲಾರ ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಬಳ್ಳಾಪುರದಲ್ಲಿರುವ ಪರೆಸಂದ್ರದ ಗಾರೇಕೆಲಸದ ಪೋತಲಪ್ಪನ ಹೆಂಡತಿ ಬಾಬಮ್ಮನೆಂಬವಳು ಫೌತೀಪಟ್ಟ ತನ್ನ ಗಂಡನ ಹೆಸರಿನಲ್ಲಿರುವ ಉದ್ರಿಗಳ ಬಾಬತು 100 ರೂಪಾಯಿಗಳು ವಸೂಲ್ ಮಾಡಿ ಕೊಳ್ಳಲು 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜೀಯು 1877ನೇ ಇಸವಿ ಜನವರೀ 20ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತೆಯಾಗಿ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ದಿವಿ 11 ಘಂಟೆಗೆ ಕೋರ್ಟು ಯಿರುವ ಸ್ಥಳಕ್ಕೆ ಬಂದು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು ನೇ ಡಿಶಂಬರ್ 1876ನೇ ಇಸವಿ ಮೊಕ್ಕಾಂ ಕೋಲಾರ.

P. N. Purnaiya,
For Offg. Dy. Commr.

TUMKUR DISTRICT.

Notice of an application by Venkatamma for a certificate under Act XXVII. of 1860.

ತುಮಕೂರು ಡಿ|| ಡೆ|| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ತುಮಕೂರು ತಾಲ್ಲೂಕು ಕಸಬಾ ತುಮಕೂರು ಗ್ರಾಮದ ವಾಸಸ್ಥನಾಗಿ ಯಿದ್ದ ಫೌತೀಯಾದ ಜೂ|| ಗು|| ನರಸಿಹ್ಮಾಚಾರಿ ಯೆಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 1000 ರೂಪಾಯಿಗಳು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ ಈತನ ಹೆಂಡತಿ ವೆಂಕಟಮ್ಮ ಯೆಂಬುವಳು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1877ನೇ ಇಸವಿ ಜನವರೀ ತಿಂಗಳು 22ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್‍ಯಾರಾದರೂ ಯಿದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 9ನೇ ಮಾಹೆ ಡಿಶಂಬರ್ 1876ನೇ ಇಸವಿ ಮೊಕ್ಕಾಂ ತುಮಕೂರು.

T. E. Woodcock,
For Offg. Dy. Commr.

ASHTAGRAM DIVISION.

Notice of an application by Chik Papanna for a certificate under Act XXVII of 1860.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮೈಸೂರಲ್ಲಿರುವ ವರ್ತಕ ಚಿಕ್ಕಪಾಪಣ್ಣನು ನೀಲಗಿರೀ ಮುದ್ದಣ್ಣನ ಸುಮಾರು 50,000 ರೂಪಾಯಿ ಲೇಣೆ ಬರಮಾಡಿಕೊಳ್ಳತಕ್ಕ ಬಗ್ಗೆ ಸರ್ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸರ್ 1876ನೇ ಇಸವಿ ಡಿಶಂಬರ್ 22ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಸದರೀ ಲೇಣೇಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

Notice of an application by Muddappa for a certificate under Act XXVII of 1860.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮೈಸೂರಲ್ಲಿರುವ ಸಾಹುಕಾರ ಮುದ್ದಪ್ಪ ತಮ್ಮ ತಂದೆ ಸಾಹುಕಾರ ದೊಡ್ಡಮಲ್ಲಣ್ಣನ 30,000 ರೂಪಾಯಿ ಲೇಣೆ ಬರಮಾಡಿಕೊಳ್ಳತಕ್ಕ ಬಗ್ಗೆ ಸರ್ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸರ್ 1876ನೇ ಇಸವಿ ಡಿಶಂಬರ್ ತಿಂಗಳು 22ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆಯಾಗಲ್ಪಡುತ್ತೆಯಾಗಿ ಸದರೀ ಲೇಣೇಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ತಾರೀಖು 28ನೇ ಮಾಹೇ ನವಂಬರ್ 76ನೇ ಇಸವಿ.

A. C. Hay,
Commissioner.

MYSORE DISTRICT.

Notice of an application by Dod Hutcha for a certificate under Act XXVII of 1860.

ಮೈಸೂರು ಡಿಸ್ಟ್ರಿಕ್ಟ ಡೆ॥ ಕ॥ ಕೋರ್ಟಿನಿಂದ.

ಸರ್ 1876ನೇ ಇಸವಿ ಶಿವಿಲ್ ಫ್ರೂಟ ಮಿಸಲೇನಿಯಸ್ ನಂ. 89.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ತಮ್ಮ ಚಿಕ್ಕ ಹುಚ್ಚನಿಗೆ ಬರಬೇಕಾದ 350 ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಪಾಲಹಳ್ಳಿ ಕಸಬೇಯಲ್ಲಿರುವ ದೊಡ್ಡಹುಚ್ಚ ನೆಂಬುವನು ಕೊಟ್ಟಿರತಕ್ಕ ಅರ್ಜೀಯನ್ನ ಡಿಶಂಬರ ಮಾಹೇ ತಾರೀಖು 12ರಲ್ಲು ಹಿಯರಿಂಗ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕ ದಿಧೆ.

Notice of an application by Pavadi Gauda for a certificate under Act XXVII of 1860.

1876ನೇ ಇಸವಿ ಶಿವಿಲ್ ಫ್ರೂಟ ಮಿಸಲೇನಿಯಸ್ ನಂಬರ 90.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫೌತೀಯಾದ ತನ್ನ ತಂದೆ ಬಸವೇಗೌಡನಿಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಬಳಗುಳದ ಹೋಬಳೀ ಪೈಕೀ ಕಾರೇಪುರದ ಗ್ರಾಮದಲ್ಲಿ ಯಿರುವ ಪವಾಡಿಗವುಡನೆಂಬುವನು ಕೊಟ್ಟಿರತಕ್ಕ ಅರ್ಜೀಯನ್ನ ಡಿಶಂಬರ ಮಾಹೇ ತಾರೀಖು 12ರಲ್ಲು ಹಿಯರಿಂಗ ಮಾಡುವದ್ದರಿಂದ ಯಿದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕ ದಿಧೆ.

Notice of an application by Amrutamma for a certificate under Act XXVII of 1860.

ಸರ್ 1876ನೇ ಇಸವಿ ಸಿವಿಲ್ ಫ್ರೂಟಮಿಸಲೇನಿಯಸ್ ನಂಬರ 91.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫೌತೀಯಾದ ತನ್ನ ಗಂಡ ರಾಮಲಿಂಗ ಮೊದಲೀಗೆ ಬರಬೇಕಾದ 500 ರೂಪಾಯಿಗಳನ್ನು ವಸೂಲ್ಮಾಡಿಕ್ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಫಿಕೇಟ ಆಗಬೇಕೆಂದು ಅಷ್ಟಗ್ರಾಮದ ತಾಲ್ಲೂಕು ಗಂಜಾಂದಲ್ಲಿ ಯಿರುವ ಅಮೃತಮ್ಮ ನೆಂಬುವಳು ಕೊಟ್ಟಿರತಕ್ಕ ಅರ್ಜೀಯನ್ನ ಡಿಶಂಬರ ಮಾಹೇ ತಾರೀಖು 12ರಲ್ಲು ಹಿಯರಿಂಗ ಮಾಡುವದ್ದರಿಂದ ಇದರಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕ್ಕೊಳ್ಳತಕ್ಕ ದಿಧೆ.

ತಾರೀಖು 20ನೇ ಮಾಹೇ ನವಂಬರ 1876ನೇ ಇಸವಿ.

SHANMUGAVELU PILLE,
For Dy. Commr.

HASSAN DISTRICT.

Notice of an application for land for coffee cultivation.

ಹಾಸನ ಡಿಸ್ಟ್ರಿಕ್ಟ ಡೆ॥ ಕ॥ ಕಚ್ಚೇರಿಯಿಂದ.

ಮಂಜಿರಾಬಾದ್ ತಾಲ್ಲೂಕು ಹೆತ್ತೂರು ಹೋಬಳಿ ಅತ್ತಿಗನಹಳ್ಳಿ, ಗ್ರಾಮಕ್ಕೆ ಶೇರಿದ ದೊಡ್ಡಕುಮರಿ ಯಂಬ ಜಾಗಾ.

ಯಿಧರ ಚಕ್ಕುಬಂದಿ.

ಪೂರ್ವಕ್ಕೆ—ಬಸವೇಗೌಡನ ರಾಗಿ ಹೊಲ.
ದಕ್ಷಿಣಕ್ಕೆ—ಕರಡಿದಿಬ್ಬಾ ಯಂಬ ದಿಣ್ಣೆ.
ಪಶ್ಚಿಮಕ್ಕೆ—ಈರೇಗೌಡನ ಹಸುರುವಾಣಿ ಹಿತ್ತಲ್ ಯರಡು ಬಾಂದು.
ಉತ್ತರಕ್ಕೆ—ನಂಬರ 34ನೇ ಭಾವಿಗದ್ದೇವತ್ತು, ಬಸವನ ಗದ್ದೆಗೆ ಹೋಗುವ ದಾರಿ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 518 ದಕ್ಷಿಣೋತ್ತರ ಸರಾ ಸರಿ 58 ಸಲಿಗಜ 30044ಕ್ಕೆ ಯಕರೆ 6 ರೋಡ 0 ಫೋಲ್ 33 ಗಜ 5¾ ವುಳ್ಳದ್ದು ಯಿದನ್ನ ತನಿಗೆ ಕಾಫೀ ಸಾಗುವಳಿಗೆ ಕೊಡಿಸಬೇಕೆಂದು ಅತ್ತಿಗನಹಳ್ಳಿ ಗ್ರಾಮದ ಲಿಂಗೇಗೌಡನ

ದ್ಯಾವೇಗೌಡ ನೆಂಬವನು 179ನೇ ನಂಬರ್ ದರಖಾಸ್ತು ಮಾಡಿದ್ದಾನಾಗಿ ಅದಕ್ಕೆ ಬಾಧ್ಯಪಟ್ಟು ಯಿರುವ ಸರ್ವರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ.

ಸದರೀ ಜಮೀನನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವ ಹಕ್ಕುದಾರಿಯನ್ನು ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟೀಸ್ ತಾರೀಖು ಲಗಾಯತು ವಂದು ತಿಂಗಳು ವಳಗಾಗಿ ಡಿ॥ ಮೆ॥ ಕಾಫಿ ಇಂಚಾರ್ಜ ಫಸ್ಟ್ ಅ॥ ಕಮ್ಮಿಷನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬರ್ಯಾ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಫಿರಿಯಾದು ತಂದದ್ದಾದರೆ ಅದು ಮಂಜೂರ್ ಆಗಲರಿಯದು ತಿಳಿಯುವದು.

ಸ್ಪೈರ್ ತಾರೀಖು 2ನೇ ಡಿಶಂಬರ್ 1876ನೇ ಇಸವಿ ಮೊಕ್ಕಾಂ ಹಾಸನ.

ಸಮಸ್ತ ಜನರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ,— ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಹೆರೂರು ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಸಾಗುವಳಿಗೆ ಯೋಗ್ಯವಾದ ಜಮೀನಿನ ಹಿಡುವಳಿಯನ್ನು ಮುಂದೆ ಏರ್ಪಾಡಾಗುವ ನಿಬಂಧನೆಗೆ ವಳಗಾಗತಕ್ಕದೆಂಬ ಷರತ್ತಿನ ಮೇಲೆ ಟೆಂಪರರಿಯಾಗಿ ಅದೇ ಸ್ಥಳದಲ್ಲಿ ಬರುವ ಸರ್ 1877ನೇ ಇಸವಿ ಜನವರೀ ತಾರೀಖು 20ನೇ ಹಗಲು 11 ಘಂಟೆ ಲಗಾಯತು 4 ಘಂಟೆ ವರೆಗೂ ಹರಾಜು ಹಾಕಿಸಲ್ಪಡುತ್ತೆ ಯಿಛೆವುಳ್ಳ ಜನರು ಆಕಾಲದಲ್ಲಿ ಪೋಟಾಪೋಟಿ ಯಿಂದ ಚಡ್ ದರಖಾಸ್ತು ಮಾಡಿ ಪಡಿಯ ಬಹುದು.

ಹರಾಜಿನ ಷರತ್ತುಗಳನ್ನು ಹರಾಜು ಮಾಡಿಸುವ ಆಫಿಸರ್ ಆ ಕಾಲದಲ್ಲಿ ಕೂಡಿದ ಜನರಿಗೆ ರೂಬರೂ ತಿಳಿಸ್ಯಾರು.

ಯಿದಕ್ಕಾಗಿ ದರಖಾಸ್ತು ಮಾಡುವದಕ್ಕೆ ಯಿಚ್ಛೆವುಳ್ಳ ಜನರು ಜನವರೀ ತಾರೀಖು 15ರ ವರಿಗೂ ನಮ್ಮ ಆಫಿಸಿನ ಹೆಸರಿಗೆ ದರಖಾಸ್ತುಗಳನ್ನ ಬರದುಕೊಳ್ಳುತ್ತಾ ಬರಬಹುದು. ಆದರೆ ದರಖಾಸ್ತು ಬರದುಕೊಂಡಂಥಾವರು ಹರಾಜು ಕಾಲದಲ್ಲಿ ಆ ಸ್ಥಳದಲ್ಲಿ ಹಾಜರ್ ಯಿರಬೇಕು, ಅದಕ್ಕೆ ತಪ್ಪಿದರೆ ಅಂಥವರ ದರಖಾಸ್ತನ್ನ ಮಂಜೂರ್ ಮಾಡತಕ್ಕ ಅಥವ ತಿರಸ್ಕರಿಸತಕ್ಕ ಅಧಿಕಾರವು ಡಿಪ್ಯುಟಿ ಕಮ್ಮಿಷನರವರನ್ನ ಹೊಂದಿದೆ.

ಗರ್ಜೆಕೂಲು ಗುಂಡಿಯುಂಬ ಜಂಗಲ್ ಜಮೀನ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಪಶ್ಚಿಮಕ್ಕೆ ಸಹಾ ದಿಣ್ಣೆ.
ದಕ್ಷಿಣಕ್ಕೆ—ದಿಣ್ಣೆ ಅಂದರೆ ಕರಂಕಟ್ಟೆ ಮರಟಿ ಯಂಬ ಬೆಟ್ಟದ ನೆತ್ತಿ ದಿಣ್ಣೆ.
ಉತ್ತರಕ್ಕೆ—ದನ ತಿರುಗುವ ದಾರಿ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 200 ದಕ್ಷಿಣೋತ್ತರ 232 ಸಲಿಗಜ 46400ಕ್ಕೆ ಎಕರೆ 9 ರೋಡ್ 2 ಪೋಲ್ 13 ಗಜ $26\frac{1}{4}$.

ಸಮಸ್ತ ಜನರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಹೆರೂರು ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗುವ ಕಾಫೀ ಸಾಗುವಳಿಗೆ ಯೋಗ್ಯವಾದ ಜಮೀನಿನ ಹಿಡುವಳಿಯನ್ನು ಟೆಂಪರರಿಯಾಗಿ ಮುಂದೆ ಯೇರ್ಪಾಡಾಗುವ ನಿಬಂಧನೆಗೆ ವಳಗಾಗತಕ್ಕದ್ದೆಂಬ ಷರತ್ತಿನ ಮೇಲೆ ಮುಂದೆ ಬರುವ ಸರ್ 1877ನೇ ಇಸವೀ ಜನವರೀ ತಾರೀಖು 23ನೇ ಹಗಲು 11 ಘಂಟೆ ಲಗಾಯಿತು 4 ಘಂಟೆವರೆಗೂ ಅದೇ ಸ್ಥಳದಲ್ಲಿ ಹರಾಜು ಹಾಕಿಸಲ್ಪಡುತ್ತೆ. ಯಿಚ್ಛೆವುಳ್ಳ ಜನರು ಆ ಕಾಲದಲ್ಲಿ ಪೋಟಾಪೋಟೀಯಿಂದ ಛಡದರಖಾಸ್ತು ಮಾಡಿ ಪಡೆಯಬಹುದು.

ಹರಾಜಿನ ಷರತ್ತುಗಳನ್ನು ಆ ಕಾಲದಲ್ಲಿ ಕೂಡಿದ ಜನರಿಗೆ ಹರಾಜ್ ಮಾಡಿಸುವ ಆಫಿಸರರು ರೂಬರೂ ತಿಳಿಸ್ಯಾರು.

ಯಿದಕ್ಕಾಗಿ ದರಖಾಸ್ತು ಮಾಡುವದಕ್ಕೆ ಯಿಚ್ಛೇವುಳ್ಳ ಜನರು ಜನವರಿ ತಾರೀಖು 17ರ ವರಿಗೂ ನಮ್ಮ ಆಫಿಸಿನ ಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು. ಆದರೆ ದರಖಾಸ್ತು ಬರದುಕೊಂಡಂಥಾವರು ಹರಾಜು ಕಾಲದಲ್ಲಿ ಆಸ್ಥಳದಲ್ಲಿ ಹಾಜರು ಯಿರಬೇಕು. ತಪ್ಪಿದರೆ ಅಂಥಾವರ ದರಖಾಸ್ತನ್ನ ಮಂಜೂರ್ಮಾಡತಕ್ಕ ಅಥವ ತಿರಸ್ಕರಿಸುವ ಅಧಿಕಾರವು ಡೆಪ್ಯುಟಿ ಕಮ್ಮಿಷನರವರನ್ನ ಹೊಂದಿದೆ.

ತರಂಕಲ್ಲು ಮರಟಿಯುಂಬ ಹನಾಲ್ ಪ್ರದೇಶ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಬೆಗಾರಿ ದಿಣ್ಣೆ.
ದಕ್ಷಿಣಕ್ಕೆ—ದನ ತಿರುಗುವದಾರಿ.
ಪಶ್ಚಿಮಕ್ಕೆ—ಕೊಡೀಸ್ವಾಮಿ ಬನದವತ್ತು ದರಖಾಸ್ತಿನಲ್ಲಿರುತ್ತೆ. ಹಾಲಿ ಕಲ್ಲರೇದಿಣ್ಣೆ ಸಹಾ ಯಿರುತ್ತೆ. ಯಿದು ಕೋಡಿಸ್ವಾಮಿ ಬನದ ವತ್ತಿ ಆಗಿಧೆ.
ಉತ್ತರಕ್ಕೆ—ದನ ತಿರುಗುವದಾರಿ.

ಈ ಮಧ್ಯೆ ಅಳತೆ. ಪೂರ್ವಪಶ್ಚಿಮ ಗಜ 160 ದಕ್ಷಿಣೋತ್ತರ ಗಜ 160 ಸಲೆಗಜ 25,600ಕ್ಕೆ ಎಕರೆ 5 ರೋಡ್ 1 ಪೋಲ್ 6 ಗಜ $8\frac{1}{2}$ ವುಳ್ಳದ್ದು.

ಸಮಸ್ತ ಜನರಿಗೂ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಹೆರೂರು ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗುವ ಕಾಫೀ ಸಾಗುವಳಿಗೆ ಯೋಗ್ಯವಾದ ಜಂಗಲ್ ಜಮೀನಿನ ಹಿಡುವಳಿಯನ್ನು ಮುಂದೆ ಯೇರ್ಪಾಡಾಗುವ ನಿಬಂಧನೆಗೆ ವಳಗಾಗತಕ್ಕದ್ದೆಂಬ ಷರತ್ತಿನ ಮೇಲೆ ಟೆಂಪರರಿಯಾಗಿ ಅದೇಸ್ಥಳದಲ್ಲಿ ಬರುವ ಸರ್ 1877ನೇ ಇಸವಿ ಜನವರಿ ತಾರೀಖು 22ನೇ ಹಗಲು 11 ಘಂಟೆ ಲಗಾಯಿತು 4 ಘಂಟೆ ವರಿಗೂ ಹರಾಜ್ ಹಾಕಲ್ಪಡುತ್ತೆ. ಯಿಚ್ಛೆ ವುಳ್ಳ ಜನರು ಆ ಕಾಲದಲ್ಲಿ ಪೋಟಾಪೋಟೀಯಿಂದ ಛಡದರಖಾಸ್ತು ಮಾಡಿ ಪಡೆಯಬಹುದು.

ಹರಾಜಿನ ಷರತ್ತುಗಳನ್ನು ಹರಾಜ್ ಮಾಡಿಸುವ ಆಫಿಸರರು ಆ ಕಾಲದಲ್ಲಿ ಕೂಡಿದ ಜನರಿಗೆ ರೂಬರೂ ತಿಳಿಶ್ಯಾರು.

ಯಿದಕ್ಕಾಗಿ ದರಖಾಸ್ತು ಮಾಡುವದಕ್ಕೆ ಯಿಚ್ಛೆವುಳ್ಳ ಜನರು ಜನವರಿ ತಾರೀಖು 17ರ ವರಿಗೂ ನಮ್ಮ ಆಫಿಸಿನ ಹೆಸರಿಗೆ ದರಖಾಸ್ತುಗಳನ್ನ ಬರದುಕೊಳ್ಳುತ್ತಾ ಬರಬಹುದು. ಆದರೆ ದರಖಾಸ್ತು ಬರದುಕೊಂಡಂಥಾವರು ಹರಾಜು ಕಾಲದಲ್ಲಿ ಆ ಸ್ಥಳದಲ್ಲಿ ಹಾಜರು ಯಿರಬೇಕು. ಅದಕ್ಕೆ ತಪ್ಪಿದರೆ ಅಂಥಾವರ ದರಖಾಸ್ತನ್ನ ಮಂಜೂರ್ ಮಾಡತಕ್ಕ ಅಥವ ತಿರಸ್ಕರಿಸತಕ್ಕ ಅಧಿಕಾರವು ಡೆಪ್ಯುಟಿ ಕಮ್ಮಿಷನರವರನ್ನ ಹೊಂದಿದೆ.

ದೊಡ್ಡ ಪೊಬ್ಬೆಯೆಂಬ ಜಾಗ.

ಯಿದರ ಚಕ್ಕುಬಂದಿ.

ಪೂರ್ವ, ಪಶ್ಚಿಮ, ದಕ್ಷಿಣ, ವುತ್ತರ ಈ ನಾಲ್ಕು ದಿಕ್ಕುಗಳಿಗೂ ದಿಣ್ಣೆ,

ಈ ಮಧ್ಯೆ ಅಳತೆ ಪೂರ್ವಪಶ್ಚಿಮಗಜ 60 ದಕ್ಷಿಣೋತ್ತರ 36 ಸಲೆಗಜ 2,160ಕ್ಕೆ ಎಕರೆ 0 ರೋಡ್ 1 ಪೋಲ್ 31 ಗಜ $11\frac{1}{4}$.

ಹರೆಲಿಂಗನ ಕುಮರಿಯೆಂಬ ಜಾಗ.

ಯಿದರ ಚಕ್ಕುಬಂದಿ.

ಪೂರ್ವಪಶ್ಚಿಮ ದಕ್ಷಿಣಕ್ಕೆ ಸಹ ದಿಣ್ಣೆ ಯಿರುತ್ತೆ. ವುತ್ತರಕ್ಕೆ ದಿಣ್ಣೆ ಮತ್ತು ದನದ ದಾರಿಯಿರುತ್ತೆ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 48 ದಕ್ಷಿಣೋತ್ತರ 80 ಸಲೆಗಜ 3,840ಕ್ಕೆ ಎಕರೆ 0 ರೋ|| 3 ಪೋ|| 6 ಗಜ $28\frac{1}{2}$.

Notice of sale of jungles for coffee cultivation.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಹೆತ್ತೂರು ಹೋಬಳಿ ಹಾಡ್ಯದ ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಸಾಗುವಳಿಗೆ ಯೋಗ್ಯವಾದ ಜಂಗಲ್ ಜಮೀನಿನ ಹಿಡುವಳಿಯನ್ನು ಟೆಂಪರರಿಯಾಗಿ ಮುಂದೆ ಯೇರ್ಪಾಡಾಗುವ ನಿಬಂಧನೆಗೆ ವಳಗಾಗತಕ್ಕದ್ದೆಂಬ ಷರತ್ತಿನಮೇಲೆ ಅದೇಸ್ಥಳದಲ್ಲಿ ಬರುವ ಸರ್ 1877ನೇ ಇಸವಿ ಜನವರಿ ತಾರೀಖು 19ನೇ ಹಗಲು 11 ಘಂಟೆ ಲಗಾಯಿತು 4 ಘಂಟೆ ವರಿಗೂ ಹರಾಜ್ ಹಾಕಿಸಲ್ಪಡುತ್ತೆ. ಯಿಚ್ಛೆವುಳ್ಳ ಜನರು ಆ ಕಾಲದಲ್ಲಿ ಪೋಟಾಪೋಟೀಯಿಂದ ಛಡದರಖಾಸ್ತು ಮಾಡಿ ಪಡಿಯಬಹುದು.

ಹರಾಜಿನ ಷರತ್ತುಗಳನ್ನು ಹರಾಜು ಮಾಡಿಸುವ ಆಫಿಸರರು ಆ ಕಾಲದಲ್ಲಿ ಕೂಡಿದ ಜನರಿಗೆ ರೂಬರೂ ತಿಳಿಶ್ಯಾರು.

ಯಿದಕ್ಕಾಗಿ ಯಿಚ್ಛೆವುಳ್ಳ ಜನರು ಜನವರಿ ತಾರೀಖು 14ರ ವರಿಗೂ ನಮ್ಮ ಆಫಿಸಿನ ಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು. ಆದರೆ ದರಖಾಸ್ತು ಬರದುಕೊಂಡಂಥಾವರು ಹರಾಜ್ ಕಾಲದಲ್ಲಿ ಆ ಸ್ಥಳದಲ್ಲಿ ಹಾಜರು ಯಿರಬೇಕು. ತಪ್ಪಿದರೆ ಅಂಥಾವರ ದರಖಾಸ್ತನ್ನ ಮಂಜೂರ್ಮಾಡತಕ್ಕ ಅಥವಾ ತಿರಸ್ಕರಿಸುವ ಅಧಿಕಾರವು ಡೆಪ್ಯುಟಿ ಕಮ್ಮಿಷನರವರನ್ನ ಹೊಂದಿದೆ.

ಬಸರೀಮರದ ಕುಮರಿಯೆಂಬ ಜಾಗಾ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ದನ ಮೇಯುವ ದಿಣ್ಣೆ.

ದಕ್ಷಿಣಕ್ಕೆ—ದಿಣ್ಣೆ ಮತ್ತು ದೊಡ್ಡ ಬಸರೀಮರ.

ಪಶ್ಚಿಮಕ್ಕೆ—ಹೊಲಗೇರಿಗೆ ಹೋಗುವದಾರಿ ಮತ್ತು ದಿಣ್ಣೆ.

ವುತ್ತರಕ್ಕೆ—ಗದ್ದೆ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 200 ದಕ್ಷಿಣೋತ್ತರ ಗಜ 120 ಸಲೆಗಜ 24,000ಕೆ ಎಕರೆ 4 ರೋಡ್ 3 ಪೋಲ್ 33 ಗಜ $8\frac{3}{4}$.

2ನೇ ತಾಕು ಬೆಳ್ಳನಗದ್ದೆ ಕುಮರಿಯೆಂಬ ತಾಕು.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಸುಬ್ಬೇಗೌಡನ ಗದ್ದೆ. ಪಶ್ಚಿಮಕ್ಕೆ—ದನ ಮೇಯುವ ದಿಣ್ಣೆ ಮತ್ತು ದಾರಿ ಸಹಾ. ದಕ್ಷಿಣಕ್ಕೆ—ದನ ಮೇಯುವ ದಿಣ್ಣೆ ಅಡೆ ದರಖಾಸ್ತುದಾರನ ಪಟ್ಟೇಗದ್ದೆ. ಉತ್ತರಕ್ಕೆ—ದರಖಾಸ್ತುದಾರನ ಪಟ್ಟೇ ಗದ್ದೆ.

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ 140 ದಕ್ಷಿಣೋತ್ತರ 52 ಸಲಗಜ 7,280ಕ್ಕೆ ಎಕರೆ 1 ರೋ॥ 2 ಪೋ॥ 0 ಗಜ 20 ಬತಾರೀಖು 4ನೇ ... ೀ ನವಂಬರ್ ಸ್ನ 1876ನೇ ಇಸವಿ ಮೊಕ್ಕಾಂ ಹಾಸನ.

E. P. MALTBY,
Offg. Dy. Commr.

KADUR DISTRICT.

Notice of an application by Mallappashetti for a certificate under Act XXVII of 1860.

ಕಡೂರು ಡಿಸ್ಟ್ರಿಕ್ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬಾಣಾವಾರ ತಾಲ್ಲೂಕು ಕಸಬ ಬಾಣಾವಾರದ ಪೇಟೆ ವಾಸಸ್ತ ಮಲ್ಲಪ್ಪಶೆಟ್ಟಿಯು ಅದೇ ಬಾಣಾವಾರದ ಕಸಬೆಯಲ್ಲಿದ್ದು ಫೌತೀಪಟ್ಟ ತನ್ನ ಚಿಕ್ಕತಂದೆ ತಂಮಣ್ಣಶೆಟ್ಟಿಗೆ ಬರತ ...ಕದ ಮೊಬಲಗು 500 ರೂಪಾಯಿ ವಸೂಲ್ ಮಾಡಿಕೊಡತಕ್ಕ ಬಗ್ಯೆ ಸ್ನ 1860ನೇ ಇಸವಿ 27ನೇ ಆಕ್ಟಪ್ರಕಾರ ತನ್ನ ಹೆಸರಿಗೆ ಸರ್ಟಿಫಿಕೇಟ ಕೊಡಿಸಿಕೊಡಬೇಕೆಂದು ಈ ಕೋರ್ಟಿಗೆ ದಾಖಲ್ ಮಾಡಿರುವ ಅರ್ಜಿಯು ಫೈಸಲ್‌ಬಗ್ಯೆ ಬರುವ ಡಿಶಂಬರ ತಿಂಗಳು 30ನೇ ತಾರೀಖಿನಲ್ಲಿ ನಿಶ್ಚೈಸಿರುವದ್ದರಿಂದ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು.

ತಾರೀಖು 29ನೇ ನವಂಬರ್ 1876ನೇ ಇಸವಿ ಮೊಕ್ಕಾಂ ಚಿಕ್ಕಮಗಳೂರು.

P. KRISHNA RAO,
Dy. Commr.

COORG.

Notice of an application by Puttamma for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟರ ಕೋರ್ಟಿನಿಂದ.

ಸ್ನ 1876ನೇ ಇಸವೀ ಸಿವಿಲ್ ನಾನಾ ವಿಧ ನಂಬರ್ 17.

ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ,—ಯೇಳುಸಾವಿರ ಶೀಮೆ ತಾಲ್ಲೂಕು ಪೈ ೀ ಕೊಡ್ಲಿ ಹೋಬಳಿ ಈಚಲಪುರ ಗ್ರಾಮದಲ್ಲಿರುವ ಶಿ. ಪುಟ್ಟಮ್ಮನೆಂಬವಳು ಫೌತೀ ತನ್ನ ಗಂಡ ಪಟೇಲ ಚನ್ನವೀರಪ್ಪಗೆ ಹೊರಗಿನಿಂದ ಬರತಕ್ಕ ಸಾಲ 500 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರ್ಟಿಫಿಕೇಟ ಕೊಡಿಸಬೇಕಾಗಿ ದರಖಾಸ್ತುಮಾಡಿರುವ ಮೊಖದ್ದಮೇ ಸ್ನ 1877ನೇ ಇಸವಿ ಜನವರೀ ತಾರೀಖು 10ನೇ ದಿನ ಹಗಲು 11 ಘಂಟೆಗೆ ಈ ಕೋರ್ಟು ಮೊಕ್ಕಾಂನಲ್ಲು ಹಿಯರಿಂಗಾಗುವದರಿಂದ ಇದಕ್ಕೆ ಯಾರಾದರೂ ಹಕ್ಕುದಾರ್‍ರಿದ್ದರೆ ಸದರೀ ತಾರೀಖಿನ ದಿನ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸಬಹುದು.

ತಾರೀಖು 28ನೇ ನವಂಬರ್ ಸ್ನ 1876ನೇ ಇಸವಿ.

Notice of an application by Ere Gauda for a certificate under Act XXVII of 1860.

ಸ್ನ 1876ನೇ ಇಸವೀ ಶಿವಿಲ್ ನಾನಾ ವಿಧವಾದ ನಂಬರ್ 18.

ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ, ಯೇಳುಸಾವಿರ ಶೀಮೆ ತಾಲ್ಲೂಕು ಕೊಡ್ಲಿ ಹೋಬಳಿ ಕೂಡ್ಲುರು ಗ್ರಾಮದಲ್ಲಿರುವ ಶಿ. ಈರೇಗೌಡನೆಂಬವನು ಫೌತೀ ತನ್ನ ಅಂಣ ಈರೇಗೌಡನಿಗೆ ಹೊರಗಿನಿಂದ ಬರತಕ್ಕ ಸಾಲ 250 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರ್ಟಿಫಿಕೇಟ ಕೊಡಿಸಬೇಕಾಗಿ ದರಖಾಸ್ತುಮಾಡಿರು

ವೆ. ಮೊಕದ್ದಮೇ ಸರ್ 1877ನೇ ಇಸವಿ ಜನವರೀ ತಾರೀಖು 10ನೇ ದಿನ ಹಗಲು ಘಂಟೆ 11ಕ್ಕೆ ಕೋರ್ಟು ಮೊಕ್ಕಾಂನಲ್ಲಿ ಫಯಿ ಸಲಾಗುವದರಿಂದ. ಯಿದಕ್ಕೆ ಯಾರಾದರೂ ಹಕ್ಕುದಾರು ಯಿದ್ದರೆ ಸದರೀ ತಾರೀಖಿನ ದಿನ ಕೋರ್ಟಿನ ರೂಬರೂ ಹಾಜರಾಗಿ ವ್ಯವಹ ರಿಸಬಹುದು.

Notice of an application by Lingachari for a certificate under Act XXVII of 1860.

ಸನ್ 1876ನೇ ಇಸವೀ ಶಿವಿಲ್ ನಾನಾ ವಿಧವಾದ ನಂ. 19.

ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ.—ಯೇಳುಸಾವಿರ ಶೀಮೆ ತಾಲ್ಲೂಕು ...ದ ಹೋಬಳಿ ಹಿತ್ತಲಕೇರಿ ಗ್ರಾಮದಲ್ಲಿ ರುವ ಅಕ್ಕಸಾಲಿ ಲಿಂಗಾಚಾರಿ ಯಂಬವನು ಘಾತೀ ತನ್ನ ತಂದೆ ಕುಮಾರಾಚಾರಿ ಯಂಬವನಿಗೆ ...ರಗಿನಿಂದ ಬರತಕ್ಕ ಸಾಲ 200 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯ ಸರಟಿಫಿಕೇಟ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೇ ಸರ 1877ನೇ ಇಸವಿ ಜನವರೀ ತಾರೀಖು 10ನೇ ದಿನ ...ಗೆ ಕೋರ್ಟು ಮೊ ಕ್ಕಾಮಿನಲ್ಲಿ ಫಯಿಸಲಾಗುವದ್ದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರು ಯಿದ್ದರೆ ಸದರೀ ತಾರೀಖಿನ ... ಹಾಜರಾಗಿ ವ್ಯವಹರಿಸ ಬಹುದು.

ಬತಾರೀಖು 29ನೇ ನವಂಬರ 1876ನೇ ಇಸವಿ.

E. Shaw,
Offg. Supt.

ಸನ್ 1876ನೇ ಇಸವಿ ನವಂಬರ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಶುದ್ಧಾಂಗ ಮಳೆ ಯಿಲ್ಲದೆ ಹೋಯಿತು. ಕೆಲವು ಸ್ಥಳಗಳಲ್ಲಿ ಅತ್ಯಲ್ಪವಾಗಿ ಮಳೆ ಬಿತ್ತು. ಯಾವ ಸ್ಥಳದೊಳಗೂ 40 ಸೆಂಟಗಿಂತ ಹೆಚ್ಚಾಗಿ ಆಗಲಿಲ್ಲವು, ಕೆರೆಗಳೆಲ್ಲ ಬಹಳಮಟ್ಟಿಗೆ ಒಣಗಿಹೋದವು, ಅಥವಾ ನೀರು ವಿಶೇಷವಾಗಿ ಕಡಮೆಯಾಗಿ ಹೋಗಿ ವೆ, ಮತ್ತು ಜನಗಳು, ಕಾಲ್ನಡೆಗಳು ನೀರಿಗೂ, ಆಹಾರಕ್ಕೂ ಬಹಳ ಕಷ್ಟಪಡುತ್ತಾರೆ.

ಬೆಳೆ—ಈಗ ಯಾವ ಫಸಲೂ ಬೆಳೆಯುಲ್ಲಿರುವದಿಲ್ಲವು. ಬೆಳೆ ಚನ್ನಾಗಿ ಆಗಿರುವದಿಲ್ಲ. ಕೆಲವು ವಳಗೆರೆಗಳಲ್ಲಿ ಜವರೆ ಮತ್ತು ಕಡ್ಲೆ ಪೈರಾವಾಗಿರುತ್ತವೆ, ಆದರೆ ಕೆಲವು ಸ್ಥಳಗಳಲ್ಲಿ ಕಡ್ಲೆ ಫಸಲು ಮೊಳೆಕೆಯಾದಕೂಡಲೆ ವಣಗಿಹೋದ್ದಾಗಿಯೂ ಅಥವಾ ನ ಷ್ಟವಾಗಿ ಹೋದ್ದಾಗಿಯೂ ರಿಪೋರ್ಟಾಗಿರುತ್ತೆ. ಈ ತಿಂಗಳಲ್ಲಿ ಜವರೆ, ಕಡ್ಲೆ, ಗಸಗಸೆ ಪೈರಾವಾದವು, ರಾಗಿ, ಪುಣಜಿ ಭತ್ತಾ, ಹಾರಕ ಕಟಾವಾದವು.

ನಿರಖು—ನಿರಖು ಬಹಳ ಚಡಾವಾಗಿರುತ್ತೆ.

ಆರೋಗ್ಯ—ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ಚಳೀ ಜ್ವರ ಮತ್ತು ಅಮಶಂಕೆ ವ್ಯಾಪಿಸಿರುತ್ತೆ, ಮತ್ತು ಬೆಂಗಳೂರು, ಹೊಸ ಕೋಟೆ, ಮಾಗಡಿ, ಆನೇಕಲ್ ತಾಲ್ಲೂಕುಗಳಲ್ಲಿ ಕೈಜುಲಾಬ್ ವ್ಯಾಪಿಸಿರುತ್ತೆ.

ಮರಣ—496 ಮಂದಿ ಹೋದರು ಕಳೆದ ಅಕ್ಟೋಬರ್ ತಿಂಗಳಲ್ಲಿ 413 ಮಂದಿ ಹೋದರು.

ಕಾಲ್ನಡೆ—ನಾನಾ ಕಾರಣಗಳಿಂದ 2,274 ಕಾಲ್ನಡೆಗಳು ಹೋದವು, ಅಕ್ಟೋಬರ್ ತಿಂಗಳಲ್ಲಿ 2,690 ಕಾಲ್ನಡೆಗಳು ಹೋ ದವು. ಈಚಿಗೆ ಮೇವು ನೀರು ವದಗದೆ ಬಹಳ ಕಾಲ್ನಡೆಗಳು ಹೋದವು. ಮೇಲೆ ಕಂಡ ಜಾನವರ್‌ಗಳ ಪೈಕೀ 31 ಕಾಡು ಮೃಗ ಗಳಿಂದ ಕೊಲ್ಲಲ್ಪಟ್ಟವು.

ಜಪ್ತಿ—346—11—9 ರೂಪಾಯಿಗಳು ಕಂದಾಯ ವುಳ್ಳ ಜಪ್ತಿ ಸಾಗುವಳೀಗಾಗಿ ತೆಗದುಕೊಳ್ಳಲ್ಪಟ್ಟವು.

L. Ricketts,
Offg. Dy. Commr.

ಕೋಲಾರ ಡಿಸ್ಟ್ರಿಕ್ಟ್.

ಹವಾ.—ನವಂಬರ್ ತಿಂಗಳಿಗೆ ಸರಾಸರಿ 72½ ಸೆಂಟ್‌ಗಳ ಮಳೆ ಆಗಿರುತ್ತೆ ಆ ಹಿಂದಿನ ತಿಂಗಳಲ್ಲಿ 34½ ಸೆಂಟ್‌ಗಳ ಮಳೆ ಬಿತ್ತು ಹವಾ ಆಕ್ಟೋಬರ್ ತಿಂಗಳಲ್ಲಿ ಯಿದ್ದಂತೆಯೇ ಚನ್ನಾಗಿ ಇರಲಿಲ್ಲ. ಸ್ವಲ್ಪ ಹೆಚ್ಚಾಗಿ ಮಳೆ ಬಿದ್ದಾಗ್ಯೂ ರಾಗಿ, ಭತ್ತ ಈ ಫಸಲ್‌ಗಳಿಗೆ ಅಕಾಲ ವರ್ಷವಾಯಿತು.

ಜರ್ಮಾನೆಗಳು.—ರಾಜೀನಾಮೆ ಯಾವದೂ ಬರಲಿಲ್ಲ 598—3—8 ರೂಪಾಯಿಗಳ ಕಂದಾಯ ವುಳ್ಳ ಜರ್ಮಾನೆಗಳು ಹೊಸದಾಗಿ ಸಾಗುವಳೀಗೆ ತೆಗದುಕೊಳ್ಳಲ್ಪಟ್ಟಿತು.

ಫಸಲ್.—ಜೋಳ, ಕಡಲೆ ಇವು ಕೆಲವು ತಾಲ್ಲೂಕುಗಳಲ್ಲಿ ಪೇರಾವಾದವು. ಹಾರಕ, ಸಾಮೆ, ರಾಗಿ, ಭತ್ತ ಸಹ ಬದನ್ನೂರು ಕೆಲವು ಕಡೆಗಳಲ್ಲಿ ಕಟಾವಾದವು. ಬೆಳೆಯಲ್ಲಿ ಯಿರತಕ್ಕ ಫಸಲ್‌ಗಳು ಮಳೆ ಯಿಲ್ಲದೆ ವಣಗುತ್ತಿದೆ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿಯೇ ಯಿರುತ್ತದೆ ಆದರೆ ಹಿಂದಿನ ತಿಂಗಳಿಗಿಂತ ಜ್ವರ ಹೆಚ್ಚಾಗಿಯೂ ಉಖಾಲ್ ಜುಲಾಬ್ ಕಡಿಮೆಯಾಗಿಯೂ ಯಿರುತ್ತದೆ ಉಖಾಲ್ ಜುಲಾಬಿನಿಂದ 5 ಮಂದಿ ಹೋಗಿರುತ್ತಾರೆ ಆ ಹಿಂದಿನ ತಿಂಗಳಲ್ಲಿ 18 ಮಂದಿ ಹೋದರು. ಇತರ ಕಾರಣಗಳಿಂದ ಆದ ಮರಣಗಳ ತಪಶೀಲ್.

	ಅಕ್ಟೋಬರ್‌ನಲ್ಲಿ.	ನವಂಬರಿನಲ್ಲಿ.		ಅಕ್ಟೋಬರ್‌ನಲ್ಲಿ.	ನವಂಬರ್‌ಲ್ಲಿ.
ಜ್ವರದಿಂದ	239	256	ಆಕಸ್ಮಿಕ ವ ಘಾಯಪಟದ್ದರಿಂದ	18	13
ಹೊಟೆಸುಗ್ಗಿನಿಂದ	39	56	ಇತರರೋಗಗಳಿಂದ	149	161
ಶಿಡುಬಿನಿಂದ	11	10	ಕುಲ್ ಜನನವಾದದ್ದು	..	255

ದನಗಳು —ಅಕ್ಟೋಬರಿಗಿಂತ ನವಂಬರ್ ತಿಂಗಳಲ್ಲಿ ಬಹಳವಾಗಿ ಹೋಯಿತು. ಅಂದರೆ 40,28 ಹೋಗಿರುತ್ತವೆ ಆ ಹಿಂದಿನ ತಿಂಗಳಲ್ಲಿ 3448 ಹೋದವು.

	ಅಕ್ಟೋಬರ್.	ನವಂಬರ್.		ಅಕ್ಟೋಬರ್.	ನವಂಬರ್.
ಆಕಳುಗಳು ವ ಯೆತ್ತುಗಳು	1418	1274	ಕುದುರೆಗಳು	8	29
ಯೆಮ್ಮೆಕೋಣಗಳು	430	514	ಕತ್ತೆಗಳು	27	55
ಕುರಿ ವ ಮೇಕೆಗಳು	1565	2156			

ಧಾರಣೆ.—ಧಾರಣೆವಾಸಿ ಹೆಚ್ಚು ಕಡಿಮೆ ಆಗುತ್ತಾ ಯಿದೆ.

S. VENKAT VARDAIENGAR,
Offg. Dy. Commr.

ತುಮಕೂರು ಡಿಸ್ಟ್ರಿಕ್ಟ್.

ಮಳೆ—ಸದರೀ ತಿಂಗಳಲ್ಲಿ ಬಹಳ ಸ್ವಲ್ಪವಾಗಿ ಮಳೇ ಆಯಿತು. ಕ್ವಾರ್ಟರ್‌ಗಳಲ್ಲಿ 4 ಸೆಂಟ್‌ಸ್ ಮಳೆ ಬಿದ್ದಂತೆ ಅಳೆಯಲ್ಪಟ್ಟಿತು.

ಫಸಲ್—ಕಳೆದ ತಿಂಗಳಲ್ಲಿ, ಕೊರಟಗೆರೆ, ಮದ್ದಗಿರಿ, ಶೀರ, ಕಡಬ ಈ ತಾಲ್ಲೂಕುಗಳಲ್ಲಿ ಜೋಳ ಪೇರಾವಾಯಿತು. ಕಡಬದ ತಾಲ್ಲೂಕಿನಲ್ಲಿ ಕಡಲೆ ಪೇರಾವಾಗಿರುತ್ತದೆ. ಖುಷ್ಕೀ ಧಾನ್ಯಗಳ ಪೈಕೀ ಅವರೆ, ತೊಗರಿ, ಹುರಳಿ ಕೆಲವು ಸ್ಥಳಗಳಲ್ಲಿ ಕೆಲವುಮಟ್ಟಿಗೆ ಚನ್ನಾಗಿಇಧೆ. ತರೀ ಫಸಲ್ ಸಾಧಾರಣವಾಗಿಧೆ ನಾಟಿ ರಾಗಿ, ಅವರೆ, ತೊಗರಿ, ಅಡಿಕೆ, ಗನ್ನಾ ಈ ಫಸಲ್‌ಗಳು ಸದರೀ ತಿಂಗಳಲ್ಲಿ ಕಟಾವಾಯಿತು.

ಜನಾರೋಗ್ಯ—ಸರ್ವತ್ರ ಚನ್ನಾಗಿಯೇ ಇಧೆ. ಯಲ್ಲ ಕಾರಣಗಳಿಂದಲೂ 491 ಮಂದಿ ಸತ್ತುಹೋಗಿರುತ್ತಾರೆ. ಆ ಹಿಂದಿನ ತಿಂಗಳಲ್ಲಿ 417 ಮಂದಿ ಹೋದರು. ದನಗಳಲ್ಲಿ 10,800 ಸತ್ತು ಹೋದವು. ಆ ಹಿಂದಿನ ತಿಂಗಳಲ್ಲಿ 16,000 ಹೋದವು.

ಜರ್ಮಾನೆಗಳು—ಸದರೀ ತಿಂಗಳಲ್ಲಿ 158—0—5 ರೂಪಾಯಿಗಳ ಕಂದಾಯದ ಜರ್ಮಾನುಗಳು ಹೊಸದಾಗಿ ತೆಗದುಕೊಳ್ಳಲ್ಪಟ್ಟವು.

ಧಾರಣೆ—ಧಾರಣೆವಾಶಿ ಚಡಾಇಸುತ್ತಲೇಇಧೆ.

J. RAMAIYA,
For Offg. Dy. Commr.

ಮೈಸೂರು ಡಿಸ್ಟ್ರಿಕ್ಟು.

ಎಲ್ಲೆಲ್ಲಿಯೂ ಮಳೆ ಆತುರ ಬಹಳವಾಗಿ ಇಧೆ.
ಮಳೆ—ಡಿಸ್ಟ್ರಿಕ್ಟ ಪೈಕಿ 3 ತಾಲ್ಲೂಕುಗಳಲ್ಲಿ ಕುಲ್ಲು 58 ಸೆಂಟಿಸ್ ಮಳೆ ಬಿತ್ತು. ಕಳೆದ ತಿಂಗಳಲ್ಲಿ
ಬೆಳೆ—ಮಳೆ ಇಲ್ಲದೆ ಖುಷ್ಕಿ ಫಸಲಗಳು ಒಣಗಿ ಹೋದವು. ಭತ್ತಾ ಕೆಲವು ಕಡೆಗಳಲ್ಲಿ ಕಟಾವಾಗುತ್ತಿಧೆ.
ಪೇರಾವಾದ ಹುರಳಿ ಕಡ್ಲೆ ಹತ್ತಿ ಬೀಜಗಳು ಮೈಸೂರು ತಲಕಾಡು ಮಂಡ್ಯ ಮಳವಳ್ಳಿ ಈ ತಾಲ್ಲೂಕುಗಳಲ್ಲಿ ಒಣಗಿ ಹೋದವು.

ಆರೋಗ್ಯ—ಜನಾರೋಗ್ಯವು ಸಾಧಾರಣವಾಗಿ ಚನ್ನಾಗಿರುತ್ತೆ. ಆದರೆ ಮೈಸೂರು ಗುಂಡ್ಲುಪೇಟೆ ಯಡತೊರೆ ಪಿರಿಯಾಪಟ್ಣ ಈ ತಾಲ್ಲೂಕುಗಳಲ್ಲಿ ಜ್ವರವೂ ಯಡತೊರೆ ಪೆರಿಯಾಪಟ್ಣದಲ್ಲಿ ವುಕಾಲ್ ಜುಲಾಬ್ ವ್ಯಾಪಿಸಿರುತ್ತೆ. ವುಕಾಲ್ ಜುಲಾಬ್‌ನಿಂದ ಮೃತಪಟ್ಟ 147 ಮಂದಿ ದೇಖಿಲ್ ಖುಲ್ಲು 657 ಮಂದಿ ಸತ್ತರು.

ಜಾನವರ—ಗೋಮಾರೀರೋಗದಿಂದ 165 ಕಾಲ್ನಡೆಗಳು 2281 ಇತರರೋಗಗಳಿಂದ ಸತ್ತವು.

ನಿರಕ್—ಆಹಾರ ಜಿನಿಸೀಗಳ ನಿರಕ್‌ಗಳು ಜಡಾವಾಗುವ ಹಾಗೆ ಕಾಣುತ್ತಾ ಹೆಚ್ಚುಸುತ್ತಾ ತಗ್ಗುತ್ತಾ ಇಧೆ.

C. J. PEARSE,
Dy. Commr.

ಪ್ರಕಟನೆ.

ತಿರುಚಿನಾಪಲ್ಲಿ, ತಾರೀಖು 5ನೇ ಡಿಶಂಬರ 1876.

ಇದರಿಂದ ಸಮಿಾಪಿಸಿ ಇರುವ (ಕೊಟಾರ್) ಉತ್ಸವಕ್ಕೋಸ್ಕರ ಶ್ರೀರಂಗಕ್ಕೆ ಹೋಗಬೇಕೆಂದು ಅಪೇಕ್ಷಿಸುವ ಜನಗಳಿಗೆ ಎಚ್ಚರಿಸುವದೇನಂದರೆ, ದಾರಣೆವಾಸಿ ಬಹಳ ಜಡಾಯಿಸಿದೆ ತಿರುಚಿನಾಪಲ್ಲಿ ಡಿಸ್ಟ್ರಿಕ್ಟಿನಲ್ಲಿ ಉಖಾಲ್ ಜುಲಾಬ್ ತಗಲಿ ಯಿರುತ್ತೆ.

H. SEWELL,
Ag. Collector.

MYSORE GOVERNMENT PRESS, BANGALORE—1876.

608

ಮೈಸೂರ ಗೆಜೆಟ್.

ನಂ. 51 ಸರ್ಕಾರದಿಂದ ಛಾಯಿಪ್ ಆದ್ದು. ಸನ 1876.

ಬೆಂಗಳೂರು, ಶನಿವಾರ, ಡಿಶಂಬರ ತಾ|| 2. ಸ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ರಮೆಂಟನವರ ಇಸ್ತಿಹಾರ್ ನಾಮೆಗಳು. .. .. .. 331—337 ಪುಟ

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕಾಂಟೆಂಟ್ ಜನರಲ್ಲವರು, ಮಣಿ ಆರಡರ ಕಂಟ್ರೋಲರು, ಪಬ್ಲಿಕ ವರಕ್ಸ ಆಫಿಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ ಇನಸ್ಪೆಕ್ಟರ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ ಕನಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿವಿಜನ ಚಾರ್ಜ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪ್ರೈವೇಟು ನೋಟಿಸಗಳು. .. 605—614

3ನೇ ಭಾಗ—ಇಂಡ್ಯ ಗವರ್ರಮೆಂಟನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. .. 43— 48

4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.—

ಸಪ್ಲಿಮೆಂಟ್—ಪುಪನಿಬಂಧನೆ—ಅರವ, ಹಿಂದುಸ್ತಾನಿ. .. ..

1ನೇ ಭಾಗ.

ಮೈಸೂರು ಚೀಪ್ ಕಮ್ಮಿಷನರವರಿಂದ ಕೊಡೋಣಾದ್ದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 320. ತಾರೀಖು 14ನೇ ಡಿಶಂಬರ 1876.

ಪೂರ್ವದಲ್ಲಿ ಕೊಟ್ಟ ಹುಕ್ಕುಂ ತಿದ್ದುಪಡಿಸ್ಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಮೈಸೂರು ವ ಕೊಡಗು ಶೀಮೆಗಳಲ್ಲಿ ಸರಕಾರ ಆಫಿಸಗಳು ಕ್ರಿಸ್ಟಮಸ್ ರಜಾ ದಿನಗಳ ಬಗ್ಯೊ ಹೊಸ ಸಂವತ್ಸರದ ಮೊದಲನೇ ದಿನದ [illegible] ದಿದ ಮಹಾರಾಣೀಯವರು ಇಂಡ್ಯ ಚಕ್ರವರ್ತಿನಿಯೆಂಬ ಬಿರದನ್ನು [illegible] ದ [illegible] ಬಗ್ಯೆ [illegible] ಡಿಶಂಬರ 25ನೇ ಮರ್ಕ್ಕಂ ಸೋಮವಾರದ ಲಗಾಯತು 1877ನೇ ಇಸವಿ ಜನವರಿ 4ನೇ ಮರ್ಕ್ಕಂ ಗುರುವಾರ [illegible] ಬಂಧನೆಗೆ [illegible] ಲ್ಪಡುವವು.

2. ಮೈಸೂರು ಶೀಮೆಯ ಪ್ರಕೃತ ಸ್ಥಿತಿಯನ್ನು ನಿಗೆಯಲ್ಲಿ ತಂದು ಅಫಿಷಿಯೇಟಿಂಗ್ ಚೀಫ್ ಕಮ್ಮಿಷನರ್ ಸಾಹೇಬರವರು ಅಪ್ಪಣೆ ಕೊಡಿಸುವದೇನಂದರೆ,—ಮೇಲೆ ವಿಧಿಸಲ್ಪಟ್ಟ ಸಮುದಾಯವಾದ ರಜಾ ಇದರಡಿ ನಮೂದಿಸಲ್ಪಡುವ ಆಫಿಸರ್‌ಗಳು ತೆಗದುಕೊಳ್ಳಲಿಕ್ಕೆ ಆಗುವದಿಲ್ಲವು. ಯಾತಕಂದರೆ ಅವರ ಕೆಲಸಗಳು ಅವರವರ ಉದ್ಯೋಗದಲ್ಲಿ ಅವರವರು ಯಿರಬೇಕಾದ ಆವಶ್ಯಕತೆಯನ್ನು ಉಂಟುಮಾಡಿರುತ್ತೆ. ಈ ಆಫಿಸರಗಳ ವಿಷಯದಲ್ಲಿ ಕ್ರಿಸ್ಟಮಸ್ ದಿನ ಹೊಸ ಸಂವತ್ಸರಾದಿ ಮಾತ್ರ ರಜಾಕೊಡಲ್ಪಟ್ಟಿವೆ.

ಡಿವಿಜನ್ ಕಮ್ಮಿಷನರ್‌ಗಳು.
ಡಿಸ್ಟ್ರಿಕ್ಟ್ ಡಿಪ್ಯುಟಿ ಕಮ್ಮಿಷನರ್‌ಗಳು.
ಪಬ್ಲಿಕ್ ವರಕ್ಸ್ ಇಲಾಖಾ ಕಾರಬಾರೀ ಆಫಿಸರ್‌ಗಳು,
ಜನೆರೆಲ್ ಡ್ಯೂಟಿಮೇಲೆ ಇರತಕ್ಕ ಅ॥ ಕಮ್ಮಿಷನರ್‌ಗಳು.
ಟ್ರೆಜರಿ ಅಥವಾ ಜೆಯಿಲ್ ಚಾರ್ಜಿನಲ್ಲಿರುವ ಜುಡಿಷಯಲ್ ಅಸಿಸ್ಟಂಟ್ ಕಮ್ಮಿಷನರ್‌ಗಳು.
ಪೊಲೀಸ್ ಆಫಿಸರ್‌ಗಳು,
ಮುನಸಿಫರುಗಳು.
ತಾಲ್ಲೂಕು ಅಮಲ್‌ದಾರ್‌ಗಳು.

3. ಸದರೀ ರಜಾ ದಿನಗಳಲ್ಲಿ ಸರಕಾರ ಕೆಲಸಕ್ಕೆ ಯೆಷ್ಟರ ಕಾಲ ಖಜಾನೆಗಳು ಖುಲ್ಲಾ ಯಿರತಕ್ಕ ಜರೂರಿರುತ್ತೋ ಅಷ್ಟರಕಾಲ ಖುಲ್ಲಾ ಯಿರುವ ಬಗ್ಯೆ ಡಿಪ್ಟಿ ಅಕ್ಕೌಂಟೆಂಟ್ ಜನರಲ್‌ಯವರು ಚೀಫ್ ಇಂಜಿನಿಯರ್ ವ ಡಿಸ್ಟ್ರಿಕ್ಟ್ ಆಫಿಸರ್‌ಗಳು ಯಿವರುಗಳೊಂದಿಗೆ ಕಾಗದಪತ್ರಗಳು ನಡಿಸಿ ಏರ್ಪಾಡು ಮಾಡತಕ್ಕದ್ದು.

4. ಸರಕಾರ ಕೆಲಸದ ಜರೂರೀಯಾತಿಗೆ ತಕ್ಕಂತೆ ಅವರವರ ಆಫಿಸ್ ತಾಬೇದಾರಿ ಉದ್ಯೋಗಸ್ತರು. ಸಾಂಕ್ಷನ್ ಆದ ರಜಾದಿನಗಳ ಪೈಕಿ ವೊಂದು ಭಾಗವನ್ನಾಗಲಿ ಸಂಪೂರ್ಣವಾಗಿಯಾಗಲಿ ಉಪಯೋಗಿಸಿಕೊಳ್ಳಲಿಕ್ಕೆ ಅವರಿಗೆ ಅಪ್ಪಣೆ ಕೊಡತಕ್ಕ ಅಂಶವು ಇಲಾಖೆಗಳ ಮೊಖ್ತೇಸರರ ಮತ್ತು ಡಿಸ್ಟ್ರಿಕ್ಟ್ ಆಫಿಸರರ ಯಕ್ತ್ಯಾರೀಯಲ್ಲಿರುತ್ತೆ.

ನಂ. 335. ತಾರೀಖು 16ನೇ ಡಿಶಂಬರ 1876.

ರೈತರಿಂದ ಬಟಾಯಿಯಲ್ಲಿ ಸಾಗುವಳಿ ಮಾಡಲ್ಪಡುವ ಜಮೀನು ಹುಟ್ಟುವಳಿಯಲ್ಲಿ ಸರಕಾರದ ಹಿಸ್ಸೆಗೆ ಬೆಲೇ ಕಟ್ಟತಕ್ಕ ಬಗ್ಯೊ ಅದನ್ನು ಬಿಕರೀ ಮಾಡತಕ್ಕ ಬಗ್ಯೊ ಯೇರ್ಪಡಿಸಲ್ಪಟ್ಟ ಯಿದರಡಿ ನಮೂದಿಸಲ್ಪಡುವ ನಿಬಂಧನೆಗಳು ಸರ್ವರ ತಿಳುವಳಿಕೆ ಬಗ್ಯೆ ಘಾಯಿಷ್ ಮಾಡಲ್ಪಡತಕ್ಕದ್ದೆಂದು ಚೀಫ್ ಕಮ್ಮಿಷನರ್ ಸಾಹೇಬರವರು ಅಪ್ಪಣೆ ಕೊಡಿಸುತ್ತಾರೆ.

ನಿಬಂಧನೆಗಳು.

ಬಟಾಯಿ ಪದ್ಧತಿಯೊಂದಿಗೆ ಕೂಡಿರತಕ್ಕ ಅಕ್ರಮಗಳನ್ನು ಅಡ್ಡಿಪಡಿಸತಕ್ಕ ಉದ್ದೇಶದೊಡನೆ ಮತ್ತು ಕ್ರಮೇಣ ಬಟಾಯಿ ಜಮೀನುಗಳು ಕಂದಾಯಕ್ಕೆ ಮೊಕರರ್ ಆಗುವ ವರಿಗೂ, ಬಟಾಯಿಯಲ್ಲಿ ಮಾಡಲ್ಪಟ್ಟ ತರೀ ಫಸಲ್‌ನಲ್ಲಿ ಸರಕಾರ ಹಿಸ್ಸೆಗೆ ಬೆಲೆಕಟ್ಟತಕ್ಕ ಬಗ್ಯೊ ಅದನ್ನು ಬಿಕರೀ ಮಾಡತಕ್ಕ ಬಗ್ಯೊ ಯೇರ್ಪಡಿಸಲ್ಪಟ್ಟ ಯಿದರಡಿ ಬರುವ ನಿಬಂಧನೆಗಳು ಸರ್ವರ ತಿಳುವಳಿಕೆ ಬಗ್ಯೆ ಘಾಯಿಷ್ ಮಾಡಲ್ಪಟ್ಟಿವೆ.

1. ಬಟಾಯಿ ಪಡಂಬಡಿಕೆ ಮೇಲೆ ಸಾಗುವಳಿಗೆ ಅಪ್ಪಣೆ ಕೊಡಲ್ಪಟ್ಟ ದರೋಬಸ್ತು ಸಂಗತಿಗಳಲ್ಲಿಯೂ ಪ್ರತಿ ಕೆರೆ ಕೆಳಗೆ ಬೀಜಪೇರಾದ ಜಮೀನಿನ ವಾಜಬೀ ಬೀಜವರಿಯು ಶ್ಯಾನುಭೋಗನಿಂದ ಪೈಮಾಯಿಷೀ ಮಾಡಿಸುವದರ ಮೂಲಕ ಕರಾರು ವಾಕಾ ತಿಳಿಯಲ್ಪಟ್ಟು A (ಯೆ.) ನಮೂನೆಯಲ್ಲಿ ವೊಂದು ರಿಟರ್ನು ಪಟೇಲ್‌ನಿಂದಲೂ, ಶೇಕದಾರನಿಂದಲೂ, ಅಡ್ಡ ರುಜು ಮಾಡಲ್ಪಟ್ಟು ಬೀಜಪೇರಾದ ತಾರೀಖಿನಿಂದ [illegible] ದಿನಗಳೊಳಗಾಗಿ ಅಮಲ್‌ದಾರ್ರವರಿಗೆ ಕಳುಹಿಸಲ್ಪಡತಕ್ಕದ್ದು.

2. ಕೆರೆ ಕೆಳಗೆ ಸಾಗುವಳಿ ಮಾಡಲ್ಪಟ್ಟ ಜಮೀನು 5 ಖಂಡಗಕ್ಕಿಂತ್ತಲೂ ಕಮ್ಮಿಯಿರುವ ಸಂಗತಿಗಳಲ್ಲಿ ನಿಲುವು ಬೆಳೆ ಪಕ್ವಕ್ಕೆ ಬರುವ ತರುಣದಲ್ಲಿ ಅಂದರೆ 4 ತಿಂಗಳ ಬೆಳೆ ಆದಾಗ ಅದರ ಬೆಲೆ ಮಾತಬರಿ ಪಂಚಾಯಿತರ ಸಹಾಯದೊಡನೆ ಶ್ಯಾನುಭೋಗನಿಂದಲೂ ಪಟೇಲನಿಂದಲೂ ಅಂದಾಜು ಕಟ್ಟಲ್ಪಟ್ಟು ಸದರೀ ಅಂದಾಜು ಪಟ್ಟಿಯು B (ಬಿ.) ನಮೂನೆಯಲ್ಲಿ ಶೇಕದಾರರಿಂದ ಅವರು ಬರಿಯಲಿಕ್ಕೆ ಬಿಯಿಸುವ ಯಾವ [illegible]ರಾಗಳನಿಶೆ ಅಡ್ಡರುಜು ಮಾಡಲ್ಪಟ್ಟ ಬಳಿಕ ಅಮಲ್‌ದಾರ್ರವರಿಗೆ ಕಳುಹಿಸಲ್ಪಡತಕ್ಕದ್ದು.

[illegible] ಅಂದಾಜುಪಟ್ಟಿಯು ಕಳುಹಿಸಲ್ಪಟ್ಟ ಮೇಲೆ ಅದು ತಾಲ್ಲೂಕು ಕಚೇರಿಯಲ್ಲಿ ಪರಿಶೋಧಿಸಲ್ಪಟ್ಟು ತದನಂತರ ಅಮಲ್ದಾರರು, ಹರಾಜ್ [illegible] ಸಾಗುವಳೀ ಆಗಿರತಕ್ಕ ಜಮೀನು ಬೀಜವರೀ, ಫಸಲ್ ಪೈಕೀ ಸರಕಾರದ ಹಿಸ್ಸೆಯ ಅಂದಾಜು ಬೆಲೆ ವಸ್ತು ಹರಾಜ್ [illegible] ಮತ್ತು ಬೀಜವರಿ ಯಾ ಬೆಲೆ ಅಂದಾಜ್ ಕರಾರುವಾಕಾ ಯಿರುವ ಬಗ್ಯೆ ಸರಕಾರದವರು ಜವಾಬ್ದಾರರಲ್ಲವೆಂದುನ್ನು [illegible] ಕರಾರು ವಾಕಾ ಆಗದಲ್ಲವೆಂದು ತಿಳೆಯು ಬಂದ ನಿಮಿತ್ತದ ಮೇಲೆ ಮುಜರಬಗ್ಯೆ ಯಾವ ದಾವೆಯೂ ಅಂಗೀಕರಿ[illegible] ವೊಂದು ಕಲಂ, ಯಿವುಗಳನ್ನು ನಮೂದಿಸಿ ವೊಂದು ಹರಾಜ್ ಇಸ್ತಿಹಾರ್ ಕೊಡತಕ್ಕದ್ದು.

ಬೆಳೆ ಮಾರಲ್ಪಡತಕ್ಕ ಸ್ಥಳದಲ್ಲಿಯು, ಬಟಾಯಿ ಜಮೀನ್ ಯಾವ ಗ್ರಾಮಕ್ಕೆ ಸೇರಿ ಯಿರುತ್ತೋ ಆ ಗ್ರಾಮದಲ್ಲಿಯೂ ಆಸ್‌ಪಾಸ್ ಗ್ರಾಮಗಳಲ್ಲಿಯೂ ತಾಲ್ಲೂಕು ಕಸಬೆಯಲ್ಲಿಯೂ ಆಜೂಬಾಜ್ ತಾಲ್ಲೂಕುಗಳ ಕಸಬೆಗಳಲ್ಲಿಯೂ ಸದರೀ ಇಸ್ತಿಹಾರ್ ದಂಡೋರೆ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು. ಮತ್ತು ಬರಹದಲ್ಲಿ ವೊಂದು ನೋಟೀಸ್ ಗ್ರಾಮದ ಪೊಲೀಸ್ ಚಾವಡಿಯಲ್ಲಿ ಚಿಕಟಾಯಿಸಲ್ಪಡತಕ್ಕದ್ದಲ್ಲದೆ ತಾಲ್ಲೂಕು ಕಚ್ಚೇರಿಯಲ್ಲಿ ಬಹಿರಂಗವಾದ ಜಾಗಾದಲ್ಲಿ ಸಹಾ ಚಿಕಟಾಯಿಸಲ್ಪಡತಕ್ಕದ್ದು.

4. ಮೇಲೆ ತಿಳಿಸಲ್ಪಟ್ಟ ಪ್ರಕಾರ ವೊಂದು ಇಸ್ತಿಹಾರ್ ಘಾಯಿಷ್ ಮಾಡಲ್ಪಟ್ಟ ತಾರೀಖು ಲಗಾಯತು ಅಥವಾ ಪಕ್ಷ 15 ದಿನಗಳು ಕಳದು ಹೋಗುವ ಪರಿಯಂತ ಹರಾಜು ನಡಿಸಲ್ಪಡ ಕೂಡದು.

5. ಹರಾಜಿಗೆ ಗೊತ್ತಾದ ದಿನ ಅಮಲ್ದಾರ್ರಾಗಲಿ ಶಿರಸ್ತೇದಾರರಾಗಲಿ, ಪೇಷ್ಕಾರರಾಗಲಿ, ಅಬುಗ್ಯೆ ಡೆಪ್ಯುಟಿ ಕಮ್ಮಿಷನರ್‌ಯವರಿಂದ ಅಧಿಕಾರ ಕೊಡಲ್ಪಡುವ ತಾಲ್ಲೂಕಿನ ಇತರ ಯಾವ ಉದ್ಯೋಗಸ್ಥನಾಗಲಿ ಹರಾಜು ಸ್ಥಳಕ್ಕೆ ಹೋಗಿ ನಿಲುವು ಬೆಳೇ ಪೈಕೀ ಸರಕಾರದ ಹಿಸ್ಸೆಗೆ, ಅರ್ಜ ಬಾಜಾರ ನಿರಖಿಗೆ ಶೇಕಡಾ 10ರ ಪ್ರಕಾರ ಕಮ್ಮಿಯಿಂದ ಅವ್ವಲ್ ಬೆಲೆ ಠರಾಯಿಸಿ ಹರಾಜು ಹಾಕಿಸತಕ್ಕದ್ದು. ಫಸಲು ಛಡದರಖಾಸ್ತುದಾರನಿಗೆ ಬಿಡಲ್ಪಡತಕ್ಕದ್ದು, ಮತ್ತು ಆತನ ದರಖಾಸ್ತಿ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಕೂಡ್ಲೆ ಠೇವಣಿ ಕಟ್ಟತಕ್ಕದ್ದೆಂದು ಆತನಿಗೆ ಆಜ್ಞಾಪಿಸತಕ್ಕದ್ದು. ಹಾಗೆ ಠೇವಣಿ ಮೊಲಗ್ ಕೊಡಲಿಕ್ಕೆ ತಪ್ಪಿದರೆ ಆ ಸ್ವತ್ತು ಪುನಶ್ಚ ಕೂಡ್ಲೆ ಹರಾಜು ಮಾಡಲ್ಪಟ್ಟು ಅವ್ವಲ್ ಖರೀದೀದಾರನ ಅವಗುಣಕ್ಕೆ ಪುನಶ್ಚ ವಿಕ್ರಯಿಸಲ್ಪಡತಕ್ಕದ್ದು. ಹರಾಜಿನಲ್ಲಿ ದರಖಾಸ್ತುದಾರರು ಯಾರು ಯಿಲ್ಲದೆಯೂ ಅಥವಾ ಸರಿಯಾದ ಮೊಬಲಗಿಗೆ ದರಖಾಸ್ತು ಬಾರದೆಯೂ ಯಿರುವ ಸಂಗತಿಗಳಲ್ಲಿ 2 ವ 3ನೇ ನಿಬಂಧನೆಗಳಿಂದ ವಿಧಿಸಲ್ಪಟ್ಟ ಪ್ರಥಮ ಕ್ರಮಗಳನ್ನು ಪುನಶ್ಚ ಅವಲಂಭಿಸತಕ್ಕದ್ದು. ಅಂತಾ ನಡವಳಿತದ ದೆಶೆಇಂದ ಉಂಟಾಗುವ ಸಾವಕಾಶವು ರೈತನ ಯಾ ಸರಕಾರದ ಪ್ರಯೋಜನಗಳಿಗೆ ಹಾನಿಕರವಾಗಿರುವ ಪಕ್ಷದಲ್ಲಿ, ಆ ಫಸಲು ಸರಕಾರ ಉದ್ಯೋಗಸ್ತರಿಂದ ಕಟಾವು ಮತ್ತು ಮಾಲೀಸ್ತಿ ಮಾಡಿಸಲ್ಪಟ್ಟು ಆ ಪೈಕಿ ಸರಕಾರ ಹಿಸ್ಸೆಯು ಅಮಲ್ದಾರರ ಯಾ ಡಿಪ್ಯುಟಿ ಕಮ್ಮಿಷನರವರ ಹುಕ್ಕುಂ ಮೇರೆ ಶೇಕದಾರನಿಂದ ವಿಕ್ರಇಸಲ್ಪಡತಕ್ಕದ್ದು. ಪ್ರತಿ ಸಂಗತಿಯಲ್ಲಿಯೂ ನಡದ ಹರಾಜು ತಪಶೀಲ್‌ಗಳು B. ನಮೂನೆಯಲ್ಲಿ ಬರಿಯಲ್ಪಡತಕ್ಕದ್ದು. ಸದರೀ ಬಗ್ಯೆ B. ನಮೂನೆಯನ್ನು ತಾಲ್ಲೂಕಿನಿಂದ ತೆಗದುಕ್ಕೊಂಡು ಪುನಶ್ಚ ಅಮಲ್ದಾರ್ರವರಿಗೆ ಕಳಿಹಿಸತಕ್ಕದ್ದು.

6. ಮೇಲಿನ ಸೆಕ್ಷನ್ನಲ್ಲಿ ನಿಬಂಧಿಸಲ್ಪಟ್ಟ ಪ್ರಕಾರ ಮಂಜೂರಾದ ದರಖಾಸ್ತುದಾರನಿಂದ ಠೇವಣೀ ಮೊಬಲಗ್ ಫಾವತೀ ಆದಮೇಲೆ ಹರಾಜು ನಡಿಸುವ ಆಫೀಸರರು ಆ ಮೊಬಲಗಿಗೆ ವೊಂದು ರಶೀದಿಯನ್ನು ಕೊಡತಕ್ಕದ್ದು. ಮತ್ತು ಖರೀದಿ ಮೊಬಲಗ್ ಪೈಕಿ ಉಳಿದ ಬಾಕಿಯನ್ನು ಖರೀದೀದಾರ ಈ ಕೆಳಗೆ ನಮೂದಿಸಲ್ಪಟ್ಟ ಖಿಸ್ತುಬಂದಿಗಳ ಪ್ರಕಾರ ಫಾವತಿ ಮಾಡುತ್ತಾ ಬಂದಲ್ಲಿ ಆ ಹರಾಜು ಪೂರ್ತಿಯನ್ನು ಹೊಂದುವದು.

ಶೇಕಡಾ 50ರ ಪ್ರಕಾರ ಮೊದಲನೇ ಖಿಸ್ತು ಹರಾಜು ತಾರೀಖು ಲಗಾಯಿತು 30 ದಿನಗಳೊಳಗಾಗಿ ಬಾಕೀ ಉಳಿಯುವ ಶೇಕಡಾ 25ರ ಮೇರೆ ಮೊಬಲಗ್ ಮೊದಲನೇ ಖಿಸ್ತು ಯಾವ ತಾರೀಖಿನಲ್ಲಿ ಸಲ್ಲಬೇಕಾಗಿ ಬರುತ್ತೊ ಆ ತಾರೀಖು ಲಗಾಯಿತು 15 ದಿನಗಳೊಳಗಾಗಿ ಈ ಮೇರೆ ಫಾವತಿ ಮಾಡಲ್ಪಡತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಖಿಸ್ತುಗಳ ಪ್ರಕಾರ ಬಾಕೀ ಮೊಬಲಗ್ ಕ್ರಮವಾಗಿ ಫಾವತಿ ಮಾಡಲಿಕ್ಕೆ ಖರೀದೀದಾರನು ಜಾಮೀನ್ ಕೊಡತಕ್ಕದ್ದು.

7. ಖರೀದಿ ಮೊಬಲಗ್ ಪೂರ್ತ ಫಾವತಿ ಮಾಡಿದಮೇಲೆ ಖರೀದಿ ದಾರನು ಫಸಲ್ ಕಟಾವ್‌ಬಗ್ಯೆ ಅದು ತಕ್ಕಸ್ಥಿತಿಯಲ್ಲಿರುವದನ್ನು ಕುರಿತು ತನಿಗೆ ನೋಟಿಸ್ ಕೊಡಲ್ಪಟ್ಟ ತರುವಾಯ 10 ದಿನಗಳೊಳಗಾಗಿ ಧಾನ್ಯವನ್ನು ಸಂಪೂರ್ಣವಾಗಿ ತೆಗದುಕ್ಕೊಂಡು ಹೋಗುವಂತೆ ಅಪ್ಪಣೆ ಕೊಡಲ್ಪಡತಕ್ಕದ್ದು. ಆತನು ಹಾಂಗೆ ಮಾಡಲಿಕ್ಕೆ ತಪ್ಪಿದರೆ ರೈತರು ಫಸಲ್ ಕಟಾವ್ ಮಾಡತಕ್ಕಬಗ್ಯೆ ಅಪ್ಪಣೇ ಕೊಡಲ್ಪಡತಕ್ಕದ್ದು. ಆ ಪೈಕಿ ಖರೀದೀದಾರನ ಹಿಸ್ಸೆಯು ಪುನಶ್ಚ ಮಾರಲ್ಪಟ್ಟು ಹರಾಜ್ ಹುಟ್ಟುವಳಿಯಲ್ಲಿ ಪುನಶ್ಚ ಮಾಡಿದ ಹರಾಜಿಗೆ ತಗಲಿದ ಖರ್ಚು ಜಾತಾ ಬಾಕೀ ಮೊಬಲಗನ್ನು ಸರಕಾರಕ್ಕೆ ಜಮೇ ಕಟ್ಟತಕ್ಕದ್ದು. ಧಾನ್ಯೆ ತೆಗದುಕ್ಕೊಂಡು ಹೋಗತಕ್ಕ ಬಗ್ಯೆ ಪಟೇಲನು ನೋಟಿಸ್ ಕೊಟ್ಟು ಅದರ ಸಮಾಚಾರವನ್ನು ಅಮಲ್ದಾರ್ರಿಗೆ ಕೊಡತಕ್ಕದ್ದು. ಸದರೀ ನೋಟಿಸ್ ಖರೀದಿ ದಾರನಮೇಲಾಗಲಿ, ಆತನ ಮುತಾಲೀಕನಮೇಲಾಗಲಿ ಫಸಲು ಕಾದುಕ್ಕೊಂಡಿರುವ ಆತನ ನೌಕರನಮೇಲಾಗಲಿ ಸಾದರ್ಮಾಡಲ್ಪಡತಕ್ಕದ್ದು. ಅಥವಾ ಫಸಲ್ ಯಿರುವ ಜಮೀನ್ ಸಮೀಪ ವೊಂದು ಬಹಿರಂಗವಾದ ಸ್ಥಳದಲ್ಲಿ ಚಿಕಟಾಯಿಸಲ್ಪಡ ತಕ್ಕದ್ದಲ್ಲದೆ ಮತ್ತೊಂದು ನಕಲ್ ಗ್ರಾಮದ ಚಾವಡಿಗೆ ಚಿಕಟಾಯಿಸಲ್ಪಡತಕ್ಕದ್ದು.

8. ಪ್ರತಿ ಹೋಬಳಿಯಲ್ಲಿ ಹರಾಜುಗಳು ಖೈದಾದಕೂಡ್ಲೆ ಅವುಗಳ ಫಲಿತಾಂಶಗಳ ವೊಂದು ತಖ್ತೆಯು ತಾಲ್ಲೂಕಿನಲ್ಲಿ ತಯಾರ್ಮಾಡಲ್ಪಟ್ಟು ವೊಂದು ರಿಪೋರ್ಟು ಡಿಪ್ಯುಟಿ ಕಮ್ಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು.

9. 5 ಖಂಡಗ ಬೀಜವರಿಗೆ ಜಾಸ್ತಿ ಯಿರುವ ಜಮೀನಿನ ಬಟಾಯಿ ಫಸಲುಗಳ ವಿಷಯದಲ್ಲಿ, ಅವುಗಳ ಬೆಲೆಯು ಪಂಚಾಯಿತರ ಸಹಾಯದೊಡನೆ ಅಮಲ್ದಾರ್ರಿಂದಲಾಗಲಿ, ಶಿರಸ್ತೇದಾರರಿಂದಲಾಗಲಿ, ಪೇಷ್ಕಾರರಿಂದಲಾಗಲಿ ಅಂದ್ಾಜು ಕಟ್ಟಲ್ಪಟ್ಟು ಸದರೀ

ಅಂದಾಜು B ನಮೂನೆಯಲ್ಲಿ ಡಿಪ್ಯುಟಿ ಕಮ್ಮಿಷನರ್ಯವರಿಗೆ ಕಳುಹಿಸಲ್ಪಡತಕ್ಕದ್ದು. ಡಿಪ್ಯುಟಿ ಕಮ್ಮಿಷನ್ನರ್ಯವರು, ಫಸಲಿ ಪೈಕಿ ಸರಕಾರ ಹಿಸ್ಸೆಯನ್ನು 2ರ ಲಗಾಯತು 7ರ ವರೆಗಿನ ನಿಬಂಧನೆಗಳಿಂದ ವಿಧಿಸಲ್ಪಟ್ಟ ರೀತಿಯಾಗಿ ಹರಾಜು ಮಾಡತಕ್ಕ ಬಗ್ಯೆ ಹುಕ್ಕುಂ ಕೊಡತಕ್ಕದ್ದು. ಹರಾಜು ವಾಡಿಕೆಯಾಗಿ ಅಮಲ್‌ದಾರರಿಂದ ನಡಿಸಲ್ಪಡತಕ್ಕದ್ದು. ಅಥವಾ ವಿಶೇಷಸಂಗತಿಗಳಲ್ಲಿ ಸಬ್ ಡಿವೀಜರ್ ಆಫಿಸರಿಂದಲಾಗಲಿ ಇತರ ಅಸಿಸ್ಟೆಂಟರಿಂದಲಾಗಲಿ ನಡಿಸಲ್ಪಡತಕ್ಕದ್ದು. ಎಷ್ಟು ಮೊಬಲಗಿಗೆ ಫಸಲ್ ಮಾರಲ್ಪಟ್ಟಿತೋ ಅದನ್ನು ಕುರಿತು ಒಂದು ರಿಪೋರ್ಟ್ಟು ಕೂಡ್ಲೆ ಡಿಪ್ಯುಟಿ ಕಮ್ಮಿಷನ್ನರವರಿಗೆ ಕಳುಹಿಸಲ್ಪಡತಕ್ಕದ್ದು.

10. ಫಸಲ್ ಅಂದಾಜು ಕಟ್ಟತಕ್ಕ ಅಮಲ್‌ದಾರರು ಯಾ ಇತರ ಉದ್ಯೋಗಸ್ಥರು ಅವರು ಕಟ್ಟತಕ್ಕ ಬೆಲೆ ಸ್ವಲ್ಪ ಹೆಚ್ಚು ಕಡಮೆಯಾಗಿ ಕರಾರುವಾಕಾ ಇರತಕ್ಕಬಗ್ಯೆ ಜವಾಬುದಾರರಾಗಿ ಎಣಿಸಲ್ಪಡುವರೆಂದುನ್ನೂ ಅವರು ಮೋಸ ಯಾ ಬಳಸಂಚು ನಡಿಸಿದ ಸಂಗತಿಗಳಲ್ಲಿ ಅವರ ನಡತೆಯನ್ನು ಕುರಿತು ಪೂರಾ ಆಲೋಚನೆ ಮಾಡಲ್ಪಡುವದೇ ಹೊರ್ತು ಫಸಲ್ ಪುನಃ ಹರಾಜು ಆಗ ಅಪ್ಪಣೆ ಕೊಡಲ್ಪಡುವದಿಲ್ಲವೆಂದು ಸ್ಪಷ್ಟವಾಗಿ ತಿಳಿಯುತಕ್ಕದ್ದು.

11. ಖುಷ್ಕಿ ಯಾ ಬಾಗಾಯತ್ ಬಟಾಯಿ ಸಾಗುವಳಿ ಇನ್ನು ಮೇಲೆ ನಡೆಯಲಿಕ್ಕೆ ಅಪ್ಪಣೆ ಕೊಡಲ್ಪಡಕೂಡದು. ಅಂತಾ ವಿಶಿಷ್ಟ ಜಮೀನ್ಗಳೂ ವುಳಮೆದಾರ್ರಿಗೆ ಮುನಾಸಬ್ ದರದಮೇಲೆ ಕಂದಾಯಕ್ಕೆ ಕೊಡಲ್ಪಡತಕ್ಕದ್ದು.

12. ರಾಜೀನಾಮೆ ಕೊಡಲ್ಪಟ್ಟ ಯಾ ಬಂಜರು ಇರುವ ತರೀ ಯಾ ಖುಷ್ಕಿ ಜಮೀನ್ಗಳಲ್ಲಿ ಬಗರ ಹುಕ್ಕುಂ ಬಟಾಯಿ ಸಾಗುವಳೀ ಮಾಡಲ್ಪಟ್ಟ ಸಂಗತಿಗಳಲ್ಲಿ ಅದಕ್ಕಾಗಿ ವಿಧಿಸಲ್ಪಟ್ಟ ಜುರ್ಮಾನೆಗಳು ಶಿವಾಯಿ ಸರಿಯಾದ ಕಂದಾಯನು ಕಟ್ಟಲ್ಪಡತಕ್ಕದ್ದು.

A ನಮೂನೆ.

ಹೆಸರು.			ಕೆರೆಯ ರಿಜಿಸ್ಟರ್ ನಂಬರ್	ಬಟಾಯಿ ಜಮೀನ್		ಸಾಲ್ ಗುದಸ್ತೆ ಸಾಗುವಳಿ ಬೀಜವರಿ	ಪಟೇಲ್ ವ ಶೇಕದಾರನ ಷರಾಗಳು
ಹೋಬಳಿ	ಗ್ರಾಮ	ಕೆರೆ		ನಂಬರ್	ಬೀಜವರಿ		

B ನಮೂನೆ.

ಹೆಸರು.			ಕೆರೆಯ ರಿಜಿಸ್ಟರ್ ನಂಬರ್.	ಬಟಾಯಿ ಸಾಗುವಳಿ		ಅಂದಾಜು ಮಾಡಲ್ಪಟ್ಟ ಫಸಲಿ	ವಜಾ			ಪೈಕಿ ಸರಕಾರ ಹಿಸ್ಸೆ	ಈಗ ಬಾಜಾರ್ ದರ ಪ್ರಕಾರ ಅಂದಾಜು ಕಿಮ್ಮತ್ತು	ಸಾಗುವಳಿದಾರರ ಬಾಬತ್ತು	ಪಟೇಲ್ ವ ಶೇಕದಾರನಿಂದ ಷರಾ
ಹೋಬಳಿ	ಗ್ರಾಮ	ಕೆರೆ		ಸರ್ವೆ ನಂಬರ್.	ಬೀಜವರಿ		ಬೀಜ ಫಸಲಿ	[illegible]	[illegible]				

ನಂ. 336. ತಾರೀಖು 20ನೇ ಡಿಶಂಬರ್ 1876.

ಆಫಿಷಿಯೇಟಿಂಗ್ ಚೀಫ್‌ಕಮ್ಮಿಷನರ್ ಸಾಹೇಬರವರು ಅಪ್ಪಣೆ ಕೊಡಿಸುವದೇನಂದರೆ 1876ನೇ ಇಸವಿ ಅಕ್ಟೋಬರ್ 26ನೇ ಮುಕ್ಕಾಂ 260ನೇ ನಂಬರ್ ಇಸ್ತಿಹಾರ್‌ನಲ್ಲಿಯೂ ನವಂಬರು 7ನೇ ಮುಕ್ಕಾಂ 275ನೇ ನಂಬರ್ ಇಸ್ತಿಹಾರಿನಲ್ಲಿಯೂ, 15 ರೂಪಾಯಿ ವ ಕಮ್ಮಿ ತಲಬುಳ್ಳ ಉದ್ಯೋಗಸ್ಥರಿಗೆ ಕೊಡಲ್ಪಟ್ಟ ಮಾಹೇನಾ ಒಂದು ರೂಪಾಯಿನ ಜಾಸ್ತೀ ಅಲೌನ್ಸ್ ಕೊಡತಕ್ಕದ್ದೆಂದು ನೇಮಿಸಲ್ಪಟ್ಟ ಕಾಲವು ಮತ್ತೊಂದು 3 ತಿಂಗಳು ಅಂದರೆ 1877ನೇ ಮಾರ್ಚಿ 31ರ ವರಿಗೆ ಬಡಾಯಿಸಲ್ಪಟ್ಟಿರುತ್ತೆ.

ನಂ. 337. ತಾರೀಖು 16ನೇ ಡಿಶಂಬರ್ 1876.

ಬೆಂಗಳೂರು ತಾಲ್ಲೂಕು ಶಿರಸ್ತೇದಾರ್ ಬಿ. ವೆಂಕೈಯನವರು ಮತ್ತೊಂದು ಹುಕ್ಕುಂಕೊಡುವ ಪರಿಯಂತ ಕೋರ್ಟಿಗೆರೆ ತಾ|| 5ನೇ ಗ್ರೇಡ್ ಅಮಲ್‌ದಾರ್‍ರಾಗಿ ಆಕ್ಟಿಂಗ್‌ತರೀಕ್ ಮೊಕರರ್ಮಾಡಲ್ಪಟ್ಟಿರುವದಲ್ಲದೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 19 ವ 22ನೇ ಸೆಕ್ಷನ್‌ಗಳ ಅರ್ಥರೀತ್ಯಾ ಆ ತಾಲ್ಲೂಕಿನಲ್ಲಿ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಮತ್ತು 23ನೇ ಸೆಕ್ಷನ್ ಅನುಸರಿಸಿ, ವಿಚಾರಣೇಬಗ್ಗೆ ಕಮಿಟ್ ಮಾಡತಕ್ಕ ಅಧಿಕಾರವಿನಾ ಮಿಕ್ಕ ಅಧಿಕಾರಗಳು ಸಹಾ ಕೊಡಲ್ಪಟ್ಟಿರುತ್ತಾರೆ.

ನಂ. 338. ತಾರೀಖು 18ನೇ ಡಿಶಂಬರ್ 1876.

ಬೆಂಗಳೂರಲ್ಲಿ ಸೆಂಟ್ರಲ್ ಕಾಲೀಜಿನ ವೈಸ್ ಪ್ರಿನ್ಸಿಪಲ್ಲಾದ ಮೆ|| ಹೋರ್‌ಮಸ್ ಜಿ. ಜಿಹಾಂಗೀರ್ ಬಾಬಾ ಯಂ. ಎ. ಯವರು ಸನ್ 1876ನೇ ಇಸವಿ ನವೆಂಬರ್ 25ನೇ ಮುಕ್ಕಾಂ ಪೂರ್ವಾಹ್ನದಲ್ಲಿ ಬೆಂಗಳೂರಿಗೆ ಬಂದು ತಲಪಿದ್ದಾಗಿ ರಿಪೋರ್ಟು ಮಾಡಿದರು.

ನಂ. 339. ತಾರೀಖು 19ನೇ ಡಿಶಂಬರ್ 1876.

ಚೀತಮಂಗಲ ತಾಲ್ಲೂಕು ಅಮಲ್‌ದಾರ್ ಮುರುಗೇಶ ಮೊದಲ್ಯಾರ್‍ರಿಗೆ 1876ನೇ ಇಸವಿ ಡಿಶಂಬರ್ 2ನೇ ತಾರೀಖು ಲಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಐರ್ಜ ಮುರುಗೇಶ ಮೊದಲ್ಯಾರ್‍ರು ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಭಗವಂತರಾಯರು ಚೀತಮಂಗಲ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 340. ತಾರೀಖು 20ನೇ ಡಿಶಂಬರ್ 1876.

ಹಾಸನ್ ಜುಡಿಶಿಯಲ್ ಅಸಿಸ್ಟೆಂಟ್ ಕಮಿಷನ್ನರ್ ಮೆಸ್ಟರ್ ವಿಜಿಯೇಂದ್ರರಾಯರು ಫಿರ್ಯಾದಿಗಳ ಯಾ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲೀಷ್ ಭಾಷೆಯಲ್ಲಿ ಸ್ವತಃ ತೆಗದುಕ್ಕೊಳ್ಳಲಿಕ್ಕೆ 1872ನೇ ಇಸವಿ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 335ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ನಂ. 341. ತಾರೀಖು 20ನೇ ಡಿಶಂಬರ್ 1876.

ಅಸಿಸ್ಟೆಂಟ್ ಕಮಿಷನ್ನರ್ ಮೆಸ್ಟರ್ ಶ್ರೀನಿವಾಸರಾಯರು ಮೈಸೂರು ಜೈಲ್ ಚಾರ್ಜನ್ನು 1876ನೇ ಇಸವಿ ಡಿಶಂಬರು 11ನೇ ಮುಕ್ಕಾಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕ್ಕೊಂಡರು.

ಸರ್ಜನ್ ಮೆಗ್ರಾತ್‌ಯವರು ಬೆಂಗಳೂರು ಸೆಂಟ್ರಲ್ ಜೇಯಿಲ್ ಚಾರ್ಜನ್ನು ಡಾಕ್ಟರ್ ಹೆಂಡರ್‌ಸನ್‌ಯವರಿಂದ 1876ನೇ ಇಸವಿ ಡಿಶಂಬರ್ 11ನೇ ಮುಕ್ಕಾಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕ್ಕೊಂಡರು.

ನಂ. 342. ತಾರೀಖು 20ನೇ ಡಿಶಂಬರ್ 1876.

ಲೆಪ್ಟಿನೆಂಟ್ ಕರ್ನಲ್‌ಬೆರ್ಸನ್‌ಯವರ ಹಂಗಾಮಿ ಗೈರ್‌ಹಾಜರೀಯಲ್ಲಿ ಬೆಂಗಳೂರು ಟವನ್ ವ ಕಂಟೋನ್‌ಮೆಂಟ್ ಮಾಜಿಸ್ಟ್ರೇಟರ ಕೆಲಸಗಳನ್ನು ನೆರವೇರಿಸುವದಕ್ಕೋಸ್ಕರ ಮತ್ತು ಬೆಂಗಳೂರು ಷಹರ್ ವ ಲಷ್ಕರ್ ಸರಹದ್ದಿನೊಳಗೆ ಚಲಾಯಿಸಲ್ಪಡತಕ್ಕ

ಬಗ್ಯೆ ಮೇಜರ ಕೋಲ್‌ಯವರಿಗೆ 1872ನೇ ಇಸವಿ 10ನೇ ಆಕ್ಟು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು 20ನೇ ಸೆಕ್‌ಷರ್ ಪ್ರಕಾರ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ ಅಧಿಕಾರವು ಅದೇ ಆಕ್ಟು 27 (a) ಸೆಕ್‌ಷರ್ನನಲ್ಲಿ ವಿವರಿಸಲ್ಪಟ್ಟ ಜಾಸ್ತೀ ಅಧಿಕಾರಗಳು ಸಹ ಇದರಿಂದ ಕೊಡಲ್ಪಟ್ಟವೆ.

ನಂ. 343. ತಾರೀಖು 21ನೇ ಡಿಶಂಬರ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ ಸೂಪರ್ರಿಂಟೆಂಡೆಂಟ ಮೆಸ್ಟರ್ ಮೈಕಲ್‌ಜಾರ್ಯುವರು, ವಿಶೇಷ ಕೆಲಸದ ಬಗ್ಯೆ ನಂದಿದುರ್ಗ ಡಿವಿಜರ್ ಕಮ್ಮಿಷನರವರ ತಾಪೇಯಲ್ಲಿ ಯಿರಿಸಲ್ಪಟ್ಟಿರುತ್ತಾರೆ.

ಮೆಸ್ಟರ್ ಮೈಕಲ್‌ಜಾರ್ ಯವರಿಗೆ ತುಮಕೂರು ಡಿಸ್ಟ್ರಿಕ್ಟು ಸರಹದ್ದುಗಳೊಳಗೆ ಚಲಾಯಿಸಲ್ಪಡತಕ್ಕ ಬಗ್ಯೆ, 1872ನೇ ಇಸವಿ 10ನೇ ಆಕ್ಟು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 19ನೇ ಸೆಕ್‌ಷರ್ ಅರ್ಥರೀತ್ಯ ಫಸ್ಟ್ ಕ್ಲಾಸ್ ಮಾಜಿಸ್ಟ್ರೇಟ ಅಧಿಕಾರವೂ 27ನೇ (a) ಸೆಕ್‌ಷರ್ 2 ವ 5ನೇ ಕ್ಲಾಜ್‌ಗಳಲ್ಲಿ ನಮೂದಿಸಲ್ಪಟ್ಟ ಜಾಸ್ತೀ ಅಧಿಕಾರಗಳೂ ಕೊಡಲ್ಪಟ್ಟವೆ ಮತ್ತು ಫಿರ್ಯಾದಿಗಳ ಯಾ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವತಃ ತೆಗದುಕೊಳ್ಳಲಿಕ್ಕೆ ಐದರ್ ಆಕ್ಟಿನ 335ನೇ ಸೆಕ್‌ಷರ್ ಅನುಸರಿಸಿ ಅವರಿಗೆ ಅಪ್ಪಣೆ ಸಹ ಕೊಡಲ್ಪಟ್ಟಿರುತ್ತೆ.

ನಂ. 344. ತಾರೀಖು 21ನೇ ಡಿಶಂಬರ 1876.

ಮೇಜರ ಲಿಂಡ್ಸೆಯವರು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸ್ ಚಾರ್ಜನ್ನು ಮೆಸ್ಟರ್ ರಿಕೆಟ್ಸ್ನೆಯವರಿಂದ 1876ನೇ ಇಸವಿ ಡಿಶಂಬರ 12ನೇ ಮರ್ಕುಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕೊಂಡರು.

ನಂ. 345. ತಾರೀಖು 21ನೇ ಡಿಶಂಬರ 1876.

ಮೆಸ್ಟರ್ S. ವೆಂಕಟವರದೈಯಂಗಾರ್ರವರು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸ್ ಚಾರ್ಜನ್ನು ಮೆಸ್ಟರ್ ಕೃಷ್ಣೈಯ್ಯಂಗಾರ್ರವರಿಂದ ಮಾಹೇ ಮಜಕೂರ 7ನೇ ಮರ್ಕುಂ ಮಧ್ಯಾನ್ಹಾತ್ಪರ ತೆಗದುಕೊಂಡರು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಆಫಿಷಿಯಲ್ ಮಿಮೋರಾಂಡಂ.

ತಾರೀಖು 19ನೇ ಡಿಸಂಬರ 1876.

ಮಾಹೇ ಮಜಕೂರ 30ನೇ ಮರ್ಕುಂ ಶನಿವಾರ ಮೈಸೂರು ಗೆಜೆಟ ಫ್ರಾಯಿಷ್ ಮಾಡಲ್ಪಡುವದಿಲ್ಲವು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ನಾಮೆ.

ನಂ. 13. ತಾರೀಖು 5ನೇ ಡಿಶಂಬರ 1876.

ಈ ಕೆಳಗೆ ಬರುವ ಬೈಲಾಸಿಂಥನೆಯು ಚೀಫ್ ಕಮ್ಮಿಷನರವರಿಂದ ಸಮ್ಮತಿಸಲ್ಪಟ್ಟು ಮಂಜೂರ್ ಮಾಡಲ್ಪಟ್ಟು, ಸಕಲಜನಗಳಿಗೂ ತಿಳಿಯುವಬಗ್ಯೆ ಪ್ರಕಟಿಸಲ್ಪಡುತ್ತೆ.

614

92. ನೇ ಬೈಲಾ.—ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜನನ ಮರಣಗಳನ್ನ ರಿಜಿಸ್ಟರ್ ಮಾಡುವ ಬಗ್ಯೆ, ಈ ಕೆಳಗೆ ಕಂಡ 6 ಡಿವಿಜ್ಹಗಳು ಮಡಿಕೆರೆ ಷಹರಿನಲ್ಲಿ ಕಲ್ಪಿಸಲ್ಪಟ್ಟಿವೆ. ಇಂತಾ ಪ್ರತಿ ಡಿವಿಜನ್ನಿಗೂ ಮ್ಯುನಿಸಿಪೆಲ್ ಬೋರ್ಡಿನವರು ಒಬ್ಬ ಮೆಂಬರನ್ನು ನೊಕರರ್ ಮಾಡಿರುತ್ತಾರೆ. ಸದರೀ ಸರಹದ್ದುಗಳೊಳಗೆ ಸಂಭವಿಸುವ ಪ್ರತಿ ಜನನವನ್ನೂ, ಮರಣವನ್ನು, ತಿಳಿದುಕೊಂಡು ಬರೆದಿಡುವದು ಅವರ ಕೆಲಸವಾಗಿರತಕ್ಕದ್ದು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುವ ದರೋಬಸ್ತು ಜನಗಳೂ, ತಮ್ಮ ತಮ್ಮ ಡಿವಿಜ್ಹಗಳ ಮೆಂಬರ್‌ಗಳಿಗೆ, ತಮ್ಮ ಕುಟುಂಬಗಳಲ್ಲಿ ಯಾ ಮನೆಗಳಲ್ಲಿ ಸಂಭವಿಸುವ ಜನನ ಮರಣಗಳನ್ನು 6 ದಿನಗಳೊಳಗಾಗಿ ರಿಪೋರ್ಟುಮಾಡತಕ್ಕದ್ದೆಂದು ತಾಕೀದ್ ಮಾಡಲ್ಪಟ್ಟಿದ್ದಾರೆ. ಯಾವ ಮನುಷ್ಯನಾಗಲಿ ಹಾಗೆ ಮಾಡುವದಕ್ಕೆ ತಪ್ಪಿದರೆ ಅವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿತಲ್ಪಟ್ಟು ಪ್ರತಿ ತಪ್ಪಿಗೂ ಒಂದು ರೂಪಾಯಿ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬ್ರಾಹ್ಮಣ ಪೇಟೆ ದೊಡ್ಡ ಬೀದಿ ರಾಣೀ ಪೇಟೆ ಬಾನೇ ಮೊಟ್ಟೆ ಗೌಳೀ ಪೇಟೆ ಗಾರೀ ಬೀದಿ.

"ಹುಕ್ಕುಂ ಬಮೋಜೀಬ್,"

T. CLARKE,
Offg. Secretary.

ಇಂಡ್ಯ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇಸ್ತಿಹಾರ್ ನಾಮೆ.

ಜನರಲ್.

ಫಾರಿನ್ ಇಲಾಖಾ.

ತಾರೀಖು 7ನೇ ಡಿಶಂಬರ್ 1876 ಮೊಕ್ಕಾಂ ಫೋರ್ಟವಿಲಿಯಂ.

ನಂ. 2591. G—ಮೈಸೂರು ಕಮ್ಮಿಷನ್ನಿನ ಯಿದರಡಿ ನಮೂದಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್‌ಗಳು ಆ ಸೀಮೆಯಲ್ಲಿ ಅಸಿಸ್ಟೆಂಟರಿಗಾಗಿ ವಿಧಿಸಲ್ಪಟ್ಟ ಪರಿಕ್ಷೆಗಳಲ್ಲಿ ತೇರ್ಗಡೆಯಾಗಿಧಾರೆ.

ಹೈಯ್ಯರ್ ಸ್ಟಾಂಡರ್ಡ್ ಪ್ರಕಾರ.

ನರಸಿಂಹ್ಮಯ್ಯಂಗಾರು.	ಸುಬ್ಬರಾಯರು.
ವಿಜಿಯೇಂದ್ರರಾಯರು.	ಸೈಯದ್ ನಸ್ಸೀರುದ್ದೀನಯವರು.

ಲೋವರ್ ಸ್ಟಾಂಡರ್ಡ್ ಪ್ರಕಾರ.

ಪೂರ್ಣೈಯ್ಯನವರು.	ಆನಂದರಾಯರು.
ಸೈಯದ್ ನಸ್ಸೀರುದ್ದೀನಯವರು.	ಗಣೇಶಿಂಗರು

F. HENVEY,
For Offg. Secy. to the Govt. of India.

615

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 23, ಸನ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 22ನೇ ಡಿಶಂಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಕೊ. ಅ. ರಿ. ಪಿ॥ ೨-೪	ಕಾಶೀಬಾಯಿ ವಗೈರೆ ..	ಅಬ್ದುಲ್ ಖಾದರ್ ಸಾಹೆಬ್ ..	೯ನೇ ಜನವರಿ ೧೮೭೭
ಫ್ರೂಟ್ ಸ್ಪಿ. ಅ. ೧೪	ರಾಮಗಿರಿ ಮಹೇಶಗಿರಿ ಗೋಸಾಯಿ ..	ದೊಂತಿ ಶಿದ್ದರಾಮಶೆಟ್ಟಿ ..	ಡಿಟೋ
ಕ್ರಿ. ಅ. ೯೩	ಕೈದಿ ಮರಿಕೆಂಪೇಗೌಡ ..	.. ..	ಡಿಟೋ
ಸ್ಪಿ. ಅ. ೩೯	ಲಿಂಗಣ್ಣಾ ..	ನಂಜೇಗೌಡ ..	೧೧ನೇ ಡಿಟೋ
ಸ್ಪಿ. ಅ. ೮೬	ಶ್ರೀನಿವಾಸ ರಾಘವಾಚಾರಿ ವಗೈರೆ .	ನರಸಿಹ್ಮಾಚಾರಿ ..	ಡಿಟೋ
ಕ್ರಿ. ಅ. ೯೮	ಕೈದಿ ಹಜಾಮರ ನರಸ ವಗೈರೆ ..	.. ..	ಡಿಟೋ
ಕ್ರಿ. ಪಿಟೀಷನ್ ೨೮	ಕೈದಿ ಬಸವಣ್ಣಾ ..	.. ..	ಡಿಟೋ
ಸ್ಪಿ. ಅ. ೮೪	ಉಸ್ಮಾನ್‌ಸಾಬ್ ..	ಶೇಕ್ ಮುಸ್ತಫಾಸಾಬ್ ..	೧೬ನೇ ಡಿಟೋ
ಕ್ರಿ. ಅ. ೯೬	ಕೈದಿ ಮುದ್ದಾ ವಗೈರೆ ..	.. .	ಡಿಟೋ
ಕ್ರಿ. ಅ. ೯೯	ಕೈದಿ ರಂಗೇಗೌಡ .	.. ..	ಡಿಟೋ
ಸ್ಪಿ. ಅ. ೩೮	ನಾಡಿಗ ಶಾಮಣ್ಣಾ ..	ಕೆಪ್ಟನ್ ವಾನ್‌ಸಾಮರ್‌ನ್ ..	೨೩ನೇ ಡಿಟೋ
ಸ್ಪಿ. ಅ. ೮೫	ವೀರಣ್ಣಾ ..	ಕೆಂಚೈಯ .	ಡಿಟೋ
ಕ್ರಿ. ಅ. ೮೪	ಕೈದಿ ಬೈರಗ ವಗೈರೆ ..	.. ..	ಡಿಟೋ
ಕ್ರಿ. ಅ. ೯೧-೯೨	ಕೈದಿ ವಡ್ಡರಸಿದ್ದಾ ವಗೈರೆ ..	.. ..	ಡಿಟೋ
ಸ್ಪಿ. ಅ. ೮೩	ಸುಮತೇಂದ್ರಸ್ವಾಮಿ ..	ರಾಘವೇಂದ್ರ ಭಾರತೀಸ್ವಾಮಿ ..	೨೫ನೇ ಡಿಟೋ
ಕ್ರಿ. ಅ. ೯೪-೯೫	ಕೈದಿ ಸಂಜೀವ ವಗೈರೆ ..	.. ..	ಡಿಟೋ
ಸ್ಪಿ. ಅ. ೬೯	ವೆಂಕಟರಮಣಪ್ಪಾ ವಗೈರೆ ..	ಡಾಕ್ಟರ್ ಆರ್‌ಸಾಹೆಬರು ವಗೈರೆ ..	೧ನೇ ಫೆಬ್ರುವರೀ
ಸ್ಪಿ. ಅ. ರಿ. ಪಿ. ೬೮-೩೦	ಶಿದ್ದಲಿಂಗಪ್ಪಾ ..	ನಾಚಾ ..	ಡಿಟೋ

J. L. PEARSE,
Ag. Judl. Commr.

ಇನಾಂ ಇಲಾಖಾ.

ನಂ. 12. ತಾರೀಖು 5ನೇ ಡಿಶಂಬರ್ 1876.

ಹಾಸನ ಡಿಸ್ಟ್ರಿಕ್ಟ್ ಹಾಸನ ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಕಸಬಾ ಷಹರ್‌ನಲ್ಲಿ ಇಂನಾ ಸೆಟಲ್‌ಮೆಂಟಿಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಕಟ್ಸ್ಟೋಯವರಿಂದ ನಡಿಸಲ್ಪಟ್ಟು 1877ನೇ ಫೆಬ್ರವರೀ 15ನೇ ಮರ್ಸ್ಕಂನಲ್ಲಿ ಷುರುವಾಗುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಇನಾಂಗಳಿಗೆ ಸಂಬಧವುಳ್ಳ ದರೋಬಸ್ತು ಜನಗಳೂ ರೂಬರೂ ಆಗಲಿ ತಮ್ಮ ಮುತಾಲೀಕರ ಮೂಲಕವಾಗಲಿ ಹಾಜರಾಗಿ ತಮ್ಮ ತಮ್ಮ ಬಾಧ್ಯತೆಗಳನ್ನು ಕುರಿತು ವ್ಯವಹರಿಸುವಂತೆಯೂ ತಮ್ಮಲ್ಲಿರುವ ಸನ್ನದ್‌ಗಳನ್ನೂ ಯಿತರ ದಸ್ತಾವೇಜುಗಳನ್ನೂ ಹಾಜರ್ ಮಾಡುವಂತೆಯೂ ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ. ಹಾಗೆ ಮಾಡದೆ ಹೋದರೆ ಅವರುಗಳ ಇನಾಂಗಳು ಪ್ರಥಮತಃ ಜಪ್ತೀಕೆಳಗೆ ತರಲ್ಪಟ್ಟು ತರುವಾಯ ಆಖ್ಯೆರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

R. A. COLE,
Supt. of Inam Settlements.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ಶಿವಾಯಿ) ಬೆಂಗಳೂರು ಡಿಸ್ಟ್ರಿಕ್ಟ್ ಜಂಗ್ಲೀಗಳ ಬಾಬತು ಅರಗಿನ ಕಂಟ್ರ್ಯಾಕ್ಟು 1877—78,—1878—79,—1879–80, 1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೆಲ್ 1ನೇ ಮರ್ಸ್ಕಂ ಲಗಾಯತ್ 1882ನೇ ಮಾರ್ಚೀ 31ರ ವರಿಗೆ ಡಿಸ್ಟ್ರಿಕ್ಟ್ ವಾರಾಗಿ ಜಡ್ ದರಖಾಸ್ತು ದಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚೀ 10ನೇ ಮರ್ಸ್ಕಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಜಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀ ನೋಟ್‌ಗಳು ಯಾ ನಗದು ಹಣ ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರ್ಯಾಕ್ಟು ಮೊಬಲಗ್ ಪೈಕೀ 60ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರ್ಯಾಕ್ಟು ಕೂಡ್ಲೆ ಪುನಶ್ಚ ಹರಾಜ್ ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರ್ಯಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮರ್ಸ್ಕಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮರ್ಸ್ಕಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮರ್ಸ್ಕಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರ್ಯಾಕ್ಟು ಪೂರೈಸತಕ್ಕ ಕಾಲದ ಆಖ್ಯೆರ್ 6 ಖಿಸ್ತುಗಳಲ್ಲಿ ಸಮಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರ್ಯಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರ್ಯಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನ್‌ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯವಿಲ್ಲದೆಯೇ ಪುನಶ್ಚ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನ್‌ಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

L. RICKETTS,
Offg. Dy. Commr.

Notice of an application by Chabukhan for a certificate under Act XXVII of 1860.

ಬೆಂಗಳೂರು ಡಿ|| ಡೆ|| ಕಮ್ಮಿಷನರವರ ಕೋರ್ಟಿನಿಂದ.

1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ 84.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಲೋಸ್‌ಪೇಟೆ ತಾಲ್ಲೂಕು ಮಾಕಳಿ ಹೋಬಳಿ ಚಾಮನಹಳ್ಳಿಯಲ್ಲಿ ಯಿರುವ ಅಜಮತ್‌ಖಾ ಮಗ ಸತ್ತಾರ್‌ಖಾ ವುರಫ್ ಚಾಬೂಖಾನು ತನ್ನ ಅಂಣ ಮೊದೀನ್‌ಖಾನನ ಲೇಣೆ 500 ರೂಪಾಯಿ ಬರವಾಡಿ ಕೊಳ್ಳತಕ್ಕ ಬಗ್ಯೆ ಸನ್ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1877ನೇ ಇಸವೀ ಜನವರಿ ತಿಂಗಳು 10ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 14ನೇ ಮಾಹೆ ಡಿಶಂಬರ್ 1876ನೇ ಇಸವಿ ದ|| ಬೆಂಗಳೂರು.

Notice under Section 416 of the Code of Criminal Procedure.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸೆಂಟ್ ಕಮ್ಮಿಷನರವರ ಕೋರ್ಟಿನಿಂದ

ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 416ನೇ ಸೆಕ್ಷನ್ ಪ್ರಕಾರ ಕೊಡಲ್ಪಟ್ಟ ಇಸ್ತಿಹಾರ್.

ಕ್ಲೋಸ್‌ಪೇಟೆ ತಾಲ್ಲೂಕು ಹುಣಸನಹಳ್ಳಿ ಪಟೇಲ್ ಕೆಂಪೇಗೌಡನ ಮನೇಲಿ ನಡದ ಕನ್ನಚೋರಿ ಮೊಕದ್ದಮಾ ಮಾಲ್ ಜಪ್ತಿಗೋಸ್ಕರ ಮಳವಳ್ಳಿ ತಾಲ್ಲೂಕು ಗೊಲ್ಲಹಳ್ಳಿ ಗ್ರಾಮಕ್ಕೆ ಹೋಗಿ ಯಿದ್ದ ಕ್ಲೋಸ್‌ಪೇಟೆ ತಾಲ್ಲೂಕು ಪೋಲಿಸ್ ಯಿನ್ಸ್ಪೆಕ್ಟರವರ ವಶಕ್ಕೆ ಖೈದಿ ಮಳಿಯನ ಮಗಳು ಮುದ್ದಿ ಯಂಬವಳು ತನ್ನ ತಂದೆ ಮಳಿಯನು ಕ್ಲೋಸ್‌ಪೇಟೆ ತಾಲ್ಲೂಕು ಕುರಬರಹಳ್ಳಿಯಲ್ಲಿ ಚೋರಿಮಾಡಿ ತಂದದ್ದಾಗಿ ಹೇಳಿಕೊಂಡು ತನ್ನವಶಕ್ಕೆ ಕೊಟ್ಟಿದ್ದಾನೆಂದು ಹೇಳಿಕೊಟ್ಟಿದ್ದೆಂಬ ಮಾಲ್‌ಗಳ ತಪಶೀಲ್ ಬಾಜೂದಲ್ಲಿ ನಮೂದುಮಾಡಿದೆ. ಈ ಮಾಲ್‌ಗಳು ಕ್ಲೋಸ್‌ಪೇಟೆ ತಾಲ್ಲೂಕು ಥರ್ಡ್ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ ಅಮಾನತ್ ಯಿದೆಯಾಗಿ ಯಿದರ ಮಾಲೀಕರು ಗೊತ್ತಾಗಲಿಲ್ಲವೆಂದು ಇನ್ಸ್ಪೆಕ್ಟರ್ ರಿಪೋರ್ಟು ಮಾಡಿದ್ದಾರಾದ್ದರಿಂದ ಈ ತಾರೀಖು ಲಗಾಯತು ಆರು ತಿಂಗಳ ವಳಗಾಗಿ ಯಿದರ ಮಾಲೀಕರು ಯಾರಾದರು ಯಿದ್ದಲ್ಲಿ ಕ್ಲೋಸ್‌ಪೇಟೆ ಥರ್ಡ್ ಕ್ಲಾಸ್ ಮಾಜಿಸ್ಟ್ರೇಟರ ಕೋರ್ಟು ರೂಬರೂ ಹಾಜರಾಗಿ ಅವರ ಹಕ್ಕು ಸ್ಥಿರಪಡಿಸಿಕೊಡಬೇಕು. ಹಾಗೆ ಮಾಡದೆ ಯಿದ್ದರೆ ವಾಯಿದೆ ಪೂರೈಸಿದ ಬಳಿಕ ಸದರೀ ಮಾಲ್‌ಗಳನ್ನ ಸರಕಾರಕ್ಕೆ ದಾಖಲ್‌ಮಾಡಿ ಕೊಳ್ಳಲ್ಪಡುತ್ತೆ.

ಹವಳದ ಸರ ಜೋಡಿ 1ಕ್ಕೆ ಹವಳ 187 ಯಿದಕ್ಕೆ ಸೇರಿಯಿರುವ ಕರೀಮಣಿ 18.

ಹೊನ್ನಹುವ್ವು ಜೊತೆ 1ಕ್ಕೆ ಹಿತ್ತಾಳಿ ಸರಿಗೆಯಿಂದ 4 ಬೊಂಬಾಯಿ ಮಣಿ ಸುತ್ತಿರುತ್ತೆ ಯಿದರ ಬೆಳ್ಳೀಸರಪಣಿ ಸಹ.

ಜೋಡಿ ಸಂಣ ಗುಂಡಿನಸರ ಕೆಂಪಮಣಿ ಧಾರ ಸಹ.

ಡಿಟ್ಟೋ ಬಾಬತು ಗುಂಡಿನಸರ.

ಬೆಂಡವಾಲೆ ಯಿದಕ್ಕೆ ಹಾಕಿರುವ ಗುಂಡಿನ ಸರಪಣಿ ಜುಮಕಿ ಯರಡು|

ಹೊನ್ನಹುವ್ವು ಜೊತೆ ಯಿದರಲ್ಲಿ ಬೊಂಬಾಯಿ ಮಣಿ 6 ಬೆಳ್ಳಿ ಹಿತ್ತಾಳೀ ಸಹಾ.

ಮೂರೆಳೆ ಚಿನ್ನದ ಗುಂಡಿನ ಸರಾ,

ಬುಗಡಿ ಜಾಲರಿ 2 ಅಂದರೆ ಬೆಳ್ಳಿಮುತ್ತಿನ ಬಾಬತು ಸೂರ್ತಿ ಮುತ್ತಿನ ಬಾಬತು 7, ಬೊಂಬಾಯಿ ಮುತ್ತು ಕುಚ್ಚು.

ಬತಾರೀಖು 15ನೇ ಮಾಹೆ ಡಿಶಂಬರ್ 1876ನೇ ಇಸವಿ.

A. W. C. LINDSAY,
Ag. Dy. Commr.

TUMKUR DISTRICT.

Notice of an application by Venkatamma for a certificate under Act XXVII of 1860.

ತುಮಕೂರು ಡಿ|| ಡೆ|| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ತುಮಕೂರು ತಾಲ್ಲೂಕು ಕಸಬಾ ತುಮಕೂರು ಗ್ರಾಮವಾಸಸ್ಥನಾಗಿ ಯಿದ್ದ ಛಾತ್ರೀಯಾದ ಜೂ|| ಗು|| ನರಸಿಹ್ಮಾಚಾರಿ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 1000 ರೂಪಾಯಿಗಳು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ ಈತನ ಹೆಂಡತಿ ವೆಂಕಟಮ್ಮ ಯಂಬುವಳು ದಾಖಲ್‌ಮಾಡಿ ಯಿರುವ ಅರ್ಜೀಯನ್ನು 1877ನೇ ಇಸವಿ ಜನವರೀ ತಿಂಗಳು 22ನೇ ತಾರೀಖಿನಲ್ಲಿ ವಿಮ-

ರ್ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್‍ಯಾರಾದರೂ ಯಿದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 9ನೇ ಮಾಹೆ ಡಿಶಂಬರ್ 1876ನೇ ಇಸವಿ ಮೊಕ್ಕಾಂ ತುಮಕೂರು.

ಈ ಕೆಳಗೆ ನಮೂದಾಗುವ ಆಸಾಮಿಗೆ 1860ನೇ ಇಸವಿ 27ನೇ ನಂಬರ್ ಆಕ್ಟು ಅನುಸರಿಸಿ ಕೊಡಲ್ಪಟ್ಟ ಸರಟಫಿಕೇಟನ್ನ ಸದರೀಖುವನು ವಾಯಿದೆಗೆ ಸರಿಯಾಗಿ ಸದರೀ ಸರಟಫಿಕೇಟಿನ ಆಧಾರದ ಮೇಲೆ ವಸೂಲ್ ಮಾಡಿದ ಹಣಗಳಿಗೆ ವಾಯಿದೆಗೆ ಸರಿಯಾಗಿ ಲೆಖ್ಖಗಳನ್ನ ಹಾಜರ್‍ಮಾಡದ ಸಬಬು ಇದರಿಂದ ರದ್ದು ಮಾಡಿರುತ್ತೆ.

1874ನೇ ಇಸವಿ ನವೆಂಬರ್ 12ನೇ ತಾರೀಖಿನಲ್ಲಿ ಕಡಬ ತಾಲ್ಲೂಕು ಲಿಂಗಣ್ಣನಿಗೆ.

ತಾರೀಖು 6ನೇ ಡಿಶಂಬರ್ 1876ನೇ ಇಸವಿ ಮೊಕ್ಕಾಂ ತುಮಕೂರು.

C. MADAIYA,
For Offg. Dy. Commr.

ASHTAGRAM DIVISION.

Notice of an application by Chik Papanna for a certificate under Act XXVII of 1860.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮೈಸೂರಲ್ಲಿರುವ ವರ್ತಕ ಚಿಕ್ಕಪಾಪಣ್ಣನು ನೀಲಗಿರೀ ಮದ್ದಣ್ಣನ ಮೇವಾರು 50,000 ರೂಪಾಯಿ ಲೇಣೆ ಬರಮಾಡಿಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸರ್ 1876ನೇ ಇಸವಿ ಡಿಶಂಬರ್ 22ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಸದರೀ ಲೇಣೇಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice of an application by Muddappa for a certificate under Act XXVII of 1860.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮೈಸೂರಲ್ಲಿರುವ ಸಾಹುಕಾರ ಮುದ್ದಪ್ಪ ತಮ್ಮ ತಂದೆ ಸಾಹುಕಾರ ದೊಡ್ಡಮಲ್ಲಣ್ಣನ 30,000 ರೂಪಾಯಿ ಲೇಣೆ ಬರಮಾಡಿಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸರ್ 1876ನೇ ಇಸವಿ ಡಿಶಂಬರ್ ತಿಂಗಳು 22ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆಯಾಗಲ್ಪಡುತ್ತೆಯಾಗಿ ಸದರೀ ಲೇಣೇಮೇಲೆಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ತಾರೀಖು 28ನೇ ಮಾಹೇ ನವಂಬರ್ 76ನೇ ಇಸವಿ.

A. C. HAY,
Commissioner.

HASSAN DISTRICT.

Notice inviting claimants to the Coffee Jungles entered in the annexed statement.

ಹಾಸನ ಡಿಸ್ಟ್ರಿಕ್ಟ್ ಡೆ॥ ಕ॥ ಕಚ್ಚೇರಿಯಿಂದ.

ಇದರವಡನೆ ಜಂಟಿಸಿ ಯಿರತಕ್ಕ ಷ್ಟೇಟಮೆಂಟನಲ್ಲಿ ಕಂಡ ಜಂಗಲ್ ಜಮೀನುಗಳಿಗೆ ಕಾಫೀ ಸಾಗುವಳಿಗೋಸ್ಕರ ದರಖಾಸ್ತುಗಳು ಬಂದು ಯಿರುವದ್ದರಿಂದ ಆದಕ್ಕೆ ಬಾಧ್ಯಪಟ್ಟು ಯಿರತಕ್ಕ ಸರ್ವರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಡಿಟೋ ಷ್ಟೇಟಮೆಂಟಿನಲ್ಲಿ ಕಂಡ ಆಯಾಯ ಜಮೀನುಗಳನ್ನು ಕಾಫೀ ಸಾಗುವಳಿಗೆ ಕೊಡುವ ಭಾಗದಲ್ಲಿ ಆಕ್ಷೇಪಣೆ ಯುಳ್ಳವರಾಗಲಿ ಅಥವ ಅವರವರ ಹಕ್ಕುದಾರಿಯನ್ನ ಕುರಿತು ವ್ಯಾಜ್ಯ ಮಾಡತಕ್ಕವರಾಗಲಿ ಯಿದ್ದದ್ದಾದರೆ ಅಂಥಾವರು ಈ ನೋಟೀಸ್ ತಾರೀಖಾಗಾಯಿತು ಮಂದು ತಿಂಗಳು ವಳಗಾಗಿ ಡಿಸ್ಟ್ರಿಕ್ಟು ಮಜಕೂರು ಕಾಫೀ ಇರ್ಛಾರ್ಜ್ ಫ॥ ಅ॥ ಕ॥ ರವರ ಮುಂದೆ ಹಾಜರಾಗಿ ಕ್ರಮ ಪ್ರಕಾರ ಬಿಯಾನ್ ಮಾಡಿಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಸದರೀ ವಿಷಯದಲ್ಲಿ ಫಿರಿಯಾದು ತಂದದ್ದಾದರೆ ಅದು ಯಿಷ್ಟುಮಾತ್ರಕ್ಕೂ ಮಂಜೂರಾಗಲಾರಿಯದು.

ಖತಾರೀಖು 12ನೇ ಮಾಹೆ ಡಿಶಂಬರು ಸರ್ 1876ನೇ ಇಸವಿ ಮೊಕ್ಕಾಂ ಹಾಸನ.

619

ಕಾಫೀ ಸಾಗುವಳಿಗೋಸ್ಕರ ಬಂದಿರುವ ದರಖಾಸ್ತುಗಳ ತಪಸೀಲ್ ತೋರಿಸುವ ಷ್ಟೇಟ್‌ಮೆಂಟ್.

ಡಿಸ್ಟ್ರಿಕ್ಟು ಹಾಸನ.

ದರಖಾಸ್ತು ನಂಬರು	ತಾಲ್ಲೂಕು ಹೆಸರು	ಹೋಬಳಿ ಹೆಸರು	ಗ್ರಾಮದ ಹೆಸರು	ಜಂಗಲ್ ಜಮೀನಿನ ಹೆಸರು	ದರಖಾಸ್ತುದಾರ್ರ ಹೆಸರು	ಜಮೀನಿನ ವಿವರಣೆ ಅಂದರೆ ಬೌಂಡೇರಿ ವಿಸ್ತೀರ್ಣ.
28	ಬೇಲೂರು	ಅರೆಹಳ್ಳಿ	ಕಸಬಾ	ಕುರಾವು ಯಂಬ ವುಡ್ವೆ	ಅರೆಹಳ್ಳಿ ಪ್ಯಾಟೆ ಹುಲ್ಲುಮನೆ ಬುಡ್ನಾಸಾಬಿ	ಪೂರ್ವಕ್ಕೆ ದೊಡ್ಡ ವುಡ್ವೆಬಳಿ ಗಂದಿನ ಬಾಂದು ಭಂಡೀ ದಾರೀಬಳಿ ಯಿರುವ ಬಾಬತು. ದಕ್ಷಿಣಕ್ಕೆ ತೋಟ್ಯೆಯನ ಕಾಫೀ ತೋಟದ ಅಗಳು. ಪಶ್ಚಿಮಕ್ಕೆ ಮಾನಹಳ್ಳಿ ಗದ್ದೆ. ವುತ್ತರಕ್ಕೆ ಅಡಗೊಗ್ಗಹಳ್ಳಿ ಕೆರೆ ಮತ್ತು ಗದ್ದೆ ಬೈಲ್. ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ ಗಜ 412, ದಕ್ಷಿಣೋತ್ರ ಗಜ 751, ಸಲಿಗಜ 3,09412, ಕ್ಕೆ ಯಕರ 63, ರೋಡ್ 3, ಪೋಲ್ 28, ಗಜ 15, ವುಳ್ಳದ್ದು.
336	ಮಂಜರಾಬಾದ್	ಹೆತ್ತೂರು	ಐಯಹಳ್ಳಿ	ಅನಾದಿ ಬಂಜರು ವುಡ್ವೆ	ಐಯಹಳ್ಳಿಯಲ್ಲಿರುವ ನಾರ್ವೆ ಗಫ್ಫೂರಸಾಬಿ	ಪೂರ್ವಕ್ಕೆ ಹಾಳುಗದ್ದೆ ತರೀಜಮೀನು. ದಕ್ಷಿಣಕ್ಕೆ ದರಖಾಸ್ತುದಾರನ ಹಸುರುವಾಣಿ ಇತ್ತಲ್ ವತ್ತು. ಪಶ್ಚಿಮಕ್ಕೆ ದಿನ್ನೆ. ವುತ್ತರಕ್ಕೆ ಬೆಳ್ಳೂರು ನಂಜೇಗೌಡನ ತೋಟದ ವತ್ತು. ಈ ಮಧ್ಯೆ ಅಳತೆ 84,—61. 5,124,—1—0—9—11¾.
257	ಡಿಟೋ	ಮೂಡಗೆರೆ	ಮುತ್ತಿಗೆ ಪುರಾ	1ನೇ ದೊಡ್ಡ ವುಡ್ವೆ	ಮುತ್ತಿಗೆ ಪುರದತಿಮ್ಮೇಗೌಡ	ಪೂರ್ವಕ್ಕೆ ಯಿಾಚಲು ಹರ. ದಕ್ಷಿಣಕ್ಕೆ ಯಿಾಚಲು ಹರ. ಪಶ್ಚಿಮಕ್ಕೆ ಯಿಾಚಲು ಹರ. ವುತ್ತರಕ್ಕೆ ಕ್ಯಾದಿಗೆಹನಾಲ್. ಈ ಮಧ್ಯೆ ಅಳತೆ 38,—180. 6,840—1—1—26—3½.
				2ನೇ ಮುಳ್ಳಗೆರೆ ಯಂಬ ತಾಕು	ಡಿಟೋ	ಪೂರ್ವಕ್ಕೆ ಯಿಾಚಲು ದಿನ್ನೆ. ದಕ್ಷಿಣಕ್ಕೆ ಹರಾ ಮತ್ತು ಗೆರೆ. ಪಶ್ಚಿಮಕ್ಕೆ ಕ್ಯಾದಿಗೆಹನಾಲ್. ವುತ್ತರಕ್ಕೆ ಹಾಳುಗದ್ದೆ. ಈ ಮಧ್ಯೆ ಅಳತೆ 60—50 3000ಕ್ಕೆ—0—2—19—5¼.
236	ಮಂಜರಾಬಾದು	ಯ್ಸಳೂರು	ಹೊಸಕೋಟೆ	ಕೊಣದ ಪೊಪ್ಪೆಯಂಬ ಜಮೀನ್	ಹೊಸಕೋಟೆ ಗ್ರಾಮದಲ್ಲಿರುವ ಕಿತ್ತರವಳ್ಳಿ ಲಚ್ಮೇಗೌಡ	ಪೂರ್ವಕ್ಕೆ ಬೈಲ್‌ಕಲ್ಲು ಮರಟಿ ದಕ್ಷಿಣಕ್ಕೆ ನೀರು ಹರಿಯದೆ ಯಿದ್ದ ಹೊಟ್ಟಕಾಲವೆ ಕಲ್ಲರೆ. ಪಶ್ಚಿಮಕ್ಕೆ ಹೊಟ್ಟುಗುಂಡಿ ಕೆರೆಕಲ್ಲು ಅರೆ. ವುತ್ತರಕ್ಕೆ ಬೈಲ್‌ದಿಣ್ಣೆ ಕಲ್ಲು ಮರಟಿ. ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ ಗಜ 160 ದಕ್ಷಿಣೋತ್ತರ ಗಜ 100 ಸಲಿಗಜ 16000 ಯಕರೆ 3 ರೋಡ್ 1 ಪೋಲ್ 8 ಗಜ 28.

ದರಖಾಸ್ತಿ ನಂಬರು	ತಾಲ್ಲೂಕು ಹೆಸರು	ಹೋಬಳಿ ಹೆಸರು	ಗ್ರಾಮದ ಹೆಸರು	ಜಂಗಲ್ ಜಮೀನಿನ ಹೆಸರು	ದರಕಾಸ್ತುದಾರ್ರ ಹೆಸರು	ಜಮೀನಿನ ವಿವರಣೆ ಅಂದರೆ ಚಾಂಡೇರಿ ವಿಸ್ತೀರ್ಣ·
50	ಡಿಟ್ಟೋ	ಬೈಕೆರೆ	ಮಟ್ಟ ಸಾಗರ	ಕೆಂಜಗೆ ಮರಟ ಯಂಬ ವುಡ್ವೆ	ಮಟ್ಟಸಾಗರ ಗ್ರಾಮದ ಗೆರೆ ಮನೆ ಮರಿಗೌಡ	ಪೂರ್ವಕ್ಕೆ ವುದೆವಾರದ ತೂಕಂಣನ ಕಾಫೀ ತೋಟದ ವತ್ತು ಅರಕರೆ ರಾಮೇಗೌಡನ ಕಾಫೀತೋಟ. ಈತೋಟದ ಮೂಲೆಯಲ್ಲಿ ಹಾಕಿರುವ ಸರ್ವೇ ಇಲಾಖೆ ಕರೆ ಬಾಂದು ಮಧ್ಯೆ ಕಲ್ಲುಮರಟ ದಕ್ಷಿಣ ಆಬ್ಬೆರು ಹೊಸಗದ್ದೇ ಅಡಿ ಸರ್ವೇ ಇಲಾಖೆಯವರು ಹಾಕಿರುವ ಕರೆ ಬಾಂದಿನ ವರಿಗೆ· ದಕ್ಷಿಣಕ್ಕೆ ಬಂಗಳೂರು ಮಂಗ್ಲೂರು ಹೇರೋಡ್ ಹೊರಚಿರಂಡಿ ವಳಗೆ 5 ಗಜದ ಭೂಮಿ ಬಿಟ್ಟು ಯಿರುವ ವರಿಗೆ. ಪಶ್ಚಿಮಕ್ಕೆ ರಸ್ತೆ ಸಮೀಪದ ಅರಕಲ್ಲು. ವುತ್ತರಕ್ಕೆ ಅರೆಕೆರೆ ರಾಮೇಗೌಡನ ಕಾಫೀ ತೋಟದ ನಿಶಾನಿ ಕಾಲ್ವೆ· ಈ ಮಧ್ಯೆ ಅಳತೆ 260—93. 24,180ಕೆ 4—3—39—10¼.
237	ಡಿಟ್ಟೋ	ಯಸಳೂರು	ಹೊಸಕೋಟೆ	ಕಾಟಮತ್ತಿದಿಂಬ ಯಂಬ ವುಡ್ವೆ	ಹೊಸಕೋಟೆ ಗ್ರಾಮದಲ್ಲಿ ಇರುವ ಕರಡಿನಾಲಧ ಮಲ್ಲೇಗೌಡ	ಪೂರ್ವಕ್ಕೆ ಪಟೇಲ್ ಲಿಂಗೇಗೌಡನ ಕಾಫೀತೋಟದ ವತ್ತಿನ ಬಾಂದು· ದಕ್ಷಿಣಕ್ಕೆ ಬೀಗಿನ ಚಂನೇಗೌಡನ ಕಾಫೀಸಾಗುವಳಿ ಹೊಲಾ· ಪಶ್ಚಿಮಕ್ಕೆ ಸರಕಾರದ ಬಂಜರು ಬೈಲ್ ಕಲ್ಲು ವುತ್ತರಕ್ಕೆ ಕೊಡಿಗದ್ದೆಗೆ ನೀರು ಹೋಗುವ ಕಾಲುವೆ ಕಲ್ಲು ಮರಟಿ. ಈ ಮಧ್ಯೆ ಅಳತೆ 190—72—7200ಕ್ಕೆ ಯಕರೆ 1 ರೋಡ್ 1 ಪೋಲ್ 38—½.
91	ಡಿಟ್ಟೋ	ಡಿಟ್ಟೋ	ತಡಕಲ್	ಗೋಣಿಪುರದ ಹನಾಲ್	ತಡಕಲು ಗ್ರಾಮದ ತಿಪ್ಪೇಗವಡನ ಮಗ ಮೂಲಿಂಗೇ ಗವುಡ	ಪೂರ್ವಕ್ಕೆ ದೊಡ್ಡ ಅಗಳು ದಕ್ಷಿಣಕ್ಕೆ ದನ ತಿರುಗುವ ದಾರಿಕಲ್ಲು ಭಂಡೆ ಪಶ್ಚಿಮಕ್ಕೆ ದೊಡ್ಡಹೊಲಾ ಯಂಬುವದು ತಡಕಲ್ಲು ಗ್ರಾಮದಲ್ಲಿರುವ ಗೊರವದಾಸನ ಕರಿ ಯಂಬವನ ಸಾಗುವಳಿ ಹೊಲದ ವತ್ತು ಹಾದಿ. ವುತ್ತರಕ್ಕೆ ಈಚಲು ದಿಣ್ಣೆ ಈ ಮಧ್ಯೆ ಅಳತೆ 120—110 13200ಕ್ಕೆ ಯಕರೆ 2 ರೋಡ್ 2 ಪೋಲ್ 36—ಗಜ11.
315	ಡಿಟ್ಟೋ	ಡಿಟ್ಟೋ	ಕಾಕುಡಿ	ಕೋಳಿ ಮರದ ತಗ್ಗು ಯಂಬ ಜಾಗಾ	ಹೊಸಕೋಟೆ ಗ್ರಾಮದ ದಾಖಲೆ ಹೊಸಹಳ್ಳಿ ಗ್ರಾಮದ ರುದ್ರೇಗವಡನ ಕೊಮಾರಗೌಡ	ಪೂರ್ವಕ್ಕೆ ಕಾಕುಡಿ ಹಳ್ಳಾ. ದಕ್ಷಿಣಕ್ಕೆ ಹೊಟ್ಟು ಅಗಳು. ಪಶ್ಚಿಮಕ್ಕೆ ಈಗ್ರಾಮಕ್ಕೂ ಹೊಸಗರವಳ್ಳಿಗೂ ತಿರುಗುದ ದಾರಿ. ವುತ್ತರಕ್ಕೆ ವೂರುವಡಯನ ಬನದ ದಿಣ್ಣೆ. ಈಮಧ್ಯೆ ಅಳತೆ 100—120 12000ಕ್ಕೆ ಯಕರೆ 2 ರೋಡ್ 1 ಪೋಲ್ 36—ಗಜ21.

Notice of transfer of certain Coffee Jungles to the Forest Department.

ಇದರಿಂದ ಪ್ರಕಟಿಸುವದೇನಂದರೆ,—ಲೇಟೆ ಮಹಾರಾಜನದುರ್ಗ ತಾಲ್ಲೂಕು ಮುತ್ತಿಗೆ ಹೋಬಳಿ ಕುಡದಲೆ ಗ್ರಾಮಕ್ಕೆ ಶೇರಿದ ಈ ಕೆಳಗೆ ನಮೂದಾಗಲ್ಪಡುವ ಜಂಗಲ್‌ಗಳಿಗೆ ಸ್ 1867ನೇ ಇಸವಿ ಮಾರ್ಚಿ 30ರಲ್ಲು ಕೆಂಚಮ್ಮ ಹೊಸಕೋಟೆ ಸಾಹುಕಾರ ಯಿಜ್ಜಪ್ಪನೆಂಬವನ ಹೆಸರಿಗೆ 1,403—107ನೇ ನಂಬರ್ ವುಳ್ಳ ಕಾಫೀಪಟ್ಟೆ ಕೊಟ್ಟು ಯಿದ್ದದ್ದನ್ನು ಯಿದರಿಂದ ಕ್ಯಾನಸಲ್ ಮಾಡಿಯಿದೆ

ಸದರೀ ಜಂಗಲ್‌ಗಳನ್ನು ಚೀಫ್ ಕಮ್ಮಿಷನರ್ ಹುಜ್‌ರಿಂದ ಸಾದರಾಗಲ್ಪಟ್ಟು ಯಿರುವ ಸ್ 1874ನೇ ಇಸವಿ ಅಕ್ಟೋಬರ್ 30ನೇ ಮರ್ಕ್ಕಂ 5,524—79ನೇ ನಂಬರ್ ಪ್ರೊಸೀಡಿಂಗ್‌ಸಿನ ಆರ್ಡರ್ ಪ್ರಕಾರಕ್ಕೆ ಗವರ್ನಮೆಂಟಿಗೆ ವಾಪಸ್ ತೆಗದುಕೊಂಡು ಫಾರೆಷ್ಟು ಯಿಲಾಖೆ ಸುಪರ್ದಿಗೆ ಕೊಟ್ಟು ಯಿರುತ್ತೆ.

ಸದರೀ ಪಟ್ಟೇದಾರನ ವಾರಸುದಾರರು ಅಥವಾ ಸದರೀ ಪಟ್ಟೆಯನ್ನು ಯಿಟ್ಟುಕೊಂಡು ಯಿರತಕ್ಕವರು ಆ ಬಾಬತು ಪಟ್ಟೆಯನ್ನು ನಮ್ಮಲ್ಲಿ ಹಾಜರ್ಮಾಡಬೇಕು.

1ನೇ ಹಾಲೇಮರದ ಪೊಚ್ಚೆಯೆಂಬ ಜಂಗಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ವೀರಪ್ಪನ ಕುಮರಿ ಹೊಲ ದೂಪದಮರ.
ದಕ್ಷಿಣಕ್ಕೆ—ರಾಮೇಗೌಡನ ತೋಟದಬೇಲಿ ಹುಲೀಚಲಮರ.
ಪಶ್ಚಿಮಕ್ಕೆ—ಕುಡದಲೆ ಗ್ರಾಮದಿಂದ ಗೋಮಾಳಕ್ಕೆ ದನ ಹೋಗುವ ಸಂಣದಾರಿ.
ವುತ್ತರಕ್ಕೆ—ಸದರೀ ದಾರಿ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮ ಗಜ 124 ದಕ್ಷಿಣೋತ್ತರ ಗಜ 114 ಸಲಗಜ 14,136ಕ್ಕೆ ಎಕರೆ 2 ರೋಡ್ 3 ಫೋಲ್ 27 ಗಜ $9\frac{1}{4}$ ವುಳ್ಳದ್ದು.

2ನೇ ಮಾವಿನಮರದ ಪೊಚ್ಚೆಯೆಂಬ ಜಂಗಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಕುಡದಲೆಯಿಂದ ಹಲಸೂರು ಕೊಪ್ಪಲಿಗೆ ಹೋಗುವ ಸಂಣದಾರಿ.

ದಕ್ಷಿಣಕ್ಕೆ—ಕುಡದಲೆಯಿಂದ ಹಲಸೂರು ಕೊಪ್ಪಲಿಗೆ ಹೋಗತಕ್ಕದ್ದಕ್ಕೆ ಮಾಡಿರತಕ್ಕ ದಾರಿ ಹೊನ್ನೇಮರ ಶಡ್ಲೇಮರ.

ಪಶ್ಚಿಮಕ್ಕೆ—ಶಿದ್ದೇಗೌಡನ ಬಸವೇಗೌಡನ ದೊಡ್ಡ ಪೊಚ್ಚೆ ಅಳತೆಯಾಗಿರುವ ಸರಹದ್ದು ಬೀಟೇಮರ.

ವುತ್ತರಕ್ಕೆ—ಹಲಸೂರಿಗೂ ಈ ಗ್ರಾಮಕ್ಕೂ ಯಿರತಕ್ಕ ಸಂದು ಹುತ್ತ ಮತ್ತು ಶಡ್ಲೇಮರ ದನಗುಗ್ಗಳಮರ ವಟ್ಟಿಗೆ ಯಿರುವ ಮೂರು ಮುರಕಲಮರ.

ಈ ಮಧ್ಯೆ ಅಳತೆ ಪೂರ್ವಪಶ್ಚಿಮಗಜ 176 ದಕ್ಷಿಣೋತ್ತರ ಗಜ 112 ಸಲಗಜ 19,712ಕ್ಕೆ ಎಕರೆ 4 ರೋಡ್ 0 ಫೋಲ್ 11 ಗಜ $19\frac{1}{4}$.

ಜುಮ್ಲಾ ವುಭ್ಯೆ 2ಕ್ಕೆ ವಟ್ಟು ಎಕರೆ 6 ರೋಡ್ 3 ಫೋಲ್ 38 ಗಜ $28\frac{1}{2}$.

ಬತಾರೀಖು 13ನೇ ಮಾಹೆ ಡಿಶಂಬರ್ ಸ್ 1876ನೇ ಇಸವಿ ಮೊಕ್ಕಾಂ ಹಾಸನ.

R. VIJAYENDRA RAO,
For Dy. Commr.

ಸ್ 1876ನೇ ಇಸವಿ ನವಂಬರ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ—ಕಳೆದ ತಿಂಗಳಲ್ಲಿ ಮಳೆಯೇ ಇಲ್ಲವು.

ಫಸಲ್—ಮಲೆನಾಡ್ ತಾಲ್ಲೂ ನಲ್ಲಿ ಭತ್ತದ ಫಸಲ್ ಕಟಾವ್ ಆಯಿತು. ಚನ್ನಗಿರಿ ತಾಲ್ಲೂಕಿನಲ್ಲಿ ವೈಶಾಖೀ ಭತ್ತವು ಕಡ್ಲೆಯು ಒಳಗೆರೆಯಲ್ಲಿ ಪೇರಾವಾಗುತ್ತಿದೆ.

ಜನಾರೋಗ್ಯ—ಸೊರಬ, ಚನ್ನಗಿರಿ ಈ ತಾಲ್ಲೂಕುಗಳಲ್ಲಿ ಖೈಜುಲಾಬ್ ಕಾಣಿಸಿಕೊಂಡಿದ್ದೆ, ಕಳೆದ ತಿಂಗಳಲ್ಲಿ 45 ಮಂದಿಗೆ ತಗಲಿ ಅಪಾಯಕರವಾಯಿತು. ಆ ಹಿಂದಿನ ತಿಂಗಳಿಗಿಂತ 16 ಮಂದಿ ಜಾಸ್ತೀಯಾಗಿ ಹೋಗಿರುತ್ತಾರೆ. ಖೈಜುಲಾಬ್ ಸಹಿತ ನಾನಾವಿ

ಥ ಕಾರಣದಿಂದ 544 ಮಂದಿ ಹೋಗಿರುತ್ತಾರೆ. ಆ ಹಿಂದಿನ ತಿಂಗಳಿಗಿಂತ 79 ಮಂದಿ ಜಾಸ್ತೀಯಾಗಿ ಹೋದರು. ಸದರೀ ತಿಂಗಳಲ್ಲಿ ಕುಲ್ 396 ಮಂದಿ ಸತ್ತು ಹೋದರು.

ದನಗಳು—1902 ಕಾಲ್ನಡೆ ಹೋದವು. ಆ ಹಿಂದಿನ ತಿಂಗಳಿಗಿಂತ 889 ಕಾಲ್ನಡೆ ಜಾಸ್ತೀ ಹೋದವು.

ಧಾರಣೆ—ಜಿನಿಸೀದಾರಣೆ ಚಡಾಯಿಸುತ್ತಾ ಯಿದೆ.

C. S. BLAIR,
Offg. Dy. Commr.

ಚಿತ್ರದುರ್ಗ್ ಡಿಸ್ಟ್ರಿಕ್ಟ್.

ಮಳೆ—ಈ ತಿಂಗಳಲ್ಲಿ ಡಿಸ್ಟ್ರಿಕ್ಟಿನಲ್ಲಿ ಮಳೆ ಬೀಳಲಿಲ್ಲವು. ಇದರಿಂದ ಫಸಲ್ ಬಹಳವಾಗಿ ಹೋಯಿತು. ಸೆಕೆಯೂ ಬಹಳವಾಗಿದೆ.

ಬೆಳೆ—ಈ ತಿಂಗಳಲ್ಲಿ ಚಿತ್ರದುರ್ಗ ವ ಹೊಸದುರ್ಗ ತಾಲ್ಲೂಕುಗಳ ಕೆಲವು ಕಡೆಗಳಲ್ಲಿ ಬಿಳೀ ಜೋಳವು, ಮತ್ತು ಕಣಕುಪ್ಪ, ಹೊಸದುರ್ಗ್, ಪಾವಗಡ ತಾಲ್ಲೂಕುಗಳಲ್ಲಿ ಯಿರುವ ಕೆರೆಗಳ ಬೆದ್ದಲುಗಳಲ್ಲಿ ಗೋಧಿಯೂ ಪೇರಾಮಾದವು. ಕಣಕುಪ್ಪ ತಾಲ್ಲೂಕಿನ ಕೆಲವು ಕಡೆ ಯಿರುವ ಕೆರೇ ಬೆದ್ದಲುಗಳಲ್ಲಿ ಪೈರುಗಳು ಹುಟ್ಟುತ್ತಾ ಯಿವೆ.

ದೊಡ್ಡೇರೀ ತಾಲ್ಲೂಕಿನಲ್ಲಿ ನಲ್ಲಾಗಳ ಕೆಳಗಿನ ಭತ್ತದ ಫಸಲು ಹೊಸದುರ್ಗದ ತಾಲ್ಲೂಕಿನಲ್ಲಿ ಹುರಳಿ, ಹರಳು ಬೂದೀಹಾಳ್ ತಾಲ್ಲೂಕಿನಲ್ಲಿ ಅಡಿಕೇಮರಗಳು ವಣಗುತ್ತಾ ಯಿವೆ.

ಖುಷ್ಕೀಫಸಲ್‌ಗಳು ಬಹಳ ಮಟ್ಟಿಗೆ ಕಟಾವಾದವು, ಮತ್ತು ಕೆಲವು ಮಟ್ಟಿಗೆ ಕೆಟ್ಟು ಹೋದವು. ವಣಗಿಹೋದ ಫಸಲ್ ಬುಡಸಹಿತ ತೆಗದು ಹಾಕಲ್ಪಟ್ಟು ದನಗಳಿಗೆ ಮೇವಾಗಿ ವುಪಯೋಗಿಸಲ್ಪಟ್ಟವು. ಬೂದೀಹಾಳ್ ತಾಲ್ಲೂಕಿನಲ್ಲಿ ನಿಲವು ಬೆಳೆಯಲ್ಲಾ ವಣಗಿ ಹೋದವು.

ಹಿರಿಯೂರು ತಾಲ್ಲೂಕಿನಲ್ಲಿ ಕೆರೆಗಳ ವ ಕಟ್ಟೆಗಳ ಬೆದ್ದಲುಗಳಲ್ಲಿ ಪೇರಾವಾದ ಜೋಳವು ಪಾವಗಡ ತಾಲ್ಲೂಕಿನ ಕೆಲವು ಕಡೆಗಳಲ್ಲಿ ಯಿರುವ ಕೆರೆಗಳ ಬೆದ್ದಲುಗಳಲ್ಲಿ ಪೇರಾವಾದ ಹುರಳಿ, ಹರಳು ಸಹ ಕೊಂಚ ವಳ್ಳೇ ಸ್ಥಿತಿಯಲ್ಲಿ ಯಿವೆ. ದೊಡ್ಡೇರೀ ತಾಲ್ಲೂಕಿನಲ್ಲಿ ಬೆಳೆದ ಗನ್ನಾ ಫಸಲ್ ಬಗ್ಗೆ ಗಾಣ ಕಟ್ಟಲ್ಪಟ್ಟಿದೆ.

ಸರ್ವತ್ರ ನಿಲವು ಬೆಳೆಗಳಿಗೆ ಮಳೆ ಬಹಳ ತುರ್ತು ಬೇಕಾಗಿದೆ. ಆದರೆ ಅದರ ಚಿನ್ಹೆಯೂ ಕಾಣುವದಿಲ್ಲ.

ಆರೋಗ್ಯ—ಚಿತ್ರದುರ್ಗ ವ ಕಣಕುಪ್ಪ ತಾಲ್ಲೂಕುಗಳಲ್ಲಿ ಉಖಾಲ್ ಜುಲಾಬ್ ವ್ಯಾಪಿಸಿರುವದು ಶಿವಾಯಿ ಡಿಸ್ಟ್ರಿಕ್ಟು ಮುಳೆ ಆರೋಗ್ಯವು ಸಾಧಾರಣವಾಗಿ ಚನ್ನಾಗಿಯೇ ಯಿತ್ತು.

ಕಳೆದ ಮತ್ತು ಈ ಸಾಲಿನಲ್ಲಿ ಸಹ ಬೆಳೆಗಳು ಹೋದ್ದರಿಂದ ಬಡವರು ಉಪಾಸ ಯಿರಲಿಕ್ಕೂ ಬಲಹೀನರಾಗಲಿಕ್ಕೂ ಇದರಿಂದ ಕಾಯಿಲೆ ಆಗಲಿಕ್ಕೂ ಕಾರಣ ವಾಯಿತು. ಆಹಾರ ಜಿನಸೀಗಳು ಬಹಳ ಪ್ರಿಯವಾದ್ದರಿಂದ ಬಡವರು ತಮ್ಮ ಜೀವನ ತಾವು ಮಾಡಲಿಕ್ಕೆ ಅಸಮರ್ಥರಾಗಿರುತ್ತಾರೆ.

ಜಾನವರ್—ಕೆಲವು ಕಡೆಗಳಲ್ಲಿ ಮೇವಿಲ್ಲದೆ ನೀರಿಲ್ಲದೆ ಯಿರುವದರಿಂದ ಜಾನವರ್‌ಗಳ ಸ್ಥಿತಿಯು ಅತಿಕೆಟ್ಟದ್ದಾಗಿರುತ್ತೆ. ಮೇವಿಲ್ಲದೆಯು, ರೋಗಗಳಿಂದಲೂ 4,418 ಕಾಲ್ನಡೆಗಳು ಸತ್ತವು, ಕಳೆದ ತಿಂಗಳಲ್ಲಿ 11,579 ಸತ್ತವು, ದನಗಳ ಸಾವು ವಿಶೇಷವಾಗಿ ಕಮ್ಮಿ ಆದದ್ದು ನೋಡಿದರೆ ಡಿಸ್ಟ್ರಿಕ್ಟಿನಿಂದ ಬಹಳ ದನಗಳು ಆಚೇ ತೆಗದುಕೊಂಡು ಹೋದದ್ದೇ ಕಾರಣವಾಗಿ ಕಾಣುತ್ತದೆ.

ನಿರಖು—ನಾನಾ ಸ್ಥಳದಿಂದ ಜಿನಸೀಗಳು ಆಮದ್ ಆಗುವದರಿಂದಲೂ ಯಿದು ಮಹಸೂಲ್ ಕಾಲವಾದ್ದರಿಂದಲೂ ಧಿನಸೀಗಳ ಧಾರಣೆ ಕಳವ ತಿಂಗಳಿನಂತೆಯೇ ಯಿದೆ, ಇತರ ಜಿನಸೀಗಳು ಅಂದರೆ ಮೆಣಸಿನ ಕಾಯಿ, ಕೊತ್ತಂಬರೀಬೀಜ, ಈರುಳ್ಳಿ, ವುಪ್ಪು, ಎಣ್ಣೆ, ಬೆಲ್ಲ, ಹುಣಸೇಹಣ್ಣು ವಗೈರೇಗಳ ಖರೀದಿ ಬಹಳ ಚಡಾವಾಗಿದೆ.

ಅನೇಕ ತಾಲ್ಲೂಕುಗಳಿಂದ ಜನಗಳು ಅದ್ಯಾಪಿ ತಮ್ಮ ಜಾನವರ್‌ಗಳು ಸಹಿತ ಮಲನಾಡ್ ವ ಇತರ ಸ್ಥಳಗಳಿಗೆ ಹೋಗುತ್ತಾ ಯಿದ್ದಾರೆ.

ABDUL RAHIMAN,
For Dy. Commr.

ಕೊಡಗು ಡಿಸ್ಟ್ರಿಕ್ಟ್.

ತರೀಜಮಿರ್ನ—ಉತ್ತರ ಕೊಡಗಿನಲ್ಲಿ ಕಾರ್ತೀಕ ಫಸಲು ಕಟಾವಾಗುತಿದೆ. ಉತ್ತರ ದಕ್ಷಿಣ ಕೊಡಗಿನಲ್ಲಿ ಗಳಲ್ಲಿ, ಮಳೆ ಯಿಲ್ಲದೆ ಶುದ್ಧಾಂಗ ಕೆಟ್ಟು ಹೋಯಿತು. ವೈಶಾಖೀ ಫಸಲ್ ಯಿನ್ನೂ ನಾಟ್ಟವಾಗುತ್ತಿದೆ.

ಇಲಾಚೀಫಸಲ್—ಇಲಾಚೀ ಕಾಯಿ ಕೀಳುವ ಕೆಲಸ ಪೂರೈಸಿತು.

ಕಾಫಿ—ಕಾಯಿ ಕೀಳುವ ಕೆಲಸ ನಡೆಯುತ್ತಿದೆ ಯಿೂಸಲ ಫಲ ಬಹಳ ಕಡಮೆಯಾಗುವದೆಂದು ಯೆಣಿಸಲ್ಪಟ್ಟಿದೆ. ಯಾಕೆ ದರೆ ಮುಖ್ಯ 1876ನೇ ಆಗಸ್ಟು ತಿಂಗಳ ರಿಪೋರ್ಟಿನಲ್ಲಿ ಕಂಡಂತೆ ಜಳ್ಳು ಕಾಫೀ ಬಹಳವಾದ್ದರಿಂದ ಹೀಗಾಗಿರುತ್ತೆ.

ಜನಮರಣ—206 ಮಂದಿ ಹೋಗಿರುತ್ತಾರೆ. ಕಳೆದ ಇಸವಿ ಯಿದೇ ತಿಂಗಳಲ್ಲಿ 256 ಮಂದಿ ಹೋದರು, ಇದರ ತಪಶೀಲ್.

ಉಖಾಲ್ ಜುಲಾಬ್ ನಿಂದ	4	ಮಡಿಕೆರೆ ಷಹರ್‌ನಲ್ಲಿ	51
ಅತಿಸಾರದಿಂದ	13	ಪಡಿನಾಲ್ಕು ನಾಡು	34
ಶಿಡುಬಿನಿಂದ	5	ಯೆಡೆನಾಲ್ಕು ನಾಡು	38
ಜ್ವರದಿಂದ	167	ಕಿಗ್ಗಟ್ಟುನಾಡು	15
ಆತ್ಮಹತ್ಯದಿಂದ	1	ನಂಜರಾಜಪಟ್ಣ	23
ಆಕಸ್ಮಿಕವಾಗಿ	1	ಯೆಳುಸಾವಿರ ಸೀಮೆ	33
ಕಾಡು ಮೃಗದಿಂದಲೂ ಹಾವಿನಿಂದಲೂ.	1	ಷಹರ್‌ಗಳು	
ಇತರ ರೋಗಗಳಿಂದ	14	ಮಹದೇವಪೇಟೆ	10
		ವೀರರಾಜೇಂದ್ರಪೇಟೆ	2
ಜುಮ್ಲಾ	206	ಜುಮ್ಲಾ	206

ಸದರೀ ಪೈಕೀ ಗಂಡಸರು 95, ಹೆಂಗಸರು 64 ಮಂದಿ ಮಕ್ಕಳು 47 ಇವರ ಜಾತಿಗಳು ಕ್ರಿಸ್ತಯರು 4, ಕೊಡಗರು 42 ಹಿಂದೂಗಳು 148 ಮುಸಲ್ಮಾನರು 5 ಕುಲ್ 206.

ದನಗಳು—188 ಕಾಲ್ನಡೆ ಹೋದವು. ಕಳೆದ ಇಸವಿ ಯಿದೇ ತಿಂಗಳಲ್ಲಿ 508 ಕಾಲ್ನಡೆ ಹೋದವು. ಕಳೆದ ತಿಂಗಳ ತಪಶೀಲ್ ಯೆತ್ತುಗಳು 55, ಹಸುಗಳು 45, ಕರುಗಳು 35, ಕೋಣಗಳು, 17, ಯೆಮ್ಮೆಗಳು 16, ಕರುಗಳು 20 ಕುಲ್ 188 ಹೋದವು

ದಾರಣೆ—ಸ್ವಲ್ಪ ಯಿಳಿಯುತ್ತದೆ.

ಮಳೆ—ಮಡಿಕೆರೆಯಲ್ಲಿ ನವಂಬರ್ ತಿಂಗಳಿಗೆ 106 ಅಂಗುಲ 31 ಸೆಂಟ್ಸ್.

ಸೋಮವಾರ ಪೇಟೇಯಲ್ಲಿ 93 ಅಂಗುಲ 90 ಸೆಂಟ್ಸ್.

E. SHAW,
Offg. Supt.

ಕರ್ರೆನ್ಸೀ ನೋಟುಗಳು.

ಯಿದರಡಿ ನಮೂದಿಸಲ್ಪಡುವ ಕರ್ರೆನ್ಸೀನೋಟುಗಳ ತುಕಡೇಗಳು ಹೋಗಿವೆ.

ನಂಬರು.	ಸರ್ಕಲ್.	ಮೊಬಲಗ್.	
$\frac{B}{28}$ 79253	ಮದ್ರಾಸ್.	500	ಹಕ್ಕುದಾರ ಬೆಂಗಳೂರು ಚಿಕ್ಕ ಪೇಟೆಯಲ್ಲಿ ಬೆಣ್ಣೇ ಶಾಮಣ್ಣನವರ ಮನೆಯಲ್ಲಿರುವ ತಿಪಟೂರು ಹನ್ಮಂತಯ್ಯ.
$\frac{B}{50}$ 14698	ಡಿಟ್ಟೋ	100	
$\frac{B}{53}$ 40663	ಡಿಟ್ಟೋ	100	
$\frac{J}{3}$ 95100	ಮದ್ರಾಸ್ ಕ್ಯಾಲಿಕಟ್	100	
$\frac{J}{3}$ 96006	ಡಿಟ್ಟೋ	100	

...ಸೂದಿಸಲ್ಪಡುವ ಕರ್ರೆನ್ಸೀ ನೋಟುಗಳ ತುಕಡೇಗಳು ಬಳ್ಳಾರೀ ಜಿಲ್ಲಾ ಹರಪನಹಳ್ಳಿಗೆ ಟಪ್ಪಾಲ ದ್ವಾರ ರವಾನೇ ...ತವೆ.

ನಂ.	ಸರ್ಕಲ್.	ವೊಬಲಗ್.	ಹಕುದಾರನ ಹೆಸರು.
B/44 32732	ಮದ್ರಾಸ	100	ಹೊನ್ನವಳ್ಳೀ ತಾಲ್ಲೂಕು ತಿಬಟೂರಲ್ಲಿರುವ ನೆಲ್ಲೂಕುದರೆ ಮತಿಹಳ್ಳಿ ಚನ್ನವೀರಪ್ಪ.
,, 99172	ಡಿಟೋ	100	
B/50 25604	ಡಿಟೋ	100	
,, 28748	ಡಿಟೋ	100	
,, 28800	ಡಿಟೋ	100	
,, 28801	ಡಿಟೋ	100	
,, 12049	ಡಿಟೋ	100	
B/43 41085	ಡಿಟೋ	50	
,, 62690	ಡಿಟೋ	50	
,, 24772	ಡಿಟೋ	50	
,, 23762	ಡಿಟೋ	50	
,, 33307	ಡಿಟೋ	50	
68506	ಕಲ್ಲೀಕೋಟೆ	100	
59143	ಡಿಟೋ	20	

ಪ್ರಕಟನೆ.

ತಿರುಚಿನಾಪಲ್ಲಿ, ತಾರೀಖು 5ನೇ ಡಿಶಂಬರ 1876.

ಸಮೀಪಿಸಿ ಇರುವ (ಕೊಟಾರ) ಉತ್ಸವಕ್ಕೋಸ್ಕರ ಶ್ರೀರಂಗಕ್ಕೆ ಹೋಗಬೇಕೆಂದು ಅಪೇಕ್ಷಿಸುವ ಜನಗಳಿಗೆ ಇದರಿಂದ ಎಚ್ಚರಿಸುವದೇನಂದರೆ, ದಾರಣೆವಾಸಿ ಬಹಳ ಜಡಾಯಿಸಿದೆ ತಿರುಚಿನಾಪಲ್ಲಿ ಡಿಸ್ಟ್ರಿಕ್ಟಿನಲ್ಲಿ ಉಖಾಲ ಜುಲಾಬ ತಗಲಿ ಯಿರುತ್ತೆ.

H. SEWELL,
Acting Collector.